ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ

ಹೈದ್ರಾಬಾದ ಕರ್ನಾಟಕ ರಂಗಭೂಮಿ

ಗ್ರಾಮೀಣ ರಂಗಭೂಮಿ ನಾಟಕಗಳು

(ಸಂಪುಟ-೨)

ಸಂಪಾದಕರು
ಡಾ. ವಿಜಯಶ್ರೀ ಸಬರದ

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ - ೫೮೫ ೧೦೬

ಹೈದ್ರಾಬಾದ ಕರ್ನಾಟಕ ರಂಗಭೂಮಿ

ಸಂಪುಟ–೨

ಗ್ರಾಮೀಣ ರಂಗಭೂಮಿ ನಾಟಕಗಳು

2

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ

ಹೈದ್ರಾಬಾದ ಕರ್ನಾಟಕ ರಂಗಭೂಮಿ

ಸಂಪುಟ–೨

ಗ್ರಾಮೀಣ ರಂಗಭೂಮಿ ನಾಟಕಗಳು

ಪ್ರಧಾನ ಸಂಪಾದಕರು
ಡಾ. ಬಸವರಾಜ ಸಬರದ
ಸಂಪಾದಕರು
ಡಾ. ವಿಜಯಶ್ರೀ ಸಬರದ

ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ – ೫೮೫ ೧೦೬

GRAMEENA RANGABHOOMI NATAKAGALU

Editor: Dr. **VIJAYASHREE SABARAD**

Chief Editor : Dr. Basavaraj Sabarad, professor of Kannada, Gulbarga University, Gulbarga. Funded by: Government of Karnataka. Published by: Institute of Kannada Studies Gulbarga University, Gulbarga

ISBN : 978-81-923128-0-4

First Impression : 2013

Total Pages : xxxii + 784

Paper Used : 80 G. S.M.Maplitho

Price : Rs. 300.00

ಹೈದ್ರಾಬಾದ ಕರ್ನಾಟಕ ರಂಗಭೂಮಿ

ಸಂಪುಟ-೨ ಗ್ರಾಮೀಣ ರಂಗಭೂಮಿ ನಾಟಕಗಳು

ಪ್ರಧಾನ ಸಂಪಾದಕರು ಡಾ. ಬಸವರಾಜ ಸಬರದ ಪ್ರಾಧ್ಯಾಪಕರು

ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಸಂಪಾದಕರು ಡಾ. ವಿಜಯಶ್ರೀ ಸಬರದ

ಪ್ರಕಾಶಕರು : ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಪ್ರಥಮ ಮುದ್ರಣ : ೨೦೧೩

ಪುಟಗಳು: xxxii + 784

ಬಳಸಿದ ಕಾಗದ : ೮೦ ಜಿ.ಎಸ್. ಎಮ್. ಮ್ಯಾಪಲಿಥೊ

ಬೆಲೆ : ರೂ. ೩೦೦.೦೦

ಕೃತಿ ದೊರೆಯುವ ಸ್ಥಳ : ಕನ್ನಡ ಅಧ್ಯಯನ ಸಂಸ್ಥೆ ಗು.ವಿ.ಗು

ಮುದ್ರಕರು : ಪ್ರಿಂಟ್ ಪಾರ್ಕ್

ಕ್ವಾಲಿಟಿ ಆಫ್‌ಸೆಟ್ ಪ್ರಿಂಟರ್ಸ್

ಶ್ರೀರಾಂಪುರಂ ಅಂಚೆ,

ಬೆಂಗಳೂರು - ೫೬೦ ೦೨೧.

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಕನ್ನಡ ಭಾಷಾಭಿವೃದ್ಧಿ ಯೋಜನಾ ಸಮಿತಿ

ಪ್ರೊ. ಈ.ಟಿ. ಪುಟ್ಟಯ್ಯ	ಕುಲಪತಿಗಳು	ಅಧ್ಯಕ್ಷರು
ಪ್ರೊ. ದಯಾನಂದ ಅಗಸರ್	ಕುಲಸಚಿವರು	ಉಪಾಧ್ಯಕ್ಷರು
ಪ್ರೊ. ನಾಗಾಬಾಯಿ ಬುಳ್ಳಾ	ಮುಖ್ಯಸ್ಥರು	ಸಂಚಾಲಕರು
ಡಾ. ಪಿ.ಕೆ.ಖಂಡೋಬಾ	ಪ್ರಾಧ್ಯಾಪಕರು	ಸದಸ್ಯರು
ಡಾ. ಡಿ.ಬಿ.ನಾಯಕ	ಪ್ರಾಧ್ಯಾಪಕರು	ಸದಸ್ಯರು
ಡಾ. ವ್ಹಿ.ಜಿ.ಪೂಜಾರ	ಪ್ರಾಧ್ಯಾಪಕರು	ಸದಸ್ಯರು
ಡಾ. ಬಸವರಾಜ ಸಬರದ	ಪ್ರಾಧ್ಯಾಪಕರು	ಸದಸ್ಯರು
ಡಾ. ವೀರಣ್ಣದಂಡೆ	ಪ್ರಾಧ್ಯಾಪಕರು	ಸದಸ್ಯರು
ಡಾ. ಬಿ.ಎಸ್. ಪೋಲಿಸ ಪಾಟೀಲ	ಪ್ರಾಧ್ಯಾಪಕರು	ಸದಸ್ಯರು
ಡಾ. ಎಚ್.ಟಿ.ಪೋತೆ	ಪ್ರಾಧ್ಯಾಪಕರು	ಸದಸ್ಯರು
ಡಾ. ಎಸ್.ಎಂ. ಹಿರೇಮಠ	ಪ್ರಾಧ್ಯಾಪಕರು	ಸದಸ್ಯರು
ಡಾ. ಜಯಶ್ರೀ ದಂಡೆ	ಪ್ರಾಧ್ಯಾಪಕರು	ಸದಸ್ಯರು

6

ಎಸ್. ಸಿದ್ಧರಾಮಯ್ಯ
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು-560 001

ಕರ್ನಾಟಕ ಸರ್ಕಾರ

ಶುಭ ಹಾರೈಕೆ

ಕರ್ನಾಟಕ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯ-ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ , ತತ್ತ್ವಪದ ಸಾಹಿತ್ಯ, ದಲಿತ-ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿವೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳ ಅಡಿಯಲ್ಲಿ ಈಗ ಸಿದ್ಧಪಡಿಸಿರುವ ಸಂಪುಟವು ಹೈದ್ರಾಬಾದ ಕರ್ನಾಟಕ ರಂಗಭೂಮಿಗೆ ಸೇರಿದ್ದಾಗಿದೆ. ಈ ಸಂಪುಟವನ್ನು ಪ್ರಕಟಿಸಲು ಶ್ರಮಿಸಿದ ಪ್ರಧಾನ ಸಂಪಾದಕರನ್ನು ಹಾಗೂ ಸಂಪಾದಕರನ್ನು ಅಭಿನಂದಿಸುತ್ತೇನೆ. ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಎಸ್. ಸಿದ್ಧರಾಮಯ್ಯ
ಮುಖ್ಯಮಂತ್ರಿಗಳು

8

ಶ್ರೀಮತಿ ಉಮಾಶ್ರೀ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು– 560 001

ಶುಭಹಾರೈಕೆ

ಕನ್ನಡ ನಾಡು–ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯು ಅಂತಹ ಹಲವು ಯೋಜನೆಗಳ ಅಡಿಯಲ್ಲಿ ಒಂದು. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಕೆಲವು ಸಂಶೋಧನಾ ಯೋಜನೆಗಳನ್ನು ಕೈಕೊಂಡಿದ್ದು ಅದರಲ್ಲಿ ಹೈದ್ರಾಬಾ ಕರ್ನಾಟಕ ರಂಗಭೂಮಿಯೋಜನೆ ಕೂಡಾ ಸೇರಿದೆ. ಈ ಯೋಜನೆಯ ಪ್ರಧಾನ ಸಂಪಾದಕರನ್ನು ಹಾಗೂ ಸಂಪಾದಕರನ್ನು ಕನ್ನಡ ಸಂಸ್ಕೃತಿ ಇಲಾಖೆಯ ಆಯುಕ್ತರಾದ ಡಾ. ರಾಮಕೃಷ್ಣ ಅವರನ್ನೂ ಅಭಿನಂದಿಸುತ್ತೇನೆ.

ಶ್ರೀಮತಿ ಉಮಾಶ್ರೀ

ಸಚಿವರು

10

ಬಿ. ಬಸವರಾಜು ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

೨, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು- ೫೬೦ ೦೦೧
೨೨೨೦೫೭೮೧ಮ ೨೨೦೩೪೦೦
ಫ್ಯಾಕ್ಸ್: ೨೨೩೫೩೧೦೫
ಇ-ಮೇಲ್: secy-kc@karnataka. Gov.in

ಶುಭಹಾರೈಕೆ

ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುವುದಕ್ಕಾಗಿ. ೨೦೦೮ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡಿದ್ದು ಅದರಡಿಯಲ್ಲಿ ಹೈದ್ರಾಬಾದ ಕರ್ನಾಟಕ ರಂಗಭೂಮಿ ಯೋಜನೆ ಕೂಡಾ ಮುಖ್ಯವಾಗಿದೆ. ಈ ಯೋಜನೆಯ ಪ್ರಧಾನ ಸಂಪಾದಕರನ್ನು ಅಭಿನಂದಿಸುತ್ತೇನೆ.

ಬಿ. ಬಸವರಾಜು
ಕಾರ್ಯದರ್ಶಿ

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: ೨೫.೧೦.೨೦೧೧

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. ೧೯೭೦-೭೧ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ ೧೯೮೦ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ರಂಗಭೂಮಿ ಹಾಗೂ ನಾಟಕ ಸಾಹಿತ್ಯ ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು

ಸಂಪುಟಗಳನ್ನು ಸಿದ್ಧಪಡಿಸಿದ್ದಾರೆ. ಹೈದ್ರಾಬಾದ ಕರ್ನಾಟಕ ರಂಗಭೂಮಿ ಯೋಜನೆಯ ಪ್ರಧಾನ ಸಂಪಾದಕರಾಗಿರುವ ಪ್ರೊ. ಬಸವರಾಜ ಸಬರದ ಅವರು ಈ ಪ್ರದೇಶದ ರಂಗಭೂಮಿ ಹಾಗೂ ನಾಟಕಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಯೋಜನೆಯಲ್ಲಿ ವೃತ್ತಿ ರಂಗಭೂಮಿ – ಗ್ರಾಮೀಣ ರಂಗಭೂಮಿ–ಹಾಗೂ ಹವ್ಯಾಸಿ ರಂಬಭೂಮಿಗೆ ಸಂಬಂಧಿಸಿದ ಸಂಪುಟಗಳು ಪ್ರಕಟವಾಗುತ್ತಲಿವೆ.

ಈ ಸಂಪುಟಗಳ ಸಂಪಾದಕರುಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ. ಬಸವರಾಜು ಅವರಿಗೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಡಾ.ರಾಮಕೃಷ್ಣ ಅವರಿಗೆ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಪ್ರಧಾನ ಸಂಪಾದಕರ ನುಡಿ

15

ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಭಾಷಾಭಿವೃದ್ಧಿ ಯೋಜನೆಯಲ್ಲಿ "ಹೈದ್ರಾಬಾದ ಕರ್ನಾಟಕ ರಂಗಭೂಮಿ" ಯೋಜನೆ ಕೂಡಾ ಮಹತ್ವದ್ದಾಗಿದೆ. ನಾನು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷನಾಗಿದ್ದಾಗ ಈ ಯೋಜನೆಗಳು ಪ್ರಾರಂಭವಾದವು. ಅವುಗಳಲ್ಲಿ ಹೈದ್ರಾಬಾದ ಕರ್ನಾಟಕ ರಂಗಭೂಮಿ ಯೋಜನೆಗೆ ನಾನು ಪ್ರಧಾನ ಸಂಶೋಧಕನಾಗಿ ಕಾರ್ಯನಿರ್ವಹಿಸಿದೆ.

ಕರ್ನಾಟಕ ರಂಗಭೂಮಿ ಕುರಿತು ಈಗಾಗಲೇ ಅನೇಕ ಸಂಶೋಧನಾ ಕೃತಿಗಳು ಪ್ರಕಟವಾಗಿವೆ. ಆದರೆ ಹೈದ್ರಾಬಾದ ಕರ್ನಾಟಕ ಪ್ರದೇಶದ ಬೀದರ, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಯಾದಗಿರಿ ಜಿಲ್ಲೆಗಳ ರಂಗಭೂಮಿ ಕುರಿತು ಹೆಚ್ಚಿನ ಸಂಶೋಧನೆಗಳು ನಡೆಯಬೇಕಾಗಿದೆ. ಇಂತಹ ಪ್ರಥಮ ಪ್ರಯತ್ನವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಈ ಯೋಜನೆಯಲ್ಲಿ ಎರಡು ಭಾಗಗಳಿವೆ. ಮೊದಲನೆ ಭಾಗದಲ್ಲಿ ಈ ಪ್ರದೇಶದ ಪ್ರಾತಿನಿಧಿಕ ನಾಟಕಗಳ ಸಂಕಲನಗಳು ಪ್ರಕಟವಾಗುತ್ತಿವೆ. ಈ ಭಾಗದಲ್ಲಿ ನಾಲ್ಕು ಸಂಪುಟಗಳು ಪ್ರಕಟನೆಗೆ ಸಿದ್ಧವಾಗಿವೆ.

೧. ವೃತ್ತಿ ರಂಗಭೂಮಿ ನಾಟಕಗಳು

೨. ಗ್ರಾಮೀಣ ರಂಗಭೂಮಿ ನಾಟಕಗಳು

೩. ಹವ್ಯಾಸಿ ರಂಗಭೂಮಿ ನಾಟಕಗಳು

೪. ಗೀತನಾಟಕ–ಬೀದಿನಾಟಕ–ಏಕಾಂಕ ನಾಟಕಗಳು

ಈ ನಾಲ್ಕು ಸಂಪುಟಗಳನ್ನು ಬೇರೆ ಬೇರೆ ವಿದ್ವಾಂಸರು ಸಂಪಾದಿಸಿ ಕೊಟ್ಟಿದ್ದಾರೆ. ರಂಗಭೂಮಿ ಚರಿತ್ರೆಯನ್ನು ಕುರಿತು ಎರಡು ಸಂಪುಟಗಳು ಪ್ರಕಟವಾಗಲಿವೆ. ಈ ಆರೂ ಸಂಪುಟಗಳು ಈ ಪ್ರದೇಶದ ರಂಗಭೂಮಿಯ ಮಹತ್ವದ ಕೃತಿಗಳಾಗಿವೆ. ಗ್ರಾಮೀಣ ರಂಗಭೂಮಿಯಲ್ಲಿ ಈ ಪ್ರದೇಶದ ನೂರಾರು

ನಾಟಕಗಳಿವೆ. ಅವುಗಳಲ್ಲಿ ಪ್ರಾತಿನಿಧಿಕವಾಗಿ ಕೆಲವು ಪ್ರಮುಖ ನಾಟಕಗಳನ್ನು ಮಾತ್ರ ಈ ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಪ್ರತಿಯೊಂದು ಸಂಪುಟದ ಸಂಪಾದಕರು ಆಯಾ ಸಂಪುಟದ ಪ್ರಾಮುಖ್ಯತೆಯನ್ನು ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ. ಈ ಸಂಪುಟಗಳಲ್ಲಿ ಪ್ರಕಟವಾಗಿರುವ ನಾಟಕಗಳು, ತುಂಬ ಪ್ರಮುಖವಾಗಿದ್ದು, ಪ್ರಶಸ್ತಿ–ಪುರಸ್ಕಾರಗಳನ್ನು ಪಡೆದುಕೊಂಡಿವೆ. ಅನೇಕ ರಂಗಪ್ರಯೋಗಗಳನ್ನು ಕಂಡಿವೆ. ಇಂದು ಈ ನಾಟಕಗಳನ್ನು ಪ್ರಯೋಗಿಸಬೇಕೆಂದರೆ ಈ ನಾಟಕ ಕೃತಿಗಳು ಲಭ್ಯವಿಲ್ಲದಂತಾಗಿದೆ. ಇವು ಇಪ್ಪತ್ತನೇ ಶತಮಾನದಲ್ಲಿ ರಚಿತವಾದ ನಾಟಕಗಳಾಗಿವೆ. ಹೀಗಾಗಿ ಈ ಸಂಪುಟಗಳ ಪ್ರಕಟಣಾ ಕಾರ್ಯ, ಪುನರಾವರ್ತನೆಯದಾಗಿರದೆ, ಇಂದಿನ ಯುವ ಪೀಳಿಗೆಗೆ ಹಾಗೂ ರಂಗಕರ್ಮಿಗಳಿಗೆ ಅತ್ಯಂತ ಪ್ರಮುಖವಾದ ಯೋಜನೆಯಾಗಿದೆ. ಈ ಸಂಪುಟಗಳಲ್ಲಿನ ಕೆಲವು ನಾಟಕಕಾರರು ಈಗ ದಿವಂಗತರಾಗಿದ್ದು, ಆ ನಾಟಕಗಳನ್ನು ಮರುಮುದ್ರಿಸುವವರಿಲ್ಲದಂತಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ನಾಟಕಗಳ ಸಂಪುಟಗಳಲ್ಲಿ (ಸುವರ್ಣ ಸಾಹಿತ್ಯ ಮಾಲೆ) ಹಾಗೂ ವಿಶ್ವ ಕನ್ನಡ ಸಮ್ಮೇಳನದ ಸವಿನೆನಪಿಗಾಗಿ ಪ್ರಕಟವಾದ ಗ್ರಂಥಗಳಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಲೇಖಕರಿಗೆ ಅನ್ಯಾಯವಾಗಿದೆ. ಈ ಪ್ರದೇಶದ ಐದು ಜಿಲ್ಲೆಗಳಲ್ಲಿ ನೂರಾರು ಪ್ರಮುಖ ಲೇಖಕರಿದ್ದಾರೆ. ಅವರ ಕೃತಿಗಳು ಈ ಮಾಲೆಗಳಲ್ಲಿ ಪ್ರಕಟವಾಗಿಲ್ಲ. ಒಂದಿಬ್ಬರು ಲೇಖಕರ ಕೃತಿಗಳನ್ನು ಹೊರತು ಪಡಿಸಿದರೆ ಉಳಿದವರಿಗೆ ಅಲ್ಲಿ ಸ್ಥಾನವೇ ಇಲ್ಲ. ಈ ಕಾರಣಕ್ಕಾಗಿಯೇ ಈ ಪ್ರದೇಶದ ಹಿರಿಯ ಸಾಹಿತಿ ಶ್ರೀ ಶಾಂತರಸರು ಬೆನ್ನ ಹಿಂದಿನ ಬೆಳಕು ಕೃತಿ ಪ್ರಕಟಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಸಂಸ್ಕೃತಿ ಇಲಾಖೆ ಮೊದಲಿನಿಂದಲೂ ಈ ಪ್ರದೇಶವನ್ನು ಹಾಗೂ ಇಲ್ಲಿಯ ಲೇಖಕರನ್ನು ಕಡೆಗಣಿಸುತ್ತ ಬಂದಿದೆ.

ಈ ಕಾರಣಕ್ಕಾಗಿಯೇ ನಾನು ಮುಖ್ಯಸ್ಥನಾಗಿದ್ದಾಗ ಉದ್ದೇಶಪೂರ್ವಕವಾಗಿ ಈ ಪ್ರದೇಶದ ಸಾಹಿತ್ಯ–ಸಂಸ್ಕೃತಿಗಳತ್ತ ಬೆಳಕು ಚೆಲ್ಲುವ ಯೋಜನೆಗಳನ್ನು ರೂಪಿಸಿದೆ. ನಮ್ಮ ಯೋಜನೆಗಳಲ್ಲಿ ಈ ಪ್ರದೇಶದ ಶರಣರ–ದಾಸರ–ತತ್ವಪದಕಾರರ ಸ್ಮಾರಕಗಳ ಸಂಶೋಧನೆಗೆ ಪ್ರಾಮುಖ್ಯತೆ ನೀಡಲಾಗಿದೆ. ಈ ಪ್ರದೇಶದ ಸಾಂಸ್ಕೃತಿಕ ಪದಕೋಶಗಳನ್ನು ಸಿದ್ಧಪಡಿಸಲಾಗಿದೆ. ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಹಸ್ತಪ್ರತಿ ಸಂಗ್ರಹಾಲಯದಿಂದ ಕೆಲವು ಮಹತ್ವದ ಹಸ್ತಪ್ರತಿಗಳನ್ನು ಪ್ರಕಟನೆಗೆ ಕೈಗೆತ್ತಿಕೊಳ್ಳಲಾಗಿದೆ. ನಮ್ಮ ಚರಿತ್ರೆಯನ್ನು ಬೇರೆಯವರು ಬಂದು ಕಟ್ಟಬೇಕು, ನಮ್ಮ ಸಾಹಿತ್ಯ ಕೃತಿಗಳನ್ನು ಬೇರೆಯವರು ಪ್ರಕಟಿಸಬೇಕೆಂದು ಬಯಸಿ ನಿರಾಶರಾಗುವುದಕ್ಕಿಂತ ಸಿಕ್ಕ ಅವಕಾಶಗಳನ್ನುಪಯೋಗಿಸಿಕೊಂಡು ನಮ್ಮ ಸಾಹಿತ್ಯ ಚರಿತ್ರೆಗಳನ್ನು ನಾವೇ ಕಟ್ಟಿಕೊಳ್ಳುವ, ನಮ್ಮ ರಂಗಭೂಮಿಯನ್ನು ನಾವೇ ರೂಪಿಸಿಕೊಳ್ಳುವ ಸಂಶೋಧನಾ ಕಾರ್ಯಕ್ಕೆ ಕೈಹಾಕಿದ್ದೇವೆ.

ಸಾಹಿತ್ಯ ಚರಿತ್ರೆಗಳು–ಸಂಸ್ಕೃತಿ ಸಂಪುಟಗಳು ಆಯಾ ಪ್ರದೇಶಗಳ ಮೂಲಕ ಬೆಳೆದು ಬರಬೇಕೆಂಬುದು ನಮ್ಮ ಆಶಯವಾಗಿದೆ. ಕನ್ನಡಕ್ಕೆ ಒಂದೇ ಸಾಹಿತ್ಯ ಚರಿತ್ರೆ ಇರಬೇಕೆಂಬುದು ಕೇಂದ್ರಿಕೃತವಾದ ಆಲೋಚನೆಯಾಗುತ್ತದೆ. ಇದರಿಂದ ರಾಜಧಾನಿಯಿಂದ ದೂರವಿರುವ ಮಹತ್ವದ ಲೇಖಕರು ಅಂತಹ ಚರಿತ್ರೆಗಳಲ್ಲಿ ಕಾಣಿಸಿಕೊಳ್ಳುವುದೇ ಇಲ್ಲ. ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಮುಂಬೈ ಕರ್ನಾಟಕದ ಸಾಹಿತ್ಯ ಚರಿತ್ರೆ, ಕರಾವಳಿ ಕರ್ನಾಟಕದ ಸಾಹಿತ್ಯ ಚರಿತ್ರೆ, ದಕ್ಷಿಣ ಕರ್ನಾಟಕದ ಸಾಹಿತ್ಯ ಚರಿತ್ರೆ ಹೀಗೆ ಹತ್ತು ಹಲವು ಸಾಹಿತ್ಯ ಚರಿತ್ರೆಗಳು–ಸಂಸ್ಕೃತಿ ಸಂಪುಟಗಳು ಪ್ರಕಟವಾದಾಗ ಪ್ರಾದೇಶಿಕ ಸಂಸ್ಕೃತಿಯ ಹಿರಿಮೆ–ಗರಿಮೆಗಳು ಗೊತ್ತಾಗುತ್ತವೆ.

ಅಂತಹ ಪ್ರಯತ್ನದ ಫಲವಾಗಿಯೇ ಈ ಯೋಜನೆ ರೂಪಗೊಂಡಿದೆ. ಈ ಯೋಜನೆಯ ಮೊದಲ ಭಾಗವು ಪ್ರಾತಿನಿಧಿಕ ನಾಟಕಗಳ ಪ್ರಕಟನೆಗೆ ಪ್ರಾಮುಖ್ಯತೆ ನೀಡಿದೆ. ಎರಡನೇ ಭಾಗವು ರಂಗಭೂಮಿಯ ಸಂಶೋಧನೆ–ವಿಮರ್ಶೆಗೆ ಒತ್ತು ನೀಡುತ್ತದೆ. ಈ ಯೋಜನೆಲ್ಲಿ ಮಹತ್ವದ ಸಂಶೋಧನಾ ಸಂಪುಟಗಳು ಪ್ರಕಟವಾಗಲಿವೆ.ಆ ಸಂಪುಟಗಳು ಹೈದ್ರಾಬಾದ ಕರ್ನಾಟಕದ ಸಮಗ್ರ ರಂಗಭೂಮಿಯ ಬೆಳವಣಿಗೆಯನ್ನು ಕುರಿತು ಚರ್ಚಿಸಲಿವೆ. ಈ ಪ್ರದೇಶದ ವಿವಿಧೆಡೆ ಕ್ಷೇತ್ರಕಾರ್ಯ ಮಾಡಿ ಕಲಾವಿದರ–ನಾಟಕಕಾರರ–ನಾಟಕ ಕಂಪನಿಗಳ ವಿವರಗಳನ್ನು ಸಂಗ್ರಹಿಸಿಕೊಂಡು ಸ್ವತಂತ್ರವಾಗಿ ಈ ಸಂಪುಟಗಳನ್ನು ರಚಿಸಲಾಗಿದೆ.

ಹೀಗೆ ಹೈದ್ರಾಬಾದ ಕರ್ನಾಟಕ ರಂಗಭೂಮಿ ಯೋಜನೆಯಲ್ಲಿ ನಾಲ್ಕು ಸಂಪುಟಗಳು ಪ್ರಾತಿನಿಧಿಕ ನಾಟಕಗಳನ್ನು ಕೂಡಿಸಿಕೊಟ್ಟರೆ, ಉಳಿದ ಎರಡು ಸಂಪುಟಗಳು ಈ ಪ್ರದೇಶದ ರಂಗಭೂಮಿ ಚರಿತ್ರೆಯನ್ನು ಕಟ್ಟಿಕೊಡುತ್ತವೆ. ಇಂತಹ ಅವಕಾಶವನ್ನು ನೀಡಿದ ಕರ್ನಾಟಕ ಸರಕಾರಕ್ಕೆ, ಸಹಕಾರ ನೀಡಿದ ನಮ್ಮ ವಿಶ್ವವಿದ್ಯಾಲಯದ ಕುಲಪತಿ–ಕುಲಸಚಿವರುಗಳಿಗೆ ಕೃತಜ್ಞತೆಗಳು ಸಲ್ಲುತ್ತವೆ. ಪ್ರಾತಿನಿಧಿಕ ನಾಟಕಗಳ ನಾಲ್ಕು ಸಂಪುಟಗಳ ಸಂಪಾದಕರುಗಳಿಗೆ, ತಮ್ಮ ನಾಟಕಗಳನ್ನು ಈ ಸಂಪುಟಗಳಲ್ಲಿ ಪ್ರಕಟಿಸಲು ಅನುಮತಿ ನೀಡಿದ ನಾಟಕಕಾರರಿಗೆ ಧನ್ಯವಾದಗಳು.

ಡಾ. ಬಸವರಾಜ ಸಬರದ

ಪ್ರಧಾನ ಸಂಪಾದಕರು

18

ಸಂಪಾದಕರ ನುಡಿ

ಹೈದ್ರಾಬಾದ ಕರ್ನಾಟಕ ರಂಗಭೂಮಿ ಯೋಜನೆಯಡಿಯಲ್ಲಿ ಪ್ರಕಟವಾಗುತ್ತಲಿರುವ ಎರಡನೇ ಸಂಪುಟ ಇದಾಗಿದೆ. ಗ್ರಾಮೀಣ ರಂಗಭೂಮಿಗೆ ಸಂಬಂಧಿಸಿದ ನಾಟಕಗಳನ್ನು ಆಯ್ಕೆ ಮಾಡಿಕೊಂಡು ಈ ಸಂಪುಟ ಸಿದ್ಧಪಡಿಸಲಾಗಿದೆ. ಈ ಸಂಪುಟದ ಸಂಪಾದಕಳಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡಿದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಹಾಗೂ ಕನ್ನಡ ಭಾಷಾಭಿವೃದ್ಧಿ ಯೋಜನಾ ಸಮಿತಿಯ ಎಲ್ಲ ಗೌರವಾನ್ವಿತ ಸದಸ್ಯರುಗಳಿಗೆ ಕೃತಜ್ಞತೆಗಳು.

ಈ ಸಂಪುಟದಲ್ಲಿ ಏಳು ನಾಟಕಗಳಿವೆ. ಈ ಸಂಪುಟದಲ್ಲಿ ಬಳಸಿಕೊಳ್ಳಲು ತಮ್ಮ ನಾಟಕ ಪುಸ್ತಕಗಳನ್ನು ಹಾಗೂ ಹಸ್ತಪ್ರತಿಗಳನ್ನು ಕಳಿಸಿದ ನಾಟಕಕಾರರಿಗೆ ಅಭಿವಂದನೆಗಳು.

ಡಾ. ವಿಜಯಶ್ರೀ ಸಬರದ

ಸಂಪಾದಕರು

20

ಪ್ರಸ್ತಾವನೆ

"ಹೈದ್ರಾಬಾದ ಕರ್ನಾಟಕ ರಂಗಭೂಮಿ" ಯೋಜನೆಯಲ್ಲಿ ಪ್ರಕಟಗೊಳ್ಳುವ ಎರಡನೇ ಸಂಪುಟ ಇದಾಗಿದೆ. ಇಲ್ಲಿ ಗ್ರಾಮೀಣ ರಂಗಭೂಮಿಗೆ ಸಂಬಂಧಿಸಿದ ಏಳು ನಾಟಕಗಳನ್ನು ಕೂಡಿಸಿಕೊಡಲಾಗಿದೆ. ಈ ನಾಟಕಗಳು ಈಗಾಗಲೇ ರಾಜ್ಯದಾದ್ಯಂತ, ಪ್ರಯೋಗಗೊಂಡು ಪ್ರಕಟವಾದವುಗಳೇ ಆಗಿವೆ. ಆದರೆ ಈಗ ಈ ನಾಟಕಗಳ ಪ್ರತಿಗಳು ದೊರೆಯುತ್ತಿಲ್ಲ. ಮಹತ್ವದ ಈ ಗ್ರಾಮೀಣ ನಾಟಕಗಳನ್ನೊಳಗೊಂಡಿರುವ ಈ ಸಂಪುಟದ ಮೂಲಕ ಮತ್ತೆ ಗ್ರಾಮೀಣ ರಂಗಭೂಮಿ ಚೇತರಿಸಿಕೊಳ್ಳಲೆಂಬುದೇ ನಮ್ಮ ಇಚ್ಛೆಯಾಗಿದೆ.

21

ರಂಗಭೂಮಿಯಲ್ಲಿ ವೃತ್ತಿರಂಗಭೂಮಿ–ಹವ್ಯಾಸಿ ರಂಗಭೂಮಿ–ಜನಪದ ರಂಗಭೂಮಿಯೆಂದು ಮೂರು ರಂಗಭೂಮಿಗಳ ಬಗೆಗೆ ವಿದ್ವಾಂಸರು ಪ್ರಸ್ತಾಪಿಸಿದ್ದಾರೆ. ಈ ಮೂರೂ ರಂಗಭೂಮಿಗಳ ಪರಂಪರೆ-ಪ್ರಯೋಗಗಳನ್ನು ಕುರಿತು ಈಗಾಗಲೇ ಅನೇಕ ವಿಮರ್ಶಾಕೃತಿಗಳು, ಸಂಶೋಧನಾ ಕೃತಿಗಳು ಪ್ರಕಟವಾಗಿವೆ. ಆದರೆ ಗ್ರಾಮೀಣ ರಂಗಭೂಮಿ ಕುರಿತಂತೆ ಹೆಚ್ಚಿನ ಚರ್ಚೆ ನಡೆದಿಲ್ಲ. ಆದರೆ ಈ ಯೋಜನೆಯಲ್ಲಿ ಪ್ರಕಟವಾಗಲಿರುವ ಸಂಶೋಧನಾ ಸಂಪುಟದಲ್ಲಿ ಗ್ರಾಮೀಣ ರಂಗಭೂಮಿಯ ಹುಟ್ಟು–ಬೆಳವಣಿಗೆ ಅದರ ಪ್ರಾಮುಖ್ಯತೆ ಕುರಿತಂತೆ ಚರ್ಚಿಸಲಾಗಿದೆ. ಹೀಗಾಗಿ ಈ ಗ್ರಾಮೀಣ ರಮಗಭೂಮಿಯ ಚರಿತ್ರೆಯ ಕಡೆ ಇಲ್ಲಿ ಗಮನಿಸದೆ, ಈ ಸಂಪುಟದಲ್ಲಿ ಪ್ರಕಟವಾಗಿರುವ ಗ್ರಾಮೀಣ ನಾಟಕಗಳ ಮಹತ್ವವನ್ನು ಕುರಿತು, ಈ ನಾಟಕಗಳು ಇಂದಿಗೆ ಹೇಗೆ ಪ್ರಸ್ತುತ ಎಂಬುದನ್ನು ಕುರಿತು ನಾನಿಲ್ಲಿ ಚರ್ಚಿಸಬಯಸಿದ್ದೇನೆ. ಕೆಲವಾದರೂ ವೃತ್ತಿ ಕಂಪನಿಗಳು ಕರ್ನಾಟಕದಲ್ಲಿ ಕಾಣಸಿಗುತ್ತವೆ, ಹವ್ಯಾಸಿ ನಾಟಕಗಳು ಆಗಾಗ ಶಾಲೆ–ಕಾಲೇಜು–ಉತ್ಸವಗಳಲ್ಲಿ ಪ್ರಯೋಗಗೊಳ್ಳತ್ತಲಿವೆ. ಆದರೆ ಗ್ರಾಮೀಣ ರಂಗಭೂಮಿಯ ಉತ್ಸಾಹ ತುಂಬ ಕಡಿಮೆಯಾಗಿದೆ. ಗ್ರಾಮಗಳಲ್ಲಿಂದು ಮನೆಮನೆಗೆ ಟಿ.ವಿ. ಚಾನಲ್‌ಗಳು ಬಂದಿವೆ, ಗ್ರಾಮೀಣ ರಂಗಭೂಮಿಗೆ ಹಿನ್ನಡೆಯನ್ನುಂಟು ಮಾಡಿವೆ.

ಗ್ರಾಮೀಣ ರಂಗಭೂಮಿ ಕುರಿತು ಈ ಯೋಜನೆಯಡಿಯಲ್ಲಿ ಡಾ. ಬಸವರಾಜ ಸಬರದವರ ಸಂಶೋಧನಾ ಸಂಪುಟ ಪ್ರಕಟವಾಗಿದ್ದರೂ ಅದರ ಪರಂಪರೆಯ ಕುರಿತು ನಾಲ್ಕು ಮಾತು ಹೇಳುವುದು ಸೂಕ್ತವೆನಿಸುತ್ತದೆ.

ವೃತ್ತಿ ರಂಗಭೂಮಿ ಒಂದು ವೃತ್ತಿಯಾಗಿದೆ. ಅದಕ್ಕೊಬ್ಬ ಮಾಲಕನಿರುತ್ತಾನೆ, ಒಂದು ಕಂಪನಿ ಇರುತ್ತದೆ. ಆದರೆ ಗ್ರಾಮೀಣ ರಂಗಭೂಮಿ, ಗ್ರಾಮೀಣ ಕಲಾವಿದರ ಹವ್ಯಾಸಿ ರಂಗಭೂಮಿಯಾಗಿದೆ. ಗ್ರಾಮೀಣ ಯುವಕರು ಕಂಪನಿ ನಾಟಕಗಳನ್ನು ನೋಡಿ ಪ್ರಭಾವಗೊಂಡು ತಮ್ಮ ಊರಿನ ಜಾತ್ರೆಗೊ, ಉತ್ಸವಕ್ಕೊ ಒಂದು ನಾಟಕ ಪ್ರಯೋಗಿಸಬೇಕೆಂದು ಕ್ರಿಯೆಗಿಳಿದಾಗಲೇ ಗ್ರಾಮೀಣ ರಂಗಭೂಮಿ ಹುಟ್ಟಿಕೊಂಡಿತು. ವೃತ್ತಿ ನಾಟಕಗಳ ಕಂಪನಿಗಳಿರುವಂತೆ, ಗ್ರಾಮೀಣ ರಂಗಭೂಮಿ ಕ್ರಿಯಾಶೀಲವಾಗಲು ಹಳ್ಳಿ-ಹಳ್ಳಿಗಳಲ್ಲಿ ಅನೇಕ ನಾಟಕ ಸಂಘಗಳಿವೆ. ರಂಗಾಸಕ್ತರು ಕೆಲವರು ಊರಲ್ಲಿ ಕೂಡಿ ತಾವೇ ದುಡ್ಡು ಖರ್ಚು ಮಾಡಿ, ಗದಗ, ಇಲಕಲ್ಲ, ಮರಿಯಮ್ಮನಳ್ಳಿ ಮೊದಲಾದ ಊರುಗಳಿಂದ ವೃತ್ತಿ ಕಲಾವಿದೆಯರನ್ನು ಕರೆಯಿಸಿ ಗ್ರಾಮೀಣ ಜನತೆಗೆ ಮನರಂಜನೆ ನೀಡಲು ವರ್ಷಕ್ಕೆ ಒಂದು ಸಲವೊ-ಎರಡು ಸಲವೊ ನಾಟಕಗಳನ್ನಾಡುತ್ತಾರೆ. ಇವರು ಪ್ರಯೋಗಿಸುವ ನಾಟಕಗಳೆಲ್ಲ ವೃತ್ತಿ ಕಂಪನಿಯವರು ಪ್ರಯೋಗಿಸಿದ ಪ್ರಸಿದ್ಧ ನಾಟಕಗಳಾಗಿರುತ್ತವೆ. ಕೆಲವೊಮ್ಮೆ ಸ್ಥಳೀಯ ಗ್ರಾಮಗಳ ಸಾಹಿತಿಗಳು ಬರೆದ ನಾಟಕಗಳಾಗಿರುತ್ತವೆ. ಈ ಸಂಪುಟದಲ್ಲಿ ಸೇರಿರುವ ಎಲ್ಲ ನಾಟಕಗಳೂ ಗ್ರಾಮೀಣ ರಂಗಭೂಮಿಗೆ ಸೇರಿದ ನಾಟಕಗಳಾಗಿವೆ. ಇವುಗಳಲ್ಲಿ ಕೆಲವು ನಾಟಕಗಳನ್ನು ವೃತ್ತಿ ಕಂಪನಿಯವರೂ ಆಗಾಗ ಪ್ರಯೋಗಿಸಿದ್ದಾರೆ.

ಪ್ರಸ್ತುತ ಸಂಪುಟದಲ್ಲಿ ಏಳು ನಾಟಕಗಳಿವೆ. ಇಲ್ಲಿಯೂ ಕೂಡ ಮೊದಲನೇ ಸಂಪುಟದಲ್ಲಿ ಅನುಸರಿಸಿದಂತೆ ನಾಟಕಕಾರರ ವಯಸ್ಸಿನ ಹಿರಿಮೆಯನ್ನನುಸರಿಸಿ ಇಲ್ಲಿಯ ನಾಟಕಗಳನ್ನು ಜೋಡಿಸಲಾಗಿದೆ. ಈ ಸಂಪುಟದ ನಾಟಕಕಾರರಲ್ಲಿ ಕಂಟೆಪ್ಪ ಮಾಸ್ತರ ಕೋಡ್ಲಿಯವರು ನಿಧನರಾಗಿದ್ದಾರೆ. ಉಳಿದ ನಾಟಕಕಾರರೆಲ್ಲ ಕ್ರಿಯಾಶೀಲರಾಗಿದ್ದಾರೆ. ಆದರೆ ಗ್ರಾಮಗಳಲ್ಲಿ ನಾಟಕಗಳ ಪ್ರಯೋಗಗಳು ಕಡಿಮೆಯಾಗುತ್ತಲಿವೆ.

ಈ ಸಂಪುಟದ ನಾಟಕಕಾರಲ್ಲಿ ಕಂಟೆಪ್ಪ ಮಾಸ್ತರ ಅವರು ಹಿರಿಯ ನಾಟಕಕಾರರಾಗಿದ್ದಾರೆ. ಅವರು ೧೯೩೦ರಲ್ಲಿ ಜನಿಸಿದ್ದಾರೆ. ಈ ಸಂಪುಟದ ಕಿರಿಯ ನಾಟಕಕಾರ ಎಸ್.ಎನ್.ದಂಡಿನಕುಮಾರ ಆಗಿದ್ದಾರೆ. ಅವರು ೧೯೭೦ರಲ್ಲಿ ಜನಿಸಿದವರಾಗಿದ್ದಾರೆ. ೧೯೫೦ ರಿಂದ ೨೦೧೦ರವರೆಗೆ ಅಂದರೆ ಸುಮಾರು ಆರು ದಶಕಗಳ ಕಾಲದಲ್ಲಿ ಪ್ರಯೋಗಗೊಂಡ ಪ್ರಮುಖ ಗ್ರಾಮೀಣ ನಾಟಕಗಳನ್ನು ಇಲ್ಲಿ ಜೋಡಿಸಿಕೊಡಲಾಗಿದೆ.

"ಸಿಡಿದೆದ್ದ ಹೆಣ್ಣುಹುಲಿ" ನಾಟಕದ ಕರ್ತೃ ಶ್ರೀ ಕೋಡ್ಲಿ ಕಂಟೆಪ್ಪ ಮಾಸ್ತರ ಅವರು ಇತ್ತೀಚೆಗೆ ನಿಧನರಾಗಿದ್ದಾರೆ. ಕೋಡ್ಲಿ ಗ್ರಾಮದಲ್ಲಿ ಇತ್ತೀಚೆಗೆ ಅವರ ಸ್ಮರಣಾರ್ಥ ರಂಗೋತ್ಸವ ವಿಚಾರ ಸಂಕಿರಣ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕಂಟೆಪ್ಪ ಮಾಸ್ತರರ ಶಿಷ್ಯರು ಅವರ ರಂಗ ಚಟುವಟಿಕೆಗಳನ್ನು ಮುನ್ನಡೆಸುತ್ತಿದ್ದಾರೆ. ಸಾಮಾನ್ಯವಾಗಿ ಗಂಡನನ್ನು ಹುಲಿಯೆಂದು ಕರೆಯುತ್ತಾರೆ. ಆದರೆ ಕಂಟೆಪ್ಪ ಮಾಸ್ತರರು ಹೆಣ್ಣನ್ನು ಹುಲಿಯೆಂದು ಮೊದಲ ಬಾರಿಗೆ ಕರೆದಿದ್ದಾರೆ. ಈ ಸಂಪುಟದ ಅವರ "ಸಿಡಿದೆದ್ದ ಹೆಣ್ಣುಹುಲಿ" ನಾಟಕವನ್ನು ಆಯ್ದುಕೊಳ್ಳಲಾಗಿದೆ. ಇದೊಂದು ಸಾಮಾಜಿಕ ನಾಟಕವಾಗಿದ್ದು, ಗ್ರಾಮೀಣ ರಂಗಭೂಮಿಯಲ್ಲಿ ಅನೇಕ ಪ್ರಯೋಗಗಳನ್ನು ಕಂಡಿದೆ. ಈ ನಾಟಕಕ್ಕೆ ಅವರು ಇಟ್ಟಿರುವ ಮತ್ತೊಂದು ಹೆಸರು ಕ್ರಾಂತಿ ಎದ್ದ ಕನ್ಯೆ ಎಂಬುದಾಗಿದೆ. ಶಿಕ್ಷಕ ವೃತ್ತಿಯಲ್ಲಿದ್ದುಕೊಂಡು ೩೭ ನಾಟಕಗಳನ್ನು ರಚಿಸಿರುವ ಕಂಟೆಪ್ಪ ಮಾಸ್ತರರು ಗ್ರಾಮೀಣ ರಂಗಭೂಮಿಯ ಮಹತ್ವದ ನಿರ್ದೇಶಕರೂ ಆಗಿದ್ದರು.

ಮುಸ್ಲೀಂ ಜನಾಂಗದಿಂದ ಹುಟ್ಟಿಬಂದ ಎಲ್.ಬಿ.ಕೆ. ಆಲ್ದಾಳ, ಗ್ರಾಮೀಣ ರಂಗಭೂಮಿಯ ದೊಡ್ಡ ನಾಟಕಕಾರ. ಇವರು ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದಿದ್ದಾರೆ. ನಲವತ್ತಕ್ಕೂ ಹೆಚ್ಚು ನಾಟಕಗಳನ್ನು ರಚಿಸಿರುವ ಆಲ್ದಾಳರು ಶರಣ ಸಾಹಿತ್ಯದ ಪ್ರಭಾವಕ್ಕೊಳಗಾದವರು. ಹೀಗಾಗಿಯೇ ಭಕ್ತಿರಸದ ನಾಟಕಗಳನ್ನು ರಚಿಸಿದ್ದಾರೆ. ಅವರು ಖಲೀಫ ಎಂಬ ಅಂಕಿತದಲ್ಲಿ ಕೆಲವು ನಾಟಕಗಳನ್ನು ರಚಿಸಿದ್ದಾರೆ. ೭೪ ವರ್ಷದ ಈ ನಾಟಕಕಾರ ಇಂದಿಗೂ ಕೂಡ ಗ್ರಾಮೀಣ ರಂಗಭೂಮಿಯಲ್ಲಿ ಕ್ರಿಯಾಶೀಲರಾಗಿದ್ದಾರೆ. ಇತ್ತೀಚೆಗೆ ಇವರ ಅಭಿನಂದನ ಗ್ರಂಥ ಪ್ರಕಟವಾಗಿರುವುದನ್ನಿಲ್ಲಿ ಗಮನಿಸಬಹುದಾಗಿದೆ. ಈ ಸಂಪುಟದಲ್ಲಿ ಪ್ರಕಟವಾಗಿರುವ ಅವರ "ಪತಿಭಕ್ತಿ" ನಾಟಕದ ಇನ್ನೊಂದು ಹೆಸರು ಜಯ–ವಿಜಯವಾಗಿದೆ. ಭಕ್ತಿ ಪ್ರಧಾನ ನಾಟಕಗಳ ರಚನೆಗೆ ಹೆಸರು ವಾಸಿಯಾಗಿರುವ ಆಲ್ದಾಳರದು ಗ್ರಾಮೀಣ ರಂಗಭೂಮಿಯಲ್ಲಿ ದೊಡ್ಡ ಹೆಸರಾಗಿದೆ.

ಎಲ್.ಬಿ.ಕೆ.ಆಲ್ದಾಳ ಅವರ "ಪತಿಭಕ್ತಿಯ" ಮುಂದುವರಿಕೆಯಾಗಿ, ಡಿ.ಎಸ್.ಕುಮಾರ ಅವರ "ಪತಿಭಕ್ತಿ–ಸತಿಮುಕ್ತಿ" ನಾಟಕ ಪ್ರಕಟವಾಗಿದೆ. ಯಾದಗಿರಿಯ ಡಿ.ಎಸ್.ಕುಮಾರ ಅವರು ಗುಲ್ಬರ್ಗಾದ ಎಂ.ಎಸ್.ಕೆ. ಮಿಲ್‌ದಲ್ಲಿ ದಿನಗೂಲಿ ನೌಕರರಾಗಿ ಸೇರಿ, ಅಪ್ಪನ ಜಾತ್ರೆಯಲ್ಲಿ ಕ್ಯಾಂಪ್ ಮಾಡಿದ್ದ ಉದಯ ಕಂಪನಿಯವರ ನಾಟಕ ನೋಡಿ ಪ್ರಭಾವಗೊಂಡು ನಾಟಕ ರಂಗಕ್ಕೆ ಬಂದವರು. ನಲವತ್ತಕ್ಕಿಂತ ಹೆಚ್ಚು ನಾಟಕಗಳನ್ನು ರಚಿಸಿರುವ ಕುಮಾರ ಅವರಿಗೆ ನಾಟಕ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಫ್ಯೂಡಲ್ ವ್ಯವಸ್ಥೆ ಗಟ್ಟಿಯಾಗಿದ್ದ ಈ ಪ್ರದೇಶದಲ್ಲಿ ಸ್ವಾತಂತ್ರ್ಯ ಪೂರ್ವದ ಸಂದರ್ಭ ಮಹಿಳೆಯರಿಗೆ ಹಾಗೂ ದಲಿತರಿಗೆ ಭಯಾನಕವಾಗಿತ್ತು. ಆ ಅನುಭವದ ಹಿನ್ನೆಲೆಯಲ್ಲಿಯೇ ಇಲ್ಲಿಯ ನಾಟಕಗಳು ಹುಟ್ಟಿಕೊಂಡಿವೆ. ಪತಿಯೇ ದೈವ, ಪತಿಭಕ್ತಿ, ಪತಿವ್ರತೆ ಇಂತಹವಸ್ತುವನ್ನೊಳಗೊಂಡ ನಾಟಕಗಳನ್ನು ನೋಡಲು ಆ ಸಂದರ್ಭದಲ್ಲಿ

ಮಹಿಳೆಯರು ಅಸಂಖ್ಯಾತ ಸಂಖ್ಯೆಯಲ್ಲಿ ಬಂದು ಸೇರುತ್ತಿದ್ದರು. ಅವೆಲ್ಲ ಆ ಸಂದರ್ಭದ ಮೌಲ್ಯಗಳಾಗಿದ್ದವು. ಇದೇ ಸಾಲಿಗೆ ಸೇರುವ ಇನ್ನೊಂದು ನಾಟಕವೆಂದರೆ "ಹೆಣ್ಣುಜನ್ಮ" ಡಾ. ವೀರಣ್ಣ ರಾಜೂರ ಅವರು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದವರು, ಅಂತಹ ಸಂಶೋಧಕ ವಿದ್ವಾಂಸರು ಗ್ರಾಮೀಣ ರಂಗಭೂಮಿಯನ್ನು ಬೆಳೆಸಿದ್ದು ಗಮನಿಸಬೇಕಾದ ಸಂಗತಿ. ತಮ್ಮೂರಾದ ಬೆನಕನಾಳದಲ್ಲಿ, ತಮ್ಮ ಅಕ್ಕ ಅನುಭವಿಸಿದ ನೋವುಗಳನ್ನೇ ಕಥಾವಸ್ತುವನ್ನಾಗಿಸಿಕೊಂಡು, "ಹೆಣ್ಣು ಜನ್ಮ" ನಾಟಕವನ್ನವರು ರಚಿಸಿದರು. ಇದು ಹೆಣ್ಣಿನ ಸಾಧ್ಯತೆಗಳನ್ನು ಪ್ರಕಟಿಸುವ ನಾಟಕವಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ, ಊಳಿಗಮಾನ್ಯ ವ್ಯವಸ್ಥೆಯಲ್ಲಿ ಹೆಣ್ಣು ನಿರಂತರವಾಗಿ ಶೋಷಣೆಗಳೊಳಗಾಗಿದ್ದಾಳೆ. ಅಂತಹ ಹೆಣ್ಣು ಜನ್ಮದ ಬಗೆಗೆ ಡಾ. ರಾಜೂರು ಅವರು ರಚಿಸಿರುವ ಈ ನಾಟಕ ಕುಷ್ಟಗಿ ತಾಲೂಕಿನ ಗ್ರಾಮಗಳಲ್ಲಿ ಜನಮನ ತಲುಪಿದೆ, ಮನೆ–ಮನೆಗೆ ಮುಟ್ಟಿದೆ. ಹೆಣ್ಣಿನ ಪತಿಭಕ್ತಿ, ಆದರ್ಶಗಳನ್ನು ವೈಭವೀಕರಿಸುವ ನಾಟಕಗಳು ಹಲವಾರಿದ್ದರೆ, ಹೆಣ್ಣಿನ ಸಾಧ್ಯತೆಗಳನ್ನು ಕಂಡುಕೊಳ್ಳುವ ಕೆಲವಾದರೂ ನಾಟಕಗಳು ಯಶಸ್ವಿಯಾಗಿವೆ. ಅಂತಹ ಯಶಸ್ವಿ ನಾಟಕಗಳಲ್ಲಿ ಡಾ. ರಾಜೂರ ಅವರ "ಹೆಣ್ಣು ಜನ್ಮ" ನಾಟಕ ಕೂಡಾ ಒಂದಾಗಿದೆ.

ಬಸವರಾಜಪ್ಪಗೌಡ ಮಾಲಿಪಾಟೀಲ ಅವರ "ಚಕ್ಕನ ಕೊಲೆ" ನಾಟಕ ಕುತೂಹಲಕಾರಿಯಾದುದಾಗಿದೆ. ಒಂದು ರೀತಿಯ ಪತ್ತೇದಾರಿ ಕಾದಂಬರಿಯಂತೆ ಅದು ಕಾಣಿಸುತ್ತದೆ. ಆದರೆ ಅಲ್ಲಿಯ ವೇಷ–ಭಾಷೆ ತುಂಬ ಸರಳವಾಗಿವೆ. ಮಾನವಿ ತಾಲೂಕಿನ ಆಡು ಭಾಷೆಯನ್ನಲ್ಲಿ ಕಾಣಬಹುದಾಗಿದೆ.

ಚಿಂಚೋಳಿಯ ದಂಡಿನಕುಮಾರ ಅವರು ರಚಿಸಿರುವ "ಚಿನ್ನದಂಥ ಅತ್ತಿಗೆ" ಮಹತ್ವದ ಕೌಟುಂಬಿಕ ನಾಟಕವಾಗಿದೆ. ಹಿರಿಯ ನಾಟಕಕಾರರಾಗಿರುವ ಎಲ್.ಬಿ.ಕೆ. ಆಲ್ದಾಳ ಹಾಗೂ ಕಂಟೆಪ್ಪ ಮಾಸ್ತರರ ಮಾರ್ಗದರ್ಶನದಲ್ಲಿ ಬೆಳೆದುನಿಂತ ದಂಡಿನ ಕುಮಾರ ಅವರು ಹತ್ತಾರು ನಾಟಕಗಳನ್ನು ರಚಿಸಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಇವರ ನಾಟಕಗಳು ಪ್ರಯೋಗಗೊಂಡಿವೆ.

ನೂರಾರು ನಾಟಕಗಳನ್ನು ರಚಿಸಿ ಪ್ರಸಿದ್ಧಿಯಾಗಿರುವ ಗಂಗಾವತಿ ತಾಲೂಕಿನ ಗುಂಡೂರಿನ ಎಸ್.ವಿ.ಪಾಟೀಲರದು ಗ್ರಾಮೀಣ ರಂಗಭೂಮಿಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಬಾಲನಟನಾಗಿ ಬೆಳೆದ ಶರಣೇಗೌಡ (ಎಸ್.ವಿ.ಪಾಟೀಲ) ಮುಂದೆ ಗ್ರಾಮೀಣ ರಂಗಭೂಮಿಯ ಮಹತ್ವದ ನಾಟಕಕಾರರಾಗಿ ಕಾಣಿಸಿಕೊಂಡರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವ ಪಾಟೀಲರು ಸದಾ ಕ್ರಿಯಾಶೀಲರು.

ಗುಂಡೂರಿನಲ್ಲಿ ನಟರಾಜ ತರುಣ ಸಂಘ ಕಟ್ಟಿದರು ಗುಡದೂರದಲ್ಲಿ ಸಜ್ಜಲಶ್ರೀ ಕಲಾಬಳಗ ಸ್ಥಾಪಿಸಿದರು. ಇಲ್ಲಿ ಆರಿಸಿಕೊಂಡ ಇವರ ನಾಟಕ "ನನ್ನವಳು ನನ್ನ ಪ್ರೀತಿಸಿದವಳು" ಮಹತ್ವದ ಕೌಟುಂಬಿಕ ನಾಟಕವಾಗಿದೆ. ಪ್ರೀತಿ–ಪ್ರೇಮವೇ ಪ್ರಧಾನವಾಗಿರುವ ಈ ನಾಟಕದಲ್ಲಿ ಹಾಸ್ಯ ಪ್ರಸಂಗಗಳೂ ಕಾಣಿಸಿಕೊಂಡಿವೆ. ಗ್ರಾಮೀಣ ರಂಗಭೂಮಿಗೆ ಸಂಬಂಧಿಸಿದಂತೆ ಪ್ರತ್ಯೇಕ ಅಧ್ಯಯನವೇ ನಡೆಯಬೇಕೆನ್ನುವ ಪಾಟೀಲರು ಇಂದಿಗೂ ರಂಗಕ್ರಿಯೆಯಲ್ಲಿ ತಲ್ಲೀನರಾಗಿದ್ದಾರೆ.

ಇಲ್ಲಿ ಆರಿಸಿಕೊಂಡಿರುವ ಏಳು ನಾಟಕಗಳು ವಸ್ತು ವೈವಿಧ್ಯತೆಯಿಂದ ಕೂಡಿವೆ. ಈ ಸಂಪುಟದಲ್ಲಿ ಗುಲಬರ್ಗಾ ಜಿಲ್ಲೆಯ ಮೂರು ನಾಟಕಗಳು, ಕೊಪ್ಪಳ ಜಿಲ್ಲೆಯ ಎರಡು ನಾಟಕಗಳು ಹಾಗೂ ರಾಯಚೂರ ಜಿಲ್ಲೆ ಮತ್ತು ಯಾದಗಿರಿ ಜಿಲ್ಲೆಯ ತಲಾ ಒಂದು ನಾಟಕ ಸೇರಿವೆ. ಬೀದರ ಜಿಲ್ಲೆಯಲ್ಲಿ ಗ್ರಾಮೀಣ ರಂಗಭೂಮಿಯ ಬೆಳವಣಿಗೆ ಅಷ್ಟಾಗಿ ನಡೆದಿಲ್ಲವೆನ್ನಬೇಕಾಗುತ್ತದೆ. ಆದರೆ ನಗರದ ಹವ್ಯಾಸಿ ರಂಗಭೂಮಿ ಎಲ್ಲ ಜಿಲ್ಲೆಗಳಲ್ಲಿಯೂ ಜೀವಂತವಿದೆ. ಜಾತ್ರೆಗಳು ವೃತ್ತಿ ಕಂಪನಿಗಳ ಬೆಳವಣಿಗೆಗೆ ಕಾರಣವಾದರೆ, ಹಳ್ಳಿಯ ಹಬ್ಬ–ಉತ್ಸವಗಳು ಗ್ರಾಮೀಣ ರಂಗಭೂಮಿ ಬೆಳೆಯಲು ಪ್ರೇರಣೆಯಾಗಿವೆ. ಕೊಪ್ಪಳ ಜಿಲ್ಲೆಯ ಕುಕನೂರಿನ ಗುದ್ನೇಶ್ವರ ಜಾತ್ರೆ ಹಾಗೂ ಕೊಪ್ಪಳದ ಗವಿಸಿದ್ಧೇಶ್ವರ ಜಾತ್ರೆ ಪ್ರಸಿದ್ಧಿಯಾಗಿವೆ. ಅದೇ ರೀತಿ ಗುಲಬರ್ಗಾದ ಶರಣಬಸವೇಶ್ವರ ಜಾತ್ರೆ ಹಿಂದಿನಿಂದ ನಡೆದುಕೊಂಡು ಬಂದಿದೆ. ಈ ಜಾತ್ರೆಗಳಲ್ಲಿ ತಿಂಗಳು ಗಟ್ಟಲೆ ವೃತ್ತಿ ನಾಟಕ ಕಂಪನಿಗಳು ರಂಗೇರಿದರೆ, ಹಳ್ಳಿಗಳಲ್ಲಿ ನಡೆವ ಜಾತ್ರೆ – ಉತ್ಸವಗಳಲ್ಲಿ ಗ್ರಾಮೀಣ ರಂಗಭೂಮಿಯಲ್ಲಿ ನಾಟಕಗಳು ಪ್ರಯೋಗಗೊಳ್ಳುತ್ತವೆ.

ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಗ್ರಾಮೀಣ ರಂಗಭೂಮಿಗೆ ಸೇರುವ ನೂರಾರು ನಾಟಕಗಳಿವೆ. ಅವುಗಳಲ್ಲಿ ಅನೇಕ ನಾಟಕಗಳು ಹಸ್ತಪ್ರತಿಗಳಲ್ಲಿವೆ. ಈ ಎಲ್ಲ ನಾಟಕಗಳ ಸಮಗ್ರ ಪ್ರಕಟಣೆ ಆಗಬೇಕಾಗಿದೆ. ಗ್ರಾಮೀಣ ಬದುಕಿನ ಅನುಭವಗಳನ್ನು ಗ್ರಾಮೀಣ ಜನರ ಆಡು ನುಡಿಗಳಲ್ಲಿಯೇ ಕಟ್ಟಿಕೊಡುವ ಈ ನಾಟಕಗಳು ಗ್ರಾಮೀಣ ಸಂಸ್ಕೃತಿಯ ಬಹುಮಹತ್ವದ ದಾಖಲೆಗಳಾಗಿವೆ. ಇವುಗಳನ್ನು ಉಳಿಸಿ ಬೆಳೆಸಬೇಕಾದದ್ದು, ರಂಗ ಕಲಾವಿದರಿಗೆ ಪ್ರೋತ್ಸಾಹಿಸಬೇಕಾದದ್ದು ಸರಕಾರದ– ಸಮಾಜದ ಕರ್ತವ್ಯವಾಗಿದೆ. ಈ ಹಿನ್ನಲೆಯಲ್ಲಿ ಈ ಸಂಪುಟಗಳನ್ನು ಪರಿಶೀಲಿಸಬೇಕೆಂದು ಓದುಗರಲ್ಲಿ ಕೋರುತ್ತೇನೆ.

ಡಾ. ವಿಜಯಶ್ರೀ ಸಬರದ

ಸಂಪಾದಕರು

26

ಪರಿವಿಡಿ

೧

ಸಿಡಿದೆದ್ದ ಹೆಣ್ಣು ಹುಲಿ

– ಕಂಟೆಪ್ಪ ಮಾಸ್ತರ ಕೋಡ್ಲಿ

ಕಂಟೆಪ್ಪ ಮಾಸ್ತರ ಕೋಡ್ಲಿ

ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಕೋಡ್ಲಿ ಗ್ರಾಮದಲ್ಲಿ ೦೨.೦೨.೧೯೩೭ರಂದು ಕಂಟೆಪ್ಪ ಮಾಸ್ತರ ಅವರ ಜನನವಾಯಿತು. ವೀರಬಸಪ್ಪ ಮತ್ತು ನೀಲಮ್ಮ ಇವರ ತಂದೆ–ತಾಯಿಗಳಾಗಿದ್ದರು. ಇವರ ಮನೆತನಕ್ಕೆ ಎಲಮಡಗಿ ಎಂಬ ಅಡ್ಡ ಹೆಸರು. ಸೋದರಮಾವನ ಆಶ್ರಯದಲ್ಲಿ ಬೆಳೆದು ಚೆನ್ನಾಗಿ ಓದಿ, ೧೯೫೮ರಲ್ಲಿ ಕಂಟೆಪ್ಪನವರು ಚಿಂಚೋಳಿ ತಾಲೂಕಿನ ಧುತ್ತರಗಿ ಗ್ರಾಮದಲ್ಲಿ ಶಿಕ್ಷಕರಾಗಿ ತಮ್ಮ ಸೇವೆಯನ್ನು ಪ್ರಾರಂಭಿಸಿದರು. ಅತ್ಯುತ್ತಮ ಶಿಕ್ಷಕರಾಗಿ ಆ ಪ್ರದೇಶದಲ್ಲಿ ಹೆಸರು ಪಡೆದರು.

೧೯೬೦ರಲ್ಲಿ ಕಂದಗಲ್ ಹನುಮಂತರಾಯರ "ಬೆಳ್ಳಿಚುಕ್ಕಿ" ನಾಟಕದಲ್ಲಿ ಇವರು ಖಳನಾಯಕನ ಪಾತ್ರ ವಹಿಸಿದರು. ನಂತರದಲ್ಲಿ ಎಚ್.ಎನ್. ಹೂಗಾರರ ನಾಟಕಗಳಲ್ಲಿ ಹಾಸ್ಯ ಪಾತ್ರ ಮಾಡಿದರು. ಹೀಗೆ ಅಭಿನಯವೇ ಇವರನ್ನು ರಂಗಭೂಮಿಗೆ ಕರೆತಂದಿತು. ಗ್ರಾಮೀಣ ಜನರಿಗೂ ಈ ರಂಗ ಪ್ರಯೋಗಗಳ ಪ್ರಯೋಜನವಾಗಬೇಕೆಂದು ಭಾವಿಸಿ ನಾಟಕವನ್ನು ಬರೆದರು. ಹೀಗೆ ಪ್ರಾರಂಭವಾದ ಇವರ ನಾಟಕ ರಚನೆ ಮುಂದುವರೆಯಿತು. ನಲವತ್ತಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದರು.

ನಾಟಕ ರಚನೆಯ ಜತೆಗೆ ನಾಟಕ ನಿರ್ದೇಶನದಲ್ಲಿ ಕಂಟೆಪ್ಪನವರು ಆಸಕ್ತಿ ವಹಿಸಿದರು. ಗುಲಬರ್ಗಾ ಜಿಲ್ಲೆಯ ಆಡುಮಾತಿನ ಭಾಷೆಯನ್ನೇ ನೇರವಾಗಿ ಇವರು ಬಳಸಿದ್ದರಿಂದ ಇವರ ನಾಟಕಗಳು ಜನಪ್ರಿಯವಾದವು. ಅನೇಕ ಗ್ರಾಮಗಳಲ್ಲಿ ಅನೇಕ ಪ್ರಯೋಗಗಳನ್ನು ಕಂಡವು. ಕಂಟೆಪ್ಪ ಮಾಸ್ತರರನ್ನು ಅನೇಕ ಪ್ರಶಸ್ತಿ ಪುರಸ್ಕಾರಗಳು ಹುಡುಕಿಕೊಂಡು ಬಂದವು. ಅವುಗಳಲ್ಲಿ ಕಾಯಕ ಸಮ್ಮಾನ ಪ್ರಶಸ್ತಿ, ಕಲಾಶ್ರೀ ಪ್ರಶಸ್ತಿಗಳನ್ನು ಹೆಸರಿಸಬಹುದಾಗಿದೆ. ಇವರ ರಂಗ ಸೇವೆಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ದೊರಕಿದೆ. ಎರಡು ವರ್ಷಗಳ ಹಿಂದೆ ನಿಧನರಾದ ಕಂಟೆಪ್ಪ ಮಾಸ್ತರರು ಗ್ರಾಮೀಣ ರಂಗಭೂಮಿಯ ಮೂಲಕ ಜೀವಂತವಿದ್ದಾರೆ.

ಪಾತ್ರ ಪರಿಚಯ

ಪುರುಷ ಪಾತ್ರಗಳು

ಮಹಾದೇವಪ್ಪ	:	ಓರ್ವ ನಿವೃತ್ತ ಶಿಕ್ಷಕ
ಮಹೇಶ	:	ಮಹಾದೇವಪ್ಪನ ಮಗ
ರಾಜು	:	ರಿಕ್ಷಾವಾಲಾ
ಕೇದರನಾಥ	:	ಮಾಜಿ ಮಿಲ್ಟ್ರಿ ಆಫೀಸರ್
ಕುಮಾರ	:	ಕೇದಾರನಾಥನ ಅಳಿಯ
ವಿಕ್ರಮ	:	ಹೆಣ್ಣಿನ ದಲಾಲ, ವಂಚಕ
ಲಿಂಗಯ್ಯ	:	ಮದುವೆ ದಲಾಲ
ಸಂಗಯ್ಯ	:	ವಿಕ್ರಮನ ಪಿ.ಎ.
ರಾಮ	:	ಸಿ.ಐ.ಡಿ
ಶೇಖ	:	ಅರಬ್ ವ್ಯಾಪಾರಿ

ಸ್ತ್ರೀ ಪಾತ್ರಗಳು

ಗಂಗಾ	:	ಮಹಾದೇವಪ್ಪನ ಮಗಳು
ಗೀತಾ	:	ಕೇದಾರನಾಥನ ಮಗಳು
ರಾಧಾ	:	ಗೂಢಚಾರಿಣಿ

ಪ್ರಥಮ ಪ್ರವೇಶ

ಮಹಾದೇವಪ್ಪನ ಮನೆ

(ಸುಧಾರಣ ಮನೆ, ಗಂಗಾ ಭುವನೇಶ್ವರಿಗೆ ಪೂಜೆ, ಸ್ತೋತ್ರ ಪದ, ಪದ ಮುಗಿಯುತ್ತಿದಂತೆ ಮಹಾದೇವಪ್ಪ ಬಂದು ಕರಮುಗಿಯಲು)

ಗಂಗಾ– ಅಪ್ಪಾ, ಇದೋ ಪ್ರಸಾದ

ಮಹಾ– (ಸ್ವೀಕರಿಸಿ) ತಾ ತಾಯಿ, ಅಣ್ಣ ಇನ್ನೂ ಬರಲಿಲ್ಲವೆ?

ಗಂಗಾ– ಉದ್ಯೋಗದ ಬೇಟೆಯಲ್ಲಿ ಅಲೆಯುತ್ತಿರುವ ಆತನಿಗೆ ಹೊತ್ತು ಗೊತ್ತಿನ ಪರಿವೆಯೇ ಇಲ್ಲಪ್ಪ, ಅಲ್ಲದೆ ಇಂದು ಅದಾವುದೊ ಒಂದು ಸಂದರ್ಶನ ಬೇರೆ ಇದೆಯಂತೆ.

ಮಹಾ– ಈ ಕಾಲಕ್ಕೆ ಮಕ್ಕಳಿಗೆ ವಿದ್ಯೆ ಕಲಿಸುವದೆ ಒಂದು ದೊಡ್ಡ ಸಾಹಸ, ಇನ್ನು ನೌಕರಿ ಎಂಬುದೊಂದು ಮಹಾಯಜ್ಞ

ಗಂಗಾ– ಅದು ಹಣವಂತರೂ, ಪುಣ್ಯವಂತರೂ ಆಗಿ ಹುಟ್ಟಿ ಬಂದವರಿಗಷ್ಟೆ Director ಭಾಗ್ಯ ಉಂಟಪ್ಪ.

ಮಹಾ– ದೇವರ ದಾರಿ ದೂರವೇ ಹೊರತು, ಅಂಧಃಕಾರ ಮಯವಾದುದಲ್ಲ ಮಗಳೆ, ಇಂದಿಲ್ಲ ನಾಳೆ ನಿನ್ನಣ್ಣನಿಗೆ ಒಂದು ಒಳ್ಳೆಯ ನೌಕರಿ ಸಿಕ್ಕರೂ ಸಿಗಬಹುದು.

ಗಂಗಾ– ಆ ಸುದಿನ ಬೇಗ ಬರಲೆಂದೆ ನನ್ನ ಅನುದಿನದ ಪ್ರಾರ್ಥನೆಯಪ್ಪಾ.

ಮಹಾ– ಸಂತೋಷ ತಾಯಿ

ಮಹೇಶ– (ಬರುತ್ತ) ಗಂಗಾ, ಇದೇನಮ್ಮಾ? ಇಂದೇಕೊ ಮನೆಯಲ್ಲಿ ವಿಶೇಷ ಪೂಜೆ ನಡೆದಂತಿದೆಯಲ್ಲ?

ಗಂಗಾ– ಇಂದು ನನ್ನಣ್ಣನಿಗೆ ಇಂಟ್ರೆವ್ಯೂ, ಬಂದು ಒಳ್ಳೆಯ ನೌಕರಿ ಸಿಗುವಂತಾಗಲೆಂದು ತಾಯಿ ಭುವನೇಶ್ವರಿಗೆ ಮಂಗಳಾರತಿ ಮಾಡಿದೆ ಅಷ್ಟೆ

ಮಹೇಶ– ಮಂತ್ರಕ್ಕೆ ಮಾವಿನ ಕಾಯಿ ಉದರದು ಗಂಗಾ, ಕಲ್ಲು ಹೊಡೆದರೇನೆ ಕಾಯಿ ಕೈ ವಶವಾಗುವದು.

ಗಂಗಾ– ಅಂದರೆ?

ಮಹೇಶ– ಹತ್ತಾರು ಸಾವಿರ ಲಂಚ ನೀಡುವ ಶಕ್ತಿ ನನಗಿಲ್ಲವಲ್ಲ, ಅಂದಮೇಲೆ.....

ಗಂಗಾ– ಇಂದು ನೀನು ಹೋದ ಸಂದರ್ಶನ.....

ಮಹೇಶ– ಮದುವೆಗಳೆಲ್ಲ ಸವರ್ಗದಲ್ಲೇ ನಿಶ್ಚಯಿಸಲ್ಪಟ್ಟಿರುತ್ತವೆ, ಇಲ್ಲಿ ಬರೀ ಆಚರಣೆ ಮಾತ್ರ ಎಂಬಂತೆ, ನೌಕರಿಗಳೆಲ್ಲ ಮೊದಲೇ ತೆರೆಮರೆಯಲ್ಲಿ ನಿರ್ಧಾರವಾಗಿರುತ್ತೆ, ಈ ಸಂದರ್ಶನ ಎಂಬುದು ಬರೀ ಬೂಟಾಟಿಕೆಯ ನಾಟಕ ಅಷ್ಟೆ.

ಮಹಾ– ಆಸೆಯೇ ಜೀವನ, ನಿರಾಶೆಯೇ ಮರಣ ಅಂತ ಕವಿವಾಣಿ ಕೇಳಿಲ್ಲವೆ, ನೀನೆಂದಿಗೂ ನಿರಾಶನಾಗದಿರು ಮಗು, ಹುಟ್ಟಿಸಿದ ದೇವರೆಂದೂ ಹುಲ್ಲು ಮೇಯಿಸಲಾರ.

ಮಹೇಶ– ಹುಲ್ಲು ಮೇಯಿಸಲಾರ ನಿಜ, ಆದರೆ ದುಡಿಯದವನ ಹೊಟ್ಟೆಗೆ ಅನ್ನವನ್ನೂ ಹಾಕಲಾರ.

ಮಹಾ– ಅದೂ ನಿಜ, ಆದರೂ ದೇವರೊಲುಮೆಯಿರಲು ಎಳಗರುಂ ಎತ್ತಾಗದೆ, ಮಿಡಿ ಪಣ್ಣಾಗದೆ, ಕಾಲಾನ ಕಾಲಕ್ಕೆ ಬಡವಂ ತಾ ಬಲ್ಲಿದನಾಗನೆ? ಬನ್ನಿ ಮೊದಲು ಊಟ ಮಾಡೋಣ (ಒಳ ಹೋಗುತ್ತಿರಲು)

ಲಿಂಗಯ್ಯ– (ಪ್ರವೇಶಿಸುತ್ತ) ನಮಸ್ಕಾರ ಮಹಾದೇವಪ್ಪನವರಿಗೆ

ಮಹಾ– (ಎಲ್ಲರೂ ತಿರುಗಿ) ನಮಸ್ಕಾರ ಬನ್ನಿ, ತಾವು .....

ಲಿಂಗಯ್ಯ– ಲಿಂಗ ಕಂತಿ ಕೂಡಿಸುವ ಲಿಂಗಯ್ಯ ಅಂತ, ಇತ್ತಿತ್ತಲಾಗಿ ಲಿಂಗಗಳೇ ಮಾಯವಾಗಿರುವಾಗ ಆ ಉದ್ಯೋಗವಾದರೂ..... ಹಹ..... ನಾವೂ ಅದನ್ನು ಬಿಟ್ಟು, ಗಂಡಿಗೊಂದು ಹೆಣ್ಣು, ಹೆಣ್ಣಿಗೊಂದು ಗಂಡು ಹುಡುಕಿ, ಮದುವೆ ಮಾಡಿಸುವಂಥಾ ಪವಿತ್ರ ಕಾರ್ಯ ಪ್ರಾರಂಭಿಸಿದ್ದೇವೆ.

ಮಹೇಶ– ಓಹೋ, ಮದುವೆ ಮಾರ್ಕೆಟ್ಟಿನ ಮುಖ್ಯ ದಲಾಲ ಲಿಂಗಯ್ಯನವರೆಂದರೆ ತಾವೇನೋ? ತಮ್ಮ ಕಂಡು ತುಂಬ

ಸಂತೋಷವಾಯಿತು ಗುರೂಜಿ (ಕುರ್ಚಿ ಹಾಕಿ) ಕೂತ್ಕೊಳ್ಳಿ (ಗಂಗಾ ಒಳಗೆ ಹೋಗುವಳು)

ಮಹಾ– ತಾವೀಗ ಬಂದದ್ದು?

ಲಿಂಗಯ್ಯ– ಜನ ಸೇವೆಯೇ ಜನಾರ್ಧನ ಸೇವೆ ಎಂದು ತಿಳಿದು ನನ್ನ ಅವಶ್ಯಕತೆ ಇರುವ ಮನೆಗಳಿಗೆಲ್ಲ ಭೇಟಿ ಕೊಡುವದೇ ನಮ್ಮ ಧರ್ಮ

ಮಹೇಶ– ತಾವು ನಮ್ಮ ಮನೆಗೆ ಬಂದದ್ದು

ಲಿಂಗಯ್ಯ– ನಿಮ್ಮ ಸೇವೆಯನ್ನಷ್ಟು ಮಾಡಿ ಪುಣ್ಯಾ ಕಟ್ಟಿಕೊಳ್ಳಬೇಕೆಂಬ ಮಹದಾಸೆಯಿಂದಲೆ ನಾನಿಲ್ಲಿಗೆ ಬಂದದ್ದು ಮಹೇಶ

ಮಹೇಶ– ಅರೆ, ತಮಗೆ ನನ್ನ ಹೆಸರೂ ಗೊತ್ತುಂಟಿ?

ಲಿಂಗಯ್ಯ– ಗೊತ್ತಪ್ಪ, ಸುತ್ತ ಮುತ್ತಲಿನ ಹತ್ತಾರು ಹಳ್ಳಿಪಟ್ಟಣಗಳಲ್ಲಿರುವ ಪ್ರತಿಯೊಂದು ಮನೆಯ ಮದುವೆ ವಯಸ್ಸಿನ, ಪ್ರತಿಯೊಂದು ಗಂಡು ಹೆಣ್ಣುಗಳ ಹೆಸರು, ವಯಸ್ಸು, ವಿದ್ಯೆ, ಬಣ್ಣ, ಹೈಟು, ಥಾಟು, ರೂಟು, ರೇಟು ತಿಳಿದುಕೊಂಡು ಮದುವೆ ಮಾಡಿ ಮುಗಿಸಿ ಎಲ್ಲರಿಗೂ ಸುಖ ಬಾಳ್ವೆಗೆ ಹಚ್ಚುವದೇ ನಮ್ಮ ದಿನ ನಿತ್ಯದ ಕಾಯಕ.

ಮಹೇಶ– ತುಂಬ ಸಂತೋಷ ಸರ್

ಲಿಂಗಯ್ಯ– ಈಗ ಹೇಳಿ ಮೊದಲಿಗೆ ನಿಮ್ಮ ಮನೆಯಲ್ಲಿ ಯಾರ ಮದುವೆ ಮಾಡಿಸಬೇಕು? ನಿನ್ನದೊ ಅಥವಾ ತಂಗಿ ಗಂಗಾಳದೊ?

ಮಹಾ– ಮಹೇಶ ಹಿರಿಯ, ಮೊದಲಿಗೆ.....

ಮಹೇಶ– ಅಪ್ಪಾ ನಿಲ್ಲಿ, ಸರ್, ಮೊದಲಿಗೆ ನಮ್ಮ ತಂಗಿಯದಾಗಲಿ

ಲಿಂಗಯ್ಯ– Good ಇದು ಬುದ್ಧಿವಂತ ಹುಡುಗರ ಲಕ್ಷಣ. ಮೊದಲಿಗೆ ಹೆಣ್ಣುಮಕ್ಕಳ ಮದುವೆ ಮಾಡುವುದು ಧರ್ಮ.

ಮಹೇಶ– ಹೇಳಿ ಗುರೂಜಿ ತಮಗೆ ಚಹಾನೋ, ಕಾಫೀನೋ......?

ಲಿಂಗಯ್ಯ– ಛೇ.. ಛೇ.. ಅದೆಲ್ಲಾ ಏಕೆ ಬಿಡಿ

ಮಹಾ– ಹಾಗೆಂದರೆ ಹೇಗೆ, ತಾವೇನಾದರೂ ತೆಗೆದುಕೊಳ್ಳಲೇ ಬೇಕು.

ಲಿಂಗಯ್ಯ– ಸರಿ ನಿಮ್ಮಿಷ್ಟ, ದುಡ್ಡು ಕೊಟ್ಟು ಕುಡಿಯುವ ಕೆಟ್ಟ ಚಟವಂತೂ ನಮಗೆ ಇಲ್ಲವೇ ಇಲ್ಲ, ಇನ್ನು ಬಿಟ್ಟಿ ಸಿಕ್ಕರೆ ಒಲ್ಲೆನೆನ್ನುವ ಹಟವಂತೂ ಮೊದಲಿಗೆ ಇಲ್ಲ, ಪಾಲಿಗೆ ಬಂದದ್ದು ಪಂಚಾಮೃತ.

ಮಹೇಶ– ಅಂತೂ ಅಡ್ಡಿಯಿಲ್ಲ, ಆಲ್ ರೌಂಡರ್ ಆಗಿರುವಿರಿ.

ಲಿಂಗಯ್ಯ– ಕಾಲಕ್ಕೆ ತಕ್ಕಂತೆ ನಡೆಯಲೇಬೇಕು, ತಾಳಕ್ಕೆ ತಕ್ಕಂತೆ ಕುಣಿಯಲೇಬೇಕಲ್ಲ

ಮಹಾ– ಗಂಗಾ, ಒಂದೆರಡು ಕಪ್ಪು ಚಹ ಮಾಡಿಕೊಂಡು ಬಾ ಮಗು

ಗಂಗಾ– (ತೆರೆಯಲ್ಲಿ) ಆಗಲೆಪ್ಪಾ (ತರುತ್ತ) ಇದೊ ಸ್ವೀಕರಿಸಿ

ಲಿಂಗಯ್ಯ– (ನೋಡಿ) ಪರವಾಯಿಲ್ಲ ಗಂಗಾ ಸುಂದರಿಯಷ್ಟೇ ಅಲ್ಲ, ಸೂಕ್ಷ್ಮಗ್ರಾಹಿಯೂ ಆಗಿದ್ದಾಳೆ, ಈ ರೀತಿ ರೂಪ, ಗುಣ ಒಂದೆಡೆ ಸೇರುವದು ಬಲು ಅಪರೂಪ

ಮಹೇಶ– ಅಷ್ಟೆ ಅಲ್ಲ ಸರ್, ಅಡಿಗೆ, ಕಸೂತಿ, ಹೊಲಿಗೆ, ಸಂಗೀತ ಎಲ್ಲದರಲ್ಲೂ ಪ್ರವೀಣೆಯಾಗಿದ್ದಾಳೆ ನನ್ನ ತಂಗಿ. ರೂಪದಲ್ಲಿ ಶಾರದೆಯಾದರೆ ಕಂಠದಲ್ಲಿ ಕೋಗಿಲೆ (ಗಂಗಾ ಕಪ್ಪು ತೆಗೆದುಕೊಂಡು ಒಳ ಹೋಗುವಳು)

ಲಿಂಗಯ್ಯ– ಸಂತೋಷವಪ್ಪಾ, ಇವಳ ಕೈ ಹಿಡಿಯುವವ ಪುಣ್ಯವಂತನೆ ಸರಿ

ಮಹಾ– ಆ ಪುಣ್ಯವಂತ ಯಾರಿರಬಹುದು, ತುಸು ನಿಮ್ಮ ಅಲ್ಬಂ ತೆಗೆದು ನೋಡಿ ಹೇಳಿ ಪೂಜ್ಯರೆ

ಲಿಂಗಯ್ಯ– (ತೆಗೆಯುತ್ತ) ಹೇಳಿ ನಿಮಗೆ ಎಷ್ಟರಲ್ಲಿ ಆಗಬೇಕು? ಸಾವಿರದಲ್ಲೋ? ಲಕ್ಷದಲ್ಲೋ? ಕೋಟಿ ರೇಟಿನ ವರಗಳೂ ಉಂಟು

ಮಹೇಶ– (ಗಾಬರಿ) ಏನೆಂದಿರಿ? ಲಕ್ಷ.. ಕೋಟಿಯೇ..?

ಲಿಂಗಯ್ಯ– ಹೌದು ಮಹೇಶ, IAS, IPS ಅಧಿಕಾರಿಗಳಾದರೆ ಇಪ್ಪತ್ತರಿಂದ ಐವತ್ತು ಲಕ್ಷ ಇನ್ನು ಫಾರೆನ್ನಿನಲ್ಲಿ ತಿಂಗಳಿಗೆ ಹತ್ತಿಪ್ಪತ್ತು ಲಕ್ಷ ಸಂಬಳ ಪಡೆಯುತ್ತಿರುವ ಯುವಕರಿಗಾದರೆ ಒಂದೆರಡು ಕೋಟಿ ಬೇಕೇ ಬೇಕು. ಈಗ ಮದುವೆ ಮಾರ್ಕೆಟಿನ ರೇಟೆ ಆ ರೀತಿ ಗಗನಕ್ಕೇರಿದೆ. ನಿಮಗೆ ಯಾವ ರೇಟಿನ ವರ ಬೇಕು ಅಷ್ಟು ಹೇಳಿ, ಆ ಲೀಸ್ಟನಲ್ಲಿರುವ ಒಬ್ಬ ಒಳ್ಳೆಯ ವರನನ್ನು ಆರಿಸೋಣ

ಮಹಾ– ಐವತ್ತು ಸಾವಿರದಿಂದ ಲಕ್ಷ, ಕೋಟಿ, ವರದಕ್ಷಿಣೆಯೇ?

ಲಿಂಗಯ್ಯ– ಇದು ಕೇವಲ ಕುದುರೆ ಕಿಮ್ಮತ್ತರಿ ಮಹಾದೇವಪ್ಪನವರೆ, ಇನ್ನು

ಕೋಗಿಲು, ಲಗಾಮು, ಹುಲ್ಲು, ಹುರುಳಿ ಅಂತ ಮತ್ತೆ ಅದರಷ್ಟು ಬೇಕೇ ಬೇಕು.

ಮಹೇಶ– ಇವು ಕುದುರೆಗಳಲ್ಲ ಸರ್ ಕತ್ತೆಗಳು ವರಗಳಲ್ಲ ವರಾಹಗಳು.

ಲಿಂಗಯ್ಯ– ದಡ್ಡ ನಾಡದಡ್ಡ, ಮದುವೆ ಮಾರ್ಕೆಟಿನ ರೇಟು ಅಷ್ಟು ಏರಿ ಕುಂತ ಮ್ಯಾಲ ನಾವೇನು ಮಾಡಾಕ ಆಗ್ತಾದ ಹೇಳು? ಹಿಂಗಂತ ಏನ್ ಮದುವಿ ನಿಂತಾವಾ? ನಮಗ ಹೋಳಿಹುಣ್ಣಿಮೆಗೆ ಸಹಿತ ಪುರುಸೊತ್ತಿಲ್ಲ, ದೊಡ್ಡ ದೊಡ್ಡ ಆಫೀಸರ್ರು, ಮಿನಿಷ್ಟರ್ರು, ಕುಬೇರರು ಮುಂತಾದ ದೋ ನಂಬರ ದುಡ್ಡಿನ ಮಂದಿ ಕುರೂಪಿ ಮಕ್ಕಳು ಖರ್ಚು ಆಗಬೇಕಾದರ ವರ ಕೇಳಿದಷ್ಟು ಹಣ ಕೊಟ್ಟೆ ಕೊಡ್ತಾರ.

ಮಹಾ– ಅಂದರೆ ಈ ಕಾಲಕ್ಕೆ ನಮ್ಮಂಥಾ ಬಡವರ ಮಕ್ಕಳ ಮದುವೆ...

ಲಿಂಗಯ್ಯ– ನಿಮಗ ಬಡತನ ಇರಬಹುದುರಿ ಮಹಾದೇವಪ್ಪನವರೆ, ಆದರ ಬೇಡೋರು ಬಾಯಿಗಿ ಬಡತನ ಎಲ್ಲಾದ ಹೇಳರಿ? ಮಾಮೂಲ ದನಾಕಾಯಾ ಪಾರಗೋಳೆ ಪನ್ನಾಸ, ಸಾಠ ಹಜಾರ ಬೇಡ್ತಾರ. ಇನ್ನು ಅಷ್ಟು ಇಷ್ಟು ಕಲ್ತೊರು, ಗೇಣು ಚೋಟು ಹೊಲ, ಮನಿ ಇದ್ದರಂತೂ ಮುಗದೆ ಹೊಯ್ತು, ಲಾಖ, ದೋನ ಲಾಖ ಕೆಳಗ ಇಳ್ಯಾಲ. ನೆಟ್ಟಕ ತಿನ್ಲಾಕ ಮನ್ಯಾಗ ಹಿಟ್ಟಿಲ್ಲದರ ಇಲ್ಲ ಜುಟ್ಟಕ್ಕ ಮಾತ್ರ ಮಲ್ಲಿಗಿನೇ ಬೇಡ್ತಾವ.

ಮಹೇಶ– ಇದು ತಪ್ಪಲ್ಲವೆ ಸರ್, ಮಹಾ ಪಾಪ.

ಲಿಂಗಯ್ಯ– ಯಾವಾದಪಾ ತಪ್ಪು ಒಪ್ಪು? ಪಾಪ, ಪುಣ್ಯ ಅನ್ನೋದು ಹ್ಯಾಂಗಿರ್ತಾದ? ಎದಕ್ಕ ಬರ್ತಾದ, ಅದೇನು ಮುರುಸ್ಕೊಂಡು ತಿನ್ನಾಕ ಬರ್ತಾದಾ, ಏನ್ ಉಣ್ಣಾಕ ಬರ್ತಾದ. ಈಗ ನಡದಿದ್ದೆ ನೋಟಿನ ಸಂತಿ, ಯಾರಿಗೂ ಇಲ್ಲ ನಾಳಿನ ಚಿಂತಿ, ದುಡ್ಡೇ ಸರ್ವಸ್ವ, ದುಡ್ಡಿದ್ದವನೆ ದೇವರು, ಉಳಿಕಿದ್ದೆಲ್ಲಾ ಉಳ್ಳಾಗಡ್ಡಿ ತೊಪ್ಪಲು.

ಮಹಾ– ಅಂದರೆ, ನಮ್ಮಂಥವರ ಯೋಗ್ಯತೆಗೆ ತಕ್ಕ ವರ

ಲಿಂಗಯ್ಯ– ಮಾರ್ಕೆಟ್ ಅಂದ ಮ್ಯಾಲ ಎಲ್ಲಾ ರೀತಿ ಮಾಲು, ಸಂತಿ ಅಂದ ಮ್ಯಾಲ ಎಲ್ಲಾ ರೀತಿ ಸರಕು ಇದ್ದೆ ಇರ್ತಾದ ನೋಡರಿ, ನಿಮಗ ಎಷ್ಟು ರೇಟಿನ ವರ ಆದರ ನಡಿದೀತು?

ಮಹಾ– ನಾನಂತೂ ನಿವೃತ್ತ ಶಿಕ್ಷಕ, ಪೆನ್ಶನ್ ಹಣದಲ್ಲಿ ಬದುಕುವದೇ ದುಸ್ತರ, ತಾವು ದೊಡ್ಡ ಮನಸ್ಸು ಮಾಡಿ ಹತ್ತಿಪ್ಪತ್ತು ಸಾವಿರ ಹೊಂದಿಸಿ ಕೊಡಿ.

ಲಿಂಗಯ್ಯ– ಏನೆಂದಿರಿ ಹತ್ತಿಪ್ಪತ್ತು ಸಾವಿರನಾ, ಹಹಹ..... ಈ ಕಾಲಕ್ಕೆ ವರಗಳು ಬಿಡಿ, ಹತ್ತಿಪ್ಪತ್ತು ಸಾವಿರಕ್ಕೆ ಒಂದು ಒಳ್ಳೆಯ ನಾಯಿಯೂ ಕೂಡಾ ಸಿಗಲಾರದು

ಮಹಾ– ಹಾಂ....!

ಲಿಂಗಯ್ಯ– ಮತ್ತೇನು ಹಾಂನಾ, ಹೂಂನ್ರೀ ಮಾಸ್ತರ್ರೆ, ಮುತ್ತಿನಂಥಾ ಮಗಳು ಅದಾಳ ಒಂದು ಸಲ ಮನಸ್ಸು ಗಟ್ಟಿ ಮಾಡರಿ.

ಮಹಾ– ಮನಸ್ಸು ಮಾಡಿದಾಕ್ಷಣ ಹಣ ಆಕಾಶದಿಂದ ಉದುರುವದೇ?

ಲಿಂಗಯ್ಯ– ಆಕಾಶದಿಂದ ಬೀಳ್ತಾದೋ, ಏನ್ ಭೂಮ್ಯಾಗಿಂದು ಏಳ್ತಾದೋ ಅದು ನನಗ ಗೊತ್ತಿಲ್ಲ, ಲೋಕರೂಢಿ ಮಾತು ಹೇಳಿದೆ ನಿಮ್ಮಿಷ್ಟ ನಾ ನಡಿತೀನಿ

ಮಹೇಶ– ಸರ್ ಒಂದು ಮೂವತ್ತು, ನಾಲ್ವತ್ತು ಸಾವಿರಕ್ಕೆ.....

ಲಿಂಗಯ್ಯ– ಹೀಂಗ ಬರ್ರೆಪಾ ಹಾದಿಗಿ, ಒಂದೈವತ್ತು ಅರವತ್ತು ಸಾವಿರಕ್ಕಾದರ ಕೋಶಿಸ್ ಮಾಡಿ ನೋಡೋಣಂತ ಸಿಕ್ಕರೂ ಸಿಗಬಹುದು

ಮಹಾ– ಇದೇ ಈಗ ತಾವೆ ಅಂದಿರಲ್ಲಪ್ಪ, ಹುಟ್ಟಿಸಿದ ದೇವರೆಂದೂ ಹುಲ್ಲು ಮೇಯಿಸಲಾರ ಅಂತ, ತಾವು ಚಿಂತಿಸದಿರಿ, ನೋಡಿ ಗುರೂಜಿ, ನನ್ನ ತಂಗಿಗಾಗಿ ಒಂದು ಒಳ್ಳೆಯ ವರನನ್ನೆ ನೋಡಿ

ಲಿಂಗಯ್ಯ– (ಹುಡುಕುತ್ತ) ಹಾಂ ಅಂದ ಹಾಗೆ ಒಂದು ಮಾತು ನೆನಪಿಗೆ ಬಂತು.

ಮಹಾ– ಯಾವ ಮಾತು ಪೂಜ್ಯರೆ?

ಲಿಂಗಯ್ಯ– ನಿಮ್ಮ ಮಗಳ ಪುಣ್ಯವೆಂದೇ ಹೇಳಬೇಕು ಗಂಗಾಳಿಗಾಗಿಯೇ ಹೇಳಿ ಮಾಡಿಸಿದ ಒಂದು ವರವಿದೆ ಅಪ್ಪಟ ಚಿನ್ನ.

ಮಹೇಶ– ಯಾರು ಸರ್? ಹೆಸರೇನು? ಊರಾವುದು? ಉದ್ಯೋಗವೇನು?

ಲಿಂಗಯ್ಯ– ಹೆಸರು ವಿಕ್ರಮರಾಯರು ಅಂತ, ಭಾರಿ ಬಿಜನೆಸ್‌ಮ್ಯಾನ್,

ಕೋಟ್ಯಾಧೀಶ್ವರ ಏಕಮಾತ್ರ ಪುತ್ರ, ರೂಪದಲ್ಲಿ ಮನ್ಮಥ, ಗುಣದಲ್ಲಿ ಧರ್ಮರಾಯ, ಮಾತಿನಲ್ಲಿ ಸತ್ಯ ಹರಿಶ್ಚಂದ್ರ

ಮಹಾ— ಹಾಂ ನಿಜವೆ ಪೂಜ್ಯರೆ, ಯಾವ ಬಿಜನೆಸ್ಸು?

ಲಿಂಗಯ್ಯ— ಅವರು ಮಾಡುವದು ಸೀಜನ್‌ವಾರ್ ಖರೀದಿ ವಿಕ್ರಿ ಫಾರೆನ್ ಪಾರ್ಸಲ್ ಸರ್ವಿಸ್, ಖಾಯಂ ನೆಲೆ ಅನ್ನೋದೆ ಇಲ್ಲ.

ಮಹಾ— ಅಂದರೆ?

ಲಿಂಗಯ್ಯ— ನೋಡಿ, ಬೆಲ್ಲದ ಸೀಜನ್ನಿಗೆ ಬೀದರನಲ್ಲಿ ಹಾಲ್ಟ್ ಮಾಡಿದರೆ, ಕಡಲೆ ಸೀಜನನಲ್ಲಿ ಕಲ್ಬುರ್ಗಿ, ಅಡಿಕೆ ಕೊಳ್ಳಲು ಮಡಿಕೇರಿಗೆ ಹೋದರೆ, ಬೀಟ್ ಮಾಡಲು ಬೆಂಗಳೂರಿಗೆ, ವಿಮಾನದಲ್ಲೆ ತಿರುಗಾಟ, ಆದರೆ ಎಲ್ಲಾ ಕಡೆಗೂ ಸ್ವಂತ ಮನೆಗಳುಂಟು

ಮಹೇಳ— ಅಂತಹ ವರ ಎಲ್ಲಾದರೂ ನಮ್ಮಂಥವರ ...

ಲಿಂಗಯ್ಯ— ಅಲ್ಲಿಯೇ ಇರುವದು ಅಸ್ಲಿ ಪಾಯಿಂಟು, ಹಣವೆಂದರೆ ಆತನ ಪಾಲಿಗೆ ಕಸ, ಕೇವಲ ರೂಪವತಿ ಮತ್ತು ಗುಣವತಿ ಹೆಣ್ಣಿಗಾಗಿ ಹತ್ತಾರು ತಿಂಗಳಿಂದ ಹುಡುಕುತ್ತಿದ್ದಾನೆ

ಮಹಾ— ಅಂದರೆ ವರದಕ್ಷಿಣೆಯ ಕಿಲುಬು ಕಾಸೂ ಮುಟ್ಟುವದಿಲ್ಲವೆ?

ಲಿಂಗಯ್ಯ— ಛೇ.ಛೇ..ಹಾಗಂತ ಆಣೆ ಪ್ರಮಾಣವೇನು ಮಾಡಿಲ್ಲ. ಸಭಾ ಮರ್ಯಾದೆಗಾಗಿ ಒಂದೆರಡು ಲಕ್ಷ ಕೊಟ್ಟರೆ ಸಾಕೇ ಸಾಕು

ಮಹೇಶ— ಏನೆಂದಿರಿ ಒಂದೆರಡು ಲಕ್ಷವೆ...?

ಲಿಂಗಯ್ಯ— ಅವರು ಅಷ್ಟಕ್ಕೆ ಒಪ್ಪಿದರ ನಿಮ್ಮ ಪುಣ್ಯ ಅಂತ ತಿಳ್ಕೋರಿ, ಕೋಶಿಸ್ ಮಾಡಿ ನೋಡಂದರ ನೋಡ್ತೀನಿ

ಮಹೇಶ— ಹೇಗಾದರೂ ಮಾಡಿ ಸರ್, ನಿಮಗೆ ಕೈ ಮುಗಿವೆ, ಇದ್ದ ಇದೊಂದು ಮನೆಯನ್ನಾದರೂ ಮಾರಿ ಒಂದು ಲಕ್ಷ ಹೊಂದಿಸಿ ಕೊಡುವೆ, ನನ್ನ ತಂಗಿಯ ತಲೆಯ ಮೇಲೆ ಅಕ್ಷತೆ ಹಾಕಿಸಿ, ನಿಮ್ಮ ಉಪಕಾರ ಆ ಜನ್ಮಪರ್ಯಂತ ಮರೆಯಲಾರೆ

ಲಿಂಗಯ್ಯ— (ಏಳುತ್ತ) ಆಗಲೆಪ್ಪಾ ಪ್ರಯತ್ನ ನನ್ನದು, ಫಲಾಫಲ ಆ ದೇವರದ್ದು

ಮಹೇಶ— ಸದ್ಯ ತಾವೇ ನನ್ನ ಪಾಲಿನ ದೇವರು

ಲಿಂಗಯ್ಯ– ನಾನಿನ್ನು ಬರ್ತೀನಿ. ನಮಸ್ಕಾರ (ಹೋಗುವನು)

ಮಹಾ– ಮಹೇಶ, ಈ ಮನೆ ಮಾರಿದರೆ ನಾಳೆ...

ಮಹೇಶ– ನಡು ಬೀದಿಯಲ್ಲಿ ನಿಂತರೂ ತಪ್ಪಿಲ್ಲ, ತಂಗಿಗಾಗಿ ಇಷ್ಟು ತ್ಯಾಗ ಮಾಡೋಣ, ಬಾ ಅಪ್ಪ ಹಸಿವೆಯಾಗಿದೆ, ಊಟ ಮಾಡೋಣ

ಮಹಾ– ದೈವೇಚ್ಛೆ, ನಡೆಯಪಾ (ಒಳ ಹೋಗುವರು)

===***===***===

ಪ್ರವೇಶ–೨

ರಸ್ತಾ

(ರಾಜು ಆಟೊ ನಡೆಸುತ್ತ ಹಾಡುತ್ತ ಬರುವನು)

ರಾಜು– ಥತ್ ಇಸ್ಕಿ, ಮೂರು ತಾಸಿಲಿಂದ ಆರು ರಸ್ತಾ ಅಡ್ಡಾಡಿ ಬಂದರೂ ಒಂದೇ ಒಂದು ಗಿರಾಕಿ ಸಿಗಲಿಲ್ಲ. ಅಂದಮ್ಯಾಲ ಇವತ್ತು ನಮ್ಮ ನಸೀಬು ಅದೇಷ್ಟು ಖೊಟ್ಟಿ ಇದ್ದಿರಬೇಕು, ದೈವ ಕೆಟ್ಟ ಕುದುರಿ ಟಾಂಗಾಕ ಹೋದರ, ದೈವ ಕೆಟ್ಟ ಮನುಷ್ಯಾನೆ ಈ ಆಟೊ ಡ್ರೈವರ್ ಆಗಿರ್‌ತಾನಂತ ಸುಳ್ಳಲ್ಲ, ಅದು ನಾಲ್ಕು ಕಾಲಿನ ಕುದುರಿ ಆದರ, ಇದು ಎರಡು ಕಾಲಿನ ಕತ್ತಿ ಅಷ್ಟೆ (ಒಬ್ಬ ಬರುತ್ತಿರಲು) ಸರ್ ತಮಗೆ ಆಟೊ...

ಒಬ್ಬ– ಸರಿಯೊ ತಮ್ಮ ತಡಬ್ಯಾಡ ನನಗ ತುಂಬ ಅರ್ಜಂಟ

ರಾಜು– ಅರ್ಜಂಟ ಇದ್ದರೆ ಬೇಗ ಕೂತ್ಕೊಳ್ಳಿ ಸರ್, ನೀವು ಎಲ್ಲಿಗೆ ಹೋಗಬೇಕೊ ಅಲ್ಲಿಗೆ ಕರೆದೊಯ್ದು ಬಿಡುವೆ

ಒಬ್ಬ– ಸುಡುಗಾಡಿಗಿ ಹೋಗಬೇಕು

ರಾಜು– ಓ ತುಂಬ ಸಂತೋಷ, ರೋಡ್ ಟ್ರಾಫಿಕ್ ಜೋರಾಗಿದೆ ಕಣ್ಮುಚ್ಚಿಕೊಂಡು ರಸ್ತೆಗೆ ಇಳಿದು ಬಿಡಿ, ಒಂದೇ ಒಂದು ಸೆಕೆಂಡಿನಲ್ಲಿ ಸೀದ ಸ್ವರ್ಗಕ್ಕೆ

ಒಬ್ಬ– ಲೇ ಆಟೋ...

ರಾಜು– ಬೇಗ ಹೋಗಿ ಸರ್, ಲೇಟಾದರೆ ಸ್ವರ್ಗದ ಚಾನ್ಸ್ ತಪ್ಪಿ ನರಕಕ್ಕೆ ಹೋದಿರಿ.

ಒಬ್ಬ– You dirty (ಹೋಗುವನು)

ರಾಜು– ದಾನಶೂರ ಕರ್ಣ ಮಗ, ಹೋಗಲೇ ಹೋಗು, ಈಗೇನು ಮಾಡೋದು? ಭೋಣಿಗೆನೆ ಇಲ್ಲ ಅಂದ ಮ್ಯಾಲ ಚಹಾ, ನಾಷ್ಟಾದ

ಮಾತು ದೂರೆ ಉಳಿತು (ಗೀತಾ ಬರುತ್ತಿರಲು, ಗೀತಾ ಶರ್ಟು, ಪ್ಯಾಂಟು, ಹ್ಯಾಟು, ಕನ್ನಡಕ ಹಾಕಿಕೊಂಡಿರುವಳು) ಸರ್ ಆಟೋ...

ಗೀತಾ– No No I want taxi

ರಾಜು– ವ್ಹಾರೆ ಅಂಗ್ರೇಜಿ ಔಲಾದ, ಇವತ್ತಿನ ಯುವಕರಿಗಿ ಅದೇನ್‌ಪರಿ ಬದಲಸಿ ಬಿಟ್ಟತಲ್ಲರಿ ಈ ಕಾಲೇಜು ಲೈಫ್, ಡ್ರೆಸ್ಸು, ಚಾಲು, ರೀತಿನೀತಿಯಲ್ಲಾ ಫಾರೆನ್ನು, ಅನ್ನಾ, ನೀರು, ಗಾಳಿ ಮಾತ್ರಾ ನಮ್ಮ ಇಂಡಿಯನ್ನು, ಇವು ಪಕ್ಕಾ ಸ್ವದೇಶಿನೂ ಅಲ್ಲ, ವಿದೇಶಿನೂ ಅಲ್ಲ, ಹೇಳಿ ಮಾಡಸಿದ ಹೈಬ್ರಿಡ್ ಕುಲ, ಯಾಕೊ ಇವತ್ತು ನಮ್ಮ ಟೈಮೆ ಸರಿ ಕಾಣವಲ್ಲದು, ಉದ್ರಿ ರೌಂಡ ಹೊಡ್ಯಾದೆ ಬ್ಯಾಡ, ಸೀದಾ ಪಾರ್ಕ ಮಾಡಿ ರೆಸ್ಟ್ ತಗೊಳ್ಳೋಣ (ರಿಕ್ಷಾದಲ್ಲಿ ಕೂಡಲು)

ಗೀತಾ– (ಭಾರದ ಕಾಟನ್ ಹೊತ್ತು ತಂದು) ಲೇ ಆಟೊ, ಬಾರೋ ಬೇಗ.. ಬಾರೊ ಈ ಭಾರ.. ಲೇ ಈ ಭಾರ (ರಾಜುವಿನ ಮೇಲೆ ಹಾಕುವಳು)

ರಾಜು– (ಚೀರಿ ನಿಲ್ಲುತ್ತ) 'ಹಾ' .. ಅರೆ ಬಾಪರೆ ಮರ್‌ಗಯಾ, ಯಾ ಅಲ್ಲಾ, ಎಲ್ಲಾ ಶಿವನೆ..

ಗೀತಾ– What, what happened?

ರಾಜು– ಎಲ್ಲಾ ಹಾಪ್ ಮೈಂಡ ನನ್ಮಗನೆ, ನನ್ನ ಸೊಂಟಾ ಮುರದಿಟ್ಟಿಯಲ್ಲಲೆ, ಒಂಟಿದ ಮಾರೆವನೆ

ಗೀತಾ– ಸೊಂಟಾ.. What it means?

ರಾಜು– Shut up you nonsence

ಗೀತಾ– Oh, I am sorry, ,ಭಾರ ಹೆಚ್ಚಾಗಿತ್ತು ಬ್ಯಾಲೆನ್ಸ್ ತಪ್ಪಿ ಬಿಟ್ಟಿತು, ನಿನಗೆ ನೋವಾಯಿತಾ I am sorry

ರಾಜು– ಅಬೆ ಸಾರಿಕೆ ಬಚ್ಚೆ, ಮಾಡೊದೆಲ್ಲಾ ಜೋಗಾ ಜೋರಿ ಮತ್ತ ಮ್ಯಾಲ ಸ್ವಾರಿ (ಕೈಎತ್ತಿ) ಕೊಡಬಾರದ ಒಂದು ಕೊಟ್ಟಾ ಅಂದರೆ ಹೋಗ್ತಿ ನೊಡು ಹೌ ಹಾರಿ

ಗೀತಾ– No No Please excuse me

ರಾಜು–	ಲೇ ಫಾರೆನ್ ಪೀಸೆ, ನಿನಗೆ ಎತ್ತಾಕೆ ಆಗ್ತಿದಿಲ್ಲ ಅಂದರ, ಇಷ್ಟು ದೊಡ್ಡ ಭಾರ ಕತ್ತಿ ಕಾಯಾಕ ಹೊತ್ತು ತಂದ್ಯಾ? ನೋಡಾಕ ಕಸಿ ಮಾಡಿದ ಹೋತಾ ಕಂಡಂಗ ಕಾಣ್ತಿಯಲ್ಲಲೆ, ನೀ ಹಾಲು ಕುಡಿದಿದ್ದು ನಿನ್ನ ಮಮ್ಮಿದಾ ಏನ್ ಎಮ್ಮಿದಾ?
ಗೀತಾ–	ಲೇ ಆಟೊ, Hold your tung, ಸೀದಾ ಬಾತ್‌ಕರ್, ನನ್ನ ಮಮ್ಮಿ ಹೆಸರೆತ್ತಿದರೆ ನಿನ್ನ ಹಲ್ಲುದುರಿಸುವೆ ಹುಷಾರ್
ರಾಜು–	ವ್ಹಾರೆ ಶೇರ್, ಉಲ್ಟಾ ಜೋರ್ ಕೋತವಾಲಕೋ ಡಾಂಟೆ, ಅಂದಂಗ ಮಾಡಾ ಭಾನಗಡಿ ಮಾಡಿ, ತಿರುಗಿ ನನಗೆ ರೋಪ್ ಹಾಕತ್ಯಾ?
ಗೀತಾ–	ಲೇ ಆಟೊ, ಇದು ನಿನಗ ಸೆಕೆಂಡ ವಾರ್ನಿಂಗ್, ನಾನು ಕರಾಟೆ ಚಾಂಪಿಯನ್, ಬ್ಲ್ಯಾಕ್ ಬೆಲ್ಟ್ ಹೀರೊ, ನಿನಗ ಸೇಫ್ ಆಗಿ ಇರೊ ಇಚ್ಛಾ ಇತ್ತೂ ಅಂದರ ನನಗ ಸಲಾಂ ಹೊಡದು ಬದುಕು, ಇಲ್ಲಾ ಅಂದರ.. (ತೋಳೇರಿಸುತ್ತ)
ರಾಜು–	ವ್ಹಾರೆ ನನ್ನ ಮಿಲ್ಕಾಸಿಂಗ (ಪ್ಯಾಂಟ ಏರಿಸುತ್ತ)
ಗೀತಾ–	ಲೇ ಆಟೊ, ಇದು ನಿನಗ ಥರ್ಡ್ ವಾರ್ನಿಂಗ್, ಒಂದೇ ಒಂದು ಕಿಕ್ ಕೊಟ್ಯಾ ಅಂದರ ಕೊಕ್ಕಾ ಇಲ್ಲದೆ ಪಕ್ಕಾ ಕಿತ್ತಿ ಹೋಗ್ತಾವ ನೋಡು
ರಾಜು–	ಅಚ್ಛಾ ಎ ಬಾತ್, ತೊ ಆ ಸಾಲೆ
ಗೀತಾ–	Well, come on (ಕುಸ್ತಿ ಆಡಲು ಸಿದ್ಧರಾಗಿ, ಗೀತಾ ಎರಡು ಬಟನ್ ಬಿಚ್ಚಲು ರೌಂಡ್ ಹೊಡೆಯುವಾಗ ಅವಳ ಎದೆ ಕಂಡು ಆಶ್ಚರ್ಯಗೊಂಡು ದಂಗಾಗಿ ನಿಲ್ಲಲು) ಲೇ ಅದೇನು ಹಾಗೆ ಕಣ್ಣಿಟ್ಟು ನೋಡ್ತಾ ಇರೋದು/
ರಾಜು–	(ತಡವರಿಸುತ್ತ) ನಿನ್ನ ಅವು.. ಅವು.. ಗೋಲಗುಮ್ಮಟ (ಕೈಸನ್ನೆ)
ಗೀತಾ–	(ತನ್ನೆ ನೋಡಿಕೊಂಡು) ಓ.. (ಬಟನ್ ಹಾಕಿಕೊಂಡು) ಇರಲಿ ಬಾ.. Come on
ರಾಜು–	ಉಂಹೂಂ, ನಾನೊಲ್ಲೆ, ನಿನ್ನೊಂದಿಗೆ ಕುಸ್ತಿ ಬೇಡ

ಗೀತಾ– ಬಾರೊ, ಒಂದುಕ್ಕೈ ನೊಡೋಣ

ರಾಜು– ಬೇಡ ಪ್ಲೀಜ ನಾನೊಲ್ಲೆ

ಗೀತಾ– ಯಾಕೆ ಒಲ್ಲೆ?

ರಾಜು– ಯಾತಕ್ಕೂ ಇಲ್ಲ ಮಹಾರಾಯ, ನಿನಗೆ ನಮಸ್ಕಾರ

ಗೀತಾ– ವ್ಹಾರೆ ಹೀರೊ, ನನ್ನ ಸ್ಟೈಲ್ ನೊಡಿಯೇ ನಿನ್ನ ಟೈರ್ ಪಂಕ್ಚರ್ ಆಯಿತಲ್ಲವೆ?

ರಾಜು– ನಿನ್ನ ಬಾಡಿ ಸ್ಕೆಚ್ ನೋಡಿ, ನನ್ನ ಟೈರ್ ಪಂಕ್ಚರ್ರೂ ಆಯಿತು, ಟ್ಯೂಬ್ ಒಡದೂ ಹೋಯ್ತು

ಗೀತಾ– ಅಂತೂ ಇಂದು ಬದುಕಿದೆ. ಇಲ್ಲಾಂದರೆ ನಿನ್ನ..

ರಾಜು– ಲೇ ನಿಜ ಹೇಳು?ನೀನು ಧರ್ಮೆಂದ್ರನೋ, ಹೇಮಾಮಾಲಿನಿಯೋ?

ಗೀತಾ– ಲೇ ಗಂಡುಸಾಗಿದ್ದರೆ ಕುಸ್ತಿ ಆಡಿ ಕಂಡು ಹಿಡಿಯೊ?

ರಾಜು– ಆಗಲೆ ಹೇಳಿದೆನಲ್ಲ ನಿನ್ನೊಂದಿಗೆ ಕುಸ್ತಿ.. No Never

ಗೀತಾ– ಹಾಗಿದ್ದರೆ ಸೋತೆ ಎಂದು ಒಪ್ಪಕೊ

ರಾಜು– ಅಚ್ಚಾ ಬಾಬಾ ಸೋತೆ, ಆಯಿತೆ?

ಗೀತಾ– ಈ ಸಾಮಾನು ಎತ್ತಿ ಆಟೊದಲ್ಲಿಡು, ಹೂಂ Quick

ರಾಜು– ಈ ಸಾಮಾನು ಇಡುವೆ, ನಿನ್ನ ಮನೆಯವರೆಗೂ ಮುಟ್ಟಿಸಿಯೂ ಬರುವೆ ಹುವಾನಾ

ಗೀತಾ– ಮತ್ತೆ ತಡವೇಕೆ?

ರಾಜು– ಇನ್ನು ಮುಂದೆ ನೀ ನನ್ನ ಗೆಳೆಯನೋ, ಗೆಳತಿಯೋ?

ಗೀತಾ– you naughty ಬೇಕೇನು ಲಾಠಿ?

ರಾಜು– (ಕೈ ಎತ್ತಿ) ಸಾಕು ಮಾಡಲೇ ಈ ಕಳ್ಳಾಟ, ಒಂದೇ ಒಂದು ಬಾನ್ಸರ್ ಹಾಕಿದರೆ ನಿನ್ನ ಹೂರಣವೆಲ್ಲಾ..

ಗೀತಾ– ಬಾಬಾ ಅದೆಲ್ಲಾ ಬೇಡ, ನಾನಿಬ್ಬರೂ ಫ್ರೆಂಡ್ಸ್

ರಾಜು– (ಕೈ ಚಾಚಿ) ಪ್ರಾಮಿಸ್

ಗೀತಾ–	(ಕೈ ಹಾಕಿ) ಪ್ರಾಮೀಸ್ .
ರಾಜು–	ತುಂಬಾ Thanks my sweet baby (ಕೈಗೆ ಮುತ್ತು)
ಗೀತಾ–	ಲೇ ತುಂಟ ಸರಿ ಅತ್ತ (ಕೈ ಬಿಡಿಸಿಕೊಳ್ಳುತ್ತ)
ರಾಜು–	(ಕೈ ಚಾಚಿ) ಲೇ ನೀನೂ ನನ್ನ ಮುಂಗೈಗೊಂದು ಕಿಸ್ಸ ಕೊಡಲೆ
ಗೀತಾ–	ಚಲ್ ಹಟ್, ಪಗಲಾ ಕಂಹಿಕಾ
ರಾಜು–	Please …
ಗೀತಾ–	(ಮುಂಗೈಗೆ ಮುದ್ದು ಕೊಡುತ್ತ) ಅಚ್ಚಾ ಬಾಬಾ, ನಡೆ ಹೋಗೋಣ
ರಾಜು–	ನಿನ್ನ ಮನೆ ನೋಡಲಿಕ್ಕಾದರೂ ಬರಲೇಬೇಕು ದೋಸ್ತ, (ಸಾಮಾನು ಇಟ್ಟು) ಹತ್ತು ಹೋಗೋಣ (ಗೀತಾ ಕುಳಿತ ನಂತರ) ನಿನ್ನ ಹೆಸರೇನು?
ಗೀತಾ–	ಇದು ಮೇನ್ ರೋಡ್ ಮಿಸ್ಟರ್, ಹೆವಿ ಟ್ರಾಫಿಕ್, ಆ್ಯಕ್ಸಿಡೆಂಟ್, ಮಾಡಿಕೊಳ್ಳಲು ಆಸೆಯಾಗಿದೆಯೇನು, ಚಲ್ ಸೀದಾ
ರಾಜು–	(ಕುಳಿತುಕೊಳ್ಳುತ್ತ) ಆಲ್‌ರೈಟ್ ಬೇಬಿ (ಹೋಗುವರು)

===**=====**====

ಪ್ರವೇಶ–೩

ಕೇದಾರನಾಥನ ಮನೆ

(ಬಂದೂಕು ನೇತು ಹಾಕಿದೆ, ಗೀತಾಳೊಂದಿಗೆ ರಾಜು ಸಾಮಾನು ತಂದಿಟ್ಟು ಸುತ್ತಲೂ ನೋಡುತ್ತಿರಲು)

ಗೀತಾ– ಮಿಸ್ಟರ್ ಇದೆ ನೋಡಿ ನಮ್ಮ ಮನೆ

ರಾಜು– Good (ಗೀತಾಗೆ) Most beautyful

ಗೀತಾ– ನಿಜವೆ?

ರಾಜು– ನಿಜ ದೋಸ್ತ್, ಈ ಮನೆಯೂ ಸುಂದರ, ಈ ಮನೆಯ ಯಜಮಾನಿ ತುಂಬಾ ಸುಂದರ (ಕುರ್ಚಿಯ ಮೇಲೆ ಕುಳಿತು) ಹೇಳಿ ಮತ್ತೇನು ವಿಶೇಷ?

ಗೀತಾ– (ರಟ್ಟೆ ಹಿಡಿದೆತ್ತಿ) ವಿಶೇಷನೂ ಇಲ್ಲ, ಸಶೇಷನೂ ಇಲ್ಲ ಬೇಗ ಆಟೋ ಹತ್ತಿ ಇಲ್ಲಿಂದ ಓಟ ಕಿತ್ತು.

ರಾಜು– ಅರೆ, ಇದೇನು? ಇಷ್ಟೇನಾ ನಿನ್ನ ಅತಿಥಿ ಸತ್ಕಾರ, ಒಂದ ಕಪ್ ಚಹಾ, ಕಾಫಿನಾದರೂ..

ಗೀತಾ– ಒಳಗಡೆ ನನ್ನ ಡ್ಯಾಡಿ ಇದ್ದಾರೆ, ಹೊರ ಬಂದು ನಿನ್ನ ನೋಡಿದರೆ ತಿಥಿ ಮಾಡಿ ಬಿಟ್ಟಾರು ಜೋಕೆ, ಜಲ್ದಿ ಎಂಹಾ ಸೇ ನೌದೊ ಗ್ಯಾರಾ ಹೋಜಾವು

ರಾಜು– ಯಾರು? ನಿನ್ನ ಡ್ಯಾಡಿನೆ?

ಗೀತಾ– ಹೌದು ಕಣೊ, ಮಾಜಿಮಿಲ್ಟ್ರಿ ಕಮಾಂಡರ್, ಹುಲಿಯಂತೆ ಗರ್ಜಿಸುತ್ತ ಹೊರ ಬಂದರೆ ನೋಡಿ ನಿನ್ನ ಹಾರ್ಟ ಫೇಲಾದೀತು ಹುಷಾರ್

ರಾಜು– ನಿನ್ನ ಡ್ಯಾಡಿ, ಮನುಷ್ಯನೋ, ಮೃಗನೋ?

ಗೀತಾ– You Fool, ಹೀಗೆಲ್ಲಾ ಹರಟುತ್ತ ನಿಲ್ಲಬೇಡ ಕಣೋ,ಆತ

ಕೇಳಿಸಿಕೊಂಡರೆ ನಿನ್ನ ಕಥೆ ಮುಗಿದಂತೆಯೇ ಸರಿ, ಭಯಂಕರ ಸಿಟ್ಟಿನವ ಗೊತ್ತೆ?

ರಾಜು– ಅಡ್ಡಿಯಿಲ್ಲ ಕಣೇ, ನಿನ್ನಂಥಾ ಗುಲಾಬಿ ಹೂವಿನ ಕಾವಲಿಗೆ ಮನೆಯಲ್ಲಿ ಒಂದು ಅಲ್ಸೇಶನ್ ನಾಯಿ ಇರಬೇಕು, ನಿಜ ತಾನೆ?

ಕೇದಾರ– (ಒಳಗಿನಿಂದ) ಗೀತಾ..ಗೀತಾ ಬೇಟಿ..

ರಾಜು– ಓಹೋ.. ನಿನ್ನ ಹೆಸರು ಗೀತಾನೋ?

ಗೀತಾ– ಗೀತಾ ಅಲ್ಲ ಗೋತಾ, ನನ್ನ ಡ್ಯಾಡಿ ಹೊರಬಂದರೆ ತಿಂತಿ ನೋಡು ಲಾತಾ

ರಾಜು– ಅಚ್ಛಾ ಬಾಬಾ ಹೋಗ್ತಿನಿ, ಮತ್ತಿ ನಿನ್ನ ಭೇಟಿ

ಗೀತಾ– ನಾಳೆ ಅದೇ ಸಮಯಕ್ಕೆ ಅದೇ ಸ್ಥಳದಲ್ಲಿ

ರಾಜು– (ಕೈ ಚಾಚಿ) ಪ್ರಾಮೀಸ್

ಗೀತಾ– (ಕೈ ಹಾಕಿ) ಪ್ರಾಮೀಸ್

ರಾಜು– (ಜಗ್ಗಿ) ಲೇ ಒಂದು ಒಂದು (ತುಟಿ ಸನ್ನೆ)

ಗೀತಾ– What? You naughty, ನಡೆ, ಇಲ್ಲಿಂದ

ರಾಜು– (ಚುಟುಕು) ಸುತ್ತಾ ಮುತ್ತಾ ಯಾರೂ ಇಲ್ಲ, ನಾನು ನೀನೂ ಇಲ್ಲಿ ಎಲ್ಲಾ..

ಕೇದಾರ– (ಒಳಗಿನಿಂದ) ಗೀತಾ ಬೇಟಿ..

ಗೀತಾ– ಡ್ಯಾಡಿ ಬಂದರು, Run away quick

ರಾಜು– (ನೂಕಲು ಓಡುತ್ತ) bye (ಹೋಗುವನು)

ಕೇದಾರ– (ಹೊರಬರುತ್ತ) ಗೀತಾ..

ಗೀತಾ– Yes ಡ್ಯಾಡಿ

ಕೇದಾರ– Shut up, ನನಗೆ, ಇಲ್ಲದ ಸಬೂಬು ಬೇಕಾಗಿಲ್ಲ, ಎಲ್ಲಾ ಸಾಮಾನು ತಂದೆಯಾ?

ಗೀತಾ– (ಹ್ಯಾಟು ಕನ್ನಡಕ ತೆಗೆಯುತ್ತ) ತಂದೆ ಡ್ಯಾಡಿ

ಕೇದಾರ– (ಅತ್ತ ಇತ್ತ ನೋಡಿ) ಯಾರೂ ಮಾಡಾಡಿದಂತಾಯಿತಲ್ಲ

ಗೀತಾ– ಮಾತು.. ಹಾಂ ಅದೆ ಆಟೊ ಹುಡುಗ, ಆತ ಆಗಲೆ ಹೋದ ಡ್ಯಾಡಿ

ಕೇದಾರ– What...ಆಟೊ, ಅಂದರೆ ಈ ಸಾಮಾನು ಆಟೋದಲ್ಲಿ ತಂದೆಯಾ?

ಗೀತಾ– ಕ್ಷಮಿಸಿ ಡ್ಯಾಡಿ ತುಂಬ ಭಾರ, ಹೊರಲಾಗಲಿಲ್ಲ

ಕೇದಾರ– Shut up, you useless girl

ಗೀತಾ– Sorry dady, excuse me

ಕೇದಾರ– ಒಬ್ಬ ಮಿಲ್ಟ್ರಿ ಆಫೀಸರ್ ಮಗಳಾಗಿ ಹುಟ್ಟಿದ ನಿನಗೆ ಹತ್ತೆಂಟು ಕಿಲೋ ಭಾರ ಹೊರಲೂ ಆಗದೆ? ಹೇಡಿ, ರಣಹೇಡಿ, ಮನುಷ್ಯ ಸದಾ ಸ್ವಾವಲಂಭಿಯಾಗಿರಬೇಕು. ಶಿಸ್ತು, ಸ್ವಯಂ, ಸಮಯ ಪಾಲನೆ ಎಂದಿಗೂ ಮರೆಯಕೂಡದು ನೆನಪಿರಲಿ

ಗೀತಾ– please ಇದೊಂದು ಸಲ ಕ್ಷಮಿಸಿ ಡ್ಯಾಡಿ

ಕೇದಾರ– ಸರಿ, ಬಾಡಿಗೆ ಎಷು ಕೊಟ್ಟೆ?

ಗೀತಾ– ಬಾಡಿಗೆ ದುಡ್ಡು! ಅರೆ ಹೌದಲ್ಲ, ಡ್ಯಾಡಿ ನಾನು ಆತನಿಗೆ ದುಡ್ಡು ಕೊಡುವ ಪ್ರಸಂಗವೇ ಬರಲಿಲ್ಲ

ಕೇದಾರ– What, ಇದೆಲ್ಲಾ, ಫ್ರೀ ಪಾರ್ಸಲ್ ಸರ್ವೀಸ್ಸೆ?

ಗೀತಾ– ಹೌದು ಡ್ಯಾಡಿ, ನಾನು ಎಷ್ಟಾದರೂ ನಿಮ್ಮ ಮಗಳಲ್ಲವೆ? ಆತನನ್ನು ಮಾತಿನಿಂದಲೇ ಮರುಳು ಮಾಡಿ ಓಡಿಸಿದೆ

ಕೇದಾರ– Good, ಅಡ್ಡಿಯಿಲ್ಲ, But be careful, ಇಂದು ನಿನ್ನ ಮಾತಿಗೆ ಮರುಳಾದ ಆ ಹುಡುಗ ನಾಳೆ ನಿನಗೆ ಮರುಳು ಮಾಡಿಯಾನು, ಹುಷಾರ್

ಗೀತಾ– ಅದು impossible, ನನಗೆ fool ಮಾಡುವ ಭೂಪತಿ ಗಂಡು ಇನ್ನು ಈ ಭೂಮಿ ಮೇಲೆ ಹುಟ್ಟಿಯೇ ಇಲ್ಲ ಡ್ಯಾಡಿ

ಕೇದಾರ– Shut up, ಇಂಥಾ ಅತಿಯಾದ ಜಂಬವೇ ಅನರ್ಥಕ್ಕೆ ನಾಂದಿ, ಏಕೆ ನಿನ್ನ ಕೆನ್ನೆಗಳು ಕೆಂಪದಾಗಿವೆಯಲ್ಲ, ಏನಾದರೂ ಗೊತಾಳಾ

ಪ್ರಾರಂಭವಾಗಿದೆಯೇನು?

ಗೀತಾ– No no ಹಾಗೇನೂ ಇಲ್ಲ ಡ್ಯಾಡಿ, ಬಿಸಿಲಲ್ಲಿ ಬಂದೆನಲ್ಲ ಅದಕ್ಕಾಗಿ..

ಕೇದಾರ– ಸರಿ, ಇಷ್ಟೆನಾ? ಪರವಾಗಿಲ್ಲ, ಈಗ ಟೈಂ ಎಷ್ಟು?

ಗೀತಾ– ನಾಲ್ಕು ಗಂಟೆ, ಟೀ ಟೈಮ್.

ಕೇದಾರ– ಹಾಗಿದ್ದರೆ come on, attenstion, left.. right.. march..
(ಒಳ ಹೋಗುವರು)

===***=====***====

ಪ್ರವೇಶ–೪

ರಸ್ತಾ

(ರಾಜು ಆಟೋದೊಂದಿಗೆ ಮಹೇಶ ಕೈಯಲ್ಲಿ ಚೀಲ ಹಿಡಿದು ಬರುತ್ತಿರಲು)

ರಾಜು– ನಮಸ್ತೆ ಮಹೇಶ ಭಯ್ಯಾ.

ಮಹೇಶ– ಓ ನಮಸ್ಕಾರ ರಾಜ ಅಹ್ಮದ, ಕ್ಷೇಮವೆ?

ರಾಜು– ನಮ್ಮದೇನು ಬಿಡು ಭಯ್ಯಾ, ನಾಲ್ಕೆಂಟು ಪ್ಯಾಸಿಂಜರ್ ಸಿಕ್ಕರೆ ಬಿಲ್ಕುಲ್ ಕ್ಷೇಮ, ಇಲ್ಲದಿದ್ದರೆ ಕ್ಷಾಮ, ಇರಲಿ, ನಿಮ್ಮ ನೌಕರಿ ವಿಷಯ..

ಮಹೇಶ– ಅದು ಈ ಜನ್ಮದಲ್ಲಿ ಸಿಗುವ ಭರವಸೆಯಂತೂ ಇಲ್ಲ, ಸಾಧ್ಯವಾದರೆ ಮುಂದಿನ ಜನ್ಮದಲ್ಲಿ ಮತ್ತೆ ಪ್ರಯತ್ನಿಸೋಣ.

ರಾಜು– ಅಣ್ಣಾ ನೀನೂ ಬಲು ಆಶಾವಾದಿ

ಮಹೇಶ– ಆಶಾವಾದಿಯಾಗಿದ್ದುಕೊಂಡು ಸತ್ತರೂ ಪರವಾಯಿಲ್ಲ, ನಿರಾಶನಾಗಿ ಮರಣಕ್ಕೆ ಶರಣಾಗುವದು ಮೂರ್ಖತನವಲ್ಲವೆ?

ರಾಜು– Good, ಇದಕ್ಕೇನೆ ಜಿಂದಗಿ ಅನ್ನೋದು, ಇರಲಿ ಮತ್ತೇನು ವಿಶೇಷ?

ಮಹೇಶ– ಇಂದು ನಮ್ಮ ತಂಗಿಯನ್ನು ನೋಡಲು ಗಂಡಿನ ಕಡೆಯವರು ಬರುವವರಿದ್ದಾರೆ, ಅದಕ್ಕಾಗಿಯೇ ಕುಸು ಸಾಮಾನು ಹಣ್ಣು, ಹಂಪಲು ತೆಗೆದುಕೊಂಡು ಹೊರಟಿದ್ದೆ.

ರಾಜು– ಸಂತೋಷವಪ್ಪಾ, ವರ ಏನು ಮಾಡುತ್ತಿದ್ದಾನೆ?

ಮಹೇಶ– ಅಂತರಾಷ್ಟ್ರೀಯ ಆಮದು ರಫ್ತಿನ ಬಿಜನೆಸ್ಸಂತೆ, ಕೋಟ್ಯಾಧಿಶ್ವರರ ಏಕ್ ಮಾತ್ರ ಪುತ್ರ, ಸ್ವಂತದ ಕಾರು, ಬಿಲ್ಡಿಂಗು ಇವೆಯಂತೆ

ರಾಜು– (ಗಾಬರಿ) ಏನೆಂದಿರಿ, ಕೋಟ್ಯಾಧೀಶ, ಬಿಜನೆಸ್ಸ್ ಕಾರು, ಬಿಲ್ಡಿಂಗು

ಮಹೇಶ– ಹೌದಂತೆ ರಾಜು, ಒಂದು ವೇಳೆ ಆತ ನನ್ನ ತಂಗಿಗೆ ನೋಡಿ ಒಪ್ಪಿಕೊಂಡರೆ ಗಂಗಾಳ ಭಾಗ್ಯಕ್ಕೆ ಎಣೆಯೇ ಇಲ್ಲ

ರಾಜು– ಸಂತೋಷವಪ್ಪಾ ವರದಕ್ಷಿಣೆ ಎಷ್ಟಂತೆ?

ಮಹೇಶ– ಆತನಿಗೆ ಹೆಣ್ಣು ಮುಖ್ಯವೇ ಹೊರತು, ಹಣ ಅಲ್ಲವಂತೆ

ರಾಜು– ಅಂದರೆ ಆತ ಮನುಷ್ಯನಲ್ಲ ದೇವರೆ ಆಗಿರಬೇಕು

ಮಹೇಶ– ಹೊತ್ತಾಯಿತು, ನಾನಿನ್ನು ಬರಲೆ?

ರಾಜು– ಮದುವೆ ನಿಶ್ಚಯವಾದರೆ ನನಗೆ ಆಮಂತ್ರಣ ಉಂಟು ತಾನೆ?

ಮಹೇಶ– ನಿನ್ನಂತಹ ಆತ್ಮೀಯನನ್ನು ಮರೆಯವದುಂಟೆ

ರಾಜು– ನಾನು ಅವಶ್ಯ ಬರುವೆ, ಭಾರಿ ಜುಲುಶ್ ನಿಕಾಲಿಂಗೆ

ಮಹೇಶ– ಆಗಲೆಪ್ಪಾ, ಬರ್ತೀನಿ (ಹೋಗುವನು)

ರಾಜು– (ಸ್ವ) ಕೋಟ್ಯಾಧೀಶ್ವರರ ಏಕಮಾತ್ರ ಪುತ್ರ, ಇಂಟರ್ ನ್ಯಾಶನಲ್ ಬಿಜನೆಸ್, ಹೆಣ್ಣು ಮುಖ್ಯ ಹಣ ಅಲ್ಲ

ರಾಧಾ– (ಬರುತ್ತ) ಹಲ್ಲೋ ರಾಜು..

ರಾಜು– ಓ ನಮಸ್ತೆ ಮೇಮ್ ಸಾಬ್, ಕ್ಷಮಿಸಿ ನಿಮ್ಮ ನೋಡಲಿಲ್ಲ

ರಾಧಾ– ಅದೇನಪ್ಪಾ ಅಂತಹ ಗಹನವಾದ ವಿಚಾರ?

ರಾಜು– ನೋಡಿ ಮೇಮಸಾಬ್, ಸಮಸ್ಯೆ ಏನೊ ಸರಳವಾಗಿದೆ ಆದರೆ ಅದರ ಒಳಗುಟ್ಟು..

ರಾಧಾ– ಆದಾವ ವಿಷಯ ಹೇಳು ಕೇಳೋಣ..

ರಾಜು– ಕೋಟ್ಯಾಧೀಶ್ವರರ ಏಕಮಾತ್ರ ಪುತ್ರ, ಇಂಟರ್ ನ್ಯಾಶನಲ್ ಬಿಜಿನೆಸ್, ಕಾರು, ಬಿಲ್ಡಿಂಗು ಉಂಟು, ಆತನಿಗೆ ರೂಪವತಿಯಾದ ಹೆಣ್ಣು ಮುಖ್ಯವಂತೆ, ವರದಕ್ಷಿಣೆ ಬರಿ ನೆಪಕ್ಕಂತೆ

ರಾಧಾ– ಈ ಕಾಲಕ್ಕೆ ಇಂಥಾ ಜನ ಅಪರೂಪ ಅಷ್ಟೆ ಅಲ್ಲ.. Impossible

ರಾಜು– ಅದೇಕೆ?

ರಾಧಾ– ವರ ಸಾಹಿತಿಯೋ, ತತ್ವಜ್ಞಾನಿಯೋ, ಭಾವ ಜೀವಿಯೋ ಆಗಿದ್ದರೆ

ತುಸುವಾದರೂ ನಂಬಬಹುದಾಗಿತ್ತು. ಆದರೆ ಓರ್ವ ಬಿಜಿನೆಸ್ ಮ್ಯಾನಗೆ ಹಣ ಮುಖ್ಯವಲ್ಲವೆಂದರೆ ನಂಬಲು ಸಾಧ್ಯವೇ ಇಲ್ಲ, ದಾಲ ಮೇ ಕುಚ್ ಕಾಲಾ ಜರೂರ ಹೈ

ರಾಜು– ಅಂದರೆ ನಮ್ಮ ತಂಗಿ ಗಂಗಾಳ ಗತಿ..

ರಾಧಾ– ನೀನು ಯಾರ ಬಗ್ಗೆ ಮಾತಾಡುತ್ತಿರುವೆ?

ರಾಜು– ನಮ್ಮ ಮಹೇಶ ಭಯ್ಯಾನ ತಂಗಿ ಗಂಗಾಳ ವಿಷಯ

ರಾಧಾ– What?ಮಹೇಶ, ಗಂಗಾ, ಅವರಂತೂ ಹಿಂದೂಗಳು, ನೀನಂತೂ ಮುಸ್ಲಿಂ..

ರಾಜು– ಆಸ್ತಿ, ಅಂತಸ್ತು ಉಳ್ಳವರಿಗಾಗಿ, ಸ್ವಾರ್ಥ ರಾಜಕಾರಣಿಗಳಿಗಾಗಿ ಈ ಜಾತಿ, ಮತ, ಪಂಥಗಳು ಮೇಮಸಾಬ್, ಹೊಟ್ಟೆ ಪಾಡಿಗಾಗಿ ಹಗಲಿರುಳೂ ಹೋರಾಡುವ ನಮ್ಮಂಥಾ ಬಡವರಿಗಾಗಿ ಅದೆಲ್ಲಾ ಏಕೆ ಬೇಕು ಹೇಳಿ?

ರಾಧಾ– Good. ಇದೇ ನಿಜವಾದ ಮಾನವಧರ್ಮ ಇರಲಿ, ಆ ಗಂಗಾ, ಮಹೇಶರ ಬಗ್ಗೆ ನಿನಗೇಕೆ ಇಷ್ಟು ಕಾಳಜಿ.

ರಾಜು– ಅವರಿಬ್ಬರೂ ಮಹಾದೇವಪ್ಪ ಮಾಸ್ತರರ ಮಕ್ಕಳು, ನಾನು ಮುಸ್ಲಿಂನಾದರೂ ಹಿಂದುಗಳ ಮಧ್ಯದಲ್ಲಿಯೇ ಬೆಳೆದದ್ದು. ಅದಕ್ಕಾಗಿಯೇ ಈ ರಾಜ ಅಹ್ಮದ ಎಲ್ಲರ ಬಾಯಲ್ಲಿ ಇಂದು ಪ್ರೀತಿಯ ರಾಜು

ರಾಧಾ– ತುಂಬ ಸಂತೋಷ, ಆ ಗಂಗಾಳ ಮದುವೆ ಆಗಿದೆಯೇ?

ರಾಜು– ಇಲ್ಲ ಇಂದು ನಿಶ್ಚಿತಾರ್ಥವಂತೆ

ರಾಧಾ– ಪರೀಕ್ಷಿಸಿ ನೋಡಲು ಸಮಯವಿದೆ ಚಿಂತಿಸದಿರು, ಹಾಂ ನಾ ಹೇಳಿದ ಕೆಲಸ.

ರಾಜು– ತಾವು ಹೇಳಿದ್ದು.. ಅದು..

ರಾಧಾ– (ಪರ್ಸಿನಿಂದ ಫೋಟೋ ತೆಗೆದು ತೋರಿಸುತ್ತ) ಇನ್ನೊಂದು ಸಲ ಚನ್ನಾಗಿ ನೋಡಿ ಜ್ಞಾಪಿಸಿಕೋ, ಈ ವ್ಯಕ್ತಿಯನ್ನು ಎಂದಾದರೂ ಎಲ್ಲಾದರೂ..

ರಾಜು– (ನೆನಪಿಸಿಕೊಂಡು) ಹಾಂ. ಹೌದು ಮೇಮಸಾಬ್, ಹತ್ತು ದಿನದ

ಹಿಂದೆ ಉತ್ತಮ ಲಾಜ ಹತ್ತಿರ, ಏಳು ದಿನದ ಹಿಂದೆ ಸೂಳೆಯರ ಓಣಿಯಲ್ಲಿ, ಮೂರು ದಿನದ ಹಿಂದೆ ರೇಸ್ ಕೋರ್ಸ್ ಹತ್ತಿರ ನೋಡಿದ ನೆನಪು

ರಾಧಾ– What, ಒಂದೇ ವಾರದಲ್ಲಿ ಮೂರು ಸಲ ನೋಡಿರುವೆಯಾ? ಈ ಮಾತು ನಿಜವೆ?

ರಾಜು– ಹೌದು ಮೇಮಸಾಬ್, ನನ್ನ ಕಣ್ಣುಗಳೆಂದೂ ಮೋಸ ಹೋಗಲಾರವು. ನಾನು ಇದೇ ಸಿಟಿಯಲ್ಲಿ ಹುಟ್ಟಿ ಬೆಳೆದವನು

ರಾಧಾ– Good, (ದುಡ್ಡು ಕೊಡುತ್ತ) ಇದೊ ನಿನ್ನ ಬಕ್ಷಿಸು

ರಾಜು– ಇದೆಲ್ಲಾ ಏಕೆ ಮೇಮಸಾಬ್, ಬೇಡಿ

ರಾಧಾ– ನೀನು ನಂಬಿಕಸ್ತ, ಸದಾ ನಿನ್ನ ಸಹಕಾರ ಬೇಕೆ ಬೇಕು.

ರಾಜು– ಕೇವಲ ಐದು ರೂಪಾಯಿ ಕೊಡಿ ಸಾಕು, ನನ್ನ ಬೆಲೆ ಅಷ್ಟೆ,

ರಾಧಾ– ಹಣದ ಮಾಪನದಿಂದ ಮನುಷ್ಯನ ಬೆಲೆ ಕಟ್ಟಲಾಗದು ರಾಜು, ಕಮಲ ಹುಟ್ಟುವು ಕೆಸರಿನಲ್ಲಿ, ಕಸ್ತೂರಿ ಸಿಗುವದು ಮೃಗದ ನಾಭಿಯಲ್ಲಿ ವಜ್ರ ಸಿಗುವದು ಕಲ್ಲಿದ್ದಲ ಗಣಿಯಲ್ಲಿ. ಇದು ನನ್ನ ಪ್ರೀತಿಗಾಗಿ ಇಟ್ಟಕೊ.

ರಾಜು– (ತೆಗೆದುಕೊಂಡು) ಅಚ್ಛಾ ಮೇಮಸಾಬ್, ಈ ವ್ಯಕ್ತಿ...

ರಾಧಾ– ನನಗೆ ತುಂಬ ಬೇಕಾದವ ಬರ್ತೀನಿ, (ಹೋಗುತ್ತ) (ಸ್ವ) ಓ.. ವಿಕ್ರಮ್‌ಮತ್ತೆ ಬಂದಿರುವೆಯಾ ಈ ಊರಿಗೆ, ಬಾ.. ನಿನ್ನಂಥಾ ಸಲಗನನ್ನು ಹಿಡಿದು ಸರಪಳಿ ತೊಡಿಸಲು ಖೆಡ್ಡಾ ರಚಿಸಿರುವೆ, ನೀನು ಭೆಟ್ಟಿಯಾಗುವದೊಂದೆ ಬಾಕಿ, ಆ ಸುದಿನ ಬೇಗ ಬರಲಿ (ಹೋಗುವಳು)

ರಾಜು– ಕಮಾಲ್ ಹೈ, ಈ ಜಗತ್ತೆ ಒಂದು ಹುಚ್ಚರ ಸಂತೆ, ಇಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಚಿಂತೆ, ಆದರೆ ನನಗೆ.. (ನೋಡಿ) ಬರುತ್ತಿದೆ ನಮ್ಮ ಪಾರಿವಾಳ (ಬುರ್ಕಾ ತೊಟ್ಟು ಆಟೊದಲ್ಲಿ ಮಲಗುವನು)

ಗೀತಾ– (ಬಂದು) ಲೇ ಹಗಲಲ್ಲೆ ಮಲಗುವಿ ಏನೊ ಮೂದೇವಿ ಎದ್ದೇಳು

ರಾಜು– (ಎದ್ದು ಕುಳಿತು ಹೆಣ್ಣು ಧ್ವನಿಯಲ್ಲಿ) ಹಾಯ್ ಹಾಯ್ ಮುಝೆ ಜಗಾನೆ ವಾಲೆ ಆಪ್ ಕೋನ್ ಹೈಂ ಜಿ?

ಗೀತಾ–	(ಗಾಬರಿ) ಅರೆ ನೀವು.. ನೀವು..
ರಾಜು–	ನೀನೆ ನನ್ನ ರಾಜಕುಮಾರ, ಬಾ ಪ್ರಿಯಾ, ನನ್ನ ಹತ್ತಿರ ಕುಳಿತು ಸರಸ ಸಲ್ಲಾಪವಾಡು (ಕೈಹಿಡಿದು)
ಸೀತಾ–	ಅರೆರೆ....... ಇದೇನು ? ನನ್ನ ಕೈಬಿಡಿ
ರಾಜು–	ನಾನು ಬಿಡಬೇಕೆಂದು ಈ ಕೈ ಹಿಡಿದಿಲ್ಲ ಡಿಯರ್
ಗೀತಾ–	ಅಯ್ಯೋ ಬಿಡರಿ, ಯಾರಾದರೂ ಕಂಡರು
ರಾಜು–	ನನಗದರ ಅಂಜಿಕೆಯಿಲ್ಲ, come on darling
ಗೀತಾ–	shut up
ರಾಜು–	ಆಹಾಹಾ, ಕೋಪದಲ್ಲಿ ಮತ್ತಷ್ಟು ಸುಂದರವಾಗಿ ಕಾಣುತ್ತಿರುವೆ, ಬಾರೋ ಮದುವೆಯಾಗಿ ಮಸ್ತ ಮಜಾ ಮಾಡೋಣ
ಗೀತಾ–	What, ಮದುವೆ.. ಶಾದಿ.. It means marry
ರಾಧಾ–	ಕೆಂವು ಕಬೂಲ ಹೈನಾ?
ಗೀತಾ–	no ಬಾಬಾ no
ರಾಜು–	yes ಕಹೊ ಡಾರ್ಲಿಂಗ (ಚುಟುಕು) ದೇ ದೇ ಪ್ಯಾರ್ ದೇ ಪ್ಯಾರ್ ದೇ..
ಗೀತಾ–	oh god ಇದೇನು ಗಂಟು ಬಿತ್ತು ಶನಿ
ರಾಜು–	ಕ್ಯಾ ತೂನೆ ಮುಝೆ ಹನಿ ಕಹಾ, ಹಾಯ್ ಹಾಯ್, ಚುನ್ ಬಾಬಾ ಚುನ್.. (ಚುಟುಕು)
ಗೀತಾ–	(ರೋಷ) Oh shut up hold on
ರಾಜು–	ಯಾಕೆ ಡಿಯರ್ ಹೀಗೆ ಕೋಪಿಸಿಕೊಳ್ಳುತ್ತಿರುವೆ, ನಾನು ಅಂದದ ಅರಸಿ, ಚಂದನದ ಗೊಂಬೆ, ನನ್ನ ಅಪ್ಪಿ ಆನಂದಿಸು ರಾಜಾ ನನ್ನ ಮೈಮುಟ್ಟಿ ನಿನಗೆ ರೋಮಾಂಚನವಾಗುತ್ತಿಲ್ಲವೆ.
ಗೀತಾ–	ನನಗೆ ಹಾಗೇನೂ ಆಗುತ್ತಿಲ್ಲ, ನನ್ನ ಬಿಟ್ಟು ಬಿಡು ತಾಯಿ, ನಿನಗೆ ಕೈ ಮುಗಿವೆ
ರಾಜು–	ನಿಜ ಹೇಳು, ನೀನು ಗಂಡೊ, ಷಂಡೊ

ಗೀತಾ– ನಿಜ ಕಣೆ, ನನ್ನಾಣೆ ನನ್ನ ನಂಬು

ರಾಜು– ಹಾಗಿದ್ದರೆ ನೀನು ಹೆಣ್ಣೆಂಬುದಕ್ಕೆ ಒಂದು ಪಕ್ಕಾ ಗುರುತು ತೋರಿಸು

ಗೀತಾ– ಈ ನಾಡು ರಸ್ತೆಯಲ್ಲಿ ಅದ್ಹೇಗೆ ತೋರಿಸುವದು?

ರಾಜು– ತೋರಿಸದಿದ್ದರೆ ನಾನೆಂದಿಗೂ ನಿನ್ನ ಬಿಡಲಾರೆ

ಗೀತಾ– ಎಲ್ಲಾ ಸಾಡಾಸಾತಿ, ಇಕ್ಕಾ ನನ್ನ ಮುಂಗೈ ಮುಟ್ಟಿ ನೋಡು ನಿನಗ ನಾ ಹೆಣ್ಣು ಅನ್ನೋದು ತಿಳಿತಾದ (ರಾಜು ಕೈ ಕಿವುಚಲು) ಅರೆ ತುಸು ಹಗೂರ, ಇದೇನು ಮಾವಿನಕಾಯಿ ಕಿವುಚಿ ಮೆತ್ತಗ ಮಾಡಿದಂಗ, ರೀ ನನಗ ನೋವು ಅಗಾಕತ್ತ್ಯಾದ

ರಾಜು– ಊಂಹೂಂ! ಇಷ್ಟು ಸಾಲದು, ಇನ್ನೊಂದು ನಿಜವಾದ ಗುರುತು ತೋರಿಸು

ಗೀತಾ– (ಕನ್ನಡಕ ಹ್ಯಾಟು ತೆಗೆದು) ಇದೊ ಈ ಕೂದಲನ್ನಾದರೂ ನೋಡಿ ನಂಬು

ರಾಜು– ಆಹಾ.. (ಮುಟ್ಟಿ) ಕಾಲೆ ಕಾಲೆ ಬಾಲ್, ಗೋರೆ ಗೋರೆ ಗಾಲ, ಬಹುತ ಖೂಬ.. ಆದರೆ ಈ ಕಾಲಕ್ಕೆ ಗಂಡಸರು ಕೂಡ ಈ ರೀತಿ ಕೂದಲು ಬಿಡುತ್ತಾರೆ, ನಾನು ಎಂದಿಗೂ ನಂಬಲಾರೆ, ಹೆಣ್ಣಿನ ನಿಜವಾದ ಗುರುತು ತೋರಿಸು ಆಗಲೆ ನಾ ನಂಬುವದು

ಗೀತಾ– ಅಂದರೆ..?

ರಾಜು– ಶರ್ಟಿನ ಬಟನ್ ಬಿಚ್ಚು ಗುಮಟಾ ತೋರಸು..

ಗೀತಾ– ಥೂ ನಾಚಿಕೆಗೆಟ್ಟವಳೆ, ಈ ರಸ್ತೆಯಲ್ಲಿ ಅದ್ಹೇಗೆ ತೋರಿಸುವದು

ರಾಜು– ತೋರಿಸುವದು ಬೇಡ, ನೇರವಾಗಿ ನನ್ನ ಅಪ್ಪು, ನೀನು ಹೆಣ್ಣೋ, ಗಂಡೋ ಎಂಬುದು ನಾ ಅರ್ಥ ಮಾಡಿಕೊಳ್ಳುವೆ

ಗೀತಾ– Oh god, ಇದೆಂಥಾ ಕರ್ಮ, ಆಗಲಿ ಮಹಾರಾಯಳೆ ನೀನು ಅಪ್ಪು,

ರಾಜು– (ಅಪ್ಪಿ ಗಂಡು ಧ್ವನಿಯಲ್ಲಿ) good beautiful, wonderful ಹಾಯ್, ಹಾಯ್

ಗೀತಾ– (ದೂರ ನೂಕಿ) ಎಲ್ಲಾ ನೀನಾ you noughty

ರಾಜು– Sorry ಗೀತಾ excuse me

ಗೀತಾ– ನನಗೇನೆ ಈ ರೀತಿ ಮೋಸ ಮಾಡುವೆಯಾ?

ರಾಜು– ಮತ್ತೆ, ನೀನೇಕೆ ಈ ರೀತಿ ಡ್ರೆಸ್ ಹಾಕಿಕೊಂಡು ಹ್ಯಾಟು, ಪ್ಯಾಂಟು..

ಗೀತಾ– ಇದೆಲ್ಲಾ ನಿನಗಾಗಿ ಅಲ್ಲ ಕಣೊ, ಈ ಕಾಲದ ಲೋಫರ್ ಬಚ್ಚಾಗಳಿಂದ ಬಜಾವು ಆಗುವದಕ್ಕಾಗಿ ತಿಳಿಯಿತಾ?

ರಾಜು– ವ್ಹಾರೆ ಖಿಲಾಡಿ, ಲೇ ನನ್ನ ಮೇಲೆ ಕೋಪವಿಲ್ಲ ತಾನೆ?

ಗೀತಾ– ಇಲ್ಲ ದೊಸ್ತ ಮಜಾ ಬಂತು

ರಾಜು– ನಿಜವೆ ಗೀತಾ?

ಗೀತಾ– ನಿಜ ಕಣೋ, ಇಂದಿನಿಂದ ನಾವಿಬ್ಬರೂ ಆತ್ಮಿಯ ಗೆಳೆಯರು

ರಾಜು– ಹಾಗಿದ್ದರೆ ತಡವೇಕೆ come on dear, ಹಾಡಿ ಕುಣಿಯೋಣ (ಡಾಯಲಾಗ ಹಾಡಿ ಹೋಗುವರು. ಇತ್ತಲಿಂದ ವಿಕ್ರಮ್ ಸಂಗಯ್ಯ, ಲಿಂಗಯ್ಯ ಪ್ರವೇಶ)

ಲಿಂಗಯ್ಯ– ನೋಡಿ ಬಾಸ್, ಈ ರಸ್ತೆಯ ಕೊನೆಯಲ್ಲಿರುವದೇ ಆ ಮಹಾದೇವಪ್ಪ ಮಾಸ್ತರರ ಮನೆ

ವಿಕ್ರಮ– ಲಿಂಗೂ, ಫೀಲ್ಡ್ ಸರಿಯಾಗಿ ಸಜ್ಜುಗೊಳಿಸಿರುವೆ ತಾನೆ?

ಲಿಂಗಯ್ಯ– ಅದರ ಬಗ್ಗೆ ನೀವು ನಿಶ್ಚಿಂತರಾಗಿರಿ

ವಿಕ್ರಮ– ಆ ಮನೆಯಲ್ಲಿ ಅಪಾಯಕಾರಿ ವ್ಯಕ್ತಿಗಳಾರೂ ಇಲ್ಲ ತಾನೆ?

ಲಿಂಗಯ್ಯ– ಆ ಮಹಾದೇವಪ್ಪ ನಿವೃತ್ತ ಶಿಕ್ಷಕ, ಹಲ್ಲು ಕಿತ್ತಿದ ಹಾವು. ಇನ್ನು ಆ ಹುಡುಗಿಯ ಅಣ್ಣ ಮಹೇಶನಂತೂ ನಿರುದ್ಯೋಗಿ, ತಂಗಿಯ ಮದುವೆಯಾದರೆ ಸಾಕೆಂದು ಜಪ ಮಾಡುತ್ತಿದ್ದಾನೆ

ವಿಕ್ರಮ– ಮತ್ತೆ ನೆರೆಹೊರೆ, ನೆಂಟರು, ಬೀಗರು ಯಾರಾದರೂ..

ಲಿಂಗಯ್ಯ– ಹಿಂದಿಲ್ಲ, ಮುಂದಿಲ್ಲ, ಅವರಿಗಿದ್ದದ್ದು ಆ ಮನೆಯೊಂದೆ, ಅದನ್ನೆ ಮಾರಿ ವರದಕ್ಷಿಣೆಯ ಹಣ ಹೊಂದಿಸಬೇಕು

ವಿಕ್ರಮ– ಆ ಹುಡುಗಿ ಹೇಗೆ?

ಲಿಂಗಯ್ಯ– ಅಪ್ಪಟ ಅಪರಂಜಿ ಸರ್, ಕೈ ತೊಳೆದುಕೊಂಡು ಮುಟ್ಟಬೇಕು,

ನೀವು ಮನಸ್ಸು ಮಾಡಿದರೆ ಖಾಯಂ ಆಗಿ ಇಟ್ಟುಕೊಳ್ಳಬಹುದು.

ವಿಕ್ರಮ– Shut up you fool. ಅದೆಂಥಾ ಅಪರೂಪದ ಅಪ್ಸರೆಯಾಗಿದ್ದರೂ ಈ ವಿಕ್ರಮ ಉಪಯೋಗಿಸಿಕೊಳ್ಳುವದು ಕೇವಲ ಒಂದೇ ಒಂದು ವಾರ

ಲಿಂಗಯ್ಯ– ನನಗೆ ಗೊತ್ತು ಬಾಸ್.. ಕ್ಷಮಿಸಿ

ವಿಕ್ರಮ– ಸರಿ ನಾಳೆ ಈ ಹಕ್ಕಿ..

ಲಿಂಗಯ್ಯ– ಮುಂಬೈಯಲ್ಲಿ ಮಾರಿದರೆ ಹತ್ತು ಲಕ್ಷಕ್ಕೆ ಮೋಸವಿಲ್ಲ. ಅರಬಶೇಖ್ ಅವರ ಕಣ್ಣಿಗೆ ಹಾಕಿದರೆ ಇಪ್ಪತ್ತು ಲಕ್ಷ ಕಣ್ಮುಚ್ಚಿ ಕೊಡುವರು

ವಿಕ್ರಮ– ಪರೀಕ್ಷಿಸಿ ನೋಡೋಣ ಬನ್ನಿ

ಲಿಂಗಯ್ಯ– ಬಾಸ್ ನಾವೀಗ ಹೋಗುತ್ತಿರುವದು ವಧು ಪರೀಕ್ಷೆಗೆ, ವರನಾದ ತಾವು

ವಿಕ್ರಮ– ಸಮೀಪದಲ್ಲಿ ಯಾವುದಾದರೊಂದು ಲಾಡ್ಜ್ ಇದೆ ಏನೊ ನೋಡು, ಬಟ್ಟೆ ಬದಲಾಯಿಸಿಕೊಳ್ಳೋಣ, ರಿಪ್ರೆಶ್ ಆಗಿಯೇ ಹೋಗೋಣ

ಸಂಗಯ್ಯ– ಅದೊ ಅಲ್ಲಿ ಕಾಣುತ್ತಿದೆ ಬಾಸ್ ಬನ್ನಿ ಹೋಗೋಣ (ಹೋಗುವರು)

ಕೇದಾರನಾಥ– (ಇತ್ತಲಿಂದ ಬರುತ್ತ) My daughter ಗೀತಾ ಮಾರ್ಕೆಟಿಗೆ ಹೋಗಿ ಮೂರು ತಾಸಾದರೂ ಮನೆಗೆ ಮರಳಿ ಬಂದಿಲ್ಲವೆಂದರೆ, lazy girl too useless. ಡಿಸಿಪ್ಲೇನ್ ಅನ್ನೊದೆ ಗೊತ್ತಿಲ್ಲ, ಟೈಮ ಸೆನ್ಸ್ ಅಂತೂ ಮೊದಲೆ ಇಲ್ಲ, ಇತ್ತಿತ್ತಲಾಗಿ ಇವಳ ಚಟುವಟಿಕೆ ಹೆಚ್ಚಾಗಿತೊಡಗಿದೆ. ಹರೆಯದ ಮಬ್ಬು ತಲೆಗೇರಿದಂತಿದೆ, ಇಷ್ಟು ದಿನ ಹೊರಗಡೆ ತಿರುಗಾಡಿ ಸುಸ್ತಾಗಿ ಬಂದು ಕೂಡುತ್ತಿದ್ದವಳು ಈಗ ನವಿಲಿನಂತೆ ಕುಣಿದಾಡುತ್ತಿದ್ದಾಳೆ, ಮುಖದ ಬಣ್ಣ ಕೂಡಾ ಗುಲಾಬಿಯ ಹೂವಿನಂತೆ ರಂಗೇರ ತೊಡಗಿದೆ. ಯಾವ ಮತ್ಥಾಳನ ಗೆಳೆತನವೇನಾದರೂ ಆಗಿರಬಹುದೆ, ಈ ಟೀನ್ ಏಜಿನ ಹುಡುಗಿಯರು ಹೀಗೇ ಅಂತ ಹೇಳಲು ಬರುವಂತೆಯೇ ಇಲ್ಲ, ಆದಷ್ಟು ಬೇಗ ಇದರ ಒಂದು ವ್ಯವಸ್ಥೆ ಮಾಡಲೇಬೇಕು (ಹೋಗುವನು).

===**=====**===

ಪ್ರವೇಶ–೫

ಮಹಾದೇವಪ್ಪನ ಮನೆ

ಮಹಾ– (ಕುರ್ಚಿ ಹಾಕಿ) ಮಹೇಶ

ಮಹೇಶ– (ಹೊರಬರುತ್ತ) ಬಂದೆ ಅಪ್ಪಾ

ಮಹಾ– ಉಪಾಹಾರ ಸಿದ್ಧವಾಯಿತೆ?

ಮಹೇಶ– ಎಲ್ಲಾ ರೆಡಿಯಾಗಿದೆಯಪ್ಪ, ವರನ ಕಡೆಯವರು ಬರುವದೊಂದೆ ಬಾಕಿ

ಮಹಾ– ಸರಿ, ತಂಗಿಗೆ ಆದಷ್ಟು ಬೇಗ ಅಲಂಕರಿಸಿಕೊಳ್ಳಲು ಹೇಳು. ಅವರು ಬಂದ ನಂತರ ಕಾಯಿಸುವದು ಸರಿ ಅಲ್ಲ

ಮಹೇಶ– ಆಯಿತಪ್ಪ (ಒಳಹೋಗಿ ಬಂದು ಹೊರ ಹೋಗುವನು)

ಮಹಾ– ಹೇ ಭಗವಂತಾ.. ನಿನಗೆ ಕೈ ಮುಗಿವೆ ತಂದೆ, ಈ ಸಂಬಂಧ ಕುದುರುವಂತೆ ಮಾಡು, ಈ ಬಡವರ ಮೇಲೆ ಕೃಪೆ ತೋರು

ಮಹೇಶ– (ಬರುತ್ತ) ಅಪ್ಪಾ ವರನ ಕಡೆಯವರು ಬಂದರು

ಮಹಾ– ಸಂತೋಷ ಬನ್ನಿ (ಮೂವರು ಸಭ್ಯತೆಯ ಡ್ರೆಸ್ಸಿನಲ್ಲಿ ಪ್ರವೇಶಿಸಲು) ಇತ್ತ ದಯ ಮಾಡಿಸಿ (ಕುಳಿತುಕೊಳ್ಳುವರು)

ಲಿಂಗಯ್ಯ– ಏನು ಮಹಾದೇವಪ್ಪನವರೆ ಎಲ್ಲಾ ಸೌಖ್ಯವೆ?

ಮಹಾ– ತಮ್ಮ ದಯದಿಂದ ಸರ್ವವೂ ಕ್ಷೇಮ ಬುದ್ಧಿ.

ಲಿಂಗಯ್ಯ– ಎಲ್ಲಾ ರೆಡಿಯಾಗಿದೆ ತಾನೆ?

ಮಹಾ– ಎಲ್ಲಾ ಸಿದ್ಧವಾಗಿದೆ ಪೂಜ್ಯರೆ, ತಮ್ಮ ಆಗಮನದ ನಿರೀಕ್ಷೆಯಲ್ಲಿದ್ದೆವು

ಲಿಂಗಯ್ಯ– ಸರಿ ಸಂತೋಷ, ಇವರೆ ನೋಡಿ ವರನ ತಂದೆ ಶ್ರೀ ಕುಬೇರಪ್ಪ ಕಟುಕ ರಕ್ಷಣಿ, ಊರು ಲಾವಾರ್ಸಿ, ತಾಲ್ಲೂಕಾ ಬೇವಾರ್ಸಿ, ಜಿಲ್ಲಾ ಪಡಪೋಸಿ, ಸಾವಿರಾರು ಎಕರೆ ತೋಟ ಪಟ್ಟಿ ಇರುವದೆಲ್ಲಾ ಸಿಕ್ಕಿಂ ಭೂತಾನದಲ್ಲಿ

ಸಂಗಯ್ಯ– ಸದ್ಯ ಹೆಡ್‌ಕ್ಯಾಂಪ್ ಇರುವದು ಹೈದ್ರಾಬಾದ್ ಸಿಕಿಂದಿರಾಬಾದ ಮಧ್ಯದ ಮುರಾದಾಬಾದನಲ್ಲಿ

ಲಿಂಗಯ್ಯ– ಅಲ್ಲಿ ಅರವತ್ತು ಎಕರೆ ಎಸ್ಟೇಟ ಉಂಟು

ಮಹಾ– ಸಂತೋಷ ನಮಸ್ಕಾರ

ಸಂಗಯ್ಯ– ದಂಡಮು ಪಂತಲುಗಾರು, ದಂಡಮು

ಲಿಂಗಯ್ಯ– ಇವರೇ ವರ ಅರ್ಥಾತ ನಿಮ್ಮ ಅಳಿಯನಾಗುವವರು ಮಹಾ ಉದಾರಿ, ಪರೋಪಕಾರಿ, ಶ್ರೀರಾಮಚಂದ್ರನ ಅಪರಾವತಾರಿ ಶ್ರೀ ಶ್ರೀ ವಿಕ್ರಮರಾಯರು, ಇಂಟರ್‌ನ್ಯಾಶನಲ್ ಎಕ್ಸ್‌ಪೋರ್ಟರ್ಸ್, ಇಂಪೋರ್ಟರ್ಸ್ ಬಿಜನೆಸ್‌ಮ್ಯಾನ

ಮಹಾ– ತುಂಬ ಸಂತೋಷ ನಮಸ್ಕಾರ

ವಿಕ್ರಮ– ವಣಕ್ಕುಂ

ಲಿಂಗಯ್ಯ– ಹಾಂ ಗಾಬರಿಯಾಗದಿರಿ, ಇವರು ಸದಾ ಖರೀದಿ ವಿಕ್ರಿ ಮಾಡುತ್ತ ದಕ್ಷಿಣ ಭಾರತದ ಎಲ್ಲಾ ಸ್ಟೇಟಗಳಲ್ಲೂ ಅಡ್ಡಾಡುವದರಿಂದ ಕನ್ನಡ, ತೆಲುಗು, ತಮಿಳು, ಮಲಯಾಳಂ ಮುಂತಾದ ಭಾಷೆಗಳನ್ನು ಚೆನ್ನಾಗಿ ಬಲ್ಲವರು, ಹೀಗಾಗಿ..

ವಿಕ್ರಮ– ಕ್ಷಮಿಸಿ, ನಮಸ್ಕಾರ

ಮಹಾ– ಸಂತೋಷ ತುಂಬ ಸಂತೋಷ. ಮಹೇಶ....

ಮಹೇಶ– ತಂದೆ ಅಪ್ಪಾ (ಒಳಹೋಗಿ ಚಹ ತಂದು ಕೊಡುತ್ತ) ಬಡವರ ಆತಿಥ್ಯ, ದೊಡ್ಡ ಮನಸ್ಸು ಮಾಡಿ ಸ್ವೀಕರಿಸಬೇಕು (ಕುಡಿಯುವರು)

ಸಂಗಯ್ಯ– ಮಹಾದೇವಪ್ಪನವರೆ, ಹುಡುಗಿಯನ್ನು ತೋರಿಸುವ ಶಾಸ್ತ್ರ

ಮಹಾ– ಆಗಲಿ ರಾಯರೆ, ಮಹೇಶ ತಂಗಿಯನ್ನು ಕರೆತಾ ಮಗು

ಮಹೇಶ– ಆಗಲೆಪ್ಪಾ (ಕರೆ ತಂದು ಕೂಡಿಸುತ್ತಿರಲು)

ವಿಕ್ರಮ– (ಎದ್ದು) ಕ್ಷಮಿಸಿ, ಹುಡುಗಿ ಕೂಡುವದು ಬೇಡ, ನಿಂತೆ ಇರಲಿ ದಯವಿಟ್ಟು ತಪ್ಪು ತಿಳಿಯದಿರಿ, ಮದುವೆಯಾಗಬೇಕಿದ್ದ ಹುಡುಗಿ ಮುದುಡಿ ಕುಳಿತರೆ, ಅವಳ ಅಂಗಾಂಗಗಳ ಸೌಂದರ್ಯ ಎದ್ದು ಕಾಣದು. ಆಕಾರ ನಿಲುವು ಏನೊಂದೂ ಗೊತ್ತಾಗದು

ಸಂಗಯ್ಯ– ಲೋಪ ದೋಷಗಳಂತೂ ಪತ್ತೆಯೇ ಹತ್ತದು

ವಿಕ್ರಮ– you are correct daddy, ಮೊದಲೆ ಸರಿಯಾಗಿ ಪರೀಕ್ಷಿಸಿ ನೋಡಿ ಮದುವೆಯಾಗುವದೇ ಒಳ್ಳೆಯದು. ಆಮೇಲೆ ಪಶ್ಚಾತಾಪ ಪಡುವ ಪ್ರಸಂಗವೇ ಬಾರದು

ಸಂಗಯ್ಯ– ನಿಜ my son, ಚಿನ್ನಾಗಿ ನೋಡಿಕೊ ಸಂಕೋಚ ಬೇಡ, ನಾಳೆ ಮದುವೆಯಾಗುವವ ನೀನು, ಅದು ಚೆನ್ನಾಗಿಲ್ಲ ಇದು ಸರಿಯಾಗಿಲ್ಲ ಅನ್ನಬಾರದು

ವಿಕ್ರಮ– ಆಗಲಿ ಅಪ್ಪಾಜಿ, ಮಿಸ್ ಮುಖವೆತ್ತಿ ನನ್ನ ನೋಡಿ (ಗಂಗಾ ಮುಖ ಎತ್ತಲು) good ಅಡ್ಡಿಯಿಲ್ಲ, ಒಂದು ಸಲ ನಿಂತಲ್ಲೆ ಸೆರಗಿನಿಂದ ಗಾಳಿ ಹಾಕಿಕೊಳ್ಳತ್ತ ರೌಂಡ್ ಹಾಕಿ (ಗಂಗಾ ತಲೆ ತಗ್ಗಿಸಿ ನಿಲ್ಲಲು)

ಮಹೇಶ– ನಾಚಿಕೆ ಪಡದಿರು ತಂಗಿ, ಇವರು ನಾಳೆ ನಿನ್ನ ಗಂಡನಾಗುವವರು, ಅವರು ಹೇಳಿದಂತೆ ನಿಂತಲ್ಲೆ ಒಂದು ಸುತ್ತು ಹಾಕು (ಎದೆ ಕಾಣುವಂತೆ ಒಂದು ಸುತ್ತು)

ವಿಕ್ರಮ– Good, ಈ ಫಿಗರ್ ನನಗೆ ತುಂಬ ಒಪ್ಪಿಗೆ, ನೃತ್ಯ ಸಂಗೀತವೇನಾದರೂ.

ಮಹಾ– ನಮ್ಮದು ಸಂಪ್ರಾದಾಯಸ್ತರ ಮನೆತನ. ಒಂದೆರಡು ದೇವರ ನಾಮ ಸುಸ್ರಾವ್ಯವಾಗಿ ಹಾಡುತ್ತಾಳೆ, puc ಕೂಡ ಪಾಸಾಗಿದ್ದಾಳೆ.

ವಿಕ್ರಮ– ಸರಿ ನಿನ್ನ ಹೆಸರು

ಮಹೇಶ– ನನ್ನ ತಂಗಿಯ ಹೆಸರು ಗಂಗಾ ಅಂತ

ವಿಕ್ರಮ– What ನಿನ್ನ ತಂಗಿ ಮೂಕಿಯೇ? Sorry ಈಗ ಹೇಳಿ ನಿಮ್ಮ ಹೆಸರು?

ಗಂಗಾ– ನನ್ನ ಹೆಸರು ಗಂಗಾ

ವಿಕ್ರಮ– ನನ್ನ ಬಾಳ ಗೆಳತಿಯಾಗಲು ನಿನಗೆ ಒಪ್ಪಿಗೆಯೇ?

ಗಂಗಾ– ಹಿರಿಯರು ಒಪ್ಪಿದರೆ ನನ್ನ ಒಪ್ಪಿಗೆಯೂ ಇದೆ

ವಿಕ್ರಮ– ಸರಿ (ಕೂಡುತ್ತ) ಡ್ಯಾಡಿ ನನಗೆ ಹುಡುಗಿ ಒಪ್ಪಿಗೆ ಆಗಿದೆ, ತಾವು ಮುಂದಿನ ಮಾತಾಡಿ

ಲಿಂಗಯ್ಯ— ಗಂಗಮ್ಮಾ ನೀನಿನ್ನು ಒಳಗಡೆ ಹೋಗು (ಹೋಗುವಳು) ಏನರಿ ಮಹಾದೇವಪ್ಪನವರೆ, ನಮಗಂತೂ ಹುಡುಗಿ ಪಸಂದ ಆಯ್ತು, ಮುಂದ ಏನಂತಿರಿ?

ಮಹಾ— ನಾನು ಬಡವ ಆದರೂ ಶಕ್ತಿ ಮೀರಿ ಖರ್ಚು ಮಾಡಿ ಅಕ್ಷತೆ ಹಾಗಿ ಕೊಡುವೆ, ತಾವು ದೊಡ್ಡ ಮನಸ್ಸು ಮಾಡಿ..

ಸಂಗಯ್ಯ— ನಾವು ದೊಡ್ಡವರು ನಮ್ಮ ಮನಸ್ಸೂ ದೊಡ್ಡದು ನಿಜ, ಆದರೆ ನೀವು ಮದುವೆಗಾಗಿ ಕಂಡಂತೆ ಖರ್ಚು ಮಾಡದೆ, ಸರಳವಾಗಿ ಮುಗಿಸಿ, ವರದಕ್ಷಣೆಯ ಒಂದು ಲಕ್ಷದೊಂದಿಗೆ ಒಟ್ಟು ಒಂದೂವರೆ ಲಕ್ಷ ಕೊಟ್ಟು ಬಿಡಿ ಸಾಕು, ನೀವು ಹೆಚ್ಚಿಗೆ ಕೊಟ್ಟರೂ ನಮಗೆ ಬೇಕಾಗಿಲ್ಲ

ಮಹಾ— (ಗಾಬರಿ) ಏನೆಂದಿರಿ, ವರದಕ್ಷಿಣೆ ಒಂದೂವರೆ ಲಕ್ಷವೇ

ಸಂಗಯ್ಯ— ಅರೆ ಅಷ್ಟು ಹಣ ಕೊಡಲು ನೀವು ಒಪ್ಪಿರುವಿರಿ ಎಂದು ಹೇಳಿಯೇ ಈ ದಲಾಲ ಇಲ್ಲಿಗೆ ಕರೆತಂದಿರುವನಲ್ಲ, ಯಾಕಲೆ ಅಯ್ಯ..?

ಲಿಂಗಯ್ಯ— ಹೌದು ಯಜಮಾನರೆ, ಇವರು ಒಪ್ಪಿದ್ದು ನಿಜ ಏನಪಾ ಮಹೇಶ? ಸುಮ್ಮನೆ ನಿಂತಿಯಲ್ಲ ಅವತ್ತು ನೀ ಅಂದಿಯೋ ಇಲ್ಲೊ?

ಮಹೇಶ— ಏನೊ ಐವತ್ತು, ಅರವತ್ತು ಸಾವಿರವಾದರೆ..

ಲಿಂಗಯ್ಯ— ನಿಂದೇನು ನಾಲಿಗೆ ಆದಾ ಏನ್ ಎಕ್ಕಡದ ತೊಗಲು ಅದೊ ತಮ್ಮಾ? ಏನ್ ಮಾತ ಇದು?

ಮಹಾ— ಪೂಜ್ಯರೆ, ಮಹೇಶ ಅಂದು ಆವೇಶದಲ್ಲಿ ಅಂದ ಮಾತನ್ನೆ ತಾವು..

ಸಂಗಯ್ಯ— ನಿಮ್ಮ ಆವೇಶ ಉದ್ದೇಶ ನಮಗ ಬೇಕಾಗಿಲ್ಲರಿ ಮಾಸ್ತರ್ರೆ ಹಾಂಗ ನೋಡದರ ನನ್ನ ಮಗ ವರದಕ್ಷಿಣೆದಂಥಾ ಹೊಲಸು ದುಡ್ಡ ಕೈಲಿಂದ ಕೂಡಾ ಮುಟ್ಟೊದಿಲ್ಲ, ನಾವೇ ಸಭಾ ಮರ್ಯಾದೆಗಂತ ಕೇಳ್ತಾ ಇದ್ದಿದ್ದು ನಿಮ್ಮ ಹಸ್ತಿ ಇತ್ತೂ ಅಂದರ ಹೂಂ ಅನ್ರಿ, ಇಲ್ಲದರ ನಡದೆವು.

ಮಹಾ— ಒಂದು, ಒಂದೂವರೆ ಲಕ್ಷವೆಂದರೆ.

ಲಿಂಗಯ್ಯ— ಇವತ್ತು ನಾಳೆ ದನಕಾಯೊ ಪಾರಗೋಳು ತಗೊಲಾಕತ್ತ್ಯಾವರಿ, ನೆಂಟಸ್ತನ ಅಂದಮ್ಯಾಲ ದಾರಾ ಹೊಡದಂಗ ಮಾತಾಡದರ ನಡಿತಾದಾ, ಬೈತಕದಾಗ ಪಾಚ ಪನ್ನಾಸ ಹೆಚ್ಚೂ ಆಗ್ತಾದ, ಕಮ್ಮೀನೂ

ಆಗ್ತಾದಾ ಏನಂತಿರಿ ಹೇಳರಿ?

ಸಂಗಯ್ಯ– ಆಗತಿದಿಲ್ಲಂದರ ಖುಲ್ಲಂ ಖುಲ್ಲಾ ಹೇಳರಿ ನಮಗೇನು ಸಿಟ್ಟಿಲ್ಲ, ಕೋಪಾ ಇಲ್ಲ, ಏಳು ಮಗಾ ಹೋಗಾಮಿ (ಎಲ್ಲರೂ ಎದ್ದು ನಿಲ್ಲಲು)

ಮಹೇಶ– ದಯವಿಟ್ಟು ಕುಳಿತುಕೊಳ್ಳಿ, ಹೇಗಾದರೂ ಮಾಡಿ ಒಂದು ಲಕ್ಷ ಹೊಂದಿಸಿ ಕೊಡುವೆವು

ಸಂಗಯ್ಯ– ಎಂಥಾ ಕಂಗಾಲ ನೆಂಟಸ್ಥನ ತಂದೆಲೆ ಅಯ್ಯ

ಲಿಂಗಯ್ಯ– ಒಂದು ಲಕ್ಷ ನಗದಿ ಕೊಟ್ಟು ಉಳಕಿದ್ದು ನಿಮ್ಮ ತಿಪ್ಪಲ ನೀವು ನೋಡಕೋರಿ, ಒಪ್ಪಿಗಿನಾ

ಮಹೇಶ– ಆಗಲಿ, ನಮಗೆ ಒಪ್ಪಿಗೆಯಿದೆ (ಕೂಡುವರು)

ಮಹಾ– ಮಹೇಶ

ಮಹೇಶ– ಅಪ್ಪಾ ನನಗಿರುವವಳು ಒಬ್ಬಳೇ ತಂಗಿ, ಆಕೆಗಾಗಿ ನಾನು ಜೀವವನ್ನೆ ಕೊಡಬಲ್ಲೆ, ಈ ಮನೆ ಏನು ಮಹಾ, ನೀವು ಹೂಂ ಎನ್ನಿ

ಮಹಾ– ನಾಳೆ..

ಮಹೇಶ– ನಡು ಬೀದಿಯಲ್ಲಿ ನಿಂತರೂ ಅಡ್ಡಿಯಿಲ್ಲ; ದೇವರಿಚ್ಛೆ ನೀವು ಒಪ್ಪಿಕೊಳ್ಳಿ

ಮಹಾ– ಆಗಲಿ, ನಮಗೆ ಈ ಸಂಬಂಧ ಒಪ್ಪಿಗಿಯಿದೆ ರಾಯರೆ, ಮುಂದಿನದನ್ನು ನೋಡಿಕೊಳ್ಳಿ

ಲಿಂಗಯ್ಯ– ಎಲ್ಲಾ ನೋಡಿಕೊಳ್ಳಬೇಕಾದವರು ನೀವು, ಈ ಕಾಲಕ್ಕೆ ಹೇಣ್ಣಿನೋರು ಹಣಾ ಕೊಟ್ಟಾಗಲೆ ಗಂಡಿನೋರ ಮನಿ ಸುಣ್ಣಾ ಬಣ್ಣಾ ಕಾಣೋದು, ನಾವು ಅಕ್ಷತಾ ದಿವಸ ಬರ್ತಿವಿ, ಹೆಣ್ಣು ಹಣಾ ತಗೊಂಡು ಹೋಗ್ತಿವಿ ಅಷ್ಟೆ

ಮಹಾ– ಆಗಲಿ ತಮ್ಮಿಷ್ಟ

ಲಿಂಗಯ್ಯ– ಅಂದ ಹಾಗೆ ಮುಂದಿನ ಶುಕ್ರವಾರ ಒಳ್ಳೆ ಮುಹೂರ್ತ

ಮಹಾ– ಅಂದೆ ಅಕ್ಷತಾ ಕಾರ್ಯ ಇಟ್ಟುಕೊಳ್ಳೋಣ, ನಮಗೆ ಒಪ್ಪಿಗೆಯಿದೆ

ಸಂಗಯ್ಯ– ಅಂದಮ್ಯಾಲ ಮುಗಿತಲ್ಲರಿ, ನಡಿರಿ ಹೋಗೋಣ ಬಾ ಮಗಾ (ಹೋಗುವರು)

ಮಹಾ— ಮಹೇಶ..

ಮಹೇಶ— ಬಾರದು ಬಪ್ಪದು, ಬಪ್ಪದು ತಪ್ಪದು.. ನಾಳೆ ಕೋಟಿ ಸುರಿದರೂ ಇಂಥಾ ಸಂಬಂಧ ಸಿಗಲಾರದು, ಇಂಥಾ ಸುವರ್ಣಾವಕಾಶ ತಾನಾಗಿ ಮನೆ ಬಾಗಿಲಿಗೆ ಬಂದಿರುವಾಗ

ಮಹಾ— ಆಗಲೆಪ್ಪಾ ನಾನು ಶೆಟ್ಟಿ ಸಾಹುಕಾರರಿಗೆ ಭೆಟ್ಟಿಯಾಗಿ ಬರುವೆ (ಹೊರ ಹೋಗುವನು)

ಗಂಗಾ— (ಹೊರ ಬಂದು) ಅಣ್ಣಾ, ನನಗೆ ಈ ಮದುವೆ ಬೇಡಪ್ಪಾ ದಯವಿಟ್ಟು ಈ ಸಂಬಂಧ ಮುರಿದು ಬಿಡು

ಮಹೇಶ— ಏಕೆ ತಂಗಿ, ಪುಣ್ಯಕ್ಕೆ ಇಂಥಾ ಸುಶಿಕ್ಷಿತ ಹಾಗೂ ಶ್ರೀಮಂತ ವರ ಸಿಕ್ಕಿರುವಾಗ..

ಗಂಗಾ— ಇದು ಪುಣ್ಯವಲ್ಲಣ್ಣ ಮಹಾಪಾಪ, ಹುಟ್ಟಿ ಬೆಳೆದ ಮನೆ ಮಾರಾಟ ಮಾಡಿಸಿ ಮದುವೆಯಾಗುವ ನಾನೂ ಒಂದು ಹೆಣ್ಣೇ, ಆ ಶ್ರೀಮಂತಿಕೆಗೆ ಬೆಂಕಿ ಹಚ್ಚು, ಯಾರಾದರೊಬ್ಬ ಬಡವನಿಗೆ ಕೊಡು ದುಡಿದು ತಿನ್ನುವೆ, ಈ ಸಂಬಂಧ ಮಾತ್ರ ಸರ್ವಥಾ ಬೇಡ

ಮಹಾಶ— ನನ್ನ ಮಾತು ಕೇಳು ತಂಗಿ

ಗಂಗಾ— ಹುಲಿಯಾಗಲು ಹೊರಟ ನರಿ ತನ್ನ ಮೈ ಸುಟ್ಟುಕೊಂಡು ಸತ್ತಂತೆ, ವ್ಯಥಾ ಈ ರೀತಿ ಹಾಳಾಗುವದರಲ್ಲಿ ಯಾವ ಪುರುಷಾರ್ಥವಿದೆ ಹೇಳಣ್ಣಾ?

ಮಹೇಶ— ಹುಚ್ಚಮ್ಮಾ, ನಾಳೆ ನನಗೊಂದು ಒಳ್ಳೆಯ ನೌಕರಿ ಸಿಕ್ಕರೆ ಇಂಥಾ ಹತ್ತು ಮನೆ ಕಟ್ಟಿಸಬಲ್ಲೆ, ಆದರೆ ಇಂಥಾ ಸಂಬಂಧ ಕೈ ತಪ್ಪಿದರೆ ಮತ್ತೆಂದೂ ದೊರೆಯದು

ಗಂಗಾ— ದೊರಯದಿದ್ದರೂ ಚಿಂತೆಯಿಲ್ಲ, ಬಡವರಾದರೂ ಸುಖಿಗಳಲ್ಲವೆ? ನಾಳೆ ದೇವರೊಲುಮೆಯಿರಲು ಬಡವಂ ತಾಂ ಬಲ್ಲಿದ ನಾಗನೆ?

ಮಹೇಶ— ಇದು ಕೂಡ ಆತನ ಒಲುಮೆ ಎಂದೆ ತಿಳಿ ತಂಗಿ, ದಯವಿಟ್ಟು ಒಪ್ಪಿಕೊ

ಗಂಗಾ— ಆಗಲೆಪ್ಪಾ ನನ್ನಪ್ಪ

ಮಹೇಶ— Good ನನ್ನ ತಂಗಿ ಬಲು ಜಾಣೆ, ಎಲ್ಲಿ ಒಂದು ಸಲ ನಗು ನೋಡೋಣ

ಗಂಗಾ– ಹೋಗಣ್ಣಾ

ಮಹೇಶ– ನಾಳೆ ಮದುವೆಯಾಗಿ ಮೇಮಸಾಬರು ಕಾರಿನಲ್ಲಿ ಕುರಿತು ಮೆರೆಯುವಾಗ ಈ ಬಡ ಅಣ್ಣನನ್ನು ಮರೆಯಬೇಡ ಕಣೆ

ಗಂಗಾ– ಹೋಗಣ್ಣಾ ನೀನೊಂದು..

ಮಹೇಶ– ಗಂಗಾ, ಬರುವ ಶುಕ್ರವಾರ..(ಪದ) ಮೇರಿ ಪ್ಯಾರಿ ಬಹೆನಿಯಾ, ಬನೇಗಿ ದುಲ್ಹನಿಯಾ.. (ಹಾಡಿ ಒಳ ಹೋಗಲು ತೆರೆ)

===***====***===

ಪ್ರವೇಶ–೬

ಗಾರ್ಡನ್

(ರಾಜು ಗೀತಾ ಪದ ಹಾಡುತ್ತ ವಿಹಾರ)

ರಾಜು– ಗೀತಾ ಡಾರ್ಲಿಂಗ್

ಗೀತಾ– ರಾಜು ಡಿಯರ್

ರಾಜು– ನಾವು ಸ್ವರ್ಗದಲ್ಲಿರುವೆವಲ್ಲವೆ?

ಗೀತಾ– No my dear raju, ಇದು ಪಬ್ಲಿಕ್ ಗಾರ್ಡನ್ನು

ರಾಜು– ಈ ಮಧುರ ಘಳಿಗೆ ಶಾಶ್ವತವಾಗಿರಲಿ

ಗೀತಾ– ಈ ತೋಟದ ಮರ, ಗಿಡ, ಬಳ್ಳಿಗಳೆಲ್ಲ ಇಲ್ಲಿ ಖಾಯಂ ಆಗಿಯೇ ಇರುವುದು ಡಿಯರ್. ಆದರೆ ನಾವು ಮಾತ್ರ ನೌ ದೊ ಗ್ಯಾರಾ ಆಗುವಂತಿದೆ

ರಾಜು– what ನೌ ದೊ ಗ್ಯಾರಾ? ಅದೇಕೆ?

ಗೀತಾ– ಮುಂದಿನ ತಿಂಗಳು ನನ್ನ ಮದುವೆ ಮಾಡಿ ಫಾರೆನ್ನಿಗೆ ಕಳುಹಿಸಿಕೊಡಲು ನನ್ನ ಡ್ಯಾಡಿ ನಿರ್ಧರಿಸಿದ್ದಾರೆ

ರಾಜು– ಓಫ್, ಇಷ್ಟೇನೆ, ನಾನು ಕೂಡ ನನ್ನ ತಂದೆಗೆ ಮುಂದಿನ ತಿಂಗಳಲ್ಲೆ ನನ್ನ ಮದುವೆ ಮಾಡಲು ತಿಳಿಸುವೆನಂತೆ ಆಯಿತೆ?

ಗೀತಾ– ರಾಜು ಇನ್ನು ನಮ್ಮ ಈ ಚಲ್ಲಾಟ ನಡೆಯದು

ರಾಜು– ಅದೇಕೆ ನಡೆಯದು

ಗೀತಾ– ನಾನು ಹೇಳುತ್ತಿರುವದು ರಿಯಲ್ ಫ್ಯಾಕ್ಟ್

ರಾಜು– ನಾನು ಹೇಳುತ್ತಿರುವದೇನು ಸುಳ್ಳೇ?

ಗೀತಾ– ಅಯ್ಯೋ ಮಂಕೇ, ಕಿವಿ ತೆರೆದು ಚನ್ನಾಗಿ ಕೇಳು, ನಮ್ಮ ಸೋದರತ್ತೆಯ ಮಗ ಅಮೇರಿಕಾದಿಂದ ಬರುತ್ತಿದ್ದಾನೆ, ಆತ ಬಂದ

ತಕ್ಷಣ ನಮ್ಮಿಬ್ಬರ ಮದುವೆ ಮಾಡಿ ಅಟ್ಟಿ ಬಿಡುವದೇ ನಮ್ಮ ಡ್ಯಾಡಿಯ ಮೇನ್ ಪ್ಲಾನ್

ರಾಜು– ಕ್ಯಾ ಕಹಾ? ನಿನ್ನ ಸೋದರತ್ತೆಯ ಮಗ, ಅದಾವುದೆ ಕತ್ತೆ?

ಗೀತಾ– ಅದು ಅಂತಿಂಥಾ ಕತ್ತೆಯಲ್ಲ, ಹೇಸರಗತ್ತೆ. ಅದು ಬಂದರೆ ನಾ ಸತ್ತೆ

ರಾಜು– Impossible, ಆತನ ಕತ್ತು ಹಿಚುಕಿ ಕೊಂದು ನಾನು ಜೇಲಿಗೆ ಹೋದರೂ ಸರಿ, ಈ ಮದುವೆ ಮಾತ್ರ ಆಗಗೊಡಲಾರೆ

ಗೀತಾ– ಆತನೊಂದಿಗೆ ಮದುವೆ ಆಗುವ ಆಸೆ ನನಗೂ ಇಲ್ಲ ಕಣೋ

ರಾಜು– ನಿನ್ನ ಬಿಟ್ಟು ನಾ ಬದುಕಲಾರೆ ಗೀತಾ

ಗೀತಾ– ನಿನ್ನ ಬಿಟ್ಟು ನಾನೂ ಇರಲಾರೆ ರಾಜು, But ನಾನೇನೂ ಮಾಡುವಂತಿಲ್ಲ ನನ್ನ ಡ್ಯಾಡಿ ದುರ್ವಾಸ

ರಾಜು– ತೇರೆ ಡ್ಯಾಡಿಕೆ ದಾಡಿ ಮುಂಡಾದೇಂಗೆ

ಗೀತಾ– ಓ ಕಬ್ ಔರ್ ಕೈಸೆ?

ರಾಜು– ಥತ್ ಇಸ್ಕಿ, ಸಾಲಾ ವಹಿ ಬಡಾ ಮುಸ್ಕಿಲ್ ಹೈ

ಗೀತಾ– ಲೇ ರಾಜು ಬೇಗ ಯಾವದಾದರೊಂದು ಒಳ್ಳೆಯ ಉಪಾಯ ಹುಡುಕೊ

ರಾಜು– ನನ್ನ ಖೋಪಡಿ ಅಷ್ಟು ಚುರುಕಲ್ಲ ಕಣೆ, ನೀನೆ ಒಂದು ಐಡಿಯಾ ಹುಡುಕು

ಗೀತಾ– ಈ ಗದ್ದಲದಲ್ಲಿ ಹೊಳೆಯದು ಕಣೊ, ಬಾ ಯಾವದಾದರೊಂದು ಹೋಟಲಿಗೆ ಹೋಗೆ ಒನ್ ಬೈಟೂ ಕಾಫಿ ಕುಡಿದು ಸಾವಕಾಶವಾಗಿ ಐಡಿಯಾ ಹುಡುಕೋಣ

ರಾಜು– ಅಚ್ಚಿ ಬಾತ ಹೈ ಚಲ್, ಕಾಫಿ ಕುಡಿದು ಒಂದು ಫೈನ್ ಐಡಿಯಾ ಹುಡುಕಿ, ನಿನ್ನ ಡ್ಯಾಡಿಯನ್ನು ಗ್ವಾಡಿಗೆ ಕೂಡಿಸುವದಲ್ಲದೆ, ಆ ಅಮೇರಿಕಾದ ಅಳಿಯನನ್ನು ಆಪರೇಶನ್ ಮಾಡಿ, ರಿಟರ್ನ್ ಟಿಕೇಟ್ ಕೊಟ್ಟು ಕಳುಹಿಸಿ ಬಿಡೋಣ

ಗೀತಾ– Allright, come on (ಹೋಗುವರು)

===***=====***===

ಪ್ರವೇಶ–೭

ರಸ್ತಾ

ಗೀತಾ– (ರಾಜು ಹಿಂದೆ) ರಾಜು ಯಾವುದಾದರೂ ಒಂದು ಐಡಿಯಾ ಹೊಳೆಯಿತೆ?

ರಾಜು– ಹಾಂ Yes , ಅಗ್ದಿ ಬೆಸ್ಟ್ ಐಡಿಯಾ

ಗೀತಾ– (ಹಿಗ್ಗು) ಯಾವುದೊ ಅದು? ಬೇಗ ಹೇಳೊ?

ರಾಜು– ನಾವಿಬ್ಬರು ಕೂಡಿ ಎತ್ತಲಾದರೂ ಓಡಿ ಹೋಗೋಣ

ಗೀತಾ– You hopeless, ಅದು ಮೂರ್ಖತನ, ನನ್ನ ಡ್ಯಾಡಿ ಮಾಜಿ ಮಿಲ್ಟ್ರಿ ಆಫಿಸರ್, ನಾಳೆ ಪೋಲಿಸು, ಕಾಂಪ್ಲೆಂಟು, ಅರೆಸ್ಟು ವಾರಂಟು ಅಂತಾದರೆ ಇಲ್ಲದ ತೊಂದರೆ ಬೇಡಪ್ಪಾ ಅದು ಬೇಡ.

ರಾಜು– ಬೇಡವಾ_ (ಮತ್ತೆ ವಿಚಾರ) ಹಾಗಿದ್ದರೆ, ಹಾಂ ಸಿಕ್ಕಿತು ಸಿಕ್ಕಿತು

ಗೀತಾ– ಏನೊ ಅದು?

ರಾಜು– ಒಂದು Excellent beautiful wonder ful idea ಸಿಕ್ಕಿಬಿಟ್ಟಿತು

ಗೀತಾ– ಅರೆ ಹೌದಾ, ಹಾಗಿದ್ದರೆ ಬೇಗ ಹೇಳೋ

ರಾಜು– ನಾವಿಬ್ಬರೂ ಲೈಲಾ ಮಜ್ನುವಿರಂತೆ love ಮಾಡಿದ್ದೇವೆ, ಅವರಂತೆ ಸಾಯಲು ಸಿದ್ದರಾಗಿದ್ದೇವೆ, ದಯವಿಟ್ಟು ನಮ್ಮನ್ನು ಕಾಪಾಡಿ ಅಂತ ನಿಮ್ಮ ಡ್ಯಾಡಿಯ ಕಾಲಿಗೆ ಬಿದ್ದು ಬೇಡಿಕೊಳ್ಳೋಣ ನಡೆ, ನಮ್ಮ ಮದುವೆ ಮಾಡಲೂ ಬಹುದು

ಗೀತಾ– (ಅಣಕ) ನಮ್ಮ ಮದುವೆ ಮಾಡುವದಷ್ಟೆ ಅಲ್ಲ ಸಿಮ್ಲಾ ದಾರ್ಜಿಲಿಂಗಿಗೆ ಹನಿಮೂನಿಗೂ ಕಳುಹಿಸಬಹುದು

ರಾಜು– ಹೇಗಿದೆ ನನ್ನ ಐಡಿಯಾ (ಬುಜ ತಟ್ಟಿಕೊಳ್ಳಲು)

ಗೀತಾ– ಅಗ್ದಿ ಸೂಪರ್ (ರಾಜು ಹಿಗ್ಗಿನಿಂದ ಹಲ್ಲು ಕಿಸಿಯಲು) ಮುಚ್ಚುಬಾಯಿ ಮೂರ್ಖ ಶಿರೋಮಣಿ

ರಾಜು– ಏಕೆ? ನನ್ನ ಐಡಿಯಾ ಸರಿಯಾಗಿಲ್ಲವೆ?

ಗೀತಾ– ಅಯ್ಯೋ ಅವಿವೇಕಿ, ನಮ್ಮಪ್ಪ ಉಗ್ರ ಭಯಂಕರ, ಸಿಟ್ಟು ಬಂದರೆ, ಸಾಕ್ಷಾತ ನರಸಿಂಹ, ನಿನಗೆ ಒಂದೇ ಒಂದು ಕಿಕ್ ಕೊಟ್ಟರೆ ಅರಬ್ಬಿ ಸಮುದ್ರ ಸೇರುವೆ

ರಾಜು– ಅರೆ ಬಾಪರೆ, ಹಾಗಿದ್ದರೆ ಆತನ ಸಹವಾಸವೇ ಬೇಡ, (ಇಚಾರ) ಹಾಂ ನಿಲ್ಲು, ಅಲ್ಲೊಬ್ಬ ಜಂಟಲ್‌ಮ್ಯಾನ ಬರುತ್ತಿದ್ದಾರೆ, ಅವರಿಗೇನೆ ಒಂದು ಐಡಿಯಾ ಕೇಳೋಣ

ಕುಮಾರ– (ಪ್ರವೇಶ) Hellow, lady & gentle man good morning to you,

ಗೀತಾ– Good morning sir, what can I help to you?

ಕುಮಾರ– Do you know ದಿಸ್ ಅಡ್ರೆಸ್?

ಗೀತಾ– ಹೇಳಿ ನಿಮಗೆ ಯಾರ ಅಡ್ರೆಸ್ ಬೇಕು?

ಕುಮಾರ– ನಿಮಗೆ, ಕನ್ನಡ ಗೊತ್ತಾ?

ಗೀತಾ– ಗೊತ್ತು ನಿಮಗೂ ತಿಳಿಯುತ್ತೆ ಅಲ್ಲವೆ.

ಕುಮಾರ– Some, ಥೋಡಾ ಈ ಸಿಟಿ, ನಮ್ದು ಮಾಮಾ

ಗೀತಾ– ಎಲಾ ಎಲಾ, ಈ ಸಿಟಿನೇ ನಿಮ್ಮ ಮಾಮಾನಾ, ಅದೆಂಥಾ ಸ್ಪೆಶಲ್ ಅಳಿಯನಲೇ ನೀ!

ರಾಜು– Yes.. Yes.. no.. no.... ನಂದು means ನಮ್ದು ಮಾಮಾ ಅಂದರೆ fatherinlaw ಈ ಸಿಟಿಯಲ್ಲಿ ಇತ್ತು

ಕುಮಾರ– No no alive,, ಜಿಂದಾ ಜಿಂದಾ ಅದ.

ಗೀತಾ– ಅವರ ಹೆಸರು ವಿಳಾಸ ಗೊತ್ತು ತಾನೆ?

ಕುಮಾರ– Yes yes ಅವರ ಹೆಸರು mr. ಕೇದಾರನಾಥ x ಮಿಲ್ಟ್ರಿ ಆಫಿಸರ್, ಆವಾರಾ ರೋಡ್, ಸೇವಂಟಿತ್ ಸರ್ಕಲ್, H.No. ಫೋರ್‌ಟೊಂಟಿ.

ಗೀತಾ– (ಗಾಬರಿ) What, you want mr.ಕೇದಾರನಾಥ ಎಕ್ಸ್ ಮಿಲ್ಟ್ರಿ ಕಮಾಂಡರ್

ಕುಮಾರ– Yes yes ಅಡ್ರೆಸ್ ಬತಾವು ಹಮ್ಮ ಪೈಸಾ ದೇಗಾ

ಗೀತಾ– Yes yes alright (ರಾಜುಗೆ) ರಾಜು ಹಮ್ಮ ಮರಗಯೇ

ರಾಜು– ಯಾಕೆ ಗೀತಾ, ಏನಾಯ್ತು?

ಗೀತಾ– ಈತ ಕೇಳ್ತಾ ಇದ್ದುದು ನನ್ನ ಡ್ಯಾಡಿಯ ವಿಳಾಸ

ರಾಜು– ಏನೆಂದೆ ಈತ.. ನಿನ್ನ.. ಡ್ಯಾಡಿ..

ಗೀತಾ– ಆ ಅಮೇರಿಕನ್ ಅಳಿಯ ಕುಮಾರ, ಈತನೆ ಆಗಿರಬೇಕು

ರಾಜು– ಹಾಗಿದ್ದರೆ ನಾವು ನರಕ ಸೇರಿದೆವು!

ಗೀತಾ– ಆದಷ್ಟು ಬೇಗ ಒಂದು ಉಪಾಯ ಹುಡುಕೋ ಮಂಕೇ

ರಾಜು– ಉಪಾಯ...ಉಪಾಯ..

ಗೀತಾ– ಇಲ್ಲವಾದರೆ ನಮಗೆ ಅಪಾಯ

ಕುಮಾರ– ಅರೆ, ತುಮ್ಮ ಕುಚ್ಚ ಕುಚ್ಚ ಕ್ಯಾ ಬಾತ ಕರತಾ? Are you lovers

ರಾಜು– Yes yes ಹಮ್ಮದೊನೊ lovers, lovers

ಕುಮಾರ– Good, good, best pare, beautiful girl, handsome boy, ಅಚ್ಚಾ ಜೋಡಿ (ಗೀತಾಗೆ ನೋಡಿ) what a beautiful girl

ರಾಧಾ– ಲೇ ಅದೇನಪರಿ ನೋಡಾಕತ್ತಿದ್ದಿ, ಎಂದರೆ ಎಳಿ ಖಳಿ ಹುಡುಗಿ ಮುಖಾ ಕಂಡಿದಿಲ್ಲೊ?

ಕುಮಾರ– ಏ ಮಿಸ್ಟರ್, ಹಮ ತೇರಾ ಗರ್ಲ ಫ್ರೆಂಡಕೊ ಖಾತಾನಂಹಿ, ಥೂತಾ ಬಿ ನಂಹಿ, ಸಿರ್ಫ ದೇಖತಾ

ಗೀತಾ– ಲೇ ರಾಜು, ಮೊದಲು ಎನಾದರೊಂದು ಉಪಾಯ ಹುಡುಕೊ

ರಾಜು– ಅದು ನನಗೂ ಬೇರೆ ಹೊಳಿತಾ ಇಲ್ಲ ಕಣೆ_

ಕುಮಾರ– This beautiful girl, ಕ್ಯಾ ಬೋಲ್ತಾ?

ರಾಜು– ನೀವು ಈಗ ಹೋಗುತ್ತಿರುವದು ನಿಮ್ಮ ಮಾವನ ಮನೆಗಲ್ಲವೆ?

ಕುಮಾರ– Yes yes ನಮ್ದು ಮಾಮಾ means, father in law home

ರಾಜು– ಆ ಮನೆಯಲ್ಲಿ ಒಂದು ಚಂದದ ಗೊಂಬೆ ಇದೆಯಲ್ಲವೆ?

ಕುಮಾರ– ಗೊಂಬೆ What ಗೊಂಬೆ

ರಾಜು– girl ಲಡಕಿ, ಲಡಕಿ, ನಿಮ್ಮ ಮಾವನ ಮಗಳು ?

ಕುಮಾರ– Oh yes yes ಬಿಲ್ಕುಲ್ ಕರೆಕ್ಟ್, ನಮ್ದು ವುಡ್ ಬಿ

ರಾಜು– ನಾಳೆ ಆಕೆ ಹೆಂಡತಿ, ನೀವು ಗಂಡ ಅಲ್ಲವೆ?

ಕುಮಾರ– yes yes ಆಕೆಯೇ My fair lady ಹಮ್ ಉಸೆ ಮ್ಯಾರೆಜ ಕರ್ತಾ, ಅಮೇರಿಕಾ ಜಾತಾ

ರಾಜು– ನಮ್ದು ನೀತಾ ಬೋಲ್ತಾ

ಕುಮಾರ– ಕ್ಯಾ ಬೋಲ್ತಾ?

ರಾಜು– ನೀವು ನಿಮ್ಮ ಗೀತಾ ಎದುರಿಗೆ ಈ ಗಲೀಜ ಡ್ರೆಸ್ಸಿನಾಗ ನಂಹಿ ಜಾತಾ

ಕುಮಾರ– ನಮ್ದು ಡ್ರೆಸ್ ಗಲೀಜ, It means dirty, no no quite well, ಅಚ್ಚಾ ಹೈ

ರಾಜು– ಬಿಲ್ಕುಲ್ ಡರ್ಟಿ ಅಂತ ನಮ್ದು ನೀತಾ ಬೋಲ್ತಾ

ಕುಮಾರ– What neeta, ತುಮ್ಮ ಬೋಲ್ತಾ

ಗೀತಾ– Yes yes ಹಮ್ಮ ಬೋಲ್ತಾ, yours dresses are dirty

ಕುಮಾರ– But ಹಮ ಕುಚ್ ನಂಹಿಕರ ಸಕ್ತಾ, ನಮ್ದು ಏರ್‌ಬ್ಯಾಗ, ಬಾಂಬೆ ಎರೆ ಫೋರ್ಟ ಮೆ ಚೋರಿ ಹುವಾ

ರಾಜು– ಪರವಾಯಿಲ್ಲ ನಾವು ವ್ಯವಸ್ಥಾ ಮಾಡ್ತಾ

ಕುಮಾರ– ಕ್ಯಾ ಕರ್ತಾ

ಗೀತಾ– ನೀವು ಬಿಚ್ಚಿ ಕೊಡಿ, ಈತ ಹತ್ತು ಮಿನಿಟಿನಲ್ಲಿ ಡ್ರೈಕ್ಲಿನಿಂಗ ಮಾಡಿ ಲಾತಾ

ಕುಮಾರ– What ಬಟ್ಟೆ ಬಿಚ್ಚೋದಾ? ಲಂಗಾ ನಿಲ್ಲೋದಾ?

ರಾಜು– ಒಳಗಿನ ಬಟ್ಟೆ ಇರಬಹುದಲ್ಲ?

ಕುಮಾರ– ಇವೆ But ನಿಮ್ದು ಲೇಡಿ ಎದುರಿಗೆ ಕೈಸಾ ಖೋಲತಾ?

ಗೀತಾ– ನೀವು ನಿಮದು ಲೇಡಿ ಭೆಟ್ಟಿಗೆ ಹೋಗ್ತಾ, ಬಿಡ್ತಾ?

ಕುಮಾರ– Yes Yes, ಜರೂರ ಜಾತಾ

ರಾಜು– ಅಂದರ ಜಲ್ದಿ ಬಿಚ್ಚಿತಾ, ನನ್ನ ಕೈಯಾಗ ಕೊಡ್ತಾ

ಗೀತಾ– ಕೊಡರಿ ಬೇಗ Your lady is waiting for you

ಕುಮಾರ– Yes ye ದೇತಾ (ಕಳೆಯುವವನು)

ರಾಜು– ಎ ಲಡ್ಕಿ ನೀ ಅತ್ಲಾಗ ಮುಖಾ ಮಾಡು (ಕುಮಾರ) ನೀವು ತುಂಬಾ ಜಾಣರು, ತನ್ನಿ (ಗೀತಾಗೆ ಕೊಡುತ್ತ) ಲೇ ನೀತಾ, ಬೇಗ ಹೋಗಿ ಕ್ಲೀನ್ ಮಾಡಿಸಿಕೊಂಡು ಬಾ, ಹೂಂ! ಹರಿ ಅಪ್! (ಹೋಗುವಳು) ಸರ್ ನಿಮ್ದು ಡ್ಯಾಡಿ..

ಕುಮಾರ– ನಮ್ದು ಡ್ಯಾಡಿ, ಇನ್ ಅಮೇರಿಕಾ, ಅಮೇರಿಕಾ

ರಾಜು– ಡ್ಯಾಡಿ ಅಲ್ಲ ದಾಡಿ ದಾಡಿ saving, saving

ಕುಮಾರ– (ಮುಟ್ಟಿ ನೋಡಿಕೊಂಡು) yes yes, where is saving saloon?

ರಾಜು– ಇಲ್ಲೆ ಇದೆ, ಈಗ ಕರೆತರುವೆ, ತಾವು ಇಲ್ಲೆ ನಿಲ್ಲಿ (ಹೋಗುವನು)

ಕುಮಾರ– ಹರಿ ಅಪ್! Quick (ರಾಜು ಬರದಿರಲು ನಿರಾಶನಾಗಿ) ಅರೆ ಬಾಪರೆ, ಚಳಿ, cold, ಥಂಡಿ (ನಡುಕ, ಚುಟುಕ) ಚಳಿ ಚಳಿ ತಾಳೆನು ಈ ಚಳಿಯ.. (ನಂತರ) ಹಾಂ, ಮೋಸ, ಧೋಖಾ, ಚೋರ್.. ಚಟಿರ್ (ಓಡಿ ಹೋಗುವನು, ರಾಜು ಗೀತಾ ಮರೆಯಿಂದ ಹೊರಬರುತ್ತ)

ರಾಜು– ವ್ಹಾರೆ, ಮಗನೆ! ಅಮೇರಿಕನ್ ಅಳಿಯ

ಗೀತಾ– You naughty ಅಂತೂ ಕುಮಾರನಿಗೆ ಬೆತ್ತಲೆ ಮೆರವಣಿಗೆ ಮಾಡಿಸಿಯೇ ಬಿಟ್ಟೆಯಲ್ಲ

ರಾಜು– ಅದು ಕುಮಾರ ಅಲ್ಲ, ಜೊಕುಮಾರ, ನಾಳೆಯ ಮದುವೆಗೆ ಭರ್ಜರಿ ಡ್ರೆಸ್ ಆಯಿತು

ಗೀತಾ– ಯಾರ ಮದುವೆನೋ?

ರಾಜು– ಆಗಲೆ ಮರೆತೆಯೇನು? ನಮ್ಮ ಮಹೇಶ ಭಯ್ಯಾನ ತಂಗಿ ಗಂಗಾಳ

ಮದುವೆ

ಗೀತಾ– ಅರೆ ಹೌದಲ್ಲ, ಅವಶ್ಯ ಹೋಗೋಣ ಬಾ (ಹೊರಟಿರಲು ಎದುರಿನಿಂದ ರಾಧಾ ಬರುತ್ತ)

ರಾಧಾ– ಹಲ್ಲೊ ರಾಜು

ರಾಜು– ಓ ನಮಸ್ತೆ ಮೇಮಸಾಬ!

ರಾಧಾ– ಈ ಹುಡುಗಿ ಯಾರು?

ರಾಜು– ಇವಳು.. ಮೇಮಸಾಬ.. ಇವಳು.. ನನ್ನ

ರಾಧಾ– ಗರ್ಲ್‌ಪ್ರೆಂಡ್‌ಲ್ಲವೆ? Very good ಹೆಸರೇನು?

ರಾಜು– ಹೆಸರು ಗೀತಾ ಅಂತ

ರಾಧಾ– ಅಂದರೆ ಹಿಂದೂವೆ?

ರಾಜು– ಅಲ್ಲ ಮೇಮಸಾಬ ಕ್ರಿಸಿಯನ್!

ರಾಧಾ– ತುಂಬ ಸಂತೋಷ, ಎಲ್ಲ ಮೊದಲಿಗೆ ತಿಳಿದುಕೊಂಡೆ ಪ್ರೀತಿಸಿರುವಿರಾ?

ಗೀತಾ– ಪ್ಯಾರ ಕಿ ಜಾತಿ ನಂಹಿ, ಹೋ ಜಾತಿ ಹೈ ಮೇಮಸಾಬ

ರಾಧಾ– Good ಇದೇ ಪರಿಶುದ್ಧ ಪ್ರೇಮ, ಈ ರೀತಿ ಜಾತಿ ಮತಗಳ ಭೇದವಿಲ್ಲದೆ, ವರದಕ್ಷಿಣೆಯ ಪಿಡುಗಿಲ್ಲದ ಮದುವೆಗಳು ನಡೆಯುತ್ತಿದ್ದರೆ ನಮ್ಮ ಸಮಾಜ ಮತ್ತೆ ತಲೆ ಎತ್ತಿ ತಿರುಗಬಹುದು

ರಾಜು– ಮೇಮಸಾಬ ನಾಳೆ ತಂಗಿ ಗಂಗಾಳ ಮದುವೆ

ರಾಧಾ– ನನಗೂ ಆಮಂತ್ರಣ ಉಂಟು ಅವಶ್ಯ ಬರುವೆ, bye see you (ಹೋಗುವಳು)

ರಾಜು– ಲೇ ಗೀತಾ, ಹೇಗಿರುವನು ಈ ಹುಡುಗ?

ಗೀತಾ– ಅಗ್ದಿ ತುಡುಗ (ಡಾಯಿಲಾಗ, ಹಾಡಿ ಹೋಗುವರು)

===**=====**===

ಪ್ರವೇಶ–೮

ಮಹಾದೇವಪ್ಪನ ಮನೆ

(ಗಂಗಾ, ವಿಕ್ರಂ ವಧು ವರರಾಗಿ ಕುಳಿತಿದ್ದಾರೆ. ಒಂದೆಡೆ ವರನ ತಂದೆಯಾಗಿ ಸಂಗಯ್ಯ, ದಲಾಲ ಲಿಂಗಯ್ಯ ಕುಳಿತಿದ್ದಾರೆ, ಇನ್ನೊಂದೆಡೆ ಮಹಾದೇವಪ್ಪ ಪುರೋಹಿತ ನಿಂತಿದ್ದಾರೆ)

ಲಿಂಗಯ್ಯ– ಏನ್ರಿ ಮಹಾದೇವಪ್ಪನೋರೆ, ಮುಹೂರ್ತ ಮೀರುತ್ತ ಬಂತು. ನಿಮ್ಮ ಮಗ ಬರಲೇ ಇಲ್ಲಲ್ಲ?

ಮಹಾ– ಇದೀಗ ಬರಬಹುದು ಪೂಜ್ಯರೆ

ಸಂಗಯ್ಯ– ಮದುವಿ ಅಂದರ ಏನು ಹುಡುಗಾಟಾ ಅಂತ ತಿಳ್ಕೊಂಡಿರೇನರಿ, ಸಮಯದ ಕಿಮ್ಮತ್ತು ಗೊತ್ತಾದಿಲ್ಲ!

ರಾಜು– (ಗೀತಾಳೊಂದಿಗೆ ಬರುತ್ತ) ಸರ್ವರಿಗೂ ನಮಸ್ಕಾರ. ಅರೆ ಮಹೇಶ ಭಯ್ಯಾ ಎಲ್ಲಿ ಕಾಣ್ತಾನೆ ಇಲ್ಲಲ್ಲ (ವರನಿಗೆ) ವಧು ವರರಿಗೆ ಶುಭಾಶಯಗಳು (ನೋಡಿ ಗಾಬರಿ) ಅರೆ ಆಪ್

ವಿಕ್ರಂ– ಏನೊ? ಏನು ವಿಷಯ ?

ರಾಜು– ಅರೆ ಕುಚ ನಂಹಿ, ಬಹುತ ಖೂಬ, ಬಡಿ ಖುಷಿ ಕಿ ಬಾತ ಹೈ, ಶಾದಿ ಮುಬಾರಕ ಹೊ, ಶಾದಿ ಮುಬಾರಕ ಹೊ

ಗೀತಾ– ಕಂಗ್ರ್ಯಾಜುಲೇಶನ್ಸ್ ಗಾಂಗಾ, ಮದುವೆಯ ಶುಭಾಶಯಗಳು

ವಿಕ್ರಂ– ಡ್ಯಾಡಿ, ಮದುವೆಯ ಕಾರ್ಯಕ್ರಮ ಬೇಗ ಮುಗಿಸಿ

ಸಂಗಯ್ಯ– ನಿಮಗೆ ಬುದ್ದಿಯಿದೆ ಏನರಿ, ನಿಮ್ಮ ಮಗ ಬರಲಿ, ಅತ್ಲಾಗೆ ಹೋಗಲಿ, ಅಕ್ಷತೆ ಕಾರ್ಯ ಬೇಗ ಮುಗಿಸಿ

ರಾಜು– ಅಷ್ಟು ಅವಸರವೇಕೆ ಸರ್, ಒಂದು ನಿಮಿಷ ತಡೆಯಿರಿ, ಅಕ್ಷತೆ ಹಾಕಲು ಅಣ್ಣನಾದವ ಬರಬಾರದೆ, ಗೀತಾ ಬಾ ಇಲ್ಲಿ, ನಾವು ತಂದ ಕಾಣಿಕೆ ಗಡಿಬಿಡಿಯಲ್ಲಿ ರಾಧಾ ಮೇಮಸಾಬ ಮನೆಯಲ್ಲಿ

ಬಿಟ್ಟು ಬಂದಿರುವೆ, ಬೇಗ ಹೋಗಿ ತೆಗೆದುಕೊಂಡು ಬಾ

ಗೀತಾ– ಇದೀಗ ಬಂದೆ (ಹೊರ ಓಡುವಳು)

ಸಂಗಯ್ಯ– ರೀ ಮಹಾದೇವಪ್ಪನವರೆ

ಮಹಾ– ಪುರೋಹಿತರೆ, ತಾವು ಮಂತ್ರವನ್ನಾದರೂ ಪ್ರಾರಂಭಿಸಿ ಅಷ್ಟರಲ್ಲಿ ನನ್ನ ಮಗ ಬಂದರೂ ಬರಬಹುದು

ಪುರೋಹಿತ– ಆಗಲಿ ರಾಯರೆ, ತದೇವ ಲಗ್ನಂ..

ಸಂಗಯ್ಯ– (ಎದ್ದು ನಿಂತು) ನಿಲ್ಲಿಸಿ, ಮೊದಲಿಗೆ ನಮ್ಮ ವರದಕ್ಷಿಣೆಯ ಹಣ ಪಾವತಿ ಮಾಡಿ

ಮಹಾ– ವರದಕ್ಷಿಣೆಯ ಹಣದ ಬಗ್ಗೆ ತಾವು ಚಿಂತಿಸದಿರಿ ರಾಯರೆ, ಅವಶ್ಯ ಕೊಡುವೆ

ಲಿಂಗಯ್ಯ– ಕುಡ್ತಿನಿ, ತಗೊತಿನಿ, ಅಂದರ ಕೊಟ್ಟಂಗ ಆಯ್ತಾ ತಗೊಂಡಂಗ ಆಯುರಿ ಮಾಸ್ತರ್ರೆ, ಎಲ್ಲಿ ಆದ ಹಣ? ಇತ್ಲಾಗ ಕೊಡರೆಲ್ಲ

ಮಹಾ– ನನ್ನ ಈ ಚಿಕ್ಕ ಮನೆ ಸುರಕ್ಷಿತವಲ್ಲವೆಂದು ಈ ಮನೆ ಮಾರಾಟದ ದುಡ್ಡು ಬ್ಯಾಂಕಿನಲ್ಲಿಟ್ಟಿರುವೆ, ನನ್ನ ಮಗ ಹಣ ತರುವದಕ್ಕಾಗಿಯೇ ಹೋಗಿದ್ದಾನೆ, ಇದೀಗ ಬರಬಹುದು, ಮಂಗಲ ಕಾರ್ಯ ನಿಲ್ಲಿಸಬೇಡಿ

ಸಂಗಯ್ಯ– ಇದೇನು ಮದುವಿನಾ, ಉದ್ರಿ ಅಂಗಡಿ ವ್ಯವಹಾರರಿ ಮಾಸ್ತರ್ರೆ? ನೋಡಿ ನೋಡಿ ಇದೆಂಥಾ ದರಿದ್ರ ಮಂದಿಗೂಡ ನಮ್ಮ ನೆಂಟಸ್ಥನ ಮಾಡಸದೆಲೆ ಕಳ್ಳ ಅಯ್ಯ!

ರಾಜು– ಹೀಗೆ ಅವಸರ ಮಾಡಿದರೆ ಹೇಗೆ ಸರ್, ನಿಮ್ಮ ಹಣ ಎಲ್ಲಿಗೂ ಹೋಗದು

ಸಂಗಯ್ಯ– ಬಾಯ್ಮುಚ್ಚಲೆ ಬೇಕೂಫಾ. ನನಗ ಬುದ್ದಿ ಹೇಳ್ಳಾಕ ನೀನ್ಯಾರಲೆ, ಇದೆಲ್ಲಾ ನಿಮ್ಮ ನಾಟಕ ಕಾಣ್ತಾದ ನಾವೇನು ಲಂಗಾ ಇದ್ದಿಂವ್ಯಾ, ಹೆಣ್ಣು ಕಾಣಲ್ದ ಕುಂತಿವ್ಯಾ ಎದ್ದೇಳು ಮಗಾ.

ವಿಕ್ರಂ– (ಎಳುತ್ತ) ಥೂ use less beggers, ನಡೆಯಿರಿ

ಮಹಾ– (ಅಡ್ಡಗಟ್ಟಿ) ನಿಮಗೆ ಕೈ ಮುಗಿವೆ, ದಯವಿಟು ಇನ್ನೊಂದು ನಿಮಿಷ

ಕುಳಿತುಕೊಳ್ಳಿ

ರಾಜು– ಮ್ಯೆ ತುಮಾರೆಕು ಹಾತ ಜೋಡುತಾ ಸಾಬ, ಸಿರ್ಪ ದೊ ಮಿನಿಟ ಬೈಠೊ

ವಿಕ್ರಂ– ಸರಿಯರಿ ಅತ್ತ ನಾಯಿಗಳೆ (ಗದ್ದಲ)

ಮಹೇಶ– (ಓಡುತ್ತ ಬಂದು) ನಿಲ್ಲಿರಿ

ರಾಜು– ಓ ಬಂದೆಯಾ ಭಯ್ಯಾ

ಮಹೇಶ– ಇದೋ ನಿಮ್ಮ ಹಣ (ಕೊಡುತ್ತ) ಒಂದೈದು ನಿಮಿಷ ತಡವಾದುದಕ್ಕೆ ದಯವಿಟ್ಟು ಕ್ಷಮಿಸಿ

ಸಂಗಯ್ಯ– ನೀ ಮಾತಿನ ಮಗಾ ಅನ್ನೋದು ನನಗ ಗೊತ್ತಪಾ ಹುಡುಗ, ಕುಡು ಮಗಾ, ಅಕ್ಷತಾ ಕಾರ್ಯ ನಡಿಲಿ, ಪುರೋಹಿತರೆ, ಅದೇನು ನೋಡ್ತಾ ನಿಂತಿರಿ ಮಂತ್ರ ಹೇಳರಿ

ಪುರೋಹಿತ– (ಅಕ್ಷತೆ ಹಂಚಿ)ತದೇವ ಲಗ್ನಂ ಸುದಿನಂತೂ ದೇವಾ, ಸುಮೂಹೂರ್ತೆ ಸಾವಧಾನ, ಸಾವಧಾನ, ಸಾವಧಾನ (ಅಕ್ಷತೆ ಹಾಕುತ್ತಿದ್ದಂತೆ ರಾಧಾ ಗೀತಾಳೊಂದಿಗೆ ಓಡಿ ಬರುತ್ತ) ನಿಲ್ಲಿಸಿ

ರಾಜು– ಇದೆ ಈಗ ಮುಗಿಯಿತಲ್ಲ ಮೇಮಸಾಬ, ತಾವು ಬರಲು ಒಂದೆರಡು ಸೆಕೆಂಡ್ ಲೇಟಾಯಿತು

ರಾಧಾ– (ಸ್ವ)oh god ತೋಳನ ಬಾಯಿಗೆ ಮತ್ತೊಂದು ಕುರಿ. ಕಟುಕನ ಯಜ್ಞಕ್ಕೆ ಮತ್ತೊಂದು ಬಲೆ

ಸಂಗಯ್ಯ– ಯಾರು ನೀನು? ಏನು ವಿಷಯ?

ರಾಧ– (ಸಹಜತೆಯಿಂದ) ಏನು ಇಲ್ಲ ಸರ್, ವರದಕ್ಷಿಣೆಯ ಹಣವಿಲ್ಲದೆ ಅಕ್ಷತೆ ಹಾಕಿದಿರಲ್ಲ ತುಂಬಾ ಥ್ಯಾಂಕ್ಸ್, ಅದೇ ನನಗೆ ಸಂತೋಷ

ವಿಕ್ರಂ– ಈ ಅಕ್ಷತೆಗೂ, ನಿನಗೂ ಏನು ಸಂಬಂಧ?

ರಾದ– ಗಂಗಾ ನನ್ನ ಗೆಳತಿ, ವರದಕ್ಷಿಣೆ ಹಣಕ್ಕಾಗಿ ಮದುವೆ ನಿಂತಿದೆ ಎಂಬುದು ಗೊತ್ತಾಯಿತು, ಅದಕ್ಕಾಗಿ ನಾನೇ ಹಣ ತೆಗೆದುಕೊಂಡು ಬಂದೆ. ಆದರೆ ನೀವು ದೊಡ್ಡ ಮನಸ್ಸು ಮಾಡಿ

ವಿಕ್ರಂ– ನಮಗೆ ಸಿಗಬೇಕಾದ ಹಣ ಸಕಾಲಕ್ಕೆ ಸಿಕ್ಕಿತು

ರಾಧಾ– ಸಂತೋಷ ಬೇಕಾದರೆ ಈ ಹಣವನ್ನು ನನ್ನ ಪತಿಯಿಂದ ಕಾಣಿಕೆ ಎಂದು ಸ್ವೀಕರಿಸಿ

ವಿಕ್ರಂ– ನೀವು ತುಂಬ ಉದಾರಿಗಳಂತೆ ಕಾಣುವಿರಿ, ಇರಲಿ. ತಮ್ಮ ಪರಿಚಯ.. (ಹಣ ಬ್ಯಾಗಿಗೆ)

ರಾಧಾ– ಹೇಳಿದೆನಲ್ಲ ನಾನು ಈ ಗಂಗಾಳ ಆತ್ಮಿಯ ಗೆಳತಿ, ಕೊಟ್ಯಾಧೀಶರ ಏಕಮಾತ್ರ ಪುತ್ರಿ, Miss ರಾಧಾ, ಪದವಿದರೆ, ಸಂಗೀತ ಮತ್ತು ನಾಟಕ ಕಲಾ ಅಕಾಡೆಮಿಯಿಂದ ಗಾನ ಕೋಗಿಲೆ ಮತ್ತು ನಾಟ್ಯ ಸರಸ್ವತಿ ಎಂಬ ಬಿರುದುಗಳನ್ನು ಪಡೆದಿರುವೆ

ವಿಕ್ರಂ– Good, I am very glad to meet you mis radha

ರಾಧಾ– I am also too (ಕೈ ಕುಲುಕಿ) ನಿಮ್ಮ ದಾಂಪತ್ಯ ಜೀವನ ಸುಖಮಯವಾಗಲಿ

ವಿಕ್ರಂ– Thank you (ಇತ್ತ) ಡ್ಯಾಡಿ ನನಗೆ ತುಸು ಅರ್ಜಂಟ, ಎಲ್ಲರನ್ನು ಕರೆದುಕೊಂಡು ಬೇಗ ಬನ್ನಿ, ರಾಧಾ Bye (ಹೋಗುವನು)

ಮಹಾ– ಅರೆ, ಅಳಿಯಂದಿರು ಊಟವನ್ನೆ ಮಾಡಲಿಲ್ಲವಲ್ಲ

ಸಂಗಯ್ಯ– ಹೋಗಲಿ ಬಿಡಿ, ಅವನಿಗೆ ಸದಾ ವ್ಯಾಪಾರದ ಚಿಂತೆ ಊಟಕ್ಕೆ ಬಿಡಿ, ಆತನಿಗೆ ನಿದ್ದೆಗೂ ಪುರುಸೊತ್ತು ಸಿಗದು

ರಾಧಾ– ಪಾದರಸದಂತೆ ಸದಾ ಚುರುಕಾಗಿ ವರ್ತಿಸುವದೆ ಫಾರೇನ್ ಎಕ್ಸ್‌ಪೋರ್ಟು ಇಂಪೋರ್ಟು ಬಿಜನೆಸ್‌ಮ್ಯಾನರ ಮುಖ್ಯ ಲಕ್ಷಣವೆಂಬುದು ನನಗೂ ಗೊತ್ತು ರಾಯರೆ

ಲಿಂಗಯ್ಯ– ಅಂದರೆ ನೀವು..

ರಾಧಾ– ಎಲ್ಲರಂತೆ ನಾನೂ ಒಬ್ಬ ಸಾಮಾನ್ಯ ಹೆಣ್ಣು, ನನಗೂ ಒಬ್ಬ ಇಂಥಾ ಗಂಡನೆ ಸಿಗಲಿ ಅಂತ ಹಾರೈಸುತ್ತಿದ್ದೇನೆ.

ಲಿಂಗಯ್ಯ– ಆದಷ್ಟು ಬೇಗ ದೇವರು ನಿಮ್ಮ ಹರಕೆ ಈಡೇರಿಸಲಿ ಆಗ ಬಹುಮಾನ ಪಡದೆ ತೀರುವೆನು

ರಾಧಾ– ಹಾಗೇನಾದರೂ ಆದರೆ ನಿಮಗೊಂದು ಬಂಗಾರದ ಚೈನು ಬಹುಮಾನ

ಲಿಂಗಯ್ಯ–	Good ಆ ಬಹುಮಾನ ಪಡೆದೆ ತೀರುವೆನು
ರಾಧಾ–	ಮಹೇಶ ನಿಮ್ಮದು ಯೋಗ್ಯತೆಗೂ ಮೀರಿದ ಸಾಹಸ
ಮಹೇಶ–	ತಂಗಿಗಾಗಿ ಮಾಡಿದ ತ್ಯಾಗವೆಲ್ಲ ಏನಮಹಾ ಮೇಡಂ
ರಾಧಾ–	ಪ್ರತಿಯೊಂದು ಹೆಣ್ಣಿಗೂ ನಿನ್ನಂಥಾ ಒಬ್ಬ ಅಣ್ಣಾ, ಮಹಾದೇವಪ್ಪರಂಥಾ ತಂದೆಯಿಂದ್ದರೆ ಈ ಜಗವೇ ಒಂದು ಸ್ವರ್ಗ, ಗಂಗಾ ನೀನು ಪುಣ್ಯವತಿ. ಎಂದಿಗೂ ಈ ಅಕ್ಕನನ್ನು ಮಾತ್ರ ಮರೆಯದಿರಿ, ನಿನ್ನ ಆಪತ್ಕಾಲದಲ್ಲಿ ಅವಶ್ಯ ಬಂದು ನೆರವಾಗುವೆ ನಾನಿನ್ನು ಬರಲೆ?
ಮಹಾ–	ಮಗು ಊಟ ಮಾಡಿಕೊಂಡು ಹೋಗಮ್ಮಾ
ರಾಧಾ–	ಮತ್ತೆ ಬರುವೆ ಅಪ್ಪಾಜಿ (ಹೋಗುವಳು)
ಮಹೇಶ–	ಬನ್ನಿ ಬೀಗರೆ, ಊಟ ಮಾಡುವಿರಂತೆ
ಲಿಂಗಯ್ಯ–	ನಡಿ ಅಪ್ಪಾ ಬನ್ನಿ ಯಜಮಾನರೆ (ಗಂಗಾ ಮಹೇಶ ಎಲ್ಲರೂ ಒಳ ಹೋಗುವರು)
ಗಂಗಾ–	(ಬಂದು ಅಪ್ಪುತ್ತ) ಅಣ್ಣಾ..
ಮಹೇಶ–	ಗಂಗಾ, ನನ್ನಮ್ಮ, ನನ್ನ ತಂಗಿ, ನೀನೀಗ ಮಂಗಳ ಗೌರಿ, ಸೌಭಾಗ್ಯ ಲಕ್ಷ್ಮಿಯಂತೆ ಅದೆಷ್ಟು ಚನ್ನಾಗಿ ಕಾಣುತ್ತಿರುವೆ ಗೊತ್ತಾ?
ಗಂಗಾ–	ಅಣ್ಣಾ ನನ್ನಿಂದಾಗಿ ನೀವೂ..
ಮಹೇಶ–	ಹುಚ್ಚಿ, ಇದು ನಮ್ಮೆಲ್ಲರ ಪಾಲಿನ ಶುಭದಿನ, ಅಳಬಾರದು ನಗು ತಂಗಿ (ಎಲ್ಲರೂ ಹೊರ ಬರುವರು)
ಲಿಂಗಯ್ಯ–	ಊಟದ ಶಾಸ್ತ್ರ ಅಂತೂ ಮುಗಿತಲ್ಲರಿ ಮಾಸ್ತರ್ರೆ
ಸಂಗಯ್ಯ–	ಇನ್ನು ವರೋಪಚಾರದ ಸಾಮಾನು ಏನೇನು ಅದಾವು ಅವನ್ನ ನಮ್ಮ ಕಾರಿನಾಗ ಇಡಸ್ರಿ
ಮಹೇಶ–	ರಾಜು, ಈ ಸೂಟ್‌ಕೇಸ್ ಒಯ್ದು ಕಾರಿನಲ್ಲಿಡು
ರಾಜು–	ಆಗಲೆಣ್ಣಾ, ಬಾ ಗೀತಾ
ಗೀತಾ–	ಗಂಗಾಕ್ಕಾ ನಾ ಬರ್ತಿನಿ (ಹೊರ ಹೋಗುವರು)

ಲಿಂಗಯ್ಯ– ಬಾ ಅಮ್ಮಾ ಗಂಗಾ ಹೊತ್ತಾತು, ಬರ್ರಿ ಯಜಮಾನರೆ (ಇಬ್ಬರೂ ಹೊರ ಹೋಗುವರು, ಗಂಗಾ ಅಣ್ಣ ಅಪ್ಪನಿಗೆ ಅಪ್ಪುತ್ತಿರಲು ಹಿನ್ನೆಲೆ ಗೀತೆ ನಂತರ)

ಮಹಾ– ಮಹಾ ಮುತ್ತೈದೆಯಾಗಿ ಬಾಳು ಮಗಳೆ, ಗರತಿ ಗಂಗಮ್ಮ ಎನಿಸಿಕೊಂಡು ಹುಟ್ಟಿದ ಮನೆಗೂ, ಕೊಟ್ಟ ಮನೆಗೂ ಕೀರ್ತಿ ತಾ.

ಗಂಗಾ– ನಿಮ್ಮ ಹೆಸರಿಗೆ ಹೂ ತರುವೆನಲ್ಲದೆ, ಹುಲ್ಲು ತರಲಾರೆನಪ್ಪಾ

ಮಹೇಶ– ದೀರ್ಘ ಸುಮಂಗಲಿಯಾಗು ತಂಗಿ, ಚಿರಕಾಲ ಮುತ್ತೈದೆಯಾಗಿ ಬಾಳು

ಮಹಾ– ನಡೆಯಿರಿ ಬೀಗರು ದಾರಿ ಕಾಯುತ್ತಿರಬಹುದು (ಮೂವರು ಹೊರ ಹೋಗುತ್ತಿದ್ದಂತೆ ತೆರೆ)

===****===****===

ಪ್ರವೇಶ–೯

ರಸ್ತಾ

ವಿಕ್ರಂ– (ಸ್ವ) ಓಫ, ಕೊಟ್ಯಾಧೀಶ ಕಾಳಿಂಗರಾಯರ ಏಕಮಾತ್ರ ಪುತ್ರಿ ಮಿಸ್ ರಾಧಾ, ಸುಂದರ ಷೋಡಸಿ, ಗಾನ ವಿಶಾರದೆ, ನೃತ್ಯ ಮಯೂರೆ ಇಂಥಾ ಅಪರೂಪದ ಅಪ್ಸರೆ, ಅಮರ ಲೋಕದ ಅಮೃತ ಬಳ್ಳಿ, ಇಷ್ಟು ದಿನ ನಮಗಾರ ಕಣ್ಣಿಗೂ ಬೀಳದೆ ಇದ್ದುದ್ದು ತುಂಬ ಆಶ್ಚರ್ಯ, ಆದರೇನು, ದಾನೆ ದಾನೆ ಪೆ ಲಿಖಾಹೈ ವಾಲೋಂಕ ನಾಮ್ ಎಂಬಂತೆ ಇದು ಕೂಡ ನನಗಾಗಿಯೇ ಹುಟ್ಟಿ ಬಂದ ಹೆಣ್ಣಾಗಿರಲೇಬೇಕು, ಅಂದಲ್ಲೆ ಇಂದು ತಾನಾಗಿಯೇ ಓಡಿ ಬಂದಿದೆ ಈ ಬೇಟೆಗಾರನ ಕೋಟೆಯಡೆಗೆ, ಬರಲಿ! ಮರಳಿ ಹೋಗದಂತೆ ಕೊರಳಿಗೆ ಸರಪಳಿ ಕಟ್ಟಿಯೇ ಬಿಡೋಣ, ರಾಧಾ, ಬೇಗ ಬಾ ನನ್ನ ಸ್ವೀಟ ಹನಿ.

ರಾಧಾ– (ಬಿನ್ನಾಣದಿಂದ ಬರುತ್ತ) ಹಲ್ಲೋ ಮಿಸ್ಟರ್ ವಿಕ್ರಂ.

ವಿಕ್ರಂ– ಓ ಮಿಸ್ ರಾಧಾದೇವಿ, ಬನ್ನಿ.

ರಾಧಾ– ತಾವಿನ್ನೂ.....

ವಿಕ್ರಂ– ಇಂದು ಅದಾವನೊ ಒಬ್ಬ ಮಂತ್ರಿ ಗೋತಾ ಹೊಡೆದಿರುವನಂತೆ, ಭಾರತ ಬಂದ ಘೋಸಿಸಲಾಗಿದೆ. ಅದಕ್ಕಾಗಿ ನಮ್ಮ ಬಿಜನೆಸ್ಸ್ ...

ರಾಧಾ– ತುಂಬ ಸಂತೋಷದ ಸಮಾಚಾರ.

ವಿಕ್ರಂ–' ಯಾವುದು, ಆ ಮಂತ್ರಿ ಸತ್ತದ್ದೇ?

ರಾಧಾ– ಅಲ್ಲ, ಆ ಬಿಜನೆಸ್ಸು ನಿಂತು ನಿಮಗೆ ರೆಸ್ಟ ಸಿಕ್ಕಿದ್ದು. ನವ ವಧುವಿನೊಡನೆ ಚಕ್ಕಂದವಾಡುತ್ತ ಹಾಯಾಗಿ ಕಾಲ ಕಳೆಯುವ ಸುಯೋಗವಾದರೂ ಸಿಕ್ಕಿತಲ್ಲ.

ವಿಕ್ರಂ– ಚಕ್ಕಂದವಾಡುತ್ತ, ಆನಂದ ಪಡೆಯುತ್ತ ಕುಳಿತರೆ ನಮ್ಮ ಬಿಜನೆಸ್ಸ ಗತಿಯೇನು ಮಿಸ್?

ರಾಧಾ– ಮದುವೆಯ ದಿನವೂ ಮಜಾ ಮಾಡಲು ಬಿಡದ ಆ ವ್ಯವಹಾರವಾದರೂ ಎಂಥದ್ದುರಿ? ಅದು ಬಿಜನೆಸ್ಸಲ್ಲ ನಾನ್ನೆನ್ನು.

ವಿಕ್ರಂ– (ನಗುತ್ತ) ಒಪ್ಪಿದೆ ಮಿಸ್, ಆದರೆ ಚಕ್ಕಂದವಾಡಲು ತಕ್ಕ ರಸಿಕ ಹೆಣ್ಣಾದರೂ ಬೇಡವೆ?

ರಾಧಾ– ಅರೆ ಇದೆಂಥಾ ಮಾತು, ಮಲ್ಲಿಗೆ ಹೂವಿನಂಥಾ ಹೆಂಡತಿ ಮಗ್ಗುಲಲ್ಲಿ ಕುಳಿತಿರಲು, ನೀವೆ ಹೊರಗೆದ್ದು ಬಂದಿರಲ್ಲ ಗಂಗಾ ಅಗ್ದಿ ಸುಂದರಿ.

ವಿಕ್ರಂ– ಮುತ್ತುಗದ ಹೂವಿನಲ್ಲಿ ಮಕರಂದವಿರದು ಮಿಸ್, ಬಂಗಾರದ ಪುತ್ಥಳಿ ರಸಿಕತೆ ತೋರದು.

ರಾಧಾ– ಅಂದರೆ ನಿಮ್ಮ ಮಾತಿನ ಅರ್ಥ.

ವಿಕ್ರಂ– ಎಲ್ಲಾ ಅನರ್ಥ! ಗಂಗಾ ನಾ ಮೆಚ್ಚಿ ಮದುವೆಯಾದ ಹೆಣ್ಣಲ್ಲ. ಹಿರಿಯರ ಒತ್ತಾಯಕ್ಕೆ ಮಣಿದು ತಾಳಿ ಕಟ್ಟಿದೆ ಅಷ್ಟೆ.

ರಾಧಾ– ಅಂದರೆ, ನಿಮಗೆಂಥಾ ಚಂದನದ ಗೊಂಬೆ ಬೇಕಾಗಿತ್ತು?

ವಿಕ್ರಂ– ಹೇಳಲೆ?

ರಾಧಾ– ಹೇಳಿ ಪರವಾಯಿಲ್ಲ.

ವಿಕ್ರಂ– ಹುಡುಗಿ ನಡೆದರೆ ಬಳ್ಳಿ ಬಳುಕಿದಂತಿರಬೇಕು, ಉಲಿದರೆ ಕೋಗಿಲೆ, ನಲಿದರೆ ನವಿಲಿನ ನೆನಪು ತರುತ್ತಿರಬೇಕು, ಮಂದಾರ ಪುಷ್ಪದಂತೆ ಸದಾ ಮಂದಹಾಸ ಬೀರುವ ಇಂದುವದನೆ ನನ್ನ ಅಂದದ ಅರಸಿಯಾಗಿ ಬಂದಾಗ ಮಾತ್ರ ಈ ಬೆಂದ ಹೃದಯಕ್ಕೆ ತುಸು ತಂಪು ಸಿಗಬಹುದು ನೋಡಿ.

ರಾಧಾ– Good ಅಡ್ಡಿಯಿಲ್ಲಪ್ಪಾ ನೀವು ಉಮರ ಖಯ್ಯಾಮನಂತೆ ತುಂಬ ರಸಿಕರು, ಅಂತಹ ಹೆಣ್ಣು ಎಂದಾದರೂ ನಿಮ್ಮ ಕಣ್ಣಿಗೆ ಬಿದ್ದಿರುವಳೆ?

ವಿಕ್ರಂ– ಕಂಡಿರುವೆ ಮಿಸ್. ಆ ಬೇಲೂರು ಶಿಲಾಬಾಲಿಕೆ ಸದಾ ನನ್ನ ಕಣ್ಣಂಚಿನಲ್ಲಿ ಕುಣಿಯುತ್ತಲೆ ಇದ್ದಾಳೆ.

ರಾಧಾ– ಯಾರಪ್ಪಾ ಆ ಮಹಾನ್ ಮೇನಕೆ, ಎಲ್ಲಿರುವಳು?

ವಿಕ್ರಂ– ಅವಳು ಅಸಾಧಾರಣ ಅಪ್ಸರೆ ಮಿಸ್, ತಪಸ್ವಿಯೂ ಮರುಳಾಗುವ

ರೂಪಸಿ, ಗಂಧರ್ವ ಕನ್ಯೆ, ಕಿನ್ನರ ಲೋಕದ ಕಾಮನ ಬಿಲ್ಲು ಆ ಚಂದುಟಿಯ ಚಲುವೆ ಇದೇ ಊರಿನ ಓರ್ವ ಶ್ರೀಮಂತನ ಮನೆಯಲ್ಲಿ ನಲಿದಾಡುತ್ತಿದ್ದಾಳೆ.

ರಾಧಾ– ಏನೆಂದಿರಿ? ಆ ಸ್ವರ್ಣಲತೆ ಇದೆ ಊರಲ್ಲಿದ್ದಾಳೆಯೇ? ನಾನೊಂದು ಸಲವಾದರೂ ನೋಡಿಯೇ ಇಲ್ಲವಲ್ಲ.

ವಿಕ್ರಂ– ನೋಡಿರುವಿರಿ ಮಿಸ್. ದಿನಾ ಹತ್ತಾರು ಸಲ ನೋಡುತ್ತಲೆ ಇರುವಿರಿ.

ರಾಧಾ– ಅರೆ ಎಲ್ಲಿ?

ವಿಕ್ರಂ– ನಿಮ್ಮ ಮನೆಯ ಕನ್ನಡಿಯಲ್ಲಿ.

ರಾಧಾ– (ಸಂಭ್ರಮ) ವಾವು .. ಅಂದರೆ ನಾನು ತಾನೆ?

ವಿಕ್ರಂ– ಹೌದು ಮಿಸ್. ನೀವೆ ಆ ಮಿಂಚಿನ ಬಳ್ಳಿ. ನೀವು ಸಾಮಾನ್ಯ ಹೆಣ್ಣಲ್ಲ. ಬ್ರಹ್ಮ ಸೃಷ್ಟಿಯ ಅಮೂಲ್ಯ ಕಲಾಕೃತಿ, ರವಿವರ್ಮನ ಕುಂಚದ ಕಲ್ಪನೆಗೂ ನಿಲುಕದ ಕನಸಿನ ಕನ್ಯೆ.

ರಾಧಾ– ಇಂದು ನನ್ನ ಕೊಂದಿರಿ ವಿಕ್ರಂ, ಶಾಂತ ಸಾಗರದಂತಿದ್ದ ನನ್ನೆದೆಯಲ್ಲಿ ಬಿರುಗಾಳಿ ಎಬ್ಬಿಸಿದಿರಿ, ಅಲ್ಲೋಲ ಕಲ್ಲೋಲ ಉಂಟು ಮಾಡಿದಿರಿ.

ವಿಕ್ರಂ– Sorry miss, ನನ್ನ ಅಂತರಾಳ ಅರುಹಿದೆ ಅಷ್ಟೆ ದಯವಿಟ್ಟು ನನ್ನ ಕ್ಷಮಿಸಿ.

ರಾಧಾ– ಈ ವಿಷಯ ಈ ಮೊದಲು ನನಗೇಕೆ ಹೇಳಲಿಲ್ಲ.

ವಿಕ್ರಂ– ಹೇಳುವೆ ಸುಯೋಗ ಸಿಕ್ಕಿದ್ದು ಇಂದು ತಾನೆ.

ರಾಧಾ– ಅಂದರೆ ಈಗ.

ವಿಕ್ರಂ– ಈ ಮನಸ್ಸಂತೂ ನಿಮಗೆ ಮಾರು ಹೋಗಿದೆ, ಮನದಾಳದ ಮಾತಂತೂ ತಿಳಿಸಿಯಾಗಿದೆ, ನಾನು ಆಜನ್ಮ ಪರ್ಯಂತ ಈ ವಿರಹದುರಿಯಲ್ಲಿ ಬೆಂದು ಬೆಂಡಾದರೂ ಚಿಂತೆಯಿಲ್ಲ, ಕೊನೆಯ ಉಸಿರಿರುವವರೆಗೂ ಈ ಅಭಿಸಾರಿಕೆಯು ಆಗಮನದ ನೀರೀಕ್ಷೆಯಲ್ಲಯೇ ಇರುವೆ.

ರಾಧಾ– ನನ್ನ ಉಭಯ ಸಂಕಟದ ಉರುಲು ತೊಡಿಸಿ ಬಿಟ್ಟಿರಿ ವಿಕ್ರಂ, ಇಕ್ಕಟ್ಟಿನಲ್ಲಿ ಸಿಲಿಕಿಸಿ ಬಿಟ್ಟಿರಿ.

ವಿಕ್ರಂ– ಆರಾಧ್ಯದೇವಿಗೆ ಅಭಿಲಾಶೆ ತಿಳಿಸಿರುವೆ, ಹಾಲಲ್ಲಾದರೂ ಹಾಕಿ, ನೀರಲ್ಲಾದರೂ ಅದ್ದಿ, ಬರ್ತೀನಿ (ಹೋಗುವನು)

ರಾಧಾ– (ಸ್ವ) ಎಲೋ ನಯವಂಚಕ ವಿಕ್ರಂ, ನಿನ್ನ ಮಾತಿನ ಮೋಡಿಗೆ ಮರುಳಾಗುವ ಹೆಣ್ಣೆಂದು ತಿಳಿದೆಯಾ ತಾಯಿಗಂಡ, ತಡೆ ನಿನ್ನನ್ನು ಹಾಲಲ್ಲೂ ಹಾಕಲಾರೆ, ನೀರಲ್ಲೂ ಅದ್ದಲಾರೆ, ಕತ ಕತನೆ ಕುದಿಯುವ ಲಾವಾರಸದಲ್ಲಿ ಕೈ ಕಾಲು ಕಟ್ಟಿ ಮುಳುಗಿಸಿ ಬಿಡುವೆ. ನಾನು ನಿನ್ನ ಬಲಿ ತೆಗೆದುಕೊಳ್ಳಲು ಕಾದು ಕುಳಿತ ಕಾಳಿಂಗ ಸರ್ಪ ! ಮೂರು ವರ್ಷದ ಮೊದಲು ಇದೇ ರೀತಿ ನನ್ನಕ್ಕನನ್ನು ಮರುಳು ಮಾಡಿ ಕೊರಳ ಕೊಯ್ದೆಯಲ್ಲ ನರ ರಾಕ್ಷಸಾ, ಆ ಸೇಡು ತೀರಿಸಿಕೊಳ್ಳಲಾರದೆ ಬಿಡಲಾರೆ, ನನ್ನಕ್ಕನಂತೆ ಕಾಲಗರ್ಭ ಸೇರಿದ ನೂರಾರು ನಿರಪರಾಧಿ ಹೆಣ್ಣುಗಳ ಶಾಪವೇ ಹಗ್ಗವಾಗಿ ನಿನ್ನ ಕೊರಳಿಗೆ ಉರುಲಾಗಿ ಬಿಗಿಯುವದು ನೆನಪಿರಲಿ ವಿಕ್ರಂ, ಬರ್ತಿನಿ (ಹೋಗುವಳು)

= =***====***===

ಪ್ರವೇಶ–೧೦

ವಿಕ್ರಮನ ಮನೆ

(ಕೇದಾರನಾಥ ಶತಪಥ ಗೀತಾ ಬಂದು ಒಳ ಹೋಗುತ್ತಿರಲು)

ಕೇದಾರ– ಗೀತಾ Come hare (ಬರಲು) ಎಲ್ಲಿಗೆ ಹೋಗಿದ್ದೆ?

ಗೀತಾ– ಗೆಳತಿಯ ಮದುವೆಗೆ, ತಮಗೆ ತಿಳಿಸಿಯೇ ಹೋಗಿದ್ದೆನಲ್ಲ ಡ್ಯಾಡ್

ಕೇದಾರ– ಗೆಳತಿಯ ಮದುವೆಗೆ, ಹೂಂ (ಮತ್ತೆ ಶತ ಪಥ) ನೀನೆನೋ ಗೆಳತಿಯ ಮದುವೆಯಲ್ಲಿ ಉಂಡು ತಿಂದು ಮಜಾ ಮಾಡಿ ಬಂದೆ, ಆದರೆ ನಾನಿಲ್ಲಿ ಪ್ರಾಣ ಸಂಕಟ ಅನುಭವಿಸುತ್ತಿದ್ದೇನೆ.

ಗೀತಾ– What happend dad ಏನಾಯಿತು?

ಕುಮಾರ– ನನ್ನಳಿಯ Mr kumar ಅಮೇರಿಕಾದಿಂದ ಭಾರತಕ್ಕೆ ಪ್ಲೇನಿನಲ್ಲಿ ಬಂದಿಳಿದು ಎರಡು ದಿನವಾಯಿತಂತೆ, ಕ್ಯಾಲಿಫೋರ್ನಿಯಾದಿಂದ ಕೇಬಲ್ ಬಂದಿದೆ, ಆದರೆ ಆತ ಇನ್ನೂ ಈ ಮನೆಗೆ ಬಂದು ತಲುಪಿಲ್ಲವೆಂದರೆ ಏನು ಇದರ ಅರ್ಥ

ಗೀತಾ– ಯಾರು ನನ್ನ ಫಾದರಿನ್ಲಾ ಕುಮಾರನೆ, ತುಂಬ ಸಂತೋಷ So happy.

ಕೇದಾರ– ಅಬೆ ಹ್ಯಾಪಿಕೆ ಬಚ್ಚಿ Shut up, ಆತ ಬಂದಿಲ್ಲವೆಂದು ನಾನು ಒದ್ದಾಡುತ್ತಿದ್ದರೆ ನಿನಗೆ ಸಂತೋಷವಾಗುತ್ತಿದೆಯೇ You fool.

ಗೀತಾ– ಇಂದು ಸಾಯಂಕಾಲ Express ಬರಬಹುದು ಡ್ಯಾಡಿ.

ಕೇದಾರ– ನಮ್ಮ ಇಂಡಿಯಾದ ರೈಲ್ವೆ ಡಿಪಾರ್ಟಮೆಂಟೇ ಭೋಗಸ್, ಅವು Express ಗಳಲ್ಲ hope lessಗಳು, mailಗಳಲ್ಲ foolಗಳು, ಟೈಮ ಕೀಪಿಂಗ ಅನ್ನೋ ಸೆನ್ಸೆ ಇಲ್ಲ, ಒಂದು ಡಿಸ್ಸಿಪ್ಲೆನ್ ಇಲ್ಲ ಅರೆಂಜಮೆಂಟು ಇಲ್ಲ.

ಗೀತಾ– ಅಂದರೆ ಈಗ ನಾನೇನು ಮಾಡಲಿ ಡ್ಯಾಡಿ?

ಕೇದಾರ– ಕಿಚನ್‌ಗೆ ಹೋಗಿ ಮೊದಲು ಮೀಲ್ಸ ರೆಡಿ ಮಾಡು.

ಗೀತಾ– all reght ಡ್ಯಾಡಿ (ಒಳ ಹೋಗುವಳು).

ಕೇದಾರ– (ಸ್ವ) ಪ್ಲೇನ್ ಏನಾದರೂ ಕ್ರೈಸ್ ಆಯಿತೆ? ಅಥವಾ ಹೈಜಾಕ ಏನಾದರೂ, oh yes, ಹಾಗೆ ಆದರೂ ಆಗಿರಬಹುದು ಇದರಲ್ಲಿ ಪಾಕಿಸ್ತಾನದ ಟೆರೆರಿಸ್ಟ್ ಕೈವಾಡ ಅವಶ್ಯ ಇದ್ದಿರಲೇಬೇಕು, ಒಂದು ವೇಳೆ ಹಾಗೇನಾದರೂ ಆದರೆ T.V. ರೇಡಿಯೋ, ಪೇಪರಗಳಲ್ಲಿ ಸುದ್ಧಿ ಬರುತ್ತಿತ್ತಲ್ಲ, ಹಾಗಾಗಿರಲಿಕ್ಕಿಲ್ಲ, ಇದರಲ್ಲಿ ಏನೋ ಎಡವಟ್ಟಾಗಿದೆ, ಕುಮಾರ ಎಲ್ಲಿ ಹೋದ....

ರಾಜು– (ಕುಮಾರನ ಡ್ರೆಸ್ಸಿನಲ್ಲಿ ಬರುತ್ತ) ಹಲ್ಲೋ ಮಾಮಾ, Good evening, good evening

ಕೇದಾರ– (ನೋಡಿ)oh my san in law ಕುಮಾರನೆ, ಬಂದೆಯಾ ಬಾ, Well come boy well come.

ರಾಜು– ಮಾಮಾ How do you do? ಎಲ್ಲಾ ಕ್ಷೇಮವೆ?

ಕೇದಾರ– ನಾವೆಲ್ಲಾ ಬಿಲ್ಕುಲ್ Ok. my boy, ಅಂತೂ ಬಂದೆಯಲ್ಲ. ತುಂಬ ಸಂತೋಷ I am so happy. ಗೀತಾ, ಗೀತಾ ಬೇಟಿ... come here ಇಲ್ಲಿ ಯಾರು ಬಂದಿದ್ದಾರೆ ನೋಡು.

ಗೀತಾ– (ಹೊರ ಬರುತ್ತ) ಓ..... ಇವರಾರು ಡ್ಯಾಡಿ?

ಕೇದಾರ– Mr ಕುಮಾರ, ನನ್ನ ತಂಗಿಯ ಮಗ, ನನ್ನಳಿಯ ಅಮೇರಿಕಾದಿಂದ ಬಂದಿದ್ದಾನೆ.

ಗೀತಾ– What ? ಇವರು ನಿಮ್ಮಳಿಯ ಕುಮಾರನೆ. ಅಂದರೆ ಇವರೆ ನನ್ನ.....

ಕೇದಾರ Yes Yes, ಇವರೆ ನಿನ್ನ ವುಡ್‌ಬಿ. ನಾಳೆಯ ನಿನ್ನ ಹಸ್ಬೆಂಡ್.

ಗೀತಾ– (ನಾಚಿ) ಹೋಗಿ ಡ್ಯಾಡಿ, ನೀವು ತುಂಬ ಕೆಟ್ಟವರು.

ರಾಜು– ಅರೆ ಗೀತಾ.... ಹೀಗೇಕೆ ನಾಚುತ್ತಿರುವೆ? ನಾವೇನು ಹೊಸದಾಗಿ ಭೆಟ್ಟಿಯಾಗತ್ತಿರುವೆವೆ?

ಕೇದಾರ– What? ಇದು ನಿಮ್ಮ ಪ್ರಥಮ ಭೆಟ್ಟಿ ಅಲ್ಲವೆ? ಅಂದರೆ ಈ

ಮೊದಲು ನೀವಿಬ್ಬರು.

ರಾಜು– (ಗೀತಾಳ ಸನ್ನೆ ಕಂಡು)ಓ ಮಾಮಾ do not mistake ನನ್ನ ಮಾತಿನ ಅರ್ಥ ಮೈ Means ಬಾಲ್ಯ, in child hood, ನಾವಿಬ್ಬರೂ ಕೂಡಿ ಚಂಡು ದಾಂಡು, ಮರಕೋತಿ ಆಟ ಆಡಿರಲಿಲ್ಲವೆ.

ಕೇದಾರ– (ಆನಂದ) ಓಹೋಹೋ.. ರೈಟ ರೈಟ ಆಡಿರಲಿಲ್ಲವೆ. ನೀವಿಬ್ಬರು ತುಂಬಾ ಆಟ ಆಡಿರುವಿರಿ, ಕರೆಕ್ಟ್, ಗೀತಾ.. ಕುಮಾರ ಇಂದು ನಮ್ಮ ಚೀಪ್ ಗೆಸ್ಟ್, ಮೊದಲಿಗೆ ಟಿಫಿನ್ ಆ ನಂತರ ಭರ್ಜರಿಯಾದ ಊಟ.

ಗೀತಾ– ಆಗಲಿ ಡ್ಯಾಡಿ, ನೀವು ನಿಮ್ಮ ಅಳಿಯನೊಂದಿಗೆ ಮಾತಾಡ್ತಾ ಇರಿ, ನಾನು ಟಿಫಿನ್ ಮಾಡಿ ತರುವೆ.

ರಾಜು– ಮಾಮಾ ಗೀತಾಗೆ ಹೆಲ್ಪ ಮಾಡಲು ನಾನೂ ಕಿಚನ್ಗೆ ಹೋಗಲೇ?

ಕೇದಾರ– (ಕೈ ಹಿಡಿದು ಕೂಡಿಸುತ್ತ) Sit down mr ಕುಮಾರ, ಈಗಲೆ ಏನವಸರ, ಸಾಯುವವರೆಗೂ ನೀನವಳ ಸೇವೆ ಮಾಡುವದು ಇದ್ದೇ ಇದೆಯಲ್ಲ.

ರಾಜು– ಆಗಲಿ ಮಾಮಾ, ಮತ್ತೇನು ಸ್ಪೇಶಲ್ ನ್ಯೂಜ ಹೇಳಿ?

ಕೇದಾರ– ಸ್ಪೇಶಲ್ ಏನು ಬಂತು, ನಿನ್ನ ದಾರಿಯನ್ನೆ ನೋಡುತ್ತಿದ್ದೆ ಅಂತೂ ಬಂದೆಯಲ್ಲ, ನಿಮ್ಮಿಬ್ಬರ ಮದುವೆ ಮಾಡಿ ಡಬಲ್ ಸ್ವೀಟ ತಿನ್ನೋದೆ ಸ್ಪೇಶಲ್ ಐಟಂ.

ರಾಜುಂ– ನಮ್ಮ ಮದುವೆ ನಾಳೆಯೇ ಮಾಡಿ ಮುಗಿಸಿ ಮಾಮಾ, ನನಗೆ ಸಿಕ್ಕಿರುವದು ಕೇವಲ ಒಂದೇ ವಾರದ ರಜೆ.

ಕೇದಾರ– ರಜೆ it means leave, ಅಂದ ಹಾಗೆ ಈಗ ಯಾವ ಡಿಪಾರ್ಟಮೆಂಟಿನಲ್ಲಿರುವೆ?

ರಾಜು– ಅದೆ Space, ಅಂದರೆ ಅಮೇರಿಕೆಯ ಆಕಾಶ ಯಾನ ಸಂಸ್ಥೆಯಲ್ಲಿ.

ಕೇದಾರ– Good very good,ನೀನು ಆಕಾಶ ಯಾನದಲ್ಲಿ ಕುಳಿತು ಉಡಾಯನ ಮಾಡುವಿಯಾ?

ರಾಜು– ಇದೇನು ಮಾಮಾ ಹೀಗೆ ಕೇಳ್ತಿರಿ? ನಾನೆ ಆ ಅಪೋಲೊ

ನೌಕೆಯ ಮುಖ್ಯ ಕಂಟ್ರೋಲರ್, ವಾರಕ್ಕೆ ಎರಡು ಮೂರು ಸಲವಾದರೂ ಚಂದ್ರ ಲೋಕಕ್ಕೂ, ಮಂಗಳ ಗ್ರಹಕ್ಕೂ ಹೋಗಿ ಬರುವದುಂಟು.

ಕೇದಾರ– what ವಾರಕ್ಕೆ ಎರಡು ಮೂರು ಸಲವೇ?

ರಾಜು– ಹೌದು ಮಾಮಾ. ಈಗ ಟೆಕ್ನಾಲಜಿ ತುಂಬ ಫಾಸ್ಟ್ ಆಗಿದೆ.

ಕೇದಾರ– Good good i am very happy, ಸರಿ ಈಗ ನಿಮ್ಮ ವಾಸ್ತವ್ಯ ಎಲ್ಲಿ?

ರಾಜು– ಅದೇ ಅಮೇರಿಕಾದಲ್ಲಿ.

ಕೇದಾರ– ಅಮೇರಿಕಾ ನಿಜ my boy ಆದರೆ ಮನೆ ಎಲ್ಲಿ ನ್ಯೂಯಾರ್ಕೊ, ವಾಷಿಂಗಟನ್ನೊ, ಚಿಕಾಗೊನೊ?

ರಾಜು– ಓಹೋಹೋ.... ನಮ್ಮ ಮನೆ ಯಾವ ಓಣಿಯಲ್ಲಿ ಎಂದು ಕೇಳಿದಿರಾ?

ಕೇದಾರ– You non sence ನ್ಯೂಯಾರ್ಕ, ವಾಷಿಂಗಟನ್, ಚಿಕಾಗೊ, ಲಾಸ್ ಎಂಜಲೀಸ್‌ಗಳೆಲ್ಲಾ ಓಣಿಗಳೆ?

ರಾಜು– No ಮಾಮಾ, ಅವೆಲ್ಲಾ ಮೇನ್ ರೋಡಿನ್ ಹೆಸರುಗಳು.

ಕೇದಾರ– Shut up you foolish fellow, ನೀನೇನು ಅಮೇರಿಕಾದ ಸಿಟಿಯಲ್ಲಿರುವೆಯೋ ಅಥವಾ ಆಫ್ರಿಕಾದ ಕಾಡಿನಲ್ಲಿರುವೆಯೋ?

ರಾಜು– You are correct ಮಾಮಾ, ಆಫ್ರಿಕಾದ ಕಾಡಿನಲ್ಲೆ ಅಲ್ಲಿ ದ್ವಾರಕೀಶನ ಶೀಲಾ ಕೂಡಾ ಭೆಟ್ಟಿಯಾಗಿದ್ದಳು.

ಕೇದಾರ– Whatದ್ವಾರಕೀಶ ಆಫ್ರಿಕಾದಲ್ಲಿ ಶೀಲಾ you raskal one,(ಸಿಟ್ಟಿನಿಂದ) ಗೀತಾ....ಗೀತಾ come here.

ರಾಜು– ಪಾಪ ಆಕೆಯನ್ನೇಕೆ ಕರೆಯುವಿರಿ, ಆಕೆಯೇ ನನ್ನನ್ನು ಬಾ ಎಂದು ಕರೆದದ್ದು.

ಕೇದಾರ What,ಗೀತಾನೆ ನಿನಗೆ ಇನ್‌ವೈಟ ಮಾಡಿದಳೆ? you dirty one, (ಸಿಟ್ಟಿನಿಂದ) ಗೀತಾ....

ರಾಜು– (ಹೆದರಿ) ಬಾಪರೆ ಮರ್‌ಗಯೇ

ಗೀತಾ–	(ಬರುತ್ತ) ಏಕೆ ಡ್ಯಾಡಿ?
ಕೇದಾರ–	ಅಬೆ ಡ್ಯಾಡಿಕೆ ಬಚ್ಚೆ, ಕೋನ್ ಹೈ ಎ ಕುತ್ತಾ?
ಗೀತಾ–	ಅರೆ ನಿಮ್ಮಳಿಯ ಕುಮಾರನೆಂದು ನೀವೆ ಹೇಳಿದಿರಲ್ಲ.
ರಾಜು–	ಹೌದು ಮಾಮಾ ನಾನೆ ನಿಮ್ಮಳಿಯ.
ಕೇದಾರ–	Shut up you dirty dog. first you get out (ರಾಜು ಹೊರ ಓಡುತ್ತಿರಲು ಕುಮಾರ ಅದೇ ಡ್ರೆಸ್ಸಿನಲ್ಲಿ ಒಳ ಬರುತ್ತಿರಲು ಡಿಕ್ಕಿ ಬೀಳುವರು).
ಕುಮಾರ–	ಓ ಮಾಮಾ, (ಚೀರಲು)
ಕೇದಾರ–	ಅಬೆ ಸಾಲೆ, ತೂ ಕೋನ್ ಹೈ?
ಕುಮಾರ–	ಮಾಮಾ ನಾನು ನಿಮ್ಮಳಿಯ, sun in law ಕುಮಾರ ಅಮೇರಿಕಾ.
ಕೇದಾರ–	What ನೀನು ನನ್ನಳಿಯನೆ?
ಕುಮಾರ–	ಹೌದು ಮಾಮಾ ನಾನೆ ನಿಮ್ಮ ರೀಯಲ್ ಅಳಿಯ.
ರಾಜು–	No ಮಾಮಾ ನಿಮ್ಮಳಯ ಅವನಲ್ಲ, ನಾನು.
ಕುಮಾರ–	No no ಮೈ ಅಸಲಿ ಓ ನಕಲಿ
ಕೇದಾರ–	(ಹುಚ್ಚು ಹಿಡಿದಂತೆ) ಓ (ಕುರ್ಚಿ ಎತ್ತಿ) ಖಾಮೂಸ್, Both of you dirty dogs. i say get out, (ಚೀರುವನು, ಇಬ್ಬರೂ ಓ God ಮರ್‌ಗಯೇ, ಎಂದು ಚಿಟ್ಟನೆ ಚೀರಿ ಹೊರ ಓಡುವರು).
ಕೇದಾರ–	you 420, i will kill you, i will kill you,(ಎನ್ನುತ್ತ ಬಂದೂಕು ತೆಗೆದುಕೊಂದು ಬೆನ್ನಟ್ಟುವನು)
ಗೀತಾ–	ಡ್ಯಾಡಿ ಬೇಡ ಪ್ಲೀಜ್ ಬಿಟ್ಟು ಬಿಡಿ (ಎನ್ನುತ್ತ ತಾನೂ ಓಡುವಳು).

==*****======*****====

ಪ್ರವೇಶ–೧೧

ರಸ್ತಾ

(ರಾಜು, ಕುಮಾರ ಓಡುತ್ತ ಬಂದು ಎದುಸಿರು ಬಿಡುತ್ತ)

ರಾಜು– ಬಾಪರೆ ಜಾನ ಬಚಿ ಲಾಖೌಂಪಾಯೇ.

ಕುಮಾರ– ಏನ್ ಪಾಯೆರೆ ನಿಮ್ದುಲಿಂದ ನಾವು ಸಬ್ ಕುಚ್ ಖೋಯೆ.

ರಾಜು.– ನೀ ಯಾಕ ಬಂದು ನಮಗ ಗಂಟು ಬಿದ್ದೆಲೆ ಶನಿ ಮುಂಡೆಮಗನೆ.

ಕುಮಾರ– ನಡು ನೀ ಬಂದೆ ನಮ್ಮ ಹಾಲತ್ ಖರಾಬ ಮಾಡಿ ಇಟ್ಟೆಲ್ಲೊ ಕಳ್ಳ ಮುಂಡೆ ಮಗನೆ.

ರಾಜು– ನಿನಗ ಕೈ ಮುಗಿತಿನಂತ, ನೀ ಸೀದಾ ಅಮೇರಿಕಾಕ ಹಾರಿ ಹೋಗಲೆ ಬಿಕನಾಸಿ,

ಕುಮಾರ– ಕೈಸಾ ಹಾರಿ ಹೋಗಲೆಲೆ ಪಡಪೋಸಿ, ಪೈಸಾ ತೊ ಚೋರಿ ಹುವಾ, ಕಪಡಾ ನೀ ಕಸ್ಕೊಂಡಿ.

ರಾಜು– ನಿನ್ನ ಬಟ್ಟಿ ನಿನಗ ಕೊಡ್ತಿನಪಾ. ತಗೊಂಡು ಹೋಗು.

ಕುಮಾರ– ಹೌದಲೆ ಬೇಟಾ, ಈ ಹಿಂದುಸ್ತಾನದಾಗ ನಮಗ ಇದ್ದಿದೆ ಇದೊಂದು ಆಸರಿ, ಅದನ್ನೆ ಕಳದು ಬಿಟ್ಟೆಲ್ಲ, ಅಂದಮ್ಯಾಲ ನಿಮ್ದು ಅಪ್ಪನ ಹೆಸರ ಅನ್ನಾಕ ಅಂಜಿಕಿ ಯಾಕ?

ರಾಜು– ಹೌದಲೆ ಮಗನಾ, ನೀ ಪಕ್ಕಾ ಬೇಕೂಫ್ ಅಲ್ಲ.

ಕುಮಾರ– ಅಬೆ ಹಮ್ಮ ಅಮೇರಿಕಾಮೆ ಜಿಂದಗಿ ಕರತೆ ಸಮಜೆ?

ರಾಜು– ಅಚ್ಚಾ ಬಾಬಾ ಒಪ್ಪಿದೆ, ನಾ ನಿನಗೊಂದು ಸಹಾಯ ಮಾಡ್ತಿನಿ ನೀನು ನನಗೊಂದು ಸಹಾಯ ಮಾಡು.

ಕುಮಾರ– ಪೈಲೆ ಮೇರಾ ಕಪಡಾ ಕೊಡು ಆ ಮ್ಯಾಲ ಮಾತು.

ರಾಜು– ಆಗಲೆಪಾ ಕೊಡ್ತಿನಿ ಮನಿಗಿ ನಡಿ.

ಕುಮಾರ– ಊಂ ಹೂಂ, ಇಲ್ಲೆ ಈಗಲೆ

ರಾಜು– ಈ ರಸ್ತಾದಾಗ ಅದು ಹ್ಯಾಂಗೊ ಬಿಚ್ಚೋದು?

ಕುಮಾರ– ನನಗೇನು ಮನ್ಯಾಗ ಮರ್ಯಾದಿಲಿಂದ ಕಳಸಿದ್ಯಾ ಬಿಚ್ಚು ಲಗು.

ರಾಜು– ಎಲಾ ಎದಿಮಾಯಿ, ಅರೆ ಅದು ಮಾಮಾ.

ಕುಮಾರ– (ತಿರುಗಿ) ಎಲಾ ಕಳ್ಳ ಓಡದ್ಯಾ, ತಡಿ ನಾನೂ ಬರ್ತಿನಿ(ತಾನೂ ಬೆನ್ನಟ್ಟಿ ಓಡುವನು, ಇತ್ತಲಿಂದ ವಿಕ್ರಂ, ಲಿಂಗಯ್ಯ, ಸಂಗಯ್ಯ ಪ್ರವೇಶ)

ಲಿಂಗಯ್ಯ– ಅಂತೂ ಈ ಮದುವೆ ಹೂ ಎತ್ತಿದಷ್ಟು ಹಗೂರಾಗಿ ಮುಗದು ಹೊಯ್ತು ನೋಡು.

ವಿಕ್ರಂ– ದುನಿಯ ಜುಕ್ತಿ ಹೈ ಲಿಂಗು ಪರ್ ಉಸೆ ಜುಕಾನಾ ವಾಲಾ ಚಾಹಿಯೇ.

ಲಿಂಗಯ್ಯ– ನೀನು ನಿಜವಾಗಿಯೂ ಚಾಣಾಕ್ಷ ವಿಕ್ರಂ, ಆಂದ್ರಾ, ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ, ಕೇರಳಾ ಯಾವದೆ ರಾಜ್ಯವಾಗಲಿ ಯಾವುದೆ ಭಾಷೆಯಾಗಲಿ ಅದೆಷ್ಟು ನಿರರ್ಗಳ, ಪ್ರತಿ ಕೆಲಸಾನೂ ಪರಫೆಕ್ಟ್ ನೂರಾ ಆರು ಮದುವೆ ಆದರೂ ನೂತನ ವರ ಆಗಿದ್ದ, ಪಾರ್ಟ ಅನಬೇಕೂ ನಿಂದೆ,

ವಿಕ್ರಂ– ಇಷ್ಟು ದಿನ ನಾವು ಆಡಿದ್ದೆಲ್ಲ ಸಾಮಾನ್ಯ ಬೇಟೆ ಲಿಂಗು ಮುಂದಿನದೆ ಮಹತ್ವದ್ದು.

ಸಂಗಯ್ಯ– ಅದೆ ರಾಧಾ ಎಂಬ ಹೊಸ ಹುಡುಗಿ ತಾನೆ?

ಲಿಂಗಯ್ಯ– ಈ ಗೀತಾಗ ನೋಡಿದ ಕೂಡಲೆ ನನಗ ಆ ಸೀತಾ ಅನ್ನೋ ಹುಡುಗಿ ನೆನಪಾಯಿತು ನೋಡಿರಿ.

ವಿಕ್ರಂ– ಯಾವ ಸೀತಾ?

ಲಿಂಗಯ್ಯ– ಅದೆ ಮೂರು ವರ್ಷದ ಹಿಂದೆ ಸಂಗಮ ಲಾಡ್ಜ್ ಸರ್ವಿಸ ಪಾರ್ಟಿ ನಡದಾಗ ಎದಿ ಒಡದು ಸತ್ತು ಹೋಗಿತ್ತು ನೋಡರಿ, ಮತ್ತೆಲ್ಲಿ ಆಕಿನೆ ಬಂದಳೇನೋ ಅಂತ.

ವಿಕ್ರಂ– ಸತ್ತವರು ಮತ್ತೆ ಬದುಕಿ ಬರುವದು ಅಸಾಧ್ಯ ಲಿಂಗೂ, ಈ ರಾಧಾಳ ಬಗ್ಗೆ ಮಾತಾಡು.

ಸಂಗಯ್ಯ– ರಾಧಾ ಮಿಂಚಿನ ಬಳ್ಳಿಯಂತೆ ಬಲು ಚುರುಕಾಗಿದ್ದಾಳೆ ಬಾಸ್. ಆಕೆಯ ಉಸಾಬರಿಯೇ ಬೇಡ.

ವಿಕ್ರಂ– ಬಾಯ್ಮುಚ್ಚು ಕತ್ತೆಯಂಥವನೆ, ಇಂಥಾ ಮಿಂಚಿನ ಬಳ್ಳಿಗೆ ಅರಬ್ ಕಂಟ್ರಿಯಲ್ಲಿ ಐವತ್ತು ಬೆಲೆಯಿದೆ ಗೊತ್ತೆ. ಅದರ ಬೇಟೆ ಆಡಲೆಬೇಕು.

ಲಿಂಗಯ್ಯ– ಇಂದು ಮದುವೆಯಾದ ಗಂಗೆ.

ವಿಕ್ರಂ– ಆ ರಾಧಾಳ ಬೆಡ್ ರೂಂ ರೆಡಿಯಾಗುವದರೊಳಗಾಗಿ ಈ ಗಂಗಾಳ ಶವ ಯಾತ್ರೆಗೆ ಸಿದ್ಧಗೊಳಿಸಬೇಕು, ಇದೊ ಹತ್ತುಸಾವಿರ ಇಟ್ಟುಕೊಳ್ಳಿ, ಯಾವದಾದರೊಂದು ಮೂಲೆಯ ಲಾಡ್ಜ ಹಿಡಿದು ಮಜಾ ಮಾಡಿ.

ಲಿಂಗಯ್ಯ– ನಾನೊಂದು ವಾರ ಹೈದ್ರಾಬಾದ ಕಡೆಗೆ ಹೋಗಿ ಬರಬೇಕೆಂದಿದ್ದೆ.

ವಿಕ್ರಂ– ಅಲ್ಲೇನು ವಿಶೇಷ?

ಲಿಂಗಯ್ಯ– ನಾಲ್ಕಾರು ಹಕ್ಕಿಗಳಿವೆ ಒಂದೆರಡಂತೂ ಅಗ್ದಿ ಫಸ್ಟ್ ಕ್ಲಾಸ್ ಒಂದೆರಡು ಲಕ್ಷಕ್ಕೆ ಮೋಸವಿಲ್ಲ.

ಸಂಗಯ್ಯ– ಒಂದು ವೇಳೆ ಅರಬ್ ಶೇಖನೇನಾದರೂ ಸಂದೇಶ ಕಳುಹಿಸಿದರೆ.

ವಿಕ್ರಂ– ಮಾಲ್ ರೆಡಿ, ಹಣ ಕೊಟ್ಟು ಪಡಿ ಎಂಬ ಮಾರುತ್ತರ ಕೊಡು.

ಲಿಂಗಯ್ಯ– ok , ಬಾಸ್ ತಾವು ನಡೆಯಿರಿ, ನಾವೂ ಹೊರಡುವೆವು.

ವಿಕ್ರಂ– ಆದಷ್ಟು ಬೇಗ ಬಾ, ಪಾರಿವಾಳಗಳು ಪಸಂದಾಗಿರಲಿ, bye. (ಹೋಗುವರು)

ಸಂಗಯ್ಯ– ನಡೆ ಲಿಂಗೂ (ಸಂಗಯ್ಯ ಲಿಂಗಯ್ಯ ಕೂಡಿ ಒಂದು ವಿಡಂಬನಾತ್ಮಕ ಪದ ಹಾಡಿದರೆ ಉತ್ತಮ)

===***======***===

ಪ್ರವೇಶ–೧೨

ವಿಕ್ರಮನ ಮನೆ

ವಿಕ್ರಂ– (ಅಮಲಿನಲ್ಲಿ ಬರುತ್ತ) ರಾಧಾ ಡಿಯರ್

ಗಂಗಾ– (ಮದುಮಗಳ ಡ್ರೆಸ್ಸಿನಲ್ಲೆ ಹೊರ ಬರುತ್ತ) ಕ್ಷಮಿಸಿ ನನ್ನ ಹೆಸರು ಗಂಗಾ

ವಿಕ್ರಂ– ಓ ನಿನ್ನ ಹೆಸರು ಗಂಗಾ ಅಲ್ಲವೆ ಸರಿ ಇನ್ನೂ ಮಲಗಿಲ್ಲವೇ?

ಗಂಗಾ– ತಮ್ಮ ಊಟ

ವಿಕ್ರಂ– ನನ್ನ ಊಟ ಸದಾ Bar & restaurant ಗಳಲ್ಲೆ, ನಿನಗಾಗಿ ಒಂದು ತಾಟು ಊಟ ತಂದಿಟ್ಟಿರಬಹುದಲ್ಲ.

ಗಂಗಾ– ತಂದಿದ್ದಾರೆ, ಆದರೆ ನಾನೆಂದೂ ಖಾನಾವಳಿಯ ಊಟ ಉಂಡವಳಲ್ಲ

ವಿಕ್ರಂ– ಮನೆಯಲ್ಲಿ ಅಡಿಗೆ ಮಾಡಿ ಉಣ್ಣುವದು ನನಗೆ ರೂಡಿಯಿಲ್ಲ ನನ್ನ ಪದ್ಧತಿಗೆ ನೀನು ಅಡ್ಜಸ್ಟ್ ಮಾಡಿಕೊಳ್ಳಲೇಬೇಕು

ಗಂಗಾ– ಆಗಲಿ, ನಿಮ್ಮಿಷ್ಟದಂತೆಯೇ ನಡೆಯುವೆ

ವಿಕ್ರಂ– ಇಲ್ಲಿ ಕೇಳು ತುಂಗಾ..

ಗಂಗಾ– ತಾವು ಕುಡಿದು ಬಂದಂತೆ ಕಾಣುವದು

ವಿಕ್ರಂ– ಕುಡಿಯದೆ ಇರಲು ನಾನೇನು ದನವೆ? ಕುಡಿತವೆ ಈ ಕಾಲದ ಸುಸಂಸ್ಕೃತರ ಲಕ್ಷಣ. ನನ್ನ ಪಾಲಿಗಂತೂ ಅದು ಅಮೃತ ಸಂಜೀವಿನಿ ನೋಡು ಕಾವೇರಿ.

ಗಂಗಾ– ಕ್ಷಮಿಸಿ ನನ್ನ ಹೆಸರು ಗಂಗಾ

ವಿಕ್ರಂ– (ಅಸಹನೆ) ಗಂಗಾನೊ, ತುಂಗಾನೋ, ಕಾವೇರಿಯೋ, ಗೋದಾವರಿಯೋ ನಾನು ಮನುಷ್ಯ ಕಣೆ, ಎಷ್ಟು ಹುಡುಗಿಯರ

ಹೆಸರು ಅಂತ ನೆನಪಿನಲ್ಲಿ ಇಟ್ಟುಕೊಂಡು ಕೂಡುವದು.

ಗಂಗಾ– (ಗಾಬರಿ) ಹಾಂ ರಾಧಾ, ತುಂಗಾ, ಕಾವೇರಿ, ಗೋದಾವರಿ ಎಂಬುವರೆಲ್ಲ..

ವಿಕ್ರಂ– ನನ್ನ ಬಾಳಿನಲ್ಲಿ ಬಂದು ಹೊರಟು ಹೋದ ಹೆಣ್ಣುಗಳು, ನೂರಾರು ಹೆಣ್ಣುಗಳಿಗೆ ತಾಳಿ ಕಟ್ಟಿರುವೆ. ಹಾಂ, ಹೆದರಿದಿರು ಸದ್ಯ ನಿನಗಾವ ಸವತಿಯ ಕಾಟವೂ ಇಲ್ಲ, ಇರುವಷ್ಟು ದಿನ ಉಂಡುಟ್ಟು ಹಾಯಾಗಿರು.

ಗಂಗಾ– ಹಾಂ, ಇರುವಷ್ಟು ದಿನ

ವಿಕ್ರಂ– ಹೌದು ಕಣೆ ನಾನು ಇಂಟರ್ ನಾಶನಲ್ ಬಿಜನೆಸ್ ಮ್ಯಾನ್, ಇಂದು ಇಲ್ಲಿ ಇದ್ದರೆ ನಾಳೆ ಮತ್ತೆಲ್ಲೋ, ಜೀವನವೆ ಒಂದು ಪ್ರವಾಹ ಸದಾ ಚಲಿಸುವದೇ ಅದರ ಧರ್ಮ

ಗಂಗಾ– ನೋಡಿ ನೀವು ಗಂಡಸರು, ವ್ಯಾಪಾರಸ್ಥರು ಎಲ್ಲಿಗಾದರೂ ಹೋಗಿ ಬನ್ನಿ, ನಾನಂತೂ ಮನೆ ಬಿಟ್ಟು ಎಲ್ಲಿಗೂ ಬರಲಾರೆ

ವಿಕ್ರಂ– ಲೇ ಹೆಣ್ಣು ಮತ್ತು ದನ ಕೊಂಡವರ ಸೊತ್ತು. ಒಡೆಯ ಓಯ್ದತ್ತ ಹೋಗಲೇಬೇಕು ಅದು ಅವುಗಳ ಕರ್ಮ

ಗಂಗಾ– ನೋಡಿ, ನಾನು ಅಲ್ಪಳು, ಧರ್ಮ ಕರ್ಮಗಳ ಮರ್ಮ ನನಗಂತೂ ತಿಳಿಯದು, ಆದರೆ ಆಜನ್ಮ ಪರ್ಯಂತ ನಿಮ್ಮ ನೆರಳಾಗಿ ಬದುಕುತ್ತ ಸೇವೆ ಮಾಡುವದೇ ನನ್ನ ಧರ್ಮವೆಂದು ತಿಳಿದಿರುವೆ

ವಿಕ್ರಂ– ಅದು ಪುರಾಣ ಕಾಲದ ಮಾತು, ಇದು ರಾಕೆಟ ಯುಗ, ಕಂಪ್ಯೂಟರ ಕಾಲ, ಗಂಡು ಹೆಣ್ಣುಗಳೆಲ್ಲ ಸಮಾನ ಜೀವಿಗಳು, ಸಮಯ ಸಿಕ್ಕಾಗಲೆಲ್ಲ ತಮ್ಮ ಪಾಲಿಗೆ ದಕ್ಕಿದ ದೇಹಗಳೊಂದಿಗೆ ಕೂಡಿ ಚಕ್ಕಂದವಾಡುತ್ತ ಬಾಳು ಸಕ್ಕರೆಯಂತೆ ಸವಿಯಾಗಿಸಿಕೊಳ್ಳುವದೆ ಜೀವನದ ಜೀವಾಳ

ಗಂಗಾ– ಅದು ಮಹಾಪಾಪ, ನರಕದ ಹುಳುವಾಗಿ ಕೊಳೆಯ ಬೇಕಾದೀತು

ವಿಕ್ರಂ– ಯಾವುದೇ ಪಾಪ? ಯಾವುದು ಪುಣ್ಯ? ಎಲ್ಲಿವೆ ಆ ಸ್ವರ್ಗ ನರಕಗಳೆಂಬ ಸ್ಮಶಾನಗಳು? ಎಂದಾದರು ನೀನು ನೋಡಿರುವೆಯಾ?

ಗಂಗಾ— ಆ ರೀತಿ ಶಾಸ್ತ್ರ ಪುರಾಣಗಳು ಸಾರುತ್ತವೆ

ವಿಕ್ರಂ— ಬೆಂಕಿ ಹಚ್ಚು ಆ ನಿನ್ನ ಗೊಡ್ಡು ಶಾಸ್ತ್ರಗಳಿಗೆ, ಲೇ ಹೆಣ್ಣೆ ಕೇಳಿಲ್ಲಿ, ಜಗದಲ್ಲಿರುವದು ಕೇವಲ ಎರಡೇ ಎರಡು ಜಾತಿಗಳು ಒಂದು ಹೆಣ್ಣು, ಇನ್ನೊಂದು ಗಂಡು, ಕುಲಗಳೂ ಎರಡೆ, ಒಬ್ಬ ಶ್ರೀಮಂತ, ಇನ್ನೊಬ್ಬ ಬಡವ, ಹೆಣ್ಣು, ಹಣ ಮತ್ತು ಹೆಂಡಗಳೇ ಈ ಕಾಲದ ಕಾಮಧೇನು ಕಲ್ಪವೃಕ್ಷ.

ಗಂಗಾ— ನೀವು ಗಂಡಸರು ಕಂಡಂತೆ ನಡೆಯಬಹುದು, ಆದರೆ ಆರ್ಯನಾರಿ ಕುಲಪುತ್ರಿಯಾದ ನಾನು..

ವಿಕ್ರಂ— ಆ ಭಂಡ ತತ್ವ ಬದಿಗೊತ್ತಿ, ಕಂಡ ಗಂಡುಗಳ ತೋಳ್ತೆಕ್ಕೆಯಲ್ಲಿ ಹೊರಳಾಡುವ ಗುಣ ಮೈಗೂಡಿಸಿಕೊಂಡರೇನೆ ಹೆಣ್ಣು ಸುಖವಾಗಿ ಬುದುಕುವುದು ಸಾಧ್ಯ ನೆನಪಿರಲಿ

ಗಂಗಾ— ಓರ್ವ ಸತಿಗೆ ಪತಿಯಾದ ನೀವು ಈ ಮಾತು ಹೇಳುವದೇ?

ವಿಕ್ರಂ— ಹೇಳುತ್ತಿರುವದು ನಾನಲ್ಲ ಕಣೆ ಈ ಬುದ್ಧಿವಂತ ಸಮಾಜ, ಹೆಣ್ಣಿಗೆ ಧರ್ಮ ಕರ್ಮ, ನೀತಿ ನಿಯಮ ಎಂಬ ನೂರಾರು ಸಂಕೋಲೆ ನಿರ್ಮಿಸಿ ವರದಕ್ಷಿಣೆ ವರೋಪಚಾರದ ಪಿಡುಗು ಸೃಷ್ಟಿಸಿ, ಕೇವಲ ಕಾಮನಾಟದ ಗೊಂಬೆಗಳನ್ನಾಗಿ ಕತ್ತಲ ಕೋಣೆಯಲ್ಲಿ ಕೂಡಿಸಿ ಬಿಟ್ಟಿದೆಯಲ್ಲ ಇದೇ ಕತ್ತೆಯಂಥಾ ಸಮಾಜ, ಈ ಕಾಲಕ್ಕೆ ಅದೆಷ್ಟು ಬಡಹೆಣ್ಣುಗಳು ಮದುವೆಯನ್ನೇ ಕಾಣದೆ ಮಸಣ ಸೇರುತ್ತಿವೆ ಎಂಬುದು ಗೊತ್ತಿದೆಯೇ ನಿನಗೆ? ಅಂತಹ ಹೆಣ್ಣುಗಳ ಉದ್ಧಾರಗೈದು ಸುಖದ ಸುಪ್ಪತ್ತಿಗೆ ಹಚ್ಚುವದಕ್ಕಾಗಿಯೇ ನಮ್ಮಂಥಾ ಧೀರರು ಹುಟ್ಟಿ ಬಂದುದ್ದು, ಇದರಿಂದ ನಮಗೂ ಸುಖ, ನಿಮಗೂ ಸಂತೃಪ್ತಿ, ಗಾಳಿ ಬಿಟ್ಟಾಗ ತೂರಿಕೊಳ್ಳುವದೇ ಜಾಣತನ. ಸುಮ್ಮನೆ ನಾನು ಹೇಳಿದಂತೆ ಕೇಳು ಸುಖವಾಗಿ ಬಾಳು

ಗಂಗಾ— ಹೆಣ್ಣಿಲ್ಲದೆ ಈ ಪರಪಂಚ ನಡೆಯದು, ಹೆಣ್ಣು ಸಂಸಾರದ ಕಣ್ಣು ಎಂಬ ಸತ್ಯ ಗೊತ್ತಿದ್ದರೂ ಹೆಣ್ಣನ್ನು ಕಾಲ ಕಸದಂತೆ ಕಂಡು ಗುಂಡಿಗೆ ದೂಡುತ್ತಿರುವ ಈ ಗಂಡು ಸಮಾಜ ಕೆಟ್ಟಾದರೂ ಹೋಗಲಿ, ಸುಟ್ಟಾದರೂ ಬೀಳಲಿ, ಆದರೆ ಹೆಣ್ಣು ಮಕ್ಕಳಾದ ನಾವೆಂದೂ ಹಾದಿ ಬಿಟ್ಟು ಹೋಗಲಾರೆವು

ವಿಕ್ರಂ— ಲೇ ಕತ್ತೆ, ಎಲ್ಲಿಯೋ ಹುಟ್ಟಿದ ಹೆಣ್ಣು ಯಾವನೊ ಒಬ್ಬ ಗಂಡಿಗೆ ಹೆಂಡತಿಯಾಗುವಂತೆ, ನದಿಗೆ ಯಾವ ಸಾಗರವಾದರೇನು ಹೆಣ್ಣಿಗೆ ಯಾವ ದೇಶದ ಗಂಡಾದರೇನು, ಮೋಕ್ಷವೆಂಬುದು ಒಂದೆ ತಾನೆ ಇನ್ನು ಆ ಹಳೆ ತತ್ವ ಬಿಡು, ಹೊಸ ಬಾಳಿಗೆ ಹೊಂದಿಕೊ

ಗಂಗಾ— ಅದು ಬಾಳಲ್ಲ ಹಾಳು, ಬಾಳು ಅಂದ ಮೇಲೆ ಅದಕ್ಕೊಂದು ಬೆಲೆ ಬೇಡವೇ? ಹಾಗೆ ಮಾನಗೆಟ್ಟು ಬಾಳುವದಕ್ಕಿಂತ ಮರಣವೇ ಲೇಸು

ವಿಕ್ರಂ— ಮನುಷ್ಯ ಪ್ರಕೃತಿಯ ಕೈಗೊಂಬೆ ಕಣೆ. ತಾಳಕ್ಕೆ ತಕ್ಕಂತೆ ಕುಣಿಯಲೇ ಬೇಕು, ಕಾಲಕ್ಕೆ ತಕ್ಕಂತೆ ನಡೆಯಲೇಬೇಕು

ಗಂಗಾ— ನಾನೆಂದಿಗೂ ನಿಮ್ಮ ಮಾತು ಒಪ್ಪಲಾರೆ

ವಿಕ್ರಂ— ನೀನು ಒಪ್ಪಿದರೆಷ್ಟು ಬಿಟ್ಟರೆಷ್ಟು, ಕುರಿಗೆ ಕೇಳಿ ಯಾರೂ ಮಸಾಲೆ ಅರಿಯುವರಿಲ್ಲ ಗೊತ್ತಾ? ಯೋಚಿಸಿ ನಿರ್ಧಾರಕ್ಕೆ ಬಾ. ನಾ ಬರ್ತೀನಿ (ಹೊರಡಲು)

ಗಂಗಾ— ನಾನು ಆ ಕೀಳು ಆಸೆಗಾಗಿ ಕರೆಯಲಿಲ್ಲ

ವಿಕ್ರಂ— ನಿನ್ನದು ಮತ್ತಾವ ಮಹಾದಾಸೆ ಬೇಗ ಹೇಳು

ಗಂಗಾ— ಇಲ್ಲಿ ನಾನು ಒಂಟಿಗಳು, ಮದುವೆಗೆ ಬಂದಿದ್ದ ನಿಮ್ಮ ತಂದೆ ತಾಯಿ ಬಂಧು ಬಳಗ

ವಿಕ್ರಂ— ಓ ಆ ವಿಷಯಾನೆ ಹಹ್ಹಹ.. ಅವೆಲ್ಲಾ ಬಾಡಿಗೆ ಕುದುರೆಗಳು ಕೆಲಸ ಮುಗಿದ ನಂತರ ಕೂಲಿ ಕೊಟ್ಟು ಅಟ್ಟಿ ಬಿಟ್ಟೆ, ಆ ಮದುವೆ ಎಂಬುದೊಂದು ನಕಲಿ ನಾಟಕ ಕಣೆ, ನಿನಗೊಬ್ಬ ಗಂಡ ಬೇಕಾಗಿದ್ದ ನಿಮ್ಮಪ್ಪನಿಗೊಬ್ಬ ಅಳಿಯ ನನಗಂತೂ ಹಣದ ತುಂಬ ಅವಶ್ಯಕತೆಯಿತ್ತು, ಕಂಡ ಹೆಣ್ಣಿನ ಕೊರಳಿಗೆ ತಾಳಿ ಕಟ್ಟಿ ಹಣ ಗಳಿಸುವದೇ ನನ್ನ ಮುಖ್ಯ ಕಾಯಕ

ಗಂಗಾ— (ಗಾಬರಿ ಕಂಗೆಟ್ಟು) ಏನೆಂದಿರಿ ನೀವು.. ನೀವು..

ವಿಕ್ರಂ— ಇಂಟರ್‌ನ್ಯಾಶನಲ್ ಬಿಜನೆಸ್ ಮ್ಯಾನ ಕಣೆ, ಉಳಿದ ಗಂಡುಗಳಂತೆ, ಹಣ ಬಂಗಾರ T.V.ವೀಡಿಯೋ, ಬೈಕು ಕಾರು ಬೇಡಿ ಕಾಡಲಾರೆ, ತರದಿದ್ದರೆ ಗ್ಯಾಸ ಹಾಕಿ ಸುಡಲಾರೆ, ಏನಿದ್ದರೂ ನನ್ನದು ವ್ಯಾಪಾರ, ಆ ತಾಯಿಗಂಡರ ಲೀಸ್ಟ್‌ನಲ್ಲಿ ನನ್ನ ಸೇರಿಸಬೇಡ, ಬರಲೆ (ಹೊರಟು

ಮತ್ತೆ ಹಿಂತಿರುಗಿ) ಹಾಂ ಒಂದು ಮಾತು, ಈ ವಿಷಯವೇನಾದರೂ ನಿನ್ನ ಅಣ್ಣ ಅಪ್ಪಂದಿರಿಗೆ ಗೊತ್ತಾಗಿ, ಅವರು ಎದೆಯೊಡೆದು ಸತ್ತರೆ ಅದಕ್ಕೆ ನೀನು ಹೊಣೆಯೇ ಹೊರತು ನಾನಲ್ಲ, ಎಚ್ಚರ, Bye (ಹೊರ ಹೋಗುವನು)

ಗಂಗಾ– ಅಯ್ಯೋ ಭಗವಂತಾ.. ಇದು ಮದುವೆಯಲ್ಲ ಮನೆ ಹಾಳು. ಅಯ್ಯೋ ದುರ್ವಿಧಿಯೇ, ಇದಾವ ನಿನ್ನ ಸೇಡು, ನಾನಾವ ಪಾಪಗೈದಿರುವನೆಂದು ನನಗೆ ಈ ಶಿಕ್ಷೆ ನೀಡಿದೆ, ಅಯ್ಯೋ ಅಪ್ಪಾ.. (ಆಳುತ್ತ ನೆಲಕ್ಕೆ ಬೀಳುತ್ತಿದಂತೆ ತೆರೆ)

===**===**===

ಪ್ರವೇಶ–೧೩

ರಸ್ತಾ

(ರಾಜು, ಗೀತಾ ಎದುರು ಬದುರಾಗಿ ಭೇಟ್ಟಿ)

ರಾಜು– ಅರೆ, ಗೀತಾ, ನೀನು.. ಎಲ್ಲಿಗೆ?

ಗೀತಾ– ನಿನ್ನನ್ನೆ ಹುಡುಕುತ್ತ ಹೊರಟಿದ್ದೆ ರಾಜು, ಎರಡು ದಿನದಿಂದ ಭೇಟಿಯೇ ಇಲ್ಲವಲ್ಲ ಎಲ್ಲಿಗೆ ಹೋಗಿದ್ದೆ? ಆ ಶನಿ ಎಲ್ಲಿ?

ರಾಜು– ನಾನೆಲ್ಲಿಗೂ ಹೋಗಿಲ್ಲ ಗೀತಾ, ಆ ಶನಿಗೆ ಹೆದರಿ ತಲೆ ಮರಿಸಿಕೊಂಡಿದ್ದೇನೆ ಅಷ್ಟೆ!

ಗೀತಾ– ಮುಂದೆ ನಮ್ಮ ಗತಿ?

ರಾಜು– ನಿಮ್ಮ ಡ್ಯಾಡಿ ಏನನನ್ನುತಿದ್ದಾನೆ, ಅದು ಮೊದಲು ಹೇಳು?

ಗೀತಾ– ಸಿಟ್ಟಿನಿಂದ ಕೆಂಡ ಕಾರುತ್ತಿದ್ದಾನೆ, ಹಗಲೆಲ್ಲಾ ಕೈಯಲ್ಲಿ ಬಂದೂಕು ಹಿಡಿದುಕೊಂಡೆ ಅಡ್ಡಾಡುತ್ತಿದ್ದಾನೆ, ಕಂಡಲ್ಲಿ ಗುಂಡಿಕ್ಕುವೆನೆಂದು ಕೂಗಾಡುತ್ತಿದ್ದಾನೆ

ರಾಜು– ಬಾಪರೆ.. ಬಂದೂಕು, ಗುಂಡು, ಯಾರಿಗಂತೆ?

ಗೀತಾ– ಆತನಿಗೆ ಮೊಸ ಮಾಡಿದ ನಕಲಿ ಅಳಿಯನಿಗಂತೆ

ರಾಜು– ಅಂದರೆ ಇಂದಿಲ್ಲ ನಾಳೆ ನನಗೆ ಶೂಟ ಮಾಡುವುದು ಗ್ಯಾರೆಂಟಿ (ನಟನೆ) ಅಯ್ಯೋ ಗೀತಾ, ನಾ ಸತ್ತರೆ ನಾಳೆ ನಿನ್ನ ಗತಿ. ಗಂಡ ಸತ್ತ ಮುಂಡೆಯಾಗುವೆಯಲ್ಲ

ಗೀತಾ– ನನ್ನದು ಏನಾದರಾಗಲಿ, ಮೊದಲು ನೀನು ಸಾಯುವಿಯಲ್ಲ ಅದರ ಬಗ್ಗೆ ಯೋಚಿಸು ಡಿಯರ್

ರಾಜು– ಇನ್ನೆಲ್ಲಿ ವಿಚಾರಿಸುವದು ನಾನಂತೂ ಸತ್ತೆ, ಸತ್ತೆ ಹೋದೆ (ನಿಂತಲ್ಲೆ ಸಟೆಯುವನು)

ಗೀತಾ– (ನಟನೆ) ಅಯ್ಯೋ ರಾಜು, ನೀನೆಷು ಚೆನ್ನಾಗಿದ್ದೆಯಲ್ಲ ಡಿಯರ್. ಏಕಾ ಏಕಿ ನಿಂತಲ್ಲೆ ಸತ್ತೆಯಲ್ಲೊ, ಇನ್ನು ಮುಂದೆ ಒಂಟಿಯಾಗಿ ನಾನ್ಹೇಗೆ ಬದುಕಲಿ ಯಾರನ್ನು ಮದುವೆಯಾಗಲಿ? ಹೇಳು ಡಿಯರ್?

ರಾಜು– ನಾನು ಸತ್ತಿರುವೆ ಡಾರ್ಲಿಂಗ್, ಮಾತಾಡಲಾರೆ, ನೀನು ಅಳಬೇಡ, ನನ್ನ ಮರೆತುಬಿಡು

ಗೀತಾ– ಕಣ್ಣೆದುರಿನಲ್ಲೆ ನಿನ್ನ ಹೆಣವಿಟ್ಟುಕೊಂಡು ಅದ್ಹೇಗೆ ಅಳದಿರಲಿ ಡಿಯರ್ ನಿನ್ನಂಥಾ ಮುತ್ತಾಳನನ್ನು ಅದ್ಹೇಗೆ ಮರೆಯಲಿ? ಅಯ್ಯೋ ಡಿಯರ್

ರಾಜು– ನನ್ನ ಈ ಶವವನ್ನು ಕರೆಂಟ್ ಚಿತಾಗಾರದಲ್ಲಿ ಸುಟ್ಟು ಬಿಡೆಂದು ನಿನ್ನ ಡ್ಯಾಡಿಗೆ ಹೇಳು ಗೀತಾ, ನನಗೆ ಎಳ್ಳು ಕಾಳಷ್ಟು ನೋವಾಗದು

ಗೀತಾ– ನಿನ್ನ ಅಂತಿಮ ಆಸೆ ಈಡೇರಿಸುವದು ನನ್ನ ಆದ್ಯ ಕರ್ತವ್ಯ ಹಾಗೆಯೇ ಮಾಡಿಸುವೆ, ಅಂದಹಾಗೆ ನನ್ನ ಡ್ಯಾಡಿಯೇ ಬಂದರು

ರಾಜು– (ಗಾಬರಿ) ಏನು ನಿನ್ನ ಡ್ಯಾಡಿ ಬಂದೂಕು ಹಿಡಿದುಕೊಂಡು ಬಂದು ಬಿಟ್ಟನೆ. ಬಾಪರೆ, ಮರ್‌ಗಯೇ (ಓಡುತ್ತಿರಲು ಗೀತಾ ಆತನ ಕಾಲರ್ ಹಿಡಿದು)

ಗೀತಾ– You fool ಸುಮ್ಮನೆ ನಿಲ್ಲು.

ರಾಜು– (ನಡುಗುತ್ತ) ನಿನ್ನ ಕೈಮುಗಿವೆ ಗೀತಾ, ದಯವಿಟ್ಟು ನನ್ನ ಬಿಟ್ಟುಬಿಡು, ಸಾಧ್ಯವಾದರೆ ಮುಂದಿನ ಜನ್ಮದಲ್ಲಿ ಮತ್ತೆ ಭೇಟಿಯಾಗೋಣ, ಪ್ಲೀಜ್

ಗೀತಾ– ಅಯ್ಯೋ ಬುದ್ದು, ಇಷ್ಟೇನೆ ನಿನ್ನ ಶೂರತನ?

ರಾಜು– ಅಯ್ಯೋ ಗೀತಾ ನಾನು ಬಹಾದ್ದೂರ ಗಂಡು ನಿಜ. ಆದರೆ ನಿನ್ನ ಡ್ಯಾಡಿ ಬಂದೂಕು, ಗುಂಡು, ಪ್ಲೀಜ ಬಿಟ್ಟು ಬಿಡು ನನ್

ಗೀತಾ– ಎಲಾ ಮಂಕುದಿನ್ನೆ, ಸುಮ್ಮನೆ ನಿಲ್ಲು, ನನ್ನ ಡ್ಯಾಡಿಯೂ ಇಲ್ಲ, ಬಂದೂಕು ಇಲ್ಲ, ಹಾಸ್ಯಕ್ಕೆ ಅಂದೆ ಅಷ್ಟೆ

ರಾಜು– ಈ ಮಾತು ನಿಜಾನಾ.. (ಸುತ್ತಲೂ ನೋಡಿ) ಅರೆ ಹೌದಲ್ಲ.

ಗೀತಾ– ಅಡ್ಡಿಯಿಲ್ಲ ಕಣೋ, ನೀನು ಪಕ್ಕಾ ಹುಲಿ

ರಾಜು– ಅಂದರೆ ಇಷ್ಟು ದಿನ ನರಿ ಅಂತ ತಿಳ್ಕೊಂಡಿದೇನು? ಲೇ ಗೀತಾ

ನಾನು ಸಿಟ್ಟಿಗೆದ್ದರೆ ಸಿಂಹ ಕಣೇ, ಸಾಹಸ ಸಿಂಹ, ನಿನ್ನ ಡ್ಯಾಡಿಯಂಥಾ ಕಚಡಾಗಳಿಗೆಲ್ಲ ಹೆದರುವೆನೆಂದು ತಿಳಿದಿಯಾ? ಆತ ಬಂದೂಕು ಹಿಡಿದು ಬಂದರೆ, ನಾನು ಮಷಿನ್ ಗನ್ ತಂದು ಡಿಸ್ಯುಂ ಅಂತ ಹೊಡೆದು ಒಂದೇ ಒಂದು ಸೆಕೆಂಡಿನಲ್ಲಿ ಸಪಾಟ ಮಾಡಬಲ್ಲೆ ಗೊತ್ತಾ?

ಗೀತಾ– ಭಲೆ ಉತ್ತರ ಭೂಪ

ರಾಜು– ಈಗ ಮುಂದಿನ ಪ್ರೋಗ್ರಾಮ್ ಏನು?

ಗೀತಾ– ಮೊದಲು ಟಿಫನ್ ಅನಂತರ ಪಿಕ್ಚರ‍್ರು

ರಾಜು– ಆಮೇಲೆ?

ಗೀತಾ– ನಾನೇ ನಾನು, ನೀನೇ ನೀನು

ರಾಜು– Alright ಡಿಯರ್ come on (ಡಾಯಲಾಗ ಹಾಡಿ ಹೋಗುವರು)

===***===***===

ಪ್ರವೇಶ–೧೪

ಗಾರ್ಡನ್

(ರಾಧಾ, ವಿಕ್ರಂ ವಿಹಾರ ಡಾಯಲಾಗ)

ರಾಧಾ– ಡಿಯರ್, ಈ ನಿಸರ್ಗ ಅದೆಷ್ಟು ಸುಂದರವಾಗಿದೆ ನೋಡಿ

ವಿಕ್ರಂ– ಸವಿಯು ಸಕ್ಕರೆಯೊಳಗೆ, ಸಕ್ಕರೆಯು ಸವೆಯೊಳಗೆ, ಸಕ್ಕರೆ ಸವಿಗಳೆರಡು ನಿನ್ನ ನಾಲಿಗೆಯೊಳಗೆ ಎಂಬ ಕವಿವಾಣಿಯಂತೆ ಇಂದು ನಿನ್ನ ಸಂತೋಷ ಈ ನಿನ್ನ ನಯನಗಳಲ್ಲಿ ಪ್ರತಿ ಬಿಂಬಿಸುತ್ತಿದೆಯಷ್ಟೆ.

ರಾಧಾ– ಇಂದು ನಿಜವಾಗಿಯೂ ನಾನು ಪರಮ ಸುಖಿ

ವಿಕ್ರಂ– ನನ್ನ ಸೌಭಾಗ್ಯವೇನು ಸಾಮಾನ್ಯವೆ? ನಿನ್ನಂಥಾ ಸುಂದರ ಸುಶಿಕ್ಷಿತ, ಸುಸಂಸ್ಕೃತ ಕನ್ನೆಯ ಒಲವಿಗೆ ಪಾತ್ರನಾಗುವದೆಂದರೆ

ರಾಧಾ– ಬಿಡಿ ರಾಜಾ, ನಾನೇನು ಮಹಾ! ಎಂತಹ ಹೆಣ್ಣನ್ನೂ ಆಕರ್ಷಿಸುವಂಥಾ ಮೋಹಕ ವ್ಯಕ್ತಿತ್ವ ನಿನ್ನದು

ವಿಕ್ರಂ– ತಾಪಸಿಯೂ ಮರುಳಾಗುವ ರೂಪಸಿ ನೀನು, ನಿನ್ನ ಪ್ರೀತಿ ಸಂಪಾದಿಸಿದ್ದು ನನ್ನ ಪೂರ್ವ ಜನ್ಮದ ಪುಣ್ಯವೇ ಸರಿ

ರಾಧಾ– ನಾನಂಥಾ ಅಂದದ ಅರಸಿಯೇ?

ವಿಕ್ರಂ– ನಿನ್ನಂದ ವರ್ಣಿಸಲು, ಈ ಚಂದ ಬಣ್ಣಿಸಲು ಆ ಸಹಸ್ರ ನಾಲಿಗೆಯ ಆದಿಶೇಷನಿಂದಲೂ ಸಾಧ್ಯವಿಲ್ಲ ಡಾರ್ಲಿಂಗ್

ರಾಧಾ– ಅಂದರೆ ಈ ಮೊದಲು ನೀವು ಕಂಡ ಹೆಣ್ಣುಗಳೆಲ್ಲ..

ವಿಕ್ರಂ– ಹೆಣ್ಣು ರೂಪದ ಹುಳುಗಳು, ಕೀಳು ಕಚಡಾಗಳು

ರಾಧಾ– ನನ್ನಂತೆ ನಿಮ್ಮನ್ನು ಪ್ರೀತಿಸಿ ಬಂದ ಹೆಣ್ಣುಗಳೂ ಸಾಕಷ್ಟಿರಬೇಕಲ್ಲವೆ?

ವಿಕ್ರಂ– ನೂರಾರು, ಹೇಗೆ ಬಂದುವೋ ಹಾಗೆಯೇ ಹೋದುವು

ರಾಧಾ– ಅಂದರೆ.. ಎಲ್ಲರೂ ಸತ್ತು ಹೋದರೆ?

ವಿಕ್ರಂ– ಸತ್ತುವೊ?ಕೆಟ್ಟವೊ. ಏನಾದವು ಎಂಬುದು ಅವರ ಭವಿಷ್ಯ ಬರೆದ ಬ್ರಹ್ಮನಿಗೂ ಗೊತ್ತಿಲ್ಲವೆಂದ ಮೇಲೆ ನನಗಾದರೂ ಹೇಗೆ ತಿಳಿಯಬೇಕು

ರಾಧಾ– ಅಂದಮೇಲೆ ಆ ಲಿಸ್ಟಿನ ಮುಂದಿನ ಹೆಸರು ನನ್ದೆ ಆಗಿರಬೇಕು

ವಿಕ್ರಂ– ಛೇ.. ಅದು Impossible

ರಾಧಾ– ಎಂದಿಗಿದ್ದರೂ ನೀವು ಗಂಗೆಯ ಗಂಡ, ಅಂದಮೇಲೆ ನನ್ನ ಸ್ಥಾನ..

ವಿಕ್ರಂ– ಈ ನನ್ ಹೃದಯದಲ್ಲಿ ನಿನ್ನ ಸ್ಥಾನ ಅಚಲವಾದುದು ರಾಧಾ. ಅಮರವಾದುದು, ಆ ಗಂಗೆ ಅಷ್ಟೆ ಏಕೆ, ಆ ದೇವಲೋಕದ ರಂಭೆ ಊರ್ವಶಿಯರು ಬಂದರೂ ನಿನ್ನ ಸ್ಥಾನಕ್ಕೆ ಚ್ಯುತಿಯಿಲ್ಲ

ರಾಧಾ– ಈ ಮಾತು ನಿಜವೆ ರಾಜಾ?

ವಿಕ್ರಂ– ನಿಜ ಡಾರ್ಲಿಂಗ್, ಆ ರೀತಿ ಪ್ರಮಾಣ ಮಾಡುವೆ.

ರಾಧಾ– ಆಗಲೆಪ್ಪಾ ತುಂಬ ಸಂತೋಷ, ಇಂದಿಗೆ ಈ ಬಾಳು ಸಾರ್ಥಕವಾಯಿತು. ಬನ್ನಿ ಹೊತ್ತಾಯಿತು ಹೋಗೋಣ

ವಿಕ್ರಂ– ನಡೆ ಆದರೆ ಈ ರೀತಿ ಮೌನ ಗೌರಿಯಂತಲ್ಲ, ನವಿಲಿನಂತೆ ಕುಣಿಯುತ್ತ ಕೋಗಿಲೆಯಂತೆ ಹಾಡುತ್ತ

ರಾಧಾ– ನೀವು ತುಂಬ ರಸಿಕರಪ್ಪಾ ಆಗಲಿ ಬನ್ನಿ (ಮತ್ತೆ ಹಾಡುತ್ತ ಹೋಗುವರು)

===***===***===

ಪ್ರವೇಶ–೧೫

ರಸ್ತಾ

ರಾಧಾ– (ಸ್ವ) ದೇವಲೋಕದ ರಂಭೆ ಊರ್ವಶಿಯರು ಬಂದರೂ ನಿನ್ನ ಹೃದಯದಲ್ಲಿನ ನನ್ನ ಸ್ಥಾನಕ್ಕೆ ಎಂದಿಗೂ ಚ್ಯುತಿ ಬಾರದಲ್ಲವೆ? ಎಲೋ ನಯವಂಚಕ ನಾಯಿ ಇಂಥಾ ಬಣ್ಣದ ಮಾತಾಡಿ ಅದೆಷ್ಟು ಹೆಣ್ಣುಗಳ ಬಾಯಿಗೆ ಮಣ್ಣು ಹಾಕಿರುವೆ ಚಾಂಡಾಲ, ತಡೆ, ನಿನ್ನ ಅಂತಿಮ ಯಾತ್ರೆಗೆ ಸಿದ್ಧತೆ ಮಾಡುವೆ.

ರಾಮ– (ಬಂದು) ಮಾಚೀಸ್ ಪ್ಲೀಜ್.

ರಾಧಾ– Shut up ನಾನೇನು ನಿನ್ನ ಕಣ್ಣಿಗೆ ಧೂಮಪಾನ ಮಾಡುವ ಗಂಡಿನಂತೆ ಕಾಣುತ್ತಿರುವೆನೆ?

ರಾಮ– ಕ್ಷಮಿಸಿ, ವೇಷ ಹೆಣ್ಣಿನದಾದರೂ ಧೈರ್ಯ ಗಂಡಿನದು.

ರಾಧಾ– ನೀನೂ ಒಬ್ಬ ಗಂಡು ಗೋಪಿಯೇ?

ರಾಮ– ಹೌದು ಮೇಡಂ, ಹೆಸರು ರಾಮ ಭೈರಿ ಅಂತ.

ರಾಧಾ– ಕೋಡ್ ನಂಬರ?

ರಾಮ– ಝಿರೋ ಝಿರೋ ಡಬಲ್ ಸೆವನ್.

ರಾಧಾ– ಆಪರೆಷನ್ ಫೈಲ್.

ರಾಮ– ಮಹಿಷಾಶೂರ ಮರ್ಧಿನಿ

ರಾಧಾ– ಏನು ವಿಶೇಷ ರಾಮ?

ರಾಮ– ನನ್ನನ್ನು ನಿಮ್ಮ ಸಹಾಯಕ್ಕಾಗಿ ಡೆಪ್ಯೂಟ ಮಾಡಲಾಗಿದೆ ಮೇಡಂ, ನನ್ನ ಡ್ಯೂಟಿಯನ್ನು ನೀವೆ ಸೂಚಿಸಬೇಕು.

ರಾಧಾ– ಸಧ್ಯ ಗಂಗಾ ಅಸಹಾಯಕಿ.

ರಾಮ– ಅಲ್ಲಿ ನನ್ನದೇನು ಕೆಲಸ?

ರಾಧಾ– ಆ ವಿಕ್ರಂ ವಿಷಜಂತು, ಯಾವಾಗ್ಗೆ ಏನೆಂಬುದು ಹೇಳಲು ಬರುವಂತಿಲ್ಲ, ಆ ನಾಯಿಯನ್ನು ಅವಳಿಂದ ದೂರವೇ ಇಟ್ಟಿರಬೇಕು.

ರಾಮ– ಆ ವಿಕ್ರಂ ಗಂಗೆಯ ಗಂಡನಲ್ಲವೆ?

ರಾಧಾ– ಗಂಡನಲ್ಲ ಭಂಡ, ನರರೂಪಿ ರಾಕ್ಷಸ.

ರಾಮ– ನಿಮ್ಮ ಉದ್ದೇಶ...

ರಾಧಾ– ನಮ್ಮ ಆಪರೇಶನ್ ಮುಗಿಯುವವರೆಗೂ ಆ ಗಂಗಾ ಗಂಗೆಯಂತೆ ಪವಿತ್ರಳಾಗಿಯೇ ಉಳಿಯಬೇಕು, ಅವಳು ನಾಯಿ ಮುಟ್ಟಿದ ಮಡಿಕೆ ಆಗಬಾರದೆಂಬುದೆ ನನ್ನ ಉದ್ದೇಶ.

ರಾಮ– ಆಗಲಿ ಮೇಡಂ, ತಾವು ನಿಶ್ಚಿಂತರಾಗಿರಿ ನಾನಿನ್ನು ಬರಲೆ (ಹೋಗುವನು)

ರಾಧಾ– ಹೇ ದೇವಾ! ಆದಷ್ಟು ಬೇಗ ಈ ಆಪರೇಶನ್ ಕೆಲಸ ಮುಗಿಯುವಂತೆ ಮಾಡು ತಂದೆ, ಬರ್ತಿನಿ(ಹೊರಡಲು ಎದುರಿನಿಂದ ಮಹೇಶ)

ಮಹೇಶ– Good morning ಮೇಮಸಾಬ.

ರಾಧಾ– Good morning ಮಹೇಶ ಕ್ಷೇಮವೆ?

ಮಹೇಶ– ದೇವರ ದಯದಿಂದ ಆರೋಗ್ಯವಾಗಿದ್ದೇನೆ ಮೇಮಸಾಬ. ನಮ್ಮ ತಂದೆಯವರು ನಿಮ್ಮನ್ನು ತುಂಬ ನೆನೆಸುತ್ತಾರೆ.

ರಾಧಾ– ಅದು ಅವರ ದೊಡ್ಡ ಗುಣ.

ಮಹೇಶ– ಅದಕ್ಕೂ ಹೆಚ್ಚಿನದು ನಿಮ್ಮ ಉದಾರ ಗುಣ ಮೇಮಸಾಬ.

ರಾಧಾ– ಕ್ಷಮಿಸಿ, ಮಾತಿಗೊಮ್ಮೆ ಮೇಮಸಾಬ ಎನ್ನಲು ನಾನೇನು ಶ್ರೀಮಂತ ಗೃಹಿಣಿಯೂ ಅಲ್ಲ, ದೊಡ್ಡ ಅಧಿಕಾರಿಯೂ ಅಲ್ಲ, ನಾನು ಸಾಧಾರಣ ಹೆಣ್ಣು, ರಾಧಾ ಎಂದೆ ಕರೆಯಿರಿ.

ಮಹೇಶ– ಛೇ ಅದು ಅವಿನಯ ಅಷ್ಟೆ ಅಲ್ಲ ಉದ್ಧಟತನವೂ ಆದೀತು.

ರಾಧಾ– ಅದೇನೂ ಇಲ್ಲ, ನನಗೆ ರಾಧಾ ಎಂದು ಕರೆದರೆ ತುಂಬ ಸಂತೋಷವಾಗುವದು.

ಮಹೇಶ– ಕ್ಷಮಿಸಿ Miss ರಾಧಾ, ಎಷ್ಟಾದರೂ ನೀವು.....

ರಾಧಾ– ವಯಸ್ಸಿನಲ್ಲಿ ನಿಮಗಿಂತ ಚಿಕ್ಕವಳು, ನಿಮಗೆ ಬಡವರೆಂಬ ಕೀಳರಿಮೆ ಎಂದಿಗೂ ಸಲ್ಲದು, ನಾಳೆ ಒಳ್ಳೆಯ ಕಾಲ ಬಂದೇ ಬರುವದು.

ಮಹೇಶ– ಆ ಕಾಲ ಬೇಗ ಬರಲಿ Miss ನಿಮ್ಮ ಬಾಯಿ ತುಂಬ ಸಿಹಿ ಹಾಕುವೆ.

ರಾಧಾ– ಅಮೃತ ಅನ್ನಿ, ಬನ್ನಿ ಒಂದು ಕಪ್ ಕಾಫಿನಾದರೂ ಕುಡಿಯೋಣ.

ಮಹೇಶ– ಕ್ಷಮಿಸಿ! ನನಗದರ ಅಭ್ಯಾಸವಿಲ್ಲ, ಬರ್ತಿನಿ.

ರಾಧಾ– (ಹೊರಡಲು) ನಿಲ್ಲಿ ಮಹೇಶ, ನೀನು ಬಡವ ನಿರುದ್ಯೋಗಿ ನಿಜ, ಆದರೆ ನಾನು ನಿಮ್ಮ ಹಿತಚಿಂತಕಿ ಎಂಬುದನ್ನು ಮರೆಯದಿರಿ.

ಮಹೇಶ– ಈಗ ಇದೆಲ್ಲಾ ಏಕೆ ಅಂತ?

ರಾಧಾ– ಅದೇಕೊ ನಾನರಿಯೆ, ಇಷ್ಟು ಮಾತ್ರ ಹೇಳಬಲ್ಲೆ ನಿಮ್ಮಲ್ಲೊಂದು ಅಪರೂಪದ ವ್ಯಕ್ತಿತ್ವವಿದೆ.

ಮಹೇಶ– ಅದೇನೊ ಅನ್ನುವರಲ್ಲ, ಮುಖವೇನೊ ದುಂಡು, ಮೂಗು ಮಾತ್ರ ಮೊಂಡು ಅಂತ ಹಾಗೆ ತಾನೆ?

ರಾಧಾ– ಅಬ್ಬಾ ಹಾಸ್ಯ ಚಟಾಕಿ ಹಾರಿಸುವದರಲ್ಲಿಯೂ ತುಂಬ ಚತುರರಾಗಿರುವಿರಿ, ಬನ್ನಿ.

ಮಹೇಶ– ನಿಮಿಷ್ಟ ನಡೆಯಿರಿ, (ಹೋಗುವರು, ಇತ್ತಲಿಂದ ಕುಮಾರ ಆಳುತ್ತ ಪ್ರವೇಶ)

ರಾಜು– (ಹಿಂದಿನಿಂದ ಬಂದು) ಯಾಕಲೆ ಪರದೇಸಿ, ನಾಯಿಗತಿ ಅಳಾಕ ನಿಂತಿದ್ದಿ? ಯಾರರೆ ಸತ್ತರೇನು?

ಕುಮಾರ– ಸತ್ತರೂ ಅನ್ನಾಕ ನನಗ ಈಗ ಉಳದಾರ್‍ಯಾರಲೆ? ಈ ಹಿಂದೂಸ್ಥಾನಕ್ಕ ಬಂದು ಪಕ್ಕಾ ಪರದೇಶಿ ಆದೆ.

ರಾಜು– ಸುಮ್ಮನ ಅಮೇರಿಕಾಕ ಹೋಗಲೆ. ಇಲ್ಲಿ ಯಾಕ ಉಳದೀದಿ?

ಕುಮಾರ– ಹಾಂಗ ಹ್ಯಾಂಗ ಹೋಗ್ತಿನಲೆ, ನಮ್ದು ವುಡ್ ಬಿ ಗೀತಾಗ ಕರ್‍ಕೊಂಡೆ ಹೋಗ್ತಿನಿ.

ರಾಜು– ಆ ಹಟಾ ಬ್ಯಾಡಲೆ ವ್ಯರ್ಥ ಹಾಳಾಗಿ ಹೋಗ್ತಿ

ಕುಮಾರ– ನಮ್ದು ಹಟಾ ಅಲ್ಲಲೆ ಹಕ್ಕು ಪವರ್.

ರಾಜು– ಈ ಮಗಾ ನಮ್ಮ ಬೆನ್ನು ಬಿಡಂಗ ಕಾಣವಲ್ದು, ಇದಕ್ಕ ಓಡಸಾಕ ಏನು ಉಪಾಯ ಮಾಡಬೇಕು.....

ಕುಮಾರ– ಯಾಕಲೆ ಆಟೊ. ಅದೇನ್ ಪ್ಲಾನ್ ನಡಸಿದಿ? ನಿನಗ ಬೇಕಾದರ ಒಂದು ಕಾರು ಕೊಡ್ತಿನಿ, ನನ್ನ ಗೀತಾಗ ನನಗ ಕೊಟ್ಟು ಬಿಡುವಲೆ.

ರಾಜು– ಆಗಲಿ ಬಾ, ನಾವಿಬ್ಬರೂ ಕೂಡಿ ಒಂದು ಒಪ್ಪಂದಕ್ಕ ಬರೋಣ,

ಕುಮಾರ– ಅದೇನು ಅಗ್ರಿಮೆಂಟ ಲಗೂ ಹೇಳು, ಬೆಸ್ಟ್ ಇತ್ತೂ ಅಂದರ ರೈಟ ಅಂತೀನಿ.

ರಾಜು– ನಿಮ್ಮ ಮಾವನದು ಬಂಗ್ಲಾ, ಬ್ಯಾಂಕ್ ಬ್ಯಾಲೆನ್ಸ್. ಅಂತ ದೊಡ್ಡ ಆಸ್ತಿ, ಅದನ್ನೆಲ್ಲ ನೀನೆ ತಗೊ, ನನಗ ಗೀತಾ ಬಿಟ್ಟು ಬಿಡು.

ಕುಮಾರ– ವ್ಹಾರೆ ಶೇರ್. ಮಲಾಯಿ ನಿನಗ, ಕುಲಾಯಿ ನನಗ, No ಬಾಬಾ no. ಗೀತಾ ನನಗ, ಆಸ್ತಿ ನಿನಗ.

ರಾಜು– ಅದು Impossible ನಾನೂ ಗೀತಾ ಲವರ್ಸ್, ಅದಕ್ಕಾಗಿ ಗೀತಾ ನನಗ, ನಿಮ್ಮ ಮಾಂವನ ಆಸ್ತಿ ನಿನಗ, (ಕೇದಾರನಾಥ ಬಂದು ಹಿಂದೆ ನಿಂತು ಕೇಳುವನು).

ಕುಮಾರ– No never, ಗೀತಾ ನನಗ ಆಸ್ತಿ ನಿನಗ,

ರಾಜು– ಕಭಿ ನಂಹಿ, ಗೀತಾ ನನಗ, ಆಸ್ತಿ ನಿನಗ, (ಪುನರಾವರ್ತನೆ ಆಗುತ್ತಿರಲು ಕೇದಾರ ಸಿಟ್ಟಿನಿಂದ)

ಕೇದಾರ– ಖಾಮೂಸ್,,,,(ಇಬ್ಬರೂ ನಡುಗುತ್ತ ನಿಂತಿರಲು ಅವರ ಕಾಲರ್ ಹಿಡಿದು)ನಿಮ್ಮಿಬ್ಬರನ್ನೂ ಈಗಲೆ, ಇಸಿ ವಖ್ತ ಶೂಟ್ ಕರ್‌ದುಂಗಾ(ಬಾಪರೆ ಮರ್‌ಗಯೇ ಎಂದು ಇಬ್ಬರೂ ಓಡಿ ಹೋಗಲು)ಠೈರೊ. ನೀವು ಎಲ್ಲಿಗೆ ಹೋದರೂ ಬಿಡಲಾರೆ (ಬೆನ್ನಟ್ಟುವನು, ಎರಡನೆ ರೌಂಡಿಗೆ ಏನೂ ಕಾಣದೆ ಇಬ್ಬರೂ ಹಾಸಿದ ಜಮಖಾನೆ ಹಚ್ಚಿಕೊಂಡು ಡೊಗ್ಗಿ ಕೂಡುವರು, ಕೇದಾರ ಬಂದು ನೋಡಿ ಯಾರೂ ಕಾಣದೆ) You ರ್‍ಯಾಸ್ಕಲ್, ಹೋಗಿರಿ ಇನ್ನೊಂದು ಸಲ ನನ್ನ ಕಣ್ಣಿಗೆ ಬಿದ್ದರೆ ಫೈರ್ ಮಾಡಿ ಬಿಡುವೆ (ಅಷ್ಟರಲ್ಲಿ ಲಿಂಗಯ್ಯ ಬಂದು)

ಲಿಂಗಯ್ಯ– ಓ ನಮಸ್ಕಾರ ಮಾಜಿ ಮಿಲ್ಟ್ರಿ ಕಮಾಂಡರ್ ಸಾಹೇಬರಿಗೆ.

ಕೇದಾರ– ತಾವು,,,,,,,,

ಲಿಂಗಯ್ಯ– ನಾನು ಮದುವೆ ಮಾರ್ಕೆಟ್ಟಿನ ಮುಖ್ಯ ದಲಾಲ ಲಿಂಗಯ್ಯನಲ್ಲವೆ?

ಕೇದಾರ– Oh... I am sorry, ನೀವು ಮದುವೆ ಮೀಡಿಯೆಟರ it means ದಲಾಲ ದಲಾಲ,,,,,,

ಲಿಂಗಯ್ಯ– ಯಾವುದೋ ಚಿಂತೆಯಲ್ಲಿ ನಿಂತಂತೆ ಕಾಣುವದಲ್ಲ ಮಗಳ ಮದುವೆ ವಿಷಯಾನಾ?

ಕೇದಾರ– Yes yes ಮಗಳು ಗೀತಾ marraige.

ಲಿಂಗಯ್ಯ– ನನಗೆ ಹೇಳಿರಲ್ಲ ಎಂಥಾ ಹುಡುಗ, ರೇಟು ಎಷ್ಟು? ಒಂದೇ ಒಂದು ವಾರದಲ್ಲಿ ಮುತ್ತಿನಂಥಾ ವರ ತರುವೆ.

ಕೇದಾರ– ನಮಗೆ ವರದಕ್ಷಿಣೆ ವರೋಪಚಾರ ಅಂತ ದುಡ್ಡು ಕೇಳುವ ಸುವ್ವರ ಸಾಲಾಗಳು ಬೇಕಾಗಿಲ್ಲ, it means ಹೆಣ್ಣಿನವರ ಮನೆ ಮುಂದೆ ಭಿಕ್ಷೆ ಬೇಡುವ ಹಲ್ಕಾ ನನ್ಮಕ್ಕಳು ನಮಗೆ ಇಷ್ಟವಿಲ್ಲ, ನಮ್ಮದು ಏನಿದ್ದರೂ Love marraige, ಅಥವಾ god gift ಅಳಿಯ,

ಲಿಂಗಯ್ಯ– ಗಾಡ್ ಗಿಫ್ಟ್ ಅಳಿಯ, ಹಾಗಂದರೆ.

ಕೇದಾರ– ಹೇಳುವೆ ಕೂತ್ಕೊಳ್ಳಿ (ಇಬ್ಬರೂ ರಾಜ, ಕುಮಾರರ ಡುಬ್ಬದ ಮೇಲೆ ಕೂಡುವರು) God gift ಅಂದರೆ ಗುರು ತೋರಿಸಿದ ವರನಿಗೆ ಕನ್ಯಾದಾನ ಮಾಡುವದು ಇದು ನಮ್ಮ ಪದ್ಧತಿ.

ಲಿಂಗಯ್ಯ– ಅಡ್ಡಿಯಿಲ್ಲ, ಜನರಾದರೂ ದೈವ ಭಕ್ತರು ಮನೆತನದ ಪದ್ಧತಿ ಬಿಟ್ಟಿಲ್ಲ, ತುಂಬ ಸಂತೋಷ. (ಕಾಲಿಗೆ ಚಿವುಟಲು 'ಹಾ' ಎಂದು ಚೀರಿ ಏಳಲು)

ಕೇದಾರ– What ? what happend ? ಹಾಗೇಕೆ ಚೀರಿದಿರಿ.

ಲಿಂಗಯ್ಯ– ನನ್ನ ಕಾಲಿಗೆ ಏನೊ ಕಚ್ಚಿತು ಸರ್.

ಕೇದಾರ– ನಿಮಗೆಲ್ಲೊ ಭ್ರಮೆ, ಕೂತ್ಕೊಳ್ಳಿ, ಕೂತ್ಕೊಳ್ಳಿ, (ಆತ ಕೂಡಲು) ನಾನು ಏನು ಹೇಳ್ತಾ ಇದ್ದೆ (ಆತನ ಕಾಳು ಚಿವುಟಲು 'ಹಾ' ಎಂದು ಎದ್ದು) ಅರೆ ಹೌದಲ್ಲ, ನನಗೂ ಕಚ್ಚಿತು.

ಲಿಂಗಯ್ಯ– ಸಾಹೇಬರೆ ಈ ಸ್ಥಳಾನೆ ತುಸು ಸುಮಾರು ಇದ್ದಂಗ ಕಾಣ್ತದ.

ಕೇದಾರ– You hope less ಏನೂ ಇಲ್ಲ, ಕೂತ್ಕೊಳ್ಳಿ(ಇಬ್ಬರೂ ಕೂಡಲು) ಹಾಗೇನಾದರೂ ಭೂತ ಪಿಶಾಚಿ ಕಂಡರೆ ಶೂಟ ಮಾಡಿ ಬಿಡುವೆ.

ಲಿಂಗಯ್ಯ– ಸರಿ, ನಿಮ್ಮ ಗುರುಗಳು ಎಂದು ಬರುತ್ತಾರೆ.

ಕೇದಾರ– ಇಂದು ಸಾಯಂಕಾಲ ಬರಬಹುದು, ಆ ರೀತಿ ಮೆಸ್ಸೇಜ ಬಂದಿದೆ (ಇಬ್ಬರಿಗೂ ಒಮ್ಮೆಲೆ ಚಿವುಟಲು 'ಹಾ' ಎಂದು ಎದ್ದು ಹಾರಿ ಬೀಳುವರು).

ಲಿಂಗಯ್ಯ– ಸಾಬರೆ, (ಎಳುತ್ತ) ಇಲ್ಲೇನೊ ಗಾಳಿ ಶಕಾ,,,,,

ಕೇದಾರ– Yes Yes, something wrong. ಏನೊ ಇದ್ದಂತಿದೆ, ಬನ್ನಿ ಹೋಗೋಣ, (ಹೋಗುವರು, ರಾಜು, ಕುಮಾರ ಎದ್ದು ಬೆನ್ನು ಮುರಿಯುತ್ತ)

ರಾಜು– ಅಲಲ,,, ಆಹ. ಎಲಾ ಬದ್ಮಾಸ್, ಮೂರು ಕ್ವಿಂಟಲ ಒಜ್ಜಿ ಇದ್ದಂಗ ಕಾಣ್ತಾನ ಮಗ.

ಕುಮಾರ– ನನ್ನ ಸೊಂಟಾ,,,, ಕಮರ್,,,,ಮುರುದು ಹೊಯ್ತುಲೆ.

ರಾಜು– ನಂದೇನು ಉಳದಾದಾ? ಅರೆ ಬಾಪರೆ, ಠೈರೊ ನಾವು ಅವನಿಗಿ ಸಾಲಿ ಕಲಸಾಮಿ.

ಕುಮಾರ– What ನಂದು ಖೋಪಡಿ ಖಾಲಿ ಹೈ ರೆ.

ರಾಜು– ಲೇ ನಿಮ್ ಮಾಂವನ ಮನಿಗಿ ಗುರು ಬರೋ ಸುದ್ಧಿ ಕೇಳದಿಲ್ಲೊ?

ಕುಮಾರ– ಕೇಳಿನೊ, ಕೇಳಿ ಮತ್ತಷ್ಟು ಸುಸ್ತ ಆಗಿನಿ.

ರಾಜು– ಸುಸ್ತಿ ಬಿಡು ಅಲೆ, ಮಸ್ತಿ ಎರಸು.

ಕುಮಾರ– What it means, now what can i do ?

ರಾಜು– ಕೇಳಲೆ ಕತ್ತಿ, ನಾವೆ ಆ ಗುರು ಶಿಷ್ಯ ಆಗಿ ಮ್ಯೆಾನ ಮಾರಲಿಂಗೆ.

ಕುಮಾರ– ಗುರು, ಶಿಷ್ಯಾ ಆದರ ಆ ಗೀತಾ ಗರ್ಲ ನನಗ ಸಿಗ್ತಾದಾ?

ರಾಜು– ಅದೊಂದು ಲಕ್ಕಿ ಲಾಟ್ರಿ, ಕುಚ್ ಕರಕೆ ದಿಖಾನಾ ಕಾಮ ಹಮಾರಾ, ಉಸಸೆ ಹೋತಾ ನಾಮ ಹಮಾರಾ, ಬಾ ನಾ ಎಲ್ಲಾ ಹೇಳ್ತಿನಿ.

ಕುಮಾರ– Ok, ನಡಿ (ಹೋಗುವರು).

===***===***===

ಪ್ರವೇಶ–೧೬

ವಿಕ್ರಂನ ಮನೆ

ಮಹಾ (ಪ್ರವೇಶಿಸುತ್ತ) ಗಂಗಾ,.... ಗಂಗಮ್ಮ,.....

ಗಂಗಾ– (ಹೊರ ಬಂದು ನೋಡಿ) ಅಪ್ಪಾ,,, (ಅಪ್ಪುಗೆ)

ಮಹಾ– (ತಲೆ ನೇವರಿಸುತ್ತ) ಆರೋಗ್ಯವಾಗಿರಿವೆಯಾ ಕಂದಾ?

ಗಂಗಾ– ನಿನ್ನ ಆಶಿರ್ವಾದದಿಂದ ಕ್ಷೇಮವಾಗಿರುವೆನಪ್ಪಾ.

ಮಹಾ– (ಗದ್ದ ಹಿಡಿದೆತ್ತಿ) ಗಂಗಾ, ನಿನ್ನ ಮುಖವೇಕೋ ಬಾಡಿದೆಯಲ್ಲ ಮಗು, ಮೂರೆ ಮೂರು ದಿನದಲ್ಲಿ ಅದೆಷ್ಟು ಕಳೆಗುಂದಿದೆಯಲ್ಲ, ನಿಜ ಹೇಳು ಆರೋಗ್ಯದಿಂದಿರುವೆಯಾ?

ಗಂಗಾ– (ಮುಖ ಮುಚ್ಚಿಕೊಂಡು ಅಳುತ್ತ) ಅಯ್ಯೋ ಅಪ್ಪಾ,,,

ಮಹಾ– (ಗಾಬರಿ) ಏನಾಯಿತು ಮಗು, ಯಾಕೆ ಈ ದುಃಖ?

ಗಂಗಾ– ಹುಟ್ಟಿದ ದಿನದಂತೆ ನನ್ನ ಕುತ್ತಿಗೆ ಹಿಚುಕ ಬೇಕಾಗಿತ್ತಪ್ಪಾ, ನನ್ನ ಕೊಂದು ಬಿಡಬೇಕಾಗಿತ್ತು.

ಮಹಾ– ಗಂಗಾ,,,,,,,, ನನ್ನಮ್ಮಾ,, ನನ್ನ ತಾಯಿ,,,,,,,

ಗಂಗಾ– ನನ್ನ ಗಂಡ, ನನ್ನ ಪತಿ,,,,,,,

ವಿಕ್ರಂ– (ಹಿನ್ನೆಲೆ) ಗಂಗಾ, ನಿನ್ನ ಬಾಳಿನ ನೈಜ ಚಿತ್ರಣವೇನಾದರೂ ನಿನ್ನ ಅಣ್ಣ, ಅಪ್ಪಂದಿರಿಗೆ ಹೇಳಿದ್ದಾದರೆ ಅವರ ಸಾವಿಗೆ ನೀನೇ ಜವಾಬ್ದಾರಳು ಎಚ್ಚರ.

ಗಂಗಾ– (ಗಾಬರಿ) ಹಾಂ, ನನ್ನಣ್ಣ,,,,, ನನ್ನಪ್ಪ,,,,, ಸಾವು (ದುಃಖ) ಅಯ್ಯೋ ಭಗವಂತಾ,,,, (ಅಳು)

ಮಹಾ– ಗಂಗಾ ಇದೇನು ನಿನ್ನ ಸ್ಥಿತಿ, ಏತಕ್ಕಾಗಿ ಈ ದುಃಖ? ಎಂದೂ ನಿನ್ನ ಕಣ್ಣೀರನ್ನೆ ಕಾಣದ ಈ ಹಣ್ಣು ಜೀವದ ಎದೆಯಲ್ಲಿ ಬೆಂಕಿ

ಸುರಿದಂತಾಗುತ್ತದೆ. ಕಂದಾ, ನನ್ನ ಕರುಳಿನಲ್ಲಿ ಕತ್ತರಿ ಆಡುತ್ತಿದೆ, ಬೇಗ ಹೇಳು ತಾಯಿ, ಏನಾಯಿತು ನಿನಗೆ?

ಗಂಗಾ— ಏನೂ ಇಲ್ಲಪ್ಪಾ,,, ಏನೇನೂ ಇಲ್ಲ.

ಮಹಾ— ಗಂಗಾ ನಿನಗೆ ಕೈಮುಗಿವೆ, ತಂದೆಯ ಎದೆ ತಂಪುಗೊಳಿಸಲಿಕ್ಕಾದರೂ ಒಂದು ನುಡಿ ಹೇಳು ಮಗು, ನಿನ್ನ ಗಂಡನೇನಾದರೂ ಬೈದನೆ? ಅತ್ತೆ ಮಾವಂದಿರೇನಾದರೂ ಅಂದರೆ, ಅಥವಾ ನಿನ್ನ ,,,,,,

ಗಂಗಾ— ಇಲ್ಲಪ್ಪಾ ಯಾರೂ ಏನು ಅನ್ನಲಿಲ್ಲ.

ಮಹಾ— ಈ ನೋವು, ಈ ವೇದನೆ, ಈ ದುಃಖ, ಈ ಕಣ್ಣೀರಿಗೇನಾದರೂ ಕಾರಣ ಇರಲೇಬೇಕಲ್ಲ ದಯವಿಟ್ಟು ಹೇಳು ತಾಯಿ.

ಗಂಗಾ— ಅಪ್ಪಾ ಹೆಣ್ಣು ಬಾಳಿನ ಬದುಕು, ಒಡೆಯಲಾರದ ಒಗಟು, ಏನಂತ ಹೇಳಲದರ ಒಳಿತು ಕೆಡುಕು.

ಮಹಾ— ಗಂಗಾ ಇದೇನು ನಿನ್ನ ಮಾತು,

ಗಂಗಾ— ಅಪ್ಪಾ ನೀನು ಮಕ್ಕಳ ಭಾಗ್ಯವೇನೊ ಪಡೆದಿರುವೆ, ಆದರೆ ಅವರ ಸುಖ ನೋಡುವ ಸೌಭಾಗ್ಯ ಪಡೆದಿಲ್ಲ.

ಮಹಾ— ಅದೇಕೆ ಪಡೆದಿಲ್ಲ ಹೇಳು? ನಿನಗಾಗಿ ನಾವು ಮಾಡಿದ ತ್ಯಾಗ ಸಾಮಾನ್ಯವಾದುದುಲ್ಲ. ನಮ್ಮ ಸರ್ವಸ್ವವನ್ನೇ ಸೂರೆಗೈದು ನಿರ್ಗತಿಕರಾಗಿರುವೆವು.

ಗಂಗಾ— ಅಯ್ಯೋ ಅಪ್ಪಾ, ಏನಂತ ಹೇಳಲಿ ನಾನಿಲ್ಲಿ ಸುಖಿಯಾಗಿರುವೆನೆಪ್ಪಾ, ಸುಖಿಯಾಗಿರುವೆ.

ಮಹಾ— ಸಂತೋಷ ತಾಯಿ, ಹೆತ್ತ ಪಿತನ ಹೃದಯ ತಂಪಾಯಿತು, ಬರ್ತಿನಮ್ಮಾ (ಹೊರಡಲು).

ಗಂಗಾ— ನಿಲ್ಲಿ ಅಪ್ಪಾ, ಮಗಳ ಮನೆಗೆ ಬಂದು......

ಮಹಾ— ಅಮೃತ ಸವಿದಷ್ಟು ಸಂತೋಷವಾಯಿತಮ್ಮಾ.

ಗಂಗಾ— ಒಂದು ಕಪ್ಪು ಚಹನಾದರೂ.

ಮಹಾ— ಆಗಲೆಮ್ಮಾ, ಬೇಗ ತಾ (ಗಂಗಾ ಒಳ ಹೋಗಲು) ಹೇ ಭಗವಂತ ನಾನೊಂದು ಬಗೆದರೆ ದೈವ ಬೇರೊಂದು ಬಗೆಯಿತೆ,

ನಾನೆಲ್ಲಾದರೂ ತಪ್ಪಿದನೆ, ಅಥವಾ ಹೆಣ್ಣು ಒಂದು ತಪ್ಪೆ.

ಗಂಗಾ– (ಬಂದು ಚಹ ಕೊಡುತ್ತಾ). ಇದೋ ಅಪ್ಪಾ, ಕುತ್ಕೊಂಡು ಚಹ ಕುಡಿಯಿರಿ.

ಮಹಾ– ಆಗಲೆಮ್ಮಾ.(ಕುಡಿಯುತ್ತಿರಲು).

ಗಂಗಾ– ನಾನಿಲ್ಲಿಯೇ ಇದ್ದೇನೆ ಬನ್ನಿ ಸ್ವಾಮಿ.

ವಿಕ್ರಂ– ಇವನಾರು ಮುದಿ ಕತ್ತೆ?

ಗಂಗಾ– ಇವರು ನನ್ನ ತಂದೆ, ನಿಮ್ಮ ಮಾವ.

ವಿಕ್ರಂ– ನನ್ನ ಮಾವ, ಹಹ್ಹಹ.... ನಿನ್ನ ತಂದೆ, ಹಹ್ಹಹ....ಎಲೋ ಹಂದಿ ಮಗನೆ ಕೊಟ್ಯಾವಧಿ ವರದಕ್ಷಿಣೆ ಕೊಟ್ಟವನಂತೆ ನನ್ನ ಮನೆಯಲ್ಲಿ ಪಟ್ಟಾಗಿ ಕುಳಿತಿರುವೆಯಾ? ನಡೆ ಹೊರಗೆ ನಾಯಿಯಂಥವನೆ.

ಗಂಗಾ– ನಿಮಗೆ ಕೈ ಮುಗಿವೆ, ದಯವಿಟ್ಟು ಶಾಂತರಾಗಿ.

ವಿಕ್ರಂ– ಲೇ ಕತ್ತೆ ರಂಡೆ, ಆಗಲೆ ನನ್ನ ಮನೆ ತೊಳೆಯಲು ಪ್ರಾರಂಭಿಸಿ ಬಿಟ್ಟೆಯಾ? ಲೇ ಮುದುವಾ ನನ್ನ ಮನೆ ಹಾಳು ಮಾಡಲು ನಾಚಿಕೆ ಬರುತ್ತಿಲ್ಲವೆ ನಿನ್ನ ಜನ್ಮಕ್ಕೆ.

ಮಹಾ– (ಎದ್ದು) ವಿಕ್ರಂ .....ನೀನು ....ನೀನು.......

ವಿಕ್ರಂ– ನಾನು ಕುಡುಕ ಲಂಪಟ ಹೌದು, ಆದರೆ ಪ್ರತಿ ಫೀಲ್ಡಿನಲ್ಲೂ ಅಗ್ದಿ ಎಕ್ಸಪರ್ಟ. ತುಂಬ ರಸಿಕ, ನಿನ್ನ ಮಗಳಂತಹ ನೂರಾರು ಹೆಣ್ಣುಗಳಿಗೆ ತಾತ್ಕಾಲಿಕ ಗಂಡನೂ ಅಹುದು, ಮಿಂಡನೂ ಅಹುದು, ಹೆಣ್ಣೆಂದರೆ ನನಗೊಂದು ಆಟಿಕೆಯ ವಸ್ತು. Use and Through ಇದೇ ನನ್ನ ಮೇನ್ ಬಿಜನೆಸ್ಸ್.

ಮಹಾ– ಅಂದರೆ ನೀನೋರ್ವ....

ವಿಕ್ರಂ– ಸುಂದರ ಹೆಣ್ಣುಗಳ ಸಪ್ಲೈಯರ್, ಇಂಟರ ನ್ಯಾಶನಲ್ ಮಾರ್ಕೆಟ ಮ್ಯಾಗ್ನೆಟ, ಇನ್ನು ನಡೆ ಹೊರಗೆ.

ಮಹಾ– ವಿಕ್ರಂ... ನೀನು ...... ನೀನು.....

ವಿಕ್ರಂ– Get out you dirty dog. (ಕುತ್ತಿಗೆ ಕೈ ಕೊಟ್ಟು ನೂಕಲು ಮಹಾ

ಬೀಳುವನು).

ಗಂಗಾ– ಅಯ್ಯೋ ಅಪ್ಪಾ.... (ಸಮೀಪ ಹೋಗಿ ಅಳುತ್ತಿರಲು)

ವಿಕ್ರಂ– ಲೇ ರಂಡೆ ಸಾಯಲಿ ಬಿಡು, ಆ ಮುದಿಗೊಡ್ಡಿನಿಂದ ನನಗೊಂದು ಒಡಕು ಕವಡೆಯ ಲಾಭವಿಲ್ಲ.

ರಾಮ– (ಪ್ರವೇಶಿಸಿ) ಸರ್ ಸರ್, ಏನಿದು ಗಲಾಟೆ?

ವಿಕ್ರಂ– ನೀನಾರಲೆ? ಒಳಗೇಕೆ ಬಂದೆ?

ರಾಮ– ನಾನು ನಿಮ್ಮ ಹಿತೈಷಿ. ಹೊರಗಡೆ ಪೋಲಿಸ್ ಆದಷ್ಟು ಬೇಗ ಸೇಪ್ ಆಗಿ.

ವಿಕ್ರಂ– What? police.

ರಾಮ– Yes ಹರಿ ಅಪ್. Run away quick (ವಿಕ್ರಂ ಹೊರ ಓಡುವನು).

ಗಂಗಾ– ಅಣ್ಣಾ ನನ್ನ ತಂದೆ.

ರಾಮ– (ಪರೀಕ್ಷಿಸಿ) ಹೆದರದಿರಿ ಮೂರ್ಛೆ ಹೋಗಿದ್ದಾರೆ, ನಾನು ಆದಷ್ಟು ಬೇಗ ಇವರನ್ನು ಹಾಸ್ಪಿಟಲ್ಲಿಗೆ ಸೇರಿಸುವೆ (ಮಃಹಾದೇವಪ್ಪನನ್ನು ಹೊತ್ತುಕೊಂಡು ಹೊರ ಹೋಗುತ್ತ) ವಿಕ್ರ ವಿಷಜಂತು. ಎಚ್ಚರವಾಗಿರಿ (ಹೊರ ಹೋಗುವನು).

ಗಂಗಾ– ಅಯ್ಯೋ ಭಗವಂತಾ, ಇದೇನು ಅನ್ಯಾಯ (ಅಳುತ್ತ ಕೂಡುತ್ತಿದ್ದಂತೆ ತೆರೆ).

===**=====**===

ಪ್ರವೇಶ–೧೭

ರಸ್ತಾ

ಮಹೇಶ– (ದುಃಖದಲ್ಲಿ) ನನ್ನಪ್ಪ ಸತ್ತ. ಮಗಳ ಮನೆಯ ಮಾತಾಡಿ ಬರಲು ಹೋದ ನನ್ನಪ್ಪ ಎದೆಯೊಡೆದು ಸತ್ತ. ಇದು ಆತನಿಗೆ ಬಂದ ಸಹಜ ಸಾವಲ್ಲ. ಒಂದು ರೀತಿಯ ಕೊಲೆಯೇ ಸರಿ, ಈ ಕೊಲೆಗೆ ಕಾರಣ ಅಳಿಯನಲ್ಲದೆ ಮಗಳಾಗಲು ಸಾಧ್ಯವೆ? ಎಲೋ ವಿಕ್ರಂ, ನೀನೊರ್ವ ಗೋಮುಖವ್ಯಾಘ್ರ ನಿನ್ನ ಅಂತರಾಳ ತಿಳಿಯದೆ ನಾವು ಮೋಸ ಹೋದೆವು. ಅವರಸರಕ್ಕೆ ಬಿದ್ದು ಅನರ್ಥ ತಂದುಕೊಂಡೆವು, ಮುತ್ತಿನಂಥ ತಂಗಿಗೆ ಮಸಣ ಸೇರಿಸಿದೆವು, ಎಲೋ ಚಾಂಡಾಲ ಈ ಎಲ್ಲಾ ಅನರ್ಥಕ್ಕೆಲ್ಲ ನೀನೇ ನಿಜವಾದ ಕಾರಣಿ ಭೂತನಾದರೆ, ನಿನ್ನ ರುಂಡ ಚಂಡಾಡಲೇಬೇಕು, ಆದರೆ ನನ್ನ ತಂಗಿಯ ಕುಂಕುಮ.....ಅಂಥಾ ತಾಯಿಗಂಡನ ನೆರಳಲ್ಲಿ ಬಾಳುತ್ತ ನರಕ ಅನುಭವಿಸುವಕ್ಕಿಂತ ವಿಧವೆಯಾಗಿರುವದೇ ವಾಸಿ, ಇದೇ ಸೂಕ್ತ, ಹೀಗೆಯೇ ಮಾಡಬೇಕು. ನಾನು ಜೇಲು ಸೇರಿದರೂ ತಪ್ಪಿಲ್ಲ, ನನ್ನ ತಂಗಿಯನ್ನಾದರೂ ಸ್ವತಂತ್ರ ಗೊಳಿಸಬೇಕು, ನನ್ನ ಕ್ಷಮಿಸು ಗಂಗಾ, ದಯವಿಟ್ಟು ಕ್ಷಮಿಸು (ಆವೇಶದಿಂದ ಹೊರಡಲು ಎದುರಿನಿಂದ ರಾಧಾ).

ರಾಧಾ– ಇದೇನು ಆವೇಶ ಏನಾಯಿತು?

ಮಹೇಶ– ಇಂದು ನಮ್ಮ ತಂದೆ..... ಎದೆಯೊಡೆದು ಸತ್ತ.

ರಾಧಾ– ಆ ವಿಷಯ ಕೇಳಿಯೇ ನಾನಿತ್ತ ಹೊರಟಿದ್ದು.

ಮಹೇಶ– ನಾನು ಹಾರವೆಂದು ತಿಳಿದಿದ್ದೆ, ಹಾವಾಗಿ ಕಚ್ಚಿತು.

ರಾಧಾ– ವಿಷ ಕಕ್ಕುವದೇ ಹಾವಿನ ಹುಟ್ಟು ಗುಣ.

ಮಹೇಶ– ಇಂದು ಅದರ ಹೆಡೆ ಜಜ್ಜಿ ಸಾಯಿಸಲೇಬೇಕು.

ರಾಧಾ– ನೀನು ತಿಳಿದಂತೆ ಅದು ಸಾಮಾನ್ಯ ಹಾವಲ್ಲ ಮಹೇಶ, ಘಟ ಸರ್ಪ.

ಮಹೇಶ– ಅದೇನೆ ಆಗಿರಲಿ, ಇಂದು ಅದನ್ನು ಕೊಂದೇ ಬರುವೆ.

ರಾಧಾ– ಅವಸರವೇ ಅನರ್ಥಕ್ಕೆ ಕಾರಣವೆಂಬುದು ಮರೆಯದಿರು.

ಮಹೇಶ– ನನ್ ತಂಗಿ ಗಂಗಾ ವಿಧವೆಯಾದರೂ ಚಿಂತೆಯಿಲ್ಲ.

ರಾಧಾ– ಗಂಗಾ ಮದುವೆಯಾದ ದಿನವೇ ವಿಧವೆಯಾದಳು ಮಹೇಶ, ನಾನವಳ ಬಗ್ಗೆ ಹೇಳುತ್ತಿಲ್ಲ, ನಿನ್ನ ಸುರಕ್ಷತೆಯ ಬಗ್ಗೆ ಯೋಚಿಸಿರುವೆಯಾ?

ಮಹೇಶ– ನಾನು ಜೇಲು ಸೇರಲು ಅಂಜಲಾರೆ.

ರಾಧಾ– ನೀನು ಬದುಕುಳಿದರೆ ತಾನೆ ಜೇಲಿನ ಪ್ರಶ್ನೆ.

ಮಹೇಶ– ನೀವಾಡುವ ಮಾತು...

ರಾಧಾ– ಸತ್ಯವನ್ನೆ ಹೇಳುತ್ತಿರುವೆ, ಆ ವಿಕ್ರಂ ಮತ್ತವನ ಗ್ಯಾಂಗು ಅಗ್ಧಿ ಡೇಂಜರಸ್, ಬರಿಗೈಯಿಂದ ಎದುರಿಸುವದು ಮೂರ್ಖತನ.

ಮಹೇಶ– ಅಂದರೆ ನಾನೀಗ.....

ರಾಧಾ– ಸೂಕ್ತ ಸಮಯಕ್ಕಾಗಿ ಕಾಯಲೇಬೇಕು, ಅದು ಅನಿವಾರ್ಯ.

ಮಹೇಶ– ಆ ತಾಯಿಗಂಡನ ಇತಿ ಮಿತಿ ಅರಿಯದೆ ತಂಗಿಯನ್ನು ಕೊಟ್ಟು ತಪ್ಪ ಮಾಡಿದೆ ಮೇಮಸಾಬ.

ರಾಧಾ– ಅದು ಸಾಮಾನ್ಯ ತಪ್ಪಲ್ಲ ಘೋರ ಅಪರಾಧ, ಯಾಯ ಕೈಗೆ ಆಗಲಿ ಹಣ ಕೊಡುವಾಗ ಹತ್ತು ವಿಚಾರಸಿದರೆ, ಹೆಣ್ಣು ಕೊಡುವಾಗ ನೂರು ಸಲ ವಿಚಾರಸಬೇಕಂತೆ. ಆದರೆ ನೀವು ಯಾವನೊ ಒಬ್ಬ ದಲಾಲನ ಮಾತನ್ನೇ ವೇದವಾಕ್ಯವೆಂದು ನಂಬಿ ಆಸ್ತಿ ಕಳೆದುಕೊಂಡು ಅನಾಥರಾಗುವದಲ್ಲದೆ ಬಂಗಾರದ ಗೊಂಬೆಯಂತಿದ್ದ ತಂಗಿಯನ್ನು ಬಲಿ ಕೊಟ್ಟು ಬಿಟ್ಟಿರಿ.

ಮಹೇಶ– ಇದು ನಮ್ಮ ತಪ್ಪು ನಿಜ, ಒಪ್ಪಿಕೊಳ್ಳುವೆ.

ರಾಧಾ– ಇದು ಕೇವಲ ನಿನ್ನೊಬ್ಬನ ತಪ್ಪಲ್ಲ, ಇಡೀ ಸಮಾಜದ ತಪ್ಪು, ಮದುವೆಯ ಮಾರ್ಕೆಟ್ಟಿನಲ್ಲಿ ವರದಕ್ಷಿಣೆಯ ರೇಟು ಆಕಾಶದೆತ್ತರಕ್ಕೆ ಏರುತ್ತಿದ್ದರಂತೆ ಜನರಲ್ಲಿ ಮಾನವೀಯತೆ ಮರೆಯಾಗತೊಡಗಿದೆ, ಗಂಡಿನವರೆಲ್ಲರೂ ಧನ ಪಿಶಾಚಿಗಳಾಗಿ ಹೆಣ್ಣಿನವರನ್ನು ಹೀನ ಪಶುಗಳಂತೆ ನೋಡ ತೊಡಗಿದ್ದಾರೆ, ಹೀಗಾಗಿ ಸಮಾಜದಲ್ಲಿ ಅಂಥಾ ತಾಯಿಗಂಡರು ತಲೆ ಎತ್ತಿ ಹೆಣ್ಣನ್ನು ಮಾರಾಟದ

ವಸ್ತುವಾಗಿಸಿಕೊಂಡು ಕಟುಕರಂತೆ ಮೆರೆಯ ತೊಡಗಿದ್ದಾರೆ.

ಮಹೇಶ– ಇದಕ್ಕೆ ಕಡಿವಾಣ ಹಾಕುವವರು ಯಾರೂ ಇಲ್ಲವೆ?

ರಾಧಾ– ಇದೆಯಲ್ಲ ವರದಕ್ಷಿಣೆ ವಿರೋಧಿ ಕಾನೂನು, ಆದರೆ ಅದರ ಕೈ ಮೊಂಡು, ಭ್ರಷ್ಟ ಅಧಿಕಾರಿಗಳು ಚಾಣಾಕ್ಷ ವಕೀಲರು ಕೂಡಿ ಅದನ್ನು ಹೆಳವನನ್ನಾಗಿ ಕೂಡಿಸಿದ್ದಾರೆ.

ಮಹೇಶ– ಇದಕ್ಕೆ ಕೊನೆಯೇ ಇಲ್ಲವೆ?

ರಾಧಾ– ಕುರಿಗಳು ಇರುವತನಕ ತೋಳಗಳು ಇದ್ದೇ ಇರುತ್ತವೆ, ಕೊಡುವವರು ಇರೋತನಕ ಬೇಡುವವರೂ ಇರುತ್ತಾರೆ, ನಿಮ್ಮಂಥಾ ಗಂಡುಗಳಲ್ಲಿ ಎಂದು ಆತ್ಮಾಭಿಮಾನ ಹುಟ್ಟಿ ವರದಕ್ಷಿಣೆ ಎಂಬ ಹೇಸಿ ದುಡ್ಡಿಗೆ ಭಿಕ್ಷುಕರಂತೆ ಉಡಿ ಚಾಚುವ ಉದ್ಯೋಗ ಬಿಟ್ಟು ಬಿಡುವರೊ ಅಂದೇ ಈ ಪಿಡುಗಿನ ಅಂತ್ಯವಾಗುವದು.

ಮಹೇಶ– ಸದ್ಯಕಂತೂ ಈ ಜನರಿಗೆ ಆ ಬುದ್ಧಿ ಬಾರದು.

ರಾಧಾ– ಆಗ ಏನಾಗುವದು ಗೊತ್ತೆ? ಈ ಹುಚ್ಚು ಸಮಾಜದಲ್ಲಿ ಈ ತುಚ್ಛ ಆಚರಣೆ ಎದೇ ರೀತಿ ಹೆಚ್ಚುತ್ತಲೆ ಹೋದರೆ ರೊಚ್ಚಿಗೆದ್ದ ಹೆಣ್ಣು ಕೆಚ್ಚೆದೆಯ ಕನ್ಯೆಯಾಗಿ ಕ್ರಾಂತಿ ಮಾಡುವಳು. ಆಗ ಈ ಗಂಡು ಜಾತಿ ಮಣ್ಣು ಮುಕ್ಕಿ ತಣ್ಣೀರು ಕುಡಿಯುವದು.

ಮಹೇಶ– ಹಾಗೇನಾದರೂ ಆದರೆ ಆಗ...

ರಾಧಾ– ಗಂಡು ಗೂಳಿಯಾದರೆ, ಹೆಣ್ಣು ಸೂಳಿಯಾಗುವಳು. ಪ್ರತಿ ಮನೆಯೂ ಒಂದು ಶನಿ ಸಂತಾನಗಳ ಸಂತೆಯಾಗುವದು, ಆಗ ಈ ಸಮಾಜ ಸಹಜವಾಗಿಯೇ ಸುಡುಗಾಡು ಸೇರುವದು.

ಮಹೇಶ– ಅಂದರೆ ತಾವು....

ರಾಧಾ– ನಾನೇ ಆ ಕ್ರಾಂತಿ ಎಂಬ ಬೆಂಕಿಯ ಮೊದಲ ಕಿಡಿ, ಅಗ್ನಿಕನ್ಯೆ. ನನ್ನ ಸೈನ್ಯದ ಹೆಸರೆ **ಕ್ರಾಂತಿ** ಎದ್ದ **ಕನ್ಯೆಯರು.**

ಮಹೇಶ– ನಿಮ್ಮ ಕ್ರಾಂತಿ ಚಿರಾಯುವಾಗಲಿ

ರಾಧಾ– ಬನ್ನಿ ಹೋಗೋಣ. (ಹೋಗುವರು).

====***=====***====

ಪ್ರವೇಶ–೧೮

ಕೇದಾರನಾಥನ ಮನೆ

ಕೇದಾರ– (ಹೊರಗಿನಿಂದ ಬರುತ್ತ) ಗೀತಾ.. ಗೀತಾ ಬೇಟಿ.

ಗೀತಾ– (ಹೊರಬರುತ್ತ) What ಡ್ಯಾಡಿ ನನ್ನ ಕರೆದಿರಾ?

ಕೇದಾರ– ಇಂದು ನಮ್ಮ ಮನೆಗೆ ಗುರುಗಳು ಆಗಮಿಸುತ್ತಿದ್ದಾರೆ ಬೇಟಿ ಇದೇ ಈಗ ಅವರ ವಿಷಯ ಬಂದು ತಿಳಿಸಿ ಹೋದ.

ಗೀತಾ– ಗುರುಗಳೆಂದರೆ ಅವರ್ಯಾರು ಡ್ಯಾಡಿ? ಇಲ್ಲಿ ಅವರದೇನು ಕೆಲಸ.

ಕೇದಾರ– ಅವರು ಸಾಮಾನ್ಯ ಗುರುಗಳಲ್ಲ, ಹಿಮಾಲಯದ ಕೇದಾರ ಬದರಿ ಗವಿಗಳಲ್ಲಿ ನೂರಾರು ವರ್ಷ ತಪಸ್ಸು ಮಾಡಿದವರು, ನಾನು ಕಮಾಂಡರನಾಗಿ ಬೌಂಡರಿ ಮೇಲೆ ಸರ್ವೀಸ್ ಮಾಡುತ್ತಿದ್ದಾಗ ಅವರ ಮಹಿಮೆ ಕಂಡಿರುವೆ, ಅವರು ಬಂದು ನಿನಗೊಂದು ವರ ಸೂಚಿಸುವದೇ ತಡ, ಆ ಹುಡುಗನೊಡನೆ ನಿನ್ನ ಮದುವೆ ಮಾಡಿಯೇ ಬಿಡುವೆ.

ಗೀತಾ– Oh dady, how a nice man you are.

ಕೇದಾರ– ನೀನು ಬೇಗ ಟಿಫಿನ್ ರೆಡಿ ಮಾಡು, ನಾನು ಮಾರ್ಕೆಟ್ಟಿಗೆ ಹೋಗಿ ಹಣ್ಣು ಹಂಪಲು ತರುವೆ.

ಗೀತಾ– Yes dady, ನೀವು ಬೇಗ ಬನ್ನಿ (ಹೋಗುವನು) oh god ನಮ್ಮ ಗುರುಗಳು ಬೇಗ ಬರಲಿ, ನಾನವರ ಸೇವೆ ಮಾಡಿ ಪ್ರಸನ್ನಗೊಳಿಸಿ ರಾಜುನೆ ನನ್ನ ಗಂಡನಾಗುವಂತೆ ಸೂಚಿಸಲು ವಿನಂತಿಸಿಕೊಳ್ಳುವೆ, ನಾಳೆ ನಮ್ಮ ಮದುವೆಯಾದರೆ ನಾಡಿದ್ದೆ ಹನಿಮೂನಿಗಾಗಿ ಹಂಗಕಾಂಗಗೆ ಹೋಗುವೆವು, ಅಬ್ಬಾ ಆ ವಿಷಯ ನೆನಪಿಸಿದರೇನೆ ರೋಮಾಂಚನವಾಗುವದು (ಪದ ಕುಣಿತ).

ಕೇದಾರ– (ಬರುತ್ತ) ಗೀತಾ ಎಲ್ಲಾ ರೆಡಿ ತಾಣೆ.

ಗೀತಾ– Yes ಡ್ಯಾಡಿ everythings is ready.

ಕೇದಾರ– Very good, (ವಾಚ ನೋಡಿ) ಇನ್ನೇನು ಗುರುಗಳು ಬರುವ ಸಮಯವಾಯಿತು (ಕುಮಾರ ಶಿಷ್ಯನಾಗಿ ಸಾಧುಗಳ ವೇಷದಲ್ಲಿ ಬರುತ್ತ).

ರಾಜು– ಜೈ ಅಲಕ ನಿರಂಜನ! ಜಗಮೆ ಜಗಾದೆ ಭಕ್ತಾಂತಾ ತನುಮನ್! ಗೂಂಜ್ ಉಠೆ ಶಿವನಾಮ ಕಾ ಕೀರ್ತನ್.

ಕುಮಾರ– ಭಕ್ತ ಶಿರೋಮಣಿ ನಮ್ಮ ಗುರುಗಳು ಇಡಿ ಪ್ರಪಂಚಕ್ಕೆ ಪರಿಚಿತರಾದರೂ, ಶಿಷ್ಯರಾದವರಿಗೆ ಕಿರು ಪರಿಚಯ ಮಾಡಿ ಕೊಡುವದು ಪಟ್ಟ ಶಿಷ್ಯನಾದ ನಮ್ಮ ಆದ್ಯ ಕರ್ತವ್ಯ.

ಕೇದರ– ಪ್ರಭು ಚಿತ್ತ ಮೊದಲು ಆಸೀನರಾಗಿ .. (ರಾಜು ಠೀವಿಯಿಂದ ಕೊಡುತ್ತ).

ರಾಜು– ಜೈ ಅಲಕ ನಿರಂಜನ್.

ಕುಮಾರ– ಇವರು ನಮ್ಮ ಗುರುಗಳಾದ ಪರಮ ಪೂಜ್ಯ ಶ್ರೀ ಶ್ರೀ ಶ್ರೀ ರಾಜರಾಜೇಂದ್ರ ಮಹಾ ಮುನಿಗಳು, ಧರ್ಮೆಂದ್ರ, ಜಿತೇಂದ್ರರಿಗೆ ಉಪದೇಶವಗೈದು ಉದ್ಧರಿಸಿದವರು, ಹಿಮಾಲಯದ ತುಟ್ಟ ತುದಿಯಲ್ಲಿರುವ ಗೌರಿಶಂಕರ ಗುಹೆಯಲ್ಲಿ ೧೮ ವರ್ಷ ನಿರಂತರವಾಗಿ, ಅನ್ನ ಪಾನಾದಿ ತೊರೆದು, ಅಘೋರ ತಪವಂಗೈದು ಸರ್ವಾರ್ಥ ಸಿದ್ಧಿ ಯೋಗದಲ್ಲಿ ಸಾಧನೆಯಂ ಪಡೆದು, ಲೋಕ ಕಲ್ಯಾಣಾರ್ಥವಾಗಿ ನಾನಾ ತೀರ್ಥ ಕ್ಷೇತ್ರಗಳಂ ಪಾವನಗೊಳಿಸುತ್ತ, ಭಕ್ತ ಉದ್ದಾರಕ್ಕಾಗಿ ಪಾದಯಾತ್ರೆಗೈಯ್ಯುತ್ತ, ನಿಮ್ಮ ಪುಣ್ಯದ ಪ್ರಭಾವದಿಂದ ಇಂದು ಈ ಮನೆಯತ್ತ ಬಿಜಯಂಗೈದಿಂಗೈದಿರಲು, ತಾವೆಲ್ಲ ತಮ್ಮ ಪಾಪಂ ಪರಿಹರಿಸಿಕೊಂಡು, ಇಷ್ಟ ಸಿದ್ಧಿ ಪಡೆದು ಪುನಿತರಾಗುವದಾಗಿ ಬಿನ್ನಹ.

ಕೇದಾರ– ಧನ್ಯ ಪ್ರಭು, ನಾನಿಂದು ಪರಮಧನ್ಯ I am so glad.

ರಾಜು– ಭಕ್ತಾ, ಇವರೆ ನಮ್ಮ ಪುಟ್ಟ ಶಿಷ್ಯ, ಒಂದು ಬುಟ್ಟಿ ರೊಟ್ಟಿ ತಿಂದರೂ ಪಟ್ಟನೆ ಮಲಗಿ, ಸಟ್ಟನೆ ಎದ್ದು, ತುಟ್ಟ ತುದಿಗಾಲಲ್ಲಿ ಓಡಾಡುತ್ತ ಗಟ್ಟಿಯಾಗಿ ಮಂತ್ರ ಜಪಿಸುತ್ತ, ಪತ್ರ ಪುಷ್ಪಗಳನ್ನೆಲ್ಲ ಒಟ್ಟು ಗೂಡಿಸಿ ತಂದು ಲಟ್ಟನೆ ಪೂಜೆಗೆ ಅಣಿಗೊಳಿಸಿ, ಕೈ ಕಟ್ಟಿಕೊಂಡು ನಿಲ್ಲುವ, ವೈಶಿಷ್ಠ ಪೂರ್ಣ ವ್ಯಕ್ತಿತ್ವವುಳ್ಳ ಶಿಷ್ಯೋತ್ತಮರಾದ ಶ್ರೀಮಾನ ಶ್ರೀ ಶಿವಕುಮಾರ ಸ್ವಾಮಿಗಳು.

ಕೇದಾರ– ಇಂದು ತಮ್ಮ ದಿವ್ಯ ದರ್ಶನ ಪಡೆದು ಈ ಜನ್ಮ ಸಾರ್ಥಕವಾಯಿತು ಪ್ರಭು, God here my prayer

ರಾಜು– ವತ್ಸಾ, ನಿನ್ನ ಭಕ್ತಿ ಕಂಡು ನಮಗೆ ತುಂಬ ಸಂತೋಷವಾಯಿತು, ಈ ಪರಿ ಪರಿಶುದ್ಧ ಮನದಿಂದ ನಮ್ಮನ್ನು ಪ್ರಾರ್ಥಿಸಿದ್ದು ಅದಾವ ಕಾರಣಕ್ಕಾಗಿ?

ಕೇದಾರ– ಗುರುವೆ, ಮನೆಯಲ್ಲಿ ಮಗಳು ಬೆಳೆದು ನಿಂತಿದ್ದಾಳೆ

ರಾಜು– ಅವಳಿಗೆ ಈಗ ಮದುವೆಯ ವಯಸ್ಸಲ್ಲವೆ?

ಕೇದಾರ– ತ್ರಿಕಾಲ ಜ್ಞಾನಿಗಳಾದ ತಮಗೆ ಗೊತ್ತಿಲ್ಲವೆ?

ರಾಜು– ಅದೇಕೆ ಗೊತ್ತಿಲ್ಲ ದಿನಾಲು ನೋಡುತ್ತಿರುವೆನಲ್ಲವೆ?

ಕೇದಾರ– ಏನೆಂದಿರಿ? ನೀವು ದಿನಾಲು ನಮ್ಮ ಗೀತಾಳನ್ನು ನೋಡುತ್ತಿರುವಿರಾ?

ರಾಜು– ಹೌದು ಭಕ್ತಾ, ಆದರೆ ನಿನ್ನಂತೆ ಸಾಧಾರಣ ಕಣ್ಣಿನಿಂದಲ್ಲ ಅಂತಃ ಚಕ್ಷುವಿನಿಂದ, ಏಕೆಂದರೆ ಅವಳು ನಿನ್ನ ಮಗಳಲ್ಲವೆ, ನನಗೆ ಬೇಕಾದವಳು

ಕೇದಾರ– ಸಂತೋಷ ಗುರುವೆ, ತುಂಬ ಸಂತೋಷ, ದಯವಿಟ್ಟು ಅವಳಿಗಾಗಿ ಒಂದು ಯೋಗ್ಯ ವರನನ್ನು ಹುಡುಕಿ ಕೊಡಿ

ಕುಮಾರ– ಹುಡುಕುವ ಶ್ರಮವೇಕೆ, ನಾವೆ ಮುದ್ದಾಂ (ಏಳುತ್ತ) ಬಂದಿರುವೆವಲ್ಲ

ರಾಜು– (ಕಾಲರ್ ಹಿಡಿದು ಕೂಡಿಸುತ್ತ) ಶಿಷ್ಯೋತ್ತಮಾ ಸಾವಧಾನ, ಸಾವಧಾನ (ಕೂಡಿಸಿ) ಜೈ ಮಹಾಕಾಳಿ ಕಲ್ಕತ್ತೆವಾಲಿ, ಭರದೆ ಮೇರಿ ಝೋಲಿ, ಕರ ನಕಭಿ ಖಾಲಿ, ಜೈ ಅಲಕ ನಿರಂಜನ (ಎಚ್ಚರ) ಭಕ್ತಾ..

ಕೇದಾರ– ಅಪ್ಪಣೆಯಾಗಲಿ ಪ್ರಭು

ರಾಜು– ನಿನ್ನ ಮಗಳಿಗೆ ಕಂಕಣ ಬಲವಂತೂ ಕೂಡಿ ಬಂದಿದೆ

ಕೇದಾರ– ಹಾಗಿದ್ದರೆ ವರನಾರು ಸೂಚಿಸಿ ದೇವಾ, ನಾಳೆಯೇ ಮದುವೆ ಮಾಡಿ ಮುಗಿಸೋಣ

ಕುಮಾರ– (ಏಳುತ್ತ) ಸೂಚಿಸುವದೇನು ಬಂತು, ನಾನಿಲ್ಲಿಯೇ ಇರುವೆನಲ್ಲ

ರಾಜು– (ಹೆಗಲಂಗಿ ಹಿಡಿದು ಕೂಡಿಸುತ್ತ) ಸಾವಧಾನ ಶಿಷ್ಯೋತ್ತಮಾ ಸಾವಧಾನ.

ಕೇದಾರ– ಇದೇನು ಗುರುಗಳೆ, ಈ ನಿಮ್ಮ ಶಿಷ್ಯರು

ರಾಜು– ಗಾಬರಿ ಪಡಬೇಡಿ, ನಾಳೆ ಮದುವೆ ನಡೆದರೆ ಶಾಸ್ತ್ರಮಂತ್ರ ಮುಂತಾದ ಕೆಲಸಗಳಿಗೆ ನಾನಿರುವೆ ಅಂತ ಅದರ ಇಂಗಿತ

ಕೇದಾರ– ಓ ಹೀಗೊ Good good ತುಂಬ ಸಂತೋಷ.

ರಾಜು– ವತ್ಸಾ, ನಿನ್ನ ಮಗಳಿಗೆ ತಕ್ಕ ವರ ಸೂಚಿಸಬೇಕಾದರೆ ಅವಳ ಮಸ್ತಕ ರೇಖೆ ನೋಡಬೇಕಲ್ಲ, ಕರೆ ಅವಳನ್ನು.

ಕೇದಾರ– ಮಹದಾಜ್ಞೆ ಪ್ರಭು, ಗೀತಾ ಗೀತಾ ಬೇಟಿ.

ಗೀತಾ– (ಹೊರಬರುತ್ತ) ಬಂದೆ ಡ್ಯಾಡಿ.

ಕೇದಾರ– ಬೇಟಿ, ಪೂಜ್ಯರ ಪಾದಕ್ಕೆ ಪ್ರಣಾಮ ಮಾಡು.

ಗೀತಾ– (ನಮಿಸುತ್ತ) Oh God bless me.

ರಾಜು– (ಬೆನ್ನು ಬಡಿದು) ಇಷ್ಟಾರ್ಥ ಸಿದ್ಧಿರಸ್ತು.

ಕುಮಾರ– ಹುಡುಗಿ ಆಗ್ದಿ ಎಳಕ ಅದಾ ಪ್ರಭು, ತುಸು ಹಗುರ.

ರಾಜು– ಶಿಷ್ಯೋತ್ತಮಾ (ಗೀತಾ ರಾಜುವಿನ ಕಾಲೊತ್ತುವಳು).

ಕುಮಾರ– ನೀವು ಏನೆ ಅನ್ನಿ ಗುರುವೆ, ಇಂಥಾ ಎಳಿ ಖಳಿ ಹುಡುಗೇರ ಅಂದರ ನಮಗ ಪಂಚಪ್ರಾಣ, ಈಕಿಗೆ ತುಸುವೆ ತ್ರಾಸು ಆದರ ನಮ್ಮ ಜಿಂವಾ ಚುರ್ರ ಅಂತಾದ.

ರಾಜು– ಶಿಷ್ಯೋತ್ತಮಾ–ಸಾವಧಾನ, ಸಾವಧಾನ (ಗೀತಾಗೆ) ಗೀತಾ ಆರೋಗ್ಯವೆ? (ಆಕೆ ಗಾಬರಿಯಾಗಲು ಕಣ್ಣು ಮಿಟಕಿಸಿ) ಹಾಂ ಶಾಂತಿ ಶಾಂತಿ, ನಿನ್ನ ಕ್ಷೇಮ ಕೇಳುತ್ತಿರುವವರು ನಾವು (ಕಣ್ಣು ಮಿಟುಕಿಸಿ) ನಿನ್ನ ಸಲುವಾಗಿಯೇ ನಾವೀಗ ಆಗಮಿಸಿದ್ದು.

ಗೀತಾ– (ಗುರುತಿಸಿ) oh ಗುರುವೆ ನೀವಾ, ನೀವು ನಮ್ಮ Real god.

ಕುಮಾರ– ನಾವು ಬಂದದ್ದು ಕೂಡಾ ನಿನ್ನ ಸಲುವಾಗಿಯೇ ಗೀತಾ.

ಗೀತಾ– (ರಾಜುಗೆ) ಪೂಜ್ಯರೆ ತಾವು ಆಗಮಿಸಿದ್ದು ನನಗೆ ತುಂಬ ಸಂತೋಷ,

ಆಗ್ದಿ ಆನಂದ.

ರಾಜು– ನಿನ್ನ ಹಣೆ ತೋರಿಸು ನೋಡೋಣ (ನೋಡಿ) ಜೈ ಅಲಕ ನಿರಂಜನ, ಜೈ ಮಹಾಕಾಳಿ, ಕಲ್ಕತ್ತೆ ವಾಲಿ, ಭಗದೆ ಮೇರಿ ಝೋಲಿ, ಕರ ನಕಭಿ ಖಾಲಿ (ಕೇದಾರಗೆ) ಭಕ್ತ ಶಿರೋಮಣಿ.

ಕೇದಾರ– ಅಪ್ಪಣೆಯಾಗಲಿ ಮಹಾ ಪ್ರಭು.

ರಾಜು– ನಾಳೆಯ ಶುಭ ಮುಹೂರ್ತವೇ ಇವಳಿಗೆ ಮದುವೆ ಯೋಗವೆಂದು ಮಸ್ತಕ ರೇಖೆ ಸ್ಪಷ್ಟವಾಗಿ ಹೇಳುತ್ತಿದೆ.

ಕೇದಾರ– ಏನೆಂದಿರಿ? ನಾಳೆಯೇ ಶುಭ ಮುಹೂರ್ತವೆ?

ರಾಜು– ಹೌದು, ನಾಳೆ ಬೆಳಿಗ್ಗೆ ನಿನ್ನಳಿಯನಾಗುವವ ನೇರವಾಗಿ ನಿಮ್ಮ ಮನೆಗೆ ಆಗಮಿಸುವನು.

ಕೇದಾರ– ಆತನನ್ನು ನಾನು ಅದ್ಹೇಗೆ ಗುರುತಿಸಲು ಗುರುವೆ.

ರಾಜು– ನಾಳೆ ಬೆಳ್ಳಿಗ್ಗೆ ಬ್ರಹ್ಮಿ ಮುಹೂರ್ತ, ಮೊದಲನೆ ಜಾವದ ಮೂರು ಗಳಿಗೆಯ ಆರನೆ ಘಳದಲ್ಲಿ ಯಾವ ಒಬ್ಬ ಹುಡುಗ ಒಂದು ಶ್ವೇತ ಗುಲಾಬಿ ತಂದು ನಿನ್ನ ಮಗಳ ಜಡೆಗೆ ಮುಡಿಸುವನೊ, ಅವನೇ ನಿನ್ನಳಿಯ, ಅರ್ಥಾತ ಇವಳ ಗಂಡನೆಂದು ತಿಳಿ, ಹಿಂದೆ ಮುಂದೆ ನೋಡದೆ, ಮೀನಮೇಷ ಎಣಿಸದೆ, ಕುಲಗೋತ್ರ, ಜಾತಿ ಪಂಥ ಎನ್ನದೆ ಅಕ್ಷತಾ ಕಾರ್ಯ ನೆರವೇರಿಸಿ ಬಿಡು, ತಡ ಮಾಡಿದರೆ ನಿನಗೆ ಬಹು ದೊಡ್ಡ ಗಂಡಾಂತರ ಉಂಟು ಹುಷಾರ್.

ಕೇದಾರ– ಪೂಜ್ಯರೆ ಮದುವೆಗೆ ತಡ ಮಾಡಿದರೆ ಗಂಡಾಂತರವೆ?

ರಾಜು– ಹಾಂ. ಆ ರೀತಿ ಇವಳ ಮಸ್ತಕ ರೇಖೆ ಹೇಳುತ್ತಿದೆ, ಮುಂದೆ ಯಮಗಂಡ ಕಾಲವೆಂದು ಸಾರುತ್ತಿದೆ.

ಕೇದಾರ– ಆಗಲಿ ಪ್ರಭು, ಮಹಾದಾಜ್ಞೆ, ಮುಹೂರ್ತ ತಪ್ಪಿಸದೆ ಮದುವೆ ಮಾಡಿಯೇ ಬಿಡುವೆ, ಆಂ.. ಗೀತಾ.. ಗುರುಗಳಿಗೆ ಫಲಹಾರ.

ಗೀತಾ– (ಏಳುತ್ತ) ಆಗಲಿ ಡ್ಯಾಡಿ.

ರಾಜು– (ಕೈ ಹಿಡಿದು ಕೂಡಿಸುತ್ತ) ಶಾಂತಂ ಪಾಪಂ, ಶಾಂತಂ ಪಾಪಂ. ಭಕ್ತ ಶಿರೋಮಣಿ, ನಮಗೆ ಸ್ನಾನ ಸಂಧ್ಯಾವಂದನೆ, ಪೂಜೆ

ಪುರಸ್ಕಾರವಿಲ್ಲದೆ ಆರಾಧನೆ ಉಪಾಸನೆಗೈಯ್ಯದೆ ಅನ್ನ ಪಾನಾದಿ ನಿಷೇಧ.

ಕೇದಾರ– ಫಲಹಾರವಾದರೂ ನಡೆಯಬಹುದಲ್ಲ.

ರಾಜು– ವ್ಯರ್ಜ್ಯ ಅಂದರೆ ವ್ಯರ್ಜ್ಯ, ನಾಳೆ ಇವಳೊಂದಿಗೆ ನನ್ನ ಮದುವೆಯಾದ ನಂತರವೆ ಊಟ, ಉಪಹಾರ.

ಕೇದಾರ– What ನಾಳೆ ಇವಳೊಂದಿಗೆ ನಿಮ್ಮ ಮದುವೆಯೇ?

ರಾಜು– ಶಾಂತಂ ಪಾಪಂ, ಶಾಂತಂ, ಪಾಪಂ.

ಗೀತಾ– ಹಾಗಲ್ಲ ಡ್ಯಾಡಿ. ನಾಳೆ ನನ್ನ ಮದುವೆ ಆದನಂತರವೆ ಅವರ ಊಟವಂತೆ.

ಕೇದಾರ– ಓ ಹೀಗೋ, ಸಂತೋಷ, ಸಂತೋಷ.

ರಾಜು– ಭಕ್ತಾ! ನಾವಿಂದು ಸಂಪೂರ್ಣ ರಾತ್ರಿ ಜಾಗರಣೆಯಲ್ಲಿದ್ದು ಭವ್ಯ ಭವನದಲ್ಲಿ, ಅಂಬಿಕಾ ಆಲಯದಲ್ಲಿ, ಮಾಧವಿ ಮಂಟಪದೋಳ ಕುಳಿತು ಹೇಮಾಮಾಲಿನಿ ರಾಗದಲ್ಲಿ, ಜಯಪ್ರದಾ ತಾಳದಲ್ಲಿ, ಶ್ರೀದೇವಿಯನ್ನು ಆರಾಧಿಸಿ ಮಾಲಾಶ್ರಿಯನ್ನು ಒಲಿಸಿಕೊಂಡು, ನಸುಕಿನಲ್ಲಿ ನಡೆಯುವ ಅಕ್ಷತೆಗೆ ನೇರವಾಗಿ ಆಗಮಿಸುವೆವು.

ಕುಮಾರ– ಇವರಿಗಿಂತ ಮೊದಲೆ ನಾವಿಲ್ಲಿ ಇರುವೆವು.

ರಾಜು– ನಮ್ಮ ಪೂಜೆಗಾಗಿ ಹೂ ಪತ್ರಿ ತೆಗೆದುಕೊಂಡು ಬಂದು ಕೊಡುವನು ಅಷ್ಟೆ

ಕೇದಾರ– ತಾವು?

ರಾಜು– ಬಂದ ಕೆಲಸವಾಯಿತಲ್ಲ! ನಾವಿನ್ನು ಮಹಾಕಾಳಿ ಮಂದಿರಕ್ಕೆ ಪಾದ ಬೆಳೆಸುವೆವು.

ಕೇದಾರ– ನಿಲ್ಲಿ ಫಲ ತಾಂಬೂಲ ತಂದಿರುವೆ, ಪೂಜೆಯ ನಂತರ ಸೇವಿಸಿ (ಒಳ ಹೋಗುವನು).

ರಾಜು– (ಗೀತಾಳನ್ನು ಅಪ್ಪಿಕೊಳ್ಳುತ್ತ) ಗೀತಾ ಡಾರ್ಲಿಂಗ್.

ಗೀತಾ– ರಾಜು ಡಿಯರ್ (ಗಡ್ಡ ಕಿತ್ತು ಜೋತು ಬಿಳುವದು).

ಕುಮಾರ– (ಸಿಟ್ಟಿನಿಂದ) you ಳ೨೦, ನನ್ನ ಕಣ್ಣೆದುರಿನಲ್ಲಿಯೇ ನನ್ನ ವುಡ್‌ಬಿಗೆ ಕಿಸ್ ಕೊಡುತ್ತಿರುವೆಯಾ, ಬಿಡುವೋ ಬಿಟ್ಟು ಬಿಡವೋ (ಕೇದಾರ ಬಂದು ನೋಡಿ ದಂಗಾಗಿ ನಿಲ್ಲುವನು).

ರಾಜು– ಅತ್ತ ಸರಿಯೋ ಸುವ್ವರ್.

ಕೇದಾರ– What ಗುರು ನಕಲು, ಆರ್ಟಿಫಿಶಲ್, ಮೋಸ, ವಂಚನೆ ಧೋಕಾ (ಒಳ ಹೋಗಿ ಬಂದೂಕು ತಂದು ಗುರಿ ಹಿಡಿದು) you ಸ್ಕೌಂಡ್ರಲ್.

ಕುಮಾರ– (ನೋಡಿ) ಅಯ್ಯೋ ಗುರು ಅನರ್ಥ, ಅನರ್ಥ.

ರಾಜು– ಬಾಯ್ಮಚ್ಚಲೆ ಬದ್ಮಾಸ (ಕಾಲೆತ್ತಿ) ಇಕ್ಕಾ ಒಂದು ಕಿಕ್ ಕೊಡಲೇನು.

ಕುಮಾರ– ಅಯ್ಯೋ ವೆಂಕಟ, ಸಂಕಟ, ವೆಂಕಟ, ಸಂಕಟ.. (ರಾಜು ಗೀತಾ ಅಪ್ಪಿ ಕಣ್ಮುಚ್ಚಿ ಡಿಯರ್ ಡಾರ್ಲಿಂಗ ಅನ್ನುತ್ತಲೆ ಇರಲು).

ಕೇದಾರ– ಊಂ, ಡಿಯರ್ ಡಾರ್ಲಿಂಗ, ಪ್ಯಾರೆ ಮೇರ ಲೈಲಾ ಮಜ್ನು.

ಕುಮಾರ– ಅಯ್ಯೋ ಗೀತಾ, ನಿನ್ನ ಡ್ಯಾಡಿ, ಡ್ಯಾಡೀ..

ಗೀತಾ– (ನೋಡಿ ಮೂರ್ಛೆ ಹೋದಂತೆ ಬೀಳುತ್ತ) ಡ್ಯಾಡೀ.

ಕೇದಾರ– (ಗಾಬರಿಯಾಗಿ ಬಂದೂಕು ಕೆಳಗಿಟ್ಟು) ಆರೆ ಗೀತಾ What happand, ಏನಾಯಿತು ನಿನಗೆ? ಹಾಂ. You are un easiness (ನೀರು ತರಲು ಒಳಗೆ ಹೋಗಲು ಕುಮಾರ, ರಾಜೂನ ಗಡ್ಡ ಸರಿಪಡಿಸುತ್ತ).

ಕುಮಾರ– ಅಯ್ಯೋ ಗುರು ನಿನ್ನ ಗಡ್ಡ ಬಡ್ಡ.

ಕೇದಾರ– (ನೀರು ತಂದು ಚಿಮುಕಿಸಿ) ಗೀತಾ ಗೀತಾ, ಏಳು ಬೇಟಿ.

ಗೀತಾ– (ಏಳುತ್ತ) ಡ್ಯಾಡಿ, ನನಗೆ ಸಿಕ್ಕಿತು, ಸಿಕ್ಕಿತು.

ಕೇದಾರ– ಏನು ಸಿಕ್ಕತು ಗೀತಾ?

ಗೀತಾ– ಗುರುಗಳ ಕೃಪೆಯಿಂದ ಅವರ ಗಡ್ಡದಲ್ಲಿ ನನ್ನ ಪತಿಯ ಮುಖ ದರ್ಶನ ಲಾಭ ಸಿಕ್ಕಿತು.

ಕೇದಾರ– What ಏನಂದಿ, ಈತನ ಗಡ್ಡದಲ್ಲಿ ನಿನ್ನ ಪತಿಯ ಮುಖ ದರ್ಶನ No no it is impossible, ಫ್ರಾಡ್, ಧೋಖಾ (ಮತ್ತೆ

ಬಂದೂಕೆತ್ತಿ) ಕೊನ್ ಹೈತೂ?

ಗೀತಾ– ಅಯ್ಯೋ ಡ್ಯಾಡಿ, ಶಾಂತಿ, ಪೀಸ್, ಇದೇ ಗುರುಗಳ ಪವಾಡ ನಂಬು, ನಂಬದಿದ್ದರೆ ಅನರ್ಥ.

ಕೇದಾರ– ಪವಾಡ What it means?

ರಾಜು– (ಎದ್ದು ಆರ್ಭಟ) ಜೈ ಅಲಕ್ ನಿರಂಜನ, ಜಗಮೆ ಜಗಾದೆ ಭಕ್ತೌಂಕಾ ತನ್‌ಮನ್, ಗೂಂಜ ಉಠೆ ಶಿವನಾಮ ಕಾ ಕೀರ್ತನ್.

ಕುಮಾರ– ಜೈ ಅಲಕ್ ನಿರಂಜನ.

ಗೀತಾ– ಯ್ಯೋ ಡ್ಯಾಡಿ ಇಂಥಾ ಮಹಾ ತಪಸ್ವಿಗಳ ಬಗ್ಗೆ ಅನುಮಾನ ಪಟ್ಟರೆ ನಾಳೆ ರವ ರವ ನರಕ ಸೇರಬೇಕಾದೀತು, ಹೆಲ್ಲ್ ಹೆಲ್ಲ್

ರಾಜು– ಜೈ ಮಹಾಕಾಲಿ, ಕಲ್ಕತ್ತೆ ವಾಲಿ, ಹಮೆ ಗುಸ್ಸಾ ಆಯಾತೊ ಎ ಘರ್ ಕರದೇಗ ಖಾಲಿ.

ಕುಮಾರ– ಜೈ ಮಹಾಕಾಳಿ.

ಗೀತಾ– ಅಯ್ಯೋ ಡ್ಯಾಡಿ ಬೇಗ ಕ್ಷಮೆ ಕೇಳಿ, ನಿಮ್ಮ ಕಣ್ಣಿಗೆ ಏನೆ ಕಂಡರೂ ಅದು ನಿಜ್ವಲ್ಲ, ಅದೆಲ್ಲಾ ಅಂಜನ ಮಹಾತ್ಮೆ.

ಕದಾರ– ಅಂಜನ What is that.

ರಾಜು– ಛೂ ಮಂತ್ರ ಕಾಳಿ, ಯಾತಾಳ, ಬೇತಾಳ, ಭೂತಾಳ, ಪಾತಾಳ

ಕುಮಾರ– ತ್ರಿತಾಳ ಮಹಾಕಾಳ, ಜಂಪತಾಳ, ಪಂಚತಾಳ, ಛೂ ಮಂತ್ರಕಾಲೆ ಎ ಘೂಲಕು ಕರದೆ ಹಮಾರೆ ಹವಾಲಿ.

ಗೀತಾ– ಅಯ್ಯೋ ಡ್ಯಾಡಿ ಪ್ಲೀಜ ಬೇಗ ಕ್ಷಮೆ ಕೇಳಿ, ಇವರು ಸಿಟ್ಟಿಗೆದ್ದು ಶಾಪ ಕೊಟ್ಟರೆ ನಾವಿಬ್ಬರೂ ಸುಟ್ಟು ಭಸ್ಮವಾಗುವೆವು.

ರಾಜು– ಜೈ ಅಲಕ ನಿರಂಜನ್.

ಕುಮಾರ– (ಹೆದರಿ) ಓ ಗಾಡ್ save me, save me, (ನಮಿಸುತ್ತ) ನನ್ನಿಂದ ಮಹಾ ಅಪರಾಧವಾಯಿತು, ಕ್ಷಮಿಸಿ ಗುರುದೇವಾ ಹಮ್ಮ ಬಹುತ ಖುಶ್ ಹುವೆ, ಉಠೊ ಸುಖಿ ರಹೊ ಮಗರ್ ಯಾದ ರಖ್ಖೋ ನಾಳೆ ನಸುಕಿನಲ್ಲಿ ಯಾವ ಹುಡುಗ ಬಿಳಿ ಗುಲಾಬಿ ಹೂ ತಂದು ನಿನ್ನ ಮಗಳ ಮುಡಿಗೆ ಮುಡಿಸುವನೊ, ಅವನೊಂದಿಗೆನೆ ಈಕೆಯ

ಲಗ್ನವಾಗಲೇಬೇಕು.

ಕೇದಾರ– ಮಹಾದಾಜ್ಞೆ ಮಹಾಸ್ವಾಮಿ.

ರಾಜು– ಅಂದಾಗ ಮಾತ್ರ ಉಳದಿ ಇಲ್ಲವಾದರೆ ಅಳದಿ.

ಕೇದಾರ– ಪ್ರಭು ಚಿತ್ತ, ಪ್ರಭು ಚಿತ್ತ.

ರಾಜು– ಶಿಷ್ಯೋತ್ತಮಾ.

ಕುಮಾರ– (ಕೈ ಮುಗಿದು) ಅಪ್ಪಣೆ ಪ್ರಭು.

ರಾಜು– ನಾವೀಗ ಮಹಾಕಾಳಿ ಮಂದಿರಕ್ಕೆ ಹೋಗಿ, ಸಪ್ತ ಮಂಡಲ ಪೂಜೆ ನೆರವೇರಿಸೋಣ ನಡೆ.

ಕುಮಾರ– ಆಗಲೆ ಬುದ್ಧಿ ತಮ್ಮ ಅಮೃತಪಾದ ಬೆಳಸಿ ದಯಮಾಡಿಸಿ.

ರಾಜು– (ಹೋಗುತ್ತ) ಜೈ ಅಲಕ್ ನಿರಂಜನ್.

ಗೀತಾ– ಬನ್ನಿ ಡ್ಯಾಡಿ, ಹಾಯಾಗಿ ಕುಳಿತು ಊಟ ಮಾಡೋಣ.

ಕೇದಾರ– ನಡೆ ಮಗು (ಒಳ ಹೋಗುವರು).

===***=====***===

ಪ್ರವೇಶ–೧೯

ರಸ್ತಾ

ವಿಕ್ರಂ– (ಸಿಗರೇಟ ಹಚ್ಚಿ) ಎ ದುನಿಯಾ ಝುಕ್ತಿ ಹೈ ಸಾಲಾ. ಮಗರ್ ಉಸೆ ಝುಕಾನೆ ವಾಲಾ ಚಾಹಿಯೇ. ಎ ದುನಿಯಾ ಜೊ ಕುಚ ಬಿ ಬನ್ತಿ ಹೈ ಮಗರ್ ಉಸೆ ಬನಾನೆ ವಾಲಾ ಬಹಾದ್ದೂರ ಚಾಹಿಯೇ. ಹಹ್ಹಹ... ಈ ಜಗದಲ್ಲಿ ಎಲ್ಲರೂ ಮಾಡುವದು ಹೊಟ್ಟೆಗಾಗಿ, ಆದರೆ ನಾವು ಮಾಡುವದು ಹೆಣ್ಣಿಗಾಗಿ, ಅದರಿಂದ ಸಿಗುವ ಹೊನ್ನಿಗಾಗಿ ಮದುವೆಯ ಮಾರ್ಕೆಟ್ಟಿನಲ್ಲಿ ವರದಕ್ಷಿಣೆಯ ರೇಟ ಹಂದಿ ಜ್ವರದಂತೆ ಏರುತ್ತಿರುವಾಗ ನಮ್ಮಂಥಾ ನಂದಿಗಳಿಗೆ ತುಂಬ ಬೇಡಿಕೆ, ಫಾರೆನ್ ರಿಟರ್ನ ಸಾಫ್ಟವೇರ ಇಂಜಿನಿಯರ್ ಎಂಬ ವರಗಳಿಗೆ ಕೊಟ್ಯಾವದಿ ಕೊಡುವ ಬದಲು.... ಒಂದರೆಡು ಲಕ್ಷದಲ್ಲಿ ನಮ್ಮಂಥಾ ಇಂಟರನ್ಯಾಶನಲ್ ಬಿಜನೆಸ್ಮೆನ್ ಅಳಿಯ ಸಿಗುತ್ತಿದ್ದರೆ, ಮನೆಯಲ್ಲಿ ಮದುವೆಯ ವಯಸ್ಸಿಗೆ ಬಂದ ಹೆಣ್ಣು ಮಕ್ಕಳ ಯಾವ ತಂದೆ ತಾನೆ ಮೀನ ಮೇಷ ಎಣಿಸಬಹುದು, ನೀವೆ ಹೇಳಿ ಕಣ್ಮುಚ್ಚಿ ಹಳ್ಳಕ್ಕೆ ಬಿದ್ದೇ ಬೀಳುವವು. ಭಕ್ತ ಬೇಡಿದ್ದು ದೇವರು ಕೊಟ್ಟದ್ದು ಒಂದೆ ಎಂದಾಯಿತಲ್ಲ. ಒಂದು ರೀತಿಯಿಂದ ಕನ್ಯಾ ಸೆರೆ ಬಿಡಿಸಿ ಪುಣ್ಯ ಕಟ್ಟಿಕೊಳ್ಳುವ ಪವಿತ್ರ ಉದ್ಯೋಗವೆಂದು ತಿಳಿದೇ ನಾವು ಈ ಕಾರ್ಯಕ್ಕೆ ಕೈ ಹಾಕಿದ್ದು, ವಾರಕ್ಕೊಂದು ಹೆಣ್ಣು, ಕೈ ತುಂಬ ಹೊನ್ನು, ಯಾವ ದಿಕ್ಕಿನಿಂದ ನೋಡಿದರೂ ಬರಿ ಲಾಭವೆ ಹೊರತು ಹಾನಿ ಎಂಬ ಮಾತೇ ಇಲ್ಲ. ರಸಬಾಳೆ ಹಣ್ಣಿನಂತಿರುವ ಬಣ್ಣ ಬಣ್ಣದ ಹೆಣ್ಣುಗಳ ದೇಹದ ಗಿಣ್ಣು ಸವಿಯುವ ಸೌಭಾಗ್ಯವೇನು ಸಾಮಾನ್ಯವಾದುದೆ? ಹಹ್ಹಹ....(ವಿಚಾರ ಕೋಪ) ಆದರೆ, ಆ ಕುಬೇರನ ಮಗಳು ರಾಧಾ, ಕಣ್ಣೆದುರಿನಲ್ಲಿ ಕೈಗೆ ಸಿಗುವಂತಿದ್ದರೂ ಕಾಂಚನ ಮೃಗದಂತೆ ಮಾಯವಾಗುತ್ತಿದ್ದಾಳೆ ಆಟಕ್ಕೆ ಉಂಟು ಊಟಕ್ಕೆ ಇಲ್ಲೆನ್ನುವಂತೆ, ನನ್ನೊಂದಿಗೆ ಕಳ್ಳಾಟವಾಡುತ್ತಿದ್ದಾಳೆ, ಇಷ್ಟು ದಿನ ತಡೆದದ್ದು ನನ್ನದೇ ತಪ್ಪು. ಇನ್ನು ನನ್ನ ಕುತಂತ್ರದ ಜಾಲ ಬೀಸಲೇಬೇಕು, ಆ ಹಕ್ಕಿಯನ್ನು

ಹಾರಿಸಿಕೊಂಡು ಪಲಾಯನ ಸೂತ್ರ ಪಠಿಸಲೇಬೇಕು, ಇತ್ತಿತ್ತಲಾಗಿ ಆ ಗಂಗೆಯ ಅಣ್ಣ ಮಹೇಶ ಇದೇ ಬೀದಿಯಲ್ಲಿ ಸುತ್ತಾಡುತ್ತಿರುವನಂತೆ, ಅವನಿಗೇನಾದರೂ ಅನುಮಾನ ಬಂದಿರಬಹುದೆ? ಬರಲಿ, ಸಾಧ್ಯವಾದರೆ ಅವನನ್ನೂ ಅವನ ತಂದೆಯ ಭೇಟಿಗೆ ಕಳುಹಿಸಿದರಾಯಿತು (ಹೊರಡಲು).

ಸಂಗಯ್ಯ– (ಎದುರಿನಿಂದ ಬರುತ್ತ) Good Morning boss

ವಿಕ್ರಂ– ಓ ಸಲೀಮ .... ಉರ್ಫ್ ಸಂಗು ಏನು ವಿಶೇಷ?

ಸಂಗಯ್ಯ– ಅರಬ ಶೇಖ್ ಆಗಮಿಸಿದ್ದಾನೆ.

ವಿಕ್ರಂ– Good ತುಂಬ ಸಂತೋಷ, ಹಣ ತಂದಿರುವನೆ.

ಸಂಗಯ್ಯ– ಬ್ಯಾಂಕಿನಿಂದ ಚಕ್ ಕ್ಯಾಶ್ ಮಾಡಿಸುತ್ತಿದ್ದಾನೆ.

ವಿಕ್ರಂ– ಅಗ್ದಿ ಸಂತೋಷ! ಮಾಲು ನೋಡಿ ರೇಟ್ ಫಿಕ್ಸ್ ಮಾಡಲು ನಮ್ಮ ರೂಮಿಗೆ ಕರೆದುಕೊಂಡು ಬಾ.

ಸಂಗಯ್ಯ– ಸಮಯ....?

ವಿಕ್ರಂ– ಅದೆ ನಮ್ಮ ಬಿಜನೆಸ್ ಟೈಮ್, ರಾತ್ರಿ ಎರಡರಿಂದ ಮೂರರ ಮಧ್ಯ.

ಸಂಗಯ್ಯ– Ok ಬಾಸ್, ಹರೆಯದ ಹುಡುಗಿ ಹರಿಣಿಯಂತೆ ಕುಣಿಯುತ್ತಿರಲಿ.

ವಿಕ್ರಂ– ಗಂಗಾ ! ಇಂದು ನೀನು ಗಂಗೆಯ ಪಾಲಾಗುವದಂತೂ ನಿಶ್ಚಯವಾಯಿತು, ನಿನ್ನಂಥಾ ಸುಂದರಿಯನ್ನು ಪಡೆಯುವ ಆ ಶೇಖ್ ಸುದೈವಿಯೇ ಸರಿ, ಒಂದು ವಾರದಿಂದ ನನ್ನ ಮನೆಯ ಮಂಚದಲ್ಲಿಯೇ ಮಲಗುತ್ತಿದ್ದರೂ ನಿನ್ನ ದೇಹದ ಜೇನು ಸವಿಯುವ ಸೌಭಾಗ್ಯ ನನಗೆ ಸಿಗಲೇ ಇಲ್ಲ. ಅಚುಂಬಿತ ತಾರೆಯಂತೆ, ಅನಘ್ರಾಣಿತ ಪುಷ್ಪದಂತೆ ಸುರಕ್ಷಿತವಾಗುಳಿದೆ, ಇರಲಿ ನಡೆ, ದಾನೆ ದಾನೆ ಪೆ ಲಿಖ್ಖಾ, ಖಾನೇವಾಲೆಕಾ ನಾಮ ಎಂಬಂತೆ ಯಾರಾರ ದೈವದಲ್ಲಿದೆಯೋ ಅವರತ್ತ ಸಾಗಿ ಹೋಗು (ಹೋಗುವನು).

===*****=====*****===

ಪ್ರವೇಶ–೨೦

ವಿಕ್ರಂನ ಮನೆ

ವಿಕ್ರಂ–	(ಪ್ರವೇಶ, ಸ್ವ) ಇಂದು ಅರಬ ಶೇಖ್ ಆಗಮಿಸಿದ್ದಾನೆ ಹಣವನ್ನೂ ತಂದಿದ್ದಾನೆ, ಈ ಗಂಗೆಯನ್ನು ಸಂಭ್ರಮದಿಂದ ಸಾಗಹಾಕಲು ರಂಗಭೂಮಿಯನ್ನು ಸಜ್ಜುಗೊಳಿಸಬೇಕು (ಪ್ರ) ಗಂಗಾ, ಗಂಗಾ ಡಿಯರ್ ಒಳಗಡೆ ಏನ್ ಮಾಡ್ತಾ ಇದ್ದೆ ಚಿನ್ನಾ?
ಗಂಗಾ–	(ಖಿನ್ನತೆಯಿಂದ ಹೊರ ಬರುತ್ತ) ಬಂದೆ ಸ್ವಾಮಿ.
ವಿಕ್ರಂ–	ನಿನ್ನ ಮುಖವೇಕೋ ಬಾಡಿದೆಯಲ್ಲ?
ಗಂಗಾ–	ಸ್ವಾಮಿ .... ನನ್ನಪ್ಪ ತೀರಿಕೊಂಡರಂತೆ.
ವಿಕ್ರಂ–	ಹೌದಂತೆ ಗಂಗಾ. ನನಗೂ ತಡವಾಗಿ ತಿಳಿಯಿತು, ಧಾವಿಸಿ ಹೋಗುವಷ್ಟರಲ್ಲಿ ಎಲ್ಲವೂ ಮುಗಿದಿತ್ತು.
ಗಂಗಾ–	ಸ್ವಾಮಿ.... ನನ್ನಪ್ಪ.....
ವಿಕ್ರಂ–	ನಾವು ದುರ್ದೈವಿಗಳು ಗಂಗಾ, ಹತಭಾಗ್ಯರು, ಇಷ್ಟು ಬೇಗ ನಮ್ಮ ತಲೆಯ ಮೇಲಿನ ನೆರಳು ಕರಗಿ ಹೋಗಬಾರದಾಗಿತ್ತು, ಇದಕ್ಕೆಲ್ಲಾ ನಾನೇ ಕಾರಣ ಗಂಗಾ ನನ್ನ ಕುಡಿತವೆ ಕಾರಣ.
ಗಂಗಾ–	(ಆಶ್ಚರ್ಯ) ಸ್ವಾಮಿ ಇದೇನು....
ವಿಕ್ರಂ–	ನಿನ್ನೆಯ ನನ್ನ ದುಡುಕು ವರ್ತನೆಯೇ ಈ ಕೇಡುಕಿಗೆ ಮೂಲ ಕಾರಣ ಗಂಗಾ, ನಾನು ಪಾಪಿ ಮಹಾ ಪಾಪಿ. (ಮುಂಗೈಯಿಂದ ಹಣೆ ಚಚ್ಚಿಕೊಳ್ಳುತಿರಲು ಗಂಗಾ ಹೋಗಿ ತಡೆದು).
ಗಂಗಾ–	ಅಯ್ಯೋ ಇದೇನು ಹುಚ್ಚುತನ. ನೀವು ಹೀಗೆಲ್ಲಾ..
ವಿಕ್ರಂ–	ಬಿಡು ಗಂಗಾ, ನನ್ನಂಥಾ ಹೀನ ನಾಯಿ ಈ ಭೂಮಿಯ ಮೇಲೆ ಬದುಕಿರಬಾರದು, ನಾನು ಸಾಯಬೇಕು. ಗಂಗಾ ಹಿರಿಯರ ಆತ್ಮಕ್ಕೆ ಶಾಂತಿ ಸಿಗಬೇಕು (ಮತ್ತೆ ಹಣೆ ಚಚ್ಚು).

ಗಂಗಾ– ಬೇಡಿ ಸ್ವಾಮಿ, ನೀವಿಷ್ಟು ಮನಸ್ಸಿಗೆ ನೋವು ಮಾಡಿಕೊಳ್ಳುವಿರೆಂದು ನಾನು ತಿಳಿದಿರಲಿಲ್ಲ, ದಯವಿಟ್ಟು ಶಾಂತರಾಗಿ, ಸಮಾಧಾನ ತಂದುಕೊಳ್ಳಿ.

ವಿಕ್ರಂ– ಇನ್ನೆಲ್ಲಿಯ ಶಾಂತಿ ಗಂಗಾ. ಇನ್ನೆಲ್ಲಿಯ ಸಮಾಧಾನ ಅಯ್ಯೋ ಮಾಮಾ....(ದುಃಖದ ನಟನೆ).

ಗಂಗಾ– ನಿಮಗೆ ಕೈ ಮುಗಿಯಲೆ ನನ್ನ ಮಾತು ಕೇಳಿ, ದಯವಿಟ್ಟು ಶಾಂತರಾಗಿ, ನೀವು ಎಷ್ಟೇ ಅತ್ತರೂ ಸತ್ತವರು ಮತ್ತೆ ಬರಲಾರರು, ಆ ವಿಷಯ ಮರೆತು ಬಿಡಿ.

ವಿಕ್ರಂ– ಅದ್ಹೇಗೆ ಮರೆಯಲಿ ಚಿನ್ನಾ, ಮರೆತೆನೆಂದರೆ ಮತ್ತೆ ಒತ್ತೇರಿ ಬರುತ್ತಿದೆ. ಗಂಗಾ ನಿನ್ನಲ್ಲಿ ಮರೆವಿನ ಔಷಧವೇನಾದರೂ ಇದ್ದರೆ ಕೊಟ್ಟು ಪುಣ್ಯ ಕಟ್ಟಿಕೊಳ್ಳು ಡಿಯರ್, ಇಲ್ಲವಾದರೆ ನಾನು ಹಾರ್ಟ ಆಟ್ಯಾಕ್ ಆಗಿ ಸಾಯಬಹುದು.

ಗಂಗಾ– (ಬಾಯಿ ಮೇಲೆ ಕೈಯಿಟ್ಟು) ಸ್ವಾಮೀ.... ಇದೇನು ಕೆಟ್ಟ ಮಾತು ಬಿಟ್ಟು ಅನ್ನಿ, ನಾನೆಂದಿಗೂ ಇಂಥಾ ಕೆಟ್ಟ ನುಡಿ ಕೇಳಿ ಸೈರಿಸಿಕೊಳ್ಳಲಾರೆ.

ವಿಕ್ರಂ– ಓ ಮರೆತಿದ್ದೆ ಇಂಥಾ ದುಃಖ ಮರೆಸುವ ಔಷಧ ನನ್ನಲ್ಲಿಯೇ ಇದೆ. ಇದೀಗ ಬಂದೆ (ಒಳ ಹೋಗುವನು).

ಗಂಗಾ– ಹೇ ದುರ್ವಿಧಿಯೇ, ನಿನಗಷ್ಟು ಇಚ್ಛೆಯಿದ್ದರೆ ನನ್ನನ್ನು ಕಾಡು, ಆದರೆ ನನ್ನ ಕುಂಕುಮ ಮಾತ್ರ ಕೆಡಿಸದಿರು.

ವಿಕ್ರಂ– (ವ್ಹಿಸ್ಕಿ ಬಾಟ್ಲಿ ಗ್ಲಾಸನೊಂದಿಗೆ ಹೊರ ಬರುತ್ತ) ಬಾ ಚಿನ್ನಾ ನಾವಿಬ್ಬರು ಒಂದೊಂದು ಪೆಗ್ ಹಾಕಿಕೊಂಡು ಎಲ್ಲ ದುಃಖ ದುಮ್ಮಾನ ಮರೆತು ಹಾಯಾಗಿ ಮಲಗಿ, ಮಧು ಚಂದ್ರ ಆಚರಿಸೋಣ (ಗ್ಲಾಸಿಗೆ ಹಾಕುತ್ತಿರಲು ನೋಡಿ).

ಗಂಗಾ– (ಗಾಬರಿ) ಹಾಂ. ಇದೇನು ಅಂದ್ರೆ,

ವಿಕ್ರಂ– ಕಲಿಯುಗದ ಅಮೃತ ಕಣೆ, ಎಲ್ಲಾ ದುಃಖಗಳನ್ನು ದೂರ ಮಾಡಿ, ಬರಿ ಸುಖವನ್ನೇ ನೀಡುವ ಸಂಜೀವಿನಿ. ತಗೊ ಡಿಯರ್, ಒಂದು ಗುಟುಕು ಹಾಕಿಕೊ.

ಗಂಗಾ– ಛೇ ನೀವೇನಾದರೂ ಮಾಡಿಕೊಳ್ಳಿ, ನನಗದರ ಅಭ್ಯಾಸವಿಲ್ಲ.

ವಿಕ್ರಂ– ನಿನಗೆ ಅಭ್ಯಾಸ ಮಾಡಿಸುವ ಇಷ್ಟ ನನಗೂ ಇಲ್ಲ ಚಿನ್ನಾ, ನಾ ನಿನಗೆ ಯಾವ ವಿಷಯಕ್ಕಾದರೂ ಬಲವಂತ ಮಾಡಿರುವೆನೆ? ಇಂದಿನ ಈ ಕೆಟ್ಟ ನೆನಪು ಮರೆಯುವದಕ್ಕಾಗಿ, ಪ್ಲೀಜ ಇದು ನನಗಾಗಿ.... ನನ್ನ ಪ್ರೀತಿಗಾಗಿ....

ಗಂಗಾ– ಅಯ್ಯೋ ಬೇಡಿಯಂದ್ರೆ ನಿಮಗೆ ಕೈ ಮುಗಿವೆ.

ವಿಕ್ರಂ– ಗಂಗಾ, ನಾ ನಿನ್ನ ಪತಿಯಲ್ಲವೆ ಪತಿಯಾಜ್ಞೆ ಮೀರುವೆಯಾ? ನಿನ್ನ ಗಂಡನ ಮನಸ್ಸು ನೋಯಿಸುವೆಯಾ?

ಗಂಗಾ– ನೀವು ನನಗೆ ಕೇವಲ ಪತಿಯಲ್ಲ, ಮೋಕ್ಷದಾತ ಮಹಾದೇವ.

ವಿಕ್ರಂ– ಅಂದಮೇಲೆ ನನಗಾಗಿ ನನ್ನ ಸಂತೋಷಕ್ಕಾಗಿ ಒಂದೇ ಒಂದು ಗುಟುಕು ಕುಡಿ ಚಿನ್ನಾ.ಬರಿ ಎಂಜಲು ಮಾಡಿಕೊಡು ಸಾಕು, (ಒತ್ತಾಯ).

ಗಂಗಾ– ಅಯ್ಯೋ ಬೇಡಿ ಬೇಡಿ.

ವಿಕ್ರಂ– (ಗ್ಲಾಸ ತುಟಿಗೆ ಹಚ್ಚುತ್ತ) ನಿನ್ನ ಅಧರ ತಾಕಿದರೆ ಇದು ಮತ್ತಷ್ಟು ಮಧುರ, ಪ್ಲೀಜ.....(ಒತ್ತಾಯದಿಂದ ಕುಡಿಸಲು ಗಂಗಾ ಎದೆ ಹಿಡಿದುಕೊಂಡು ಕೆಮ್ಮುತ್ತ).

ಗಂಗಾ– ಥೂ ಹೋಗಿ ಅತ್ತ. ಎದೆಯಲ್ಲಿ ತಾಪ......ಉರಿ!

ವಿಕ್ರಂ– ಮೊದಲನೆ ಸಲಕ್ಕೆ ತುಸು ತೊಂದರೆ ಎನಿಸುವದು ಸಹಜ ಚಿನ್ನಾ. ಆ ಸೂಳೆ ಮಕ್ಕಳು ಇದನ್ನು ತಯಾರಿಸುವದೆ ಹೀಗೆ, ನೀನೇನು ಅಂಜದಿರು. ಪ್ರಾರಂಭಕ್ಕೆ ತುಸು ತೊಂದರೆ ಕೊಟ್ಟರೂ ಆ ಮೇಲಿನದೆಲ್ಲಾ ಬಿಲ್ಕುಲ್ ಈಜಿ. ಒಂದೆರಡು ಪೆಗ್ ಒಳ ಸೇರಿದರೆ ದೇಹದ ನರ ನಾಡಿಗಳೆಲ್ಲಲ್ಲ ಹರಿದಾಡಿ ಹರ್ಷದ ಹೊನಲನ್ನೆ ಹರಿಸುವದು, ತಗೊ ಇನ್ನೊಂದು ಪೆಗ್.

ಗಂಗಾ– (ತುಸು ಬದಲಾವಣೆ) ಅಯ್ಯೋ ಹೋಗಿ ಅಂದ್ರೆ ನೀವೊಂದು,

ವಿಕ್ರಂ– ನೀ ನನ್ನ ರಾಣಿ ಅಲ್ಲವಾ, ಅಂದದ ಅರಸಿ, ಚಂದನದ ಗೊಂಬೆ (ಕುಡಿಸುವನು).

ಗಂಗಾ– (ಆ ಮೇಲೆ) ರೀ ನೀವು ತುಂಬ ಹಟಮಾರಿಗಳಪ್ಪಾ.

ವಿಕ್ರಂ– ಈಗ ಹೇಗೆನಿಸುತ್ತಿದೆ ಡಿಯರ್.

ಗಂಗಾ– (ಪ್ರೀಯಾಗಿ ಚುಟುಕು) ಅನಿಸುತಿದೆ ಯಾಕೊ ಇಂದು...

ವಿಕ್ರಂ– ಗಂಗಾ ಡಾರ್ಲಿಂಗ್.

ಗಂಗಾ– ಮೈಯಲ್ಲಾ ಹಗುರಾಗಿ, ಮನವೆಲ್ಲಾ ಹೂವಾಗಿ ಆನಂದ ಉಕ್ಕೇರಿ, ಉತ್ತುಂಗ ಶಿಖರದತ್ತ ಉಡ್ಡಯನಗೈಯ್ಯತ್ತಿದೆ ರಾಜಾ ನವಿಲಿನಂತೆ ನರ್ತನಗೈಯಲೆ?

ವಿಕ್ರಂ– I am very happy my sweety ಹೂ ಹಾಡು, ಕುಣಿ, ನೋಡಿ ನಾ ಆನಂದ ಪಡುವೆ. (ಹಾಡು ನರ್ತನ ಮುಗಿಯುತ್ತಿದ್ದಂತೆ ಶೇಖ್ ಕೈಯಲ್ಲಿ ಸೂಟಕೇಸ್, ಸಂಗಯ್ಯ ಬಂದು ಚಪ್ಪಾಳೆ, ಗಂಗಾ ವಿಕ್ರಂನ ತೆಕ್ಕಿಗೆ ತುಂಬ ಅಮಲೇರಿರುವದು).

ಶೇಖ– Wondrfull fantastic ಅನ್ಮೋಲ ಮೋತಿ, ಕೋಹಿನೂರ ಹೀರಾ.

ವಿಕ್ರಂ– ಒಪ್ಪಿಗೆಯೇ ಶೇಖ್?

ಶೇಖ– ಎ ಪೋರಿ ಹಮೆ ಬಿಲ್ಕುಲ್ ಪಸಂದ. ಬಿಜನೆಸ್ ಕಾ ಬಾತ ಕರೊ.

ವಿಕ್ರಂ– Only ten lakh.

ಶೇಖ– What? ten lakh, ದಸ್ ಲಾಕ ಮೇ ಹಾಲಿವುಡ್ ಕಿ ಹಿರೊಯಿನ್ ಮಿಲ್ತಿ ಹೈ ವಿಕ್ರಂ. ಏತೊ ಇಂಡಿಯಾಕಿ ಮೋರ್ ಹೈ.

ವಿಕ್ರಂ– ನಾನಿದನ್ನು ಭಾರಿ ಪರಿಶ್ರಮದಿಂದ ಪಡೆದಿರುವೆ.

ಶೇಖ– ಹಮ್ಮ ಮಾನ್ತಾ ಹೈ ಯಾರ್, ಮಾಲ ಅಚ್ಛಿ ಸೊನಾ ಹೈ ದೊ ಲಾಖ ದೇಗಾ, ಪಾರ್ಸಲ್ ಕರ್ ಇದರ್.

ವಿಕ್ರಂ– ಎರಡು ಲಕ್ಷಕ್ಕೆ ಈ ಹಕ್ಕಿ ಬಿಡು, ಇದರ ಒಂದು .... ಫೋಟೊ ಕೂಡಾ ಸಿಗಲಾರದು.

ಶೇಖ– ಬೇಕಾರ ಬಾತೆ ಮತ್ ಕರೊ ವಿಕ್ರಂ, ಹಮನೆ ಐಸೆ ಹಜಾರ ಲಡ್ಕಿ ದೇಖಾಹೈ ಖರೀದಾ ಭಿ ಹೈ, ಓರ ಬಿಕ್ರಿ ಭಿ ಕಿಯಾ ಹೈ ಆಖಿರ್, ತೀನ್ ಲಾಖ ದೋಂಗಾ, ಮಂಜೂರ ಹೈ?

ವಿಕ್ರಂ– ಇದು ಅಮೂಲ್ಯ ರತ್ನ ಶೇಖ, ಇದುವರೆಗೆ ಈ ಹೆಣ್ಣನ್ನು ಯಾವ ಗಂಡೂ ಮುಟ್ಟಿಲ್ಲ, ಅಚುಂಬಿತ ತಾರೆ , ಅನಘಣಿತ ಕುಸುಮ.

ಶೇಖ– ಅಗರ ಏ ಬಾತ ಸಚ್ ಹೈ ತೊ ಚಾರ ಲಾಖ ದೇಗಾ, ಜಲ್ದಿ

ಹಮಾರೆ ಹವಾಲಾ ಕರದೊ.

ವಿಕ್ರಂ– ಎ ಇಂಟರನ್ಯಾಶನಲ್ ಅಂಡರ್ ರೌಂಡ ಬಿಜಿನೆಸ್ ಹೈ ಶೇಕ, ಎಂಹಾ ಝೂಟ, ಔರ್ ದಗಾಬಾಜು ನಂಹಿ ಚಲ್ತಾ. ಪಾಚ ಲಾಖ ದೆದೊ, ಕಬೂತರ್ ಕೊ ಲೇಲೊ.

ಶೇಖ– ಹಮೆ ಮಂಜೂರ ಹೈ. ಎ ಲೊ ಪಾಚಲಾಖ ಇಂಡಿಯನ್ ಕರೆನ್ಸಿ.

ವಿಕ್ರಂ– ನೋಟ ಅಸ್ಲಿ ಹೈನಾ?

ಶೇಖ– ಹಮ್ಮಭಿ ಬಿಜನೆಸ್ ಮೆನ್ ಹೈ ವಿಕ್ರಂ, ಜಾನ ದೇತಾ ಮಗರ ಝೂಟ ನಂಹಿ ಬೊಲ್ತಾ.

ವಿಕ್ರಂ– ಸಂಗೂ (ಸಂಗಯ್ಯ ಕ್ಯಾಶಬ್ಯಾಗ ತೆಗೆದುಕೊಳ್ಳಲು, ಗಂಗೆಯನ್ನು ಶೇಕನೆಡೆಗೆ ತಳ್ಳುತ್ತ) Good ಏ ಲೊ ಅಪನಾ ಕೊಹಿ ನೂರ ಹೀರಾ...

ಶೇಖ– Good (ತೆಕ್ಕೆಯಲ್ಲಿ ಗಂಗಾಳನ್ನು ಹಿಡಿದುಕೊಂಡು) ಅಬ್ ಹಮ್ಮ ಚಲ್ತಾ. ಚಲ್ ಮೇರಿ ಬುಲ್ ಬುಲ್. (ಹೊರಡಲು ಎದುರಿನಿಂದ ವ್ಯಗ್ರನಾದ ಮಹೇಶ ಆಗಮನ).

ಮಹೇಶ– ಗಂಗಾ...(ಲಿಂಗಯ್ಯ ಟೇಬಲ ಹಿಂದೆ ಅಡಗುವನು).

ಗಂಗಾ– (ತುಸುವೆ ಕಣ್ತೆರೆದು ಅಮಲಿನಲ್ಲ) ಆಂ ಅಣ್ಣಾ ....(ಬಿಡಿಸಿಕೊಳ್ಳಲು ಶೇಖ ಬಲವಂತವಾಗಿ ಕೈ ಹಿಡಿದು ಎಳೆಯಲು).

ಶೇಖ– ವಿಕ್ರ Who is this dirty dog.

ವಿಕ್ರಂ– ಅದೊಂದು ಬಿಡಾಡಿ ನಾಯಿ ಶೇಖ, dont worry ನಾನೆಲ್ಲ ನೋಡಿಕೊಳ್ಳುವೆ. ಸಲೀಂ....

ಸಂಗಯ್ಯ– (ಎದ್ದು) yes boss (ಮಹೇಶನ ಹಿಂದೆ ಹೊರಡಲು).

ಮಹೇಶ– ವಿಕ್ರಂ ಇದೇನು ನಾನು ನೋಡುತ್ತಿರುವದು?

ವಿಕ್ರಂ– ಇಲ್ಲಿ ಯಾವ ನಾಟಕ ನಡೆದಿರುವದೊ ಅದನ್ನೇ ನೀನು ಕಾಣುತ್ತಿರುವುದು.

ಮಹೇಶ– (ಆವೇಶ) ನನ್ನ ತಂಗಿಯ್ನನು ಹಿಡಿದೆಳೆಯುವ ಈ ಹಂದಿ

ಯಾವುದು?

ವಿಕ್ರಂ– ಹರಾಜಿಗಿಟ್ಟ ಹೆಣ್ಣನ್ನು ಬೆಲೆ ಕೊಟ್ಟು ಕೊಂಡ ಶ್ರೀಮಂತ ಶೇಖ.

ಮಹೇಶ– ಏನೆಂದೆ? ನನ್ನ ತಂಗಿ ಹರಾಜಿಗಿಟ್ಟ ಹೆಣ್ಣೆ?

ವಿಕ್ರಂ– ಹಾಂ, ಕೊಂಡವನ ಸೊತ್ತು ಕಂಡವರ ಸೂಳೆ.

ಮಹೇಶ– Shut up you raskel (ವಿಕ್ರಂಗೆ ಒದೆಯಲು, ಆತ ಬೀಳಲು ಮೇಲೆ ಬಿದ್ದು ಗುದ್ದುತ್ತಿರಲು).

ಸಂಗಯ್ಯ– ಅಬೆ ಸುವ್ವರಕೆ ಬಚ್ಚೆ (ಚಾಕುವಿನ ಹಿಡಿಯಿಂದ ಮಹೇಶನ ತಲೆಗೆ ಹೊಡೆಯಲು 'ಹಾ' ಎಂದು ಚೀರಿ ನೆಲಕ್ಕೆ ಬೀಳಲು ವಿಕ್ರಂ ಮೇಲೆದ್ದು).

ವಿಕ್ರಂ– ಶೇಖ ಶೂಟ ಹಿಮ್ಮ, ಜಿಂದಾ ಜಲಾದೆ ಸಾಲೆಕೊ.

ಶೇಖ– (ಪಿಸ್ತೂಲ ಮೇಲೆತ್ತಿ) ಮರ್ ಸಾಲೆ. (ಎತ್ತಿದ ಕೈಗೆ ಹಿಂದಿನಿಂದ ಗುಂಡು ಬೀಳಲು 'ಹಾ' ಎಂದು ಶೇಖ ಚೀರಲು ಪಿಸ್ತೂಲ ನೆಲಕ್ಕೆ ಬೀಳುವದು.

ರಾಮ– (ಯುನಿಪಾರಂನಲ್ಲಿ ಬರುತ್ತ) ಹ್ಯಾಂಡ್ಸಪ್, ತುಸುವೆ ಅಲುಗಾಡಿದರೂ ಶೂಟ ಮಾಡಿ ಬಿಡುವೆ ಹುಷಾರ್, (ಗಂಗಾ ಅಳುತ್ತ ಮಹೇಶನ ಮೇಲೆ ಬೀಳುವಳು).

ವಿಕ್ರಂ– ಅರೆ, ನೆರೆಮನೆಯ ನಂಜುಂಡ, ಇದೇನು ಅವತಾರ?

ರಾಮ– ಇದೇ ನನ್ನ ನಿಜವಾದ ವೇಷ ವಿಕ್ರಂ, ನಾನು ನಿನ್ನ ನೆರೆಮನೆಯ ನಂಜುಂಡನಲ್ಲ, CID ಇನ್ಸಪೆಕ್ಟರ್ ಶ್ರೀರಾಮ ಭೈರಿ, ಸಧ್ಯ ನಿಮ್ಮ ಪಾಲಿನ ಯಮ, ಸಾಯಲು ಸಿದ್ಧರಾಗಿ.

ವಿಕ್ರಂ– ಓ ನೀನು ಇನ್ಸಪೆಕ್ಟ್ರ ಶ್ರೀರಾಮನೊ, ತುಂಬ ಸಂತೋಷ.I am very glad to meet you.

ರಾಮ– Shut up ನನ್ನ ಮುಂದೆ ನಿನ್ನ ನಾಟಕ ನಡೆಯದು ವಿಕ್ರಮ, ಸುಮ್ಮನೆ ಶರಣಾಗು.

ವಿಕ್ರಂ– ಕ್ಷಮಿಸಿ ಇನ್ಸಪೆಕ್ಟ್ರ, ನಾನು ಸಭ್ಯ ಗೃಹಸ್ಥ, ಈ ವ್ಯವಹಾರಕ್ಕೂ ನನಗೂ ಸಂಭಂದವೇ ಇಲ್ಲ.

ರಾಮ– ಮುಚ್ಚು ಬಾಯಿ ನಾಯಿಯಂಥವನೆ. (ವಿಕ್ರಂ ಸಟ್ಟನೆ ರಾಮನ ಕೈಗೆ ಹೊಡೆಯಲು ಪಿಸ್ತೂಲ ಬೀಳಲು).

ವಿಕ್ರಂ– ಭಾಗೋ Run away (ಹೊರ ಓಡುತ್ತಿರಲು).

ರಾಧಾ– (ಪಿಸ್ತೂಲು ಹಿಡಿದು ಎದುರಿನಿಂದ ಬರುತ್ತ ಹಿಂದೆ ಪೋಲಿಸ) Hands up, ಜೀವ ಬೇಕಿದ್ದರೆ ಸುಮ್ಮನೆ ಶರಣಾಗಿ. ಇಲ್ಲವಾದರೆ ನಿಮ್ಮೆಲ್ಲರನ್ನು ನಾಯಿಯಂತೆ ಸಾಯಿಸಿ ಬಿಡುವೆ, ರಾಮ ಪಿಕ್ ಅಪ್ (ರಾಮ ಪಿಸ್ತೂಲ ಎತ್ತಿಕೊಳ್ಳಲು) Be carefull ram, ಇವರು ಪಕ್ಕಾ ವಿಷ ಜಂತುಗಳು.

ರಾಮ– Sorry bass, go ahead (ರಾಧಾ ಟೇಬಲನಲಿದ್ದ ಟೇಪ ರಿಕಾರ್ಡರ್ ಎತ್ತಿಕೊಂಡು) good ಇಂದಿಗೆ ಈ ಆಪರೇಶನ್ ಸಕ್ಸೆಸ್ ಆಯಿತು.

ವಿಕ್ರಂ– ಓ ರಾಧಾ,Come on my sweet heart.

ರಾಧಾ– ನನ್ನ ಹೆಸರು ರಾಧಾ ಅಲ್ಲ ವಿಕ್ರಂ, ಮೂರು ವರ್ಷದ ಹಿಂದೆ ನನ್ನ ವಂಚನೆಯ ಬಲೆಗೆ ಬಿದ್ದು ಸೂಳೆಯಾಗಲು ಒಪ್ಪದೆ ಸಾವಿಗೆ ಶರಣಾದಳಲ್ಲ, ಸೀತಾ, ನಾನವಳ ತಂಗಿ ಸಾವಿತ್ರಿ, CID ಇನ್ಸಪೆಕ್ಟರ್, ಸಧ್ಯ ನಿಮ್ಮೆಲ್ಲರ ಸಾವಿನ ಕುಣಿಕೆ.

ವಿಕ್ರಂ– ನನ್ನೊಂದಿಗೆನೆ ಜೋಕ್ ಮಾಡುವೆಯಾ, ಡಿಯರ್ ಬಾ ಪ್ಲೇನ್ ಹತ್ತಿಕೊಂಡು ಹನಿಮೂನಿಗೆ ಹೋಗೋಣ.

ರಾಧಾ– Shut up you dirty pig ಇಷ್ಟು ದಿನ ನೂರಾರು ಹೆಣ್ಣುಗಳನ್ನು ವಂಚಿಸಿ, ಮಾರಾಟ ಮಾಡಿ ದುಡ್ಡು ಎಣಿಸುತ್ತಿದ್ದೆಯಲ್ಲವೆ, ಈಗ ಜೇಲಿನ ಕಂಬ ಎಣಿಸುವೆಯಂತೆ ನಡೆ.

ವಿಕ್ರಂ– ಇನ್ಸಪೆಕ್ಟರ್ ನಾನೂ ಕೋರ್ಟ, ಕಾನೂನು ಕಂಡಿರುವೆ, ನನ್ನ ಜೇಬಿನಲ್ಲಿ ಕಾಸೂ ಉಂಟು, ಕಾಸಿಗಾಗಿ ಕೇಸು ಗೆಲ್ಲಿಸಿ ಕೊಡುವ ವಕೀಲರೂ ಉಂಟು.

ರಾಧಾ– ಮುಚ್ಚು ಬಾಯಿ ಬದ್ಮಾಸ್. ನಿನ್ನ ನೇಣುಗಂಭಕ್ಕೇರಿಸಲು ಈ ಕ್ಯಾಸೆಟ್ಟ ಒಂದೇ ಸಾಕು.

ವಿಕ್ರಂ– ಏನೆಂದೆ? ಆ ಕ್ಯಾಸೆಟ್ಟಿನಲ್ಲಿ ಇಲ್ಲಿ ನಡೆದ ಎಲ್ಲಾ ಮಾತು ಕಥೆ ರಿಕಾರ್ಡ ಮಾಡಿರುವೆಯಾ? you ಬಿಚ್.(ಹಾರಿ ರಾಧಾ ಮೇಲೆ

ಹೋಗುತ್ತಿರಲು ರಾಮ ವಿಕ್ರಂನ ಕಾಲಿಗೆ ಗುಂಡು ಹಾಕಲು 'ಹಾ'ಎನ್ನುತ್ತ ನಿಲ್ಲಲು ರಾಧಾ ತಾನೂ ಒಂದು ಗುಂಡು ಹಾಕಿ).

ರಾಧಾ– you ರ್‍ಯಾಸ್ಕಲ್, ನಾನು ಮನಸ್ಸು ಮಾಡಿದರೆ ನಿಮ್ಮೆಲರನ್ನು ಇಲ್ಲೆ ಸುಟ್ಟು ಬೂದಿ ಮಾಡಬಲ್ಲೆ, ನಿಮ್ಮ ಕೊಯ್ದು ತುಣಕು ಮಾಡಿ ನರಿ ನಾಯಿಗಳಿಗೆ ಹಾಕಿ ಸೇಡು ತೀರಿಸಿಕೊಳ್ಳಬಹುದಾಗಿತ್ತು, ಆದರೇನು ಮಾಡಲಿ, ನಾನು ಕಾನೂನಿನ ಕೈಗೊಂಬೆ, ಕರ್ತವ್ಯದ ಕೂಸು, ಪೋಲಿಸ! ಹಚ್ಚು ಕೈ ಕೋಳ.

ರಾಮ– (ಲಿಗಯ್ಯನನ್ನು ಎಳೆತರುತ್ತ) ಹಚ್ಚಿ ಇವನಿಗೂ ಕೈ ಕೋಳ.

ಲಿಂಗಯ್ಯ– ಅಯ್ಯೋ ಅನ್ಯಾಯ, ಪರಮ ಅನ್ಯಾಯ, ನಾನು ನಿರ್ದೋಷಿ. ರಾಯರೆ, ಮದುವೆಯಂಥಾ ಪುಣ್ಯದ ಕಾರ್ಯ ಮಾಡುವ ಪುಣ್ಯವಂತ ಜಂಗಮ.

ರಾಮ– ಬಾಯ್ಮುಚ್ಚಲೆ ಸುವ್ವರ್. ಆತ ಸಲಿಂ, ನೀನು ಕರಿಂ ನೀವಿಬ್ಬರೂ ಬದ್ಮಾಸರು, ಸಂಗಯ್ಯ, ಲಿಂಗಯ್ಯರಾಗಿ ಈ ತಾಯಿಗಂಡ ವಿಕ್ರಂಗೆ ಸಾತ ನೀಡಿದ್ದಕ್ಕಾಗಿಯೇ ಇಂದು ನೂರಾರು ಮುಗ್ಧ ಹುಡುಗಿಯರು ಮಣ್ಣು ಪಾಲಾದುದು, ನಿಮಗೂ ಫಾಂಸಿ ಏರಿಸಲೇಬೇಕು.

ಶೇಖ– ಹಮೆ ಛೋಡ್‌ದೊ ಸಾಬ, ಹಮ್ಮ ಪರದೇಶಿ ಹೈಂ.

ರಾಮ– ಬಾಯ್ಮುಚ್ಚಲೆ ಬಿಕನಾಸಿ, ನಿಮ್ಮಂಥಾ ಹೆಣ್ಣು ಕಾಣದ ಹಲ್ಕಾ ಸೂಳೆ ಮಕ್ಕಳೆ, ಹಣದ ಆಶೆಯೊಡ್ಡಿ, ನಮ್ಮ ದೇಶದಲ್ಲಿ ಇಂಥಾ ತಾಯಿ ಗಂಡರನ್ನು ಸೃಷ್ಠಿ ಮಾಡಿದ್ದು, ಹೂಂ ತೆಗೆದುಕೊಂಡು ನಡೆಯಿರಿ. (ಎಳೆದೊಯ್ಯುತ್ತಿರಲು).

ವಿಕ್ರಂ– ನೆನಪಿರಲಿ ಇನ್ಸಪೆಕ್ಟರ್. ನನ್ನ ಹೆಸರು ಅಜಯ ವಿಕ್ರಂ.

ರಾಧಾ– ನೀನೂ ನಿನ್ನೆದೆಯಲ್ಲಿ ಬರೆದಿಟ್ಟುಕೊ ವಿಕ್ರಂ. ನನ್ನ ಹೆಸರು ಸಾವಿತ್ರಿ ಅಲ್ಲ, ಸಿಂಹಿಣಿ. ನಿನ್ನಂಥಾ ನರರಾಕ್ಷಸರ ಮಟ್ಟ ಹಾಕುವದಕ್ಕಾಗಿಯೇ ನಾನು ಹುಟ್ಟಿ ಬಂದಿದ್ದು (ಕಾಲಿಗೆ ಗುಂಡು ಹಾಕಿ) ಸಾಕೋ, ಇನ್ನೂ ಬೇಕೊ?(ವಿಕ್ರಂ 'ಹಾ'ಎಂದು ಕೂಡಲು) ಹೂಂ ಎಳೆದೊಯ್ಯಿರಿ ಈ ನಾಯಿಗಳನ್ನು (ಕರೆದೊಯ್ಯುವರು).

ರಾಧಾ– (ಟೇಪ್ ಟೇಬಲ ಮೇಲಿಟ್ಟು) ಗಂಗಾ ಅರೆಮೂರ್ಛೆ ಹೋಗಿದ್ದಾಳೆ ರಾಮ ನೀರು ತಂದು ಚಿಮುಕಿಸಲು).

ಗಂಗಾ– (ಮೇಲೇಳುತ್ತ) ಅಯ್ಯೋ ಅದೆಲ್ಲಾ ಏನು? ಅಣ್ಣಾ.

ರಾಧಾ– ರಾಮ ಮಹೇಶನ ತಲೆಗೆ ಪೆಟ್ಟಾದಂತಿದೆ.

ರಾಮ– ಆ ತಾಯಿಗಂಡ ಸಲಿಂ ರೂಲಿನಿಂದ ಜೋರಾಗಿ ಹೊಡೆದ ಮೇಮ್‌ಸಾಬ.

ರಾಧಾ– ಹರಿ ಅಪ್. ಮಹೇಶನನ್ನು ಹೊತ್ತೊಯ್ದು ಹಾಸ್ಪೆಟಲಿಗೆ ಸೇರಿಸು,be quick.

ರಾಮ– yes ಸರ್, (ಮಹೇಶನನ್ನು ಹೊತ್ತೊಯ್ಯುವನು).

ಗಂಗಾ– ನನ್ನಣ್ಣನಿಗೆ ಏನಾಗಿದೆ ರಾಧಾಕ್ಕಾ?

ರಾಧಾ– ತಲೆಗೆ ಪೆಟ್ಟಾಗಿ ಪ್ರಜ್ಞೆತಪ್ಪಿದ್ದಾರೆ, ಹೆದರದಿರು ಬೇಗ ಗುಣವಾಗುವುದು.

ಗಂಗಾ– ನನ್ನ ಸ್ವಾಮಿ ಎಲ್ಲಿ?

ರಾಧಾ– ನಿನ್ನ ಸ್ವಾಮಿ ಸನ್ಯಾಸಿಯಾಗಿ ಕಾಶಿ ಯಾತ್ರೆಗೆ ಹೋಗಿದ್ದಾನೆ. ಹೋಗುವಾಗ ನಿನ್ನಣ್ಣನಿಗೆ ಸಾಯುವಂತೆ ಹೊಡೆಸಿಯೇ ಹೋದ.

ಗಂಗಾ– ಇದು ಸಾಧ್ಯವೇ ಇಲ್ಲ, ನನ್ನ ದೇವರು ಅಂಥವರಲ್ಲ.

ರಾಧಾ– ಆತ ದೇವರಲ್ಲ, ಪಕ್ಕಾ ದೆವ್ವ, ಕೊಲ್ಲುವ ವಿಧಿಗಿಂತ ಕಾಯುವ ದೇವರು ದೊಡ್ಡವ, ನಿಮ್ಮಣ್ಣ ಬದುಕುಳಿದ ಅದೇ ದೊಡ್ಡದು.

ಗಂಗಾ– ನೀವೆಲ್ಲಾ ಯಾವಾಗ ಬಂದಿರಿ? ಇಲ್ಲಿ ಏನು ನಡೆಯಿತು? ನನಗೊಂದೂ ಗೊತ್ತಿಲ್ಲ.

ರಾಧಾ– ಅಂದರೆ ನಿನಗೆ (ಗಂಗಾಳ ಬಾಯಿ ವಾಸನೆ ನೋಡಿ) ಓಹೋ ಪಶು ಕೊಸರಾಡದಂತೆ ಸಂಪೂರ್ಣ ಉರ್ಲು ಹಾಕಿಯೇ ಬಿಟ್ಟಿರುವರೆನ್ನು.

ಗಂಗಾ– ಯಾವ ಪಶು. ಯಾವ ಉರ್ಲು, ನನಗೊಂದೂ ಅರ್ಥವಾಗದು.

ರಾಧಾ– ಅನರ್ಥಕ್ಕೆಲ್ಲಾ ಅರ್ಥ ಹುಡುಕುವದು ವ್ಯರ್ಥ ಗಂಗಾ, ಆದದ್ದೆಲ್ಲಾ ಮರೆತು ಬಿಡು.

ಗಂಗಾ– ಅಂದರೆ?

ರಾಧಾ– ನಿನ್ನ ಮದುವೆ ಒಂದು ದುರಂತ ಕನಸು, ಆ ಗಂಡನೆಂಬ ಶನಿ ಸತ್ತಿತೆಂದು ಸಂತೋಷ ಪಡು.

ಗಂಗಾ– ಅದ್ಹೇಗೆ ಸಾಧ್ಯ? ಆತ ಕಳ್ಳನೊ, ಸುಳ್ಳನೊ, ಆದರೂ ನನ್ನ ಪತಿ, ಸತಿಗೆ ಪತಿಯೇ ಪರದೈವ.

ರಾಧಾ– ಆತ ಗಂಡನಲ್ಲ ಭಂಡ. ಪಕ್ಕಾ ತಾಯಿಗಂಡ, ಈ ನಿನ್ನ ಕೊರಳಲ್ಲಿರುವದು ಮುತ್ತೈದೆಗೆ ಸಲ್ಲುವ ಮಂಗಳ ಸೂತ್ರವೂ ಅಲ್ಲ. (ಕೈಯಿಂದ ಹರಿಯುತ್ತ) ಹರಿದು ಬಿಸಾಡು ಈ ಮಂಗಳ ಸೂತ್ರವನ್ನು).

ಗಂಗಾ– (ಸಿಟ್ಟಿನಿಂದ ರಾಧಾಳ ಕೆನ್ನೆಗೆ ಹೊಡೆದು) ಮುಚ್ಚುಬಾಯಿ ಹುಚ್ಚುನಾಯಿ, ತಾ ಇತ್ತ ಈ ಮಂಗಳ ಸೂತ್ರ.

ರಾಧಾ– ಒಪ್ಪಿದೆ ಗಂಗಾ, ಭಾರತದ ಆರ್ಯನಾರಿ ಧರ್ಮದ ಸಾಕಾರ ಮೂರ್ತಿಯಂತಿರುವ ನಿನ್ನಂಥಾ ಸ್ತ್ರಿರತ್ನಗಳಿಂದಲೇ ನಮ್ಮ ದೇಶ ಅನ್ಯರಿಗೆ ಆದರ್ಶವಾಗಿದೆ.

ಗಂಗಾ– ಆ ಪುರಾಣ ಕಟ್ಟಿಟ್ಟು, ನನ್ನ ಮಂಗಳ ಸೂತ್ರ ಕೊಟ್ಟುಬಿಡು.

ರಾಧಾ– ಇದು ಮಂಗಳ ಸೂತ್ರವಲ್ಲ ಗಂಗಾ, ನಿನ್ನ ಪಾಲಿನ ಯಮಪಾಶ, ಆತ ನಿನಗೆ ತಾಳಿ ಕಟ್ಟಿದ್ದು ಹಣಕ್ಕಾಗಿಯೇ ಹೊರತು, ಹೆಂಡತಿಯಾಗಿಸಿಕೊಳ್ಳಲು ಅಲ್ಲ, ಆತ ನಿನಗೆ ಕಾಯಾ, ವಾಚಾ, ಮನಸಾ ವರಿಸಲಿಲ್ಲ, ಧರ್ಮೇಚ, ಅರ್ಥೇಚ, ಕಾಮೇಚ ಎಂದು ಕೈ ಹಿಡಿಯಲಿಲ್ಲ, ಸಪ್ತಪದಿ ಸುತ್ತಲಿಲ್ಲ, ಅಂದಮೇಲೆ ಈ ತಾಳಿ ಮುತ್ತೈದೆಯ ಪವಿತ್ರ ಲಾಂಛನವಂತೂ ಅಲ್ಲವೆ ಅಲ್ಲ, ಇದರಲ್ಲಿ ಯಾವ ಅರ್ಥವೂ ಇಲ್ಲ, ಪುರುಷಾರ್ಥವೂ ಇಲ್ಲ.

ಗಂಗಾ– ನಾಳೆ ನನ್ನ ಬಾಳು?

ರಾಧಾ– ಮೂಡಲಿದೆ ಬೆಳದಿಂಗಳು, ಸಂಶಯವೇ ಬೇಡ.

ಗಂಗಾ– ಅಂದರೆ, ಮರು ಮದುವೆ.... ಪುನರ್ ವಿವಾಹವೇ.....

ರಾಧಾ– ಆದರೆ ತಪ್ಪೇನು? ಗಂಡಿಗಿಲ್ಲದ ನಿಯಮ ನಮಗೇಕೆ? ಹೆಣ್ಣು ಗಂಡಿಗೆ ಬಾಳ ಗೆಳತಿಯೇ ಹೊರತು ಗುಲಾಮಳಲ್ಲ, ಒಳ್ಳೆಯವನಾದರೆ ಒಪ್ಪಿಕೊಳ್ಳೋಣ, ಕೆಟ್ಟವನಾದರೆ ಸುಟ್ಟು ಬಿಡೋಣ, ಹೆಣ್ಣು ಕ್ರಾಂತಿ ಎದ್ದರೇನೆ ಸಂಸಾರದಲ್ಲಿ ಶಾಂತಿ ನೆಲೆಸುವದು.

ಗಂಗಾ– ಆಗಲೆಕ್ಕಾ, ನಿನ್ನ ಕ್ರಾಂತಿಯ ಜಯಕಾರಕ್ಕೆ ನನ್ನ ಸಹಕಾರವೂ

ಇದೆ, ದಯವಿಟ್ಟು ನನ್ನ ಕ್ಷಮಿಸಕ್ಕಾ, ಆವೇಶದಲ್ಲಿ ನಿನ್ನ ಕೆನ್ನೆಗೆ ಹೊಡೆದು ತಪ್ಪು ಮಾಡಿದೆ.

ರಾಧಾ— ಹುಚ್ಚಿ ನನಗೆ ಕೋಪವೇನಾದರೂ ಇದ್ದರೆ ನಿನ್ನ ಕೆನ್ನೆಗೆರಡು ಬಾರಿಸಿ ಸುಮ್ಮನೆ ಹೊರಟು ಹೋಗುತ್ತಿದ್ದೆ, ಇಷ್ಟೆಲ್ಲ ಪ್ರಯಾಸ ಪಡುತ್ತಿರಲಿಲ್ಲ.

ಗಂಗಾ— ಅಂದರೆ ಇಂದಿನಿಂದ ನಾನು....

ರಾಧಾ— ನನ್ನ ಒಡ ಹುಟ್ಟಿದ ತಂಗಿ, ಬಾ ಇಂದು ನಾವಿಬ್ಬರು ಕೂಡಿ ನಮ್ಮ ಕ್ರಾಂತಿಯ ಹುಟ್ಟು ಹಬ್ಬ ಆಚರಿಸೋಣ (ಇಬ್ಬರೂ ಕೂಡಿ ಹಾಡು ಕುಣಿತ, ನಂತರ ಟೇಬಲ ಮೇಲಿದ್ದ ಟೇಪ ಮತ್ತು ತಾಳಿ ತೆಗೆದುಕೊಂಡು) ಬಾ ಹೋಗೋಣ.

ಗಂಗಾ— ಅಕ್ಕಾ... ಈ ತಾಳಿಯನ್ನು.

ರಾಧಾ— ಬೀದಿಯಲ್ಲಿ ಕಂಡ ಯಾವದಾದರೊಂದು ಹೆಣ್ಣು ನಾಯಿಯ ಕೊರಳಿಗೆ ಕಟ್ಟಿ ಹೊರಟು ಹೋಗೋಣ.

ಗಂಗಾ— ತುಂಬ ಸಂತೋಷ ನಡೆ. (ಹೋಗುವರು).

===****===****===

ಪ್ರವೇಶ–೨೧

ರಸ್ತಾ

(ರಾಜು, ಕುಮಾರ ವಿಚಾರ ಮಾಡುತ್ತ ಹೊರಟಿರುವರು).

ರಾಜು– ಅಂತೂ ಅಡ್ಡಿಯಿಲ್ಲ ಕುಮಾರ ಚನ್ನಾಗಿ ಅಭಿನಯಿಸಿದೆ.

ಕುಮಾರ– ಗೀತಾಳಂಥಾ ಹುಡುಗಿ ಹೆಂಡತಿಯಾಗಿ ಸಿಗುವಂತಿದ್ದರೆ, ನಾನು ಏನು ಬೇಕಾದರೂ ಮಾಡಲು ಸಿದ್ಧ.

ರಾಜು– ಈಗ ನಮ್ಮ ಕೆಲಸ ನೈಂಟಿ ಪರ್ಸೆಂಟ ಮುಗಿದಂತಾಯಿತು.

ಕುಮಾರ– ಮುಂದೆ ನಡೆಯವದೆ ಅಸ್ಲಿ ಕುರುಕ್ಷೇತ್ರ.

ರಾಜು– ಯುದ್ದ, ಈ ಯುದ್ಧ ಜಗಳ ಅದೇಕೆ ದೋಸ್ತ?

ಕುಮಾರ– ಹೆಣ್ಣಿಗಾಗಿ ದೋಸ್ತ. ಗೀತಾಳ ಗಂಡನಾಗುವ ಹಕ್ಕಿಗಾಗಿ.

ರಾಜು– ಗೀತಾಳ ಗಂಡನಾಗುವ ಹಕ್ಕು ನಾನೆಂದೋ ಪಡೆದಿರುವೆನಲ್ಲ.

ಕುಮಾರ– ಹಾಗೆಂದಿಗೂ ನಾನು ಬಿಡದಿರುವೆನಲ್ಲ.

ರಾಜು– ಇದು ಮಿತ್ರದ್ರೋಹ. ಸಭ್ಯತನವಲ್ಲ.

ಕುಮಾರ– ಸಭ್ಯತನ ಅಂದ್ರೆ, ನೀವಿಬ್ಬರು ಮದುವೆಯಾಗಿ ಮಂಚದ ಮೇಲೆ ಮಲಗಿದಾಗ ಬಂದು ಕಾಲೊತ್ತಲೆ?

ರಾಜು– ಬ್ಯಾಡ ಕುತ್ತಿಗೊತ್ತು.

ಕುಮಾರ– ನಾನು ಅದನ್ನೆ ಮಾಡುವವ. ನನಗೆ ಗೀತಾ ಸಿಕ್ಕರೆ ಸರಿ, ಇಲ್ಲವಾದರೆ ನಿಮ್ಮಿಬ್ಬರ ಮರ್ಡರ್ ಮಾಡಿ ಜೇಲು ಸೇರುವೆ ನೆನಪಿರಲಿ.

ರಾಜು– (ಅವನ ಬಾಯ್ಮುಚ್ಚಿ) ತುಸು ಬಾಯ್ಮುಚ್ಚಲೆ ಬೇಕೂಫ್ ಅದೊ ಅಲ್ಲಿ ನೋಡು ಪೋಲಿಸ್.

ಕುಮಾರ– ಅರೆ ಬಾಪರೆ ಪೋಲಿಸ್ Run away quick (ಕುಮಾರ

ಓಡುತ್ತಿರಲು ರಾಜು ಆತನ ಕಾಲರ ಹಿಡಿದು).

ರಾಜು– ಲೇ ಮಗನಾ, ಪೋಲಿಸ್ ಅಂದ ಕೂಡಲೆ ಈ ರೀತಿ ಅಂಜಿ ಓಡೋ ನೀನು, ನಮ್ಮಿಬ್ಬರ ಮರ್ಡರ್ ಮಾಡಿ ಚೇಲಿಗಿ ಹೋಗ್ತ್ಯಾ? ಅಂಜಬ್ಯಾಡ ನಿಲ್ಲು! (ಪೋಲಿಸರು ಆರೋಪಿಗಳನ್ನು ಕರೆ ತರುತ್ತಿರಲು) (ಲಿಂಗಯ್ಯನಿಗೆ) ಓಹೋ ಪೂಜ್ಯರ ಪಾದಕ್ಕೆ ಪ್ರಣಾಮಗಳು.

ಲಿಂಗಯ್ಯ– ಲೇ ತುರುಕ!

ರಾಜು– ನಾ ತುರುಕರೆ ಇರಲಿ ಹರುಕರೆ ಇರಲಿ, ನಿಮ್ಮಂಗ ಮನೆ ಮುರುಕ ಮಾತ್ರ ಅಲ್ಲ ನೋಡರಿ, ಲೇ ಅಯ್ಯ ನಂದಿ ಹೊಟ್ಯಾಗ ಹಂದಿ ಹುಟ್ಟಿದಂಗ ಜಂಗಮರ ಹೊಟ್ಯಾಗ ನೀ ಯಾಕ ಹುಟ್ಟಿದಲೆ ಹಲ್ಕಟ್ಟ ದಲಾಲ. ನಿಮಗೇನ ಪಾದಕ್ಕೆ ಬೀಳಬೇಕಾ, ಏನ್ ಪಾದರಕ್ಷಾದಿಂದ ಪೂಜೆ ಮಾಡಬೇಕಾ? ಥೂ ನಿನ್ನ ಜನ್ಮಕ್ಕ ಬೆಂಕಿ ಹಚ್ಚಲಿ (ಶೇಖನಿಗೆ) ಯಾಕಪಾ ಶೇಖ ಹೆಣ್ಣು ಬೇಕು. ಹಣ್ಣೂ ಬೇಕು ಅಂತ ನೀವೆಲ್ಲಾ ನಮ್ಮ ಭಾರತಕ್ಕೆ ಬರ್ತೀರೆಲ್ಲ. ನಿಮ್ಮ ದೇಶಾದಾಗ ಹೆಣ್ಣೆ ಇಲ್ಲೇನು? ಹಾಂಗಿದ್ದರ ನೀವು ಯಾವ ಸುವ್ವರ ಹೊಟ್ಟಿಲಿಂದ ಹುಟ್ಟಿ ಬಂದಿರೊ ಸೂಳೆಮಕ್ಕಳೆ (ವಿಕ್ರಂಗೆ) ಅರೆ ಆಪ್, ಅದಾ ಬರಜಿ ದೂಲೆ ಮಿಂಯಾ, ಸಸುರಾಲ ಚಲೆಕ್ಯಾ? ಮಾಮಾಕಾ ಘರ್ ಮುಬಾರಕ್ ಹೊ.

ವಿಕ್ರಂ– ಲೆ ಆಟೋ..

ರಾಜು– ನಾ ಆಟೊ ಅರೆ ನಡಸಲಿ, ಕಾರರೆ ಓಡಸಲಿ, ದುಡದು ಇಮಾನದಾರಿ ಅನ್ನಾ ತಿಂತಿನ್ರಿ, ನಿಮ್ಮಂಗ ಮಂದಿ ಜಿಂವಾ ಹೊಡದು ಬದುಕೊ ತಾಯಿಗಂಡ ಅಲ್ಲ.

ವಿಕ್ರಂ– ನಿಜ ರಾಜು, ನಾನು ಕೊಲೆಗಡುಕನಹುದು, ಅರೆ ನನ್ನನ್ನು ಈ ಸ್ಥಾನಕ್ಕೆ ತಂದವರಾರು ಗೊತ್ತೆ? ಇದೆ ಈ ಕಟುಕ ಸಮಾಜ.

ರಾಜ– ಕೋತಿ ತಾ ತಿಂದು ಹೋತಿನ ಬಾಯಿಗಿ ಒರಸಿ ಬದ್‌ನಾಮ ಮಾಡಿದಂಗ ಹೊಸ ನಾಟಕ ನಡಸದ್ಯಾ?

ವಿಕ್ರಂ– ಇದು ನಾಟಕದ ಮಾತಲ್ಲ, ಸತ್ಯಸಂಗತಿ. ಹೆಣ್ಣಾಗಲಿ ಗಂಡಾಗಲಿ, ಮಕ್ಕಳೆಲ್ಲಾ ಒಂದೆ ತಾನೆ? ಆದರೆ ಸಮಾಜದ ಕೆಲ ಸೈತಾನರು

ತಮ್ಮ ಸ್ವಾರ್ಥಕ್ಕಾಗಿ ಹಣದಾಸೆಗೆ ಬಿದ್ದು, ವರದಕ್ಷಿಣೆ ಎಂಬ ಅನಿಷ್ಟ ಪದ್ಧತಿ ಆಚರಣೆಗೆ ತಂದು ಹೆಣ್ಣು ಹೆತ್ತವರ ಮನೆ ಏಕೆ ಮಸಣ ಮಾಡತೊಡಗಿದರು, ನೀನೆ ಹೇಳು? ಮದುವೆಯ ಮಾರ್ಕೆಟಿನಲ್ಲಿ ವರಗಳ ರೇಟು ಏರಿಸಿದವರಾರು? ಹೆಣ್ಣು ಹಡೆಯುವದೆ ಒಂದು ಶಾಪವೆನ್ನುವಂತೆ ಮಾಡಿದ ಪಾಪಿಗಳಾರು? ಬಡವರ ಮನೆಯ ಹೆಣ್ಣು ಸಾಯುವವರೆಗೂ ಕನ್ಯೆಯಾಗಿಯೇ ಕೂಡುವಂತೆ ಮಾಡಿದ ಕಟುಕರಾರು? ಇದೇ ಅವಿವೇಕಿ ಸಮಾಜ ತಾನೆ? ಹೆಣ್ಣಿನ ಮದುವೆ ಮಾಡುವಾಗ ಹೆಣ ಬಿದ್ದಂತೆ, ಗಂಡು ಮಗನ ಮದುವೆ ಮಾಡುವಾಗ ಗಂಟು ಸಿಕ್ಕಂತೆ, ಕುಣಿದಾಡುವ ಕೋತಿಗಳಾರು? ಇದೆ ಮೂರ್ಖ ಸಮಾಜ ತಾನೆ? ಮುಂಡೆಯ ಮದುವೆಯಲ್ಲಿ ಉಂಡು ಹೋದವನೆ ಜಾಣನೆಂಬಂತೆ ಇಥಾ ಚಾಂಡಾಲರ ಸಂತೆಯಲ್ಲಿ ನನ್ನಂಥಾ ತಾಯಿಗಂಡ ಹುಟ್ಟುವದು ಸಹಜ ತಾನೆ? ವರದಕ್ಷಿಣೆಗಾಗಿ ಕಿರುಕುಳ ನೀಡುತ್ತ ಮುಗ್ಧ ಸೊಸೆಯಂದಿರನ್ನು ಬೆಂಕಿ ಹಚ್ಚಿ ಸುಡುತ್ತಿರುವ, ವಿಷ ಹಾಕಿ ಕೊಲ್ಲುತ್ತಿರುವ, ಆತ್ಮಹತ್ಯೆಗೆ ಶರಣಾಗುವಂತೆ ಒತ್ತಡ ಹೇರುತ್ತಿರುವ ಅತ್ತೆ ಮಾವಂದಿರರಿರುವ ಇದೆ ಕತ್ತೆಯಂಥಾ ಸಮಾಜ ತಾನೆ? ಸಾಕಷ್ಟು ಸಾಕ್ಷಾಧಾರವಿಲ್ಲದೆ ನೂರೆಂಟು ಸೊಸೆಯಂದಿರನ್ನು ಕೊಂದರೂ ನಡೆಯುತ್ತೆ ಈ ಕಾಲಕ್ಕೆ. ಮೂರ್ಖ ಸಮಾಜ, ಅಂಧಾ ಕಾನೂನು ದುಡ್ಡಿಗಾಗಿ ಎಂಥಾ ಕೀಳು ಕೇಸನ್ನು ಗೆಲ್ಲಿಸಿ ಕೊಡುವ ಕರಿ ಕೋಟಿನ ವಕೀಲರು ಇನ್ನು ಮುಗಿದೆ ಹೋಯ್ತಲ್ಲ ಕಥೆ, ಎಲ್ಲಿಯವರೆಗೆ ಈ ಕುರುಡು ಸಮಾಜ ಹೆಣ್ಣಿನ ಬಗ್ಗೆ ಕಣ್ಣು ತೆರೆದು ವರದಕ್ಷಿಣೆ ಎಂಬ ಅನಿಷ್ಠ ಪದ್ಧತಿಯನ್ನು ತೊಡೆದು ಹಾಕುವದಿಲ್ಲವೋ, ಅಲ್ಲಿಯವರೆಗೂ ತಾ ಹಚ್ಚಿದ ಬೆಂಕಿಯಲ್ಲಿ ತಾನೇ ಸುಟ್ಟುಕೊಂಡು ಸಾಯುತ್ತಲೆ ಇರುವದು, ನಮ್ಮಂಥಾ ಬದ್ಮಾಸರು ರಕ್ತ ಬೀಜಾಸುರರಂತೆ ಹುಟ್ಟುತ್ತಲೆ ಇರುವರು, ಬೆಳೆಯುತ್ತಲೆ ಹೋಗುವರು, ಇದು ಸಮಾಜಕ್ಕಷ್ಟೆ ಅಲ್ಲ, ಸರಕಾರಕ್ಕೂ ನನ್ನ ಸವಾಲು ನೆನಪಿರಲಿ.

ರಾಜು– ಅಡ್ಡಿಯಿಲ್ಲ ಕಣೊ ಅಗ್ದಿ ಜಾಣನಿರುವೆ

ವಿಕ್ರಂ– ನನ್ನ ಅತಿ ಜಾಣತನವೆ ಈ ಅಡ್ಡದಾರಿ ಹಿಡಿಸಿದ್ದು, ನಾಳೆ ನನಗೆ ನೇಣುಗಂಭಕ್ಕೆರಿಸಿದರೂ ಪರವಾಯಿಲ್ಲ ಈ ಸಮಾಜವಾದರೂ ಪಾಠ ಕಲಿಯಲಿ ಇಲ್ಲವಾದರೆ ಒಬ್ಬರಿಗೊಬ್ಬರು ಕೊಲ್ಲುತ್ತ ಒಂದಿಲ್ಲ

ಒಂದು ದಿನ ಇಡಿ ಈ ಸಮಾಜ ನಿರ್ನಾಮವಾಗಿ ಹೋಗುವದು ಖಂಡಿತ ಬರ್ತಿನಿ, bye.

ಪೋಲಿಸ್– ನಡಿರಿ, ನಡಿರಿ (ಕರೆದೊಯ್ಯುವರು).

ರಾಜು– ನೋಡದೇನೊ ಕುಮಾರ, ಈ ಗಾಡಿಮೋಡಿ ಆಟಾ.

ಕುಮಾರ– ಮಾಡದವ ಉಂಡ ಮಣಿಯಂಥಾ ಕಡಬು.

ರಾಜು– ಅಷ್ಟೆ ಅಲ್ಲೋ ತಮ್ಮಾ, ಇತ್ತಿತ್ತಲಾಗಿ ನಾರಿ ಕುಲ ಮುನದು ಮಾರಿ ಆಗಾಕತ್ತ್ಯಾದ, ಕೆರಳಿದ ಕನ್ಯೆಯರೆಲ್ಲಾ ಕೂಡಿ ಕ್ರಾಂತಿಯ ಕಹಳೆ ಊದಿದರು ಅಂದರ ಅವರ ದಕ್ಷಿಣೆ ಕೊಟ್ಟರೇನೆ ಹೆಣ್ಣಿನ ಕೊಳ್ಳಿಗಿ ತಾಳಿ ಕಟ್ಟಿತೀನಿ ಅನ್ನೊ ಗಂಡುಗೊಳೆಲ್ಲಾ ಗುಂಡಿ ಸೇರೋದು ಗಟ್ಟಿ.

ಕುಮಾರ– ನಾಯಿ ಬಾಲಾ ನಳಗ್ಯಾಗ ಇಟ್ಟಂಗ ಈ ಸಮಾಜ ಎಂದು ಸೀದಾ ಆದೆತ್ತು ನಡಿಯೊ, ಹೆಣ್ಣಿನ ಮದುವಿ ಮಾಡಾಗ ಅಳ್ತಾವ, ಗಂಡಿನ ಮದುವಿ ಮಾಡಾಗ ನಗ್ತಾವಾ.

ರಾಜು– ನಮ್ಮ ರಾಧಾ ಮೆಮಸಾಬನಂಗ ಎಲ್ಲಾ ಹುಡುಗಿಯರು ಸಿಡಿದೆದ್ದ ಹೆಣ್ಣು ಹುಲಿಯಾಗಿ ಕುಂತಾಗ ನಮ್ಮಂಥಾ ಗಂಡು ಹುಡುಗರು ಬೂದಿ ಬಡ್ಕೊಂಡು ಕಾಳಿ ಯಾತ್ರಾಕ್ಕ ಹೋಗಬೇಕಾಗತ್ತ.

ಕುಮಾರ– ಅದು ಎಂದೊ ಏನೊ ನಮಗ ಮಾತ್ರ ಆ ಪಾಳಿ ಬರೊದಿಲ್ಲ ನೋಡು.

ರಾಜು– ಯಾಕ ಬರೊದಿಲ್ಲ?

ಕುಮಾರ– ನಾವೇನು ಹೆಣ್ಣಿನೋರು ಕೊಡೊ ಹಣ ತಿಂದು ಬದುಕೊ ಭಾಡಕಾವು ಇದ್ದಿಂವ್ಯಾ? ಏನ್ ಭಿಕ್ಷಾ ಬೇಡಿ ತಿನ್ನೊ ನಾದನ, ಲುಚ್ಚಾ, ಲಫಂಗ ಇದ್ದಿಂವ್ಯಾ? ದುಡ್ಡೇನೊ ಸುಳ್ಳನೂ ಗಳಸ್ತಾನ, ಕಳ್ಳನೂ ಗಳಸ್ತಾನ ಗುಣವತಿಯಾದ ಹೆಂಡತಿ ಸಿಗೋದು ಮುಖ್ಯ.

ರಾಜು– ಅಂತೂ ಅಡ್ಡಿಯಿಲ್ಲೊ ಕುಮಾರ, ನೀನೂ ಬುದ್ದಿವಂತ.

ಕುಮಾರ– ಅದಕ್ಕೆ ಅಲ್ಲೇನು, ಗೀತಾನಂಥಾ ಹೆಣ್ತಿ ಸಿಕ್ಕರೆ ಸಾಕು ಅಂತ ಈ ಭಾರತಕ್ಕೆ ಬಂದು ಬಾಯಿ ಬಡ್ತಾ ಕುಂತಿದ್ದು.

ರಾಜು– (ಗಾಬರಿ) ಎಲಾ ಮಗನಾ ಊರೆಲ್ಲಾ ಸುತ್ತಿ ಮತ್ತ ಕೇರಿಗೆ ಬಂದ್ಯಾ?

ಕುಮಾರ– ಇದು ನನ್ನ ಜಿಂದಗಿ ಸವಾಲು ಆದ, ಗೀತಾಗ ಬಿಟ್ಟ ಕೊಡಾದು ಸಾಧ್ಯವೇ ಇಲ್ಲ.

ರಾಜು– ಇಷ್ಟು ಜಿದ್ದು ಇತ್ತಂದರ ನಮ್ಮಿಬ್ಬರ ನಡುವೆ ಜಗಳಾನೆ ಬ್ಯಾಡ, ಒಂದು ಒಪ್ಪಂದಕ್ಕೆ ಬರೋಣ, ಲಕ್ಕಿ ಟಾಸ್ ಹಾರಸೋಣ, ಒಪ್ಪಿಗೆನಾ?

ಕುಮಾರ– Yes I am ready, ಹಾರಸು

ರಾಜು– (ನಾಣ್ಯ ಹಾರಿಸುತ್ತ) ಚಿತ್ತಾ, ಪಟ್ಟಾ ?

ಕುಮಾರ– ಚಿತ್ತ್ ಹೆಡ್ (ನಾಣ್ಯ ನೇರ ನಿಲ್ಲಲ್ಲು) ಅರೆ, ಆಂಟಿ Straight .

ರಾಜು– ದೋಸ್ತ ಈಗೇನು ಮಾಡೋದು?

ಕುಮಾರ– ಗಂಡನನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ಗೀತಾಗೆ ಬಿಟ್ಟು ಕೊಡೋಣ.

ಕುಮಾರ– Ok ನಡೆ (ಹೋಗುವರು).

===***====***===

ಪ್ರವೇಶ–೨೨

ಹೂದೋಟ

ರಾಧಾ– ಏಕೆ ಮಹೇಶ ನನ್ನ ವಿಚಾರ ನಿನಗೆ ಒಪ್ಪಿಗೆಯೇ?

ಮಹೇಶ– ವಿಚಾರವೇನೊ ಚನ್ನಾಗಿದೆ, ಆದರೆ ಗಂಗಾ ಮರು ಮದುವೆಗೆ ಒಪ್ಪಬೇಕಲ್ಲ.

ರಾಧಾ– ಅವಳನ್ನು ಒಪ್ಪಿಸುವ ಭಾರ ನನಗಿರಲಿ.

ಮಹೇಶ– ಅಂದ ಹಾಗೆ ವರನಾರು?

ರಾಧಾ– ನಿಮ್ಮೆಲ್ಲರ ಮಾನ ಮತ್ತು ಪ್ರಾಣ ಕಾಪಾಡಿದ ಆ ಇನ್ಸ್ ಪೆಕ್ಟರ್ ಸಿಓಡಿ. ಶ್ರೀರಾಮ.

ಮಹೇಶ– ಏನೆಂದಿರಿ ಶ್ರೀರಾಮನೆ.

ರಾಧಾ– ಅಷ್ಟು ಆಶ್ಚರ್ಯವೇಕೆ. ಆತನಿಗೆ ಗಂಗಾಳ ಬಗ್ಗೆ ಅನುಕಂಪ ಅಷ್ಟೆ ಅಲ್ಲ ಅನುರಾಗವೂ ಉಂಟಾಗಿದೆ.

ಮಹೇಶ– ತುಂಬಾ ಸಂತೋಷ, ನಾನೆಂದಿಗೂ ನಿಮ್ಮ ಈ ಉಪಕಾರ ಮರೆಯಲಾರೆ.

ರಾಧಾ– ಈ ಉಪಕಾರ ತೀರಿಸಲುಇನ್ನೊಂದು ಮಾರ್ಗವೂ ಇದೆ.

ಮಹೇಶ– ಹೇಳಿ ಅವಶ್ಯ ಈಡೇರಿಸುವೆ.

ರಾಧಾ– ನಾನು ನಿಮ್ಮ ವ್ಯಕ್ತಿತ್ವಕ್ಕೆ ಮಾರು ಹೋಗಿರುವೆ, ನನ್ನೊಂದಿಗೆ ಮರಮದುವೆಯಾಗಲು ಒಪ್ಪಿಗೆಯೇ?

ಮಹೇಶ– ಇದೇನು ನಿಮ್ಮ ಮಾತು, ನೀವೆಲ್ಲಿ, ನಾನೆಲ್ಲಿ?

ರಾಧಾ– ಪ್ರೇಮ ನ ದೇಖೆ ಜಾತಾ ಔರ ಪಾತಾ, ಭೂಕ ನ ದೇಖೆ ಬಾಸಿ ಭಾತ ಎಂಬ ನುಡಿ ಗೊತ್ತೆ?

ಮಹೇಶ– ಆದರೂ.

ರಾಧಾ– ಪ್ಯಾರ ಹೊ ಜಾತಿ ಹೈ ಮಹೇಶ, ಕಿ ಜಾತಿ ನಂಹಿ.

ಮಹೇಶ– ನನ್ನ ಅಪಹಾಸ್ಯ ಮಾಡುತ್ತಿರುವರಾ?

ರಾಧಾ– ಅದು ಈ ಜನ್ಮದಲ್ಲಿ ಸಾಧ್ಯವೇ ಇಲ್ಲ. ನಾನು ಕೇವಲ ಹೂಂ ಎಂದರೆ ಸಾಕು, ನೂರಾರು ಜನ ಬಂದು ನನ್ನ ಅಂಗಾಲ ನೆಕ್ಕಬಹುದು ಆದರೆ ನಾನು ನನ್ನ ಅಂತರಾತ್ಮಕ್ಕೆ ಕುತ್ತಿಗೆ ಹಿಸುಕಿ ಆತ್ಮವಂಚನೆ ಮಾಡಕೊಳ್ಳಲಾರೆ, I love you Mahesh

ಮಹೇಶ– ನಾನು ಕನಸು ಕಾನುತ್ತಿಲ್ಲವೆಷ್ಟೆ.

ರಾಧಾ– ಇದು ಕನಸಲ್ಲ. ನನ್ನ ಬಹುದಿನದ ಬಯಕೆಯ ನನಸು. ಒಪ್ಪಿಗೆಯೇ?

ಮಹೇಶ– ನಿನ್ನಂಥ ಸ್ತ್ರೀರತ್ನವನ್ನು ಸತಿಯಾಗಿ ಪಡೆಯಲು ನಾನು ನೂರಾರು ಜನ್ಮ ಪುಣ್ಯ ಮಾಡಿರಬೇಕು.

ರಾಧಾ– ನನ್ನ ಸುಕೃತವೇನೂ ಸಾಮಾನ್ಯವಾದುದಲ್ಲ, ಬನ್ನಿ ದೊರೆ ಹಕ್ಕಿಗಳಂತೆ ಹಾಯಾಗಿ ವಿಹರಿಸೋಣ (ಡಾಯಲಾಗ ಹಾಡಿ ಹೋಗಲು ಇತ್ತಲಿಂದ ರಾಜು, ಕುಮಾರ ಪ್ರವೇಶ).

ರಾಜು– ನಾಳೆ ಹೇಗಿದ್ದರೂ ನಮ್ಮಲ್ಲಿ ಒಬ್ಬರ ಮದುವೆ ಗ್ಯಾರಂಟಿ.

ಕುಮಾರ– Sit down my friend. ಮಸ್ತಮೆ ಪಾರ್ಟಿ ಕರಿಂಗೆ.

ರಾಜು– ಆವೋ ಬೈಠೋ (ಕುಳಿತು) ಗೀತಾ ಯಾರನ್ನು ಒಪ್ಪುವಳೋ ಆತನೇ ಆಕೆಯ ಗಂಡ, ನೆನಪಿದೆ ತಾನೆ?

ಕುಮಾರ– I don't forget that ನಿಕಾಲೋ ಬಾಟ್ಲಿ ಮಾಲಪೀಯೋ ಔರ ಪಿಲಾವ.

ರಾಜು– (ಗ್ಲಾಸ ತುಂಬಿ ಕೊಡುತ್ತ) ತಗೋ ಕುಡಿ (ಕುಡಿಯಲು)

ಕುಮಾರ– ಗೀತಾ ಮೇರಿ, ಮಾಲ ತೇರಿ. ನೈ ನೈ. ಮಾಲ ಮೇರಿ ಗೀತಾ ತೇರಿ ಬಿಲ್ಕುಲ್ ನಂಹಿ, ಸಬಕುಚ್ ಮೇರಿ, ಸಬಕುಚ್ ತೇರಿ (ರಾಜು ಮತ್ತೆ ಮತ್ತೆ ಬಲವಂತವಾಗಿ ಕುಡಿಸಲು, ಮೂರ್ಛೆ ಹೋಗಲು ಎತ್ತೆ ಮರೆಗೆ ಮಲಗಿಸಿ)

ರಾಜು– ಅಬ ಅರಾಮಸೆ ಸೋಜಾ ಸಾಲೆ, ಕಲ್ ಶ್ಯಾಮತಕ್ಕ ಉಠಾನಾ ನೈ. ಮೈ ಚಲ್ತು ಖುದಾಹಾಫಿಜ (ಹೋಗುವನು, ಇತ್ತಲಿಂದ

ರಾಮ, ಗಂಗಾ ಪ್ರವೇಶ)

ರಾಮ– ಗಂಗಾ ನಮ್ಮ ಮದುವೆಯ ಬಗ್ಗೆ ನಿನ್ನ ಅಭಿಪ್ರಾಯವೇನು? ನಿರ್ವಂಚನೆಯಿಂದ ಹೇಳು?

ಗಂಗಾ– ನಾನು ಮುಡಿದು ಬಿಸಾಡಿದ ಮಲ್ಲಿಗೆ ರಾಮ, ನಿಮಗೆ ಯೋಗ್ಯಳಲ್ಲ

ರಾಮ– ಹುಚ್ಚಿ ಇದೇ ನಿನ್ನ ತಪ್ಪು ಕಲ್ಪನೆ, ಅದೊಂದು ಕೆಟ್ಟ ಕನಸೆಂದು ತಾಳಿ, ರಾವಣನ ಅಶೋಕ ವನದಲ್ಲಿದ್ದು ಬಂದ ಸೀತೆಯಂತೆ ಪವಿತ್ರ ಪಾರಿಜಾತ ಪುಷ್ಪವೆಂಬುದು ನನಗೆ ಚನ್ನಾಗಿ ಗೊತ್ತು ಒಪ್ಪಿಕೊ ಚಿನ್ನಾ.

ಗಂಗಾ– ಒಪ್ಪಿದೆ ರಾಜಾ ನೀವೇ ನನ್ನ ಭಾಗ್ಯವಿದಾತಾ, ಇಂದಿನಿಂದ ಈ ತನುಮನ ನಿಮಗಾಗಿ ಮೀಸಲು.

ರಾಮ– ಬಾ ಪ್ರಿಯೆ, ಹಾಯಾಗಿ ವಿಹರಿಸೋಣ (ಡಾಯಲಾಗ ಹಾಡಿ ಹೋಗುವರು).

===***====***===

ಪ್ರವೇಶ–೨೩

ರಸ್ತಾ

ಮಹೇಶ– ನೀನು ನನ್ನ ಬಾಳಿನಲ್ಲಿ ಭಾಗ್ಯಲಕ್ಷ್ಮೀಯಾಗಿ ಬಂದೆ ಸಾವಿತ್ರಿ

ರಾಧಾ– ಬರಿ ಅಷ್ಟೇನಾ?

ಮಹೇಶ– ನನಗಂತೂ ವರ್ಣಿಸಲು ಶಬ್ದಗಳೇ ಸಾಲುತ್ತಿಲ್ಲ.

ರಾಧಾ– ಅದೇ ವಾಸಿ, ಇಲ್ಲವಾದರೆ ಕವಿಯಾಗಿ ಕವನ ಕಟ್ಟಲು ಪ್ರಾರಂಭಿಸಬಹುದು.

ರಾಮ– (ಬರುತ್ತ) Good morning miss, ಇದೊ, ವಿಶೇಷ ಪತ್ರ

ರಾಧಾ– (ನೋಡಿ) ಮಹೇಶನ ಹೆಸರಿಗೆ ತಾನೆ, ಇದೂ ತೆಗೆದುಕೊಳ್ಳಿ (ಕೊಡುವಳು).

ಮಹೇಶ– (ಬಿಚ್ಚಿ ಓದಿ) What a surprise? ನನಗೆ ಅಪಾಯಿಂಟ ಆರ್ಡರ್‌ರ್ರೆ, ಅದೂ ನಿಮ್ಮ ಡಿಪಾರ್ಟಮೆಂಟಿನಲ್ಲಿ.

ರಾಮ– ನಮ್ಮ ಸಾವಿತ್ರಿದೇವಿಯವರ ಸಿಫಾರಸ್ಸು ಅಂದಮೇಲೆ ಸಾಮಾನ್ಯ ಮಾತಲ್ಲ ಸರ್, ಅವರ ಆಯ್ಕೆ ಅಸ್ಲಿ ವಜ್ರವೆ ಹೊರತು ಕಲ್ಲಿದ್ದಲು ಚೂರಲ್ಲವೆಂಬುದು ನಮ್ಮ ಕಮಿಶನ್ ಸಾಹೇಬರಿಗೆ ಕೂಡ ಚನ್ನಾಗಿ ಗೊತ್ತು.

ಮಹೇಶ- So many thanks Sri. Ram, ನಿಮ್ಮ ಸಹಕಾರಕ್ಕೆ ನಾನು ತುಂಬ ಋಣಿ.

ರಾಮ– ಮೇಮಸಾಬ, ಆಪರೇಷನ್ ಮಹಿಷಾಸುರ ಮರ್ದಿನಿಯಂತೂ ಮುಗಿದಂತಾಯಿತಲ್ಲ

ರಾಧಾ– ನಾಳೆ ಇದರ ಮುಕ್ತಾಯ ಸಮಾರಂಭ ಆಚರಿಸೋಣ, ಶ್ರೀರಾಮ, ಬೆಳಿಗ್ಗೆ ಎಂಟು ಗಂಟೆಗೆ ನೀನಲ್ಲಿ ಹಾಜರಿರಬೇಕು, ಹಾಗೇಯೇ ಬರುವಾಗ..

ರಾಮ– ಸರಿಯಾದ ಸಮಯಕ್ಕೆ ಹಾಜರಿರುವಂತೆ ಮುಖ್ಯ ಅತಿಥಿಗಳಿಗೂ ಆಮಂತ್ರಿಸಿ ಬರುವೆ.

ರಾಧಾ– very good, ಹೋಗಿ ಬಾ (ಹೋಗುವನು).

ಮಹೇಶ– ಸಾವಿತ್ರಿ ನೀನು ನನ್ನ ಪಾಲಿನ ಬರಿ ಭಾಗ್ಯಲಕ್ಷ್ಮಿ ಅಲ್ಲ ಸೌಭಾಗ್ಯಲಕ್ಷ್ಮಿ

ರಾಧಾ– ವರ್ಣನೆ ಮುಗಿದರೆ ಬನ್ನಿ ಹೋಗೋಣ.

ಮಹೇಶ– (ಸೆಲ್ಯೂಟ್ ಹೊಡೆದು) Yess boss.

ರಾಧಾ– you naughty (ಹೋಗುವರು) (ಮದುವೆಯಾದ ರಾಜು, ಗೀತಾ ಮುಂದೆ ಹಿಂದೆ ಸೂಟ್‌ಕೇಸ್ ಹಿಡಿದುಕೊಂಡು ಕೇದಾರನಾಥ ಪ್ರವೇಶ).

ರಾಜು– ತಾವಿನ್ನು ನಿಂತುಕೊಳ್ಳಿ, Fatherinlaw.

ಗೀತಾ– ಹೌದು ಡ್ಯಾಡಿ, ಪ್ಲೇನಿಗೆ ಹೊತ್ತಾಯ್ತು. ನಾವು ಟ್ಯಾಕ್ಸಿ ತಗೊಂಡು ಹೋಗುವೆವು.

ಕೇದಾರ– All right, ಅಮೇರಿಕಾ ಮುಟ್ಟಿದ ತಕ್ಷಣ ಫೋನ್ ಮಾಡಿ

ರಾಜು– ತಾವು ಚಿಂತಿಸದಿರಿ ಮಾಮಾ, ಎಷ್ಟಾದರೂ ನಾನು ನಿಮ್ಮ son in law ಅಲ್ಲವೆ.

ಕೇದಾರ– yes, yes, ನೀನೆ ನನ್ನ ನಿಜವಾದ ಅಳಿಯ, ಇದೊ ಸೂಟಕೇಶ್ (ಕೊಟ್ಟು) be carefull ಪ್ಲೇನ್ ಜರ್ನಿಯಲ್ಲಿ ಹುಷಾರಾಗಿರಿ.

ರಾಜು– ನೀವು ಕಾಳಜಿನೆ ಬಿಡಿ, ನಾನು ತುಂಬ ಎಕ್ಸ್‌ಪರ್ಟ್.

ಗೀತಾ– ಡ್ಯಾಡಿ ಬರ್ತಿವಿ, bye.. (ಹೋಗುವರು).

===**=======**====

ಪ್ರವೇಶ–೨೪

ಮಹದೇವಪ್ಪನ ಮನೆ

(ರಾಧಾ ಮಹೇಶ, ರಾಮ ಗಂಗಾ ಮದುಮಕ್ಕಳಾಗಿ ಕುಳಿತಿರುವರು).

ಸುತ್ತಲೂ ನಾಲ್ಕಾರು ಜನ ಒಂದೆಡೆ ಪುರೋಹಿತ).

ಪುರೋಹಿತ– ಮಂತ್ರ ಪ್ರಾರಂಭ ಮಾಡಲೇನರಿ ಸಾಬರೆ.

ರಾಧಾ– ನಿಲ್ಲಿ, ಚೀಪ್ ಗೆಸ್ಟ್ ಬರುತ್ತಿದ್ದಾರೆ.

ಮಹೇಶ– ಅಂತಹ ಮುಖ್ಯ ಅತಿಥಿ ಆದಾರು ಸಾವಿತ್ರಿ, ನಿಮ್ಮ ಡಿಪಾರ್ಟ್‌ಮೆಂಟಿನ್ ಹೆಡ್ಡೆ?

ರಾಧಾ– ಅಲ್ಲ, ಈ ಮನೆಯ ಸೂಪರ್ ಬಾಸ.

ಮಹೇಶ– ಅಂದರೆ..?

ರಾಧಾ– ಅದೋ ಬರುತ್ತಿದ್ದಾರೆ ನೋಡಿ, ನೀವೆ ಗುರುತಿಸಿ

(ಮಹಾದೇವಪ್ಪ ಬರುತ್ತಿರಲು ಮಹೇಶ ಗಂಗಾ ಎದ್ದು ಆನಂದದಿಂದ ಅಪ್ಪಾ ಎಂದು ಅಪ್ಪಲು).

ಮಹಾ– ಕೊಲ್ಲುವ ವಿಧಿಗಿಂತ ಕಾಯುವ ದೇವರು ದೊಡ್ಡವ ಮಕ್ಕಳೆ, ನಾನಿನ್ನೂ ಬದುಕಿರುವೆ. ಅದೆಂದೋ ಸತ್ತು ಸ್ವರ್ಗ ಸೇರಬೇಕಾಗಿದ್ದು, ನನ್ನನ್ನು ಈ ರಾಧಾ ಮತ್ತು ಈ ರಾಮ ಸಂಜೀವಿನಿ ಕೊಟ್ಟು ಬದುಕಿಸಿದರು.

ಮಹೇಶ– ಇವಳ ಹೆಸರು ರಾಧಾ ಅಲ್ಲಪ್ಪ ಸಾವಿತ್ರಿ.

ಮಹಾ– ನನಗೆಲ್ಲಾ ಕಥೆ ಗೊತ್ತು ಮಹೇಶ, ಆ ಪುರಾಣ ಕಾಲದ ಸಾವಿತ್ರಿ ತನ್ನ ಗಂಡ ಸತ್ಯವಾನನನ್ನು ಬದುಕಿಸಿಕೊಂಡಂತೆ, ಈ ಸಾವಿತ್ರಿ ನಮ್ಮ ಇಡೀ ವಂಶವನ್ನೇ ರಕ್ಷಿಸಿದಳು.

ಗಂಗಾ– ಅಪ್ಪಾ.. ನಾನಿಂದು..

ಮಹಾ–	ನೀನು ನಿಜವಾಗಿಯೂ ಪುಣ್ಯವತಿ ಕಣೆ, ಪಾವನ ಗಂಗೆ ಅಂತೆಯೇ ನೀನಿಂದು ಶ್ರೀರಾಮನಂಥಾ ಪತಿಯನ್ನು ಪಡೆದು ಪುನಿತಳಾಗುತ್ತಿರುವೆ.
ಪುರೋಹಿತ–	ಅಪ್ಪೋರೆ ಮುಹೂರ್ತ ಮೀರುತ್ತ ಬಂತು.
ಮಹಾ–	ಅರೆ ಹೌದಲ್ಲ, ಎಲ್ಲರೂ ಕೂತ್ಕೊಳ್ಳಿ (ಕೂಡಲು).
ಪುರೋಹಿತ–	(ಎಲ್ಲರಿಗೂ ಅಕ್ಷತೆ ಕೊಟ್ಟು, ವಧು–ವರರೂ ಹೂಮಾಲೆ ಹಾಕಿಕೊಂಡ ನಂತರ) ತದೇವ ಲಗ್ನಂ ಸುದಿನಂತೂ ದೇವಾ, ತಾರಾ ಬಲಂ ಚಂದ್ರು ಬಲಂತೂ ದೇವಾ, ವಿದ್ಯಾ ಬಲಂ ದೈವ ಬಲಂತೂ ದೇವಾ, ಸುಮೂಹೂರ್ತೆ ಸಾವಧಾನ, ಸಾವಧಾನ, ಸಾವಧಾನ.. (ಅಕ್ಷತೆ) ಮದುಮಕ್ಕಳೆ ಗುರು ಹಿರಿಯರಿಗೂ, ಮನೆ ದೇವರಿಗೂ ನಮಸ್ಕಾರ ಮಾಡಿರಿ.
ರಾಧಾ–	ಮಹೇಶ (ನಮಿಸುತ್ತ) ಆಶೀರ್ವದಿಸಿ ಅಪ್ಪಾ.
ಮಹಾ–	ಧೀರ್ಘ ಸುಖೀಭವ, ಧೀರ್ಘ ಸುಮಂಗಲೀ ಭವ.
ರಾಮು–	ಗಂಗಾ (ನಮಿಸುತ್ತ) ಆಶೀರ್ವದಿಸಿ ಅಪ್ಪಾ.
ಮಹಾ–	ಧೀರ್ಘ ಸುಖಿಭವ, ಧೀರ್ಘ ಸುಮಂಗಲೀ ಭವ (ರಾಜು ಗೀತಾ ಬರುತ್ತ).
ರಾಜು–	ಮಹೇಶ ಭಯ್ಯಾ, ಮೇಮಸಾಬ, ಅರೆಪ್ಪಾ, ಅಪಭಿ ದುಲ್ಹಾ ದುಲ್ಹನ್ ಬನ್ಗಯೆ, very good, ಶಾದಿ ಮುಬಾರಕ್ ಹೊ, (ಗಂಗಾ ರಾಮರಿಗೆ) ಅಜಿ ಆಪ ಲೋಗೌಂಕೋಭಿ ಶಾದಿ ಮುಬಾರಕ ಹೊ.
ರಾಧಾ–	ಗೀತಾ, ನಿಮ್ಮ ಮದುವೆ ಕೂಡಾ ಮುಗಿಯಿತೆ?
ಗೀತಾ–	ಭಾರಿ ಭರ್ಜರಿಯಾಗಿ ಮುಗಿಯಿತು ಮೇಮಸಾಬ, ಅಲ್ಲಿಂದ ನೇರ ಇಲ್ಲಿಗೇನೆ ಬಂದದ್ದು.
ಮಹಾ–	ಬನ್ನಿ ಮಕ್ಕಳೆ, ನಮಗಿಂದು ಈ ಶುಭಗಳಿಗೆ ತಂದುಕೊಟ್ಟ ಆ ದೇವಾಧಿದೇವ ಮಹಾದೇವನನ್ನು ಎಲ್ಲರೂ ಕೂಡಿ ಅನನ್ಯ ಭಕ್ತಿಯಿಂದ ಪ್ರಾರ್ಥಿಸೋಣ.

===***====***===

೨

ಪತಿಭಕ್ತಿ ಸತಿಮುಕ್ತಿ

ಕೌಟುಂಬಿಕ ಸಾಮಾಜಿಕ ನಾಟಕ

– ಡಿ.ಎಸ್. ಕುಮಾರ್

ಡಿ.ಎಸ್. ಕುಮಾರ

ಡಿ.ಎಸ್. ಕುಮಾರ ಅವರು ಯಾದಗಿರಿಯಲ್ಲಿ ಸಿದ್ದಪ್ಪ ಮತ್ತು ಧರ್ಮವ್ವ ದಂಪತಿಗಳ ಮಗನಾಗಿ ೨೫.೦೨.೧೯೪೩ರಂದು ಜನಿಸಿದರು. ಬಡತನದ ಕುಟುಂಬದಲ್ಲಿ ಜನಿಸಿದ ಕುಮಾರ ಅವರಿಗೆ ಹೆಚ್ಚಿನ ವಿದ್ಯಾಭ್ಯಾಸ ಮಾಡಲಾಗಲಿಲ್ಲ. ಏಳನೇ ತರಗತಿಯವರೆಗೆ ಓದಲು ಸಾಧ್ಯವಾಯಿತು. ಎಪ್ಪತ್ತರ ದಶಕದಲ್ಲಿ ರಂಗಭೂಮಿಯತ್ತ ಆಕರ್ಷಿತರಾದರು. ಬಾಲಕರಾಗಿದ್ದಾಗಲೇ ಬಯಲಾಟದಲ್ಲಿ ಪಾತ್ರವಹಿಸಿದ್ದ ಇವರನ್ನು ಬಣ್ಣದ ಲೋಕ ಕರೆಯಿತು. ಬಡತನದ ಬೇಗೆಯನ್ನು ತಾಳಲಾರದೆ ಕಲಬುರ್ಗಿ ಎಂ.ಎಸ್.ಕೆ. ಮಿಲ್‌ನಲ್ಲಿ ದಿನಗೂಲಿ ನೌಕರರಾಗಿ ಸೇರಿಕೊಂಡರು. ಅಪ್ಪನ ಜಾತ್ರೆಯಲ್ಲಿ ಕ್ಯಾಂಪ್‌ಮಾಡಿದ್ದ ಉದಯ ಕಂಪನಿಯವರ ನಾಟಕ ನೋಡಲು ಹೋಗುತ್ತಿದ್ದರು. ಅಲ್ಲಿ ಕೊಟ್ರೇಶ ಎಂಬವರ ಪರಿಚಯದಿಂದ ಕುಮಾರ್‌ಗೆ ಆ ಕಂಪನಿಯಲ್ಲಿ ನೌಕರಿ ಸಿಕ್ಕಿತು. ಪ್ರಾರಂಭದಲ್ಲಿ ಸಣ್ಣ ಪುಟ್ಟ ಪಾತ್ರ ಮಾಡುತ್ತಿದ್ದರು. ಈ ಉದಯ ಕಂಪನಿಯ ಯೋಗಾನರಸಿಂಹಮೂರ್ತಿ ಇವರಿಗೆ ಸಾಹಿತ್ಯದ ಗುರುಗಳಾದರು. ಅಭಿನಯದ ಜತೆಗೆ ನಾಟಕ ರಚನೆಗೆ ತೊಡಗಿದರು.

ನಲವತ್ತಕ್ಕಿಂತ ಹೆಚ್ಚು ನಾಟಕಗಳನ್ನು ರಚಿಸಿರುವ ಕುಮಾರ ಅವರ ನಾಟಕಗಳನ್ನು ಅನೇಕ ನಾಟಕ ಕಂಪನಿಗಳು ಪ್ರಯೋಗ ಮಾಡಿದವು. ಕಣ್ಣಿಟ್ಟ ಹೆಣ್ಣು, ಅಣ್ಣನ ತ್ಯಾಗಕ್ಕೆ ತಮ್ಮ ಕೊಟ್ಟ ಕಾಣಿಕೆ, ಶಿರ ಕಡಿದ ಶಿವರುದ್ರ, ಪತಿ ಭಕ್ತಿ ಸತಿ ಮುಕ್ತಿ ಈ ಮುಂತಾದ ನಾಟಕಗಳು ಜನಪ್ರಿಯ ಪ್ರದರ್ಶನಗೊಂಡವು. ಪ್ರಸಿದ್ಧ ನಟರಾದ ಸುಧೀರವರೊಂದಿಗೆ, ಸರೋಜಮ್ಮ ಧುತ್ತರಗಿಯವರೊಂದಿಗೆ ಕುಮಾರ ಅವರು ವೃತ್ತಿ ರಂಗಭೂಮಿಯಲ್ಲಿ ಬಣ್ಣ ಹಚ್ಚಿದರು. ಅನೇಕ ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ. ಇವರಿಗೆ ನಾಟಕ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಪಾತ್ರ ಪರಿಚಯ

ಪುರುಷ ಪಾತ್ರಗಳು

೧)	ಸುರೇಂದ್ರ	–	ಒಬ್ಬ ಆದರ್ಶ ವ್ಯಕ್ತಿ, ತ್ಯಾಗಜೀವಿ
೨)	ರವಿ	–	ಸುರೇಂದ್ರನ ತಮ್ಮ, ಕಥಾನಾಯಕ
೩)	ಚಂದ್ರು	–	ಸುರೇಂದ್ರನ ಎರಡನೆ ತಮ್ಮ, ಉಪನಾಯಕ
೪)	ಕಾಳಿಂಗ	–	ಖಳನಾಯಕ ಜಮುನಳ ಪ್ರಿಯತನ
೫)	ರಮೇಶ	–	ಒಬ್ಬ ಆದರ್ಶ ವ್ಯಕ್ತಿ, ದೇಶಪ್ರೇಮಿ
೬)	ಶಶಿ	–	ರವಿಯ ಮಗ
೭)	ಭಗವಂತ	–	ಹಾಸ್ಯಗಾರ
೮)	ಭಾಗ್ಯವಂತ	–	ವೃದ್ಧ, ಯಮುನಳ ತಂದಿ
೯)	ಶ್ರೀಮಂತ	–	ಉಪಹಾಸ್ಯ ಮಾತಿನ ಚತುರ

ಸ್ತ್ರೀ ಪಾತ್ರಗಳು

೧)	ಗಂಗಾ	–	ಕಥಾ ನಾಯಕಿ ಗರತಿ ಗಂಗಾ
೨)	ಜಮುನಾ	–	ಖಳನಾಯಕಿ ಚಂದ್ರುನ ಹೆಂಡತಿ
೩)	ಯಮುನಾ	–	ಭಾಗ್ಯವಂತನ ಮಗಳು

ಈ ನಾಟಕದಲ್ಲಿ ಅಭಿನಯಿಸುವ ಪಾತ್ರಧಾರಿಗಳು ಸದರಿ ಪಾತ್ರಗಳ ವಯಸ್ಸು ಮತ್ತು ಆಯಾ ಪಾತ್ರದ ಗುಣಗಳನ್ನು ಅರಿತುಕೊಂಡು ಅಭಿನಯಿಸಿದಾಗ ಮಾತ್ರ ಕಲೆ, ಕಲೆಯಾಗಿ ಉಳಿಯುವುದು.

ಡಿ.ಎಸ್. ಕುಮಾರ

ಮೊದಲನೇ ಅಂಕ
ಒಂದನೇ ದೃಶ್ಯ
ಬಡವರ ಮನೆ

ಗಂಗಾ ಪರಮೇಶ್ವರನ ಭಾವ ಚಿತ್ರಕ್ಕೆ ಪೂಜಿಸುತ್ತ ಹಾಡುವಳು :–

–: ಹಾಡು :–

ಗಂಗಾ : ದೇವಾ ವಿಶಾಲವಾದ ಹಣೆಯ ಮೇಲೆ ಭಸ್ಮ ಲೇಪಿತನಾಗಿ ಶಿರದಲ್ಲಿ ಹಿಮಕರ ಗಂಗೆಯನ್ನು ಧರಿಸಿದವನಾಗಿ, ಹವಳದ ಬಳ್ಳಿಯಂತೆ, ಹೊಳೆಯುವ ಕೆಂಜೆಡೆಯುಳ್ಳದನಾಗಿ, ವಿಷಪೂರಿತ ದುಷ್ಟ ಸರ್ಪಗಳನ್ನೇ ಕಂಠಾಭರಣಗಳನ್ನಾಗಿ ಧರಿಸಿದವನಾಗಿ, ಸೂರ್ಯ ಚಂದ್ರಗ್ನಿಗಳೆಂಬ ಮೂರು ಕಣ್ಣುಳ್ಳವನಾಗಿ, ಪರಮಸುಜ್ಞಾನಿ ಯೋಗಿ ಪುಂಗವರ ಹೃದಯ ಕೊಳದಲ್ಲಿ ಸದಾ ಕಮಲ ಪುಷ್ಪದಂತೆ ನೆಲಿಸಿದವನಾಗಿ, ತ್ರಿಪುರಾಸುರರ ಧೀಮಂತಿಕೆ ಗಂಜಿ ಶರಣಾಗತರಾಗಿ ಬಂದ ದೇವಗಣಕ್ಕೆ ಅಭಯ ಪ್ರದಾನ ಮಾಡಿದ ನಂಜುಂಡ ವೈರಾಗ್ಯ ಮೂರ್ತಿಯಾದ ಪರಮೇಶ್ವರನೇ ಅನುದಿನವೂ ತಮ್ಮನ್ನೇ ಸ್ತುತಿಸುತ್ತಿರುವ ಈ ನಿನ್ನ ಭಕ್ತಳನ್ನು ಉದ್ಧರಿಸು ತಂದೆ [ಎಂದು ನಮಿಸುವಳು] [ಅಷ್ಟರಲ್ಲಿ ಒಳಗಿನಿಂದ ಜಮುನಾ ಬರುವಳು] ತಂಗಿ!! ಜಮುನಾ ಸ್ವಲ್ಪ ನಿಂತು ಕೊಳ್ತಿಯಾ?

ಜಮುನಾ : ಯಾಕೆ? ಏನಾದರೂ ಕೆಲಸವಿತ್ತೆ?

ಗಂಗಾ : ಹುಂ !! ಏನಾದರೂ ಕೆಲಸವಿದ್ದರೆ ತಾನೆ ನಾನು ನಿನ್ನೊಡನೆ ಮಾತಾಡಬೇಕು, ಇಲ್ಲದಿದ್ದರೆ ಸುಮ್ಮನೆ ಮಾತಾಡಬಾರದೇನು? ಜಮುನಾ ನಿನ್ನದು ಸ್ವಲ್ಪಾದರೂ ನನ್ನ ಮೇಲೆ ಪ್ರೀತಿ, ಪ್ರೇಮ, ವಾತ್ಸಲ್ಯವೇ ಇಲ್ಲವಲ್ಲ, ಒಂದು ದಿನವಾದರೂ ಹಾಯಾಗಿ ಕುಳಿತು ನನ್ನೊಡನೆ ಪ್ರೀತಿಯಿಂದ ಎರಡು ಮಾತಾಡಲಿಲ್ಲ.

ಜಮುನಾ : ಹೂಂ !! ಪ್ರೀತಿಯಿಂದ ಮಾತಾಡುತ್ತ ಮನೆಯಲ್ಲಿ ಕೂಡಲಿಕ್ಕೆ ನಿನ್ನ ಹಾಗೆ ನಾನೇನು ಕೆಲಸವಿಲ್ಲದ ಕೆಲಸಗೇಡಿಯಲ್ಲ ! ಸಧ್ಯ ಪರೀಕ್ಷೆಯ ಸಮಯವಿದ್ದು, ನಿಮಿಷಾರ್ಥ ಸಮಯ ಕಳೆಯದಂತೆ ಹಗಲಿರುಳು ಅಭ್ಯಾಸ ಮಾಡಿದರೂ ಸಹಿತ ಕಡಿಮೆ ಅನ್ನುವ ಸಮಯದಲ್ಲಿ ನಾನು ನಿನ್ನೊಡನೆ ಮಾತಾಡುತ್ತ ಕುಳಿತು ವ್ಯರ್ಥಸಮಯ ಹಾಳುಮಾಡಿಕೊಳ್ಳಲೆ?

ಗಂಗಾ : ಇದು ಪರೀಕ್ಷೆಯ ಸಮಯವೆಂದು ತಿಳಿದು ಅಭ್ಯಾಸ ಮಾಡಿದ್ದರೆ ಹಿಂದೆ ನೀನು ಹತ್ತನೆ ತರಗತಿಯಲ್ಲಿ ಮೂರು ವರ್ಷ ಫೇಲಾಗುತ್ತಿರಲಿಲ್ಲ ತಂಗಿ !

ಜಮುನಾ : ಗಂಗಾ ! [ಸಿಟ್ಟಿನಿಂದ]

ಗಂಗಾ : ಹೋಗಲಿ ಬಿಡು ತಂಗಿ ! ಸಂತೋಷದ ಸಮಯದಲ್ಲಿ ಆ ಅಸಂತೋಷದ ಮಾತೇಕೆ? ಆಡಿನ ಮೊಲೆಯಂತೆ ಈ ಮನೆಗೆ ಜೋಡು ಹೆಣ್ಣು ಮಕ್ಕಳಾಗಿ ಹುಟ್ಟಿದ ನಮ್ಮೀರ್ವರಲ್ಲಿ ನಾನಿಂದು ಗೃಹಿಣಿಯಾಗಿ ಗಂಡನ ಮನೆಗೆ ಹೋಗುತ್ತಿರುವೆ, ಇವತ್ತಿನ ಒಂದು ದಿನದಲ್ಲಿ ಒಂದು ತಾಸಾದರೂ ಸಮಯ ತೆಗೆದುಕೊಂಡು ನಗು ನಗುತ್ತ ನನ್ನನ್ನು ಬೀಳ್ಕೊಡಮ್ಮಾ ಎಂದು ಕೇಳುತ್ತಿರುವೆ ತಂಗಿ.

ಜಮುನಾ : ಸರಿಹೋಯ್ತು ಒಂದು ತಾಸು ಸಮಯ ತೆಗೆದುಕೊಂಡು ಬೀಳ್ಕೊಡಲಿಕ್ಕೆ ನೀನೇನು ಸತ್ತು ಆ ಸುಡುಗಾಡಕ್ಕೇನು ಹೊರಟಿಲ್ಲವಲ್ಲೇ, ಅಣ್ಣನ ತಲೆ ತುಂಬಿಸಿ ಇದ್ದೂರಿನಲ್ಲಿಯೇ ಆಗರ್ಭ ಶ್ರೀಮಂತಿಕೆಯುಳ್ಳ ಸೋದರ ಮಾವನನ್ನು ವರಿಸಿಕೊಂಡು ಬದುಕು ಮಾಡಲು ಹೊರಟಿರುವಿ ಅಂದಮೇಲೆ ಸುಮ್ಮನೆ ಹೋದರಾಯ್ತು, ಸುಳ್ಳೇ ಇಲ್ಲದ ಬಡಿವಾರ ಯಾಕ ಮಾಡ್ತೀರುವಿ?

ಗಂಗಾ : ಜಮುನಾ, ಮಂಗಲಮಯವಾದ ಈ ಸನ್ನಿವೇಶದಲ್ಲಿ, ನೀನೆಂಥ ಅಮಂಗಲದ ಮಾತಾಡುತ್ತಿರುವಿಯಲ್ಲ? ಅಕ್ಕನ ಬಾಳು ಹಾಲು ಸಕ್ಕರೆಯಾಗಲೆಂದು ಹರಿಸುವುದನ್ನು ಬಿಟ್ಟು ನನ್ನ ಮೇಲೆ ಅದೇಕೋ ವಿರಸದ ವಿಷವನ್ನೇ ಕಕ್ಕುತಿರುವಿಯಲ್ಲ? ಏಕೆ? ಎಷ್ಟಾದರೂ ನಾವಿಬ್ಬರೂ ಅಕ್ಕಾ ತಂಗಿ ಎಂಬುವುದನ್ನು ಮಾತ್ರ ಮರೆಯಬೇಡ.

ಜಮುನಾ : ಅಕ್ಕಾ ತಂಗಿ? ಹುಂ !! ಅಕ್ಕಾ-ತಂಗಿ ಎಂಬ ಅಕ್ಕರತೆಯನ್ನು ಮಾತ್ರ ಬೆಳಿಸಬೇಡ ಯಾಕೆಂದರೆ ನನಗೆ ಜನ್ಮ ಕೊಟ್ಟ ನನ್ನ

ತಾಯಿಯೇ ಬೇರೆ ನಿನಗೆ ಜನ್ಮಕೊಟ್ಟ ನಿನ್ನ ತಾಯಿಯೇ ಬೇರೆ, ಅಂದಮೇಲೆ ನನಗೂ ನಿನಗೂ ಯಾರ ಸಂಬಂಧವೂ ಇಲ್ಲ.

ಗಂಗಾ : ದಯವಿಟ್ಟು ತಪ್ಪು ಕಲ್ಪಿಸಿಕೊಳ್ಳಬೇಡ ಜಮುನಾ ! ನಮಗೆ ಜನ್ಮಕೊಟ್ಟ ತಾಯಿಂದಿರರು ಬೇರೆ ಬೇರೆಯಾಗಿದ್ದರೂ ಸಹಿತ ನಾವು ಮಾತ್ರ ಒಂದೇ ತಂದಿಯ ಪವಿತ್ರ ರಕ್ತದಿಂದ ಉದ್ಭವಿಸಿ ಬಂದಿದ್ದೇವೆ ಎಂಬುವುದನ್ನು ಮಾತ್ರ ಮರಿಯಬೇಡ ! ಇದು ಸತ್ಯ–ಸತ್ಯ–ಸತ್ಯ !!

ಜಮುನಾ : ಉಪಯುಕ್ತ ವಿಲ್ಲದ ಈ ನಿನ್ನ ಉಪದೇಶ ನನಗೆ ಬೇಕಾಗಿಲ್ಲ. ಸುಳ್ಳೇ ನೀನು, ನಾನೇ ಬುದ್ಧಿವಂತಳೆಂದು ನಿನ್ನ ಬುದ್ಧಿಯ ಚಾತುರ್ಯ ನನ್ನ ಮುಂದೆ ತೋರಿಸಬೇಡ.

ಗಂಗಾ : ತಂಗಿ ! ನಾನೊಂದು ಹೇಳಿದರೆ ನೀನೊಂದು ತಿಳ್ಕೊಂತಿಯಲ್ಲ ಒಂದೇ ರಕ್ತದಿಂದ ಉದ್ಭವಿಸಿ ಬಂದ ನನ್ನ ನಿನ್ನಲ್ಲಿ ಬಾಣ–ಬತ್ತಳಿಕೆ ಎಂಬ ಭಿನ್ನಭಿಪ್ರಾಯಕ್ಕೆ ಆಸ್ಪದಕೊಡದೆ, ನಾನೇ ನೀನು, ನೀನು ನಾನು ಎಂದು ಭಾವಿಸಿ, ಉದಾರ ಮನಸ್ಸಿನಿಂದ ಈ ನಮ್ಮ ತವರುಮನೆಗೆ ಹರಿಸುವುದು ನಮ್ಮ ಆದ್ಯ ಕರ್ತವ್ಯ ಎಂದು ಹೇಳಿದೆ.

ಜಮುನಾ : ನಿನ್ನಿಂದ ಬುದ್ಧಿ ಹೇಳಿಸಿಕೊಳ್ಳುವಷ್ಟು ಬುದ್ಧಿಗೇಡಿ ನಾನಲ್ಲ ! ಈ ಮನೆಗೆ ಯಾವರೀತಿ ಹರಿಕೆ ಕೊಡಬೇಕು, ಮತ್ತು ಯಾವ ರೀತಿಯ ಕೀರ್ತಿ ತರಬೇಕೆಂಬುದು ನನಗೆ ಚನ್ನಾಗಿ ಗೊತ್ತಿದೆ. ಆದರೆ ಇದರ ಬಗ್ಗೆ ನೀನು ಹೇಳಿ ಕೊಡುವ ಅವಶ್ಯಕತೆಯಿಲ್ಲ.

ಗಂಗಾ : ಜಮುನಾ !

ಜಮುನಾ : ಹೌದು, ಸಮಾಜ, ಸರಕಾರ, ಸಾಹಿತ್ಯ, ಸಂಸಾರವೆಂಬ ಈ ನಾಲ್ಕು ವಿಧದ ತಿರುಳನ್ನು ತಿಳಿದು, ಅವುಗಳ ಲೋಪದೋಷಗಳನ್ನು ಅಳೆದು, ನನ್ನದೇ ಆದ ಸೂಕ್ತ ವಿಚಾರ ದೃಷ್ಟಿಯಿಂದ ತರ್ಕಿಸಿ, ತೂಕ ತಪ್ಪದಂತೆ ಬದುಕಿನ ಮುನ್ಹೆಜ್ಜೆ ಹಾಕುತ್ತಿದ್ದ ನನಗೆ ಈ ನಿನ್ನ ಗೊಳ್ಳು ಉಪದೇಶ ಬೇಕಾಗಿಲ್ಲ [ಎಂದು ಹೊರಗೆ ಹೋಗುವಳು]

ಗಂಗಾ : ಜಮುನಾ ! ಜಮುನಾ !! ನಿಲ್ಲು ಜಮುನಾ !!! ಹೂಂ !! ಪ್ರಾಯದಿಂದ ಝೋಂಪಿಸುತ್ತಿರುವ ಇವಳಿಗೆ ಬುದ್ಧಿ ಹೇಳುವುದು, ಹೊಳೆಯಲ್ಲಿ ಹೋಮ ಮಾಡುವುದು ಎರಡೂ ಒಂದೆ [ಅಷ್ಟರಲ್ಲಿ ಅಲ್ಲಿಗೆ ರಮೇಶ ಹೊರಗಿನಿಂದ ಕೈಯಲ್ಲಿ ಬಾಳೆ, ಸೇಬುಹಣ್ಣು ಹಿಡಿದುಕೊಂಡು ಬಂದು]

ರಮೇಶ : ತಂಗಿ ! ಗಂಗಮ್ಮಾ !! ಇದೋ ಈ ಹಣ್ಣು ತೆಗೆದುಕೊಳ್ಳಮ್ಮ [ಸುತ್ತಲೂ ನೋಡಿ] ಆಂ ಇದೇನಮ್ಮ, ಮನೆಯಲ್ಲಿ ಜಮುನಾ ಕಾಣ್ತಾನೇ ಇಲ್ಲವಲ್ಲ ಎಲ್ಲಿಗೆ ಹೋಗಿದ್ದಾಳೆ?

ಗಂಗಾ : ಅಣ್ಣಾ ! ಪರೀಕ್ಷೆಯ ಸಮಯ ಸಮೀಪಿಸಿದ ಕಾರಣ ಅಭ್ಯಾಸ ಮಾಡುತ್ತೇನೆಂದು ಹೇಳಿ, ಇನ್ನೂ ಇದೇ ಈಗ ತಾನೆ – ತಮ್ಮ ಗೆಳತಿಯರ ಮನೆಗೆ ಹೋದಳು.

ರಮೇಶ : ಸರಿಯಮ್ಮ ನೀನು ಹೋಗಿ ಬೇಗ ರಡಿಯಾಗು ಇಷ್ಟರಲ್ಲಿಯೇ ನಿಮ್ಮ ಮಾವಂದಿರು ನಿನ್ನನ್ನು ನಿನ್ನ ಪತಿಯ ಮನೆಗೆ ಕರೆದುಕೊಂಡು ಹೋಗಲು ಬರುವವರಿದ್ದಾರೆ, ಆದಕಾರಣ ನೀನು ಬೇಗ ನಿನ್ನ ಸಾಮಾನುಗಳನ್ನು ಸಜ್ಜು ಮಾಡಿಕೊಳ್ಳಿ.

ಗಂಗಾ : ಒಳ್ಳೆಯದಣ್ಣ ! [ಗಂಗಾ ಒಳಗೆ ಹೋಗುವಳು, ಹೊರಗಿನಿಂದ ಸುರೇಂದ್ರ ಬರುವನು]

ಸುರೇಂದ್ರ : ಮತ್ತೇನಯ್ಯಾ ರಮೇಶ, ಮನೆಯಲ್ಲಿ ಎಲ್ಲರೂ ಕ್ಷೇಮವೇ?

ರಮೇಶ : ಸಕಲ ಲೋಕ ಪಾಲಕನಾದ ಆ ಪರಮೇಶ್ವರನ ಕೃಪೆಯಿಂದಲೂ, ಮತ್ತು ಹಿರಿಯವರಾದ ತಮ್ಮ ಅಮರ ಆಶೀರ್ವಾದದಿಂದಲೂ, ನಾವೆಲ್ಲರೂ ಕ್ಷೇಮದಿಂದ ಇದ್ದಿದ್ದೇವೆ ಮಾಮಾಜಿ ! ಆಂ ತಂಗಿ ಗಂಗವ್ಮಾ, ಮಾವಾಜಿಯುವರು ಬಂದರು ಬೇಗ ಚಹಾಮಾಡಿಕೊಂಡು ಬಾರಮ್ಮ ! [ಗಂಗಾ ಚಹಾತಂದು ಕೊಟ್ಟು ಒಳಗೆ ಹೋಗುವಳು]

ಸುರೇಂದ್ರ : ಇನ್ನೊಂದು ವಿಷಯ ರಮೇಶ ಅನಾವೃಷ್ಠಯಿಂದ ನಮ್ಮ ಭಾಗದಲ್ಲಿ ಬೆಳೆ ಒಣಗಿ ಹೋದರೆ, ಅತೀ ವೃಷ್ಟಿಯಿಂದ ಇನ್ನೊಂದು ಕಡೆ ಬೆಳೆ ಸರ್ವನಾಶವಾಗಿ ರೈತರು ತಮ್ಮ ತಮ್ಮ ಬೆರಳು ಹಿಚುಗಿಕೊಳ್ಳುತ್ತ ಕುಳಿತ್ತಿದ್ದಾರೆ, ದೇಶದ ರೈತರು ಇಂಥದೊಂದು ಸಂಕಷ್ಟದಲ್ಲಿ ಸಿಲುಕಿದಾಗ್ಯೂ ಇದರ ಅರಿವಿಲ್ಲದೆ ದೇಶದ್ರೋಹಿಗಳು ದ್ವೇಷ ಸಾಧಿಸುತ್ತಿದ್ದಾರಲ್ಲ.

ರಮೇಶ : ಮಾಮಾಜಿ, ಇದೇನು ಹೇಳುತ್ತಿರುವಿರಿ?

ಸುರೇಂದ್ರ : ಸತ್ಯವನ್ನೇ ಹೇಳುತ್ತಿದ್ದೇನಯ್ಯಾ ! ಗುಜುರಾತಿನಲ್ಲಿ ಕೋಮುಗಲಭೆಯಿಂದ ಮಾರಣ ಹತ್ಯಾ ನಡೆದರೆ, ಮುಂಬೈಯಲ್ಲಿ

ಸುಪಾರಿಕೊಲೆ ನಡಿತಾ ಇದೆ, ಕಾಶ್ಮೀರ ಕಣಿವೆಯಲ್ಲಿ ಉಗ್ರಗಾಮಿಗಳಿಂದ ಹಿಂದುಗಳ ನರಹತ್ಯಾ ನಡಿದರೆ, ಕೋಯಿಮುತ್ತೂರಿನಲ್ಲಿ ಬಾಂಬುಗಳ ಸ್ಫೋಟ ನಡಿತಾ ಇದೆ, ಆಂಧ್ರ ಮತ್ತು ತಮಿಳ ನಾಡಿನಲ್ಲಿ ನಕ್ಸಲೀಯರ ಹಾವಳಿ ನಡೆದರೆ, ಬಿಹಾರದಲ್ಲಿ ರಣವೀರ ಸೇನೆಯಿಂದ ದಲಿತರ ಮಾರಣ ಹೋಮ ನಡಿತಾ ಇದೆ.

ರಮೇಶ : ಮಾಮಾಜಿ !

ಸುರೇಂದ್ರ : ಹೌದು ರಮೇಶ, ದೇಶದ ಎಲ್ಲೆಡೆ ಇದೇ ಗೊಂದಲವೇ ಮುಂದುವರಿದರೆ, ಮುಂದೆ ಈ ನಮ್ಮ ದೇಶದ ಗತಿಯೇನು?

ರಮೇಶ : ಮಾಮಾಜಿ, ಈ ವಿಷಯದ ಬಗ್ಗೆ ನೀವಾಗಲಿ, ನಾನಾಗಲಿ ಚಿಂತಿಸುವ ಅವಶ್ಯಕತೆಯಿಲ್ಲ, ಆದುಷ್ಕರ್ಮಿಗಳ ಚಟುವಟಿಕೆಗಳನ್ನು ಹತ್ತಿಕ್ಕಲು, ಮತ್ತು ಅವರ ಹೋರಾಟವನ್ನು ಸದೆ ಬಡಿಯಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಜ್ಜಾಗಿ ನಿಂತಿವೆ. !

ಸುರೇಂದ್ರ : ಅದು ಹೋಗಲಿ ಬಿಡು, ಬೆಳೆನಾಶಗೊಂಡ ರೈತರು ತಮ್ಮ ಹೊಲಮನೆಗಳನ್ನು ಬಿಟ್ಟು, ಹೊಟ್ಟೆ ಬದುಕಲು ಪಟ್ಟಣಕ್ಕೆ ಹೋಗುತ್ತಿದ್ದಾರೆ ಅವರ ಬೆಳೆಗೆ ಪರಿಹಾರ ದೊರಕಿಸಲು, ಸರಕಾರಕ್ಕೆನಾದರೂ ಮನವಿ ಪತ್ರ ಸಲ್ಲಿಸಿದ್ದೀರಾ?

ರಮೇಶ : ಸಲ್ಲಿಸಿದ್ದೇವೆ, ಮಳೆಯ ಅಭಾವದಿಂದ ಇದ್ದ ಬೆಳೆಗಳೆಲ್ಲ ಒಣಗಿ ನಾಶಗೊಂಡು, ನಮ್ಮ ಭಾಗ ಬರಗಾಲಕ್ಕೆ ತುತ್ತಾಗಿ ಅದೆಷ್ಟೋ ಗ್ರಾಮಸ್ಥರು ತಮ್ಮ ಹೆಂಡರು ಮಕ್ಕಳನ್ನು ಕಟ್ಟಿಕೊಂಡು ಹೊಟ್ಟೆ ಬದುಕಲು ಪಟ್ಟಣಕ್ಕೆ ಹೊರಟಿದ್ದಾರೆ, ಆದ್ದರಿಂದ ನಮ್ಮ ಕಲಬುರ್ಗಿ ಜಿಲ್ಲೆಗೆ ದವಸ ಧಾನ್ಯಗಳೊಂದಿಗೆ ಕಾಮಾಗಾರಿ ಕೆಲಸ ಕೊಡಬೇಕೆಂದು ನಮ್ಮ ರಾಜ್ಯ ಸರಕಾರಕ್ಕೆ ಮನವಿ ಪತ್ರ ಸಲ್ಲಿಸಿದ್ದೇವೆ.

ಸುರೇಂದ್ರ : ಹೌದಾ?

ರಮೇಶ : ಅಷ್ಟೇ ಅಲ್ಲ ಮಾಮ, ನೀರಿನ ತೊಂದರೆ ಇದ್ದ ಗ್ರಾಮ ಪ್ರದೇಶಗಳಿಗೆ ಟ್ಯಾಂಕರಿನಿಂದ ಕುಡಿಯುವ ನೀರಿನ ವ್ಯವಸ್ಥೆ, ಮತ್ತು ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟದ ವ್ಯವಸ್ಥೆ ಕೂಡ ಮಾಡಿದ್ದೇವೆ, ಇದೂ ಅಲ್ಲದೆ ಮಹಿಳೆಯರು ತಮ್ಮ ಕಾಲಿನ ಮೇಲೆ ತಾವು

ನಿಂತುಕೊಳ್ಳಲಿ ಎಂಬ ಸದ್ದುದ್ದೇಶದಿಂದ ನಮ್ಮ ರಾಜ್ಯ ಸರಕಾರ ಸ್ತ್ರೀ–ಶಕ್ತಿ ಎಂಬ ಕಾರ್ಯಕ್ರಮ ಕೂಡ ಜಾರಿಗೆ ತಂದಿದೆ.

ಸುರೇಂದ್ರ : ವ್ಹೇರಿಗುಡ್ ನಮ್ಮ ದೇಶದ ಪ್ರತಿಯೊಂದು ಗ್ರಾಮ ಪ್ರದೇಶದಲ್ಲಿ ಊರಿಗೆ ಒಬ್ಬರಿಬ್ಬರಾದರೂ ನಿನ್ನಂಥ ನಿಷ್ಕಲ್ಮಷ ರಾಜಕಾರಣಿಗಳು ಹುಟ್ಟಿದರೆ, ಈ ನಮ್ಮ ರಾಷ್ಟ್ರ ಭವ್ಯರಾಷ್ಟ್ರವಾಗುವುದರಲ್ಲೇನು ಸಂದೇಹವಿಲ್ಲ.

ರಮೇಶ : ಮಾಮಾಜೀ !

ಸುರೇಂದ್ರ : ಹೌದಯ್ಯ ! ನಿನ್ನ ಸರ್ವ ಸುಖಗಳಿಗೆ ತಿಲಾಂಜಲಿಯನ್ನಿತ್ತು ದೇಶದ ಪ್ರಗತಿಗಾಗಿ, ದೀನದಲಿತರ ಕಲ್ಯಾಣಕ್ಕಾಗಿ ಹಗಲಿರುಳನ್ನು ಲೆಕ್ಕಿಸದೆ ಏಕೋ ಪ್ರಕಾರವಾಗಿ ನಿಷ್ಠೆಯಿಂದ ದುಡಿಯುವ ನಿಮ್ಮಂಥ ಶ್ರೇಷ್ಠ ರಾಜಕೀಯ ವ್ಯಕ್ತಿಗಳು ಸದ್ಯ ಈ ನಮ್ಮ ದೇಶಕ್ಕೆ ಬೇಕೇ ಬೇಕು.

ರಮೇಶ : ಇದೇನು ಹೇಳುತ್ತಿರುವಿ ಮಾಮ !?

ಸುರೇಂದ್ರ : ಸತ್ಯವನ್ನೇ ಹೇಳುತ್ತಿರುವೆ ರಮೇಶ, ಬಿಚ್ಚುಮಾತು ನಿಚ್ಚಳ ವಿಚಾರ, ಸ್ವಚ್ಛಮನಸ್ಸಿನಿಂದ ಜನಸೇವೆ ಗೈಯುತ್ತಿರುವ ನೀನು, ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಆಡಳಿತ ಪಕ್ಷದಿಂದ ಟಿಕೇಟು ಪಡೆ ಆ ಚುನಾವಣೆಗೆ ಖರ್ಚಾಗುವ ದುಡ್ಡು ನಾನು ಕೊಂಡುತ್ತೇನೆ.

ರಮೇಶ : ಒಳ್ಳೆಯದು ಮಾಮಾಜಿ ತಮ್ಮ ಆಶೀರ್ವಾದದ ಬೆಂಬಲ ಸದಾ ನನಗೆ ರಕ್ಷಾ ಕವಚವಾಗಲಿ ಎಂದು ನಾನು ಆ ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಸುರೇಂದ್ರ : ಆಯ್ತಪ್ಪ ! ನೀನೇನು ನನಗೆ ಹೊರಗಿನವನಲ್ಲ ! ನನ್ನ ಅಕ್ಕನಮಗ, ಖಾಸ ನನ್ನ ಸೋದರಳಿಯ ನೀನು, ಅಂದ ಮೇಲೆ ನಿನಗೆ ಖರ್ಚುಮಾಡದೆ ನಾನು ಮತ್ತ್ಯಾರಿಗೆ ಮಾಡ್ಲಿ? ಆಂ ರಮೇಶ ಸಮಯವಾಯಿತು, ನಾನು ಅಲ್ಲೇ ಹೊರಗಡೆ ಕಾರಿನ ಹತ್ತಿರ ನಿಂತುಕೊಳ್ಳುತ್ತೇನೆ ನೀನು ಬೇಗ ಗಂಗಮ್ಮಳನ್ನು ಕರೆದುಕೊಂಡು ಅಲ್ಲಿಗೆ ಬಂದುಬಿಡು.

ರಮೇಶ : ಒಳ್ಳೆಯದು ಮಾಮ [ಸುರೇಂದ್ರ ಹೋಗುವನು] ಗಂಗಾ, ತಂಗಿ ಗಂಗವ್ವಾ ! ಹೊರಗೆ ಬಾರವ್ಮ [ಗಂಗಾ ಸೊಟ್ಕೇಸು ಹಿಡಿದುಕೊಂಡು ಹೊರಗೆ ಬರುವಳು ಅವಳನ್ನು ಕುರ್ಚಿಮೇಲೆ

ಕೂಡಿಸಿ ಕಾಲ್ತೊಳೆದು ಉಡಿಯಲ್ಲಿ ಹಣ್ಣು ಫಲವಿಟ್ಟು ನಮಿಸುವನು]

ಹಾಡು

ತಂಗಿ ನೀನು ಪ್ರಪ್ರಥಮವಾಗಿ ಗಂಡನ ಮನೆಗೆ ಗೃಹಿಣಿಯಾಗಿ ಹೋಗುವ ಪೂರ್ವದಲ್ಲಿ ನಾನು ನಿನಗೊಂದು ಕಿವಿಮಾತು ಹೇಳುತ್ತೇನೆ, ಅದನ್ನು ನೀನು ಯಾವಾಗಲೂ ನಿನ್ನ ಗಮನದಲ್ಲಿಟ್ಟುಕೊಂಡು ನಡೆಯಬೇಕು.

ಗಂಗಾ : ಪರವಾಗಿಲ್ಲ ಅದೇನು ಹೇಳಣ್ಣ !?

ರಮೇಶ : ತಂಗಿ ! ಹೆಣ್ಣು ಜಗದ ಕಣ್ಣು, ಹೆಣ್ಣು ಧರ್ಮದೇವತೆ, ಹೆಣ್ಣು ಮಹಾತಾಯಿ ಎಂದು ಪುರಾಣ ಪ್ರವಚನದಲ್ಲಿ ಹೊಗಳಿದರೂ, ಹೆಣ್ಣಿನ ಜೀವನ ಬಲುಕಷ್ಟಮಯವಾದದ್ದು, ಹೆಣ್ಣು ಹೆಣ್ಣಾಗೇ ಬಾಳಿದರೆ ಮಾತ್ರ ಈ ಪ್ರಪಂಚದಲ್ಲಿ ಹೆಣ್ಣಿಗೊಂದು ಅಮರ ಬೆಲೆ ಇದೆ, ಅದನ್ನು ಉಲ್ಲಂಘಿಸಿ ನಡೆದರೆ ಹೆಣ್ಣಿನ ಬಾಳು ಅದು ಮಣ್ಣಿನಲ್ಲಿ ಬಿದ್ಧ ಹಣ್ಣಿನ ಹೋಳು.

ಗಂಗಾ : ಇದೇನು ಹೇಳುತ್ತಿರುವೆಯಣ್ಣ?

ರಮೇಶ : ಸತ್ಯವನ್ನೇ ಹೇಳುತ್ತಿದ್ದೇನೇ ತಂಗಿ ! ನೀನಿಂದು ಹುಟ್ಟಿದ ಮನೆ ತ್ಯಾಜ್ಯಮಾಡಿ ಸಾಯುಜ್ಯ ಸ್ವರೂಪವಾದ ಪತಿಯ ಗೃಹಕ್ಕೆ ಗೃಹಣಿಯಾಗಿ ಹೋಗುತ್ತಿರುವಿ, ಸ್ತ್ರೀಯರಿಗೆ ಪತಿಯ ಗೃಹವೇ ಅವರ ಆಚಾರ ವಿಚಾರಗಳನ್ನು ಕಂಡುಹಿಡಿಯುವ ಪರೀಕ್ಷಾಭವನ, ಅಲ್ಲಿ ನಿನ್ನ ನಡತೆಯಲ್ಲಿ ಬೇರೆಯವರು ಬೆರಳಿಟ್ಟು ತೋರಿಸದಂತೆ ನಡೆದು ಕೊಳ್ಳುವುದು ನಿನ್ನ ಆದ್ಯಕರ್ತವ್ಯ !

ಗಂಗಾ : ಅಣ್ಣಾ !

ರಮೇಶ : ಹೌದಮ್ಮ ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು ! ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ !! ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ ! ಎಲ್ಲರೊಳಗೊಂದಾಗು ಮಂಕು ತಿಮ್ಮ !! ಎಂಬುವಂತೆ, ಊರಿಗೆ ಮಗಳಾಗಿ ಬೆಲ್ಲದ ಅಗಳಾಗಿ, ಬಾಳುತ್ತ ಹುಟ್ಟಿದ ಮನೆಗೂ ಕೊಟ್ಟ ಮನೆಗೂ ಕೀರ್ತಿತರುವ ಶ್ರೇಷ್ಠ ಮಗಳಾಗಿ ಈ ಭವಬಂಧನ ಗೆಲ್ಲ ಬೇಕು ತಂಗಿ.

ಗಂಗಾ : ಒಳ್ಳೆಯದು ಅಣ್ಣ ! ನನ್ನ ವಿಷಯದಲ್ಲಿ ನೀವೇನು ಚಿಂತಿಸಬೇಡಿ

ಶ್ರೀರಾಮಚಂದ್ರನಿಗೆ ಸೀತೆಯಂತೆ ರಾಜ ಸತ್ಯಹರಿಶ್ಚಂದ್ರನಿಗೆ ತಾರಾಮತಿಯಂತೆ ಗಂಡನ ಸುಖದುಃಖಗಳಲ್ಲಿ ಪಾಲ್ಗೊಂಡು ಪತಿಗೆ ಉತ್ತಮ ಸತಿಯಾಗಿ ಬಾಳುತ್ತೇನೆಂಬ ಆತ್ಮ ವಿಶ್ವಾಸ ನನಗಿದೆ.

ರಮೇಶ : ಅದೇನೊ ಸರಿಯಮ್ಮ, ಹಿರಿಯಸ್ಥಾನದಲ್ಲಿ ನಿಂತು ನಿನಗೆ ಆದರ್ಶಗುಣಗಳನ್ನು ಹೇಳಿ ಕೊಡಬೇಕಾದದ್ದು ಅಣ್ಣನಾದ ನನ್ನ ಆದ್ಯ ಕರ್ತವ್ಯ, ಗಂಡನ ಮನೆಯಲ್ಲಿ ನಿನಗೆಷ್ಟು ಕಷ್ಟ ಬಂದರೂ ಸಹಿತ ಅದನ್ನು ಸಹಿಸಿ ಕೊಳ್ಳುವ ದೊಡ್ಡಗುಣ ನಿನ್ನದಾಗಬೇಕು ತಂಗಿ.

ಗಂಗಾ : ಒಳ್ಳೆಯದಣ್ಣ ಈ ನಿಮ್ಮ ನೀತಿ ಉಪದೇಶದಂತೆ ಗಂಡನ ಮನೆಯಲ್ಲಿ ಉರಿಸಿದರೆ ಊದುಬತ್ತಿಯಾಗಿ, ತೇದರೆ ಗಂಧದ ಕೊರಡಾಗಿ, ಹಚ್ಚಿದರೆ ಹಣತೆಯ ಬತ್ತಿಯಾಗಿ, ಬಾಳಿನುದ್ದಕ್ಕೂ ಉತ್ತಮಾಂಗನೆಯಾಗಿ ಬಿತ್ತರಿಸುವೆ ನಿನ್ನ ಉದಾತ್ತತನವನ್ನು.

ರಮೇಶ : ತಂಗಿ !

ಗಂಗಾ : ಹೌದಣ್ಣ, ಹಿಂದಿನ ಆರ್ಯ ನಾರಿಯರಂತೆ ಪತಿಗೆ ತಕ್ಕ ಸತಿಯಾಗಿ ಗೌರವ ಶಿಖರಕ್ಕೆ ಕಲಶವಾಗಿ, ಗರತಿಯರ ನೊಸಲಿಗೆ ಕುಂಕುಮ ತಿಲಕ ಹಚ್ಚುತ್ತೇನೆ.

ರಮೇಶ : ಸಂತೋಷವಾಯ್ತು ತಂಗಿ, ಸಂತೋಷವಾಯ್ತು, ಈ ನಿನ್ನ ಸಮಯೋಚಿತ ಬುದ್ಧಿವಂತಿಕೆಯಿಂದ ಮಾತಾಡಿದ ಮಾತುಕೇಳಿ ನನಗೆ ಅತ್ಯಂತ ಪರಮ ಸಂತೋಷವಾಯ್ತು. ನಡಿಯಮ್ಮ ಮಾಮಾಜಿಯವರು ಕಾರಿನ ಹತ್ತಿರ ನಿಂತು ನಮ್ಮ ಹಾದಿಯನ್ನೇ ಕಾಯಿತ್ತಿರಬಹುದು ಬೇಗ ನಡಿ.

ಗಂಗಾ : ನಾನು ಹೋಗಿ ಬರುತ್ತೇನಣ್ಣ !

ರಮೇಶ : ಹೋಗಿಬಾ ತಂಗಿ ! ಸೌಭಾಗ್ಯ ಸೂಚಕವಾದ ನಿನ್ನ ಮಾಂಗಲ್ಯಕ್ಕೆ ಮಹಾದಾಂಯುಷ್ಯವಿರಲಿ. ಸೀತಾ ದಮಯಂತಿ, ತಾರ, ಮಂಡೋದರಿ, ಮಹಾಸತಿ ಅನಸೂಯರೆಂಬ ಪಂಚ ಪತಿವ್ರತೆಯರ ಆಶೀರ್ವಾದ ನಿನಗೆ ರಕ್ಷಾ ಕವಚವಾಗಲಿ ನಡಿಯಮ್ಮ [ಎಂದು ಹೊರಗೆ ಹೋಗುವರು ಪರದೆ ಬೀಳುವದು]

===**====**===

ಎರಡನೇ ದೃಶ್ಯ

ರಸ್ತಾ

ಭಗವಂತ : ಛೇ, ಛೇ, ಛೇ, ಹೆಣ್ಣು ಮಾಯಿ ಗಂಡು ನಾಯಿ ಅಂತ ಹಿರಿಯರು ಹೇಳಿದ ಮಾತು ಖರೆ ಐತ್ರಿ ! ಅಲ್ಲಾ ಮಾವನ ಮಗಳನ್ನೇ ಮದುವೆ ಮಾಡ್ಕೋಬೇಕಂತ ಮಮತೆಯಿಂದ ಮನೆತನ ಹೋಗಿ ಮಾತಾಡಿಸಿದರೂ ಅವಳು ನನ್ನ ಜೊತೆ ಮಾತಾಡುವುದು ಅಷ್ಟೇ ಅಲ್ಲ ಮುಖವೆತ್ತಿ ನನ್ನ ನೋಡಾಕ ಸಹಿತ ತೈಯ್ಯಾರಿಲ್ಲ, ಅಲ್ರಿ? ನನಗೇನಾಗ್ಯಾದ್ರಿ? ರೂಪದಲ್ಲಿ ಶ್ರೀರಾಮಚಂದ್ರ ಆಗೀನಿ,

ಯಮುನಾ : [ಬರುತ್ತಾ] ಏಯ್ ಹೋಳಿ ಕಾಮ, ನಿನ್ನಂಥ ಸೋಮನ ಮದುವೆ ಮಾಡಿ ಕೊಳ್ಳುವವಳಲ್ಲ ಈ ಭಾಮ, ಬೆಂಗಳೂರಿನ ವಿದ್ಯಾಮಂದಿರದಲ್ಲಿ ಎಂ.ಬಿ.ಬಿ.ಎಸ್ ಡಾಕ್ಟರ್ ಪದವಿ ಪಡೆದುಕೊಂಡು ಬಂದ ವರಶ್ರೇಷ್ಠನಿಗೆ ಕೊಟ್ಟು ಮದುವೆ ಮಾಡ್ತೀನೀ ಅಂತ ನಮ್ಮಪ್ಪ ನನಗೆ ಮಾತು ಕೊಟ್ಟಾನೋ ಮಂಕುತಿಮ್ಮ.

ಭಗವಂತ : ಲೇ ಲೇ ಕಜ್ಜಿ ಹಚ್ಚಿಸಿಕೊಂಡು ಹುಳಿಮಜ್ಜಿಗೆ ಕುಡಿಯುವ ಹುಚ್ಚುಮಲ್ಲಿ, ನನಗ ಎಮ್ಮಿಕಾಯಿವ ಹೆಡ್ಡನೆಂದು ತಿಳಿಯಬೇಡ ನಾನೂ ಕಷ್ಟಪಟ್ಟು ಕತ್ತಲ ಮನ್ಯಾಗ ಕುಳಿತುಕೊಂಡು ಮದನ ಕಾಮಾನಂದ ಕುಟಿ ಮಹಾಗ್ರಂಥವನ್ನು ಓದಿ ಆಯರ್ವೇಧದ ಎಲ್ಲಾ ಗಿಡಮೂಲಿಕೆಗಳನ್ನು ಕಂಡುಹಿಡಿದ ಪಂಡಿತ ಬಾಬಾ ಭಗವಂತನೆಂದು ಕೀರ್ತಿಪಡಿದ್ದೀನಿ ತಿಳ್ಕೋ ರಾಜರ.

ಯಮುನಾ : ತಿಳ್ಕೊಂಡ್ಯಾ ಬಿಡು ನೀನು ತೈಯಾರಿಸಿದ ಪುಡಿ ಅದು ನೀರಗ ಹಾಕ್ಕೊಂಡು ಕುಡಿ, ನೆಟ್ಟಗಾದರೆ ಇನ್ನೊಮ್ಮೆ ಪಡಿ ಇಲ್ಲಾಂದ್ರ ಹಾಯಾಗಿ ಕೌದ್ಯಾಗ ಕೈಲಾಸಕ ನಡಿ, ಇದೇ ನಿನ್ನ ಆಯರ್ವೇದೀಯ ಪುಡಿ.

ಭಗವಂತ : ಲೇ ಲೇ ಮಾತಿನ ಅರ್ಥ ತಿಳಿಯದ ತಿಳಿಗೇಡಿ, ನಾನು ಕೊಡುವ ಪುಡಿ ಕೈಲಾಸಕ್ಕೆ ಹಾದಿ ಹಿಡ್ಸೋದಲ್ಲಲೇ ಖೋಡಿ ಅದು ನಿನ್ನಂಥ

ಪ್ರಾಪ್ತ ವಯಸ್ಸಿನ ತರುಣ ತರುಣಿಯರಿಗೆ ಹಾಕುವುದು ಮೋಡಿ, ಆ ಮೋಡಿಯೇ ಕೂಡಿಸುವುದು ಮುಂದೆ ಗಂಡ–ಹೆಂಡತಿಯೆಂಬ ಜೋಡಿ. ನೀನು ತಿಳ್ಕೋ ಜರ ನನ್ನ ಮುಡಿಯ ಉಗ್ರವಾದ ಮೋಡಿ.

ಯಮುನಾ : ಯಾಕ್ಲಾ ಮುಂಡ್ಗಿಗಿ ಮುಲ್ಲಾ, ಗಂಡ ಪಂಡ ಅಂತ ಹೆಂಡಕುಡ್ದ ಮಂಗ್ಯಾನಗತ್ಲೆ ಕಂಡಕಂಡಾಂಗ ಕಣ್ಣಾರಿಸಿ ಮಾತಾಡಕತ್ತಿಯಲ್ಲ ಯಾಕ? ಬಂದಿಯೇನು ಕಡಬಿನ ಕಾಳಗಕ?

ಭಗವಂತ : ಎಲಾ ಇವಳಾ, ಇದೆಂಥ ಹುಚ್ಚು ಹೆಣ್ಣಲೇಪ್ಪಾಯಪ್ಪ? ಮದುವೆಯ ವಯಸ್ಸಿಗೆ ಬಂದು ಗಂಡನಿಲ್ಲದೆ ಗಂಡುಬೀರಿಯಂತೆ ಸಂದಿಗೊಂದಿ ಸುತ್ಯಾಡ್ತಾದ. ಅದ್ಕಾ ಸೋದರ ಮಾವನಾದ ನಾನು ಗಡಾನ ತಾಳಿಕಟ್ಟಿ ವರ್ಷತುಂಬುವುದರೊಳಗೆ ಮಗ್ಗಲಿಗೊಂದು ಮರಿಮಾಡಿಕೊಡಬೇಕಂದ್ರ ಇವ್ನೌವ್ನ ಇದು ಒಂದು ನಮೂನಿ ಗೂಳಿಗತ್ಲೆ ಡುರ್ಕಿ ಹೊಡಿತಾದಲ್ಲಾಂತೀನಿ?

ಯಮುನಾ : ಅಂತೂ ಅಡ್ಡಿಯಿಲ್ಲಲೇ ಬಡ್ಡಿ ನನಮಗನಾ, ನಿನ್ನ ಬಸುರಿಯಿದ್ದಾಗ ನಿಮ್ಮವ್ವಾಗ ಹುಚ್ಚು ನಾಯಿ ಕಡ್ದಾಂಗ ಕಾಣ್ತಾದ ಅಂತೇ ನೀ ಈ ನಮೂನಿ ಹುಚ್ಚು ನಾಯಿ ಒದರಿದಾಂಗ ಒದರಾಕತ್ತೀದಿ.

ಭಗವಂತ : ಯಮುನಾ, ನೀನು ಮಾತಾಡುಬ್ಯಾಡ ಈ ನಮೂನಾ. ನನ್ನ ಮಾತಿಗೆ ಒಲಿದುಬಾ ನೀನು, ಸುಮ್ನಾ ಹಗಲು ರಾತ್ರಿ ತೊಟ್ಟಿಲಲ್ಲಿಟ್ಟು ತೂಗುವೆ ನಿನ್ನನಾ ಸುಳ್ಳೆ ನಿರಾಕರಿಸಬೇಡ ನನ್ನನಾ

ಯಮುನಾ : ಆ ಹ ಹಾ ಮಳ್ಳಿ ಮಳ್ಳಿ ಮಂಚಕ ಕಾಲಗಳೆಷ್ಟು ಅಂದ್ರ ಮುರರ ಜೊತೆ ಮತ್ತೊಂದು ಅಂದಿದ್ಧಂತ ಅವಳೂ ನಿನ್ನ ಜಾತಿಯವಳೇ ಇರಬೇಕು.

ಭಗವಂತ : ಛೇ, ಛೇ, ಬರೇ ನನ್ನ ಜಾತಿಯವಳು ಅಷ್ಟೇ ಅಲ್ಲ ! ಅವಳು ಖಾಸ ಖಾಸ ನಮ್ಮಕ್ಕನ ಮಗಳು ನನಗೆ ಸೋದರ ಸೊಸೆನೇ ಆಗಬೇಕಂತೆ ಅವಳು ಅಂಜಿಕೆಯಿಂದ ಮಂಚದ ಕಾಲು ಹೇಳ್ಯಾಳ

ಭಾಗ್ಯವಂತ : [ಬರುತ್ತಾ] ಅವ್ವಿ ಏ ಅವ್ವಿ ಯಮುನಾ ಯವ್ವ ಯಮುನವ್ವಾ ಇನ್ನೂ ನೀನು ಇಲ್ಲೆ ಇದ್ದಿಯಲ್ಲೆ ಯವ್ವಾ? ಗಡಾನ ಮನೆಗೆ ಹೋಗಿ ನಾಲ್ಕು ತತ್ತಿ ನುಂಗಿ ಮ್ಯಾಲೊಂದು ಚರಿಗಿ ಹಾಲು ಕುಡಿಯಮ್ಮ ಹೋಗು.

ಭಗವಂತ : ಎಯ್ ಮಾನಗೇಡಿ ಮಾವ ವತ್ತಿ ಬೆಳೆಯುವ ವಯಸ್ಸಿನ್ಯಾಗ ನೀನಿವಳಿಗೆ ತತ್ತಿ ತಿನ್ನಿಸಿ ಕತ್ತಿನ ಮಾಡ್ಬ್ಯಾಡ. ಯಾಕಂದ್ರ ಮುಂದ ಮದುವೆಯಾದಮೇಲೆ ನಮ್ಮ ಹೊಲದಾಗ ಸುತ್ತಾಡಿ ಹತ್ತಿ ಬಿಡಿಸಬೇಕಾಗ್ತದ. ಇವಳಿಗೆ ಅದ್ಕಾ ತತ್ತಿ ತಿನ್ನಿಸುವುದನ್ನು ಬಿಟ್ಟುಬಿಡು.

ಭಾಗ್ಯವಂತ : ಲೇ ಭಗವಂತ ನೀ ಹಿಂಗಂದ್ರ ನಾ ನಿನಗ ನನ್ನ ಮಗಳನ್ನು ಹ್ಯಾಂಗ ಕೊಡ್ಲಿಅಂತೀನೀ ಅಲ್ಲಲೆ ಮುತ್ತಿನಂತ ನನ್ನ ಮಗಳಿಗೆ ನಿತ್ಯ ತತ್ತಿ ತಿನಿಸಿ ನಿನ್ನ ಮುಂಗೈ ಮೇಲೆ ಎತ್ತಿಕೊಂಡು ಸುತ್ತಾಡುವದನ್ನು ಬಿಟ್ಟು ಆ ಆಳಾದ ಹೊಲ್ದಾಗ ಹತ್ತಿ ಬಿಡಸಾಕ ಹಚ್ಚುತ್ತೀನಿ ಅಂತ ಹೇಳುತ್ತೇನಲೆ ಹೇಸರಗತ್ತಿ.

ಭಗವಂತ : ಕರೆಕ್ಟ್ ಹೇಳಿದಿ ನೋಡು ಮಾವ ನನ್ನಾಣೆ ನಿನ್ನಾಣೆ ಅಷ್ಟೇಅಲ್ಲ ಇದಕ್ಕೆ ನಿನ್ನ ಮುದ್ದು ಮಗಳ ಆಣೆಯಾಗಿಯೂ ಈ ಮಾತು ಸತ್ಯ. ನಾನು ಹೆಸರಕತ್ತೆ ಯಾದಲ್ಲೆ ನಿನ್ನ ಮಗಳ ಬೆನ್ನು ಹತ್ತಿ ಹೊಲದಾಗ ನಾಲ್ಕು ಚೀಲ ಶೇಂಗಾ ಬಿತ್ತಿ. ಅದರ ಮೇಲೆ ಅಡಿತ್ಯಾಗ ಹತ್ತು ಸಾವಿರ ರೂಪಾಯಿ ಎತ್ತಿ, ಅವೆಲ್ಲವೂ ತಂದು ನಿನ್ನ ಬಾಯಾಗ ವತ್ತಿ. ಈಗ ನಾಸಾದೆ ನೋಡು ಕತ್ತಿ.

ಭಾಗ್ಯವಂತ : ನೋಡಪ್ಪ ಅಳಿದೇವರು ನಮ್ಮ ಸೋದರಮಾವ ನನಗ ಹ್ಯಾಂಗ ಅಂತಾನಲ್ಲಂತ ದಯವಿಟ್ಟು ಮನಸ್ಸಿಗೆ ಹಚ್ಚಿಕೊಳ್ಳಬೇಡ. ಯಾಕಂದ್ರ ಹೆಣ್ತಿ ಅಂದ್ರ ಅದು ಕುಂಬಾರ ಮನ್ಯಾಗ ಸಿಗುವ ಮಣ್ಣಿನ ಪಣತಿಯಲ್ಲ ಸಾಯೋಮಟ ಸಂಗಾತಿಯಾಗಿರುವ ವಸ್ತು. ಅದ್ಕಾ ನನ್ನ ಅಳಿಯನ ಜೊತೆ ಸ್ವಲ್ಪು ದಪ್ಪ ಪುಷ್ಠಾಗಿರಲಂತ ದಿನಾ ನಾಲ್ಕು ತತ್ತಿ ತಿನ್ನಿಸಿ ಒಂದು ಲೋಟ ಹಾಲು ಕುಡ್ಸಾಕತ್ತೀನಿ ಅದು ನನ್ನ ರೊಕ್ಕದಿಂದ

ಭಗವಂತ : ಇದೇನು ಹೇಳುತ್ತಿರುವಿ ಮಾಮ?

ಭಾಗ್ಯವಂತ : ಸತ್ಯವನ್ನೇ ಹೇಳುತ್ತಿರುವೆ ಭಗವಂತ, ಹೆಗ್ಗಣ ಗುದ್ದಾಗಿದ್ದ ನನ್ನ ಅಳಿಯನ ಬಾಳ್ವೆ ಮುಂದ ಸುದ್ದಾಗಲಿ ಅಂತನೇ ನನ್ನ ಮಗಳಿಗೆ ತತ್ತಿ ತಿನ್ನಿಸಿ ನಿನಗ ಈ ಸುಬುದ್ಧಿ ಹೇಳ್ತಾ ಇದ್ದೀನಿ ತಿಳ್ಕೋ ಜರಾ.

ಭಗವಂತ : ನೀನೇನು ನನಗೆ ಸುಬುದ್ಧಿ ಹೇಳುತ್ತಿಯೋ ಅಥವಾ ದುಬುರ್ದ್ಧಿ ಹೇಳುತ್ತಿಯೋ ಆ ದೇವರಿಗೆ ಗೊತ್ತು. ಯಾಕಂದರ ನೀ ಸುಬುದ್ಧಿ ಹೇಳುವ ಸಮಯದಲ್ಲಿ ಆ ನಿನ್ನ ದುರ್ಬುದ್ಧಿ ಅಡ್ಡ ಪೇಂಚು ಹೊಡಿತಾನೆ ಇರುತ್ತಾದ.

ಭಾಗ್ಯವಂತ : ಲೇ ಹುಡುಗಾ, ಹಾಗಲ ಕಾಯಿಗೆ ಬೇವಿನ ಕಾಯಿ ಸಾಕ್ಷಿ ಹೇಳಿದಂತೆ ಮಾತಾಡಬ್ಯಾಡ. ಹಿಂದೆ ನಮ್ಮಕ್ಕಾ ಮಾಮ ಮರಗಮ್ಮನ ಅವಳಿ ಬಂದು ಸಾಯುವಾಗ ನನ್ನ ಕಡೆಯಿಂದ ವಚನೆ ತೆಗೆದುಕೊಂಡಿದ್ದಾರೋ...

ಭಗವಂತ : ಏನಂತ?

ಭಾಗ್ಯವಂತ : ಮುಂದ ಈ ನಿನ್ನ ಅಳಿಯನಿಗೆ ಮೆಟ್ಟಿಗೆ ಹಚ್ಚುವ ಭಾರ ನಿನ್ನದೆಂದು ಹೇಳಿ ನನ್ನ ಕೈಯಾಗ ನಿನ್ನ ಇಟ್ಟು ಹೋಗ್ಯಾರ ಅದ್ಕಾ ನಾನು.....

ಭಗವಂತ : ಅದ್ಕಾ ನೀನು ನನಗ ಮೆಟ್ಟಿಗೆ ಹಚ್ಚಬೇಕಂತ ಈ ರೀತಿ ಕೈ ತೊಳ್ಕೊಂಡು ಬೆನ್ನು ಹತ್ತೀದಿ ! ಛೇ ಛೇ ಈ ನಮೂನಿ ನಿಮ್ಮಹಾಗೆ ಅಳಿಯನಿಗೆ ಮೆಟ್ಟಿಗೆ ಹಚ್ಚುವ ಮಾವಂದಿರರು ಯಾರಿದ್ದಾರ್ರೀ ಈ ಲೋಕದಾಗ?

ಭಾಗ್ಯವಂತ : ಬರೇ ಈವೊಂದು ಲೋಕದಾಗ ಯಾಕೋ? ಮ್ಯಾಲ ನಡುವ ತೆಳಗ ಅಂದ್ರ ಭೂಲೋಕ ಮರ್ತ್ಯಲೋಕ ಪಾತಾಳಲೋಕವೆಂಬ ಈ ಮೂರು ಲೋಕದಾಗ ಒಡಕಕಂದಲಿ ಹಿಡ್ಕೋಂಡು ಹುಡುಕಾಡಿದರೂ ನನ್ನಂಥವರು ಸಿಗಕ್ಕಿಲ್ಲ ! ಹೋಗಲಿಬಿಡು ಇದೇವರ್ಷದಾಗ ಇದೇ ತಿಂಗಳದಾಗ ಇದೇ ವಾರದಾಗ ಒಂದು ಉತ್ತಮವಾದ ದಿವಸ ನೋಡಿ ಆ ಗುಡ್ಡದ ಗುರುಲಿಂಗಪ್ಪನ ಗುಡ್ಯಾಗ ಅದ್ದೂರಿಯಿಂದ ನಿಮ್ಮ ಮದುವೆ ಮಾಡ್ತೀನಿ ಮತ್ತೇನು?

ಭಗವಂತ : ಮಾವ ಸದ್ದ ನಾನು ನಿನ್ನ ಕಾಲಿಗೆ ಬಿದ್ದೆ ನೆಲ ನೋಡದೆ ಮೇಲಕ್ಕೆ ಎದ್ದೆ. ನಿನ್ನ ಮುದ್ದು ಮಗಳ ಹೃದಯಗೆದ್ದೆ. ಬೇಗನೀ ಇಲ್ಲಿಂದ ಹೋಗು ಸದ್ಯೆ.

ಭಾಗ್ಯವಂತ : ಪರವಾ ಇಲ್ಲೋ ಭಗವಂತ ಬೇಗ ಪಂಡಿತರ ಹತ್ತಿರ ಹೋಗಿ ಮುಹೂರ್ತ ತೆಗೆಸಿಕೊಂಡು ಬರ ಬೇಕಂದ್ರ ನನ್ನಂತ್ಯಾಕ ದುಡ್ಡಿಲ್ಲ ! ಅದ್ಕಾ ನಿನ್ನಂತ್ಯಾಕ ಒಂದು ನೂರು ರೂಪಾಯಿಗಳಿದ್ರ ಕೊಡು. ಬೇಗ ಹೋಗಿ ಮೂಹೂರ್ತ ತೆಗೆಸಿಕೊಂಡು ಬರ್ತೀನಿ

ಯಮೂನಾ : ಅಪ್ಪಾ ದೇವರ ಆಣಿ ಮಾಡಿ ಹೇಳ್ತೀನಿ ನಾನು ಇವನ ಮದುವೆ ಮಾಡ್ಕೋ.....

ಭಾಗ್ಯವಂತ : [ಮಗಳಿಗೆ ಕಣ್ಣು ಸೊನ್ನೆ ಮಾಡಿ] ಓ ಹೋ ನೀನು ಇವನನ್ನೇ

ಮಾಡ್ಕೋಂತಿಯಾ? ಪರವಾ ಇಲ್ಲಮ್ಮ ಮಾಡ್ಕೋ ಆ ಶ್ರೀರಾಮ ಸತ್ತಮೇಲೆ ಹುಟ್ಟಿದವನೆ ಈ ರಾಮ. ಗುಣದಲ್ಲಿ ರಾಮ ಪ್ರೀತಿಯಲ್ಲಿ ಶಾಮ ಶಕ್ತಿಯಲ್ಲಿ ಭೀಮ ನನ್ನ ಅಳಿಯನ ಎದರಾಗೂ ತೆಗೆದು ಹಾಕುವಾಂಗಿಲ್ಲ.

ಭಗವಂತ : ಹೂಂ ಅದ್ರಾಗೇನು ಸಂಶಯನೇ ಇಲ್ಲ ಬಿಡ್ರಿ ! ಒಂದುವೇಳೆ ನಿಮಗ ಸಂಶಯವಿದ್ರ ಒಂದು ಸಲ ನನ್ನ ಮಾಡ್ಕೊಂಡು ನೋಡ್ರಿ ನಿಮಗ ಸರಿಕಂಡ್ರ ಇರಲಿ ಇಲ್ಲಾಂದ್ರ ನಿಮ್ಮ ಮನೆಗೆ ನೀನು ನನ್ನ ಮನೆಗೆ ನಾನು

ಭಾಗ್ಯವಂತ : ಅಂಗಂದರೇನೋ?

ಭಗವಂತ : ಅದೆ ಮೊದಲು ಸೋಭಾನಾದ್ರ ಸಂಶಯನೇ ಕಡ್ಡು ಹೋಗ್ತಾದಲ್ಲೋ ಮಾವ ಅದ್ಕಾ ಒಂದು ಸಲ ಟೆಷ್ಟು ಮಾಡಿನೋಡಿದ್ರ ಬೆಷ್ಟ ಆಗ್ತಾದಂತ ನನ್ನ ಇಷ್ಟ, ಇದಕ್ಕೆ ನೀವೇನು ಅಂತ್ತೀರಿ?

ಭಾಗ್ಯವಂತ : ಆ ನಿನ್ನ ಇಷ್ಟ ನಿನ್ನಂತೆಕ್ಕೆ ಇರಲಿ ಅಂತ ಹೇಳುವುದೇ ನಮ್ದು ಬೆಷ್ಟು ! ಲೇ ಹುಡುಗಾ ಸಧ್ಯ ಅಂಥ ಉಗ್ರವಾದ ಪ್ರಯೋಗ ಮಾಡುವುದು ಬೇಡ ಮೊದಲು ಒಂದು ನೂರು ರೂಪಾಯಿಕೊಡು ನಾನು ಪಂಡಿತರಲ್ಲಿಗೆ ಹೋಗಿ ಮುಹೂರ್ತ ನೋಡಿ ಬರ್ತೀನಿ.

ಭಗವಂತ : ಇದೋ ತೊಂಭತ್ತು ರೂಪಾಯಿಗೆ ಇನ್ನೂ ಒಂಭತ್ತು ರೂಪಾಯಿಗಳು ಕಡಿಮೆ ಅದಾವ ಹ್ಯಾಂಗರ ಸರಿ ಮಾಡ್ಕೊಂಡು ಮೊದ್ಲು ಮುಹೂರ್ತ ತೆಗಿಸಿಕೊಂಡು ಬಾ ಮತ್ಯಾವುದಾದರೊಂದು ಗ್ರಾಚಾರ ಅಡ್ಡ ಬಂದೀತಂತ್ತೀನಿ ಬೇಗ ಹೋಗು.

ಭಾಗ್ಯವಂತ : ಅಲ್ಲೋ ತೊಂಬತ್ತಕ ಇನ್ನೂ ಒಂಭತ್ತು ರೂಪಾಯಿ ಕಡಿಮೆ ಅದಾವ ಹ್ಯಾಂಗರ ಸರಿ ಮಾಡ್ಕೋ ಬಾ ಅಂದ್ರ ಮುಂದಿನ ಕೆಲಸ ನನ್ನ ಹಲ್ಲು ಕಿತ್ತು ಕೊಡ್ಲೇನು?

ಭಗವಂತ : ತಪ್ಪು ನುಡ್ಡಿ ಮಾಮ, ಮಂದಿಕೆಲಸಕ ನಿನ್ನ ಹಲ್ಲು ಕಿತ್ತಿಕೊಟ್ಟು ಬರೋ ಮನುಷ್ಯ ನಾನಲ್ಲ, ನಿನ್ನ ಕೆಲಸಕ ಮಂದಿ ಹಲ್ಲು ಕಿತ್ತಿಕೊಟ್ಟು ಬರ್ತಿ ಅಲ್ಲೋ ದಿವಸಾ ಕೊಡು ಕೊಡು ಅಂದ್ರ ನಾನು ಎಷ್ಟಂತ ತಂದು ಕೊಡ್ಲೀ?

ಭಾಗ್ಯವಂತ : ನಾನು ಇಷ್ಟು ಕಷ್ಟ ಪಡುವುದು ನಿಮಗೆ ಒಳ್ಳೆಯದಾಗಲೀ ಅಂತ,

ಇದಕ್ಕೆ ನೀನೇನು ಅಂತಿ ಭಗವಂತ?

ಭಗವಂತ : ನಾನೇನು ಅಂತೀನೋ ನಂದs ನನಗೆ ತಿಳಿಲಾರದಾಂಗ ಆಗ್ಯಾದ, ಅಂದ ಬಳಿಕ ನಿಮಗೇನು ಹೇಳಂದಿ? ಒಟ್ಟಿನಲ್ಲಿ ಹೇಳ್ತಿನಿ ಕುಂಬುಳಕಾಯಿ ಕುಡುಗೋಲು ನಿನ್ನ ಕೈಯಲ್ಲಿ ಕೊಟ್ಟೀನಿ ಅದು ಅಡ್ಡನ ಕೊಯಿ, ಉದ್ದನ ಕೊಯಿ, ತಂದೆ ತಾಯಿ ಸತ್ತ ನನಗೆ ಸೋದರ ಮಾವನಾದ ನೀನಿದ್ದೀದಿ ಅಷ್ಟೇ ಸಾಕು.

ಭಾಗ್ಯವಂತ : ನೀನೇನು ಚಿಂತಿಸಬೇಡ ಅಳಿಯ ದೇವರು ನಿನಗೆ ಯಾವರೀತಿ ಮೆಟ್ಟಿಗೆ ಹಚ್ಚಬೇಕು ಅದೇ ರೀತಿ ಹಚ್ಚತ್ತೀನಿ ಆ ಯವ್ವಾ ಯಮುನವ್ವಾ ನಾನು ಹೋಗಿ ಬರ್ತೀನಿ ನೀನು ನಿಮ್ಮ ಮಾವನ ಕರೆದುಕೊಂಡು ಮನೆಗೆ ನಡಿ [ಕಣ್ಣು ಹೊಡೆಯುತ್ತ ಹೋಗುವನು]

ಯಮುನಾ : ಅಲ್ಲಾ ಮಾವ ಮಾತಿಗೆ ಮೊದ್ಲು ಮದುವೆ ಮಾಡ್ಕೋಂತೀನಿ ಮದ್ವೆ ಮಾಡ್ಕೋಂತೀನಿ ಅಂತ ಹೇಳ್ತಿಯಲ್ಲ ಮದುವೆ ಮಾಡ್ಕೋಳ್ಳಾಕ ಏನೈತಿ ನಿನ್ನ ಹಂತೇಕ?

ಭಗವಂತ : ಎ ಹುಚ್ಚು ಕೋಡಿ ಮದುವೆ ಮಾಡ್ಕೋಲ್ಲಾಕ ಏನೈತಿ ನಿನ್ನ ಹಂತ್ಯಾಕ ಅಂತ ತುಂಬಿದ ಸಭೆಯಲ್ಲಿ ಮಾನ ಕಳಿಯಾಕ ಹೋಗಬ್ಯಾಡ, ಗಂಡಿಸಿನಲ್ಲಿ ಇರಬೇಕಾದ ಎಲ್ಲಾ ವಸ್ತೂನೂ ನನ್ನಲ್ಲಿ ಇದೆ ಬಾ ನನ್ನ ಮುದ್ದಿನ ರಾಣಿ

ಹಾಡೂ

===***====***===

ಮೂರನೇ ದೃಶ್ಯ

–: ಶ್ರೀಮಂತರ ಮನೆ :–

ಗಂಗಾ : ದೇವಾ ! ದೀನರ ಬಂಧು, ಅನಾಥ ರಕ್ಷಕನೆಂದು ಮೂರು ಲೋಕಗಳಲ್ಲಿಯೂ ಖ್ಯಾತಿಗೊಂಡಿರುವಿ ! ನಿನ್ನನ್ನು ಆತ್ಮ ವಿಶ್ವಾಸದಿಂದ ಪೂಜಿಸಿದ ಸದ್ಭಕ್ತರಿಗೆ ಬೇಡಿದ ವರ ಕೊಡುವ ವರ ಪ್ರದಾಯಕನೆಂದು ಮಹಾನ್ ಮಹಾನ ಯಷಿಗಳು, ಮುನಿಪುಂಗವರು ಸತ್ಯಶಿವಶರಣ ಶರಣೆಯರು ಅನನ್ಯ ಭಕ್ತಿಯಿಂದ ಭಜಿಸಿ ವರ ಪಡೆದಿದ್ದಾರೆ ಇಂಥ ಮಹಾ ಮಹಿಮಶಾಲಿಯಾದ ನಿನ್ನನ್ನು ದೃಢವಾಗಿ ನಂಬಿಕೊಂಡ ಈ ನಿನ್ನ ಭಕ್ತಳ ಮಾಂಗಲ್ಯಕ್ಕೆ ಮಹಾಪಾಯುಷ್ಯವಿರಲಿ ತಂದೆ.

ರವಿ : [ಹೊರಗಿನಿಂದ ಬರುತ್ತ] ಇದೇನು ಗಂಗಾ ! ಬೆಂಗಳೂರಿನ ವಿದ್ಯಾಮಂದಿರದಲ್ಲಿ ಉನ್ನತ ಮಟ್ಟದ ಪದವಿ ಪಡೆದು ಕೊಂಡು ಬಂದ ನೀನು, ಪುರಾತನ ಸ್ತ್ರೀಯರ ಪದ್ಧತಿಯಂತೆ ಪ್ರತಿದಿವಸ ಮುಂಜಾವದಲೆದ್ದು ಕರುಣಾ ಸಾಗರನಾದ ಪರಮೇಶ್ವರನನ್ನು ಪೂಜಿಸುವುದೊಂದೇ ನಿನ್ನ ಮೂಲ ಸಾಧನೆ ಯಾಗಿದೆಯಲ್ಲ?

ಗಂಗಾ : ಸ್ವಾಮಿ ಮಾನವ ಜೀವಿಯಾಗಿ ಜನ್ಮವೆತ್ತಿದ ವಿದ್ಯಾವಂತರೆ ಇರಲಿ ಅವಿದ್ಯಾವಂತರೆ ಇರಲಿ ಚಿರ ಸುಖಶಾಂತಿಗಳಿಗೆ ಸಂಬಂಧಿಸಿದ ಸುಜ್ಞಾನ ಕೊಡುವಂಥ ಭಕ್ತ ಸಾರ್ವಭೌಮನಾದ ಪರಮೇಶ್ವರನನ್ನು ಪೂಜಿಸಲೇ ಬೇಕು ಸ್ವಾಮಿ.

ರವಿ : ನಿಜ ಗಂಗಾ ! ಅಜ್ಞಾನವೆಂಬ ಅಂಧಕಾರದ ಕಗ್ಗತ್ತಲೆ ಹರಿಯಬೇಕಾದರೆ ಮೊದಲು ಜ್ಞಾನವೆಂಬ ಭುವನದಿಂದ ಸುಜ್ಞಾನವೆಂಬ ರವಿಯು ಉದಯಿಸಿ ಬಂದರೆ ಮಾತ್ರ ನಾವು ಆ ಅಮೂಲ್ಯವಾದ ಜ್ಞಾನದ ಬೆಳಕು ಕಾಣಲು ಸಾಧ್ಯ.

ಗಂಗಾ : ನಿಜ ಸ್ವಾಮಿ, ಆ ಅಮೂಲ್ಯವಾದ ಬೆಳಕಿನಲ್ಲಿಯೇ ನಾವು ಜೀವನದ ಆದರ್ಶವನ್ನು ಕಂಡುಂಡು ಪರರಿಗೂ ಉಣ್ಣಿಸಿ ಹಸಿದ ಒಡಲನ್ನು ತಣಿಸಿ ಬದುಕುವ ಬದುಕೇ ಸ್ವರ್ಗಮಯವಾಗದ್ದು.

ರವಿ : ಸತ್ಯವಿದೆ ಗಂಗಾ, ನೀನು ಹೇಳುವ ಮಾತು ನೂರಕ್ಕೆ ನೂರು ಸತ್ಯವಿದೆ ಈ ನಮ್ಮ ಆದರ್ಶದಾಂಪತ್ಯ ಜೀವನದ ಬದುಕು ನಂದನವನವಾಗಬೇಕು ಬಾಳು ಭವ್ಯವಾಗಬೇಕು ಉನ್ನತ ವಿಚಾರಗಳು ನಮ್ಮವಾಗಬೇಕು.

ಗಂಗಾ : ಸ್ವಾಮಿ !!

ರವಿ : ಹೌದು ಗಂಗಾ, ಈ ಪ್ರಪಂಚ ಎಂಬುವುದೊಂದು ದೊಡ್ಡ ಸಮುದ್ರ ಇದ್ದಹಾಗೆ ಅದರಲ್ಲಿ ದಾಂಪತ್ಯ ಜೀವನ ನೌಕೆ ಇದ್ದಂತೆ. ಆ ನೌಕೆಯ ಚಾಲಕನು ಪುರುಷನಾದರೂ ಸ್ತ್ರೀಯು ಅದರಲ್ಲಿ ಅರ್ಧ ಪಾಲ್ಗೊಳ್ಳುತ್ತಾಳೆ. ಮುಂದೆ ನೌಕೆ ಚಲಿಸಿದಂತೆ ಅದಕ್ಕೆ ಅಡೆ ತಡೆಯಂಬ ಅನೇಕ ತೆರೆಗಳು ಒಂದರ ಮೇಲೊಂದು ಧಾವಿಸಿ ಬಂದು ತಾಕಿದರೂ ಸಹಿತ ಅವುಗಳಿಗೆ ಅಂಜದೆ ಆಯುಷ್ಯವೆಂಬ ದಡಕ್ಕೆ ಮುಟ್ಟಿಸುವುದು ಆ ಉಭಯ ದಂಪತಿಗಳ ಕರ್ತವ್ಯ !

ಗಂಗಾ : ನಿಜ ತಾವು ಹೇಳಿದಂತೆ ಸಂಸಾರವೆಂಬ ದೋಣಿ ಸರಿಯಾಗಿ ಮುಂದೆ ಸಾಗಬೇಕಾದರೆ ಬಿಚ್ಚು ಮಾತು ನಿಚ್ಚಳ ವಿಚಾರ ಸ್ವಚ್ಛ ಮನಸ್ಸಿನಿಂದ ಉಚ್ಚ ಜೀವನದ ಪ್ರಗತಿಗಾಗಿ ಸತಿ–ಪತಿಗಳೆಂಬ ಎರಡು ಹುಟ್ಟುಗಳನ್ನು ಸಮವಾಗಿ ಹಾಕಿದರೆ ಮಾತ್ರ ಯಾವ ಆತಂಕವಿಲ್ಲದೆ ನಿರಾತಂಕವಾಗಿ ಬದುಕಿನ ಗುರಿ ಮುಟ್ಟಲಿಕ್ಕೆ ಸಾಧ್ಯ.

ರವಿ : ಕರೆಕ್ಟ ಗಂಗಾ ! ಸತ್ಯ, ಧರ್ಮ, ನ್ಯಾಯ, ನೀತಿ, ಪರೋಪಕಾರಗಳೆಂಬ ಪಂಚ ತತ್ವಗಳನ್ನು ಮೈಗೂಡಿಸಿಕೊಂಡ ಪತಿಯು ತನ್ನ ದೈವ ಸಂಕಲ್ಪದಂತೆ ಮರಣ ಪರಿಯಂತರ ಜೀವನ ಸಂಗಾತಿಯಾಗಿರಲು ಗುರು ಹಿರಿಯರ ಸಮ್ಮುಖದಲ್ಲಿ ಅಗ್ನಿ ದೇವರ ಸಾಕ್ಷಿಯಾಗಿ ಸಪ್ತಪದಿ ತುಳಿದು, ಕೊರಳಿಗೆ ಮಾಂಗಲ್ಯ ಕಟ್ಟಿಸಿಕೊಂಡ ಮಡದಿಯೊಂದಿಗೆ ಅನನ್ಯ ಪ್ರೀತಿಯಿಂದ ಸಾಗಿಸುವ ಬದುಕೇ ನ್ಯಾಯ ಸಮ್ಮತವಾದದ್ದು.

ಗಂಗಾ : ಹುಂ !! ನ್ಯಾಯ ಅನ್ಯಾಯವನ್ನು ಸಮಯೋಚಿತ ಬುದ್ಧಿವಂತಿಕೆಯಿಂದ ತೂಕ ತಪ್ಪದಂತೆ ತರ್ಕಿಸುವ ಸಾಮರ್ಥ್ಯವುಳ್ಳ ತಮ್ಮೊಂದಿಗೆ ಚರ್ಚಿಸುವ ಶಕ್ತಿ ನನಗುಂಟೆ?

ರವಿ : ಹಾಗಲ್ಲ ಗಂಗಾ ! ಸಂಸಾರವೆಂಬ ರಥಕ್ಕೆ ಪತಿಯು ತಾನು ಸಾರಥಿಯಾಗಿ, ಸತಿಯೆಂಬ ಕುದುರೆಯನ್ನು ಕಟ್ಟಿ, ಈ ಪ್ರಪಂಚವೆಂಬ

ಯುದ್ಧ ಭೂಮಿಗೆ ಬಂದಾಗ ಇಲ್ಲಿ ಅನೇಕಾನೇಕ ತೊಡುಕು ತೊಂದರೆಗಳು ಬರುವುದು ಸಹಜ, ಆದರೆ ಅವುಗಳಿಗೆ ಹೆದರದೆ ಬದುಕಿನಲ್ಲಿ ಬರುವ ಕಷ್ಟ ದುಃಖಗಳೆಲ್ಲಾ ತಾಳು, ಎಂಬ ಉದ್ದೇಶದಿಂದ ಕಟ್ಟಿದ ತಾಳಿಯ ತಾತ್ಪರಿಯವನ್ನರಿತು ಕೊಂಡು ನಡೆಯುವ ನಿನ್ನಂಥ ಗುಣ ಸಂಪನ್ನೆ ಹೆಂಡತಿಯನ್ನು ಪಡೆದುದ್ದು ನನ್ನ ಕೋಟಿ ಜನ್ಮದ ಪುಣ್ಯವೆಂದು ಕೋಟಿ ಸಲ ಹೇಳಿದರೂ ತಪ್ಪಾಗಲಾರದು.

ಗಂಗಾ : ಇದು ನಿಮ್ಮ ಪುಣ್ಯವಲ್ಲ ಸ್ವಾಮಿ, ಸದ್ಗುಣ ಸಂಪನ್ನರಾದ ನಿಮ್ಮ ಕೈ ಹಿಡಿದುದ್ದು ನನ್ನ ಪುಣ್ಯ ! ಇರಲಿ ಬನ್ನಿ ಹೊತ್ತಾಗಿದೆ ಊಟ ಮಾಡೋಣ.

ರವಿ : ಚಂದ್ರಲೋಕದ ಅಂಗಳದಲ್ಲಿ ಮಂಗಳ ಶಿಲೆಯಂತೆ ಕಂಗೊಳಿಸುವ ಶಿಲಾ ಬಾಲಕಿಯನ್ನೇ ನಾಚಿಸುವಂತ ಅನುಪಮ ಸೌಂದರ್ಯವತಿಯಾದ ನನ್ನ ಹೆಂಡತಿ ನನ್ನ ಎದುರಿಗಿದ್ದರೆ, ನನಗೆ ಊಟ ನೀರು ಯಾವುದು ಬೇಡವೆನ್ನಿಸುತ್ತದೆ.

ಗಂಗಾ : ಹಾಗಾದರೆ ನಿಮಗೇನು ಬೇಕೆನ್ನಿಸುತ್ತಿದೆ?

ರವಿ : ನಿನ್ನ ಮಧುರವಾದ ಮಂಜುಳ ಕಂಠದಿಂದ ಒಂದು ಮಧುರಗೀತೆ ಕೇಳಬೇಕೆನ್ನಿಸುತ್ತಿದೆ ಹೂಂ ಹಾಡು.

–: ಹಾಡು :–

[ಹಾಡು ಮುಗಿಯುತ್ತಲೆ ಗಂಗಾ ಒಳಗೆ ಹೋಗುವಳು ಹೊರಗಿನಿಂದ ಚಂದ್ರ ಬರುವನು]

ಚಂದ್ರ : ಅಣ್ಣಾ ! ಅಣ್ಣಾಜಿ !! ನಿಮ್ಮ ಆಶೀರ್ವಾದದಿಂದ ನಾನು ಬಿ.ಎ. ಫೈನಲ್ ಪರೀಕ್ಷೆಯ ಫಲಿತಾಂಶದಲ್ಲಿ ನಮ್ಮ ಕಾಲೇಜಿಗೆ ನಾನೇ ಫಸ್ಟ್ ರ್‍ಯಾಂಕ್ ಪಡೆದು ಪಾಸಾಗಿದ್ದೇನೆ [ಕಾಲಿಗೆ ಬೀಳುವನು]

ರವಿ : ಸಂತೋಷ ಕಣೋ ತುಂಬ ಸಂತೋಷ [ಎಬ್ಬಿಸುತ್ತ] ನನ್ನ ತಮ್ಮ ಇನ್ನೂ ಇದಕ್ಕಿಂತಲೂ ಹೆಚ್ಚಿನ ಪದವಿ ಪಡೆದು, ಈ ಸಮಾಜದಲ್ಲಿ ಒಬ್ಬ ಗೌರವಾನ್ವಿತ ವ್ಯಕ್ತಿಯಾಗಲೆಂದು ಜಗನ್ನಾಮಕನಾದ ಆ ಪರಮೇಶ್ವರನಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಚಂದ್ರ : ಸದಾ ನನ್ನ ಶ್ರೇಯಸ್ಸನ್ನೇ ಬಯಸುವ ದೇವ ಸ್ವರೂಪಿಗಳಾದ

ನಿಮ್ಮಂಥ ಅಣ್ಣ–ಅತ್ತಿಗೆಯನ್ನು ಪಡೆದದ್ದು ನನ್ನ ಕೋಟಿ ಜನ್ಮದ ಪುಣ್ಯವೆಂದೆ ಭಾವಿಸಿಕೊಂಡಿದ್ದೇನೆ.

ರವಿ : ಗಂಗಾ ! ಏ ಗಂಗಾ !! ಬಾರೆ ಇಲ್ಲಿ ಹೊರಗೆ ಯಾರು ಬಂದಿದ್ದಾರೆ ನೋಡು ಬಾರೆ.

ಗಂಗಾ : ಯಾರವರು? [ಹೊರಗೆ ಬಂದು] ಓ ಚಂದ್ರು ಯಾವಾಗ ಬಂದಿಯಪ್ಪ?

ಚಂದ್ರು : ಇನ್ನೂ ಇದೇ ಈಗತಾನೆ ಬಂದೆ ಅತ್ತಿಗೆಯಮ್ಮ ನಿಮ್ಮ ದಯಾಂತ ಕರುಣೆಯಿಂದ ನಾನು ಬಿ.ಎ. ಫೈನಲ್‌ನಲ್ಲಿ ರ್‍ಯಾಂಕ ಪಡೆದು ಪಾಸಾಗಿದ್ದೇನೆ ನನಗೆ ಆಶೀರ್ವಾದ ಮಾಡು ಅತ್ತಿಗೆ [ಎಂದು ಕಾಲಿಗೆ ಬೀಳುವನು].

ಗಂಗಾ : ವಿಶ್ವಾಧಿಪತಿಯಾದ ಪರಮೇಶ್ವರನು ನಿನಗೆ ಆಯುರಾರೋಗ್ಯ ಭಾಗ್ಯಗಳೊಂದಿಗೆ ಚಿರಾಯುಷ್ಯವನ್ನು ಕೊಟ್ಟು ಕಾಪಾಡಲಿ ಮೇಲೇಳು ಮೈದುನಾ [ಎಬ್ಬಿಸುವಳು].

ರವಿ : ನೋಡು ಕಣೇ ನಮ್ಮ ಚಂದ್ರು ಇಡೀ ಕಾಲೇಜಿನಲ್ಲಿಯೇ ರ್‍ಯಾಂಕ್ ಪಡೆದು ಪಾಸಾದ ವಿದ್ಯಾರ್ಥಿಯಾಗಿದ್ದಾನೆ.

ಗಂಗಾ : ಹೂಂ ಎಷ್ಟಾದರೂ ಅವನು ನಿಮ್ಮ ಒಡಹುಟ್ಟಿದ ತಮ್ಮನಲ್ಲವೇ? ಆಂ ಚಂದ್ರು ಬಾರಪ್ಪ ನೀನು ಪಾಸಾದ ವಿಷಯ ಕೇಳಿ ನನಗೆ ಹಿಡಿಸಲಾರದಷ್ಟು ಸಂತೋಷವಾಗಿದೆ ಬಾ. ಇದರ ನಿಮಿತ್ಯವಾಗಿ ನಿನ್ನ ಬಾಯಿಲ್ಲಿ ಪೇಡೆ ಹಾಕುತ್ತೇನೆ ತಡಿ [ಎಂದು ಒಳಗೆ ಹೋಗಿ ಪೇಡೆ ತಂದು ಬಾಯಿಯಲ್ಲಿ ಹಾಕುವಷ್ಟರಲ್ಲಿ].

ರವಿ : ಅಪಮಾನ ಕಣೆ, ಅಪಮಾನ ಶುದ್ಧ ಅಪಮಾನ ಕರ್ನಾಟಕ ರಾಜ್ಯದ ಹಿರಿಯ ಮಹಾ ವಿದ್ಯಾಲಯದಲ್ಲಿ ಉನ್ನತ ಸ್ಥಾನ ಪಡೆದು ಉತ್ತೀರ್ಣನಾಗಿ ಮನೆಗೆ ಬಂದ ಮೈದುನನಿಗೆ ಹೋಳಿಗೆ ಮಾಡಿ ಹೊಟ್ಟೆತುಂಬ ಉಣ್ಣಿಸುವುದನ್ನು ಬಿಟ್ಟು ಬಜಾರದಿಂದ ತಂದ ಪೇಡೆ ಬಾಯಿಯಲ್ಲಿ ಹಾಕಿದರೆ ಆ ಒಲವಿನ ಹೋಳಿಗೆಗೂ ಅಪಮಾನ !

ಗಂಗಾ : ಒಳ್ಳೆಯದಪ್ಪ ಮೈದುನಾ ! ಸಧ್ಯ ಈ ಪೇಡೆಯನ್ನೇ ಬಾಯಲ್ಲಿ ಹಾಕಿಕೊಳ್ಳಿ, ನಂತರ ನಿಮ್ಮಣ್ಣಾಜಿಯವರು ಹೇಳಿದಂತೆ ಹೋಳಿಗೆ ಮಾಡಿ ಹೊಟ್ಟೆತುಂಬ ಉಣಬಡಿಸುತ್ತೇನೆ, ಹೂಂ ಬಾಯಿ ತೆರಿ

[ಎಂದು ಬಾಯಿಯಲ್ಲಿ ಪೇಡೆ ಹಾಕುವಳು]

ಚಂದ್ರು : ಅತ್ತಿಗೆ ನನ್ನ ಹೆತ್ತ ತಾಯಿಯನ್ನು ಕಳೆದು ಕೊಂಡು ಇಂದಿಗೆ ಹನ್ನೆರಡು ವರ್ಷಗಳು ಗತಿಸಿ ಹೋದವು, ಆದರೆ ಅಂದು ಆ ನನ್ನ ಮಾತೋಶ್ರೀಯವರಲ್ಲಿ ಕಂಡ ಮಾತೃವಾತ್ಸಲ್ಯ ಪುನಃ ಇಂದು ತಮ್ಮಿಂದ ಕಾಣುವ ಭಾಗ್ಯಕಂಡೆ.

ಗಂಗಾ : ಇದೇನು ಹೇಳುತ್ತಿರುವಿ ಚಂದ್ರು?

ಚಂದ್ರು : ಸತ್ಯವನ್ನೇ ಹೇಳುತ್ತಿದ್ದೇನೆ ಅತ್ತಿಗೆ, ಮೈದುನಾ ನಾದನಿಯರು ತಮ್ಮ ಮಕ್ಕಳ ಸಮಾನವೆಂಬ ಭಾವನೆಯನ್ನು ಅರಿಯದೆ, ಅವರನ್ನು ಕಾಲಸರ್ಪದಂತೆ ಕಾಣುವ ಇಂದಿನ ಈ ಮಹಿಳಾ ಸಮಾಜದಲ್ಲಿ ಮೈದುನನಾದ ನನ್ನನ್ನು ನಿಮ್ಮ ಹೊಟ್ಟೆಯಿಂದ ಹುಟ್ಟಿದ ಮಗನಿಗಿಂತಲೂ ಹೆಚ್ಚಿನ ಮಮತೆಯಿಂದ ನೋಡಿಕೊಳ್ಳುವ ನೀವು ನಿಜಕ್ಕೂ ಆ ದೇವ ಮಾನವಳೇ ಸರಿ.

ಗಂಗಾ : ಇದೇನು ಚಂದ್ರು, ಈ ಮನೆಯ ಒಡತಿಯಾಗಿದ್ದ ನನ್ನ ಅತ್ತೆ ಇನ್ನೂ ಕೆಲವು ದಿವಸ ಬದುಕಿದ್ದು ನಮ್ಮ ಸೇವೆ ಪಡೆಯುತ್ತ ನಮಗೆ ಮಾರ್ಗದರ್ಶನ ಮಾಡುತ್ತ ಇರಬೇಕಾದ ಅವರು ತಮ್ಮ ದೈವ ನಿರ್ಣಯದಂತೆ ಸ್ವರ್ಗಸ್ಥರಾಗಿ ತಮ್ಮ ಕೆಲವು ಜವಾಬ್ದಾರಿಗಳು ನನ್ನ ಪಾಲಿಗೆ ಬಿಟ್ಟು ಹೋದಾಗ ನಾನು ಆ ಹೊಣೆ ಪಾಲಿಸಿದ ಮಾತ್ರಕ್ಕೆ ಒಮ್ಮೆ ನೀ ದೇವ ಮಾನವಳೆಂದು ನನ್ನನ್ನು ಆ ದೇವತೆಗಳ ಸಾಲಿನಲ್ಲಿ ಸೇರಿಸಿ ಬಿಟ್ಟೆಯಲ್ಲ?

ಚಂದ್ರು : ತಪ್ಪೇನಿಲ್ಲ ಅತ್ತಿಗೆ ತಪ್ಪೇನಿಲ್ಲ ! ಮೈದುನನಾದ ನನಗೆ ತಾವು ನನ್ನ ತಾಯಿಯ ಸ್ಥಾನದಲ್ಲಿ ನಿಂತು, ಹಸಿದಾಗ ಅನ್ನವನ್ನು ಕೊಟ್ಟು ಮಾಸಿದಾಗ ಬಟ್ಟೆ ಒಗೆದು ಸ್ವಚ್ಛಗೊಳಿಸಿ, ನನಗೆ ಉಚ್ಚ ಮಟ್ಟದ ಉಪದೇಶ ಕೊಟ್ಟ ನೀವು, ನಿಜವಾಗಿಯೂ ನನ್ನ ಪಾಲಿಗೆ ಆ ದೇವ ಮಾನವಳೇ ಹೌದು.

ರವಿ : ಇದೇನೋ ಚಂದ್ರ, ನಿನ್ನ ಅತ್ತಿಗೆ ದೇವ ಮಾನವಳಾದರೆ ನಾನು ಮಾನವ ದಾನವನೆಂದು ತಿಳ್ಕೊಂಡಿಯೇನೋ?

ಚಂದ್ರು : ಇಲ್ಲಣ್ಣ ! ನಿಜವಾಗಿಯೂ ನೀವು ಮೂರು ಜನ ನನ್ನ ಪಾಲಿಗೆ ದೇವತೆಗಳೆ ನಿಜ, ನಿಮ್ಮ ಸೇವೆ ಮಾಡುವುದೇ ನನ್ನ ಆದ್ಯ ಕರ್ತವ್ಯ.

ಆ ಗಿರಿಜಾಶಂಕರನ ಸೇವೆಗಿಂತಲೂ ತಮ್ಮಪಾದ ಸೇವೆಯೇ ನನಗೆ ಮುಕ್ತಿ ಮಂದಿರ

–: ಹಾಡು :–

[ಹೊರಗಿನಿಂದ ಸುರೇಂದ್ರ ಬರುವನು]

ಸುರೇಂದ್ರ : ಇದೇನೋ ರವಿ–ಚಂದ್ರ ಉಭಯ ಸಹೋದರರು ಬಹು ಸಂತೋಷದಲ್ಲಿ ಸೇವಾ ಭಾವದೊಂದಿಗೆ ಮುಕ್ತಿ ಮಂದಿರಕ್ಕೆ ಅಡಿಪಾಯ ಹಾಕ ತೊಡಗಿದಿರೆಲ್ಲ?

ಚಂದ್ರು : ಹೌದು ಅಣ್ಣಾಜಿ ಹಿಂದೆ ರಾಮಾಯಣದಲ್ಲಿ ಶ್ರೀರಾಮ ಸೀತೆಯ ಸೇವೆ ಲಕ್ಷ್ಮಣನಿಗೆ ಮೀಸಲಾದಂತೆ ನಿಮ್ಮ ಮೂರು ಜನರ ಸೇವೆ ಸದಾ ನನಗೆ ಮೀಸಲಾಗಿರಲೆಂದು ಬಯಸುತ್ತೇನೆ.

ಸುರೇಂದ್ರ : ಸಂತೋಷವಾಯ್ತು ತಮ್ಮ, ಸಂತೋಷವಾಯಿತು. ಅಣ್ಣ ಅತ್ತಿಗೆಯರ ಮೇಲಿಟ್ಟಿರುವ ನಿನ್ನ ಭಕ್ತಿ ಭಾವನೆಯ ನುಡಿ ಕೇಳಿ ನನಗೆ ಅತ್ಯಂತ ಸಂತೋಷವಾಯಿತು.

ಚಂದ್ರು : ಅಣ್ಣಾಜಿ !!

ಸುರೇಂದ್ರ : ಹೌದು ಚಂದ್ರು ! ಅಣ್ಣ ಅತ್ತಿಗೆಯವರು ಹೆತ್ತವರೆಂಬ ಭಾವನೆಯನ್ನು ಅವಲಂಬಿಸಿಕೊಂಡು ಏಕೋ ಭಾವದಿಂದ ನಡೆದುಕೊಳ್ಳುವ ನಿನ್ನಂಥ ಮಗನಿಗೆ ಜನ್ಮಕೊಟ್ಟ ನಮ್ಮ ತಾಯಿಯ ಉದರ ಸಾರ್ಥಕವಾಯಿತು.

ಚಂದ್ರ : ಇನ್ನೊಂದು ವಿಷಯ ಅಣ್ಣಾಜಿ

ಸುರೇಂದ್ರ : ಏನಪ್ಪ ಅದು?

ಚಂದ್ರು : ನಾನು ತಮ್ಮೆಲ್ಲರ ಕೃಪೆಯಿಂದ ಬಿ.ಎ ಫೈನಲ್ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದು ಪಾಸಾಗಿರುವೆ ಆಶೀರ್ವಾದ ಮಾಡಣ್ಣ [ಎಂದು ಕಾಲಿಗೆ ಬೀಳುವನು]

ಸುರೇಂದ್ರ : ಬಹಳ ಸಂತೋಷ ಚಂದ್ರು ! ಸಧ್ಯ ನಿನ್ನ ಹೃದಯಾಂತರಾಳದಲ್ಲಿ ಮನೆ ಮಾಡಿಕೊಂಡಿರುತ ರೀತಿ, ನೀತಿ, ವಿವೇಕ, ಜ್ಞಾನ ಇವು ಕೊನೆಯವರೆಗೂ ನಿನ್ನ ಬದುಕಿಗೆ ದಾರಿ ದೀಪಗಳಾಗಿ ಈ ಸಮಾಜಕ್ಕೆ ಅವು ಆದರ್ಶ ಪ್ರಾಯಗಳಾಗಿ ಉಳಿದು, ನಿನ್ನ ಘನತೆ ಗೌರವಕ್ಕೆ ರಕ್ಷಾಕವಚವಾಗಿ ಉಳಿಯಲೆಂದು ಹರಿಸುತ್ತೇನೆ.

ರವಿ : ಅಣ್ಣಾಜಿ ! ಹೇಗಾದರೂ ಮಾಡಿ ನನ್ನ ತಮ್ಮನಿಗೆ ಪಿ.ಎಸ್.ಐ. ನೌಕರಿ ಕೊಡಿಸಬೇಕು ಈ ವಿಷಯ ಕುರಿತು ಮಾನ್ಯ ಮಂತ್ರಿಗಳಿಂದ ರೆಕ್ಮಂಡ್ ಮಾಡಿಸು ಅಂತ ರಮೇಶನಿಗೆ ತಿಳಿಸಣ್ಣ ಅದಕ್ಕೆ ಎಷ್ಟೇ ದುಡ್ಡು ಖರ್ಚಾಗಲಿ ನಾನು ಕೊಡ್ತೀನಿ.

ಸುರೇಂದ್ರ : ಸರಿಯಪ್ಪ, ನಾನೇನು ಹೇಳದಾದ ಅದು ಖಂಡಿತ ಹೇಳ್ತಿನಿ. ಆದರೆ ಅವನ ದೈವ ಹೇಗಿದೆಯೋ ಯಾರಿಗೆ ಗೊತ್ತು ಮಾಡುವ ಪ್ರಯತ್ನವಂತೂ ಮಾಡೋಣ ಮುಂದಿಂದು ಪ್ರಾರಬ್ದಕ್ಕೆ ಬಿಟ್ಟಿದ್ದು.

ಗಂಗಾ : ನಡಿಯಿರಿ ಊಟದ ಹೊತ್ತಾಯ್ತು, ಮೊದಲು ಊಟಮಾಡಿ ಆ ಮೇಲೆ ಮಾತಾಡುವಿರಂತೆ ನಡ್ರಿ !

ಸುರೇಂದ್ರ : ಹೌದು ನಡ್ರೆಪ್ಪಾ ನಿಮ್ಮ ಅತ್ತಿಗೆ ಹೇಳಿದ ಹಾಗೆ ಮೊದ್ಲು ಊಟ ಮಾಡೋಣ ಆ ಮೇಲೆ ಕುಳಿತು ಸಾಕಷ್ಟು ಮಾತಾಡೋಣ ಸಧ್ಯ ನಡ್ರಿ [ಒಳಗೆ ಹೋಗುವರು].

===***=====***===

ನಾಲ್ಕನೇ ದೃಶ್ಯ

ಜಂಗಲ್ ರಸ್ತಾ

ಕಾಳಿಂಗ : ನಾನೆಂದು ಕಲಬುರ್ಗಿ ವಿಶ್ವವಿದ್ಯಾಲಯಕ್ಕೆ ಕಾಲಿಟ್ಟೆ ಅಂದೇ ಅನುಪಮ ಸೌಂದರ್ಯ ವತಿಯಾದ ಆ ಜಮುನಳ ಮೇಲೆ ಕಣ್ಣಿಟ್ಟೆ, ಏನವಳ ರೂಪರಾಶಿ, ಬೆಡಗುಬಿನ್ನಾಣದರಮನೆಯಲ್ಲಿ ಶೃಂಗಾರದೇ ಕಾಂತದಲ್ಲಿ ಬ್ರಹ್ಮ ಸರಸ ಕೇಳಿಯೋಳಿರಲು, ಹಿಮಾಂಶದಲ್ಲಿ ಇಣುಕಿ, ಅವನಂ ಪಿಡಿದು ಷೋಡಸ ಕಲಾರಸವಂ ಸ್ವಾದಿಸಿ, ಸರಸ್ವತಿಯಿಂ ರೂಪಗೊಳಿಸಿ, ರೋಮ ರೊಮದಿಂ ಹರ್ಷಮಂಗೊಂಡು ಅವಳನ್ನು ನಿರ್ಮಿಸಿದನೆ? ಇಲ್ಲವೇ ಸಚೇತನೆಯಂ ತುಂಬಿದ ಮಾಯಾಯಣುವಂ ಬಿಡದೆ ತನ್ನ ಉದರ ಪಿಂಡದಿ ಗರ್ಭವೆತ್ತ ಭಾರತಿ ಅವಳಂ ಹೆತ್ತಳೆ? ಹುಂ !! ಯಾವ ಸುರಶಿಲ್ಪಿ ಅವಳಂ ನಿರ್ಮಿಪಬಲ್ಲ ! ಆವ ವರಕವಿ ಅವಳಂ ಬಣ್ಣಿಪ ಬಲ್ಲ, ಸಾಧ್ಯವಿಲ್ಲ ಯಾವ ಕವಿಯ ಕಲ್ಪನೆಗೂ ಎಟುಕದ ಸುರ–ಸುಂದರಿ ಅವಳು.

ಜಮುನಾ : [ಬರುತ್ತಾ] ಹಾಯ್ ಮೈಡಿಯರ್ ಕಾಳಿಂಗರಾವ್ ಮನೆಯಿಂದ ಆದಷ್ಟು ಬೇಗ ಬರಬೇಕೆಂದು ನಾನೆಲ್ಲ ಸಾಕಷ್ಟು ಪ್ರಯತ್ನ ಮಾಡಿದೆ ಆದರೂ ಕೆಲವು ಕಾರಣಾಂತರದಿಂದ ಸ್ವಲ್ಪ ವಿಳಂಬವಾಯ್ತು, ತಾವು ಇದುವರೆಗೂ ನನ್ನ ನಿರೀಕ್ಷಣೆಯಲ್ಲಿ ನಿರತರಾಗಿ ತುಂಬಾ ಬೇಸರಗೊಂಡಿರ ಬಹುದಲ್ಲವೆ?

ಕಾಳಿಂಗ : [ಅವಳ ಭುಜದ ಮೇಲೆ ಕೈಹಾಕಿ] ಬೇಸರ? ಹುಂ !! ಯಾರಿಗೆ? ನನಗೆ ನಿನ್ನಿಂದ ಬೇಸರವೇ? ಛೇ, ಚೇ, ಹಾಗೇನಿಲ್ಲ ಜಮುನಾ, ಕಡು ಬೇಸಿಗೆಯ ಕಾಲದಲ್ಲಿ ಬಾಯಾರಿಕೆಯಿಂದ ಬಳಲಿ ಬಂದವನಿಗೆ ತಂಪಾದ ನೀರು ಸಂಪಾದ ನೆರಳು ಇಂಪಾದ ಗೀತೆಯೊಂದಿಗೆ ಸೌಂದರ್ಯದ ಸೊಬಗಿನ ವನದೇವತೆ ಬಂದು ಅವನ ಬಳಿ ಕುಂತಾಗ, ಅವನಿಗೆ ಸ್ವರ್ಗ ಸುಖ ಸಿಕ್ಕಂತಲ್ಲವೆ? ಆ ತೆರದಿ ತುಂಬು ಯೌವನದ ಸುಂದರ ತರುಣಿ ನೀನಾಗಿ, ಕರೆದಾಗ ಬಂದು ಕೇಳಿದ್ದನೆಲ್ಲ ಕೊಡುವ ಮುದ್ದು ಮುಖದ ನನ್ನ ಮನ ದೇವತೆ ನೀನು ನನಗಾಗಿ ಬರುತ್ತಿರುವಾಗ ನನಗೇತರ ಬೇಸರ?

ಜಮುನಾ : ಆ ಹ ಹಾ ಇದೇನು ಡಿಯರ್, ವರ ಕವಿಗಳಂತೆ ಒಮ್ಮೆ ಸಾಹಿತ್ಯದ ಸುರಿ ಮಳೆಯನ್ನೇ ಸುರಿಸತೊಡಗಿದಿರೆಲ್ಲ? ಈ ನಿಮ್ಮ ದೃಷ್ಟಿಯಲ್ಲಿ ನಾನಷ್ಟು ಅಪ್ರತಿಮ ಸೌಂದರ್ಯದ ಸಿರಿ ರಾಣಿಯಾಗಿ ಕಾಣುತ್ತಿದ್ದೇನೆಯೆ.

ಕಾಳಿಂಗ : ಛೇ, ಬರೇ ನೀನು ಸೌಂದರ್ಯದ ಸಿರಿರಾಣಿಯಾಗಿ ಅಷ್ಟೇ ಅಲ್ಲ, ಶೃಂಗಾರದ ಸೀರೆಯನ್ನುಟ್ಟು, ಅಂದವಾದ ಆಭರಣಗಳನ್ನಿಟ್ಟು, ಹಣೆಯಮೇಲೆ ಮಂಗಳ ಕರವಾಗಿ ಹೊಳೆಯುವ ಸಿಂಧೂರ ತಿಲಕವನ್ನಿಟ್ಟು, ಹಚ್ಚು ಹಸುರಿನ ಬನದಲ್ಲಿ ನಿಂತ ಈ ನಿನ್ನ ಆಕರ್ಶಕವಾದ ದೃಶ್ಯ ನೋಡಿದರೆ ಸಾಕ್ಷಾತ್ ಆ ಇಂದ್ರಲೋಕದ ಚಂದ್ರ ಶಿಲೆಯಂತೆ ಹೊಳೆಯುವ ರತಿರಂಭೆ ನೀನು.

ಜಮುನಾ : ಇದೇನು ಹೇಳುತ್ತಿರುವಿ ಕಾಳಿಂಗ.

ಕಾಳಿಂಗ : ಸತ್ಯವನ್ನೇ ಹೇಳುತ್ತಿದ್ದೇನೆ ಜಮುನಾ, ದೇವ ಲೋಕದ ಆ ಸುರಸುಂದರಿಯರ ಸಾಲಿನಲ್ಲಿ ನಿನ್ನನ್ನು ನಿಲ್ಲಿಸಿ, ಕಾಲ್ಬೆರಳಿಂದ ಹಿಡಿದು ಕೇಶರಾಶಿಯ ವರೆಗೂ ಸರ್ವಾಂಗ ಪರಿಶೀಲಿಸಿದರೆ ಆ ಎಲ್ಲಾ ದೇವರಕನ್ಯೆಯರಿಗಿಂತಲೂ ಅತಿ ಸುಂದರವಾಗಿ ಕಾಣುತ್ತಿದೆ ಈ ನಿನ್ನ ಅಂಗಕಾಂತಿ.

ಜಮುನಾ : ಪ್ರಿಯಾ !

ಕಾಳಿಂಗ : ಹೌದು ಪ್ರಿಯೇ, ಆ ದೇವ ಕನ್ಯೆಯರ ರೂಪಕಿಂತಲೂ, ನಿನ್ನ ರೂಪ ಅಪರೂಪವಾದ ಕೌಶಲ್ಯವನ್ನು ತೋರುತ್ತಿದೆಯಲ್ಲದೆ, ಅದ್ಭುತವಾದ ಮೋಹದಾಯಕದ ಮಮತೆ ಹೊರಸೂಸುತ್ತ, ಚಲುವಿನ ಸೋಗಿನಲ್ಲಿ ನಿಂತಿದೆ. ಈ ನಿನ್ನ ಮುಗ್ಧ ಕೌತುಕದ ರೂಪಲಾವಣ್ಯ, ನಿಜವಾಗಿ ಒಂದೇ ಮಾತಿನಲ್ಲಿ ಹೇಳುವುದೆಂದರೆ, ನಿನ್ನ ರೂಪದ ಮುಂದೆ ಆ ದೇವಕನ್ನೆಯರ ರೂಪ ತೃಣಸಮಾನ !

ಜಮುನಾ : ಇದೇನು ಕಾಳಿಂಗರಾವ್ ನನ್ನ ರೂಪದ ಮುಂದೆ ಆ ದೇವ ಕನ್ಯೆಯವರ ರೂಪ ತೃಣಸಮಾನವೆಂದು ಹೇಳ್ತಾ ಇದ್ದೀರಿ? ಆದರೆ ನಾನು ಇನ್ನೂ ಇದಕ್ಕಿಂತಲೂ ಹೆಚ್ಚಿನ ಸೌಂದರ್ಯವತಿ ಯಾಗಬೇಕೆಂದು ಬಯಸಿದ್ದೇನೆ, ಆದರೆ ನನ್ನಂತೆ ಸೌಂದರ್ಯದ ಆಶೆ ನಿಮ್ಮಲ್ಲಿಯೂ ಇದ್ದಿರಬೇಕಲ್ಲವೆ?

ಕಾಳಿಂಗ : ಜಮುನಾ ! ಸ್ತ್ರೀಯರ ಹಾಗೂ ಪುರುಷರ ಆಶಾಕಾಂಕ್ಷೆಗಳಲ್ಲಿ ಭೂಮಿ–ಬಾನಿನಷ್ಟು ಮಹದಂತರವಿದೆ, ಪುರುಷರು ಜಗತ್ತಿಗೆ ನಾನೇ ದೊಡ್ಡವನಾಗಬೇಕೆಂದು ಬಯಸಿದರೆ, ಸ್ತ್ರೀಯರು ಇಡೀ ಜಗತ್ತಿನಲ್ಲಿಯೇ ನಾನೇ ಅಪ್ರತಿಮ ಸುಂದರಿಯೆಂದೆನಿಸಿ ಕೊಳ್ಳಬೇಕೆಂದು ಹಂಬಲಿಸುತ್ತಾಳೆ.

ಜಮುನಾ : ಅಂತೂ ಅಡ್ಡಿಯಿಲ್ಲ ! ಆಶು ಕವಿಗಳಂತೆ ಸಮಯ ಸಂದರ್ಭಕ್ಕೆ ತಕ್ಕ ಸಮರ್ಪಕ ನುಡಿ ಸೃಷ್ಟಿಸುವ ಚಾಣಾಕ್ಷತೆಯು ತಮ್ಮಲ್ಲಿ ಕಾರಂಜಿಯ ಬುಗ್ಗೆ ಯಾಗಿದೆ ಆಂ ಮೈ ಡಿಯರ್, ನಾನಂತೂ ತಮ್ಮನ್ನೇ ಮದುವೆಯಾಗಬೇಕೆಂದು ನಿರ್ಧರಿಸಿರುವೆ, ಇದಕ್ಕೆ ನಿಮ್ಮ ಅಭಿಪ್ರಾಯವೇನು?

ಕಾಳಿಂಗ : ನಿನ್ನ ನಿರ್ಧಾರವೇನು ಚನ್ನಾಗಿದೆ ಜಮುನಾ, ಆದರೆ

ಜಮುನಾ : ಇದೇನು ಕಾಳಿಂಗ ! ಸಂತಸದ ಈ ಸಮಯದಲ್ಲಿ ಆದರೆ ಎಂಬ ಅಪಸ್ವರವೇಕೆ? ನಿಮ್ಮನ್ನೆ ಮೆಚ್ಚಿ ಕುಳಿತ ನನ್ನ ವಿಷಯದಲ್ಲಿ ಇನ್ನೂ ನಿಮಗೆ ಅನುಮಾನವೆ?

ಕಾಳಿಂಗ : ಅನುಮಾನವೇನಿಲ್ಲ ಜಮುನಾ ! ನಮ್ಮೀರ್ವರ ಮಧ್ಯ ಈ ಸಮಾಜ ಒಂದು ಹಿರಿದಾದ ಗೋಡೆ ನಿರ್ಮಿಸಿದೆ, ಅದನ್ನು ದಾಟಲು ನನಗೂ ಕಷ್ಟ ನಿನಗೂ ಕಷ್ಟ

ಜಮುನಾ : ಅಂದರೆ ?

ಕಾಳಿಂಗ : ಅಂದರೆ, ನಮ್ಮಿಬ್ಬರ ಪ್ರೀತಿ ವಿಶ್ವಾಸಗಳು ಒಂದಾದರೂ ನನ್ನ ಮತ್ತು ನಿನ್ನ ಜಾತಿ ಬೇರೆ ಬೇರೆ ಇವೆ, ಇಲ್ಲಿ ಸಮಾಜ ನಮ್ಮನ್ನು ಬೇರ್ಪಡಿಸುತ್ತದೆ.

ಜಮುನಾ : ಪ್ರೀತಿ ಪ್ರೇಮಕ್ಕೆ ಜಾತಿಮತಗಳು ಆಸ್ತಿ ಅಂತಸ್ತುಗಳು ಬೇಕಾಗಿಲ್ಲ ಡಿಯರ್. ನಮ್ಮ ಮದುವೆಯ ವಿಷಯದಲ್ಲಿ ಈ ವಿಘ್ನ ಅಡ್ಡ ಬಂದರೆ ಅದನ್ನು ಹೆದರಿಸುವ ಸಾಮರ್ಥ್ಯ ನನಗಿದೆ, ಆದರೆ ನೀವು ಒಬ್ಬರು ಮದುವೆಗೆ ಒಪ್ಪಿದರೆ ಸಾಕು, ಮುಂದಿನ ಕೆಲಸ ನನಗಿರಲಿ.

ಕಾಳಿಂಗ : ಒಳ್ಳೆಯದು, ನನ್ನ ಹೃದಯೇಶ್ವರಿ, ಯಾವ ಕಾಲಕ್ಕೂ ಎಂಥ ವಿಷಯದಲ್ಲಿಯೂ ನಿನ್ನ ಇಚ್ಛೆಯನ್ನು ತುಚ್ಛೀಕರಿಸಲಾರೆನೆಂದು ನಾನು ನನ್ನ ಮನಬಿಚ್ಚಿ ಹೇಳುತ್ತೇನೆ, ಆಯಿತೆ?

ಜಮುನಾ : ಆ ಹ ಹಾ ಪ್ರೇಮದ ಕಾರಂಜಿ ಪುಟಿದು ಆ ಶರಧಿಯನ್ನು ಸೇರುವ ನದಿಯಂತೆ ಹರಿದು, ಆತುರದಿ ಈ ನನ್ನ ಮನ ನಿಮ್ಮ ಮೋಹಾಂಬುದಿಯಲ್ಲಿ ಮುಳುಗಿ ಹೋಯಿತು.

–: ಹಾಡು :–

ಜಮುನಾ : ನೋಡಿ ನಾನು ನನ್ನ ಗೆಳತಿಯರ ಮನೆಗೆ ಹೋಗಿ ಬರುತ್ತೇನೆಂದು ನೆಪಹೇಳಿ ನಾನಿಲ್ಲಿಗೆ ಬಂದೆ. ಸರಿ ಹೊತ್ತಾಯಿತು ನಾನಿನ್ನು ಬರ್ತೀನಿ. ನಮ್ಮ ಮದುವೆಯ ವಿಷಯದ ಬಗ್ಗೆ ನೆನಪಿರಲಿ, [ಹೋಗುವಳು].

ಕಾಳಿಂಗ : ಪರವಾ ಇಲ್ಲ, ಹೋಗಿ ಬನ್ನಿ ಆ ವಿಷಯ ಕುರಿತು ನೀನೇನು ಚಿಂತಿಸಬೇಡ ಹುಂ !! [ನಕ್ಕು] ಪಾಪ ನನ್ನನ್ನು ದೇವರೆಂದೇ ನಂಬಿಕೊಂಡಿದ್ದಾಳೆ, ಆದರೆ ನಂಬಿದವರಿಗೆ ಅಪನಂಬಿಕೆ ಬಗೆಯುವ ನನ್ನಂತರಂಗದ ಗುಣ ಇವಳಿಗೇನು ಗೊತ್ತು ಹುಂ !! ಯೌವ್ವನಕ್ಕೆ ಬಲಿಯಾಗಿ ಬಳಲುವ ಇಂಥ ಹೆಣ್ಣುಗಳನ್ನು ಬೇಟೆ ಆಡುವುದೇ ಈ ಬೇಟೆಗಾರನ ಮೂಲ ಕಾಯಕ ಜಮುನಾ ! ನಾನು ನಿನ್ನನ್ನು ಮದುವೆ ಯಾಗಬೇಕೆ? ಹುಚ್ಚಿ ! ಮದುವೆ ಎಂಬ ಮೂರಕ್ಷರದ ಮಂತ್ರವನ್ನು ಕಿವಿಯಲ್ಲಿ ಊದಿ ನಿನ್ನಂಥ ಅದೆಷ್ಟೋ ಹೆಂಗಳೆಯರ ಬಾಳು ಹೆಣವಾಗಿ ಮಾಡಿದ್ದೇನೆ. ಅಂದಮೇಲೆ ನಿನ್ನದೇನು ಮಹಾ! [ನಗುತ್ತ ಹೋಗುವನು].

[ಇದೇ ದಾರಿಗೆ ಶ್ರೀಮಂತ ಬಗಲಿಗೆ ಚೀಲ ಹಾಕಿಕೊಂಡು ಬಂದ್ರು]

ಶ್ರೀಮಂತ : ಛೇ, ಛೇ, ಹೆಣ್ಣು, ಹೊನ್ನು, ಮಣ್ಣು, ಈ ಮೂರು ವಸ್ತು ಒಲಿಯಬೇಕಾದ್ರ ಪೂರ್ವಾರ್ಜಿತ ಪುಣ್ಯಬೇಕು ಅಂತ ಹಿರಿಯರು ಹೇಳೋ ಮಾತು ಸತ್ಯ ಆದ ಬಿಡ್ರಿ ! ನಾನು ಮುನ್ನೂರ ಮುವ್ವತ್ತು ಹಳ್ಳಿ ಸುತ್ತಿದರೂ ಒಂದು ಒಳ್ಳೆ ಹೆಣ್ಣು ಸಿಗಲಿಲ್ಲ. ಇನ್ನು ಸಿಕ್ಕ ಹೆಣ್ಣುಗಳನ್ನು ಮದುವೆ ಮಾಡ್ಕೋಬೇಕಂದ್ರ ಸರಕಾರಿ ನೌಕರಿ ಇದ್ರ ಮಾತ್ರ ಮಾಡ್ಕೋಂತೀವಿ ಅಂತ ಹೇಳ್ತಾರ, ಅಲ್ರಿ ಬರೇ ಸರಕಾರಿ ನೌಕರಿ ಇದ್ದವರ್ನಾ ಮಾಡ್ಕೊಂಡ್ರ ನಮ್ಮಂಥ ನೌಕರಿ ಇಲ್ಲದವರು ಹಾಗೆ ಇರಬೇಕೇನು? ಹುಚ್ಚು ಜನ ನೌಕರಿ ಇದ್ದವರು ಬ್ಯಾರೆ ಮಾಡ್ತಾರ ನಾವು ಬ್ಯಾರೆ ಮಾಡ್ತೀವೇನು? ಎಲ್ಲರೂ ಮಾಡೋದು ಒಂದೇ ಸಂಸಾರ [ಅತ್ತನೋಡಿ] ಓ ಹೋ ಯಾವುದೋ ಗಿರಾಕಿ ಬಂದಾಗ ಬಂತಲ್ಲ ಬರ್ಲಿ ಬರ್ಲಿ [ಡಿಕ್ಕಿ

ಹೊಡೆಯುವನು].

ಭಾಗ್ಯವಂತ : ಲೇ ಲೇ ಯಾವನಲೇ ಮಂಗ್ಯಾನ ಮಗನೆ, ಹಾದಿಗುಂಟ ಹೋಗಿ ಬರುವ ನನ್ನಂಥ ವೃದ್ಧ ಸುಂದರ ಸುಕುಮಾರನಿಗೆ ಡಿಕ್ಕಿ ಹೊಡೆಯುವ ಚಟ ಆದ ಅಂದಬಳಿಕ ನೀನೂ ಅವನೇ ಇದ್ದಾಂಗ ಕಾಣ್ತಾದ, [ಚಪ್ಪಾಳೆ ಬಾರಿಸಿ ತೋರಿಸುವನು].

ಶ್ರೀಮಂತ : ನನ್ನ ನೀವು ಯಾರಂತ ತಿಳ್ಕೊಂಡ್ರಿ?

ಭಾಗ್ಯವಂತ : ಅದೆಲೇ ತಮ್ಮ ! ಮೈಮ್ಯಾಲ ಸೀರಿಉಟ್ಟು ಕೈಯಾಗ ಚೌಡಿಕಿ ಹಿಡ್ಕೊಂಡು ಎಲ್ಲಿ ಕಾಣೆಲ್ಲಿ ಕಾಣೆ, ಯಲ್ಲಮನಂಥಕಿನ ಎಲ್ಲಿ ಕಾಣೆ ಎಲ್ಲಿ ಕಾಣೆ ಅಂತ ಹಾಡುವ ಗಂಡು ಜೋಗಿಯಂತ ತಿಳ್ಕೊಂಡೀನಿ.

ಶ್ರೀಮಂತ : ಏಯ್ ಮಾವ, ನೀವು ತಪ್ಪು ತಿಳ್ಕೊಂಡ್ರಿ.

ಭಾಗ್ಯವಂತ : ಮಾವ? ಈ ಶಬ್ಧ ನಾನೆಲ್ಲೋ ಕೇಳಿದಂಗಾಗ್ಯಾದಲ್ಲಾ?

ಶ್ರೀಮಂತ : ಅದೇ ಉದಯ ಟೀವಿಯಲ್ಲಿ ಕೇಳಿರಬೇಕು.

ಭಾಗ್ಯವಂತ : ಉದಯ ಟೀವಿ ಅಲ್ಲಪ್ಪೋ ಜೋಗಪ್ಪ ! 'ಇದು ಹೈದ್ರಾಬಾದ್ ಬಸ್‌ಸ್ಟ್ಯಾಂಡಿನ್ಯಾಗ ಕೇಳಿದ್ನಿ ಅಂದ ಬಳಿಕ ನೀನು ಆ ಹೈದ್ರಾಬಾದಿನ ಹೌದೇನು ?

ಶ್ರೀಮಂತ : ರೀ ಯಜಮಾನ್ರೇ ದಯವಿಟ್ಟು ಪೂರ್ತಿ ನನ್ನ ಮಾತು ಕೇಳ್ರಿ ! ನೋಡಾಗ ಈ ಊರಿಗೆ ನೀವೇ ಅತಿ ದೊಡ್ಡ ಮನುಷ್ಯರು ಅಂತ ಕಾಣ್ತೀರಿ ಅದ್ಕಾ ನಾನು ನಿಮ್ಮಲೊಂದು ಮಾತು ಕೇಳಬೇಕಂತ ಮಾಡಿನಿ.

ಭಾಗ್ಯವಂತ : ಅದೇನು ಕೇಳ್ತಿ ತಮ್ಮ ಕೇಳು? ಈ ಊರಾಗ ನನ್ನ ಬಿಟ್ರೆ, ಬೇರೆ ಯಾರು ದೊಡ್ಡವರೇ ಇಲ್ಲ, ಹೂಂ ಕೇಳು ಏನದು?

ಶ್ರೀಮಂತ : ಈ ಊರಾಗ ಭಾಗ್ಯವಂತ ಎಂಬ ಹೆಸರಿನ ಒಬ್ಬ ದೊಡ್ಡ ಬದ್ಮಾಸ್ ಆನ, ಆ ಕಳ್ಳ ಬಡ್ಡಿ ಬದ್ಮಾಸ್ ನನಮಗ ನಿಮಗ ಗೊತ್ತಾನೇನ್ರಿ?

ಭಾಗ್ಯವಂತ : ಯಾರು? ಭಾಗ್ಯವಂತ್ನಾ?

ಶ್ರೀಮಂತ : ಹೌದ್ರಿ ! ಅವನು ಹೆಸರಿಗೆ ಮಾತ್ರ ಭಾಗ್ಯವಂತ ! ಸ್ಥಿತಿಯಲ್ಲಿ ಮಹಾದರಿದ್ರ ನನಮಗ ಅವನು ನಿಮಗೆ ಗೊತ್ತಾನೇನ್ರಿ?

ಭಾಗ್ಯವಂತ : ಗೊತ್ತಾನ ತಮ್ಮ ಗೊತ್ತಾನ, ಅಂದಹಾಗೆ ನೀನು ಯಾರು ಅಂತ ನನಗ ಗೊತ್ತಾಗಿಲ್ಲ?

ಶ್ರೀಮಂತ : ನಾನು ಯಾರೆಂಬುದು ಆ ಕತ್ತಿ ನನಮಗ ಭಾಗ್ಯವಂತ ಸಿಕ್ಕಾಗ ತಾನೆ ಗೊತ್ತಾಗ್ತಾದ ಹೇಳ್ರಿ ಎಲ್ಲಿ ಆ ಬದ್ಮಾಸ್ ನನಮಗ?

ಭಾಗ್ಯವಂತ : ಆ ಬದ್ಮಾಸ್ ಭಾಗ್ಯವಂತ ಬೇರೆ ಯಾರೂ ಅಲ್ಲ ಆ ನನಮಗ ನಾನೆ.

ಶ್ರೀಮಂತ : ಯಾರು ನೀವೆ? ಮಾಮ ನಾನು ನಿನ್ನ ಕಾಲಿಗೆ ಬಿದ್ದೆ ಯಾರೂ ನೋಡದಾಂಗ ಮೇಲಕ್ಕೆ ಎದ್ದೆ, ದಯವಿಟ್ಟು ನನ್ನ ಕ್ಷಮಿಸು ಮಾಮ,

ಭಾಗ್ಯವಂತ : ಆಂ ಮತ್ತ ನನಗ ಮಾವ ಅಂತಿಯಲ್ಲಲೇ?

ಶ್ರೀಮಂತಿ : ಅಲ್ಲಾ, ಮಾವನಿಗೆ ಮಾವ ಅನ್ನೋದು ಬಿಟ್ಟು ಮತ್ತೇನು ಅನ್ನಂದಿ ಮಾಮ !

ಭಾಗ್ಯವಂತ : ಲೇ ನಾನ್ಯಾಂಗ ನಿನಗ ಮಾವ ಆಗ್ತೀನೆಲೆ? ನೀನು ನಮಗ ಹತ್ತಿದವನೂ ಅಲ್ಲ, ಹೊಂದಿದವನೂ ಅಲ್ಲ, ಆ ಕಡೆ ನಮ್ಮಪ್ಪನ ದೋತ್ರಕ್ಕೂ ಹತ್ತಿಲ್ಲ, ಈ ಕಡೆ ನಮ್ಮವ್ವನ ಸೀರಿಗೂ ಹತ್ತಿಲ್ಲ, ಅಂದ ಬಳಿಕ ನಾಹ್ಯಾಂಗ ನಿನಗ ಮಾವ ಆಗ್ತೀನಿ?

ಶ್ರೀಮಂತ : ನಿಮ್ಮಪ್ಪನ ದೋತ್ರಕ, ನಿಮ್ಮವ್ವನ ಸೀರಿಗಿ ಹತ್ತದಿದ್ರ ಏನಾಯಿತು ಮಾವ, ನಾನು ಖಾಸಾ ಖಾಸಾ ನಿನ್ನ ಹೆಂಡತಿಯ ಸೀರಿಗಿ ಹತ್ತಿನಿ.

ಭಾಗ್ಯವಂತ : ನನ್ನ ಹೆಂಡತಿಯ ಸೀರಿಗೆ ನೀ ಹ್ಯಾಂಗ ಹತ್ತಿದೆಲೆ?

ಶ್ರೀಮಂತ : ಇಲ್ಲೇ ಇದೆ ಮಾವ ಕರಮತ್ತು, ನಿನ್ನ ಹೆಂಡತಿಯ ತಮ್ಮ, ತಮ್ಮನ ಅಣ್ಣ, ಅಣ್ಣನ ಅಣ್ಣ, ಅವನೇ ದೊಡ್ಡಣ್ಣ ಆ ದೊಡ್ಡಣ್ಣನ ಮಗನೇ ನಾನು ದಡ್ಡಣ್ಣ, ಆದ್ರ ಶ್ರೀರಾಮ ಚಂದ್ರನಂತ ಈ ನನ್ನ ಮುಖಕ್ಕೆ ಮರುಳಾದ ನಿನ್ನ ಹೆಂಡತಿ, ಅರ್ಥಾತ್ ನನ್ನ ಸೋದರ ಅತ್ತೆ ನನಗ ಪ್ರೀತಿಯಿಂದ ಶ್ರೀಮಂತ ಅಂತ ಹೆಸರಿಟ್ಟು.

ಭಾಗ್ಯವಂತ : ಅಂತೂ ಅಡ್ಡಿಯಿಲ್ಲಲೇ ಶ್ರೀಮಂತ ನಿಂದು ಎಷ್ಟರs ಉದ್ದಾದಲೆ ಎಪ್ಪಾ ನಿನ್ನ ಹೆಸರು?

ಶ್ರೀಮಂತ : ಅದನ್ನೇನು ಕೇಳ್ತಿ ಮಾವ, ಇನ್ನೂ ಸ್ವಲ್ಪೇ ಸ್ವಲ್ಪು ದಿನದಲ್ಲಿಯೇ

ನನ್ನ ಹೆಸರು ಕಾಶ್ಮೀರದಿಂದ ಹಿಡಿದು ಆ ಕನ್ಯಾಕುಮಾರಿವರೆಗೆ ಹರಿದೋಗ್ತಾದ.

ಭಾಗ್ಯವಂತ : ಹರಿತಾದ ತಮ್ಮ ಹರಿತಾದ ಯಾಕಂದ್ರ ಸಧ್ಯ ಅದು ತುಂಬಿ ತುಳುಕಾಕತ್ಯಾದ ನೋಡು, ಹರಿಲಾರದೆ ಏನು ಮಾಡಿತು. ಇರಲಿ ನೀನು ಈ ಊರಿಗೆ ಯಾವಾಗ ಬಂದಿ?

ಶ್ರೀಮಂತ : ನಾನು ಬಂದು ಇಂದಿಗೆ ಸುಮಾರು ಮೂರು ತಿಂಗಳಾಯ್ತು ನನ್ನ ಆಫೀಸಿನ ಕೆಲಸದಲ್ಲಿ ನಿಮಗ ಬೆಟ್ಟಿ ಆಗುವದೆ ಆಗಲಿಲ್ಲ ದಯವಿಟ್ಟು ಕ್ಷಮಿಸು ಮಾಮ.

ಭಾಗ್ಯವಂತ : ಛೇ, ಛೇ, ಕ್ಷಮಿಸುವಂತ ತಪ್ಪು ನೀನೇನು ಮಾಡಿದಿ?

ಶ್ರೀಮಂತ : ಸಧ್ಯ ನಾನು ತಪ್ಪು ಮಾಡದಿದ್ದರೂ ಮುಂದೇನಾದರು ನನ್ನಿಂದ ತಪ್ಪಾದರೆ ಕ್ಷಮಿಸು ಮಾಮಾಂತ, ತಮ್ಮಲ್ಲಿ ರಿಕ್ವೆಷ್ಟ್ ಮಾಡ್ಕೋಂತ್ತೀನಿ ಮಾಮ.

ಭಾಗ್ಯವಂತ : ಪರವಾ ಇಲ್ಲಪ್ಪ ಅಳಿಯ ದೇವರು ಇರಲಿ, 'ಇಲ್ಲಿ ನೀನು ಯಾವ ಆಫೀಸಿನಲ್ಲಿ ಕೆಲಸ ಮಾಡುತ್ತಿರುವಿ?

ಶ್ರೀಮಂತ : ನಾನು ಕೆಲಸ ಮಾಡುವ ನಮ್ಮ ಆಫೀಸು ಇಡೀ ಈ ನಮ್ಮ ದೇಶದಲ್ಲಿಯೇ ಅತಿ ದೊಡ್ಡದು ಅದಕ್ಕೆ ಕೆ.ಎಸ್.ಕೆ. ಅಂತ ಕರಿತಾರೆ.

ಭಾಗ್ಯವಂತ : ಅಂದ್ರ?

ಶ್ರೀಮಂತ : ಕೆ.ಎಸ್.ಕೆ.ಕೆ ಅಂದ್ರ ಕರ್ನಾಟಕದ ಸುಪ್ರಸಿದ್ಧ ಕತ್ರಿ ಕಳ್ಳಾಂತ.

ಭಾಗ್ಯವಂತ : ಏನು? ನೀನು ಕತ್ರಿ ಕಳ್ಳಾನಾ?

ಶ್ರೀಮಂತ : ಕತ್ರಿ ಕಳ್ಳಂದ್ರ ನಾನಲ್ಲೋ ಮಾವ, ಯಾವ ಉದ್ಯೋಗ ಇಲ್ಲದೆ ನಿರುದ್ಯೋಗಿ ಯಾಗಿ ತಿರುಗುತ್ತ, ಹಣವಂತರ ಜೇಬು ಕತ್ತರಿಸುವ ಕಳ್ಳರಿಗೆ ತಕ್ಕ ಉಪದೇಶ ಕೊಟ್ಟು, ಅವರನ್ನು ಸನ್ಮಾರ್ಗಕ್ಕೆ ತರುವುದೇ ನಮ್ಮ ಕೆ.ಎಸ್.ಕೆ.ಕೆ ಕಂಪನಿಯ ಗುರಿ.

ಭಾಗ್ಯವಂತ : ಹೋ ಹೋ ಹಿಂಗೋ? ಸರಿ ಅಳಿಯ ದೇವರು ಸಧ್ಯ ಆ ಕಂಪನಿ ನಿನಗೆ ಎಷ್ಟು ಸಂಬಳ ಕೊಡ್ತಾದ?

ಶ್ರೀಮಂತ : ನೋಡು ಮಾಮ, ನನಗೆ ಹತ್ತು ಸಾವಿರ ರೂಪಾಯಿ ಸಂಬ್ಳ ಸಿಕ್ರೆ,

ಇಪ್ಪತ್ತು ಸಾವಿರ ರೂಪಾಯಿ ಗಿಂಬ್ಳ ಸಿಗ್ತಾದ, ಒಟ್ಟು ಸೇರಿದ್ರ ಮುವ್ವತ್ತು ಸಾವಿರ ಆಗ್ತಾದ.

ಭಾಗ್ಯವಂತ : ಏನು? ಮುವ್ವತ್ತು ಸಾವಿರನಾ?

ಶ್ರೀಮಂತ : ಹೌಹೌದು ಮುವ್ವತ್ತು ಸಾವಿರನೆ, ಇನ್ನೂ ಓರ್‌ಟೇಮ್ ಮಾಡಿದ್ರ ಅದು ಬ್ಯಾರೆ ಸಿಗ್ತಾದ.

ಭಾಗ್ಯವಂತ : ಅಲ್ಲಪ್ಪ ಅಳಿಯ ದೇವರು ಇಷ್ಟ್ಯಾಲ್ಲ ಹಣಗಳಿಸಿ ನೀನು ಮುಂದೇನು ಮಾಡ್ಬೇಕಂತ ಮಾಡಿದಿ?

ಶ್ರೀಮಂತ : ಮಾಮ ಕೋಟ್ಯಾಂತ ಹಣಗಳಿಸಿ, ಯಾವುದಾದರೊಂದು ದೇಶದ ಮಹಾರಾಜನ ಮಗಳ್ನಾ ಮದುವೆ ಮಾಡಿಕೊಂಡು, ಲಂಡನ್ನೋ ಅಥವಾ ಅಮೇರಿಕಾನೋ ಸೆಟ್ಲಾಗ್ತೀನಿ.

ಯಮುನಾ : [ಬರುತ್ತಾ] ಇದೇನೋ ಎಪ್ಪ ನಡು ಹಾದ್ಯಾಗ ಯಾವುದೋ ಒಂದು ಉದ್ರಿ ಗಿರಾಕಿನ ಹಿಡ್ಕೊಂಡು ನಿಂತ್ತಿರುವಿಯಲ್ಲ ಯಾವುದಿದು?

ಭಾಗ್ಯವಂತ : ಇದು ಉದ್ರಿ ಗಿರಾಕಿ ಅಲ್ಲವೋ ಯಮುನವ್ವಾ ! ಇದು ನಗದ್ ನೆಟ್ಟಕ್ಯಾಸ್ ಗಿರಾಕಿ, ಮೇಲಾಗಿ ಇವನು ನನ್ನ ಸೋದರ ಅಳಿಯ.

ಯಮುನಾ : ಇವ್ನವ್ವಾ ಈ ಊರಾಗ ನಿನಗೆಷ್ಟು ಜನ ಸೋದರ ಅಳಿಯಂದಿರರು ಅದಾರೋ ಆ ದೇವರಿಗೆ ಗೊತ್ತು, ಅಲ್ಲಾ ಸಿಕ್ಕ ಸಿಕ್ಕವರಿಗೆಲ್ಲಾ ನನ್ನ ಸೋದರಳಿಯ ನನ್ನ ಸೋದರಿಳಿಯ ಅಂತ ಹೇಳಿಯಲ್ಲ ಸುಮ್ಮ ಇಡೀ ಈ ಭಾರತ ದೇಶಕ್ಕೆ ಸೋದರ ಮಾವಂತ ಸರಕಾರದಿಂದ ಸರ್ಟಿಫೀಕೇಟ್ ತೊಗ, ತಂಟೆನೇ ಕಡ್ದು ಹೊಗ್ತಾದ.

ಶ್ರೀಮಂತ : ಹೌದೋ ಮಾಮ ! ಸರ್ಟಿಫೀಕೇಟ್ ತೊಗವ ತೊಗಂತಿ ಒಮ್ಮೆ ಮಹಾಭಾರತ ಶಕುನಿ ಮಾವಂತ ತೊಗೊಂಡು ಬಿಡು. ಇದು ಒಂದು ನಮೂನಿ ನಿನಗ ರಾಷ್ಟ್ರ ಪ್ರಶಸ್ತಿ ಸಿಕ್ಕಾಂಗಾಕ್ತಾದ, ಮಾವ ಅಂದ ಹಾಗೆ ಈ ಸೇವಂತಿ ಹೂ ಯಾರ ತೋಟದ್ದು?

ಭಾಗ್ಯವಂತ : ಈ ಸೇವಂತಿ ಹೂ ಬೇರೆ ಯಾರ ತೋಟದ್ದು ಅಲ್ಲ ಶ್ರೀಮಂತ, ನಿನ್ನ ಸೋದರ ಮಾವ ಅರ್ಥಾತ್ ಈ ಭಗವಂತನ ಬೀಜದಿಂದ ನಿನ್ನ ಸೋದರತ್ತೆಯ ಒಡಲೆಂಬ ತೋಟದಲ್ಲಿ ಅರಳಿದ ಬೆಳೆದ ಸುಂದರ ಸೇವಂತಿ ಇದು, ಹ್ಯಾಂಗಾದಳಲೇ ನನ ಮಗಳು?

ಶ್ರೀಮಂತ : ಎಲ್ಲಾನೂ ಚ್ಯೋಲೋ ಆದ ಮಾವ, ಆದ್ರ ನಿನ್ನ ಮಗಳಲ್ಲಿ ಇರಬೇಕಾದ ಮುಖ್ಯವಾದುದ್ದೇ ಇಲ್ಲ.

ಭಾಗ್ಯವಂತ : ಏನದು?

ಭಾಗ್ಯವಂತ : ಬುದ್ಧಿ !

ಭಾಗ್ಯವಂತ : ಓ ಹೋ ಬುದ್ಧೀನಾ? ನಾನು ಬೇರೆ ತಿಳ್ಕೊಂಡಿದ್ದೆ ಇರಲಿ ನಡಿಯಪ್ಪ ನಮ್ಮ ಮನೆಗೆ ಹೋಗೋಣ [ಹೋಗುವರು].

===***====***===

ಐದನೇ ದೃಶ್ಯ

ಮನೆ

ಸುರೇಂದ್ರ : [ಬರುತ್ತಾ] ಗಂಗಾ ! ಗಂಗಮ್ಮ !!

ಗಂಗಾ : ಬಂದೇ ಮಾಮ [ಹೊರಗೆ ಬಂದು] ಏನು ಮಾಮಾಜಿ?

ಸುರೇಂದ್ರ : ಸ್ಕೂಲಿಗೆ ಹೋಗುವ ಹೊತ್ತಾಯಿತು, ಶಶಿಧರ ರೆಡಿ ಆಗಿದ್ದಾನೇನಮ್ಮ?

ಗಂಗಾ : ರೆಡಿ ಆಗಿದ್ದಾನೆ ಮಾಮ, ನೀವು ಸ್ವಲ್ಪ ನಾಷ್ಟ ಮಾಡಿ ಹೋದರೆ ಚನ್ನಾಗಿತ್ತು !

ಸುರೇಂದ್ರ : ಸಧ್ಯ ಅದೇನು ಬೇಡಮ್ಮ, ಶಶಿನ ಸ್ಕೂಲಿಗೆ ಬಿಟ್ಟು ಬಂದ ನಂತರ ಒಮ್ಮೆ ಊಟನೆ ಮಾಡ್ತಿನಿ.

ಗಂಗಾ : ಸರಿ ಮಾಮ ! ಶಶಿ, ಏ ಶಶಿ ಬೇಗ ಬಾರೋ, ಸ್ಕೂಲಿಗೆ ಹೊತ್ತಾಯಿತು

ಶಶಿಧರ : ಬಂದೇ ಮಮ್ಮಿ, [ಎಂದು ಹೆಗಲಿಗೆ ಪಾಟಿ ಚೀಲ ಹಾಕಿಕೊಂಡು ಹೊರಗೆ ಬರುವನು]

ಸುರೇಂದ್ರ : ಆಂ ನಡಿಯಪ್ಪ ಶಶಿ, ಸಮಯ ಒಂಭತ್ತು ಮುಕ್ಕಾಲು ಗಂಟೆ ಆಯ್ತು, ಟೀಚರ ನಿನಗ ಬೈತಾರ ನಡಿಯಪ್ಪ

ಶಶಿಧರ : ಒಳ್ಳೆಯದು ದೊಡ್ಡಪ್ಪ ನಡ್ರಿ ! ಆಂ ಮಮ್ಮಿ ನಾನು ಬರ್ತಿನಿ ಟಾಟಾ [ಹೊರಗೆ ಹೋಗುವನು]

ರವಿ : [ಹೊರಗಿನಿಂದ ಬರುತ್ತ] ಗಂಗಾ ! ಏ ಗಂಗಾ !! ಎಲ್ಲಿ ಮನೆಯಲ್ಲಿ ನಮ್ಮ ಅಣ್ಣನವರು ಕಾಣ್ತಾನೇ ಇಲ್ಲವಲ್ಲ? ಎಲ್ಲಿಗೆ ಹೋಗಿದ್ದಾರೆ?

ಗಂಗಾ : ಇನ್ನೂ ಇದೇ ಈಗತಾನೆ ಶಶಿಧರನ ಸ್ಕೂಲಿಗೆ ಬಿಟ್ಟು ಬರಲು ಹೋಗಿದ್ದಾರೆ ಮತ್ತೇನು ಬೇಕಾಗಿತ್ತು ರಾಯರಿಗೆ?

ರವಿ : ಜೇನು ತುಪ್ಪ

ಗಂಗಾ : ಏನು ಜೇನು ತುಪ್ಪನಾ ? ಎಲ್ಲಿದೆ?

ರವಿ : ನಿನ್ನ ತುಟಿಯ ಅಂಚಿನಲ್ಲಿ

ಗಂಗಾ : ಛೀ ಹೋಗಿ

ಹಾಡು

ರವಿ : ಗಂಗಾ, ಸ್ವರ್ಗಸುಂದರಿಯಾದ ನೀನಲ್ಲದೆ ನನಗೇನೂ ಬೇಕಾಗಿಲ್ಲ, ನನಗೆ ಬೇಕಾದುದ್ದು ಮುಖ್ಯವಾಗಿ ನೀನು.

ಗಂಗಾ : ಹೌದೇನು?

ರವಿ : ಹೌದು, ಬೆಚ್ಚನೆಯ ಮನೆಯಾಗಿ ! ವೆಚ್ಚಕ್ಕೆ ಹೊನ್ನಾಗಿ ! ಇಚ್ಛೆಯನ್ನರಿತು ನಡೆಯುವ ಸತಿಯೊಂದಿದ್ದರೆ, ಆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ! ಈ ದಾಂಪತ್ಯ ಸಂಸಾರ ಜೀವನದ ಸರಸಮಯ ಸುಂದರ ಬಾಳಿನ ಬಂಧುರತೆಗೆ ಕರೆ ನೀಡಿದ್ದಾರೆ.

ಗಂಗಾ : ನಿಜ ಸ್ವಾಮಿ ದಾಂಪತ್ಯ ಜೀವನದಲ್ಲಿ ಉದ್ಭವಿಸುವ ಪ್ರೀತಿ ಪ್ರೇಮ, ಎಂಬುವುದೊಂದು ಹಾಲು ಸಕ್ಕರೆ ಇದ್ದಂತೆ. ಅದನ್ನು ಪತಿಯು ತಾನು ಉಂಡು, ಆ ಸಿಹಿಯನ್ನು ತನ್ನ ಸತಿಗೂ ಉಣ್ಣಿಸಿ, ದೇಹ ಎರಡಾದರೂ ಜೀವ ಒಂದೇ ಎಂಬುವಂತೆ, ಒಂದೇ ನಾಣ್ಯದ ಎರಡು ಮುಖಗಳಾಗಿ ಸಾಗಿಸುವ ಜೀವನವೇ ಸ್ವರ್ಗ ಸುಖಮಯವಾದುದ್ದು.

ರವಿ : ಹೌದು ಗಂಗಾ, ಧರ್ಮೇಚ, ಅರ್ಥೇಚ, ಕಾಮೇಚ, ನಾತಿಚರಾಮಿ ಎಂದು ಸಪ್ತಪದಿ ತುಳಿದು, ಗುರು ಹಿರಿಯರ ಸಮ್ಮುಖದಲ್ಲಿ ಅಗ್ನಿ ದೇವರ ಸಾಕ್ಷಿಯಾಗಿ, ಕೊರಳಿಗೆ ಮಾಂಗಲ್ಯ ಕಟ್ಟಿಸಿಕೊಂಡ ಮಡದಿಯ ಮುಗ್ಧಮನಸ್ಸನ್ನು ಅರಿತುಕೊಂಡು ಅನನ್ಯವಾಗಿ ಈ ಭವಸಾಗರ ದಾಟುವ ಜೀವನವೇ ಅತ್ಯಾಮೂಲ್ಯವಾದದ್ದು ಯಾಕಂದರೆ ಹೆಣ್ಣು ತ್ಯಾಗಮಯ ಜೀವಿ.

ಗಂಗಾ : ಇದೇನು ಹೇಳುತ್ತಿದ್ದೀರಿ ಸ್ವಾಮಿ?

ರವಿ : ಸತ್ಯವನ್ನೆ ಹೇಳುತ್ತಿದ್ದೇನೆ ಗಂಗಾ ! ಸತ್ಯಕ್ಕಾಗಿ ತನ್ನ ಸರ್ವಸ್ವವನ್ನೇ ಕಳೆದುಕೊಂಡ ರಾಜಾ ಸತ್ಯ ಹರಿಶ್ಚಂದ್ರನ ಧರ್ಮಪತ್ನಿಯಾದ ತಾರಾಮತಿಯು ತನ್ನ ಪತಿಯೊಂದಿಗೆ ಸತ್ಯದ ಪಥದಲ್ಲಿ ನಡೆದು,

ಕೊನೆಗೊಮ್ಮೆ ಸತ್ವ ಪರೀಕ್ಷೆ ಬಂದಾಗ ತನ್ನ ಪತಿಯ ಕರದಿಂದ ತನ್ನ ಶಿರವನ್ನೇ ಕತ್ತರಿಸಿಕೊಳ್ಳಲಿಲ್ಲವೆ?

ಗಂಗಾ : ಸ್ವಾಮಿ !!

ರವಿ : ಹೌದು ಇದಲ್ಲದೆ, ಬಿಸಿಲಿನ ಮುಖವನ್ನೇ ಕಾಣದೆ ರಾಜ್ಯ ವೈಭವದಲ್ಲಿ ಮೆರೆದ ಮಹಾರಾಣಿ ಸೀತಾದೇವಿ, ಕಾಡಿನಲ್ಲಿ ತನ್ನ ಪತಿಯೊಂದಿಗೆ ಹನ್ನೆರಡು ವರ್ಷವನವಾಸ, ಎರಡು ವರ್ಷ ಅಜ್ಞಾತವಾಸ ಗೈಯಲಿಲ್ಲವೆ?

ಗಂಗಾ : ಸ್ವಾಮಿ !!

ರವಿ : ಹೌದು ಗಂಗಾ ! ಹಾದು, ಹೆಣ್ಣು ದೇವತೆಯಾಗಿ, ಹೆಣ್ಣು ಮಹಾರಾಣಿಯಾಗಿ, ಹೆಣ್ಣು ತಾಯಿಯಾಗಿ, ಹೆಣ್ಣು ಮಾಯೆಯಾಗಿ ಹೆಣ್ಣು ಮಹಾತ್ಯಾಗಿಯಾಗಿ, ಹೆಣ್ಣು ಜಗದಕಣ್ಣು, ಹೆಣ್ಣು ಧರ್ಮದೇವತೆ, ಹೆಣ್ಣು ಮಹಾತಾಯಿ ಎಂದು ಪುರಾಣ ಪುಟದಲ್ಲಿ ಭೂಮಿ ತೂಕದ ಹೆಣ್ಣಾಗಿ ತನ್ನ ಕೀರ್ತಿಯ ಪತಾಕೆ ಹಾರಿಸಿದೆ. ಆ ತೆರದಿ ಹೆಣ್ಣಾಗಿ, ನನ್ನ ಬಾಳಿಗೆ ಕಣ್ಣಾಗಿ, ನನ್ನ ಪ್ರೀತಿಯ ಹಣ್ಣಾಗಿ ಬಂದ ಮಾಗಿದ ಹಣ್ಣು ನೀನು.

ಗಂಗಾ : ಈ ನಿಮ್ಮ ಕವಿಯ ವರ್ಣನೆ ಸಾಕು ಮಾಡಿ, ಹೊತ್ತಾಗಿದೆ ಮೊದಲು ಊಟ ಮಾಡು ಬನ್ನಿ

ರವಿ : ಸಧ್ಯ ನನಗೆ ಹಸಿವೆಯಿಲ್ಲ ಕೊಡಬೇಕು ಅಂತ ನಿನಗೆ ಮನಸ್ಸು ಇದ್ದರೆ ಜೇನುತುಪ್ಪ ಕೊಡಿ.

ಗಂಗಾ : ಛೀ, ಸಾಕು ಮಾಡಿ ನಿಮ್ಮ ಹುಡುಗಾಟ.

: ಹಾಡು :

ಗಂಗಾ : [ಹಾಡು ಮುಗಿದ ಮೇಲೆ] ರೀ ತಮ್ಮಲ್ಲೊಂದು ಮಾತು ಹೇಳ ಬೇಕೆಂದು ಬಯಸಿದ್ದೇನೆ ದಯವಿಟ್ಟು ಅದನ್ನು ಬೇಡಾಂತ ತಿರಸ್ಕರಿಸಬೇಡಿ

ರವಿ : ಏನು? ನನ್ನ ಹೆಂಡತಿಯಾದ ನೀನು ನನ್ನಲ್ಲೊಂದು ಮಾತು ಕೇಳಿದರೆ ನಾನು ಅದನ್ನು ಬೇಡವೆಂದು ತಿರಸ್ಕರಿಸುತ್ತೇನೆಯೆ? ಹುಚ್ಚಿ ಕೇಂದ್ರ ಸರಕಾರದ ಆಜ್ಞೆಯನ್ನು ತಿರಸ್ಕರಿಸುವ ಶಕ್ತಿ ಈ ರಾಜ್ಯ ಸರಕಾರಕ್ಕಿದೆಯೇ? ಹೂಂ ಹೇಳಿ ಯಾವ ಮಾತು.?

ಗಂಗಾ : ಅದೇರಿ ನನ್ನ ತಂಗಿ ಜಮುನಳನ್ನು ನಿಮ್ಮ ತಮ್ಮ ಚಂದುಗೆ ತೆಗೆದುಕೊಂಡರೆ ಮನೆಯೊಳಗಿನ ಹೆಣ್ಣು ಗಂಡು ಮನೆಯಲ್ಲಿಯೇ ಇದ್ದಂತಾಗುತ್ತೆ ಅಂತ ನನ್ನಭಿಪ್ರಾಯ ಇದಕ್ಕೆ ನೀವೇನಂತ್ತೀರಿ?

ರವಿ : ನಾನೇನು ಅನ್ನೋದು? ಸಧ್ಯದ ನಿನ್ನ ಅಭಿಪ್ರಾಯವೇನೊ ಚನ್ನಾಗಿದೆ. ಆದರಿಷ್ಟೆ. ಒಂದೇ ಮನೆಯಲ್ಲಿ ಹುಟ್ಟಿ ಬೆಳೆದ ಉಭಯ ಅಕ್ಕಾ ತಂಗಿಯರು ಮುಂದೆ ಒಂದೇ ಮನೆಯಲ್ಲಿ ಒಂದುಗೂಡಿ ಇರುವುದು ಕಷ್ಟವೇನಂತ ನನ್ನ ವಿಚಾರ.

ಗಂಗಾ : ಅದರ ಬಗ್ಗೆ ನೀವೇನು ಚಿಂತಿಸಬೇಡಿ, ಮುಂದೆ ನನ್ನ ತಂಗಿಯಿಂದ ನನಗೇನಾದರೂ ತೊಂದರೆ ಬಂದರೆ ಅದನ್ನು ಸರಿಪಡಿಸಿಕೊಂಡು ಹೋಗುವ ತಾಳ್ಮೆ ನನ್ನಲ್ಲಿದೆ.

ರವಿ : ಸರಿ ಹಾಗಿದ್ದರೆ, ನಿನ್ನ ಇಚ್ಛೆಯೇ ನನ್ನ ಇಚ್ಛೆ, ಈ ವಿಷಯ ಅಣ್ಣಾಜಿಯವರಿಗೆ ಮತ್ತು ಚಂದ್ರುಗೆ ತಿಳಿಸಿ ಆದಷ್ಟು ಬೇಗ ವಾಲಗ ಊದಿಸಿ ಬಿಡೋನ ಬನ್ನಿ, [ಎಂದು ಒಳಗೆ ಹೋಗುವರು]

ಹಾಡು

ಚಂದ್ರು : [ಬರುತ್ತಾ] ಅತ್ತಿಗೆ ! ಅತ್ತಿಗೆ !! ಅತ್ತಿಗೆಮ್ಮ

ಗಂಗಾ : [ಹೊರಗೆ ಬಂದು] ಯಾಕಪ್ಪ ಚಂದ್ರು?

ಚಂದ್ರು : ಅತ್ತಿಗೆ ನಿಮ್ಮ ಆಶೀರ್ವಾದದಿಂದ ನನಗಿಂದು ಕಂದಾಯ ಇಲಾಖೆಯಲ್ಲಿ ನೌಕರಿ ಸಿಕ್ಕಿದೆ, ಇದೋ ನನ್ನ ನೌಕರಿಯ ಆರ್ಡರ್ [ಎಂದು ಕೊಡುವನು]

ಗಂಗಾ : ರೀ ರೀ ಬೇಗ ಹೊರಗೆ ಬನ್ನಿ, ನಮ್ಮ ಚಂದ್ರು ಏನು ತಂದಿದ್ದಾನೆ ನೋಡ್ಬರ್ರಿ !

ರವಿ : [ಬರುತ್ತ] ಏನು ತಂದಿದ್ದಾನೆ?

ಗಂಗಾ : ನಮ್ಮೆಲ್ಲರ ಮನ ಹಿಡಿಸದಷ್ಟು ಸಂತೋಷದ ವಿಷಯ ತಂದಿದ್ದಾನೆ ಅಂದರೆ ಕಂದಾಯ ಇಲಾಖೆಯಲ್ಲಿ ನೌಕರಿ ಸಿಕ್ಕಿದೆ ಅದು ನಮ್ಮ ಯಾದಗಿರಿ ತಾಲೂಕದಲ್ಲಿಯೇ

ರವಿ : ಹೌದೇನೋ?

ಚಂದ್ರು : ಹೌದಣ್ಣ ದೇವಸ್ವರೂಪಿಗಳಾದ ನಿಮ್ಮ ಆಶೀರ್ವಾದದಿಂದ ನನಗೆ ಗಿರ್ದಾವರಿ ನೌಕರಿ ಸಿಕ್ಕಿದೆ.

ಗಂಗಾ : ತುಂಬಾ ಸಂತೋಷ ಚಂದ್ರು, ದೇವರು ನಿನಗೆ ಒಳ್ಳೆಯದು ಮಾಡ್ಲಿ, ಇನ್ನೊಂದು ವಿಷಯ ಚಂದ್ರು.

ಚಂದ್ರ : ಏನತ್ತಿಗೆ?

ಗಂಗಾ : ಮುಂದಿನ ತಿಂಗಳು ನನ್ನ ತಂಗಿ ಜಮುನಾಳೊಂದಿಗೆ ನಿನ್ನ ಮದುವೆ ಮಾಡ್ಬೇಕಂತ ನಾನು ಮತ್ತು ನಿಮ್ಮಣ್ಣ ವಿಚಾರ ಮಾಡಿದ್ದೀವಿ ಇದಕ್ಕೆ ನಿನ್ನ ಅಭಿಪ್ರಾಯವೇನಂತ?

ಚಂದ್ರು : ಇದೇನು ಅತ್ತಿಗೆ ಕೋಳಿನ ಕೇಳಿ ಮಸಾಲಿ ಅರಿಯುವುದಾ? ಹುಂ ನಿಮ್ಮಿಬ್ಬರ ಅಭಿಪ್ರಾಯವೇ ನನ್ನಭಿಪ್ರಾಯ ! ನನ್ನ ಹೆತ್ತ ತಾಯಿ ಸತ್ತಮೇಲೆ ತುತ್ತಿಟ್ಟು ನನ್ನನ್ನು ಎತ್ತಿ ಹಿಡಿದ ಅತ್ತಿಗೆಮ್ಮನ ಮಾತು ಅಲ್ಲಗಳಿಯಲಾರ ಈ ನಿನ್ನ ಮೈದುನಾ.

ಸುರೇಂದ್ರ : [ಬರುತ್ತ] ಇದೇನಪ್ಪ ಮನೆಯಲ್ಲಿ ನೀವೆಲ್ಲರೂ ಸೇರಿಕೊಂಡು ಆವುದೋ ಒಂದು ಸಂತೋಷದ ಸಾಗರದಲ್ಲಿ ಮುಳುಗಿದಂತೆ ಕಾಣುತ್ತಿದೆ ಏನು ಸಮಾಚಾರ?

ಗಂಗಾ : ಅದೇ ಭಾವ ನಮ್ಮ ಚಂದ್ರಪ್ಪನಿಗೆ ಕಂದಾಯ ಇಲಾಖೆಯಲ್ಲಿ ಗಿರ್ದಾವರಿ ನೌಕರಿ ಸಿಕ್ಕಿದೆ ಅದೇ ಸಂತೋಷದಲ್ಲಿ ಮಾತಾಡುತ್ತ ನಿಂತೀವ್ವಿ.

ಸುರೇಂದ್ರ : ಗಂಗಾ ! ಈ ಮನೆಯಲ್ಲಿ ಆಗುವ ಪ್ರತಿಯೊಂದು ಸಂತೋಷಕ್ಕೆ ನೀನೇ ಕಾರಣಮ್ಮ, ನಿನ್ನಂಥ ಅದೃಷ್ಟ ಸದ್ಗುಣಿ ನಮ್ಮ ಮನೆಗೆ ಸಿಕ್ಕಿದ್ದು ನಮ್ಮ ಪುಣ್ಯ

ಶಶಿಧರ : ಅಮ್ಮಾ ಚಿಕ್ಕಪ್ಪನಿಗೆ ನೌಕರಿ ಸಿಕ್ಕಿದೆಯೆಂದು ಬರೇ ಬಾಯಿಮಾತಿನಿಂದ ಸಂತೋಷಪಡಿಸಿದರೆ ಹೇಗಮ್ಮ? ಮೊದಲು ನಮಗೆ ಸಿಹಿ ಕೊಟ್ಟು ಸಂತೋಷಪಡಿಸು.

ಗಂಗಾ : ಒಳ್ಳೆಯದಪ್ಪ ! ನಿನ್ನ ಇಚ್ಛೆಯಂತೆ ಸೀರಾ ಮಾಡಿದ್ದೀನಿ ಹೊಟ್ಟೆತುಂಬ ಉಣ್ಣಿಸಿ ಸಂತೋಷಪಡಿಸುತ್ತೇನೆ ಬನ್ನಿರಿ ಆಂ ನೀವು ಬನ್ನಿ (ರವಿ ಸುರೇಂದ್ರ ಹೋಗುವರು)

ಶೇಖರ : ಚಿಕ್ಕಪ್ಪಾ ! ಮುಂದಿನ ತಿಂಗಳು ಚಿಕ್ಕಮ್ಮ ಬರ್ತಾಳಂತೆ ನಿಜವೆ?

ಚಂದ್ರು : ಹೂಂ ನಿಜ ಬರ್ತಾಳೆ.

ಶೇಖರ : ಬಂದು ಏನು ಮಾಡುತ್ತಾಳೆ?

ಚಂದ್ರು : ಎತ್ತಿಕೊಂಡು ಮುದ್ದಾಡುತ್ತಾಳೆ?

ಶಶಿಧರ : ಯಾರ್ನ್ನಾ ನಿನ್ನ ಎತ್ತಿಕೊಂಡು ಮುದ್ದಾಡುತ್ತಾಳೇನು?

ಚಂದ್ರು : ನನ್ನ ಅಲ್ಲ ಕಣೋ ನಿನ್ನ ಬಾ ಹೋಗುವಾ (ಹೋಗುವರು)

ಹಾಡು

===***===***===

ಆರನೇ ದೃಶ್ಯ
ರಸ್ತಾ

ಭಾಗ್ಯವಂತ : [ಬರುತ್ತಾ] ದೌಡ್ ದೌಡ್ ಬಾರ್‍ಬೆ ನನ್ನ ಹಡೆದವ್ವಾ ! ಇನ್ನೂ ಎಷ್ಟಾರ ಹಿಂದ ಬಿದ್ದಿಯಲ್ಲ? ನಾನು ಅಲ್ಲೇ ಮನ್ಯಾಗ ಬರಬ್ಯಾಡವ್ವಾ ಬರ್‍ಬ್ಯಾಡವ್ವಾ ಅಂತ ಬಡ್ಕೊಂಡ್ಯಾ ಆದ್ರೂ ಕೇಳದೆ ನಾನೂ ಮದುವೆಗೆ ಬರ್ತಿನೀ ನಾನೂ ಮದುವೆಗೆ ಬರ್ತಿನೀ ಅಂತ ಹಠ ಮಾಡಿ ಬಂದು ಅಲ್ಲಿ ಏನು ಉಣಬಾರದ್ದು ಉಣ್ತಿಯಂತೀನಿ? ಬಾ. ಬಾ.

ಯಮುನಾ : ತಡಿಯೋ ಎಪ್ಪ ! ನೀನು ಮುಂದ ಮುಂದ ಹಂಗ ಕೋಳಿಮರಿಗತ್ಲೆ ಪುಟ್ಟು ಪುಟ್ಟಂಥ ಓಡ್ಕೋಂತ ಹೋದ್ರ ನಾನು ನಿನ್ನ ಹಿಂದೆ ಹದ್ದಾಗಿ ಹಾರ್‍ಕೊಂತ ಬರಲೇನು?

ಭಾಗ್ಯವಂತ : ಹದ್ದಾಗಿ ಹಾರ್‍ಕೋಂತ ಬರುಬ್ಯಾಡ ನನ್ನ ಮುದ್ದಿನ ಮಗಳಾ, ಹಂಗ ಸದ್ದಾಗದಾಂಗ ಸಂದ್ಯಾಗಬಿದ್ದು ಹಂದಿಮರಿ ಬಂದಾಂಗ ಹರದಾಡಿಕೋಂತ ಬಾ.

ಯಮುನಾ : ಯಾಕಾ ಎಪ್ಪಾ ನನ್ನನ್ನು ಹಂದಿ ಮರಿಗೆ ಹೋಲಿಸಿ ಮಾತಾಡಕತ್ತಿಯಲ್ಲ?

ಭಾಗ್ಯವಂತ : ಮತ್ತೇನವ್ವಾ ಅಲ್ಲೇ ಮನ್ಯಾಗ ದೊಡ್ಡದೊಡ್ಡು ಕಮಾಲಪೂರ ಬಾಳೆ ಹಣ್ಣು ತಂದಿಟ್ಟೀನಿ ಸುಮ್ಮ ಬಾಯಿತುಂಬ ಇಟ್ಟುಕೊಂಡು ತಿನ್ನುಕೋಂತ ಕುಂದ್ರದಬಿಟ್ಟು ಆ ಸಾಹುಕಾರರ ಮದುವೆಗೆ ನಾನೂ ಬರ್ತಿನೀ, ನಾನು ಬರ್ತೀನಿ ಅಂತ ಹಠಮಾಡಿ ಬಂದು, ನೀನು ಅಲ್ಲಿ ಅಂಥದ್ದೇನು ಉಣಬಾರದ್ದು ಉಣ್ತಿದಂತೀನಿ.

ಯಮುನಾ : ಹಂಗಲ್ಲೋಯಪ್ಪ ! ನೀನಂತೂ ನನಗೆ ಮದುವೆ ಮಾಡೋದಿಲ್ಲ, ಅಂದ ಮೇಲೆ ಮತ್ತೊಬ್ಬರ ಮದುವೆ ನೋಡಿಯಾದರೂ ಮನದಾಗ ಸಂತೋಷ ಪಟ್ಕೊಂತೀನಿ.

ಭಾಗ್ಯವಂತ : ಮತ್ತೊಬ್ಬರ ಮದುವೆ ನೋಡಿದ್ರ ನಿನಗ ಹ್ಯಾಂಗ ಸಂತೋಷ ಆಗ್ತಾದವ್ವಾ ! ಅವರು ಗಂಡ–ಹೆಂಡ ಸುಲಿಗ್ಯಾಗರಿ ಕೂತ್ಕೊಂಡು

ನೀರು ಮಿನ್ಕೊಂಡ್ರಾ ನಿನಗೇನು ಬಂತು? ಅವರು ಹಂದ್ರದಾಗ ಕೂತ್ಕೊಂಡು ಅಕ್ಷತೆ ಹಾಕಿಸಿಕೊಂಡ್ರ ನಿನಗೇನು ಬಂತು? ಅವರು ಹೂಮಾಲೆ ಹಾಕ್ಕೊಂಡು ಮೆರವಣಿಗೆ ಮಾಡ್ಸಿಕೊಂಡ್ರ ನಿನಗೇನು ಬಂತು?

ಯಮುನಾ : ನನಗೇನೂ ಬರದಿದ್ದರೂ ಆಟಾ ಹೋತು, ಬೇಕೂಫ ನಮ್ಮಪ್ಪ ನನಗೂ ಮದುವೆ ಮಾಡಿದ್ರ ನಾನು ಅವರಂಗ ನೀರು ಮಿನಿದು, ಅಕ್ಷತೆ ಹಾಕಿಕೊಂಡು ಗಂಡನ ಜೊತೆ ಭರ್ಜರಿ ಮೆರವಣಿಗೆ ಮಾಡ್ಕೊಂತಿದ್ದೆ ಅಂತ ನಿನ್ನ ಹೆಣಕ ಕಣ್ಣೀರು ಹಾಕ್ತೀನಿ ಅಷ್ಟೆ.

ಭಾಗ್ಯವಂತ : ಹೌದೇನವ್ವಾ?

ಯಮುನಾ : ಹೌದು, ಲೇ ನಿಮ್ಮಪ್ಪಾ ಭಾಗ್ಯ ನಿನ್ನಲ್ಲಿ ಒಂದು ಮಾತು ಕೇಳಬೇಕಂತ ಮಾಡಿನಿ, ಕೇಳ್ಲ್ಯಾ?

ಭಾಗ್ಯವಂತ : ಮತ್ತಾವ ಮಾತು ಕೇಳಬೇಕಂತ ಮಾಡಿದೆವ್ವಾ ನನ ಮುದ್ಧಿನ ಮಗಳ ಕೇಳು?

ಯಮುನಾ : ಅಲ್ಲೋ ನಾನು ನಿನಗಿರುವ ಒಬ್ಬೆಳೆ ಒಬ್ಬು ಮಗಳು, ಆದ್ರೆ ನೀನು ನನ್ನ ಎಷ್ಟು ಮಂದಿಗಂತ ಕೊಡ್ತಿ? ಅಂವ ಡಾಕ್ಟರ್ ಕೇಳ್ತಾನ ಅವನಿಗೂ ಕೊಡ್ತೀನೀ ಅಂತಿ ! ಆ ವಕೀಲ ಕೇಳ್ತಾನ ಅವನಿಗೂ ಕೊಡ್ತೀನಿ ಅಂತಿ ! ಕಂಡಕ್ಟರ್ ಕೇಳ್ತಾನ ಅವನಿಗೂ ಕೊಡ್ತೀನೀ ಅಂತಿ! ಪೋಲೀಸ್ ಮಾವ ಕೇಳ್ತಾನ ಅವನಿಗೂ ಕೊಡ್ತೀನಿ ಅಂತಿ ಮತ್ತ ಮ್ಯಾಲ ನಿನ್ನಳಿಯ ಭಗವಂತ ಕೇಳ್ತಾನ ಅವನಿಗೂ ಕೊಡ್ತೀನಿ ಅಂತಿ ಏನಿದು ನಿನ್ನ ಹಕಿಕತ್ತೇ ತಿಳಿವಲ್ದಲ್ಲ? ನನ್ನೇನು ಆ ಪಾಂಚಾಲಿನ ಮಾಡ್ಬೇಕಂತ ಮಾಡಿದಿಯೇನು?

ಭಾಗ್ಯವಂತ : ಹಂಗಲ್ಲವ್ವಾ ! ಯಮನವ್ವಾ !! ಒಂದು ಸರಕಾರಿ ನೌಕರಿಗೆ ನೂರಾ ಎಂಟು ಅರ್ಜಿ ಹಾಕಿ ಅಷ್ಟೆಲ್ಲಾ ಜನ 'ಇಂಟ್ರಿ ಕೊಡ್ತಾರ ಆದ್ರ ಯಾವನು ಪಾಸಾಗ್ತಾನೋ ಅಂಥವನಿಗೆ ಕೊಡ್ತಾರ. ಅಂದ್ರಾಂಗ ನಿನಗ ಬೇಕಾದಷ್ಟು ಜನ ಕೇಳಲಿ ಆದರೆ ನಿನ್ನ ಕೇಳಿದವರಿಗೆಲ್ಲಾ ಕೊಡ್ತೀನೇನು? ನಮುಗ ಸಂಬಂಧ ಪಟ್ಟ ಎಲ್ಲಾ ವಿಷಯದಲ್ಲಿ ಯಾರು ಪಾಸಾಗ್ತಾರೋ ಅಂಥವರಿಗೆ ಕೊಟ್ಟು ಮದುವೆ ಮಾಡ್ತೀನಿ, ಅಲ್ಲೀ ಮಟಾ ತಡ್ಕೊ.

ಯಮುನಾ : ಲೇ ನಿಮ್ಮವ್ವಾ ಏಳರದಾಗ ಹುಟ್ಟಿದವ್ನೆ, ತಡ್ಕೋ ತಡ್ಕೋ ಅಂದ್ರ ನಾನು ಎಷ್ಟು ದಿವಸಂತ ತಡ್ಕೊಳ್ಳಿ? ಅಲ್ಲೋ ನನ್ನ ವಾರ್ತಿ ಗೆಳತಿಯರೆಲ್ಲ ಮದುವೆ ಮಾಡ್ಕೊಂಡು ಮೂರು ಮೂರು ನಾಲ್ಕು ನಾಲ್ಕು ಮಕ್ಕಳ್ನಾ ಹಡ್ದು, ಆದರೆ ನಾನು ಹಂಗ ಮದುವೆ ಕಾಣದೆ ಮನೆಯಲ್ಲಿ ಕುಂತ್ತುದ್ದು ಕಂಡು ಊರಮಂದಿ ಕ್ಯಾಕರಿಸಿ ಥೂ ಅಂತ ಮುಖದ ಮೇಲೆ ಉಗ್ಯಾಕತ್ಯಾರೋ ನಿಮ್ಮವ್ವಾ.

ಭಾಗ್ಯವಂತ : ಅವರು ಉಗಿತಾರಂತ ನೀನು ನನಗ ಕ್ಯಾಕರ್ಸಿ ಥೂ ಅಂತ ನಾಚಿಕೆ ಬರುವಂಗ ಉಗೆಕತ್ತಿದಲ್ಲವ್ವಾ ಉಗಿ ಉಗಿ.

ಭಗವಂತ : [ಬರುತ್ತಾ] ನಿನಗೆ ಎಷ್ಟು ಉಗಳಿದರೂ ನಾಚಿಕೆನೇ ಇಲ್ಲ ಯಾಕಂದ್ರ ನಾಚಿಕೆ ಇಲ್ಲದವರಿಗೆ ನಾಚಿಕೆ ಎಲ್ಲಿಂದ ಬರ್ತಾದ ಅದೇನೋ ಅಂತ್ತಾರಲ್ಲ ಉಗಳ ಮಾರಿ ದೇವರಿಗೆ ಉಗಳಿದ್ದೆ ನೈವೇಧ್ಯವಂತೆ ಅದ್ರಾಂಗ ನಿನಗದು ಅದೇ ನೈವೇದ್ಯ.

ಭಾಗ್ಯವಂತ : ಅನ್ರೋ ಅನ್ರಿ ! ತೋಳ ಹಳ್ಳದ ಹುದುಲಿಗೆ ಬಿದ್ದಾಗ ಆಳಿಗೊಂದು ಕಲ್ಲು ಹಾಕ್ತಾರಂತ ಗಾದೆನೆ ಇದೆ, ಅನ್ರಿ ! ನೀವು ಅಂದ್ರ ನನಗೇನು ಆಗೋದಿಲ್ಲ, ಅದೇನೋ ಅಂತ್ತಾರಲ್ಲ, ಕಾಗೆ ಕರ್ರ್ ಅಂದ್ರ ಆ ದೇವಲೋಕ ಹಾಳಾಗಿ ಹೋಗ್ತಾದೇನು?

ಭಗವಂತ : ದೇವಲೋಕ ಹಾಳಾಗಿ ಹೋಗೋದಿಲ್ಲೋ ಮಾವ, ನಿನ್ನ ಮಗಳಿಗಿದ್ದ ವಯಸ್ಸು ಹೋಗ್ತಾದ, ಸ್ವರ್ಗ ನೋಡದ ಕಣ್ಣು, ಮಾರಾಟಾಗದ ಮಾಗಿದ ಹಣ್ಣು, ಮದುವೆಯಾಗದ ಯೌವನದ ಹೆಣ್ಣು, ಇವು ಮೂರರ ಬಾಳು ಮುದಿನಾಯಿಗೂ ಕೀಳು ಕುಮಾರೇಶ್ವರಂತ ಹೇಳಿದ್ದು ಕೇಳಿಲ್ಲವೆ?

ಭಾಗ್ಯವಂತ : ಲೇ ಭಗವಂತ

ಭಗವಂತ : ಹೌದು ಮಾವ, ಸಿಹಿ ಇಲ್ಲದ ಹಣ್ಣು, ನಿಚ್ಚಳಿಲ್ಲದ ಕಣ್ಣು, ಮದುವೆಯಾಗದ ಹೆಣ್ಣು ಈ ಮೂರು ಎಣ್ಣೆ ಇಲ್ಲದ ಪಣತಿ ಕಾಣಾ ಕುಮಾರೇಶ್ವರ ಎಂಬುವಂತೆ ವಯಸ್ಸಿಗೆ ಬಂದ ಹೆಣ್ಣು ಮದುವೆಯಾಗದೆ ಮನೆಯಲ್ಲಿದ್ದರೆ ಕಳಂಕ ಪ್ರಾಯವಲ್ಲದೆ ಅದು ಹೆಣ್ಣಿನ ಗೌರವಕ್ಕೆ ಯುಕ್ತವಲ್ಲ.

ಭಾಗ್ಯವಂತ : ಲೇ ಎಪ್ಪ ಪುಣ್ಯಾತ್ಮ ಅಳಿಯ ದೇವರು ಉರಿಯುವ ಬೆಂಕಿಗೆ

ದಯವಿಟ್ಟು ಎಣ್ಣೆ ಸುರಿದು ಅದನ್ನು ಮತ್ತಿಷ್ಟು ಉರಿಸಬೇಡ, ಅದಕ್ಕೊಂದಿಷ್ಟು ತಣ್ಣೀರು ಸುರಿದು ತಣ್ಣಗ ಮಾಡುವುದನ್ನು ಕಲಿ.

ಭಗವಂತ : ದೇವರಾಣಿಯಾಗಿಯೂ ಹತ್ತಿದ ಬೆಂಕಿಗೆ ಎಣ್ಣೆ ಹಾಕುವ ಸಣ್ಣಗುಣ ನನ್ನಲ್ಲಿಲ್ಲ ಮಾವ, ನೀನು ಮಣ್ಣಿಗೆ ಹೋಗುವ ಮೊದಲು ಮಗಳಿಗೊಂದು ಗಂಡು ತಂದು ಮದುವೆ ಮಾಡಿದ್ರ ಪಾಡಂತ ನನ್ನ ವಿಚಾರ.

ಭಾಗ್ಯವಂತ : ನಿನ್ನ ವಿಚಾರವೇನು ಚನ್ನಾಗಿದೆ ಭಗವಂತ, ಮೊದಲು ನಿಮ್ಮ ಬಾಸಿಂಗ ಬಲ ಕೂಡಿ ಬರಬೇಕು. ಅನಂತರ ಛತ್ರ ಚಪ್ಪರಕ್ಕೆಂದು ಊಟ ಉಪಚಾರಕ್ಕೆಂದು ಹೇರಳವಾಗಿ ಹಣ ಬೇಕು ಅದ್ಕಾ ಮೊದಲು ಹಣರಡಿ ಮಾಡಿ ಮದುವೆ ಫಿಕ್ಸ್ ಮಾಡ್ತೀನಿ ಮತ್ತೇನು?

ಭಗವಂತ : ನೀನು ನಮ್ಮ ಮದುವೆ ಫಿಕ್ಸ್ ಮಾಡೋದರೊಳಗೆ ನಮ್ಮ ಸೆಕ್ಸಿನ ವಯಸ್ಸು ಎಕ್ಸಾಗಿರ್ತಾದ. ಆಗ ನಾವು ರಾಮಾಯಣ ಮಹಾಭಾರತದ ಬುಕ್ಸ್ ಓದಬೇಕಾಗ್ತಾದೋ ಮಾವ, ಅದ್ಕಾ ನಾನು ನಿನಗೊಂದು ಕಿವಿಮಾತು ಹೇಳ್ತೀನಿ ಬಾ.

ಭಾಗ್ಯವಂತ : ಮತ್ತಾವ ಕಿವಿ ಮಾತಪ್ಪ ನಿಂದು?

ಭಗವಂತ : ಈಗ ನೀವು ಎಲ್ಲಿಗೆ ಹೊರಟಿದ್ದಿರಿ?

ಭಾಗ್ಯವಂತ : ಅದೇ ಸುರೇಂದ್ರ ಸಾಹುಕಾರರ ತಮ್ಮ ಚಂದ್ರುನ ಮದುವೆಗೆ ಹೊರಟಿದ್ದೇವೆ.

ಭಗವಂತ : ಸರಿ ! ಸಧ್ಯ ನಾನು ಅದೇ ಮದುವೆಗೆ ಹೊರಟಿದ್ದೇನೆ ಅಲ್ಲಿ ನಿನ್ನ ಒಂದು ಪೈಸಾಕೂಡಾ ಖರ್ಚಿಲ್ಲದೆ ನಿನ್ನ ಮಗಳ ಮದುವೆ ಬಹು ಅದ್ದೂರಿಯಿಂದ ಮಾಡಬಹುದು.

ಭಾಗ್ಯವಂತ : ಏನು? ಖರ್ಚಿಲ್ಲದೆ ನನ್ನ ಮಗಳ ಮದುವೆ ಅದ್ದೂರಿಯಿಂದ ಮಾಡಬಹುದಾ? ಅದು ಹೇಗೋ?

ಭಗವಂತ : ಹೇಗೋ ಸಾಹುಕಾರರು, ತಮ್ಮ ತಮ್ಮನ ಮದುವೆಗೆ ಎಂದು ಹಂದ್ರ ಹಾಕಿರ್ತಾರ, ಬಾಜಿ ಭಜಂತ್ರಿ ತರಿಸಿರುತ್ತಾರ, ಲಾಡು ಜಿಲಾಬಿ ಮಾಡ್ಸಿರುತಾರ, ಅವರ ಮದುವೆಗೆಂದು ದೊಡ್ಡ ದೊಡ್ಡ ಶ್ರೀಮಂತರು ಬಂದಿರುತಾರ, ಅದ್ರಾಗೆ ನಮ್ಮ ಮದುವೆ ಇಟ್ಟು ಕೊಂಡ್ರಾಯಿತು, ನಮಗೂ ಲಕ್ಷಾಂತ್ರ ಆಯೇರಿ ಬರ್ತಾದ.

ಭಾಗ್ಯವಂತ : ಛೇ, ಛೇ, ತಪ್ಪು ತಪ್ಪು ಹಾಗೆಲ್ಲಾ ಮಾಡಃಬಾರ್ದು ಅವಸರ ಅಪಾಯಕಾರಿ, ತಾಳಿದವರೇ ಬಾಳುವರು ಅಂತ ಹಿರೇರು ಹೇಳ್ತಾರ, ಲೇ ತಮ್ಮ ಭಗವಂತ ನನ ಹಂತೇಕ ಒಂದು ಹನ್ನೊಂದು ರೂಪಾಯಿ ಐತಿ, ನಿನ್ನಲ್ಲಿ ಒಂದು ನೂರು ರೂಪಾಯಿ ಇದ್ರ ಕೊಡು, ನಾನು ಮುಂದ ಹೋಗಿ ನಮ್ಮಿಬ್ಬರ ಹೆಸರಲ್ಲಿ ನೂರ ಹನ್ನೊಂದು ರೂಪಾಯಿ ಆಯೇರಿ ಬರಸ್ತೀನಿ ತಾ.

ಭಗವಂತ : ಆಯ್ತು ಬೇಗ ಹೋಗು ಮಾವ, ಹಾಯೇರಿ ಪಃಟ್ಟ್ಯಾಗ ಮೊದಲನೇ ಹೆಸರೆ ನಿಂದಿರಬೇಕು ನೋಡು. ಇದೋ ನೂರಕ ಎಂಭತ್ತು ಮೂರು ರೂಪಾಯಿ ಕಡಿಮ್ಯಾವ, ನನ್ನ ಹೆಸರ್ನಾ ಬರಿಸಿ ಬಾ.

ಭಾಗ್ಯವಂತ : ಆಯ್ತಪ್ಪ ! ಸಿಕ್ಕಷ್ಟೇ ಸಿಕ್ಕಿತು ಫಿಂಜಾರ ಸಾಲಂತ, ತಾ [ಹಣ ಕೊಡುವನು] ಯವ್ವಾ ಯಮುನವ್ವಾ ! ನಾನು ಹೋಗ್ತೀನಿ ನೀನು ಇವನ ಕೂಡ ಜ್ವಾಕ್ಯಾಗಿ ಬಾರವ್ವಾ, ಮತ್ತೆ ಬಾಳೆ ಸಿಪ್ಪೆ ಮೇಲೆ ಕಾಲಿಟ್ಟು ಜಾರಿ ಬಿದ್ದಿಗಿದ್ದೀ, ಹುಷಾರ್ [ಹೋಗುವನು]

ಭಗವಂತ : ಈಕೆ ಜಾರಿ ಬಿದ್ರ ಹಿಡ್ಕೊಳ್ಳಾಕ ನಾನಿದ್ದೀನಿ ಹೋಗು ನೀನೇನು ಚಿಂತಿ ಮಾಡ್ಬ್ಯಾಡ

===**====**===

ಏಳನೇ ದೃಶ್ಯ

ಮನೆ

ರವಿ : [ಹೊರಗಿನಿಂದ ಬರುತ್ತ] ಗಂಗಾ ! ಗಂಗಾ !! ಏ ಗಂಗಾ !! ಬೇಗ ಬಾರೆ ಏನು ಮಾಡುತ್ತಿರುವಿ ಮನೆಯಲ್ಲಿ?

ಗಂಗಾ : ಏಕೆ ಸ್ವಾಮಿ ಗಂಗಾ ! ಗಂಗಾ !! ಅಂತ ಒಂದೇ ಸಮ ಕೂಗ್ತಾ ಇದ್ದೀರಲ್ಲ ಏನು ಸಮಾಚಾರ?

ರವಿ : ನಾನು ಅರ್ಜಂಟಾಗಿ ತೋಟಕ್ಕೆ ಹೋಗಬೇಕಾಗಿದೆ ಬೇಗ ಒಂದು ಕಪ್ಪು ಹಾಲು ಬಿಸಿಮಾಡಿಕೊಂಡು ಬಾ.

ಗಂಗಾ : ಆಯ್ತು ತಡ್ರಿ, ಬೇಗ ತರುವೆ [ಒಳಗೆ ಹೋಗುವಳು ಹೊರಗಿನಿಂದ ಪೋಷ್ಟ ಎಂದು ಪೋಷ್ಟ್ ಮೆನ್ ಕೂಗುವನು ರವಿ ಹೊರಗೆ ಹೋಗುವನು]

ಗಂಗಾ : [ಹಾಲಿನ ಗ್ಲಾಸ್ ಹಿಡಿದುಕೊಂಡು ಬಂದು] ರೀ ರೀ ರೀ ಅಂ ಇದೇನು ಇವರು ಕಾಣ್ತಾನೆ ಇಲ್ಲವಲ್ಲ ಎಲ್ಲಿಗೆ ಹೋದ್ರು? [ಎಂದು ಹಾಲಿನ ಗ್ಲಾಸ್ ಮೇಜಿನ ಮೇಲಿಟ್ಟು ಹೊರಗೆ ಹೋಗುವಳು].

ಜಮುನಾ : [ಒಳಗಿನಿಂದ ಖಾಲಿ ಕೊಡ ಹಿಡಿದುಕೊಂಡು ಬಂದು ಓ ಹೋ ವಿಷ ಬೆರಿಸಲು ಇದೇ ತಕ್ಕ ಸಮಯ [ಎಂದು ತನ್ನ ಎದೆಯಲ್ಲಿಟ್ಟುಕೊಂಡ ವಿಷದ ಚೀಟು ತೆಗೆದು ಅದನ್ನು ಗ್ಲಾಸಿನಲ್ಲಿ ಹಾಕು, ಕೊಡ ತೆಗೆದುಕೊಂಡು ಹೊರಗೆ ಹೋಗುವಳು].

ರವಿ : [ಹೊರಗಿನಿಂದ ಗಂಗಾಳೊಂದಿಗೆ ಬಂದು] ಗಂಗಾ ನನಗ ಹಾಲು ಬೇಡ ಊಟಕ್ಕೆ ಹಾಕು, ಒಮ್ಮೆ ಊಟ ತೀರಿಸಿಕೊಂಡೆ ನಾ ತೋಟಕ್ಕೆ ಹೋಗ್ತೀನಿ [ಅಲ್ಲಿಗೆ ಸುರೇಂದ್ರ ಶಶಿ ಬರುವರು].

ಶಶಿ : ಅಮ್ಮಾ ! ಹಾಗಿದ್ದರೆ ಅಪ್ಪನು ಕುಡಿಯದೆ ಬಿಟ್ಟಿರುವ ಹಾಲು ನನಗೆ ಕೊಡು ನಾನು ಕುಡ್ತೀನಿ [ಎಂದು ಹಾಲಿನ ಗ್ಲಾಸ್ ತೆಗೆದುಕೊಳ್ಳುವನು]

ಸುರೇಂದ್ರ : ಮತ್ತೇಕೆ ಕುಡಿತಿ ಶಶಿ ಒಮ್ಮೆ ನಿಮ್ಮ ತಂದೆಯವರ ಜೊತೆ ಊಟ ಮಾಡಿಬಿಡು ಯಾಕಂದರ ಸ್ಕೂಲಿಗೆ ಹೊತ್ತಾಗುತ್ತದೆ ಹೋಗು ಆ ಹಾಲು ನಾನು ಕುಡಿಯುತ್ತೇನೆ ತನ್ನಿ ಎಂದು ಹಾಲು ಕುಡಿಯುವನು.

ಚಂದ್ರು : [ಹೊರಗಿನಿಂದ ಬರುತ್ತ] ಅಣ್ಣಾ ! ಊಟ ಮಾಡಿದ್ರಿತಾನೆ?

ಸುರೇಂದ್ರ : ಇಲ್ಲಪ್ಪ ಇನ್ನೂ ಇದೇ ಈಗ ತಾನೆ ಹಾಲು ಕುಡಿದಿದ್ದೇನೆ ಶಶಿನ ಸ್ಕೂಲಿಗೆ ಬಿಟ್ಟು ಬಂದು ಊಟ ಮಾಡುತ್ತೇನೆ ಹೋಗು ನೀನು ಊಟ ಮಾಡು.

ಚಂದ್ರ : ಒಳ್ಳೆಯದಣ್ಣ [ಒಳಗೆ ಹೋಗುವನು ಜಮುನಾ ಬರುವಳು]

ಸುರೇಂದ್ರ : ಆಂ ಅಮ್ಮಾ [ಹೊಟ್ಟೆ ಹಿಡಿದು ಕೊಂಡು] ಗಂಗಾ ! ರಚಿ, ಚಂದ್ರು, ನಾನು ಸಾಯ್ತಿನ್ರಿ ಕಣೋ [ಎಲ್ಲರೂ ಹೊರಗೆ ಬಂದು]

ರವಿ : ಏಕೆ ಅಣ್ಣ ಏನಾಯಿತು?

ಸುರೇಂದ್ರ : ಹಾಲು ಕುಡಿದ ತಕ್ಷಣ ಯಾಕೋ ಹೊಟ್ಟೆಯಲ್ಲಿ ಒಂದು ತರಹ ಸಂಕಟದೊಂದಿಗೆ ನಾಲಿಗೆ ಬಿರುಸಾಗಿ ಗಂಟಲು ಒಳಜಗ್ಗ ತೊಡಗಿದೆ. ತಮ್ಮ ರವಿ–ಚಂದ್ರು ನಾನು ಸಾಯ್ತಿನ್ರಿ ಕಣೋ ಸಾಯ್ತಿನಿ [ರವಿ ಮತ್ತು ಚಂದ್ರು ಸುರೇಂದ್ರನ ಓಡಿ ಬಂದು ಒಂದೊಂದು ಕೈಹಿಡಿದುಕೊಂಡು ನಿಂತಿರುವರು, ಗಂಗಾ ಎದುರಿಗೆ ನಿಂತಿರುವಳು, ಕಾಳಿಂಗ ಹೊರಗಿನಿಂದ ಬರುವನು]

ಕಾಳಿಂಗ : ಇದೇನೋ ರವಿ ! ಮನೆಯವರೆಲ್ಲರೂ ಒಂದು ತರಹ ಭ್ರಮೆಗೊಂಡು ನಿಂತಂತೆ ಕಾಣುತ್ತಿದೆಯಲ್ಲ ಏನು ಸಮಾಚಾರ?

ರವಿ : ಬನ್ನಿ ಡಾಕ್ಟರ್ ಬನ್ನಿ, ದೇವರು ನಿಮ್ಮನ್ನು ಒಳ್ಳೆ ಸಮಯಕ್ಕೆ ಕಳುಹಿಸಿಕೊಟ್ಟಿದ್ದಾನೆ ನಮ್ಮ ಅಣ್ಣಾಜಿಯವರು ಹಾಲು ಕುಡಿದ ತಕ್ಷಣ ಹೊಟ್ಟೆಯಲ್ಲಿ ನೋವು ಸಂಕಟ ಎಂದು ರೋಧಿಸುತ್ತ ಒದ್ದಾಡುತಿದ್ದಾನೆ.

ಕಾಳಿಂಗ : ಹಾಗಾದರೆ ಆ ಹಾಲಿನ ಗ್ಲಾಸ್ ಎಲ್ಲಿದೆ?

ಚಂದ್ರು : ಇಲ್ಲೇ ಇದೆ ಸರ್, ಇದೇ ಗ್ಲಾಸ್ [ಎಂದು ಗ್ಲಾಸ್ ಕೊಡುವನು]

ಕಾಳಿಂಗ : [ಗ್ಲಾಸ್ ಮೂಸಿಸಿ ನೋಡಿ] ರವಿ ಇವರನ್ನೂ ಕೊಲ್ಲಲೇಬೇಕೆಂಬ ದುರುದ್ದೇಶದಿಂದ ಯಾರೋ ಇದರಲ್ಲಿ ಉಗ್ರವಾದ ವಿಷ

ಬೆರೆಸಿದ್ದಾರೆ.

ರವಿ : ಇದೇನು ಹೇಳುತಿರುವಿ ಡಾಕ್ಟರ್?

ಕಾಳಿಂಗ : ಸತ್ಯವನ್ನೇ ಹೇಳುತಿರುವೆ ಮಿತ್ರ ! ಈ ಕ್ರೂರ ವಿಷಬಾಧೆಯಿಂದ ನಿಮ್ಮ ಅಣ್ಣನವರು ಬದುಕಿ ಉಳಿಯುವದು ಮಹಾ ಕಷ್ಟ ಆದರೂ ದೇವರ ಮೇಲೆ ಭಾರಹಾಕಿ ಪ್ರಯತ್ನ ಮಾಡುತ್ತೇನೆ.

ಸುರೇಂದ್ರ : ಗಂಗಾ ! ನೀನು ನಮ್ಮ ಪಾಲಿಗೆ ದೇವತೆ ಎಂದು ನಂಬಿದ್ದೆ ಆದರೆ ನಾನು ನಂಬಿದ ನನ್ನದೇವತೆಯಿಂದಲೇ ನನ್ನ ಮರಣ, ಗಂಗಮ್ಮಾ ನಾನು ನಿನಗೇನು ಅನ್ಯಾಯ ಮಾಡಿದ್ದೇನೆಂದು ನನಗೆ ಈ ಶಿಕ್ಷೆ ವಿಧಿಸಿದಿ? ಹಂ !! ಅಮೃತ ಕಡಲಾಗಿದ್ದ ನಿನ್ನ ಮಡಲು ಇಂದು ಹಾಲಾ ಹಲವಾಯಿತೆ?

ಶಶಿ : ದೊಡ್ಡಪ್ಪ ದಯವಿಟ್ಟು ನನ್ನನ್ನು ಬಿಟ್ಟು ಹೋಗಬೇಡ.

ಕಾಳಿಂಗ : ರವಿ, ಚಂದ್ರು ನಿಮ್ಮ ಅಣ್ಣಾಜಿಯವರನ್ನು ಒಳ ಮನೆಯ ಮಂಚಕ್ಕೆ ತೆಗೆದುಕೊಂಡು ನಡೆಯಿರಿ [ಸುರೇಂದ್ರನನ್ನು ಒಳಗೆ ಹೊಯುವರು]

ರವಿ : [ಹೊರಗೆ ಬಂದು] ಗಂಗಾ ! ಏನಿದೆಲ್ಲಾ?

ಗಂಗಾ : ಏನೋ ಸ್ವಾಮಿ ! ನನಗಂತೂ ಒಂದೂ ತಿಳಿಯದಂತಾಗಿದೆ

ರವಿ : ಹುಂ !! ಮಾಡಬಾರದನ್ನೆಲ್ಲಾ ಮಾಡಿ ಅದನ್ನು ಮುಚ್ಚುವಗೋಸ್ಕರ ನನ್ನ ಮುಂದೆ ನಾಟಕ ಮಾಡ್ತಿಯೇನೆ ಕತ್ತಿರಂಡೆ.

ಗಂಗಾ : ಸ್ವಾಮಿ ! ನಿಜವಾಗಿಯು ದೇವರ ಆಣೆ ಮಾಡಿ ಹೇಳುತ್ತೇನೆ ನಾನು ನಿರಪರಾಧಿ, ದಯವಿಟ್ಟು ತಾವು ಇಲ್ಲದನ್ನು ಕಲ್ಪಿಸಿಕೊಂಡು ನನ್ನ ಮೇಲೆ ಇಲ್ಲ–ಸಲ್ಲದ ಆರೋಪ ಕೊಡಬೇಡಿ, ಕೊಟ್ಟ ಮನೆಗೆ ಕೆಟ್ಟದನ್ನು ಬಗೆಯುವ ದುಷ್ಟಗುಣ ನನ್ನ ಹೊಟ್ಟೆಯಲ್ಲಿ ಹುಟ್ಟಲಾರದು.

ರವಿ : ಸಾಕು ಬಾಯಿ ಮುಚ್ಚಿಕೊಂಡು ಸುಮ್ಮನೆ ಬಿದ್ದಿರು, ಗಂಡನೇ ದೇವರೆಂದು ಡಂಬಾಟ ಮಾಡಿ, ಮಿಂಡನ ಮಾತಿನಂತೆ ಗಂಡನು ಕುಡಿಯುವ ಹಾಲಿಗೆ ವಿಷಹಿಂಡಿದ ಭಂಡ ಹೆಂಡತಿಗೆ. ಗರತಿ ಎಂದು ಗೌರವ ಕೊಟ್ಟದ್ದು ನನ್ನ ತಪ್ಪು ! ಆ ನನ್ನ ತಪ್ಪಿಗೆ ಇಂದು ನಮ್ಮಣ್ಣ ಬಲಿಯಾದ.

ಗಂಗಾ : ಪತಿದೇವಾ ! ನನ್ನ ನಡೆ–ನುಡಿಯಲ್ಲಿ ಅಪಾರ ನಂಬಿಕೆಯುಳ್ಳ ನಿಮಗೆ, ನನ್ನ ವಿಷಯದಲ್ಲಿ ಸಂಶಯದ ಸಸಿ ನಾಟಿತೆ?

ರವಿ : ಥೂ ವಿಷಪಾವತಿ, ಗಂಡನನ್ನು ಕೊಲ್ಲಬೇಕೆಂಬ ಉದ್ದೇಶದಿಂದ ಹಾಲಿನಲ್ಲಿ ವಿಷ ಬೆರೆಸಿ ಗಂಡನಿಗೆ ತಂದುಕೊಟ್ಟ ವಿಷ ಜಂತು ನೀನು.

ಚಂದ್ರು : [ಒಳಗಿನಿಂದ ಬಂದು] ಅತ್ತಿಗೆ ತಂದೆ–ತಾಯಿಯರನ್ನು ಕಳೆದುಕೊಂಡ ನಮಗೆ, ನಮ್ಮಣ್ಣನೇ ನಮಗೆ ತಂದೆ–ತಾಯಿಯಾಗಿ ಸಾಕು ಸಲುಹಿ ವಿದ್ಯಾಭ್ಯಾಸ ಕಲಿಸಿದ ನಮ್ಮ ತ್ಯಾಗ ಮೂರ್ತಿಗೆ ಬಲಿತೆಗೆದುಕೊಂಡಿಯಾ? ಹೇಳತ್ತಿಗೆ ನಮ್ಮಣ್ಣ ನಿನಗೇನು ಅನ್ಯಾಯ ಮಾಡಿದ್ದ.

ಗಂಗಾ : ಮೈದುನಾ, ದಯವಿಟ್ಟು ನನ್ನ ವಿಷಯದಲ್ಲಿ ಅಪಾರ್ಥ ಕಲ್ಪಿಸಿ ಕೊಳ್ಳಬೇಡ, ದೇವರಂತ ಗಂಡನಿಗಾಗಲಿ, ತಂದೆಯಂತ ಭಾವನಿಗಾಗಲಿ, ಮಗನಂತಿದ್ದ ಮೈದುನನಿಗಾಗಲಿ, ವಿಷಹಾಕಿ ನಾನಾವ ನರಕಕ್ಕೆ ಹೋಗಲಿ? ಹುಂ !! ನನಗೆ ಯಾರೋ ಬೇಕಾಗದವರು ಈ ಅಪವಾದ ನನ್ನ ಮೇಲೆ ತರಬೇಕೆಂಬ ದುರದ್ದೇಶದಿಂದ ಈ ಕೆಲಸ ಮಾಡಿದ್ದಾರೆ.

ಕಾಳಿಂಗ : ಕೇಳಿದಿಯಾ ಚಂದ್ರು ನಿನ್ನತ್ತಿಗೆಯ ಗೂಡರ್ಥದ ಮಾತು ಆಕೆಗೆ ಬೇಕಾಗದವರು ಈ ಮನೆಯಲ್ಲಿ ಯಾರಿದ್ದಾರೆ? ರವಿ ಅಂತು ಆಕೆಯ ಗಂಡ, ಜಮುನಾ ಆಕೆಯ ತಂಗಿ, ಶಶಿ ಆಕೆಯ ಮಗ ಅಂದ ಮೇಲೆ ಆಕೆಗೆ ಬೇಕಾಗದವರು ನಿನ್ನ ಹೊರತುಪಡಿಸಿದರೆ ಬೇರೆ ಯಾರಿದ್ದಾರೆ? ಎಂದು ಆಕೆಯ ಮಾತಿನರ್ಥ ಎತ್ತಿ ತೋರಿಸುತ್ತದೆ.

ಗಂಗಾ : ಡಾಕ್ಟರ್ ನಂದಿ ಹೋಗುವ ಜ್ವಾಲೆಗೆ ಮತ್ತಿಷ್ಟು ಎಣ್ಣೆ ಸುರಿದು ನಿರಪರಾಧಿಯಾದ ನನ್ನನ್ನು ದಹಿಸಬೇಡ.

ರವಿ : ಗಂಗಾ [ಕಪಾಳಕ್ಕೆ ಹೊಡೆದು] ಸದಾ ಈ ಮನೆಯ ಹಿತಚಿಂತನೆ ಗೈಯುವ ದೇವರಂಥ ನನ್ನ ಸ್ನೇಹಿತನಿಗೆ ಎದುರುತ್ತರ ಕೊಡ್ತಿಯೇನೇ ಗಯ್ಯಾಳಿ ! ಹೊರಟು ಹೋಗು ನಿನಗಿನ್ನು ಈ ಮನೆಯಲ್ಲಿ ಸ್ಥಾನವಿಲ್ಲ [ಎಂದು ಹೊರಗೆ ದಬ್ಬುವಷ್ಟರಲ್ಲಿ ಹೊರಗಿನಿಂದ ರಮೇಶ ಬರುವನು, ಕಾಳಿಂಗ ಒಳಗೆ ಹೋಗುವನು]

ರಮೇಶ : ಇದೇನು ರವಿ, ಮನೆಯಲ್ಲಿ ಏನೋ ಗದ್ದಲ ನಡೆದಂತೆ ಕಾಣುತಿದೆಯಲ್ಲ ಏನು ಸಮಾಚಾರ?

ರವಿ : ಹೂಂ ನಡೆದಿದೆ ಗದ್ದಲ, ಗುಣವಂತರ ಮನೆಯಲ್ಲಿ ಹುಟ್ಟಿರುವ ನನ್ನ ಹೆಂಡತಿ ಗುಣವಂತಿಯಂದು ನಂಬಿದ ಈ ಬುದ್ಧಿಶೂನ್ಯ ಗಂಡನಿಗೆ ಕದ್ದು ಹಾಲಿನಲ್ಲಿ ಮದ್ದು ಹಾಕಿದ್ದಾಳೆ ಈ ನಿನ್ನ ಮುದ್ದು ತಂಗಿ, ಹುಂ !! ವಿಧಿ ನನ್ನನ್ನು ತಪ್ಪಿಸಿ, ನನ್ನ ಅಣ್ಣನವರನ್ನು ಬಲಿತೆಗೆದುಕೊಂಡಿತು.

ರಮೇಶ : ಗಂಗಾ ! ರವಿ ಹೇಳುತ್ತಿರುವ ಮಾತು ಸತ್ಯವೇನಮ್ಮ?

ಗಂಗಾ : ಸತ್ಯ ಅಸತ್ಯಗಳನ್ನು ವರೆಗಲ್ಲಿಗೆ ಹಚ್ಚಿ ನೋಡುವ ತಾಳ್ಮೆಯೇ ನನ್ನ ಪತಿಯಲ್ಲಿ ಉಳಿದುಕೊಂಡಿಲ್ಲ, ಅಂದ ಮೇಲೆ ನಾನೀಗ ನಿಜವಾಗಿಯೂ ಅವರ ದೃಷ್ಟಿಯಲ್ಲಿ ವಿಷಪಾತಕಿಯೇ ಹೌದು.

ರಮೇಶ : ಸುಳ್ಳು ಇದು ಮಾತ್ರ ಸುಳ್ಳು ಕನಸಿನಲ್ಲಿಯೂ ಸಹಿತ ಪರರಿಗೆ ಕೆಟ್ಟದನ್ನು ಬಗೆಯದ ನನ್ನ ತಂಗಿ, ಸಾಯುಜ್ಯ ಸ್ವರೂಪವಾದ ಗಂಡನಿಗಾಗಲಿ, ಹೆತ್ತ ತಂದೆಯ ಸ್ವರೂಪವಾದ ಭಾವನಿಗಾಗಲಿ ವಿಷಹಾಕುವಳೆ? ಛೇ ಅಜನ್ಮ ವೈರಿಯಿದ್ದರೂ ಸಹಿತ ಅವರಿಗೆ ಹಾಲಿನಲ್ಲಿ ಸಕ್ಕರೆ ಬೆರಿಸಿಕೊಡುವ ಸದ್ಬುದ್ಧಿ ಇದೇ ಹೊರತು, ವಿಷ ಬೆರೆಸಿಕೊಡುವ ದುರ್ಬುದ್ಧಿ ನನ್ನ ತಂಗಿಯಲ್ಲಿ ತಿಲ ಮಾತ್ರ ವಿಲ್ಲ.

ರವಿ : ಹೆತ್ತವರಿಗೆ ಕತ್ತಿಯೂ ಪ್ರೀತಿಯ ವಸ್ತಾಗುತ್ತೆ ರಮೇಶ, ಅಂಗೈ ಹುಣ್ಣಿಗೆ ಕೈ ಗನ್ನಡಿ ಬೇಕಿಲ್ಲ, ಸತ್ವಹ ಅವಳ ಕೈಯಿಂದಲೇ ನನಗೆ ಹಾಲು ಕೊಟ್ಟಿದ್ದಾಳೆ ಇದಕ್ಕೆ ಪ್ರತ್ಯಕ್ಷ ಸಾಕ್ಷಿಯೇ ನಾನು.

ರಮೇಶ : ನೀನು ಪ್ರತ್ಯಕ್ಷ ಕಂಡಿದ್ದಿ ವಿನಹ ಅದನ್ನು ಪ್ರಮಾಣಿಸಿ ನೋಡಿಲ್ಲ, ರವಿ ನನ್ನ ತಂಗಿ ಅದೆಂದಿಗೂ ಇಂಥ ಹೇಯ ಕೆಲಸ ಮಾಡಲಾರಳು, ಇದರಲ್ಲೇನೋ ಮೋಸವಿದೆ ಯಾರೋ ನನ್ನ ತಂಗಿಗೆ ಆಗದವರ ಕೈವಾಡವಿದೆ.

ರವಿ : ರಮೇಶ !

ರಮೇಶ : ಹೌದು ಯಾವುದೋ ತಮ್ಮ ಸ್ವಾರ್ಥ ಎಟಗಿಸಿ ಕೊಳ್ಳಲಿಕ್ಕಾಗಿದೆ, ಅಸಮರ್ಥರಾಗಿ, ಕೊನೆಗೆ ಈ ಅಪವಾವನ್ನಾದರೂ ಅವಳ ತಲೆಯ

ಮೇಲೆ ಹೊರಿಸಿಬೇಕೆಂಬ ದುರುದ್ದೇಶದಿಂದ ಈ ಕಾರ್ಯ ಮಾಡಿದ್ದಾರೆ.

ರವಿ : ಈ ನಿನ್ನ ಉಪದೇಶ ನನಗೆ ಬೇಕಿಲ್ಲ ರಮೇಶ ! ನಂಬಿಗೆಯನ್ನು ಕಳೆದುಕೊಂಡ ಈ ಗಂಗೆ ಯಾವ ಸಮಯದಲ್ಲಿ ಯಾರಿಗೆ ಏನು ಮಾಡುತ್ತಾಳೋ ಗೊತ್ತಿಲ್ಲ. ಇಂಥವಳಿಗೆ ಈ ಮನೆಯಲ್ಲಿ ಜಾಗವಿಲ್ಲ, ಜಮುನಾ ! ಇವಳ ಬಟ್ಟೆ ಬರಿಗಳನ್ನೆಲ್ಲಾ ತಂದು ಎಸೆದು ಬಿಡು.

ಜಮುನಾ : ಆಯ್ತು ಭಾವ, ಹಿರಿಯರ ಅನುಮತಿ ಅನುಸರಿಸುವುದು ಕಿರಿಯವರ ಆದ್ಯ ಕರ್ತವ್ಯ [ಎಂದು ಒಳಗೆ ಹೋಗಿ ಸೂಟ್ಕೇಸು ತರುವಳು]

ರವಿ : ನಿಲ್ಲು ಜಮುನಾ, ವಿಷ ತುಂಬಿದ ಹೆಣ್ಣು ತನ್ನಾಸೆಗಾಗಿ ಮೋಸದಿಂದ ನಮ್ಮ ಕಣ್ಣು ಮುಚ್ಚಿ ಹಣ ಕದ್ದಿಟ್ಟು ಕೊಂಡಿರುವುದಲ್ಲೇನು ಸಂದೇಹವಿಲ್ಲ, ಗಂಗಾ ! ನಿನ್ನ ಸೂಟ್ಕೇಸಿನ ಬೀಗದ ಕೈಕೊಡು [ಗಂಗಾ ಕೊಡುವಳು ಸೂಟ್ಕೇಸು ತೆಗೆದು ಬಟ್ಟೆ ಜಾಡಿಸುವಾಗ, ಅದರಿಂದ ಒಂದು ಗಂಡಸಿನ ಭಾವ ಚಿತ್ರದೊಂದಿಗೆ, ಗಂಗಾ ಕುಳಿತ ಚಿತ್ರವಿದ್ದು, ಅದರಲ್ಲಿ ಪ್ರೇಮಪತ್ರ ಸಿಗುವವು, ಅದರಲ್ಲಿ ಒಂದು ಪತ್ರ ತೆಗೆದು ರವಿ ಓದುವನು]

ಶಶಿ : [ತಂದೆಯ ಕೈಯಲ್ಲಿದ್ದ ಫೋಟೋ ತೆಗೆದುಕೊಂಡು] ಅಪ್ಪಾಜಿ ! ಇದಂತು ಅಮ್ಮಾಜಿಯವರ ಫೋಟೋ, ಆದರೆ ಇವರ ಮಗ್ಗಲಿಗೆ ಕುಳಿತ ಗಂಡಸು ಯಾರು?

ರವಿ : ಶಶಿ, ನಿನ್ನ ತಾಯಿಯ ಜಾರತನದ ಪುರಾಣವನ್ನು ನನ್ನ ಬಾಯಿಯಿಂದಲೇ ಕೇಳಬೇಕೆಂಬ ಆಶೆಯಾಗಿದೆಯೇನು? ಹಾಗಿದ್ದರೆ ಕೇಳು, ತನ್ನನ್ನು ಕದ್ದು ಮುದ್ದಾಡಲು ಇಟ್ಟುಕೊಂಡ ನಿಮ್ಮಮ್ಮನ ವಿಟ ಪುರುಷ.

ಗಂಗಾ : ಅಯ್ಯೋ ಶಿವ ಶಿವ ಜಗಲಿಂಗ, ನಾನು ಇದನ್ನೇನು ಕೇಳುತ್ತಿರುವೆ ತಂದೆ.

ರವಿ : ಶಿವ? ಹುಂ ಗಂಡನೆ ದೇವರೆಂದು ಗರತಿಯರ ಸೋಗು ಹಾಕಿ ಅವನಿಲ್ಲದ ಸಮಯದಲ್ಲಿ ಮಿಂಡನೊಡನೆ ಕಂಡಂತೆ ತಿರುಗುವ ನಿನ್ನಂಥ ಭಂಡ ಸತಿಸೂಳೆಗೆ, ಆ ಶಿವನೂ ಬೇರೆ ಕೇಡು ಜಮುನಾ ಆ ಪತ್ರಗಳನ್ನು ನಿಮ್ಮಣ್ಣನ ಕೈಗೆ ಕೊಡು, ತಂಗಿಯ ಹಾದರ ಕಥೆ

ಓದಿ ಆನಂದ ಪಡಲಿ

[ಜಮುನಾ ಪತ್ರಗಳನ್ನು ರಮೇಶನಿಗೆ ಕೊಡುವಳು]

ರಮೇಶ : ರವಿ ಇದು ಸುಳ್ಳು, ಇದರಲ್ಲಿಂಯೂ ಮೋಸವಿದೆ. ಸ್ವರ್ಗಮಯವಾಗಿದ್ದ ನನ್ನ ತಂಗಿಯ ಬದುಕು ನರಕವಾಗಿ ಮಾಡಬೇಕೆಂಬ ಕುತಂತ್ರವಿದು, ಯಾರೋ ನನ್ನ ತಂಗಿಗೆ ಗೊತ್ತು ಆಗದ ಹಾಗೆ ತಂದು ಅವಳ ಸೂಟ್ಕೇಸಿನಲ್ಲಿಟ್ಟಿದ್ದಾರೆ.

ರವಿ : ಅಂತೂ ತಂಗಿಯ ತಪ್ಪನ್ನು ಮುಚ್ಚಿ ಹಾಕಲು ಒಪ್ಪಿಸಿ ಮಾತಾಡ್ತಿ, ರಮೇಶ ನಾನು ನೀನು ತಿಳಿದು ಕೊಂಡಷ್ಟು ಮೂರ್ಖನಲ್ಲ ಸೂಟ್ಕೇಸಿನ ಬೀಗದಕ್ಕೆ ನಿನ್ನ ತಂಗಿಯ ಹತ್ತಿರವಿದೆ ಅಂದ ಮೇಲೆ ಅವುಗಳು ಎಲ್ಲಿಂದ ಬಂದವು ಕೇಳು ನಿನ್ನ ಹಾದರಗಿತ್ತಿ ತಂಗಿಗೆ.

ರಮೇಶ : ರವಿ, ನಾಲಿಗೆ ಸ್ವಲ್ಪು ಬಿಗಿ ಹಿಡಿದು ಮಾತಾಡು, ಗರತಿಯರ ಮುಕುಟವಾಗಿದ್ದ ನನ್ನ ತಂಗಿಗೆ ಅಲ್ಲಸಲ್ಲದ ಮಾತಾಡಿ ಪಾಪಕ್ಕೆ ಗುರಿಯಾಗಬೇಡ, ನೀನು ತಿಳಿದು ಕೊಂಡ ಹಾಗೆ ನನ್ನ ತಂಗಿ ಹಾದರದ ಹೆಣ್ಣಲ್ಲ, ಸನಾತನ ಕಾಲದಿಂದಲು ಬೆಳೆದು ಬಂದ ಭಾರತೀಯ ಸಂಸ್ಕೃತಿಯನ್ನು ಅವಲಂಬಿಸಿಕೊಂಡು ನಡೆದ ಗರತಿ–ಗಂಗಾ.

ರವಿ : ಅದೇನೇ ಇರಲಿ ! ನಿನಗೆ ನಿನ್ನ ತಂಗಿಯ ಮೇಲೆ ನಂಬಿಕೆಯಿದ್ದರೆ ಮೊದಲು ಇವಳನ್ನು ಕರೆದುಕೊಂಡು ಈ ಮನೆ ಬಿಟ್ಟು ಹೊರಟು ಹೋಗು.

ರಮೇಶ : ಹೃದಯ ಅಷ್ಟೊಂದು ಕಠೋರ ಮಾಡಿಕೊಳ್ಳ ಬೇಡ ರವಿ ! ಮೂಡಣದ ಮನೆಯಿಂದ ಮಂಜು ತೀರ್ಥದಿಮಿಂದು ಈಧರೆಗೆ ಬೆಳಕು ಕೊಡುವ ರವಿಯಂತೆ, ಪರಿಶುದ್ಧವಾದ ನಿನ್ನ ಮನಸ್ಸು ಇಂದು ಮಲಿನವಾಯಿತೆ? ರವಿ ! ದುಡುಕು ಬಲು ಕೆಡಕು ಎಂಬ ಹಿರಿಯೋಕ್ತಿಯನ್ನು ಉಲ್ಲಂಘಿಸಬೇಡ, ಇನ್ನೂ ಸಮಯ ಕಾದು ನೋಡು ಅಪರಾಧ ಯಾರಿಂದ ಘಟಿಸಿತು ಎಂಬ ಸತ್ಯ ಸಂಗತಿ ತನ್ನಿಂದ ತಾನೆ ಹೊರ ಬೀಳುತ್ತದೆ.

ರವಿ : ಈ ನಿನ್ನ ಸಮಾದಾನದ ಉಪದೇಶ ನನಗೆ ಬೇಕಿಲ್ಲ, ರಮೇಶ ಮನುಷ್ಯರ ಕೈಕಾಲು ಮುರುದರೆ ಕಟ್ಟುತ್ತಾರೆ, ಆದರೆ ಮನಸ್ಸು

ಮುರಿದರೆ ಅದನ್ನು ಕಟ್ಟುವುದು ಮಾತ್ರ ಯಾರಿಂದಲೂ ಸಾಧ್ಯವಿಲ್ಲ ಮರ್ಯಾದೆಯಿಂದ ನೀನೇನು ನಿನ್ನ ತಂಗಿಯನ್ನು ಕರೆದುಕೊಂಡು ಹೋಗ್ತೀಯೋ ಅಥವಾ ನಾನೇ ಒದ್ದು ಹೊರದಬ್ಬಲೆ ಹೇಳು?

ರಮೇಶ : ನೀನು ಒದೆಯುವದು ಬೇಡ, ಹೊರದಬ್ಬುವುದು ಬೇಡ, ಗಂಗಾ ಬಾರಮ್ಮ, ನಿನ್ನ ಗಂಡನಿಗೆ ನೀನು ನಿರಪರಾಧಿ ಎಂಬ ಸತ್ಯ ಸಂಗತಿ ಮನವರಿಕೆ ಯಾದಾಗ, ತಾನೇ ಬಂದು ಕರೆದು ಕೊಂಡು ಹೋಗುತ್ತಾನೆ [ಎಂದು ಕೈಹಿಡಿದು ಗಂಗಮ್ಮನನ್ನು ಕರೆಯುವನು]

ಶಶಿ : ಅಮ್ಮಾ ! ನನ್ನನ್ನು ಬಿಟ್ಟು ಹೋಗಬೇಡಮ್ಮ ಅಪ್ಪಾಜಿ ಅಮ್ಮನನ್ನು ಮನೆಯಿಂದ ಹೊರ ಹಾಕಬೇಡಪ್ಪ.

ರವಿ : ಅವಳು ಈ ಮನೆಯಲ್ಲಿ ಇರಬಾರದು ಮಗು, ತಾಳಿಕಟ್ಟಿದ ಗಂಡನಿಗೆ ವಿಷಹಾಕಿದ ಈ ವಿಷಪಾತಕಿ ತನ್ನ ಸ್ವಾರ್ಥಕ್ಕಾಗಿ ಏನು ಮಾಡಲೂ ಸಿದ್ಧಳಿದ್ದಾಳೆ ಹೂಂ ಗಂಗಾ ಹೊರಟು ಹೋಗು [ಗಂಗಾ ರಮೇಶ ಹೊರಗೆ ಹೋಗುವರು]

ಕಾಳಿಂಗ : [ಒಳಗಿನಿಂದ ಬರುತ್ತ] ರವಿ ದಯವಿಟ್ಟು ನನ್ನನ್ನು ಕ್ಷಮಿಸು ನಿಮ್ಮಣ್ಣನನ್ನು ಉಳಿಸಿಕೊಳ್ಳಲು ಸಾಕಷ್ಟು ಪ್ರಯತ್ನಿಸಿದೆ ಆದರೂ ವಿಧಿ ರೂಪದಲ್ಲಿ ಉದರ ಸೇರಿದ ಉಗ್ರವಾದ ವಿಷ ಬಲಿತೆಗೆದು ಕೊಂಡಿತು ಬನ್ನಿ [ಇಬ್ಬರು ಒಳಗೆ ಹೋಗುವರು ಪರದೆ ಬೀಳುವದು]

===***=====***===

ಎಂಟನೇ ದೃಶ್ಯ

ಜಂಗಲ್ ರಸ್ತಾ

ಭಾಗ್ಯವಂತ : [ಬರುತ್ತಾ] ಅಲ್ಲಾ ಆಕಾಶದಲ್ಲಿ ಹಾರಾಡುವ ಹಕ್ಕಿಗಳ ಹೆಜ್ಜೆ ಮತ್ತು ನೀರಿನಲ್ಲಿ ಚಲಿಸುವ ಮೀನಿನ ಹೆಜ್ಜೆಗಳನ್ನು ಕಂಡು ಹಿಡಿಯುವ ನನಗ, ನನ್ನ ಅಳಿಯ ಶ್ರೀಮಂತನ ಅಂತೇ ಹತ್ತವಲ್ದಲ್ಲಾ ಅಂತೀನಿ, ಅವನು ನೌಕರಿ ಯಾವಾಗ ಮಾಡ್ತಾನೋ ಏನೊ? ಯಾವಾಗ ನೋಡಿದ್ರೂ ನಾಟಕದ ಮಾತೇ ಆಡ್ತಾನ, ಹತ್ತು ಸಾವಿರ ಸಂಬ್ಳ, ಇಪ್ಪತ್ತು ಸಾವಿರ ರೂಪಾಯಿ ಗಿಂಬ್ಳ ಸಿಗ್ತಾದಂತ ಹೇಳ್ತಾನ. ನಿಂಬ್ಯಾಗಿ ತೊಟ್ಟ ಕೊಳ್ಳಾಕ ಮೈ ಮೇಲೆ ಒಂದು ಚಂದಂದು ಅಂಗಿ ಇಲ್ಲ, ಅಷ್ಟು ಹಣ ಏನು ಮಾಡ್ತಾನ ಅಂತೀನಿ? ಅವನಿಗೂ ನನ್ನಂಗ ಮಟ್ಕಾ ಇಸ್ಪೇಟ ಆಡುವ ಚಟಗಿಟ ಆದೇನು ಅಂತಿನಿ? [ಅಲ್ಲಿಗೆ ಶ್ರೀಮಂತ ಅವಸರದಿಂದ ಬಂದು ಮುಂದೆ ಹೋಗುವಷ್ಟರಲ್ಲಿ] ಅರೇರೇ ಇದೇನೋ ಶ್ರೀಮಂತ ಅವಸರದಿಂದ ಎಲ್ಲಿಗೆ ಹೊರಟಿ ನಿಂತುಕೊ.

ಶ್ರೀಮಂತ : ಯಾವನಲೇ ಅಂವಾ ಬೇವರ್ಶಿನನ ಮಗನೆ? ಭಿಕಾರಿ ನನಮಗನೆ? ಥರ್ಡಕ್ಲಾಸಿನಲ್ಲಿ ಅತೀ ಥರ್ಡಕ್ಲಾಸ್ ನನ ಮಗನೆ, ಕೂಳುಕಾಣದ ಬಿಕ್ಷುಕ ನನಮಗನೆ, ಹೋಗುವಾಗ ಎಲ್ಲಿಗೆ ಹೊಂಟಿ ಅಂತ ಕೇಳಬಾರ್ದು ಅನ್ನುವ ತಿಳಿವಳಿಕೆ ಇಲ್ಲದೆ ಮಾತಾಡಿಸುವ ಮತಿಹೀನ ಮಾನವ ಯಾರು ನೀನು [ನೋಡಿ] ಓ ಹೋ ನನ್ನ ಸೋದರ ಮಾವ ಭಾಗ್ಯವಂತಪ್ಪ.

ಭಾಗ್ಯವಂತ : ಹೌದಪ್ಪ ಅವನೇ ಬೇವರ್ಶಿ ನನಮಗ ನಿಮ್ಮ ಸೋದರ ಮಾವ ಮಾನಗೇಡಿ ಭಾಗ್ಯವಂತಪ್ಪ

ಶ್ರೀಮಂತ : ತಪ್ಪಾಯಿತು ಕ್ಷಮಿಸು ಮಾಮ, ನಾನು ನಿಮ್ಮನ್ನು ನೋಡಿಲ್ಲ ಅವಸರದಲ್ಲಿದ್ದು ನಾನು ಹಾಗೆ ಹೋದೆ, ಏನು ವಿಷಯ?

ಭಾಗ್ಯವಂತ : ನನ್ನ ವಿಷಯಕಿಂತಲೂ ನಿನ್ನ ವಿಷಯವೇ ನನಗ ತಿಳಿಯಾದಾಂಗ

ಆಗ್ಯಾದ. ಈಗ ಮೂರು ನಾಲ್ಕು ದಿನಗಳಿಂದಲೂ ನೀನೆ ಮನೆ ಕಡೆಗೆ ಬಂದಿಲ್ಲಾ ಅದ್ಕಾ ಎಲ್ಲಿಗೆ ಹೊಂಟಿ ಅಂತ ಕೇಳಿದ್ರ ನೀನು ಒಮ್ಮೆ ನನ್ನ ಮುಖಕ ಮಂಗಾಳಾರುತೀನೇ ಎತ್ತಿ ಬಿಟ್ಟಿ.

ಶ್ರೀಮಂತ : ದಯವಿಟ್ಟು ತಪ್ಪು ತಿಳ್ಕೋಬ್ಯಾಡೋ ಮಾವ, ಈಗ ಮೂರು ನಾಲ್ಕು ದಿನಗಳಿಂದಲೂ ಜೇಬಿನಲ್ಲಿ ಒಂದು ಬಿಡಿಕಾಸು ದುಡ್ಡಿಲ್ಲದೆ ಬೀದಿಯ ಮೇಲೆ ಬಿದ್ದ ಸುಟ್ಟು ಬೀಡಿ ಹುಡ್ಕೋಂತ ಬೆಂಗಳೂರಿಗೆ ಹೋಗಿದ್ದೆ.

ಭಾಗ್ಯವಂತ : ಏನು? ಸುಟ್ಟು ಬೀಡಿ ಹುಡ್ಕೋಂತ ನೀನು ಆ ಬೆಂಗಳೂರಿಗೆ ಹೋಗಿದ್ಧಿ?

ಶ್ರೀಮಂತ : ನಾನಲ್ಲ ಮಾಮ ! ನನ್ನ ಪ್ರಾಣ ಸ್ನೇಹಿತನೊಬ್ಬ ಬೀಡಿಕೊಂಡು ಕೊಳ್ಳಲು ದುಡ್ಡಿಲ್ಲದೆ ಜನರು ಸೇದಿ ಹಾಕಿದ ಸುಟ್ಟು ಬೀಡಿಗಳನ್ನು ಹುಡ್ಕೋಂತ ಬೆಂಗಳೂರಿಗೆ ಬಂದಿದ್ದೇನೆ. ಅದ್ಕಾ ನೀನು ಆದಷ್ಟು ಬೇಗ ಬೆಂಗಳೂರಿಗೆ ಬಂದು ಬೆಂಗಡ್ಗಿಯ ಬೀಡಿಗಳನ್ನು ಕೊಡಿಸಿ ಹೋಗಂತ ಪೋನ್ ಮಾಡಿದ್ದ ಅದ್ಕಾ ನಾನು......

ಭಾಗ್ಯವಂತ : ಅದ್ಕಾ ನೀನು ಬೆಂಗಡ್ಡಿ ಬೀಡಿ ಕೊಡ್ಸಾಕ ಬೆಂಗಳೂರಿಗೆ ಹೋಗಿದಿಯೇನು?

ಶ್ರೀಮಂತ : ಹೌದು, ಬೆಂಗಳೂರಿನಲ್ಲಿದ್ದ ಬೆಂಗಡ್ಲಿ ಬೀಡಿ ಯಾಕ ಸೇತಿ, ಸುಮ್ನಾ ಮಂಗಳೂರಿಗೆ ಹೋಗಿ ಮಜಾ ಮಾಡಂತ ಮುವತ್ತು ಸಾವಿರ ರೂಪಾಯಿ ಮುಂಗಡವಾಗಿ ಕೊಟ್ಟು ಬಂದೀನಿ.

ಭಾಗ್ಯವಂತ : ಏನಂದೀ? ಮಂಗಳೂರಿಗೆ ಹೋಗಿ ಮಜಾ ಮಾಡಂತ ಮೂವತ್ತು ಸಾವಿರ ರೂಪಾಯಿಗಳು ಮುಂಗಡವಾಗಿ ಕೊಟ್ಟು ಬಂದಿದ್ದೀಯಾ?

ಶ್ರೀಮಂತ : ಯಾಕ ಮಾವ? ನಿನಗ ನನ್ನ ಮೇಲೆ ಅನುಮಾನವೆ? ಛೇ, ನೀನು ಕಾಶಿಯಾತ್ರೆಗೆ ಹೋಗುತಿದ್ರ ಹೇಳು ಇವತ್ತೇ ಈಗಲೇ ತ್ರಾಸ್ ತೊಗೊಂದು ಕ್ರಾಸಿಗೆ ಕುಂತು ಮೂರು ಕಾಸು ತಂದು ಕೊಡ್ತೀನಿ ಆಸೆ ಬಿಟ್ಟು ಕಾಶಿಯಾತ್ರೆ ಮಾಡು.

ಭಾಗ್ಯವಂತ : ಏನು? ನೀನು ನನಗೆ ಮೂರು ಕಾಸು ತಂದು ಕೊಡ್ತಿ, ನಾನು ಕಾಶಿಯಾತ್ರ ಮಾಡಂದ್ಯಾ? ಲೇ ತಮ್ಮ ಶ್ರೀಮಂತ ಈ ಭಾಗ್ಯವಂತನ ಯೋಗ್ಯತೆ ಕೇವಲ ಮೂರೇ ಮೂರು ಕಾಸ?

ಶ್ರೀಮಂತ : ಮೂರು ಕಾಸು ಅಲ್ಲೋ ಮಾವ, ಮೂರುಕ್ರಾಸ್ ಕೊಡ್ತೀನಿ ಅಂದೆ ಯಾಕ ನನ್ನ ಮಾತಿನದ್ವಂದರ್ತ ನಿನಗಾಗಲಿಲ್ಲವೇನು? ಮಾವ ಒಂದು ಕ್ರಾಸ್ ಅಂದರೆ ಒಂದು ಲಕ್ಷ ! ಎರಡುಕ್ರಾಸ್ ಅಂದರೆ ಎರಡು ಲಕ್ಷ ಮೂರು ಕ್ರಾಸ್ ಅಂದರೆ ಮೂರು ಲಕ್ಷ ಅದ್ಕಾ ನಿನಗ ಮೂರು ಕ್ರಾಸ್ ಕೊಡ್ತಿನಿ ಅಂದೆ.

ಭಾಗ್ಯವಂತ : ಏನು ನನಗೆ ಮೂರು ಲಕ್ಷ ರೂಪಾಯಿ ಕೊಡ್ತಿಯಾ?

ಶ್ರೀಮಂತ : ಹೌದು. ಲಕ್ಷ ಅಂದರೆ ಅದು ನನಗೆ ಅಲಕ್ಷ ! ಕೋಟಿ ಅಂದರೆ ಅದು ನನಗೆ ಬಾಳೆತ್ಯಾಟಿ !! ಇನ್ನೂ ಅಬ್ಜ ಅಂದರೆ ಅದು ನನಗೆ ಅಷ್ವಷ್ವೇ ಜುಜುಬಿ.

ಭಾಗ್ಯವಂತ : ಹೌದಾ?

ಶ್ರೀಮಂತ : ಹೌದು, ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ ಒಟ್ಟಿನಲ್ಲಿ ಇಂಗಬರ್ತಾದ ಹಂಗ ಹೋಗ್ತಾದ ಸಧ್ಯ ಸಾಲಕ್ಕಾಗಿ ಟಾಟಾ ಬಿರ್ಲಾನವರು ನನ್ನನ್ನು ಕೇಳಿದ್ದಾರೆ ಇದಕ್ಕೆ ನೀವೇನು ಅಂತಿ ಮಾವ?

ಭಾಗ್ಯವಂತ : ನಾನೇನನ್ನಂದಿ ಅಳಿಯ ದೇವರು, ಹಣ ಇದೆಯಂದು ಹವ್ಯಾಸದಲ್ಲಿ ಕಂಡವರಿಗೆ ಕಂಡ ಹಾಗೆ ಪೆಂಡಿಗಟ್ಟಲೆ ಪೆಟ್ಟಿಗೆನ ಹಣ ಕೊಟ್ರ ಸುಡುಗಾಡದಗಿದ್ದ ಹೆಣ ಸಹಿತ ಎದ್ದು ಕೇಳ್ತಾದ ಹಣಬೇಕಂತ.

ಶ್ರೀಮಂತ : ಏನು ಮಾಡ್ಲಿ ಮಾವ, ಯಾರೇ ಬಂದು ಏನೇ ಕೇಳಿದರೂ ಸಹಿತ, ಇಲ್ಲಾಂತ ಹೇಳುವ ಕಲ್ಲುಗುಣ ನನ್ನಲ್ಲಿಲ್ಲ ! ಬೇಡಿದವರಿಗೆ ಬೇಡಿದನ್ನು ಕೊಡುವ ಕಲ್ಪವೃಕ್ಷ ನಾನು. ಅಲ್ಲದೆ ಹರ ಕೊಟ್ಟ ಕಾಲಕ್ಕೆ ದಾನವ ಮಾಡು ಅಂತ ಹಿರೇರು ಹೇಳ್ಯಾರ.

ಭಾಗ್ಯವಂತ : ಅಂತೂ ಅಡ್ಡಿಯಿಲ್ಲಪ್ಪ ! ದಾನ ಧರ್ಮಕ್ಕೆ ಹೆಸರು ವಾಸಿಯಾಗಿದ್ದ ಈ ಕರ್ನಾಟಕದ ಪುಣ್ಯ ಭೂಮಿಯ ಮೇಲೆ ಹುಟ್ಟಿದ ನಿನ್ನ ಜನ್ಮ ಸಾರ್ಥಕವಾಯ್ತು. ಕೇಳಿದವರಿಗೆ ಕೇಳಿದನ್ನೆಲ್ಲಾ ಕೊಡುವ ನೀನು ಕಲಿಯುಗದ ದಾನ ಶೂರ ಕರ್ಣಂತ ಗೊತ್ತಾದ್ರ ! ಸ್ವಾರ್ಥಿ ನನಮಕ್ಳು ನಿನ್ನ ಹೆಂಡತಿಯನ್ನೇ ಕೇಳ್ತಾರ ಕೊಟ್ಬು ಬಿಡು ಆಗ ನಾನು ನನ್ನ ಮಗಳ್ನಾ ಕಳ್ಕೊಂಡು ನಿನ್ನ ಹೆಣಕ ಹೊಯ್ಕೊಂತ ಕೂಡ್ತೀನಿ.

ಭಗವಂತ : ಏನು ನನ್ನ ಹೆಂಡತೀನ ಕೇಳ್ತಾರ?

ಭಾಗ್ಯವಂತ : ಹೌದು ಬೇಡಿದವರಿಗೆ ಬೇಡಿದವರನ್ನೇ ಕೊಡ್ತಾನ ಆ ಪರಮೇಶ್ವರಂತ ತಿಳಿದು, ಆತನ ಹೆಂಡತಿ ಸುಮಂಗಲೆ ಪಾರ್ವತಿಯನ್ನೇ ಕೇಳಿದ್ದಾರಂದ ಮೇಲೆ, ನಿನ್ನ ಹೆಂಡತಿಯನ್ನು ಕೇಳುವುದೇನು ದೊಡ್ಡ ಮಾತು.

ಶ್ರೀಮಂತ : ಕುರುಬಂಗೆ ಕುರಿ ಆಸೆ ! ಮರಿಗಳಿಗೆ ಮೊಲೆಯಾಸೆ ಕಾಮುಕನಿಗೆ ಕನ್ಯೆಯಾಸೆ ಈ ಶ್ರೀಮಂತನಿಗೆ ಕೀರ್ತಿಯಾಸೆ.

ಭಾಗ್ಯವಂತ : ಲೇ ಎಪ್ಪಾ ! ಇಪ್ಪತ್ತನೆ ಶತಮಾನದ ಸರ್ವಜ್ಞಾ! ಆದಷ್ಟು ಅನ್ಯರಿಗೆ ಹಣದಾನ ಮಾಡುವ ಈ ನಿನ್ನ ದರಿದ್ರ ಗುಣ ಬಿಟ್ಟು ಬಿಡು, ಈಗಿನ ಕಾಲದಲ್ಲಿ ದುಡ್ಡಿದ್ದವನೇ ದೊಡ್ಡಪ್ಪ ಅದಿಲ್ಲದವನು ದಡ್ಡಪ್ಪ.

ಶ್ರೀಮಂತ : ನೀನೇನು ಇದರ ಬಗ್ಗೆ ಚಿಂತಿ ಮಾಡ್ಬ್ಯಾಡ ! ನನಗೆ ಸಿಗುವ ಹತ್ತು ಸಾವಿರ ಸಂಬ್ಳ ಇಪ್ಪತ್ತು ಸಾವಿರ ರೂಪಾಯಿ ಗಿಂಬ್ಳ ನಮ್ಮ ಖರ್ಚಿಗೆ ಸಾಲಲಿಲ್ಲಂದ್ರ ಇದಕ್ಕೂ ಹೆಚ್ಚೆಚ್ಚು ಹಣ ಸಂಪಾದನೆ ಮಾಡುವ ಬುದ್ಧಿಯ ಬಲ ನನ್ನಲ್ಲಿದೆ.

ಭಾಗ್ಯವಂತ : ಅಂಥದೇನು ಕೆಲಸ ಮಾಡ್ತಿಯೋ? ಮತ್ತ ನೀನೇನಾದರೂ ಮತ್ತೊಬ್ಬರ ಜೇಬಿಗೆ ಕತ್ರಿ ಹಾಕುವ ಕಸಬುಗಿನ ಸುರುವು ಮಾಡಿದಿಯೇನು?

ಶ್ರೀಮಂತ : ಅಲ್ಲಾ ಜನ ಚಂದ್ರ ಲೋಕಕ್ಕೆ ಹೋಗಿ ಬಂದರೂ ಸಹಿತ ನೀನಿನ್ನೂ ಅಡಗಲ ಅಜ್ಜಿಗತ್ಲೆ ಮಜ್ಜಿಗಿ ಗಡಿಗ್ಯಾಗೆ ಇದ್ದಿಯಲ್ಲ. ಅಂಥ ಕಳ್ಳ ಕಸಬು ಮಾಡಾಕ ನನಗೇನು ನಿನ್ನ ಹಾಗೆ ಬುದ್ಧಿಗೇಡಿಯಂತ ತಿಳ್ಕೊಂಡಿಯೇನು?

ಭಾಗ್ಯವಂತ : ಮತ್ತ ಅಂಥದೇನು ಹೊಸ ಕೆಲಸ ಮಾಡ್ತಿ?

ಶ್ರೀಮಂತ : ಮಿಷ್ಟರ್ ಮುದಿ ಮಾವ, ಆಡು ಮುಟ್ಟದ ಗಿಡವಿಲ್ಲ ಈ ಶ್ರೀಮಂತನಿಗೆ ಬರದ ಕೆಲಸವಿಲ್ಲ.

ಭಾಗ್ಯವಂತ : ಸರಿ ಹಾಗಾದರೆ ನಿನಗೆ ಟ್ರಾಕ್ಟರ್ ನಡ್ಸಾಕ ಬರ್‍ತಾದೇನು?

ಶ್ರೀಮಂತ : ಬರೇ ಟ್ರಾಕ್ಟರ್ ಯಾಕೋ ಮಾವ ದೊಡ್ಡ ದೊಡ್ಡ ಗುಡ್ಡ ಕಿತ್ತುವ ಬುಲ್‌ಡೋಜರ್ ನಡ್ಸಾಕ ಬರ್‍ತಾದ.

ಭಾಗ್ಯವಂತ : ಏನು? ನಿನಗ ಬುಲ್‌ಡೋಜರ್ ನಡ್ಸಾಕ ಬರ್ತಾದ?

ಶ್ರೀಮಂತ : ಬುಲ್‌ಡೋಜರ್ ಯಾಕ ಮುನ್ನೂರ ಮೂವತ್ತಾರ ಗಾಲಿಯ ರೈಲುಗಾಡಿ ನಡ್ಸಾಕ ಬರ್ತಾದ.?

ಭಾಗ್ಯವಂತ : ಅಬಬಾಬ, ನಿನಗ ಮುನ್ನೂರ ಮೂವತ್ತಾರ ಗಾಲಿಯ ರೈಲು ಗಾಡಿ ನಡ್ಸಾಕ ಬರ್ತಾದ?

ಶ್ರೀಮಂತ : ಬರೇ ರೈಲು ಯಾಕ ನೀರಿನಲ್ಲಿ ನಡೆಯುವ ಹಡಗು ಆಕಾಶದಲ್ಲಿ ಹಾರುವ ವಿಮಾನ, ಹೆಲಿಕ್ಯಾಪ್ಟರು, ರಾಕೇಟು ಎಲ್ಲಾ ವಿಧದ ಮಶಿನರಿ ನಡ್ಸಾಕ ಬರ್ತಾದ.

ಭಾಗ್ಯವಂತ : ಅಂತೂ ಅಡ್ಡಿಯಿಲ್ಲ ಶ್ರೀಮಂತ ! ನಿನಗ ಎಲ್ಲಾನೂ ಬರ್ತಾದಂತ ಹೇಳ್ತಿಯಲ್ಲ, ಹಾಗಿದ್ದರೆ ನಿನಗ ಸುಳ್ಳಾಡಲಿಕ್ಕೆ ಬರ್ತಾದೇನು?

ಶ್ರೀಮಂತ : ಮತ್ತ ನಾನು ಇಷ್ಟೊತ್ತನ ಹೇಳಿದ್ದು ನೀನು ಖರೆ ಅಂತ ತಿಳ್ಕೊಂಡಿಯೇನು? ಎಲ್ಲಾ ಸುಳ್ಳೆ, ನಿನಗ ಹೇಳಲಾರದಷ್ಟೆ ಖರೆ, ಸರಿ ನಾ ಬರ್ತೀನಿ ನನಗೆ ಅರ್ಜಂಟ್ ಕೆಲಸವಿದೆ.

ಭಾಗ್ಯವಂತ : ಎಲ್ಲಿಗೆ ಹೊತಿಯೋ ಶ್ರೀಮಂತ?

ಶ್ರೀಮಂತ : ಮಾವ, ನನಗೆ ಅರ್ಜಂಟಾಗಿ ಇಪ್ಪತ್ತೈದು ಸಾವಿರ ರೂಪಾಯಿ ಬೇಕಾಗಿವೆ. ಒಬ್ಬರಿಗೆ ಕೇಳಿದ್ನಿ, ಇಪ್ಪತ್ತೈದು ಸಾವಿರಕ್ಕೆ ಐವತ್ತು ಸಾವಿರ ರೂಪಾಯಿ ಒಂದು ವಾರದೊಳಗೆ ಕೊಡುವುದಾದರೆ ಕೊಡತ್ತೇವೆಂದು ಹೇಳಿದ್ದಾರೆ ಅದ್ಕಾ ತರಬೇಕಂತ ಹೊಂಟಿನಿ.

ಭಾಗ್ಯವಂತ : ಏನು? ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಒಂದು ವಾರಕ್ಕೆ ಐವತ್ತು ಸಾವಿರ ಕೊಡ್ತಿಯಾ?

ಶ್ರೀಮಂತ : ಹೌದು ಮಾಮ ! ಅದೇನೋ ಅಂತ್ತಾರಲ್ಲ ಗರಜ್ಕೋ ಅಕಲ್ ನಹಿ ಅಂತ, ಅದ್ರಾಂಗ ಸಧ್ಯನನಗೆ ದುಡ್ಡಿನ ಅವಶ್ಯವಿದೆ. ಬಡ್ಡಿ ಎಷ್ಟಾದರೇನು?

ಭಾಗ್ಯವಂತ : ಅದೇನೊ ಸರಿ ಶ್ರೀಮಂತ, ತುಪ್ಪದರೊಟ್ಟಿ ಮತ್ತೊಬ್ಬರ ಕೈಯಾಗಿ ಇಡುವುದಕ್ಕಿಂತ ಆ ರೊಟ್ಟಿ ನಮ್ಮವರ ಬಾಯಾಗ ಇಡ್ಬೇಕಂತ ಹಿರೇರು ಹೇಳ್ಯಾರ.

ಶ್ರೀಮಂತ : ಅಂದ್ರೇನೋ ಮಾವ ನಿನ್ನ ಮಾತಿನ ಅರ್ಥ

ಭಾಗ್ಯವಂತ : ಅಡ್ಡಾ ತಿಡ್ಡಾ ಬಡ್ಡಿ ಕೊಟ್ಟು ಮತ್ತೊಬ್ಬರ ಮನೆಯುದಿಡ್ಡಿ ಬೆಳೆಸುವುದಕ್ಕಿಂತ ಅದೇ ದುಡ್ಡು ನಮ್ಮವರಲ್ಲಿ ತೆಗೆದುಕೊಂಡು ಬಡ್ಡಿ ಕೊಟ್ರ ಅವರ ಸಂಸಾರಾದರೂ ದೊಡ್ಡದಾಗ್ತಾದ.

ಶ್ರೀಮಂತ : ಅಷ್ಟೊಂದು ದುಡ್ಡುಕೊಡುವ ದೊಡ್ಡಗುಣ ಇರಬೇಕಲ್ಲ ನಮ್ಮವರಲ್ಲಿ?

ಭಾಗ್ಯವಂತ : ಇದೇ

ಶ್ರೀಮಂತ : ಯಾರಲ್ಲಿ?

ಭಾಗ್ಯವಂತ : ನನ್ನಲ್ಲಿ!

ಶ್ರೀಮಂತ : ಏನು? ನೀನು ಕೊಡ್ತಿಯಾ?

ಭಾಗ್ಯವಂತ : ಹೌದು, ನಾನೇ ಕೊಡ್ತೀನಿ. ಮನ್ನೆ ನಮ್ಮ ಹೊಲ ಮಾರಿದ ನಾಲ್ಕು ಲಕ್ಷ ರೂಪಾಯಿಗಳ ಬಾಬತ್ತಿನಲ್ಲಿ ಎರಡು ಲಕ್ಷ ಕೊಟ್ಟಿದ್ದಾರೆ. ನಡೆ ಇಪ್ಪತ್ತೈದು ಸಾವಿರವೇಕೆ ಒಂದು ಲಕ್ಷ ರೂಪಾಯಿ ಕೊಡ್ತೀನಿ ಆದರೆ ನೀನು ನನಗೆ ಮೂರು ತಿಂಗಳದೊಳಗಾಗಿ ಎರಡು ಲಕ್ಷ ಕೊಡಬೇಕು.

ಶ್ರೀಮಂತ : ಆಯ್ತು ನಡಿ ಮಾವ ! ತುಪ್ಪ ಎಲ್ಲಿ ಬಿತ್ತಂದ್ರ ಕಿಚಿಡ್ಯಾಗೆ ಬಿತ್ತಂತ ನಡಿ ನಡಿ (ಹೋಗುವರು).

===***====***===

ಒಂಬತ್ತನೇ ದೃಶ್ಯ

ಮನೆ

[ಶಶಿಧರನು ಚಳಿಜ್ವರದಿಂದ ನಡಗುತ್ತ ಮೇಜಿನ ಮೇಲೆ ಮಲಗಿರುವನು ಒಳಗಿನಿಂದ ಜಮುನಾ ಬಂದು ಮಗುವಿನ ಕಿವಿ ಹಿಡಿದು ಎಬ್ಬಿಸುವಳು]

ಜಮುನಾ : ಲೋ ಪರದೇಶಿ ! ನೀನಿಲ್ಲಿ ಮಹಾಮಂತ್ರಿ ಮಗನ ಹಾಗೆ ಮಲಗಿಕೊಂಡರೆ ಅಲ್ಲಿ ಮುಸುರೆ ತಿಕ್ಕುವ ಕೆಲಸ ನಿಮ್ಮಪ್ಪ ಮಾಡ್ತಾನೇನೋ ಎದ್ದೇಳು.

ಶಶಿಧರ : ಚಿಕ್ಕಮ್ಮ ಚಳಿಜ್ವರ ಬಂದುದ್ದರಿಂದ ತುಂಬಾ ಸುಸ್ತಾಗಿದೆ ಅದಕ್ಕೆ ಸ್ವಲ್ಪ ಮಲಗಿಕೊಂಡೆ. ಈಗಲಾದರೂ ಏನಾಗಿದೆ ಸ್ವಲ್ಪ ಚಹಾ ಮಾಡಿ ಕೊಡು ಡಾಕ್ಟರ್ ಕೊಟ್ಟ ಮಾತ್ರೆ ನುಂಗಿ ಮುಸುರಿ ತಿಕ್ಕುತ್ತೇನೆ.

ಜಮುನಾ : ಹೂಂ ನೀನು ಕೇಳಿದ ಹಾಗೆಲ್ಲ ಚಹಾ ಕಾಫಿ ಮಾಡಿ ಕೊಡಲಿಕ್ಕೆ ನಿಮ್ಮಪ್ಪ ಮನೆಯಲ್ಲಿ ಟನ್‌ಗಟ್ಲೆ ಸಕ್ಕರೆ ತಂದಿಟ್ಟಿಲ್ಲ, ಹೋಗು ಮೊದಲು ಮನೆಕೆಲಸ ಮಾಡು, ಚಹಾ ಬೇಕಂತ ಚಹಾ ನಿನ್ನ ಹಡೆದು ನನ್ನ ಜೀವಕ್ಕೆ ಮೂಲ ಮಾಡಿ ಇಟ್ಟು ಹೋದಳು ಹಾದರಗಿತ್ತಿ.

ಶಶಿಧರ : ಚಿಕ್ಕಮ್ಮಾ ! ನನ್ನ ಮೇಲೆ ಕೋಪವಿದ್ದರೆ ನನಗೆ ಹೊಡಿ, ಆದರೆ ಗರತಿಯರ ಮುಕುಟವಾಗಿದ್ದ ನನ್ನ ತಾಯಿಗೆ ಮಾತ್ರ ಬೈಯಬೇಡ, ಯಾಕಂದರೆ ನನ್ನಮ್ಮ ಗರತಿ ಗಂಗಮ್ಮಾ !

ಜಮುನಾ : ಸಾಕು ಬಾಯಿ ಮುಚ್ಚೊ ಬಡವಾ ! ನಿನ್ನ ತಾಯಿ ಗರತಿ ಗಂಗಾ ಎಂದು ಜಂಭಕೊಚ್ಚಿಕೊಳ್ಳ ಬೇಡ, ನಿನ್ನ ತಾಯಿಯ ಗರತೆತ್ವ ನನಗೆ ಚನ್ನಾಗಿ ಗೊತ್ತಿಗೆ ಹೋಗು ಸುಮ್ಮನೆ ಮುಸುರೆ ಪಾತ್ರೆ ತಿಕ್ಕು [ಎಂದು ದಬ್ಬಿ ಒಳಗೆ ಹೋಗುವಳು ಶಶಿ ಪಾತ್ರೆ ತಿಕ್ಕುವನು ಹೊರಗಿನಿಂದ ರವಿ ಬಂದು]

ರವಿ : ಮಗು ಶಶಿ ಇದೇನು ಮಾಡುತಿರುವಿಯೋ? [ಮಸಿಹತ್ತಿದ ಮಗನ

ಕೈ ನೋಡಿ] ಜ್ವರದಿಂದ ಮೈ ತುಂಬಾ ಸುಡುತಾ ಇದೆ, ಇಂಥ ಸ್ಥಿತಿಯಲ್ಲಿ ನಿನಗೆ ನಿನ್ನ ಚಿಕ್ಕಮ್ಮ ಈ ಕೆಲಸಕ್ಕೆ ಹಚ್ಚಿದಳೆ?

ಶಶಿಧರ : ಛೇ, ಛೇ, ಇಲ್ಲಪ್ಪಾ, ಚಿಕ್ಕಮ್ಮ ನನ್ನನ್ನು ಕೆಲಸಕ್ಕೆ ಹಚ್ಚಿಲ್ಲ, ಅಮ್ಮ ಹೋದಮೇಲೆ ಎಲ್ಲಾ ಕೆಲಸ ಚಿಕ್ಕಮ್ಮನ ಮೇಲೆ ಬಿದ್ದದಕ್ಕಾಗಿ ಚಿಕ್ಕಮನಿಗೆ ಸ್ವಲ್ಪ ಸಹಾಯ ಮಾಡೋಣಂತ ತಿಳಿದು ನಾನೇ ಕೆಲಸ ಮಾಡುತ್ತಿರುವೆ.

ಜಮುನಾ : [ಒಳಗಿನಿಂದ ಬರುತ್ತಾ] ಹೌದು ಭಾವಾ, ನಾನೆಷ್ಟು ಬೇಡಾಂತ ಹೇಳಿದರೂ ಸಹಿತ, ಇಲ್ಲ ಚಿಕ್ಕಮ್ಮ ತಾಯಿಗೆ ಮಗನಾಗಿ ನಾನಿಷ್ಟು ಸಹಾಯ ಮಾಡದೆ ಹೋದರೆ ಹೇಗೆ ಅಂತ ನನಗೆ ನೆರವಾಗುತ್ತಿದ್ದಾನೆ. ಮಗು ಶಶಿ ಬಾರಪ್ಪ ಚಹಾ ಮಾಡಿದ್ದೇನೆ ಸ್ವಲ್ಪು ನಾಷ್ಟಮಾಡಿ, ಡಾಕ್ಟರ್ ಕೊಟ್ಟ ಮಾತ್ರೆ ನುಂಗಿ ಚಹಾ ಕುಡಿದು ರೆಷ್ಟು ತೆಗೆದುಕೊಳ್ಳಿ.

ಶಶಿಧರ : ಬೇಡ ಚಿಕ್ಕಮ್ಮಾ ! ನಾನು ಎಲ್ಲಾ ಪಾತ್ರೆ ತಿಕ್ಕಿದ ನಂತರ ಮಾತ್ರೆ ನುಂಗಿ ಚಹಾಕುಡ್ತೀನಿ

ಜಮುನಾ : ಅಯ್ಯೋ ನನ ಕಂದ, ನೀನು ಈ ಮನೆಯ ವಂಶ ಜ್ಯೋತಿ ಕಣೋ, ನಿನ್ನಿಂದಲೇ ಈ ಮನೆಯ ದೀಪ ಬೆಳಗ ಬೇಕು.

ಬಾ ಮಗು ಬಾ [ಶಶಿಯನ್ನು ಒಳಗೆ ಕರೆದು ಕೊಂಡು ಹೋಗುವಳು, ರವಿ ಕುರ್ಚಿಯ ಮೇಲೆ ಪೇಪರು ಓದುತ್ತ ಕುಳಿತಿರುವನು]

ರವಿ : ಜಮುನಾ ! ನನಗೂ ಒಂದು ಕಪ್ಪು ಚಹಾ ತೆಗೆದು ಕೊಂಡು ಬಾರಮ್ಮ,

ಜಮುನಾ : ಇದೋ ಭಾವ ಚಹಾ ತೆಗೆದುಕೊಳ್ಳಿ [ಚಹಾ ಕೊಟ್ಟು] ಬಾವ, ತಾವು ತಪ್ಪಾಗಿ ತಿಳಿದು ಕೊಳ್ಳುವುದಿಲ್ಲವೆಂದು ಹೇಳಿದರೆ, ನಾನು ತಮ್ಮಲ್ಲೊಂದು ಮಾತು ಕೇಳ ಬೇಕೆಂದು ಮಾಡಿದ್ದೇನೆ.

ರವಿ : ಜಮುನಾ ನೀನು ಈ ಮನೆಯ ಭಾಗ್ಯಲಕ್ಷ್ಮೀ ಮೇಲಾಗಿ ನನ್ನ ತಮ್ಮನ ಹೆಂಡತಿ ನನ್ನ ಸೊಸೆ, ಅಂದ ಮೇಲೆ ನಾನು ನಿನ್ನ ಮಾತು ತಪ್ಪಾಗಿ ತಿಳಿದು ಕೊಳ್ಳುತ್ತೇನೆ, ಛೇ, ಛೇ, ಹುಚ್ಚಿ ನಿಸ್ಸಂದೇಹವಾಗಿ ಕೇಳು ಅದಾವ ಮಾತು ನಿನ್ನದು?

ಜಮುನಾ : ಭಾವ, ಒಂದು ಕಾಡಿನಲ್ಲಿ ಅನುನ್ಯವಾಗಿದ್ದ ಎರಡು ಪ್ರಾಣಿಗಳಲ್ಲಿ

ಒಂದು ಪ್ರಾಣ ಅಗಲಿ ಹೋದರೆ, ಇನ್ನುಳಿದ ಒಂದು ಪ್ರಾಣಿಯಗತಿ.

ರವಿ : ಅಧೋಗತಿ ! ಹೋದ ಪ್ರಾಣಿಗೂ ಸುಖವಿಲ್ಲ, ಇನ್ನು ಅಲ್ಲಿ ಉಳಿದ ಪ್ರಾಣಿಗೂ ಸುಖವಿಲ್ಲ, ಅವುಗಳ ಮಧ್ಯ ಹಿಂದೆ ಘಟಿಸಿಹೋದ ಗತ ನೆನಪುಗಳನ್ನು ನೆನೆಸುತ್ತ ಕೂಡುವುದೇ ಗತ್ಯಾಂತರ.

ಜಮುನಾ : ಇದೇ ತಪ್ಪು ಭಾವ, ಹಿಂದೆ ಉಭಯ ದಂಪತಿಗಳ ಮಧ್ಯ ನಡೆದು ಹೋದ ಸುಖ ಸಲ್ಲಾಪಗಳನು ಮೆಲಕು ಹಾಕುತ್ತ ಕೂಡುವದಕ್ಕಿಂತ, ಅದೊಂದು ಕನಸೆಂದು ತಿಳಿದು ಮತ್ತೆ ಹೊಸ ಜೀವನ ಬಯಿಸಬೇಕು.

ರವಿ : ಜಮುನಾ !

ಜಮುನಾ : ಹೌದು ಭಾವ ! ಪ್ರಾಪ್ತ ವಯಸ್ಸಿನಲ್ಲಿಯೇ ಹೆಂಡತಿಯನ್ನು ಬಿಟ್ಟು, ಈ ರೀತಿ ಒಂಟಿ ಜೀವನ ಸಾಗಿಸುವುದಕ್ಕಿಂತ ಯಾವುದಾದರೊಂದು ಸುಂದರವಾದ ಸುಕನ್ಯೆಯನ್ನು ತಾತ್ಕಾಲಿಕವಾಗಿ ಜೊತೆ ಗೂಡಿ ಸುಖ ಜೀವನ ಸಾಗಿಸು.

ರವಿ : ಜಮುನಾ ಇದೇನು ಹೇಳುತಿರುವಿ?

ಜಮುನಾ : ಸತ್ಯವನ್ನೇ ಹೇಳುತ್ತಿದ್ದೇನೆ. ಉಪ್ಪು ಹುಳಿ ಉಂಡ ದೇಹವನು ವಿರಹದ ಬಾಧೆಯಿಂದ ಬಳಲಿಸುವುದಕ್ಕಿಂತ, ಆ ದೇಹಕ್ಕೆ ಸುಖ ಬಯಿಸು, ಆ ಸುಖ ನೀನು ಬಯಿಸುವದಾದರೆ ಅದನ್ನು ಕೊಡಲಿಕ್ಕೆ ನಾನು ಸಿದ್ಧಳಿರುವೆ.

ರವಿ : ಜಮುನಾ, ನಿನಗಿಂದು ಹುಚ್ಚು ಹಿಡಿದಿದೆಯೋ ಅಥವಾ ಭೂತ ಬಡೆದುಕೊಂಡಿದೆಯೋ? ಎಂದೂ ಇಲ್ಲದ ಇಂದೇಕೋ ನಿನಗೆ ಇಂಥ ದುರ್ವಿಚಾರ ಮೂಡಿತು, ನೀನು ನನ್ನ ತಮ್ಮನ ಹೆಂಡತಿ ನನಗೆ ಮಗಳ ಸಮಾನ.

ಜಮುನಾ : ಭಾವಾ !!

ರವಿ : ಹೌದಮ್ಮ, ಹಿಂದು ಧರ್ಮದ ಸಂಪ್ರಾದಾಯದ ದೃಷ್ಟಿಯಿಂದ ನೋಡಿದರೆ, ನಾನು ನಿನಗೆ ತಂದೆಯ ಸ್ವರೂಪ, ಅಂದ ಮೇಲೆ ನಾನು ನಿನ್ನೊಡನೆ ಕಾಮನಾಟವಾಡಿದರೆ, ಸ್ವತಹ ನನ್ನ ಹೊಟ್ಟೆಯ ಮಗಳೊಡನೆ ಅನೈತಿಕ ಸಂಬಂಧ ಬೆಳಸಿದಂತ್ತಾಗುತ್ತದೆ.

ಜಮುನಾ : ಅದೇಕೆ ಇತಿಹಾಸ ಪ್ರಸಿದ್ಧವಾದ ರಾಮಾಯಣದಲ್ಲಿ ವಾಲಿ ತನ್ನ ತಮ್ಮನಾದ ಸುಗ್ರೀವನ ಹೆಂಡತಿಯೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿರಲಿಲ್ಲವೆ? ಮತ್ತು ಚಂದ್ರುಬಾಲು ಋಷಿ ತನ್ನ ಮಗಳೊಂದಿಗೆ ಸರಸ ಮಾಡಿಲ್ಲವೆ? ಹಾಗು ಭಾನುಮತಿ ಕರ್ಣನನ್ನು ಬಯಿಸಲಿಲ್ಲವೆ?

ರವಿ : ಜಮುನಾ ! ಗತಕಾಲದ ಇತಿಹಾಸವನ್ನು ಅಷ್ಟೆ ಅರಿತು ಕೊಂಡಿದ್ದಿ ಹೊರತು, ಅದರಿಂದ ಘಟಿಸಿದ ಘಟನೆ ಮಾತ್ರ ನೀನು ತಿಳಿದು ಕೊಂಡಿಲ್ಲ, ಅಂಥ ಹೀನ ಕೆಲಸ ಮಾಡಿದವರು ಪಾಪಕ್ಕೆ ಗುರಿಯಾಗಿದ್ದರೇ ಹೊರತು, ಅದರಲ್ಲಿ ಒಬ್ಬರೂ ಧರ್ಮಶಿಖರಕ್ಕೆ ಏರಲಿಲ್ಲ, ಇದನ್ನು ಚನ್ನಾಗಿ ಅರ್ಥಮಾಡಿಕೊಳ್ಳಿ.

ಜಮುನಾ : ಅರ್ಥವೇನು ಬಂತು ಒಟ್ಟಿನಲ್ಲಿ ಅವರು ಸರಸ ಸಂಬಂಧ ಇಟ್ಟುಕೊಂಡಿದ್ರಲ್ಲವೆ?

ರವಿ : ಈ ಸರಸ ಸಂಬಂಧಗಳ ವಿಷಯ ನನಗೆ ಬೇಕಾಗಿಲ್ಲ ನನಗೆ ಬೇಕಾದದ್ದು ಸತ್ಯಧರ್ಮಗಳು ಅಷ್ಟೆ. ಕೋಟಿ ಜನ್ಮದ ಪುಣ್ಯ ಕೊಟ್ಟು ನೀಟಾದ ಮಾನವ ಜನ್ಮಕ್ಕೆ ಹುಟ್ಟಿ ಬಂದಿದ್ದೇವೆ. ಅಲ್ಲದೆ ಜ್ಞಾನ ಸುಜ್ಞಾನ ಪಡೆದುಕೊಂಡು ಬಂದಿದ್ದೇವೆ, ಅಂದ ಮೇಲೆ ಸತ್ಯದ ಹಾದಿಯಲ್ಲಿ ನಡೆಯಬೇಕಾದದ್ದು ಮಾನವನ ಆದ್ಯ ಕರ್ತವ್ಯ, ಅದುವೇ ನನ್ನ ಕರ್ತವ್ಯ.

ಜಮುನಾ : ಕರ್ತವ್ಯಕ್ಕೆ ಕಟ್ಟು ಬಿದ್ದು ವ್ಯರ್ಥ ಜೀವನ ಹಾಳು ಮಾಡಿಕೊಳ್ಳಬೇಡ, ಈ ಪಂಚರಂಗಿ ಪ್ರಪಂಚದಲ್ಲಿ ಪಾಪ ಕರ್ಮಕ್ಕೆಷ್ಟು ಬೆಲೆ ಇದೆಯೋ ಅಷ್ಟು ಸತ್ಯ ಧರ್ಮಗಳಿಲ್ಲ ! ಬಾ ವಿರಹದ ಬಾಧೆಯಿಂದ ಬಳಲುತ್ತಿರುವ ನಿಮ್ಮ ದೇಹಕ್ಕೆ ಸುಖಕೊಡಲು ಈ ರಾಧೆ ಸದಾ ಸಿದ್ಧಳಿದ್ದಾಳೆ, ಕಮಾನ್ ಭಾವಾ.

ರವಿ : ಜಮುನಾ ! ಒಡ ಹುಟ್ಟಿದ ನನ್ನ ತಮ್ಮನ ಹೆಂಡತಿಯಾದ ನಿನ್ನೊಡನೆ ರತಿಕ್ರೀಡೆಯಾಡಿ ನ್ನಾನಾವ ನರಕಕ್ಕೆ ಹೋಗಲಿ? ಶ್ರೀರಾಮ ಚಂದ್ರನಿಗೆ ಲಕ್ಷ್ಮಣನಂತ್ತಿದ್ದ ನನ್ನ ಸಹೋದರನಿಗೆ ದ್ರೋಹ ಬಗೆದು ನಾನಾವ ಪಾಪಕ್ಕೆ ಗುರಿಯಾಗಲಿ? ಸತ್ಯ-ಶಿವ ಶರಣರು ಹುಟ್ಟಿ ಬೆಳೆದ ಈ ಪವಿತ್ರ ಪುಣ್ಯ ಭೂಮಿಯ ಋಣ ಮುಗಿದ ಮೇಲೆ ಆ ಶಿವನ ಮುಂದೆ ನಿಂತು ನಾನೇನು ಹೇಳಲಿ?

ಜಮುನಾ : ಭಾವಾ, ಸುಳ್ಳೆ ನೀವು ಇಲ್ಲುದುದನ್ನು ಕಲ್ಪಿಸಿಕೊಂಡು ಮನಸ್ಸಿಗೆ ಬೇಸರ ಪಟ್ಟು ಕೊಳ್ಳಬೇಡ, ನಾನು ಹೇಳಿದಂತೆ ಕೇಳಿದರೆ ನರಕವಾಗಿದ್ದ ನಿನ್ನ ಜೀವನ ಸ್ವರ್ಗಮಯವಾಗುತ್ತೆ.

ರವಿ : ನಾಕ–ನರಕಗಳ ಅಂತರವನ್ನು ಅರಿಯದ ನಿನ್ನಂಥ ಅವಿವೇಕಿಯ ಮಾತಿಗೆ ಮರುಳಾಗುವ ಮರ್ಕಟ ಮಾನವ ನಾನಲ್ಲ, ಸುಳ್ಳೇ ನೀನು ಅರ್ಥ ಇಲ್ಲದ ಮೋಹಕ್ಕೆ ವ್ಯರ್ಥ ಬಲಿಯಾಗಬೇಡ.

ಜಮುನಾ : ನೀವು ಅದೇನೇ ಹೇಳಿದರೂ ಸಹಿತ ನನ್ನ ಕಾಮದಾಹ ತಡಿಯದಾಗಿದೆ, ಬನ್ನಿ ಒಂದೇ ಒಂದು ಸಲ ಬಲವಾದ ನಿಮ್ಮ ಬಾಹುಗಳಲ್ಲಿ ನನ್ನನ್ನು ತಬ್ಬಿಕೊಂಡು ಕೆಂದಾವರೆಯಂಥ ನನ್ನ ತುಟಿಗೆ ಮುತ್ತಿಟ್ಟು ಮುದ್ದಾಡು ಬಾ [ಎಂದು ಕೈ ಹಿಡಿದು ಮನೆಯೊಳಗೆ ಜಗ್ಗುವಳು, ಹೊರಗಿನಿಂದ ಚಂದ್ರು ಬರುತ್ತಾ]

ಚಂದ್ರು : ಜಮುನಾ, ನಾನು ಇದೇನು ನೋಡುತ್ತಿರುವೆ?

ಜಮುನಾ : ಆಂ ಸ್ವಾಮಿ ನೀವು ಬಂದಿರಾ ಬರ್ರಿ? ಅಂತೂ ದೇವರು ನಿಮ್ಮನ್ನು ಒಳ್ಳೆಯ ಸಮಯಕ್ಕೆ ಕಳುಹಿಸಿದ್ದಾನೆ, ಸಮಯಕ್ಕೆ ಸರಿಯಾಗಿ ನೀವು ಬರದೆ ಹೋಗಿದ್ದರೆ ನನ್ನ ಶೀಲ ಹಾಳು ಮಾಡುತ್ತಿದ್ದ ಈ ನರ ರಾಕ್ಷಸ

ಚಂದ್ರು : ಏಕೆ ಜಮುನಾ ಏನಾಯಿತು?

ಜಮುನಾ : ಅಯ್ಯೋ ಆಗುವುದೇನ್ರಿ, ತನ್ನ ಹೆಂಡತಿಯನ್ನು ಬಿಟ್ಟು ಒಂಟಿಯಾಗಿದ್ದ ನಿಮ್ಮಣ್ಣ ತನ್ನ ಕಾಮತೃಪ್ತಿ ತೀರಿಸಿ ಕೊಳ್ಳಲು ನನ್ನ ಮೇಲೆ ಬಲತ್ಕಾರ ಮಾಡಲೆತ್ನಿಸಿದ, ಆದರೆ ಸಮಯಕ್ಕೆ ಸರಿಯಾಗಿ ದೇವರಂತೆ ನೀವು ಬರದಿದ್ದರೆ ನನ್ನ ಪವಿತ್ರವಾದ ದೇಹವನ್ನು ನಾಯಿ ಮುಟ್ಟಿದ ಮಡಿಕೆಯಂತೆ ಮಾಡುತ್ತಿದ್ದ ಈ ಕಾಮುಕ.

ರವಿ : ಜಮುನಾ, ಇಲ್ಲದ ಸುಳ್ಳನ್ನು ಹೇಳಿ ನನ್ನ ತಮ್ಮನ ತಲೆ ಕೆಡಿಸ ಬೇಡಮ್ಮ.

ಜಮುನಾ : ಅಮ್ಮಾ? ಆಹಹಾ ಅಮ್ಮಾ ಎಂದು ಎಷ್ಟು ಮುದ್ದಾಗಿ ಕೂಗುತ್ತಿದ್ದಾನೆ ನೋಡು ಕಾಮುಕ.

ಚಂದ್ರು : ಲೇ ಬಂಧು ದ್ರೋಹಿ ! ತಮ್ಮನ ಹೆಂಡತಿ ಹೊಟ್ಟೆಯ ಮಗಳ ಸಮಾನ ಎಂಬ ಭಾವನೆಯನ್ನು ಅರಿಯದೆ ಕಾಮದಾಹಕ್ಕೆ

ಬಲಿಯಾಗಿ ಈ ಸಾಧ್ವಿಯ ಮೇಲೆ ಬಲತ್ಕಾರ ಮಾಡಲು ನಿನಗೆ ಮನಸ್ಸಾದರೂ ಹೇಗಾಯಿತೋ ಪಾಪಿ.

ರವಿ : ಸುಳ್ಳು ತಮ್ಮ ಸುಳ್ಳು ! ನಿನ್ನ ಹೆಂಡತಿ ಹೇಳುವ ಮಾತುಗಳೆಲ್ಲವೂ ಸುಳ್ಳು ! ತನ್ನ ಯಾವುದೋ ಒಂದು ಸ್ವಾರ್ಥ ಎಟಕಿಸಿಕೊಳ್ಳಲು ಆಗದೆ, ನನ್ನ ಮೇಲೆ ಈ ಅಪವಾದ ಕೊಡುತ್ತಿದ್ದಾಳೆ.

ಜಮುನಾ : ಏನು ನಾನು ಸುಳ್ಳು ಹೇಳುತ್ತಿರುವೆನೆ? ಅದು ನನ್ನ ಪತಿಯ ದೇವರ ಮುಂದೆ ಹುಂ !! ದೈವ ಸಂಕಲ್ಪದಂತೆ ಮರಣ ಪರಿಯಂತರ ಜೀವನ ಸಂಗಾತಿಯಾಗಿರಲು ಅಗ್ನಿದೇವರ ಸಾಕ್ಷಿಯಾಗಿ ಸಪ್ತಪದಿ ತುಳಿದು ಮಾಂಗಲ್ಯ ಕಟ್ಟಿದ ನನ್ನ ಪತಿಯ ಮುಂದೆ ಸುಳ್ಳು ಹೇಳಿ ನಾನಾವ ನರಕಕ್ಕೆ ಹೋಗಲಿ, ಸ್ವಾಮಿ ಆ ಪರಶಿವನಗಿಂತ ಮಿಗಿಲಾದ ಈ ನಿಮ್ಮ ಪಾದಸಾಕ್ಷಿಯಾಗಿ ಹೇಳುತ್ತೇನೆ ಈ ಮಾತು ಸತ್ಯವೆಂದು.

ರವಿ : ಜಮುನಾ, ಉಪಯುಕ್ತವಿಲ್ಲದ ವಿಷಯವನ್ನು ಸತ್ಯದ ಸಾಲಿನಲ್ಲಿ ಸೇರಿಸಿ, ಅಮೃತ ಕಡಲಾಗಿದ್ದ ನನ್ನ ತಮ್ಮನ ಮನಸ್ಸಿನಲ್ಲಿ ವಿರಸದ ವಿಷ ಚಲ್ಲದಿರು.

ಚಂದ್ರು : ಲೇ ಸಾಕು ಬಾಯಿ ಮುಚ್ಕೋ ಮುಠ್ಠಾಳ, ಇದುವರೆಗೂ ನನ್ನಣ್ಣ ನನ್ನ ಪಾಲಿನ ದೇವರೂ ಅಂತ ತಿಳ್ಕೊಂಡಿದ್ದೆ, ಆದರೆ ಇಂದು ಗೊತ್ತಾಯಿತು ಇವನೊಬ್ಬ ಗೋಮುಖ ವ್ಯಾಘ್ರ ಅಂತ, ಇಷ್ಟು ದಿವಸ ಕಣ್ಣು ಮುಚ್ಚಿ ಕುಳಿತ ನಾನು, ನಿನ್ನ ಹೇಯಕೃತ್ಯ ಇಂದು ಕಣ್ಣಾರೆ ಕಂಡೆ.

ರವಿ : ತಮ್ಮ ಚಂದ್ರು, ಕಂಡುದೆಲ್ಲ ಸತ್ಯವೆಂದು ಭಾವಿಸ ಬೇಡ, ಆ ಪರಶಿವನ ಪೂಜೆಗೆಂದು ಬಂಗಾರದ ಕಲಶದಲ್ಲಿ ತುಂಬಿಟ್ಟಿರುವ ಗಂಗಾ ಜಲ ಬಿನ್ನವಾಗಬಹುದು, ಆದರೆ ನಿನ್ನ ಮೇಲಿಟ್ಟಿರುವ ನನ್ನ ಪ್ರೀತಿ ವಾತ್ಸಲ್ಯ ಮಾತ್ರ ಅದಾವ ಕಾಲಕ್ಕೂ ಭಿನ್ನವಾಗಲಾರದು, ನಿಜವಾಗಿಯೂ ಈ ವಿಷಯದಲ್ಲಿ ನಾನು ನಿರಪರಾಧಿ.

ಜುಮನಾ : ಅಂದರೆ ನಾನೇ ಅಪರಾಧಿಯೇನೋ ನೀಚ, ನಿನ್ನ ತಮ್ಮನು ಇಲ್ಲದ ಸಮಯ ನೋಡಿ, ಜಮುನಾ, ನನ್ನ ಹೆಂಡತಿ ಹೋದಲ್ಲಿಂದ ಹಿಡಿದು ಇಲ್ಲಿಯವರೆಗೂ ನನ್ನ ಕಾಮದಾಹ ತಡೆಯುತ್ತ ಬಂದೆ, ಆದರೆ ಈಗ ಅದೇಕೋ ತಡೆಯದಾಗಿದೆ ಬನ್ನಿ, ಅಣ್ಣಾನಾದವನು ತನ್ನ ತಮ್ಮನ ಹೆಂಡತಿಯೊಡನೆ ಸರಸವಾಡಿದರೆ ತಪ್ಪೇನು ಇಲ್ಲವೆಂದು

ಹೇಳಿ ಬಲವಂತವಾಗಿ ನ್ನ ಕೈಹಿಡಿದು ಮನೆಯೊಳಗೆ ಜಗ್ಗಿದ್ದು ಅಪರಾಧವಲ್ಲವೇನೋ ಮೂರ್ಖ.

ಚಂದ್ರು : ಲೇ ಕಾಮಾಂಧ, ಈ ರೀತಿ ನನಗೆ ಮೋಸಮಾಡಬೇಕೆಂದು ನೀನು ಅದೆಷ್ಟು ದಿನಗಳಿಂದ ಹೊಂಚು ಹಾಕಿದಿಯೋ ವಂಚಕ, ತಡೆ ಇನ್ನೂ ಮುಂಧಿನಿಂದ ನೀನು ಯಾವ ಹೆಣ್ಣಿಗೂ ಕಣ್ಣೆತ್ತಿ ನೋಡದಂತೆ ಮಾಡುತ್ತೇನೆ ಎಂದು ಒಳಗೆ ಹೋಗಿ ಕೋಲು ತಂದು ತಲೆಯ ಮೇಲೆ ಹೊಡಿಯುವನು.

ರವಿ : ಅಮ್ಮಾ [ಎಂದು ಕಣ್ಣಿಗೆ ಕೈ ಹಚ್ಚಿಕೊಂಡು ಕೂಡುವನು]

ಶಶಿಧರ : ಆಂ ಅಪ್ಪಾಜಿ ಏನಾಯಿತು? ಮೇಲೇಳಪ್ಪ ಅಪ್ಪಾ ! ಮೇಲಕ್ಕೆ ಎದ್ದೇಳು [ಎಂದು ತಂದೆಯ ಕೈಹಿಡಿದು ಎಬ್ಬಿಸುವನು]

ರವಿ : ಮಗು ಶಶಿಧರ, ಇದೇನೋ ನನ್ನ ಕಣ್ಣು ಕಾಣ್ತಾನೆ ಇಲ್ಲವಲ್ಲೊ? ಚಂದ್ರು ನಾನು ನಿನಗೆ ಅಂಥದೇನು ದ್ರೋಹ ಮಾಡಿದ್ದೇನೆಂದು ನನಗೆ ಈ ಶಿಕ್ಷೆ ಕೊಟ್ಟಿಯಪ್ಪ.

ಚಂದ್ರು : ಮಾಡಬಾರದ ಪಾಪ ಮಾಡಿದ ಪ್ರತಿಫಲಕ್ಕಾಗಿ ನಿನಗೆ ಸಿಕ್ಕ ಶಿಕ್ಷೆ, ಹೋಗು ಇನ್ನೂ ಮುಂದಿನ ಜನ್ಮದಲ್ಯಾದರೂ ಒಳ್ಳೆಯವನಾಗಿ ಬದುಕಲು ಪ್ರಯತ್ನಿಸು ಹೂಂ ಫಷ್ಟ್ ಯು ಗೆಟೌಟ್ (ಎಂದು ಹೊರಗೆ ದಬ್ಬುವನು).

ಶಶಿಧರ : ಬೇಡ ಚಿಕ್ಕಪ್ಪ ಬೇಡ, ದಯವಿಟ್ಟು ಇಂಥಾಸ್ಥಿತಿಯಲ್ಲಿ ನಮ್ಮನ್ನು ಮನೆಯಿಂದ ಹೊರಹಾಕಬೇಡ, ನಿಮ್ಮ ಕಾಲಿಗೆ ಬಿದ್ದು ಬೇಡಿಕೊಳ್ಳುತ್ತೇನೆ [ಎಂದು ಕಾಲಿಗೆ ಬೀಳುವನು]

ಚಂದ್ರು : ಏಯ್, ಸುಮ್ಮನೆ ಹೊರಟು ಹೋಗಿರೋ ಬೇವರ್ಶಿನನಮಕ್ಕೆ, ಎಂದು ಗಂಡಾ ಹೆಂಡತಿ ಇಬ್ಬರು ಕೂಡಿ ಅವರಿಬ್ಬರನ್ನು ಮನೆಯಿಂದ ಹೊರಗೆ ನೂಕುವರು.

ಹಿನ್ನಲೆ ದುಃಖದ ಹಾಡು

(ಪರದೆ ಬೀಳುವುದು)

===***=====***===

ಹತ್ತನೇ ದೃಶ್ಯ

ಜಂಗಲ್ ರಸ್ತಾ

ಗಂಗಾ : ದೇವಾ ಜಗಲಿಂಗೇಶ್ವರ, ಇರುವೆ ಎಂಭತ್ತು ನಾಲ್ಕು ಲಕ್ಷ ಜೀವರಾಶಿಗಳ ಸಂರಕ್ಷಕನೆಂದು ಇಡೀ ವಿಶ್ವದಲ್ಲಿಯೇ ಹೆಸರು ಪ್ರಖ್ಯಾತ ಪಡೆದ ನಿಮ್ಮನ್ನೇ ನಂಬಿ ಬದುಕುವ ನನಗೆ, ಸತ್ಯ ಅಸತ್ಯವನ್ನು ಅರಿಯದೆ ನನ್ನ ಪತಿದೇವ ನನ್ನ ಕತ್ತಿಗೆ ಕೈಕೊಟ್ಟು ಮನೆಯಿಂದ ಹೊರನೂಕಿದರು, ಹಿಮಮಣಿಯಂತೆ ಪರಿಶುದ್ಧವಾದ ನನ್ನ ಶೀಲದಲ್ಲಿ ಸಂಶಯ ಪಟ್ಟರು, ವಿಷಹಾಕಿದವರಿಗೆ ಹಾಲುಣ್ಣಿಸುವ ಮನೋಭಾವ ಉಳ್ಳ ನನಗೆ ವಿಷಪಾತಕಿ ಎಂದು ಅಪವಾದ ಕೊಟ್ಟರು.

ಕಾಳಿಂಗ : [ಬರುತ್ತಾ] ಗತಿಸಿ ಹೋದ ಇತಿಹಾಸವನ್ನು ಓದುತ್ತ ಕುಳಿತರೆ ಪ್ರಯೋಜನ ಇಲ್ಲ, ಆಗಿ ಹೋದ ಕಥೆಯನ್ನೆಲ್ಲಾ ಮರೆತು ಮುಂದೆ ಹೊಸಕಥೆ ಬರಿಯ ಬೇಕು, ನೀನು ಮನಸ್ಸು ಮಾಡಿದರೆ ನಿನ್ನ ಬದುಕಿನ ಕಥೆಗೆ ನಾನೇ ನಾಯಕನಾಗುತ್ತೇನೆ.

ಗಂಗಾ : ಥೂ, ಪಾಪಿ, ನನ್ನ ತಂಗಿಯನ್ನು ನಿನ್ನ ಮೋಹದ ಬಲೆಯಲ್ಲಿ ಹಾಕಿಕೊಂಡು, ದೇವ ಮಂದಿರದಂತ್ತಿದ್ದ ನನ್ನ ಮನೆ ಮನವನ್ನು ಮುರಿದು ಹಾಳೂರಿನ ಸ್ಮಶಾನದಲ್ಲಿ ವಾಸಿಸುವ ದೆವ್ವದ ದೇಗುಲವನ್ನಾಗಿ ಮಾಡಿದರೂ ಸಹಿತ ಇನ್ನೂ ನೀನು ನನ್ನ ಬೆನ್ನು ಬಿಟ್ಟಿಲ್ಲವೆ?

ಕಾಳಿಂಗ : ಬಿಡುವುದು ಅದು ಹೇಗೆ ಸಾಧ್ಯ ಗಂಗಾ ! ಸಣ್ಣ ನಡುವಿನ ಮೈಬಣ್ಣದ ಹೆಣ್ಣಾದ ನಿನ್ನ ಕಡೆಗಣ್ಣಿನ ಕುಡಿನೋಟಕ್ಕೆ ಮಾರು ಹೋಗಿರುವೆ, ಬಾ ನನ್ನ ಹೃದಯೇಶ್ವರಿ, ಬಹುದಿನಗಳಿಂದಲೂ ಬಯಿಸುತ್ತಿದ್ದ ಈ ರಸಿಕನ ಅಪ್ಪುಗೆಯ ಆಲಿಂಗನದಲ್ಲಿ ಅಕ್ಕರೆಯ ಅರಗಿಣಿಯಾಗಿ ಚೆಕ್ಕಂದವಾಡು.

ಗಂಗಾ : ಕಾಳಿಂಗ !

ಕಾಳಿಂಗ : ಹೌದು ಗಂಗಾ ಹೌದು, ಬಯಸಿದ ಬಾಯಿಗೆ ಮಾಗಿದ ಹಣ್ಣಾಗಿ, ಹಸಿದ ವಡಲಿಗೆ ಅಮೃತ ಭೋಜನವಾಗಿ, ರತಿ ಭೋಗದಲ್ಲಿ ಈ ಮನ್ಮಥನಿಗೆ ಕಾಮಿನಿಯಾಗಿ ನಲಿದಾಡುತ ನನ್ನ ಬಹುದಿನದ ಕನಸು ಇಂದು ನನಸು ಮಾಡು ಬಾ ಚಲುವೆ.

ಗಂಗಾ : ಇದು ಮಾತ್ರ ಸಾಧ್ಯವಿಲ್ಲ ಕಾಳಿಂಗ, ಈ ನನ್ನ ದೇಹದಲ್ಲಿ ಜೀವ ಇರುವವರೆಗೂ ನಿನ್ನ ಕನಸು ಕನಸಾಗೆ ಉಳಿಯುತ್ತದೆ, ಇತಿಹಾಸ ಪ್ರಸಿದ್ಧವಾದ ಗರತಿಯರ ನೊಸಲಿಗೆ ಕುಂಕಮ ತಿಲಕ ಹಚ್ಚುತ್ತೇನೆ ವಿನಹ, ಶೀಲಗೆಟ್ಟವಳಾಗಿ ಹಿಂದಿನವರ ಗೌರವಕ್ಕೆ ಮಸಿ ಬಳಿಯಲಾರೆ.

ಕಾಳಿಂಗ : ಗಂಗಾ ! ಮಾತು ಮಾತಿಗೂ ಗರತಿ ಗರತಿ ಎಂದು ಜಂಭ ಕೊಚ್ಚಿ ಕೊಳ್ಳಬೇಡ, ಹಿಂದಿನ ಸ್ತ್ರೀಯರಂತೆ ನೀನು ಗರತಿಯಾಗಿ ಬಾಳಲಿಕ್ಕೆ ಇದು ದ್ವಾಪರ ಯುಗವಲ್ಲ ಇದು ಕಲಿಯುಗ, ಕಲಿತವಳಾದ ನೀನೇ ಈ ರೀತಿ ಮಾತಾಡಿದರೆ ಇದಕ್ಕೆ ನಾನೇನು ಹೇಳಲಿ?

ಗಂಗಾ : ನೀನೇನು ಹೇಳ್ತಿಯೋ ! ನಿನ್ನ ಸರ್ವಾಂಗದಲ್ಲಿ ತುಂಬಿಕೊಂಡಿದದ್ದು ಬರೇ ಕಾಮ, ಆ ಕಾಮ ವ್ಯಾಪ್ತಿಯಲ್ಲಿ ಬರುವ ದುರ್ನಡತೆಗಳನ್ನೇ ಹೇಳ್ತಿ ಹೊರತು, ಒಳ್ಳೆ ಸದ್ಗುಣಗಳನ್ನು ಮಾತ್ರ ಹೇಳಲಾರಿ.

ಕಾಳಿಂಗ : ಗಂಗಾ !!

ಗಂಗಾ : ಹೌದು, ಕ್ಷಣಿಕ ಸುಖದ ಭೋಗಕ್ಕೆ ಉದ್ರಿಕ್ತಗೊಂಡು ನಶ್ವರವಾದ ಈ ಸೌಂದರ್ಯಕ್ಕೆ ಮಾರುಹೋಗಿ, ಮತ್ತೊಬ್ಬನ ಮಡದಿಗೆ ಮನಸ್ಸು ಮಾಡುವ ನಿನ್ನಂಥ ಮತಿ ಹೀನನಿಗೆ ಮುಂದೆ ಮರಣ ಕಟ್ಟಿಟ್ಟ ಬುತ್ತಿ.

ಕಾಳಿಂಗ : ಮರಣ? ಹುಂ ನಿನ್ನನ್ನು ಮೋಹಿಸಿದರೆ ನನಗೆ ಮರಣ ಬರುವುದೆ? ಬರಲಿ ಈ ಪೃಥ್ವಿಯ ಮೇಲೆ ಜನಿಸಿದ ಪ್ರತಿಯೊಂದು ಜೀವ ಜಂತು ಸಹಿತ ತಮ್ಮ ಬೆನ್ನು ಮೇಲೆ ಮರಣವೆಂಬ ಮೂರಕ್ಷರದ ಮುದ್ರೆಯನ್ನು ಹಾಕಿಸಿಕೊಂಡೇ ಬಂದಿವೆ, ಅಂದಮೇಲೆ ಮರಣಕಂಜಿ, ಹಿಂಜರಿಯುವ ಫಿಂಜರ ನಾನಲ್ಲ.

ಗಂಗಾ : ಕಾಳಿಂಗ ! ಪತಿವೃತೆಯರ ಪ್ರಭಾವ ಶಕ್ತಿ ನಿನಗಿನ್ನೂ ಗೊತ್ತಿಲ್ಲಾಂತ ಕಾಣುತ್ತೆ, ಪತಿಸೇವೆ ತತ್ಪರಳಾದ ಪತಿವೃತೆ ಹೆಣ್ಣಿನ ಕೋಪಾಗ್ನಿಗೆ ಇಡೀ ಬ್ರಹ್ಮಾಂಡವೇ ದಹಿಸುವಷ್ಟು ಸಾಮರ್ಥ್ಯವಿದೆ. ಇಂಥಾ

ಮಹಾಶಕ್ತಿಯನ್ನು ಕೆಣಕಿ ಕೆಟ್ಟು ಹೋಗಬೇಡ.

ಕಾಳಿಂಗ : ನಾನು ಕೆಟ್ಟು ಸುಟ್ಟು ಹೋದರೂ ಚಿಂತೆಯಿಲ್ಲ ನಿನ್ನನ್ನು ಮುಟ್ಟದೆ ಬಿಡಲಾರೆ (ಎಂದು ಕೈ ಹಿಡಿಯಲು ಹೋಗುವನು)

ಗಂಗ : ಹುಚ್ಚೆದ್ದು ಕುಣಿಯುತ್ತಿರುವ ಲುಚ್ಚಾನನ ಮಗನೆ ನಿನಗೆಷ್ಟು ಎಚ್ಚರ ಕೊಟ್ಟರೂ ನಿನ್ನ ತುಚ್ಚಗುಣ ಬಿಡದಾದಿ, ಥೂ ನಾಚಿಕೆ ಇಲ್ಲದವನೆ (ಎಂದು ಕಪಾಳಕ್ಕೆ ಹೊಡೆದು ಹೋಗುವಳು)

ಜಮುನಾ : [ಬರುತ್ತಾ] ಹಾಯ್ ಕಾಳಿಂಗ ! ನೀವು ಅಲ್ಲೆ ಮನಿಗೆ ಬರ್ತಿರೇನಂತ ಸಾಕಷ್ಟು ಹಾದಿಕಾಯ್ದೆ, ತಾವು ಬರಲಿಲ್ಲ ಬೇಸರಾಯ್ತು ನಾನೇ ಒಂದು ಬಿಟ್ಟೆ, ಏಕೆ ಮುಖವೆಷ್ಟು ಸಪ್ಪಗಾಗಿದೆಯಲ್ಲ, ಮೈಯಲ್ಲಿ ಆರಾಮ್ ಇಲ್ಲವೆ?

ಕಾಳಿಂಗ : ಹೌದು, ನಿನ್ನೆಯಿಂದ ಮೈಯಲ್ಲಿ ಸ್ವಲ್ಪು ಆರಾಮಿಲ್ಲ ! ಅದಕ್ಕಾಗಿ ಒಬ್ಬ ಡಾಕ್ಟರರಿಗೆ ತೋರಿಸಿದೆ, ಅವನು ಈಗತಾನೆ ಇಂಜಕ್ಷನ್ ಕೊಟ್ಟು ಹೋದ, ಆದರೆ ಅದು ನನ್ನ ದೈವಕ ರೀ ಎಕ್ಷನ್ ಆಯ್ತು.

ಜಮುನಾ : ಏನು? ರೀಎಕ್ಷನ್ ಆಯ್ತಾ? ಅಯ್ಯಯ್ಯೋ !

ಕಾಳಿಂಜ : ನೀನೇನು ಹೆದರ ಬೇಡ, ಈ ಒಬ್ಬ ಡಾಕ್ಟರನಿಂದ ರೀಎಕ್ಷನ್ ಅಷ್ಟೇಅಲ್ಲ, ಹಿಂದೆ ಅದೆಷ್ಟೋ ಇಂಥ ಡಾಕ್ಟರ್ ಕೊಟ್ಟ ಇಂಜಕ್ಷನ್‌ಗಳು ರೀಎಕ್ಷನ್ ಆದರೂ ಸಹಿತ ನನಗೇನೂ ಆಗಿಲ್ಲ.

ಜಮುನಾ : ಅಭಾ, ಒಂದು ಇಂಜಕ್ಷನ್ ರೀಎಕ್ಷನ್ ಆದರೆ ಮನುಷ್ಯ ಉಳಿಯುವುದಿಲ್ಲ, ಅಂದ ಮೇಲೆ ಹಿಂದೆ ನಿಮಗೆ ಸಾಕಷ್ಟು ಇಂಜಕ್ಷನ್ ರೀಎಕ್ಷನ್ ಆದರೂ ನೀವು ಉಳಿದು ಕೊಂಡಿದ್ದೀರಿ ಅಂದಾಗ ನಿಮ್ಮ ದೈವದ ದಾರ ಅದೆಷ್ಟು ಗಟ್ಟಿರಬೇಕು.

ಕಾಳಿಂಗ : ನನ್ನ ದೈವದ ದಾರಿಕಿಂತಲೂ ನನ್ನ ಸಹನ ಶಕ್ತಿಯ ದಾರ ಬಹುಗಟ್ಟಿ ಇದೆ, ಬಂದುದೆಲ್ಲ ಬರಲಿ ಅದನ್ನು ಹೆದರಿಸುವ ಧೈರ್ಯನನಗಿರಲಿ ಎಂದು ಆ ಭಗವಂತನಲ್ಲಿ ಬೇಡಿಕೊಳ್ಳುತ್ತೇನೆ, ಇರಲಿ ಬೇಸರವಾದ ಈ ನನ್ನ ಮನಕ್ಕೆ ನಿನ್ನ ಮಧುರ ಕಂಠದಿಂದ ಮಧುನೀಡು.

ಹಾಡು

(ಹಾಡು ಮುಗಿಯುತ್ತಲೆ ಇಬ್ಬರು ಹೋಗುವರು ಅದೇ ದಾರಿಗೆ ಭಗವಂತ ಯಮುನಾ ಇಬ್ಬರು ಮಾತಾಡುತ್ತ ಬರುವರು)

ಭಗವಂತ : ಯಮುನಾ, ನನ್ನ ಮುಂದ ಹೇಳ ಬ್ಯಾಡ ನಿಮ್ಮಪ್ಪನ ಸುದ್ದಿ, ಅವನು ಮುಂಜಾನೆಯಿಂದ ಸಂಜಿಮಟ ಹಾಕ್ತಾನ ಮುದ್ದಿ, ಬೆಳಗತನಕ ಹೊಡಿತಾನ ನಿದ್ದಿ.

ಯಮುನಾ : ಮಾಮ, ನೀನು ಬಹಳ ಹಿಂದಕ ಬಿದ್ದಿ, ಇನ್ನೂ ಮುಂದೆ ನಮ್ಮಪ್ಪನ ಮಾತಿನಂತೆ ನಡದ್ರ ನೀಗೆದ್ದಿ, ಇಲ್ಲಾಂದ್ರ ಆ ಪಂಚಾಯಿತಿ ತಿಪ್ಯಾಗ ನೀಬಿದ್ದಿ, ತಿಳ್ಕೊ ನಮ್ಮಪ್ಪನ ಸುದ್ಧಿ.

ಭಗವಂತ : ಅಂದ್ರೇನೆ ನಿನ್ನ ಮಾತಿನ ಅರ್ಥ?

ಯಮುನಾ : ಆರ್ಥ? ನೀನು ಮಾಡಿಕೊಂಡಿಲ್ಲ ನಮ್ಮಪ್ಪನ ಅಂತರಾಳದ ಅರ್ಥ ! ನನ್ನ ಮಗಳು ಅಳಿಯ ಸುಖವಾಗಿರಲೆಂದು, ನಾಲ್ಕು ಎಕರೆ ಹೊಲ ಮಾರಿ ಊರ ಮುಂದ ಜಾಗ ತೊಗೊಂಡಾನ ನಮಗ ಮನಿ ಕಟಸಾಕ

ಭಗವಂತ : ನಿಮ್ಮಪ್ಪ, ಆಜಾಗ ನಮಗೆ ಮನಿ ಕಟಸಾಕ ತೊಗೊಂಡಾನೋ ಏನು ಗೋರಿ ಕಟ್ಟಸಾಕ ತೊಗೊಂಡಾನೋ ಯಾರಿಗೆ ಗೊತ್ತು ನಿಮ್ಮಪ್ಪಗ ಗೊತ್ತು? ಯಾಕಂದ್ರ ಅವನ ಇಂದ್ರಜಾಲ ಯಾರಿಗೆ ತಿಳ್ದಾದ.

ಯಮುನಾ : ಹಂಗೆಲ್ಲ ನಮ್ಮಪ್ಪನ ತಪ್ಪು ತಿಳ್ಕೋಬ್ಯಾಡೋ ನನ ಚಂದ್ರಾಮ.

ಹಾಡು

ಭಾಗ್ಯವಂತ : [ಬರುತ್ತ] ಯಮುನವ್ವಾ ! ಬೇ ಯವ್ವಾ ಯಮುನವ್ವಾ !!

ಭಗವಂತ : ಲೇ ಯಾವನಲೆ ಅಂವ ಅವಿವೇಕಿ ನನಮಗನೆ? ಹೊತ್ತು ಗೊತ್ತು ನೋಡದೆ ಹಂಗ ಕತ್ತಿ ಗತ್ಲೆ ಬರ್ತಿಯಲ್ಲಲೇ ಹಲ್ಕಾ ನನಮಗನೆ.

ಭಾಗ್ಯವಂತ : ಲೇ, ಹುಡುಗ, ನಾನೋ ನಿಮ್ಮಾವ ಭಾಗ್ಯವಂತಪ್ಪ

ಭಗವಂತ : ಲೇ ನಿಮ್ಮೌನಾ, ಬೇವರ್ಶಿ ನನಮಗನೆ, ನೀನೇನು ಮರ್ಯಾದೆಯಿಂದ ಹೊಗ್ತಿಯೋ ಅಥವಾ ಹಿಡ್ಕೊಂಡು ಸಂದ್ಯಾಗ ಹಾಕಿ ಹಂದಿಗೆ ಹೊಡ್ದಾಂಗ ಹೊಡಿಲೋ?

ಭಾಗ್ಯವಂತ : ಸಂದ್ಯಾಗ ಹಾಕಿ ಹೊಡಿಬ್ಯಾಡೋ ತಮ್ಮ, ಬೇಕಿದ್ರ ಈ ಮಂದ್ಯಾಗ ಹಾಕಿ ಹೊಡಿ ಕರುಣೆ ಇದ್ದವರು ಬಂದು ಬಿಡುಸ್ತಾರ, ಇರಲಿ ನಾನ್ಯಾರೆಂಬುದು ಜರ ತಿರುಗಿ ಚಂದ ಮುಖ ನೋಡಿಯಾದರೂ ಮಾತಾಡು.

ಭಗವಂತ : ಮುಖ ನೋಡು, ಮೂಗು ನೋಡು ಅಂತ ಹೇಳುವ ನೀನ್ಯಾರಲೇ ದಂಡಪಿಂಡ? ಓ ಹೋ ಮಾಮ ನೀವು, ದದದ ದಯವಿಟ್ಟು ನಾನಾಡಿದ ಮಾತುಗಳನ್ನು ಕ್ಷಮಿಸು, ಕರುಣೆಯಿಂದ ನಮಗೆ ಆಶೀರ್ವಾದ ಮಾಡು.

ಭಾಗ್ಯವಂತ : ಆಶೀರ್ವಾದ ಮಾಡಲಿಕ್ಕೆ ಇನ್ನೂ ನೀನು ನನ್ನ ಮಗಳಿಗೆ ಮಾಂಗಲ್ಯ ಕಟ್ಟಿಲ್ಲೋ ಮಂಗ್ಯಾ ! ಮೊದಲು ಮದುವೆ ಆಗಲಿ ನಂತರ ನಾನು ನಿಮಗೇನೇನು ಮಾಡ್ಬೇಕು ಅದನ್ನೆಲ್ಲಾ ಒಟ್ಟಿಗೆ ಸೇರಿಸಿ ಮಾಡ್ತೀನಿ, ನೀನೇನು ಅದರ ಬಗ್ಗೆ ಚಿಂತಿ ಮಾಡಬೇಡ.

ಭಗವಂತ : ಚಿಂತಿ ಮಾಡ್ಬ್ಯಾಡ ಮಡ್ಬ್ಯಾಡಂತನೇ ನಮ್ಮ ವಯಸ್ಸಿನ ಸಂತಿ ಮುಗ್ಸಾಕತ್ತಿದಿ, ಮಾಮ ನಿನಗೆ ಒಳ್ಳೆ ಮಾತಿನಿಂದ ಹೇಳ್ತಿನಿ, ಗಡಾನ ನಿನ್ನ ಮಗಳನ್ನು ಕೊಟ್ಟು ಮದುವೆ ಮಾಡು.

ಯಮುನಾ : ಇಲ್ಲಾಂದ್ರ ಇದೇ ವಾರದಾಗ ಓಡಿ ಹೋಗಿ ಎಲ್ಲಾರ ಒಂದು ದೇವರ ಗುಡ್ಯಾಗ ಮದುವೆ ಮಾಡ್ಕೋಂತಿವಿ, ಆಗ ನೀ ಲಭೋಲಭೋ ಅಂತ ಹೊಯ್ಕೋಂತ ಮನ್ಯಾಗ ಕೂಡಂತಿ.

ಭಾಗ್ಯವಂತ : ಏ ಹುಚ್ಚು ಬಾರಿಗಿ, ತಿಳಿಲಾರ್ದೆ ಹೋಗಿ ಏನಾರೊಂದು ಅನಾಹುತ ಮಾಡಿಗೀಡೀರಿ, ನಾನು ಮದೆವೆ ಮಾಡೋತನಕ ನೀವು ಸುಮ್ಮನೆ ಮನೆಯಲ್ಲಿ ಕೂಡಬೇಕು.

ಭಗವಂತ : ಮನೆ ಹಿಡ್ಕೊಂಡು ಕೂಡಲಿಕ್ಕ ಇನ್ನೂ ಇವಳೇನು ಚಿಕ್ಕ ಮಗುವಲ್ಲ, ಹದಿನೆಂಟರ ಹರೆಯ ತುಂಬಿದ ಯುವತಿ. ಅಂದಮೇಲೆ ತನ್ನ ಪ್ರಾಯದಲ್ಲಿ ಏನೇನು ಮಾಡಬೇಕಾಗಿದೆ ಅದನೆಲ್ಲ ಮಾಡ್ಬೇಕಂತ ಪ್ರಯತ್ನ ನಡಿಸ್ಯಾಳ.

ಭಾಗ್ಯವಂತ : ಏನು? ಎಲ್ಲಾನೂ ಮಾಡ್ಬೇಕಂತ ಪ್ರಯತ್ನ ನಡಿಸ್ಯಾಳ?

ಭಗವಂತ : ಹೂಂ ಮತ, ಹಿಂದೆ ನಮ್ಮಕ್ಕಾ ಹೀರೇವಳಾಗಿ ಇನ್ನೂ ಒಂದು ತಿಂಗಳು ಕೂಡ ಆಗಿದ್ದಿಲ್ಲ ಆವಾಗ ನೀನು ಕಳವಿನಿಂದ ಕರ್ಕೊಂಡು ಹೋಗಿ ಸುದ್ದಿ ಆಗದಾಂಗ ಆ ಸುರುಪುರದ ಗುಡ್ಡದ ಗುರುಲಿಂಗಪ್ಪನ ಗುಡ್ಯಾಗ ತಾಳಿಕಟ್ಟಿಕೊಂಡು ಬಂದ್ರಿ ! ಅದರಂಗ ನಾವು ತಳಬಿಡಿ ತಾತನ ಗುಡ್ಯಾಗ ತಾಳಿ ಕಟ್ಟಿಕೊಂಡು ಬಂದ್ರು ಏನು ತಪ್ಪಾಗ್ತದ?

ಭಾಗ್ಯವಂತ : ತಪ್ಪು? ಹುಂ ಬರೇ ತಪ್ಪು ಅಷ್ಟೆ ಅಲ್ಲಲೆ ಭಗವಂತ, ಭಯಂಕರ

ದೊಡ್ಡ ತಪ್ಪಾಗ್ತಾದ, ಹಿರೇರು ಮಾಡ್ಯಾರ ಅಂತ ತಿಳಿದು, ಅದೇ ಕೆಲಸ ಕಿರಿಯರು ಮಾಡಿದ್ರ ವಿಪರೀತ ತಪ್ಪಾಗ್ತಾದ.

ಭಗವಂತ : ಛೇ, ಅದು ಹ್ಯಾಂಗ ತಪ್ಪಾಗ್ತಾದೋ ಮಾವ, ಅದೇನೋ ಅಂತಾರಲ್ಲ, ಹಿರೇ ಅಕ್ಕನ ಚಾಳಿ ಮನೆಯ ಮಂದಿಗೆಲ್ಲಾಂತ ಅದರಾಂಗ ಹಿರೇರು ಇಟ್ಟ ಹೆಜ್ಜೆ ಅದು ಕಿರಿಯರಿಗೆ ಸಿ.ಸಿ.ರೋಡಾಗ್ತಾದ.

ಭಾಗ್ಯವಂತ : ಲೇ ಭಗವಂತ !

ಭಗವಂತ : ನಿಜ ಮಾಮ, ಈಗ ನಾವು ಮಾಡ್ತಾ ಇದ್ದದ್ದು ಅದು ನಮ್ಮ ಸ್ವಂತ ಕಾರ್ಯವಲ್ಲ, ನಿಮ್ಮಂಥ ಹಿರೇರು ಮಾಡಿ ಮೂಲಿಗೆ ಹೋಗೆದುದ್ದುನ್ನು ಮತ್ತೆ ನಾವು ಅದನ್ನು ಕಾರ್ಯರೂಪಕ್ಕೆ ತಂದಿದ್ದೇವೆ.

ಭಾಗ್ಯವಂತ : ಹಂಗೆಲ್ಲೋ ಭಗವಂತ, ಮೊದಲು ನಾನು ಹೇಳುವ ಮಾತು ಅರ್ಥಮಾಡಿಕೋ? ಲೈಸನ್ಸ್ ಇಲ್ಲದೆ ಈ ನಮೂನಿ ಗಾಡಿ ನಡಿಸ ಬಾರದು, ಯಾಕಂದರೆ ಅಪ್ಪಿ ತಪ್ಪಿ ನಿಮ್ಮ ದುರ್ದೈವಕ ಎಲ್ಲಾರ ಎಕ್ಸಿಡೆಂಟಾದ್ರ ಅದರಿಂದ ದೊಡ್ಡ ತಪ್ಪುಗಾರರಾಗುತ್ತೀರಿ, ಲೈಸನ್ಸ್ ಇಲ್ಲದೆ ಗಾಡಿ ನಡಿಸಿದ್ದು ಒಂದನೆ ತಪ್ಪು ! ಎಕ್ಸಿಡೆಂಟಾದದ್ದು ಎರಡನೇ ತಪ್ಪು !! ಅಂದವಾದ ಗಾಡಿ ಮಾಡಲ್ ಕೆಡಿಸಿದ್ದು ಮೂರನೇ ತಪ್ಪು !!! ಇವು ಎಲ್ಲಾನೂ ಮಾಡಿ ಕೊನೆಗೆ ಮರ್ಯಾದೆ ಕಳೆದುಕೊಳ್ಳುವುದು ಮಹಾ ತಪ್ಪು ಅಂತ ಹೇಳಿದೆ.

ಭಗವಂತ : ಹೋಗಲಿ ಬಿಡು ಮಾಮ ! ಮರ್ಯಾದೆ ಅನ್ನುವ ಮೂರಕ್ಷರದ ಮೂಲರ್ಥ ನಿಮಗೆ ಅರ್ಥವಾಗಿದ್ರ, ನಮ್ಮ ಸ್ಥಿತಿ ಈ ಮಟ್ಟಕ್ಕೆ ಬರುತ್ತಿರಲಿಲ್ಲ,

ಭಾಗ್ಯವಂತ : ನನಗ ಅರ್ಥಾಗಿಲ್ಲಾಂತ ತಿಳ್ಕೋಬ್ಯಾಡೋ ತಮ್ಮ, ಎಲ್ಲಾನೂ ಅರ್ಥ ಆಗ್ಯಾದ, ನಿಮ್ಮ ಬಾಸಿಂಗ ಬಲವೊಂದು ಕೂಡಿ ಬರಲಿ, ಮದುವೆ ಆಯ್ತಂತನೇ ತಿಳ್ಕೋರಿ.

ಭಗವಂತ : ಇರಲಿ ನಡ್ರಿ ! ನಮ್ಮ ಯಾವ ಜನ್ಮದ ಕರ್ಮದ ವಿಧಿಯಾಗಿ ಗಂಟು ಬಿದ್ದಿಯೋ, ಆ ದೇವರಿಗೆ ಗೊತ್ತು !

[ಎಂದು ಮೂವ್ವರು ಹೋಗುರು]

===***====***===

ಹನ್ನೊಂದನೇ ದೃಶ್ಯ
ಮನೆ

[ಚಂದ್ರು ಕುರ್ಚಿಯ ಮೇಲೆ ಕುಳಿತಿರುವವನು ತೆರೆ ಎತ್ತುತ್ತಲೇ ಎದ್ದು ಮುಂದೆ ಬಂದು ತನ್ನ ಕೈಯಲ್ಲಿದ್ದ ಗಡಿಯಾರ ನೋಡಿ]

ಚಂದ್ರು : ಮಧ್ಯಾನ ಮೂರುಗಂಟೆಯ ಸಮಯದಲ್ಲಿ ಮನೆಯಿಂದ ಹೋದ ಜಮುನಾ ಸಂಜೆ ಆರು ಗಂಟೆ ಕಾಲ ಮಿಕ್ಕಿದರೂ ಇನ್ನೂ ಮನೆಗೆ ಬಂದಿಲ್ಲ ! ಇತ್ತೀಚಿಗೆ ಬರ್ತಾ ಬರ್ತಾ ಯಾಕೋ ಅವಳ ನಡತೆಯಲ್ಲಿ ಬದಲಾವಣೆ ಕಾಣ್ತಾ ಇದೆ [ಅಷ್ಟರಲ್ಲಿ ಜಮುನಾ ಬರುವಳು] ಜಮುನಾ ಸ್ವಲ್ಪ ನಿಂತುಕೊಳ್ಳಿ.

ಜಮುನಾ : ಏಕೆ?

ಚಂದ್ರು : ಇಷ್ಟು ಹೊತ್ತಿನ ವರೆಗೂ ನೀನು ಎಲ್ಲಿಗೆ ಹೋಗಿದ್ದಿ?

ಜಮುನಾ : ವನ ವಿಹಾರಕ್ಕೆಂದು ನಾನು ಮತ್ತು ನನ್ನ ಗೆಳತಿ ಗಾಂಧಿ ಪಾರ್ಕಿಗೆ ಹೋಗಿದ್ವಿ !

ಚಂದ್ರು : ಜಮುನಾ ! ಪ್ರಾಪ್ತ ವಯಸ್ಸಿಗೆ ಬಂದ ಹೆಣ್ಣಲ್ಲದೆ ಮಾಂಗಲ್ಯ ಪಡೆದ ಗೃಹಿಣಿ ನೀನು, ಅಂದ ಮೇಲೆ ನೀನು ಈ ರೀತಿ ಸ್ವೇಚ್ಛಂದವಾಗಿ ವನ ಉದ್ಯಾನವನ ಅಂತ ಅಲೆದಾಡುವುದು ಒಳ್ಳೆಯದಲ್ಲ, ಸ್ತ್ರೀಯಾದವಳು ಮನೆ ಬಿಟ್ಟು ಹೊರ ಹೋಗ ಬಾರದು ತಿಳಿಯಿತೆ?

ಜಮುನಾ : ನೀನು ಹೇಳಿದಂತೆ ಕೇಳಲು ನಾನಿನ್ನೂ ಮೊಲೆ ತಿನ್ನುವ ಮಗುವಲ್ಲ, ವಿದ್ಯಾಮಂದಿರದಲ್ಲಿ ಉನ್ನತ ಮಟ್ಟದ ಪದವಿ ಪಡೆದ ವಿದ್ಯಾವತಿ, ಹೋಗು ಸುತ್ತಾಡಿ ಬೇಸತ್ತು ಬಂದಿದ್ದೇನೆ ಬೇಗ ಒಂದು ಕಪ್ಪು ಕಾಫೀ ಮಾಡಿ ಕೊಡು.

ಚಂದ್ರು : ಏನೇ, ಗಂಡಸಾದ ನನಗೆ ಒಂದು ಕಪ್ಪು ಕಾಫೀ ಮಾಡಿಕೊಂಡು ಎಂದು ಆರ್ಡರ್ ಮಾಡ್ತಿಯೇನೇ ಅವಿವೇಕಿ.

ಜಮುನಾ : ಸ್ವಾಮಿ ಬುದ್ಧಿವಂತರೆ, ಹಿಂದೆ ವೀರ ಸಾಮ್ರಾಟರೆಂದು ಹೊಗಳಿಸಿಕೊಂಡ ಭೀಮಸೇನ ಮತ್ತು ನಳ ಮಹಾರಾಜರು ಗಂಡಸರಲ್ಲವೇನು? ಹುಂ !! ಅಂಥಾ ಮಹಾನ್ ಚಕ್ರವರ್ತಿಗಳೇ ಅಡಿಗೆಯ ಹುಟ್ಟಿಡಿದು ಅಡುಗೆ ಮಾಡಿದರಂದ ಮೇಲೆ ನೀನೇನು ಮಹಾ, ಹೋಗು ನಾನು ಬಟ್ಟೆ ಬದಲಾಯಿಸಿ ಬರುವಷ್ಟರಲ್ಲಿ ಕಾಫೀ ರಡಿ ಮಾಡು, [ಒಳಗೆ ಹೋಗುವಳು]

ಚಂದ್ರು : ಅಯ್ಯೋ ಶಿವ ಶಿವ, ಪರಿಶುದ್ಧವಾದ ಪರಿವ್ರತೆಯರ ಸೌಭಾಗ್ಯ ಸೂಚಕವಾದ ಅರಷಿಣ ಕುಂಕಮಗಳನ್ನು ತಿರಸ್ಕರಿಸಿ, ಮುಖಿಕ್ಕೆ ಬಣ್ಣ ಬಣ್ಣದ ಫೇರಿನ್ ಲೌಲಿಗಳಂಥ ಕ್ರಿಮ್‌ಗಳನ್ನು ಹಚ್ಚಿಕೊಂಡು, ತಿರುಗುವ ಈ ಹೆಣ್ಣಿನ ಸ್ವಭಾವವೇ ವಿಚಿತ್ರವಾಗಿದೆ. ಇವಳ ನಡೆ ಮತ್ತು ನುಡಿಗಳು ಕೇಳಿದರೆ ಪುರುಷರ ಸಂಸ್ಕೃತಿಯನ್ನೇ ನಿರ್ಮೂಲನೆ ಮಾಡಲು ಹೊಂಟಂತೆ ಕಾಣುತ್ತದೆ. ಅಂತೇ ಹಿಂದಿನ ಬುದ್ಧಿವಂತ ಹಿರಿಯರು ಕಲಿತ ಹೆಣ್ಣೆಂದರೆ ಬ್ಯಾಡಪ್ಪೋ ಬ್ಯಾಡ ಅಂತ್ತಿದ್ರು !

ಜಮುನಾ : [ಒಳಗಿನಿಂದ ಬರುತ್ತ] ಏನ್ರಿ, ಕಲಿತ ಹೆಣ್ಣಿನ ಗೌರವ ಸಣ್ಣ ತನಕ್ಕಿಳಿಸಿ ಮಾತಾಡ್ತಾ ಇದ್ದೀರೆಲ್ಲ, ಜಗದ್ವಿಖ್ಯಾತ ಮಹಾ ವಿದ್ಯಾರತ್ನ ಶಿರೋಮಣಿಗಳಾದ ಅಮೇರಿಕದ ಮಿಸ್ ಮೇಯೋ ಇವರು ರಚಿಸಿದ ಲೇಡಿಸ್ ಅರ್ಥಾತ್ ಮದರಿಂಡಿಯಾ ಎಂಬ ಪ್ರಸಿದ್ಧ ಗ್ರಂಥ ಒಮ್ಮೆ ಓದಿ ನೋಡಿ ಆವಾಗ ಗೊತ್ತಾಗುತ್ತೆ ಸ್ತ್ರೀಯರ ಬೆಲೆ ಎಷ್ಟೆಂಬುವದು.

ಚಂದ್ರು : ಅನ್ಯ ದೇಶದ ಇತಿಹಾಸ ಓದುವುದಕಿಂತ ಮುನ್ನ ನಿನ್ನ ದೇಶದ ಇತಿಹಾಸ ಒಮ್ಮೆ ಓದಿ ನೋಡು, ಸತ್ಯ ಸಾವಿತ್ರಿ, ಮಹಾಸತಿ ಅನಸುಯ್ಯಾ, ನೆಲ್ಲೂರುನೆಂಬಕ್ಕ, ನವರಂಥಾ ಮಹಾನ್ ಪತಿವೃತಾ ಶಿರೋಮಣಿಗಳ ಸಂಸ್ಕೃತಿ ಯಾವ ಮಟ್ಟದಲ್ಲಿತ್ತು ಎಂಬುವುದು ನಿನಗೂ ಗೊತ್ತಾಗುತ್ತೆ.

ಜಮುನಾ : ಹುಂ !! ನಿಮ್ಮಂಥ ಸ್ವಾರ್ಥಿ ಪುರುಷರು ತಮ್ಮ ತಮ್ಮ ಇಷ್ಟ ಬಂದಂತೆ ಬರೆದುಕೊಂಡು ಸ್ತ್ರೀಕುಲವನ್ನು ಕಣ್ಣೀರಿನ ಕಡಲಲ್ಲಿ ತಳ್ಳಿ, ಅವಳಿಗೆ ಯಾವ ಸ್ವಾತಂತ್ರ್ಯವನ್ನೂ ಕೊಡದೆ ಸದಾ ಪತಿ

ಸೇವಾ ತತ್ಪರಳಾಗಿ, ಪತಿಯ ಪ್ರತಿಯೊಂದು ಮಾತು ಉಲ್ಲಂಘಿಸದೆ ನಡಿಯುವುದೆ ಸನಾತನ ಸ್ತ್ರೀಯರ ಧರ್ಮ ಅಲ್ಲವೆ?

ಚಂದ್ರು : ಹೌದು, ಸ್ತ್ರೀಯಾದವಳು ಆ ಸನಾತನ ಧರ್ಮದಂತೆ ನಡಿಯಬೇಕು, ಪುರುಷರಂತೆ ಸ್ತ್ರೀಯೂ ಸ್ವಾತಂತ್ರ್ಯ ಬಯಿಸದೆ ಗಂಡನ ಮನೆಯಲ್ಲಿ ಅದು ಗಂಡನ ಆದೀನದಲ್ಲಿ ಇರಬೇಕು.

ಜಮುನಾ : ಇದು ನಿಮ್ಮಂಥ ಸ್ವಾರ್ಥಿಗಳು ಹೇಳುವ ಮಾತು ! ಸ್ತ್ರೀಯರು ಚಿಕ್ಕವರಿದ್ದಾಗ ತಂದೆ–ತಾಯಿಗಳ ಆಧೀನದಲ್ಲಿರಬೇಕು ಮುಂದೆ ಮುದವೆಯಾದ ನಂತರ ಗಂಡನ ಆದೀನದಲ್ಲಿರಬೇಕು, ಎಂದು ಜನಿಸುವಾಗ ಹೆಣ್ಣು ತನ್ನ ಕೊರಳಿಗೆ ಚೀಟಿಕಟ್ಟಿಸಿಕೊಂಡು ಬಂದಿಲ್ಲ, ಹಿಂದೆ ಕೆಲವು ಅವಿದ್ಯಾವಂತ ಸ್ತ್ರೀಯರು ಪುರುಷರು ಹೇಳಿದಂತೆ ನಡೆದು ತಮ್ಮ ಸ್ವಾತಂತ್ರ್ಯ ಕಳೆದುಕೊಂಡಿದ್ದಾರೆ.

ಚಂದ್ರು : ಅಂದರೆ, ಗಂಡಿನಂತೆ ಹೆಣ್ಣಿಗೂ ಸರ್ವ ಸ್ವಾತಂತ್ರತೆ ಬೇಕು ಅಂತ ಹೇಳ್ತಿಯಾ?

ಜಮುನಾ : ಹೌದು ! ಸನಾತನ ಸ್ತ್ರೀಯರ ಸಂಸ್ಕೃತಿ ಇದೀಗ ನಶಿಸತೊಡಗಿದೆ, ಎತ್ತ ನೋಡಿದರತ್ತ ನಾಗರಿಕ ಸ್ತ್ರೀಯರೇ ಮುಂದೆ ಬರುತ್ತಿದ್ದಾರೆ, ಸ್ತ್ರೀ ಕಾಲೇಜು ! ಸ್ತ್ರೀ ಬೋರ್ಡಿಂಗ್ !! ಸ್ತ್ರೀ ಲೈಬ್ರರಿ !!! ಅಷ್ಟೆ ಅಲ್ಲ. ಶಿಕ್ಷಕರು, ಡಾಕ್ಟರರು, ವಕೀಲರು, ಪೋಲೀಸರು, ಕಂಡೆಕ್ಟರ್, ಮುಂತಾದ ವೃತ್ತಿಗಳಲ್ಲಿ ಅಲ್ಲದೆ, ಎಂ.ಎಲ್.ಎ., ಎಂ.ಪಿ, ಮುಖ್ಯಮಂತ್ರಿ, ಪ್ರಧಾನಮಂತ್ರಿ ಹೆಚ್ಚೇನು ರಾಷ್ಟ್ರಪತಿಯರು, ಆಗಿದ್ದಾರೆ, ಅಂದ ಮೇಲೆ ಹೆಣ್ಣಿಗೂ ಗಂಡಿಗೂ ಏನಿದೆ ವ್ಯತ್ಯಾಸ? ಗಂಡಿನಂತೆ ಹೆಣ್ಣಿಗೂ ಸ್ವಾತಂತ್ರ ಬೇಕು.

ಚಂದ್ರು : ಜಮುನಾ !

ಜಮುನಾ : ಎಸ್. ಮೊದಲು ಲೇಡಿಜ್ ಅಂದ ಮೇಲೆ ನಂತರ ಜಂಟ್ಲ್‌ಮೆನ್ ಅನ್ನುತ್ತಾರೆ, ಇಂಥಾ ಗೌರವಾನ್ವಿತ ಸ್ತ್ರೀಯರು ಅಜನ್ಮ ಪರಿಯಂತರ ಪತಿಯ ಆದೀನದಲ್ಲಿದ್ದುದ್ದಾಯ್ತು ಇನ್ನು ಮುಂದೆ ಪುರುಷರೇ ಆಜನ್ಮ ಪರಿಯಂತರ ಸತಿಸೇವೆ ತತ್ಪರರಾಗಿ ಸದಾ ಸತಿಯ ಅದೀನದಲ್ಲಿರತಕ್ಕದ್ದು.

ಚಂದ್ರು : ಇದು ಮಾತ್ರ ಸಾಧ್ಯವಿಲ್ಲ, ನೀನು ಹೇಳಿದಂತೆ ಕೇಳಿಕೊಂಡು

ಸಮಾಜ ದೃಷ್ಟಿಯಲ್ಲಿ ಹೆಂಡತಿಯ ಗುಲಾಮನಾಗಿ ಬದುಕುವ ಇಷ್ಟ ನನಗಿಲ್ಲ, ಎಷ್ಟೇ ಕಷ್ಟ ಬಂದರೂ ಸಹಿತ ಅವುಗಳನ್ನು ಮೆಟ್ಟಿ ಶ್ರೇಷ್ಠವಾದ ಪುರುಷ ಕುಲಕ್ಕೆ ಗೌರವದ ಶಿಖರವಾಗಿ ಬಾಳುತ್ತೇನೆ.

ಜಮುನಾ : ಸ್ವಾಮಿ !

ಚಂದ್ರು : ಸ್ವಾಮಿನೂ ಇಲ್ಲ ! ಸನ್ಯಾಸಿನೂ ಇಲ್ಲ !! ಸರಿ ದಾರಿಬಿಡು, ಯಾವ ಜನ್ಮದ ನನ್ನ ಕರ್ಮಕ್ಕಾಗಿ ಈ ಜನ್ಮದಲ್ಲಿ ಹೆಂಡತಿಯಾಗಿ ಬಂದಿದಿಯೋ ನಾಕಾಣೆ (ಹೋಗುವನು).

ಜಮುನಾ : ಹೋಗೋಗು, ನಿನ್ನ ಕೋಳಿ ಕೂಗಿದರೆ ಬೆಳಗರಿಯುತ್ತಿದೆ ಎಂದು ತಿಳಿದುಕೊಂಡಿದ್ದರೆ ಅದು ನಿನ್ನ ತಪ್ಪು (ಒಳಗೆ ಹೋಗುವಳು).

===***====***===

ಹನ್ನೆರಡನೇ ದೃಶ್ಯ

ಜಂಗಲ್ ರಸ್ತಾ

[ರವಿ ಕುರುಡನಂತೆ ಹೆಜ್ಜೆ ಇಡುತ್ತ ಮಗನೊಂದಿಗೆ ಬರುವನು]

ರವಿ : ದೇವಾ ! ಭಕ್ತ ಸಾರ್ವಭೌಮನಾದ ಜಗಲಿಂಗೇಶ್ವರನೇ ನಮಗಾಗುತ್ತಿರುವ ಅನ್ಯಾಯವನ್ನು ನೋಡದೆ ಕಣ್ಣು ಕಾಣದ ಕುರುಡನಂತೆ, ಕಿವಿಕೇಳದ ಕಿವುಡನಂತೆ, ಮಾತು ಬಾರದ ಮೂಕನಂತೆ, ಕಲ್ಲಾಗಿ ಕುಳಿತುಕೊಂಡಿಯಾ? ಹುಂ !! ಕಾಯಿಲೆಯಿಂದ ಬಳಲುತಿರುವ ನನ್ನ ಕಂಚಮ್ಮನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿಕಾಯಿಲೆ ಗುಣ ಪಡಿಸಬೇಕೆಂದರೆ ಕೈಯಲ್ಲಿ ಒಂದು ಬಿಡಿಕಾಸು ಕೂಡ ಇಲ್ಲ ದೇವಾ ! ಕುರುಡ ಪಕ್ಷಿಯಾದ ನಾನೇನು ಮಾಡಿ ಹಣ ತಂದು ತೋರಿಸಲಿ?

ಶಶಿಧರ : ಅಪ್ಪಾ ! ನನಗೆ ತುಂಬ ಹಸಿವಾಗಿದೆ, ಎಲ್ಲಿಯಾದರೂ ಒಂದು ತುತ್ತು ಅನ್ನ ತಂದು ಕೊಡಪ್ಪ, ತಿಂದು ನೀರು ಕುಡಿಯುತ್ತೇನೆ.

ರವಿ : ಅಯ್ಯೋ ಶಿವ ಶಿವ ! ಕೇಳಿದಿಯಾ ತಂದೆ ನನ್ನ ಮಗನ ಹಸಿವಿನ ರೋಧನೆ ಹುಂ !! ಹೊಟ್ಟೆಯಿಂದ ಹುಟ್ಟಿದ ಮಗನು ಅಪ್ಪಾ ನನಗೆ ತುಂಬಾ ಹಸಿವೆಯಾಗಿದೆ ಎಲ್ಲಿಯಾದರೊಂದು ತುತ್ತು ಅನ್ನ ತಂದು ಕೊಡಪ್ಪ ಅಂತ ಕೇಳಿದರೂ ಸಹಿತ ಹಿಡಿ ಅನ್ನ ತಂದು ಕೊಡದಷ್ಟು ಅಯ್ಯೋಗ್ಯನನ್ನಾಗಿ ಮಾಡಿದಿಯಾ ನನ್ನನ್ನು !

ಶಶಿಧರ : ಅಪ್ಪಾ ಸಾಯ್ತಿನಿ ಅನ್ನ ನೀರು

ರವಿ : ನಾನೇನು ಮಾಡ್ಲಿ ಕಂದ, ಅಪ್ಪಾ ಅನ್ನ ತಂದು ಕೊಡು ಎಂದು ಕೇಳಿದರೆ ಕುರುಡ ಪಕ್ಷಿಯಾದ ನಾನು ಎಲ್ಲಿಂದ ತಂದು ಕೊಡಲಿ? ಪರಮಾತ್ಮ ನೀನು ನನ್ನಂತೆ ಕುರುಡ ಪಕ್ಷಿಯಾದಾಗ, ನಿನ್ನ ಹೊಟ್ಟೆಯಿಂದ ಹುಟ್ಟಿದ ಮಗನು ತುತ್ತು ಅನ್ನ ತಂದು ಕೊಡು ಎಂದು ಕೇಳಿದಾಗ, ಅವನಿಗೆ ನೀನು ಎಲ್ಲಿಂದಾದರೂ ಅನ್ನ ತಂದು ಕೊಟ್ಟು ಅವನ ಹಸಿವೆ ಹಿಂಗಿಸುತ್ತಿದ್ದಿಯೋ ಅಥವಾ ಹಡೆದ

ತಪ್ಪಿಗಾಗಿ ಅವನ ವಡಲಿಗೆ ವಿಷಹಾಕ್ತಿದ್ದೀಯೋ ಹೇಳು, ಹೇಳೋ ಪಾಪಿ ಹೇಳು?

ಶಶಿಧರ : ಅಪ್ಪಾಜಿ, ದಯವಿಟ್ಟು ಆ ಶಿವನನ್ನು ಶಪಿಸದಿರು ನಮ್ಮ ಕರ್ಮಕ್ಕೆ ಆ ದೇವರನ್ನು ನಿಂದಿಸಿದೆ ಏನು ಪ್ರಯೋಜನ,

ರವಿ : ದೇವರು? ಹುಂ!! ಎಲ್ಲಿದ್ದಾನೆ ಆ ದೇವರು? ಒಂದು ವೇಳೆ ಆ ದೇವರು ಈ ಜಗದಲ್ಲಿ ಇದ್ದುದ್ದೇ ನಿಜವಾಗಿದ್ದರೆ ನಮ್ಮಂಥವರಿಗೆ ಇಂಥ ಸ್ಥಿತಿ ಬರುತಿರಲಿಲ್ಲ, ಮಗು. ಸತ್ತವರನ್ನು ಸ್ಮಶಾನದಲ್ಲಿ ಹೊಳಿಟ್ಟು, ಅದರ ಮೇಲೊಂದು ಸುಂದರವಾದ ಮಂದಿರವನ್ನು ಕಟ್ಟಿಸಿ, ಅದರಲ್ಲೊಂದು ಕಟೆದ ಕಲ್ಲಿನ ಮೂರ್ತಿಯನ್ನಿಟ್ಟು, ಅದಕ್ಕೆ ದೇವರೆಂದು ನಾಮಕರಣ ಮಾಡಿದರೆ ಸತ್ತ ಆ ಹೆಣವು ದೇವರಾಗ ಬಹುದೆ? ಸುಳ್ಳು ಸುಳ್ಳು ಇದೆಲ್ಲವೂ ಸುಳ್ಳು, ಜಗದಲ್ಲಿ ದೇವರಿಲ್ಲ, ಸ್ವರ್ಗವಿಲ್ಲ, ನರಕವಿಲ್ಲ.

ಶಶಿಧರ : ಅಪ್ಪಾ, ದಯವಿಟ್ಟು ಜಗದಲ್ಲಿ ದೇವರಿಲ್ಲವೆಂದು ನುಡಿಯಬೇಡಿ, ಅಣು ರೇಣು ತೃಣಕಾಷ್ಠದಲ್ಲಿಯೂ ಸಹಿತ ದೇವರು ಲೀನವಾಗಿದ್ದಾನೆಂದು ಹಿರಿಯರು ಹೇಳುತಾರಲ್ಲ ಇದು ಸುಳ್ಳೇನು?

ರವಿ : ಇರಬಹುದು, ಇದ್ದರೂ ನಮ್ಮಂತ ನತ ದೃಷ್ಟರಿಗೆ ಮಾತ್ರ ಇಲ್ಲ, ಅವನು ಹಣವಂತರ ಮನೆಯಲ್ಲಿ ಅನ್ನದ ಅಗಳು ಮತ್ತು ಬೆಲ್ಲದ ನೀರಿಗಾಗಿ ಜೊಲ್ಲು ಸುರಿಸುತ್ತ ಬಿದ್ಧ ಕಳ್ಳ ದೇವ,

ಶಶಿಧರ : ಅಪ್ಪಾಜಿ, ನಮಗೆ ಬಂದ ಕಷ್ಟಕ್ಕಾಗಿ ದೇವರನ್ನು ಬೈ ಬೇಡ, ನಡೆ ನಮಗೆ ಯಾರಾದರೂ ಬಂಧು ಬಳಗದವರಿದ್ದರೆ ಅವರ ಮನೆಗೆ ಹೋಗಿ, ಅಲ್ಲಿ ನಾಲ್ಕು ದಿವಸ ಇದ್ದರಾಯಿತು.

ರವಿ : ಶಶಿ, ಬಡತನ ಬಂದಾಗ ಬಂಧು ಬಳಗದವರ ಮನೆಯ ಬಾಗಿಲಿಗೆ ಹೋಗಿ ನಿಂತರೆ, ನಿಂದಿಸಿ ನಮ್ಮನ್ನು ಹೊರದಬ್ಬುವರೆ ಹೊರತು, ಆದರದಿಂದ ಹತ್ತಿರಕ್ಕೆ ಕರೆದುಕೊಂಡು ನಮ್ಮ ಸುಖ ದುಃಖ ಕೇಳಲಾರರು.

ಶಶಿಧರ : ಹಾಗಾದರೆ ನಾವು ಯಾರ ಮನೆಗೂ ಹೋಗುವುದು ಬೇಡ, ನೀವು ಸ್ವಲ್ಪ ಹೊತ್ತು ಇಲ್ಲಿಯೇ ಕುಳಿತಿರು, ನಾನು ಹೋಗಿ ಎಲ್ಲಿಯಾದರೂ ಭಿಕ್ಷೆ ಬೇಡಿಕೊಂಡು ಬರುತ್ತೇನೆ.

ರವಿ : ಬೇಡಕಂದ, ನೀನು ಭಿಕ್ಷೆಗೆ ಹೋಗುವುದು ಬೇಡ, ನಾನೇ ಹೋಗಿ ಎಲ್ಲಿಯಾದರು ಭಿಕ್ಷೆ ಬೇಡಿಕೊಂಡು ಬರುತ್ತೇನೆ.

ಶಶಿಧರ : ನೀನು ಹೋಗುವುದು ಬೇಡಪ್ಪ, ಕುರುಡ ತಂದೆಯಾದ ನಿಮ್ಮನ್ನು ಭಿಕ್ಷೆಗೆ ಕಳುಹಿಸಿ ಈ ನನ್ನ ಹೇಸಿ ಹೊಟ್ಟೆ ತುಂಬಿಕೊಳ್ಳಲು ನಾನು ಸಿದ್ಧನಿಲ್ಲ,

ರವಿ : ಶಶಿ, ಇದೇನು ಹೇಳುತಿರುವಿಯೋ?

ಶಶಿಧರ : ಸತ್ಯವನ್ನೇ ಹೇಳುತಿರುವೆ, ಕುರುಡ ತಂದೆಯನ್ನು ತಿರುಪೆಗೆ ಕಳಿಸಿ, ತನ್ನ ಹೊಟ್ಟೆ ತುಂಬಿಕೊಳ್ಳುವ ಇವನೆಂಥಾ ಪಾಪಿ ಮಗನೆಂದು ಈ ಜಗತ್ತು ನನ್ನನ್ನು ನಿಂದಿಸದೆ ಬಿಡಲಾರದು,

ರವಿ : ಅಯ್ಯೋ ಹುಚ್ಚಪ್ಪ ! ಇಲ್ಲುದನ್ನು ಕಲ್ಪಿಸಿಕೊಂಡು ಮನಸ್ಸಿಗೆ ಬೇಸರ ಮಾಡಿಕೊಳ್ಳಬೇಡ, ಜಗತ್ತು ನಿನಗೆ ಅಷ್ಟೇಅಲ್ಲ, ನನಗೂ ಅನ್ನುತ್ತೆ, ಇದ್ದೊಬ್ಬ ಮಗನಿಗೆ ತುತ್ತು ಅನ್ನ ತಂದು ಕೊಡದ ಇವನೆಂಥ ಗತಿಗೇಡಿ ತಂದೆಯೆಂದು.

ಶಶಿಧರ : ಅಪ್ಪಾ, ದಯವಿಟ್ಟು ನೀವು ಯಾವ ವಿಚಾರವನ್ನೂ ಮಾಡಬೇಡ, ಸ್ವಲ್ಪು ಹೊತ್ತು ಇಲ್ಲೇ ಕುಳಿತುಕೊಳ್ಳೀ, ನಾನು ಬೇಗ ಬಂದು ಬಿಡ್ತಿನಿ [ಎಂದು ಹೋಗುವನು]

[ಪರದೆ ಬೀಳುವುದು]

===**=====**===

ಹದಿಮೂರನೇ ದೃಶ್ಯ

ರಸ್ತಾ

ಶ್ರೀಮಂತ : [ಬರುತ್ತಾ] ಅಲ್ಲಾ, ವಾರದೊಳಗ ಒಂದು ಲಕ್ಷ ರೂಪಾಯಿ ತಂದು ಕೊಡ್ತೀನಿ ಅಂತ ಆ ಬದಮಾಸ ನನಮಗ ಭಾಗ್ಯವಂತನಿಗೆ ಮಾತುಕೊಟ್ಟೀನಿ. ಆ ನನ ಮಗ ನನ್ನ ದಾರಿನೇ ಕಾಯ್ತಿರುತಾನ, ಅವನಿಗೆ ಹ್ಯಾಂಗರ ಮರಳು ಮಾಡಿ ಇನ್ನೂ ಒಂದು ಲಕ್ಷ ರೂಪಾಯಿ, ಕಿತ್ತಿಕೊಳ್ಳ ಬೇಕು, ಓ ಹೋ, ನೆನಸುವಷ್ಟರಲ್ಲಿಯೇ ವಾಸನೆ ಹಿಡಿದುಕೊಂಡು ಬಂದ ಬಿಟ್ಟ ಮಗ ನಾಯಿಜಾತಿಯವ, ಬರಲಿ ಬರಲಿ [ಎಂದು ಪಂಚಾಂಗ ಹಿಡಿದು ಓದುತ್ತಾ ನಿಲ್ಲುವನು]

ಭಾಗ್ಯವಂತ : ಯಾರು? ಓ ಹೋ ಶ್ರೀಮಂತ, ನೀನಾ? ಇದೇನೋ ಬೆಂಗಳೂರಿನಿಂದ ಯಾವಾಗ ಬಂದಿ?

ಶ್ರೀಮಂತ : ಇನ್ನೂ ಇದೇ ಈಗ ತಾನೆ ಸುಗುಣ ಸುಂದರಿ ಬಸ್ಸಿನಿಂದ ಬಂದೆ ಮಾಮ, ಆದಷ್ಟು ಬೇಗ ಬಂದು ನಿಮಗೊಂದು ವಿಷಯ ತಿಳಿಸಬೇಕೆಂದು ಪಂಚಾಂಗ ತೊಗೊಂಡು ನಿಮ್ಮ ಮನೆಗೆ ಬರುವಷ್ಟರಲ್ಲಿಯೇ ನೀವೇ ಬಂದು ಬಿಟ್ರಿ.

ಭಾಗ್ಯವಂತ : ಏನು? ನನಗೊಂದು ವಿಷಯ ತಿಳಿಸಲು ನೀನು ಪಂಚಾಂಗ ತೊಗೊಂಡು ಬಂದಿಯಾ?

ಶ್ರೀಮಂತ : ಹೌದು ಮಾಮ ಆ ವಿಷಯ ನಿಮಗೆ ಯಾವ ರೀತಿಯಿಂದ ತಿಳಿಸಿ ಹೇಳಲಿ? ನನ್ನ ತಾಯಿ–ತಂದೆ ಸತ್ತ ಮೇಲೆ, ನನ್ನನ್ನು, ಸಾಕಿದವರು ಒಂದು ಸಿರಿವಂತ ಮನೆಯ ಹೆಣ್ಣು ನೋಡಿ, ಇದೇ ವಾರದಲ್ಲಿ ನನ್ನ ಮದುವೆ ಫಿಕ್ಸ್ ಮಾಡಿದ್ದಾರೆ.

ಭಾಗ್ಯವಂತ : ಇದೇ ವಾರದಲ್ಲಿ ನಿನ್ನ ಮದುವೆ ಫಿಕ್ಸ್ ಮಾಡಿದಾರೆ? ಹಾಗಾದರೆ ನನ್ನ ಮಗಳ ಗತಿಯೇನು?

ಶ್ರೀಮಂತ : ನೀನೇನು ಚಿಂತಿಸ ಬೇಡ, ವರದಕ್ಷಿಣೆಯ ಹಣಕ್ಕಾಗಿ ಅವರು

ನನ್ನನ್ನು ಮಾರಾಟಕ್ಕೆ ಹಿಡಿದಿದ್ದಾರೆ, ಆದರೆ ತಿಂಗಳಿಗೆ ಹತ್ತು ಸಾವಿರ ರೂಪಾಯಿ ಸಂಬಳ, ಇಪ್ಪತ್ತು ಸಾವಿರ ರೂಪಾಯಿ ಗಿಂಬಳ ಪಡೆಯುವ ನಾನು ಅಂಥ ಜುಜುಬಿ ವರದಕ್ಷಿಣೆ ಹಣಕ್ಕೆ ಮಾರು ಹೋಗುವ ಮತಿಹೀನ ಮನುಷ್ಯ ನಾನಲ್ಲ, ಆದರೂ ಅವರು ಮುಂಗಡವಾಗಿ ಒಂದು ಲಕ್ಷ ರೂಪಾಯಿ ಅಡ್ವಾನ್ಸ್ ಕೊಟ್ಟಿದ್ದಾರೆ.

ಭಾಗ್ಯವಂತ : ಏನು? ಒಂದು ಲಕ್ಷ ರೂಪಾಯಿ ಅಡ್ವಾನ್ಸ್ ಕೊಟ್ಟಿದ್ದಾರೆಯೇ?

ಶ್ರೀಮಂತ : ಏಸ್. ಮಾಮಾಜಿ ! ಅವರು ತಂದು ಕೊಟ್ಟ ಒಂದು ಲಕ್ಷ ರೂಪಾಯಿ ನೀವೇ ತಿನ್ರಿ, ನಾನು ಇದೇ ವಾರದಲ್ಲಿ ಹಣ ಆ ಹೆಣ್ಣಿನವರಿಗೆ ಹಿಂದಿರುಗಿ ಮುಟ್ಟಿಸುತ್ತೇನೆ ಈ ಮದುವೆ ಕ್ಯಾನ್ಸಲ್ ಮಾಡ್ರಿ ಅಂತ ಹೇಳಿ ಬಂದಿದ್ದೇನೆ, ಅದಕ್ಕೆ ಮದುವೆ ಕ್ಯಾನ್ಸಲ್ ಮಾಡಲಿಕ್ಕೆ ಒಳ್ಳೆ ಮೂರ್ತ ಯಾವುದೂ ಅಂತ ಪಂಚಾಂಗ ನೋಡಾಕತ್ತೀನಿ.

ಭಾಗ್ಯವಂತ : ಮದುವೆ ಕ್ಯಾನ್ಸಲ್‌ಲಿಗೂ ಒಳ್ಳೆ ಮೂರ್ತ ಇರಬೇಕೇನು?

ಶ್ರೀಮಂತ : ಹೌದು ಮಾಮ, ಒಳ್ಳೆ ಮೂಹೂರ್ತದಲ್ಲಿ ಮದುವೆ ಮುರುದ್ರ, ಮುಂದಿನ ಮದುವೆಗೆ ಗ್ರಾಚಾರನೇ ಇರುವದಿಲ್ಲ, ಅದ್ಕಾ ನಾನು ಪಂಚಾಂಗ ನೋಡಕತ್ತೀನಿ.

ಭಾಗ್ಯವಂತ : ಸರಿ, ಸರಿ, ನಿನಗೂ ಪಂಚಾಂಗ ನೋಡಾಕ ಬರ್ತಾದೇನು?

ಶ್ರೀಮಂತ : ಆರು ಶಾಸ್ತ್ರ, ಹದಿನೆಂಟು ಪುರಾಣ ಓದಿದ ನನಗೆ ಈ ಪಂಚಾಂಗವೇನು ಮಹಾ, ಬೇಕಿದ್ರ ದಕ್ಷಿಣೆ ಇಟ್ಟು ಕೇಳು ನಿನ್ನ ಹಿಂದಿನ ಮುಂದಿನ ಭವಿಷ್ಯನೇ ಹೇಳ್ತೀನಿ.

ಭಾಗ್ಯವಂತ : ಛೇ, ಛೇ, ಹಿಂದಿಂದು, ಮುಂದಿಂದು ನಂದು ಭವಿಷ್ಯ ಹೇಳಬೇಡ, ಬೇಕಿದ್ರ ಸವ್ವಾ ರೂಪಾಯಿ ದಕ್ಷಿಣೆ ಕೊಡ್ತಿನಿ, ಈ ವರ್ಷ ಮಳೆ ಬೆಳೆಯ ಕಾಲ ಹ್ಯಾಂಗಾದ ಸ್ವಲ್ಪ ನೋಡಿ ಹೇಳು?

ಶ್ರೀಮಂತ : [ಪಂಚಾಂಗ ನೋಡಿ] ನೋಡು ಮಾಮ, ಈ ವರ್ಷ ಘೋರ ಪಾತಕಿಯಂಬ ಸಂಕ್ರಾಂತಿ ಸ್ತ್ರೀಯೊಬ್ಬಳು, ಒಂದು ಕೈಯಲ್ಲಿ ಬ್ರಾಂಡಿ ಬಾಟ್ಲಿ, ಮತ್ತೊಂದು ಕೈಯಲ್ಲಿ ಸುಟ್ಟ ಕೋಳಿಯ ಕಾಲು ಹಿಡಿದುಕೊಂಡು, ತಿನ್ನುತ್ತ ಕುಡಿಯುತ್ತ ಕ್ಲಬ್ಬಿನಲ್ಲಿ ಡಾನ್ಸ್ ಮಾಡುತಿರುವ ಅವಳ ಕಾಲ್ಗೆಜ್ಜೆಯ ಝೇಂಕಾರದ ನಾದವನ್ನು ಕೇಳಿದ ಮೇಘ ರಾಜನು ಆ ಕೈಲಾಸದಿಂದ ಕ್ಲಬ್ಬಿಗೆ ಬಂದು, ಅವಳ ಕೈಯಲ್ಲಿದ್ದ

ಮಧ್ಯ ಮಾಂಸವನ್ನು ಸೇವಿಸುತ್ತ ಋತು ಮಾಸಗಳನ್ನೇ ಮರೆತು, ಅವಳೊಂದಿಗೆ ಡಿಸ್ಕೋಡ್ಯಾನ್ಸ್ ಮಾಡುವುದರಿಂದ ಮಳೆಯ ಹಿಂದೆ ಬಿಸಿಲು, ಬಿಸಿಲ ಹಿಂದೆ ಮಳೆ, ಗಾಳಿ ಧೂಳು ಇರುವುದರಿಂದ ಬೆಳೆಗೆ ಸ್ವಲ್ಪ ತೊಂದರೆ ಇದೆ ಒಟ್ಟಿನಲ್ಲಿ ಹೇಳುವದಂದ್ರ ಮಳೆ, ಸರಿಯಾಗಿ ಆದ್ರ ಬೆಳೆ ಸರಿಯಾಗಿ ಬರ್ತಾದಂತ ನಮ್ಮ ಪಂಚಾಂಗ ಹೇಳ್ತಾದ ನೋಡು.

ಭಾಗ್ಯವಂತ : ಅಂತೂ ಅಡ್ಡಿಯಿಲ್ಲಪ್ಪ ! ನನ್ನ ಮಗಳ ಕೈ ಹಿಡಿಯಲಿಕ್ಕೆ ನೀನೇ ಯೋಗ್ಯವಾದ ವರನಂತ ನನಗಿಂದು ಖಾತ್ರಿಯಾಯ್ತು.

ಶ್ರೀಮಂತ : ಏನು ನಿನ್ನ ಮಗಳ ಕೈಹಿಡಿಯಲು ನಾನೇ ಯೋಗ್ಯನಾದ ವರನೆಂದು ಖಾತ್ರಿ ಮಾಡೋಕೊಂಡ್ಯಾ? ಅದು ಹ್ಯಾಂಗ ಮಾಮ?

ಭಾಗ್ಯವಂತ : ನೋಡಪ್ಪ ನಿನ್ನ ದೈವತಪ್ಪಿ ಕೆ.ಎಸ್.ಕೆ. ಆಯಿಂಡ್ ಕಂಪನಿಯವರು ನಿನ್ನನ್ನು ನೌಕರಿಯಿಂದ ಡಿಸ್.ಮಿಸ್. ಮಾಡಿದಾಗ, ನಿನ್ನ ಹತ್ರ ಇರುವ ಈ ಪಂಚಾಂಗ ತೊಗೊಂಡು ಸಿಟಿಬಸ್‌ಸ್ಟ್ಯಾಂಡಿನಾಗ ಕುಂತು ಐದು ಹತ್ತು ರೂಪಾಯಿ ಗಳಸ್ತಿ ನನ್ನ ಮಗಳಿಗೆ ಸಲುಹುತಿ ಎಂಬ ನಂಬಿಕೆ ನನಗಾಗ್ಯಾದ ನೋಡು.

ಶ್ರೀಮಂತ : ನಿನಗ ನಂಬಿಕೆ ಆದ್ರ ಸಾಕು ಮಾಮ, ಸರಿ ನನಗೆ ಬೇಕಿದ್ದವರ ಹತ್ತಿರ ಎರಡು ಲಕ್ಷ ರೂಪಾಯಿ ಕೇಳೀನಿ ಆ ಎರಡು ಲಕ್ಷ ರೂಪಾಯಿಗಳಿಗೆ ನಾಲ್ಕು ಲಕ್ಷ ಕೊಟ್ರ ಮಾತ್ರ ಕೊಡ್ತೀವಿ ಅಂತ ಹೇಳ್ಯಾರ, ಅದ್ಕಾ ಬೇಗ ಹೋಗಿ ಹಣತಂದು ಒಂದು ಲಕ್ಷ ರೂಪಾಯಿ ನಿನಗೆ ಕೊಟ್ಟು, ಇನ್ನೊಂದು ಲಕ್ಷ ಆ ಹೆಣ್ಣೀನವರಿಗೆ ತಂದು ಕೊಡ್ತೀನಿ ಸ್ವಲ್ಪ ದಾರಿ ಬಿಡು.

ಭಾಗ್ಯವಂತ : ಅಲ್ಲೋ, ಹತ್ತು ಸಾವಿರ ಸಂಬ್ಳ, ಇಪ್ಪತ್ತು ಸಾವಿರಗಿಂಬ್ಳ, ಒಟ್ಟು ಮೂವತ್ತು ಸಾವಿರ ರೂಪಾಯಿಗಳಿಸುವ ನಿನ್ನ ಹತ್ತಿರ, ಎರಡು ಲಕ್ಷ ರೂಪಾಯಿ ಬ್ಯಾಂಕ ಬ್ಯಾಲನ್ಸ್ ಇಲ್ಲವೇನು?

ಶ್ರೀಮಂತ : ಯಾಕಿಲ್ಲ ಮಾವ, ನನ್ನ ನೆಟ್ ಕ್ಯಾಸ್ ಎಂಭತ್ತು ಲಕ್ಷ ರೂಪಾಯಿಗಳು ಬ್ಯಾಂಕಿನಲ್ಲಿ ಬಿದ್ದು ನಿದ್ದಿ ಮಾಡಕತ್ಯಾವ ಆದ್ರ ಅವು ಬಿಡಿಸಬೇಕಂದ್ರ ಸಧ್ಯ ಬೆಂಗಳೂರಿನಿಂದ ಮಂಗಳೂರಿಗೆ ಟ್ರಾನ್ಸ್‌ಪರ್ ಆಗ್ಯಾವ, ಅದ್ಕಾ ಅವು ಬಿಡಿಸಾಕ ಸ್ವಲ್ಪ ಲೇಟಾಗ್ತದ ಹೋದ್ರ ನಾಲ್ಕು ಲಕ್ಷ ಹೋದುಕೋಕಂತ.....

ಭಾಗ್ಯವಂತ : ಛೇ, ಛೇ, ಆ ಎರಡು ಲಕ್ಷಕ್ಕೆ ನಾಲ್ಕು ಲಕ್ಷ ಕೊಡೂದು ಬೇಡ, ಹೇಗೋ ನಾನು ನನ್ನ ಮಗಳನ್ನು ನಿನಗೆ ಕೊಡಬೇಕಂತ ನಿರ್ಧಾರ ಮಾಡಿನಿ ಅಂದ ಬಳಿಕ ಆವೊಂದು ಲಕ್ಷ ರೂ ನಾನೇ ಕೊಡ್ತಿನಿ, ಕೆರೆ ನೀರು ಕೆರೆಗೆ ಚಲ್ಲಿ ವರವು ಪಡಿಯೋ ಮೈಲಾರಲಿಂಗ ಎಂಬುವಂತೆ ನಿನಗೆ ಕೊಟ್ಟು ನನ್ನ ಮಗಳಿಗೆ ವರವ ಪಡಕೋ ಬೇಕಂತ ಮಾಡಿನಿ.

ಶ್ರೀಮಂತ : ಅಂದ್ರೇನೋ ಮಾವ ನಿನ್ನ ಮಾತಿನ ಅರ್ಥ?

ಭಾಗ್ಯವಂತ : ಅರ್ಥ? ಹುಂ !! ಅರ್ಥ ಏನು ಬಂತು ಅಳಿಯ ದೇವರು, ನನಗಂತೂ ಗಂಡ ಮಕ್ಕಳಿಲ್ಲ, ಇರುವ ಆ ಒಬ್ಬ ಮಗಳನ್ನು ನಿನಗೆ ಕೊಟ್ಟು ನಿನ್ನನ್ನೇ ಮನೆಯ ಅಳಿಯನಾಗಿ, ಮನೆತನಕ್ಕೆ ತಂದು ಕೊಂಡರೆ, ಹಾಲಿನಲ್ಲಿಯೇ ಬೆರೆತು ಕೊಳ್ಳುತ್ತದೆ.

ಶ್ರೀಮಂತ : ವ್ಹಾರೇ ವ್ಹಾ ! ನಿಜಕ್ಕೂ ಬುದ್ಧಿವಂತ ಅಂದ್ರ ನೀನೇ ನೋಡು ಮಾವ, ನನಗೂ ನಿನ್ನಂಥ ಬುದ್ಧಿವಂತ ಮಾವನೆ ಸಿಗಬೇಕೆಂದು ಆ ಕತ್ತಲ ಕರೆಮ್ಮನ ಗುಡಿಯಾಂಗ ನಿತ್ಯ ಬೆತ್ತಲೆ ಕುಂತು ಬೇಡ್ಕೋಂತಿದ್ದೆ.

ಭಾಗ್ಯವಂತ : ಆಂ ಏನೆಂದೆಪ್ಪ ಏನಂದಿ? ಕತ್ತಲ ಕರೆಮ್ಮನಗುಡ್ಯಾಗ ಬತ್ತಲೆ ಕುಂತು ಬೇಡ್ಕೊಂತಿಧ್ಯಾ?

ಶ್ರೀಮಂತ : ಬೆತ್ತಲೆ ಅಂದರೆ ಪೂರಾ ಬೆತ್ತಲೆ ಅಲ್ಲ ಮಾವ ಅರ ಬೆತ್ತಲೆ.

ಭಾಗ್ಯವಂತ : ಓ ಹೋ ಹೀಗೋ ಸಮಾಚಾರ, ಸರಿ ಸರಿ ನಡೆ ಮನೆಗೆ ಹೋಗೋಣ, ಒಂದು ಲಕ್ಷ ರೂಪಾಯಿ ಕೊಡ್ತೀನಿ ಹೋಗಿ ಅವರ ಮುಖದ ಮೇಲೆ ಎಸೆದು ಬಾ, ಹಲ್ಕಾ ನನ ಮಕ್ಳು ತಂದು ನಡು ಮನ್ಯಾಗ ಇಟಿದ್ರಂತ.

ಶ್ರೀಮಂತ : ನಾನಂದ್ರ ಏನು? ನಮ್ಮ ಮಾಮ ಅಂದ್ರ ಏನು? ನನ್ನ ಯೋಗ್ಯತೆ ಏನು? ಈ ನಮ್ಮ ಮಾವನ ಯೋಗ್ಯತೆ ಏನು? ಮಕ್ಳು ಕುರಿ ಹಳ್ಳಕ ಬಿತ್ತು ಅಂತ ತಿಳ್ಕೊಂಡಾರ?

ಭಾಗ್ಯವಂತ : ಈ ಭಾಗ್ಯವಂತನ ಅಳಿಯ ತಾನು ಹಳ್ಳಕ ಬೀಳದೆ ಮತ್ತೊಬ್ಬರನ್ನು ಹಳ್ಳಕ ಹಾಕಿ ಬರ್ತಾನಂತ ಆ ಬುದ್ಧಿಗೇಡಿ ನನ ಮಕ್ಳಿಗೇನು ಗೊತ್ತು.

ಶ್ರೀಮಂತ : ಹೌದು ಮಾಮ ಹೌದು, ನಿನ್ನಂಥ ಬುದ್ಧಿಗೇಡಿ ಗೆ....ಛೇ. ಛೆ. ಅಲ್ಲ

ಅಲ್ಲ ನಿನ್ನಂಥ ಬುದ್ಧಿವಂತರಿಗೆ ನನ್ನ ಯೋಗ್ಯತೆ ಅರ್ಥವಾಗುತ್ತೇ ವಿನಹ ಅಂಥ ಮುಠ್ಠಾಳ ನನ ಮಕ್ಕಳಿಗೆ ಅದಾಯಾವಾಗ ಅರ್ಥವಾಗ ಬೇಕು ನಡೆ ಮಾವ ಹೋಗೋಣ, (ಹೋಗುವರು)

ರಮೇಶ : [ಅದೇ ದಾರಿಗೆ ಬರುತ್ತ] ಏ ತಾಯಿ ದುರ್ಧೈವಿ ಭಾರತಾಂಬೆ ನಿನ್ನ ಪಾವನ ಗರ್ಭದಲ್ಲಿ ಕೆಟ್ಟಕ್ರಿಮಿಗಳು ಹುಟ್ಟಬಾರದಾಗಿತ್ತು, ಆದರೂ ಹುಟ್ಟಿದ ಅವು ಈಗ ಎಂಥೆಂತ ಅಸಹ್ಯ ಕೃತಿಗಳು ನಡಿಸತೊಡಗಿವೆಯಲ್ಲ? ಎಲ್ಲಿ ನೋಡಿದರಲ್ಲಿ ಕೊಲೆ, ಸುಲುಗೆ, ಮೋಸ, ವಂಚನೆ, ಕೋಮುಗಲಭೆ, ವೈಶ್ಯಾ, ಓಸಿ, ಮಧ್ಯಾಪಾನ ಮುಂತಾದ ಅಮಾನುಷ್ಯ ಅತ್ಯಾಚಾರಗಳೇ ತಾಂಡವಾಡತೊಡಗಿವೆ, ಅಮ್ಮಾ ಗಾಂಧಿ, ನೆಹರು, ಭಗತ್‌ಸಿಂಗರಂಥ ಶ್ರೇಷ್ಠ ಪುತ್ರರನ್ನು ಹೆತ್ತ ನೀನು ಇಂಥ ಕರ್ಮ ಚಾಂಡಾಲರಿಗೆ ಜನ್ಮ ಕೊಟ್ಟು ನಿನ್ನ ಕೀರ್ತಿಗೆ ಕಳಂಕ ತಂದು ಕೊಂಡಿಯಾ? ಹುಂ !! ಇಂಥ ಮೂರ್ಖ ಮಕ್ಕಳನ್ನು ಹಡೆಯುವದಕ್ಕಿಂತ, ನೀನು ಭಂಜೀಯಾಗಿದ್ದರೆ ಇದಕ್ಕೂ ಅದೇ ಎಷ್ಟೋಪಾಲು ಮಿಗಿಲಿತ್ತು [ಎಂದು ಹೋಗುವಷ್ಟರಲ್ಲಿ ಎದುರಿಗೆ ಗಂಗಾ ಬರುವಳು] ಗಂಗಾ, ಯಾಕಮ್ಮ ಕಣ್ಣೀರು?

ಗಂಗಾ : ಅಣ್ಣಾ ! ಕಣ್ಣೀರೊಂದು ಬಿಟ್ಟರೆ ನನ್ನ ಬದುಕಿನಲ್ಲಿ ಇನ್ನೇನು ಐತಿ? ಹಿಂದಿನ ಜನ್ಮದಲ್ಲಿ ನಾನೇನು ಪಾಪ ಮಾಡಿದ್ನೋ ಅದು ಈಗ ಈ ಜನ್ಮದಲ್ಲಿ ವಿಧಿಯಾಗಿ ಕಾಡ ತೋಡಗಿದೆ.

ರಮೇಶ : ತಂಗಿ ! ಮಾನವನ ದೈವದ ಗತಿಯನ್ನು ಬರೆಯುವ ವಿಧಿಯೇ ಬೇರೊಂದಿರುವಾಗ, ಸಾಗಿ ಬರಲಿರವ ದುಃಖಗಳನ್ನು ಮೀರಲು, ಅವುಗಳನ್ನು ನಿರಾಕರಿಸಲು ಯಾರಿಂದ ತಾನೆ ಸಾಧ್ಯವಿದೆ?

ಗಂಗಾ : ಅಣ್ಣಾ !!

ರಮೇಶ : ಹೌದಮ್ಮ ! ಸುಖ ಹೋಗಿ ದುಃಖಸಾಗಿ ಬಂತಲ್ಲಾ ಎಂದು ಚಿಂತಿಸಬೇಡ, ಈ ಹಿಂದೆ ಸುಖ ಸಾಮ್ರಾಜ್ಯದಲ್ಲಿ ಲೋಲಾಡಿದವರು ಅತ್ಯಂತ ಕಷ್ಟ ಅನುಭವಿಸಲಿಲ್ಲವೆ? ಹುಂ !! ಅಖಂಡ ಭೂಖಂಡಕ್ಕೊಡೆಯ ನೆನಸಿ, ಗಜ ತುರಗ ರಥ ಕಾಲ್ಬಲವೆಂಬ ಚತುರಂಗ ಸೇನಾ ಸಜ್ಜಿತನಾಗಿ, ಸಕಲ ಸುಖ ಸಂಪದನಗಳನೆಲ್ಲ ಅನುಭವಿಸಿದ, ಸೂರ್ಯವಂಶ ಪುಂಗವನಾದ ರಾಜಾ ಸತ್ಯಹರಿಶ್ಚಂದ್ರ, ಕಡೆಗೊಮ್ಮೆ ಕಾಶಿ ಪಟ್ಟಣದಲ್ಲಿ ಸ್ಮಶಾನ ಕಾಯಲಿಲ್ಲವೆ?

ಗಂಗಾ : ಅಣ್ಣಾ !!

ರಮೇಶ : ನಿಜವವ್ವಾ ! ಈ ಜಗತ್ತಿನಲ್ಲಿ ಎಣಿಕೆಗೆ ಮೀರಿದ ಅಷ್ಟೈಶ್ವರ್ಯದೊಂದಿಗೆ ಸುಖ ಸಂತೋಷಗಳನ್ನು ಕೆಲಕಾಲ ಅನುಭವಿಸಿ, ಆನಂದ ಪಟ್ಟು ಕೊನೆಗೆ ವಿಧಿಯ ನೇಮದಂತೆ ನಳ ಮಹಾರಾಜನು ತನ್ನ ರಾಜ್ಯದೊಂದಿಗೆ ಸಕಲ ಸಂಪದಗಳನ್ನೆಲ್ಲ ತೊರೆದು, ಕೊನೆಗೆ ತನ್ನ ಪತ್ನಿ ಪುತ್ರರನ್ನು ಕೂಡ ಕಳೆದುಕೊಂಡು ಕಣ್ಣೀರು ಹಾಕುತ್ತ ಅಡವಿ ಅಡವಿ ಅಲಿಯಲಿಲ್ಲವೆ?

ಗಂಗಾ : ಇದೇನು ಹೇಳುತ್ತಿರುವಿರಣ್ಣಾ?

ರಮೇಶ : ಸತ್ಯವನ್ನೇ ಹೇಳುತ್ತಿರುವೇನಮ್ಮ, ದೈವೀ ಸಂಭೂತರೆನಿಸಿಕೊಂಡ ಶ್ರೇಷ್ಠ ವ್ಯಕ್ತಿಗಳೇ ತಮ್ಮ ತಮ್ಮ ದೈವ ಬರಹ ಬದಲಿಸಿಕೊಂಡು ವಿಧಿಯನ್ನು ಜಯಿಸಿ ಸುಖ ಪಡಲಿಲ್ಲವೆಂದಾಗ, ಇನ್ನೂ ನಮ್ಮಂಥ ಸಾಮಾನ್ಯರು ದೈವಲಿಪಿಯನ್ನು ಗೆಲ್ಲಲು ಸಾಧ್ಯವೇನಮ್ಮ? ಹುಂ !! ಹಾವು ಕಚ್ಚಿಸಿಕೊಂಡು ಸಾಯ ಬೇಕಿದ್ದ ಪರೀಕ್ಷಿತ ಮಹಾರಾಜನು ಅದರಿಂದ ಪಾರಾಗಲೆತ್ನಿಸಿ, ಸಮುದ್ರದ ಮಧ್ಯದಲ್ಲಿ ಉಕ್ಕಿನ ಮನೆಯೊಂದು ನಿರ್ಮಿಸಿಕೊಂಡು ಕುಳಿತನು, ಆದರೆ ವಿಧಿಯ ನಿರ್ಣಯದ ದಿನವೇ ಹಾವಿನ ಹೆಸರು ಕೇಳುತ್ತಲೇ ಮೈ ಹಸುರೇರಿ ಪ್ರಾಣ ಬಿಟ್ಟನು.

ಗಂಗಾ : ಅಂದರೆ, ವಿಧಿಯ ಮುಂದೆ ನಮ್ಮ ಆಟ ನಡೆಯುವದಿಲ್ಲವೆ?

ರಮೇಶ : ಸಾಧ್ಯವಿಲ್ಲ ತಂಗಿ, ವಿಧಿಯ ಹೋರಾಟದ ಮುಂದೆ ನಮ್ಮ ಯಾವ ಪ್ರಯತ್ನಗಳು ಫಲಿಸಲಾರದವು, ಆ ವಿಧಿಯ ಸಾಮರ್ಥ್ಯಕ್ಕೆ ಸರಿಸಾಟಿಯಾದ ಶಕ್ತಿ ಮತ್ತೊಂದಿಲ್ಲ, ಈ ಜಗತ್ತಿನಲ್ಲಿ ! ಹುಂ !! ವೈಕುಂಠಾಧಿಪತಿ ಶ್ರೀ ವಿಷ್ಣುನನ್ನು ಹಂದಿಯ ಜನ್ಮ ತಳಿಯಲು ಹಚ್ಚಿತು, ಪರಮೇಷ್ಠಿ ಬ್ರಹ್ಮನ ಐದು ತಲೆಗಳಲ್ಲೊಂದನ್ನು ತೆಗೆಸಿತು, ಸುರಪತಿ ದೇವೇಂದ್ರನು ಅಹಲ್ಯೆಯನ್ನು ಮೋಹಿಸಿದ್ಧರಿಂದ ಮೈತುಂಬಾ ಯೂನಿಗಳುಂಟಾಗುವಂತೆ ಮಾಡಿತು. ಅಂದ ಮೇಲೆ ಅಂಥವರ ಪಾಡೇ ಹಾಗಾದ ಮೇಲೆ ಇನ್ನು ನಮ್ಮಂಥವರ ಪಾಡೇನು? ನಡೆ ತಂಗಿ, ಬಂದುದೆಲ್ಲ ಬರಲಿ, ಆ ಭಗವಂತನ ದಯವೊಂದಿರಲಿ, ಪಾಲಿಗೆ ಬಂದುದ್ದೇ ಪಂಚಾಮೃತ, ನಡಿಯಮ್ಮ ಹೋಗೋಣ, (ಹೋಗುವರು).

===***====***===

ಹದಿನಾಲ್ಕನೇ ದೃಶ್ಯ

ಜಂಗಲ್ ರಸ್ತಾ

ರವಿ : [ಕೂಡುಗೋಲು ಹಿಡಿದುಕೊಂಡು ಬಂದು] ದೇವಾ ! ಜಗಲಿಂಗೇಶ್ವರ, ನನ್ನ ಬದುಕಿನಲ್ಲಿ ಬೆನ್ನತ್ತಿರುವ ವಿಧಿಯೆಂಬ ವಿಷಸರ್ಪವನ್ನು ಕೊಚ್ಚಿಹಾಕಬೇಕೆಂಬ ಇಚ್ಚೆ ನಿನಗಿಲ್ಲವೆ? ಹುಂ !! ಸ್ವಚ್ಛ ಮನಸ್ಸಿನಿಂದ ಉಚ್ಛ ಜೀವನದ ಪಥದಲ್ಲಿ ನನಗೆ, ಕಷ್ಟ ಎಂಬ ಕುಲುಮೆಯಲ್ಲಿ ತಳ್ಳಿ, ಇದೊಬ್ಬ ನನ್ನ ಮಗನಿಗೆ ತಿರಿದುಣ್ಣಲು ಹಚ್ಚದಿಯಾ? ಏಕೆ? ನಿಮ್ಮ ಆಳ್ವಿಕೆಯಲ್ಲಿ ನಾವು ಬಾಳಿ ಬದುಕಲು ಅವಕಾಶ ಇಲ್ಲವೆ?

ಹಿನ್ನಲೆ : ಹುಂ [ನಗುತ್ತಾ] ರವಿ, ಇಡೀ ನಿನ್ನ ಬದುಕಿನ ಭವಿಷ್ಯಕ್ಕೆ ಬರಸಿಡಿಲು ಬಡಿದರೂ ಇನ್ನೂ ನಿನಗೆ ಬಾಳಿ ಬದುಕಬೇಕೆಂಬ ಆಶೆ ಇದೆಯೇ?

ರವಿ : ಇಲ್ಲಾ ! ಬಾಳಿ ಬದುಕಬೇಕೆಂಬ ಆಶೆಯಂತೂ ನನ್ನಲ್ಲಿ ತಿಲ ಮಾತ್ರವಿಲ್ಲ.

ಹಿನ್ನಲೆ : ಹಾಗಿದ್ದರೆ ಕೇಳು, ಮಡದಿ ಮಕ್ಕಳು ಎಂಬ ವ್ಯಾಮೋಹಕ್ಕೆ ಬಲಿಯಾಗದೆ, ನಿನ್ನ ಜೀವನದ ಕೊನೆ ಉಸಿರೆಳೆದು ಆ ಶಿವನ ಸಾನಿಧ್ಯಸೇರು

ರವಿ : ಅಂದರೆ, ನಾನು ಈಗ ಸಾಯಲೇ ಬೇಕೆ?

ಹಿನ್ನಲೆ : ಇಂದು ನೀನೇನು ಹೊಸದಾಗಿ ಸಾಯ್ತಾ ಇಲ್ಲ ರವಿ, ನೀನು ಅದೆಂದೋ ಸತ್ತು ಹೋಗಿರುವಿ.

ರವಿ : ಅಂದರೆ ?

ಹಿನ್ನಲೆ : ಅದೆಷ್ಟು ಹುಚ್ಚನೊ ನೀನು, ಅಗ್ನಿ ದೇವರ ಸಾಕ್ಷಿಯಾಗಿ ಮಾಂಗಲ್ಯ ಕಟ್ಟಿಸಿ ಕೊಂಡ ನಿನ್ನ ಹೆಂಡತಿ ನಿನಗೆ ವಿಷ ಹಾಕಿದಾಗಲೇ ನೀನು ಸಾಯಲಿಲ್ಲವೆ? ಮತ್ತು ಮಗಳೆಂದು ನಂಬಿದ ನಿನ್ನ ತಮ್ಮನ ಹೆಂಡತಿ ನಿನ್ನ ಮೇಲೆ ಅನೈತಿಕ ಆರೋಪ ಹೊರಿಸಿದಾಗಲೇ ನೀನು ಸಾಯಲಿಲ್ಲವೆ? ಹಾಗೂ ಹೆಂಡತಿಯ ಮಾತನ್ನು ನಂಬಿದ ನಿನ್ನ

ತಮ್ಮ ನಿನ್ನ ಮುಖದ ಮೇಲೆ ಯಾಸಿಡ್ ಎಸೆದು ನಿನ್ನೆರಡು ಕಣ್ಣುಗಳನ್ನು ಕಳೆದಾಗಲೇ ನೀನು ಸಾಯಲಿಲ್ಲವೆ? ಇನ್ನೂ ನಿನಗಿರುವ ಒಬ್ಬನೇ ಒಬ್ಬ ಮಗನಿಗೆ ತುತ್ತನ್ನ ಹಾಕಲಿಕ್ಕಾಗದೆ ಅವನನ್ನು ಭಿಕ್ಷೆಗೆ ಕಳುಹಿಸಿದಾಗಲೇ ನೀನು ಸಂಪೂರ್ಣ ಸತ್ತು ಹೋಗಿರುವಿ. ಈಗ ಉಳಿದಿದ್ದು ಬರೇ ನಿನ್ನ ಶವ, ಜೀವಂತ ಶವ, ಭೂಮಿಗೆ ಭಾರವಾದ ಶವ.

ರವಿ : ಹೌದು ! ನನ್ನ ಜನ್ಮವಿಂದು ಭೂಮಿಗೆ ಭಾರವಾದ ಶವ, ಇಂಥಾ ಹೀನವಾದ ಜನ್ಮ ಹೊತ್ತು ಬದುಕುವುದಕ್ಕಿಂತ ಸತ್ತು ಆ ಸ್ವರ್ಗ ಸೇರುವುದೇ ಉತ್ತಮ.

ಹಿನ್ನಲೆ : ಯೋಚಿಸುತ್ತ ನಿಂತು ವೇಳೆ ವಿಳಂಬ ಮಾಡಬೇಡ, ಸಧ್ಯ ನಿನಗೆ ನಿನ್ನವರೆಂಬುವರು ಯಾರೂ ಇಲ್ಲ.

ರವಿ : ಹೌದು, ನಾನು ನನ್ನವರು ಎಂಬ ಮಾತು ಮಿಥ್ಯ, ಯಾರಿಗೆ ಯಾರು ಪುರಂದರ ವಿಠಲ ಅನ್ನುವ ಮಾತು ಸತ್ಯ !! ಹುಟ್ಟುವಾಗ ಬಂದದ್ದು ಒಬ್ಬನೆ, ಈ ಜಗ ಬಿಟ್ಟು ಸಾಯುವಾಗಲೂ ಒಬ್ಬನೆ ! ಜನನ ಮರಣದ ಮಧ್ಯದಲ್ಲಿ ಬರುವ ತಂದೆ–ತಾಯಿ ಬಂಧು–ಬಳಗಾ, ಹೆಣ್ತಿ – ಮಕ್ಕಳು ಅಕ್ಕಾ – ತಂಗಿ, ಅಣ್ಣ, ತಮ್ಮ ನಾನು ನನ್ನವರು, ತಾನು–ತನ್ನವರು ಆಸ್ತಿ –ಅಂತಸ್ತು, ಇವು ಎಲ್ಲಾ ಸುಳ್ಳು ಹುಂ !! ಎಚ್ಚರಿರು ಲೋಕದೊಳು, ಮತ್ಸರತೆ ತುಂಬಿಹದು, ನನ್ನವರು ಎಂದು ನಂಬಿ ಬಾಯಿಯಲ್ಲಿ ಮಿಠಾಯಿ ಇಟ್ಟೊಡನೆ ನುಂಗಿಯಾ ನಂಜುಂಟದರೊಳೆಂದು, ಲೇ ಮಾನವ ಜಗತ್ತು ನಿನ್ನದಲ್ಲ, ಇಲ್ಲಿ ನನ್ನವರೆಂಬುವವರು ಯಾರೂ ಇಲ್ಲ ಹುಂ !! ಹಿಂದಿನ ಜನ್ಮದಲ್ಲಿ ನೀನು ಅದೆಷ್ಟೋ ಇಂಥ ಸಂಬಂಧಿಗಳನ್ನು ಬಿಟ್ಟು ಇಲ್ಲಿಗೆ ಬಂದಿರುವಿ ಆದರೆ ಈಗ ಅವರೆಲ್ಲರೂ ನಿನ್ನ ಹಿಂದೆ ಬಂದಿದ್ದಾರೆಯೇ? ಇಲ್ಲ ಈಗ ಇಲ್ಲಿಯೂ ಅಷ್ಟೆ, ನೀನು ನಂಬಿಕೊಂಡಿರುವ ನಿನ್ನವರು ನಿನ್ನ ಆಸ್ತಿ ಅಂತಸ್ತು ನಿನ್ನ ಹಿಂದೆ ಬರಲಾರದು, ಅಸ್ಥಿರವಾದ ಶರೀರ ನಾಶವಾಗುತ್ತೆ, ಮಣ್ಣಿನ ಕಾಯ ಮಣ್ಣಿಗೆ ಹೋಗುತ್ತೆ. ಅಸ್ಥಿರಂ ಜೀವನಂ ಜೀವನಂ ಅಸ್ಥಿರಂ [ಎಂದು ಕುಡುಗೋಲಿನಿಂದ ಹೊಟ್ಟೆಗೆ ಹೊಡೆದು ಕೊಳ್ಳುವನು ಅಲ್ಲಿಗೆ ರಮೇಶ ಬರುತ್ತ]

ರಮೇಶ : ರವೀ..... ಕೊನೆಯದಾಗಿ ಇದೇನು ಮಾಡಿಕೊಂಡಿಯಲ್ಲ? ಹೊಟ್ಟೆಯಿಂದ ರಕ್ತಾ ಜೋರಾಗಿ ಬರ್ತಾ ಇದೆ, ಮಗು ಎಲ್ಲಿ ಕಾಣ್ತಾನೇ ಇಲ್ಲವಲ್ಲ, ರವಿ ಮೊದಲು ಆಸ್ಪತ್ರೆಗೆ ಹೋಗೋಣ

ನಡೆ, ನಂತರ ಅವನ ವಿಚಾರ ಮಾಡೋಣ [ಎಂದು ರವಿಯ ರಟ್ಟೆ ಹಿಡಿದು ಒಳಗೆ ಕರೆದುಕೊಂಡು ಹೋಗುವನು]

ಶಶಿಧರ : (ಅಲ್ಲಿಗೆ ಬಂದು) ಇದೇನು ನನ್ನ ತಂದೆ ಕಾಣ್ತಾನೇ ಇಲ್ಲವಲ್ಲ ಅಪ್ಪಾಜಿ ! ಅಪ್ಪಾಜಿ !! ಅಪ್ಪಾಜಿ !! [ಎಂದು ಒಳಗೆ ಹೋಗುವನು]

ಭಗವಂತ : [ಅದೇ ದಾರಿಗೆ ಬರುತ್ತ] ಅಲ್ಲಾ ಆ ತಗಡ ನನಮಗ ನಮ್ಮಾವಗ ದಿಗುಡು ಹಿಡಿಸುವುದು ಹ್ಯಾಂಗ ಅಂತೀನಿ? ಮಗ ನಮ್ಮ ಮದುವೆಯ ಪೇಸಿಗಿ ಮುಂದಕ್ಕೆ ಹಾಕ್ತಾನ ಹೊರತು ಜಲ್ದಿ ಮುಗಿಸೋದಿಲ್ಲ, ಅವನು ಮದುವೆ ಮಾಡೋದ್ರೊಳಗ ನಾವೆ ಎಲ್ಲಿ ಮಸಂಟಿಗೆ ಹೋಗ್ತಿವೇನಂತ್ತೀನಿ?

ಯಮುನಾ : ಅಯ್ಯಿ ಇದೇನಾ ಮಾವ ! ಹಾದಿ ಮೇಲೆ ನಿಂತು ಆವುದೋ ಒಂದು ವಿಷಯ ಆಲೋಚನೆ ಮಾಡಕತ್ತಿಯಲ್ಲ ಮತ್ತಾವ ಹುಚ್ಚು ಹಿಡಿತು ನಿನಗ?

ಭಗವಂತ : ನನಗ ಹುಚ್ಚು ಹಿಡಿದಿಲ್ಲ, ನೀನು ಮತ್ತು ನಿಮ್ಮಪ್ಪ ಕೂಡಿ ನನಗ ಹುಚ್ಚು ಹಿಡ್ಸಾಕತ್ತೀರಿ, ಅಂವ ಮದುವೆ ಮಾಡೋದಿಲ್ಲ, ನೀನು ಮದುವೆ ಮಾಡ್ಕೋದಿಲ್ಲ, ನಿಮ್ಮಿಬ್ಬರ ನಡುವೆ ಸಿಕ್ಕು ನಾನು ಭಲೇ ಹುಚ್ಚು ಆಗಿನಿ.

ಯಮುನಾ : ನೀನು ಹುಚ್ಚಾಗ್ತೀನಿ ಅಂತ ಬಿಚ್ಚಿ ಹೇಳೋ ನಿನ್ನ ಮಾತು, ನನ್ನ ಮನಸ್ಸಿನ್ಯಾಗ ಬಾಣ ಚುಚ್ಚಿದಂಗಾಗ್ತಾದ ಏನ್ ಮಾಡ್ಲಿ ಹಿಂದ ನೋಡಿದ್ರ ಕೆರೆ, ಮುಂದ ನೋಡಿದ್ರ ಭಾವಿ, ಯಾವ ಕಡೆಗೆ ಬಿದ್ರೂ ನಾನೇ ಸಾಯ್ತಿನಿ.

ಭಗವಂತ : ಯಾವ ಕಡೆಗೆ ಬಿದ್ರೂ ನೀನೇ ಸಾಯ್ತಿದಿ?

ಯಮುನಾ : ಹೌದು, ಮಾವ ಬೇಕು ಅಂತ ನಿನ್ನ ಕಡೆ ಬಿದ್ರ ನಮ್ಮಪ್ಪಗ ನಾನು ಸತ್ತಂಗಾಗ್ತಾದ, ಮತ್ತ ನಮ್ಮಪ್ಪ ಬೇಕು ಅಂತ ಅವನ ಕಡೆ ಬಿದ್ರ ನಿನಗ ನಾ ಸತ್ತಂಗಗ್ತಾದ, ಏನು ಮಾಡ್ಲಿ?

ಭಗವಂತ : ಹೌದು ಇದುನೂ ಸತ್ಯ ! ಅಂದ್ರ ಏನು ಮಾಡ್ಬೇಕು? [ವಿಚಾರಿಸಿ] ಆಂ ಯಮುನಾ ಸಿಕ್ಕಿತು, ಸಿಕ್ಕಿತು, ನೀನು ಇಬ್ಬರ ಕಡೆಗೆ ಬಿದ್ರೂ ಯಾರೂ ಸಾಯದಂತ ಮಹಾಮಂತ್ರ ಸಿಕ್ಕಿತು, ಬಾ ಇಲ್ಲಿ ಹೇಳ್ತೀನಿ [ಕಿವಿಯಲ್ಲಿ ಹೇಳುವನು]

ಯಮುನಾ : ಅಯ್ಯಿ ಇದೇನು ಮಾವ, ತಲೆದಿಂಬ ಸಮುದ್ರ ಇಟ್ಟುಕೊಂಡು ನೀರು ನೀರು ಅಂತ ಸತ್ತಿದ್ರಂತೆ ಅದ್ರಾಂಗ ಇಂಥ ಒಂದು, ಒಳ್ಳೆ ಮಂತ್ರ ಇಟ್ಟುಕೊಂಡು ಸುಳ್ಳೆ ಮದುವೆ ಮದೆವೆ ಅಂತ ಸಾಯಾಕ್ಹತ್ತೀವಿ, ಇದು ಮಾತ್ರ ಒಳ್ಳೆ ಉಪಾಯ ನೋಡು.

ಭಗವಂತ : ಈ ಉಪಾಯದಲ್ಲಿಯೂ ಬಹು ಅಪಾಯವಿದೆ, ಇದನ್ನು ಬಹು ಎಚ್ಚರದಿಂದ, ಅದರಲ್ಲೂ ಬಹು ಬುದ್ಧಿವಂತಿಕೆಯಿಂದ ಈ ಕೆಲಸ ಮಾಡಬೇಕು.

ಯಮುನಾ : ಅಂದ್ರ?

ಭಗವಂತ : ಅಂದ್ರ ಹಾವಿಗೆ ಹೊಡಿಯ ಬೇಕು, ಹೊಡೆದರೂ ಸಹಿತ ಬಡಿಗೆ ಮುರಿಯಬಾರದು, ಹಾವು ಸಾಯಬಾರದು.

ಯಮುನಾ : ಅಂದ್ರ ಪುಂಗಿ ತೊಗೊಂಡು ಬಾರಿಸು ಅಂತ ಹೇಳ್ತಿಯೇನು?

ಭಗವಂತ : ಅದು ಬರೇ ಪುಂಗಿಗೆ ಹಾಡುವ ಹಾವಲ್ಲ, ಮಗಂದು ಮಹಾ ಜಾಬಾದಿ ಮಿಡಿ ನಾಗರಹಾವು, ಅದಕ ಹೊಡಿ ಬೇಕು, ಹೊಡೆದರೂ ಸಹಿತ ಅದು ಸಾಯಬಾರದು, ನಮ್ಮ ಬಡಿಗೆ ಮುರಿಯಬಾರದು.

ಯಮುನಾ : ತಿಳಿತು ಬಿಡು, ಇನ್ನೂ ಮೂರು ನಾಲ್ಕು ದಿವಸದೊಳಗಾಗಿ ನೀನು ಹೇಳಿದ ಕೆಲಸ ಬಹು ಬುದ್ಧಿವಂತಿಕೆಯಿಂದ ಮಾಡ್ತೇನಿ, ಹಾವಿಗೆ ಹೊಡಿತೀನಿ, ನಾನಿನ್ನೂ ಬರ್ತೀನಿ.

ಭಗವಂತ : ಲೇ ಲೇ ಅರಸುಳುವು ಹತ್ತಿ ಕಾಯಿ, ಇಲ್ಲಿ ನನಗೆ ಬರೇ ಮಾರಿ ತೋರಿಸಿ ಹೋಗಾಕಾ ಬಂದಿಯೇನೇ ಮಾನಗೇಡಿ ಬಾ ಇಲ್ಲಿ. ಮದುವೆ ಆದ ಮೇಲೆ ಮಧು ಚಂದ್ರ ಮಾಡಿದರಾಯಿತು, ಸಧ್ಯ ರಾಮಚಂದ್ರ ಮಾಡೋಣ ಬಾ

ಯಮುನಾ : ಅಂದ್ರ ?

ಭಗವಂತ : ಕುಣಿಕುಣಿದು, ನಲಿನಲಿದು, ಜಿಂಕೆಯಂತೆ ಅಲೆದಲಿದ ಹಕ್ಕಿಯಂತೆ ಹಾರಾಡಿ, ಪ್ರೀತಿಯಿಂದ ವಡನಾಡಿ ಕುಣಿಯೋಣು ಬಾರೇ ಥಕಥೈಕುಣಿಯೋಣು ಬಾರೇ (ಹಾಡು)

(ಹೋಗುವರು)

===***===***===

ಹದಿನೈದನೇ ದೃಶ್ಯ

ಮನೆ

[ತೆರೆ ಎತ್ತುತ್ತಲೇ ರಮೇಶ ಪೋನಿನಲ್ಲಿ ಮಾತಾಡುತಿರುವನು]

ರಮೇಶ : ಹಲ್ಲೋ ಯಾರು? ಡಾಕ್ಟರ್ ಸಾಹೇಬರ? ಹೇಳಿ ಸರ್ ಏನು ನಮ್ಮ ರವಿಗೆ ಕಣ್ಣುಗಳು ಕಾಣ ತೊಡಗಿವೆ? ತುಂಬಾ ಸಂತೋಷ ಸರ್. ತುಂಬಾ ಸಂತೋಷ, ನಿಮ್ಮ ದಯದಿಂದ ನಮ್ಮ ರವಿ ಪುನಹ ಪ್ರಪಂಚ ನೋಡುವ ಭಾಗ್ಯ ಪಡೆದುಕೊಂಡ, ನಿಮ್ಮ ಉಪಕಾರಕ್ಕೆ ತುಂಬ ಧನ್ಯವಾದಗಳು ! ಏನು? ನಮ್ಮ ರವಿ ಆಸ್ಪತ್ರೆಯಿಂದ ಓಡಿ ಹೋಗಿದ್ದಾನೆ? ಆಯ್ತು ಸರ್, ಸಧ್ಯನೇ ಬರುತ್ತೇನೆ ಹುಂ !! ದೇವಾತ್ಮನನ್ನು ಗೆಲ್ಲಬಹುದು ವಿನಹ ಈ ಕಲಿ ಮಹಾತ್ಮನನ್ನು ಗೆಲುವುದು ಮಹಾಕಷ್ಟ, ಆತ್ಮಹತ್ಯ ಮಾಡಿಕೊಂಡು ಸಾಯಲೇಬೇಕೆಂಬ ಉದ್ದೇಶದಿಂದ ಕುಡುಗೋಲಿನಿಂದ ಹೊಟ್ಟೆಗೆ ಹೊಡೆದುಕೊಂಡು ಸಾಯುವಸ್ಥಿತಿಯಲ್ಲಿದ್ದ ಅವನಿಗೆ ವೈದ್ಯರು ಸಾವಿನ ಅಪಾಯದಿಂದ ಪಾರು ಮಾಡಿದ್ದಲ್ಲದೆ ಕಳೆದುಕೊಂಡ ಕಣ್ಣಿನ ದೃಷ್ಟಿಯ ಪುನಹ ಬರುವಂತೆ ಮಾಡಿದ ಮಹಾ ಪುಣ್ಯಾತ್ಮನಿಗೆ ಹೇಳಿದ ಹಾಗೆ ಆಸ್ಪತ್ರೆಯಿಂದ ಓಡಿ ಹೋಗಬೇಕೆ? ಛೇ, ಶಶಿಧರ ಏ ಶಶಿಧರ ಬಾರೋ ಇಲ್ಲಿ.

ಶಶಿಧರ : ಬಂದೆ ಮಾಮ [ಒಳಗಿನಿಂದ ಬರುವನು]

ರಮೇಶ : ಬಾರೋ ಇಲ್ಲಿ ನಿನಗೊಂದು ಸಂತೋಷದ ವಿಷಯ ತಿಳಿಸುತ್ತೇನೆ.

ಶಶಿಧರ : ಅದಾವ ಸಂತೋಷದ ವಿಷಯ ಮಾಮ?

ರಮೇಶ : ಅದೇನೋ, ನಿಮ್ಮ ಚಿಕ್ಕಪ್ಪ ಎಸೆದ ಯಾಸಿಡಿನಿಂದ ನಿಮ್ಮ ತಂದೆಯವರ ಕಣ್ಣು ಹೋಗಿದ್ವಿಲ್ಲ, ಅಪ್ಪು ಸಧ್ಯ ವೈದ್ಯರ ಪ್ರಯತ್ನದಿಂದಾಗಿ ಈಗ ಪುನಹ ಅವರ ಕಣ್ಣು ಕಾಣುತ್ತಿವೆಯಂತೆ ಡಾಕ್ಟರರು ಹೇಳಿದರು.

ಶಶಿಧರ : ಮಾಮಾಜಿ, ಹಾಗಿದ್ದರೆ ನಮ್ಮಪ್ಪಾಜಿಯವರನ್ನು ನೋಡಿಕೊಂಡು ಬರೋಣ ನಡೆ.

ರಮೇಶ : ಆತ ಎಲ್ಲಿ ಅಂತಾ ಹೋಗೋಣ, ಆತನಿಗೆ ಕಣ್ಣಿನ ದೃಷ್ಟಿ ಬಂದ ತಕ್ಷಣ ಯಾರಿಗೂ ಹೇಳದಂತೆ ಆಸ್ಪತ್ರೆಯಿಂದ ಓಡಿಹೋಗಿದ್ದಾನಂತೆ.

ಶಶಿಧರ : ಏನು? ನಮ್ಮ ತಂದೆ ಆಸ್ಪತ್ರೆಯಿಂದ ಓಡಿ ಹೋಗಿದ್ದಾನೆಯೆ?

ರಮೇಶ : ನೀನೇನೂ ಭಯ ಪಡದಿರು ಶಶಿ, ನಿಮ್ಮ ತಂದೆ ಎಲ್ಲೇ ಇರಲಿ ಆತನನ್ನು ಹುಡುಕಿ ತರುವ ಜವಾಬ್ದಾರಿ ನನ್ನದು, ಬನ್ನಿ ಹೋಗೋಣ [ಹೋಗುವರು]

ಕಾಳಿಂಗ : ಗಂಡನ ಕಣ್ಣು ತಪ್ಪಿಸಿ ಮನೆಯಲ್ಲಿದ್ದ ಬೆಳ್ಳಿ ಬಂಗಾರದೊಂದಿಗೆ ನಗದು ಹಣ ಕದ್ದು ತರುತ್ತೇನೆಂದು ಹೇಳಿದ ಜಮುನಾ ಇಷ್ಟು ಹೊತ್ತಾದರೂ ಏಕೆ ಬರಲಿಲ್ಲ? ಹುಂ !! ನನ್ನನ್ನು ಏಕ ಪತ್ನಿವ್ರತಸ್ಥನಾದ ಆ ಶ್ರೀರಾಮಚಂದ್ರನೆಂದೇ ಭಾವಿಸಿಕೊಂಡಿದ್ದಾಳೆ, ಆದರೆ ಹೂವಿಂದ ಹೂವಿಗೆ ಹಾರುವ ದುಂಬಿ ನಾನೆಂಬುವುದು ಅವಳಿಗೇನು ಗೊತ್ತು.

ಜಮುನಾ : ಹಾಯ್ ಮಯ್ ಡಿಯರ್ ಕಾಳಿಂಗರಾವ್. ನೀನು ಹೇಳಿದಂತೆ ಮನೆಯಲ್ಲಿದ್ದ ಒಡವೆ ವಸ್ತುಗಳೊಂದಿಗೆ ಹತ್ತು ಲಕ್ಷರೂಪಾಯಿ ನಗದ್ ಕ್ಯಾಸ್ ತಂದಿದ್ದೇನೆ, ಇದೋ ತೆಗೆರುಕೊಳ್ಳಿ ಸೂಟ್ಕೇಸು [ಎಂದು ಸೂಟ್ಕೇಸು ಕೊಡುವಳು]

ಕಾಳಿಂಗ : ವ್ಹೇರಿಗುಡ್, ರಸಿಕನಿಗೆ ತಕ್ಕ ಮಹಾರತಿದೇವಿ ನೀನು, ತನು ಮನ ಧನದೊಂದಿಗೆ, ಪಡೆದ ಪತಿಯನ್ನೇ ಬಿಟ್ಟ ತ್ಯಾಗಮಯಿ ನೀನು, ನಿನ್ನಂಥ ಪ್ರೇಮಿಯನ್ನು ಪ್ರಣಯ ರಾಣೀಯನ್ನಾಗಿ ಪಡೆದದ್ದು ನನ್ನ ಕೋಟಿ ಜನ್ಮದ ಪುಣ್ಯವೇ ಸರಿ.

ಜಮುನಾ : ಪ್ರಿಯಾ, ನಾವು ಆದಷ್ಟು ಬೇಗ ಮಂತ್ರಾಲಯಕ್ಕೆ ಹೋಗಿ, ಮದುವೆಯಾಗಿ ಹೊರ ದೇಶಕ್ಕೆ ಹೋಗೋಣ

ಕಾಳಿಂಗ : ಹೊರದೇಶ? ಹುಂ ಜಮುನಾ ಈ ವಿಷಯದಲ್ಲಿ ನೀನೇನು ಚಿಂತಿಸಬೇಡ, ನಿನ್ನನ್ನು ಯಾವದೇಶಕ್ಕೆ ಕಳುಹಿಸಿ ಕೊಡಬೇಕಾಗಿದೆ ಆ ದೇಶಕ್ಕೆ ಖಂಡತಿವಾಗಿಯೂ ಕಳುಹಿಸಿ ಕೊಡುತ್ತೇನೆ.

ಜಮುನಾ : ಇದೇನು ಹೇಳುತ್ತಿರುವಿರಿ? ನೀವು ಹೇಳುತ್ತಿರುವ ಮಾತೂ ನನಗೆ ಅರ್ಥವೇ ಆಗ್ತಾ ಇಲ್ಲ?

ಕಾಳಿಂಗ : ಅರ್ಥ ಹುಂ ಅರ್ಥದ ಬಗ್ಗೆ ವ್ಯರ್ಥ ಯೋಚಿಸಬೇಡ ನಿನಗೆ ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತಿನಿಂದ ನಿನ್ನ ಹಾದಿ ನಿನಗೆ ನನ್ನ ಹಾದಿಗೆ ನನಗೆ, ಇದನ್ನು ತಪ್ಪಿ ನನ್ನ ಹಿಂಬಾಲಿಸುವುದಾಗಲಿ, ಇಲ್ಲವೆ ಪೋಲೀಸ್ ಗೀಲಿಸ್‌ಂತ ನೀನೇನಾದರೂ ವಕೀಲೀ ಮಾಡಿದ್ರ ಖಂಡಿತ ನಿನ್ನ ಪ್ರಾಣಕ್ಕೆ ಅಪಾಯ ತಪ್ಪಿದ್ದಲ್ಲ, [ಚಂದ್ರು ಬಂದು ಮರಿ ನಿಂತು ಇವರ ಮಾತು ಕೇಳುವನು]

ಜಮುನಾ : ಅಂದರೆ ಮುಂದೆ ನನ್ನ ಗತಿ?

ಕಾಳಿಂಗ : ಗತಿ? ಹುಂ !! ಅಧೋಗತಿ, ಗಂಡನ ಎದುರ ಗರತಿಯಂತೆ ನಟನೆ ಮಾಡಿ, ಅವನ ಕಣ್ಣಲ್ಲಿ ಮಣ್ಣೆರಚಿ, ಮಿಂಡನೊಂದಿಗೆ ದೇಹ ಸುಖವನುಂಡು ಸಂತೋಷ ಪಡುವ ನಿನ್ನಂಥ ಭಂಡ ಸತಿ ಸೂಳಿಯರಿಗೆ ಆ ವೈಶ್ಯಾ ಗೃಹವೇ ಗತಿ.

ಜಮುನಾ : ಕಾಳಿಂಗ,

ಕಾಳಿಂಗ : ಹೌದು, ಕಾಮ ದಾಹದಿಂದ ಕಂಗೆಟ್ಟು ಬಂದ ನೂರಾರು ಕಾಮದ ರಣ ಹದ್ದುಗಳಿಂದ ಮುದ್ದಾದ ನಿನ್ನ ದೇಹವನ್ನೇ ಕುಕ್ಕಿಸಿಕೊಂಡು ಸುಖ ಪಡು ಹೋಗು.

ಜಮುನಾ : ಥೂ, ಪಾಪಿ, ನಿನ್ನ ಮಾತನ್ನೇ ನಂಬಿ ತಂದೆಯ ಸ್ವರೂಪರಾಗಿದ್ದ ಮಾವನವರಿಗೆ ವಿಷಹಾಕಿ ಕೊಂದೆ ಮತ್ತು ಗರತಿಯರ ಮುಕುಟವಾಗಿದ್ದ ನಮ್ಮಕ್ಕನಿಗೆ ವಿಷಪಾತಕಿ, ಜಾರಣಿ ಎಂಬ ಅನೈತಿಕ ಆರೋಪ ಹೊರಸಿ, ಅವಳ ಮಾಂಗಲ್ಯ ಹರಿಸಿ, ಮನೆಯಿಂದ ಹೊರ ನೂಕಿದೆ.

ಕಾಳಿಂಗ : ಜಮುನಾ !

ಜಮುನಾ : ಹೌದು, ತಮ್ಮನ ಹೆಂಡತಿ ಮಗಳ ಸಮಾನವೆಂಬ ಭಾವನೆಯನ್ನೇ ಬಿಂಬಿಸಿಕೊಂಡ ನಮ್ಮ ಭಾವನಿಗೆ ಕಾಮದ ಆರೋಪ ಹೊರಸಿ, ನನ್ನ ಗಂಡನ ಕೈಯಿಂದ ಯಾಸಿಡ್ ಹಾಕಿಸಿ, ಎರಡು ಕಣ್ಣು

ಕಳೆದು ಮನೆಯಿಂದ ಹೊರ ಹಾಕಿಸಿದೆ. ಇಷ್ಟಲ್ಲದೆ ದೇವರಂತ ಪತಿಗೆ ವಂಚಿಸಿ, ಮನೆಯ ಸರ್ವ ಸಂಪತ್ತು ನಿನ್ನ ಕೈಗೆ ಇರಿಸಿದೆ, ಇಷ್ಟೆಲ್ಲಾ ನಿನ್ನ ಮಾತಿನಂತೆ ಮಾಡಿದ ನನಗೆ ಈ ರೀತಿ ನಡು ನೀರಿನಲ್ಲಿ ಕೈ ಬಿಡುವುದು ನ್ಯಾಯವೆ?

ಕಾಳಿಂಗ : ನ್ಯಾಯ? ಹುಂ !! ನ್ಯಾಯ ಅನ್ಯಾಯವನ್ನು ನಿರ್ಣಯಿಸಲಿಕ್ಕೆ ಇದೇನು ನ್ಯಾಯಸ್ಥಾನವಲ್ಲ, ಇದು ನಿನ್ನ ಮರಣ ಸ್ಥಾನ ಹೂಂ ಅನುಭವಿಸು ನಿನ್ನ ಕರ್ಮಕಾಂಡದ ಫಲ [ಎಂದು ಗುಂಡು ಹಾರಿಸುವನು ಜಮುನಾ ಅಮ್ಮಾ ಎಂದು ಹೊಟ್ಟೆ ಹಿಡಿದು ಕೊಂಡು ನೆಲಕ್ಕೆ ಬೀಳುವಳು]

ಚಂದ್ರು : [ಬಂದು] ಅವಳ ಕರ್ಮದ ಫಲ ಅವಳು ಅನುಭವಿಸಿದ್ದಾಯ್ತು ! ನಿನ್ನ ಕರ್ಮದಫಲ ನೀನು ಅನುಭವಿಸು, ಸೂಳಿಯ ಪಾಪ ಸನ್ಯಾಸಿಗೆ, ಸನ್ಯಾಸಿಯ ಪಾಪ ಸರ್ವರಿಗೆ, [ಎಂದು ಕಾಳಿಂಗನಿಗೆ ಗುಂಡು ಹಾಕಿ ಹೋಗುವಷ್ಟರಲ್ಲಿ ಕಾಳಿಂಗ ಚಂದ್ರುನಿಗೆ ಗುಂಡು ಹಾಕುವನು]

ಕಾಳಿಂಗ : ನಮ್ಮಿಬ್ಬರ ಕರ್ಮದೊಂದಿಗೆ ನಿನ್ನ ಕರ್ಮಫಲನೂ ನೀನು ಅನುಭವಿಸು [ಎಂದು ಗುಂಡು ಹಾರಿಸುವನು ಅದು ರಟ್ಟೆಗೆ ಬಡಿವುದು ಚಂದ್ರು ಕೈಹಿಡಿದು ನಿಲ್ಲುವನು]

ರವಿ : [ಅಲ್ಲಿಗೆ ಬರುತ್ತಾ] ಚಂದ್ರು ! ಚಂದ್ರು ತಮ್ಮ ಚಂದ್ರು, ಇದೇನಪ್ಪ ನಿನ್ನ ಸ್ಥಿತಿ?

ಚಂದ್ರು : ಹೆಂಡತಿಯ ಮಾತೇ ಸತ್ಯವೆಂದು ನಂಬಿ ನಡೆದ ತಪ್ಪಿಗೆ ಸಿಕ್ಕ ತಕ್ಕ ಪ್ರತಿಫಲವಿದು, ಅಣ್ಣಾ ನಿಜವಾಗಿಯೂ ನನ್ನ ಅತ್ತಿಗೆ ಗರತಿಯಂತೆ, ಸ್ವತಹ ನನ್ನ ಹೆಂಡತಿಯ ಬಾಯಿಂದ ಹೇಳಿದ್ದನ್ನು ನನ್ನ ಕಿವಿಯಾರ ಕೇಳಿದ್ದೇನೆ. ಆಕೆ ವಿಷಪಾತಕಿಯೂ ಅಲ್ಲ ಮತ್ತು ಜಾರಿಣಿಯೂ ಅಲ್ಲ ಕಾಳಿಂಗ ಮತ್ತು ನನ್ನ ಹೆಂಡತಿ ಆಡಿದ ನಾಟಕ.

ರವಿ : ತಮ್ಮ ಇದೇನು ಹೇಳುತ್ತಿರುವಿ?

ಚಂದ್ರು : ಸತ್ಯವನ್ನೇ ಹೇಳುತ್ತಿರುವೆನಣ್ಣ ! ನಿಮ್ಮ ಮೇಲೆ ಅತ್ತಿಗೆಯ ಮೇಲೆ ಅಪವಾದ ಕೊಡಲು ಎಬ್ಬಿಸಿದ ಕುತಂತ್ರ, ಈ ಸತ್ಯ ಸಂಗತಿ ಜಮುನಾ ಸಾಯುವ ಪೂರ್ವದಲ್ಲಿ ಎಲ್ಲಾ ನಿಜ ಸಂಗತಿಯನ್ನು ಹೊರಹಾಕಿ ಅಸುನೀಗಿದಳು.

ರವಿ : ಚಂದ್ರು !

ಚಂದ್ರು : ಹೌದಣ್ಣ ಹೌದು ! ಈ ನಿಮ್ಮ ಪಾಪಿ ತಮ್ಮನನ್ನು ಕ್ಷಮಿಸಿದ್ದೇನೆಂದು ಒಂದೇ ಒಂದು ಸಲ ನಿಮ್ಮ ಬಾಯಿಂದ ಹೇಳಿಬಿಡಿ

ರವಿ : ನಾನು ಕ್ಷಮಿಸುವುದು ಅಷ್ಟೇ ಅಲ್ಲ ತಮ್ಮ ಈ ವಿಷಯ ಕೇಳಿ ನಿನ್ನತ್ತಿಗೆಯೂ ಸಹಿತ ಕ್ಷಮಿಸುತ್ತಾಳೆ.

ಚಂದ್ರು : ತುಂಬಾ ಸಂತೋಷಣ್ಣ ನಡೆ ಅಣ್ಣ ಅತ್ತಿಗೆ ಎಲ್ಲಿದ್ದಾಳೆ [ಎಂದು ಇಬ್ಬರು ಹೋಗುವರು]

===***====***===

ಹದಿನಾರನೇ ದೃಶ್ಯ

ರಸ್ತಾ

ಭಾಗ್ಯವಂತ : [ಬರುತ್ತಾ] ದೌಡ್ ದೌಡ್ ಬಾರ್ಬೇಯವ್ವಾ !

ಯಮುನಾ : [ವಾಂತಿ ಮಾಡುತ ಬಂದು] ತಡಿಯೋ ಎಪ್ಪ ! ಹೊಟ್ಯಾಗ ಒಂದು ನಮೂನಿ ಸಾಬೂನ್ ನೀರು ಕಲಿಸಿದಾಂಗ ಆಗಕತ್ತೇತಿ ! ಹೂವ್ವಾ..........

ಭಾಗ್ಯವಂತ : ನಾನು ಎಷ್ಟು ಬಡ್ಕೊಂಡೆ, ವಯಸ್ಸಿಗೆ ಬಂದ ಹೆಣ್ಣು ಮಕ್ಕಳು ಕಾಲು ಬಿಚ್ಚಿದ ಕತ್ತಿಗತ್ಲೆ ತಿರುಗು ಬಾರದವ್ವಾಂತ ಹೇಳಿದ್ರೂ ಸಹಿತ ಕೇಳದೆ, ಅಡ್ಡಾ ತಿಡ್ಡಿ ತಿರುಗಾಡಿ ಗುಡ್ಡದಂಗ ಹೊಟ್ಟಿ ಮಾಡ್ಕೊಂಡು ಬಂದಿಯಲ್ಲ, ನಿನಗ ಏನಾರ ಮಾನ ಮರಿಯಾದೆ ಐತೇನು?

ಯಮುನಾ : ಅದು ನಿನ್ನಂತ್ಯಕ್ಕೆ ಇಲ್ಲಾ ಅಂದ ಬಳಿಕ, ನನಗೆಲ್ಲಿಂದ ಬರ್ತಾದ?

ಭಾಗ್ಯವಂತ : ಏನು ನನಗ ಮಾನ ಮರ್ಯ್ಯಾದೆ ಇಲ್ಲಾಂತ ತಿಳ್ಕೊಂಡಿಯೇನು?

ಯಮುನಾ : ಮಾನ ಮರ್ಯ್ಯಾದೆ ಎಂಬ ಮೂರಕ್ಷರ ನಿನ್ನಲ್ಲಿದ್ರ, ನನಗೆ ಈ ಗೋಳು ಬರುತಿರಲಿಲ್ಲ, ಗಂಡನ ಮನೆಯಲ್ಲಿ ಗರತಿಯಾಗಿ, ನಾಲ್ಕು ಮಕ್ಕಳ ತಾಯಿಯಾಗಿ, ಹಾಯಾಗಿ ಬಾಳುತ್ತಿದ್ದೆ. ಇದಕ್ಕೆಲ್ಲಾ ನೀನೇ ಕಾರಣ.

ಭಾಗ್ಯವಂತ : ಏನು? ನಿನ್ನ ಬಸುರಿಗೆ ನಾನೇ ಕಾರಣ?

ಯಮುನಾ : ಹೌದೋ ಎಪ್ಪಾ ಎಲ್ಲಾರ ಒಂದು ವರನೋಡಿ ನನಗ ಮದುವೆ ಮಾಡಿದ್ರ ನಾನ್ಯಾಕ ಕದ್ದು ಮುಚ್ಚಿ ಬಸುರಿ ಯಾಗುತ್ತಿದ್ದೆ? ಎಲ್ಲರಂಗ ನಾನೂ ಅತ್ತೆ ಮಾವನ ಮನೆಯಿಂದ ನಿನ್ನ ಮನೆಗೆ ಬಂದು ಹೆರಿಗೆ ಮಾಡ್ಸಿಕೊಂಡು ಹೋಗುತ್ತಿದ್ದೆ.

ಭಾಗ್ಯವಂತ : ಆಯ್ತವ್ವಾ ಆಯ್ತು ! ನಂದೆ ತಪ್ಪಾಗ್ಯಾದಂತ ತಿಳ್ಕೊ, ಈ ನಿನ್ನ ಗುಡ್ಡದಂತ ಹೊಟ್ಟೆಗೆ ಯಾರು ಕಾರಣ? ಅದನ್ನಾದರೂ ಹೇಳವ್ವಾ.

ಅವನ ಕಾಲಾದರೂ ಹಿಡಿದು ಕರೆತಂದು ನಿನ್ನ ಮದುವೆ ಮಾಡುತ್ತೇನೆ.

ಯಮುನಾ : ನಾನೇನು ದ್ವಾಪಾರ ಯುಗದ ಆ ಪಾಂಚಾಲಿನಾ, ಧರ್ಮ, ಭೀಮ, ಅರ್ಜುನ, ನಕುಲ, ಸಹಾದೇವಂತ ಹೆಸರು ಹೇಳಲಿಕ್ಕೆ?

ಭಾಗ್ಯವಂತ : ಮತ್ತ ನೀನೇನು ಹೇಳ್ತಿ?

ಯಮುನಾ : ಅಲ್ಲಪ್ಪ, ನೀನು ಊರಿಗೆ ಸೋದರಮಾವ, ನಿನಗ ಊರು ತುಂಬ ಅಳಿಯಂದಿರರು, ಅಂದ ಬಳಿಕ ನಾನು ಯಾವ ಅಳಿಯನ ಹೆಸರು ಹೇಳಲಿ?

ಭಾಗ್ಯವಂತ : ಈ ನಿನ್ನ ಹೊಟ್ಟಿನ ರೊಟ್ಟಿ ಪುಟ್ಟಿ ಮಾಡಿದ ಆ ಬಿಟ್ಟಿ ಅಳಿಯನ ಹೆಸರು ಹೇಳವ್ವಾ

ಯಮುನಾ : ಇದು ಮಾತ್ರ ಸಾಧ್ಯವಿಲ್ಲಪ್ಪ, ನಿನಗೆ ಬಹಳ ಜನ ಅಳಿಯರಿರುವಂತೆ, ನನಗೂ ಬಹಳ ಜನ ಮಾವನವರು ಇದ್ದಾರೆ, ಅವರಲ್ಲಿ ತಾಸಿಗೆ ಒಬ್ಬರು ಬರ್ತಾನೇ ಇರ್ತಾರ ಯಾರ ಹೆಸರು ಹೇಳಲಿ?

ಭಾಗ್ಯವಂತ : ಎ ನಿಮ್ಮವ್ವಾ ಮಳ್ಳ ಬಾರಿಗಿ, ನೀನು ಯಾರನ್ನು ಪ್ರೀತಿ ಮಾಡಿ ನಿನ್ನ ಹೊಟ್ಯಾಗ ಹುರುಣಗಡುಬು ಇಟ್ಕೊಂಡಿದ್ದಿ, ಅವನ ಹೆಸರು ಹೇಳು ಅಂದ್ರ ತಾಸಿಗೊಬ್ಬರು ಬಂದು ಪ್ರೀತಿ ಮಾಡ್ತಾರಂತ ಹೇಳ್ತಾಳ,

ಯಮುನಾ : ಹೌದೋ ಎಪ್ಪ ! ಮುಂಜಾನೆ ಒಂಭತ್ತು ಗಂಟೆಗೆ ಶಿವರಾಜ್ ಕುಮಾರ ಬಂದರೆ, ಹನ್ನೊಂದು ಗಂಟೆಗೆ ದೇವರಾಜ್ ಬರ್ತಾನ, ಹನ್ನೊಂದು ಗಂಟೆಗೆ ದೇವರಾಜ್ ಬಂದರೆ ಒಂದು ಗಂಟೆಗೆ ಉಪೇಂದ್ರ ಬರ್ತಾನ, ಒಂದು ಗಂಟೆಗೆ ಉಪೇಂದ್ರ ಬಂದ್ರ, ಮೂರು ಗಂಟೆಗೆ ಅಂಬರೀಶ ಬರ್ತಾನ, ಮೂರು ಗಂಟೆಗೆ ಅಂಬರೀಶ ಬಂದ್ರ, ಐದು ಗಂಟೆಗೆ ವಿಷ್ಣುವರ್ಧನ್ ಬರ್ತಾನ, ಐದು ಗಂಟೆಗೆ ವಿಷ್ಣುವರ್ಧನ್ ಬಂದ್ರ ಏಳು ಗಂಟೆಗೆ ರವಿಚಂದ್ರ ಬರ್ತಾನ, ಏಳು ಗಂಟೆಗೆ ರವಿಚಂದ್ರ ಬಂದ್ರ, ರಾತ್ರಿ ಒಂಭತ್ತು ಗಂಟೆಗೆ ಸುದೀಪ್ ಬರ್ತಾನ, ಹೀಗೆ ಎರಡು ತಾಸಿಗೆ ಒಬ್ಬೊಬ್ಬರಂತೆ ಸರದಿ ಮೇಲೆ ಬರ್ತಾರಂದ ಮೇಲೆ, ನನ್ನ ಬಸುರಿಗೆ ನಿಕಟವಾದ ವ್ಯಕ್ತಿ ಇವರೇ ಅಂತ ಹ್ಯಾಂಗ ಹೇಳಲಿ?

ಭಾಗ್ಯವಂತ : ತಂಗಿ ಯಮುನವ್ವಾ, ನಿನ್ನ ತಲೆ ಗಿಲೆ ಕೆಟ್ಟಿಲ್ಲಾತಾನೆ?

ಯಮುನಾ : ನನ್ನ ತಲೆ ಕೆಟ್ಟಿಲ್ಲೋ ಎಪ್ಪಾ ತಲೆ ಕೆಟ್ಟದ್ದು ನಿಂದು, ನೋಡು ಸುತ್ತ ಹತ್ತಳ್ಳಿ ಜನ ನಿತ್ಯ ಹಾಲು ತಂದು, ಒಂದು ಹೋಟಲದ ಒಂದೆ ಪಾತ್ರೆಯಲ್ಲಿ ಕುದಿಸಿ ಅದರಿಂದ ಚಹಾ ಮಾಡ್ತಾರ, ಆದರೆ ಆ ಚಹಾ ಯಾರ ಹಾಲಿನದು ಎಂದು ಕೇಳಿದರೆ ಇದಕ್ಕೆ ನಿಕರವಾದ ಉತ್ತರ ಸಿಗುತ್ತೇನೋ ಹುಚ್ಚಪ್ಪ.

ಭಾಗ್ಯವಂತ : ನೀನು ಈ ರೀತಿ ಹೇಳಿದ್ರ ನಾನು ನಿನ್ನ ಮುಂದೆ ನಿಂತು ಲಭ್‌ಲಭ್ ಅಂತ ಹೋಯ್ಕೋಂತೀನಿ.

ಶ್ರೀಮಂತ : [ಬರುತ್ತ] ಇದೇನೋ ಮಾವ, ಹೋಳಿ ಹುಣ್ಣಿವಿ ಇನ್ನೂ ಮೂರು ತಿಂಗಳ ಮುಂದಾದ, ಆದ್ರ ನೀನು ಈಗಲೇ ಹೋಯ್ಕೋಳ್ಳಾಕ ಶುರುವು ಮಾಡಿದಿಯಲ್ಲ?

ಭಾಗ್ಯವಂತ : ಅಂತೂ ಸಮಯಕ್ಕೆ ಸರಿಯಾಗಿ ಬೇಸ್ ಬಂದಿ ಬಾರೋ ಶ್ರೀಮಂತ, ಈ ನನ್ನ ಮುದ್ದು ಮಗಳು ನಿನ್ನನ್ನೇ ಮದುವೆ ಮಾಡ್ಕೊಂತೀನಿ ಅಂತ ಒಂದೇ ಸಮ ಹಠ ಮಾಡಕತ್ಯಾಳ, ಅದ್ಕಾ ನಿನ್ನ ಎಲ್ಲೆಂತ ಹುಡುಕಿ ತರಲೆಂದು ಹೊಯ್ಕೋಳಕತ್ತಿದ್ದೆ.

ಶ್ರೀಮಂತ : ಏನು? ನಿನ್ನ ಮಗಳು ನನ್ನನ್ನೇ ಮದುವೆ ಮಾಡ್ಕೋಂತೀನಿ ಅಂತ ಹಠ ಮಾಡಕತ್ಯಾಳೇನು?

ಭಾಗ್ಯವಂತ : ಹೌದಪ್ಪ, ಹೌದು

ಶ್ರೀಮಂತ : ಅಲ್ಲಾ ಮಾವ ಮದುವೆಯಾಗುವ ನಿಮ್ಮ ಮಗಳ ಹೊಟ್ಟೆ ನೋಡಿದ್ರ ಹೆಂಡದ ಕಪೇಲಿಯಾಗಿದೆಯಲ್ಲ ಯಾಕ ಹೆಗ್ಗಣ ಗಿಗ್ಗಣ ನುಂಗ್ಯಾಳೇನು?

ಭಾಗ್ಯವಂತ : ಓ ಹೋ ಹೊಟ್ಟೆ ಬಾತುದ್ದು ನೋಡಿ ಹೇಳ್ತಿಯೇನು? ಲೇ ಹುಡುಗಾ ಈಕಿ ಸಣ್ಣಕಿದ್ದಾಗ ಕಣ್ಣಿ ಕಣ್ಣಿ ಮಣ್ಣು ತಿಂತಿದ್ಲು ಅದಕಾ ಹೊಟ್ಟೆ ಸ್ವಲ್ಪ ಮುಂದೆ ಬಂದಾದ.

ಶ್ರೀಮಂತ : ವ್ಹಾರೇವಾ ! ಬಸುರಿಯಾದ ಮಗಳನ್ನು ಮತ್ತೊಬ್ಬರ ಕೊಳ್ಳಿಗೆ ಕಟ್ಟಾಕ ಮಹಾ ಕಸರತ್ತು ನಡಿಸಿದಿ ಪರವಾ ಇಲ್ಲ. ಏ ಮಾವಾ, ಮತ್ತೊಬ್ಬರ ಲೋಡು ಮಾಡಿದ ಗಾಡಿನ ಅನ್‌ಲೋಡ್ ಮಾಡಲು, ನಾನೇನು ನೀನು ತಿಳಿದುಕೊಂಡ ಹಾಗೆ ಬುದ್ಧಿಗೇಡಿಯಲ್ಲ, ನನಗೆ

ಬೇಕಾದದ್ದು ಶೋ ರೂಮ್ ಗಾಡಿ.

ಯಮುನಾ : ಏಯ್ ನಾಟಕ ಕಂಪನಿ, ಹರಕು ಮುರುಕು ಅಡ್ವಟೇಜ ಡಬ್ಬಾಗಾಡಿ ನಡಿಸಿದ್ರ ನಡಸ್ಲಿ, ಇಲ್ಲಿ ಶೋ ರೂಮ್ ಗಾಡಿ ಬೇಡ್ತಾನ, ಶೋ ರೂಮ್ ಗಾಡಿ.

ಶ್ರೀಮಂತ : ಅದೇನೇ ಇರಲಿ, ತಾಳಿ ಇಲ್ಲದೆ ತಾಯಿಯಾದ ಈ ಮಾಯಿ ಹೆಣ್ಣಿಗೆ ಮದುವೆ ಆಗುವ ಮನಸ್ಸು ನನಗಿಲ್ಲ, ರೀ ಮಿಷ್ಟರ್ ಭಾಗ್ಯವಂತ ನಿನ್ನ ಹಣದಲ್ಲಿ ನನಗೆ ಹೊರದೇಶಕ್ಕೆ ಹೋಗಲು ಪಾಸ್‌ಪೋಟು ಸಿಕ್ಕಿದೆ ಬರ್ತೀನಿ, ಋಣವಿದ್ದರೆ ನಿನ್ನಹಣ ತರ್ತೀನಿ, ಗುಡ್ ಬಾಯ್.

ಭಾಗ್ಯವಂತ : ಅಂದರೆ ನನ್ನ ಎರಡು ಲಕ್ಷದ ಗತಿ?

ಶ್ರೀಮಂತ : ಗತಿ? ಹುಂ !! ಗಂಗಾವತಿ ! ಮಾವ ವೆಂಕಟರಮಣ ಗೋವಿಂದ ಗೋವಿಂದ, ಹಾಕಿ ಕೊಳ್ಳಿ ಹಣೆಗೆ ಮೂರು ನಾಮ, ಈ ಶ್ರೀಮಂತ ಕಳ್ಳರಿಗೆ ಕಳ್ಳ, ಸುಳ್ಳರಿಗೆ ಸುಳ್ಳ ಮಾವಾ ಕೊಟ್ಟವ ಕ್ವಾಡಗ, ತಿಂದಾವ ಹಣಮಪ್ಪ ಬರ್ತೀನಿ [ಹೋಗುವನು]

ಭಗವಂತ : [ಬರುತ್ತ] ಇದು ಯಾರು ಬರೆದ ಕಥೆಯೊ, ನಿನಗ್ಯಾಕ ಬಂತು ವ್ಯೆಥೆಯೊ, ಇದಕ್ಯಾರು ಹೊಣೆಯು ಹೇಳು, ಅನುಭವಿಸು ಬಂದಗೋಳು [ಅನ್ನುತ್ತ ಮುಂದಕ್ಕೆ ಹೋಗುವಷ್ಟರಲ್ಲಿ]

ಭಾಗ್ಯವಂತ : ಲೇ ತಮ್ಮ ಭಗವಂತ, ಅಳಿಯ ದೇವರು, ಸ್ವಲ್ಪ ನಿಂತುಕೊಳ್ಳೋ

ಭಗವಂತ : ಯಾವನಲೇ ಅಂವ ಮಂಕು ತಿಮ್ಮ ! ಹೋಗಿ ಬರುವವರನ್ನು ತಡೆದು ಮಾತಾಡಿಸಲು ನಾಚಿಕೆ ಬರುವುದಿಲ್ಲವೇನೋ ಬದಮಾಸ ನನ ಮಗನೆ ಲುಚ್ಛ ನನ ಮಗನೆ, ಹಲ್ಕಾ ನನಮಗನೆ, ತಿರುಬೋಕಿ ನನ ಮಗನೆ, ತಿರುಪೆ ನನ ಮಗನೆ, ಸಂಬ್ಯಾಗ ಹಾಕಿ ಹಂದಿಗೆ ಹೊಡ್ದಾಂಗ ಹೊಡ್ದೇನು ಯಾರು ನೀನು, ಓಹೋ ಮಾವ ನೀನಾ?

ಭಾಗ್ಯವಂತ : ಹೌದಪ್ಪ ನಾನೇ ನನ್ನ ಮೇಲೆ ನಿನಗೆ ಸಿಟ್ಟು ಇದ್ದರೆ ಹಂದಿಗೆ ಹೊಡ್ದಾಂಗ ಅಷ್ಟೇ ಅಲ್ಲಾ, ಹಿಡ್ಕೊಂಡು ಕತ್ತಿಗೆ ಒದ್ದಂಗ ನಾಲ್ಕು ಒದಿ, ಅಂದ್ರ ಈ ಮುದಿ ತಲೆಗೆ ಸ್ವಲ್ಪ ಬುದ್ಧಿ ಬರ್‍ತಾದ ಯಾಕಂದ್ರ ಹೊತ್ತು ಬಂದಾಗ ಕತ್ತಿ ಕಾಲು ಹಿಡಿ ಅಂತ ಹಿರೇರು ಹೇಳ್ಯಾರ.

ಭಗವಂತ : ನಿನಗ ಮತ್ಯಾವ ಹೊತ್ತು ಬಂತು ಮಾವ,

ಭಾಗ್ಯವಂತ : ಆ ಹೊತ್ತು ನನಗೆ ಮಹಾಕುತ್ತಾಗ್ಯಾದೆ ನುಂಗಲಾರದ ತುತ್ತಾಗಿದೆ, ಯಾರು ಮುಟ್ಟಲಾರದ ಸ್ವತ್ತಾಗಿದೆ, ನೀನು ನನಗ ಇವನೆಂಥ ಕತ್ತಿ ನನ ಮಗ ಅಂದ್ರೂ ಚಿಂತೆಯಿಲ್ಲ, ಮೊದಲು ನನ್ನ ಮಗಳ ಕೊರಳಿಗೆ ತಾಳಿ ಕಟ್ಟು.

ಭಗವಂತ : ಏನು ನಾನು ನಿನ್ನ ಮಗಳಿಗೆ ಮಾಂಗಲ್ಯ ಕಟ್ಟಬೇಕೆ? ಮಾವ, ಕದ್ದು ಬಸುರಿಯಾದ ಈ ನಿನ್ನ ಮುದ್ದು ಮಗಳಿಗೆ ಸಧ್ಯ ನಾನು ತಾಳಿ ಕಟ್ಟಬೇಕೆ? ಛೇ ಇದು ಮಾತ್ರಾ ಸಾಧ್ಯವಿಲ್ಲ, ಹೋಗು ಎಲ್ಯಾದರೊಬ್ಬ ಬುದ್ಧಿ ಇಲ್ಲದ ಪೆದ್ದಗ ಕೊಟ್ಟು ಮದುವೆ ಮಾಡು.

ಭಾಗ್ಯವಂತ : ಭಗವಂತ ಇದು ನಿನ್ನ ಕೈ ಅಲ್ಲ, ಕಾಲೂ ಅಂತ ತಿಳ್ಕೊಂಡು ಹಿಡ್ದು ಬೇಡ್ತಿನಿ, ದಯವಿಟ್ಟು ನನ್ನ ಮಾತನ್ನು ತಿರಸ್ಕರಿಸಬೇಡ.

ಭಗವಂತ : ಏನ್ರಿ, ನಿಮಗ ಮಾನ ಮರ್ಯಾದೆ ಇಲ್ಲಾಂದ್ರ ನನಗೂ ಇಲ್ಲಾಂತ ತಿಳ್ಕೊಂಡಿಯೇನು? ಇಂಥ ಬೀದಿ ಬಸುವಿನ ಮದುವೆಯಾದರೆ, ನಮ್ಮ ಮಾನ ಮರ್ಯಾದೆಯ ಗತಿ ಏನು? ಅಲ್ಲದೆ ಇಂಥ ಅಡ್ಡ ಕಸಬಿನ ಮದುವೆ ಆಗಾಕ ನಾವೇನು ಕುಲಗೆಟ್ಟಿಲ್ಲರೀ.

ಭಾಗ್ಯವಂತ : ಹಂಗಲ್ಲೋ ಭಗವಂತ.

ಭಗವಂತ : ಹಂಗೂ ಇಲ್ಲ ಇಂಗೂ ಇಲ್ಲ, ಮಂಗ್ಯಾನ ಗತೆ ಮಾತಾಡಬೇಡ, ಸಧ್ಯ ನಮಗ ಕೆಲಸಗಳು ಬಹಳದವ ಸುಮ್ಮ ದಾರಿ ಬಿಡು.

ಯಮುನಾ : ರೀ ಭಗವಂತ ಮಾಮ !

ಭಗವಂತ : ಮಾಮ ಅಂತ ಮೋಹದಿಂದ ಮಾತಾಡಿಸುವ ನನ್ನ ಮಾನಗೇಡಿ ಸೊಸಿಯೇ ಏನಾಗಬೇಕು ಹೇಳು?

ಯಮುನಾ : ನನ್ನ ಮದುವೆ ಮಾಡ್ಕೋ ನನ್ನ ರಾಜ !

ಭಗವಂತ : ನಾನು ನಿನಗೆ ರಾಜನಾದರೆ ಈ ನಿನ್ನ ತಂದೆ ನನಗೆ ಪೋತುರಾಜ, ಆವಾಗ ನಾನು ನಿನ್ನ ಕೇಳಾಕ ಬಂದ್ರ ದೋತ್ರ ಹಿಡ್ಕೊಂಡು ಓಡ್ಯಾಡುತ್ತಿದ್ದ ಮುಜವರ ಮುಲ್ಲಾ ಸಾಬನಂಗ, ಆದ್ರ ಗಂಡನಿಲ್ಲದೆ ಗರ್ಭಿಣಿಯಾದ ನಿನ್ನನ್ನು ಈಗ ನನ್ನ ಕೊರಳಿಗೆ ಕಟ್ಟಾಕ ಬಂದ್ರ ನಾ ಹ್ಯಾಂಗ ಕಟ್ಟಿಸಿಕೊಂತೀನಿ? ಹೋಗು ನನಗ ನಿಮಗ ಯಾವ

ಸಂಬಂಧಾನೂ ಇಲ್ಲ.

ಭಾಗ್ಯವಂತ : ಸಂಬಂಧ ಇಲ್ಲಾಂತ ಹೇಳಬ್ಯಾಡೋ, ನೀರಿನಕ್ಕಿಂತ ರಕ್ತ ದಪ್ಪ ನೀನು ಎಷ್ಟಾದರೂ ನನ್ನ ತಂಗಿಯ ಮಗ ನನ್ನ ಸೋದರ ಅಳಿಯ

ಭಗವಂತ : ನೋಡಿ, ನನಗೆ ನೀನೂ ಬೇಡ ಮತ್ತು ನಿನ್ನ ಮಗಳೂ ಬೇಡ, ಒಟ್ಟಿನಲ್ಲಿ ನಿಮ್ಮ ಸಹವಾಸ ಬೇಡವೇ ಬೇಡ.

ಯಮುನಾ : ಮಾವ, ನೀನು ನನ್ನ ಮದುವೆ ಆಗದಿದ್ದರೆ, ನಾನು ಕೆರಿನೋ ಬಾವಿನೋ ನೋಡಿ ಬಿದ್ದು ಪ್ರಾಣಾಕೊಡ್ತೀನಿ.

ಭಗವಂತ : ಛೇ, ಛೇ, ಆತ್ಮಹತ್ಯ ಮಹಾ ಪಾಪದ ಕೃತಿ, ನೀನು ಆತ್ಮಹತ್ಯ ಮಾಡಿಕೊಂಡರೆ, ಸೋದರ ಮಾವನಾದ ನನಗೆ ಆ ಪಾಪ ತಟ್ಟದೆ ಬಿಡಲಾರದು, ಯಮುನಾ ನೀನು ಯಾರಿಗೆ ಬಸುರಿಯಾಗಿದ್ದರೂ ಸಹಿತ ಮುಂದೆ ಹುಟ್ಟುವ ಮಗುವಿಗೆ ನಾನೇ ತಂದಿ ಎಂದು ನಿನಗೆ ತಾಳಿ ಕಟ್ಟುತ್ತೇನೆ ಆಯ್ತೆ.

ಭಾಗ್ಯವಂತ : ಹಾಗಿದ್ದರೆ ಮತ್ತೇಕೆ ತಡ ಅಳಿಯ ದೇವರೂ ! ಇದೋ ತಾಳಿ ತೆಗೆದು ಕೊಳ್ಳಿ ಶುಭಷ್ಯಂ ಶೀಘ್ರಂ ಹೂಂ ತಡ ಮಾಡಬ್ಯಾಡ ಕಟ್ಟು ತಾಳಿ [ಎಂದು ಭಾಗ್ಯವಂತ ಭಗವಂತನ ಕೈಯಲ್ಲಿ ತಾಳಿ ಕೊಡುವನು, ಅವನು ಯಮುನಳ ಕೊರಳಿಗೆ ಕಟ್ಟುವನು ಯಮುನ ಹೊಟ್ಟೆಗೆ ಕಟ್ಟಿದ ಗಂಟು ಬಿಚ್ಚುವಳು]

ಭಾಗ್ಯವಂತ : ಇದೇನವ್ವಾ ಯಮುನವ್ವಾ !?

ಭಗವಂತ : ಇದು ಮದುವೆ ಯಾಗಲು ಮಾಡಿದ ನಾಟಕ, ಮಾವ ಇದೋ ಒಂದು ಸಾವಿರ ರೂಪಾಯಿ ತೆಗೆದುಕೊಂಡು ಸೀದ ಕಾಶಿಯಾತ್ರೆಗೆ ಹೋಗು ಮುಂದ ಮೂರುತಿಂಗಳ ತನಕ ಬರಬೇಡ [ಭಾಗ್ಯವಂತ ಹೋಗುವನು] ಯಮುನಾ ಇನ್ನೇನು ಲೈಸೆನ್ಸ್ ಸಿಕ್ಕಿತಲ್ಲ ನಡಿಯಲಿ ನಮ್ಮ ಮಧುಚಂದ್ರ

ಹಾಡು

[ಹೋಗುವರು]

===***====***===

ಹದಿನೇಳನೇ ದೃಶ್ಯ

ಜಮಗಲ್ ರಸ್ತಾ

ಗಂಗಾ : ನನ್ನ ಸತಿ ಗರತಿ ಗಂಗಾ ಎಂಬ ತುಂಬು ವಿಶ್ವಾಸವನ್ನೇ ಬಿಂಬಿಸಿಕೊಂಡ ನನ್ನ ಪತಿಯ ಮತಿಯಲ್ಲಿ ಇಂದು ಅದೇಕೋ ಅವಿಶ್ವಾಸದ ಅಂಬುವಿಗೆ ಇಂಬಾಯಿತು? ಹುಂ !! ಸ್ವರ್ಗಮಯವಾಗಿದ್ದ ನಮ್ಮ ಮನೆ ನನ್ನ ತಂಗಿಯು ಆಗಮನದಿಂದ ಅನಿಷ್ಠ ಬಡಿಯಿತೆ ನನ್ನ ಪತಿದೇವರ ಮನಸ್ಸು ಹಾಲಾ ಹಲವಾಗಲಿಕ್ಕೆ ಕಾರಣ?

ಹಿನ್ನೆಲೆ : ವಿನ್ಹಾ ಕಾರಣ, ಅಚ್ಚಿಟ್ಟ ಮಾತಿಗೆ ಬೆಚ್ಚಿ ಬಿದ್ದ ನಿನ್ನ ಪತಿಯ ಸ್ವಚ್ಛವಾದ ಮನಸ್ಸು ರೊಚ್ಚಾಯಿತು, ಹುಂ !! ಗಂಡನಿಗೆ ಬೇಡವಾದ ಹೆಂಡತಿಯಾಗಿ ಈ ಜಗದಲ್ಲಿ ಭಂಡ ಜೀವನ ಸಾಗಿಸಬೇಡ, ಉದ್ದಂಡವಾದ ನಿನ್ನ ಆಯುಷ್ಯವನ್ನು ಖಂಡಿಸಿ ಅಖಂಡ ಮೂರ್ತಿಯಾದ ಶಿವನ ಪಾದ ಸೇರು.

ಗಂಗಾ : ಅಂದರೆ?

ಹಿನ್ನಲೆ : ಅಂದರೆ? ಸಾಯಲೇಬೇಕೆಂಬ ಉದ್ದೇಶದಿಂದ ನೀನು ತಂದ ವಿಷವನ್ನು ಸೇವಿಸಿ ಆತ್ಮಹತ್ಯ ಮಾಡಿ ಕೊಳ್ಳಿ.

ಗಂಗಾ : ನಿಜ ! ಪತಿಗೆ ಬೇಡವಾದ ಸತಿಯಾಗಿದ್ದು ಸತ್ತವಳಂತೆ ಕಾಲ ಕಳೆಯುವುದಕ್ಕಿಂತ ಸತ್ತು ಆ ಸ್ವರ್ಗ ಸೇರುವುದೇ ಉತ್ತಮ, ನನಗಿನ್ನೂ ಆತ್ಮಹತ್ಯವೇ ಸುಖದ ಲೇಸು, ನನಗಿನ್ನೂ ಆತ್ಮಹತ್ಯವೇ ಸುಖದ ಲೇಸು [ಎಂದು ವಿಷದ ಬಾಟ್ಲಿ ತೆಗೆದುಕೊಂಡು ಕುಡಿಯುವಷ್ಟರಲ್ಲಿಯೇ ರವಿ ಬಂದು ಆ ಬಾಟ್ಲಿ ಕಸಿದುಕೊಳ್ಳುವನು]

ರವಿ : ಗಂಗಾ ಇದೇನು ಮಾಡುತ್ತಿರುವಿ?

ಗಂಗಾ : ಬಿಡಿ, ದಯವಿಟ್ಟು ಸಾಯಲು ನನ್ನನ್ನು ಬಿಟ್ಟುಬಿಡಿ, ವಿಷಪಾತಕಿ ಜಾರಣಿ ಎಂಬ ಅಪವಾದ ಹೊತ್ತ ನಾನು ಬದುಕಬಾರದು.

ರವಿ : ಗಂಗಾ ! ನೀನು ವಿಷಪಾತಕಿಯೂ ಅಲ್ಲ ಮತ್ತು ಜಾರಣಿಯೂ ಅಲ್ಲ, ನೀನು ನಿಜವಾಗಿಯು ಗರತಿಯರ ಗರತಿ ಗಂಗಾ

ಗಂಗಾ : ಸ್ವಾಮಿ ತಾವು ಇದೇನು ಹೇಳುತ್ತಿರುವಿರಿ?

ರವಿ : ಸತ್ಯವನ್ನೇ ಹೇಳುತ್ತಿರುವೆ ಗಂಗಾ, ಸತ್ಯ ಸಂಗತಿಯನ್ನರಿಯದೆ ಮಿಥ್ಯದ ಮಾತಿಗೆ ಮಾರು ಹೋಗಿ ನಿನ್ನ ಕತ್ತಿಗೆ ಕೈ ಹಾಕಿ ಮನೆಯಿಂದ ಹೊರ ನೂಕಿದ ಈ ನಿನ್ನ ಪಾಪಿ ಗಂಡನನ್ನು ಕ್ಷಮಿಸು ಗಂಗಾ ಕ್ಷಮಿಸು.

ಗಂಗಾ : ಏನು? ನಾನು ನಿರಪರಾಧಿಯೇ?

ರವಿ : ಹೌದು, ಜಮುನಾ ಕಾಳಿಂಗನ ಜೊತೆ ಅನೈತಿಕ ಸಂಬಂಧ ಹೊಂದಿ ಅವರಿಬ್ಬರೂ ಸೇರಿ ನಿನ್ನನ್ನು ಮನೆಯಿಂದ ಹೊರ ಹಾಕಲು ಹೂಡಿದ ಕಪಟ ಕಾರಸ್ಥಾನದ ನಾಟಕವಿದು ಜಮುನಾ ಕಾಳಿಂಗನ ಕೈಯಲ್ಲಿ ಸಾಯುವಾಗ ಹೇಳಿದ ಸತ್ಯಸಂಗತಿಯನ್ನು ನಮ್ಮ ಚಂದ್ರು ಕೇಳಿ, ಅದನ್ನು ನನಗೆ ಹೇಳಿದ. ಕಾಳಿಂಗನ ಗುಂಡೇಟಿನಿಂದ ಅಸ್ವಸ್ಥನಾದ ಅವನು ಆಸ್ಪತ್ರೆಯಲ್ಲಿದ್ದಾನೆ.

ಗಂಗಾ : ಅಯ್ಯೋ ನಮ್ಮ ಚಂದ್ರು ಆಸ್ಪತ್ರೆಯಲ್ಲಿದ್ದಾನೆಯೆ ?

ರವಿ : ಹೌದು, ಹೆಂಡತಿಯ ಮಾತೇ ಸತ್ಯವೆಂದು ನಂಬಿದ ಚಂದ್ರು ಕೊನೆಗೊಮ್ಮೆ ಅವಳಿಂದ ಪಶ್ಚತಾಪ ಪಟ್ಟು ಅವಳ ಹೆಣಕ್ಕೆ ಗುಡ್‌ಬಾಯಿ ಹೇಳಿದನಂತೆ.

ಗಂಗಾ : ಶಿವ ಶಿವ, ಮಗನಂತ್ತಿದ್ದ ನನ್ನ ಮೈದುನನ ಸ್ಥಿತಿ ಹೀಗಾಗ ಬಾರದಾಗಿತ್ತು.

ರವಿ : ನಾನು ಮಾಡಿದ ಕರ್ಮ ಬಲವಂತವಾದರೆ ನೀನೇನು ಮಾಡಿಯೋ ಹರಿಯೋ ಎಂಬುವಂತೆ ಅವರ ಕರ್ಮ ಅವರೇ ಅನುಭವಿಸಬೇಕು ಗಂಗಾ ಗರತಿಯಾಗಿದ್ದ ನಿನಗೆ ವಿಷಪಾತಕಿ ಜಾರಣಿ ಎಂದು ಅಪವಾದ ಹೊರಸಿದ ನನ್ನ ಕ್ಷಮಿಸು ಗಂಗಾ ಕ್ಷಮಿಸು. ನೀನು ಬರೇ ಗರತಿ ಗಂಗಾ ಅಷ್ಟೇ ಅಲ್ಲ ಪತಿ ಭಕ್ತಿಯಿಂದ ಮುಕ್ತಿ ಪಡೆದ ಸತಿ ನೀನು, ದಯವಿಟ್ಟು ನನ್ನನ್ನು ಕ್ಷಮಿಸು ಗಂಗಾ !

ರಮೇಶ : [ಬರುತ್ತಾ] ರವಿ ತಾನು ಮಾಡಿದ ತಪ್ಪು ತನಗೆ ಅರಿವು ಆದರೆ

ಸ್ವತಹ ಆ ದೇವರೇ ಕ್ಷಮಿಸುತ್ತಾನೆ ಅಂದ ಮೇಲೆ ನನ್ನ ತಂಗಿ ಕ್ಷಮಿಸುವುದೇನು ಮಹಾ ದೊಡ್ಡ ಮಾತಲ್ಲ.

ಶಶಿಧರ : ಅಮ್ಮಾ, ಅಪ್ಪಾ, ಇನ್ನೂ ಮುಂದಿನಿಂದ ನೀವು ಜಗಳವಾಡಿ ನನ್ನನ್ನು ಬಿಟ್ಟು ಎಲ್ಲಿಗೂ ಹೋಗಬೇಡಿರಿ.

ಇಬ್ಬರು : ಆಯ್ತು ಮಗು,

ಚಂದ್ರು : (ಬಂದು) ಅತ್ತಿಗೆ ನನ್ನನ್ನು ಕ್ಷಮಿಸಮ್ಮ (ಕಾಲಿಗೆ ಬೀಳುವನು)

ಗಂಗಾ : ಇರಲಿ ಮೈದುನಾ ಮೇಲೇಳಪ್ಪ

ರಮೇಶ : ರವಿ, ಸಿಟ್ಟಿನ ಆವೇಶದಲ್ಲಿ ತಾಳ್ಮೆಯನ್ನು ಕಳೆದುಕೊಂದು ನನ್ನ ತಂಗಿಯ ತಾಳಿ ಕಿತ್ತು ಎಸೆದ ಈ ತಾಳಿ ಇಂದು ಪುನಹ ಅವಳ ಕೊರಳಿಗೆ ಕಟ್ಟಿ ಸುಖದಿಂದ ಬಾಳಿರಿ [ಎಂದು ತಾಳಿಕೊಡುವನು ರವಿ ಗಂಗಾಳ ಕೊರಳಿಗೆ ಕಟ್ಟುವನು]

ರವಿ : ಆಯ್ತು ರಮೇಶ ಕಳೆದು ಹೋದ ನಮ್ಮ ಸಂತೋಷವನ್ನು ಆ ದೇವ ಶ್ರೀ ಜಗಲಿಂಗೇಶ್ವರನು ಪುನಹ ಕಲ್ಪಿಸಿಕೊಟ್ಟ ಬಾ ಚಂದ್ರು ಬಾ

ರಮೇಶ : ಕಳೆದು ಹೋದ ಸಂತೋಷವನ್ನು ಪುನಹ ಕಲ್ಪಿಸಿ ಕೊಟ್ಟ ಶ್ರೀ ಜಗಲಿಂಗೇಶ್ವರನನ್ನು ಪ್ರಾರ್ಥಿಸೋಣ.

–: ಶಾಂತಿ ಸಮಾಪ್ತಿ :–

===***====***===

೩

ಪತಿ ಭಕ್ತಿ

(ಸುಂದರ ಸಾಮಾಜಿಕ ನಾಟಕ)

– ಎಲ್. ಬಿ. ಕೆ. ಆಲ್ದಾಳ

ಎಲ್.ಬಿ.ಕೆ. ಆಲ್ದಾಳ

ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಮಳ್ಳಿ ಗ್ರಾಮದಲ್ಲಿ ೦೫.೧೧.೧೯೩೮ರಲ್ಲಿ ಆಲ್ದಾಳ ಅವರು ಬಂದೇನವಾಜ – ಹುಸೇನಬಿ ದಂಪತಿಗಳ ಉದರದಿಂದ ಜನಿಸಿದರು. ಇವರ ತಂದೆ–ತಾಯಿಗಳು ಮೂಲತಹ ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಬನಹಟ್ಟಿ ಗ್ರಾಮದವರು. ಆಲ್ದಾಳರು ಮುಸ್ಲೀಂ ಜನಾಂಗದಲ್ಲಿ ಹುಟ್ಟಿ, ಹಿಂದೂ ಧರ್ಮೀಯರಾಗಿ ಬದುಕಿದರು. ಇವರು ಏಳನೇ ತರಗತಿವರೆಗೆ ಓದಿದ್ದರೂ ಅಪಾರವಾದ ಪ್ರತಿಭೆಯುಳ್ಳವರು. ಶರಣ ಸಾಹಿತ್ಯದಿಂದ ಪ್ರಭಾವಗೊಂಡ ಆಲ್ದಾಳರು ಶರಣ–ಸಂತರನ್ನು ಕುರಿತೇ ಅನೇಕ ನಾಟಕಗಳನ್ನು ಬರೆದರು. ಇವರ ನಾಟಕ ರಚನೆಗೆ ಪ್ರೇರಣೆ ನೀಡಿದವರು, ಇವರ ಮಾವನವರಾದ ಹುಸೇನ ಪಟೇಲ ಸುಲ್ತಾನವರು. ಬಾಲ್ಯದಲ್ಲಿಯೇ "ಕನಕಾಂಗಿ" ಬಯಲಾಟದಲ್ಲಿ ಆಲ್ದಾಳರು ಬಣ್ಣ ಹಚ್ಚಿದರು.

ವೃತ್ತಿ ರಂಗಭೂಮಿಗೆ ಅಪಾರ ಕೊಡುಗೆ ನೀಡಿರುವ ಆಲ್ದಾಳರು ನಲವತ್ತಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದಾರೆ. ೧೯೬೪ರಲ್ಲಿ ಪತಿಭಕ್ತಿ ಪ್ರಥಮ ನಾಟಕ ಪ್ರಕಟನೆಯಾಯಿತು. ನಂತರ ಕಲಿಯುಗದ ಕನ್ಯೆ, ನಮಸ್ಕಾರ, ಕಣ್ಣಿಟ್ಟ ಕೈಕೊಟ್ಟದಂತಹ ಸಾಮಾಜಿಕ ನಾಟಕಗಳನ್ನು ರಚಿಸಿದರು. ಇವರು ರಚಿಸಿದ ವಿಶ್ವಾರಾಧ್ಯ ಮಹಾತ್ಮೆ, ಷಣ್ಮುಖ ಶಿವಯೋಗಿ, ಅಯ್ಯಪ್ಪಯ್ಯ ಮಹಾತ್ಮೆಯಂತಹ ಪೌರಾಣಿಕ–ಐತಿಹಾಸಿಕ ನಾಟಕಗಳು ಗ್ರಾಮೀಣ ಜನತೆಯಲ್ಲಿ ಪರಿಣಾಮವನ್ನುಂಟು ಮಾಡಿದವು. ಸೂಳ್ಯದ ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘದವರು ಇವರ "ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ" ನಾಟಕದ ನೂರು ಪ್ರಯೋಗಗಳನ್ನು ಮಾಡಿದರು. "ಷಣ್ಮುಖ ಶಿವಯೋಗಿ" ನಾಟಕ ಕೂಡಾ ವೃತ್ತಿ ಕಂಪನಿಗಳಿಂದ ನೂರಾರು ಪ್ರಯೋಗ ಕಂಡಿದೆ. ನಾಟ್ಯ ಕವಿರತ್ನ, ಶರಣಸಾಹಿತ್ಯ ಸಿಂಧು, ವೀರಶೈವ ಸಾಹಿತ್ಯ ರತ್ನ ಬಿರುದುಗಳನ್ನು ಪಡೆದ ಇವರಿಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

ಪತಿ ಭಕ್ತಿ

ಪಾತ್ರ ಪರಿಚಯ

ಗುರು	ಚಂದ್ರಧರನ ಕುಲಗುರುಗಳು
ಚಂದ್ರಧರ	ಆಗರ್ಭ ಶ್ರೀಮಂತ
ಜಮುನಾ	ಚಂದ್ರಧರನ ಧರ್ಮಪತ್ನಿ
ಸಿದ್ದಪ್ಪ	ಚಂದ್ರಧರನ ಮನೆಯ ಆಳು
ಶಾಂತಾ	ಚಂದ್ರಧರನ ಸಹೋದರಿ
ಮನೋಹರ	ಚಂದ್ರಧರನ ಬಾಲ್ಯಮಿತ್ರ
ಸಿದ್ದಿ	ಸಿದ್ದಪ್ಪನ ಹೆಂಡತಿ
ಬಳಗಾರ	ಮೋಸಗಾರ
ಡಾಕ್ಟರ್	ಸ್ತ್ರೀ ವ್ಯಾಮೋಹಿ
ಜಯ	ಚಂದ್ರಧರನ ಹಿರಿಯ ಮಗ [ನ್ಯಾಯಾಧೀಶ]
ಕಮಲಾ	ಚಂದ್ರಧರನ ತಾಯಿ
ವಿಜಯ	(ಚಂದ್ರಧರನ ಕಿರಿಯ ಮಗ ಪೋ. ಇನ್‌ಸ್ಪೆಕ್ಟರ್)
ಚಪರಾಶಿ	x x x
ವಕೀಲ	x x x
ನ್ಯಾಯಾಧೀಶ	x x x
ಪೋಲಿಸ ಇನ್ಸ್‌ಸ್ಪೆಕ್ಟರ್	x x x

ಪತಿ ಭಕ್ತಿ

ಅರ್ಥಾತ್

ಜಯ–ವಿಜಯ

(ಸಾಮಾಜಿಕ ನಾಟಕ)

॥ ನಾಂದಿ ॥

ತಾಯಿ ಶಾರದೆ ಪೊರೆಯೆ ನಮ್ಮನು । ಕರುಣದಿ ಮನ ಹರುಷದಿ ॥
ಕಾಯೆ ಭಗವತಿ ವಿದ್ಯೆವಾಹಿನಿ । ದಿವ್ಯ ಸುಂದರಿ ಮಾತೆಯೇ ॥ ಪ॥

ಹಲವು ಬಣ್ಣದ ವೇಷ ಧರಿಸುತ । ಕಾಲಕಾಲಕೆ ರೂಪಮಾಸುತ ।
ಕಲಾ ಭೂಮಿಗೆ ಶ್ರೇಷ್ಠಳೆನಿಸುತ । ಒಲಿವಿನಿಂದಲಿ ರೂಪತಾಳಿದ ॥ ೧ ॥

ಸಪ್ತಸ್ವರಗಳ ಜನನಿಯಾಗಿ । ಹಸ್ತದೊಳು ವೀಣೆಧರಿಸಿ ॥ತಾಯಿ॥
ತತ್ವವೇದದ ಸಾರ ಹೀರಿ । ಸತತದಿ ಪೊರೆ ವಾಗ್ವಿಲಾಸಿನಿ ॥ತಾಯಿ॥ ೨ ॥

ರನ್ನ ಪೊಂಪರ ಹೆತ್ತ ಭಾರತಿ । ಜನ್ನ ಪೊನ್ನರ ಆದಿಮೂರುತಿ ॥
ಮುನ್ನ ದ.ರಾ.ಬೇಂದ್ರಯವರ । ಚೆನ್ನಕಾವ್ಯಕೆ ಕೀರ್ತಿಹರಿಸಿದ ॥ ೩ ॥

(ನೇಪಥದ ಮೇಲೆ ಸರೋವರದ ದೃಶ್ಯ. ಸೂರ್ಯನ ಉದಯ
"ಓಂ ನಮಃ ಶಿವಾಯ" ಎಂಬ ಮಂತ್ರದಿಂದ ಸೂರ್ಯನಾರಾಯಣ
ನಿಗೆ ಅರ್ಘ್ಯನೀಡುತ್ತಿರುವ ಗುರುಗಳು, ಮಡಿಯಿಂದ ಲಿಂಗಪೂಜೆ
ಮಾಡಿದ ಬಳಿಕ ಪುನಃ ಸೂರ್ಯನು ಅಸ್ತವಾಗುವಿಕೆ.)

ಮನೆಯ ದೃಶ್ಯ

(ಜಮುನಾ ತೊಟ್ಟಿಲ ತೂಗುತ್ತಾ)

॥ ಪದ ॥

ತೂಗೂವೆ ಕಂದಾ । ಜೋಽ ಜೋಽ ॥ ಆಡುತ ಬಾ ।
ಜೋಽ ಜೋಽ । ನಲಿದು । ಒಲಿದು । ಕುಣಿಯುತಾ ಬಾ ॥ಪ॥
ಮಾತೆಯ ಹೃದಯದ ಮಾಣಿಕ್ಯ ಬಾರೋ ।
ಸತ್-ಚಿತ್ತಾನಂದದ ಜ್ಯೋತಿಯ ಬೆಳಗೋ ।
ಧೀರನಾಗೋ । ಶೂರನಾಗೋ । ಭಾರತನಾಳುವ ಭವಿಯಾಗೋ ॥
(ಜಮುನಾ ಎಂದು ಹೊರಗಿನಿಂದ ಚಂದ್ರಧರನ ಕೂಗು।

ಚಂದ್ರಧರ– (ಪ್ರವೇಶಿಸಿ, ಡ್ರೆಸ್ಸನ್ನು ಬಿಚ್ಚುತ್ತಾ ವಿರಾಮಾಸನದ ಮೇಲೆ ವೃತ್ತ ಪತ್ರಿಕೆ ಓದಿದ ನಂತರ) ಜಮನಾ, ಜಮುನಾ.

ಜಮುನಾ– (ಪ್ರವೇಶಿಸಿ) ಬಂದೆ ಸ್ವಾಮಿ, ಬಂದೆ (ಕೋಟನ್ನು ಕೈಯಲ್ಲಿ) ತಾವು ಇಷ್ಟೊಂದು ತಡಮಾಡಿಬರಲು ಕಾರಣ? ತಮ್ಮ ಮುಖದ ಮೇಲೆ ಅದಾವ ಮ್ಲಾನತೆಯ ಮೆರಗು? ಹಗಲಿರುಳು ತಮ್ಮ ಸೇವೆ ಗೈಯ್ಯಲಿರುವ ದೀನದಾಸಿಗೆ ಹೇಳಲು ಉದಾಸೀನತೆಯೆ? ಅದಾವ ದೆಂಬುದನರುಹಲು ಸಂಕೋಚವೆ? ನಿಜವೇ ಪ್ರಭು.

ಚಂದ್ರಧರ– (ನಿಟ್ಟುಸಿರು) ನಿಜ ಜಮುನಾ! ಮಾನವನ ಮೆರಗಿನಲ್ಲಿ ಅದೆಷ್ಟು ಸುಖ-ದುಃಖದ ಅಲೆಗಳು. ಆ ಅಲೆಗಳ ಹೊಡೆತಕ್ಕೆ ಪುರುಷನ ಬಾಳು ಹಾಳು. ಇರಲಿ ಬಿಡು ಜಮುನಾ; ನೀನು ನಿಜವಾಗಿಯೂ ನನ್ನ ಬಾಳಿನ ಆಧಾರಸ್ತಂಭದ ದೇವತೆ. ಅದೋ ಚಂದಿರನು ಆಗಸದಿ ಒಂದೊಂದೆ ಹೊಸ ಅಡಿಗಳನ್ನಿಡುತ್ತಾ, ನಮ್ಮ ಪ್ರೇಮ ಮಧುರ ಮಿಲನವನ್ನು ನೋಡುತ್ತಾ; ಮೋಡಗಳ ಮರೆಯಲ್ಲಿ ಕಣ್ಣಾಲೆ ಬಡಿಯದೇ ನಿಂತಿರುವನು ಮಲ್ಲಿಗೆಯ ಮೊಗ್ಗೆಗಳನು ಮುಡಿಯಲ್ಲಿ ಮುಡಿಯೆಂದು ಆ ವಸುಂಧರೆಯು ತನ್ನ ಸ್ತನಗಳನ್ನು ಗಗನಚುಂಬಿತವಾಗಿ ಹಾರಿಸಿ, ಮೈಮರೆದು ನಾಟ್ಯವಾಡುತ್ತಾಳೆ

ಸಂತಸದಿಂದ. ಇತ್ತ ಕೋಗಿಲೆಯು ವಸಂತ ಋತುವಿನಲ್ಲಿ ಸಂತಸವನೀಯುವ ಮಂಜುಳ ಸ್ವರದಿಂದ ಗಾಯನ ಮಾಡುತಿದೆ; ಹುಮ್ಮಸದಿಂದ. ನೋಡು ಜಮುನಾ

ಜಮುನಾ– ನೋಡುತಿಹೆನು ಸ್ವಾಮಿ, ನನ್ನ ಹೃದಯ ಮಂದಿರದ ಅಂತರಾತ್ಮದ ಅಂತರಾಳದಲ್ಲಿ ಸೌಭಾಗ್ಯ ಕೋಗಿಲೆಯ ಕೂಹರವ ಕೇಳುತಿಹೆನು. ಆದರೆ ಆ ಕೋಗಿಲೆಯು ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾಗಿ ತಿರುಗುವ ಹಾಗೆ, ನಮ್ಮೀರ್ವರ ಪ್ರೇಮದ ಕೋಗಿಲೆಗೆ ಎಂಥಾ ಕಠಿಣತರ ಪ್ರಸಂಗ ಬಂದೊದಗಿದರೂ, ಅಗಲಿಸಬೇಡೆಂದು ನಾನು ನಿಮಗೆ ಕೈಮುಗಿದು ಬೇಡಿಕೊಳ್ಳುತ್ತೇನೆ.

ಚಂದ್ರಧರ– ಅಗಲಿಸಲು ಸಾಧ್ಯವೆ ಇಲ್ಲ ಜಮುನಾ ! ನೀನು ನನ್ನ ಹೃದಯಕಮಲದಲ್ಲಿ ನೆಲಸಿದ "ಅನ್ನಪೂರ್ಣಾ" ಬಾಳಿನ ಕೋಗಿಲೆಯನ್ನು, ಎಂಥಾ ಪ್ರಸಂಗ ಬಂದೊದಗಿದರೂ ನಾನಗಲಿಸಲಾರೆ "ವಾಯು ವೇಗದಲ್ಲಿ ಸಂಚರಿಸುವ ವಿಮಾನದಂತೆ" ನಮ್ಮ ಬಾಳು ಭರದಿಂದ ಸಾಗಿದೆ. ಆದರೆ ಆನಂದದಾಗರದಲ್ಲಿ ಶಕುನಿಗಳ ಮಿಲನದಿಂದ, ಪುಣ್ಯಕ್ಷೇತ್ರವಾಗಿರುವ ಮನೆ ಕುರುಕ್ಷೇತ್ರವೆಲ್ಲಿ ಮಾಡಿಬಿಡುತ್ತಾರೋ ತಿಳಿಯದಾಗಿದೆ.

ಜಮುನಾ– ಸ್ವಾಮಿ, ಕುರುಕ್ಷೇತ್ರವಾಗುವದೆಂದು ನಾವು ಇಂದೇ ನಿಂತಿದ್ದಾದರೆ ನಮ್ಮ ಬಾಳದೋಣಿಯು, ಭವದ ಕಡಲೊಳಗೆ ಸಾಗುವ ಬಗೆ ಎಂತು? ಈ ನಮ್ಮ ಬಾಳದೋಣಿಗೆ ಕಷ್ಟದ ತೆರೆಗಳು ಬಂದು ಢಿಕ್ಕಿ ಹೊಡೆದರೂ ತನುವೆಂಬ ಹುಟ್ಟಿನಿಂದ ನೂಕುತ್ತಾ ಬಾಳಿನಲ್ಲಿ ಸಾಗುವದೇ ಮುಖ್ಯ ಕರ್ತವ್ಯ ಮಾನವನದು.

ಚಂದ್ರಧರ– (ನಕ್ಕು) "ಹುಟ್ಟು ಮೊಗ್ಗೆಯಲ್ಲಿ ಸೌರಭವಿರುವಂತೆ" ಇಂದು ನೀ ನೀಡಿದ ತಿಳುವಳಿಕೆಯ ತಿರುಳನ್ನು, ಕಾಣಬೇಕಾಗಿದೆ ನಮ್ಮೀರ್ವರ ಪವಿತ್ರಪ್ರೇಮದ ಕನಸನ್ನು ಜಮುನಾ......

ಜಮುನಾ– ಸ್ವಾಮಿ! ಕನಸು ನನಸಾಗಬೇಕಾದರೆ ಇಂದಲ್ಲ ಪ್ರಭು ನಾಳೆ. ನಡೆಯಿರಿ, ಗುರುಗಳು ಬರುವ ಹೊತ್ತಾಯಿತು.

ಚಂದ್ರಧರ– ನಡೆ ಜಮುನಾ, "ಗುರುವಿಗಿಂತಧಿಕ ಮತ್ತಿನ್ನಾರು" ಇಲ್ಲ. ಗುರುವೇ ಈ ಭವಸಾಗರವನ್ನು ದಾಟಿಸುವ ನಗುರೋರಧಿಕನು. ಎಲ್ಲೈ

ಮಹಾಮಹಿಮನೆ, ಇನ್ನು ನಿನಗಿಂತ ಅಧಿಕರು ಇರುವದುಂಟೆ? ನಿನ್ನ ಪ್ರಭಾವಕ್ಕೆ ಎಣಿಕೆಯೇ ಇಲ್ಲ.....

ಜಮುನಾ– ನನ್ನರಸಾ ! ನಿಮ್ಮ ಕೈ ಹಿಡಿದ ನಾನೇ ಧನ್ಯಳು. ನನ್ನ ಯಾವ ಜನ್ಮದ ಪುಣ್ಯಫಲವೋ ತಿಳಿಯದಾಗಿದೆ.

ಚಂದ್ರಧರ– ನಡೆ ಜಮುನಾ, ನೀನು ಒಳಗೆ ನಡೆ. ನಾನಷ್ಟು ಹೊರಗೆ ಹೋಗಿ ಬರಲೇ? (ಮೌನ) ಮೌನವೇಕೆ ಸೌಭಾಗ್ಯವತಿ.

ಪದ [ಡಯಲಾಗ]

ಚಂದ್ರಧರ– ಸೌಭಾಗ್ಯವತಿಯೇ । ಮಧುರಮಿಲನ ಪ್ರಿಯೇ
ಮಧುರಮಿಲನ ಪ್ರಿಯೆ । ಬಾ ಪ್ರೀಯೆ ಬಾ ।
ಬಾರೇ ಽಽಽಽ ಪ್ರೀಯೆ ಬಾ ಽಽ॥

ಜಮುನಾ– ಬಾ ಮನಮೋಹನ ! ಬಾ ಎನ್ನ ಜೀವನ
ಬಾಯೆನ್ನ ಜೀವನ । ಬಾ ಪ್ರೀಯ ಬಾ ಬಾರೆ ಽಽಬಾ ॥

ಇಬ್ಬರೂ– ಪ್ರೇಮದಿ ಹಾಡಿ ಽಽಮಧುರ ಮಧುರ ಮಿಲನರಾಗ ।
ಹರುಷದಿ ಕುಣಿದು ಮಣಿದು ನಾಟ್ಯವನಾಡಿ ।
ಆನಂದದಿಂದ ಬಾಳಿನ ನೌಕೆ । ಬಾಳಿನ ನೌಕೆ ।
ದಾಟಿಸುವಾ ಪ್ರೀಯೆ ದಾಟಿಸುವಾ ॥

೨ನೇ ಪ್ರವೇಶ

ಸಿದ್ದಪ್ಪ– (ಸಿದ್ದಪ್ಪ ಹೊರೆಯನ್ನು ಹೊತ್ತುಕೊಂಡು ಬಂದು) ಥೊ. ಥೊ, ಏನ ಸವಕಾರ ಮನಿ ದಗದನೋಽ ಮಹಾಗಾಯ ಸಾಕು ಸಾಕಾಗಿ ಹೋಗೇತಿ, ನಾ ಏನ ದಗದಽ ಮಾಡಿದ್ರೂ ಆ ಕೋತಿ ಕುಲ್ದ ಕಮಲವ್ವಾಗ ಆಕಿ ಮಗಳ ಶಾಂತವ್ವಗ ಸರಿನ ಬರ್ಲಾರದಂಗ ಆಗೇತಿ, ದೊಡ್ಡ ಧಣಿ ಚಂದ್ರಧರಪ್ನೋರು ಮದವಿ ಆಗಬಾರ್ದ ಆಗ್ಯಾರ, ತಾಯಿ ಮಗಳ ಹೊಟ್ಟ್ಯಾಗ ಸಾಕ್ಷಿ–ಜೀರ್ಗಿ ಹಾಕಿದಂಗ

ಅಗೇತಿ. ಪಾಪ ಸೊಸೆ ಜಮುನವ್ವನೋರ್ದ ಎಷ್ಟು "ಪತಿಭಕ್ತ್ಯೋ" ಮಹಾರಾಯ ನೋಡಿದ ಕೂಡ್ಲೆ ನನ್ನೆದಿ ಝಲ್ಲಂತದ ನನ್ನ ಹೇಣ್ತಿ ಅದಾಳ ನೋಡ್ರಿ, ಸಿದ್ಧಿ ಹೋಗ್ತಾ ವಸ್ತಾಳ, ಬರ್ತಾ ವಸ್ತಾಳ, ಆಕಿ ಪಾಲಿಗಿ ನಾನೊಂದು ಗ್ವಾಡಿ ಆಗೇನಿ. ಏನ ಮಾಡ್ಲಿ ನನ್ನ ಹೇಣ್ತಿ ಯಾವಾಗ ದಾರಿಮ್ಯಾಲ ಬರ್ತಾಳೋ ತಿಳಿಲಾರದಂಗ ಆಗೇತಿ ಖರೆವಂದ್ರ ನೋಡ್ರಿ ಸಂಸಾರ ಸುದ್ಧಾಗಿ ಹೋದ್ರ ಬಹಳ ಚಂದ್ರ, ಇಲ್ಲಾಂದ್ರ ಗಾಳಿಗಿ ಹೋಗು ರವದಿ ಹೋದಂಗ, ಕಮಲವ್ವಾ ಶಾಂತವ್ವಾ ಕೂಡಿ ಎಲ್ಲಿ ಈ ಮನಿ ಮರ್ವಾದಿ ಕಳಿತಾರೋ ಯಾರಾರ್ಗಿ ಏನೇನ ಗತಿ ಬರ್ತೈತೋ ತಿಳೀಲಾರದಂಗ ಆಗೇತಿ ಆಗಲಿ, ಏನೇನ ನಡಿತೈತೋ ನಡಿಲಿ ಮುಂದಾಗುವದೆಲ್ಲ ನೋಡಿದ್ರಾತು. ಇಲ್ಲಂದ್ರ ಸುಮಾಕ ತ್ವಾಟಕ ಹೋದ್ರಾತು. (ಹೋಗ ಹತ್ತುವನು ಶಾಂತಾ ಪ್ರವೇಶಿಸಿ)

ಶಾಂತಾ– ಏ ! ಸಿದ್ದಪ್ಪಾ

ಸಿದ್ದಪ್ಪ– ಯಾಕ್ರಿ ಯವ್ವಾ......?

ಶಾಂತಾ– ಇಂದು ಇಷ್ಟೇಕೆ ತಡಮಾಡಿ ಬಂದೆ! ಅಣ್ಣನಂತೂ ತನ್ನ ಹೆಂಡತಿಯೊಡನೆ ಸರಸ ಸಲ್ಲಾಪಮಾಡುತ್ತಾ ಮನೆಯಲ್ಲಿಯೇ ಕೂಡ್ರುತ್ತಾನೆ. ನೀನಂತೂ ಹೇಳುವದೇನು ಚಂದ್ರಧರನ ಆಳು. ಮೇಲಾಗಿ ಅವನ ಉಪಚಾರಕನು. ಇಂದಿನಿಂದ ನೀನು ಅವರ ಮಾತು ಕೇಳಬೇಡಾ. ತಿಳಿಯಿತೇ? ನೀನು ಚೆನ್ನಾಗಿ ಕೆಲಸ ಮಾಡುವದಿದ್ದರೆ ಮಾಡು; ಇಲ್ಲದಿದ್ದರೆ ಇಂದೇ (getout) ಗೆಟಾವುಟ.

ಸಿದ್ದಪ್ಪ– ನಿಮ್ಮ ಗೇಟ ಕಾಯಂದ್ರೆವ್ವಾ?

ಶಾಂತಾ– (ಸಿಟ್ಟಿನಿಂದ) (you stupid)) ಯು ಸ್ಟುಪಿಡ್?

ಸಿದ್ದಪ್ಪ– ಸುಡುಸುಡೋ ಉಪ್ಪಿಟ್ಟ ಬೇಕ್ರೆ ಯವ್ವಾ?

ಶಾಂತಾ– (ಸ್ವಗತ) ಇಂಗ್ಲೀಷ ಬಾರದ ವ್ಯಕ್ತಿ ಮನವಿಲ್ಲದ ಮಾತಾಡುವ ಸ್ತುತಿ? ಏ ಸಿದ್ದಪ್ಪಾ ನಿನಗೆ ಕೆಲ್ಸಾ ಬೇಕೋ ಅಥವಾ ಬೇಡವೋ ಇಲ್ಲದಿದ್ದರೆ ನಿನ್ನ ಹಾಸಿಗೆ ಸುರುಳಿ ಹೊತ್ತು ಕೊಂಡು ನಡೆ.

ಸಿದ್ದಪ್ಪ– ಹಂಗs ಮಾಡಬ್ಯಾಡ್ರಿ ಯವ್ವಾ. ಬಡವರ ಹೊಟ್ಟಿ ಮ್ಯಾಲ ಕಾಲ

ಇಡಬ್ಯಾಡ್ರಿ ಯವ್ವಾ (ಸ್ವ) ಹಂಗs ಮಷ್ಯನಮಳ ಹತ್ತಿದಂಗ ಹತ್ತೇ ಇರ್ತಾಳ "ಕೆಲ್ಸಾ ಬೊಗಸಿ ಇಲ್ದವರು ಸಂದ್ಯಾಗ ಅಲಸಂದಿ ಹುರಿತಿದ್ರಂತ" ಇವರಂತವ್ರs ನೋಡ್ರಿ.

ಶಾಂತಾ– ಯಾಕs ಸಿದ್ದಪ್ಪಾ ಸುಮ್ನs ನಿಂತೆಲ್ಲ.

ಸಿದ್ದಪ್ಪ– ಕೆಲ್ಸಕ್ಕ ಹೋಕ್ಕೀನ್ರಿ (ಹೋಗಿ ಪುನಃ ಬಂದು) ಯವ್ವಾ ಹೊರಗ ಮನೋಹರಪ್ನೋರ ಬಂದಾರ. ಧಣೇರು ಮನ್ಯಾಗ ಇದ್ದಾಂಗ ಇಲ್ರಿ ಹೋಗಂತ ಹೇಳಂದ್ರ್ಯ ಯವ್ವಾ.

ಶಾಂತಾ– ಯಾರು ಮನೋಹರನು ಬಂದನೇ?

ಸಿದ್ದಪ್ಪ– ಹೌದ್ರಿ ಯವ್ವಾ, ಹೋಗಂತ ಹೇಳಂದ್ರ್ಯ ಯವ್ವಾ

ಶಾಂತಾ– ಬೇಡ! ಅಣ್ಣನು ಈಗ ಬರಬಹುದು ಒಳಗೆ ಬಾಯೆಂದು ಹೇಳು (ಹೋಗುವನು)

(ಮನೋಹರ ಪ್ರವೇಶ)

ಮನೋಹರ– (Halloo good morning) ಹಲೊ ಗುಡ್ ಮಾರ್ನಿಂಗ ಮಿಸ್ ಶಾಂತಾ. ನಿಮ್ಮಣ್ಣ ಚಂದ್ರಧರನು ಮನೆಯಲ್ಲಿಲ್ಲವೇ?

ಶಾಂತಾ– (ಕುಡಿ ನೋಟದಿಂದ) (Please sit down) ಪ್ಲೀಜ ಸಿಡೌನ. ಸಧ್ಯದಲ್ಲೇ ಬರಬಹುದು; ಕಾಫಿಯನ್ನಾದರೂ ತರಲೇ?

ಮನೋಹರ– (No Just I had it dont miss Shanta) ನೋ ಜಸ್ಟ ಆಯ್ ಹ್ಯಾಡಿಟ್ ಡೊಂಟ ಮಿಸ್ ಶಾಂತಾ, ನಾನು ಇದೇ ಈಗ ತೆಗೆದುಕೊಂಡು ಬಂದಿರುವೆನು ಶಾಂತಾಬಾಯಿಯುವರೇ ಇತ್ತಿತ್ತಲಾಗಿ ನಿಮ್ಮಣ್ಣನವರು ಮನೆಯಲ್ಲಿ ಇರುವದಿಲ್ಲವಲ್ಲಾ?

ಶಾಂತಾ– ಅವನ (Marriage) ಮ್ಯಾರೇಜ ಆದಂದಿನಿಂದ ಅವನ ಮನಸ್ಸೇ ಸ್ಥಿಮಿತದಲ್ಲಿಲ್ಲ. ನನಗಂತೂ ಕೀಳುಭಾವನೆಯಿಂದ ನೋಡುತ್ತಾನೆ. ಅವ್ವನಿಗಂತೂ ಸೇರುವದೇ ಇಲ್ಲ

ಮನೋಹರ– (ಸ್ವ) ಈ ಹಂಸಪಕ್ಷಿಯ ಮುಂದಾಲೋಚನೆಯಲ್ಲಿ ರಹಸ್ಯದ ಸೂಚನೆ ಎದ್ದು ಬರುವಂತೆ ಕಾಣಿಸುತ್ತದೆ. (ಪ್ರ.) ಅದು ಸಹಜವಾಗಿದೆ ಅನ್ನೀ.....

ಶಾಂತಾ– ನೋಡಿ ಆಕಾಶ ರಾಜ್ಯದಲ್ಲಿ ಬೆಳ್ಳಿ ಬೆಟ್ಟಗಳಂತಿರುವ ಮೋಡಗಳು,

ತೇಲುತ್ತಾ ಮುಳುಗುತ್ತಾ ಮಾಯವಾಗುತ್ತವೆ. ಅದರಂತೆ ಪ್ರಾಯದ ಪೆಣ್ಣಳಿಗೆ ವಿಚಾರದಲೆಗಳೆದ್ದು ಮನಸ್ಸು ಹೊಯ್ದಾಡುವದು ಸಹಜ.

ಮನೋಹರ– ಅಲ್ಲವೇ ಮತ್ತೇನು.......?

ಸಿದ್ದಪ್ಪ– (ಸ್ವಗತ) ಇದೇನಪಾ ಚಂಡಾಳ ಚೌಕಿ ಮ್ಯಾಳ ಕೂಡಿದಂಗ ಆಯ್ತಲ್ಲ. ಈ ಮನಿ ಪರಿಸ್ಥಿತಿ ಎಲ್ಲೆಲ್ಲಿಗಿ ಬಂತಲ್ಲಾ, ಈ ಕಣ್ಣಿಲೇ ನಾಯೇನ ನೋಡಂಗಿಲ್ಲಾ, ಆದದ್ದು ಆಗಲಾರ್ದ ಕೂಟೇ ನಡಿತಲ್ಲಾ ಇನ್ನ ಏನೇನ ನಡಿತೈತೋ ನಡಿಲಿ, ಇಲ್ಲೇ ಮರೆಯಾಗಿ ಇವರ ಮಾತ ಪೂರಾ ಕೇಳುನಲ್ಲಾ.

ಶಾಂತಾ– ಈಗೀಗ ಅವನ ಪರಿಸ್ಥಿತಿಯೇ ಬೇರೆಯಾಗಃಪತ್ತಿದೆ.

ಮನೋಹರ– ಸಹಜವಾಗಿದೆ ಬಿಡಿ. ಶಾಂತಾ ಕುಮಾರಿ, ನಿಮ್ಮಣ್ಣನವರ ಹೆಂಡತಿಯು ಬಂದಂದಿನಿಂದ ಅವರ ವಿಲಾಸ ಮಂದಿರಕ್ಕೆ ಇಂದು ಇಂದ್ರನ ವೈಭವವು ಕೂಡಾ ನಾಚಿ ತಲೆತಗ್ಗಿಸಿದೆ. ಮನದಿನಿಯ ನೊಡಗೂಡಿ ತಂಗಿಯ ಮುಂಬಾಳನ್ನು ಹಸನಾಗಿ ಮಾಡಿಸದೆ, ಸತಿಯ ಸದನದಲಿ ಮಿಂದ ಆ ನಿಮ್ಮಣ್ಣನ ಬಾಳಿನ ಗಿಡಕ್ಕೆ ಪರಶುರಾಮನ ಪೆಟ್ಟು ಹಾಕಬೇಕು; ಅಂದರೇನೆ ನಿಮ್ಮ ಬಾಳಿನ ಬಳ್ಳಿಯು ಹಬ್ಬಿ ಅದಕ್ಕೆ ಮೊಗ್ಗೆಗಳು ಚಿಗಿತು "ಹೂ" ಆಗಿ ಅರಳುವದು.

ಶಾಂತಾ– ಆ ಹೂವಿನ ಸೌರಭಾವನ್ನು ದುಂಬಿಯು ಹೇಗೆ ಸೇವಿಸುವದೋ ಅದರಂತೆ ನಾನಾದರೂ.....ಇಂದಿನಿಂದ ಈ ಜವ್ವನ ಕಾಯಕ್ಕೆ ನೀವೇ ಆಶ್ರಯದಾತರು. ಆದರೇ......

ಮೋಹನರ– ಶಾಂತಾ, ಆನಂದದಾಗರದಿ "ಆದರೆ" ಎಂಬ ಕಲ್ಪನೆಯ ಕಟ್ಟಡವೇಕೆ? ಅದಕ್ಕಾಗಿ ಏನು ಮಾಡಬೇಕು ಹೇಳು.

ಸಿದ್ದಪ್ಪ–(ಸ್ವ) ಹೇಳುವದೇನದಾ ! ಗಂಡಾ ಹೆಣ್ತಿನ ಮನಿ ಬಿಡಿಸಬೇಕು. ಹೌದಲೇ ಕೊಳಕ ಅದಕ ಬಂದಿದಲೆ ನೀ ಅಬರು ಕಳಕೊಳ್ಳಾಕ, ನಿಯ್ಯಾಕ ಹ್ವಾದಿ ಸುಮಾಕ, ಬಡ್ಗಿ ಬಡ್ತಾ ತಿಂದ ಹೋಗ್ತಿದೀ ಸುಡಗಾಡಕ, ಸುಮ್ನ ನಿಂತಾರ ಕೇಳೂನ ಅನಕಾ.

ಶಾಂತಾ– ಮನೋಹರಾ ನೀನು ನಿಜವಾಗಿಯೂ ಪ್ರೀತಿಸುವೆಯಾ?

ಮನೋಹರ– ಎಷ್ಟಾದರೂ "ಕಾಮಿನಿಯ ಮನಸ್ಸು ಸಂಶಯದ ಹೆಬ್ಬಳಸು"

ಶಾಂತಾ– ಎಷ್ಟಾದರೂ "ಮಾನವನ ಮನ ಬರಿ ಕನಸಿನ ಪರಿಭ್ರಮಣ"

ಸಿದ್ದಪ್ಪ– (ಪ್ರವೇಶಿಸಿ) ಯವ್ವಾ ಧಣೇರ ಬಂದರ್ರೀ.

ಶಾಂತಾ– ಏನು ಅಣ್ಣನು ಬಂದನೇ (ಒಳಗೆ ಹೋಗುವಳು)

ಸಿದ್ದಪ್ಪ– ಈಗ್ಯಾಕ ನಿಂತಿಯೆವಾ ನೀನು, ಇಟತನ ಬೆಕ್ಕು ಇಲ್ಲ ಮನ್ಯಾಗ ಇಲಿ ಲಗಾಟ ಹೊಡದಂಗ ಆಯ್ತು. "ಹಾಲುಂಡು ಹಾಸ ಹೊಯ್ಯ ಮಗಳಂದ್ರ ಊರ ಮಂದಿನ ನೋಡಿ ನೀರ ತರತಿದ್ಲಂತ" ಇಕಿಯಂತಿಕಿ ನೋಡ್ರಿ.

ಚಂದ್ರಧರ– (ಪ್ರವೇಶಿಸಿ) (Good morning Mr. Manohar) ಗುಡ್ ಮಾರ್ನಿಂಗ ಮಿಸ್ಟರ ಮನೋಹರ! ಯಾವಾಗ ಬಂದೆ! ನೀನು ನನಗಾಗಿ ಚಿಕ್ಕ ತಪಸ್ಸು ಮಾಡಿದಂತೆ ಕಾಣಿಸುತ್ತದೆ. (Please excuse me) ಪ್ಲೀಜ ಎಕ್ಸಕ್ಯೂಜ ಮಿ.

(ಜಮುನಾ ಮನೋಹರನನ್ನು ನೋಡಿ ಪುನಃ ಒಳಗೆ ಹೋಗುವಳು. ಮನೋಹರ ನೋಡುವನು)

ಮನೋಹರ– (No mention please) ನೋ ಮೆನಿಶನ್ ಪ್ಲೀಜ ಮಿತ್ರಾ ಮೈತ್ರತ್ವದ ಭಾವದಲಿ ಚಿಕ್ಕ ತಪಸ್ಸು ಏಕೆ? ಘೋರ ತಪಸ್ಸೇ ಮಾಡಬೇಕಾಗುತ್ತದೆ.

ಚಂದ್ರಧರ– ಮಿತ್ರ ನೀನು ಬಂದು ಎಷ್ಟು ಗಂಟೆಗಳಾದವು?

ಮನೋಹರ– ಗಂಟೆಗಳುರುಳಲಿಲ್ಲ; ನಿಮಿಷಗಳು ಮಾತ್ರ.

ಚಂದ್ರಧರ– (ನಕ್ಕು) ಹೀಗೋ.....ಸಿದ್ದು....ಏ ಸಿದ್ದಪ್ಪಾ.

ಸಿದ್ದಪ್ಪ– ಏನ್ರಣಿ?

ಚಂದ್ರಧರ– ಅವಲಕ್ಕಿ ಸಹಿತವಾಗಿ ಎರಡು ಕಪ್ಪು ಟೀ ತೆಗೆದುಕೊಂಡು ಬಾ

ಸಿದ್ದಪ್ಪ– ಅಲ್ರಿಯಪ್ಪ ಟೀಬಿ ಹ್ಯಾಂಗ ಬರ್ತದ್ರಿಯಪ್ಪ?

(ಎಲ್ಲರೂ ನಗುವರು)

ಚಂದ್ರಧರ– ಟಿ.ಬಿ., ಅಲ್ಲೋ ಚಹಾ.

ಸಿದ್ದಪ್ಪ– ಕಪ್ಪ ಅನ್ನಿಯಪ್ಪಾ ! (ಚಹಾ ಕುಡಿದ ನಂತರ) (ಸ್ವ) ಇಂವಾ ಇಲ್ಲ್ಯಾಕ ಬೇರ ಬಿಟ್ನಪ್ಪಾ ಅಂತೀನಿ ಮತ್ತೇನೇತರ ನಡಸ್ತಾನೊ

ಕಾರಖಾನಿ. ಇರ್ಲಿ ಹೊತ್ತ ಬಂದಾಗ ಇವ್ನ ಗುಗ್ಗಳಾ ಎಬಸದಿದ್ದರೆ ಸಿದ್ದಿ ಗಂಡ ಸಿದ್ದೇನ ಅಲ್ಲ. (ಪ್ರ). ಯಪ್ಪಾ ತ್ವಾಟದಾಗ ಸದಿ ತಗೀಲಿಕ್ಕೆ ಆಳುಗೋಳು ಹೋಗ್ಯಾವ್ರಿ. ನಾನೂ ಹೊಕ್ಕಿನ್ರಿ ನೀವೂ ಆ ಕಡೆ ಬರ್ತೀರಾ?

ಚಂದ್ರಧರ– ಹೂಂ ನಡೆ ! ನಾನು ಅಲ್ಲಿಂದಲೇ ಬಂದಿದ್ದೇನೆ; ಮತ್ತೆ ಬರುತ್ತೇನೆ. (ಹೋದ ನಂತರ) ನೋಡಿ ಮಿಷ್ಟರ್ ಮನೋಹರ; ಇವನಂತಹ ಆಳು ಸಿಗುವದು ಬಹಳ ಕಠಿಣ. ಮೇಲಾಗಿ ಮನೆಯ ಕಾರಭಾರವನ್ನು ತಾನೇ ನೋಡಿಕೊಂಡು ಹೋಗುತ್ತಾನೆ ಪುಣ್ಯಾತ್ಮ. ಹಿಂದಿನ ಜನ್ಮದಲ್ಲಿ ಏನು ಋಣ ತಿಂದಿದ್ದಾನೊ ತಿಳಿಯದಾಗಿದೆ. ಇದಲ್ಲದೆ ಭಕ್ತಿವಂತ.

ಮನೋಹರ– (ನಕ್ಕು) ಅದು ಸಹಜವಾಗಿದೆ ಅನ್ನಿ. ನೀವೇ ಭಕ್ತಿವಂತರೆಂದು ಮೇಲೆ ನಿಮ್ಮ ಆಳು ಏಕೆ? ಮನೆಯ ಮುಂದಿನ ನಾಯಿಯು ಸಹ ಹಾಗೆ. "ಎಥೋ ಬ್ರಹ್ಮಾಂಡ ತಥೋ ಪಿಂಡಾಂಡ" "ಜತೆಯಂತೆ ಮತಿ" ಅಲ್ಲವೇ?

ಚಂದ್ರಧರ– ಇರಲಿ ಬಿಡು ಮಿತ್ರ. ಈಗ ಐದಾರು ತಿಂಗಳಿಂದ ಭೆಟ್ಟಿಯೇ ಇಲ್ಲ. ಈಗ ಅದೇ ಹಾವೇರಿಯಲ್ಲಿರುವಿಯೇನು? ಎಲ್ಲರೂ ಕ್ಷೇಮವೇ?

ಮನೋಹರ– (ದೀರ್ಘ ನಿಟ್ಟುಸಿರು) ಇರುವರು ಮಿತ್ರ ! ಎಲ್ಲರೂ ದೇವರ ದಯದಿಂದ ಸುಖದ ಸುಪ್ಪತ್ತಿಗೆಯ ಮೇಲಿರುವರು. ಆದರೆ....

ಚಂದ್ರಧರ– ಇದೇನು ಮಿತ್ರ? ಮನಗಳೆರಡೂ ಒಂದೇಯಾಗಿ ಆನಂದವೆಂಬ ಆನೆಯ ಮೇಲೆ ಕುಳಿತಾಗ "ಆದರೆ" ಎಂಬ ಅಂಕುಶವೇಕೆ?

ಮನೋಹರ– ಏನು ಹೇಳಲಿ ಮಿತ್ರಾ. ಅದೇ ಹಾವೇರಿಯಲ್ಲಿ ವಿಜಯಾ ಬಿಲ್ಡಿಂಗ ಕಂಟ್ರಾಕ್ಟ ಹಿಡಿದೆ. ಆದರೆ ದುರ್ದೈವವಶಾತ್ ಅದರ ಖರ್ಚು ೬೦೦೦ ರೂ. ನನ್ನ ಮೇಲೆ ಬಂದಿದೆ. ಕಾರಣ ಹಣದ ಸಲುವಾಗಿ ನಿಮ್ಮಲ್ಲಿ ಬಂದಿರುವೆನು. ಏನಾದರೂ ಬರೆದು ಕೊಡಲೆ?

ಚಂದ್ರಧರ– ಮಿತ್ರಾ, ಮಾನವನಿಗೆ ಮನುಷ್ಯತ್ವದ ಅರುಹು ಇದ್ದರೆ ಸಾಕು. ಇರಲಿ; ಎಷ್ಟು ಬೇಕಾಗಿದೆ ಹಣ?

ಮನೋಹರ– ಮಿತ್ರಾ, ಆರು ಸಾವಿರ ರೂಪಾಯಿಗಳು ಮಾತ್ರ.

ಚಂದ್ರಧರ– ಈ ಅಸ್ಥಿರವಾದ ಪ್ರಪಂಚದಲ್ಲಿ ಶಿರಿ ಸ್ಥಿರವೆಂದು ತಿಳಿದಿರುವಿಯಾ? ಶಾಂತಾSS ಶಾಂತಾ.....

ಶಾಂತಾ– ಏನಣ್ಣಾ.......?

ಚಂದ್ರಧರ– ತಿಜೋರಿಯಿಂದ ಆರು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಬಾ ಅಮ್ಮಾ. ಬಾ ಮನೋಹರ ಸ್ವಲ್ಪ (Walking) ವಾಕಿಂಗಿಗೆ ಹೋಗಿ ಬರುವಾ.

ಮನೋಹರ– ಇಲ್ಲ ಮಿತ್ರಾ. ಅರ್ಜಂಟ ರೂಪಾಯಿಯ ಸಲುವಾಗಿ ಬಂದಿರುವೆನು; ಈಗಲೇ ಹಾವೇರಿಗೆ ಹೋಗಬೇಕಾಗಿದೆ.

(ಶಾಂತಾ ಹಣ ತಂದು)

ಶಾಂತಾ– ತೆಗೆದುಕೋ ಅಣ್ಣಾ.......(ಕುಡಿನೋಟ ಬೀರುವಳು)

ಚಂದ್ರಧರ– (ರೂಪಾಯಿಗಳನ್ನು ಕೊಡುತ್ತ) ತೆಗೆದುಕೋ ಮಿತ್ರಾ......

ಮನೋಹರ– (Thanks for you) ಥ್ಯಾಂಕ್ಸ ಫಾರ ಯು

ಚಂದ್ರಧರ– No mention please

(ಮನೋಹರ ಹೋಗುವಾಗ ಸಿದ್ದಿ ಕಸಗೂಡಿಸುವಳು)

ಶಾಂತಾ– (ಮನೋಹರನನ್ನು ಉದ್ದೇಶಿಸಿ) ಇವಳು ನಮ್ಮ ಮನೆಗೆಲಸದವಳು ಸಿದ್ದಮ್ಮಾ.

ಮನೋಹರ– (Good morning) ಗುಡ್ ಮಾರ್ನಿಂಗ ಸಿದ್ದಮ್ಮಾ.

ಸಿದ್ದಿ– ಅಯ್ಯಯ್ಯSS ನಮಗ್ಯಾಕ್ರಿಯಪ್ಪ ಗುಡ್ಡದ ಮಾರಿಂಗ. ನಿಮ್ಗS ಬೇಕಾದವರಿಗೆ ಕೊಡ್ರಿ.

(ಒಳಗೆ ಹೋಗುವಳು. ಮನೋಹರನು ಹೋಗುವನು)

ಚಂದ್ರಧರ– ಶಾಂತಾ, ನಾನಿಂದು ಸಿಕಂದ್ರಾಬಾದಿಗೆ ಹೋಗಬೇಕಾಗಿದೆ; ಅಲ್ಲಿಂದ ಹಿಂದಿರುಗುವವರೆಗೂ ಸ್ವಲ್ಪು ದಿನಗಳು ತಗಲುತ್ತವೆ. ಅಲ್ಲಿಯವರೆಗೂ ಈ ಮನೆಯ ಆಗುಹೋಗುಗಳನ್ನು ಜಾಗ್ರತೆಯಿಂದ ನೋಡಿಕೊಂಡು ಹೋಗು. ಏನಮ್ಮಾ (ಸಮೀಪಕ್ಕೆ ಕರೆದು) ನಿಮ್ಮ ಅತ್ತಿಗೆಗೆ ತ್ರಾಸ ಕೊಡಬೇಡಾ. ಕುಮಾರ ಜಯನಿಗೆ ಸರಿಯಾಗಿ ಶಾಲೆಗೆ ಕಳುಹಿಸುತ್ತಿರು. ಮರೆಯಬೇಡವಮ್ಮಾ.

ಶಾಂತಾ— ನಿನ್ನ ಮಾತಿಗೆ ಪ್ರತಿಯುಂಟೆ ಅಣ್ಣಾ?

(ತೆರೆಯು ಇಳಿಯುವದು)

೩ನೆಯ ಪ್ರವೇಶ

ಮನೋಹರ— ಒಂದೇ ಏಟಿಗೆ ಎರಡು ಹಕ್ಕಿಗಳು ಬಲೆಯಲ್ಲಿ ಬಿದ್ದವು. ಹೇಗಿದೆ ಈ ಕ್ರೂರ ಮನೋಹರನ ಮಾಯಾಜಾಲ ತಂತ್ರದ ಸುಳ್ಳು ಹೇಳಿ ಆರು ಸಾವಿರ ರೂಪಾಯಿಗಳನ್ನು ಎತ್ತಿ ಹಂದ ಖಳನಾಯಕನ ಪಾತ್ರ. (ನಕ್ಕು) ಭಲೆ ಶಾಂತಿ ! ನಿನ್ನಿಂದಲೇ ಎಬ್ಬಿಸುವೆ ಈ ಮನೆಯ ಕ್ರಾಂತಿ. ಆ ಕ್ರಾಂತಿಯಿಂದಲೇ ಪುಷ್ಪದ ಹಾಗೆ ಅರಳ್ಳಿಂತಿರುವ ಜಮುನೆಗೆ ಮನೆ ಬಿಡಿಸಬೇಕಾಗಿದೆ. ನಡುರಾತ್ರಿ ಹೊಂದಲೇಕಾಗಿದೆ ಅವಳಂಗಸಂಗದ ಪ್ರಥಮರಾತ್ರಿ. ಕಾಣಬೇಕಾಗಿದೆ ನನ್ನ ಹೊಂಗನಸಿನ ಸಂತಿ; ಕಾಮದ ಮದದಿಂದ ಮತಿ ಮಸಳಿಸಿದ ಶಾಂತಿ. ಇಂದು ನಾ ನಿನ್ನವನಾಗಬೇಕಾದರೆ ನಿನ್ನ ಕೈಯಿಂದಲೇ ತಂದೊಡ್ಡಿದೆ, ಈ ಮನೆಗೆ ಅಪಕೀರ್ತಿ. ಯೌವ್ವನದಾರಭ್ಯ ಅವಿಶ್ರಾಂತವಾಗಿ ದುಡಿದು ಬೆವರಿಳಿಸಿ ಅಪಾರ ಸಂಪತ್ತನ್ನು ಸಂಪಾದಿಸಿದ ಚಂದ್ರಧರನ ಮಾನಕ್ಕೆ ತಂದಿರಿಸಿದಿ ನೀ ಚ್ಯುತಿ; ನಿನ್ನಂತೆ ನನಗಿಲ್ಲ ಮತಿ. ಇನ್ನೂ ಮುಂದಿರುವುದು ಈ ಮನೋಹರನ ಚಮತ್ಕೃತಿ. ಕಾಣಬೇಕಾಗಿದೆ ತೆರೆಯ ಮೇಲೆ ಈ ನಾಟಕದ ಅಂತ್ಯ ಕೃತಿ.

(ನಗುತ್ತ ಹೋಗುವನು)

ಸಿದ್ದಪ್ಪ— (ವಿಚಾರ ಮಾಡುತ್ತ) ಏನ ವಿಚಾರ ಮಾಡಿದ್ರೂ ನನ್ನಂತ್ಯಾಗ ಬರಲಾರದಂಗ ಆಗೇತಿ. ಶಾಂತಕ್ಕ ಒಳ್ಳೇ ತೋಳೇರ್ಸಿ ನಿಂತಾಂಗ ಕಾಣತೈತಿ. ಅದರ ಶಕಿ ನಮಗೂ ಬಡೆಂಗ ಕಾಣತೈತಿ. (ನೋಡಿ) ಅಲೆಲೆ......ಯಾಕ ನಮ್ಮ ಡಿಜೇಲಗಾಡಿ ಟೇಶನ ಬಿಟ್ಟೈತಿ, ಇಲ್ಲೇ ಟ್ಯಾಂಡಿಗಿ ನಿಂದ್ರೋಣ. ಮುಂದೇನು ಆಗತೈತಿ ನೋಡನ.

(ಸಮೀಪಕ್ಕೆ ಬರುವಳು. ಕೈಮಾಡಿ ನಿಲ್ಲಿಸುವನು)

ಸಿದ್ದಿ— ಏ? ಯಾರಲಾ ನೀನು. ಹಾದಿಗುಂಟ ಹೋಗ ಹೆಂಗ್ಸರ್ಗಿ

ಕೈಮಾಡಿ ನಿಂದ್ರಸ್ತದಿ. ನಿನ್ಗೊಯ್ದು ಪಂಚಾತಿಗೆ ಬಿಗಸಂದ್ಯಾ. ಅಂದ್ರ ಆವಾಗ ದಾರಿಮ್ಯಾಲ ಬರ್ತಿದಿ. ಹೋಗಾ ಹೆಂಗ್ಸಿನ ನೋಡಿದ್ರ ನಿನಗೇನ ಬರ್ತದ ಕಳಗೇಡಿ. ಕೈಮಾಡಿ ನಿಂದ್ರಸ್ತಾನಿವ ಮಾನಗೇಡಿ. ಸರಿ ಆಚಾಕ. (ಹೋಗ ಹತ್ತುವಳು. ಅಡ್ಡಾಗುವನು.) ಯಾರಲಾ ಫಕೀರಾ, ನನಗೆ ದಾರಿ ಬಿಡಾಂಗಿಲ್ಲಾ?

ಸಿದ್ದಪ್ಪ– (ಸಣ್ಣ ಧ್ವನಿಯಿಂದ) ಇಲ್ಲಿಂದ ನಮ್ಮ ಸಭಾ ಮಂಟಪಕ್ಕೆ ಟಿಕೆಟ ಏನ ತೊಗತಿರ್ರಿ?

ಸಿದ್ದಿ– ಅಯ್ಯಯ್ಯ ಇವ್ನ ಹೆಣಾ ಚಂದಮಾಡ್ಲಿ. ನಸ್ತಿಕೆಟ ಕೇಳತಾನಲ್ಲ ಇಂವಾ, ಏನ ಮಾಡ್ಲಂತೀನಿ. ಇಂವ್ಗ ಒಂದು ಕೈ ತೋರಿಸೆ ಬಿಡ್ತಿನಿ. (ಈರಗಚ್ಚಿ ಹಾಕುತ್ತ ತಿರುಗಿ ಅನ್ನುವಳು) ಅಯ್ಯ ನಿನ ಖಬರ ಗೇಡಿ. "ಖಬರಗೇಡಿ ಕೈಯಾಗ ಕಳಸ ಕೊಟ್ಟರ ಕಳ್ಸ ಒಯ್ದು ಕುಡ್ತ್ಯಾಗ ಇಟ್ಟಿತಂತ" ಮುದ್ಕ ಆದ್ರ ನಿನ್ನ ಬುದ್ಧಿ ಮೆಟ್ಟಿಗಿ ಕುಂದ್ರವಲ್ದ.

ಸಿದ್ದಪ್ಪ– ಏ ಸಿದ್ದಿ! ಹುಣಸಿ ಗಿಡ ಹಳಿದಾದ್ರ ಹುಳಿಯೇನಾದ್ರ ಕಡಿಮೆ ಯಾಗತೈತೇನು? ಅಲ್ಲ ಹುದಲಿ, ಎಷ್ಟನ ಅವಸರ್ಲಿ ಗಾಡಿ ಬಿಟ್ಟಿದ್ದೆಲ್ಲ; ಹವಾಖೋರಿಗಿ ಹೋಗಬೇಕಂತ ಮಾಡಿದೇನು?

ಸಿದ್ದಿ– ಏ ! ಏ ! ಯಾಕs ಎಷ್ಟ ಅವಸರ ಉಸಿರ ಬಿಡಲಾರದಂಗ ಒಂದೇಸವನ ಮಾತಾಡ್ತೆಲ್ಲ. ನಿನ ಗಂಟ್ಲsನ ಸೇವಬಾರ್ದs. ಅಲ್ಲಾ ಹವಾಖೋರಿಗಿ ಹೋಕ್ಕೆನಂತ ಕೇಳ್ತಿ. ಹೋದ್ರ ನನ್ನಳಕೊಂಡು ಕುಂದ್ರತಿ. ಅವ್ವ ಜಮನವ್ವ ಇವತ್ತು ದೇವರ ಪೂಜಾ ಮಾಡ್ತಾರಂತ. ಅದಕ್ ಜಲ್ದಿ ಬಾ ಅಂತ ಹೇಳಿದ್ರು, ಈಗ ಸದ್ಯಾ ಸಾವುಕಾರ ಮನಿಗಿ ಹೋಕ್ಕಿನಿ.

ಸಿದ್ದಪ್ಪ– (ಸ್ವಗತ) ಹಿಂಗs. ಹೋಳಿದಂಡಿಗೆಲ್ಲ ಅಡ್ಡಾಡಕ ಹೊಕ್ಕಾಳಂತ ತಿಳಿದಿದ್ದೆ. ನಡಿ ಹಂಗರ, ನಾನಷ್ಟು ತ್ವಾಟದಾಗ ಹೋಗಿ ಬರ್ತೀನಿ. ನೀ ಮನೀಗಿ ನಡಿ ಅಂದೆ.

ಸಿದ್ದಿ– ಅಲ್ಲ ನನ್ನ ರಾಜ, ಉದ್ದನ ಚೋಣ್ಣಾ ಹಾಕೊಂಡು ಮೊಳ್ಕೈತನ ಸಾಲಗುಂಡಿ ಅಂಗಿತೊಟಗೊಂಡು ಕೈಯಾಗ ಸಣ್ಣದ ಡಬ್ಬಿ ಕಟ್ಕೊಂಡ ಬರ್ತಾನಲ್ಲ ಅಂವ ಯಾರು? ಗಂಡ್ಸರ್ಯಾರಿಲ್ಲದ ಮನ್ಯಾಗ ಬಂದ್ರ ಮನಿ ಮರ್ಯಾದೆ ಹ್ಯಾಂಗ ಉಳಿತೈತಿ?

ಸಿದ್ದಪ್ಪ– ಈಗ ಆ ಮನ್ಯಾಗ ಏನ ಉಳದೈತಿ; ಹಳೆ ಹುಣಿಚಿ ಹಣ್ಣು. ಚಂದ್ರಧರಪ್ಪನವರ್ದು ಕಾಣಲಾರ್ದ ಕಣ್ಣು. ಅಂದಲ್ಲೇ ಪಿಪಣಿ ತೆಗೆದ ಸಾಪಾಗಿ ತಿರುಗು ಕುಲಗೇಡಿ ಆ ಬ್ಯಾಡನ ಬಲ್ಯಾಗ ಬಿದ್ದೈತೆ ಹೆಣ್ಣು; ಅದ್ಕರ ನಾವೇನ್ಮಾಡಬೇಕು ಮಣ್ಣು. ನೀನು ಬಲು ಜ್ವಾಕಿ ಸಿದ್ದಿ ಜ್ಯೋಲ್ಹೋಗಿ ಬಿದ್ದಿ !

ಸಿದ್ದಿ– ಅಯ್ಯ ಜ್ಯೋಲ್ಹೋಗಿ ಬೀಳಾಕ ನನಗಿಲ್ಲೇನ ಬುದ್ಧಿ. ಅಲ್ಲ, ನನ್ನ ಧೊರಿ ಜರಾ ಸಮೀಪಕ್ಕೆ ಬರ್ರಿ...ಕಿವಿ ಮುಂದ್ಮಾಡ್ರಿ.

ಸಿದ್ದಪ್ಪ– ಅದೇನಿರುವದು ಒಂದು ಬಿಡದೆ ಹೇಳುವಂತವರಾಗಿರಿ. (ಹಾರಿ ಸೀರೆ ಸೆರಗು ಹಿಡಿಯುವನು.)

ಸಿದ್ದಿ– ಅಯ್ಯಯ್ಯ ಹಿಂಗ್ಯಾಕ ಹಿಡ್ತಿ ಸೆರಗ. ಬೈಲಾಟ ಹೂಡ್ದೇನ ದಾರ್‍ಯಾಗ ಎಷ್ಟಾದರೂ ಬುದ್ಧಿ ಬರಲಿಲ್ಲ ನಿನ್ತೆಲ್ಯಾಗ. ಬಿಡು ನನ ಸೆರಗ, ಹೋಗ ನೀ ತ್ವಾಟದಾಗ.

ಸಿದ್ದಪ್ಪ– ಮತ್ತೇನ ಹೇಳ್ತಿನಂದೆಲ್ಲ ಈಗ?

ಸಿದ್ದಿ– ಬಳಿಗಾರ ಬಂದಾನ ಊರಾಗ, ಬಳಿ ಕೊಟ್ಸಂದೆ ಕೈಯಾಗ.

ಸಿದ್ದಪ್ಪ– ರೊಕ್ಕ ಬೇಕಲ್ಲ ಕೈಯಾಗ; ಅದಾವೇನು ಕೊಟು ಮನ್ಯಾಗ? ನನ್ನಲ್ಲಿ ಇಲ್ಲ ಕಿಸೇದಾಗ.

ಸಿದ್ದಿ– ಇಲ್ಲಾಂದ್ರ ಬೋಳ್ಗೈ ಮಾಡಕೊಂಡು ಮೆರ್ತೀದಿ ಊರಾಗ; ಅಲ್ಲಾ ನನ್ನ ಚಂದ್ರಾಮ, ಮಾಡ್ಕೊಂಡ ಹೆಣ್ತಿಗಿ ಬಳಿ ತೊಡ್ಸಂದ್ರ ಎಷ್ಟ ಬಂತಲ್ಲ [ತಿವಿದು] ಶರ್ಮ

ಸಿದ್ದಪ್ಪ– (ಸ್ವಗತ) ಐತ ನನ್ನ ಕರ್ಮ. ಏ ಸಿದ್ದಿ ಶರ್ಮ ಗಿರ್ಮ ಅಂದಿ ಅಂದ್ರ ಸುಲ್ದೇನ ನಿನ ಮೈಯಾನ ಚರ್ಮ.

ಸಿದ್ದಿ– ಅಲ್ಲ; ಬಳಿ ತೊಡ್ಸ ಅಂದ್ರ ಎಷ್ಟಾತಲ್ಲ ನಿನ್ತೆಲ್ಗಿ ಗರ್ಮ. ನೀ ಏನ ಸುಲಿತಿದಿ ನನ್ಮೈಯಾಗನ ಚರ್ಮ, ಗೊತ್ತಾಗೈತೇಳ ನಿನ ಮಾತಿನ ಮರ್ಮ, ಬಿಡ ನನ ತೌರ್ಮನೀಗಿ ಹೋಗಿ ತೊಟ್ಕೊಂಡ ಬರ್ತೀನಿ.

ಸಿದ್ದಪ್ಪ– ಅಲಾ ಅವಳಾ, ಈಗ ಬ್ಯಾಡಂತ ಹೇಳ್ತೀನಿ. ತವರಮನ್ಗಿ ಹೋಗಿ ನನ್ಮಾನ ಕಳಿಬೇಕಂತ ಮಾಡಿದಿ ನೀ. ಆ ಏ ಚಿಮಣಿ ಬಳಿ ತೊಟ್ಕೊಂಡು ಮೆರಿಬೇಕಂತ ಮಾಡ್ಯಾಳ ರಮಣಿ, ನಡಿ ಮನ್ಗಿ ನಾನೆಲ್ಲ ತೊಡ್ಸತೀನಿ.

ಸಿದ್ದಿ– ಏ ಇವತ್ತ ದೇವರಪೂಜೆ ಮುಗಿಸಿಕೊಂಡು ಧಣೇರ ಯಾ ಊರಿಗೆ ಹೊಕ್ಕಾರಂತಲ್ಲ? ನಡಿ ಹಂಗಾರ ಲಗೂನ.

ಸಿದ್ದಪ್ಪ– ಬಂದ್ನೆಡಿ; ನಾನು ಗುರುಗಳನ್ನು ಕರಕೊಂಡ ಲಗೂನ ಬರ್ತಿನಿ ಧಣೇರ ಕಬಾಸ್ತಿರಬೇಕು.

(ಹೋಗುವರು)

೪ನೆಯ ಪ್ರವೇಶ

ಬಳಗಾರ– ಬಳಿ ಬೇಕೇನ್ರಿ ಬಳಿ! ಸುರಗಿ ಬಳಿ, ಕರ್ಪೂರ ಬಳಿ, ಬಳಿ ಬೇಕೇನ್ರಿ ಬಳಿ! ಇನ್ನೂ ಹೊಸ ಹೊಸ ಪ್ಯಾಶನ್ ಬಳಿ, ನರ್ಗಿಸ್ಸ ಬಳಿ, ಸುರಯ್ಯಾ ಬಳಿ. ಇದೇನಪ್ಪಾ ಬಳಿ ಯಾಪಾರ್ಕ ಯಾರು ಬರ್ಲಾರದಂಗ ಆಯ್ತಲ್ಲ. (ಎದುರಿಗೆ ಸಿದ್ದಿ ಬರುವಳು.) ಬಳಿ ಬೇಕೇನ್ರಿ ಬಳಿ, ಸೋಯಿಂದ ತೊಡಸ್ತಿನಿ, ಛಲೋ ಇಡ್ತೇನಿ.

ಸಿದ್ದಿ– ಈಗ ಸದ್ಯ ದವತಿ ಬಹಳ ಐತಿ ಹೊಳ್ಳಿ ಬಾಪ್ಪಾ.

ಬಳಗಾರ– ಹಿಂಗ್ಯಾಕ ಮಾಡ್ತೀರಿ. ಜರಾ ನೋಡ್ಯಾರ ನೋಡ್ರಿ. ಇವು ವೈಜಂತಿಮಾಲಾ ಟೈಪ, ಇವು ಬೇಬಿನಂದಾ ಟೈಪ. ಇದು ನೋಡ್ರಿ ಆಸ್ಕಪಂಜೆ ಆಶಾಫಾರೇಕ ಟೈಪ.

ಸಿದ್ದಿ– ಯಾ ಫಾರೇಕ ತಕೊಂಡು ನಾವೇನ್ಮಾಡೋನ. ನಮ್ಗ ಬೇಕಾದ್ದು ನಮಗೆ, ಅವರಿಗಿ ಬೇಕಾದದ್ದು ಅವರಿಗಿ. ಬಳಿ ಛಲೋ ಅದಾವೇನಪ್ಪಾ? ಯಾ ಊರವ್ನಪಾ ನೀನು. (ದಿಟ್ಟಿಸಿ ನೋಡಿ) ಇಂವ ನಮ್ಮೂರಿನವನ ಇದ್ದಾಂಗ ಕಾಣಸ್ತಾನ, ಯಾ ಊರಪಾ ನಿಂದು?

ಬಳಗಾರ– ರಸ್ತಾಪೂರ ನೋಡವ್ವಾ ನಂದು. ಈಗ್ಯಾಕ ಗುರ್ತು ಹಿಡಿದಿಯವ್ವಾ.

ಸಿದ್ದಿ– ಅಯ್ಯ ಇಂವ ನಮ್ಮೂರ ಬಳಗಾರ ಭರಮಣ್ಣಾ. ಈಗ ಬಳಿ ವ್ಯಾಪಾರ ಮಾಡ್ತೇನಣ್ಣಾ? ದೌಡ ಹಿಡಿಲಿಲ್ಲಪ್ಪಾ ಖೂನಾ, ಹೋಗೋನ ನಡೆಪ್ಪಾ ಮನೀಗಿ ಲಗೂನ.

ಬಳಗಾರ– ಮನಿಗಿ ಬಂದ್ರ ಹ್ಯಾಂಗವಾ ! ಊರಾಗ ಹೋಗಿ ಬಳಿ ಯಾಪಾರ

ಮಾಡೂನ. (ಸ್ವ) (ಇವಳಿಗಿ ದಾರಿ ಅಡ್ಡ ಹಿಡ್ದೂನ) ಏನವಾ ತಂಗಿ? ನಾಳೆ ಹೊಸ್ತಿಲ ಹುಣ್ಣಿವಿಗೆ ಐತಲ್ಲವ್ವ ದುರ್ಗಮ್ಮನ ಜಾತ್ರಿ, ಅದ್ಕ ನಿಮ್ಮವ್ವ ಕರಕೊಂಡು ಬಾ ಅಂತ ಹೇಳ್ಯಾಳ ಖಾತ್ರಿ ನಡೆವಾ ಹೋಗೂನು ಇವತ್ತ ರಾತ್ರಿ

ಸಿದ್ದಿ– ಅಯ್ಯ ಯಾಕ ಅಣ್ಣಾ ರಾತ್ರಿಗಿ ಯಾಕ ಹೋಗೋನ? ಹೋಗತಿದ್ರ ನನ್ನ ಗಂಡಗ ಕೇಳೋನ. ಬ್ಯಾಡಂದ್ರ ಬಿಡೂನ. ನನ್ನ ಗಂಡ ಅಂದ್ರ ತಿಳಿದಿನಾ ದೇವರ ಸಮಾನ.

ಸಿದ್ದಪ್ಪ– (ಸಿದ್ದಪ್ಪ ಒಂದು ಬದಿಗೆ ಸ್ವಗತ) ಅಲಾ ಇವಳ ಗಾಲಾಗಂಗಿ, ಹ್ಯಾಂಗ ನಿಂತಾಳ ನೋಡ್ರಿ ಪಂಚರಂಗಿ. (ಹತ್ತಿರ ಬಂದು) "ಮುಂದು ನೋಡಿ ಮಾಡ್ಕೊಂದ ತಿನ್ನಾ ಮಮ್ಮೊಗಳಂದ್ರ, ಹಿಂದು ಜೋತಾಡುವದು ಏನು ಅಂತಿತ್ತಂತ" ಏ ಹ್ಯಾಗಿ ನಡಿ ಮನ್ನಿ. (ಬಳಗಾರನಿಗೆ ನೋಡಿ ಇಂವಾ ಯಾರಪ ಹ್ಯಾಂಗ ಬಿಟ್ಟಾನಲ್ಲ ಕರಾಪ, ಎಲ್ಲಿಂದೋ ಬಂದಾಂಗ ಕಾಣಸ್ತಾನ ಘೂಪ, ಮಾತಾಡ್ದೂನ. (ಪ್ರ) ಯಾ ಉರಪಾ

ಸಿದ್ದಿ– ಆಂ ಅವಂದೇನ!

ಸಿದ್ದಪ್ಪ– (ಅಷ್ಟಕ ತಡದು) ನಿನ್ಗಲ್ಲ ಕೇಳಿದ್ದು ಅಂವಂದೇನಂತ ಹೇಳಾಕ ಬಂದಾಳ ಅಡ್ಡಡ್ಡ ಗೊಡ್ಡೆಮ್ಮಿ ಬಂದಾಂಗ. ಯಾ ಊರಪ ಬಳಿಗಾರ?

ಬಳಗಾರ– ರಸ್ತಾಪೂರ ನೋಡಪ ನಮ್ಮೂರ ಹೆಸರು.

ಸಿದ್ದಪ್ಪ– (ಸ್ವಗತ) ಅಲೆಲೆ ಅಂದಲ್ಲೆ ಹತ್ಯಾದೋಪ ಹಸಿಗಸಿ ಒಳ್ಳೇ ಜೋರ. (ಪ್ರ) ಇಕಿ ನಿಮ್ಗ ಆಗಬೇಕೇನ್ರಿ ಜರಾ?

ಸಿದ್ದಿ– ಅಯ್ಯಾ ನನ ದೇವರ, ಹ್ಯಾಂಗ ಕೇಳ್ತೆಲ್ಲ ಹಜೂರ, ಇಂವ ನಮ್ಮ ದೊಡ್ಡಪ್ಪನ ಮಗ, ಈಗ ಮಾಡ್ತಾನ ಬಳಿ ವ್ಯಾಪಾರ.

ಸಿದ್ದಪ್ಪ– (ಸ್ವಗತ) ಯಾರಿಗಿ ಗೊತ್ತು ಎಲ್ಲಿ ಮಾಡಾಕ ಬಂದಾನ ನಿನ್ನ ಯಾಪಾರ. (ಪ್ರ.) ನಡಿ ಹಂಗರ ಬೀಗ ಬಂದಾನ ಹೊಸದಾಗ, ಕರಿಗಡ್ಬ ಮಾಡು ಒಳ್ಳೇ. ಮಜೇದಾಗ, ನಡೆವಾ ಬೀಗ, ನಾನು ಬರ್ತೀನಿ ಒಂದೆರಡು ತಾಸಿನಾಗ.

ಬಳಗಾರ– ನಾನೂ ಊರಾಗ ಹೋಗಿ ಬರ್ತೀನವ ತಂಗಿ.

ಸಿದ್ದಪ್ಪ– (ಸ್ವಗತ) ಹೌದು ಹೋಗಲೆ ಇಂಗ ತಿಂದ ಮಂಗ್ಯಾ.

[ಬಳಗಾರ ಹೋಗುವನು]

[ಜಯ ಓಡಿ ಬರುವನು]

ಜಯ– ಸಿದ್ದಪ್ಪಾ ಅವ್ವಾ ಅಪ್ಪಾ ನಿನಗೆ ಬೇಗನೆ ಕರಕೊಂಡು ಬಾ ಎಂದು ಹೇಳಿದ್ದಾರೆ. ಏನಮ್ಮಾ ಸಿದ್ದಮ್ಮಾ? ನೀನು ಇಲ್ಲೇ ನಿಂತಿರುವಿ; ಅವ್ವನ ಮುಂದೆ ಎಲ್ಲಾ ಹೇಳ್ತಿನಿ.

ಸಿದ್ದಪ್ಪ– (ಎತ್ತಿಕೊಂಡು) ಓಡಿ ಬಂದು ದಮ್ಮ ಹತ್ಯಾದೊ ಮಾರಾಯ ! ಜರಾ ಮೆಲ್ಲಾಕಸನ ಮಾತಾಡು; ಅಲ್ಲಪಾ ಜಯಣ್ಣ ಅವ್ವನ ಮುಂದೆ ಏನಂತ ಹೇಳ್ತಿ?

ಜಯ– ಅವ್ವಾ ಇಬ್ಬರೂ ಕೂಡಿ ಗೋಲಿಗುಂಡು ಆಡುತ್ತಿದ್ದರಂತ ಹೇಳ್ತಿನಿ.

ಸಿದ್ದಪ್ಪ– ಬೇಸಾತೆಪೊ ನಡಿ ಹಂಗರ. (ಸಿದ್ದಿ ಕಡೆ ನೋಡಿ) ಏ ನಡಿ ಮತ್ತೇನ ಮಾರಿ ನೋಡ್ತಿ.

ಸಿದ್ದಿ– ಇಲ್ಲ; ಮೊದಲ ನೀ ನಡಿ.

ಸಿದ್ದಪ್ಪ– ಮೊದಲ ನೀ ನಡಿ.

ಪದ [ಡಯಲಾಗ]

ಸಿದ್ದಪ್ಪ– ನಡಿ, ನಡಿ, ನಡಿ, ನೀ ಬಲುಬೇಗಾ । ಕಡುಬೆಡಗಿನ ನಾರಿ
ಬಿಡು ನೀ ದಾರಿ ತಡಮಾಡದೆ ಹೊಡಿ ನೀ ಗಾಡಿ ॥

ಸಿದ್ದಿ– ನಡಿ, ನಡಿ, ನಡಿ, ನೀ ನನ್ನ ದೊರೆಯೇಽಽ ।
ಕಡು ಬೆಡಗಿನ ಜಾಣ ।
ಬಿಡು ನೀ ಮೌನ । ತಡಮಾಡದೆ ಹೊಡಿ ಬಾಣ ।

ಸಿದ್ದಪ್ಪ– ಓಽಽಽ ಓಽಽಽ ಓಽಽಽ ।

ಸಿದ್ದಿ– ಆಽಽಽ ಆಽಽಽ ಆಽಽಽ ।

ಸಿದ್ದಪ್ಪ– ಓ ನೀಲ ಗಗನದ ರಾಣಿ ।
ಬಲು ಮೋಜಿನ ನಾರಿ ಫಣಿವೇಣಿ ।

ಸಿದ್ದಿ– ಓ ನಲಿಯುವ ಬಾ ತನ್ನ ಧೊರಿ ।
ಕಲಿ ನಿನಗ್ಯಾರಿಲ್ಲ ಇಲ್ಲಿ ಸಂ ॥

ಇಬ್ಬರೂ– ಆನಂದದಿಂದ ಅತಿ ಮುದದಿಂದ
ನಲಿಯುವ ಬಾ ಅತಿ ಚಂದಾ ॥

(ಹೋಗುವರು)

===***=====***====

೨ನೆಯ ಅಂಕು

(ಪ್ಲಾಟ ಮನೆಯ ದೃಶ್ಯ)

(ಈಶ್ವರ ಮೂರ್ತಿ ಪೂಜೆ, ಗುರುಗಳಾದ ನೀಲಕಂಠ ಸ್ವಾಮಿಗಳು
ಚಂದ್ರಧರ, ಜಮುನಾ, ಜಯ, ವಿಜಯ, ಸಿದ್ದಪ್ಪ ಸಿದ್ಧಿ, ಕಮಲವ್ವ, ಶಾಂತಾ)

॥ ಪದ ॥

ಜಮುನಾ– ನಮೋ ನಮೋ ದೇವಹರ । ಸೋಮಶೇಖರಾ ॥
ಪ್ರೇಮದಿಂದ ಪಾಲಿಸೆಮ್ಮಾ । ಗೌರಿ ಪ್ರಿಯಕರಾ ॥
ನಂಬಿದವರ ನೊಂದ ನೊಂದ ಜನರ । ಸಲಹು ಶಂಕರಾ ॥
ಕುಂದು ಕೊರತೆ ತೊಂದರೆಗಳು । ತೊಲಗಿಸು ದೂರಾ ।
ಮಂದರೋದ್ಧಾರ । ನತಜನ ಮಂದಾರ ॥

ಹೇ ಅನಾಥ ರಕ್ಷಕಾ ! ದೀನ ಬಂಧು !! ಚರ್ಮಾಂಬರ ಗೌರೀ ಶಂಕರ !!!.....ಭಕ್ತಿಯ ಮಹಾ ಬೆಳಕಿನಲ್ಲಿ "ಲಿಂಗ ಶರಣ ಸತಿ" ಎಂದು ಭಾವಿಸಿದ ಶಿವಶರಣೆ ನಂಬೆಕ್ಕನನ್ನು ಕಾಪಾಡಿದ ಕರುಣಾ ನಿಧಿಯೇ, ರಾವಣನ ತಪೋನಿಧಿಗೆ ಮನಸೋತು ಆತ್ಮಲಿಂಗವನಿತ್ತ ಶಶಾಂಕಧಾರಿಯೇ, ಭಕ್ತ ಮಾರ್ಕಂಡೇಯನ ಅಘೋರ ಭಕ್ತಿಗೆ ಮೆಚ್ಚಿ ಚಿರಂಜೀವಿಯಾಗೆಂದು ಹರಿಸಿದ ತ್ರಿಶೂಲ ಧಾರಿಯೇ ಈ ಮಾನಿನಿಯ ಮಾಂಗಲ್ಯವನ್ನು ಅಪಾರವಾದ ಕಡಲೊಳಗೆ ಕರುಣೆಯಿಂ ಕರಪಿಡಿದು ಕರುಣಿಸೈ. ಈ ಬಾಲೆಯ ಭವಿಷ್ಯ ಜೀವನ್ನವನ್ನುದ್ಧರಿಸಿದ ಕಾರುಣ್ಯ ಕರುಣಾನಿಧಿಯೇ ಕರಮುಗಿದು ಮೊರಮಡುವೆ, ನಿನ್ನ ಚರಣಾರವಿಂದಗಳಲ್ಲಿ ಅತಿ ದೈನ್ಯದಿಂದ ಬೇಡಿಕೊಳ್ಳುವೆ. ಹೇ ತಂದೆ! ಕರುಣಾಮಯಿ! ನನ್ನ ಜೀವನದಾರಭ್ಯ ಅವಿಚ್ಛಿನ್ನವಾಗಿ "ಪತಿಯೇ ಪರದೈವ" ಎಂದು ನಂಬಿದ ನನ್ನನ್ನು ಇಂಬುಗೊಟ್ಟು ಕಾಪಾಡು.

[ಗುರುವಿಗೆ ನಮಸ್ಕರಿಸುವಳು. ನಂತರ ಗಂಡನಿಗೆ ಇವರಿಗೆ
ನಮಸ್ಕಾರ ಮಾಡುವಷ್ಟರಲ್ಲಿ ಕಮಲಾ ಶಾಂತಾ
ಸಿಟ್ಟಿನಿಂದ ಹೋಗುವರು.]

ಗುರು– ಸುಮಂಗಲೀ ಭವ ! ಧನ್ಯ ಸಾಧ್ವಿ ! ನೀ ಧನ್ಯ. ಮಹಾ ಸದ್ಗುಣಿಯಾಗಿ, ಪತಿವೃತಾ ಶಿರೋಮಣಿಯಾಗಿ, ಜಗ್ತಿನ ಉತ್ತುಂಗ ವೈಖರಿಯ ಹೊನ್ನ ಕಳಸವಾಗಿ, ಪತಿಯ ನಿಜ ಪತ್ನಿಯಾಗಿ, ಆಗಸದ ಧೃವತಾರೆಯಂತೆ ಅಜರಾಮರವಾಗಿ, ಬಾಳಿ, ಬೆಳಗಿ ಭಾರತದ ನಾರಿಯಾಗಿ ಕುಲವನುದ್ಧರಿಸು ತಾಯಿ.

[ಜಯ ವಿಜಯರು ನಮಸ್ಕರಿಸುವರು]

ಮಕ್ಕಳಿರಾ, ಕನ್ನಡಮ್ಮನ ಆಕಳಂಕ ಕೀರ್ತಿಗೆ ನಿರರ್ಗಳವಾಗಿ ದುಡಿದು ಬೆವರಿಳಿಸಿ ತಾಯಿಯ ನಿಜಬಾವುಟವನ್ನು ಗಗನ ಚುಂಬಿತವಾಗಿ ಹಾರಿಸಿ ಬೆಳಗಿಸಿರಿ. ಕನ್ನಡದ ಕಡುಗಲಿಗಳಾಗಿ, ಕೆಚ್ಚೆದೆಯ ವೀರರಾಗಿ, ವೀರ ಮಾತೆಯ ಬಂಟರಾಗಿ, ನವಸಂದೇಶಗಳನ್ನು ಭಾರತದ ಮೂಲೆ ಮೂಲೆಗಳಲ್ಲಿ ಹರಡಿಸಿ, ಜನರ ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸಲು, ವರ ಅರುಣನನ್ನು ಸುಸ್ವಾಗತಿಸುವ ಮಕ್ಕಳಾಗಿರಿ.

[ಚಂದ್ರಧರ ನಮಸ್ಕರಿಸುವನು]

ಚಂದ್ರಧರಾ! ನಿನ್ನ ಭಾಗ್ಯಕ್ಕೆ ಎಣೆಯುಂಟೇ? ನಿನ್ನ ನಿರ್ಮಲಾಂತಃಕರಣವಾದ ನಿನ್ನ ಹೃದಯದಲ್ಲಿ ನುಗ್ಗಿ ನೋಡಿದಂತೆ ಬೆಳಗುತಿದೆ ಜ್ಞಾನರತ್ನ, ಸುಮನಸರ ಪಂಕ್ತಿಯಾಳು ತೋಳ್ಬಲದಿಂದ ಬೆಳೆದು ಜೀವನ ಜ್ಯೋತಿ ಬೆಳಗಿಸಿದ ಮಹಾ ಸಂಪನ್ನ; ಲೋಕ ಹಿತದಲ್ಲಿ ಪವಿತ್ರ ಸದ್ಭಾವನೆಗಳು ಸದ್ವಿಚಾರಗಳು ಹುಟ್ಟಿಸಿದ ಕೃತಜ್ಞ, ವೀರ ಭಾರತಮಾತೆಯ ಮಮತೆಯ ಕರೆಗೆ ಓಗೊಟ್ಟು ವರ ಪ್ರಸಾದಿತನಾಗಿ, ಔದಾರ್ಯ ಭ್ರಾತೃವಾತ್ಸಲ್ಯದಿಂದ ಕೀರ್ತಿ ಅಪಕೀರ್ತಿಗಳೆಣಿಸದೇ ನುಗ್ಗಿ ಜ್ಞಾನದ ಜ್ಯೋತಿಯಾಗು.

ಸಿದ್ದಪ್ಪ– ನೀನು ಗಸಾನs ಸಣಮಾಡ ಹ್ಯಾಗಿ.

ಸಿದ್ದಿ– ಏ ಹಗಲೆಲ್ಲ ಮಂದ್ಯಾಗ ಹೆಣ್ತಿಗಿ ಹ್ಯಾಗಿ ಹ್ಯಾಗಿ ಅಂದ್ರ ಹ್ಯಾಂಗ ಗೂಗಿ, ಕೇಳ್ರಿಯವ್ವಾ ಹೋಗಿ.

ಜಮುನಾ– ಹೀಗೇಕೆ ಮಾಡುವಿ ಸಿದ್ದಪ್ಪಾ?

ಸಿದ್ದಪ್ಪ– ಇಲ್ರಿ ಯವ್ವಾ ತಾನss ಅಡ್ಡಿ ಮಾಡ್ತಾಳೆ ನೋಡ್ರಿ, ನಡಿ ಮತ್ತೇನ ಮಾರಿ ನೋಡ್ತಿ ಮಿಕಿ ಮಿಕಿ.

[ಇಬ್ಬರು ನಮಸ್ಕರಿಸುವರು]

ಗುರು– ನೀವಿಬ್ಬರೂ ಆದರ್ಶ ದಂಪತಿಗಳಾಗಿ ಸುಖದಿಂದ ಬಾಳಿರಿ.

[ತೆರೆಯು ಇಳಿಯುವದು]

೨ನೆಯ ಪ್ರವೇಶ

[ದೃಶ್ಯ : ಮನೆಯ ಸೀನು]

ಶಾಂತಾ– ನೋಡಿದೇನಮ್ಮಾ! ನಿನ್ನೆ ನಮಗಾದ ಶಿವಪೂಜೆಯಲ್ಲಿ ಅಪಮಾನ; ಮನೆಯ ಯಜಮಾನಿಯಾದ ನಿನಗೆ ಕೊಡಲಿಲ್ಲ ಮಾನ, ಕಣ್ಣಿದ್ದು ಕುರುಡಿಯಾಗಿ ಕುಳಿತಿದ್ದೆ ನೀನು ಆ ದಿನ, ಸಹಿಸದಾಗಿದೆ ಎನ್ನ ಮನ, ಮನೆಯಲ್ಲಿ ಬೆಳೆದು ನಿಂತ ನವಯೌವ್ವನದ ತಂಗಿಯನ್ನು ನೋಡದೆ ಸತಿಯೊಡನೆ ಸರಸವಾಡಿ ಅಜ್ಞಾನದ ಮಡುವಿನಲ್ಲಿ ಮುಳುಗಿದೆ. ಅವನ ಮನ, ಗಂಡನನ್ನು ತನ್ನ ಮಾಯಾ ಜಾಲದಲ್ಲಿ ಹಾಕಿಕೊಂಡಿರುವಳು ಆ ಜಮುನಾ. ಅವನಂತೂ ಮಾತೃ ಪ್ರೇಮದ ಹೃದಯವನ್ನರಿಯದೇ ಕಾಲ ಕಳೆಯುವ ಕುಲಹೀನ,

ಕಮಲಾ– ನಿಜ ಶಾಂತಾ ! ಇಂತಾಗಿರುವದು ಚಂದ್ರಧರನ ಮನಸ್ಸು. ನಮ್ಮವರನ್ನವರಾರನ್ನದೆ ಕಾಣತಿರುವನು ತನ್ನ ಕೃತಯುಗದ ಕನಸು, ಮಗನ ಬಾಳು ಬೀಳಾಗದೆ ನಡೆಯಲೆಂದು ಬಿಟ್ಟರೆ "ಮರಕ್ಕೆ ಕಟ್ಟಿದ ಉಯ್ಯಾಲೆಯಂತೆ" ತೂಗಾಡುತಿದೆ ಅವನ ಜೀವನದ ಹೆಬ್ಬೆಳಸು. ಜೀವನ ರಥಕ್ಕೆ ಕಡಿವಾಣ ಹಾಕಿದಾಗ ಹಾದಿಯ ಮೇಲೆ ಬರುವದು ಅವನ ದುರ್ನಡತೆಯ ಆಶಾಕಿರಣ, ಅವನು ನಿಜವಾಗಿಯೂ ಹೆಂಡತಿಯ ಮಾತು ಕೇಳುವ ಧುರೀಣ.

(ಶಾಂತಾ ಕಮಲ ಗುಜುಗುಜು ಮಾತನಾಡುವರು.)

ಸಿದ್ದಪ್ಪ– (ಸ್ವಗತ) ಯವ್ವಾ ಈ ಮಾತೇನಂದ್ರಿ ನಿಮ್ದುss ಖರೇ ಐತಿ ನೋಡ್ರಿ,

ಆದ್ರ... ಮಗಳ ಮಾತ ಕೇಳಿ ಆಗ್ತಿದಿ ಮಾನಗೇಡಿ. "ಮಾನವಂತ್ರು ಮಾನ್ಕ ಅಂಜಿದ್ರ ಮಾನ್ಗೇಡಿ ನನಗ ಅಂಜಿತಂತ" ಎಂಥಾ ಬಾಳೇವ ಹೋಗಿ ಹ್ಯಾಂಗಾಯ್ತಲ್ಲರಿ, ಎಂದ ತಮ್ಮಪ್ಪನ ಬಡ್ಗಿ ತನ್ನ ಕೈಯಾಗ ಬಂದೈತಿ, ಹಂಗ ಕರಿಸಿರಿ ಕರಿಪಿರಿ ನಡದೈತಿ, ನಾವೇನು ಮಾಡೂದೈತಿ, ಅವರ್ನ ಕಾಪಾಡುವದು ಮುಗಿಲ್‌ಮ್ಯಾಲಿನ ಮಾದೇವ್ನ ಕೂಡೈತಿ ಹೋಗೋನ ಇನ್ನ ಹೊತ್ತಾಕ್ಕಾಯಿತು,

(ಹೋಗುವನು)

ಶಾಂತಾ– ಅವ್ವ ನೀನು ಮಾತ್ರ ಅಣ್ಣನಿಗೆ ತನ್ನ ಹೆಂಡತಿಯಿಂದ ಬೇರ್ಪಡಿಸುವ ಪ್ರಯತ್ನ ಮಾಡಬೇಕು. ಮನೆಯ ಆಡಳಿತವನ್ನು ನಮ್ಮ ಕೈಯಲ್ಲಿ ತೆಗೆದುಕೊಳ್ಳಬೇಕು. ಅವರಿಗೆ ನಮ್ಮ ಕೈಯಿಂದ ಅನ್ನ ಎತ್ತಿ ಹಾಕುವಂತಾಗಬೇಕು. ಅಮ್ಮಾ ಆವಾಗ ನಮ್ಮ ಜೀವನದ ಹೊಂಬೆಳಕು ಕಾಣಬೇಕು. ಆದರೆ ಈ ಸಂಗತಿ ಯಾರಿಗೂ ತಿಳಿಯದಂತೆ ಗುಪ್ತವಾಗಿರಿಸಬೇಕು. ಅಮ್ಮಾ ಅದೋ ಅಣ್ಣನು ಬರುತ್ತಿರುವನು. ನಿನ್ನ ನಟನೆ ಮಾತ್ರ.........!

ಕಮಲಾ– ತಿಳಿಯಿತು ಬಿಡು; ನಿನಗೇಕೆ ಅದರ ಚಿಂತೆ. ಶಾಂತಾ ನೀನು ಒಳಗೆ ನಡೆ.

(ಶಾಂತಾ ಒಳಗೆ ಹೋಗುವಳು ಕಮಲಾ ಮೌನ ಧರಿಸುವಳು)

ಚಂದ್ರಧರ– (ಪ್ರವೇಶಿಸಿ) ಏಕೆ ಅಮ್ಮಾ ! ಮೌನದ ಬಿರುಗಾಳಿಗೆ ಸಿಲ್ಕಿ ಅದಾವ ಆಳವಾದ ವಿಚಾರಗಳ ತಾಕಲಾಟದಲ್ಲಿ ಕುಳಿತಿರುವೆ? "ಹಸಿದ ಮನುಷ್ಯ ಪರಿಪಕ್ವವಾದ ಫಲವನ್ನು ಕಂಡ ಕೂಡಲೇ ಅವನಿಗೆ ಆಶಾ ಹುಟ್ಟುವಂತೆ" ನನ್ನನ್ನು ಕಂಡಕೂಡಲೇ ಆನಂದ ಸಾಗರದಲ್ಲಿ ಮುಳುಗುತ್ತಿರುವ ನೀನಿಂದು ಭೋರ್ಗಲ್ಲಿನಂತೆ ಕುಳಿತಿರುವೆಯಲ್ಲಾ ! ಏಕಮ್ಮಾ ! ನನಗೇಕೋ ಅಸಮಂಜಸವಾಗಿದೆ.

ಕಮಲಾ– ನಮಗೆ ಸಮಂಜಸವಾದ ವಿಷಯ ನೀನಂತೂ ಮನೆಯಲ್ಲಿ ಇರುವದಿಲ್ಲ! (ಅಳುತ್ತ) ಮನಸ್ಸಿಗೆ ಬಂದಂತೆ ಮಾತಾಡುವ ಆಳು. ಕೋಲ್ಮಿಂಚಿನಂತೆ ಕುಣಿಯುವ ನಿನ್ನ ಹೆಂಡತಿಯಿಂದ ಅನಿಸಿಕೊಂಡು ಸಾಕು ಸಾಕಾಗಿ ಹೋಗಿದೆ. ಅಂದು ವೈಭವದಿಂದ ಕಾಲ ಕಳೆದು, ನಾನಿಂದು ಸ್ಮಶಾನ ಭೂಮಿಯಲ್ಲಿ ಅಲೆಯಬೇಕಾಗಿದೆ. ನಮ್ಮಯ

ಜೀವನ. ನಿನ್ನ ತಂಗಿಗಂತೂ ಸೇರದಾಗಿದೆ ಅವಳ ಮನ. ಚಂದ್ರಧರ ನೀನಂತೂ ಮಹಾ ಶಂಭುವಿನ ಹಾಗೆ ತಪಸ್ಸಿಗೆ ಕುಳಿತಿರೆ ನಾವು ಆರ ಆಶ್ರಯದಲ್ಲಿ ಬಾಳಬೇಕು.

ಚಂದ್ರಧರ– ಬಾಳಬೇಕು ಅಮ್ಮಾ! ಬಾಳಿ ಜಗತ್ತಿನ ತುತ್ತ ತುದಿಯ ಮೇಲೆ ಬಾಳ್ಗಡಲಿನ ಪತಾಕೆ ಹುಮ್ಮಸದಿಂದ ಹಾರಾಡುತಿದೆ. ಅದನ್ನು ತದೇಕ ದೃಷ್ಟಿಯಿಂದ ನೋಡಬೇಕು; ನೋಡಿ ನಡಿಯಬೇಕು.

ಕಮಲಾ– ಆ ಭಾಗ್ಯ ನಮಗುಂಟೇನಪ್ಪಾ! ಇಂದು ನೀನು ವಿಚಾರಿಸಿದರೆ ವಿಚಾರಿಸು ಇಲ್ಲವಾದರೆ ನಾವೇ ಮನೆ ಬಿಟ್ಟು ಹೋಗುತ್ತೇವೆ. (ಅಳುವಳು)

ಚಂದ್ರಧರ– (ಸ್ವಗತ) ಈ ವಿಷ ಬೀಜಂಕುರ ಹುಟ್ಟಲು ಕಾರಣವೇನಿರಬಹುದು. ಇರಲಿ ಅಮ್ಮಾ ! ನಾನೆಲ್ಲವನ್ನು ಹೇಳಿ ಸರಿಪಡಿಸುತ್ತೇನೆ. ನಡೆ ಅಮ್ಮಾ. [ಹೋಗುವಳು] [ಹೋದ ನಂತರ ಚಂದ್ರಧರನು ವಿರಾಮಾಸನದ ಮೇಲೆ ಕುಳಿತು] ಜಯಾ, ಜಯಾ.

ಜಯ– (ಡ್ರೇಸ್ಸಿನಲ್ಲಿ) ಏಕೆ ಅಪ್ಪಾ? ನಾನು ಶಾಲೆಗೆ ಹೋಗುತ್ತೇನೆ. ನನಗೇಕೆ ಕರದೆಯಪ್ಪಾ?

ಚಂದ್ರಧರ– ಮಗು ಗುರುಗಳು ಯಾವ ಪಾಠ ಹೇಳಿರುವರು" ಹೇಳು ನೋಡೋಣ.

ಜಯ– ಅಪ್ಪಾ ಗುರುಗಳು ಇಂದು ಅಣ್ಣನವರ ವಚನವನ್ನು ಹೇಳಿದ್ದಾರೆ.

ಚಂದ್ರಧರ– ಅಂ ಅಣ್ಣನವರ ವಚನ?

ಜಯ– ಹೌದು ಅಪ್ಪಾ! ಅಣ್ಣನವರ ವಚನ, ಹಾಡಲೇ?

ಚಂದ್ರಧರ– ಹಾಡು ನೋಡೋಣ.

[ರಾಗ–ಚಾಂದ] ॥ಪದ॥ [ತಾಳ–ತ್ರಿತಾಳ.]

ಜಯ– ಕಳಬೇಡ ಕೊಲಬೇಡ ।
ಹುಸಿಯ ನುಡಿಯಲು ಬೇಡ ।
ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ ।
ಇದೇ ಅಂತರಂಗ ಶುದ್ಧಿ ; ಇದೇ ಬಹಿರಂಗ ಶುದ್ಧಿ ।

ಇದೇ ನಮ್ಮ ಕೂಡಲಸಂಗಮನೊಲಿಸುವ ಪರಿ ॥

ಚಂದ್ರಧರ– ಆಹಾಹಾ! ಎಷ್ಟೊಂದು ಅರ್ಥಪೂರಿತವಾಗಿದೆ; ಅಣ್ಣನವರ ವಚನ.

ಜಯ– ಅಪ್ಪಾ! ಹೀಗೆಯೇ ಇರುವವು ಅಣ್ಣನವರ ಪ್ರತಿಯೊಂದು ವಚನಗಳ ಸಂಕಲನ.

ಸಿದ್ದಪ್ಪ– ನಿಮ್ಮ ಸಾಲಿಗುಡಿಗಿ ಕಳ್ಸಿ ಬರ್ತೀನಿ ಬರ್ರಿ ಬಡಾನ.

(ಜಯ ಸಿದ್ದಪ್ಪ ಹೋಗುವರು. ಚಂದ್ರಧರ ವಚನದಲ್ಲಿಯೇ ಮಗ್ನನಾಗಿ ಹಾಡುವನು. ಜಮುನೆಯು ಹಾಡು ಕೇಳುತ್ತ ಬಾಗಿಲಿನ ಬಳಿ ನಿಲ್ಲುತ್ತಾಳೆ. ಹಾಗೆಯೇ ಮಗ್ನಳಾಗುತ್ತಾಳೆ)

ಜಮುನಾ– ಅಣ್ಣನವರ ಅನುಭವಾಮೃತದಲ್ಲಿ ತಲ್ಲೀನವಾಗಿದೆ, ಇವರ ಮನ. ಎಚ್ಚರಿಸಲೇ ಎಚ್ಚರಿಸದಿರಲೇ. (ಗಡಿಯಾರದತ್ತ ನೋಡಿ ಇದೇನು? ಸತಿ–ಪತಿಗಳೆಂದ ಎರಡು ಮುಳ್ಳುಗಳು ಪ್ರೇಮದಿಂದಪ್ಪಿ ಯೋಗಾಸನದಿಂದೇಳುವ ಸೂಚನೆ ತೋರಿಸಿ, ಮುಂದಡಿ ಇಡಲನುವಾಗಿದೆ. ಪುರುಷ ಮುಳ್ಳು. ಟ್ರೇನಿನ (Train) ಟೈಮಾಯಿತು ಸ್ವಾಮಿ ಊಟಕ್ಕೆ. (ಹುಡುಗ ವಿಜಯನನ್ನು ತೊಟ್ಟಿಲದೊಳಗೆ ಹಾಕಿ ಸ್ವಾಮಿ ಊಟಕ್ಕೆ ವೇಳೆಯಾಯ್ತು ಏಳುತ್ತೀರಾ?

ಚಂದ್ರಧರ– (ಎಚ್ಚತ್ತು) ಆಂ ಜಮುನಾ ನೀನು ನನಗಾಗಿ ಬಹಳ ಹೊತ್ತು ಕಾದಂತೆ ಕಾಣುತ್ತದೆ.

ಜಮುನಾ– ಇಲ್ಲ ಸ್ವಾಮಿ; ನಾನು ಕೆಲ ಹೊತ್ತು ಅಣ್ಣನವರ ವಚನದಲ್ಲಿ ತಲ್ಲೀನಳಾಗಿದ್ದೆ.

ಚಂದ್ರಧರ– ನಡೆ ಜಮುನಾ ನಾನಿಂದು ಸಿಕಂದ್ರಾಬಾದಿಗೆ ಹೋಗಬೇಕಾಗಿದೆ; ಎಲ್ಲಾ ನನ್ನ ಬಟ್ಟೆಗಳನ್ನು ಸೂಟಕೇಸಿನಲ್ಲಿ ಹಾಕು.

ಜಮುನಾ– (ಒಳಗೆ ಹೋಗಿ ಸೂಟಕೇಸ ತಂದು) ತಾವು ಮಾತ್ರ ಬೇಗನೆ ಬರಬೇಕು; "ನೀಲಾಕಾಶದಿ ನಕ್ಷತ್ರಗಳೆಣಿಕೆ ಮಾಡಿದಂತೆ" ಬೇಸಿಗೆಯಲ್ಲಿ ವಸಂತ ಋತುವಿನ ಕಾಲಕ್ಷೇಪ ಮಾಡಿದಂತೆ" ಮಾಡಬೇಡಿ; ತಾವು ಮಾತ್ರ ಈ ಪ್ರಿಯತಮೆಯ ಆರ್ತಧ್ವನಿ ಕೇಳಿ ತೀವ್ರವೇ ಬರಬೇಕು.

ಸಿದ್ದಪ್ಪ– ಹೌದ್ರಿಯಪ್ಪ ! ಗಡಾನ ಬರಬೇಕು; ಯಾಕ ನನ ಮನಸ್ಸು ಬ್ಯಾಡಂತ ಅನಸ್ತೈತ್ರಿಯಪ್ಪಾ ಯವ್ವಾ ವಿಜಯಣ್ಣಾ ಅಳತಾನ ಎತಿಗೊಳ್ರಿ.

ಚಂದ್ರಧರ– (ತಾನೆ ಹೋಗಿ ಹುಡುಗನನ್ನು ಎತ್ತಿಕೊಂಡು ಬರುವನು.)

ಏಕೋ ತುಂಟಾ ಅಳುವೆ ಏಕೆ? ನಿನಗೆ ಬರುವಾಗ ಸಾಯಕಲ್ ತೆಗೆದುಕೊಂಡು ಬರುತ್ತೇನೆ. (ಜಯ ಓಡಿ ಬರುವನು.)

ಜಯ– ಅಮ್ಮಾ ಅಪ್ಪನ ಸಂಗಡ ನಾನೂ ಹೋಗುತ್ತೇನೆ.

ಜಮುನಾ– ಬೇಡಪ್ಪಾ ಬೇಡಾ, ಅವರು ನಾಳೆಯೇ ಬರುತ್ತಾರೆ. ಏನ್ರಿ ನೀವು ಬರುವಾಗ ಜಯನಿಗೆ ಏನು ತರುತ್ತೀರಿ.

ಚಂದ್ರಧರ– ಏನು ತರಲಿ ಜಯ ಗೊಂಬೆ ತರಲೇ?

ಜಯ– ಒಲ್ಲೆನಪ್ಪಾ ಅವು ಹೆಣ್ಣು ಮಕ್ಕಳ ಸಲುವಾಗಿ. ಸ್ಕೂಟರ್ ತೆಗೆದುಕೊಂಡು ಬಾ.

ಸಿದ್ದಪ್ಪ– ಸುಕ್ಕಾ ಅಂದ್ರ ನೀಚ ಬದಕಿಗಿ ಅಂತಾರಿ ಯಪ್ಪಾ. (ಎಲ್ಲರೂ ನಗುವರು.) ಪಾಟಿ ಪುಸ್ತಕ ತೊಂಬಾಂತ ಹೇಳ್ರಿ.

ಜಯ– ಹೌದು ಅಪ್ಪಾ ! ಸಿದ್ದಪ್ಪಾ ಹೇಳಿದಂತೆ ನನಗೆ ಒಂದು ಪುಸ್ತಕ ತೆಗೆದುಕೊಂಡು ಬಾ.

ಜಮುನಾ– ಯಾವ ಪುಸ್ತಕ ಮಗು?

ಜಯ– ಮಹಾತ್ಮಾ ಗಾಂಧಿಯವರು ಬರೆದ "ಸತ್ಯಾಗ್ರಹ".

ಚಂದ್ರಧರ– ನೋಡಿದೆಯಾ ಜಮುನಾ ! ಇಷ್ಟು ಎಳೆತನದಲ್ಲಿಯೇ ಮಹಾತ್ಮರ ದೂತನಾದ; ನಮ್ಮ ಕುಲಕುಮಾರ.

ಜಮುನಾ– ರಕ್ತ ಒಂದಾಗಿರಲು, "ತಂದೆಯಂತೆ ಮಗ",

ಚಂದ್ರಧರ– ಜಮುನಾ, (ಕೈ ಹಿಡಿಯುವನು. ನಾಚಿ ತಲೆತಗ್ಗಿಸುವಳು) ನಿನಗೇನು ತರಬೇಕು.?

ಜಮುನಾ– ನನ್ನ ಸೌಭಾಗ್ಯವನ್ನು ಬೆಳಗಿಸಲು ದೇದೀಪ್ಯಮಾನವಾದ "ಕುಂಕುಮ" ಒಂದೇ ಸಾಕು.

ಚಂದ್ರಧರ– ಕ್ಷಣಾರ್ಧದಲ್ಲಿಯೇ ಅಳಕಿ ಹೋಗುವ ಕುಂಕುಮಕ್ಕೆ ಆಚ್ಛಾದನೆಯಿಂದ

ತೆಗೆದುಕೊಂಡು ಬಾ ಎಂದು ಹೇಳುತ್ತಿ; ಆದರೆ ನಿನ್ನ ಸೌಭಾಗ್ಯ ಪತಿ ನಾನಿರುವಾಗಲೂ ಮತ್ತೇಕೆ ಆ ಕುಂಕುಮ.

ಜಮುನಾ– ಸ್ವಾಮಿ! ಆ ಕುಂಕುಮದ ಮೆರಗು ಸ್ತ್ರೀ ಜೀವನವನ್ನು ಉದ್ಧಾರ ಮಾಡಿ ಹಣೆಯಲ್ಲಿ ತನ್ನ ಪ್ರಪಂಚರೂಪದೊಡನೆ ಇವಳೇ ಮುತ್ತೈದೆಯೆಂದು ತೋರಿಸುತ್ತದೆ. ಅಲ್ಲದೆ ಸ್ವಾಮಿ ತಾವು ಮಾತ್ರ ಬೇಗನೆ ಬರಬೇಕು.

ಚಂದ್ರಧರ– ಬರುತ್ತೇನೆ ನನ್ನರಗಿಳಿಯೇ ಬೇಗನೆ ಬರುತ್ತೇನೆ. ನೀನು ಮಾತ್ರ ಜಯ–ವಿಜಯರಿಬ್ಬರಿಗೂ ಯಾವ ತರದ ಕಷ್ಟಗಳು ಬಾರದಂತೆ ನೋಡಿಕೊಂಡು ಹೋಗಬೇಕು. ಜಮುನಾ, ಊರಿಗೆ ಹೋಗುವ ಮುನ್ನ ಗುರುಗಳ ದರ್ಶನವಾಗಿದ್ದರೆ ಚೆನ್ನಾಗಿತ್ತು.

ಗುರು– (ಪ್ರವೇಶಿಸಿ) ಇದೋ ಬಂದಿಹೆನು ಚಂದ್ರಧರ, ನೀನು ನಿಜವಾಗಿಯೂ ಮಾನವ ಅವತಾರದಲ್ಲಿ ಬಂದ ಸಾಕಾರ. ನಿನ್ನ ಉದಾರ ಹೃದಯದಲ್ಲಿ ಪ್ರೇಮದ ಜ್ಯೋತಿ ಬೆಳಗಲಿ, ಭಾರತ ಪುತ್ರ (ಜಮುನೆಯ ಕಡೆಗೆ ನೋಡಿ) ಪತಿಯೆಂಬ ವಾತ್ಸಲ್ಯತೆಯಿಂದ ತನ್ನದೊಂದು ಬಯಕೆ ಭಿಕ್ಷೆಯು ರೂಪವಾಗಿ ಕೇಳುವ ಹಂಬಲ ಹೊರ ಸೂಸುತ್ತದೆ. ಏಕಮ್ಮಾ ಜಮುನಾ? (ನಗುವರು) ಚಂದ್ರಧರಾ ಈ ಸಿದ್ಧತೆ ಎಲ್ಲಿಗೆ?

ಚಂದ್ರಧರ– ಗುರುದೇವಾ! ಈ ಸಿದ್ಧತೆ ಸಿಕಂದ್ರಾಬಾದಿಗೆ. ನೀವು ಆಗಾಗ್ಗೆ ಮನೆಯ ಕಡೆಗೆ ಬರುತ್ತಿರಬೇಕು. ನಾನು ಬರಬೇಕಾದರೆ ಸ್ವಲ್ಪ ದಿವಸಗಳು ತಗಲುತ್ತದೆ. ಅನುಗ್ರಹಿಸು ದೇವಾ.

(ನಮಸ್ಕರಿಸುವನು ತದನಂತರ ದೇವರ ಚಿತ್ರಕ್ಕೆ
ನಮಸ್ಕರಿಸುವಾಗ ದೀಪ ನಂದುವದು.)

ಜಮುನಾ– ಇದೇನು ಸ್ವಾಮಿ ಅಶುಭ.

ಚಂದ್ರಧರ– ಮುಂದಿನದು ಎತ್ತದಿರು ಜಮುನಾ, ಕೇವಲ ಮಾನವನಾ ಕಲ್ಪನಾ ಚಿತ್ರ, ಆ ಚಿತ್ರಕ್ಕೆ ಚಿತ್ತಗೊಡದಿರು ಮನದಿ.

ಗುರು– (ಸ್ವಗತ) ಇಂದೇಕೊ ಅಶುಭದ ಶಕುನಗಳು, ಅವರು ಕಲಿತವರು ಬೇರೆ, ನಮ್ಮ ಮೊಳಕೆ ನಾಟುವದಿಲ್ಲ ಇಲ್ಲಿ.

ಚಂದ್ರಧರ– ಸಿದ್ದಪ್ಪಾ ಬ್ಯಾಗ ತೆಗೆದುಕೊಂಡು ಸ್ಟೇಷನ್ನಿಗೆ ನಡೆ. (ಹೋಗುವನು.) ಬರುವೆ ಜಮುನಾ.

(ಚಂದ್ರಧರನು ಹೋಗುವಾಗ ಬೆಕ್ಕು ಬಲದಿಂದ ಎಡಕ್ಕೆ ಬರುವದು ಹಾಗೆ ಹೋಗುವನು.)

೩ನೆಯ ಪ್ರವೇಶ

(ದೃಶ್ಯ ಉಪವನ)

(ಶಾಂತಾ ಡ್ಯಾನ್ಸ ಮಾಡುವಳು)

॥ ಪದ ॥

ಅರಳಿತು ಮನದಾ । ಮಹಾದಾಶಾ ।

ವಿರಹದಿ ವ್ಯಥೆಯಾ । ಬಹು ದಿವಸಾ ॥

ನಿನಗಾಗಿ ತೇಲಿತು । ಈ ದೇಹ ।

ದಿನಪನ ದರುಶನ । ಕೊಡು ಜೀಯಾ ॥

ಮಾರನ ಬಾಣದಿ । ಆಡುತ ಬಾ ।

ಸುರತ ಸೌಖ್ಯವ । ಪಡೆಯುವಾ ಬಾ ।

ಮದನ ಮೋಹನ । ಪ್ರೀಯ ರಮಣ ನೀ ಬಾ ॥

ಶಾಂತಾ– ಎಲೈ ಪುಷ್ಪಗಳೇ ! ನಿಮ್ಮ ಅಂಗಾಂಗಗಳನ್ನು ಒಣಗಿಸಿಕೊಳ್ಳಲು ಗಾಳಿಗೆ ಮೈಯೊಡ್ಡಿ, ಯೌವ್ವನಾ ಸ್ವರೂಪಿಣಿಯರಾಗಿ ದಿಗ್ದಿಗಂತದಲ್ಲಿ ನವತರುಣನನ್ನು ಸುಸ್ವಾಗತಿಸುವಿರಿ ಏನು? ನಿಮ್ಮ ಸುಂದರವಾದ ಅಂಗಾಂಗಗಳಿಂದ ನಿಮಗಾಗಿ ಪುಟ್ಟಿದ "ಭ್ರಮರ ಬಾ" ಎಂದು ಪರಿತಪಿಸುವಿರಿಯೇನು? ಆ ಭ್ರಮರವು ತನಗೆ ಹಸಿವೆಯಾದೊಡನೆ ಬಂದು ಪುಷ್ಪದ ಸೌರಭವನ್ನು ಹೀರಿ, ತನ್ನ ಆಕಾಂಕ್ಷೆಯನ್ನು ಪ್ರೇಮ ಸಲ್ಲಾಪಗಳನ್ನು ಬೀರುತ್ತದೆ. (ನೋಡುವಳು.) ಮುಗಿಲಮಟ್ಟಕ್ಕೆ ಬೆಳೆದ ಲತೆವನಗಳಿರಾ? ನಿಮ್ಮ ನಲ್ಲರು ಬರುವ ಬರುವನ್ನು ದಾರಿಯುದ್ದಕ್ಕೂ ನೋಡಿ ಬೇಸರವಾಯಿತೆ; ನಿಮ್ಮ ಸುಖಮಯ ಜೀವನ ಇಲ್ಲ. ತತ್‌ಕ್ಷಣವೇ ಬರುವನು "ಪಾರ್ವತಿಯು

ನಾಟ್ಯವಾಡಿ ಪರಶಿವನನ್ನು ಹೇಗೆ ಒಲಿಸಿಕೊಂಡಳೋ" ಅದರಂತೆ ನೀವೂ ನಾಟ್ಯವಾಡಿರಿ. (ಮನಃ ಡ್ಯಾನ್ಸ ಮಾಡುವಳು. ಖಿನ್ನಳಾಗಿ ಲತೆಗಳ ಮೈ ಸವರುತ್ತ) ಏಕೆ! ಚೆಲುವ ಚಂಪಕಗಳೆ? ಚಂದ್ರೋದಯವಾಗುವ ಮುನ್ನ ಚಲಿಸಲಾರನೆ ನಿಮ್ಮ ಚಕೋರನು.

ಮನೋಹರ– ಉದಯವಾಗಿರಲಾರನು. ಏಕೆ? ಚಕೋರಿ, ಇದೋ ನಿನ್ನ ಹೊಂಗನಸಿನಾಲಯದಲ್ಲಿ ನಿಂತಿರುವೆ. ಬಾ ಪ್ರೀಯತಮೆ ಇಂದೆನಗೆ ಹೊಳೆಯಿತು ನಿನ್ನ ಪ್ರೇಮಪೂರಿತವಾದಂತಃಕರುಣ. ಆದಕಾರಣ ಕೈಹಿಡಿದಿರುವೆ ನಾ ಇಂದಿನ ದಿನ. ಕಾಣಬೇಕಿನ್ನು ನಮ್ಮೀರ್ವರ ಸುಖದಿನದ ಸವಿ ಮಿಲನಾ; ಭಾರತ ಬಾಂಧವರಿಗೆ ಭಾಸವಾಗಲೀ ಪ್ರೇಮಿಗಳ ಸುಖಜೀವನದ ಸುದಿನ; ವೀಣಾವಂತಿಯ ಮೇಲೆ ಭರತನಾಟ್ಯವಾಡಿ ಕಳೆಯುವೆ ಬಾ ನನಸಿನ ಭ್ರಮಣ.

ಶಾಂತಾ– ಸಾಕುಮಾಡೀ ನಿಮ್ಮ ಗತಕಾಲದ ಕವನ. ವನಕ್ಕೆ ಒಂಭತ್ತು ಗಂಟೆಗೆ ಬಾ ಎಂದು ಹೇಳಿ, ತಾವು ಮಾತ್ರ ಎಡೆಬಿಡದೆ (Lovers Club) ಲವ್ವರ್ಸ ಕ್ಲಬ್ ಹೊಕ್ಕರೆ ಈ ತಮ್ಮ ಪ್ರೀಯತಮೆಯ ಗತಿ ಏನು?

ಮನೋಹರ– ಪ್ರಿಯೇ! ನಿನ್ನ ಸೌಂದರ್ಯದ ಸವಿಯೂಟ ಉಣ್ಣಲು ಸದಾ ಸನ್ನಿದ್ಧನಿರುವಾಗ ನೀನೇಕೆ ಇಷ್ಟು ಆತುರಪಡುವೆ. ನೋಡು ಶಾಂತಾ ನಾನು ನನ್ನ ರೂಮಿನಿಂದ ಹೊರಬಿದ್ದರೆ ಸಾಕು; (Contractor) ಕಾಂಟ್ರಕ್ಟರ್ ಬಂದನೆಂದು ಸುದ್ದಿ ಕೇಳಿದ ತಕ್ಷಣವೇ "ಸಕ್ಕರೆಗೆ ಇರುವೆ ಮುಕ್ಕುರುವಂತೆ" ಮುತ್ತಿಬಿಡುತ್ತಾರೆ ನನ್ನ ಸ್ನೇಹಿತರು. ಏನು ಮಾಡಲಿ ನೀನೇ ಹೇಳು.

ಶಾಂತಾ– ನೀವೇ ಹೇಳಿ, ಒಂದು ಕಾಂಟ್ರಕ್ಟ ಹಿಡಿದು, ಇನ್ನೊಂದು ಕಾಂಟ್ರಕ್ಟಿಗೆ ಕೈ ಹಾಕಲು ಹೋದರೆ ಅದು ತಾನೇ ಹೇಗೆ ಸಾಧ್ಯ.

॥ **ಪದ** ॥ [ಡಯಲಾಗ]

ಮನೋಹರ– ಬಾ ಮನ ಮೋಹಿನಿ ಬಾ ಬಾರೆ ।
ಬಾ ಮನ ಸೆಳೆಯುವ ಪ್ರಿಯೆ ಬಾರೆ ॥

ಶಾಂತಾ– ಬಾ ಮನ ಮೋಹನ ಬಾ ಬಾರೋ ।
ಬಾ ಮನ ಸೆಳೆಯುವ ಪ್ರಿಯ ಬಾರೋ ॥

ಮನೋಹರ– ನವಜೀವನ ಧರಿಸಿದ ಕೋಗಿಲೆ ಬಾ ।

ವಸಂತ ಮಾಸದಿ ಆಡುವ ಬಾ ॥

ಶಾಂತಾ– ಪ್ರೇಮ ಜೇನಿನ ಸವಿಯನು ಸವಿಯುವ ಬಾ !

ಕಾಮನಾಟದಿ ಕಾಲವ ಕಳೆಯುವ ಬಾ ॥

ಮನೋಹರ– ಒಪ್ಪಿದೆ ಶಾಂತಾ!! ನಿನ್ನ ಮಾತಿನ ನಿಲುಮೆಯ ಮುಂದೆ ನನ್ನ ತರ್ಕ ನಡೆಯಲಾರದು. ನಾನು ನಿಜವಾಗಿಯೂ ನಿನ್ನ ಕಾಂಟ್ರಕ್ಟರ್, [ಎಂದು ಮುದ್ದಿಡುವನು.]

ಸಿದ್ದಪ್ಪ– [ಪ್ರವೇಶಿಸಿ, ಸ್ವಗತ] ಅಲ್ಲಾಽ ಇವ್ನಽಽ ಇಲ್ಲೇ ಎದ್ದೈತೆಲಪಾ! ಕವಡಿಪೀರನ ಸವಾರಿ. ಆಕೆಗೆ ಏನ ಕಂಕ್ರೇಟ ಮಾಡಾಕ ಹತ್ಯಾನಲ್ಲ ಭಿಕಾರಿ, ಹೌದಲೇ ಚುಕಾರಿ, ಹ್ಯಾಂಗ ಹೊತ್ತಿಲ್ದ ಹೊತ್ನ್ಯಾಗ ಬಂದು ಗೊತ್ತಿಲ್ದ ಗ್ವಾಡಿ ಹಾರ್ಸಿ ಆ ಕೋತಿಗ ಕರಕೊಂಡ ಬಂದಾಗ ನೋಡ್ರಿ, ಇಂಥೋರು ತ್ವಾಟದಾಗ ಕಾಲಿಟ್ರ ತ್ವಾಟದಾಗಿನ ಮಗಿ ಉದ್ರತಾವ್ರಿ,

ಶಾಂತಾ– ಸುಕುಮಾರ, ಸುಂದರ ಸುಳಿವ ಸುಳಿಗಾಳಿಯಲಿ ಧಾರಾವಾಹಿಯಂತೆ ಸೂಸಿ ಬರಲಿ "ಸುಪ್ರೇಮ"ವೆಂಬ ಸುವರ್ಣಾಕ್ಷರದ ಸುವಾಸನೆ. ಪ್ರೇಮವೆಂಬೆರಡಕ್ಕರದ ಹಿರಿಮೆಯನ್ನು ಬಿತ್ತರಿಸುವಾ, ಜಗತ್ತಿನಲ್ಲಿ ಸೂರ್ಯನು ಉದಯವಾಗುವ ಮುನ್ನ, ಬಿಟ್ಟ ಬಾಣದಂತೆ ಬೇರೆಯಾಗದಿರಲಿ ಮನ. ನೀವೆನ್ನ ಮನೋರಥವನ್ನು ಈಡೇರಿಸುವಂಥ ಈ ಕಲಿಯುಗದ ಅರ್ಜುನ; ನೀವು ನನ್ನ ಪ್ರಥಮ ದೃಷ್ಟಿಯಲ್ಲಿ ಬಿದ್ದಾಗಲೇ ಹೃದಯೇಶ್ವರನೆಂದು ತಿಳಿದಿರುವೆ ನಾ.

ಮನೋಹರ– [ಸ್ವಗತ] "ಬಿಸಿಯಾಗದೇ ಬೆಣ್ಣೆ ಕರಗಬಹುದೇ?" ಶಾಂತಾ ನಿನ್ನ ಪುಂಗಿಯ ನಾದಕ್ಕೆ ಮಾರು ಹೋಗದಿರೆ ಇನ್ನು, ನಾನು ನಿನ್ನವನಾಗಬೇಕಾದರೆ, ತಂದು ಕೊಡಬೇಕಿಂದು ನೂರು ರೂಪಾಯಿಗಳ ನೂರು ನೋಟಿನ ಸೂಡನ್ನು. ನಿಮ್ಮಣ್ಣನಂತೂ ಸಿಕಂದ್ರಾಬಾದಿಗೆ ಹೋಗಿರುವನು. [ವಿಷದ ಚೀಟಿ ಕೊಡುತ್ತ] ಇದೋ! ವಿಷಭರಿತವಾದ ಈ ಪುಡಿಯನ್ನು ಸಮಯ ಸಾಧಿಸಿ ನಿಮ್ಮಣ್ಣನ ಮಕ್ಕಳಿಗೆ ಹಾಕಬೇಕು.

ಶಾಂತಾ– [ಬೆಚ್ಚಿ] ಮನೋಹರಾ!!

ಮನೋಹರ– ಮನೋಹರಿ! ಬರಲಿರುವ ಬರ ಸಿಡಿಲು ಬಿರುಗಾಳಿಯಲಿ ತೂರಿ ಬರುವ ಆಪಾದನೆ ಸಿದ್ಧಿಯ ಮೇಲೆ ಹೊರಿಸಿ; ಅವರೀರ್ವರಿಗೂ

ಮನೆ ಬಿಡಿಸಬೇಕು; ಇದಲ್ಲದೇ ಅಂಜದೇ ಅಳಕಿನೇ ಹೊರಿಸಬೇಕು. ಜಮುನೆಗೂ ಹಾಗೂ ಗುರುವಿಗೂ ನಿಕಟ ಸಂಬಂಧದ ಆರೋಪವನ್ನು.

ಶಾಂತಾ– [ಬೆಚ್ಚಿ] ಮನೋಹರ! ನಾ ಮಾಡಲಾರೆ ಇಂಥಾ ನೀಚ ಕೃತಿ; ಇಂದೇಕೆ ಬಿಟ್ಟಿರುವೆ ಅಬಲೆಯ ಮೇಲೆ ಸರ್ಪಾಸ್ತ್ರ. ಈ ಸರ್ಪಾಸ್ತ್ರದ ಹೊಡೆತಕ್ಕೆ ಪೆರ್ಮೆಗೊಂಡ ಪೇರ್ಬಂಡೆಗಳೊಡೆದು ಫಲಕಗಳು ಹಾರಿ ತೂರಿ ಬಂದು ಹೃದಯ ರಂಗಕ್ಕೆ ನುಚ್ಚು ನೂರಾಗಿ ಮಾಡಿತು. ಒಂದು ವೇಳೆ ಇಂಥ ನೀಚಕೃತಿಯನ್ನು ಮಾಡಿ ಜಗಜ್ಜನರ ಪತಾಕೆ ಮೇಲೆ ನಿಲ್ಲಬೇಕಾದೀತು ಈ ಮುಖ.

ಮನೋಹರ– ಓ! ಎನ್ನ ಪರಾಗಭ್ರಮರಿ ಈ ಜಗದಲ್ಲಿ ಬರುವದು; "ಹೌದು–ಅಲ್ಲ" ಈ ಎರಡರಲ್ಲಿ ಯಾವುದಾದರೂ ಬಂದರೂ, ಬಾಳು ಇತಿಹಾಸದ ಪುಟ್ಟದಲ್ಲಿ ಸೇರಿ, ಲೆಕ್ಕವಿಲ್ಲದಷ್ಟು ನಾಲಿಗೆಗಳ ಮೇಲೆ ಆಡುತ್ತದೆ. ಪ್ರಿಯೇ, ಒಟ್ಟಾರೆ ನೀನೀಕೃತಿ ಮಾಡಬೇಕು; ಇಲ್ಲದಿದ್ದೊಡೆ ನನ್ನಲ್ಲಿ ಸಿಗಲಾರದು ಪವಡಿಸುವ ಸ್ಥಾನ.

ಸಿದ್ದಪ್ಪ– [ಬದಿಗೆ] ಹೌದಲೇ ಕೆಡಕ ಹಾವಿನ ಬಣ್ಣದ ಪಿಂಜಾರ, ಹ್ಯಾಂಗೈತಿ ನೋಡ್ರಿ ಇಂವಂದ ಕೆಟ್ಟ ಗುಣದ ಆಕಾರ, ನೀಯಾಕ ಇಲ್ಲಿ ಬರ್ತಿ ಅನ್ನುದು ತಿಳಿದಾಗಲೇ ಜರಾ, ಬೆಳೆಸಿಸಿದು ಬಡ್ಡಿ ಕಡಿಯನ್ನುವ ಸಮಗಾರ, ಈ ಮನೀದು ತಲಿ ಬೋಳ್ಸಬೇಕಂತ ಮಾಡಿದಲೆ ಜಾತಿಗಾರ. ನಾನು ಜರಾ ಮರಿಯಾಗಿ ಕೇಳ್ತಿನಿ ಪೂರಾ.

ಶಾಂತಾ– ಮನೋಹರ! ನಮ್ಮಿಮ್ಮ ಕೃತಿಗೆ ಅವರೇನು ಮಾತಲಾರರು. ನಿನಗೆ ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ; ಈ ಹೇಸಿ ಕಾರ್ಯಕ್ಕೆ ಕೈ ಹಾಕದಿರಿ.

ಮನೋಹರ– ಹಾಗಾದರೆ ಇಂದೇ ನನ್ನ ನಿನ್ನ ಋಣಾನುಬಂಧ ಹರಿದು ಬಿಸಾಟಿ ಬಿಡುತ್ತೇನೆ. ನಿನ್ನ ಹೊಟ್ಟೆಯಲ್ಲಿ ಬೆಳೆಯುವ ಕೂಸಿಗೆ ಯಾವ ತಂದೆಯ ಹೆಸರು ಹೇಳುತ್ತೀಯೋ ನೋಡುತ್ತೇನೆ. (ಹೋಗ

ಶಾಂತಾ– [ತಡೆದು] ಇಂದೇ ಮಾಡುವೆನೀ ಕೃತಿ; ತ್ಯಜಿಸಬೇಡಿರಿ ನನ್ನನ್ನು ಮೋಹನಾ.

ಮನೋಹರ– ಹಾಗಾದರೇ ಮಾಡುವೆನೆಂಬ ಅಭಯದಾನ ಕೊಡು ಈ ಕ್ಷಣ.....

ಶಾಂತಾ– ಇದೋ.... [ಕೈಮೇಲೆ ಕೈ ಹಾಕುವಳು. ಸಿದ್ದಪ್ಪನ ಪದ ಕೇಳುವದು.]

ಮನೋಹರ– ನಡೆ ಶಾಂತಾ ಟೈಮ ಆಯಿತು. ನೀನು ತಪ್ಪದೇ ನಾಳೆ ವನಕ್ಕೆ ಬರಬೇಕು. [ಹೋಗುವನು ಹೋದಕಡೆ ದಿಟ್ಟಿಸಿ ನೋಡಿ ಹಿಂದೆ ಹಿಂದೆ ಸರಿಯುವಳು ಆಕೆಯ ಎದುರಾಗಿ ಸಿದ್ದಪ್ಪನು ಹಿಂದೆ ಹಿಂದೆ ಸರಿಯುತ್ತ ಒಬ್ಬರಿಗೊಬ್ಬರು ಹಾಯುವರು.)

ಸಿದ್ದಪ್ಪ– [ಚಿಟ್ಟನೆ ಚೀರಿ] ಸತ್ನೆಪ್ಪೋ.....(ಸ್ವಗತ) ಹರೇದ ಮಬ್ಬಾನ್ಯಾಗ "ಮಲಿ ಬಂದಾಕಿ ನೆಲ ನೋಡಲಿಲ್ಲ. ಮೀಸಿ ಬಂದಾವ ದೇಶ ನೋಡಲಿಲ್ಲಂತ" ಯವ್ವಾ, ಅಯ್ಕೊಂತಿನ್ನಾ ಕೋಳಿಕಾಲ ಮುರ್ದಂಗ ಮುರ್ದದ್ದೆಲ್ರಿ ಯವ್ವಾ? ಈ ಕಡೆ ಯಾಕ್ರಿ ತ್ವಾಟದ ಕಡೆ ಬಂದಾಂಗ ಕಾಣಸ್ತಾದ್ರಿ, ಬಂದ ಕೆಲ್ಸಾ ಬರೊಬರಿ ಆಗ್ಯಾದೇನ ಮನೀಗಿ ನಡ್ರಿ.

ಶಾಂತಾ– [ಅಂಜುತ್ತ] ಹೌದು ಸಿದ್ದಪ್ಪಾ! ಅಣ್ಣ ಊರಿಗೆ ಹೋದಂದಿನಿಂದ ತೋಟದ ಕಡೆಗೆ ಬಂದಿದ್ದಿಲ್ಲ. ನೋಡಿಕೊಂಡು ಬರೋಣ ಅಂತ ಬಂದೆ.

ಸಿದ್ದಪ್ಪ– (ಸ್ವಗತ) ತ್ವಾಟದ ಕಾಳಜಿ ಬಲು ಕಾಳಜಿ ನಮ್ಮವ್ವಂದು [ಪ್ರ.] ಎವ್ವಾ ನಿಮಗೊಂದು ಮಾತ ಕೇಳ್ಬೆಕಂತೀನ್ರಿ ಕೇಳಂದ್ರ್ಯಾ?

ಶಾಂತಾ– ಅಗತ್ಯವಾಗಿ ಕೇಳು ಸಿದ್ದಪ್ಪಾ. ಏನಾದರೂ ಬೇಕಿದ್ದರೆ ಬೇಡು.

ಸಿದ್ದಪ್ಪ– ಬೇಡು ಮಾತು ಅಲ್ಲ ಯವ್ವಾ?

ಶಾಂತಾ– ಹಾಗಾದರೆ ಏನು ಕೇಳಬೇಕೆಂದು ಮಾಡಿರುವಿ?

ಸಿದ್ದಪ್ಪ– ಅಲ್ರಿಯವ್ವಾ! ಹರೇದ ಹೆಣ್ಮಕ್ಕಳು ಅಡ್ಡಡ್ಡ ಅಡ್ಡಾಡಾಕ ಹತ್ತಿದರ ಮನಿ ಮರ್ವಾದಿ ಉಳಿತ್ತೈತೇನ್ರಿ?

ಶಾಂತಾ– ಅಹುದು ಸಿದ್ದಪ್ಪ! ಹರೆಯದ ಹೆಣ್ಣು ಮಕ್ಕಳು ಮನೆಯಲ್ಲಿದ್ದರೇನೆ ಮನೆಯ ಮರ್ಯಾದೆ ಸ್ಥಿರವಾಗಿ ಉಳಿಯುವದು.

ಸಿದ್ದಪ್ಪ– ಅಂದಮ್ಯಾಲ! ನೀವು ತಿರುಗಾಡೂದ ಕಡಿಮೆ ಮಾಡ್ರಿ ಜರಾ. ಅಂದಾಗ ಸಾಗತೈತಿ ಸಂಸಾರಗಾಡಿ ಭರ್ಪೂರ.

ಶಾಂತಾ– "[ಸಿಟ್ಟಿನಿಂದ] ಸಾಕು ಮಾಡು ನಿನ್ನ ಹಾಳು ಹರಟೆಯ ಉದ್ಗಾರ, ನೀನೆಷ್ಟರವನು ನನಗೆ ಕೇಳಲಿಕ್ಕೆ. (Nonsence) ನಾನ್‌ಸೆನ್ಸ. (ಹೋಗುವಳು).

ಸಿದ್ಧಪ್ಪ– ತಟ್ಟನs ಮಾತಾಡಿದ್ರ ಮುಳ್ಳು ಮುರ್ದಂಗ ಆಯ್ತು ನೋಡ್ರಿ, ನಾಯಾಕ ಕೇಳಿದ್ರs ನಮ್ಮವ್ವ. ಏನೋ ನೊಣ ಪಿಣ ಅಂತ ಹೋಯ್ತು ಕುಲಗೇಡಿ. ಹಂಗ ಕುಡ್ಡ ಕುದರಿ ಕುಣದಂಗ ಕುಣಕೋತಾ ಹೋಯ್ತು ಪೀಡಾ ನೋಡ್ರಿ, ಈ ಮನ್ಯಾಗ ನಾನು ನಮ್ಮಪ್ಪ, ನಮ್ಮಪ್ಪನಪ್ಪ ಹಂಗ ಒಬ್ಬರ ಬಿಟ್ಟ ಒಬ್ಬರ ಆಲಾಯಿ ದೇವರ ಹಿಡಿದಾಂಗ ಆಗೇತಿ. ದೇವರನ್ನೂ ಪಾಪ ಪುಣ್ಯದ ತೊಟ್ಲ ಕಟ್ಟೇ ಹಾನ; ಈಗಂತಲೂ ಒಳ್ಳೇ ಜೋರಿನಿಂದ ತೂಗಾಕ ಹತ್ಯಾದ; ತೂಗಿ ತೂಗಿ ತನ್ನ ಜಾಗಕ್ಕ ನಿಂದ್ರತಾದ. [ಯೋಚಿಸಿ] ಯಾಕ ನಮ್ಮ ಪಂಚಾತಿ ಆಫೀಸಿನಿಂದ ತಾರs ಬರಲಿಲ್ಲ. ಮನ್ಯಾಗ ಏನೇನ ಗುದ್ಮರಿಗಿ ನಡದೈತೋ ನೋಡುನು. [ಸಿದ್ದಿ ಬರುವಳು] ಅಲೇಲೇss ಬಂತಪೋ ತಾರ. "ನೆನ್ಸೂದ್ರಾಗ ತೊನ್ಸ್ಯಾಳ ಗೌಡ ಬಂದಾಂಗ" ಬಂದ ಬಿಟ್ರೆಲ್ರಿ ಸರಪಂಚ ಸಾಬ್ರ.

ಸಿದ್ದಿ– ಏs! ಅಂಗಡಿಗೆ ಹೋಗಿ ಅಗಸಿ ತಗೊಂಡ ಬಾ ಅಂದ್ರ ಹಾದ್ಯಾಗ ಹಚ್ಚೆಯಲ್ಲ ವಟ ವಟ ನಾ ಬರೂದು ಕಂಡು ಎಲ್ಲಿ! ನನ್ನ ಮರ್ವಾದಿ ಕಳಿತೀ ಅಂತ ಮಾಡ್ತಿಯೇನ ಮಾಟ; ಸಂಸಾರ ಸುದ್ದಾಗಿ ಮಾಡಿಕೊಂಡು ಹೋಗೂನು ಅಂದ್ರ ಅಲ್ಲಿನೂ ಹುಡುಗರ ಆಟ. ಇಲ್ಲಾಂದ್ರ ತೋರಸ್ತೀನಿ ಕೆಂಭಾವಿ ಗುಮಟಾ.

ಸಿದ್ದಪ್ಪ– ಹಿಂಗೇನ, ಅಂದ್ರ ನಾನು ತೋರಸ್ತೀನಿ ಬಿಜಾಪೂರ ಗೋಳಗುಮ್ಮಟ. ಅಲ್ಲ ನನ್ನ ಬಂಗಾರಿ, ಗಂಡಾ ಹೆಣ್ತಿ ಅಂದಿಂದ ಹಿಂಗsರಿ ಯಾಕ ಗಾಡಿ ಆವಸರ್ಲೇ ಬಿಟ್ಟಿದ್ದಿ. ನೀವು ಜರಾ ತ್ವಾಟದ ಕಡಿಗೆ ಹೋಗಿ ಹೊಳ್ಳ್ಯಾಡಿ ಬರಬೇಕೆನ್ರಿ.

ಸಿದ್ದಿ– ಏ ! ಯಾಕs ಎಷ್ಟನ ಒದರ್ತಿಯಲ್ಲ; ರಡ್ಡೇರ ರೇಷೋ ಹಚ್ಚಿದಾಂಗ ಆಗ್ಯಾದ, ಜರಾ ಕಿವಿಯನ ತಿರುವಲ್ಯಾ?

ಸಿದ್ದಪ್ಪ– ಅಲೇ ಅಲೇ ಏ ಸಿದ್ದಿ. ಒಳ್ಳೇ ಮಾತಿನಿಂದ ಕಿವಿಬಿಡು, ಮಂದಿ ನೋಡ್ಯಾರ ಮತ್ತ.

ಸಿದ್ದಿ– ನೋಡಿ ಏನ್ಮಾಡ್ತಾರ, ತಮ್ಮಾನ್ಯಾಗೂ ಹಿಂಗ ಇರ್ತಾದ.

ಸಿದ್ದಪ್ಪ– ಅಂದ್ರ ನೀ ಕಿವಿ ಬಿಡಾಂಗಿಲ್ಲ ಹಂಗರ?

ಸಿದ್ದಿ– ಬಿಡುದಲ್ಲ ಅಂದೆ. ಮಂದೀ ಕೈಲೇ ನಿನಗ ಛೀಮಾರಿ ಹಾಕಸ್ತೀನಿ.

ಸಿದ್ದಪ್ಪ– ಅಲ್ಲಿ ಯಾರೋ ಬರೂ ಹಂಗ ಕಾಣಸ್ತಾರ ಕಿವಿ ಬಿಡು ಅಂದ್ಯ.

[ಮನೋಹರನು ಬೀಡಿ ಸೇದುತ್ತ ಬರುವನು.]

ಮನೋಹರ– [ಸ್ವ] ಈ ಮಿಡಿ ನಾಗರ ಹೆಣ್ಣನ್ನು ನೋಡಿದರೇ ದೇವ ಲೋಕದ ಅಪ್ಸರೆಯರು ಸಹ ನಾಚಿ ತಲೆ ತಗ್ಗಿಸುವರು ತಲೆ. ಕತ್ತಿಯ ಕುಡಿ ನೋಟದ ಮೇಲೆ ಕುಣಿಯುವ ಇವಳ ಹುಬ್ಬುಗಳ ಮಿಲನ ಮಾಡಿಕೊಂಡರೇನೇ ಜನ್ಮ ಸಾರ್ಥಕ; ಆದರೂ ಹಳ್ಳಿಯ ಮಳ್ಳ ಹೆಂಗಸು. [ಪ್ರ] ಓಹೋ ಸಿದ್ದಪ್ಪ. ಈರ್ವರೂ ಗಂಡ ಹೆಂಡಿರು ಇಲ್ಲೇ ನಿಂತಿರುವಿರಲ್ಲೋ?

ಸಿದ್ದಪ್ಪ– ಯಾಕ್ರಿ ಯಪ್ಪಾ, ನಿಮಗ್ ಹ್ಯಾಂಗ ಕಾಣಸ್ತಾದ್ರಿ ನಾವಿಬ್ಬರು ನಿಂತಾದ್ದು ನೋಡಿ.

ಮನೋಹರ– ಒಳ್ಳೇ ಮನಾಕರ್ಷಕವಾಗಿ ನಾಟಕದಲ್ಲಿಯ ಹಾಸ್ಯ ಪಟುಗಳಂತೆ ಕಾಣುತ್ತೀರಿ.

ಸಿದ್ದಪ್ಪ– ಯಪ್ಪಾ! ಹಳ್ಳಿ ಮಳ್ಳಗ ನಾಟಕಾ ಅಂದ್ರ ಏನೂ ಗೊತ್ತಿಲ್ಲ ಅವೆಲ್ಲ ಬಾಡ್ಗಿ ಪ್ಯಾಂಟ ಹಾಕಿ, ಬಾಯಾಗ ಸಿಗರೇಟು ಹಿಡ್ದು ಮನಿ ಮನಿ ತಿರುಗು ಚೆಲ್ಲರ ಗೆಣೆಗೋಳಿಗಿ ಗೊತ್ರಿ

ಮನೋಹರ– ಅಂತೂ ಮಾತಾಡಲು ಸಾಕಷ್ಟು ಕಲ್ತಿಯೇಳೋ.

ಸಿದ್ದಪ್ಪ– ಯಾಕ್ರಿ ಯಪ್ಪಾ?

ಮನೋಹರ–ಏನು ಸಿದ್ದಮ್ಮಾ, ನಿನ್ನ ಪತಿ ಒಳ್ಳೇ ನಾಟಕದ ಹಾಸ್ಯಪಟು ಇದ್ದ ಹಾಗೆ ಕಾಣಿಸುತ್ತಾನೆ.

ಸಿದ್ದಿ– ಯಾಕ್ರಿ ಯಪ್ಪ, ನನ್ಗ ಮಾತಾಡ್ಸಲಾರ್ದ ಹೋಗಾಕ ನಿಮ್ಮ.....

ಸಿದ್ದಪ್ಪ– ಅವರ ಮನಸ್ಸು ಹ್ಯಾಂಗ ಒಪ್ಪತೈತಿ; ಯಾಕಂದರ ಇವತ್ತ ನಾಳೆ ಅಂದ್ರ ಇವರ ಹಿರೇರು ಎಲ್ಲಾ ಹೆಣ್ಮಕ್ಕಳಿಗಿ ಹಾಜರಿ ಹಾಕುವವರು ಇವರs. ಯಾಕ್ರಿ ಯಪ್ಪಾ ನೀವು ಕಂತ್ರಾಟಿ ಕೆಲ್ಸ ಮಾಡ್ತಿರೆಲ್ಲರಿ?

ಮನೋಹರ– ಏ! ಯಾಕೋ ಸಿದ್ದ. ಯಾರ ಸಂಗಡ ಮಾತಾಡುತ್ತಿರುವೆಯೆಂಬುವದನ್ನು ಚನ್ನಾಗಿ ಲಕ್ಷದಲ್ಲಿಟ್ಟುಕೋ. ಯಾರ ಸಂಗಡ ಹೇಗೆ ಮಾತಾಡಬೇಕೂ ಎಂಬುದು ಮೊದಲು ತಿಳಿದುಕೋ. ಸಿದ್ದಮ್ಮಾ ನಿನ್ನ ಮಾರಿ ನೋಡಿ ಬಿಟ್ಟಿರುವೆನು; ಈ ಅಪದ್ಧನಿಗೆ.

ಸಿದ್ದಿ– ನನ್ನ ಮಾರ್ಯಾಗ ಏನೈತ್ರಿ ಹುಣಚಿಹಣ್ಣು.

ಸಿದ್ದಪ್ಪ– ನಿಮ್ಮಂಥಾ ಹೆಣ್ಮಕ್ಕಳ ಮಾರಿ ಮ್ಯಾಲಿನ ಮಣ್ಣಿಗಿ ನಾಲಿಗಿ ಹಚ್ಚಿ ಚರಾ ಚರಾ ನೆಕ್ಕಿದರೂ ಇವರ್ಗಿ ತೀರಂಗಿಲ್ಲಾ ಮನಸ್ಸಿನ ಭ್ರಾಂತಿ.

ಮನೋಹರ– ಯಾಕೋ ಮಗನ, ನಿನ್ನ ಎಲುವಿಲ್ಲದ ನಾಲಿಗಿ ಕೊಯ್ದು ಸುಟ್ಟುಬಿಟ್ಟೇನು. ಹೇಗೆ ಕಾಣಿಸುತ್ತದೆ?

ಸಿದ್ದಪ್ಪ– ಯಾಕ್ರಿ ಯಪ್ಪ! ಮಗನ ಸಗನ ಅಂತಿ; "ಹಾದ್ಯಾಗ ಧೂಳ ಎಬ್ಬಿಸಿ ಮೈ ತುಂಬ ಬಡಕೊಂಡ ಹಂಗ" ನೀವಽಽ ನಮ್ಮ ಸರಿ ಮಾತಾಡಿ ಮತ್ತ ನಮಗ ಜಬರ ಮಾಡ್ತಿರಿ. ಸುಮಾಕ ಹೋಗ್ರಿ. (ಮನೋಹರನು ಸಿಟ್ಟಿನಿಂದ ಹೋಗುವನು) ಸುಮಾಕ ಹೋಗಬಾರ್ದ ಇಲ್ಲೇನ ನೋಡ್ತಿ. ಯಾಕ ಸಿದ್ದಿ ನಾ ಅಂದ ಮಾತ ಈ ಕುಲಗೇಡಿ ಗೂಳಿಗಿ ಪೆಟ್ಟು ಹತ್ತು; ಆದ್ರೂ ಬಿಡು ಪೈಕಿ ಅಲ್ಲ.

ಸಿದ್ದಿ– ಇದಽ ಮಾತಾಡ್ತಿ ಏನ ಮತ್ತೆ? ನಮ್ಮಣ್ಣ ಬಳಿಯಾಪಾರ ಮಾಡಿ ಬರೂ ಹೊತ್ತಾಗೆದ, ನಡಿ ಹೋಗೂನು.

ಸಿದ್ದಪ್ಪ– ಅಲ್ಲ ಸಿದ್ದಿ; ನಿನಗ ಮೊಟ್ಟ ಮೊದಲ ಕುಂಕುಮಾ ಹಚ್ಚಾಕ ಬಂದಾಗ ಈ ನಿಮ್ಮ ಬಹಾದ್ದೂರ ಅಣ್ಣ ಯಾ ಮೂಲ್ಯಾಗ ಅಡಗಿದ್ದಾ; ನಿಮ್ಮಣ್ಣರ ಸೈ......

ಸಿದ್ದಿ– (ಎದೆಗೆ ಹೊಡೆದುಕೊಂಡು) ಯವ್ವಾ ಹ್ಯಾಂಗ ಮಾಡ್ಲೆ, ಹ್ಯಾಂಗ ಮಾತಾಡ್ತಾನಲ್ಲ ಇಂವಾ. ಇವ್ನ ಬಾಯಿಗಿ ಬಂದಾನ ಹುಣ್ಣು ಹುಟ್ಟಬಾರ್ದ. (ತಿವಿದು) ಹ್ಯಾಂಗ ಕೇಳ್ತಿಯಲ್ಲ 'ಇಂವ ನಿಮ್ಮಣ್ಣನೇಂತ. ಬೀಗರ ಊರೋರು ನಿಮ್ಮಂದು ಕುಂದ್ರತಾರೇನ ಅಸರಂತ. ನೆರಮನಿ ಬಳಗಾರ ಭರಮಣ್ಣಾಗ ನಾವು ಚಿಕ್ಕಂದಿನಿಂದ ದೊಡ್ಡಪ್ಪಾ ದೊಡ್ಡಪ್ಪಾ ಅಂತಾ ಕರಿತಿದ್ದಿವಿ. ಅಂವಗ ಇವ ಒಬ್ಬನ ಮಗ, ಬಳಿಯಾಪಾರ್ಕ ಹೋಗಿದ್ದ ನಮ್ಮ ಲಗ್ನದಾಗ. ಈಗರ ಬಂದಾನ ಊರಿಗಿ ಹೊಸದಾಗ, ನೀ ಇದ್ರ ಸಂಶನ ಹಚ್ಚಿಗೊಂಡು ಒಂದೇ ಸವನ ಕೇಳ್ತಿ ಉಸರ ಬಿಡಲಾರ್ದಂಗ. ಅಂಥಾ ಬ್ಯಾಡಾದ ಕೆಲ್ಸಾ ಮಾಡಿ ಬೈಲಿಗಿ ಬೀಳೂ ಪದ್ಧತಿ ಇಲ್ಲ ನಮ್ಮನೆತನದಾಗ. ಔಡ ಸೌಡ ಮಾತಾಡ್ಡಿ ಅಂದ್ರ ಹೋಗಿ ಕುಂದ್ರತೀನಿ ನನ ತವರೂರಾಗ. ನೀ ಒಬ್ಬನ ಅತಗೋತ ಕುಂದ್ರಬೇಕಾದೀತೀ ಮನ್ಯಾಗ. (ಹೋಗಹತ್ತುವರು)

ಸಿದ್ದಪ್ಪ– (ಸ್ವಗತ) ಸಿದ್ದಿ ಅಲ್ಲ ನನ ಕೊಳ್ಳಾಗ ಕಟ್ಟಿದ ಗುದ್ದಿ. (ಪ್ರ) ಅಲಾ ಇವ್ವ ಹಂಗ ಹೊಂಟ ಬಿಟ್ಟಲಪಾ ತನ ಬಿರಿಸ್ಸ್ಯಾಗ. (ಅಡ್ಡ ಹೋಗುವನು.)

ಸಿದ್ದಿ– ನನ್ನ ತಡಿಬ್ಯಾಡೀಗ, ನಗಚ್ಯಾಟಿ ಹಿಂಗs ಮಾಡಂತಾರೇನ ನಿಮ್ಮೂರಾಗ, ನಮ್ಮಣ್ಣ ಹೋಗ್ಯಾನೀಗ ಪ್ಯಾಟ್ಯಾಗ. (ಹೋಗ ಹತ್ತುವಳು.)

॥ ಪದ ಡೆಯಲಾಗ ॥

ಸಿದ್ದಪ್ಪ– ಬಾರೆ ನನ್ನ ಬಂಗಾರ ಬಾರೆ ।

ತೋರೆ ನೀ ನಗೆಮುಖ ಸರಸವಾಡುತಾ ಬಾ ॥ಪ॥

ಸಿದ್ದಿ– ಒಲ್ಲೆ ನನ್ನ ರಾಜ ಒಲ್ಲೆ ।

ಒಲ್ಲೆ ನಾ ಮನಸಿನ ದುಗಡವ ಪ್ರಿಯಾ ॥

ಸಿದ್ದಪ್ಪ– ಹೌದ ನನ್ನ ಬಂಗಾರಿ । ಯಾಕೊಲ್ಲೆ ।

ಸಿದ್ದಿ– ಭೇದ ಮಾಡಿ ನೋಡ್ತಿ ನೀ ನಾನೊಲ್ಲೆ ॥

ಸಿದ್ದಪ್ಪ– ಮದ ಏರಿ ಮಾತಾಡ್ತಿದಿ ಮನಸಿಗೆ ಬಂದ ಹಾಗೆ ॥೧॥

ಏ ಸಿದ್ದಿ, ಇಲ್ಲದೊಂದು ಹಚಿಕೊಂಡ ಕುಂದ್ರಬ್ಯಾಡ ದಾರ್‍ಯಾಗ, ನೋಡಿಲ್ಲಿ ಕಟ್ಟಿನ ಬಡ್ಗಿ ಕೈಯಾಗ, ಏಟ ಬಿಡ್ದಾಗ ಬರ್ತಿ ಹಾದಿ ಮ್ಯಾಗ. "ಚಂದ್ಗೇಡಿ ಕೈಯಾಗ ಚೌಕಾ ಕೊಟ್ಟರ ಚೌಕಾ ಒಯ್ದು ಚರಂಡ್ಯಾಗ ಒಕ್ಕೊಟ್ಟತ್ತಂತ."

ಸಿದ್ದಿ– ಅಯ್ಯ ನನ್ನ ಗಂಡ ಹಾದಿ ಮ್ಯಾಲ ಬರ್ಲಿಕ್ಕ ನಾ ಮಾಡಿಲ್ಲ ಕೆಟ್ಟ ಇಚಾರ, ಹೊಡಿತಾನಂತವ್ವ ಸೂರ, ಸಂಬಾಯಿತ ಹುಡಗೀನ ಕಂಡು ಕಣ್ಣಾಗ ಗೊಂಬಿ ಅವ ಇಲ್ಲಂತ ನೋಡ್ತಿಯೇಳುs

ಸಿದ್ದಪ್ಪ– ಏ ಹ್ಯಾಗಿ, ಗಂಡ ಅಂದ್ರ ನೀ ಏನಂತ ತಿಳಿದಿದಿ. ರಸ್ತಾದಾಗ ಅದರಾಗೀಟ ಗಸ್ತಿ ತಿರಗು ಮಂದ್ಯಾಗ ಗಂಡಗ ಹ್ಯಾಂಗ ಮಾತಾಡಬೇಕು ಅನ್ನುದು ಸ್ವಲ್ಪರ ವಿಚಾರ ಅದ ? ಮೊದಲ ದೀಬರ ದಿಂಡಿ. "ದೀಬರದಿಂಡಿ ಕೈಯಾಗ ದೂಪಾರ್ತಿ ಕೊಟ್ಟರ, ದೂಪಾರ್ತಿ ಒಯ್ದು ಅಡ್ಡ ಗ್ವಾಡಿ ಮ್ಯಾಲ ಇಟ್ಟಿತ್ತಂತ" ನಡಿ ಮನೀಗಿ. (ಹೋಗ ಹತ್ತುವನು.)

ಸಿದ್ದಿ– ಅಯ್ಯಽಯ ಹೊಂಟೆ ಬಿಟ್ಟಿಯಲ್ಲ ಧೊರಿ, ಜರಾ ನಿಂದ್ರಿ ನನ್ಧಣಿ

ಸಿದ್ದಪ್ಪ– ಯಾಕಽ ನನ ಬಂಗಾರ ಕಟ್ಟಾಣಿ (ಮುದ್ದು ಕೊಡುವನು.)

ಸಿದ್ದಿ– ಇಗಾ ಹಿಂಗ ಮಾಡಿದಿ ಅಂದ್ರ ಒತ್ತಿ ಎಳತೀನ ನೋಡ, ತ್ವಾಟ ದಾಗನಿಂದ ಬರೂ ಮುಂದ ಬದನಿಕಾಯಿ ತೊಂಬಾ, ಆಂಽ

ಸಿದ್ದಪ್ಪ– ಯಾಕ ತುಂಬು ಬದನಿಕಾಯಿ ಮಾಡಬೇಕಂತ ಮಾಡಿದೇನ; ಅಗಾ ಬಂದ ನೋಡ ನಿಮ್ಮಣ್ಣ ಮೂಗಹರಕ್ಯಾ

ಸಿದ್ದಿ– ಎಲ್ಯಾರ ನಿನ್ನ ದೃಷ್ಟಿ ತಾಕೀತು ಲಗೂನ ಎಡಗಾಲ ನೋಡಕೋ.

ಬಳಗಾರ– ಸಲಾಂಪಾ ಮಾವಾ, ಗಂಡ ಹೆಣ್ತಿ ಇಬ್ಬರೂ ಜೋಡಿಲೇ ನಿಂತಿರೆಲ್ಲೋಪ.

ಸಿದ್ದಪ್ಪ– ಜೈಗೋಪಾಳವೋ ಬಾ, ನೀರ್ಗಿ ಹೋಗತಿದ್ದು ಹಂಗ ಭೆಟ್ಟಿನು ಆತು. ಮನಿ ಪರಪಂಚ ಮಾತಾಡ್ತಿದ್ದೆವು, ಹ್ಯಾಂಗ ನಡದೈತಪ್ಪಾ ಬಸಣ್ಣ ಯಾಪಾರ.

ಬಳಗಾರ– ಹಂಗ; ನಡದೈತೋ ಮಾವ ಬಳಿ ಯಾಪಾರ. ಶೇಂಗಾಕ ಕಡ್ಡಿ ಹುಳಾ ಹತ್ತಿ ಬೆಳೆಗಳು ಬೆಳಿಲಾರ್ದಂಗ ಆಗಿ. ಹೆಣ್ಮಕ್ಕಳ ಕೈಯಾಗ ರೊಕ್ಕಾನ ಕಡಿಮಿ ಆಗೈತೆ.

ಸಿದ್ದಪ್ಪ– ನೀಯರ ಏನ್ಮಾಡಿತೆಪ್ಪಾ. ಶೇಂಗಾಕ ಕಡ್ಡಿಹುಳಾ ಬಂದಾವನಪಟಿಗೆ ಮನುಷ್ಯರಿಗೆ ಹುಳ ಹತ್ತು ಪರಸಂಗ ಬಂದ್ಯೆತಿ.

ಸಿದ್ದಿ– ಆಲ್ರಿ, ನಮ್ಮಣ್ಣ ಹ್ಯಾಂಗಿದ್ರೂ ಬಳಿ ಭಲೋ ತಂದಾನ; ನನ್ಗಂದ್ರ ಬಾಳ ಭಲೋ ಇಡ್ತಾನ.

ಸಿದ್ದಪ್ಪ– (ಸ್ವಗತ) ಇಡಲಾರ್ದ ಏನ್ಮಾಡ್ಯಾನು, ನಿನಗಂದ್ರ ಒಳ್ಳೇ ಗುತ್ತ ಇಡ್ತಾನ

ಬಳಗಾರ– ಯಾವದು ಇಡಂದೆವ್ವಾ ಚೆಕ್ಕಿ.

ಸಿದ್ದಿ– ಕೊಡ್ರಿ ಎರಡು ರೂಪಾಯಿನ.

ಸಿದ್ದಪ್ಪ– ಎರಡು ರೂಪಾಯಿ ಯಾಕ ನಾಕ ರೂಪಾಯಿ ಕೊಡ್ತಿನಂತ ತಡಿ (ಸ್ವಗತ) ಹೊತ್ತ್ತು ಬಂದಾಗ ಇಳಸ್ತೀನಿ ಇವ್ನ ಮೈಯನ ಮಡ್ಡಿ.

ಸಿದ್ದಿ– ಏ ! ಹಣಮಂತ ದೇವರ ಗುಡಿ ಮುಂದಿನ ಮಾಲಗಂಬ ನಿಂತಾಂಗ ಯಾಕ ನಿಂತಿ?

ಸಿದ್ದಪ್ಪ– ಇಡಂತ ಇಡಪ್ಪ ಇಕಿಗಿ.

ಸಿದ್ದಿ– ಏನ ಹಲ್ಕಟ್ಟ! ಮಾತಾಡುದು ಕಲ್ತಿಯೊ, ಬರೆ ಹಲ್ಲ ಕಿಸಿದೊಂದ, ತಿಳಿದಾದ!

ಸಿದ್ದಪ್ಪ– ಅಂದಲ್ಲೆ ತಿಳಿ ಇದ್ದ ನನ್ನ ಬಂಗಾರಿನ್ನ ಕೈಹಿಡಿದದ್ದು. (ಮುದ್ದು ಕೊಡುವನು)

ಬಳಗಾರ– ಮತ್ತೇನೋ ಮಾವಾ, ನಾಳೆ ಹೊಸ್ತಿಲ ಹುಣ್ಣಿವಿಗಿ ಐತಿ ದುರ್ಗಮ್ಮನ ಜಾತ್ರಿ, ಅದಕ್ಕ ತಂಗಿಗಿ ಕೊಟ್ಟ ಕಳ್ಳೋಪ; ಹೊತ್ತಾಕ್ಕೈತಿ, ನೀನೂ ನಡಿಯೋಪ ಮತ್ತೆ ಬಾರಂತಿ.

ಸಿದ್ದಿ– ಅಯ್ಯ! ಹೌದ ನೋಡ, ಹ್ಯಾಂಗೂ ನಮ್ಮವ್ವಾ ಕರಕೊಂಡ ಬಾ ಅಂತ ಹೇಳ್ಯಾ, ಅದ್ಕ ಹೋಗೂನೂ ನಡಿ

॥ **ಪದ** ॥ (ಡಯಲಾಗ)

ಸಿದ್ದಿ– ಹೋಗೋನು ಬಾರೋ ನಮ್ಮೂರ ಜಾತ್ರಿಗೆ ಹೋಗೋನು ।
ಮಾಗಿಯ ಬಿಸಲಾಗ ಹೂಡೋನ ಗಾಡಿ ।
ಸದ್ದಿಲ್ಲದ ರಾಯ ನಾವೆಲ್ಲರೂ ಕೂಡಿ ॥ ಹೋ.....॥ ಪಲ್ಲ ॥

ಸಿದ್ದಪ್ಪ– ಧತ್ರಿಯ ಹಂಗ ಕುಣಿಬ್ಯಾಡ ಎಕ್ಕ
ಮಿತ್ರಿ ನನಗುಣ ತಿಳಿಲಿಲ್ಲ ಇದಕ್ಕ !
ಹತ್ತಾರ ರೂಪಾಯಿ ನೋಟಿನ ಸಿಕ್ಕ ।
ಜಾತ್ರಿಗಿ ಹೋಗುದ್ಕ ಬೇಕಿಲ್ಲ ರೊಕ್ಕ ॥ಹೋ.... ॥ ೧ ॥

ಸಿದ್ದಿ– ಮಾಡೀನಿ ಮನಸಾ ಹೋಗ್ಯಾವ ದಿವ್ಸ ।
ನೋಡಬೇಕಂತೀನಿ ತೇರಿನ ಕಳ್ಸ ॥
ಒಡಿಯಬೇಕಂತೀನಿ ಕಾಯೀs ಸೊಗಸ !
ಬ್ಯಾಡ ಬ್ಯಾಡಂತೀದಿ ನೀ ಬಲು ಸೊಗಸಾ॥ ಹೋ....॥ ೨ ॥

ಬಳಗಾರ– ಸಿಸ್ತಿಲಿ ಸಾಗತೈತಿ ನಮ್ಮೂರ ತೇರಾ ।
ಬಿಸ್ತಿಲಿ ತಿರಗತಾರ ಖಾಕಿ ಪೋಲಿಸರ ॥

ಕುಸ್ತಿಯ ಕಣದಾಗ ಗಡಿಗಳ ಜೋರ ।

ಭಕ್ತಿಲಿ ನಡಿಶಾರ ನಮ್ಮೂರ ಜನರಾ ॥ ಹೋ....॥ ೩ ॥

ಸಿದ್ದಪ್ಪ– ಏ ! ಮಲ್ಕಿ; ಹೋಗೂನ ನಡಿ ಅಂತ ಹೇಳ್ತಿ; ಹೋದ್ರ ಸಾವುಕಾರ ಮನಿ ಮುಂದ ಯಾರನ್ನ ಕುಂದ್ರಸ್ತಿ, ಬುಬ್ಬಣಿ ಹಳೇ ಬುಬ್ಬಣಿ. ಎಲ್ಲಿಗೆನs ಅಂದ್ರ ಥಕ್ಕತ್ತೈ ಅಂತ ತೈಯ್ಯಾರಾಗೇ ಬಿಡ್ತಾಳ. ಸ್ವಲ್ಪರ ಸಂಸಾರ ಚಿಂತೀನs ಇಲ್ಲ. ಕಂಡ ಹೊಲ್ದ ಕರಕಿ ಮೇದ, ಎಲ್ಲ್ಯಾರ ನಿಂತ ನೀರ ಕುಡ್ದ ಕೊದ್ದೊಡಿ ಕ್ವಾಣನ್ಹಂಗ ಡರಿಕಿ ಒಕ್ಕೋತ ತಿರಗಬೇಕಂತ ಮಾಡಿಯೇನ, ಏನಪಾ ಬಳಗಾರ, ಎಷ್ಟು ದಿನಪಾ ನಿನ್ನ ಕ್ಯಾಂಪ?

ಬಳಗಾರ– ಇಲ್ಲೆ ಕ್ಯಾಂಪ ಹಾಕಿದ್ರ ಕೆಡತೈತಿ ಮಾವ ಜಾತ್ರಿ,

ಸಿದ್ದಪ್ಪ– ಏನಪಾ ಬಳಗಾರ? ಈಗ ಸಾಪ ಕಳ್ಸೂದು ಆಗಂಗಿಲ್ಲಾ. ಬೇಕಾದ್ರ ಇವರೌವ್ವನ್ನ ಕಳ್ಸಿ ಇಕಿಗಿ ಬೇಕಾದಲ್ಲಿ ಕರಕೊಂಡು ಹೋಗು.

ಸಿದ್ದಿ– ಅಯ್ಯಯ್ಯ ! ಬಿಡ ನಿನ, ನನ್ಗ ಕೊಟ್ಟದ್ದಲ್ಲ ನಮ್ಮವ್ವ ಯಾಕ ಬರ್ತಾಳ ನಿನ ಮನಿಗಿ. ನಡೆಪಾ ಯಣ್ಣಾ, ಸೂರ್ಜ್ಯಾನು ನೆತ್ತಿ ಮ್ಯಾಲ ಬಂದಾನ ಉಂಡ ಹತ್ನೆಡೀ ಪ್ಯಾಸಿಂಜರಗಾಡಿ.

ಬಳಗಾರ– (ಸ್ವ) ಕಡಿಗಿ ಗಾಡಿ ಬಾಡ್ಗಿ ಇಲ್ದ ಹೊಂಟಿತು. ಥ್ಯಾಂಕ್ಸಪಾ ಮಾವಾ, ಹೋಗಿ ಬರ್ತೀನಿ.

ಸಿದ್ದಪ್ಪ– ಲೇ ತಮ್ಮಾ; ನೀ ಸಾಲಿ ಗುಡಿಗಿ ಹೋಗಿ ಒದಗಿ ಬಂದಿಯೇನೋ? ಏನೋ ಕಸಪಿಸಾ ಅಂತಾ ಅಂತೀಯಲ್ಲ.

ಸಿದ್ದಿ– ಅಯ್ಯಯ್ಯ, ನನ್ನತಮ್ಮ ಕಂಡಾಪಟಿ ಓದ್ಯಾನ. ಯಾಕ ತಮ್ಮ ಈ ವರ್ಷ ಪಾಸಾದೇನ?

ಬಳಗಾರ– ಈಗ ಮಾತ್ರ ಪರೀಕ್ಷಾ ಕೊಟ್ಟೇನೀ ಮುಂದಿಂದು ಮಹಾದೇವಗ್ ಗೊತ್ತು. ಹೋಗಿ ಬರ್ತಿನೆಪಾ ಮಾವಾ ನಡೆವಾ ಯಕ್ಕ [ಮನೆಗೆ ಇಬ್ಬರೂ ಹೋಗುವರು]

ಸಿದ್ದಪ್ಪ– ಇಂವ ಯಾಕ ಕೈ ತೊಳಕೊಂಡ ಬೆನ್ನ ಹತ್ತಿದ್ನಪಾ ಅಂತೀನಿ ಏನs ಇರ್ಲಿ ಹೋಗೂನು. ಇನ್ನಾ ಎಷ್ಟೈತೋ ನನ್ನ ಬಾಳೇದ ಬಂಡಾಟ ಮುಂದ. (ಹೋಗುವನು)

೪ನೇ ಪ್ರವೇಶ

(ದೃಶ್ಯ : ಮನೆ)

(ಈಶ್ವರನ ಮೂರ್ತಿ. ಜಮುನಾ ವಿಜಯನನ್ನು ಕೂಡ್ರಿಸಿ) ದೇವರ ಪೂಜೆ ಮಾಡುತ್ತಾಳೆ.)

॥ ಪದ ॥

ಜಯಗೌರಿ, ಹರ, ಶಂಭೋ ಶಂಕರ ।
ಕಾಯೋ ಭಕುತರ । ಜೀವನಸಾರ ।
ಕಾರುಣ್ಯ ಸಿಂಧು । ಅನಾಥ ಬಂಧು ॥
ಹರಸಿ ನೀ ಯನ್ನ । ಮಾಂಗಲ್ಯ ಕಾಪಾಡು ।
ಕರುಣಿಸೀ ನೀss ಅಭಯದೋರು ॥

ಜಮುನಾ– ದೇವದೇವನೇ! ಅಖಿಲ ನೇತ್ರನೇ ! ನಿನ್ನ ಪಾದ ಪಂಕಜಗಳಿಗೆ ನಮೋ ನಮಃ ಇಂದೇಕೆ ಬರಿ ಸೆಳೆ ಮಿಂಚಿನ ಹೊಡೆತಕ್ಕೆ ಎಷ್ಟೋ ವೇಗವಾಗಿ ಓಡುತಿದೆ ಹೃದಯ; ಶಕುಂತಲಾ, ದಮಯಂತಿಯ ರಂತಹ ಉಪಮೆಗಳು ಚಿತ್ತದಲ್ಲಿ ತೂಗುಯ್ಯಾಲೆಯಂತೆ ತೂಗಿ ಮಾಯವಾಗುವ ದೃಶ್ಯ; "ಅಶುಭ ಅಳಿಯಲಿ" ದೇವಾ ! ಬೇಗನೇ ನನ್ನ ಪತಿಯು ಬರುವಂತೆ ಅನುಗ್ರಹಿಸು ತಂದೆ. "ಸಮುದ್ರದಲ್ಲಿ ನದಿಯು ಲೀನವಾದಂತೆ" "ಕಾಯವು ಭಾವದಲ್ಲಿ ಐಕ್ಯವಾದಂತೆ" ನಾನು ನಿನ್ನಲ್ಲಿ ಬೆರೆತಿರುವೆ ತಂದೆ. ಈ ಅದೃಷ್ಟದ ಚಿತ್ರಗಳು ಎನ್ನ ಚಿತ್ತದಲ್ಲಿ ಚಿತ್ರ ವಿಚಿತ್ರವಾಗಿ ಚಿತ್ರಿಸಬೇಡ ದಯಾನಿಧಿ!

(ಪದದಿಂದ ಪೂಜೆ ಮುಕ್ತಾಯವಾಗುವಷ್ಟರಲ್ಲಿ ಶಾಂತಾ ಆರುತಿಯನ್ನು ಹಿಡಿದ ತಾಟಿಗೆ ಒದೆಯುವಳು.)

ಶಾಂತಾ– ಆಹಾಹಾ! ಗೈಯ್ಯಾಳಿಯಂತೆ ಗಾನ ಮಾಡಿ, ಗತಿಸಿ ಹೋದ ಗಣ್ಯರ ಗುಣಗಾಯನ ಮಾಡುತ್ತಾ ಕುಳಿತರೆ ನಿಮ್ಮವ್ವ ಬರುವಳೇನು ಮನೆಗೆಲಸ ಮಾಡಲು. ಹಣೆಯಲ್ಲಿ ಅಡ್ಡ ವಿಭೂತಿಯ ಪಟ್ಟಿಯನ್ನು

ಧರಿಸಿ, ಕುಂಕುಮ ಇಟ್ಟ ಮಾತ್ರಕ್ಕೆ ನೀನೇನು ಶಿವಶರಣಿಯಾಗ ಬಲ್ಲಿಯೇನು? ನಿಮ್ಮಂಥ ಶರಣಿಯರಿಗೆ ನಂಬಿ ನಮ್ಮ ಭಾರತ ಕೊಳೆಗಾಲದ ಕಂದಕದಲ್ಲಿ ಬಿದ್ದಿದೆ.

ಜಮುನಾ– (ಕಿವಿಮುಚ್ಚಿ) ಶಿವ ಶಿವಾ? ಹಾಗನ್ನಬೇಡಕ್ಕ, ಕೊಳೆಗಾಲದ ಕಂದಕದಲ್ಲಿ ಬೀಳಲಿಕ್ಕೆ ಏನಾಗಿದೆ ನಮ್ಮ ಭಾರತಕ್ಕೆ ? ಪರಮ ಪವಿತ್ರಳಾದ ವೀರ ಭಾರತಮಾತೆಯ ಉದರದಲ್ಲಿ ಜನಿಸಿದ ಶಿವಶರಣೆ ನಂಬೆಕ್ಕ, ಅಕ್ಕಮಹಾದೇವಿ, ಅಲ್ಲಮಪ್ರಭು, ಜಗಜ್ಯೋತಿ ಬಸವಣ್ಣನವರು, ಶಾಂತಿ ಸಂದೇಶವನ್ನು ಬೀರಿ ಇದೇ ಭಾರತದಲ್ಲಿ ಐಕ್ಯ ಹೊಂದಿರುವರು. ಇದಲ್ಲದೆ ಪೂಜ್ಯ ಮಹಾತ್ಮಾಗಾಂಧಿ, ಲೋಕ ಮಾನ್ಯಟಿಳಕ, "ನವಶಿಲ್ಪಿ" ನಮ್ಮ ನೆಚ್ಚಿನ ಪಂಡಿತ ಜವಾಹರರು ಲೋಕ ಕಲ್ಯಾಣಕ್ಕಾಗಿ ದುಡಿದು, ತಮ್ಮ ಅಖಂಡ ನಾಮವನ್ನು ಈ ಭೂಮಂಡಲದಲ್ಲಿ ಬಿಟ್ಟು ಅಖಂಡೇಶ್ವರರಾಗಿ ಮಾಯವಾಗಲಿಲ್ಲವೇ ? ಇಂಥಾ ವಿಶಾಲವಾದ ಭಾರತದಲ್ಲಿ ನಮ್ಮಂಥಾ ಕ್ಷುಲ್ಲಕರು ಹುಟ್ಟಿ ತಂದಿರುವದು ಅಧೋಗತಿ.

ಶಾಂತಾ– (ಹೊಡೆದು) ಏನೇ ನನಗೆ ಕ್ಷುಲ್ಲಕರ ಗುಂಪಿಗೆ ಸೇರಿಸುವಿಯಾ ಬರಲಿ ನಿನ್ನ ಪತಿ, ಪತಿಯು ಹೋದಂದಿನಿಂದ ಬೇರೆಯಾಗಿದೆ ನಿನ್ನ ಮತಿ. ದೇವರಪೂಜೆ ಮಾಡುವೆನೆಂದು ಬೇರೊಬ್ಬರ ಪೂಜೆ ಮಾಡುವುದು ನನಗೂ ತಿಳಿದೇ ಇದ್ದೇ ನಿನ್ನ ದುರ್ನಡತಿ.

ಜಮುನಾ– ಶಾಂತಾ.....ನಿನ್ನ ಮನವೆಂಬ ಭ್ರಮರವು ಕೇತಕೀ ವನಕ್ಕೆ ಹೋದಂತೆ ಕಾಣುತ್ತದೆ. (ಕಮಲಾ ಬರುವಳು)

ಶಾಂತಾ– (ಅಳುವಂತೆ ನಟಿಸಿ) ನೋಡಮ್ಮಾ ನನಗೆ ಕ್ಷುಲ್ಲಕ ವೇಶ್ಯೆಯೆಂದು ಬಾಯಿಗೆ ಬಂದಂತೆ ಬೊಗಳುತ್ತಾಳೀ ಹೊಲತಿ. (ಹೊಡೆಯುವಳು.)

ಕಮಲಾ– (ಕಿವಿ ಹಿಂಡಿ) ಏನೇ, ಏ ಚೈನಿ ಚೆನ್ನಿ ! ನನ್ನ ಮಗಳಿಗೆ ಇಲ್ಲ ಸಲ್ಲದ ಆರೋಪ ಹೊರಿಸಿ, ಜಗನಿಂದೆಗೆ ಗುರಿಮಾಡಬೇಕೆಂದಿರುವಿ ಯೇನೇ ಪಾತರಗಿತ್ತಿ. ಮನಸ್ಸಿಗೆ ಬಂದಂತೆ ಮಾತಾಡಲು ನೀನಲ್ಲ ಮೊದಲಗಿತ್ತಿ; ನೀನು ಯಾವ ಮೂಹೂರ್ತದಲ್ಲಿ ಕಾಲಿಟ್ಟೆ, ಅಂದಿನಿಂದಲೇ ಸರಿದು ಹೋಯಿತು ಈ ಮನೆಯ ಕೀರ್ತಿ; ನಾನು ಗರತಿಯೆಂದು ತೋರ್ಪಡಿಸುವದಕ್ಕಾಗಿ ಹಗಲೆಲ್ಲ ದೇವರ

ಪೂಜೆಮಾಡಿ ತಂದಿರುವಿ ನಮ್ಮೆಲ್ಲರಿಗೆ ಅಧೋಗತಿ.

ಜಮುನಾ— ಹಾಗನ್ನ ಬೇಡಕ್ಕಿ, ಮನೆಕೆಲಸ ಮುಗಿಸಿ ಸಮಯ ಸಿಕ್ಕಾಗ ದೇವರ ಪೂಜೆ ನೀವೆ ಮಾಡೆಂದು ಹೇಳಿಲ್ಲವೇ ಸುನೀತಿ, ನಾನೇನು ಮಾಡಿರುವೆ ಅನೀತಿ?

ಕಮಲಾ— ನಾನೇನು ಮಾಡಿರುವೆನೆಂದು ಇದಿರು ವಾದಿಸುವೆಯಾ ದರಿದ್ರ ರಂಡೆ. (ಹೊಡೆದು) ಎಂದು ನೀನು ಬಾಗಿಲಲ್ಲಿ ನಿನ್ನ ಕರಿಗಾಲ ಹಾಕಿದೆಯೋ ಅಂದೇ ನನ್ನ ಮಾಂಗಲ್ಯವನ್ನು ಕಳಕೊಂಡೆ. [ಹೊಡೆದು] ಇನ್ನೇನು ಮಾಡಬೇಕೆಂದಿರುವಿ? ಮಾಡುವದೆಲ್ಲಾ ಮಾಡಿ ಈ ಮನಿಗೆ ಅಳಿಗಾಲ ತಂದಿಟ್ಟೆ ಕತ್ತೆರಂಡೆ ನಡೆ ಆಚೆ. [ಮತ್ತೊಮ್ಮೆ ಹೊಡೆಯುವಳು]

ಜಮುನಾ— [ಅಳುತ್ತ] ನಿಮ್ಮ ಮಾಂಗಲ್ಯ ಕಳೆಯಲು ನಾನೇನು ಮೃತ್ಯು ದೇವತೆಯೇ? ಅಲ್ಲಾ ನಾನು ನಿಮ್ಮಹಾಗೇ ಕಾಣುವ ಒಂದು ವ್ಯಕ್ತಿ.

ಶಾಂತಾ— ನೋಡಮ್ಮಾ, ನಿನ್ನ ಸೊಸಿಯ ಪ್ರತಾಪ. ಸ್ವಲ್ಪಾದರೂ ನಿಮ್ಮಂತಹ ಹಿರಿಯರಿಗೆ ಅಂಜುವಳೇ, ಅಳಕುವಳೇ; ಅವಳೇನು ಕುಬೇರನ ಪತ್ನಿಯ ಹಾಗೆ ಬಿಂಕದ ಬಿರು ನುಡಿಗಳನ್ನಾಡುತ್ತಾಳೆ. ಅಮ್ಮಾ ಹೇಸಿ ಮುಖದ ಅರಿಷ್ಟ ರಂಡೆಗೆ ಮನೆ ಬಿಡಿಸಬೇಕು; ಅಂದರೇನೆ ನಮ್ಮ ಮನೆಯ ಕೀರ್ತಿ ಸ್ಥಿರವಾಗಿ ಉಳಿಯುವದು.

ಜಮುನಾ— ಶಾಂತಾ! ಅತ್ತೆಯವರಿಗೆ ಇಲ್ಲದ್ದೊಂದು ಹೇಳಿ; ಕಸಿವಿಸಿಗೊಳಿಸದಿರು ಮನ ; ಶಾಂತಕ್ಕ ನಿನಗೆ ಕೈಮುಗಿದು ಬೇಡಿಕೊಳ್ಳುತ್ತೇನೆ. ನಮ್ಮ ಪ್ರೇಮ ಜೀವನವನ್ನಳಿಸಬೇಡಕ್ಕ [ಅಳುತ್ತ] ನಾನೇನು ಅಪರಾಧ ಮಾಡಿರುವೆ ಮನೆ ಬಿಡಿಸಲು. ಅಕ್ಕಾ ನಿನಗೆ ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. [ನಮಸ್ಕಾರ ಮಾಡುವಳು.]

ಶಾಂತಾ— [ಒದೆದು] ಆಹಾಹಾ, ಸೆರಗೊಡ್ಡಿ ಬೇಡಿಕೊಳ್ಳಲು ನಾನಲ್ಲ ಗುರೂಜಿ. ಏ! ಅರಿಷ್ಟ ಮೊಸಡಿಯವಳೇ; ನಮ್ಮ ದುರ್ದೈವವಶಾತ್ ಅಣ್ಣನು ಬಾರದೆ ಐದಾರು ತಿಂಗಳಾದುವು. ಇಷ್ಟರಲ್ಲಿಯೇ ಕಾಮನ ಬಾಧೆ ತಡೆಯದೆ, ಗುರುವಿನೊಡನೆ ಗುರುತಿಲ್ಲದೆ ಚಕ್ಕಂದವಾಡಿ....

ಜಮುನಾ— [ಕುಗ್ಗಿದ ಉಸಿರಿನಿಂದ] ಶಾಂತಾ.......! [ಮುಖ ಮುಚ್ಚಿಕೊಳ್ಳುವಳು.

ಶಾಂತಾ— ಹೋಳಿ ಹುಣ್ಣಿವಿ ಮಾಡಿದ ಗರತಿ; [ನಕ್ಕು] ನೀನೆ ಅಲ್ಲವೇ ಆ ಸೀತಾ, ತಾರಾ, ಮಂಡೋದರಿಯ ಭಕ್ತಳು.

ಜಮುನಾ— ಶಾಂತಾ [ಅಳುತ್ತ] ಇದೆಂಥಾ ಕರ್ಮ ಕೊಡಲಿಯ ಪೆಟ್ಟು.

ಕಮಲಾ— [ತಿವಿದು] ಏನೇ ಏ ಹೊಯ್ಮಾಲಿ; ಮನೆ ಮನೆ ತಿರುಕೆಯ ಕೂಳು ತಿನ್ನುವ ತಿರುಕ ಜಂಗಮನೊಡಗೂಡಿದ ಅನಿಷ್ಟ ರಂಡೆ. [ಉಸಿರು ಹಾಕಿ] ಉಂಡ ಮನೆಗೆರಡು ಬಗೆಯುವ ಜಂಗಮ; ಅಂತರ್ಯದ ಉಗಮಿಗೆ ಅಂಗಾರದ ಬಣ್ಣ ಬಳದೆಯಾ; [ಹೊಡೆದು] ಏನೇ, ಆ ವಿಟ ಜಂಗಮನೊಡನೆ ಕಾಮಕೇಳಿಯ ಆಟವನ್ನಾಡಲು ವನಕ್ಕೆ ಹೋಗುವದಿಲ್ಲವೇ? ದರಿದ್ರ ರಂಡೆ. ನಮ್ಮ ಮನೆತನದ ಮರ್ಯಾದೆ ಕಾಸಿಗೆ ಪಂಚೇರಿನಂತೆ ಮಾರಿಬಿಟ್ಟೆ.

ಜಮುನಾ— ಹಾಯ್ ಶಿವನೇ, ಅತ್ತೆ ಅಂತಹ ಹೇಸಿ ಕೆಲಸಾ ಮಾಡಿಲ್ಲ ತಾಯಿ; ಹೊರಲಾರದ ಅಪಾದನೆ ಹೊರಿಸಿ ಜಗದ ನಿಂದೆಗೆ ಗುರಿ ಮಾಡಬೇಡಿ ಅತ್ತಿಯವರೇ ! ನಿಮ್ಮೆಲ್ಲರ ಕರುಣೆಯ ಕೂಸಾದ ಈ ದೀನಳಿಗೆ ಹೊಡಿಯಬೇಡಿರಿ !! "ಜಂಗಮ ಜಗದ್ಭರಿತ" ಆ ಮೂರ್ತಿಮಂತ ತಂದೆ ಸ್ವರೂಪರಿಗೆ ಅಪದ್ಧ ಮಾತುಗಳನ್ನಾಡಬೇಡಿ ಈ ನಶ್ವರವಾಗುವ ದೇಹಕ್ಕೆ ಪತಿದೇವರ ಹೊರತು ಉಳಿದವರೆಲ್ಲರೂ ನನ್ನಣ್ಣ ತಂದೆಯ ಸಮಾನರು.

(ಜಯ ಓಡಿ ಬಂದು)

ಜಯ— ಅಮ್ಮಾ.....! ನಾನು ಶಾಲೆಗೆ ಹೋಗುತ್ತೇನೆ, ಪೆನ್ಸಿಲ್ ಕೊಡಮ್ಮಾ!

ಜಮುನಾ— (ಅಳುತ್ತ) ಮಗು, ಕಷ್ಟ ಕಾರ್ಪಣ್ಯದಿಂದ ನಿಮ್ಮ ತಂದೆ ದುಡಿದು ಮನೆ ಕ್ಯಾನ್ಸಲ್ ಆಗುವ ವೇಳೆಯಲ್ಲಿ ನಿನಗೆ ಎಲ್ಲಿಂದ ಪೆನ್ಸಿಲ್ ಕೊಡಲಿ?

ಜಯ— (ಕಣ್ಣೀರು ಒರೆಸುತ್ತಾ) ಹೀಗೇಕಮ್ಮಾ! ಮನೆಯೇಕೆ ಕ್ಯಾನ್ಸಲ್ ಆಗುವದು? ಈ ಮನೆ ನಮ್ಮದಲ್ಲವೇ ಏಕೆ ಅಜ್ಜಿ!

ಶಾಂತಾ— ಏ ! ನಮ್ಮದು ನಿಮ್ಮದು ಅನ್ನುವ ಗೂಗೆ. (ಜಗ್ಗಿ ಹಿಡಿದು) ನೀನೊಬ್ಬ ಓದದಿದ್ದರೆ ತಾಲೂಕಾ ಜಿಲ್ಹಾದ ನ್ಯಾಯಸ್ಥಾನದ ಜಾಗೆ ಹಿಂತಿರುಗಿ ಹೋಗುವದಿಲ್ಲ ಮೂರ್ಖಾ. (ಹೊಡೆಯುವಳು.)

ಜಮುನಾ– ಹೊಡೆಯಬೇಡಕ್ಕ ನಿನ್ನ ಕಾಲಿಗೆ ಬೀಳುವೆ. (ಗಂಭೀರದಿಂದ) ಶಾಂತಾ ಮುಂದೆ ನಿನಗೆ ಇದರಿಂದ ಕೇಡಾಗುವದೆಂಬುದನ್ನು ಮಾತ್ರ ಮರೆಯಬೇಡ. ಇದುವೇ "ಗರತಿಯ ಶಾಪ".

ಕಮಲಾ– (ಹೊಡೆದು) ಏನೇ, ನನ್ನ ಮಗಳಿಗೆ ಪ್ರತ್ಯುತ್ತರ ಕೊಡುವಿಯೇನೇ? ನನ್ನ ಮನೆಯಿಂದ ಕಾಲ್ತೆಗೆ. ಇಲ್ಲವಾದೊಡೆ ಕುತ್ತಿಗೆಗೆ ಕೈಕೊಟ್ಟು ದಬ್ಬಬೇಕಾದೀತು ನಿನಗೆ. ಹೂಂ ನಡೆ. [ದಬ್ಬುವಳು]

ಜಯ– ಏಕಮ್ಮಾ! ನಾವೇಕೆ ಮನೆ ಬಿಟ್ಟು ಹೋಗಬೇಕು? ಬೇಕಾದರೆ ನೀವೇ ಹೋಗಿ.

ಜಮುನಾ– ಮಗು, ಹಿರಿಯರಿಗೆ ಹಾಗನ್ನಬಾರದಪ್ಪ.

ಜಯ– ಏನಮ್ಮಾ ಇವರು ಹಿರಿಯರೇ. ಹುಂ "ಬೇರೊಬ್ಬರ ಮನೆಗೆ ಕನ್ನ ಇಕ್ಕುವ ಕಪಿಗಳು." (ಈರ್ವರೂ ಹೊಡೆಯುವರು)

ಜಮುನಾ– ಮಗು ಹಿರಿಯರಿಗೆ ಹಾಗನ್ನಬಾರದಪ್ಪ, (ಅಳುತ್ತ) ಅತ್ತಿಯವರೇ ನನ್ನ ಸ್ವಾಮಿ ಬರುವವರೆಗೆ ಮಾತ್ರ ನಿಮ್ಮಲ್ಲಿರುವೆ. ಅವರು ಬಂದ ಕೂಡ್ಲೆ ಎಲ್ಲಿಗಾದರೂ.......!

ಸಿದ್ದಿ– (ಹಾಲಿನ ಲೋಟ ತಂದು) ಯವ್ವ, ವಿಜಯಣ್ಣಾಗ ಕಳಿಸಿರಿ. ಹಾಲ ಕುಡಸ್ತೀನಿ, ಬಾರಪ್ಪ ಜಯಣ್ಣ ನೀನು ಹಾಲು ಕುಡಿಯಂತಿ. [ಇಬ್ಬರಿಗೂ ಕರೆದುಕೊಳ್ಳುವಳು.] [ಸ್ವಗತ] ಇದೇನs ತಾಯಿ, ತಾಯಿ ಮಗಳಿಬ್ಬರೂ ಕೊಟ್ಗೆನ ಇರ್ಕ ಎತ್ತ ನಿಂತಾಂಗ ಆಗೆದಲ್ಲ,

(ಹಾಲು ಕುಡಿಸುವಷ್ಟರಲ್ಲಿ ಗುರು ಬಂದು ಹಾಲಿನ ಲೋಟಕ್ಕೆ ಹೊಡೆಯುವನು.)

ಸಿದ್ದಿ– ಅಯ್ಯಯ್ಯ! ಯಾಕ್ರಿ ಮಕ್ಕಳು ಕುಡಿಯುವ ಹಾಲ ತೆಳಗ ಚೆಲ್ಲಿ ಬಿಟ್ಟಿರಲ್ರಿ,

ಗುರು– ಅಹುದು ಸಿದ್ದಮ್ಮಾ, ಈ ಹಾಲು ಭೂದೇವಿಗೆ ಮೀಸಲಾದದ್ದು ಆಕೆಯ ವಿನಃ ಆರಿಗೂ ಸೇವಿಸಲೂ ಸಾಧ್ಯವಿಲ್ಲ. ಏಕೆಂದರೆ ಕರ್ಮದ ಹೊದಿಕೆಯನ್ನು ಹೊದ್ದುಕೊಂಡು ಬಂದ ನಿರ್ಜೀವಿಗಳು ನಾವು; ಆಕೆಯ ಸಜೀವಾತ್ಮಳು ಪುನೀತಳು; ಪಾಪರಹಿತಳು. ಇಂತಹ ವಿಷವು ಆನೆಯ ಗರ್ಭಕುಂಡದಲ್ಲಿ ತಿಮಿರಮಯವಾಗಿ

ತಿರುಗುತಿದೆ, ಸಿದ್ದಮ್ಮಾ ಈ ಹಾಲಿನಲ್ಲಿ ವಿಷ ಬೆರೆತಿದೆ. ನೋಡು ಸಿದ್ದಮ್ಮಾ ಹಾಲು ಕುಡಿದ ಬೆಕ್ಕು ಚಟಪಟನೆ ಬಿದ್ದು ಒದ್ದಾಡಿ ತನ್ನ ನಿಜ ಸ್ಥಾನಕ್ಕೆ ತೆರಳಿತು. ವೀರ ಭಾರತಮಾತೆಯ ಉದರದಲ್ಲಿ ಜನಿಸಿದ ನಿಷ್ಕಾಮಯೋಗಿ ಆ ನಿನ್ನ ಗಂಡ ಸಿದ್ದಪ್ಪನ ಸಹಾಯದಿಂದ ಇಲ್ಲಿ ಬಂದೆ. [ದುಃಖ] ಅವನು ನನಗೆ ತಿಳಿಸದಿದ್ದರೆ ಮುಂದಿನ ಭಾರತ ಭವಿಷ್ಯದ ನವಶಿಲ್ಪಿಯಾಗಲಿರುವ ಈ ಮಕ್ಕಳು ಆ ಪರಮ ದ್ರೋಹಿ ಮೃತ್ಯುದೇವತೆಯ ಉಡಿಯಲ್ಲಿ ಚಿರಂತನ ನಿದ್ದೆಗೈಯುತ್ತಿದ್ದರು.

[ಜಮುನೆಯು ಮಕ್ಕಳಿಗೆ ತೆಕ್ಕೆ ಬೀಳುವಳು.]

ಶಾಂತಾ– ಅವ್ವ ಇದು ಸಿದ್ದಿಯ ಕುತಂತ್ರವೆ ಕಾಣುತ್ತದೆ. [ಹೊಡೆದು] ಏನೇ ಅರಿಷ್ಟ ಮೊಸಡಿಯವಳೇ, ಎಷ್ಟು ದಿನದಿಂದ ಕೊಲ್ಲಬೇಕೆಂದು ಹೊಂಚು ಹಾಕಿ ಕುಳಿತಿದ್ದೆ? [ಅಮ್ಮಾ ಇಲ್ಲಿ ಮಾತ್ರ ಕಥೆಯು ಬೇರೆ ರೂಪ ತಾಳಿದೆ.] ಏಕೆ ಗುರುಗಳೇ! ನಿಮ್ಮಿಬ್ಬರ ಕಾಮವಿಲಾಸಕ್ಕೆ ಕಾಲ್ತೊಡಕಾಗುತಿವೆ ಎಂದು ಈ ಮಕ್ಕಳಿಗೆ ನೀವೇ ವಿಷ ಹಾಕಿ ಸಿದ್ದಿಯ ಕೈಯಲ್ಲಿ ಕೊಟ್ಟಿರುವಿರಿ.

ಗುರು– [ಕ್ರೋಧದಿಂದ] ಶಾಂತಾ, ಈ ನಿನ್ನ ಬಾಯಿಂದ ವಿಷಾಕ್ಷರಗಳ ಮಾಲೆ ಮಾಡಿ, ಭವಬಂಧನವನ್ನು ಹರಿದೊಗೆದು ಈ ನಿಷ್ಕಾಮ ಯೋಗಿಯ ಕೊರಳಿಗೆ ಹಾಕಬೇಡ. ಎಲೇ ಹುಚ್ಚು ಹೆಣ್ಣೆ, ಕಾಮದ ಮದದಿಂದ ತಾರುಣ್ಯದ ಹೊಸ್ತಿಲಲ್ಲಿ ಕಾಲಿಟ್ಟ ನಿನಗೀಗ ತಿಳಿಯಲಾರದು ಇದರ ಅನುಭವ. ಕಾಮನ ಬಾಹುಬಂಧನದಲ್ಲಿ ಸಿಲ್ಕಿ, ನಿನ್ನ ಕಾಮತೃಷಿ ಹೀರುವ ಆವುದೋ ನಾಯಿಯ ಬೆನ್ನು ಹಿಂದೆ ತಿರುಗುತ್ತಿರುವಿ. ನಿನ್ನ ಕ್ಷಣ ಸುಖಕ್ಕಾಗಿ ನಿರಂತರ ಬಾಳುವ "ಕ್ಷಣ"ದಲ್ಲಿ ಬಾಳಲಿರು. ತಾಯಿ ಭಾರತಿ ಜಮುನೆಗೆ, ಇಲ್ಲ ಸಲ್ಲದ ಆರೋಪ ಹೊರಿಸಿದ ಮಾತ್ರಕ್ಕೆ ನೀನೇನು ಅಚ್ಚ ಪತಿವ್ರತೆಯಾದೆಯಾ? ತನ್ನ ಭಾವೀ ಜೀವನವನ್ನು ಭದ್ರವಾದ ಬುನಾದಿಯ ಮೇಲೆ ಕಟ್ಟಿ ಮೆರೆದ ಆ ನಿರಂಜನ ಪುರುಷ ಚಂದ್ರಧರನ ಮಾನ ಮಾರಾಟ ಮಾಡಬೇಕೆನ್ನುವಿಯಾ? ಕಲಂಕ ಹಚ್ಚಬೇಕೆನ್ನುವಿಯಾ? ಶಾಂತಾ, ನಿಮ್ಮಣ್ಣನ ಮಕ್ಕಳೆಂದರಿಯದೇ "ಬೆಳೆಯುವ ಪೈರಿಗೆ ಬಿಸಿ ನೀರೆರೆದಂತೆ" ಯಾವನೋ ಕಾಮಣ್ಣನ ಮಾತಿಗೆ ಮರುಳಾಗಿ ನೀನೆ ಈ ವಿಷ ಹಾಕಿರುವೆ; ಕಮಲಮ್ಮ

ಅರವತ್ತರ ಅಂಚಿನಲ್ಲಿ ನಿನಗೂ ಹುಚ್ಚು ಹಿಡಿಯಿತೇ? ಆದರೆ ಮಗಳ ಮಾತು ಕೇಳಿ ಮತಿಯಿಲ್ಲದ ಮಂಗಮ್ಮನಾಗುತ್ತಿ ಜೋಕೆ.

ಕಮಲಾ– ಏ ! ಮಂಗ ಅನ್ನುವ ಜಂಗಮ, ಶಿಷ್ಯನ ಹೆಂಡತಿ ನಿನಗೂ ಶಿಷ್ಯಳೆಂದು ತಿಳಿಯದೆ, ಆಕೆಯ ಮೇಲೆ ಕಾಮದೃಷ್ಟಿ ಬೀರಿದ ಅಧಮಾ ! ಮೊದಲು ನಿನ್ನ ಮತಿ ಮುಷ್ಟಿಯಲಿ ಮುಚ್ಚಿಕೋ.

ಶಾಂತಾ– ಆಮೇಲೆ ಮುಂದೇನಾಗುವದೆಂಬುದನ್ನು ತಿಳಿದುಕೋ "ಪುಟ್ಟಿ ವಿದ್ಯೆಕ್ಕಿಂತಲೂ ಮುಷ್ಟಿ ಬುದ್ಧಿಯೇ ಲೇಸು" ಮುಂಡಜಂಗಮ ಕಂಡವರ ಕೈಯಲ್ಲಿ ಕೂಳು ತಿಂದು ಬೈಲಿಗೆ ನಿಂತು ಬಲ್ಲಂತೆ ಬೊಗಳುವಿಯೇಕೆ ನಮ್ಮ ಮನೆಯಲ್ಲಿ, ನಡೆ ಇಲ್ಲಿಂದ.

ಜಮುನಾ– (ಸ್ವ) ನೂರಾರು ಕಾಗೆಗಳ ಗುಂಪಿನಲಿ ಸೇರಿದ ಕೋಗಿಲೆ ಯಂತಾಯಿತೆ ನನ್ನ ಜೀವನದ ಬಾಳ ಪುಸ್ತಕದ ಪುಟ. ಅಕಟಕಟಾ!

ಕಮಲಾ– ಮತ್ತೇಕೆ ನಿಂತಿರಿ ಗುರುಗಳೇ?

ಶಾಂತಾ– ಹಾಗಲ್ಲಮ್ಮಾ, ನಿಷ್ಕಾಮ ಯೋಗಿಗಳೇ ಇಷ್ಟಕ್ಕೆ ಮುಗಿಸಿರಿ. ನಿಮ್ಮ ದ್ವಿತೀಯಾಂಕಿನ ರಗಳೇ. [ದಬ್ಬುವಳು.]

ಕಮಲಾ– ನಡೆಯಿರಿ ಇಲ್ಲಿಂದ ಈಗಲೇ. [ದಬ್ಬುವರು.]

ಗುರು– ಈಗಲೇ ಹೋಗುವೆನು ಕಮಲವ್ವಾ; ಪಂಚ ತತ್ವದಿಂದೊಡಗೂಡಿದ ಈ ದೇಹವೇ ಸ್ಥಿರವಾಗಿಲ್ಲ. ಅಂದ ಮೇಲೆ ಸ್ಮಶಾನದಂತೆ ಕಾಣುವ ನಿನ್ನ ಮನೆ ನನಗೆ ಸ್ಥಿರವಾಗಿ ಉಳಿಯುವದೇ? ಇಲ್ಲ ತಾಯಿ ಎಂದೂ ಇಲ್ಲ. ಆದರೆ ಇಷ್ಟೇ; ಮಗಳಂತಿರುವ ಜಮುನಾ ತಾಯಿಗೆ ಸಲ್ಲದ ಆರೋಪ ಹೊರಿಸಿದಿರಿ. ಇರಲಿ ತಾಯಿಗಳೇ; ನಿಮ್ಮ ಬುದ್ಧಿಗೆ ದೇವರು ಇನ್ನಷ್ಟು ಬಲವಾದ ಬುದ್ಧಿ ಕೊಡಲಿ [ಹೋಗಹತ್ತುವನು] "ವಿನಾಶಕಾಲೇ ವಿಪರೀತ ಬುದ್ಧಿ".

ಶಾಂತಾ– ಹುಂ ಇನ್ನೇಕೆ ನಿಂತಿರುವಿ? ನೀನು ಹಿಡಿ ನಿನ್ನ ಪ್ರಿಯತಮನ ಹಾದಿ.

ಜಮುನಾ– ಶಾಂತಕ್ಕ, ನಿನಗೆ ಕರಜೋಡಿಸುತ್ತೇನೆ. ಇನ್ನೊಮ್ಮೆ ಆ ಶಬ್ದವನ್ನು ನುಡಿಯಬೇಡ. ಚಿಕ್ಕಂದಿನಲ್ಲಿಯೇ ತಾಯಿ–ತಂದೆಗಳನ್ನು ಕಳೆದುಕೊಂಡ ಅಬಲೆಗೆ ಹೊರದೂಡಬೇಡಿರಿ. ಅವರು ಇಂದಿಲ್ಲಾ ನಾಳೆ ಬರಬಹುದು. ಬಂದ ಕೂಡಲೇ ಎಲ್ಲಿಗಾದರೂ

ಹೋಗುತ್ತೇವೆ. ಅತ್ತಿಯವರೇ, ಈ ದೀನ ದಾಸಿಗೆ ಹೊರ ಹಾಕಬೇಡತ್ತಿ; ಈ ದೀನಳ ಮೇಲೆ ದಯ ತೋರಿಸಿರಿ. (ಕಾಲಿಗೆ ಬೀಳುವಳು)

ಕಮಲಾ– (ಒದ್ದು) ದಯವೂ ಇಲ್ಲ. ಧರ್ಮವೂ ಇಲ್ಲ.

ಜಮುನಾ– ಅತ್ತಿಯವರೇ, ಈ ನನ್ನ ಮುದ್ದು ಮಕ್ಕಳನ್ನು ಕಟ್ಟಿಕೊಂಡು ಎಲ್ಲಿಗೆ ಹೋಗಲಿ, ಆರ ನೆರಳಲಿ ಬದುಕಲಿ; ಬೇಡ ಅತ್ತೀ (ಅಳುತ್ತ) ನಿಮ್ಮ ಮನೆಯ ಮುಂದಿನ ಕಸಗೂಡಿಸಿ ಕಾಲಕಳೆಯುವನು ಅತ್ತೆ.

ಸಿದ್ದಿ– ಇಕಿ ಯಾಕ ಆದಾಳ್ರಿ ನಿಮ್ಮತ್ತೆ, ಎರಡ ಕಾಲಿನ ಕತ್ತೆ

ಶಾಂತಾ– ಏ ! ಯಾಕಽ ಸಿದ್ದಿ. ಏನ ಅಂತೀಯಲ್ಲ ಒಟ, ಒಟ, ಕಟ್ಟಂಗಿಲ್ಲೇನ ನಿನ್ನ ಪಾಟಿಗಂಟ, ಮನಿ ಬಿಟ್ಟು ಹೋಗಂದ್ರ ಹಚ್ಚಿಯೇನ ಪಂಟ.

ಸಿದ್ದಿ– ಯವ್ವಾ, ಪಾಟಿ ಗಂಟ ಕಟ್ಟಿ ಎಲ್ಲಿಗಿ ಹೋಗಂದ್ರಿ? ನನ್ನಗಂಡ ಸಣ್ಣವ ಇರುತನ್ಕಾ ಇದಽ ಮನ್ಯಾಗ ದುಡ್ಡಾನ. ಮುಂದಿನ ಮನಿ ನಮಗ ಗೊತ್ತಿಲ್ರಿ ಯವ್ವಾ, ಹ್ಯಾಂಗರ ಮಾಡಿ ಪುಣ್ಯ ಕಟ್ಟಿಕೊಳ್ರಿ

ಶಾಂತಾ– ಏ ! ಪಾಪ ಪುಣ್ಯದ ಪಾಠ ಕಲಿಸುವ ಪಾಪಾತ್ಮಳೇ, ನಡೆ ಇಲ್ಲಿಂದ; ಅಮ್ಮಾ ಏನನ್ನು ನೋಡುತ್ತಿರುವಿ? ಮೊದಲು ಇವರಿಬ್ಬರಿಗೂ ಮನೆ ಬಿಟ್ಟು ದೂಡಾಚೆ.

ಕಮಲಾ– ಏ ! ದುಗ್ಗಾಣಿಯುವಳೆ, ಎಷ್ಟಂದರೂ ನಿನಗೆ ನಾಚಿಕೆಯಾಗುವದಿಲ್ಲನೇ? ಏ ಸಿದ್ದಿ ಏಕೆ ನಿಂತಿರುವಿ? ಇದು ನಿಮ್ಮಪ್ಪ ಗಳಿಸಿದ ಆಸ್ತಿಯಲ್ಲ; ಹೂಂ ನಡೆ. [ದೂಡುವರು.]

ಜಯ– ಅಮ್ಮಾ, ನಾನು ಬರುತ್ತೇನಮ್ಮಾ ನನಗೂ ಕರೆದುಕೊಂಡು ಹೋಗು (ಅಳುವನು.)

ಜಮುನಾ– ಬೇಡ ಅಪ್ಪ, ನಿಮ್ಮಜ್ಜಿಯವರ ಹತ್ತಿರವೇ ಇರು. ಹಿರಿಯರಿಗೆ ಎದುರುತ್ತರ ಕೊಡಬೇಡ ಮಗು.

ಜಯ– ನಾನೂ ಬರುತ್ತೇನಮ್ಮಾ. ಅಜ್ಜಿ ಅತ್ತಿ ಕೂಡಿ ಅವರು ನನಗೆ ಹೊಡೆಯುತ್ತಾರೆ ಅಳುವನು.

ಕಮಲಾ– [ಹುಡುಗನಿಗೆ ಎಳೆದು] ಶಾಂತಾ ಎಳೆದುಕೊಂಡು ನಡೆ ಮನೆಯೊಳಗೆ.

(ಶಾಂತಾ ಎಳೆದುಕೊಂಡು ಹೋಗುವಳು ಜಯ ಅಮ್ಮಾ ಎಂದು ಒದರುವನು.)

(ಜಮುನೆಯು ಮನೆಯ ಹೆಬ್ಬಾಗಿಲಿಗೆ ನಮಸ್ಕರಿಸಿ)

ಜಮುನಾ– ಹೇ ಭಾಗ್ಯ ದೇವತೆ, ಈ ಮನೆಯಲ್ಲಿರುವ ನನ್ನತ್ತೆಗೆ ಮತ್ತು ಶಾಂತಾ ಇವರೆಲ್ಲರಿಗೂ ಸುಖ–ಶಾಂತಿಗಳನ್ನು ನೀಡು. ಹೊರಡುವೆನು ಅತ್ತೆ! (ಹೋಗುವಳು.)

೫ ನೆಯ ಪ್ರವೇಶ

(ದೃಶ್ಯ : ಬೀದಿ)

ಜಮುನಾ– ನಾ ಹೇಳಿದಂತೆ ಕೇಳು ಸಿದ್ದಮ್ಮಾ, ನೀನು ಮನೆಗೆ ನಡೆ ನನ್ನ ಜೀವನವು ಮಾತ್ರ ಕಷ್ಟದ ಕಾರ್ಗತ್ತಲೆಯಲ್ಲಿ ಕಾಲ ಕಳೆಯ ಬೇಕಾಗಿದೆ. ಹಿಂದಕ್ಕೆ ನಳ ಮಹಾರಾಜನು ಆರ್ಯ ನಾರಿ ದಮಯಂತಿಯನ್ನು ವರಿಸಿ ಅವಳಿಗೆ ದಂಡಕಾರಣ್ಯದಲ್ಲಿ ಬಿಟ್ಟು ಹೋದ. ದುಷ್ಯಂತ ಮಹಾರಾಜನು ಶಕುಂತಲೆಯನ್ನು ವರಿಸಿ ನಿನಗೆ ನಾನು ವರಿಸಿಲ್ಲವೆಂದು ಅವಹೇಳನೆ ಮಾಡಿದ. ಅದರಂತೆ.... ನನ್ನ ಪತಿದೇವರು........... ಇಲ್ಲ. ನನ್ನ ಸ್ವಾಮಿಯು ಹಾಗೆಂದಿಗೂ ಮಾಡಲಾರರು ಸಿದ್ದಮ್ಮಾ (ವಿಜಯನಿಗೆ ಕೊಟ್ಟು) ಈ ಕಂದಮ್ಮನ ಕಾಪಾಡುವ ಭಾರ ನಿನ್ನನ್ನೇ ಕೂಡಿದೆ; ನಾನು ನನ್ನ ಸ್ವಾಮಿಯನ್ನು ಹುಡುಕುತ್ತಾ ಹೋಗಿ ಅವರೆಲ್ಲಿರುವರೆಂಬುದನ್ನು ಗೊತ್ತು ಹಚ್ಚುವೆ (ಅಳುತ್ತ) ನನಗೀರೀತಿ ಸಿಡಿಲಿನಂತೆ ಒಡಮೂಡಿ ಬರುವ ಕಷ್ಟದ ಕಾಡ್ಗಿಚ್ಚು ಕನಸು ಮನಸಿನಲ್ಲಿಯೂ ನಾನೆಣಿಸಿರಲಿಲ್ಲ. ಆರೇನು ಮಾಡುವರು. ಇದು ವಿಧಿಯು ಕೆತ್ತಿದ ದೈವ ದುರಂತ ಚಿತ್ರ ! ಸಿದ್ದಮ್ಮಾ ಆಗಾಗ್ಗೆ ಜಯನ ಕಡೆಗೂ ಹೋಗುತ್ತಿರಬೇಕು.

ಸಿದ್ದಪ್ಪ– ಯಾಕ್ರಿ ಯವ್ವಾ? ಈ ನಡುರಾತ್ರ್ಯಾಗ ಇಲ್ಯಾಕ ನಿಂತಿರಿ.

ಸಿದ್ದಿ– ಯಾಕಂತ ಏನ ಕೇಳ್ತಿಯಾ ? (ಅಳುವಳು)

ಸಿದ್ದಪ್ಪ– ಅಳಬ್ಯಾಡಲೆ ಯಪ್ಪ. ನೀ ಅತ್ತರ ನನಗೂ ಅಳು ಬರ್ತಾದ ಮುಂದೇನಾಯ್ತು ಹೇಳು.

ಸಿದ್ದಿ– ಏನ ಹೇಳಂದಿ, ಮುಗಿಲ ಹರಿದು ಮೈಮ್ಯಾಲ ಬಿತ್ತು. (ಅಳುವಳು) ಹ್ಯಾಗಾಯ್ತಲ್ಲ ನಮ್ಮ ಬಾಳೇವು.

ಸಿದ್ದಪ್ಪ– ಅಳಬ್ಯಾಡಲೇ ಮೊದಲ ನಡೆದ ಗಿರಾಗತಿ ಹೇಳಲ್ಲ?

ಸಿದ್ದಿ– ಕಮಲವ್ವಾ ಶಾಂತವ್ವಾ ಕೂಡಿ, ಪಾಪ ಗುರುಗಳಿಗೆ ಹೊಡದ ಹೊರಗ ದಬ್ಬಿದರು.

ಸಿದ್ದಪ್ಪ– ಸತ್ನೆಯಪ್ಪೋ? ಅಂಥ ದೇವರಂಥ ಸ್ವಾಮಿಗಳಿಗೆ ಹೊಡಿಲ್ಯಾಕ ಅವ್ರ ಕೈಯನ ಹ್ಯಾಂಗ ಎತ್ತಿದ್ರು ಅಂತೀನಿ. ಮತ್ತ ಮುಂದ......

ಸಿದ್ದಿ– ಮತ್ತೆ ಮುಂದೇನದ....ಅವ್ವ ಅವರಿಗೂ ಹೊರಗ ಹಾಕ್ಯಾರ.

ಸಿದ್ದಪ್ಪ– ಇಷ್ಟಾಯ್ತೇನ? ಆಮ್ಯಾಗ.......

ಸಿದ್ದಿ– ಆಮ್ಯಾಗ ಏನಾದ ನಮಗೂ ತೋರ್ಸಿದರಲ್ಲಾ ಚಂಡಕಿ ಕೈನಾ.

ಸಿದ್ದಪ್ಪ– ಮಟ್ಟಾಯ್ತಲ್ಲ ನಡಿ. ಯವ್ವಾ ನೀಯೇನ ಕಾಳ್ಜಿ ಮಾಡಬ್ಯಾಡ್ರಿ, ನೀವು ನನ್ನ ಮನಿಗೆ ನಡ್ರಿ, ನನ್ಜೀವ ಇರೂತಂಕ್ಕ ನಿಮಗ ಸಂರಕ್ಷಣಾ ಮಾಡ್ತೀನ್ರಿ ನಡ್ರಿ ಯವ್ವಾ.

(ಜಮುನೆಯ ದುಃಖ ಇಮ್ಮಡಿಯಾಗುವದು)

ಸಿದ್ದಿ– ಅಯ್ಯಯ್ಯ ! ಎಷ್ಟು ಹೇಳಿದರೂ ನನ್ತಾಯಿ ಕೇಳವಲ್ಲಳು. ಈ ಕೂಸಿಗಿ ನಮ ಕೈಯಾಗ ಕೊಟ್ಟ ತಾವೊಬ್ಬರ ಅಪ್ಪಾವರ ಬಲ್ಯಾಕ ಹೊಕ್ಕಾರಂತ; ಬ್ಯಾಡ್ರಿ ಯವ್ವಾ ನನ್ಮಾತ ಕೇಳ್ರಿ.

ಜಮುನಾ– ನಾನೊಲ್ಲೆ ಸಿದ್ದಮ್ಮಾ ಬೇಗನೇ ನನ್ನ ಸ್ವಾಮಿಯನ್ನು ಕಾಣುವ ಹಂಬಲವಾಗಿದೆ. ಸಿದ್ದಪ್ಪ ಇಲ್ಲಿಯವರೆಗೆ ನನಗೆ ಮಗಳೆಂದು ಹೇಗೆ ಭಾವಿಸಿದ್ದಿಯೋ ಹಾಗೆಯೇ ನನ್ನ ಕುಮಾರನನ್ನು.......!

(ಅಳುತ್ತ ಹೋಗುವಳು)

॥ ಪದ ॥

ಜಮುನಾ– ಈಶನೇ.....ಈಶನೇ । ದಾಟಿಸೋ ಭವಸಾಗರ ।

ಕರುಣಿಸೋ.......! ಜಗದೀsssಶಾ.....॥ಪಲ್ಲ॥

ಪತಿಹಿತಳು ನಾನೀಗ ।

ಗತಿ ಕಾಣೆನು ಜಗದೀಗ ।

ಹಿತರಾರು ಎನಗೀಗ ।

ಸತತದೀ.....s ಪೊರೆ ಬೇಗ ॥೧॥

೬ನೆಯ ಪ್ರವೇಶ

ದೃಶ್ಯ ಮನೆ

(ಶಾಂತಾ ಕಮಲಾ ಮಲಗಿದ್ದಾರೆ. ಸಮಯ ನಡುರಾತ್ರಿ, ಜಯನು ಮೆಲ್ಲನೆ ಎದ್ದು, ಮನೆಯಿಂದ ಹೊರಗೆ ಬಂದು ಅಡವಿದಾರಿ ಹಿಡಿಯುವನು. ಅರಣ್ಯದಲ್ಲಿ ಅಮ್ಮಾ ಎಂದು ಚೀರುತ್ತ ತಿರುಗುತ್ತಿರುವನು)

ಜಯ– ತಂದೇ ನೀನೆ । ತಾಯಿ ನೀನೇ ।

ಬಂಧು ನೀನೆ । ಬಳಗ ನೀನೆ ।

ಶರಣ ನೀನೆ । ಕರುಣ ನೀನೆ ।

ಮಾರಹರನೇ । ಶೌರಿ ನೀನೆ ।

ಪಥವ ತೋರೋ ! ಗೌರಿ ವಲ್ಲಭ ॥೧॥

(ಹಾಡಿ ಮಲಗುವನು. ಸಮಯ, ಉದಯ ದೂರದಲ್ಲಿ ಒಂದು ಕುಟೀರ. ಅಲ್ಲಿಂದ ಗುರುಗಳು ಸ್ನಾನಕ್ಕಾಗಿ ಸರೋವರಕ್ಕೆ ಹೊರಟಿದ್ದಾರೆ.)

ಗುರು– ಕಲಿಪುರುಷ ! ಜಗತ್ತಿನ ಸೃಷ್ಟಿ ಸೌಂದರ್ಯವನ್ನು ಅರೆ ನಿಮಿಷದಲ್ಲಿ ತೇಜಃಪುಂಜದಂತೆ ಕಾಣಿಸುವೆ; ಅರೆ ನಿಮಿಷದಲ್ಲಿ ಮಳೆ ಬಾರದೆ ಬೆಳೆ ಬಾಡಿ ತಮ್ಮ ಇಳಿಮುಖಗಳನ್ನು ಜೋಲು ಹಾಕಿಕೊಂಡು ನಮಗಾರ ಆಶ್ರಯವಿಲ್ಲವೆಂದು ಜಗತ್ತನ್ನು ರಣ

ಕಲ್ಲೋಲಗೊಳಿಸುವೆ; ಒಬ್ಬರು ಉತ್ತುಂಗ ಶಿಖರವನ್ನೇರಿದರೇ ಮತ್ತೊಬ್ಬರು ದಾರಿದ್ರ್ಯದ ದಟ್ಟಡವಿಯಲಿ ದೀನ ದರಿದ್ರರಂತೆ ಅಲೆಯ ಹಚ್ಚುವೆ; ಇದೇನು ನಿನ್ನ ಮಾಯ ! ಅಣುರೇಣು ತೃಣ–ಕಾಷ್ಠಗಳಲ್ಲಿಯೂ ನಿನ್ನ ಚಪಲ ಚೇಷ್ಟೆಯೆ. "ವಜ್ರದ ಖಣಿಯಾಗಿ ಬೆಲ್ಲದಚ್ಚಾಗಿ ಬೆಲೆಬಾಳುವ ದೀಪ್ತಿಯಂತೆ "ಪ್ರಜ್ವಲಿಸುವ ಜಮುನಾ ತಾಯಿಗೆ ಪಡಬಾರದ ಕಷ್ಟಕ್ಕೆ ಗುರಿಮಾಡಿದೆ; ಆದರೆ "ಮಂಜುಪಡೆಯು ಸೂರ್ಯನಿಗೆ ಮುತ್ತಬಹುದೇ?" "ತಮವು ಬೆಳಕನ್ನು ಇದಿರಿಸಬಹುದೇ?" ಭಕ್ತ ಪರಿಪಾಲಕ! ಪಾಪ ಪುಣ್ಯವೆಂಬ ಪರಡಿಯ ಸೂತ್ರವನ್ನು ಕೈಯಲ್ಲಿ ಹಿಡಿದು ಆವುದು ಮಿಗಿಲೆಂದು ನೋಡುವಿಯೇನು? ದೇವಾ ! ತನ್ನ ಪ್ರಾರಬ್ಧದ ಪ್ರಳಯಾಗ್ನಿಯಲಿ "ಪತಿಭಕ್ತಿ ಜಮುನಾ" ಎಂದು ಈ ರುದ್ರನಾಟಕದ ತೆರೆಯ ಮೇಲೆ ಕೀರ್ತಿಲತೆಯ ಕುಡಿ ಕೆತ್ತಿಸಿ, ಸುವರ್ಣಾಕ್ಷರಗಳಿಂದ ಬರೆದು, ಸೃಷ್ಟಿಗನ್ನಡಿಯಲ್ಲಿರಿಸು (ತೆರೆಯಲ್ಲಿ ಅಮ್ಮಾ ಎನ್ನುವ ಕೂಗು) ಇದೇನು? ಈ ನಿರ್ಜನವಾದ ಪ್ರದೇಶದಲ್ಲಿ ಮಗುವಿನ ಆರ್ತಸ್ವರ ಕೇಳಿಸುತ್ತಿರುವದು! [ಜಯನು ಅಳುತ್ತ ಪ್ರವೇಶಿಸುವನು] ಜಯಾ ! [ಅಪ್ಪಿ] ಏನೋ ವಿಪರೀತ ಘಟನೆ ಸಂಭವಿಸಿದಂತೆ ಕಾಣಿಸುತ್ತದೆ. ಜಯಾ ಏಕಪ್ಪಾ; ಈ ನಡುರಾತ್ರಿಯ ಸಮಯದಲ್ಲಿ ಒಬ್ಬಂಟಿಗನಾಗಿ ಏಕೆ ಬಂದೆ?

ಜಯ– [ಅಳುತ್ತ] ಅಜ್ಜೀsss ಅತ್ತಿಯೂ ಕೂಡಿ ಅಮ್ಮನಿಗೆ ಹೊಡೆದು ಹೊರನೂಕಿದರು.

ಗುರು– [ದಿಗ್ಭ್ರಮೆಯಿಂದ] ಜಮುನಾ ತಾಯಿಗೆ ಮನೆಯಿಂದ ಹೊರನೂಕಿದರೇ?! "ಹಿಂಡನಗಲಿದ ಗಜದಂತೆ" ಅಡವಿಯಲ್ಲಿ ಅಲೆಯಬೇಕಾಯಿತೆ ತಾಯೀ ನಿನ್ನ ಜೀವನ ! ಪಾಪಿಗಳ ಪ್ರಾಯಶ್ಚಿತ್ ಪರಮಾವಧಿಯಲ್ಲಿ "ಕರ್ಮಣೋ ಗಹನೋ ಗತಿ" ಭಾರತ ನಾರಿಯರೇ, ಜಮುನಾ ತಾಯಿಯ ಸತ್ಯಸಂಧತೆ, ಪತಿವ್ರತಾ ಪಾಲನೆ ಧರ್ಮರಕ್ಷಣೆ ಆದರ್ಶ ಪ್ರೇಮವನ್ನು ನೋಡಿ ನೀವೂ ಆ ತಾಯಿಯಂತೆ ಆಚರಿಸಿ ನಮ್ಮ ಭಾರತದ ಕೀರ್ತಿಯು ಅಡಿಗಲ್ಲಿನಂತೆ ಅಚ್ಚಾಗಿ ಉಳಿಸಿರಿ. ಅಂದರೇನೇ ನಿಮ್ಮ ಜನ್ಮ ಸಾರ್ಥಕ, ನಡೆ ಮಗೂ.

ಜಯ– ಎಲ್ಲಿಗೆ ತಾತಾ? ನನಗೆ ಅವ್ವನ ಹತ್ತಿರ ಕಳುಹಿಸುವದಿಲ್ಲವೇ?

ಗುರು– ಮೊದಲು ಕುಟೀರಕ್ಕೆ ನಡೆ ನಂತರ ಹೋಗೋಣವಂತೆ.

ಜಯ– ಕುಟೀರ......?

ಗುರು– ಅಹುದು ಮಗು ಕುಟೀರವೆಂದರೇ ಸಾಮಾನ್ಯವಲ್ಲ? ಹನ್ನೆರಡು ವರ್ಷ ವನವಾಸಗೈದ ಪ್ರಭು ರಾಮಚಂದ್ರನು ವಾಸಮಾಡಿದ್ದು ಇದೇ ಕುಟೀರದಲ್ಲಿಯೇ. ವಶಿಷ್ಠ, ವಿಶ್ವಾಮಿತ್ರ, ಕಣ್ವ, ಗೌತುಮ ಜಾಬಾಲಿ, ದಧೀಚಿಯಂತಹ ಅನೇಕ ಮಹರ್ಷಿಗಳು ವಾಸಮಾಡಿದ್ದು ಇದೇ ಕುಟೀರದಲ್ಲಿಯೇ. ಇದಲ್ಲದೆ ಕಲ್ಲಿನಲ್ಲಿ ಮಲಗಿರುವ ಅಣುಗಳನ್ನೆಬ್ಬಿಸಿ ಬೃಹದ್ಭಾರತದ ನೆಲಂಗಳದಲ್ಲಿ ನಾಟಿಸಿದ ಅಮರಶಿಲ್ಪಿ ಜಕಣಾಚಾರ್ಯರು ವಾಸ ಮಾಡಿರುವದು ಇದೇ ಕುಟೀರದಲ್ಲಿಯೇ, ಹಿಂದುಸ್ಥಾನದ ತಳಹದಿಯ ಧರ್ಮದ ತಿರುಳನ್ನು ತಿಳಿದ ಕವಿ ರವೀಂದ್ರನಾಥ ಠಾಕೂರ, ಪೂಜ್ಯ ಮಹಾತ್ಮಾ ಗಾಂಧಿ, ಸಂತ ವಿನೋಬಾಭಾವೆ ವಾಸಮಾಡಿರುವದು ಇದೇ ಕುಟೀರದಲ್ಲಿಯೇ. ನಡೆ ಹೋಗುವಾ ಉರುಳು ಉರುಳು. ಕಾಲಚಕ್ರಾ ಸತ್ಯವಂತರ ಶಿಲುಬೆಯ ಮೇಲೆ.

॥ ಭಾವಗೀತೆ ॥

ನಡೆ ಉರುಳಿತು । ಭೋಗದ ಗಾಲಿ ।
ಕಡೆಗ್ಹಾಕಿತು । ಈ ಭವಮಾಲಿ ॥ಪಲ್ಲ॥
ಕಾಲಕಾಲಕೆ । ಉರುಳುವದಯ್ಯಾ ।
ನಿಲಯದ । ಬನಸಿರಿ ಭಾಗ್ಯ ।
ಬೀಸುತಿದೆ । ಈ ಭವದ ಬಿರುಗಾಳಿ
ಕುಸಿಯುತಿದೆ । ನವದ್ವಾರದ ಕೀಲಿ ।
ನಸಿಸಿ ಹೋಯಿತು । ಈ ಭವ ಬೇಲಿ ।
ಕುಸಿದು ಹಾರಿತು । ಜೀವ ಜೋಲಿ ॥೧॥

೭ನೆಯ ಪ್ರವೇಶ

(ದೃಶ್ಯ ೫ ಉಪವನ)

ಮನೋಹರ– (ನಗುತ್ತ) ನೀಲ–ಗಗನದಲಿ ಬಿರುಗಾಳಿಗೆ ಸಿಕ್ಕ ಪಕ್ಷಿಯಂತೆ ಶಾಂತಿಯ ಮನ ತಾಂಡವವಾಡಹತ್ತಿದೆ. ನಾನು ತನ್ನವನಾಗಬೇಕೆಂದು ಎಂದೋ ಚಡಪಡಿಸುತ್ತಿರುವಳು ಆ ಅಬಲೆ. ಇರುವದು ನನ್ನ ನಿಜವಾದ ಪ್ರೇಮ, ಸುಳಿಬಾಳೆಯಂತೆ ಸುಳಿದಾಡುವ ಜಮುನೆಯ ಮೇಲೆ (ನಕ್ಕು) ಮೂರ್ಖ ಮಹಿಳೆ, ಎಳ್ಳಷ್ಟು ಇಲ್ಲ ನನ್ನ ಪ್ರೇಮ ನಿನ್ನ ಮೇಲೆ. ನನ್ನ ಕಾರ್ಯವು ಕೈಗೂಡುವತನ ತೋರಿಸುವೆ ನನ್ನ ರಸಿಕ ಪ್ರೇಮದೋಲೆ. ಇದಲ್ಲದೆ ನಿಂಗೆ ಕೋತಿ ಆಡಿಸಿದಂತೆ ಆಡಿಸಿ ಭಾರತ ಬಾಂಧವರಿಗೆ ಬಿತ್ತರಿಸುವೆ ನಿನ್ನ ಕಲೆ. ಎಲೆ ಬಾಲೆ ! ಇಂದು ನಾ ನಿನ್ನವನಾದಂತೆ ಅದೆಷ್ಟು ಜನರು ಕುಣಿಯುವರೋ ನಿನ್ನ ಕುಡಿಹುಬ್ಬಿನ ಕತ್ತಿಯ ಮೇಲೆ. ಈ ರುದ್ರ ಛಂದಸ್ಸಿನಿಂದ ಕೊರೆಯಲ್ಪಟ್ಟ ಕಥೆಯ ತೃತಿಯಾಂಕಿನಲ್ಲಿ ಎಬ್ಬಿಸುವೆ ಈ ಕ್ರೂರ ಮನೋಹರನ ಭಯಾನಕ ಜ್ವಾಲೆ. (ಅತ್ತಿತ್ತ ತಿರುಗಾಡಿ) ಇಂದೇಕೆ ಬರಲಿಲ್ಲ ಹರಿಣಿ? (ಹಿಂದೆ ಬಂದು ಕಣ್ಣು ಮುಚ್ಚುವಳು) ಬಾ ರಸಿಕ ಹೃದಯವನ್ನು ತಣಿಸುವ ಜಗಮೋಹಿನಿ, ಎನ್ನ ಬಾಹು ಬಂಧನದಲಿ ಸಿಲುಕಿ ಕಾಮ ತೃಷೆಯನ್ನು ನೀಗಿಸು ಬಾ.

ಶಾಂತಾ– ಮನೋಹರಾ ! ತಾವಿಂದು ಉಪವನಕ್ಕೆ ಬಂದುದ್ದು ನೋಡಿ ನನಗೆ ಅತಿಶಯ ಆನಂದವಾಗಿದೆ.

ಮನೋಹರ– ಅಲ್ಲವೇ ಮತ್ತೇನು ಮನೋಹರಿ? ಕಮಲದಂತೆ ಹೊಳೆಯುವ ನಿನ್ನ ನಯನ, ತೊಂಡೆ ಹಣ್ಣಿನಂತೆ ಕಾಣುವ ನಿನ್ನ ಕೆಂದುಟಿ, ನೋಡಿದೊಡೆ ಮನಾಕರ್ಷಕ ಮಾಡಿಕೊಳ್ಳುವ ಈ ನಿನ್ನ ಸ್ತನ, ಮೃದುವಾದ ದೇಹ ಇವುಗಳ ರಸದೂಟವನ್ನುಣ್ಣಲು ಏಕೆ ಬಾರೆನು?

ಶಾಂತಾ– ಆ ಹಾ ಹಾ ಸಾಕುಮಾಡಿ ಇಷ್ಟೊಂದು ವರ್ಣಿಸಲು ನಾನೇನು ರಂಭೆಯೋ?

ಮನೋಹರ– ರಂಭೆಗೂ ಮಿಗಿಲೆನಿಸುವ ನೀನೊಂದು ಸ್ತ್ರೀ ಸಮಾಜದಲ್ಲಿ ಅವತರಿಸಿದ ಕೌಸ್ತುಭ ರತ್ನ.

ಶಾಂತಾ– ಅಂತೂ ಸಾಕಷ್ಟು ಸಾಹಿತಿಗಳಾಗಿರುವಿರಿ.

ಮನೋಹರ– ಇದರಲ್ಲಿ ಸಾಹಿತಿಯ ದೋಷ ಕಿಂಚಿತ್ತಾದರೂ ಇಲ್ಲ; ತನ್ನ ಕಾರ್ಯ ತಾ ಮಾಡಿಹನು. ಆಂ ! ಇರಲಿ ಶಾಂತಾ; ನಿಮ್ಮಣ್ಣಾ ಚಂದ್ರಧರನಂತೂ ಇಂದಿಲ್ಲಾ ನಾಳೆ ಬರಬಹುದು.

ಶಾಂತಾ– ನಮ್ಮಣ್ಣಾ ಅವರು ಬಂದರಂತೂ ನಮ್ಮ ನಿಮ್ಮ ಲಗ್ನ ಮಾಡೇ ಬಿಡುವರು. ಮನೋಹರ ಅಣ್ಣನವರು ಏನು ಕಾರಣ ಬರಲಿಲ್ಲ ನಾ ಕಾಣೆ. ಅಕಸ್ಮಾತ್ ನಮ್ಮ ದುರ್ದೈವದಿಂದ ಅಣ್ಣನಿಗೆ ಏನಾದರೂ ಆಗಿರಬಹುದೆ?

ಮನೋಹರ– "ಊರಿಗೆ ಹೋದವರ ಸುದ್ದಿ ದೇವರೇ ಬಲ್ಲ" ಎಂದು ಈ ಕಲಿಯುಗದ ವಾಡಿಕೆಯಿದೆ.

ಶಾಂತಾ– ಏನು ಮಾಡಲಿ; ನನಗೊಂದೂ ತೋಚದಂತಾಗಿದೆ. ದಿನೇದಿನೇ ಈ ಪಾಪದ ಗರ್ಭವು ಬೆಳೆದು ಸಮಾಜದ ಮುಂದೆ ನನ್ನ ಮುಖ ಕೆಳಗಿಳಿಸಿದೆ. ಮನೋಹರ; ಆದಷ್ಟು ಬೇಗನೇ ನಮ್ಮ ನಿಮ್ಮ ಲಗ್ನ ಜರುಗಿಸಿ ಬಿಡಿರಿ, ಈ ಪಾಪದ ಬಸಿರು ಬಿಚ್ಚುವ ಮುನ್ನ.

ಮನೋಹರ– "ಕಾಲಕ್ಕೆ ತಕ್ಕ ಕೋಲು ಹಿಡಿಯಬೇಕು" ಕಾಮಿನಿ ನೀನು. ನಿನ್ನ ಮಾಂಗಲ್ಯ ಕಟ್ಟುವ ಸುಯೋಗ ಇನ್ನೂ ದೂರದಲ್ಲಿದೆ ನೀನದಕ್ಕೆ ಅಂಜಬೇಡ. ಒಂದು ವೇಳೆ ನೀನು ಹಡೆದರೂ......!

ಶಾಂತಾ– ಲಗ್ನವಾಗುತ್ತೀರಾ?

ಮನೋಹರ– ಅವಶ್ಯವಾಗಿ ಶಾಂತಾ. ನೆಚ್ಚಿನ ನಾರಿಯನ್ನು ಧಿಕ್ಕರಿಸಿ ದೂಡುವ ನಿರ್ದಯಿ ನಾನಲ್ಲ. ತಿಳಿಯಿತೆ? ಶಾಂತಾ ಅಕಸ್ಮಾತ್ ನಿಮ್ಮಣ್ಣನು ಬಂದು ಇದಕ್ಕೆ ತಡೆಗಟ್ಟಿದರೆ.........?

ಶಾಂತಾ– ತಡೆಗಟ್ಟಲಾರನು ನನ್ನಣ್ಣ ! ಒಂದುವೇಳೆ ತಡೆಗಟ್ಟಿದರೆ ಅವ್ವನಲ್ಲಿ ವಿಷಬೀಜ ಬಿತ್ತಿ ಅವನಿಗೆ ಮನೆಯಿಂದ ಹೊರನೂಕಿಸುವೆ, ಇಷ್ಟೇ ಅಲ್ಲವೇ ತಮ್ಮ ಅಭಿಪ್ರಾಯ.

ಮನೋಹರ– ಒಪ್ಪಿದೆ ಶಾಂತಾ; ನಿನ್ನ ಪ್ರೇಮ ಎಷ್ಟರ ಮಟ್ಟಿಗಿತ್ತೆಂಬುದನ್ನು ಚನ್ನಾಗಿ ಅರಿತೆ. ಶಾಂತಾ ನನ್ನ ಪ್ರೇಮದ ಸಲುವಾಗಿ ಅಣ್ಣನ ಹೆಂಡತಿಗೆ ಮನೆಯಿಂದ ಹೊರನೂಕಿದೆ. ಗುರುವಿಗೆ ಧಿಕ್ಕರಿಸಿದೆ. ಮಕ್ಕಳಿಗೆ

ತಂದೆತಾಯಿಗಳಿಂದಗಲಿಸಿದೆ. ಇದು ಪ್ರೇಮವಷ್ಟೇ ಅಲ್ಲ, "ಅಮರ ಪ್ರೇಮ". ಶಾಂತಾ ನೀ ಮಾಡುವ ಕಾರ್ಯ ಇನ್ನೆರಡು ಉಳಿದಿವೆ. ಅವೆರಡು ಮುಗಿಸಿದರಂತೂ ನಿನ್ನ ಸಮಾನ ಸುಖ ಜೀವಿಗಳು ಈರೇಳು ಲೋಕಂಗಳಲ್ಲಿಯೂ ನಾ ಕಾಣೆ.

ಶಾಂತಾ– (ಗಾಬರಿ) ಮತ್ತೇನು ಮನೋಹರ?

ಮನೋಹರ– ಆಂ ! ಮತ್ತೇನು ಇಲ್ಲ ನಿಮ್ಮಣ್ಣನು ಇಂದಿಲ್ಲಾ ನಾಳೆ ಬಂದ ಬಳಿಕ ಅವನಿಗೂ ಅವನ ಹೆಂಡತಿಯ ಹಾದಿಯನ್ನೇ......

ಶಾಂತಾ– ಆಗಲೇ ಹೇಳಿರುವೆನಲ್ಲಾ ಸಂಶಯದ ಶಂಖ ಊದಬೇಡಿ

ಮನೋಹರ– [ವಿಷದ ಚೀಟು] ಇದೋ ಶಾಂತಾ ಈ ವಿಷಭರಿತವಾದ ಪುಡಿ ಸಮಯ ಸಾಧಿಸಿ ನಿಮ್ಮ ತಾಯಿ ಕಣ್ಣಲ್ಲಿ ಹಾಕಿ ಕಣ್ಣು ಕಳೆಯಬೇಕು.

ಶಾಂತಾ– (ದಿಗ್ಭ್ರಮೆಯಿಂದ) ಮನೋಹರಾ........!!

ಮನೋಹರ– ಮನೋಹರಿ; ಆವಾಗ ಆರ ಅಡ್ಡಿ ಆತಂಕವಿಲ್ಲದೆ ಅಳು ನಗುವಿನ ಧ್ಯೇಯವನ್ನು ಸಾಧಿಸಿಕೊಂಡು ನಮ್ಮ ಬಾಳ ಜೀವನ ನೌಕೆಯು ತಡಸಾದ ಕಡಲ ಮಡಲಲ್ಲಿ ತೇಲಿ ಬಿಡುವಾ. ಶಾಂತಾ, ಈ ವಿಷಯದ ಹೆಜ್ಜೆಯಲಿ ವಿಷ ಬೆರಿಸದೆ ಸಾಗಲಿ ನಿನ್ನ ಕಥಾನಕ.

ಶಾಂತಾ– (ಸ್ವಗತ) ಹೇಸಿ ಮನಸಿನಾಶೆಗಾಗಿ ಕಸಿವಿಸಿಗೊಳುತಿದೆ ಮನ. (ಪ್ರ) ಮನೋಹರ! ನಮ್ಮೀಕೃತಿಯನ್ನು ನೋಡಿ ಅವಳೇನೂ ಮಾಡಲಾರಳು. ಈ ಜಗತ್ತಿನಲ್ಲಿ ನಾ ಬಾಳಲಾರೆ, ತಾಯಿಗೆ ದ್ರೋಹ ಬಗೆದು. ತಾಯಿಯ ಅಮೃತ ಕಲಶ ಕುಂಡದಲ್ಲಿ ಇರುವ ಕರುಳಿನ ಲತೆ ನಾ, ಕತ್ತರಿಸಲಾರೆ,

ಮನೋಹರ– ಶಾಂತಾ ಕೆಲವೊಂದು ಪ್ರಶ್ನೆಗಳನ್ನು ಕೇಳಬೇಕೆಂದಿದ್ದೇನೆ. ಇದಕ್ಕೆ ಸಮರ್ಪಕವಾದ ಉತ್ತರವನ್ನು ನೀಡುವಿಯಾ?

ಶಾಂತಾ– (ಅಳುತ್ತ) ಸ್ವಾಮೀ, ನಾನೇ ನಿಮ್ಮ ಅಂಗಾಂಗದಲ್ಲಿ ರಕ್ತ ಬಿಂದುವಾಗಿ ಹರಿದಾಡುತ್ತಿರುವಾಗ ಬೇರೆ ಪ್ರಶ್ನೆಯೇ?

ಮನೋಹರ– ಆ ರಕ್ತ ಬಿಂದುವೇ ಇಂದು ಸಿಂಧೂರವಾಗಿದೆ. ಬೆಂದ ಹೃದಯ ವಡಬಾಗ್ನಿಯಿಂದ ವಿಷಜ್ವಾಲೆಗಳೇಳುವಂತೆ ಇಂದು ನಿನ್ನ ಹೃದಯದಿಂದ.

ಶಾಂತಾ– (ಬಾಯ್ಮುಚ್ಚಿ) ಮುಂದಿನದನ್ನೆತ್ತಿರಿ. ತಿಳಿದ ಮಟ್ಟಿಗೆ ಹೇಳುವೆ ನಿಮ್ಮ ಪ್ರಶ್ನೆಯನ್ನು.

ಮನೋಹರ– ಪತಿಯ ಕೈಹಿಡಿದು ಗತಿಯ ನಿಜರಥವನರಿದು ಕ್ಷಿತಿಯಲಿ ಜೀವಿಸಬೇಕೆಂಬಾಶೆ ನಿನಗಿದೆಯೇ?

ಶಾಂತಾ– ಇದೆ ನನ್ನರಸಾ.

ಮನೋಹರ– ಕನಸಿನ ಪರಿಯಾಗಿರುವ ಅಮರ ಪ್ರೇಮದಾಲಯದಲಿ ಮೃದಂಗ ಹಿಡಿದು ನಾಟ್ಯವಾಡಬೇಕೆಂಬನಾಶೆ ನಿನಗದೆಯೆ?

ಶಾಂತಾ– ಅಂತೆಯೇ ಕೈ ಹಿಡಿದಿರುವೆ; ಬಾಳಿನಲಿ ಬೆಳಕಾಗಿ ಮೇಳ ಸಮ್ಮೇಳದಿಂದ ಬಾಳ ಬನ ಹಸಿರಿನಲ್ಲಿ ಜೋಡಾಗಿ ಆಡಬೇಕೆಂಬಾಶೆ ಸಂಪೂರ್ಣವಿದೆ ನನ್ನರಸಾ

ಮನೋಹರ– ಅದೂ ಇರಲಿ; ಮೋಕ್ಷ ಗುರುವಾದ ನಾನು ಬೇಕೋ ಅಥವಾ ದೀಕ್ಷೆ ಗುರುವಾದ ನಿನ್ನ ತಾಯಿ ಬೇಕೋ?

ಶಾಂತಾ– ಎಂಥ ನಿಗೂಢ ಪ್ರಶ್ನೆ ಇದು? ಮೋಕ್ಷ, ಶಿಕ್ಷೆ, ದೀಕ್ಷೆ ಗುರುಗಳ ಕೃತಿ ಸಾರವತ್ತಾಗಿ ಸೇರಿದಾಗ, ಉಷಃಕಾಲದಲ್ಲಿ ಮುಟಿದ ರಸಗಂಗೆ ಜಲಗಂಗೆಯಾಗಿ ಬೃಹದ್ಭಾರತದ ನೆಲಗಳಲಿ ಹರಿದಾಡುವದು.

ಮನೋಹರ– ತಾಕ ಮೋಕ ವಿದ್ಯೆಗಳು ಕಲಿತು ಹೇಮವ ಶಾಸ್ತ್ರಕಾರರ ಮುಂದೆ ತೋರಿಸು ನಿನ್ನ ಶಬ್ದ ಸಾಹಿತಿಯನ್ನು, ಒಟ್ಟಾರೆ ಯಾರು ಬೇಕು?

ಶಾಂತಾ– ಶಿಕ್ಷೆ ಮತ್ತು ದೀಕ್ಷೆಗಳೆರಡೂ ಮೋಕ್ಷದಲ್ಲಿ ಐಕ್ಯವಾಗಿವೆ.

ಮನೋಹರ– ಅಂದರೆ?

ಶಾಂತಾ– ನೀವು ಬೇಕು ನನಗೆ.

ಮನೋಹರ– ಇದಕ್ಕೆನ್ನಬೇಕು ಅಚ್ಚ ಪತಿವೃತೆಯೆಂದು. ಹೂಂ, ತೆಗೆದುಕೋ ಶಾಂತಾ ಮರುಮಾತಾಡದಲೇ ಸಿದ್ಧಳಾಗು ತಾಯಿಗೆ ಕಣ್ಣು ಕಳೆಯಲು.

ಶಾಂತಾ– [ಅಳುತ್ತ] ಅದಾವ ಬಣ್ಣ ಹುಣ್ಣಾಗಿ ಚಿತ್ರಿಸಿತೋ ತಮ್ಮ ಹೃದಯದಿ. ಆಗಲಿ, ಪ್ರೇಮದ ಸಲುವಾಗಿ ಹೊಟ್ಟೆಯಲ್ಲಿ ಹುಟ್ಟಿದ ಮಗಳ ಕೈಯಿಂದಲೇ ತಾಯಿಗೆ ಕಣ್ಣು ಕಳೆದ ಕೊಲೆಪಾತಕಿ ಎಂದು ನನ್ನಕ್ಕ ತಂಗಿಯರು ಅಂದರೂ ಚಿಂತೆಯಿಲ್ಲಾ. ಜಾರಿಣಿಯೆಂದು ಜಗ

ಜರಿದರೂ ನಾನು ಅದಕ್ಕೆ ಕಿವಿಗೊಡುವದಿಲ್ಲ. ಮನೋಹರ! ಇಷ್ಟೆಲ್ಲ ಮಾಡಿದ ಬಳಿಕ "ತಗ್ಗಿನಲ್ಲಿ ಬಿದ್ದ ತೋಳಕ್ಕೆ ಕಲ್ಲು ಎಸೆಯುವಂತೆ" ನೀವು ಒಗೆಯ ಬೇಡಿ ಕಲ್ಲಾ. ನಾನೆಂದೋ ಹಾಕಿರುವೆನು ನಿಮ್ಮ ಕೊರಳಿಗೆ ಪುಷ್ಪಮಾಲಾ.

ಮನೋಹರ– ಶಾಂತಾ, ನಿನ್ನ ಭಾವೀ ಭವಿಷ್ಯದ ಪಾಠವನ್ನು ಪಠಿಸಬೇಡ. ನಾ ಕೊಟ್ಟ ಪಾಠ ಮಾತ್ರ ಮರೆಯಬೇಡಾ. ಕಟ್ಟಿದ ಬುತ್ತಿಯಂತೆ ಕಮನೀಯವಾಗಿ ಜನರ ಕಂಗಳಿಗೆ ಕಂಗೊಳಿಸುವಂತೆ ಮಾಡುವೆ. ಹೊಸ ಕುಟುಂಬದ ಕಟ್ಟಡ ಶಾಂತಾ, ಅರಳಲಿ ನಿನ್ನ ನಂದವನದ ಮೊಗ್ಗು.

ಶಾಂತಾ– ಆ ಮೊಗ್ಗು ಮಲ್ಲಿಗೆಯಾಗಿ ನಿಂತಿದೆ–

(ಪರದೆ ಬೀಳುವದು)

೮ನೆಯ ಪ್ರವೇಶ

(ದೃಶ್ಯ : ಬೀದಿ)

ಡಾಕ್ಟರ್– (ಪ್ರವೇಶಿಸಿ) ಅಂತೂ ಸರ್ಕಾರಕ್ಕೆ ಸಾವಿರ ಪ್ರಣಾಮಗಳು. ಏಕಂದರೇ ನನಗೆ (M.S. Warker) ಎಂ.ಎಸ್. ವರ್ಕರನನ್ನಾಗಿ ಪ್ರಥಮದಲ್ಲಿಯೇ ಇದೇ ಊರಿಗೆ ಹಾಕಿದ್ದಾರೆ ಅಂತೂ ನನ್ನ ಪ್ರಾಕ್ತಾನದ ಫಲ ಈ ನನ್ನ ಅಂದವಾದ ಡ್ರೆಸ್ಸಿಗೆ ಸಿದ್ಧಿಯು ಮೆಚ್ಚುವದರಲ್ಲಿ ಆಶ್ಚಯವೇನಿಲ್ಲ. ಇದೊತ್ತಟ್ಟಿಗಿರಲಿ; ನನಗೆ ಗುರ್ತು ಹಿಡಿಯುವಳೋ ಇಲ್ಲವ್ರೋ ನೋಡಬೇಕು. ದೇವರೇ ಇನ್ನಾದರೂ ಸಿದ್ದಿಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವಂತೆ ಮಾಡು......! ಮೊದಲೊಮ್ಮೆ ಬಳಗಾರನ ವೇಷದಲ್ಲಿ ಫೇಲಾಗಿ ಹೋಗಿದ್ದೇನೆ. ಈ ಬಾರಿ ಏನಾಗುವದೋ? ಒಂದು ಗ್ರೂಪ ಉಳಿದರೆ ಸಾಕು. ಮತ್ತೊಮ್ಮೆ ಸಾಕಷ್ಟು ತಲೆ ಓಡಿಸಿ ಈ ಪರೀಕ್ಷೆಯಲ್ಲಿ ಪಾಸಾಗುತ್ತೇನೆ. ಆಗಲಿ; ಈ ಹಬ್ಬಾಸಾಲಿ ಸವಾರಿ ಹರಕಿ ಮನಿಗೆ ಹೊಂಟೈತಿ. ನೋಡ್ರಿ ಅಣ್ಣೋರ ಹೆರವರ ಹೆಂಡ್ರನ ಓಡ್ಸಿಕೊಂಡ ಬರಬೇಕಾದ್ರ ಬರೇ ಬಾಯಿ ಮಾತಲ್ಲ. ಅದ್ಕ ನಮ್ಮಂಥ ಒದಕಿ ತಿನ್ನುವ ಬಹಾದ್ದೂರ ಶಿಪಾಯಿಗಳಿಗೇನು ಗೊತ್ತು. ಜರಾ ಗಂಡನ ಕಣ್ಣಿಗಿ

ಬಿತ್ತು ಅಂದ್ರ ಬಡ್ಗಿ ಬಡ್ತಾ ತಿಂದು ಮೈ ಹಣ್ಣಣ್ಣು ಮಾಡಿಕೊಂಡು ನಮ್ಮ ಸೀಮಿಗಿ ಹೊಳ್ಳಿ ಬರಬೇಕಾಗತೈತಿ. ಏನs ಇರ್ಲಿ; ಸಿದ್ದಿ ಕಾಲಾಗ ಸಿದ್ದಾಗಿ ನಿಂತೀನಿ, (ನೋಡಿ) ಓಹೋ ಯಾರೋ ಬರುವ ಹಾಗೆ ಕಾಣಿಸುತ್ತದೆ. [ಮರೆಯಾಗುವನು.]

ಸಿದ್ದಪ್ಪ– ಸಾಕು ಸಾಕಾಗಿ ಹೋಗೇತಿ ಈ ಪರಪಂಚ. ಅದ್ಕs ತಿಳಿದ ಜನರು ಮನಿ–ಮಾರ ಬಿಟ್ಟು ಗುಡ್ಡಗಾಡ ಸೇರಿ ಮಹಾದೇವನ. ಜಪಾ ಮಾಡ್ಕೊಂತಾ ನಿಶ್ಚಿಂತಿಲಿಂದ ತಪ್ಪಲತಡಿ ತಿನಕೊಂತ ಇದ್ದ ಬಿಡ್ತಾರ. ಅದ್ಕ ನಾನು ಮನೆ–ಮಾರು ಬಿಟ್ಟು ಅವರ ಪಾದಸೇವಾ ಮಾಡ್ತಾ ಗುಡ್ಡಗಾಡ ಸೇರಬೇಕಂತ ಮಾಡೀನಿ ಏನ ಮಾಡ್ಲಿ, ಪರಪಂಚ ಬಿಟ್ಟ ತಿರಗೇನಂದ್ರ ಮನ್ಯಾಗ ನೀರ್ಗೋಳಿಹಂಗ ಹೆಡ್ಕ ಎತ್ತೆತ್ತಿ ನೋಡ್ತಾರ ನಮ್ಮನಿ ಹಿರೇರು; ಯಾರೇನ ಮಾಡ್ಯಾರು ! ಒಟ್ಟ ನನ ಗ್ರಹಾಚಾರ. ಅದೂ ಇರ್ಲಿ; ಅವ್ವ ಜಮುನವ್ವಾನೋರ ಬಂಗಾರದಂಥ ಮಗನ ಬಿಟ್ಟುಹೋದರು. ಅವ್ವ ಅವ್ವ ಅಂತ ಹಲಬೇ ಹಲಬತಾರ. ಪರಮಾತ್ಮ ನನ್ನ ಈ ಪರಪಂಚೇದಾಗ ಪರೀಕ್ಷಾ ತೊಗೋಬೇಕಂತ ಮಾಡಿದೇನಪ್ಪಾ.........? ಆಗ್ಲಿ, ಆಗ್ಲಿ, ಏನ್ ಬೇಕಾದ್ದು ಆಗ್ಲಿ. ಯಾಕೋ ಇವತ್ತ ನಮ್ಮ ಸುಡಗಾಡ ಸಿದ್ದಿ ತಲಿ ಕಟಿಗೊಂಡು ಮರಾಮರಿ ಬಿದ್ದೇ ಬಿಟ್ಟಾಳ. ಸಜ್ಜದ ಗುಳಗಿ ಅಂತಲ್ರಿ ಅದು ಸದ್ಯಾಕ ನುಂಗ್ಸಿ ನೀರ ಕುಡ್ಸಿದ್ಯಾ. ತಲಿಬ್ಯಾನಿ ನಿಂದ್ರs ವಲ್ದು, ಅದು ಹ್ಯಾಂಗ ನಿಂದ್ರತಾದಿ? ಹರಕಿ ಮನಿ ತಿರುಗೂ ಡಾಗದಾರಗೊಳು ಗಂಟ ಬಿದ್ದಾರಲ್ಲ ! ಅವರು ಬಂದು ಇವರಿಗಿ ನಾಡಿ ಪರೀಕ್ಷಾ ಮಾಡಿ ಒಂದು ಚುಚ್ಚಿ ಹೋದ್ರಂದ್ರ ಆಯಿತ್ರಿ ಅಲ್ಲಿಗಿ ಜಡ್ಡ ಕಲಾಸ. ಏನs ಇರ್ಲಿ, ಡಾಗದರ ಖಾನಿಗಿ ಹೋಗಿ ಒಂದ ಇಂಗ್ಲೀಷ ಮಾಡಿಕೊಂಡು ಬರೂನು. [ತಿರುಗಿ ನೋಡಿ] ಅಲ ಇವ್ನ ಇತ್ಲಾಗ ಯಾರೋ ಬರುಹಾಂಗ ಕಾಣಸ್ತಾರ ಇಲ್ಲೇ ನಿಂದ್ರೂನ.

ಡಾಕ್ಟರ್– [ಸ್ವಗತ] ಓಹೋ ಇಲ್ಲೇ ನಿಂತಿರುವವನಲ್ಲ ಸುಡಗಾಡ ಸಿದ್ಧ. ಸ್ವಲ್ಪ ಮೋಜು ಮಾಡುತ್ತೇನೆ. [ಪ್ರಕಾಶ] ಯಾರೋ ನೀ?

ಸಿದ್ದಪ್ಪ– ಯಪಾ ನಾನ್ರಿ, ನೀವ ಯಾರ್ರಿ?

ಡಾಕ್ಟರ್– ನಾನು ಇದೇ ಊರಿಗೆ (M.S. Worker) ಎಂ.ಎಸ್. ವರ್ಕರ್‌ನಾಗಿ ಬಂದಿದ್ದೇನೆ.

ಸಿದ್ದಪ್ಪ– ಎಮ್ಮಿಗಳು ಏಸ ಆವಂದ್ರೆ ಎಪ್ಪ? ನಮ್ಮ ಮನ್ಯಾಗ ಕಟ್ಟಮಣಕ ಅದ.

ಡಾಕ್ಟರ್– ಅಯ್ಯೋ ಬೆಪ್ಪೇ. ನಾನೇನು ಎಮ್ಮಿಗಳು ಕೇಳೀಲ್ಲಾ ತಿಳಿಯಿತೇ?

ಸಿದ್ದಪ್ಪ– ಎಮ್ಮಿ, ಹೋರಿ ಕರ ಅಂತ ನೀವs ಅಂದ್ರೆಲ್ಲರ್ರಿ. ಅಂತೂ ಹಳ್ಳಿ ಮಳ್ಳರನ್ನ ಕಂಡು ಹ್ಯಾಂಗೋ ಮಾತಾಡ್ತಿರೆಪಾ? ಆಟ ಒಗತ್ಯಾಗ ಆಡಂಗಿತ್ತು ಅಂದ್ರ ಕನ್ನಡ ಮಾತ ಆಡಬೇಕ್ರಿ, 'ಇಲ್ಲಂದ್ರ ಬಾಡಗಿ ಕೋಟ, ಉದ್ರಿ ಪ್ಯಾಂಟ, ಎರಡ ನಯಾ ಪೈಸಾದ ಒಂದು ಸಿಗರೇಟ ಸೇದು ಸಾಬ್ರ ಮುಂದ ನಿಮ್ಮ ಭಾಷಾ ಆಡ್ಬೇಕ್ರಪಾ.

ಡಾಕ್ಟರ್– ಯಾಕೋ ಎಷ್ಟರs ಒದರಲಿಕ್ಕೆ ಹತ್ತಿದೆಯಲ್ಲ?

ಸಿದ್ದಪ್ಪ– ಯಾಕ್ರೀ ಯಪಾ? ನಾ ಆಡು ಮಾತು ತಮಗ ಬಿರ್ಸ ಆತೇನ್ರಿ?

ಡಾಕ್ಟರ್– ಕ್ಯಾ ಹೈರೆ ತೇರಾ ನಾಮ್?

ಸಿದ್ದಪ್ಪ– ನಾವು ನಾಮ ಹಚ್ಚೋರಲ್ರಿ ಯಪ್ಪಾ.

ಡಾಕ್ಟರ್– ಕ್ಯಾ ಬಕರಹಾ ಹೈಬೇ ಬಂದರಕಾ ಬಚ್ಚಾ

ಸಿದ್ದಪ್ಪ– [ನೋಡಿ] ಯಾರ ಬಂದರ್ರಿ ಯಪ್ಪಾ?

ಡಾಕ್ಟರ್– ಥೂತ್ತೇರಿಕೆ ಗದಾ ಕಹಿಂಕಾ.

ಸಿದ್ದಪ್ಪ– (ಸ್ವಗತ) ಇದೇನೋ ಯಪ್ಪಾ? ಗಧಾ ಪದಾ ಅಂತಾ ಬೈಲಾಟದನ ಮಾತ ಹಚ್ಚಿದ್ನಲ್ಲ ಈ ಮಹಾಶಯ!

ಡಾಕ್ಟರ್– ಕ್ಯಾಬೇ ಸೈತಾನ ನಿಮ್ಗೆ ಈ ಮಾತು ತಿಳಿದಿಲ್ಲಾ?

ಸಿದ್ದಪ್ಪ– ಸಾಬ್ರ ನಮ್ಗ ಹ್ಯಾಂಗ ತಿಳಿಬೇಕ್ರಿ ಈ ನಿಮ್ಮ ಕಟೇರಿ ಪಿಚೇರಿ ಮಾತು?

ಡಾಕ್ಟರ್– (What is your name?) ವಾಟ್ ಈಜ ಯುವರ್ ನೇಮ್?

ಸಿದ್ದಪ್ಪ– ನಾಯಾಕ ಸ್ವಾಟಿ ಹರಕೊಳಂದ್ರಿ ಯಪಾ? ಇದೇನೆ ಅಂತಾರಲ್ಲ "ಹತ್ತಿ ಹಣ್ಣಿಗಿ ಬಂದು ಸಿಕ್ಕೆಲೆ ಪಿಕಳಿ" ಅಂತ.

ಡಾಕ್ಟರ್– ಕ್ಯಾಬೇ ಬಕರೆ ಕ್ಯೆಂವ ನಹಿ ಬೋಲ್ತಾವ ನಿಮ್ಮ ಹೆಸರು?

ಸಿದ್ದಪ್ಪ– ಇಷ್ಟ ಕೇಳಿದ್ರ, ತಡ ಇಲ್ದ ಹೇಳೇ ಬಿಡ್ತಿದ್ದಿನಿ ಬಿಡ್ರಿ ನನ್ನ ಹೆಸರ

ನೋಡ್ರಿ ನನ್ನ ಹೆಸರು ಸಿದ್ದಪ್ಪರಿ. ನನ್ನ ಹೆಂಡ್ತಿ ಹೆಸರು ಸಿದ್ದಿರಿ. ಅಡ್ಡ ಹೆಸರು "ರಗಟೇರ" ಮುಕ್ಕಾಂ, ಪೋಷ್ಟ, ತಾಲೂಕ, ಜಿಲ್ಲಾ ಎಲ್ಲಾನು ಹೇಳಂದ್ರ?

ಡಾಕ್ಟರ್– (ನಗುತ್ತ) ಸ್ಟೇಟ್ ಒಂದು ಬಿಟ್ಟೆಲ್ಲೋ ಮಹಾರಾಯಾ?

ಸಿದ್ದಪ್ಪ– ಡಾಗದಾರ ಸಾಬ್ರ? ನನ್ನ ಹೆಂಡ್ತಿಗಿ ಉರಿ ಬರ್ಲಿಕ್ಕ ಹತ್ತಿ ಮೂರು ದಿನಾಯಿತು. ಕೂಳ ನೀರ ಕೂಡೇ ಬಿಟ್ಟಾಳ. ನಾಲ್ಕನೇ ದಿನಕ ಎಲ್ಲಿ ಕೌದ್ಯಾಗ ಕಾಲ್ಚಾಕ್ತಾಳಂತೀನಿ. ನೀವು ನೋಡ್ತಿರೇನ್ರಿ? ಗಡಾನ ಮನಿಗೆ ಹೋಗುನ ನಡ್ರಿ.

ಡಾಕ್ಟರ್– ಅಚ್ಛಾ ಸಿದ್ದಪ್ಪ ನಮ್ದು ಮಲೇರಿಯಾ ಡಾಕ್ಟರ್ ಕೆಲ್ಸಾ ಇದೆ. ರಕ್ತಾ ಪರೀಕ್ಷಾ ಮಾಡಿ ನೋಡುತ್ತೇನೆ.

ಸಿದ್ದಪ್ಪ– ಅಂತೂ ಪರೀಕ್ಷಾ ಮಾಡ್ತಿರನ್ರಿ? ನಡೀರಿ ಗಡಾನ.

ಡಾಕ್ಟರ್– ಅಚ್ಛಾ ಸಿದ್ದಪ್ಪಾ? ನಿಮ್ದು ಹೆಣ್ತಿಗಿ ವಯಸ್ಸು ಎಷ್ಟು ಆಗೀದಾವ್?

ಸಿದ್ದಪ್ಪ– ದ್ಯಾವ್ರ? ಮಾಲ ಮುಂದ ಬಂದಾಗ ತಾನs ತಿಳಿತಾದಲ್ರಿ ನಡ್ರಿ ಬಡಾನ.

ಡಾಕ್ಟರ್– ಅಚ್ಛಾ, ಚಲೋ ಸಿದ್ದಪ್ಪಾ. (ಸ್ವಗತ) ದೇವ್ರ ನನ್ಮ್ಯಾಲ ನನ್ನ ಮೂರನೇ ಕಣ್ಣ ತೆರೆದ್ಹಾಂಗ ಕಾಣಸ್ತಾದ. ಸಿದ್ದಿ ಮನಸ್ಸು ನನ್ಮ್ಯಾಲ ಆಗ್ಹಂಗ ಕರುಣಿಸು. ನಿನಗ ಏಳು ಸೋಮವಾರ ಉಪವಾಸ ಮಾಡ್ತೀನಿ. ಚಿಕ್ಕಂದಿನಲ್ಲಿಯೇ ಇವಳ ಮೇಲೆ ಮನಸ್ಸಿಟ್ಟಿದ್ದೇನೆ. ಆದರೆ ಈ ಮಿಡಿನಾಗರ ಹೆಣ್ಣಿನ ಬಣ್ಣವೇ ತಿಳಿಯದಂತೆ ಆಗಿದೆ. ಮಾತು ಮಾತಿಗೆ ಎಣ್ಣಾ ಎಣ್ಣಾ ಎಂದು ಕರೆಯುತ್ತಾಳೆ.

ಸಿದ್ದಪ್ಪ– ಯಾಕ್ರಿ ದಾಗದರ ಸಾಹೇಬ್ರ, ಯಾ ದೇವ್ರಗಿ ಜಪಾ ಮಾಡ್ತಿರಿ?

ಡಾಕ್ಟರ್– ಅಚ್ಛಾ ಚಲೋ. [ಹೋಗುವರು]

೯ನೆಯ ಪ್ರವೇಶ

[ದೃಶ್ಯ : ಮನೆ]

(ಸಿದ್ದಿಯು ತಲೆ ಕಟ್ಟಿಕೊಂಡು ಕಾಟಿನಮೇಲೆ ಮಲಗಿದ್ದಾಳೆ.

ಹೊರಗಿನಿಂದ ಸಿದ್ದಪ್ಪನು ಕೂಗುತ್ತ ಬರುತ್ತಾನೆ.)

ಸಿದ್ದಪ್ಪ– ಹಿಂಗs ಬರ್ರಿ ಸಾಹೇಬ್ರ, ಎದ್ದ ಕುಂತ್ರ ಜರಾ, ನಿನಗ ನೋಡಾಕ ಬಂದಾನ ಡಾಗದಾರ.

ಸಿದ್ದಿ– [ಮನಗುತ್ತ] ಏ, ಯಾಕ ಒದ್ರತಿ ಒಂದೇ ಸವನ.

ಸಿದ್ದಪ್ಪ– ಅಲಾ ಇವಳ, ಒದರಾಕ ನಾಯೇನ್ ನಾಯ? ಡಾಗದಾರ ಬಂದಾನ. ಅಗಸುದ್ಯಾ ಕೊಡ್ತಾನ ಬಾ ಗಸಾನ.

ಸಿದ್ದಿ– ಇಂಥಾ ದಿವ್ಸದಾಗ ಡಾಗದಾರಗ ಯಾಕ ಕರಕೊಂಡ ಬಂದಿ? ಮೊದಲs ಅಗ್ಗಾದ ದಿನ? ಡಾಗದಾರಗೋಳ ಕಣ್ಣಿಗಿ ಬಡವರ ಜಡ್ಡ ಕಣ್ಣಿಗಿ ಬಿತ್ತಂದ್ರ ಸಾಕು ಮುರ್ದs ನುಂಗತಾವ ಮೂಳಗೋಳು (ಕೈ ತೋರಿಸುವಳು.)

ಡಾಕ್ಟರ್– (ಸ್ವಗತ) ಅರೇ ಅಲ್ಲಾ, ಹಾತ ಕ್ಯಾ ನರ್ಮ ಹೈ. (ಪ್ರಕಾಶ) ಅಚ್ಛಾ ತುಮ್ಕು ಸರ್‌ಕಾ ದರ್ದ ಉಟಕರ ಎಷ್ಟು ದಿವ್ಸ ಆಯ್ತು.

ಸಿದ್ದಿ– ಸರಕಾರ ಪರಕಾರ ಅಂತ ಏನ ಅಂತೀಯಲ್ಲ ಯಪ್ಪ? ನಮ್ಗ ತುರ್ಕ ಮಾತ ತಿಳೆಂಗಿಲ್ಲ.

ಡಾಕ್ಟರ್– ನಮ್ಗೆ ಕನಡಾ ಮಾತು ಆಡ್ಲಿಕ್ಕ ಬರುವದಿಲ್ಲಾ. ನಾವು ಅಂದ್ರಾ ಪರದೇಶದವರು.

ಸಿದ್ದಿ– ಯಾ ಪರದೇಶಿಯನ ಆಗು. ಒಟ್ಟ ವಾಗತ್ತ್ಯಾಗ ಅಡಂಗಿತ್ತಂದ್ರ ನಮ್ಮ ಕನಡಾ ಮಾತ ಆಡ.

ಡಾಕ್ಟರ್– ನಿಮ್ದು ತಲಿ ನೋವು ಎದ್ದು ಎಷ್ಟು ದಿವ್ಸ ಆತು?

ಸಿದ್ದಿ– ಯಪಾ ೩–೪ ದಿವ್ಸ ಆಯ್ತು ನೋಡ್ರಿ, ಹಿಂದ್ಕs ನs ಹೊಡಿತಾದ

ಡಾಕ್ಟರ್– ಹೀಗೆ ಮಲಗಿಕೊಳ್ಳಿ, (ಮಲಗುವಳು)

ಸಿದ್ದಪ್ಪ– ನೀವು ರಕ್ತಾ ಪರೀಕ್ಷಾ ಮಾಡ್ತೀರಂದ್ರಲ್ರಿ?

ಡಾಕ್ಟರ್– ಕಿವಿಗೂ ನೋಡ್ತಿನಿ ಸಿದ್ದಪ್ಪ!

ಸಿದ್ದಪ್ಪ– ಅಂದ್ರ; ಸಂದ ಬಿಡಲಾರ್ದಂಗ ನೋಡ್ರಿ? ನಾ ಜರಾ ಹೊರಗ ಹೋಗಿ ಎಮ್ಮಿ ಕಟ್ಟಿ ಬರ್ತೀನಿ.

ಸಿದ್ದಿ– [ಎದ್ದು] ಹಿಂಗ್ಯಾಕ ಮಾಡ್ತಿ ಹುಚ್ಚನಂಗ.

ಸಿದ್ದಪ್ಪ– ನೋಡ್ರಿ ನನಗೆ ಹುಚ್ಚ ಅಂತಾಳ.

ಸಿದ್ದಿ– ಏ ! ಸುಮುಕಿರಾ, ಎಲ್ಲದರಾಗೂ ಅಕ್ಕಿಕಾಳ ನನ್ನೂ ಇರಲಂತಿ. ಡಾಗದಾರ ಸಾಬ್ರ, ನೋಡಂಗಿತ್ತು ಅಂದ್ರ ನೋಡ್ರಿ ಗಡಾನ. ಹಿಂಗ ಕೈಎತ್ತು, ಅದು ಎತ್ತು; ನಾಲಿಗಿ ತೆಗಿ ಅಂತ ಎಷ್ಟತ್ತನಾ ನೋಡ್ತೀರಿ.

ಡಾಕ್ಟರ್– ಹಿಂಗ ಗಡಿಬಿಡಿ ಮಾಡಿದ್ರ ಹ್ಯಾಂಗ್ರಿ? ಜರಾ ಜಡ್ಡ ನೋಡಿ ಔಷಧ ಕೊಡಬೇಕಾಗ್ತದ್ರಿ.

ಸಿದ್ದಪ್ಪ– ಆಕಿ ಅನ್ನೂದು ಹಂಗರಿ, ನೀವೇನ ರೊಕ್ಕದ ಕಾಳಜಿ ಮಾಡಬ್ಯಾಡ್ರಿ, ಡಾಗದಾರ ಸಾಬ್ರ? ಅದೇನು ಇಷ್ಟುದ್ದ ಚುಚ್ಚೂದು ಇರ್ತದಲ್ಲರಿ, ಇದ್ದರ ಇಕೀಗೂ ಚುಚ್ಚರಿ.

ಸಿದ್ದಿ– ಏ ! ಹಲ್ಕಟ ! ಏನದು ಚುಚ್ಚೂದು?

ಡಾಕ್ಟರ್– ಅದ್ಕ ಇಂಜೆಕ್ಶನ್ ಬೋಲ್ತಾ. ಹಮ್ ತುಮ್ಕೊ ತೀನ ಇಂಜೆಕ್ಶನ್ ದೇತಾ. ಇವತ್ತಿಗೆ ಈ ಮಲೇರಿಯಾ ಗುಳಿಗಿ ದೇತಾ. ನಾಳೆ ಬರುವಾಗ ಪ್ರಾವೇಟ ಔಷಧ ಲಾತಾ.

ಸಿದ್ದಪ್ಪ– ಎಷ್ಟಾಕ್ಕಾದರಿ ಇಕಿ ಬಿಲ್ಲ?

ಡಾಕ್ಟರ್– ಹಮ ತುಮ್ಕೊ ಬಿಲ್ಲ ನಹಿ ಲೇತಾ. ಏ ಸುದ್ದಿ ನಮ್ದು ಸರ್ಕಾರಕ್ಕೆ ಮುಟ್ಟಿತೋ ನೌಕರಿಸೇ ಕಾನ್ಸಲ್ ಕರ್ತಿದಾವ್.

ಸಿದ್ದಿ– ಹಿಂಗ್ಯಾಕ ಮಾತಾಡ್ತೀರಿ? ಕಟರೆ ಪಿಟರೆ ಅಂತಾ. ನಾಯಿ, ತಿಂದ ನಾಲಿಗಿ ಆಡ್ಸಿದಂಗ ಆಗ್ತದಲ್ಲ. (ಹೋಗುವಳು)

ಡಾಕ್ಟರ್– ಏನ ಸಿದ್ದಪ್ಪ? ನಿಮ್ಮ ಹೆಂಡತಿಗೆ ಏನೋ ಒಂದು ತರದ ರೋಗಾ ಈಗ ಹಬ್ಬಲಿಕ್ಕೆ ಹತ್ತಿದೆ. ಇದಕ್ಕೆ ಬೇಗನೆ ಔಷಧದಿಂದ ಗುಣಪಡಿಸಬೇಕು. ಕ್ಯಾ ಸಮಜಮೇ ಆಯಾ? ಅಚ್ಛಾ ಸಿದ್ದಪ್ಪಾ ತುಮ್ಹಾರಿ ಹೆಂಡ್ತಿ ಬಹುತ ಸುಂದರ ಅದಿಬಾವ್.

ಸಿದ್ದಪ್ಪ– (ಸ್ವಗತ) ತಳಕ ಕೈ ಹಾಕಿದ್ನಲ್ಲಪ್ಪಾ ಈ ಮಗಾ ! [ಪ್ರಕಾಶ] ಎಲ್ಲಾ ರೀತಿಯಿಂದ ಚಲೋ ಅದಾಳ ನೋಡ್ರಿ ಸಾಬ್ರ.

ಡಾಕ್ಟರ್– ಹಮ್ ಫಿರ್ ಕಲ್ ಆಯಿಂಗೆ

[ಹೋಗುವರು]

ದೃಶ್ಯ : ಬೀದಿ

ಡಾಕ್ಟರ್– ಹೆಂಡ್ರ ಇಲ್ಲೋರ ಹಣೇಬಾರ ಇಷ್ಟೈತಿ. ಹೆಂಗ್ಸಿನ ಆಶಾಕ ಮಾಡೂದು ಮಾಡಬೇಕು. ಮಾಡಲಾರ್ದ ಮಾಡಬೇಕಾಗ್ತೈತಿ. ಹೆಂಗ್ಸಿಗೆ ಕೈಹಾಕಬೇಕಾದ್ರ ಅವನ ಎದ್ಯೆಗಡಬಲ್ ಸ್ಟೋಡಾ ಇಂಜ್ಯನ್ ಇರಬೇಕಾಗ್ತೈತಿ. ಈ ನನ್ನ ವೇಷ ನೋಡಿ ಆಕೆಗೆ ನಾನು ಗುರ್ತು ಸಿಕ್ಕಿಲ್ಲ. ಮುಂದೆ ನಾನು ಸಿದ್ದಿಗೆ ಹಕೀಕತ ತಿಳಿಸಿದರೇ ಪುನಃ ಅಣ್ಣಾ ಯಾವಾಗ ಬಂದೆ ಎನ್ನುವ ಶಬ್ದಗಳೇ ಕೇಳಬೇಕು. ಇರಲಿ; ಇನ್ನೂ ಈ ವೇಷದಲ್ಲಿಯೇ ನನ್ನ ಕಾರ್ಯ ಸಾಧಿಸಿಕೊಳ್ಳಬೇಕು. ಅಂತೂ.... ಆಟಾಪ ಆಗೂ ಹೆಣ್ಣಲ್ಲರಿs......! ಇನ್ನೊಮ್ಮೆ ಹೊಳ್ಳಿ ಹ್ವಾದಾಗ ಧೈರ್ಯ ತಂದು ಕೇಳೇಬಿಡ್ತಿನಿ ಹೋಗೂಣ ಇನ್ನ ರಾತ್ರಿ ಮಠಕ್ಕ

[ಹೋಗುವನು.]

===***=====***====

೩ನೇಯ ಅಂಕು

೧ನೆಯ ಪ್ರವೇಶ

(ದೃಶ್ಯ : ಪರ್ಣಕುಟೀರ)

(ಜಯಾ ಪೂಜಾ ಸಾಮಗ್ರಿಗಳನ್ನು ಅಣಿ ಮಾಡುವನು. ಅವನನ್ನು ಗುರು ಏಕ ದೃಷ್ಟಿಯಿಂದ ನೋಡಿ ಕಂಗಳಲ್ಲಿ ನೀರು ತಂದು)

ಗುರು– ಬಾಲಭಾಸ್ಕರನಂತೆ ದಿನೇ ದಿನೇ ಬೆಳೆಯುವ ಜಯನನ್ನು ನೋಡಿದಾಕ್ಷಣವೇ ಗತಿಸಿಹೋದ ಐತಿಹಾಸದ ಪುಟದಲ್ಲಿ ಪುಟದು ಬೀಳುವ ನಡುನಾಡಿನೋಳ್ ಬೆಳೆದ ಚಂದ್ರಹಾಸನ ಕಥೆ ನೆನಪಿಗೆ ಬರುತ್ತದೆ. ಚಿಕ್ಕಂದಿನಲ್ಲಿಯೇ ತಂದೆ–ತಾಯಿಗಳಿಂದಗಲಿದ ಕುಮಾರ ಜಯನಿಗೆ ನೆಲವೇ ಹಾಸಿಗೆಯಾಗಿ, ಆಕಾಶವೇ ಹಚ್ಚಡವಾಗಿ, ಮೃಗ ಪಕ್ಷಿಗಳೇ ನೆಚ್ಚಿನ ಗೆಳೆಯರನ್ನಾಗಿ, ಅವನನ್ನು ಈ ದಟ್ಟವಾದ ಕಟ್ಟಡವಿಯಲಿ ಬೆಳೆಸಿದ ಶಂಭೋ ಶಂಕರಾ ! ನಿನಗೆ ಶತಾಧಿಕ ನಮನಗಳು. ಇಂದಿಗೆ ಕುಮಾರನು ಸರ್ಕಾರಿ ಶಾಲೆಯ ಅಭ್ಯಾಸ ಪೂರ್ಣ ಮಾಡಿದನು. ಮುಂದೆ ಅವನು ಯಾವದೇ ನೌಕರಿಯನ್ನು ನಿರ್ಧರಿಸಿಕೊಂಡು ಸದಾ ಸತ್ಯ–ಅಹಿಂಸೆಗಳ ತುಲನೆ ಮಾಡಿ ಅನ್ಯಾಯಕ್ಕೆ ಕಿವಿಗೊಡದೆ "ಸತ್ಯಮೇವ ಜಯತೇ" ಎನ್ನುವ ನಾಣ್ಣುಡಿಯನ್ನು ದಿಟವಾಗಿ ಅವನೆದೆಯಲ್ಲಿ ಉಳಿಯುವಂತೆ ಅನುಗ್ರಹಿಸು ದೇವಾ.

ಜಯ– ತಾತಾ, ಪೂಜಾ ಸಿದ್ಧತೆಯಾಗಿದೆ. ದಯಮಾಡಿಸಬೇಕು.

ಗುರು– ಆಗಲಿ, ಜಯಾ ಪತ್ರಿ–ಪುಷ್ಪಗಳನ್ನು.....?

ಜಯ– ತಂದಿಟ್ಟಿದ್ದೇನೆ ತಾತಾ.

ಗುರು– "ಓಂ ನಮಃ ಶಿವಾಯ" ಜಯಾ ಓಂಕಾರದ ಬಿಂದುವಿನಲ್ಲಿಯೇ ಈ ಜಗವು ಜನನವಾಗಿದೆ. ಮತ್ತು ಇದೇ ಓಂಕಾರದಲ್ಲಿಯೇ ಲಯವಾಗುತ್ತಿದೆ. ಓಂಕಾರದ ಶಿಖಾಚಕ್ರದ ಮೇಲೆ ನಾದ ಬಿಂದು......!

ಜಯ– ಸಿಂಧೂ ನದಿಯಾಗಿ ಹರಿದಿದೆಯಲ್ಲವೇ? ನಿಜ ತಾತಾ, ಆ ಓಂಕಾರ ಸ್ವರೂಪ ನಾವಾಗಬೇಕಾದರೆ?

ಗುರು– ಅಹಂಕಾರ ಅಳಿಯಬೇಕು.

ಜಯ– ಅಹಂಕಾರ ಅಳಿದ ಮೇಲೆ?

ಗುರು– ನಾನು ನನ್ನದು ಎಂಬ ಮಮಕಾರ ತ್ಯಜಿಸಬೇಕು.

ಜಯ– ಆಮೇಲೆ?

ಗುರು– ಆಮೇಲೆ ತಾನೇ ತಾನಾಗಬೇಕು. ಅವನೇ ನಿಷ್ಕಾಮಯೋಗಿ. ಅವನೇ ಓಂಕಾರ ಸ್ವರೂಪಿ ಇರಲಿ, ಜಯಾ ಪೂಜೆಗೆ ಅಣಿಯಾಗು.

॥ ಪದ ॥

ಜಯ– ನಮೋ ಲೋಕಪಾಲ । ನಮೋ ನಾದಲೋಲ ।

ನಮೋ ಭಾಲನೇತ್ರ । ನಮೋ ಜಗದ ಸೂತ್ರ ॥ಪಲ್ಲ॥

ಭಾವಲಿಂಗ ನೀನೇ । ಭವನಾಶ ನೀನೇ ।

ದಿವ್ಯವೇದ ನೀನೇ । ನವ್ಯಜ್ಯೋತಿ ನೀನೇ ।

ನಮೋ ಪಾರ್ವತೀ ವಲ್ಲಭಾ । ನೀಲಕಂಠ ॥೧॥

(ಪೂಜೆ ಮುಗಿದ ಬಳಿಕ ಜಯನು ನೋಡುತ್ತಿರುವನು ಒಂದು ಬದಿಗೆ)

ಗುರು– ಏನು ನೋಡುತ್ತಿರುವೆ ಜಯಾ?

ಜಯ– ತಾತಾ! "ಧೇನುವು ಕರುವನ್ನು ಕಳಕೊಂಡಂತೆ" ನನ್ನ ಮಿತ್ರನು ನನ್ನ ಭೆಟ್ಟಿಗಾಗಿ ಹೇಗೆ ಧಾವಿಸಿ ಬರುತ್ತಿರುವನು. (ವಿಜಯ ಬರುವನು. ಇಬ್ಬರೂ ಹಸ್ತ ಕೂಡಿಸುವರು) ವಿಜಯಾ ಇವರೇ ತಾತನವರು. (ನಮಸ್ಕರಿಸುವನು)

ಗುರು– ಚಿರಾಯುವಾಗು ವತ್ಸಾ ! ನಿಮ್ಮಿಬ್ಬರ ಮೈತ್ರಿಯು ನೋಡಿದರೆ ಹಿಂದಿನ ಜನ್ಮದಲ್ಲಿ ಒಂದೇ ರಕ್ತದಲ್ಲಿ ಹುಟ್ಟಿಬಂದಂತೆ ಕಾಣಿಸುತ್ತದೆ. ಎಲ್ಲವೂ ದೇವರಿಚ್ಛೆ. ನಡೆಯಿರಿ ಮಕ್ಕಳೆ, ಫಲಹಾರ ಸೇವಿಸಿ ಹೋಗುವಿರಂತೆ. [ಹೋಗುವರು.]

(ದೃಶ್ಯ : ಬೀದಿ)

ಜಯ– ಮಿತ್ರಾ ! ನಿನ್ನ ಅಭ್ಯಾಸ ಮುಗಿದ ಮೇಲೆ ಯಾವ ನೌಕರಿಯನ್ನು ಕೈಕೊಳ್ಳುವೆ?

ವಿಜಯ– ಮೊದಲು ನೀನೇ ಹೇಳು ಮಿತ್ರಾ ! ಆಮೇಲೆ ತಾನೆ?

ಜಯ– ನೋಡು ವಿಜಯ; ಜನರಲ್ಲಿ ತುಂಬಿರುವ ಅಂಧಕಾರವನ್ನು ಹೊಡೆದೋಡಿಸಲು ನ್ಯಾಯಾಧೀಶನಾಗಬೇಕೆಂಬುದೇ ನನ್ನ ಹೆಬ್ಬಯಕೆ. ನೀನು?

ವಿಜಯ– ನಾನೇ? ಭಾರತದಲ್ಲಿ ಕಳವು, ಕೊಲೆ, ಸುಲಿಗೆ, ಪರಸ್ತ್ರೀಯರ ಮಾನಭಂಗ ಇತ್ಯಾದಿ ಇವುಗಳನ್ನು ಖಂಡಿಸಲಿಕ್ಕೆ ಪೋಲಿಸ್ ಇನ್‌ಸ್ಪೆಕ್ಟರ್‌ನಾಗಬೇಕೆಂಬುದೇ ನನ್ನ ಹಿರಿದಾದ ಆಶೆ.

ಜಯ– ವಿಜಯಾ ! ಕೃಷ್ಣ–ಸುದಾಮರಂತೆ ನಾವಿಬ್ಬರೂ ಒಂದಾಗಿ ನಮ್ಮ ಭಾರತದಲ್ಲಿ ಬಡವ, ಬಲ್ಲಿದ, ಉಚ್ಚ, ನೀಚ, ಹಿಂದೂ ಮುಸ್ಲಿಂ ಎಂಬ ಭೀಷಣಾಕಾರದ ಶಬ್ದವನ್ನು ಕಿತ್ತೊಗೆದು "ಒಂದೇ ಮಾತರಂ" ಮಾಡಿ ಬಿಡುವಾ. "ಓಟ ಓಡುವ ಮುನ್ನ ಎಡವಿ ಬೀಳುವದು ಸಹಜ" ಅದಕ್ಕೆ ನಾವು ಲೆಕ್ಕಿಸದೆ ತೃಣ ಸಮಾನವೆಂದು ತಿಳಿದು, ಮಹಾತ್ಮಾ ಗಾಂಧಿ, ಅಬ್ದುಲ್ ಕಲಮ ಆಜಾದ್ ಇದಲ್ಲದೇ ವೀರ ರಸವನ್ನು ಉಕ್ಕಿಸುವ ಕ್ರಾಂತಿಕಾರಿ ಸುಭಾಶ್ಚಂದ್ರ ಭೋಸ್, ಕಾಂಗ್ರೆಸ್ಸಿನ ಕುಂಕುಮವಾಗಿ ಕೀರ್ತಿಗಳಿಸಿದ ವೀರ ವಲ್ಲಭಭಾಯಿ ಪಟೇಲರಂತೆ ನಾವೂ ನಮ್ಮ ಎಳೆ ಬಾಹುಗಳಿಂದ ಬರುವ ಎಡರು ತೊಡರುಗಳನ್ನು ಛೇದಿಸಿ ಕರ್ನಾಟಕ ಮಾಡೋಣ ಏಕೀಕರಣ

ವಿಜಯ– ಅಹುದು ಮಿತ್ರಾ, ಇದೇ ಏಕೀಕರಣಕ್ಕೆ ತನ್ನ ಆಯುರ್ಮಾನದ ಕಡೆ ಉಸುರಿನವರೆಗೂ ಬಡಿದಾಡಿ ಕಡೆಗೆ ಅಂತರ್ಧಾನರಾದ ಭಾರತದ ಆಶಾಜ್ಯೋತಿ ನಮ್ಮ ನೆಚ್ಚಿನ ಚಾಚಾ ನೆಹರೂರವರು ಹಾಕಿ ಕೊಟ್ಟಿರುವ ವಿಶ್ವರೇಖೆಗೆ ನಮ್ಮ ಧ್ಯೇಯ ಸಾಧಿಸುವವರೆಗೆ ಬಡಿದಾಡಬೇಕು ನಾವೆಲ್ಲ ಭಾರತೀಯರು ಒಂದಾಗಬೇಕು. ದೇಶಕ್ಕಾಗಿ ಹೋರಾಡಬೇಕು. ಅಂದರೇನೆ ನಮ್ಮ ಜಾತ್ಯಾತೀತ ರಾಷ್ಟ್ರವಾಗಲಿರುವ ನವ್ಯ ಹಿಂದುಸ್ತಾನಕ್ಕೆ ಪರದೇಶದ ಕಪಿಗಳು

ತಮ್ಮ ಕಪಿಚೇಷ್ಟೆ ಮಾಡಲಾರವು. ನಮ್ಮ ನಮ್ಮೊಳಗೆ ಕಲಹ, ದ್ವೇಷ, ಅಸೂಯೆ, ಲಂಚ, ರುಸುವತ್ತುಗಳ ತವರುಮನೆ ಮಾಡಿದರೆ ಪರಕೀಯರಿಗೆ ಇಂಬುಕೊಟ್ಟಂತಾಗುತ್ತದೆ. ನನ್ನ ನೆಚ್ಚಿನ ಭಾರತ ಬಾಂಧವರಲ್ಲಿ ವಿಜ್ಞಾಪಿಸಿಕೊಳ್ಳುವದೇನೆಂದರೆ ಇಲ್ಲಿಯವರೆಗೆ ಮಾಡಿದ್ದೆಲ್ಲಾ ಮರೆತು ಭಾರತ ಮಾತೆಯ ಕೂಗಿಗೆ ಓಗೊಟ್ಟು ನಿಲ್ಲಿರಿ. ಇಂದು ಪರರ ಪಕ್ಕೆಯಲ್ಲಿ ಬಳಲುತ್ತಿರುವ ಭಾರತಮಾತೆಗೆ ಸಂರಕ್ಷಿಸಿಕೊಳ್ಳುವಾ. (ಭಾವಗೀತೆ ಕೇಳಿಸುವದು) ನೋಡಿದೆಯಾ ಮಿತ್ರಾ, ಅಖಂಡ ಭೂಮಂಡಲವನ್ನೇ ತೊಟ್ಟಿಲ ಮಾಡಿ ತೂಗುವ ಕೈಗಳ ಶಕ್ತಿಯಲ್ಲಾ ಕೇಂದ್ರೀಕರಿಸಿದ ಮಹಾಮಾಯಿಯ ಕೂಗು

॥ ಭಾವಗೀತೆ ॥

ಭಾರತ ಮಕ್ಕಳಿಂದು । ದುಡಿಯಿರಿ ದೇಶಕೆಂದು ।
ಕೂಡಿರಿ ಎಲ್ಲರೊಂದು । ಮಾಡಿರಿ ದೇಶ ಒಂದು ॥ ೧ ॥
ಅಹಿಂಸವೇ ಮಾರ್ಗವೆಂದು । ಸತ್ಯಮೇವ ಜಯತೆಯೆಂದು ।
"ಜೈ–ಹಿಂದ" ಎನ್ನಿಂದು । ಕೂಗೀರಿ ಎಲ್ಲರೊಂದು ।
ಭಾರತ ಮಾತೆಗಿಂದು । ನಿರುತಾಗಿ ನಡೆಯಿರೆಂದು ॥ ೨ ॥

೨ನೆಯ ಪ್ರವೇಶ

(ದೃಶ್ಯ : ಮನೆ)

(ಸಿದ್ದಪ್ಪನು ವಿಚಾರಮಗ್ನನಾಗಿ ಕುಳಿತಿದ್ದಾನೆ)

ಸಿದ್ದಿ– ಏನs ಗೇನಸ್ತೆಲ್ಲ ನನ್ನ ಧೊರಿ. ಊಟಕ್ಕ ವ್ಯಾಳೆ ಆಯ್ತು ಬರ್ರಿ ಇನ್ನೂ ಹಾಕಂಗಿಲ್ಲೇನು ಕಪೇಲಿಗಿ? ಬರ್ರಿ

ಸಿದ್ದಪ್ಪ– ಈಗ ಊಟ ಮಾಡಿದ್ರಾತ ಬಿಡ ನಿನ. ಎಲ್ಲಿಗೇನ ಓಡಿ ಹೋಕ್ಕಾದೇನ? ಅಲ್ಲ ಸಿದ್ದಿ; ಅಂತೂ "ಕೆಟ್ಟ ಪಟ್ಟಣ ಸೇರಬೇಕಂತ" ಹಿರೇರ

ಅಂದ ಮಾತ ಸುಳ್ಳಲ್ಲ. ದೇವರು ನಮಗೆ ಎಲ್ಲಿ ಹೋದ್ರ ಎರಡ ಭಕ್ರಿ, ಒಂದು ತಂಬಿಗಿ ನೀರ್ಗಿ ಏನ್ ಕಡಮಿ ಮಾಡಿಲ್ಲಾ ಪಾಪ ಅವ್ವ ಜಮುನವ್ವಾ ಎಕಡಿ ಹೋದಳೋ ಏನೋ.....? ಇಷ್ಟಿದ್ದ ಮಗಾ ಹೋಗಿ ಈಗ ಇಷ್ಟುದ್ದ ಆಗ್ಯಾನ ಇಬ್ಬರೂ ಗಂಡಾ ಹೆಣ್ತಿ ನೋಡಲಿಲ್ಲ ಮಕ್ಕಳ ಐಸಿರಿ.

ಸಿದ್ದಿ– ಅಯ್ಯ್ಯಾ ಖರೇವ ನೋಡ. ಅವ್ವ ಯಕಡಿ ಹೋದ್ಲೋ? ಅಪ್ಪ ಯಕಡಿ ಹೋದ್ನೋ? ಯಾರಿಗೂ ತಿಳಿಲಾರ್ದಂಗಾತು. ಎಷ್ಟು ಕಾಡತ್ತಿತ್ತಾಯ್ತು ಅವರಿಸಿ ಇದಿ. ಒಮ್ಮಿದ್ದೊಮ್ಮೆಗೆ ಆ ಮನಿಗೆ ಮುಚ್ಚಿದ ಹವಳೀನ ಬಂತ್ನೋಡಿ. ಶಾಂತಕ್ಕ ಕಮಲಕ್ಕೆ ಕೂಡಿ ಮನಿ ಅಗಸಿಗಿ ಬಂದಿರಕೇಂತೀನಿ.

ಸಿದ್ದಪ್ಪ– ಏನ್ ಮಳ್ಳ ಹೆಂಗ್ಸಿದ್ದಿ ನೀನು. ಅಗಸೀಗಿ ಯಾಕ ಊರ ಹೊರಗ ಸುಡಗಾಡಿಗಿ ಬಂದದ್ದನ್ನು. ಮೊದಲ ಹೆಂಗಸರ ಹಿರಿಸ್ತಾನ ಅದೇನ ಅಂತಾರಲ್ಲ. "ಹೆಂಗ್ಸಿನ ಹಿರಿಸ್ತಾನಲ್ಲಂತ, ಕುಡ್ಡ ನಾಯಿ ಬ್ಯಾ ಅಲ್ಲಂತ."

ಸಿದ್ದಿ– ಖರೇವೈತೇಳ ನಿನ ಮಾತು. ಹೆಂಗ್ಸರ ಆದಿಂದ ಸ್ವಲ್ಪಾರ ಅಂಜಬೇಕು. ಚಿಕ್ಕಂದಿನ್ಯಾಗ ತಂದಿ–ತಾಯಿ ಮಾತ್ನ್ಯಾಗಿರಬೇಕು. ಹರೇದಾಗ ಗಂಡನ ಆಧೀನ ಇರಬೇಕು. ಮುಪ್ಪು ಆದಾಗ ಮಕ್ಕಳ ಮಾತಿನ್ಯಾಗ ಇರಬೇಕು. ಅಂದ್ರ ಹೆಂಗ್ಸರಂತಾರ. ಈಗಿನ ಹೆಂಗ್ಸರ ಹಾರನೋಡ; ತಾಸಿಗೊಂದ ಡಿರೇಸ ಹಾಕತಾರ. ಈ ಪಟ್ಟಣದಾಗ ನನಗಂತೂ ನೋಡಿ ಹುಚ್ಚ ಹಿಡದಾದ. ಒಬ್ಬರಕೊಬ್ಬರ ಕೈ ಹಿಡಕೊಂಡ ಹೋಗ್ತಾರ. ಥೂ ಇದರ ಮಾರಿಗೆ ಮಸಿ ಅರಿಬಿ ತಿಕ್ಕಲಿ. ಪ್ಯಾಂಟಿನ ಗಂಡ್ಸಿನ ನೋಡಿದ್ರಾತ ಹಲ್ಲ ತೆರಿತಾವ ಮೂಳಗೋಳು.

ಸಿದ್ದಪ್ಪ– ಅಲೇ ನಿನ, ಉಸರಾಡಾಕ ಜಾಗಾರ ಕೊಡಲ್ಲ. ಒಂದೇ ಸವನ ಎಮ್ಮೆಲ್ಲೆ ಸಾಬ್ರ ಭಾಷಣ ಬಿಗಿದಂಗ ಆಕ್ಕದಲ್ಲ. ಏ ಮಳ್ಳ, ಈಗಿನ ಕಾಲಾ ಅಂದ್ರ ನೀ ಏನಂತ ತಿಳಿದೀದಿ? ಇಂಥಾ ಸವಲತ್ತು ಹಿಂದ್ಕಿನ ಕಾಲ್ದಾಗ ಇತ್ತೇನ್? ಹೆಂಗ್ಸರಿಗಿ ಮಾತಾಡ್ಸಬೇಕಾದ್ರ ನಮ್ಮಂಥೊರಿಗಿ ಅಂಜು, ಅಳ ಇತ್ತ. ಈಗೆಲ್ಯಾದ, ಹಗಲಚಿಕ್ಕಿ ಹೂಬಾಣ ಇದ್ದಂಗ ನಮ್ಮ ಹೆಂಗ್ಸರಿಗಿ ಮಾತಾಡ್ಲೂದೊಂದ ತಡ, ಏಸಂತ ಹಲ್ಲಿ ತೆರದಾವ. ಕಮಾನ್ ಕಮಾನ್ ಅಂತ ಒಳಗ

ಕರಕೊಂಡು ಹೋದುವ. ಇರ್ಲ್ನೆಡಿ, ಊಟಕ ಬಡ್ಸ ನಡಿ.

ಸಿದ್ದಿ– ಅಲ್ಲs ನಮ್ಮ ವಿಜಯಣ್ಣ ಸಾಲಿಗುಡಿ ಪಾಸಾದಗಳೇ ಇಸ್ಪೇಟದಾರನ ನೌಕರಿ ಸಿಗತಾದಂತ ಹೌದ?

ಸಿದ್ದಪ್ಪ– ಏ ಮಳ್ಳ, ಇಸ್ಪೇಟದಾರಂದ್ರೇನ? ನಿನ್ಗ್ಯಾರ ಹೇಳಿದ್ರು?

ಸಿದ್ದಿ– ಮತ್ತ್ಯಾರ ಹೇಳ್ತಾರ. ಮೊನ್ನಿ ನಮ್ಮ ವಿಜಯಣ್ಣ ತಾವೇ ಹೇಳಿದ್ದ

ಸಿದ್ದಪ್ಪ– ಮೊದಲs ಪ್ಯಾಲಿ. "ಪ್ಯಾಲಿ ಕೈಯಾಗ ವಾಲಿ ಕೊಟ್ಟಿರ ವಾಲಿ ಮುರ್ಸಿ ಜೋಡ ಚೌಲಿ ಮಾಡ್ಸಿತ್ತಂತ" ಇಸ್ಪೇಟದಾರ ಅಲ್ಲ ಮಳ್ಳ. ಪೋಲಿಸ್ ಇನೆಸ್ಪೆಕ್ಟರ್ ಅಂತಾರ. ತಿಳಿತ? ಕೈಯಾಗ ಏನ ಹಿಡಿದಿದೆಲ್ಲ; ಎರಿಮಣ್ಣ ನಿಂಬಿಕಾಯಂ‌ಯೇನ? (ಹಕಾರಿ ಹೊಡೆಯುವನು. ನಾಚಿ ತಲೆ ತಗ್ಗಿಸುವಳು.) ತಿಳಿತ ಬಿಡು ಸಿದ್ದಿ. ನೀ ನೀರ ಹಿಡ್ದಂಗ ಕಾಣಸ್ತಿದ್ದಿ. ನೋಡ ಹ್ಯಾಂಗಾದ ದೇವರ ಆಟ........!! ಬೇರೊಬ್ಬರ ಮಕ್ಕಳಿಗಿ ನಮ್ಮ ಮಕ್ಕಳಂತ ಜೋಪಾನ ಮಾಡಿದ್ರ ದೇವ್ರ ಈ ಫಲ ಕೊಟ್ಟ ನೋಡ. ಆಂ, ನಡಿ ನಡಿ.

(ವಿಜಯನು ಇನ್‌ಸ್ಪೆಕ್ಟರ್ ಡ್ರೆಸ್ಸಿನಲ್ಲಿ ಬರುವನು. ಅವನ ಜೊತೆಗೆ ಜಯನು ಬರುವನು.)

ಸಿದ್ದಿ– ಅಯ್ಯಯ್ಯs ಬಾರ ಯಪ್ಪ. ಎಷ್ಟೊತ್ತ ಏನ ಸುದ್ದಿ. ದಿನಕ ಮೂರ ನಾಕ ಸಾರಿ ಉಂಡ್ರ ಮನಶ್ಯಾ ಘಟ್ಟ್ಯಾಗ ಇರ್ತಾನ. ಇದೇನ ಯಪ್ಪಾ. ಟೊಂಕದಾಗ ಏನ ಇಳಿ ಬಿದ್ದಾದಲ್ಲ?

ವಿಜಯ– [ಪಿಸ್ತೂಲ ತೋರಿಸುತ್ತ] ಅಮ್ಮಾ ಇದು ಪಿಸ್ತೂಲ. ಇದರಿಂದ ನಿನಗೆ ಗುಂಡು ಹಾಕಬೇಕಂತೆ. ಏಕೆ ಅಪ್ಪಾ?

ಸಿದ್ದಪ್ಪ– ತಡsನ ಮಾಡಬ್ಯಾಡೋ ಯಪ್ಪಾ. (ಆಕೆಗೆ ಹಿಡಿದು) ರಡೇ ಒನ್, ಟು, ತ್ರಿ, (ಕೊಸರಿ ಓಡಿ ಹೋಗುವಳು); ವಿಜಯಾ, ಇವರು..........?

ವಿಜಯ– ಇವರು ನನ್ನ ಮಿತ್ರರು. ಇದೇ ಊರಿಗೆ ನ್ಯಾಯಾಧೀಶರಾಗುವ ಭರವಸೆ ಇದೆ. (ನಗುವನು)

ಸಿದ್ದಪ್ಪ– ನಿಮ್ಮಬ್ಬರಿಗೂ ನೋಡಿದ್ರ ನನ್ಗ್ಯಾಕೋ ದುಃಖನೆ ಬರ್ತಾದ ನಿಮ್ಮಣ್ಣ ಜಯಾ ಇದ್ದಾಂಗ ಕಾಣಸ್ತಾದ.

ಜಯ— ನನ್ನ ಹೆಸರೂ ಜಯ ತಾತಾ.

ವಿಜಯ— ನನಗೆ ದೊಡ್ಡಣ್ಣ ಇರುವನೇ ಅಪ್ಪಾ? ಮತ್ತು ನನಗೇಕೆ ಹೇಳಿಲ್ಲ? ಒಳಗೆ ಹೋಗಿ ಅವ್ವನನ್ನು ಕೇಳುತ್ತೇನೆ. (ಒಳಗೆ ಹೋಗುವನು.)

ಸಿದ್ದಪ್ಪ— ಒಳಗೆ ನೀನೂ ನಡಿಯಪ್ಪ. ಊಟ ಮಾಡಿಕೊಂಡು ಇಬ್ಬರೂ ಹೊರಗ ಹೋಗಂತ್ರೆಂತ.

[ಪರದೆ ಇಳಿಯುವದು]

೩ನೆಯ ಪ್ರವೇಶ

(ದೃಶ್ಯ ಮನೆ)

(ಕಮಲಾ ಕಣ್ಣು ಕಳೆದುಕೊಂಡು ಕೂತಿರುವಳು)

ಕಮಲಾ— ಹೇಳೇ ? ಅವನಾವ ನಿನ್ನ ವಿಟ ಪುರುಷ ? ಮನೆತನದ ಮರ್ಯಾದೆ ಉಳಿಯದಂತೆ ಮಾಡಿಟ್ಟಿ ನೀ ಹೇಸಿ ಕೆಲ್ಸ ! ನನ್ನ ಮಗನು ಪರಮ ಹರುಷದಿಂದ ಕಟ್ಟಿದ ಗುಡಿಗೆ ಇಟ್ಟೆ ನೀ ಅಪಕೀರ್ತಿಯ ಕಳಸ ! ಈ ಪಾಪದ ಪಿಂಡಾಂಡವನ್ನು ಹೊತ್ತು ಹೆತ್ತು ಜನನಿಂದ್ಯಳಾದಾಗ ನಾ ಜನರ ಮುಂದೆ ಮುಖವೆತ್ತಿ ತಿರುಗುವಂತಾಗಲಿಲ್ಲ ತುಸು. ನಾ ಮಾಡುವ ಕೆಲ್ಸಕ್ಕೆ ಅಡ್ಡ ಬರುವಳೆಂದು ನನ್ನ ಕಣ್ಣಲ್ಲಿ ಹಾಕಿದೇ ನೀ ವಿಷ. ಈಗಲಾದರೂ ಆಯಿತೆ ನಿನ್ನ ಮನ ಸಂತೋಷ. ಪಾಪಿ, ಜಾರಿಣಿ ಹೇಳೆ ಅವನಾವ ನಿನ್ನ ವಿಟ ಪುರುಷ?

ಶಾಂತಾ— ಅಮ್ಮಾ ! ಮನಸಾರೆ ಒರಿಸಿದ ಮನೋಹರನ ಮೂರ್ತಿಗೆ ಶಪಿಸಬೇಡ ಸರ್ವದಾ. ಪ್ರೇಮ ಭಾವದಲಿ, ಹರುಷದ ಉತ್ಸಾಹದಲಿ. ಸ್ಮೃತಿಯ ಅನುರಾಗದಲಿ, ಯಾವಾಗಲೂ ಚಲಿಸಿದ ನನ್ನ ನಯನ ಮನೋಹರ ಮೂರ್ತಿಯೇ ನನ್ನ ಸ್ವಾಮಿ ಮನೋಹರ.

ಕಮಲಾ— (ದಿಗ್ಭ್ರಾಂತಳಾಗಿ) ಯಾರು? ಮನೋಹರ!

ಶಾಂತಾ— ಹೌದು ನನ್ನ ಮನವನ್ನಪಹರಸಿದ ಕರುಣಾಮೂರ್ತಿಯೇ ಅವರು;

ಕಮಲಾ— ಅವರು ಎನ್ನುವದಕ್ಕೆ ನಾಚಿಕೆಯಾಗುವದಿಲ್ಲವೇ ನಿನ್ನ ಮನಕೆ? ಅವನೆಂತಹ "ಮಿತ್ರ ದ್ರೋಹಿ"! ಆರು ಸಾವಿರ ರೂಪಾಯಿಯ ಕುತ್ತೊದಗಿ ಬಂದಾಗ, ಆ ಕುತ್ತನ್ನು ಕತ್ತರಿಸಿದ ಮಿತ್ರನ ಮನಗೆ

ಇಟ್ಟನೇ ಕೆಂಡ?!

ಮನೋಹರ– (ಪ್ರವೇಶಿಸಿ) ಕೆಂಡ ಹಚ್ಚಲು ನಾನೇನು ಕಾಡು ಮನುಜನಲ್ಲ ಕಮಲಾಬಾಯಿಯವರೇ. ಈಗ ನೀವಾಡುವದು ಕೇವಲ ವಿಚಾರ ವಿಮರ್ಶೆಗೆ ಮೀಸಲಾದ ತರ್ಕ. ಅಣ್ಣನ ಮಿತ್ರನು ತನಗೂ ಅಣ್ಣನೆಂದು ತಿಳಿಯುವದು ನಿಮ್ಮ ಭಾವೀ ಮಗಳ ಕರ್ತವ್ಯ.

ಕಮಲಾ– ಕರ್ತವ್ಯದ ಕಕ್ಕೋಲ ಹಿಡಿದ ಕರುಣೆಯಿಲ್ಲದ ಖೂಳ.....! ಹೆರವರ ಹೆಣ್ಣುಮಕ್ಕಳಿಗೆ ವಕ್ರ ದೃಷ್ಟಿಯಿಂದ ನೋಡಿ ಅವರನ್ನು ನಿನ್ನ ಬಾಹುಬಂಧನದಲಿ ಸಿಲುಕಿಸಬೇಕೆನ್ನುವ ಕಾಮಾಂಧಾ !! ಪರಸ್ತ್ರೀಯರು ನಿನ್ನಕ್ಕ ತಂಗಿಯರೆಂದು ತಿಳಿಯದ ನೀನೊಬ್ಬ ಪಶುವಿನ ಸಂಬಂಧ ! ತೊಲಗಾಚೆ ನನ್ನ ಮನೆಯಿಂದ ಮದಾಂಧ !

ಶಾಂತಾ– (ಸಿಟ್ಟಿನಿಂದ) ಅಮ್ಮ, ಮದಾಂಧ ಎನ್ನುವ ನಾಲಿಗೆ ಸೀಳಿ ಬಿಡುವೆ ನನ್ನ ಕರದಿಂದ. ಇನ್ನೊಮ್ಮೆ ಒತ್ತಿ ಚಿತ್ತ ಭಿತ್ತಿಯಲಿ ಬಿತ್ತರಿಸುವೆ ಕಡುನುಡಿ ನುಡಿಯಬೇಡೆಂದು. ಕಣ್ಣು ಕಳೆದ ಕೊಲೆಪಾತಕಿ ಇವಳೇ ಎಂದು ಹಾಕು ಕಣ್ಣೀರು ಆನಂದದಿಂದ.

ಕಮಲಾ– (ಅಳುತ್ತ) ಹಾಯ್ ದೈವವೇ ! ಸತಿ ಸಾವಿತ್ರಿಗೆ ಸಮಾನಳಾದ ಸಾಧ್ವಿ ಜಮುನೆಗೆ ಇಲ್ಲದ ಅಪವಾದ ಹೊರಿಸಿ, ನಿನ್ನ ಮಾತು ಕೇಳಿ ಮನೆಯಿಂದ ಹೊರನೂಕಿದೆ. ಸಚ್ಚಿದಾನಂದ ಮೂರ್ತಿಯಾದ ಗುರುಗಳಿಗೆ ಬಿರು ನುಡಿಗಳಾಡಿ ಕತ್ತು ಹಿಡಿದು ಹೊರಗಟ್ಟಿದೆ ! ! ತನ್ನ ಕಲ್ಪವೃಕ್ಷದ ಬಳ್ಳಿಗಳಾದ ಮೊಮ್ಮಕ್ಕಳ ಅಂಬೆಗಾಲಿಕ್ಕಿ ಆಡುವ ನೋಟ ನೋಡದೆ ಅವರಿಂದ ದೂರವಾದೆ ! ! ! ಈ ಪಾಪಿಗೆ ಕಣ್ಣು ಹೋದದ್ದೇ ಪ್ರಾಯಶ್ಚಿತ್ತ.....!!! (ಸಿಟ್ಟಿನಿಂದ) ಶಾಂತಿ, ನೀನು ಮಗಳಲ್ಲ ಮಾರಿ.

ಶಾಂತಾ– "ನಾಯಿ ಬೆಟ್ಟಕ್ಕೆ ಓಡಿ ಹೊಟ್ಟುಬ್ಬಿ ಸತ್ತಂತೆ" ಸುಮ್ಮನೆ ಏಕೆ ಕಿರುಚಿಕೊಳ್ಳುವೆ? ಮತಿಇಲ್ಲದ ವ್ಯಕ್ತಿಯು ಮನ ಬಂದಂತೆ ಸ್ವೇಚ್ಛಾಚಾರಿಯಾಗಿ ತಿರುಗುತಿದೆ ಎನ್ನುವದು ತಿಳಿಯಲಿಲ್ಲವೇ ನಿನ್ನ ಮನಕೆ? ಮಗನ ಬಾಳು ವ್ಯರ್ಥ ಹಾಳಾಗಿ ಹೋಗುವದೆಂಬುದನ್ನು ಆವಾಗ್ಗೆ ಅರಿಯಲಿಲ್ಲೇಕೆ? ಸಾಧ್ವಿ ಜಮುನೆಗೆ ನನ್ನ ಮಾತು ಕೇಳಿ ಇಲ್ಲದ ಆರೋಪ ಹೊರಿಸಿ ಅಡವಿಗಟ್ಟಿದೆಯೇಕೆ? "ವ್ಯರ್ಥ ಕಲ್ಪನೆಯ ಕಟ್ಟಡ ಕಟ್ಟಿ, ಬಿಟ್ಟು ಹೋದಂತೆ ಕಾನನಕೆ !"

ಕಮಲಾ– (ಸಿಟ್ಟಿನಿಂದ) ಶಾಂತಿ......?

ಶಾಂತಾ– ಹಾಂ, ಹಾಂ, ! ಬಾಯಿ ಬಿಗಿ ಹಿಡಿದು ಮಾತನಾಡಿ ತಿಳಿದುಕೊಳ್ಳಿ ನಿಮ್ಮ ಸ್ಥಿತಿ; ಇಲ್ಲವಾದೊಡೆ ಕಟ್ಟಬೇಕಾದೀತು ಕಂಠಿ ಏಕವಚನದಿಂದ ಸಂಭೋಧಿಸಿದ್ದಾರೆ ಕಾಣಬೇಕಾದೀತು ಕರಾಳ ರಾತ್ರಿ....... !

ಮನೋಹರ– (ನಕ್ಕು) "ಸಿಡಿಹಾಯ್ದ ಗಿಡಕ್ಕೆ ಪನ್ನೀರೆರಚಿದರೆ ಅದು ತಾನೆ ಚಿಗಿಯಬಲ್ಲದೆ !" ಕಮಲಾಬಾಯಿಯವರೇ, ಮೊದಲು ನೀವೇ ಅಡ್ಡ ಹಾದಿ ತುಳಿಯದೇ ನೇರವಾಗಿ ನಡೆಯಬೇಕಾಗಿತ್ತು. ಗೋವುಗಳ ಮಧ್ಯ ನಿಂತ ಬಕಪಕ್ಷಿಯಂತೆ ನೀವು ನಿಲ್ಲಬಾರದಾಗಿತ್ತು.

ಕಮಲಾ– (ಸಿಟ್ಟಿನಿಂದ) ಇನ್ನೂ ಇಲ್ಲೇ ನಿಂತಿರುವಿಯಾ? ಚಾಂಡಾಲಾ, ಸಿರಿ ಸಂಪತ್ತುಗಳ ಸೌದಾಗರವೆನಿಸಿದ ನನ್ನ ಮನೆಗೆ ಹಚ್ಚಿದಿಯಾ ಕಪ್ಪು. ನಿರ್ಲಜ್ಜಾ! ಲಜ್ಜೆಯಿಲ್ಲದೆ ನನ್ನ ಮನೆಯಲ್ಲಿ ನಿಂತಿರುವಿಯೇಕೆ? ನಡೆ ಇಲ್ಲಿಂದ.

ಶಾಂತಾ– (ಸಿಟ್ಟಿನಿಂದ) ಅಮ್ಮಾ, ಸರಸೋಪಾದಿಯಲಿ ಬಂದ ನನ್ನ ಪ್ರೀಯತಮನಿಗೆ ಬಾಯಿಗೆ ಬಂದಂತೆ ಬೊಗಳಬೇಡಾ. ನಡೆ ಇಲ್ಲಿಂದಾ. (ಎಂದು ಬಾಗಿಲ ಹೊರಗೆ ದಬ್ಬುವಳು. ಬೀಳುವ ತಾಯಿಯನ್ನು ಎತ್ತಿಹಿಡಿದು ಚಂದ್ರಧರನು ಪ್ರವೇಶಿಸುವನು. ಮಾರಿಯ ಮೇಲೆ ಕೂದಲುಗಳು, ಹರಿದ ಅಂಗಿಯೊಂದಿಗೆ)

ಚಂದ್ರಧರ– ಏನಾಯಿತಮ್ಮಾ? (ದಿಟ್ಟಿಸಿ ನೋಡಿ) ಇದೇನು ನೋಡುತ್ತಿರುವೆ? ಪ್ರಳಯದ ಕಾಲದಲಿ ರುದ್ರನು ತಾಂಡವ ನೃತ್ಯಮಾಡಿದಂತೆ ಯಾಗಿದೆಯಲ್ಲ ಇದೋ? "ನಾ ಕಂಡ ಕನಸು" ನನಸಾಗಿದೆಯಲ್ಲ. ಏನಾಗಿದೆಯಮ್ಮಾ?

ಕಮಲಾ– [ತಡವರಿಸುತ್ತ] ಯಾರು, ನನ್ನ ಭಾಗ್ಯದ ಚಂದ್ರಧರನು ಉದಯವಾದನೇ.....?

ಚಂದ್ರಧರ– ಅಹುದಮ್ಮಾ, ನಿನ್ನ ಭಾಗ್ಯ ಚಂದಿರನಿಗೆ ಕಾಲಮೃತ್ಯುವೇ ರಾಹುವಿನ ರೂಪಗೊಂಡು ಎತ್ತೆಲೋ ಚಲ್ಲಿಕೊಟ್ಟಿತ್ತು. ಅದರ ಬಾಹು ಬಂಧನದಲಿ ಸಿಲ್ಕಿ ಭಿಕ್ಷೆ ಬೇಡಿದೆ, ತಿರಿದುಂಡೆ, ಬೀದಿ ಬೀದಿ ಅಲೆದೆ, ಏನೋ ನನ್ನ ಪುಣ್ಯವಶಾತ್ ಇಲ್ಲಿಗೆ ಬಂದೆನಮ್ಮಾ ಅಮ್ಮಾ ಮನೆಯಲ್ಲಿ ಇದೇನು ಕೋಲಾಹಲ?

ಕಮಲಾ– ಏನೂ ಆಗಿಲ್ಲವಪ್ಪಾ, ಆಗುವದೆಲ್ಲ ಆಗಿಯೇ ಹೋಗಿದೆ.....! [ಅಳುತ್ತ] ಮಗೂ, ನಿನ್ನ ಬಾಳಿನ ಬಳ್ಳಿಯನ್ನು ಕತ್ತರಿಸಿದ ಕಡು ಪಾಪಿಯು ನಾನೇ !!

ಚಂದ್ರಧರ– ನನಗೊಂದೂ ತೋಚದಾಗಿದೆಯಮ್ಮಾ ನಿನ್ನ ಬಾಯಿಯಿಂದ ಬರುವ ಶಬ್ದಗಳ ಮೊನೆಯಲ್ಲಿ ಸೃಷ್ಟಿಯನ್ನೇ ಸೃಷ್ಟಿಸಿದ ವಿಶ್ವಕರ್ಮನ ವಿಷ ತುಂಬಿಕೊಂಡಂತೆ ಕಾಣಿಸುತ್ತದೆ. ಹೇಳು ತಂಗೀ ನೀನಾದರೂ ನಡೆದ ಘಟನೆಯನ್ನು.

ಕಮಲಾ– ಏನು ಹೇಳುವಳು ಪಾಪಿಣಿ ಘಟನೆಯ ಗೂಟವನ್ನೇ ಗಗನ ಮಾಳಿಗೆಯ ಮೇಲೆ ನಾಟಿಸಿರುವಳು. ಅದೋ ! ಎದುರಿಗೆ ನಿಂತ ಚಾಂಡಾಲನು ನಿನ್ನ ತಂಗಿಯನ್ನು........!!

ಮನೋಹರ– ಕೆಡಿಸಿದ ಕಾಮುಕ ಇವನೇ ಎಂದು ಹೇಳುಬಿರಲ್ಲವೇ?

ಚಂದ್ರಧರ– [ಅತ್ಯಂತ ಸಿಟ್ಟಿನಿಂದ] ಥೂ, ಪಾಪಾಂಧಾ. ಮಿತ್ರನ ಮನೆಗೆ ಕೇಡು ಬಗೆದ ಮರ್ಕಟ. ಮಿತ್ರನು ಸರಿ ಅರ್ಧ ತಮ್ಮನೆಂದು ಆ ಮನೆಯೊಳಗೆ ಬರಗೊಟ್ಟರೆ ಆ ಮನೆಯನ್ನೇ ರಸಾತಲಕ್ಕೆ ತುಳಿದೆಯಾ? ವಿಶ್ವಾಸ ಘಾತಕಾ ! ಮಿತ್ರದ್ರೋಹಿ !!

ಮನೋಹರ– ವ್ಯರ್ಥ ಏಕೆ ಕಿರುಚಿಕೊಳ್ಳುವೆ. ಮೊದಲು ನಿನ್ನ ಗತಿ ಯಾವ ಪಥದಲ್ಲಿ ಪಡೆಯಬ್ಹು ಮೂಡಿಸಿದೆ ಎಂಬುದನ್ನು ವಿಚಾರಿಸಿಕೋ....!

ಚಂದ್ರಧರ– ಸರ್ಪದ ಬಾಯಿಯಲ್ಲಿ ಸಿಕ್ಕ ಮಂಡೂಕವು ಮುನ್ನೆಚ್ಚರಿಕೆ ನೀಡಿದಂತೆ.

ಮನೋಹರ– ಅಂದರೆ......?

ಚಂದ್ರಧರ– ಅಂದರೇ, ವಿಶ್ವಾಸಘಾತಕತನದಿಂದ ಮತಿವಂತರ ಸ್ಥಿತಿ ಕೆಡಿಸುವ ನಿನ್ನಂಥಾ ಹೇಸಿ ಮಿತ್ರದ್ರೋಹಿಗಳಿಗೆ ಕಾಳ ಮೃತ್ಯುವಿನ ಕರಾಳ ಪಾಶೆಯು ನನ್ನ ಕೈಗಳಲ್ಲಿ ಹರಿದಾಡುತ್ತಿರುವಾಗ ನನಗೆ ವಿಚಾರ ವಿಮರ್ಶೆ ಮಾಡುವೆಯಾ? ನಡೆ ಮೊದಲು ನಿನ್ನ ಕಪ್ಪಾದ ಮುಖ ಕಟ್ಟಿಕೊಂಡು.

ಶಾಂತಾ– ಮುಖ ಕಟ್ಟಿಕೊಂಡು ಹಿಂದಿರುಗಲು ಬಂದಿಲ್ಲ ನವಾಬ ಸಾಹೇಬ. ನಾನೂ ಈ ಮನೆಗೆ ಅಧಿಕಾರಸ್ಥಳು. ಅಂದಮೇಲೆ ಅವರೂ ಅಧಿಕಾರಸ್ಥರೆ

ಚಂದ್ರಧರ– [ಸಿಟ್ಟು] ಶಾಂತಿ.....! ಅಧಿಕಾರದ ಅಂತಸ್ತಿನ ಮೇಲೆ ಕಣ್ಣಿಟ್ಟ

ಮತಿಹೀನಳೇ!!

ಮನೋಹರ– ಕಂಠ ಹರಿಯುವಂತೆ ಏಕೆ ಕಿರುಚಿಕೊಳ್ಳುವೆ? ಮೊದಲು ಈ ಕಾಗದದ ಮೇಲೆ ರುಜು ಹಾಕು. ಅರ್ಧ ಆಸ್ತಿಯನ್ನು ತಂಗಿಗೆ ಕೊಟ್ಟಿರುವೆನೆಂದು.....!

ಚಂದ್ರಧರ– ಅರ್ಧ ಆಸ್ತಿ ಕೊಡುವ ಮುನ್ನ ನಿನ್ನಾಯುಷ್ಯದಂಚಿನಲ್ಲಿ ಸಿಕ್ಕ ಪ್ರಾಣಪಕ್ಷಿಯನ್ನು ಮುರಿದು ಬಿಡುತ್ತೇನೆ ಅಂದರೇನೆ ನನ್ನಾತ್ಮಕ್ಕೆ ಶಾಂತಿ. ವಿಶ್ವಕರ್ಮನ ಕೈಗೊಂಬೆಯಾಗಿ ಕುಣಿಯುವ ಸೃಷ್ಟಿ ಸುರಸುಂದರಿಯ ಆತ್ಮಕ್ಕೂ ಶಾಂತಿ.

(ಚಂದ್ರಧರನು ಮೇಲೇರಿ ಹೋಗುವನು. ಮನೋಹರನು ಕೆಳಗೆ ಬೀಳುವನು. ಚಂದ್ರಧರನು ಅವನೆದೆಯ ಮೇಲೆ ಕೂತು ಕತ್ತು ಹಿಚಕುವನು. ಶಾಂತಿಯು ಒಳಗೆ ಹೋಗಿ ಪಿಸ್ತೂಲು ತೋರಿಸುತ್ತಾಳೆ. ಚಂದ್ರಧರನು ಬಿಟ್ಟೇಳುವನು)

ಶಾಂತಾ– ಬಿಟ್ಟೇಳು ಮೊದಲು. ನಿನ್ನ ತಂಗಿಯ ಮಾಂಗಲ್ಯವನ್ನು ನಿನ್ನ ಕೈಯಿಂದಲೇ ಹರಿದು ಹಾಕುವೆಯಾ?

ಚಂದ್ರಧರ– ಹಸೆಯ ಮೇಲೆ ಕೂಡದೇ, ನಾಲ್ಕು ಜನರ ಕೈಯಿಂದ ಮಂತ್ರಾಕ್ಷತೆಯನ್ನು ಹಾಕಿಸಿಕೊಳ್ಳದೆ, ನಿನ್ನ ಸಿರಿಮುಡಿಗೆ ದಂಡೆಯನ್ನು ಕಟ್ಟಿಸಿಕೊಳ್ಳದೆ; ತಾಯಿಯ ಆಶೀರ್ವಾದ ಪಡೆಯದೆ, ಸಹೋದರನ ಮುಂಬೆಳಕಿನ ಆಶಾಕಿರಣವಾಗದೆ, ವಿಶ್ವಕರ್ಮನಾದ ಪತ್ತಾರನ ಕೈಯಿಂದ ಕೆತ್ತಿದ ಮಾಂಗಲ್ಯವನ್ನು ತಾರದೆ ಬೀದಿಯ ಕಸದಲ್ಲಿ ಬಿದ್ದ ಮಾಂಗಲ್ಯವನ್ನು ಕಟ್ಟಿಕೊಂಡ ಹಾದಗದ ನಾಯಿಯೇ (ಹೊಡೆಯುವನು)

ಮನೋಹರ– ಚಂದ್ರಧರ, ಇನ್ನೊಂದಾವರ್ತಿ ನನ್ನ ಸ್ನೇಹಿತೆಯ ಮೇಲೆ ಏಟು ಬಿದ್ದದ್ದಾದರೆ ಈ ಪಿಸ್ತೂಲಿನಿಂದ.......!

ಚಂದ್ರಧರ– ಹಾರಿ ಹೋಗುವದಲ್ಲವೇ ನನ್ನ ಪ್ರಾಣಪಕ್ಷಿ. (ಮೈಮೇಲೆ ಏರಿ ಹೋಗುವನು. ಮನೋಹರನು ಗುಂಡು ಹಾರಿಸುವನು. ಗುಂಡು ತಪ್ಪಿ ಕಮಲವ್ವನಿಗೆ ಬಡಿಯುವದು. ಮನೋಹರನು ಪಿಸ್ತೂಲ ಬಿಟ್ಟು ಓಡಿ ಹೋಗುವನು.) ಅಮ್ಮಾ! ಕಡೆಗೆ ನಿನ್ನ ದೇಹ ಗುಂಡಿನ ಏಟಿಗೆ ಆಹುತಿಯಾಯಿತೇ !! ಅಂದು "ನಾ ಕಂಡ ಕನಸು" ನಿಜವಾಯಿತಮ್ಮಾ !!! ಕನಸು ಮನದ ಕಲ್ಪನೆಯೆಂದು ಹೇಳುತ್ತಾರೆ ಪ್ರಾಜ್ಞರು. ಆದರೆ.......! ನಾ ನಂಬುವದಿಲ್ಲ ಕಂಡ ಕನಸು ಭವಿತವ್ಯದ

ಸೂಚನೆ ಅದರಂತೆ ಸಾಗಿದೆ ನನ್ನ ಬಾಳ ರಥ!!

ಕಮಲಾ– ಚಂ....ದ್ರ....ಧರ.......! ನಿನ್ನ ಮುಖವನ್ನು.......... ನೋ.......ಡು.....ವ ಪಾಪಿಯ.... ಕಣ್ಣುಗಳು....... ಇಂಗಿ ಹೋಗಿರುವವು......!! ನಿನ್ನ ಹೆಂಡತಿ.....ಮಕ್ಕಳು.......!! (ಸಾಯುವಳು)

ಚಂದ್ರಧರ– ಅಮ್ಮಾ ! (ಶವದ ಮೇಲೆ ಬಿದ್ದು) ನಿನಗೆ ಒಂಬತ್ತು ತಿಂಗಳು ಹೊತ್ತು ಗುಂಡಿಗಾಹುತಿಯಾದ ತಾಯಿಯನ್ನು ಕಂಡು ದುಃಖ ಬಾರದೇ ಶಾಂತಾ ! ಜಯ–ವಿಜಯರೆಲ್ಲಿ ? ಜಮುನಾ ಎಲ್ಲಿ.....? ನೀನೇನು ಮಾಡಿದೆ.........? ! [ಅಳುವನು]

ಶಾಂತಾ– [ನಕ್ಕು] ನೀನೇನು ಮಾಡಿರುವೆಯೆಂದು ಕೇಳಲಿಕ್ಕೆ ನಾಚಿಕೆಯಾಗುವದಿಲ್ಲವೇ.....?

ಚಂದ್ರಧರ– (ಕುಗ್ಗಿದ ಸ್ವರದಿಂದ) ಶಾಂತಾ........!

ಶಾಂತಾ– ಮನೆಯಲ್ಲಿ ಬೆಳೆದು ನಿಂತ ನವಯೌವ್ವನದ ತಂಗಿಯನ್ನು ಬೇಗನೇ ಒಂದುವೇಳೆ ಮಾಂಗಲ್ಯಧಾರಣೆ ಮಾಡಿಕೊಟ್ಟಿದ್ದಾದರೇ ಬರುತ್ತಿರಲಿಲ್ಲ ನಿನಗೀ ಪಾಡು.....! ಈಗ ನಿನ್ನ ಹೆಂಡತಿ ಗುರವಿನೊಡಗೂಡಿ ಯಾರಿಗೂ ತಿಳಿಯದಂತೆ ಓಡಿಹೋಗಿರುವಳು.

ಚಂದ್ರಧರ– ಶಾಂತಾ........! (ಕಿವಿ ಮುಚ್ಚಿಕೊಳ್ಳುವನು)

ಶಾಂತಾ– ಮಕ್ಕಳಿಬ್ಬರನ್ನು ತನ್ನ ಕಾರ್ಯಕ್ಕೆ ಅಡ್ಡ ಬರುವರೆಂದು ಅಡವಿಗಟ್ಟಿರುವಳು. ಬಿಡದೆ ಕವಿದಿರುವ ಕತ್ತಲೆಯ ಹೊದಿಕೆಯನ್ನು ತೆರೆದು ನೋಡು. ಆವಾಗ ಅರಿವಾಗಿ "ನಾ ಮಾಡಿದ ಕರ್ಮ ಬಲವಂತವಾದರೆ, ನೀ ಮಾಡುವದೇನು ಹರಿಯೇ?" ಎಂದು ದಾಸರ ಹಾಡು ಹಾಡು. ಕರ್ಮಕಡಲಿನಿಂದೆದ್ದು ಸುಜ್ಞಾನಿಯಾಗಿ ಭಾರತ ಬಾಂಧವರಿಗೆ ಬಿತ್ತರಿಸು, ಮನೆಯಲ್ಲಿ ಬೆಳೆದು ನಿಂತ ತರುಣಿಯರನ್ನು ಬೇಗ ಲಗ್ನ ಮಾಡಿಕೊಡಿರೆಂದು. ಇದೂ ಆಗದಿದ್ದರೆ ಭೈರವಿ ರಾಗದೊಡನೆ ನಿನ್ನದೊಂದು ರಾಗ ಮಿಶ್ರಮಾಡಿ ಹಾಡು. (ಹೋಗುವಳು)

ಚಂದ್ರಧರ– (ದಿಗ್ಭ್ರಮೆಯಿಂದ) "ಹುತ್ತನೊಡೆದು ಹೊರ ಬೀಳುವ ವಿಷ ಸ್ಫುಲಿಂಗಗಳಂತೆ", ಕಾರ್ಮೋಡ ಕವಿದಿರುವ ಕತ್ತಲೆಯಲಿ ಕೋಲ್ಮಿಂಚಿನ ಹೊಡೆತ ಹೊಡೆದಂತೆ". "ಉರಿಯುವ ಚಿತೆಯಲಿ

ಸೌದೆ ಬೆರಸಿದಂತೆ" ಇಂದು ಹಾಸು ಬಂಡೆಗೆ ಹಾಯುವಂತಾಯಿತೇ? "ಜಮುನಾ" ಎಂಬ ಸುಶಬ್ದದ ಸತಿಯಾದ ನೀನು, ಇಂದು ಗುರುವಿನೊಡಗೂಡಿದ ಪತಿದ್ರೋಹಿ ! ಮಕ್ಕಳಿಬ್ಬರನ್ನು ಅಡವಿಗಟ್ಟಿದ ವಿಶ್ವಾಸ ಘಾತಕಿ !! (ನಕ್ಕು) ಗುರು, ಶಿಷ್ಯನ ಹೆಂಡತಿಯು ತನಗೂ ಶಿಷ್ಯಳೆಂದು ತಿಳಿಯದ ಅವನೊಬ್ಬ ಕಾಮಕೀಟಕ [ಹುಚ್ಚು ನಗೆ] ನನಗಾದರೂ ಏಕೆ ಬೇಕು. ಈ ಮನೆಯ ಹವ್ಯಾಸ. ತೆರೆಯ ಮೇಲೆ ಕಾಣುತ್ತಿರುವ ನನ್ನ ತಾಯಿಯ ಅಂತಿಮ ದೃಶ್ಯ.....! ಧನ್ಯ ಕಲಿಪುರುಷ, ಮಹಾಮುನ್ಯಾದಿಗಳಿಗೂ ಆಗಿಲ್ಲ. ಈ ಪ್ರಪಂಚ ವಶ, ಎಲೋ ನಿಶಿಯ ಗರ್ಭದಲ್ಲಿ ಕಾಲಿಟ್ಟ ಚಂದ್ರಧರಾ ಇಂತಾಯಿತೇ ನಿನ್ನ ಜೀವನದ ಆಕಾರ. ಅಂದು ಜಮುನೆಯು ಪಾವನಕರಳಾದ ಗಂಗಾಮಾತೆಯಂತೆ "ಸತಿ ಸಾಧ್ವಿ" ಎನಿಸಿಕೊಂಡು, ಇಂದು ಲೋಕದ ದುರ್ನಿಂದೆಗೆ, ಸಪ್ತ ಸಮುದ್ರಗಳು ಒಮ್ಮೆಲೇ ಒಡೆದು ಚದುರಿ ಬರುವ ಚೀತ್ಕಾರದ ಝೇಂಕಾರಕ್ಕೆ, ಶಿವನ ಡಮರುಗ ಪ್ರಕೋಪಗೊಂಡು ಪ್ರಳಯದ ಪ್ರತಿಧ್ವನಿಗೆ ಪ್ರತ್ಯುತ್ತರ ಕೊಡುತ್ತಿದೆ ಎನ್ನಯ ಮನೋ ಪಿಂಜರ. (ಹುಚ್ಚು ನಗೆ ನಕ್ಕು) ಶಾಂತಿಯ ವ್ಯಭಿಚಾರ, ಸಾಧ್ವಿಯ ಶೀಲಾಪಹಾರ, ಮಕ್ಕಳನ್ನು ಕಾಣದ ಚಂದ್ರಧರ. ಸಾಕುಮಾಡೀಗ ನಿನ್ನ ಅಹಂಕಾರ ಆರು ಗುಣಗಳೆಂಬ ಮದ್ದಾನೆಗೆ ಮೂರು ಗುಣಗಳೆಂಬ ಅಂಕುಶದಿಂದ ಅಧಃಪಾತಗೈದು ಏರಿ ನೋಡು ನೀ ಪ್ರಶಾಂತ ವಾತಾವರಣದ ಹಂದರ. (ಯೋಚಿಸಿ) ಏನು ನನ್ನ ಹೆಂಡತಿಯು ಜಾರಿಣಿಯೇ? ಅಲ್ಲಲ್ಲ, ಸತಿ ಸಾಧ್ವಿನಿ.

ಹಿನ್ನಲೆ– ಸ್ವಾಮಿ, ಚಿಕ್ಕಂದಿನಲ್ಲಿಯೇ ತಂದೆ–ತಾಯಿಗಳನ್ನು ಕಳೆದುಕೊಂಡು ಕೋಗಿಲೆಯು ತಬ್ಬಲಿಯಾಗಿ ತಿರುಗುವ ಹಾಗೆ, ನಮ್ಮೀರ್ವರ ಪವಿತ್ರಪ್ರೇಮ ಕೋಗಿಲೆಗೆ ಎಂಥಾ ಕಠಿಣ ತರದ ಕಷ್ಟಗಳು ಬಂದೊದಗಿದರೂ ಅಗಲಿಸಬೇಡಿರೆಂದು ನಾನು ನಿಮಗೆ ಕೈ ಮುಗಿದು ಬೇಡಿಕೊಳ್ಳುತ್ತೇನೆ.

ಚಂದ್ರಧರ– ಇಲ್ಲ ಜಮುನಾ, ನಾನೆಂದಿಗೂ ನನ್ನ ಪ್ರೇಮದ ಕೋಗಿಲೆಯನ್ನಗಲಿಸಲಾರೆ.

ಹಿನ್ನಲೆ– ಸ್ವಾಮಿ, ತಾವು ಮಾತ್ರ ಬೇಗನೆ ಬರಬೇಕು. "ನೀಲಾಕಾಶದಿ ನಕ್ಷತ್ರಗಳ ಎಣಿಕೆ ಮಾಡುವಂತೆ" "ಬೇಸಿಗೆಯಲ್ಲಿ ವಸಂತ ಋತುವಿನ ಕಾಲಕ್ಷೇಪ

ಮಾಡುವಂತೆ" ಮಾಡಬೇಡಿ, ತಾವು ಮಾತ್ರ ಈ ಪ್ರಿಯತಮೆಯ ಆರ್ತಧ್ವನಿಗೆ ತೀವ್ರವೇ ಬರಬೇಕು.

ಚಂದ್ರಧರ– ಬರುತ್ತೇನೇ ನನ್ನರಗಿಳಿಯೇ ಬರುತ್ತೇನೆ ಧಾವಿಸಿ ಹೋಗುವನು.)

ಹಿನ್ನೆಲೆ– (ಶಾಂತಾ ನಕ್ಕು) ಈಗ ನಿನ್ನ ಹೆಂಡತಿ ಗುರುವಿನೊಡಗೂಡಿ ಯಾರಿಗೂ ತಿಳಿಯದಂತೆ ಓಡಿ ಹೋಗಿರುವಳು. "ಬಿಡದೇ ಕವಿದಿರುವ ಕಗ್ಗತ್ತಲೆಯ ಹೊದಿಕೆಯನ್ನು ತೆರೆದು ನೋಡು, ಆವಾಗ್ಗೆ ಅರಿವಾಗಿ ಕರ್ಮ ಕಡಲಿನಿಂದೆದ್ದು ಮನದ ಮರ್ಮವ ತಿಳಿದು ನಿರ್ಮಲ ಹೃದಯದವನಾಗು" ನಿನ್ನ ತಂಗಿಯ ಮಾತು ಸಹ ನಂಬಲಾರೆಯಾ ! ಅವಳು ಪತಿದ್ರೋಹಿ, ಗುರುವಿನೊಡಗೂಡಿದ ಜಾರಿಣಿ. ಮಕ್ಕಳಿಬ್ಬರನ್ನು ಅಡವಿಗಟ್ಟಿದ ವಿಶ್ವಾಸ ಘಾತಕಿ.

ಚಂದ್ರಧರ– (ಚಿಟ್ಟನೆ ಚೀರಿ) ಹೌದು, ಹೌದು, ಗುರುವಿನೊಡಗೂಡಿದ ಪತಿದ್ರೋಹಿಯೇ, ಹೌದು. ಇಲ್ಲವಾದೊಡೆ ಕಿಡಿಗಳಂತೆ ಕಾರುವ ಶಬ್ದಗಳು ಬರುವವೇಕೆ? (ನಕ್ಕು) "ಅತ್ತಿಯ ಹೂವನ್ನು ನೋಡಬಹುದು, ನೀರಿನಲ್ಲಿ ಮತ್ಸ್ಯ ಪಾದಗಳನ್ನು ಹುಡುಕಬಹುದು. ಬಿಳಿ ಕಾಗೆಯನ್ನು ಕಾಣಬಹುದು" ಆದರೆ ನಾರಿಯ ಹೃದಯವನ್ನು ಕಂಡು ಹಿಡಿಯುವದು ದುಸ್ಸಾಧ್ಯ "ನಾರಿ ಪರೋಪಕಾರಿ, ನಾರಿ ಮುನಿದರೆ ಮಾರಿ" ಮಾಯೇ ಎಷ್ಟೊಂದು ಬಣ್ಣಿಸಲಿ ನಿನ್ನ ಸಿರಿ.

(ಇನ್‌ಸ್ಪೆಕ್ಟರ್ ಬರುವನು. ಚಂದ್ರಧರನ ಕೈಯಲ್ಲಿ ಪಿಸ್ತೂಲ ಹಿಡಿದಿರಬೇಕು.)

ಇನ್‌ಸ್ಪೆಕ್ಟರ್– ಖೂನಿ ಮಾಡಿದ ವ್ಯಕ್ತಿಯು ಇಲ್ಲಿ ನಿಂತಿದ್ದಾನೆ. ಹಿಡಿಯಿರಿ ಇವನನ್ನು.

ಚಂದ್ರಧರ– (ಹುಚ್ಚು ನಗೆ ನಕ್ಕು) ಅಹುದು, ನಾನು ಕೊಲೆ ಮಾಡಿದವನು. ನನ್ನ ತಾಯಿಯನ್ನು ನನ್ನ ಸ್ವಹಸ್ತದಿಂದ ಕೊಂದ ಕೊಲೆಪಾತಕನೇ ನಾನು. (ನಗುವನು.)

ಇನ್‌ಸ್ಪೆಕ್ಟರ್– ಹೀಗೇಕೆ ಹುಚ್ಚನ ಹಾಗೆ ಮಾಡುವಿಯೋ?

ಚಂದ್ರಧರ– ಹುಚ್ಚು, (ನಕ್ಕು) ನನಗೆ ಹಿಡಿದಿರುವದು ಹುಚ್ಚು, ಸಾವಿರಾರು ಮೈಲುಗಳ ಅಂತರದ ಮೇಲೆ ಹಾರಾಡುತಿದೆ ಮಾಯೆಯ ಹುಚ್ಚು !

ಈ ಬ್ರಹ್ಮಾಂಡಕ್ಕೆ ಜಗನ್ಮಾಯೆ ಆವರಿಸಿಕೊಂಡಿರುವಳು ಹೆಚ್ಚು ! ಕಾಲನ ತಾಲಗತಿಯ ಮೇಲೆ ಕುಣಿಯುತಿದೆ ಮನವೆಂಬ ಕಾಡ್ಗಿಚ್ಚು ! ಧಿಟವಾಗಿ ನೋಡಿದೊಡೆ ಬೆಣಚುಗಲ್ಲಿನಂತೆ ಕಾಣುವದು ಪ್ರಪಂಚವೆಂಬ ಹಂಚು ! ಇಷ್ಟು ನೀ ತಿಳಿದು ನೋಡಿ, ಈ ಹುಚ್ಚನನ್ನು ಹಿಡಿಯಲಿಕ್ಕೆ ಬಂದ ನೀನಂತೂ ಮೊದಲೇ ಹುಚ್ಚು [ನಗುವನು.]

ಇನ್‌ಸ್ಪೆಕ್ಟರ್– (Shut up your mouth) ಶಟ್ ಅಪ್ ಯುವರ್ ಮೌಥ. ನೋಡುವಿರೇನು? ಇವನ ಎರಡೂ ಕೈಗಳಿಗೆ ಸಂಕೋಲೆಯನ್ನು ಬಿಗಿದು ಎಳೆದುಕೊಂಡು ನಡೆಯಿರಿ.

[ಎಳೆದುಕೊಂಡು ಹೋಗುವರು. ಇನ್‌ಸ್ಪೆಕ್ಟರ್‌ರು ಪಿಸ್ತೂಲ
ಸಹಿತವಾಗಿ ತೆಗೆದುಕೊಂಡು ಹೋಗುವರು.]

(ಪರದೆ ಇಳಿಯುವದು.)

೪ನೆಯ ಪ್ರವೇಶ

ದೃಶ್ಯ ಬೀದಿ

ಡಾಕ್ಟರ್– ಏನ ಬೇಕಾದ್ರ ಅನ್ರಿ, ಕಣ್ಣಿಟ್ಟ ಹೆಣ್ಣಿಗೆ ಬಣ್ಣಮಾಡಿ ಬಿಡಬೇಕಾದ್ರ ಬಹಳ ಕಷ್ಟಾನ ಕಾಣಸ್ತಾದ. ಯಾಕೋ ನನ್ಜೀವ ಹಿಂದ್ಕ ಮುಂದ್ಕ ಸರಿದಾಡ್ಲಿಕ್ಕ ಹತ್ತೇತಿ. ಹಿಂದಿನಿತಿಹಾಸ ನೋಡಿದ್ರ ಎದೆ ಝಲ್ಲಂತೈತೆ. ಹೆಣ್ಣಿನ ಮೋಹಕ್ಕ ಮರುಳಾಗಿ ಮಸಣದ ಮನೆಗೆ ಅಧಿಕಾರಸ್ಥನಾದ ಆ ಕೀಚಕ. ಲೋಕಮಾತೆಯಾದ "ವೈದೇಹಿ"ಯ ಮೇಲೆ ಮನಸುಮಾಡಿ ಮಡಿದು ಹೋದ ದಶಕಂಠೇಶನು. ಅಂತೂ ತಿಳಿದು ತಿಳಿದು ಹಾಳಭಾವಿ ಹಾರಾಕ ಹೊಂಟೆನಿ: ಏನ್ಬೇಕಾದ್ದು ಆಗಲಿ, ಇವತ್ತು ಸಿದ್ಧಿಗೆ ಕೇಳೇ ಬಿಡ್ತಿನಿ. ನನ್ನ ಮಾತು ಕೇಳಿ ಬಂದಳು ಅಂದ್ರ ನನಗ ನರಕ ಅಲ್ಲಲ್ಲ; ಸ್ವರ್ಗನ ಸಿಕ್ಕಾಂಗ ಆಗ್ತೈತಿ. ಇಲ್ಲಾಂದ್ರ ಹೆಡಿಗ್ಯಾಗ ಕುಂಡ್ರಿಸಿದ ಜೋಕಮಾರನ್ಹಂಗ ಮೆರವಣಿಗಿ ತೆಗಿತಾರ. ಹೋಗ್ತಿನ್ರೆಪಾ, ಇನ್ನೂ ಹರಿಕಿ ಮನಿಗಿ ಹೋಗಿ ರುಜು

ಮಾಡಿ ಬರೂದು.

(ಹೋಗುವನು.)

ದೃಶ್ಯ : ಮನೆ

(ಸಿದ್ದಮ್ಮನು ಮನೆಯೊಳಗಿಂದ ಖಾಲಿ ಕೊಡ ತೆಗೆದುಕೊಂಡುಬರುವಳು).

ಡಾಕ್ಟರ್— ಇದೇನ್ರಿ ಮುಹೂರ್ತ ನೋಡಿ ಮನಿಗಿ ಹೋದ್ರ ಮನಿಯೊಳಗಿಂದ ಖಾಲಿ ಕೊಡನ ಎದುರಿಗಿ ಬಂತಲ್ಲ. ಅಲ್ಲಿ ಮನಿಯಿಂದ ಮಂಗಲ ಸ್ನಾನ ಮಾಡಿ ಬಾಗಿಲು ದಾಟುವದರೊಳಗಾಗಿ ಬೆಕ್ಕು ಅಡ್ಡ ಬಂತು. ಅಂತೂ ಈ ಧೂಮಕೇತು ನನ್ಮ್ಯಾಲ ಮೂಡಿದ್ದಂಗ ಕಾಣಸ್ತೈತೆ. (ಯೋಚಿಸಿ) ಈ ಶಕುನಾಪಶಕುನಗಳನ್ನೆಣಿಸುವದು ನಮ್ಮಂಥ ಕಲಿತ ಕೆಚ್ಚೆದೆಯ ವೀರರ ಮಾತಲ್ಲ. (ಎದುರು ನೋಡಿ) ಅರೆರೆ, ಇದರ್ ಹಮಾರಾ ಸಿದ್ಧಿ ಬರ್ತಿದ್ದಾವ್, ಹ್ಯಾಂಗ ಅದರಿ ತುಮ್ಹಾರಿ ರೋಗ.

ಸಿದ್ದಿ— ಈಗ ನೋಡ್ರಿ, ಜರಾ ಮೆಟ್ಟಿನ ಮ್ಯಾಲ ಬಂದೈತಿ. ನೀವು ಯಾವ ಕಡೆ ಹೊಂಟೀರಿ ಯಪ್ಪಾ?

ಡಾಕ್ಟರ್— (ಸ್ವಗತ) ಇದೇನಪಾ! ಯಪ್ಪಾ ಯಣ್ಣಾ ಅಂತ ಸುರು ಆಯ್ತಲ್ಲ ಸ್ವಾತಿ ಮಳಿ.

ಸಿದ್ದಿ— [ವಯ್ಯಾರದಿಂದ] ಅಯ್ಯಯ್ಯ ಯಾಕ್ರಿ ಡಾಗದಾರ ಸಾಬ್ರ ಸುಮ್ಮನs ನಿಂತ ಬಿಟ್ರೆಲ್ಲ, ಮನಿಕಡಿಗಿ ದ್ಯಾಸ ಆಗೈತೇನ್ರಿ?

ಡಾಕ್ಟರ್— ಮನಿ ಕಡೆ ಏನ ಅದ ಸಿದ್ದಮ್ಮ. ಮನಿ ಮಠ ಆಗೈತಿ ಮನಿಯೊಳಗೆ ದೀಪ ಹಚ್ಚೋರು ದಿಕ್ಕ ನಂಹಿ.

ಸಿದ್ದಿ— ಯಾಕ್ರಿ ನಿಮ್ಮ ಲಗ್ನ.......?

ಡಾಕ್ಟರ್— ಅದೇ ಲಗ್ನಕ್ಕ ನಾ ಹೊಂಟರ. ಒಂದರ ಬೆನ್ನಿಂದೊಂದು ವಿಘ್ನಗಳು ಬರ್ತಿದ್ದಾವ್.

(ಸಿದ್ದಮ್ಮನಿಗೆ ದಿಟ್ಟಿಸಿ ನೋಡಿ ಬಟ್ಟು ಕಡಿಯುತ್ತ ನಿಲ್ಲುವನು)

ಸಿದ್ದಿ— ಅಯ್ಯ ಪಾಪ, ದೇವರಂತಹ ಮನಶೇರಗಿ ಇಂಥಾ ಕೆಟ್ಟ ಹೊತ್ತು ತರಬಾರ್ದು, ಯಾಕ್ರಿ ದಾಗದಾರ ನನಗ ಒಂದೇಸವನೆ ನೋಡ್ತಿರೆಲ್ಲ?

ಡಾಕ್ಟರ್– ಮೈ ಕ್ಯಾಕರೂ ಸಿದ್ದಮ್ಮಾ? ನನ್ನ ಹೆಂಡತಿದು ನಿಮ್ದು ರೂಪಾ ಇದ್ದಂಗೆ ಇತ್ತು. ಅಕಿ ಸತ್ತು ಹೋದ್ಲು. ಅಹುದು ಸಿದ್ದಮ್ಮಾ ನಿಮ್ದು ರೂಪಾ ಇದ್ದಂಗೆ ಇತ್ತು. ಸುದ್ದು ನಿಮ್ಮ್ ಇದ್ದಾಂಗೆ ಇತ್ತು.

ಸಿದ್ದಿ– ಸುದ್ದ ನಂದು ಇದ್ದಾಂಗೆ ಇತ್ತೇನ್ರಿ?

ಡಾಕ್ಟರ್– ಹೌದ್ರಿ ಸಿದ್ದಮ್ಮಾ (ತಲೆ ತುರಿಸುತ್ತ) ತುಮ್ಹಾರಿ ಜಡ್ಡು ಪರೀಕ್ಷಾ ಲೇನೆ ಬಂದಿದ್ದಾವ್ ನಿಮ್ದು ಪರ್ ನಮ್ದು ಮನ್ಸು ಆಗಿದ್ದಾವ್.

ಸಿದ್ದಿ– [ವೈಯಾರದಿಂದ] ಅಯ್ಯ ಬಿಡ್ರಿ, ನಮ್ಮಂಥೋರ ಮ್ಯಾಲೆಲ್ಲ ಹ್ಯಾಂಗಾಕ್ಕಾದರಿ ನಿಮ್ಮ ಮನಸ್ಸು. [ಸ್ವಗತ] ಇಂವ ನನ್ಮ್ಯಾಲ ಮನಸಿಟ್ಟಾಂಗ ಕಾಣಸ್ತಾದ. ತೋರ್ಸಬೇಕ ಇವಂಗ ಇವತ್ತ ಊರ ಹೊರಗಿನ ಅಗಸಿ [ಪ್ರಕಾಶ] ಅಲ್ರಿ, ಡಾಗದಾಗ ಸಾಬ್ರ ನಂದೂ ಮನ್ಸೂ......!

ಡಾಕ್ಟರ್– ಹಂಗೇನಾ, ಸಿದ್ದಮ್ಮಾ ನಿನಗೆ ನಾ ಎಷ್ಟು ತ್ರಾಸು ಕೊಟ್ಟೆ ಪಾಪ........!!

॥ ಪದ ॥

ಮೇರಿ ಮನ್ಕಿ ಸಿದ್ದಿ । ಔರ । ತೇರಿ ಮನ್ಕಾ ಬುದ್ಧಾಕಾ ॥
ಬೋಲ ಸಿದ್ದಿ ಬೋಲ ಸಂಗಮ ಹೋಗಾಕೆ ನಹಿ ॥ಪಲ್ಲ॥
ಚಾಂದಸೇ ತೇರಾ । ರಂಗ ಸುನೇರಾ ॥
ಮೇರಾ ಜೈಸಾ । ಮನ್ಮಥ ಪುತ್ರಾ ।
ರೂಪ ನಗರಮೇ । ಏ ಔಡೌಂಸೇ । ಹೈ ಕೋಃಯಿ ನಹಿ ॥ ೧ ॥

ಡಾಕ್ಟರ್– ಏನ್ ಸಿದ್ದಮ್ಮಾ, ಚಲೋ ಹಮಾರೆ ಸಾಥ್.

ಸಿದ್ದಿ– ಅಲ್ರಿ ಹೋದ್ರ ನನ್ನ ಬಹಾದ್ದೂರ ಗಂಡನ್ ಗತಿ?

ಡಾಕ್ಟರ್– ಆ ಮುದುವಾ ಗಂಡನ್ ತಗೊಂಡು ನೀಯೇನ್ ಸುಡ್ತಿ. ಚಲೋ ಹಮಾರೆ ಸಾಥ.

(ಕೈ ಹಿಡಿಯಲು ಹೋಗುವನು ತಪ್ಪಿಸಿಕೊಂಡು)

ಸಿದ್ದಿ– ಅಯಯ್ಯ ಬಿಡ್ರಿ, ಮೊದಲೇ ನನ್ಗಂಡ ಅಂದಾಕರ ಬೆರ್ಕಿ. ಹೊಸ ನಾತ ಹೊಸನಾತ ಅಂತ ಬರ್ತಾದ, ನಿನ್ನ ಹೊಲಸ ನಾತ ಜರ ಬಿತ್ತಂದ್ರ ನಿನ್ನ ಔಡ್ಲ ಕಟ್ಗಿ ಮುರದಂಗ ಮುರ್ದ-ಬಿಟ್ಟಾನು.

ಡಾಕ್ಟರ್– ಆ ಮುದುವಾ, ಆ ನಿನ್ನ ಗಂಡಾ ಅಷ್ಟು ಬಲಶಾಲಿ ಹೈ? ಅಂದ್ರ ನೋಡೆ ಬಿಡ್ತೀನಿ. ತುಮ್ ಚಲೋ ಹಮಾರೆ ಸಾಥ.

[ಪುನಃ ಕೈ ಹಿಡಿಯಲು ಹೋಗುವನು]

ಸಿದ್ದಿ– ಅಯ್ಯಯ್ಯ ಬಿಡ್ರಿ, ನಮ್ಮಂಥೋರ ಕೈ ಹಿಡದ್ರ ನಿಮಗೇನ ಸಿಗತಾದ, ಬರೇ ಮೂರು ಬೊಗಸಿ ಮಣ್ಣು.

ಡಾಕ್ಟರ್– ಅರೇ ಮೂರು ಬೊಗಸಿ ಮಣ್ಣು ಕೈಸಾ ಬರ್ತಿದ್ದಾವ್? ತುಮ್ಹಾರೆ ಹಮಾರೆ ಮನಸು ಮಿಲನೇಕೆ ಬಾದ ಏಕ ಹೋತಿದಾವ್. ಸಿದ್ದಿ, ಈಗ ಬರಾಬರಿ ಆಗಿದ್ದಾವ್ ನನ್ನ ಬುದ್ಧಿ. ಕ್ಯಾ ತುಮ್ಹಾರಿ ರೂಪ. ಕ್ಯಾ ತುಮ್ಹಾರಿ ರಂಗ, ಕಾಲೆ ಕಾಲೇ ಬಾಲ ದೇಖಕರ್ ಮೈ ಬುದ್ಧು ಹೋಗಯಾ. ಹೂಂ ಬುದ್ಧಿ, ಮೇರಿ ಪ್ಯಾರಿ ಪ್ಯಾರಿ ಸಿದ್ಧಿ, ತೇರಾ ಮನಸು ಹೈ ಶುದ್ಧಿ, ಚಲೋ ಸಿದ್ದಿ.

ಸಿದ್ದಿ– [ಸ್ವಗತ] ಜರಾ ಸಡ್ಲ ಬಿಟ್ರ ವಂಟಿ ಹೆಸರ್ಲೇ ಕರೀಲಿಕ್ಕೆ ಹತ್ತಿದ್ನಲ್ಲ ಇಂವ. ಏನ್ಮಾಡ್ಲೆಂತೀನಿ; ನನಗಂಡ ಬರೂತನ್ಕಾ ತಡ್ದು ಇಂವ್ಗ ನಾ ಕಡಬಿನ ಊಟ ಉಣಸದಿದ್ರ ನನ್ನ ಹೆಸರು ಸುಡಗಾಡ ಸಿದ್ದೀನ ಅಲ್ಲ.

ಡಾಕ್ಟರ್– ಏನ್ ಗೇನಸ್ತಿದಾವ್ ಸಿದ್ದಿ?

ಸಿದ್ದಿ– ಏನೂ ಇಲ್ಲ; ನಿನ್ನ ಎದರ್ಲೆ ಹೊಡಿಬೇಕಂತ. ಅಲ್ಲ ಪರಹೆಣ್ಮಗಳಿಗಿ ಸಿದ್ದಿ ಅನ್ನೂದ್ಕೂ ನಾಚ್ಕಿ ಬರೂದಿಲ್ಲ? ಒದ್ರ ಹೊಸ್ತಲ ದಾಟಿ ಬಿದ್ದಿ, ಮೂರ ಮೊಳ ಬಾಯಿ ತೆರದ ಅಂತಾನ ಸಿದ್ದಿ. ನನ ಬಿಟ್ಟು ಹೋಗ್ತೆ ಏನ್ ಚೌಡಕಿ ಕೈ ತೋರ್ಸ್ಲೆ?

ಡಾಕ್ಟರ್– [ಸ್ವಗತ] ಅರೆರೆ ಪೆಟ್ಗಿ ಬದ್ಲಿ ಹೋಗಯಾ. ಏ ಸಿದ್ದಿ? ತುಮ್ಹಾರೆವಾಸ್ತೆ ಮೇರಾ ಪ್ರಪಂಚ ಬರಬಾದ್ ಆಗಿದಾವ್. ಹಮ್ ತುಮ್ಕು ನಹಿ ಛೋಡ್ತಾ. ಚಲೋ ಹಮಾರೆ ಸಾಥ. ಕರೋ ಮತ ಬಾತ. ಕ್ಯಾ ತೇರಾ ರೂಪ, ಕ್ಯಾ ತೇರಾ ರಂಗ ಸುಭಾನಲ್ಲಾ.

[ಮೈಮೇಲೆ ಹೋಗುವನು. ಸಿದ್ದಪ್ಪ ಹಿಂದ ಬಂದು ಹೊಡೆದು]

ಸಿದ್ದಪ್ಪ– ಜೈ ಗೋಪಾಳ್ರಿ ದಾದಾ, ಯಾರ ಇಲ್ದ ಮನ್ಯಾಗ ಇಟ್ಟೀರೆಲ್ಲ ಪಾದ. ಇಕಿಗಿ ಇಂಗ್ಲಿಸ್ತಾನ ಮಾಡಿದಂಗ ಕಾಣಸ್ತಾದ.

ಸಿದ್ದಿ– ಪಾದಾ ಇಟ್ಟೀರೇನಂತ ಏನ ಕೇಳ್ತಿ? ಹಾಕ ಇವ್ನ ಮೈಮ್ಯಾಲ ಏಟ, ಆವಾಗ ದಾರಿಮ್ಯಾಲ ಬರ್ತಾನ ಈ ಸೋಟ. ಟೊಂಕಕ ಶಲ್ಯಾ ಗಟ್ಯಾಗಿ ಸುತ್ತು, ಕೈಯಾಗ ಬಡ್ಗಿ ಗಟ್ಯಾಗಿಹಿಡಿ, ನಾನು ಏನರಾ ತರ್ತೀನಿ ತಡಿ. [ಒಳಗ ಹೋಗಿ ಬಾರಿಗಿ ತರುವಳು]

ಸಿದ್ದಪ್ಪ– [ಹೊಡೆದು] ಏನಲೇ ದಾಗದಾರ? ಔಷದಾ ಕೊಡ್ತೀನಂತ ಕೊಟ್ಟು ಇಕಿಗಿ ಜಕ್ಕೊಂಡು ಹೋಗ್ಬೇಕಂತ ಮಾಡಿದ್ದೆಲ್ಲಲೆ ಸಮಗಾರ. [ಹೊಡೆದು] ನೋಡ್ರಿ ಇಂಥಾ ಚೊಣ್ಣದ ಅಣ್ಣೋರು ಬಣ್ಣಾ ಮಾಡಿ ಕಂಡ ಕಂಡ ಹೆಣ್ಮಕ್ಕಳಿಗಿ ಸಿಳ್ಳ ಹಾಕಿ. ಕಡಿಗಿ ಸುಣ್ಣದ ಪಟ್ಟಿ ಬಡ್ಕೋತಾರ ಹಣಿಗಿ. [ಹೊಡೆಯುವನು.]

ಸಿದ್ದಿ– ಏನಲಾ ಫಕೀರಾ, ಈಗ ಮಾತಾ ಜರಾ. ಚಲೋ ಚಲೋ ಅಂತ ಹೇಳ್ತಿದ್ದಲ್ಲ ನನ್ನ ಸೂರ. [ಹೊಡೆದು] ಅಲ್ಲಾ ! ಮಂದಿ ಹೆಣ್ಮಕ್ಕಳಿಗಿ ಯಕ್ಕಾ ಯವ್ವಾ ಅಂದ್ರ ಈ ಭೂಮಿಮ್ಯಾಗ ನೂರ ದಿನ ಬಾಳ್ತಿ, ಇಲ್ಲಾಂದ್ರ ಕೀರಣ್ಗಿ ಮರಗಮ್ಮನ ಕ್ವಾಣ ಕಡಿದಾಂಗ ಕಡಿಸಿಗೊಂಡ ಹೋಗ್ತಿ. ಕಂಡ ಕಂಡ ಹೆಣ್ಮಕ್ಕಳಿಗಿ ಕೈಮಾಡಿ ಕರದರ ನಿನಗೇನ ಬರ್ತಾದ ಮಾವನೂರ ಮುಲ್ಲಾ.

ಡಾಕ್ಟರ್– ಮಾವಾ, ಯಕ್ಕಾ ಹೊಡಿಬ್ಯಾಡ್ರೆವಾ

ಸಿದ್ದಪ್ಪ– (ಆಶ್ಚರ್ಯ) ಅಲ ಇವ್ನ ಮಾವಂತ ವಸೀಳಿ ಹಚ್ಚಿ ಅಳತಿಲ್ದ ಮಾತಾಡಾಕ ಹತ್ತಿದ್ನಲ್ಲ ಇಂವ,

ಡಾಕ್ಟರ್– ನಾ ರಸ್ತಾಪೂರ ಭರಮಣ್ಣನ ಮಗ ಬಸವಣ್ಣಪೋ ಮಾವಾ,

ಸಿದ್ದಿ– ಯಾರಾದ್ರೇನ ಹಾಕಿವ್ನ ಮೈಮ್ಯಾಗ ಏಟ. (ಹೊಡೆದು) ಯಾಕಪ್ಪ ಬಳಗಾರ, ಆ ಸಾರಿ ಬಂದು ಜಾತ್ರಿಗಿ ನಿಮ್ಮಪ್ವ ಕರಕೊಂಡ ಬಾ ಅಂತ ಹೇಳ್ಯಾಳ ಖಾತ್ರಿ ಅಂತ ಮೋಸಮಾಡಿ ಕರಕೊಂಡು ಹೋಗಾಗಕ ಬಂದಿದ್ದೆಲ್ಲ; ಆವಾಗ ನಿನಗ ಯಣ್ಣಾ ಯಣ್ಣಾ ಅಂದದ್ದು ತಿಳಿಲಿಲ್ಲ ನಿನಗ [ಒದೆಯುವಳು]

ಡಾಕ್ಟರ್– ಒದಿಯವ ಯಕ್ಕಾ. [ಸ್ವಗತ] ಕಾಮ ನಹಿ ಹುವಾ ಪಕ್ಕಾ.

ಸಿದ್ದಪ್ಪ– ನೀ ಆವ್ನ ಮಾತ ಕೇಳಿ ತಯಾರಾಗಿದ್ದೆಲ್ಲ ನಕಲಿ ಪಕ್ಕಾ.

ಸಿದ್ದಿ– ನನಗೆ ಗೊತ್ತಿದ್ದಿಲ್ಲೇಳ ಇಂವಾ ಹಿಂಗ ಮಾಡ್ತಾನಂತ ಅನ್ನೂದ.

ಏನೋ ನಮ್ಮಂವಾ ಹೇಳಿರಬೇಕಂತ ತಯಾರಾಗಿದ್ದೆ. ಏನಲಾ ಕೊಳಕಾ. (ಹೊಡೆಯುವಳು)

ಡಾಕ್ಟರ್— ಇಲ್ಲ ಯಕ್ಕಾ, ಹೋಗ್ತೀನಿ ನಿಂದ್ರವ ಅನ್ಕಾ. ನಿಮ್ಗ ಕೈ ಮುಗಿತೀನಿ ಹೊಡಿಬ್ಯಾಡ್ರೆಪಾ ಮಾವಾ ! [ಅಳುವನು]

ಸಿದ್ದಪ್ಪ— ಹೊಡಿಬ್ಯಾಡಂತ ಹೇಳ್ತಿದ್ದೆಲೆ, ಸಿದ್ದಿ ಮ್ಯಾಲ ಕಣ್ಣಿಟ್ಟದ್ಕ ಹ್ಯಾಂಗ ಆಗಿರಬೇಕ ನನ್ಜೀವ. ಆವಾಗ ದಸಗ ಆಯ್ತುಲೆ, ಕುಂದ್ರಿ ಸಿದ್ದೆಲ್ಲೋ ಎಕ್ಕ ಪರೇಲ.

ಸಿದ್ದಿ— ಅಯ್ಯಯ್ಯ ಸಾಕ ಬಿಡಿನ್ನ ! ತನ್ನ ಮಾನ ತಾ ಕಳಕೊಂಡ ಹೊಂಟೈತೆಲ್ಲ.

ಸಿದ್ದಪ್ಪ— ಸಾಕ ಬಿಡಾಂತ ಹೇಳಾಕ ಬರ್ತ್ಯಾದ, ಆವಾಗ ಬಳಗಾರ ನಿಮ್ಮಣ್ಣೇನಂತ ಕೇಳಿದ್ರ ಬಾಯಾಗ ಹುಳ ಬೀಳ್ಲಿ ಅಂತ ಬೊಗಳಿದ್ದೆಲ್ಲ. ನಿನ್ಗೂ ತೋರ್ಸಂದೇನ ಒಂದೆರಡು ಏನಲೇ ಬಳಿಗಾರ?

ಡಾಕ್ಟರ್— (ಅಳುತ್ತ) ಮಾವಾ ಮಾಡ್ತಿನೆಪೋ ನಮಸ್ಕಾರ.

ಸಿದ್ದಪ್ಪ— ಈಗ್ಯಾಕ ಮಾಡಲಾರ್ದ ಇದ್ದೀದೆಪಾ ನಮಸ್ಕಾರ, ಗಧಾ ಬಕರಾ ಅಂತಾ ಬೈಲಾಟದನ ಮಾತ ಹಚ್ಚಿದ್ದೆಲ್ಲಲೇ ಸಮಗಾರ (ಹೊಡೆಯುವನು) ನೋಡ ಸಿದ್ದಿ ನಮ ಕನ್ನಡ ಮಾತ ಆಡದ ಬಿಟ್ಟಿದ್ದ. ಆಗ್ತಿದ್ದಾವ, ಬರ್ತಿದ್ದಾವ್, ಕಟೆರೆ, ಪಿಟೆರಿ ಮಾತಾಡ್ತಿದ್ನಲ್ಲ ನಿಮ್ಮಣ್ಣ ತುರಕರ ಮಾತ, ಹೋಗ್ತ್ಯಾ ಏನ್ ಬಿಗಿ ಅಂದ್ಯಾ? (ಹೋಗುವನು)

ಸಿದ್ದಿ— ಅಯ್ಯಯ ನನ್ಗಂಡಾ ಇಂಥ ಅಣ್ಣೋರಿಗಿ ಹಿಂಗ ಕಳಿಸಿದ್ರ ಊರನ ಜನಾ ಏನಂದದಾರು? ಹೆಡಿಗ್ಯಾಗ ಕುಂದ್ರಿಸಿ ಜೋಕಮಾರನ ಮೆರಣ್ಗಿ ತೆಗೂನ ತಡಿ.

ಸಿದ್ದಪ್ಪ— ಕಟ್ಟಂದ್ರ ಬೇನತೊಪ್ಪಲ. ಪದಾ ಹಾಡ್ತಿನಿ ಒಳ್ಳೆ ಮಜಲ.

—ಪದ—

ಸಿದ್ದಿ— ಹಾಕಣ್ಣ ಅಗಳಿ ನೂಕಣ್ಣಾ ಬಾಗಲಿ ।
ತೊಗಳ್ಳ ನನ್ನ । ಮೊಂಡೊಣ್ಕೆ ಜೋಕ್ಮಾರ ॥

ತೊಗಳ್ಳ ನನ್ನ । ಮೊಂಡೊಣ್ಕಿ ಜೋಕ್ಮಾರ ।
ಬಾರೀಗಿ ಏಟ । ಬೇಕೇನ ಜೋಕ್ಮಾರ ॥೧॥

(ಲೈಟ್ ಹಾಪ್, ಪರೆದೆ ಇಳಿಯುವದು.)

೫ ನೆಯ ಪ್ರವೇಶ

(ದೃಶ್ಯ ಮನೆ)

(ಶಾಂತಾ ತೊಟ್ಟಲಲ್ಲಿ ತನ್ನ ಮಗನನ್ನು ಹಾಕಿ ಪದ ಹಾಡುತ್ತ)

ಶಾಂತಾ– ತೂಗುವೆ ಕಂದಾ । ಜೋಽಽ ಜೋಽಽ ॥
ಪಾಡುವೆ ಕಂದಾ । ಜೋಽಽ ಜೋಽಽ ॥
ಜೋ ಜೋ ಜೋ । ಜೋ ಜೋ ಜೋ ॥
ಜೋ ಎಂದು ಪಾಡುವೆ । ಶಿಶುವೆ ಸುಬಾಲಾ ಜೋ ॥ಪಲ್ಲ॥
ಶಶಿ ಮುಖ ಚಂದಿರ । ಬಾ ಯನ್ನ ಸುಂದರ ॥
ಅಂಬೆಗಾಲಿಕ್ಕಿ ಆಡುತ ಬಾ ।
ನಲಿದು ನಲಿದು । ಒಲಿ ಒಲಿದು ॥
ಕಾಲಲಿ ಗೆಜ್ಜಿಯ । ನುಡಿಸುತ ಬಾ ॥
(ಹುಡುಗನಿಗೆ ಕೈಯಲ್ಲಿ ತೆಗೆದುಕೊಂಡು ।

ಮಧುವನದ ಕೋಗಿಲೆಯು ವಸಂತ ಋತುವಿನಲ್ಲಿ ಹೇಗೆ ಸಂತೋಷದಿಂದ ಗಿಡದಿಂದ ಗಿಡಕ್ಕೆ ಹಾರಾಡುತ್ತಿದೆಯೋ, ಅದರಂತೆ ನನ್ನ ಕುವರನು ಅಂಬೆಗಾಲಿಕ್ಕಿ ಆಡುವ ಬಾಲಭಾಸ್ಕರನಂತೆ ಆಡಲು ಸಿದ್ಧನಾಗಿದ್ದಾನೆ. (ಮುದ್ದು ಕೊಟ್ಟು) ಆರ ಬರವನ್ನು ಬಾಣದಂತೆ ನೇರವಾಗಿ ನಿರೀಕ್ಷಿಸುವೆ ಕಂದಾ?

ಮನೋಹರ– (ಪ್ರವೇಶಿಸಿ) ಚಕೋರ ಪಕ್ಷಿಯು ಚಂದ್ರಮನ ಬರುವ ಬರವನ್ನು ಹೇಗೆ ನೋಡುವದೋ, ಅದರಂತೆ ತನಗೆ ಪ್ರೇಮದಿಂದ ಉಣಬಡಿಸುವ ವ್ಯಕ್ತಿಗೆ ನೋಡುತ್ತಿರಬಹುದು.

ಶಾಂತಾ– ನೋಡಿ, ಈ ನಿಮ್ಮ ಕಾರುಣ್ಯದ ಶಿಶು ಹೇಗೆ ಆಡುತ್ತಿರುವನು. ನಿಮ್ಮ ಪ್ರತಿಬಿಂಬದಲ್ಲಿ ಅದ್ದಿ ತೆಗೆದಿಟ್ಟಂತಾಗಿದೆ.

ಮನೋಹರ– ಆದರೆ, ಅದರ ಮೇಲೆ ಬಿದ್ದಿರುವದು ಪರಪುರುಷರ ಛಾಯ!

ಶಾಂತಾ– (ಬೆಚ್ಚಿ) ಮನೋಹರಾ !! ಇದೆಂಥಾ ಕರ್ಣ ಕಠೋರ ವಾಕ್ಯ ?

ಮನೋಹರ– ಇದುವೇ ನನ್ನ ನಿನ್ನ ಋಣಪತ್ರದ ಮಧುರ ವಾಕ್ಯ ಈ ಹಸುರೆಲೆಯ ಹಸುಳೆಯು ಮುಂದೆ ನಮ್ಮ ಪ್ರೇಮಕ್ಕೆ ಎಡರು ತೊಡರಾಗುವದು. ಈ ಮೊಗ್ಗೆಯನ್ನು ಚಿವುಟಿ ಹಾಕು ಹಸಿಮಿಸಿ ಇಲ್ಲದೆ.

ಶಾಂತಾ– [ಅಳುತ್ತ] ಮನೋಹರಾ.....! ವಾತ್ಸಲ್ಯದ ವಾರಧಿಯಲ್ಲಿ ಉದ್ಭವಿಸಿ ಬಂದ ಮೊಗ್ಗೆಯನ್ನು ಚಿವುಟಿ ಹಾಕಲು ನನ್ನ ಕರಗಳು ಧಾವಿಸಲಾರವು ದಾನವಿ ಕೃತ್ಯದತ್ತ.

ಮನೋಹರ– (ನಕ್ಕು) ದಾನವಿ ನೀನಾಗದಿದ್ದರೆ ನಿಮ್ಮಣ್ಣ ಚಂದ್ರಧರನಿಗೂ ಹಾಗೂ ನಂದಾದೀಪದಂತೆ ಪ್ರಜ್ವಲಿಸುವ ಪತಿಭಕ್ತೆ ಜಮುನೆಗೂ ಹೊರನೂಕಿದೆಯೇಕೆ? ಎಲೆ ಗೈಯಾಳಿ ! ಮಕ್ಕಳಿಬ್ಬರನ್ನು ಅಡವಿಗಟ್ಟಿದೆಯೇಕೆ? ಹಾದರದ ಹೊದಿಕೆಯನ್ನೇ ಹೊದ್ದ ಹಾದರದ ಪಿಂಡವೇ ಕರಾಳ ಮೃತ್ಯುವಿನ ಪಾಶ ಆಚ್ಛಾದನೆಗೈದು ತಿಮಿರಮಯವಾಗಿ ತಿರುಗುವ ಯುಗಚಕ್ರದ ಕಡೆಗೆ ಓಡಿಸು ನಿನ್ನ ತರುಳನನ್ನು. ಇಲ್ಲವಾದೊಡೆ ನನ್ನಲ್ಲಿರುವ ನಿನ್ನ ಅತುಲ ಪ್ರೇಮ ಅಳುಕಿಸಬೇಕು. ಆ ಎರಡರಲ್ಲಿ ಒಂದನ್ನಾದರೂ ಆರಿಸಲೇಬೇಕು.

ಶಾಂತಾ– (ಅಳುತ್ತ) ಮನೋಹರಾ.....! ನಿನ್ನ ಹೃದಯಕ್ಕೆಷ್ಟು ಪಾಷಾಣದ ನೀರ್ಗುಡಿಸಿರುವೇ.....? ಪ್ರಳಯ ಕಾಲದಿ ತಾಂಡವ ನೃತ್ಯಗೈದ ರುದ್ರನೇ ನೀವಾಗಿ ಕಾಣುತ್ತೀರಿ.......! !

ಮನೋಹರ– (ನಗುತ್ತ) ಪ್ರಳಯಕಾಲದಲ್ಲಿ ತಾಂಡವ ನೃತ್ಯಗೈದ ರುದ್ರನು ಧರಣಿಗಿಳಿದು ಧಾವಿಸಿ ಬಂದಿಹನು ನನ್ನ ರೂಪದಲಿ. ಆದರೆ ರುದ್ರನ ಅರ್ಧಾಂಗಿಯೆನಿಸಿದ ಆದಿಶಕ್ತಿ ರುದ್ರಾಣಿಯು ಜಗಕಿಳಿದು ಬಂದಿಹಳು, ನಿನ್ನ ರೂಪದಲ್ಲಿ. ಶಾಂತಾ "ನೀಲಾಕಾಶದಿ ಕಪ್ಪಡರಿದೆ ಕಾರ್ಮೋಡ" ಹೂಂ ತೆಗೆದುಕೋ. (ಜಂಬೆಯನ್ನು ಕೊಟ್ಟು) ಮರುಮಾತಾಡದಲೇ ಸೀಳಿ ಹಾಕು ನಿನ್ನ ತರುಳನನ್ನು, ಆ ಮೇಲೆ ಮಾಂಸದ ಮುದ್ದೆಯನ್ನು ಕಟ್ಟಿಕೊಂಡು ಹೋಗಿ, ಸಾವಿರಾರು ಪಾಪಗಳನ್ನು ಮಾಡಿದ ತರುಣಿಯರು ಅಸು ನೀಗಿದ ಸಮುದ್ರದಲ್ಲಿ ಎಸೆ. ಅಂದರೆ ಕಾಣಲಾರದು ಜಗತ್ತು ನಿನ್ನ ಕರಕಮಲ ಬಳೆದ ಕೊಲೆಯ ಕೆಂಪು ರಂಜಿಪ ನೆತ್ತರ.

ಶಾಂತಾ– (ಅಳುತ್ತ) ಮನೋಹರಾ....! ! ಇಷ್ಟು ಕಲ್ಲೆದೆಯವನೆಂದು ನಾನೆಣಿಸಿರಲಿಲ್ಲ; ನನ್ನೆದೆಯ ಮಿಡಿ ಮೊಗ್ಗೆಗಾಗಿ.

ಮನೋಹರ– ನಿನಗದು ಮಿಡಿ ಮೊಗ್ಗೆ, ನನಗದು ಸಿಡಿಮದ್ದು, ಹಿಡಿದ ಹಟವನ್ನು ಬಿಡಲು ಸಾಧ್ಯವಿಲ್ಲ ಈ ಹಟಯೋಗಿಗೆ. ಒಟ್ಟಾರೆ ಹೇಳುವೆ; ರೂಪನಗರದ ಈ ಹೊಸ ಯುಗದಲ್ಲಿ ಪ್ರೇಮಯುಗವು ಬೆಳೆಸಬೇಕೆಂಬಾಸೆ ನಿನಗಿದ್ದರೆ ಚಿವುಟಿ ಹಾಕಬೇಕು ನಿನ್ನ ಪ್ರೇಮದ ಮುತ್ತಳಿಯನ್ನು.

ಶಾಂತಾ– [ಅಳುತ್ತ] ಮನೋಹರಾ.....! ನಿನಗಾಗಿ, ನಿನ್ನ ಮೇಲಣ ಪ್ರೇಮಕ್ಕಾಗಿ, ಇದೋ ನನ್ನ ಕರುಳಿನ ತರುಳನನ್ನು ಕೊಲ್ಲುವ ಕ್ರೂರ ರಕ್ಕಸಿಯಾದೆ ! ! ಇನ್ನು ಕ್ಷಣಾರ್ಧದಲ್ಲಿಯೇ ಕಾಣುವಿ ನೀ ಕೆಂಪನೋಕರಿಪ ಮಾಂಸದ ಮುದ್ದೆ. [ಹೊಡೆದು ಬಂದಿರುವಳು] ಇದೋ ನನ್ನ ಕರುಳಿನಿಂದುದ್ಭವಿಸಿದ ರತ್ನಗುಚ್ಛ.....! ಇನ್ನಾದರೂ ನಿರಾಕರಿಸದಿರು ನನ್ನರಸಾ.

ಮನೋಹರ– (ಒದ್ದು) ಥೂ, ನಿನ್ನ ಮುಖಕ್ಕೆ ಬೆಂಕಿ ಹಚ್ಚ, ಗರ್ಭದಿಂದುದಿಸಿದ ತರುಳನನ್ನು ಕೊಲ್ಲುವ ರಕ್ಕಸಿ ! ಶಾಂತೀ ಹೇಳುವೆ ಅಚ್ಚಕನ್ನಡದಲ್ಲಿ ಸ್ವಚ್ಛ. ನನ್ನ ತಂದೆಯ ಅಪಾರ ಆಸ್ತಿಯನ್ನು ಎತ್ತಿಹಾಕಿ, ನಾಸ್ತಿಕನಾಗಿ ಮೆರೆದ ನಿಮ್ಮ ತಂದೆಯ ಆಸ್ತಿಯನ್ನೇ ನಾನು ಎತ್ತಿಹಾಕಿ ಒಂದು ಹುಳವನ್ನು ಸಹ ಇದ್ದರೆ ಚಿವುಟಿ ಹಾಕಬೇಕೆಂಬುದೇ ನನ್ನೀ ಪ್ರತೀಕಾರ. ಪ್ರತೀಕಾರದ ಪ್ರಳಯಾಗ್ನಿಯಲ್ಲಿ ಏಳುವ ಒಂದೊಂದು ಕಿಡಿಗಳು ನನ್ನೆದೆಯಿಂದ ಬಂದ ವಿಷಹನಿಗಳು ಎಲೆ ಹಾದರದ ಹೆಣ್ಣೆ ! ನಿನ್ನ ಕುಡಿಹುಬ್ಬಿನ ಕತ್ತಿಯ ಮೇಲೆ ಮಂಚ ಏರುವ ತರುಣರು ಅದೆಷ್ಟು ಇರುವರೋ ನನ್ನ ಹಿಂದೆ. ಇದಲ್ಲದೆ ತಾಯಿಯ ವಾತ್ಸಲ್ಯದಲ್ಲಿ ಮಿಂದು ಬಂದ ಸಸಿಯನ್ನು ಚಿವುಟಿದಾಗ ನೀನು ನನಗೆ ಮೋಸಗೊಳಿಸದೆ ಇರಲಾರೆಯಾ? ಶುನಕಾ, ನೀನೀಗ ಹಚ್ಚಬೇಕಾಗಿದೆ ಶಂಕ ಇವನೇ ನನ್ನನ್ನು ಕೆಡಸಿದ ಕಾಮುಕನೆಂದು ಕಣ್ಣೀರು ಹಾಕು. ಇದಾಗದಿದ್ದರೆ ಬಾರತ ಭಗಿನಿಯರಿಗೆ ಸದ್ಬೋಧೆಯನ್ನು ಬೀರು, ನನ್ನಂತೆ ಯಾರೂ ಮಾಡಬೇಡಿರೆಂದು ಇದೂ ಆಗದಿದ್ದರೆ ಕಾಲನ ಪಾಢಕ್ಕೆ ಗುರಿಯಾಗು. [ಒದೆದು] ಹೂಂ ನಡೆ ನಿನ್ನ ಕರ್ಮಕಾಂಡದ ಪಿಂಡಾಂಡವನ್ನು ಕಟ್ಟಿಕೊಂಡು.

ಶಾಂತಾ– (ಅಳುತ್ತ) ಮನೋಹರಾ.....! ನಿನ್ನನ್ನೇ ನಂಬಿದ ಅಬಲೆಗೆ ತಗ್ಗಿನಲ್ಲಿ ಹಾಕಿ ತುಳಿಯಬೇಡ.....!! ನಿನ್ನಂಗೈಯಲ್ಲಿ ಆಡುವ

ಅರಗಿಣಿಯಂತಿರುವ ನನ್ನನ್ನು ತ್ಯಜಿಸಬೇಡ.....!! ನಾ ಹೊತ್ತು ಹೆತ್ತಿಲ್ಲ ಈ ಹಾದರದ ಪಿಂಡ......! ! ! ಇಂಥಾ ಷರ್ಮ ಭೇದಕ ಮಾತುಗಳನ್ನಾಡಿ ಕೈ ಬಿಡಬೇಡ. ನಿನಗೆ ಕೈ ಮುಗಿದು ಬೇಡಿಕೊಳ್ಳುತ್ತೇನೆ. ನೀನೇ ನನಗೆ ಆಧಾರ.

ಮನೋಹರ– ನೀನನ್ನುವದು ಕನಸಿನ ಪರಿ ಆಕಾರ. ಎಷ್ಟು ರೋದನ ಪಾರಾಯಣ ಮಾಡಿದರೂ ಅಳುಕಲಾರವು ದುರ್ವಿಧಿಯ ಅಕ್ಷರ. ನೀನಿಂದು ಕೊರಳಲ್ಲಿ ಹಾಕಿಕೊಳ್ಳಬೇಕಾಗಿದೆ ದುರ್ನಿಂದೆಯ ಸರ. ಎಲೆ ಕೊಂಕುಗುರಲಿನ ಹೆಣ್ಣೆ ಏಕೆ ಹಾಕುವೆ ಕಣ್ಣೀರ.

ಶಾಂತಾ– (ಸಿಟ್ಟಿನಿಂದ) ಥೂ, ಚಾಂಡಾಲಾ ! ! ಕಾಮದಾಟದ ಸಲುವಾಗಿ ಪರಸ್ತ್ರೀಯರನ್ನು ಮೋಸಗೊಳಿಸಿ, ನಿನ್ನ ಕಾರ್ಯ ಕೈಗೂಡುವ ತನಕ ಪ್ರೇಮದಿಂದೊರ್ತಿಸಿ ಕಡೆಗೆ ನೀ ತೋರಿಸಿದೆಯಾ ಕೆಂಧೂಳಿನ ಛಲ. ಇಷ್ಟೇ ನಾ ಮೊದಲು ತಿಳಿದು ಪ್ರೇಮಕ್ಕೆ ಧಿಃಕರಿಸಿದ್ದರೆ ಈ ಭಯಂಕರವಾದ ಬಿರುಗಾಳಿ ಬೀಸುತ್ತಿರಲಿಲ್ಲ. ಈಗ ಉಣ್ಣುತ್ತಿರುವೆ ನಾನಿದರ ಪ್ರತಿಫಲ. ಥೂ, ಕಾಮುಕಾ ! ! ನಿನ್ನನ್ನು ನಂಬಿ ಕೆಟ್ಟೆ. ನಿನ್ನ ಮಾತು ಕೇಳಿ ಜಮುನೆಗೆ ಸಲ್ಲದ ಅಪಾದನೆ ಹೊರಿಸಿ, ಕಡು ಪಾಪಿ ನಾನಾದೆ. ಅಣ್ಣನ ಮಕ್ಕಳಿಗೆ ತಂದೆ–ತಾಯಿಗಳಿಂದಗಲಿಸಿ ಕ್ರೂರ ರಕ್ಕಸಿಯಾದೆ. ಅಹಿಂಸೆಯೇ ಪರಮ ಧರ್ಮದ ಮಾರ್ಗವೆಂದು ನಡೆಯುವ ಗುರುವಿಗೆ ಧಿಃಕರಿಸಿ ಮನೆಯಿಂದ ಹೊರನೂಕಿ, ಗುರುದ್ರೋಹಿ ನಾನಾದೆ. ನನ್ನಕ್ಕ ತಂಗಿಯರೆ ! ! ಸಾಸಿವೆಯ ಕಾಳಿನಷ್ಟು ಸುಖಕ್ಕಾಗಿ ಪರಪುರುಷರ ಸಂಗ ಮಾಡಬೇಡಿರೆಂದು ಕೈಮುಗಿದು ಹೇಳುತ್ತೇನೆ. ಕಾರಿರುಳಿನ ಕಗ್ಗತ್ತಲೆಯಲ್ಲಿ ಮಿಂಚಿನಂತೆ ವರ್ತಿಸುವ ವಂಚಕರು ಯಾವುದೇ ವಿಷಯದ ವ್ಯಾಮೋಹ ಹಚ್ಚಿ, ಆಳವಾದ ತಗ್ಗಿನಲ್ಲಿ ಹಾಕಿ ತುಳಿಯುವರು. ಅಂಥ ವಿಷಯ ಲಂಪಟತನಕ್ಕೆ ಮರುಳಾಗಿ ಮೋಸ ಹೋಗಬೇಡಿರಿ. ನನ್ನಕ್ಕ ತಂಗಿಯರೇ. ಪುನಃ ನಿಮಗೆ ಕೈಮುಗಿದು ಹೇಳುತ್ತೇನೆ. ಪಾವನಕರಳಾದ ಗಂಗಾಮಾತೆಯಂತೆ ನೀವೂ ಸತಿಸಾಧ್ವಿ ಎನಿಸಿಕೊಂಡು ಮಾಡಬೇಕು ಕುಲೋದ್ಧಾರ. ಕಿತ್ತೊಗೆಯಬೇಕು "ಜಾರಿಣಿ"ಯೆಂಬ ಮೂರಕ್ಷರ. ಆಗ್ಗೆ ಭಾರತ ಹೊಡೆಯುವದು ಜಯ ಜಯಕಾರ. ಈಗ ನಾನಾಗಿರುವೆ ಮುಸಣದ ಹೂವಿನಾಕಾರ. ನನ್ನ ಮನವಾಗಿರುವದು ಗಾಳಿಗೋಪುರ. ಹೋಗುವೆ ನಾನು ನನ್ನ ಕಥೆಯನ್ನು ಸ್ಮರಿಸುತ್ತಾ

(ಹೋಗುವಳು)

ಮನೋಹರ– ಎಲೆ ಶಾಂತಿ ! ನೀನೆಷ್ಟು ಸದ್ಬೋಧೆ ಬೀರಿದರೂ ಅಳಿಯಬೇಕಾಗಿದೆ. ಈ ಮನೆಯ ಕೀರ್ತಿ, ನನ್ನಾಶಾಭ್ರಮರಳಾದ ಜಮುನೆಯು ಇದೇ ಊರಲ್ಲಿ ಕೈ ಕೆಲಸಕ್ಕೆ ನಿಂತಿರುವಳಂತೆ. ವೇಷ ಬದಲಾಯಿಸಿ ಹೋಗುವೆ ಅವಳ ಬಳಿ ಸಾರಿ. ಕಾಣುವೇ ಅವಳ ಸುಪ್ತಹೃದಯದಲ್ಲಡಗಿದ ಸೌಂದರ್ಯದ ಸಿರಿ. ಹೊಂದುವೇ ಅವಳಂಗಸಂಗದ ಪ್ರಥಮ ರಾತ್ರಿ, ಇಂದಿಗೆ ಅರ್ಧದಷ್ಟು ನಂದಿತು ನನ್ನ ಛಲದುರಿ. ಆಕೆಯ ಸುಸೌಂದರ್ಯದ ವರ್ಣನೆ ಮಾಡಲು ಪ್ರತ್ಯಕ್ಷ ಬೊಮ್ಮನಿಗೂ ಎಲ್ಲೆ ನಿಂತಿದೆ ಮೀರಿ. ಆಕೆಯ ರೂಪ ನೋಡಿದೊಡೆ ಕಾಣುವದು ಕಂಗಳಿಗೆ ಕೆಂಬಿಸಿಲಿನ ಪರಿ. ಇಂದು ಪ್ರತ್ಯಕ್ಷ ಕಾಲನು ಬಂದರೂ ಹಿಂದಿರುಗಿ ಬರುವದಿಲ್ಲ ನಾ ಬೆದರಿ. ಬಹು ದಿನಗಳಿಂದಲೂ ಆಕೆಯ ರೂಪ ಲಾವಣ್ಯಕ್ಕೆ ಮರುಳಾಗಿ ಕುಳಿತ ನನ್ನ ತಪಸ್ಸಿಗೆ ಮಾನ ಕೊಡದಿದ್ದೊಡೆ ಆಗುವಳು ನನ್ನ ಗುಂಡಿನೇಟಿಗೆ ಗುರಿ. ಎಲೆ ಶಾಂತಿ ! ನಿನ್ನ ಮಾಯಾ ಜಾಲದಲ್ಲಿ ನನಗೆ ಹಾಕಿ ಬಾರಿಸಬೇಕೆಂದು ಮಾಡಿದ್ದೆಯಲ್ಲ ಒಡಕ ತಂಬೂರಿ. ನಿನ್ನ ಕೈಯೊಳಗಿನ ಕುಣಿಯುವ ಗೊಂಬೆಯಂತೆ ಕುಣಿಯಲು ನಾನಲ್ಲ ಮಳ್ಳ ಕೆಂಗುರಿ. (ಹೋಗುವನು.)

೬ ನೆಯ ಪ್ರವೇಶ

(ದೃಶ್ಯ : ಬೀದಿ)

(ಜಮುನೆಯು ಬೀದಿಯ ಕಸಗೂಡಿಸುತ್ತ ಪದ ಹಾಡುತ್ತ ಬರುವಳು)

॥ ಪದ ॥

ಕರುಣ ನೀಡು ಶಂಕರಾ । ಪಾರುಮಾಡು ಭವದೂರ ॥
ಶಿವನೇ ಹರನೇ ಕರುಣಿಸೋ । ಕಾಯೋ ನೀನು ಅಬಲೆಯಾ ॥
ಪತಿಯ ಪಾಪ ಪಿಡಿಯಲಿಲ್ಲ । ಸುತರ ನೋಟ ನೋಡಲಿಲ್ಲ ॥
ಅತ್ತೆ ಮಾವ್ನ ಭಜಿಸಲಿಲ್ಲ । ಪಥವ ತೋರೋ ಶಂಕರಾ ॥೧॥

ಜಮುನಾ— ಕರುಣಾಮೂರ್ತಿಯಾದ ಈಶನೇ ! ನನ್ನ ಪತಿದೇವರು ಎಲ್ಲಿರುವರೋ ಏನೋ ? ಇಷ್ಟೇಕೆ ಕಣ್ಣೀರಿನ ಕಾರಂಜಿಯಲಿ ಕೈ ತೊಳೆಯಲು ಹಚ್ಚಿರುವೆ ?.............? !! ಹತ್ತವತಾರಗಳನ್ನೆತ್ತಿ ಭಕ್ತ ಪರಿಪಾಲಕನೆಂಬ ಬಿರುದು ಪುಸಿ ಮಾಡದೆ ಕರುಣಿಸು ಕರುಣೆಯಿಂದ. ಪುಸಿಯ ಬಿರುಗಾಳಿಯು ಬೀಸುವ ಭಾರತಕ್ಕೆ ಸತ್ಯದ ಬೆಳಕು ನೀಡಿ ನೋಡು ನೀ ಆದರದಿಂದ.

(ಪುನಃ ಪದ ಅನ್ನುತ್ತ ಕಸಗೂಡಿಸಿ)

ವಿಧಿಯೇ ! ಎಷ್ಟೊಂದು ವರ್ಣಿಸಲಿ ನಿನ್ನ ಮಹಿಮೆ. ರಾಜಾಧಿ ರಾಜನೆನಿಸಿಕೊಂಡ ಸತ್ಯಹರಿಶ್ಚಂದ್ರನನ್ನು ಒಬ್ಬ ಹೊಲೆಯನಾಳಾಗಿ ಮಾಡಿಸಿದೆ. ವೀರ ವಿಕ್ರಮನೆನಿಸಿಕೊಂಡು ರಾಜಾ ವಿಕ್ರಮನಿಗೆ ಕೈಕಾಲು ಕಡಿಸಿ ಕಡೆಗೆ ಗಾಣಿಗರ ಮನೆಯಲ್ಲಿ ಗಾಣ ಹೊಡೆಯಲು ಹಚ್ಚಿದೆ. (ದುಃಖದಿಂದ) ನನಗೀಗ ಮಕ್ಕಳಿಬ್ಬರ ಮುಖವನ್ನು ಕಾಣಿಸದೇ.....! ಮನೆಯ ಹಿರಿಯರ ಸೇವೆ ಮಾಡಿಸದೇ........! ಪತಿಪಾದ ಪೂಜೆಯಿಂದಗಲಿಸಿ ಬೀದಿಯ ಕಸಗೂಡಿಸಲು ಹಚ್ಚಿಸಿದೆ. ನಿನ್ನ ಮಹಿಮೆ ವರ್ಣಿಸಲಸದಳವಾಗಿದೆ. ದೇವಾ.....! ಇಂಥಾ ಕಷ್ಟದ ಕಾರ್ಗತ್ತಲೆಯಲ್ಲಿ ಕಾಲಿಟ್ಟ ನನಗೇ........!!

ಮನೋಹರ— (ವೇಷ ಬದಲಾಯಿಸಿ) ನಿನಗೀಗ ತಳಿರು ತೋರಣಗಳಿಂದ ಬಿಗಿದ ನನ್ನ ಮನೆಗೆ ಕರೆದುಕೊಂಡು ಹೋಗುವೆ ಬಾ.

ಜಮುನಾ— (ಚಿಟ್ಟನೆ ಚೀರಿ) ಯಾರು ನೀನು........?

ಮನೋಹರ— ನಾನು ಮನೋಹರಿ.

ಜಮುನಾ— ಅಂದರೆ......?

ಮನೋಹರ— ಅಂದರೆ ! ನಿನ್ನನ್ನು ನನ್ನ ಮನೆಯ ರಾಣಿಯಾಗಲಿಕ್ಕೆ ಕರೆದುಕೊಂಡು ಹೋಗಬೇಕೆಂದಿರುವೆ ಜಮುನಾ (ಬೆದರುವಳು) ಬೀದಿಯ ಕಸಗೂಡಿಸಿ ಬರುವ ಪಗಾರದಲ್ಲಿ ಕಣ್ಣೀರಿಡುತ್ತಾ ಏಕೆ ಸಾಗಿಸುವೆ ನಿನ್ನ ಜೀವನ? ತೆಗೆದು ಹಾಕು ಪತಿವ್ರತೆಯೆಂಬ ಕಲ್ಪನಾ!! ಈ ನಿನ್ನ ಅಂದವಾದ ರೂಪದ ಚಲನ, ಕಮಲದಂತೆ ಹೊಳೆಯುವ ನಿನ್ನ ನಯನ, ದಾಳಿಂಬರದಂತಿರುವ ಹಲ್ಲುಗಳ ಸೋಪಾನ, ಮೋಡಗಳೋಪಾದಿಯಲಿ ತೆರೆಮರೆಯಂತೆ ಕಾಣುವ ನಿನ್ನ

ಕೇಶರಾಶಿಯು ಬಣ್ಣ ನೋಡಿದೊಡೆ ಮನುಷ್ಯನನ್ನು ಲೋಹಚುಂಬಕದಂತೆ ಆಕರ್ಷಣ ಮಾಡಿಕೊಳ್ಳುವ ಸ್ತನ, ನಿನ್ನೀ ಸೌಂದರ್ಯ ರಾಶಿಗೆ ತಲೆಕೊಟ್ಟು ಪವಡಿಸಬೇಕೆಂದಿರುವೆ.

ಜಮುನಾ– ಥೂ, ರಕ್ಕಸಾ ! ಇಷ್ಟೆಲ್ಲ ವರ್ಣಿಸಲು ನೀನಾರು? ನಿನ್ನ ವರ್ಣನೆಗೆ ಮಾರು ಹೋಗಿ ಬೀಳಲಿಕ್ಕೆ ನಾನಲ್ಲ ಮತಿಯಿಲ್ಲದ ಮಾನವಿ. ಪಂಚಪಾಂಡವ ಪತ್ನಿಯಾದ ದ್ರೌಪದಿಯ ಮೇಲೆ ಕಣ್ಣಿಟ್ಟ ಕೀಚಕನ ಗತಿ ಏನಾಯಿತು? ಲೋಕಮಾತೆಯಾದ ವೈದೇಹಿಯ ಮೇಲೆ ಕಣ್ಣಿಟ್ಟ ದಶಕಂಠನ ಗತಿ ಏನಾಯಿತು? ಅನಸೂಯೆಯನ್ನಾಶಿಸಿದ ಆಗಭೇದಿಯ ಗತಿ ಏನಾಯಿತು? ಇಂಥಾ ಪವಾಡಗಳನ್ನು ಮರೆತು, ಎಲುಬು, ರಕ್ತ, ಮಾಂಸ, ಮಜ್ಜಾದಿಗಳಿಂದ ಕೂಡಿ ಕೊಳೆತ ಮಡುವಿಗೆ ಮೋಹಿಸಿ, ಸುಂದರಿಯೆಂದು ಸಂಬೋಧಿಸಿದರೆ ಆಗುವದು ನಿನಗಿ ಯಮಶಿಕ್ಷೆ! ನಡೆ ಇಲ್ಲಿಂದ ನೀಚಾ ! ನಿರ್ಲಜ್ಜಾ..........!!!

ಮನೋಹರ– ಕಾಲಕ್ಕೆ ತಕ್ಕ ಕೋಲು ಹಿಡಿಯಬೇಕಾಗಿದೆ ಕಾಮಿನಿ. ಗತಿಸಿದ ಪಥ್ಯ ಪಾಠವನ್ನು ಪಠನಮಾಡುವ ಕಾಲವಿದಲ್ಲ. ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕಿ ಗೆಜ್ಜೆ ನುಡಿಸುತ ಬಾ. ಸಚ್ಚಿನಿಂದ ಮಂಚವೇರಿ ಪನ್ನೀರೊಡನೆ ಪವಡಿಸಿ ಪ್ರೇಮ ಸುಧೆಯನ್ನು ಸುರಿಸು ಬಾ (ಏರಿ ಹೋಗುವನು.)

ಜಮುನಾ– ಥೂ, ಪಾಪಾಂಧಾ.....!! ನಿನ್ನ ಮುರಲಿಯ ನಾದಕ್ಕೆ ಕಿವಿಗೊಟ್ಟು ಕ್ಷಣ ಸುಖಕ್ಕಾಗಿ ನನ್ನ ನಾಮವನ್ನಳಕಿಸಲಿಕ್ಕೆ ನಾನಲ್ಲ ಕಾಮದ ಪಿಂಡ, ನಿನ್ನ ತಾಳದಲ್ಲಿ ಗಣಿತ ಹಾಕಿ ಕುಣಿಯಲು ನಾನಲ್ಲ ವೇಶ್ಯೆ. ಮಂಚವೇರಿ ಪನ್ನೀರೊಡನೇ ಪವಡಿಸಿ ಪ್ರೇಮ ಸುಧೆಯ ಸುರಿಸಲು ನಾನಲ್ಲ, ಸೂಳೆ. ಭಾರತೀಯ ಅಚ್ಚನೆತ್ತರದಿಂದುದ್ಭವಿಸಿದ ಗರತಿ ನಾನಿಹೆನು. ವ್ಯರ್ಥ ಬೀದಿಯ ಭಿಕಾರಿಯಂತೆ ಏಕೆ ಕಿರುಚಿಕೊಳ್ಳುವೆ, ತೊಲಗು ಇಲ್ಲಿಂದ ಮೂರ್ಖಾ.........!!

ಮನೋಹರ– ಇಲ್ಲಿಂದ ತೊಲಗಲು ಬಂದಿಲ್ಲ. ಪಲ್ಲವ ಪಾಣಿ. ಏನನ್ನು ನೋಡುತ್ತಿರುವೆ ಹರಿಬಡಿದು ತಿನ್ನುವಂತೆ ಎಲೆ ಹೆಣ್ಣೆ. ಪ್ರೇಮಿಸಿದ ವಸ್ತುವನ್ನು ಪ್ರೇಮಮಾಡದೆ ಬಿಡಲು ನಾನಲ್ಲ ಹೇಡಿ. ಸುಂದರಿ ಬಾಯನ್ನ ಬಳಿ ಸಾರಿ.

ಜಮುನಾ— ದುರ್ಬಲ ! ನೀನೆಣಿಸಿದಂತೆ ಅದೆಷ್ಟು ಸುಲಭವಾಗಿದೆಯೆಂದು ತಿಳಿದೆಯಾ? ನೀನಾಡುವದು "ಅಡ್ಡಗೋಡೆಯ ಮೇಲೆ ದೀಪವು ಇಟ್ಟಂತೆ" ನನ್ನ ರೋಮ ರೋಮಗಳಲ್ಲಿ ಭಾರತ ಗರತಿಯರ ಅಚ್ಚನೆತ್ತರ ತುಂಬಿ ತುಳುಕಾಡುತ್ತಿರುವಾಗ ನಿನ್ನಂಥ ತಿರುಪೆಯ ಕೂಳು ತಿಂದು ಕಾಲ ನೂಕುವ ನಾಯಿಗೆ ಅಂಜುವವಳಲ್ಲ ಈ ನಾರಿ. ನಾನಿಹೆನು ಗರತಿ, ಭಾರತೀಯ ಪುತ್ರಿ. ಈ ದೇಹಕ್ಕೆ ಪರಮಮೂರ್ತಿಯಾದ ನನ್ನ ಸೌಭಾಗ್ಯವನ್ನು ಬೆಳಗಿಸುವ ಪತಿದೇವರೇ ಒಡೆಯರು ಉಳಿದವರೆಲ್ಲರೂ ನನ್ನಣ್ಣ ತಂದೆ ಸಮಾನರು.

ಮನೋಹರ— ಎಲೆ ಗರತಿಯೊಳಗಿನ ಹಿರಿಯಾರತಿಯೆಂದು ತೋರ್ಪಡಿಸುವ ಹೆಣ್ಣೆ ! ಗುರುವಿನೊಡನೆ ರತಿಕ್ರೀಡೆಯಾಡಿ ಮಕ್ಕಳಿಬ್ಬರನ್ನು ಅಡವಿಗಟ್ಟಿ ಗುರುತಿಲ್ಲದೆ ಓಡಿ ಹೋಗಿರುವಳೆಂದು ಸುದ್ದಿಕೇಳಿ, ಆ ನಿನ್ನ ಗಂಡನಿಗೆ ಹಿಡಿದಿರುವದು ಹುಚ್ಚು ; ಮತ್ತೀಗ ತಾಯಿಯನ್ನು ಕೊಂದ ಕೊಲೆಪಾತಕಿಯೆಂದು ಹಿಡಿದಿರುವ ಪೋಲಿಸರು. ಅವನೀಗ ಜೇಲುವಾಸ, ನೀನಾಗುಬಾ ನನ್ನ ವಶ, ಚೆಲ್ಲೀಗ ಅವನ ಮೇಲೆ ಕಸ, ಮಾನಿನಿ ನಿನ್ನಲ್ಲಿ ಕಸರಿಲ್ಲ ತುಸ, ನನ್ನ ಕೊರಳಿಗೆ ಹಾಕೀಗ ನಿನ್ನ ಪ್ರೇಮ ಪಾಶ, ಕಿತ್ತೊಗೆ ನಿನ್ನ ಗಂಡನ ಮೇಲಿರುವ ಪ್ರೇಮವೆಂಬ ಕಲ್ಮಶ. ಕಲ್ಪಾಂತರದವರೆಗೂ ರಾಜಿಸುವ ಕಟ್ಟಡದ ಉಯ್ಯಾಲೆಯಲ್ಲಿ ಆಡುವ ಬಾ ಸರಸ. (ಕೈಹಿಡಿಯಲು ಹೋಗುವನು.)

ಜಮುನಾ— (ಕೆನ್ನೆಗೆ ಹೊಡೆದು) ಕಾಮದ ಮದದಿಂದ ಮತಿ ಮಸಳಿಸದ ಕ್ರೂರ ರಕ್ಕಸಾ !! ಪರಸ್ತ್ರೀಯರ ಮೇಲೆ ಕೈಮಾಡುವ ಚಂಡಾಲ...!!! ಕೇಳು, "ದೇಹವೆಂಬ ಹಣತೆಯಲ್ಲಿ ಭಕ್ತಿಯೆಂಬ ತೈಲವನೇ ಹಾಕಿ, ಮನವೆಂಬ ಬತ್ತಿಗಳನ್ನೆ ಹೊಸೆದು ಜ್ಞಾನವೆಂಬ ಪ್ರಕಾಶಗೊಳಿಸಿ ಇಟ್ಟಿರುವನು ಈಶ." ತೈಲವಿರುವತನ ಸುಟ್ಟು ಆ ಮೇಲೆ ಬರಿದಾದ ಹಣತೆ ಉಳಿಯುವದು. ಅಂಥಾ ಬರಿದಾದ ಹಣತೆಗೆ ಮೋಹಿಸಿ ಬಂದ ನೀನೊಂದು ದ್ವಿಪಾದ ಪಶು. ಹೋಗು, ಕಾಮ, ಕ್ರೋಧವೆಂಬ ಆರು ಗುಣಗಳ ಅಳಿ. ಕಾಯ, ವಾಚಾ, ಮಾನಸವೆಂಬ ಮೂರು ಗುಣಗಳು ತಿಳಿ. ನಿನ್ನ ನಿಜವಾದ ನಿಲುಮೆಯನ್ನರಿ. ಸ್ತ್ರೀಯರನ್ನು ಬಯಸಿ ವ್ಯರ್ಥ ಮರಣಕ್ಕೆ ಆಹ್ವಾನ ಕೊಡಬೇಡ. ಗರತಿಯರ ಹೃದಯ ಭಾಂಡದಲ್ಲಿ ಶಾಪ,

ಚಾಪ ಶಕ್ತಿಗಳೆರಡೂ ಉಂಟು.

ಮನೋಹರ– ಇಲ್ಲಿ ನಡೆದಿರುವದು ಶಾಸ್ತ್ರವಲ್ಲ, ಶಾಸ್ತ್ರ ಕೇಳುವ ಕಾಲವೂ ಇದಲ್ಲ. ಪ್ರಿಯೇ; ಶಾಸ್ತ್ರಶಾಸ್ತ್ರಕ್ಕೆ ತಾಳಮೇಳವಿಲ್ಲದಾಗ ಶಾಸ್ತ್ರವನ್ನೇ ಆಧಾರವಾಗಿಟ್ಟ ಈ ವಿಧಿಗೆ ಎಲ್ಲಿಯ ನೆಲೆ, ಎಲ್ಲಿಯ ಬೆಲೆ, ಪ್ರಿಯೇ; ಪ್ರತ್ಯಕ್ಷಕಾಮ ಬಯಸಿದ ಕಾಲನಿಗೂ ಕಣ್ಣಿಲ್ಲ. ಅಂದ ಮೇಲೆ ನೀನೆಲ್ಲ ಹೇಳುವದು "ಬೋರ್ಗಲ್ಲಿನ ಮೇಲೆ ಮಳೆ ಗರೆದಂತೆ" ಸರ್ವಕಾಂತಿಯಿಂದೊಪ್ಪುವ ಸುಂದರಿ. ಕಾಲ ವಿಲಂಬ ಮಾಡದೆ ನನ್ನ ಬಾಹು ಬಂಧನದಲ್ಲಿ ಸಿಲುಕಿ ಕಿತ್ತೊಗೆ ನಿನ್ನ ತಾಪದುರಿ. (ಮುಟ್ಟಹೋಗುವನು)

ಜಮುನಾ– ಒಂದಡಿ ಮುಂದಿಟ್ಟದ್ದಾದರೆ......!!

ಮನೋಹರ– ಏನಾಗುವದು ?

ಜಮುನಾ– ಏನಾಗುವದು, ಭಾರತ ಗರತಿಯರ ಶಾಪದಿಂದ ಸುಟ್ಟು ಹೋಗಬೇಕಾದೀತು. ಚಾಂಡಾಲಾ ! ಪತಿವ್ರತೆಯರ ಮಾನಭಂಗ ಮಾಡಲು ಬಂದ ಬಕಪಕ್ಷಿಯೇ, ಯಾವ ಸ್ತ್ರೀಯು ಪತಿಯೇ ಪರಮೇಶ್ವರನೆಂದು ತಿಳಿದಿರುವಳೋ ಅಂಥವಳಿಗೆ ಕೆಣಕಿದ ಮೂರ್ಖನ ಗತಿ ಕೇಡಾಗದೇ ಹೋಗದು. ಯಾವ ಸ್ತ್ರೀಯು ಹದಿಬದೆಯ ಧರ್ಮವನ್ನೇ ಹೊದ್ದು ಆರ್ಯ ಲಲನೆಯರು ಹಾಕಿಕೊಟ್ಟ ಪಂಕ್ತಿಯನ್ನು ಅನುಸರಿಸಿ ನಡೆಯುವಳೋ ಅವಳ ಮೇಲೆ ಬಲತ್ಕಾರ ಮಾಡುವ ನಾಯಿಗೆ ನರಕ ತಪ್ಪಿದ್ದಲ್ಲ ಇದು ಸೂರ್ಯನ ಪ್ರಕಾಶದಷ್ಟು ಸತ್ಯ.

ಮನೋಹರ– ನಾನಿವುಗಳನ್ನು ಖರೀದಿ ಮಾಡಲು ಬಂದಿಲ್ಲ; ನನಗಿವು ಬೇಕಾಗಿಲ್ಲ. ಬೇಕಾದವರು ತೆಗೆದುಕೊಳ್ಳಲಿ ನಿನ್ನ ಈ ತರ್ಕಶಾಸ್ತ್ರದ ಗುಟ್ಟು, ನೋಡು ಮೋಹಿನಿ; ಇನ್ನೊಮ್ಮೆ ಹೇಳುವೆ, ನೀನು ನನ್ನ ವಶಳಾಗುವಿಯೋ ಇಲ್ಲವೇ ಗುಂಡಿನೇಟಿಗೆ ಗುರಿಯಾಗುವಿಯೋ....? ಕಡೆಗೆ ಸತ್ತ ನಿನ್ನ ಸುಂದರ ದೇಹದ ಶವವನ್ನಪ್ಪಿ ಮುದ್ದಿಡದೆ ಹಾಗೆ ಬಿಡಲಾರೆ. ನೀನೀಗ ಸಿಂಹದ ಗವಿಯಲ್ಲಿ ಸಿಕ್ಕ ಹರಿಣಿಯಂತೆ (ಪಿಸ್ತೂಲ ತೋರಿಸಿ) ಹೂಂ, ಬಾ ಸುಂದರಿ ಇಲ್ಲವೆ.....?

ಜಮುನಾ– (ನಕ್ಕು) ನಿನ್ನ ಅಳಿಯ ಅಬ್ಬರದ ಉಬ್ಬರಕ್ಕೆ ಬೆದರುವ ಭೀರುವಿ ನಾನಲ್ಲ ನಿನ್ನೀ ಪ್ರೇತ ಮುಖದ ಮೇಲೆ ಮೀಸಿ ಇದ್ದರೆ ಸೃಷ್ಟಿಯನ್ನೇ ತೊಟ್ಟಿಲ ಮಾಡಿ ತೂಗಿ, ಜೋಗುಳ ಹಾಡುವ ಸ್ತ್ರೀಯರ ಎದೆಯಲ್ಲಿ ಮೀಸೆಯು ಮಹಾದಾಕಾರವಾಗಿ ಮೂಡಿವೆ ! ನಿಶಾಚರ ಭ್ರಮರವು ದೂರ ಪ್ರದೇಶದಿಂದ ಬಂದು ಕುಸುಮ ರಸವನೀಂಟಿ ಆನಂದಕೊಂಡು ಹೋಗುತ್ತಿದೆ. ಆದರೆ ಅದೇ ಕಮಲದ ಛಾಯೆಯಲ್ಲಿ ವಾಸಮಾಡಿಕೊಂಡಿರುವ ಕಪ್ಪೆಯು ಮಕರಂದದ ಸ್ವಾದ ತಿಳಿಯದೇ ಕಲಕ ನೀರನ್ನು ಪಾನಮಾಡಿ ಕಾಲವನ್ನು ಕಳೆಯುತ್ತದೆ, ಅದರಂತೆ ಹೇಸಿ ಬಚ್ಚಲವನ್ನು ನೆಚ್ಚಿಕೊಂಡು ಬಂದ ಕಪ್ಪೆ....!! ಇದೋ ನಿನ್ನ ಗುಂಡಿನೇಟಿಗೆ ಈ ಭಾರತ ಮಾತೆಯ ಪುತ್ರಿಯು ತಲೆಬಾಗಿ ನಿಂತಿರುವಳು ಸದಾ.

ಮನೋಹರ– (ಸಿಟ್ಟಿನಿಂದ) ಸಾವಿನಂಚಿನಲಿ ಸಿಕ್ಕ ಕೊಂಕೆ, ಎಷ್ಟೊಂದು ಧೈರ್ಯವಾಗಿ ಮಾತಾಡುತ್ತಿರುವೆಯಲ್ಲ?

ಜಮುನಾ– (ವ್ಯಂಗ್ಯ ನಗೆ) ಇದು ಕನ್ನಡಾಂಬೆಯ ಗರ್ಭದಿಂದ ಬಂದ ಆರ್ಯ ನಾರಿಯ ಹುಟ್ಟುಗುಣ.

ಮನೋಹರ– ಹಾಗಾದರೆ ಉಣ್ಣು ಗುಂಡಿನೇಟಿನ ಸವಿಯನ್ನು......!

(ಗುಂಡು ಹಾರಿಸುವಷ್ಟರಲ್ಲಿ ಶಾಂತಾ ತನ್ನ ಪಿಸ್ತೂಲಿನಿಂದ
ಅವನ ಪಿಸ್ತೂಲಿಗೆ ಗುರಿಯಿಟ್ಟು ಹೊಡೆಯುವಳು.
ಮನೋಹರನ ಪಿಸ್ತೂಲ ಕೆಳಗೆ ಬೀಳುವದು.
ವೇಷ ಬದಲಿಸಿದ ಶಾಂತಾಳನ್ನು ನೋಡಿ)
(ದಿಗ್‌ಭ್ರಮೆಯಿಂದ ಯಾರು ನೀ......?

ಶಾಂತಾ– ನಾನು......?

ಮನೋಹರ– ಅಂದರೆ..........?

ಶಾಂತಾ– ಅಂದರೆ, ಭಾರತ ಗರತಿಯರ ಮಾನ ರಕ್ಷಣೆ ಮಾಡಲು ಹೊರಟ ಓರ್ವ ನಾರಿ. ನಿಮ್ಮಂಥ ಕ್ರೂರ ಕೊಲೆ ಪಾತಕರನು ಸಂಹಾರ ಮಾಡಲು ಹೊರಟ ನಿನ್ನ ಹೆಜ್ಜೆಯಲ್ಲಿ ತಿರುಗಾಡುವ ಮಿಡಿನಾಗರ.

(ಪಿಸ್ತೂಲ ಹಾರಿಸುವಳು. ಕುಳಿತು ತಪ್ಪಿಸಿಕೊಳ್ಳುವನು.
ನಂತರ ಜಂಬೆಯಿಂದ ಹೊಡೆಯುವನು. ಮೂರ್ಛೆ
ಹೋಗಿ ಮಲಗುವಳು.)

ಮನೋಹರ– ಬಾ ಲಲನಾ ಮಣಿ.

ಜಮುನಾ– ದೇವಾ.....!

ಮನೋಹರ– ಎಲ್ಲಿರುವನು ಆ ನಿನ್ನ ದೇವಾ? ಹಾಗಂದರೆ ಮೋಹ ಪಂಜರದಲ್ಲಿ ಸಿಕ್ಕ ನಿನಗೆ ಹೇಗೆ ಬಿಡಿಸಿಕೊಳ್ಳುವನೋ ನೋಡುವಾ.

ಜಮುನಾ– ಥೂ, ಮದಾಂಧಾ ! ಆ ಜಗಪಾಲಕನಿಲ್ಲದಿದ್ದರೆ ಮಾತೆ ದ್ರೌಪದಿಗೆ ದುಷ್ಟ ದುಶ್ಯಾಸನನು ತುಂಬಿದ ಸಭೆಯಲಿ ಸೀರೆ ಸೆಳೆಯುವಾಗ ಅಕ್ಷಯ ವಸ್ತ್ರವನ್ನು ದಯಪಾಲಿಸಿದವರಾರು? ಬಾಲಕ ಪ್ರಲ್ಹಾದನನ್ನು ಸಂರಕ್ಷಿಸಿ ಕಂಬದಿಂದ ಹೊರ ಬಿದ್ದು ದುಷ್ಟಹಿರಣ್ಯಾ ಕಶ್ಯಪನನ್ನು ಸಂಹಾರ ಮಾಡಿದವರಾರು?

ಮನೋಹರ– (ಕೈ ಹಿಡಿದು ಬಲತ್ಕಾರ ಮಾಡುವನು.)

ಜಮುನಾ– ದೇವಾ ! ನಾಗಭೂಷಣ !! ನನಗೀಗ ನೀನೆ ಆಧಾರ. ಪಾಹಿಮಾಂ ಪಾಹಿಮಾಂ.....!!! (ಅಷ್ಟರಲ್ಲಿ ಸರ್ಪವು ಬರುವದು,)

ಮನೋಹರ– ಅಯ್ಯೋ ಸರ್ಪವು ! [ಓಡಿ ಹೋಗುವನು.]

ಜಮುನಾ– ದೇವಾ ! ಗರತಿಯಾಗಿ ಬಾಳುವದಕ್ಕಿಂತಲೂ, ನಾನು ನಿನ್ನಡಿಯಲಿ ಚಿರಂತನ ನಿದ್ದೆಗೈಯ್ಯುವೆ.

[ಸೀರೆಯ ಸೆರಗಿನಿಂದ ಕೊರಳಿಗೆ ಹಾಕಿಕೊಳ್ಳುವಳು]

ಆಕಾಶವಾಣಿ– ತಡೆ ತಾಯೀ ! ತಡೆ, ನೀನು ಕಂಠಪಾಶ ಹಾಕಿಕೊಂಡು ಪ್ರಾಣ ನೀಗಬೇಡ "ಆತ್ಮಹತ್ಯ ಮಹಾ ದೋಷ" ಇನ್ನು ಕ್ಷಿಪ್ರದಲ್ಲಿಯೇ ಕೇಳುವಿ "ಪತಿಭಕ್ತಿ ಜಮುನಾ" ಎಂಬ ನಂದಾದೀಪದಂತೆ ಪ್ರಜ್ವಲಿಸು ಸುಮಂಗಲಾಕ್ಷರದ ನಾಟಕ.

ಜಮುನಾ– [ಉಸಿರು ಹಾಕಿ] ನನ್ನ ಬಾಳು ನಂದಾದೀಪವಾಗುವದೇ? ಇಲ್ಲಾ; ಸಂಸಾರವೆಂಬ ಕಾರ್ಗತ್ತಲೆಯಲ್ಲಿ ಕಾಲಿಟ್ಟ ಬಳಿಕ ನಂದಿತು ನನ್ನ ದೀಪ.....!

ಆಕಾಶವಾಣಿ– ನಂದಿಲ್ಲ ತಾಯೀ ನಿನ್ನ ನಂದಾದೀಪ ! ನಿನ್ನ ನಂದಾದೀಪ ಧರ್ಮ ನಂದಾದೀಪವಾಗಿ ಭಾರತ ಭೂಪಟಲದ ಮೇಲೆ ಧ್ರುವತಾರೆಯಂತೆ ಶೋಭಿಸುವದು.

ಜಮುನಾ– [ಉಸಿರು ಬಿಟ್ಟು] ನಿಜ, ನಂದಿಲ್ಲ ನನ್ನ ಧರ್ಮ ನಂದಾದೀಪ ದೇವಾ.......! ಇಷ್ಟು ಮಾತ್ರ ನಿನಗೆ ಹೇಳುವೆ; ನೀನು ಅಣುರೇಣು ತೃಣ ಕಾಷ್ಠಗಳಲ್ಲಿ ಇದ್ದದ್ದು ನಿಜವಿದ್ದರೆ ಭಾರತಬಾಂಧವರಿಗೆ ಭಿತ್ತರಿಸು ನಿನ್ನ ಅಖಂಡ ಶಕ್ತಿಯ ಪ್ರಬಲವನ್ನು.

ಇನ್‌ಸ್ಪೆಕ್ಟರ್– (ಪ್ರ.) ಯಾರು ತಾಯಿ ನೀನು.......?

ಜಮುನಾ– (ಮತ್ತಷ್ಟು ಅಂಜಿ) ನಾ........ನು. ನಾ........ನು.

ಇನ್‌ಸ್ಪೆಕ್ಟರ್– ಭಯಪಡಬೇಡ ತಾಯೀ.

ಜಮುನಾ– ಇದೇ ಊರಿನಲ್ಲಿ ಬೀದಿ ಕಸಗೂಡಿಸುವ ಬಡವಿ.

ಇನ್‌ಸ್ಪೆಕ್ಟರ್– ಆದರೇ, ಅವಳನ್ನೇಕೆ ಖೂನಿ ಮಾಡಿದೆ?

ಜಮುನಾ– [ಸ್ವ] ಮತ್ತಾವ ಬಣ್ಣ ಚಿತ್ರಿಸಿತು ವಿಧಿ? (ಪ್ರಕಾಶ) ಖೂನಿ ಮಾಡಿದವಳು ನಾನಲ್ಲ ಸ್ವಾಮಿ !

ಇನ್‌ಸ್ಪೆಕ್ಟರ್– ಆದರೇ, ಖೂನಿ ಮಾಡಿದವರಾರು? ಈ ಮೂರ್ಛೆಗೈದ ಸ್ತ್ರೀ ಯಾರು?

ಜಮುನಾ– ನಾನರಿಯೇ ಮಹಾಪ್ರಭು ! ಆದರೇ ಇವಳು ಗರತಿಯ ಮಾನ ರಕ್ಷಣೆ ಮಾಡಲು ಬಂದ ಓರ್ವ ಬಾಲೆ.

ಇನ್‌ಸ್ಪೆಕ್ಟರ್– ಅಂದರೇ.....? !

ಜಮುನಾ– ಅಂದರೇ, ಕ್ರೂರ ಕೊಲೆಪಾತಕನೊಬ್ಬ ನನ್ನ ಮಾನಾಪ ಹರಣ ಮಾಡಲೆಳಸಿದಾಗ ಈ ಸತಿಸಾಧ್ವಿನಿ ತನ್ನ ಪಿಸ್ತೂಲಿನಿಂದ ಅವನ ಪಿಸ್ತೂಲಿಗೆ ಗುರಿಯಿಟ್ಟು ಹೊಡೆಯುವಾಗ ತಪ್ಪಿಸಿಕೊಂಡು ಇವಳನ್ನು ಜಂಬೆಯಿಂದ ಇರಿದು ಓಡಿ ಹೋದ.

ಇನ್‌ಸ್ಪೆಕ್ಟರ್– ಹಾಗಾದರೆ ಅವನಾರಮ್ಮಾ..........!

ಜಮುನಾ– ನಾನರಿಯೇ ಸ್ವಾಮಿ ! ಆದರೆ ಆ ವ್ಯಕ್ತಿಯು ಈಕೆಯಂತೆ ಕಪ್ಪುವಸ್ತ್ರವನ್ನು ಧರಿಸಿ ಕಣ್ಣಿಗೆ ಕಪ್ಪು ಕನ್ನಡಕವನ್ನು ಹಚ್ಚಿದ್ದ.

ಇನ್‌ಸ್ಪೆಕ್ಟರ್– ತಾಯೀ, ಈ ಅಪವಾದ ಸದ್ಯಕ್ಕೆ ನಿಮ್ಮ ಮೇಲೆಯೇ ಬಂದಿರುತ್ತದೆ. ಖೂನಿಮಾಡಿದ ವ್ಯಕ್ತಿಯನ್ನು ಕಂಡುಹಿಡಿಯುವವರೆಗೂ ತಾವು ಕಾರಾಗ್ರಹದಲ್ಲಿ ವಾಸಮಾಡಬೇಕಾಗುತ್ತದೆ. ತಾವೇನು ಅನ್ಯ ತಿಳಿಯಕೂಡದು. ಇದರ ಪತ್ತೆಯನ್ನು ಹಚ್ಚಿ ತಮಗೆ ಈ ಕಾರಾಗ್ರಹದಿಂದ ಬಿಡುಗಡೆ ಮಾಡುತ್ತೇನೆ. ನನ್ನ ಮಾತಿಗೆ ನಂಬು ತಾಯಿ. ಪೋಲೀಸ; ಈ ಮೂರ್ಛೆಂಯಾದ ಸ್ತ್ರೀಗೆ ಆಸ್ಪತ್ರೆಗೆ ಸೇರಿಸಿ, ಇವರನ್ನು ಕಾರಾಗ್ರಹಕ್ಕೆ ಕರೆದುಕೊಂಡು ನಡೆಯಿರಿ.

[ಹೋಗುವರು]

೭ ನೆಯ ಪ್ರವೇಶ

[ದೃಶ್ಯ ಕಾರಾಗ್ರಹ]

ಚಂದ್ರಧರ– [ಹುಚ್ಚ ನಗೆ ನಕ್ಕು] ನಗು. ಇನ್ನೂ ನಗು. ಹುಚ್ಚು ಮನವೇ ! ಭವವೆಂಬ ಬಜಾರದಲ್ಲಿ ಪಾರಮಾರ್ಥವೆಂಬ ಮಾಲು ಖರೀದಿ ಮಾಡು. ಅಂದರೇನೆ ದೊರೆಯುವದು ನಿನಗೆ ಮೋಕ್ಷವೆಂಬ ಪದವಿಯ ಸೂಡು. ಇಲ್ಲವಾದೊಡೆ ದೊರಕುವದು ನರಕ ಕುಂಡದ ಮಡು. ಈ ಮೂರು ದಿನದ ಸಂತೆಯಲ್ಲಿ ಪಾಯೆಯನ್ನು ನಂಬೀಗ ಬಂದಿರುವದು ನಿನಗೀ ಪಾಡು. ಬೇಡು.....! ಬೇಡ.....!! ಬಲೆಯಲ್ಲಿ ಬಿದ್ದ ಮೊಲದಂತೆ ಸಂಸಾರ ಶರಧಿಯಲ್ಲಿ ಸಿಲುಕಿ. ನರಳಾಡಬೇಡ. ಬಂಡ ಬಾಳನ್ನು ಬೆನ್ನಿಗೆ ಹಚ್ಚಿಕೊಂಡು ಹಂದಿಯಂತೆ ಹೊರಳಾಡ ಬೇಡ "ಯಾರಿಗೆ ಯಾರಿಲ್ಲ ಪುರಂದರ ವಿಠಲ" ಎಂದು ಧ್ಯಾನ ಮಾಡು ಪರಮೇಶ್ವರನ. ನನಗೀಗ ಕಾಣುವದು ಜಗತ್ತೆಲ್ಲ ಶೂನ್ಯ [ಹುಚ್ಚು ನಗೆ] ಈಗ ನಾನಾಗಿರುವೆ ಜೇಲಿನ ಧಣಿ !

(ಲೈಟ ಆಪ್. ಅದೇ ಕಾರಾಗೃಹದಲ್ಲಿ)

ಜಮುನಾ– [ಅಳುತ್ತ] ಹಾಯ್, ವಿಧಿಯೇ....! ನಿನ್ನ ಲಿಖಿತವನ್ನು ಅಳುಕಿಸುವವರಾರು? ಪತಿಯಿಂದೊಡಗೂಡಿ ಮಕ್ಕಳು, ಸಿರಿ, ಸಂಪತ್ತು ನೋಡುವ ಭಾಗ್ಯ ಕೊಡಲಿಲ್ಲ ಶಿವ.....!! ಕಡೆಗೆ ನನ್ನಾಶಾಂಕುರದ ಕಟ್ಟಡ ಕಾಲಗರ್ಭದಲಿ ಕುಸಿದು ಬಿದ್ದಿತು.

ಪತಿಯಿಂದಗಲಿ, ಮಕ್ಕಳಿಂದ ತೊಲಗಿ, ಬೀದಿಯ ಕಸಗೂಡಿಸುವಾಗ ಕಣ್ಮನ ತಣಿಸುವ ಗೊಂಬೆಯಂತೆ ಕಾಣುವದು ಮಾನವ ಜನಾಂಗ ಎಲ್ಲಿತಿರುಗಿದರೂ ಹೊಟ್ಟೆಯಲ್ಲಿ ಹುಟ್ಟಿದ ಮಗಳೆಂದು ತಿಳಿಯುವದಿಲ್ಲ ಧರ್ಮದಲ್ಲಿ ಕಾಲಿಟ್ಟ ಹೆಣ್ಣಿಗೆ ಇಲ್ಲಿಲ್ಲ ಸ್ಥಾನ ಅವಳಿಗಿಹುದು ಅವಮಾನ, ಸ್ವೇಚ್ಛಾಚಾರಿಯಾಗಿ ತಿರುಗುವ ಸ್ತ್ರೀಗಿಹುದು ಉಚ್ಚ ಸ್ಥಾನ. ದೇವಾ........! ಉಳಿದಿರುವದೊಂದೆ ಆತ್ಮಗೌರವ. ನಿನ್ನ ಫಣಿಯಲ್ಲಿರುವ ಬಾಲಚಂದ್ರನಂತೆ ನನ್ನನ್ನು ರಕ್ಷಿಸು ತಂದೆ [ದುಃಖ]ವಾದ ವಿವಾದದ ಗಡಿಯಲ್ಲಿ ಸಿಲುಕಿಸಿದ ವಿಧಿಯೇ.....!! ನಿನಗೆ ಎಷ್ಟೊಂದು ಬಣ್ಣಿಸಲಿ.....!!!

[ಲೈಟ ಆಫ್]

ದೃಶ್ಯ ಅರಣ್ಯ

ಮನೋಹರ– [ನಗುತ್ತ] ಈ ನಾಟಕವನ್ನು ಪ್ರತೀಕಾರದ ಪ್ರಳಯಾಗ್ನಿಯಲ್ಲಿ ವಿವಿಧ ಬಣ್ಣಗಳಿಂದ ಚಿತ್ರ ವಿಚಿತ್ರವಾಗಿ ಚಿತ್ರಸಿದ ನಾನು, ಅಂದು ಜಮುನೆಯ ಮಾನಹರಣ ಮಾಡಲೆಸಗಿದಾಗ ಪ್ರತ್ಯಕ್ಷ ಪರಮೇಶ್ವರನೇ ಆಕೆಯ ಮಾನ ಸಂರಕ್ಷಣೆ ಮಾಡಿದ. ನಿಜವಾಗಿಯೂ "ಪತಿಭಕ್ತಿ ಜಮುನಾ" ಎಂದರೆ ಅವಳೇ ಅಹುದು. ತಾಯಿ, ನಿಮ್ಮಂಥ ಸಾಧ್ವಿಯರಿಂದಲೇ ನಮ್ಮ ಭಾರತದ ರಾಜ್ಯವು ನಿರಂಕುಶವಾಗಿ ನಡೆಯುತಿದೆ. ಈಗ ಸಧ್ಯಃ ನಾನೇ ಖೂನಿ....! ಸಿ.ಐ.ಡಿ. ಇನ್‌ಸ್ಪೆಕ್ಟರರು ನನ್ನನ್ನು ಹುಡುಕುತ್ತಿರುವರಂತೆ. ಆಗಲಿ, ಮರೆಯಾಗುವೆ.

(ಹೋಗುವನು. ಅದೇ ಅರಣ್ಯ ದೃಶ್ಯ)

ಇನ್‌ಸ್ಪೆಕ್ಟರ್– [ನಿಟ್ಟುಸಿರು] ನಾನು ಸಿ.ಐ.ಡಿ.ಯಾಗಿ ಎಷ್ಟು ತಿರುಗಿದರೂ ಬೀದಿಯಲ್ಲಿ ಖೂನಿ ಮಾಡಿದ ವ್ಯಕ್ತಿಯು ಸಿಗಲೊಲ್ಲನು ಏನು ಮಾಡಬೇಕು? ಇಲ್ಲದೊಡೆ ನಿರಪರಾಧಿಯಾದ ಜಮುನಾ ತಾಯಿಯ ಮೇಲೆ ಖೂನಿ ಮಾಡಿದ ಅಪರಾಧವು ಬರುತ್ತದೆ. ಅದೂ ಇರಲಿ; ಆಸ್ಪತ್ರೆಗೆ ಸೇರಿಸಿದ ಮಹಿಳೆಯು ಬದುಕುವ ಆಶೆಯಿಲ್ಲವೆಂದು ನಿನ್ನೆ ಡಾಕ್ಟರರು ಹೇಳಿದರು. ಏನು ಮಾಡಲಿ....! ಒಂದೂ ತೋಚದಂತಾಗಿದೆ. ಆಗಲಿ, ವಿಶ್ವವನ್ನೇ ಸೃಷ್ಟಿಸಿದ

ವಿಶ್ವಕರ್ಮನಂತೂ ಇದ್ದೇ ಇರುವನಲ್ಲ.

[ಹೋಗುವನು.]

೮ ನೆಯ ಪ್ರವೇಶ

(ದೃಶ್ಯ : ಕೋರ್ಟ)

(ನ್ಯಾಯಾಧೀಶ, ವಕೀಲ, ಇನ್ನುಳಿದವರು)

ಚಪರಾಸಿ– ಚಂದ್ರಧರಾ ಹಾಜರಾ ಹೈ. [೩ ಸಲ ಒದರುವನು]

(Witness Box ನಲ್ಲಿ ಚಂದ್ರಧರನನ್ನು ತಂದು ನಿಲ್ಲಿಸಿ)

ವಕೀಲ– ನಿನ್ನ ಹೆಸರೇನಯ್ಯಾ?

ಚಂದ್ರಧರ– [ಹುಚ್ಚು ನಗೆಯಿಂದ ನಗುವನು.]

ವಕೀಲ– ನಿನ್ನ ಹೆಸರೇನಯ್ಯಾ?

ಚಂದ್ರಧರ– ನನ್ನ ಹೆಸರು [ನಕ್ಕು] ಚಂದ್ರಧರ.

ವಕೀಲ– ಧರ್ಮ ಗ್ರಂಥವನ್ನು ಮುಟ್ಟಿ ಸತ್ಯವಾಗಿ ಹೇಳು?

ಚಂದ್ರಧರ– [ನಕ್ಕು] ಧರ್ಮಾಧರ್ಮಗಳ ಮರ್ಮವನ್ನು ತಿಳಿಯದ ಕರ್ಮಯೋಗಿ ನಾನು [ನಕ್ಕು] ಸತ್ಯವಾಗಿ ಹೇಳುತ್ತೇನೆ.

ವಕೀಲ– ಕಮಲಾದೇವಿಯವರನ್ನು ಕೊಲ್ಲಿಸಿದವನು ನೀನೇ ಅಲ್ಲವೇ?

ಚಂದ್ರಧರ– [ನಕ್ಕು] ಕಮಲಾದೇವಿಯ ಪ್ರಾಣಪಕ್ಷಿ ಹಾರಿ ಹೋಗಿ ಸ್ವರ್ಗ– ನರಕಗಳ ತಾಕಲಾಟದಲ್ಲಿ ತೊಳಲಾಡುತ್ತಿರುವಾಗ ನೀವು ನನಗೆ ಆಕೆಯ ವಿಷಯವನ್ನು ಕೇಳುತ್ತೀರಾ? [ನಕ್ಕು] ಅಲ್ಲಲ್ಲಾ ನಾನಲ್ಲ ಕೊಲ್ಲಿಸಿದವನು. ಹೌದು, ಹೌದು........! ನಾನೇ ಅಲ್ಲಲ್ಲಾ.

ನ್ಯಾಯಾಧೀಶ– (Order, Order) ಆರ್ಡರ್, ಆರ್ಡರ್.

ವಕೀಲ– (My Lord, He is a fool-man) ಮೈ ಲಾರ್ಡ, ಹೀ ಈಜ ಎ ಫೂಲ ಮ್ಯಾನ. ಇವನು ಹುಚ್ಚನಂತೆ ಕಾಣುತ್ತಾನೆ. ಆದರೆ ಕೊಲ್ಲಿದ ವಿಷಯಕ್ಕೆ ಯಾವದು ಸರಿಯಾದ (Proof) ಪ್ರೂಫ್ ಸಿಕ್ಕಲಾರದ ಕಾರಣ ಮುಂದಿನದನ್ನು (Police Inspector) ಪೋಲೀಸ ಇನ್‌ಸ್ಪೆಕ್ಟರರಿಗೆ ಕೇಳತಕ್ಕದ್ದು.

ನ್ಯಾಯಾಧೀಶ– (Police Inspector) ಪೋಲೀಸ ಇನ್‌ಸ್ಪೆಕ್ಟರರನ್ನು ಬರಮಾಡಿ.

ಚಪರಾಶಿ– (Police Inspector) ಪೋಲೀಸ ಇನಸ್ಪೆಕ್ಟರ್ ಹಾಜರ ಹ್ಯೆ. [೩ ಸಲ ಒದರುವನು.]

(Police Inspector witness box ದಲ್ಲಿ ಬಂದು ನಿಲ್ಲುವನು)

ವಕೀಲ– ಈ ಧರ್ಮಗ್ರಂಥವನ್ನು ಮುಟ್ಟಿ ಸತ್ಯವನ್ನೇ ಹೇಳಿರಿ?

ಪೋ.ಇ– [ಗ್ರಂಥವನ್ನು ಮುಟ್ಟಿ] ನಾನು ಸತ್ಯವಾಗಿ ಹೇಳುವೆನು.

ವಕೀಲ– ಕಮಲಾಬಾಯಿಯವರನ್ನು ಕೊಲ್ಲಿಸಿದವನು ಯಾರು?

ಪೋ.ಇ– ಕಮಲಾಬಾಯಿಯವರನ್ನು ಕೊಲೆ ಮಾಡಿದವನು ಇವನೇ.

ವಕೀಲ– ತಾವು ಹೇಳುವದಕ್ಕೆ ಸಾಕ್ಷಿಗಳು ಇವೆಯೇ?

ಪೋ.ಇ– ಇಲ್ಲಾ; ಆದರೆ ಇವನ ಕೈಯಲ್ಲಿ ಪಿಸ್ತೂಲ ಮಾತ್ರ ಹಿಡಿದಿದ್ದ. ಈ ಆಧಾರದಿಂದ ಇವನೇ ಕೊಲೆ ಪಾತಕನೆಂಬುದಕ್ಕೆ ಸರಿಯಾದ ಆಧಾರ.

ನ್ಯಾಯಾಧೀಶ– ಸರಿ. ನೀವು ಅಲ್ಲಿಗೆ ಹೋದಾಗ ವೇಳೆ ಎಷ್ಟು?

ಪೋ.ಇ– (My Lord) ಮೈ ಲಾರ್ಡ, ಸುಮಾರು ಸಂಜೆಯ ೪ ಗಂಟೆ.

ವಕೀಲ– ಹಾಗಾದರೆ ನಿಮಗೆ ಈ ಸುದ್ದಿ ಹೇಗೆ ತಿಳಿಯಿತು?

ಪೋ.ಇ– ನಮ್ಮ (Police station) ಪೋಲಿಸ ಸ್ಟೇಶನಿಗೆ ಫೋನ ಬಂದಿತು.

ವಕೀಲ– ಏನಂದು

ಪೋ.ಇ– ಚಾಮುಂಡೇಶ್ವರಿ ರೋಡ ಹೌಸ ನಂ. ೪೨೦ ಮನೆಯಲ್ಲಿ ಖೂನಿಯಾಗಿದೆ; ತೀವ್ರ ಬನ್ನಿ ಅಂತ. ಈಗ ನಾನು ಇಬ್ಬರು ಪೋಲಿಸರೊಡನೆ ಹೋಗಿ ನೋಡುವಷ್ಟರಲ್ಲಿ ಶವ ಸಿಕ್ಕಿತು ಖೂನಿ ಮಾಡಿದ ಅಪರಾದಿಯು ನಿಂತಿದ್ದ.

ವಕೀಲ– ಸರಿ; ಫೋನ ಮ್ಹಾಡಿದವರು ಯಾರು?

ಪೋ.ಇ– ನಾನರಿಯೆ; (My Lord) ಮೈ ಲಾರ್ಡ. ಆದರೆ ಇದೇ ವ್ಯಕ್ತಿಯ ಕೈಯಲ್ಲಿ ಪಿಸ್ತೂಲ ಮಾತ್ರ ಇತ್ತು.

ವಕೀಲ– (Yes My Lord) ಎಸ್. ಮೈ. ಲಾರ್ಡ. ಈ ಎಲ್ಲಾ ಆಧಾರಗಳಿಂದ ನಿಜವಾಗಿ ನೋಡಬೇಕಾದ್ರೆ ಖೂನಿಯೆಂದರೆ

ಇವನೇ ಕಾರಣ. ತಪ್ಪಿಗಾಗಿ ಶಿಕ್ಷೆಯನ್ನು ಕೊಡಬೇಕು.

ನ್ಯಾಯಾಧೀಶ– ಶಿಕ್ಷೆಯನ್ನು ಕೊಡಬೇಕಾದರೆ ಸರಿಯಾದ (Proof) ಪ್ರೂಫ ಸಿಕ್ಕಿಲ್ಲ. ಅಲ್ಲಿಯವರೆಗೆ ಈ (Case) ಕೇಸ ಮುಂದೂಡಲಾಗುತ್ತದೆ.

ವಕೀಲ– (My Lord) ಮೈ ಲಾರ್ಡ, ಸರಿಯಾದ (Proof) ಪ್ರೂಪ ಸಿಕ್ಕ ಮೇಲೆ ಇಂತಹ ಕೊಲೆಪಾತಕರಿಗೆ (According to Indian Penal code No. 108 part No. 2) ಅಕಾರ್ಡಿಂಗಟು ಇಂಡಿಯನ್ ಪಿನಾಲ ಕೋಡ ನಂ. ೧೦೮ ಪಾರ್ಟ. ನಂ. ೨ ರ ಪ್ರಕಾರ ಇವನಿಗೆ ಮರಣದಂಡನೆಯನ್ನು....! ವಿಧಿಸಬೇಕು!!!

ಚಂದ್ರಧರ– [ನಕ್ಕು] ಮರಣದಂಡನೆಯನ್ನು ವಿಧಿಸಬೇಕು.

ವಕೀಲ– ಇವನಿಗೆ ಕರೆದುಕೊಂಡು ಹೋಗಿರಿ (My Lord) ಮೈ ಲಾರ್ಡ; ಇದರಂತೆ ಇನ್ನೊಂದು (Case) ಕೇಸ ಇದೆ.

[ಫೈಲು ಕೊಡುವನು]

ನ್ಯಾಯಾಧೀಶ– ಸರಿ. ಬರಮಾಡಿ.

ಚಪರಾಶಿ– ಜಮುನಾದೇವಿ ಹಾಜರ ಹೈ. [೩ ಸಲ]

[ಜಮುನಾದೇವಿಗೆ ವಿಟ್ನೆಸ್ ಬಾಕ್ಸದಲ್ಲಿ ತಂದು ನಿಲ್ಲಿಸುವರು]

ವಕೀಲ– ಈ ಧರ್ಮ ಗ್ರಂಥವನ್ನು ಮುಟ್ಟಿ ಸತ್ಯವಾಗಿ ಹೇಳಿರಿ.

ಜಮುನಾ– [ಗ್ರಂಥವನ್ನು ಮುಟ್ಟಿ] ಸತ್ಯವಾಗಿ ಹೇಳುತ್ತೇನೆ.

ವಕೀಲ– ನಿಮ್ಮ ಹೆಸರು ಏನು?

ಜಮುನಾ– ನನ್ನ ಹೆಸರು ಜಮುನಾ.

ವಕೀಲ– ನಿನ್ನ ಗಂಡನ ಹೆಸರು?

ಜಮುನಾ– ನನ್ನ ಗಂಡನ ಹೆಸರು ಚಂದ್ರಧರ.

ವಕೀಲ– [ಯೋಚಿಸಿ] ಸರಿ. ಶಾಂತಾದೇವಿಯನ್ನು ಕೊಲೆ ಮಾಡಿದವರು ನೀವೇ ತಾನೇ?

ಜಮುನಾ– ಯಾವ ಶಾಂತ ಪ್ರಭು? ನಾನು ಯಾವದು ಅರಿಯೇ.....?

ವಕೀಲ– ಹೌದು ತಾಯಿ, ನೀವು ಈ ಖೂನಿ ಮಾಡದಿದ್ದರೆ ನಿಮಗೇಕೆ ಹಿಡಿದುಕೊಂಡು ಬರುತ್ತಿದ್ದರು?

ಜಮುನಾ– ನನಗೆ ಒಂದೂ ತಿಳಿಯದು ಪ್ರಭು !

ವಕೀಲ– (My Lord) ಮೈ ಲಾರ್ಡ, ಸರಿಯಾದ (Proof) ಪ್ರೂಫ ಇಲ್ಲ. ಕಾರಣ (Police Inspector) ಪೋಲೀಸ ಇನ್‌ಸ್ಪೆಕ್ಟರರನ್ನು ಬರಮಾಡಿಸಿರಿ.

ನ್ಯಾಯಾಧೀಶ– (Order Order) ಆರ್ಡರ್, ಆರ್ಡರ.

ಚಪರಾಸಿ– (Police Inspector) ಪೋಲೀಸ ಇನ್‌ಸ್ಪೆಕ್ಟರ್ ಹಾಜರ ಹೈ (೩ ಸಲ)

(ಪೋಲೀಸ ಇನ್‌ಸ್ಪೆಕ್ಟರ್ ವಿಟ್ನೆಸ್ ಬಾಕ್ಸಿನಲ್ಲಿ ಬಂದು ನಿಂತು)

ವಕೀಲ– ಈ (Case) ಕೇಸಿಗೆ ಸಂಬಂಧಿಸಿದ Prof ಏನಾದರೂ ಇವೆಯೋ?

ಪೋ.ಇ– ನಾನು ಹೋಗಿ ನೋಡುವಷ್ಟರಲ್ಲಿ ಈಕೆಯು ಆ ಖೂನಿಯಾದ ಸ್ತ್ರೀಯಳ ಹತ್ತಿರ ನಿಂತಿದ್ದಳು. (My Lord) ಮೈ ಲಾರ್ಡ, ವಕೀಲರ ಪರವಾಗಿ ನನಗೆ ಮಾತಾಡಲು ಅನುಮತಿಯನ್ನು ನೀಡಬೇಕು.

ನ್ಯಾಯಾಧೀಶ– (Order Order) ಆರ್ಡರ್, ಆರ್ಡರ್

[ವಕೀಲ ಕೂಡುವನು]

ಪೋ.ಇ– ತಾಯಿ, ಅಂದು ನೀನು ಬೀದಿಯಲ್ಲಿ ಕಸಗೂಡಿಸುವಾಗ ಆ ಗಾಯಗೊಂಡಿದ್ದ ಸ್ತ್ರೀಯು ನಿನ್ನ ಅಡಿಯಲ್ಲಿ ಬಿದ್ದಿರುವದನ್ನೂ ಬಲ್ಲೆಯಷ್ಟೆ?

ಜಮುನಾ– [ಯೋಚಿಸಿ] ಹಾಂ..... ! ಸರಿ ಪ್ರಭು. ಆ ಕರಾಳಮಯ ದೃಶ್ಯವನ್ನು ಪುನಃ ನೆನಪು ಕೊಡುವಿರಾ.....? ! ಅಂದು ಓರ್ವ ವ್ಯಕ್ತಿಯು ನನ್ನ ಮಾನಾಪಹರಣ ಮಾಡುವಾಗ ಆ ಮಹಾಸಾಧ್ವಿನಿಯಾದ ಯೋಗಿಯೇ ನನ್ನ ಧರ್ಮವನ್ನು ಕಾಪಾಡಿದಳು.

ವಕೀಲ– ಅಂದರೆ ಆ ಶಾಂತಾಳ ಖೂನಿ ಮಾಡಿದವರು ನೀವಲ್ಲವೇ?

ಜಮುನಾ– ನಾನಲ್ಲ ಪ್ರಭು.....! ಆಕೆಯು ನನ್ನ ಮೇಲೆ ಆವರಿಸಲು ಬಂದ ವ್ಯಕ್ತಿಗೆ ಗುಂಡು ಹಾರಿಸಿದಳು, ಆ ವ್ಯಕ್ತಿಯ ಗುಂಡು ತಪ್ಪಿಸಿಕೊಂಡು

ಜಂಬೆಯಿಂದ ಹೊಡೆದೋಡಿದ. ಅಷ್ಟರಲ್ಲಿಯೇ ಇವರು ಬಂದು ನಿರಪರಾಧಿಯಾದ ನನ್ನನ್ನು ಹಿಡಿದು ತಂದಿರುವರು.

ವಕೀಲ– ಸರಿ ತಾಯಿ, ಆ ವ್ಯಕ್ತಿ ಯಾರು?

ಜಮುನಾ– ನಾನು ಅರಿಯೇ ಪ್ರಭು.

ವಕೀಲ– ಹಾಗಾದರೆ ಅವರ ಉಡುಪು ಹೇಗೆ ಇತ್ತು?

ಜಮುನಾ– ಕಪ್ಪು ವಸ್ತ್ರವನ್ನು ಧರಿಸಿದ್ದ. ಕಣ್ಣಿಗೆ ಕನ್ನಡಕವನ್ನು ಹಚ್ಚಿದ್ದ !!

ವಕೀಲ– ಸರಿ. (My Lord) ಮೈ ಲಾರ್ಡ, ಇದೂ ಒಂದು ವಿಚಿತ್ರವಾದ (case) ಕೇಸ ಇದೆ. ಆ ವ್ಯಕ್ತಿಯನ್ನು ಪತ್ತೆ ಹಚ್ಚುವವರೆಗೂ ಇದರ ರಹಸ್ಯವು ಹೊರಬೀಳುವದಿಲ್ಲ.

(ಅಷ್ಟರಲ್ಲಿ ಶಾಂತಾ ಆಸ್ಪತ್ರೆಯಿಂದ ಪಟ್ಟಿ ಬಿಗಿದುಕೊಂಡು ನ್ಯಾಯಾಲಯಕ್ಕೆ ಓಡಿ ಬಂದಳು)

ಶಾಂತಾ– (ಉಸಿರು ಬಿಡುತ್ತ) ನನ್ನನ್ನು ಗಾಯಗೊಳಿಸಿದ ಕುಲಕಂಟಕನು ಮನೋಹರನು. ತಡೆಯಿರಿ ಪ್ರಭು....!

ನ್ಯಾಯಾಧೀಶ– (Order Order) ಆರ್ಡರ್ ಆರ್ಡರ್, ಯಾರು ಈ ಸ್ತ್ರೀಯಳು?

ಪೋ.ಇ– ಇವಳೆ ಆ ಗಾಯಗೊಂಡಿದ್ದ ಸ್ತ್ರೀ ಶಾಂತಾ, (My Lord) ಮೈ ಲಾರ್ಡ.

ಜಮುನಾ– (ಸ್ವ) ಏನು? ಶಾಂತಾಽ.....! ನಿಜವೇ....? ನನ್ನ ಕಣ್ಣುಗಳನ್ನು ನಂಬಲೇ?

ಶಾಂತಾ– ನ್ಯಾಯಾಧೀಶರೆ, ಈಕೆಯು ನನ್ನನ್ನು ಗಾಯಗೊಳಿಸಿಲ್ಲ.

(ಅಷ್ಟರಲ್ಲಿ ಸಿದ್ಧಿ, ಸಿದ್ದಪ್ಪ ಮನೋಹರನಿಗೆ ಹಿಡಿದುಕೊಂಡು ಬರುವರು.)

ಸಿದ್ದಪ್ಪ– ಬಾರೋ ನನ್ಗೆಣಿಯಾ, ಎಲ್ಲಿಗೆ ಓಡಿ ಹೋಗ್ತಿ? ಇಷ್ಟ ದಿವ್ಸ ಹಸಿ ಹುಲ್ಲ ಮೇದ ಹೋದ ಹೋರಿಹಂಗ ಡರ್ಕಿ ಒಕ್ಕೋ ಓಡ್ಯಾಡ್ತಿದ್ದೆಲ್ಲೋ ನನ್ನ ಜೋಕ್ಮಾರ.

ಸಿದ್ಧಿ– ಯಾಕಪ್ಪ ಶೂರ? ಕಂಡ ಕಂಡ ಹೆಣ್ಮಕ್ಕಳಿಗಿ ಗುಡ್ಡಮಾರ್ನಿಂಗ

ಕೊಡಾಕ ಬರ್ತಿದ್ದೆಲ್ಲ ಫಕೀರಾ.

ಪೋ.ಇ– ತಾ ತಾಪಿಲ್ಲಿಗೇ....?....!

ನ್ಯಾಯಾಧೀಶ– (Order Order) ಆರ್ಡರ್, ಆರ್ಡರ್.

ವಕೀಲ– ಏನು ಹೇಳುವದೆಲ್ಲ ಸರಿಯಾಗಿ ಹೇಳಿರಿ? ಇದು ನ್ಯಾಯ ಮಂದಿರ.

ಸಿದ್ದಪ್ಪ– [ದುಃಖ] ದೇವ್ರ ! ನಮ್ಧಣೇರ ಮನಿ ಹತ್ತಿ ಬಿತ್ತಿ ಅವರ ತಂಗಿನ್ನ ಕೆಡಿಸಿದ್ದಿವನೇ ಪತಿಭಕ್ತಿ ಜಮುನಾ ತಾಯಿಗೆ ಮನೆ ಬಿಡ್ಸಿದ ಪುಣ್ಯಾತ್ಮನೇ ಇವನು.

ವಕೀಲ– [ಮಹೋಹರನಿಗೆ] ನಿನ್ನ ಹೆಸರೇನಯ್ಯಾ?

ಮನೋಹರ– ನನ್ನ ಹೆಸರು ಮನೋಹರ.

ವಕೀಲ– [ಜಂಬೆ ತೋರಿಸಿ] ಇದು ನಿಮ್ಮದಲ್ಲವೇ?

ಮನೋಹರ– ಇದು.......! ನನ್ನದಲ್ಲ.....!!

ವಕೀಲ– ಹಾಗಾದರೆ ಇದರ ಮೇಲಿರುವ ಹೆಸರು ಓದಿ ನೀವೇ ಹೇಳಿರಿ.

ಮನೋಹರ– [ಅಂಜುತ್ತ ಓದುವನು] ಮನೋಹರ ಕಂಟ್ರಾಕ್ಟರ್.

ವಕೀಲ– ನೀವು ಕಂಟ್ರಾಕ್ಟರ್ ಹೌದಲ್ಲವೇ?

[ಶಾಂತಾಳನ್ನು ಉದ್ದೇಶಿಸಿ]

ವಕೀಲ– ಶಾಂತಾಬಾಯಿಯವರೇ ತಮ್ಮ ಮನೆಯ ನಂಬರ ಮತ್ತು ಯಾವ ರೋಡ ತಮ್ಮ ವಿಳಾಸವನ್ನು ಸರಿಯಾಗಿ ಹೇಳಿರಿ.

ಶಾಂತಾ– ಪ್ರಭು, ನನ್ನ ಹೆಸರು ಶಾಂತಾ. ಮನೆಯ ನಂಬರ ೪೨೦, ಚಾಮುಂಡೇಶ್ವರಿ ರೋಡ.

ಜಮುನಾ– ಶಾಂತಾ.......!!

ವಕೀಲ– [ಆಶ್ಚರ್ಯ] (My Lord) ಮೈ ಲಾರ್ಡ, ಈ ಕೇಸಿಗೂ ಹಾಗೂ ಈ ಮೊದಲೇ ನಡೆದ ಕೇಸಿಗೂ ಈ ವಿಷಯ ಸಂಬಂಧಪಟ್ಟಂತೆ ಕಾಣಿಸುತ್ತದೆ. ದಯಮಾಡಿ ಆ ಹುಚ್ಚ ವ್ಯಕ್ತಿಯನ್ನು ಬರಮಾಡಿ

[ಚಂದ್ರಧರನಿಗೆ ಹಿಡಿದುಕೊಂಡು ಬರುವಷ್ಟರಲ್ಲಿಯೇ
ಮನೋಹರನನ್ನು ನೋಡಿ]

ಚಂದ್ರಧರ– ಮತ್ತೆ ಬಂದೆಯಾ? ಮಿತ್ರದ್ರೋಹಿ......! ಕಪ್ಪಾದ ಮುಖವನ್ನು ತೋರಿಸಲು.....!! [ಸಿಟ್ಟು] ಮೊದಲು ತೊಲಗಾಚೆ.

ನ್ಯಾಯಾಧೀಶ– ಈ ನಡೆದ ದುರ್ಘಟನೆಗೆ ಇವನೇ ಕಾರಣನಾದಂತೆ ಕಾಣುತ್ತದೆ. ಆದಕಾರಣ (court) ಕೋರ್ಟ ಇವನಿಗೆ ಮರಣ ದಂಡನೆ ವಿಧಿಸಿದೆ.

[ಜಮುನೆಯು ಸ್ವಾಮಿಯೆಂದು ಗಂಡನ ಪಾದಗಳ
ಮೇಲೆಬೀಳುವಳು.]

ವಕೀಲ– ಎಲ್ಲವೂ ವಿಚಿತ್ರವಾಗಿದೆ.

ಗುರು– [ಪ್ರವೇಶಿಸಿ] ವಿಚಿತ್ರವಲ್ಲ ಸಚಿತ್ರವಾಗಿದೆ. ಅಲ್ಲಿ ನಿಂತಿರುವ ಮೂರ್ಖನೇ ಚಂದ್ರಧರನ ಮನೆಯನ್ನೇ ಮುರಿದು ಹಾಲಾಹಲವನ್ನೆಬ್ಬಿಸಿದ ಮನೋಹರ

ಚಂದ್ರಧರ– ತಾವು ಯಾರು? ಶಿಷ್ಯನ ಹೆಂಡತಿಯ ಮೇಲೆ ಅತ್ಯಾಚಾರ ಗೈದ ಗುರುಗಳೇ? [ನಗುವನು] ನನ್ನ ಹೆಂಡತಿ ಜಾರಿಣಿ, ನನಗೆ ಮುಟ್ಟಬೇಡಿರಿ. ಮುಟ್ಟಿದರೆ ಶಿವನಾಣೆಯಾಗಿದೆ.

ಜಮುನಾ– [ಚಂದ್ರಧರನ ಪಾದ ಹಿಡಿದು ಅಳುತ್ತ] ಸ್ವಾಮಿ, ನಾನಲ್ಲ ಜಾರಿಣಿ.....! ಹಗಲಿರುಳು ಹದಿಬದೆಯ ಧರ್ಮವನ್ನೇ ಹೊದ್ದು ಪತಿನಾಮದಲಿ ಕಾಲಕಳೆದ ಸಾಧ್ವಿನಿ. ನಂಬಿರಿ ಸ್ವಾಮಿ....!!

ಚಂದ್ರಧರ– ನನ್ನ ಹೆಂಡತಿಯೇ....? ಅಲ್ಲಲ್ಲಾ. ಅಂದು ಸತಿಸ್ವಾಧ್ವಿ ಎನಿಸಿಕೊಂಡು, ಅಹಲ್ಯ–ತಾರೆಯರು ಹಾಕಿಕೊಟ್ಟ ಪಂಕ್ತಿಯನ್ನು ಅನುಸರಿಸಿ ಉತ್ತುಂಗ ಶಿಖರದ ಮೇಲೆ ಕಳಸವನ್ನಿಟ್ಟ ಜಮುನೆಯೇ? ಅಲ್ಲಲ್ಲಾ ನನ್ನ ಹೆಂಡತಿ ಜಾರಿಣಿ......! ಮಕ್ಕಳಿಬ್ಬರನ್ನು ಅಡವಿಗಟ್ಟಿದ ಮಾರಿಣಿ....!

ಶಾಂತಾ– ಅಣ್ಣಾ ಅವಳಲ್ಲ ಜಾರಿಣಿ, ಅವಳು ಮಹಾ ಸತಿಸಾಧ್ವಿನಿ, ನನ್ನ ಮಾತು ನಂಬು ಇದೇ ನನ್ನ ಕಡೆಯ ಉಸಿರು. ಅತ್ತಿಗೆ ನನ್ನ ತಪ್ಪಿಗೆ ಕ್ಷಮಿಸುವೆಯಾ?

ಜಮುನಾ– ಸಹೋದರಿ, ಆಗಿಹೋದುದಕ್ಕೆ ಚಿಂತಿಸಿ ಫಲವಿಲ್ಲಾ. ಇದು ನಿನ್ನ ಸ್ವಬುದ್ಧಿಯೂ ಅಲ್ಲ ಸಿದ್ದಮ್ಮಾ ನನ್ನೊಡಲರತುನ ವಿಜಯನೆಲ್ಲಿ?

ಸಿದ್ದಿ– ಬಾರಪ್ಪ ವಿಜಯಣ್ಣಾ, ನಿಮ್ಮ ತಾಯಿಗೆ ನಮಸ್ಕರಿಸು.

ಗುರು– ಬಾ ಜಯ, ನೀನು ಅಗಲಿ ಹೋದ ತಂದೆ ತಾಯಿಗಳಿಗೆ ನಮಸ್ಕರಿಸಲು ಬಾ.

ಶಾಂತಾ– [ಬಿಕ್ಕುತ್ತ]....ಅಣ್ಣಾ, ನಿಮ್ಮೆಲ್ಲರ ಮಂಗಲವನ್ನು ನೋಡಬೇಕೆಂದಿದ್ದೇನೆ. ಸ್ವೀಕರಿಸು ನಿನ್ನ ಸತಿಯನ್ನು. [ಸಾಯುವಳು.]

ಚಂದ್ರಧರ– ಜಮುನಾ....!! [ಅಪ್ಪಿಕೊಳ್ಳುವನು.]

[ಜಯ–ವಿಜಯರಿಬ್ಬರೂ ತಂದೆ–ತಾಯಿಗಳಿಗೆ ನಮಸ್ಕರಿಸುವರು.]

ಗುರು– [ನಕ್ಕು ಸ್ವಗತ] ಹೇಗಿದೆ ದೈವಬರಹ? "ಬಾರದು ಬಪ್ಪದು. ಬಪ್ಪದು ತಪ್ಪದು." [ಪ್ರಕಾಶ] ಚಂದ್ರಧರಾ, ಅಗಲಿ ಹೋದ ದಂಪತಿಗಳು ಇಂದು ಒಂದಾದುದಕ್ಕೆ ನನಗೆ ಮಹಾದಾನಂದವಾಗಿದೆ. ಭಾರತದ ಆರ್ಯ ನಾರಿಯರೇ, ಇಲ್ಲಿಯ ವರೆಗೆ ಪತಿಭಕ್ತಿ ಜಮುನಾ ತಾಯಿಯ ರುದ್ರ ಛಂದಸ್ಸಿನಿಂದ ಕೆತ್ತಲ್ಪಟ್ಟ ನಾಟಕವನ್ನು ನೋಡಿದ್ದೀರಿ, ಅದರಂತೆಯೇ ತಾವೆಲ್ಲರೂ ಆದರ್ಶ ಪ್ರೇಮದೊಂದಿಗೆ ತಾಯಿ ಜಮುನಾದೇವಿಯಂತೆ ವರ್ತಿಸಿದರೆ ವಿಶ್ವವನ್ನೇ ಸೃಷ್ಟಿಸಿದ ವಿಶ್ವಕರ್ಮನ ಹೃದಯಕ್ಕೂ ಶಾಂತಿ. ಹಾಗೂ ನಿಮ್ಮಲ್ಲರಿಗೂ ಶಾಂತಿ. ಬಾ ಜಯ ವಿಜಯ ಮುರಿದು ಹೋದ ಬಾಳು ಇಂದ ಒಂದಾದುದಕ್ಕೆ ಮಂಗಲ ಗೀತೆಯೊಂದಿಗೆ ಸಮಾಪ್ತಿ ಮಾಡುವಾ ಓಂ ಸ್ವಸ್ತಿ. ಮಂಗಳಮಕ್ಕೆ; ನಾಟಕದ ನಾಡು ಕರ್ನಾಟಕಕ್ಕೆ.

ಜನಗಣ ಮನ ಅಧಿನಾಯಕ ಜಯಹೇ । ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾಥ ಮರಾಠಾ । ದ್ರಾವಿಡ ಉತ್ಕಲವಂಗ
ವಿಂಧ್ಯೆಹಿಮಾಚಲ ಯಮುನಾಗಂಗಾ । ಉಜ್ವಲ ಜಲಧಿತರಂಗಾ ॥
ತವಶುಭ ನಾಮೇ ಜಾಗೇ । ತವಶುಭ ಆಸಿಸ ಮಾಗೇ ॥
ಗಾಹೇ ತವ ಜಯಗಾತ ॥ ಜನಗಣ ಮಂಗಲದಾಯಕ ಜಯ ಹೇ ।
ಭಾರತ ಭಾಗ್ಯವಿಧಾತಾ । ಜಯಹೇ ಜಯಹೇ ಜಯಹೇ ॥

ಜಯ ಜಯ ಜಯ ಜಯಹೇ ॥

===***=====***===

೪

ಕಕ್ಕನ ಕೊಲೆ

(ಸುಂದರ ಸಾಮಾಜಿಕ ನಾಟಕ)

– ಬಸವರಾಜಪ್ಪಗೌಡ ಮಾಲಿಪಾಟೀಲ

ಬಸವರಾಜಪ್ಪಗೌಡ ಮಾಲಿಪಾಟೀಲ, ಬ್ಯಾಗವಾಟ

ಬಸವರಾಜಪ್ಪಗೌಡ ಅವರು ಅಮರೇಗೌಡ ಮತ್ತು ಅಮರಮ್ಮ ದಂಪತಿಗಳ ಉದರದಲ್ಲಿ ಕ್ರಿ.ಶ. ೧೯೪೩ರಲ್ಲಿ ಜನಿಸಿದರು. ಇವರು ಮಾನ್ವಿ ತಾಲೂಕಿನ ಬ್ಯಾಗವಾಟ ಗ್ರಾಮದವರು. ಎಸ್.ಎಸ್.ಎಲ್.ಸಿವರೆಗೆ ಶಿಕ್ಷಣ ಪಡೆದು ಪೋಸ್ಟ್‌ಮಾಸ್ತರರಾಗಿ ಸೇವೆ ಸಲ್ಲಿಸಿದ್ದಾರೆ. ಇಪ್ಪತ್ತು ವರುಷಗಳವರೆಗೆ ಸರಪಂಚರಾಗಿ ಕಾರ್ಯ ನಿರ್ವಹಿಸಿದ್ದಾರೆ. ಹತ್ತು ನಾಟಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಸಿಡಿದದ್ದ ಹೆಣ್ಣು, ಹೃದಯಮೀಟಿದ ಕೋಗಿಲೆ, ನನ್ನ ಹೆಂಡತಿ ಬಲುಜಾಣೆ ಕೆರಳಿದಗಂಡು ಬೆಂಕಿಯ ಚೆಂಡು, ವಿಧವೆಗೆ ಮತ್ತೊಂದು ಮಗುವೆ ನಾಟಕಗಳು ಮುಖ್ಯವಾಗಿವೆ.

ಗ್ರಾಮೀಣ ರಂಗಭೂಮಿಗೆ ಬಸವರಾಜಪ್ಪಗೌಡರ ಕೊಡುಗೆ ದೊಡ್ಡದು. ಇವರ "ಕಕ್ಕನ ಕೊಲೆ" ನಾಟಕವನ್ನು ರಾಯಚೂರ ಜಿಲ್ಲೆಯ ಅನೇಕ ಗ್ರಾಮೀಣ ನಾಟ್ಯ ಸಂಘಗಳು ಪ್ರಯೋಗ ಮಾಡಿವೆ. ಅವುಗಳಲ್ಲಿ ತಲಮಾರಿಯ ಮಾರುತಿ ತರುಣ ನಾಟ್ಯಸಂಘ, ಬ್ಯಾಗವಾಟದ ನೆಹರೂಜಿ ನವತರುಣ ನಾಟ್ಯಸಂಘ, ಕದಗಲ್‌ದ ಟಕ್ಕಲ ಬಸವೇಶ್ವರ ನಾಟ್ಯಸಂಘ, ಮಾರಡಗಿಯ ಕೋರಿಸಿದ್ದೇಶ್ವರ ನಾಟ್ಯಸಂಘ, ಅಮರಾವತಿಯ ಮುಗುಳಖೋಡ ಶ್ರೀ ಸಿದ್ಧರಾಮೇಶ್ವರ ನಾಟ್ಯಸಂಘಗಳು ಪ್ರಮುಖವಾಗಿವೆ. ಗಡಿನಾಡಿನ ಬೆಳಗಲ್ (ತಾ ॥ ಆದೋನಿ) ಚೇಗುಂಟಾ (ತಾ ॥ ಮಕ್ತಲ್) ಗಳಲ್ಲಿಯೂ ಇವರ ನಾಟಕಗಳು ಜನಪ್ರಿಯ ಪ್ರದರ್ಶನ ಕಂಡಿವೆ. ಇವರ "ಕಕ್ಕನ ಕೊಲೆ" ನಾಟಕವನ್ನು ಮೆಚ್ಚಿಕೊಂಡು ಮಾಜಿಮಂಡಲ ಸದಸ್ಯರಾದ ಶ್ರೀ ಶಂಕರರಡ್ಡಿ ಹಂಚಿನಾಳ ಅವರು ಕ್ಯಾಸೆಟ್ ಮಾಡಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿದ್ದುಕೊಂಡು ಹಳ್ಳಿಗಳಲ್ಲಿ ರಂಗಭೂಮಿಯ ಬೆಳವಣಿಗೆಗೆ ಕಾರಣರಾಗಿರುವ ಬಸವರಾಜಪ್ಪ ಗೌಡರಂತವರತ್ತ ನಾಟಕ ಅಕಾಡೆಮಿ ಗಮನಹರಿಸಬೇಕಾಗಿದೆ.

...ಪುರುಷ ಪಾತ್ರ.....

೧) ಸುರೇಂದ್ರ – ಮಾಚೆಸ ಕಂಪನಿಯ ಮಾಲಕ

೨) ಧೀರೇಂದ್ರ – ಸುರೇಂದ್ರನ ಅಣ್ಣನಮಗ, ಕಾಮುಕ

೩) ಮೋಹನ – ಸುರೇಂದ್ರನ ದತ್ತುಮಗ, ಕಥಾನಾಯಕ

೪) ವೀರೇಶ – ಕಂಪನಿಯ ಮ್ಯಾನೇಜರ, ಖಳನಾಯಕ

೫) ಉಮೇಶ – ಮೋಹನನ ಮಿತ್ರ, ಸಬ್ ಇನಸ್ಪೆಕ್ಟರ್

೬) ಅಮರೇಶ – ಸುಶೀಲಳ ಅಣ್ಣ, ಗವಾಯಿ

೭) ಗಂಗಣ್ಣ – ಕಂಪನಿಯ ಆಳು

೮) ಸಂಗಣ್ಣ – ಬಳೀ ವ್ಯಾಪಾರಿ

... ಸ್ತ್ರೀ ಪಾತ್ರ ...

೧) ಸುಶೀಲ – ಮೋಹನನ ಸತಿ, ಸಾಧ್ವಿ

೨) ನೀಲಾ – ನರ್ಸ, ಧೀರೇಂದ್ರನ ಪ್ರೇಯಸಿ

೩) ತಾರಾ – ಗಂಗಣ್ಣನ ಹೆಂಡತಿ, ಬೆಡಗಿನ ಜುಡಿಗಿ

ನಾಂದಿ

ಓಂ ನಮೋ ಚೆನ್ನಬಸವ..... ಓ ನಮೋ ಚೆನ್ನಬಸವ.....
ಓಂ ನಮೋ ಚೆನ್ನಬಸವ.....
ಕರಮುಗಿದು ಬೇಡುವೆವು । ವರ ನೀಡು, ಚೆನ್ನಬಸವ ॥
ಸರಸ ಸಾಹಿತ್ಯಕ್ಕೆ । ನೀಡೆಶವ ।
ಕಾಡನೇ ನಾಡ ಮಾಡಿ ತೋರಿದ । ಅಡವಿ ಅಮರೇಶ್ವರ ಅಧಿಪತಿಯೆ
ಓಂ ನಮೋ ಚೆನ್ನ ಬಸವ ॥
ಕುಷ್ಠ ರೋಗವನು ದೃಷ್ಟಿ ಮಾತ್ರದಿ ಪರಿಹರಿಸಿದ
ಶ್ರೇಷ್ಠ ಮಹಿಮನೆ ॥ ಓಂ ॥
ಹುಟ್ಟು ಗುರುಡಗೆ ದೃಷ್ಟಿ ನೀಡಿದ
ಶ್ರೇಷ್ಠ ಮಹಿಮನೇ ಚೆನ್ನಬಸವ ॥ ಓಂ ॥
ಹಾವು ಕಚ್ಚಿದವಗೆ । ಸಾವು ತಪ್ಪಿಸಿದ
ಮಹಾ ಮಹಿಮನೆ ವರ ನೀಡೋ
ಹುಟ್ಟು ಬಂಜೆಗೆ । ಮಕ್ಕಳ ಕರುಣಿಸಿದ
ಶ್ರೇಷ್ಠ ಮಹಿಮನೆ ಚೆನ್ನಬಸವ ॥ ಓಂ ॥
ಭೇದ ಭಾವವ ದೂಡಿ । ಮೋದದಿಂದ ನಾವ ಕೂಡಿ
ಆದರದಿ ನಿನ್ನ ಪಾದಕ ನಮಿಸುವೆವು ನಟರೆಲ್ಲ ।
ಯೋಗಿ ಚೆನ್ನಬಸವ । ತ್ಯಾಗಿ ಚೆನ್ನಬಸವ ।
ಬಾಗಿ ಬೇಡುವೆನು ಬಸವರಾಜ ॥ ಓಂ ॥ ....

ಪ್ರಥಮ ಪ್ರವೇಶ

– ಧೀರೆಂದ್ರರ ಬಂಗ್ಲೆ –

(ಟೇಬಲ್, ಕುರ್ಚಿ, ಧೀರೇಂದ್ರ ಮೇಲು ಮಾಳಿಗೆಯಿಂದ ಇಳಿದು ಬಂದು ಸಿಗಾರ ಹಚ್ಚಿನಿಂತಿರುವಾಗ ನರ್ಸ ನೀಲಾ ಬರುವಳು)

ನೀಲಾ– ಹಲೋ ಗುಡ್ ಮಾರ್ನಿಂಗ್

ಧೀರೇಂದ್ರ– ಹಲೋ.... ಅಮರಲೋಕದ ಅಪ್ಸರೆಯಂತೆ ವನಪು ವಯ್ಯಾರದಿಂದ ಬಂದ ಸುರ ಸುಂದರಿ ನರ್ಸ ನೀಲಾ ನಿನ್ನ ಸಂಗೀತ ಸುಧೆಯ ಸವಿಗಾಗಿ ಕಾದು ಕುಳಿತಿಹನು ಈ ಮದನ.

ನೀಲಾ– ಓ....ಮದನ, ನೋಡೆನ್ನ ವಯ್ಯಾರ ವದನ, ಹಾಡಲೇ?

ಧೀರೇಂದ್ರ– ಹಾಡು ನೀಲಾ ಹಾಡು. ಹಿಂದಿರುವ ರಸಿಕ ಜನ ಓಡಿ ಬಂದು ನಿನ್ನ ತಬ್ಬಿಕೊಳ್ಳುವಂತೆ ಹಾಡು.

– ನೀಲಳ ಹಾಡು –

ನೀಲಾ– (ಟೈಂ ನೋಡಿ) ಓ....ಟೆನ್ ಫಾರ್ಟಿ, ಹಾಸ್ಪಿಟಲ್ ವೇಳೆಯಾಯ್ತು ನಾನಿನ್ನು ಬರುವೆ ಟಾ....ಟಾ...

ಧೀರೇಂದ್ರ– ಟಾ...ಟಾ...(ನೀಲಾ ಹೋಗುವಳು.)

(ಅಂಚೆಯವನು ಬರುವನು)

ಅಂಚೆಯಾಳು– ಪೇಪರ ಸಾರ್.

ಧೀರೇಂದ್ರ– (ತಿರುಗಿ) ತಾರಯ್ಯ.

ಅಂಚೆಯಾಳು– ತೆಗೊಳ್ಳಿ ಸಾರ್. (ಕೊಟ್ಟು ಹೋಗುವನು.)

ಧೀರೇಂದ್ರ– (ಪೇಪರ ನೋಡಿ ಸ್ವಗತ) ದತ್ತು ಸ್ವೀಕಾರ....(ನಕ್ಕು) ದತ್ತು ಸ್ವೀಕಾರ

ಓ....ಮೈಗಾಡ್ ವಾಟ್ ಕ್ಯಾನ ಐಡು....ಏನು ಮಾಡಲಿ, ನನಗೆ ಸಲ್ಲಬೇಕಾಗಿದ್ದ ಎಲ್ಲಾ ಆಸ್ತಿಯಮೇಲೆ ಯಾವನೋ ಒಬ್ಬ ಕ್ಷುಲ್ಲಕನನ್ನು ದತ್ತು ತೆಗೆದುಕೊಂಡು, ಕಕ್ಕ ಹಾಕಿದನು ನನ್ನ ಅಪಾರ ಆಸೆಯ ಮೇಲೆ ಕಲ್ಲು, ಅದಕ್ಕಾಗಿ ಇಂದು ನನ್ನ ಮನೋಭೂಮಿಯಲ್ಲಿ ಒಮ್ಮಿಂದೊಮ್ಮೆ ಬೆಳೆದು ನಿಂತಿತು ಮಾತ್ಸರ್ಯದ ನೆಲ್ಲು, ದತ್ತು ಬಂದ ಮೋಹನ ಅವನೊಂದು ನನ್ನ ಕಣ್ಣಿಗೆ ಒಣ ಹುಲ್ಲು. ಆ ಹುಲ್ಲನ್ನು ಸುಟ್ಟು ನಾಶ ಮಾಡಬೇಕಾದರೆ ಕಟ್ಟಿಕೊಳ್ಳಬೇಕು ಅವರ ಕೆಟ್ಟ ಮ್ಯಾನೇಜರನಾದ ವೀರೇಶನ ಬೆಂಬಲ, ಇಷ್ಟು ಮಾಡಿದರೇನೇ ಕಷ್ಟವಿಲ್ಲದೇ ಕಡಲಲ್ಲಿ ಮುಳುಗುವದು ನಮ್ಮ ಕಕ್ಕನ ಆಸೆಯ ಹರಿಗೋಲು. (ನಗುತ್ತಾ ಹೋಗುವನು)

—: ಪರದೆ ಬೀಳುವದು :—

===***====***===

೨ನೇ ಪ್ರವೇಶ

– ರಸ್ತಾ –

(ಬ್ಯಾಟ್ ಹಿಡಿದುಕೊಂಡು ಉಮೇಶ, ಮೋಹನ ಎದುರು ಬದುರಾಗಿ ಬರುವರು)

ಉಮೇಶ– ಹಲೋ ಗುಡ್ ಮಾರ್ನಿಂಗ್ ಮೋಹನ.

ಮೋಹನ– ಹಲೋ ಗುಡ್‌ಮಾರ್ನಿಂಗ್ ಉಮೇಶ ಮತ್ತೇನು ಸಮಾಚಾರ?

ಉಮೇಶ– ಸಮಾಚಾರವೇನಿದೆ ಮಿತ್ರಾ, ನೀನು ದತ್ತುಹೋದ ಹತ್ತು ದಿನದಲ್ಲೇ ಈ ಬಡ ಮಿತ್ರನನ್ನು ಮರೆತಿರುವುದೇ ಒಂದು ದೊಡ್ಡ ಸಮಾಚಾರ.

ಮೋಹನ– ಛೇ....ಎಂಥಾ ಮಾತನಾಡುವಿ ಮಿತ್ರ, ನಿನ್ನಂಥ ಜೀವನ್ ಮಿತ್ರನನ್ನು ಮರೆತು ಸಂಪತ್ತಿನಲ್ಲಿ ಬೆರೆತು ಹೋಗಿರುವೆನೆಂದು ತಿಳಿದಿರುವಿಯಾ? ಕನಸಿನಲ್ಲಿಯೂ ಸಹ ನಿನ್ನಂಥ ಜೀವನ ಮಿತ್ರನನ್ನು ಮರೆಯಲಾರೆ.

ಉಮೇಶ– ನೀನು ಮರೆಯಲಾರದ ಮಾನವನೆಂಬುದು ನಾ ಬಲ್ಲೆ ಮೋಹನ್, ಆದರೆ ಧನದ ಮದದಲ್ಲಿ....?

ಮೋಹನ– ಧನದ ಮದದಲ್ಲಿ ಮಿತ್ರರನ್ನು ಮರೆತು ಮಲಗುವ ಮಿತ್ರ ದ್ರೋಹಿ ನಾನಲ್ಲ ಮಿತ್ರ, ನಾನು ನಿನ್ನಂತೆ ಬಡತನದ ಬಿಸಿಲನ್ನು ಸಾಕಷ್ಟು ಬಡಿಸಿಕೊಂಡಿರುವೆ, ಅದಕ್ಕಾಗಿ ನಿನ್ನಂಥ ಬಡ ಮಿತ್ರರ ಬಗ್ಗೆ ಎನ್ನೊಡಲಲ್ಲಿ ಕರುಣೆಯ ಕಡಲು ಕುಣಿದಾಡುತ್ತಿದೆ. ಹೇಳು ಉಮೇಶ ನನ್ನಿಂದ ನಿನಗೆಷ್ಟು ಬೇಕು ಕ್ಯಾಷ್.

ಉಮೇಶ– ಕ್ಯಾಷ, ಧನದ ವರತಿಯೇ ನೀನಾಗಿ ನಿಂತಿರುವಾಗ ಈ ಉಮೇಶನಿಗೆ ಏನು ಕೊರತೆ, ಮುಂದೆ ನೋಡುವಾ ಬೇಕಾದಾಗ ಸಂದೇಹವಿಲ್ಲದೇ ಬಂದು ನಿನ್ನನ್ನು ಯಾಚಿಸುವೆ, ಸಧ್ಯ ಮ್ಯಾಚಿನ ವೇಳೆಯಾಯಿತು ನಡೆ ಮಿತ್ರ

ಮೋಹನ– ನಡೆ ಮಿತ್ರ (ಹೋಗುವರು)

[ಧೀರೇಂದ್ರ, ವೀರೇಶ ಎದುರು ಬದುರಾಗಿ ಬರುವರು]

ವೀರೇಶ– ನಮಸ್ತೆ ಸಾಹುಕಾರರೇ.

ಧೀರೇಂದ್ರ– ನಮಸ್ತೆ ವೀರೇಶ, ನಿನ್ನನ್ನೇ ಭೆಟ್ಟಿಯಾಗಲು ಹೊರಟಿದ್ದೆ.

ವೀರೇಶ– ತಮ್ಮಂಥವರು ನನ್ನಂಥವನ ಭೆಟ್ಟಿಗೆ ಏನಿದೆ ಹೇಳಿ ಅಂಥಹ ಮಹತ್ವದ ಭೆಟ್ಟಿ.

ಧೀರೇಂದ್ರ– ಇದೆ ವೀರೇಶ, ಅದನ್ನು ವಶಮಾಡಿ ಕೊಟ್ಟಿಯಾದರೆ ತಪ್ಪದೇ ಕೊಡುವೆ ನಿನಗೆ ಕೈತುಂಬ ಕ್ಯಾಷ್.

ವೀರೇಶ– ಹಾಗಾದರೆ ಬೇಗ ಬಿಚ್ಚಿರಿ ನಿಮ್ಮ ವಿಷಯ?

ಧೀರೇಂದ್ರ– ವೀರೇಶ, ಆದತ್ತು ಬಂದ ಮೋಹನ ನನಗೊಂದು ಕುತ್ತಾಗಿ ನಿಂತಿರುವನು, ಅದಕ್ಕಾಗಿ ಯಾವುದಾದರೊಂದು ಯುಕ್ತಿಯ ಜಾಲದಿಂದ ಅವನನ್ನು ತಳ್ಳಿ ನಮ್ಮ ಕಕ್ಕನ ಸಂಪತ್ತಿನ ಬಳ್ಳಿಯು ನನ್ನ ಕೈವಶವಾಗುವಂತೆ ಮಾಡಬೇಕು ನೀನು.

ವೀರೇಶ– ಸಾಹುಕಾರರೇ ತಮ್ಮ ವಿಷಯ ಬಹು ಘನ, ಇದಕ್ಕೆ ಬೇಕು ಅಪಾರ ಧನ.

ಧೀರೇಂದ್ರ– ಹಣದ ಎಣಿಕೆ ಮಾಡಬೇಡ ವೀರೇಶ, ಇದೋ ತೆಗೆದುಕೊ. ಹತ್ತು ಸಾವಿರ ಕ್ಯಾಷ್ ಬೇಗಹೇಳು.

ವೀರೇಶ– ಹೇಳುವೆ ಆದರೆ...ತಾವು ಸ್ವಲ್ಪ ಕಳವಳಗೊಳ್ಳಬಹುದು.

ಧೀರೇಂದ್ರ– ಕಲ್ಲೆದೆಯ ಈ ಧೀರೇಂದ್ರನಲ್ಲಿ ಕಳವಳವು ಎಳ್ಳಷ್ಟೂ ಇಲ್ಲ, ಬೇಗ ಹೇಳು ವೀರೇಶ?

ವೀರೇಶ– ಹೇಳುತ್ತೇನೆ ಸ್ವಲ್ಪ ಕಿವಿ ಮುಂದೆ ಮಾಡಿ. (ಕೊಲೆ ಮಾಡೆಂದು ಕಿವಿಯಲ್ಲಿ ಹೇಳುವನು)

ಧೀರೇಂದ್ರ– (ಅಂಜಿ ಸರಿದು) ಏನು....? ನನ್ನ ಕಕ್ಕನ ಕೊಲೆ....?

ವೀರೇಶ– ಹೌದು. ಕೊಲೆ ಮಾಡದಿದ್ದರೆ ಕದಲಲಾರದು ಆ ದತ್ತುಬಂದ ವಿಧಿ ಮತ್ತು ನಿನಗೆ ಎಂದೆಂದಿಗೂ ದೊರೆಯಲಾರದು ನಿನ್ನ ಕಕ್ಕನ ಅಗಣಿತ ನಿಧಿ. ವಿಚಾರಿಸಿ ಒಂದು ನಿರ್ಧಾರಕ್ಕೆ ಬಾ. (ಧೀರೇಂದ್ರ ವಿಚಾರಿಸುವನು)

ಧೀರೇಂದ್ರ– ಬಂದೆ, ನಿನ್ನ ಮಾತಿನಂತೆ ಕೊಲೆಗೈವೆ ಮುಂದೆ?

ವೀರೇಶ– ಮುಂದೆ ಆ ದತ್ತು ಬಂದ ಕತ್ತೆಯಮೇಲೆ ಕೊಲೆಯ ಆರೋಪವನ್ನು ಹಾಕಿ, ಅದನ್ನು ಜೇಲಿನತ್ತ ನೂಕಿ ನಿನ್ನ ಕಕ್ಕನ ಸಂಪತ್ತಿನ ಸಮುದ್ರದಲ್ಲಿ ಸಂತೋಷದಿಂದ ಮುಳುಗಬೇಕು ನೀನು.

ಧೀರೇಂದ್ರ– (ಬೆನ್ನು ತಟ್ಟಿ) ಭಲೇ ವೀರೇಶ ಏನು ನಿನ್ನ ಜಾಲ.

ವೀರೇಶ– ಸಾಹುಕಾರರೇ ನನಗಿನ್ನು ವೇಳೆಯಾಯಿತು ಅಪ್ಪಣೆ ಕೊಡಿ ಬಿಡುವಿದ್ದಾಗ ನಿಮ್ಮ ಬಂಗ್ಲೆಯವರೆಗೆ ಬಂದು ಸಾಕಷ್ಟು ನನ್ನ ಪ್ಲ್ಯಾನಿನ ಪುಟಗಳನ್ನು ತಿರುವಿ ತೋರಿಸುವೆ.

ಧೀರೇಂದ್ರ– ವೀರೇಶ, ಮೂರು ದಿನಕ್ಕೊಮ್ಮೆಯಾದರೂ ನನ್ನ ಬಂಗ್ಲೆಯವರೆಗೆ ಬಂದು ನನಗೆ ಸೂಕ್ತ ಸಲಹೆಗಳನ್ನು ಕೊಟ್ಟುಹೋಗು ಮರೆಯಬೇಡ. (ಹೋಗುವನು)

ವೀರೇಶ– (ಸ್ವಗತ) ಮರೆಯಲಾರೆ, ಮರೆಯಲಾರೆ! ಧೀರೇಂದ್ರ ಊರ ಮುಂದಿನ ಹೊಲದಮೇಲೆ ನ್ಯಾಯದಲ್ಲಿ ನಿನ್ನ ತಂದೆ ನನ್ನ ತಂದೆಯ ಶಿರ ಹರಿದ ಕ್ರೂರ ಕೃತಿಗಳು ಸಾಕಷ್ಟು ನನ್ನ ಸ್ಮೃತಿಯಲ್ಲಿವೆ, ತಂದೆಯ ಸೇಡನ್ನು ಎಂದು ತೀರಿಸಿಕೊಳ್ಳುವೆನೆಂದು ದಿನಾಲೂ ಮನದಲ್ಲಿ ಸೇಡಿನ ಭೇರಿ ಎಡೆಬಿಡದೆ ನುಡಿಯುತ್ತಿದೆ, ಕಾಲವು ಕೂಡಿಬರಲೆಂದು ಕೈ ಕಾದಿದ್ದೆ. ಶಕುನಿ ಸುಯೋಧನನ ಹಿತ ಬಯಸಿದಂತೆ, ನಾನು ನಿನ್ನ ಹಿತ ಬಯಸಿ, ಕೊನೆಗೆ ನಿನ್ನನ್ನು ನೆಲಕ್ಕುರುಳಿಸಿ, ನಿನ್ನ ಸಂಪತ್ತನ್ನು ಮತ್ತು ನೀನು ಆಸೆ ಪಟ್ಟಿರುವ ನಿನ್ನ ಕಕ್ಕ ಸುರೇಂದ್ರನ ಸಕಲ ಕೋಶವನ್ನು ವಶ ಮಾಡಿಕೊಳ್ಳದಿದ್ದರೆ ನಾನು ವೀರೇಶನೇ ಅಲ್ಲ. (ನಗುತ್ತ ಹೋಗುವನು)

–: ಪರದೆ ಬೀಳುವದು :–

===***====***===

೩ನೇ ಪ್ರವೇಶ

–ಅಮರೇಶ ಗವಾಯಿಯ ಮನೆ–

(ಸಂಗೀತ ಸಾಮಗ್ರಿಗಳು, ಸರಸ್ವತಿ ಫೋಟೋ ಸುಶೀಲ ಪೂಜೆ ಮಾಡಿ ಹಾಡು ಹಾಡಿ)

ಸುಶೀಲ– ನಮೋ ತಾಯಿ ಸರಸ್ವತಿ ಸಾಗರದಷ್ಟು ಸಂಗೀತ ಎನ್ನಣ್ಣನಿಗೆ ನೀ ನೀಡಿದರೂ, ಒಂದು ದಿನವಾದರೂ ಕೈತುಂಬ ಹಣ ಕಾಣಲಿಲ್ಲ. ನಾಟಕ ಕಂಪನಿ ಮಾಡಿ, ಮೈತುಂಬ ಸಾಲ ಮಾಡಿಕೊಂಡಿದ್ದಾನೆ, ಆ ಸಾಲದ ಶೂಲದಿಂದ ಬೇಗ ನನ್ನಣ್ಣನನ್ನು ಋಣಮುಕ್ತನನ್ನಾಗಿ ಮಾಡು ತಾಯಿ. (ಕೈಮುಗಿದು ಒಳಗೆ ಹೋಗುವಳು)

ಅಮರೇಶ– ನಮೋ ತಾಯಿ ಶಾರದೆ, ಬಿ.ಎ. ಗ್ರ್ಯಾಜುಯೇಟ ಆದರೂ ನೌಕರಿ ದೊರೆಯದ್ದಕ್ಕಾಗಿ ಒಂದು ನಾಟಕ ಕಂಪನಿ ಮಾಡಿದೆ, ಕಂಪನಿಮಾಡಿ ಇದ್ದ ಮೂರು ಎಕರೆ ಮಾರಿದರೂ ಇನ್ನೂ ಆ ಕ್ರೂರ ಧೀರೇಂದ್ರನಲ್ಲಿ ಮಾಡಿದ ಮೂರು ಸಾವಿರ ರೂ. ಸಾಲ ಹಾಗೆಯೇ ಉಳಿದಿದೆ. ಏನು ಮಾಡಲಿ, ಅಯ್ಯೋ ನನ್ನಂತೆ ಈ ಜಗದಲ್ಲಿ ಎಷ್ಟು ಜನ ಕಲಾವಂತರು ನಿನ್ನನ್ನು ನೆಚ್ಚಿ ಬಡತನದ ಕಿಚ್ಚಿನಲ್ಲಿ ಬಿದ್ದಿಹರೋ ತಿಳಿಯದು. ಹೇಳು ಶಾರದಮಾತೆ ಹೇಳು. ಇದೋ ನನ್ನಮಾತಿಗೆ ನೀ ಓಗೊಡದಿದ್ದರೆ ಮಾಡಿ ಬಿಡುವೆ ನಿನ್ನನ್ನು ಈ ಕ್ಷಣದಲ್ಲಿ ಓಳು. (ಫೋಟೋ ಬಿಸಾಕುವಾಗ ಸುಶೀಲ ಬಂದು ಹಿಡಿದು ನಿಲ್ಲಿಸುವಳು)

ಸುಶೀಲ– ಅಣ್ಣಾ....ಇದೇನು ನಿನ್ನ ಹುಚ್ಚು?

ಅಮರೇಶ– ಹುಚ್ಚಲ್ಲ ತಂಗಿ, ಬಡತನದಿಂದ ಬೇಸತ್ತಿರುವ ನಿನ್ನಣ್ಣನ ಸಂತಾಪದ ಕಿಚ್ಚು....ನಿನ್ನಂಥ ತಿಳುವಳಿಕೆ ತಂಗಿಗೆ ಹೇಳಲೇನು ಹೆಚ್ಚು.

ಸುಶೀಲ– ನೀನು ಹೇಳದಿದ್ದರೂ ನಿನ್ನ ಕಷ್ಟ ನನಗೆ ಸಾಕಷ್ಟು ತಿಳಿದಿದೆಯಣ್ಣ.

ಸ್ವಲ್ಪ ಸಮಾಧಾನ ತಂದುಕೋ.

ಅಮರೇಶ— ಸಮಾಧಾನ....ಹಡಲು ತುಂಬುವಷ್ಟು ಅನ್ನ ಈ ಕಲಾಕಾರನಿಗೆ ದೊರೆಯದಿದ್ದಾಗ ಇನ್ನೆಲ್ಲಿಯ ಸಮಾಧಾನವಮ್ಮ. ತಂಗಿ, ಬಡತನ ಈ ರೀತಿ ಮಾಡಿತಮ್ಮಾ.

ಸುಶೀಲ— ಬಡತನ ಬಂದಿದೆಯೆಂದು ಯಾರಾದರೂ ಹಡದವ್ವನನ್ನು ಹೊಡೆದು ದೂಡಿ ಬಿಡುವರೇ ಅಣ್ಣಾ, ನಮ್ಮ ಮುಖ್ಯಮಂತ್ರಿ ಕಲಾವಂತರಬಗ್ಗೆ ಬಹಳೇ ಕರುಣಾಳುಗಳಿದ್ದಾರೆ. ನೀನು ಅರ್ಜಿ ಸಲ್ಲಿಸಿದರೆ ತಪ್ಪದೇ ನಿನಗೆ ಮಾಶಾಸನ ದೊರೆಯಬಹುದಣ್ಣಾ.

ಅಮರೇಶ— (ತಿರಸ್ಕಾರದಿಂದ) ಮಾಶಾಸನ ಮಂಜೂರಿಯಾಗಿ ಬರುವುದರೊಳಗಾಗಿ ಕಲಾವಂತರ ಕರ್ಮಕಥೆ ಮುಗಿದು ಸ್ಮಶಾನಯಾತ್ರೆ ಸಮೀಪಿಸುವದಮ್ಮ, ಅಂತಹದಕ್ಕೆ ನಾನು ಮನಸ್ಸು ಮಾಡಲಾರೆ. ಇರಲಿ ನಿನ್ನ ನೌಕರಿ ಏನಾಯಿತಮ್ಮ.

ಸುಶೀಲ— ನೌಕರಿ ಕರೆ ಬಂದಿದೆ, ತಿಂಗಳಿಗೆ ಎಂಟು ನೂರು ರೂಪಾಯಿ ವೇತನ.

ಅಮರೇಶ— ಎಂಟು ನೂರು ರೂಪಾಯಿ, ವೇತನ....ಯಾವ ಆಫೀಸನಲ್ಲಮ್ಮಾ?

ಸುಶೀಲ— ಯಾವ ಆಫೀಸನಲ್ಲೂ ಇಲ್ಲ ಅಣ್ಣಾ.

ಅಮರೇಶ— ಹಾಗಾದರೆ ಎಲ್ಲೆಮ್ಮಾ ನಿನಗೆ ನೌಕರಿ ಕರೆ ಬಂದಿದ್ದು?

ಸುಶೀಲ— ಗುಡಗೇರಿ ನಾಟಕ ಕಂಪನಿಯಲ್ಲಿ ಅಣ್ಣಾ.

ಅಮರೇಶ— (ಚೀರಿ) ಸುಶೀಲಾ....ನೀನು ಬಣ್ಣಹಚ್ಚಿ ಈ ಅಣ್ಣನಿಗೆ ಅನ್ನ ಹಾಕಬೇಕೆಂದಿರುರುವೆಯೇನಮ್ಮಾ ಬೇಡಮ್ಮಾ ಬೇಡ, ಉಪವಾಸ ಸತ್ತರೂ ಚಿಂತೆಯಿಲ್ಲ. ಮಾನವಂತರ ಮಗಳಾದ ನೀನು ಮುಖಕ್ಕೆ ಬಣ್ಣ ಹಚ್ಚುವದು ಬೇಡ.

ಸುಶೀಲ— ಮಾನವಂತರ ಮಗಳಾದರೆ, ಮುಖಕ್ಕೆ ಬಣ್ಣ ಹಚ್ಚಬಾರದೇನಣ್ಣಾ? ಡಾವಣಗೆರೆ ವನಮಾಲಾ, ಚಿಂದೋಡಿ ನೀಲಾ, ಬುಡಕುಂಟಿ ಶಾರದಾ, ಗದುಗಿನ ಗೀತಾ, ಅದವಾನಿ ವೀಣಾ ಇವರು ಮಾನವಂತರ ಮಕ್ಕಳಲ್ಲವೇನಣ್ಣಾ, ಆರ್ಥಿಕ ಪರಸ್ಥಿತಿ ಹದಗೆಟ್ಟಾಗ ವಿಧಿ ಇಲ್ಲದೇ ಬಣ್ಣ ಹಚ್ಚಿ ಉಣ್ಣಬೇಕಣ್ಣ, ಉಣ್ಣಬೇಕು.

ಅಮರೇಶ– ನೀನು ಏನು ಉದಾಹರಣೆ ಕೊಟ್ಟರೂ ಈ ನಿನ್ನಣ್ಣನ ಮನ ಒಪ್ಪುವುದಿಲ್ಲಮ್ಮ, ಒಪ್ಪುವುದಿಲ್ಲ.

ಸುಶೀಲ– ಏಕಣ್ಣ ಅನುಮಾನಿಸುವಿ? ಈ ನಿನ್ನ ತಂಗಿಯ ಶೀಲದ ಬಗ್ಗೆ ಸಂಶಯವೇ?

ಅಮರೇಶ– ಶೀಲದ ಬಗ್ಗೆ ಸಂಶಯ ತಾಳಲಿಲ್ಲ, ಬಣ್ಣ ಹಚ್ಚಿದ ಹೆಣ್ಣಿನ ಕೈಹಿಡಿಯಲು ಯಾವ ಪುಣ್ಯಾತ್ಮರು ಮುಂದೆ ಬರುತ್ತಾರೆಂದು ಅನುಮಾನಿಸಿದೆನಮ್ಮಾ.

ಸುಶೀಲ– ಬಣ್ಣ ಹಚ್ಚಿದ ಈ ಹೆಣ್ಣಿನ ಕೈಹಿಡಿಯಲು ಯಾರು ಮುಂದೆ ಬರದಿದ್ದರೂ ಚಿಂತೆಯಿಲ್ಲಣ್ಣ, ನಾನು ಕಲೆಗಾಗಿ ಬಾಳುವೆ, ಕಲೆಗಾಗಿ ಜೀವಿಸುವೆ.

ಅಮರೇಶ– ಕಲೆಗೆ ಬೆಲೆಯಿಲ್ಲಮ್ಮಾ ಈ ಕಲಿಕಾಲದಲ್ಲಿ. ನಿನ್ನಂಥ ಜಾಣ ತಂಗಿಗೆ ಈ ಅಣ್ಣಾ ಹೆಚ್ಚಿಗೆ ಏನೂ ಹೇಳಲಾರನಮ್ಮಾ, ನಿನ್ನ ಬಾಳು ಬಂಗಾರವಾಗಬೇಕೆಂಬುದೇ ನನ್ನ ಮನದ ಹಿರಿಯಾಸೆಯಮ್ಮಾ.

ಸುಶೀಲ– ನಮ್ಮ ಬಾಳು ಬಂಗಾರವಾಗಬೇಕಾದರೆ ಆ ಈಶನ ಒಲುಮೆಯಾದಾಗ ನಾವು ಬಯಸಿದ ಬಯಕೆಗಳೆಲ್ಲ ತನ್ನಿಂದ ತಾನೇ ಬಂದು ನಮ್ಮ ಬಾಳು ನಂದನವನವಾಗುವದಣ್ಣ.

ಅಮರೇಶ– ತಂಗಿ ಸುಶೀಲಾ ನಿನ್ನ ಸುನೀತಿಯ ಸುರಿಮಳೆ ಬಿದ್ದ ಕೂಡಲೇ ಸದ್ದಿಲ್ಲದೇ ಸರಿದು ಹೋಯಿತಮ್ಮಾ ನನ್ನ ಮನದಲ್ಲಿ ಎದ್ದಿದ್ದ ದಾರಿದ್ರದ ಉರಿ.

ಸುಶೀಲ– ಉರಿ ಬರಲಿ, ಸಿರಿ ಬರಲಿ ನಿನ್ನ ಕಲೆಯನ್ನು ಕೈ ಬಿಡಬೇಡಣ್ಣಾ.

ಅಮರೇಶ– ಕೈ ಬಿಡಲಾರೆ, ನಮ್ಮ ಪರಮ ಪೂಜ್ಯರಾದ ಗುರು ಪುಟ್ಟರಾಜ ಗವಾಯಿಗಳಂತೆ ನಾನೂ ದಿಟ್ಟನಾಗಿ ಸಮಾಜದಲ್ಲಿ ಈ ಸಂಗೀತ ಮಾತೆಯ ಸೇವೆಗೈಯುತ್ತ ಸಾಗುವೆ.

ಸುಶೀಲ– ಅಣ್ಣಾ ಈ ಸಂಗೀತಮಾತೆಯ ಸೇವೆಗೈಯುತ್ತ ಸಾಗಿದರೆ ಇಂದಿಲ್ಲ ನಾಳೆ ನಿನಗೆ ಸಂದೇಹವಿಲ್ಲದೆ ಒಲಿಯುವಳು ಆ ಸಿರಿದೇವಿ.

ಅಮರೇಶ– ಆಗಲಿ ತಾಯಿ ನಿನ್ನ ಶುಭ ಹರಕೆಯಿಂದ ಬೇಗ ನಿನ್ನಣ್ಣ ಶಿರಿಯ ಗಿರಿಹತ್ತಲಿ. ಅಡಿಗೆ ರೆಡಿಯಾಗಿದೆಯೇನಮ್ಮಾ?

ಸುಶೀಲ— ರೆಡಿಯಾಗಿದೆ ಬಾ ಅಣ್ಣಾ. (ಸುಶೀಲ ಒಳಗೆ ಹೋಗುವಾಗ ಧೀರೇಂದ್ರ, ವೀರೇಶ ಬಂದು ವಕ್ರವಾಗಿ ನೋಡುವರು)

ಅಮರೇಶ— ನಮಸ್ಕಾರ ಬನ್ನಿ ಸಾಹುಕಾರರೇ ಕುಳಿತುಕೊಳ್ಳಿ.

ಧೀರೇಂದ್ರ— ಕುಳಿತುಕೊಳ್ಳಲು ಬಂದಿಲ್ಲ ಅಮರೇಶ, ಇನ್ನು ಮೂರು ದಿನವಿದೆ, ನಿನ್ನ ವಾಯ್ದಾ. ಆ ವಾಯ್ದಾಕ್ಕೆ ಸರಿಯಾಗಿ ನಮ್ಮ ಹಣ ಮುಟ್ಟಿಸದಿದ್ದರೆ ಈಸಾರಿ ತರಬೇಕಾಗುವದು ನಿನ್ನಮೇಲೆ ಕಾಯ್ದೆ.

ಅಮರೇಶ— ಹಾಗೆ ಮಾಡಿದರೆ ಈ ಬಡ ಸಂಗೀತಗಾರನು ಬದುಕುವದೆಂತು ಸಾಹುಕಾರರೇ....ದಯಮಾಡಿ ಕೇಳಿಕೊಳ್ಳುವೆ ಹತ್ತು ಕಂತುಗಳನ್ನು ಮಾಡಿ.

ವೀರೇಶ— ಅಮರೇಶ ಈ ಕಂತಿನ ಸಂತಿ ನಮ್ಮಲ್ಲಿ ನಡೆಯುವುದಿಲ್ಲ. ನೀನಿಷ್ಟು ಚಿಂತಿಸುತ್ತಿರುವಿ ಎಂದಮೇಲೆ ಸಾಹುಕಾರರ ಸಾಲದಿಂದ ದೂರಾಗಲು ಒಂದು ಉತ್ತಮ ಉಪಾಯ ಹೇಳುವೆ, ಕೇಳು.

ಅಮರೇಶ— ಏನು ಹೇಳು ವೀರೇಶ?

ವೀರೇಶ— ಹೇಳುವುದೇನು ಅಮರೇಶ, ನಿನ್ನ ಸುಂದರ ತಂಗಿ ಸುಶೀಲಳನ್ನು ಸಾಹುಕಾರರಿಗೆ ಕೊಟ್ಟುಬಿಡು, ನಿನ್ನ ಮೂರು ಸಾವಿರ ರೂಪಾಯಿ ಸಾಲವನ್ನು ಮಾಫು ಮಾಡುತ್ತಾರೆ.

ಅಮರೇಶ— ಮುಚ್ಚುಬಾಯಿ ವೀರೇಶ, ಇನ್ನೊಂದಕ್ಷರ ಉಚ್ಚರಿಸಿದೆಯಾದರೆ ನಿನ್ನ ಸಾಹುಕಾರರನ್ನು ನಿನ್ನನ್ನು ಸ್ಮಶಾನಕ್ಕೆ ಕಳಿಸಬೇಕಾಗುತ್ತದೆ ಎಚ್ಚರಿಕೆ.

ವೀರೇಶ— ಎಚ್ಚರಿಕೆ....? ಈ ಧೀರೇಂದ್ರರ ಧೀರತ್ವಕ್ಕೆ ಅಚ್ಚುತನು ಸಹ ಅಚ್ಚರಿಗೊಂಡು ನೋಡುತ್ತಿರುವಾಗ ಯಕಃಶ್ಚಿತ ನೀನು ನಮಗೆ ಎಚ್ಚರಿಕೆಯ ಸರ್ಪವನ್ನು ಬಿಟ್ಟು ಕಚ್ಚಲು ಬರಿಸುವೆಯಾ ಅಮರೇಶ....?

ಧೀರೇಂದ್ರ— ಅಮರೇಶ, ಇನ್ನು ಮೂರು ದಿನದಲ್ಲಿ ನನ್ನ ಮೂರು ಸಾವಿರ ರೂಪಾಯಿ ಹಣ ಮನೆಗೆ ಬಾರದಿದ್ದರೆ ತರುವೆ ನಿನ್ನಮೇಲೆ ಜಪ್ತಿ ವಾರಂಟ್.

ವೀರೇಶ— ವಾರಂಟ್ ತಂದ ಮೇಲೆ ಮನೆಮನೆಗೆ ತಿರುಪೆಬೇಡಿ ಕೊನೆಗೆ

ನಿರಾಶ್ರಿತನಾಗಿ ಕಡಿಯಬೇಕಾಗುವದು, ನೀನು ಕಾಡಿಗೆ ದಂಟು, ಸುಮ್ಮನೆ ನಿನ್ನ ತಂಗಿಗೆ ಸಾಹುಕಾರರ ಕೈಯಿಂದ ಮಾಂಗಲ್ಯ ಕಟ್ಟಿಸಿದೆಯಾದರೆ ನೀನಾಗುವೆ ಈ ಸಿರಿವಂತ ಧೀರೇಂದ್ರನ ನೆಂಟ.

ಧೀರೇಂದ್ರ– ಅಮರೇಶ.....ವೀರೇಶನ ಮಾತಿಗೆ ವಿಚಾರಿಸಿ ಹೇಳಲು ಕೊಟ್ಟಿರುವೆ ನಿನಗೆ ಮೂರು ನಿಮಿಷ ....ನಾನೀಗ ಅರ್ಜಂಟ ಹೋಗಬೇಕಾಗಿದೆ ಕೋರ್ಟಿಗೆ.

ಅಮರೇಶ– (ವಿಚಾರಿಸಿ ಸ್ವಗತ) ಸಾಹುಕಾರನಿಗೆ ನನ್ನ ತಂಗಿಯನ್ನು ಕೊಡಲೆ...? ಛೇ....ಛೇ....ಕೊಡಲಾರೆ?

ವೀರೇಶ– ಇಷ್ಟು ಶಾರ್ಟ್ ಮಾತಿಗೆ ಹಾರ್ಟ ಫೇಲಾಗುವಂತೆ ವಿಚಾರಿಸುವೆಯಲ್ಲಾ ಅಮರೇಶ, ಕಳೆದುಕೊಳ್ಳಬೇಡ ಈ ಲಕ್ಕೀ ಚಾನ್ಸ ಬೇಗ ಹೇಳು.

ಅಮರೇಶ– ಹೇಳುವದೇನು, ಇಂಥಾ ದುರುಳನಿಗೆ ಪ್ರೀತಿಯಿಂದ ಪಾಲನೆಗೈದ ನನ್ನ ತಂಗಿಯ ಕತ್ತನ್ನು ಕೊಯ್ಯಲು ಕೊಡಲಾರೆ.

ಧೀರೇಂದ್ರ– (ನಕ್ಕು) ಕೊಡಲಾರೆ.....ಶನಿದೇವನನ್ನು ಕೆಣಕಿ ನೀನು ಸುಖದಿಂದ ಬಾಳಲಾರೆ ಜೋಕೆ....?

ವೀರೇಶ– ಸಾಹುಕಾರರೇ ಒಳ್ಳೇ ಮಾತಿನಿಂದ ಹೇಳಿದರೆ ಈ ಮಳ್ಳು ಅಮರೇಶ ಕೇಳಲಾರ, ನಮ್ಮ ವೆಂಕಟರಾವ ವಕೀಲರನ್ನು ಕಂಡು ಇವನನ್ನು ಸಂಕಟದಲ್ಲಿ ನೂಕುವ ನಡೆಯಿರಿ.

ಧೀರೇಂದ್ರ– ನಡೆ..... (ಹೋಗುವರು)

–ಪರದೆ ಬೀಳುವದು–

===***===***===

೪ನೇ ಪ್ರವೇಶ

– ರಸ್ತಾ ಸೀನು–

(ತಾರಾ ದಾರದ ರೀಲಹಿಡಿದು ಗಂಗಣ್ಣನಿಗೆ ಎದುರಾಗಿ ಬರುವಳು.)

ಗಂಗಣ್ಣ– ಲೇ.... ತಾರಾ ಮನ್ಯಾಗಿರು ಅಂದ್ರ ಚೈನೀ ಮಾಡಾಕ ಲೈನಾಹಿಡಿದು ಹೊಂಟೀಯಲ್ಲಾ, ಹಿಂಗ ಹುಬ್ಬು ಹಾರಿಸಿಕೊಂತ ಹೊಂಟದ್ದು ನೋಡಿ ನನ್ಗ ಲಬ ಲಬ ಹೊಯ್ಕೋಳ್ಳಾಂಗ ಆಗೈತಿ.

ತಾರಾ– ಹಂಗ್ಯಾಕ ಹೊಯ್ಕೋಳ್ತಿ, ಚೇಳಕಡಿದ ಮಂಗ್ಯಾನಗತಿ ನಾಯೇನ ಚೈನೀ ಮಾಡಾಕ ಹೊಂಟಿಲ್ಲ ಚಂದ್ರಾಮ.

ಗಂಗಣ್ಣ– ಹಂಗಾರ ಎಲ್ಲಿಗೆ ಹೊಂಟೀದ್ಯೋ ಮುನಿರಾಬಾದ ಡ್ಯಾಮಾ

ತಾರಾ– ವಾರದೋರ ಪಾರವ್ವನ ಚೋಲಿ ಹೊಲಿಬೇಕಂದ್ರ ದಾರದ ರೀಲು ಮುಗಿದಿತ್ತು, ಅದ್ಕ....ದಾರಾ ತರಬೇಕಂತ ಹೋಗಿದ್ದೆ.

ಗಂಗಣ್ಣ– ಯಾರಂಗಡಿಗೆ ಹೋಗಿದ್ದಿ....?

ತಾರಾ– ಯಾರಂಗ್ಡಿಗೆ ಹೋಗ್ಲಿ, ನಮ್ಮ ಮನೆಹತ್ತಿರ ಇರುವ ಆ ಮಾರ್ವಾಡಿ ಮದನಲಾಲನ ಅಂಗ್ಡೀಗೆ ಹೋಗಿದ್ದೆ, ಅವಾ ಗಡಾನ ಬಿಡಲಿಲ್ಲ

ಗಂಗಣ್ಣ– ಏನಂದಿ ತಾರಾ, ನಿನ ಮಾತುಕೇಳಿ ನನ್ನ ಹೊಟ್ಯಾಗಬಿತ್ತು ಖಾರಾ.

ತಾರಾ– ಖಾರಾ....ಅಹ....ಹ....ಹ ಅಟ್ಯಾಕ ಸಿಟ್ಟಿಗೇಳತೀಯ ನನ ಸರದಾರ, ಓಟ ನಿಧಾನ್ಸಿ ಕೇಳ ಪೂರಾ.

ಗಂಗಣ್ಣ– ಹಾಗಾದ್ರ ನಿಧಾನ್ಸಿ ಹೇಳ ನನ ತಾರಾ?

ತಾರಾ– ಹೇಳತೀನಿ ತಡೀಯ, ಅಂವ ಗಡಾನ ಕೊಡಲಿಲ್ಲ ಅಂಬಾದಕ ಗಡಾನ ಬಿಡಲಿಲ್ಲ ಅಂದ್ಯ.

ಗಂಗಣ್ಣ– (ಮೀಸೆ ತಿರುವುತ್ತ) ಹೀಗಂದೇನು ಸರಿ ಮತ್ತ ನಾ ಬೇರೆ ತಿಳಿಕೊಂಡಿದ್ದೆ, ಇಲ್ಲಿ ಕೇಳು ತಾರಾ ಈ ಕಲಿಕಾಲದಾಗ ಬರೇ

ಕಾಮನ ಮೊಮ್ಮಕ್ಳು ತುಂಬ್ಯಾರ್ರು.

ತಾರಾ— ತುಂಬ್ಯಾರ, ಏನ್ಮಾಡಬೇಕು ಹೇಳು ಶೂರ.

ಗಂಗಣ್ಣಾ— ಹೇಳದೇನು ಮುನಿ ಅಂದ್ರ ಸಹ ಅವ್ನ ಮನ್ಯಾಕ ಬಿಡಬ್ಯಾರ್ದು.

ತಾರಾ— ನೀ ಯಾವಾಗ್ಲೂ ಇದಽಽ ಸಂಶಯದ ಸರ್ಚ್‌ಲೈಟ ಹಚ್ಚೀಯಲ್ಲಾ.

ಗಂಗಣ್ಣಾ— ಹಚ್ಚಿದ್ದೋಟ ಹಸಾ ಆಗ್ತದ, ಇಲ್ಲಿ ನೋಡು ತಾರಾ ನಿನ್ನ ಮೆಚ್ಚಿಕೊಂಡು ನಮ್ಮೂರಾನ ಗಚ್ಚಿನಮನಿ ಹುಡುಗರು ಹುಚ್ಚರಾಗಿ ಓಡಾಡ್ತವ, ಕಚ್ಚು ಬಿದ್ದೀತು ಸ್ವಲ್ಪ ಹುಷಾರಿಟ್ಟು ಹೊಲಿ.

ತಾರಾ— ಹೊಲಿತೀನೇಳಾ, ನನ್ನ ಸುಲ್ದ ಬಾಳೇಹಣ್ಣಽಽ, ಯಾವನಾರ ಕಣ್ಣಿಡಾಕಬಂದ್ರ ಅವ್ನ ಕಣ್ಣಾಗ ಸುಣ್ಣಾತುಂಬಿ ಮಣ್ಣ ಮಾಡದಿದ್ರ ನನ್ನ ಹೆಸರ ತಾರಾ ಅಲ್ಲಂತ ತಿಳಿ.

ಗಂಗಣ್ಣಾ— ತಿಳಿ ಅಂತ ಒಳಗಿಂದೊಳ್ಗ ಹೊಲಸು ದಂಧಾಮಾಡಿ ಕಡೆಗೆ ಗುಳದಾಳಿ ಹರಕೊಟ್ಟು ತನ್ನ ಮರ್ಜಿಬಂದವನ ಕೂಡ ಮಿರ್ಜಿಕಡೆ ಓಡಿ ಹೋದ ಎಷ್ಟೋ ನಮ್ಮ ದರ್ಜಿ ಹೆಣ್ಣುಗಳು ನನ್ನ ಕಣ್ಣಮುಂದೆ ಅದಾವ. ಅದ್ಕ ನೀ ಮಾತ್ರ ಹಂಗ ಮಾಡಬ್ಯಾಡ ತಾರಾ ನನ್ನ ಪಾಲಿಗೆ ಸಿಕ್ಕ ಮಲ್ಲಿಗೆ ಹಾರಾ.

ತಾರಾ— ತಾರಾನ ಪಾಲಿಗೆ ಸಿಕ್ಕ ಶೂರ, ಅನುಮಾನ ಬಿಟ್ಟು ಇನ್ನು ಮನ್ಮನ ಹಾಡಾನ ಬಾರಾ.

ಗಂಗಣ್ಣಾ— ನೀನೇ ಹಾಡಿಬಿಡಾಽಽ ನನ್ನ ಸೊಲ್ಲಾಪುರ ಹಲ್ವಾ, ಕುತುಗೊಂಡು ಕೇಳ್ತಾನ ಈ ಚೆಲ್ವಾ.

ತಾರಾ— ಹ....ಹ....ಹ.... ಚಲ್ವಾ ಸಿಲ್ವರ ಸಾಮಾನ ಮಾರೋರಗತಿ ಹಂಗ್ಯಾಕ ಕುಂತಿ ತೆಳಗ, ಏಳ ಮ್ಯಾಕ ಇಬ್ರೂ ಕೂಡಿ ಹಾಡಿದ್ರನ ಪದಾ ಕಾಣ್ತಾದ ಕಡ್ಕಾ.

ಗಂಗಣ್ಣಾ— ಕಡ್ಕ ಕಂಡೀತ ಬಿಡ ತಾರಾ, ಅದ್ರ..ನಿನ್ನದಕ ನಂದು ಕೂಡತಿಲ್ಲಾಂತ..."

ತಾರಾ— ಏನಿದು ಕೂಡಾದು...?

ಗಂಗಣ್ಣಾ— ದನೀ....

ತಾರಾ— ದನಿಯ....ಎಲ್ಲಾ ಕೂಡತ್ತ ಸಮ್ಕ ಎತ್ತು.

ಗಂಗಣ್ಣ– ಇಲ್ಲಿಲ್ಲ...ನೀನೇ ಮೊದ್ಲು ಎತ್ತು ಮತ್ತ ಹೂಡಬ್ಯಾಡ ಗತ್ತು.

ತಾರಾ– ಗತ್ತ್ಯಾಕ ಹೂಡಂದ್ಯಾ ನನ್ನ ನತ್ತು.

ಗಂಗಣ್ಣ– ಆಗಾರಾ ಎತ್ತು.

–ಪದ–

(ಪದ ಮುಗಿಯುವಾಗ ಸಂಗಣ್ಣ ಬಳೀ ಪೆಟ್ಟಿಗೆಯೊಂದಿಗೆ ಬರುವನು)

ಸಂಗಣ್ಣ– (ಸ್ವಗತ) ಅಲಲ....ಕರೆಂಟ ಶಾಟ ಹೊಡದಂಗ ಆತರೀ (ಪ) ಇದೇನ ತಂಗೀ ಮಾವ ನೀನು ಒಳೇs ಉಲ್ಲಾಸ ಹೊಳ್ಯಾಗ ಬಿದ್ದೀರಿ?

ಗಂಗಣ್ಣ– ನಾವು ಉಲ್ಲಾಸ ಹೊಳ್ಯಾಗ ಬಿದ್ದದ್ದ ನೋಡಿ ನಿನಗೆ ಕಳ್ಳಿ ಹಾಲ ಕುಡದಂಗ ಅತೇನಪಾ ಸಂಗ್ಯಾ, ಇರ್ಲಿ ನೀನು ಇಲ್ಲಿಗ್ಯಾಕ ಬಂದ್ಯಪ ಮಂಗ್ಯಾ.

ಸಂಗಣ್ಣ– ಮಂಗ್ಯಾ ಅನಬ್ಯಾಡಪ ಮಾವ, ತಂಗೀ ತಾರವ್ವ ಹತ್ರ ಅಂಗಿ ಹೊಲ್ಸಿಕೊಂಡ ತಿಂಗ್ಳಾಗಿತ್ತ ಆದ್ರ ತಂಗೀಗೆ ರೊಕ್ಕನೇ ಕೊಟ್ಟಿದ್ದಿಲ್ಲ, ಪಾಪ ತಂಗೀರೊಕ್ಕ ಯಾಕ ನುಂಗಬೇಕೆಂತ ಕೊಟ್ಟ ಹೋಗಾಕ ಬಂದಿದ್ನೆಪಾ ಮಾವ.

ಗಂಗಣ್ಣ– ಯಾಕ ನುಂಗೀಪಾ ಸಂಗಣ್ಣ, ತಂಗೀ ಪ್ಯಾಲೆ ಐತೆನಿನ ಕಣ್ಣ, ಅದ್ಕs ಕೊಡಾಕ ಬಂದೀದಿ, ಹೌದಿಲ್ಲೋ ಅದಕ ಸುಮ್ಕ ಕೊಟ್ಟ ಹೋಗಪಾ ಕಾಮಣ್ಣ.

ತಾರಾ– ಏ....ಏ.... ನಮ್ಮಣ್ಣನ ಗುಣ ನೋಡ್ದ ಸುಮ್ಮ ಸುಮ್ಮನ ಹಿಂಗಂದ ಪಾಪಕ ಮುಂದಿನ ಜನ್ಮದಾಗ ಹುಟ್ಟೋದ ನಿ ಮಟ್ಟಿಹೊಡೆ ಕೋಣ.

ಗಂಗಣ್ಣ– ನಾ ಕೋಣರ ಆಗ್ಲಿ, ಕೋರಿ ಸಿದ್ದೇಶನ ಗೂಳ್ಯರ ಆಗಿ ಹುಟ್ಲಿ ನೀ ಮಾತ್ರ ಈ ಅಣ್ಣನ ಬಣ್ಣದ ಮಾತಿಗೆ ಬಿದ್ದೀ ಅಂದ್ರ ಆಗತೀ ನೋಡ ನನಕೈಯಾಗ ಮುದ್ದಿ. (ಸಂಗಣ್ಣಗೆ) ಲೇ ಮುಖ ಏನ ನೋಡ್ತಿ ಸುಮ್ಕ ಹೋಗಲೇ ಖೋಡಿ, ಊದಬ್ಯಾಡ ನಮ್ಮವಳಿಗೆ ಮೋಡಿ.

ಸಂಗಣ್ಣ– ನೋಡ...ತಂಗೀ ಮೂಗ್ತಿ ಮುಟ್ಟಿ ಹೇಳಂದ್ರ ಹೇಳತೀನಿ, ಎಂದೆಂದೂ ಊದೋದಿಲ್ಲ ಮೋಡಿ, ಹಿಂಗ್ಯಾಕ ಓಡಸತೀಯಪಾ ನಿನ್ನ

ಸಂಶಯದ ಗಾಡಿ.

ಗಂಗಣ್ಣ– ಗಾಡಿ ಜಗ್ಗಿ ಹಾರತಿದ್ದಂಗಾದಲೇ ನಿನ್ನ ನಾಡಿ, ಹುಗ್ಗಿ ಹುಣಿಸಿ ಕಳಸ್ತೀನಿ ತಡಿ, ನನ್ನೆದರಿಗೆ ಮೂಗ ಮುಟ್ಟತೀಯ ಮಗನಾ ಎಲೆ ಸಂಗ್ಯಾ....ಎಲೆ ನಿಂಗ್ಯಾ....ಎಲೇ....ಮಂಗ್ಯಾ (ಬಡಿದು ಹೋಗುವನು ತಾರಾ ಬಿಡಿಸುವಳು)

ತಾರಾ– ಏ...ಏ...ಚೆಲುವಾ ಸಂಗ್ಯಾ ಮಂಗ್ಯಾಂತ ಹಂಗ್ಯಾಕ ಹಿಲಾಲು ಆಡೋರ ಗತಿ ಕುಣಿದಾಡತೀ ನಿನ್ನ ಸಂಶಯಕ್ಕ ಸ್ವಲ್ಪರ ಆದಿಲ್ಲ ಮಿತಿ.

ಗಂಗಣ್ಣ– ಮಿತಿ ಮಿತಿ ಅಂದು ಹಿಂಗ ಬಿಡಿಸ್ತೀ ಎಂದು ಮುಗಿತೈತೋ ಮುಗಿತೈತೆ ನನ್ನ ಕೈಯಾಗ ನಿಮ್ಮಣ್ಣನ ಕತಿ, ಆಗ ತಿಳಿತೈತಿ ರತಿ.

ತಾರಾ– ತಿಳಿದಾಗ ಹಾಕುವಂತಿ ನಾಕಲತ್ತಿ ಹೀಗಾಕ ಅಷ್ಟು ಅಷ್ಟ ಹೇಳತೀ ವತ್ತೀ (ಸಂಗಣ್ಣನಿಗೆ) ತಾಯಣ್ಣ ನೀ ನಮ್ಮ ಹೀರ್‍ಯಾನ ಮಾತ ಮನಸಿಗೆ ಹಚ್ಕೋಬ್ಯಾಡ.

ಸಂಗಣ್ಣ– ತಗಳವ ತಂಗಿ, ಏನಮಾಡ್ತಿ ಮಾವನ ತಲ್ಯಾಗ ತುಂಬ್ಯಾದ ಸಂಶಯದ ಪುಂಗಿ.

ಗಂಗಣ್ಣ– ಸುಮ್ಮಾ ಹೋಗಲೇ ಹುಚ್ಚಮಂಗೀ ಒಂದು ಕೊಡಣಾರ್ದ ಕೊಟ್ನಂದ್ರ ಆಗSS ಆಗ.... ಆದೋನಿತನಕ ಹಾರೀ.

(ಬಡಿಯ ಹೋಗುವನು, ಸಂಗಣ್ಣ ಓಡಿ ಹೋಗುವನು).

–ಪರೆದೆ ಬೀಳುವದು–

===**====**===

೫ನೇ ಪ್ರವೇಶ

– ಧೀರೆಂದ್ರರ ಬಂಗ್ಲೆ –

(ನೀಲಾ ಸ್ಟೆತೋಸ್ಕೋಪ ಹಿಡಿದುಕೊಂಡು ಪ್ರವೇಶಿಸುವಳು)

ನೀಲಾ– ಹಲೋ ಡಾರ್ಲಿಂಗ.

ಧೀರೇಂದ್ರ– ಹಲೋ ಕಮಾನ ನರ್ಸ ನೀಲಾ, ಹೌ ಆರ್ ಯು?

ನೀಲಾ– ಆಯಾಮ್ ಕ್ವಾಯಿಟ್.

ಧೀರೇಂದ್ರ– ಚೆನ್ನಾಗಿದ್ದೀಯ ಚಿನ್ನ?

ನೀಲಾ– ಚೆನ್ನಾಗಿದ್ದೇನೆ, ನೀವು ಚೆನ್ನಾಗಿಲ್ವಾ? ಆರಾಮಿಲ್ಲಾ ಎಂದು ಹೇಳಿ ಕಳಿಸಿದ್ರೆಲ್ಲಾ?

ಧೀರೇಂದ್ರ– ಕಳಿಸಿದ್ದೆ, ಆದರೆ ಈ ನಿನ್ನ ನಗೆಮುಖ ನೋಡಿದ ಕೂಡಲೇ ಸೀಕ್?

ನೀಲಾ– ಸೀಕ್....ಏನಾಯ್ತು ಹೇಳಿ?

ಧೀರೇಂದ್ರ– ಸೀಕ್, ನೀಲಾ ಬಂದ್ರೆ ಅವಳಿಗೆ ಕೋಲ್‌ಡ್ರಿಂಕ್ಸ ಕುಡಿಸೆಂದು ಹೇಳಿ ಓಡಿಹೋಯ್ತು.

ನೀಲಾ– ಓಡಿಹೋಯ್ತೆ? ಒಳ್ಳೇ ರಸಿಕರು ನೀವು. ಅಬ್ಬಬ್ಬಾ, ಏನು ಬಿಸಿಲು....

ಧೀರೇಂದ್ರ– ಬಿಸಿಲೆಂದು ಉಸಿರು ಹಾಕಬೇಡ ನೀಲಾ ನಿನಗಾಗಿ ಕೋಲ್‌ಡ್ರಿಂಕ್ಸ್ ತರಿಸಿದ್ದೇನೆ ಟೇಕ ಇಟ್.

ನೀಲಾ– ಥ್ಯಾಂಕ್ಸ್ (ಇಬ್ಬರೂ ಕುಡಿಯುವರು)

ಧೀರೇಂದ್ರ– ನೀಲಾ ಊರಲ್ಲಿ ಮತ್ತೇನು ಸಮಾಚಾರ?

ನೀಲಾ– ಸಮಾಚಾರವೇನಿದೆ, ತಮ್ಮನ್ನು ಲವ್ ಮಾಡಿದ್ದಕ್ಕಾಗಿ ಈ ಊರಿನ

ಮುನ್ಸಿಪಾಲ್ಟಿ ಚೇರಮನ್ನರ ಹೃದಯದಲ್ಲಿ ಬಿದ್ದಿದೆ ಬೆಂಕಿ, ಅದಕ್ಕಾಗಿ ಒಂದೇಸವನೆ ಅದುರುತ್ತಿದೆ ಈ ನಿಮ್ಮ ಜಿಂಕಿ.

ಧೀರೇಂದ್ರ– ಅದುರಬೇಡ ನನ್ನ ಚದುರೆ ಇನ್ನು ಮೂರು ವಾರದಲ್ಲಿ ಆ ಮುನ್ಸಿಪಾಲ್ಟಿ ಚೇರಮನ್ನರಿಗೆ ಕುಡಿಸಿಬಿಡುವೆ ನನ್ನ ಅವಿಶ್ವಾಸ ಠರಾವಿನ ಮದಿರೆ.

ನೀಲಾ– ತಾವು ಇಂಥಾ ಧೀರರಿರುವೆಂದು ತಿಳಿದು ತಮ್ಮ ಕೈಹಿಡಿದಳು ಈ ನೀಲಾ. ಇರಲಿ, ಇನ್ನೆಂದು ಕಾಣಿಸುವಿರಿ ಈ ಕೋಮಲೆಯ ಕೊರಳಿಗೆ ಮಾಂಗಲ್ಯ.

ಧೀರೇಂದ್ರ– ಮಾಂಗಲ್ಯ...ಕಾಲವು ಕೂಡಿಬರಲಿ ನೀಲಾ ನನ್ನ ಬಗ್ಗೆ ಅನುಮಾನಿಸಬೇಡ.

ನೀಲಾ– ಅನುಮಾನಿಸಲಾರೆ ನನ್ನರಸ, ಆದಷ್ಟು ಬೇಗ ನನ್ನ ಕಂಠದಲ್ಲಿ ಕಂಡುಬರಲಿ ಕರೇಮಣಿ.

ಧೀರೇಂದ್ರ– ಕರೀಮಣೀ ಎಂದು ಕೊರಗದಿರು ನನ್ನ ಅರಗಿಣಿ ಇನ್ನತ್ತು ತಿಂಗಳಲ್ಲಿ ಕಾಣಿಸುವೆ ನಿನ್ನ ಕತ್ತಿನಲ್ಲಿ ಕರೀಮಣಿ.

ನೀಲಾ– ನಿಜವೇ ರಾಜಾ?

ಧೀರೇಂದ್ರ– ನಿಜ ನೀಲಾ, ಎಲ್ಲಿ ಮೊದ್ಲು ಕೇಳಿಬರಲಿ ನಿನ್ನ ಸುಮಧುರ ಕಂಠದ ಕೋಗಿಲೆಯ ವಾಣಿ.

ನೀಲಾ– ನನ್ನ ಸುಮಧುರ ಕಂಠದ ಜೊತೆಗೆ ನಿಮ್ಮ ಸುಮಧುರ ಕಂಠವು ಜೊತೆಗೂಡಿ ಬರಲಿ.

ಧೀರೇಂದ್ರ– ನೀಲಾ ಪ್ರಾರಂಭವಾಗಲಿ ಪ್ರಣಯಗಾನ.

– ಪದ – ಡೈಲಾಗ್ –

ನೀಲಾ– ಈ ಪ್ರಣಯ ಹಾಡಿನಲ್ಲಿ ಹೊತ್ತು ಓಡಿದ್ದು ಗೊತ್ತಾಗಲಿಲ್ಲ, ನೋಡಿ ನಾನಿನ್ನು ಬರಲೇ?

ಧೀರೇಂದ್ರ– ನೀಲಾ ಮತ್ತ್ಯಾವಾಗ ನಿನ್ನೀ ಮುದ್ದು ಮುಖದ ದರ್ಶನ.....?

ನೀಲಾ– ದರ್ಶನ....ನಾಳೆ ಸಂಜೆ ಮಂಜುನಾಥ ಟಾಕೀಜ ಹತ್ತಿರ ಮಾಡುತ್ತಿರುವೆ.

ಧೀರೇಂದ್ರ– ನಿನಗಾಗಿ ನಾನು ಪೇಟ್ ಮಾಡುವೆ, ಪ್ರೇಮ ಪಂಜರ ಪಿಕ್ಚರ ನೋಡಲು ನೀನು ತಪ್ಪದೇ ಬರಬೇಕು.

ನೀಲಾ– ತಪ್ಪದೇ ಬರುವೆ, ಓ....ಕೇ....

ಧೀರೇಂದ್ರ– ಓ.... ಕೇ....

(ನೀಲಾ ಹೋಗುವಳು)

–: ಪರದೆ ಬೀಳುವದು :–

===***=====***===

೬ನೇ ಪ್ರವೇಶ

(ಗಾರ್ಡನ ಸೀನು)

(ಸುಶೀಲಾ, ಮೋಹನ ಎದುರು ಬದುರಾಗಿ ಬರುವರು)

ಸುಶೀಲ– ಹಲೋ ಗುಡ್ ಮಾರ್ನಿಂಗ್ ಮೋಹನ.

ಮೋಹನ– ಗುಡ್ ಮಾರ್ನಿಂಗ್ ಸುಶೀಲಾ, ಕಾಲೇಜಿಗೆ ಶರಣು ಹೊಡೆದು ಈಗ ನಾಟಕ ಕಂಪನಿ ಸೇರಿಬಿಟ್ಟಿಯಾ, ವಾಟೆ ವಂಡರ್ ?

ಸುಶೀಲ– ಆಶ್ಚರ್ಯದ ಮಾತೇನಿದೆ, ಮನೆತನದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದರಿಂದ ವಿಧಿಯಿಲ್ಲದೇ ನಾಟಕ ಕಂಪನಿ ಸೇರಬೇಕಾಯಿತು.

ಮೋಹನ– ಸುಶೀಲ ನಿನ್ನೆದಿನ ನಿನ್ನ ಸೀತಾ ಪಾತ್ರ ನೋಡಿ ತುಂಬಾ ಮೆಚ್ಚಿಕೊಂಡೆ.

ಸುಶೀಲಾ– ನಿಜವಾಗಿ ಮೆಚ್ಚಿಕೊಂಡಿರಾ.....?

ಮೋಹನ– ಮೆಚ್ಚಿಕೊಳ್ಳದಿದ್ದರೆ ಹುಚ್ಚನಂತೆ ನಿನ್ನಹಿಂದೆ ಇಲ್ಲಿಯವರೆಗೆ ಓಡಿಬರುತ್ತಿದ್ದೇನೇ?

ಸುಶೀಲ– ಸೀತೆಯನ್ನು ಮೆಚ್ಚಿಕೊಂಡ ಶ್ರೀರಾಮಚಂದ್ರ ಕೊನೆಗೆ ವನವಾಸ ಕ್ಕಟ್ಟಿದಂತೆ ತಾವೂ ನನ್ನನ್ನು....?

ಮೋಹನ– ಎಂಥಾ ಮಾತನಾಡುವಿ ಸುಶೀಲಾ ಕೇಳು, ಒಂದೊಮ್ಮೆ ಆ ಸಾಕ್ಷಾತ್ ಕಂತುಹರನು ಸಹ ತನ್ನ ಪ್ರೀತಿಯ ಸತಿಯಂಬರನ್ನು ತೊರೆದು ಸೀತೆಯ ನೆಲೆತಪ್ಪಿ ಅಲೆಯಬಹುದು. ಆದರೆ ಈ ಮೋಹನನು ಮಾತ್ರ ನಿನ್ನಂಥ ಸುಂದರ ಸುಗುಣವತಿ ಸತಿಯನ್ನಗಲಿ ಅಲೆಯಲಾರೆನೆಂದು ನನ್ನ ತಾಯಿಯಾಣೆಮಾಡಿ ಹೇಳುವೆ.

ಸುಶೀಲ– ಮೋಹನ ಕುಪಿತರಾಗ ಬೇಡಿ, ನಿಮ್ಮ ಶಪತಕೇಳಿ ನನ್ನ ಮನಕಾಯಿತು. ಹಿಡಿಸದಷ್ಟು ಸಂತೋಷ.

ಮೋಹನ– ಸಂತೋಷವಾಯಿತೇ ಸುಶೀಲಾ? ನನ್ನೊಡನೆ ಮ್ಯಾರೇಜ್ ಆಗುವ ವಿಷಯ ನಿನ್ನಣ್ಣ ಅಮರೇಶನ ಮುಂದೆ ಹೇಳಿರುವೆಯಾ.

ಸುಶೀಲ– ಹೇಳುವದೇಕೆ, ನನ್ನಾಸೆಯನ್ನೆಂದಿಗೂ ನಿರಾಶೆ ಮಾಡಲಾರ ನನ್ನಣ್ಣ.

ಆದರೆ ನಿಮ್ಮ ತಂದೆಯವರು ಈ ಬಣ್ಣವ ಹಚ್ಚಿದ ಹೆಣ್ಣನ್ನು ನಿಮ್ಮ ಕೈಹಿಡಿಸಲು ಒಪ್ಪಬೇಕಲ್ಲ?

ಮೋಹನ– ಬಣ್ಣ ಹಚ್ಚಿದ ಹೆಣ್ಣಾದರೇನಾಯಿತು ಸುಶೀಲಾ, ನಿನ್ನಲ್ಲಿ ಸದ್ಗುಣವಿಲ್ಲವೇ? ಹೇಳು?

ಸುಶೀಲ– ಹೇಳುವದೇನು ಮೋಹನ, ಸೌಂದರ್ಯ ಸದ್ಗುಣಗಳನ್ನು ನೋಡಲಾರರು ಈ ಕಲಿಕಾಲದ ಜನ, ಅವರಿಗೆ ಬೇಕು ಹೇರಳ ವರದಕ್ಷಿಣೆ ಧನ.

ಮೋಹನ– ಸುಶೀಲಾ ನೀನನ್ನುವದೇನು ಸುಳ್ಳಲ್ಲ, ಆದರೆ ನನ್ನ ತಂದೆಯವರು ಮಾತ್ರ ಹಾಗಿಲ್ಲ.

ಸುಶೀಲ– ಹಾಗಿದ್ದ ಮೇಲೆ ಮೋಹನ ಮತ್ತೇಕೆ ಅನುಮಾನ? ತೀವ್ರ ಬರಲಿ ನನ್ನ ನಿನ್ನ ವಿವಾಹದ ಸುದಿನ.

ಮೋಹನ– ಸುದಿನ ಇಂದಿಲ್ಲ ನಾಳೆ ಬಂದೇ ಬರುವದು ಸಂದೇಹಗೊಳ್ಳದಿರು ಸುಶೀಲ, ಮುಗಿಲಿಗೆ ಮುದ್ದಿಡುವಂತೆ ಹೇಗೆ ಬೆಳೆದಿವೆ ನೋಡು ಬೇವು, ಮಾವು, ನೇರಲ, ಪೇರಲ. (ತೋರಿಸುವನು)

ಸುಶೀಲ– ಆಹಾ....ಹ....ಎಷ್ಟು ನಯನ ಮನೋಹರವಾಗಿದೆ ಈ ನಗರವನ, ಅತ್ತ ಮಾವು ಬೇವುಗಳ ತಂಪು.

ಮೋಹನ– ಇತ್ತ ನೋಡು ಸುಶೀಲಾ ಮಲ್ಲಿಗೆ, ಸಂಪಿಗೆ, ಸೇವಂತಿಗೆಗಳ ಕಂಪು.

ಸುಶೀಲ– ಈ ಕಂಪನ್ನು ಕುಡಿದು ವನದ ಸರ್ವ ಶುಕಪಿಕಗಳು ಇಂಪಾಗಿ ಹಾಡುತ್ತಿರುವವು ಆನಂದದಿ ಕವನ.

ಮೋಹನ– ಸುಶೀಲಾ ಬಣ್ಣಬಣ್ಣದ ಈ ಕಾರಂಜಿಯ ತುಂತುರ ಹನಿಯಿಂದ ಸಂತಸಗೊಂಡ ನನ್ನ ಮನವು ನಿನ್ನೊಡನೆ ಹಾಡಬೇಕೆನ್ನುತ್ತಿದೆ ಘಾಡಾಲಿಂಗನದ ಕವನ.

ಸುಶೀಲ– ಮೋಹನ ಈ ಹೊಂಬಿಸಿಲಿನ ತಂಬೆಲರಿನಲ್ಲಿ ಚುಂಬನದ ಸವಿಯೂಟ ಸವಿಯುವ ಬನ್ನಿ.

– ಪದ – ಡೈಲಾಗ್ –

(ಹಾಡುತ್ತ ಹೋಗುವರು)

–: ಪರದೆ ಏಳುವದು :–

===***===***===

೭ನೇ ಪ್ರವೇಶ

–(ಸುರೇಂದ್ರ ಸಾಹುಕಾರ ಬಂಗ್ಲೆ)–

(ಟೇಬಲ್ ಕುರ್ಚಿ, ವೀರೇಶ ಸಿಗಾರ ಸೇದುತ್ತ ಬರುವನು.)

ವೀರೇಶ– ಸುರೇಂದ್ರ ಸಾಹುಕಾರರ ಮ್ಯಾಚೆಸ ಕಂಪನಿಗೆ ಮ್ಯಾನೇಜರನಾಗಿ ಇಂದಿಗೆ ಮೂರು ವರ್ಷ ಮುಗಿಯುತ್ತ ಬಂದರೂ ಈ ವೀರೇಶನ ಕ್ರೂರ ಗುಣಗಳನ್ನು ಕಂಡುಹಿಡಿಯಲು ಯಾರೊಬ್ಬರಿಗೂ ಶಕ್ಯವಾಗಲಿಲ್ಲ. ಹೀಗೆ ಗೋಮುಖವ್ಯಾಘ್ರನಂತಿದ್ದು, ಸಮಯಸಾದಿಸಿ ಆ ದತ್ತು ಬಂದ ಮೋಹನನನ್ನು ಸೇರಿಸಬೇಕು ನನ್ನ ಯುಕ್ತಿಯಿಂದ ಕಾನನ, ಅಂದರೆ ನಗು ನಗುತ್ತಾ ವಶವಾಗುವದು ಈ ಮ್ಯಾಚಿಸ್ ಕಂಪನಿಯ ಅಪಾರ ಧನ. (ನಗುತ್ತಾ ನಿಲ್ಲುವನು ಸುರೇಂದ್ರ ಬರುವನು)

ಸುರೇಂದ್ರ– ಏಕೆ ವೀರೇಶ ಸಂತೋಷದ ನಗೆಯು ನಿನ್ನ ಮೊಗದಲ್ಲಿ ಒಡೆದು ಮೂಡಿದೆಯಲ್ಲ? ಮತ್ತೇನು ವಿಶೇಷ ವಿಷಯ?

ವೀರೇಶ– ವಿಷಯವೇನಿಲ್ಲ ಸಾಹುಕಾರರೇ ತಿಮ್ಮನತಲೆ ಓದುವಾಗ ಒಂದು ಗಮ್ಮತ್ತಿನ ವಿಷಯ ಕಣ್ಣಿಗೆಬಿದ್ದಿತು, ಅದಕ್ಕಾಗಿ ನನ್ನ ಮನದಲ್ಲಿ ನಗೆಯಹೊನಲು ಒಮ್ಮಿಂದೊಮ್ಮೆ ಹೊರಹೊಮ್ಮಿತು.

ಸುರೇಂದ್ರ– ಸರಿ ವೀರೇಶ, ನಿನ್ನೆ ಕಾರವಾರದಿಂದ ತಾರು ಏನು ಬಂದಿದೆ?

ವೀರೇಶ– ಕಂತಯ್ಯನವರು ಎಂಟು ಲಕ್ಷ ಕಡ್ಡಿ ಬಂಡಲ್ ಕಳಿಸಬೇಕೆಂದಿರುವರು.

ಸುರೇಂದ್ರ– ತೀವ್ರ ಅವರ ಹೆಸರ್ಲೆ ರವಾನೆ ಮಾಡಿಸು ಮುಂದೆ.

ವೀರೇಶ– ಮುಂದೆ ದಸರಾ, ದೀಪಾವಳಿ ಹಬ್ಬದ ಸಲುವಾಗಿ ಹೊಸ ಹೊಸ ನಮೂನೆಯ ಅಟಂಬಾಂಬ್‌ಗಳನ್ನು ಸಿದ್ಧಪಡಿಸುವೆ.

ಸುರೇಂದ್ರ– ಸಿದ್ಧಪಡಿಸು ಆ ಅಟಂಬಾಂಬ್‌ಗಳನ್ನು ಹಾರಿಸಿದ ಕೂಡಲೇ ನಮ್ಮ ರಾಷ್ಟ್ರದ ರತ್ನದ ಭಾವಚಿತ್ರಗಳು ಗಗನದಲ್ಲಿ ಜನಗಳಿಗೆ ನೋವಾಗದಂತೆ ಕಂಡು ಬರಬೇಕು.

ವೀರೇಶ– ಆಗಲಿ ಸಾಹುಕಾರರೇ ಈಗ ತಾವು ಹೇಳಿದಂತೆ ನಮ್ಮ ಮದ್ದಿನಿಂದ ಯಾವುದೇ ನೋವು ಜನಗಳಿಗೆ ಉಂಟಾಗದಂತೆ ಮಾಡಿ ಅಸದಳ ಹಣದ ಹೊಳೆಯನ್ನು ನಿಮ್ಮ ಕಣ್ಮುಂದೆಸುವೆ.

ಸುರೇಂದ್ರ– ಅಷ್ಟು ಮಾಡಿಸು ವೀರೇಶ, ಸಿದ್ಧರಾಮೇಶ್ವರ ಮ್ಯಾಚಿಸ್ ಕಂಪನಿ ಎಂದರೆ ಸರ್ವರಿಗೂ ಮುದ್ದು ಬಂದಿರಬೇಕು, ಮದ್ದಿನಲ್ಲಿ ಏನಾದರೂ ತೊಂದರೆ ಬಂದರೆ ಸಂದೇಹವಿಲ್ಲದೇ ನನಗೆ ತಿಳಿಸು. ಮತ್ತು ಯಾವತ್ತೂ ಲೆಕ್ಕ ಪತ್ರಗಳು ವ್ಯತ್ಯಾಸ ಬಾರದಂತೆ ಖಾತೆಯಲ್ಲಿ ಸರಿಯಾಗಿ ಇಳಿಸು (ಹೋಗುವನು)

ವೀರೇಶ– (ಸ್ವಗತ) ಇಳಿಸುವೆ, ಇನ್ನೆರಡು ವರ್ಷಗಳಲ್ಲಿ ಈ ಮ್ಯಾಚೆಸ್ ಕಂಪನಿಯ ಸರ್ವ ಕ್ಯಾಶನ್ನೇ ನನ್ನ ಕಿಸೆಯಲ್ಲಿ ಇಳಿಸುವೆ. ಆಮೇಲೆ ನಿಮ್ಮೆಲ್ಲರನ್ನು ಕಣ್ಣೀರಿನ ಕಾಲುವೆಯಲ್ಲಿ ತೋಯಿಸುವೆ. (ಟೈಂ ನೋಡಿಕೊಂಡು) ಓ.... ಇದೇನು ಘಂಟೆ ಹನ್ನೊಂದು ಬಾರಿಸಿದರೂ ಈ ಮಗಾ ಹರಟೆ ಗಂಗ ಇನ್ನು ಇದುವರೆಗೂ ಆಫೀಸಿಗೆ ಕಾಲಿಟ್ಟಿಲ್ಲ ದಿನಾಲು ಲೇಟ್, ಮಾಲೀಕರು ಮಮತೆ ಮಾಡುತ್ತಿರುವುದರಿಂದ ಈ ಮಗ ಅಟ್ಟಕ್ಕೇರಿದ್ದಾನೆ, ಬರಲಿ. (ಫೈಲ್ ನೋಡುತ್ತ ಕೂಡುವನು ಗಂಗಣ್ಣ ಬರುವನು.)

ಗಂಗಣ್ಣ– (ಭಯದಿಂದ) ನಮಸ್ಕಾರೀ ಯಪ್ಪಾ.

ವೀರೇಶ– (ಸಿಟ್ಟಿನಿಂದ) ಬೇವಕೂಫ್ ಕತ್ತೆ (ಟೇಬಲ್ ಬಡಿಯುವನು)

ಗಂಗಣ್ಣ– ಕತ್ತೆ....ಎಲ್ಲಿ ಬಂದವರೀ ಮತ್ತೆ....?

ವೀರೇಶ– ಎಲ್ಲಿ ಬಂದವೆಂದು ನನಗೆ ಹಾಸ್ಯ ಮಾಡುವೆಯಾ ರ್‍ಯಾಸ್ಕಲ್?

ಗಂಗಣ್ಣ– ರೈಸಮಿಲ್ ಹಾಕಸ್ತಿರೇನ್ರಿಯಪ್ಪಾ ನಮ್ಮ ನಾಲವಾರದಾಗ ಬಹಳ ಚಲೋ ಐತ್ರಿ ಹಾಕಸರೀ ಯಪ್ಪಾ.

ವೀರೇಶ– ಯೂ ಬ್ಲಡೀ ಫೂಲ್.

ಗಂಗಣ್ಣ– ಬ್ಲೇಡ ಪಟ್ಟಿಯಾಕ ಬೇಕ್ರಿಯಪ್ಪಾ ಹಜಾಮತಿ ಮಾಡಿಕೊಂತಿರೇನ್ರಿ?

ವೀರೇಶ– ನಾನ್‌ಸೆನ್ಸ್ ವಾಟಾರ್ ಯು ಸ್ಪೀಕಿಂಗ್?

ಗಂಗಣ್ಣ– ವಡ್ಡರಹೊಲ ನವಣಿ, ಸೇಂಗಾ ಬಿತ್ತಸ್ತೀನ್ರಿ.

ವೀರೇಶ– ಬಿತ್ತಿಸುವದಿಲ್ಲ, ಕಿತ್ತಿಸುತ್ತಿದೆ. ಈಡಿಯಟ್ ಗೇಟೌಟ್.

ಗಂಗಣ್ಣ– ಗೇಟುಹಾಕಿ ಬಂದೇನ್ರಿಯಪ್ಪಾ.

ವೀರೇಶ– ಗೇಟ ಹಾಕಿಬಂದದ್ದು ಅಲ್ಲೋ ಮಗನೇ ಯಾಕ ಲೇಟ ಮಾಡಿಬಂದಿ ಮೊದ್ಲ ಹೇಳು ಇಲ್ಲದಿದ್ದರೆ ಈ ತಿಂಗಳ ಪಗಾರದಲ್ಲಿ ನಿನ್ನ ಹತ್ತು ರೂಪಾಯಿ ಮುರಿವೆ.

ಗಂಗಣ್ಣ– ಮುರಿತೀನಿ, ಹರಿತೀನಂತ ನಮ್ಮಂಥಾ ಬಡ ಇರುವೆಗಳ ಮ್ಯಾಲೆ ಪರಾಕ್ರಮ ತೋರಿಸಿದ್ರ ಹರ ಮೆಚ್ಚತಾನೇನ್ರಿ?

ವೀರೇಶ– ಹರ ಮೆಚ್ಚುವನೆಂಬ ನಿನ್ನ ಹುಚ್ಚು ಪಾರಮಾರ್ಥದ ಪತಾಕಿಯನ್ನು ಈ ವೀರೇಶನ ಮುಂದೆ ಹಾರಿಸಬೇಡ, ನಿನ್ನಂಥ ಕತ್ತೆಗೆ ಹತ್ತು ರೂಪಾಯಿ ಮುರಿಯುವದೇ ಪಾಡ.

ಗಂಗಣ್ಣ– ನಿನ್ನಂಥ ಮಾನವಿಲ್ಲದ ಮ್ಯಾನೇಜರನ ಕೈಯಾಗ ನಾನು ಇರೋದೇ ಬ್ಯಾಡ, ಬಂದೋಟ ಪಗಾರ ಕೊಟ್ಟು ಬಿಡ್ರಿ ನಾ ಹೋಗ್ತೀನಿ ದೌಡ.

ವೀರೇಶ– ಕಾಳುಚೆಲ್ಲಿದರೆ ಕೋಳಿಗೇನು ಕಡಿಮೆ ಹೋಗು ನಿನ್ನಂಥ ಒಬ್ಬ ಅಯೋಗ್ಯ ಆಳು ಹೋದರೇನು, ಈ ಮ್ಯಾಚೆಸ್ ಕಂಪನಿ ನಿಲ್ಲುವುದಿಲ್ಲ.

ಸುರೇಂದ್ರ– (ಪ್ರವೇಶಿಸಿ) ವೀರೇಶ, ಆಳುಗಳ ಮೇಲೆ ಆವೇಶ ತರವಲ್ಲ, ಆಳುಗಳನ್ನು ಕೀಳೆಂದು ತಿಳಿಯಕೂಡದು. ಆಳುಗಳಿಂದಲೇ ನಮ್ಮ ಬಾಳುವೆಯ ಬಳ್ಳಿ ನಿಂತಿರುವದು.

ವೀರೇಶ– ಸಾಹುಕಾರರೇ ಈ ರೀತಿ ಸಹನೆ ತೋರಿದರೆ ಮುಂದೊಂದು ದಿನ ದಹನವಾಗುವದು ನಮ್ಮ ನಿಮ್ಮಗಳ ಮರ್ಯಾದಿ.

ಸುರೇಂದ್ರ– ಮರ್ಯಾದೆ, ಇರಲಿ ವೀರೇಶ ಉಂಡಮನೆಗೆ ಎರಡು ಬಗೆಯದ ಸ್ವಾಮಿನಿಷ್ಠನಾದ ಈ ಗಂಗಣ್ಣನಲ್ಲಿ ಇಂದು ಕಂಡ ತಪ್ಪಾದರೂ ಏನು?

ಗಂಗಣ್ಣ– ತಪ್ಪೇನ್ರೀಯಪ್ಪಾ ಇಂದು ಹತ್ತು ನಿಮಿಷ ತಡೊತ್ತಾಗಿ ಬಂದದ್ದೇ ಜರಾ ನಂದು ತಪ್ರೀ, ಆಟಕ ಕತ್ತೆ, ನಾಯಿ, ನರಿ ಅಂತ ಬೈದು ಅಲ್ಲದ ನನ್ನ ಪಗಾರದಾಗಿನ ಹತ್ತು ರೂಪಾಯಿ ಮುರಿತೀನಿ ಅಂದರ್ರಿ.

ಸುರೇಂದ್ರ– ಸರಿ, ಮುಂದೆ.....?

ಗಂಗಣ್ಣಾ– ಮುಂದೆ ಮುರದಮ್ಯಾಲೆ ನಾನಿರೋದ್ಯಾಕಂತ ಹೊಂಟ ಬಿಡಾಕ ತಯ್ಯಾರಾಗಿದ್ದಿನ್ರೀ, ಆಟರಾಗ ನೀವು ತಂದೆ ಬಂದಂಗ ಬಂದ್ರಿ ಇಟ ನೋಡ್ರಿ.

ಸುರೇಂದ್ರ– ತಿಳಿಯಿತು, ವೀರೇಶ ಹಿರಿಯ ಮ್ಯಾನೇಜರನಾದ ನಿನ್ನಲ್ಲಿ ಸೈರಣೆಯ ಸಾಗರ ಅಪಾರವಿರಬೇಕು. ಆಳುಗಳೇ ನಮ್ಮ ಜೀವನದ ಜೀವಾಳ.

ವೀರೇಶ– ಜೀವಾಳುವೆಂದು ತಾಳ್ಮೆಯ ತಂಬಿಗೆ ಹಿಡಿಯಹೋದರೆ ಈ ಹುಂಬರು ಅಡತಾಳವೆಂಬ ಕಡ್ಡಾಯದ ಕೊಡ್ಡನ್ನು ಅಡ್ಡಹಾಕಿ ತಡವಿಲ್ಲದೇ ತರಿಸುವರು ನಮ್ಮ ಕಂಪನಿಗೆ ಗೋಳು.

ಸುರೇಂದ್ರ– ಗೋಳು ತರಿಸುವರೆಂದು ಗೇಣುಮುರಿದರೆ ಆ ಬಾಳಾಕ್ಷನು ಕ್ರೋಧಗೊಂಡು ತನ್ನ ಫಣಿಗಣ್ಣಿನಿಂದ ಈ ಕಂಪನಿಯನ್ನು ಉರಿಸಿ ಮಣ್ಣಿನಲ್ಲಿ ಕಾಣಿಸುವನಲ್ಲವೆ?

ವೀರೇಶ– ಕಾಣಿಸುವನೆಂಬ ಕಲ್ಪನೆಯ ತಲ್ಪದಲ್ಲಿ ಕುಳಿತರೆ ಈ ಅಲ್ಪರು ಸ್ವಲ್ಪೇ ದಿನದಲ್ಲಿ ತರಿಸುವರು, ನಿಮ್ಮ ಸಾಹುಕಾರರಿಗೆ ಸಾವು. ಅದಕ್ಕಾಗಿ ಈಗಲೇ ನನ್ನ ಮಾತಿನಕಡೆ ಸೋತರೇ ಎಂದೆಂದಿಗೂ ಮಾಯವಾಗದು ಈ ನಿಮ್ಮ ಸಿರಿವಂತಿಕೆಯ ಸಿರಿಮಾವು.

ಗಂಗಣ್ಣಾ– ಯಾವ ಕಾಲೇಜಿನಾಗ ಕಲ್ತೀರೀ ಈ ಜಾಡಿ ಸಾಲಿ. ದಯಮಾಡಿ ಕೈ ಮುಗಿತೀನ್ರಿ ವೀರೇಶಪ್ನೋರ ನಮ್ಮ ಧಣೇರಿಗೆ ಊದಬ್ಯಾಡ್ರಿ ನಿಮ್ಮ ಕೋತಿಮಾರ್ಕಿನ ಮಾತಿನ ಮಸಾಲಿ.

ವೀರೇಶ– ನೋಡಿದಿರಾ ಸಾಹುಕಾರರೇ, ನಿಮಗೊಂದು ನಾನು ಒಳ್ಳೆಯ ಮಾತು ಹೇಳಿದರೆ ಈ ಕಳ್ಳನ ಕಣ್ಣಲ್ಲಿ ಕಳ್ಳೀಹಾಲು ಹಿಂಡಿದಂತಾಯಿತು.

ಸುರೇಂದ್ರ– ಇರಲಿ ವೀರೇಶ ಸಧ್ಯ ಸಮಾಧಾನ ತಂದುಕೋ ಮೊದಲು ಇವನ ಪಗಾರ ಮುರಿಯದೇ ಕೊಟ್ಟುಬಿಡು.

ವೀರೇಶ– ಆಗಲಿ ಸಾಹುಕಾರರೇ, ಬಾರೋ ಕೊಡುತ್ತೇನೆ.

(ವೀರೇಶ, ಗಂಗಣ್ಣಾ ಹೋಗುವರು–ಉಮೇಶ. ಮೋಹನ ಪಾಸಾದ ಸಂತೋಷದೊಳಗೆ ಪ್ರವೇಶಿಸುವರು).

ಮೋಹನ– ಅಪ್ಪಾ, ಅಪ್ಪಾ ಬಿಯಸ್ಸಿ ಫಸ್ಟಕ್ಲಾಸ್‌ನಲ್ಲಿ ಪಾಸಪ್ಪಾ. (ತಂದೆಯನ್ನು ಮೇಲಕ್ಕೆತ್ತುವನು)

ಸುರೇಂದ್ರ– ಹೌದಾ....ನೀನು ಉಮೇಶ....?

ಉಮೇಶ– ನಾನು ಕೂಡಾ ಬಿಯಸ್ಸಿ ಫಸ್ಟ್‌ಕ್ಲಾಸ್‌ನಲ್ಲಿ ಪಾಸಾಗಿದ್ದೇನೆ ಕಾಕಾಜಿ.

ಸುರೇಂದ್ರ– ಸಂತೋಷ ಉಮೇಶ ನಿಮಗೆ ಈ ಸಂತೋಷ ಸಮಯದಲ್ಲಿ ಇನ್ನೊಂದು ಸಂತೋಷದ ಸುದ್ದಿ.

ಉಮೇಶ– ಸಂತೋಷದ ಸುದ್ದಿ ಏನಿದೆ ಕಾಕಾಜಿ ತಿಳಿಸಿ?

ಸುರೇಂದ್ರ– ತಿಳಿಸುವೆ ನೋಡು ಉಮೇಶ ನಿನ್ನ ಮಿತ್ರ ಮೋಹನನನ್ನ ಮ್ಯಾರೇಜ ಆಗಲು ಭಾರೀ ಶ್ರೀಮಂತ ಮನೆತನದ ಕನ್ಯಾಮಣಿಗಳ ಫೋಟೋಗಳು ಬಂದಿವೆ.

ಉಮೇಶ– ಫೋಟೋ ಹೇಗಿವೆ ನೋಡೋಣ ತೋರಿಸಿ?

ಸುರೇಂದ್ರ– ನೋಡು ಉಮೇಶ, ಬೇಗ ನಿನ್ನ ಮಿತ್ರ ನೀನು ಕೂಡಿ ಒಂದು ಉತ್ತಮ ಕನ್ಯಾ ಸೆಲೆಕ್ಟ ಮಾಡಿರಿ. (ಫೋಟೋ ಕೊಡುವನು)

ಉಮೇಶ– ಬಾ ಮಿತ್ರಾ ನೋಡು ಸಾಹುಕಾರರೇ, ಯಾರೀ ಕನ್ಯಾ ಚೆನ್ನಾಗಿದ್ದಾಳೆ.

ಸುರೇಂದ್ರ– ಮಂಡ್ಯಾ ಜಿಲ್ಲಾದ ಗುಂಡೂರಾಯರ ಮಗಳು ಮದ್ರಾಸ್‌ನಲ್ಲಿ ಇವರದು ಒಂದು ಸಿನಿಮಾ ಸ್ಟುಡಿಯೋ ಇದೆಯಂತೆ.

ಉಮೇಶ– ಏನಯ್ಯಾ ಮೋಹನ ಈ ಕನ್ಯಾ ನಿನಗೆ ಒಪ್ಪಿಗೆತಾನೆ....?

ಮೋಹನ– ಆ ಗಂಡುಬೀರಿಯನ್ನು ನೀನು ಮಾಡಿಕೊಂಡು ಬಿಡು ಮಿತ್ರ

ಉಮೇಶ– ಸಾಹುಕಾರರೇ ನನ್ನ ಮಿತ್ರನಿಗೆ ಈ ಕನ್ಯಾ ಸೆಲೆಕ್ಟ ಆಗಲಿಲ್ಲ. ಬೇರೆ ತೋರಿಸಿ?

ಸುರೇಂದ್ರ– ಸೆಲೆಕ್ಟ ಆಗದಿದ್ದರೆ ಇವಳನ್ನು ತೋರಿಸು. (ಮತ್ತೊಂದು ಫೋಟೋ ಕೊಡುವನು)

ಉಮೇಶ– ಯಾರೀ ಈ ಕನ್ಯಾ ಬಹಳ ಬ್ಯೂಟಿಫುಲ್ ಇದ್ದಾಳೆ?

ಸುರೇಂದ್ರ– ಇವಳು ಹಾಸನಜಿಲ್ಲೆಯ ವಾಸುದೇವರಾಯರ ಮಗಳು ಇವರವು ಸ್ವಂತ ನಾಲ್ಕು ರೇಷ್ಮೆ ಅಂಗಡಿ ಇವೆಯಂತೆ ಮೈಸೂರ್‌ನಲ್ಲಿ.

ಉಮೇಶ– ನೋಡಯ್ಯ ಮೋಹನ ಮುಂಗುರುಳನ್ನು ಮುಂದಕ್ಕೆ ಹಾಕಿಕೊಂಡು ಮುಗುಳು ನಗೆಬೀರುವ ಮೈಸೂರಿನ ರೇಷ್ಮೇ ಹುಡುಗಿ. ಪಾಸ್ ತಾನೇ?

ಮೋಹನ– ಉಮೇಶ ನೀನೆಷ್ಟು ಬಣ್ಣಿಸಿದರೂ ಈ ಹೆಣ್ಣು ನನಗೆ ಲೈಕ ಇಲ್ಲ.

ಉಮೇಶ– ಕೊನೆಗೆ ನಿನಗೆ ಲೈಕಾದ ಲೈಲಾ ಎಲ್ಲಿದ್ದಾಳೆ ಹೇಳಯ್ಯ ಮಿತ್ರಾ?

ಮೋಹನ– ಬಾ ಮಿತ್ರ ಹೀಗೆ. (ಕಿವಿಯಲ್ಲಿ ಹೇಳಿ ಹೋಗುವನು)

ಉಮೇಶ– ಸಾಹುಕಾರರೇ ಮೋಹನನ ಬೇನೆ ಒಂದು ನಾವು ಮದ್ದು ಕೊಟ್ಟದ್ದು ಇನ್ನೊಂದು.

ಸುರೇಂದ್ರ– ಹಾಗಾದರೆ ನಿನ್ನ ಮಿತ್ರ ಮೋಹನನ ಬೇನೆ ಯಾವದೆಂಬುದು ಬೇಗ ನನಗೆ ತಿಳಿಸು?

ಉಮೇಶ– ತಿಳಿಸಿದ ಕೂಡಲೇ ಹಳಹಳಿಸಬಹುದು ತಮ್ಮ ಮನ ಅದಕ್ಕಾಗಿ.....

ಸುರೇಂದ್ರ– ಅದಕ್ಕಾಗಿ ಅನುಮಾನಿಸಬೇಡ ಹೇಳು ಉಮೇಶ?

ಉಮೇಶ– ಹೇಳುವದೇನು, ಸಂಗೀತ ಸುಧಾಕರ ಅಮರೇಶ ಗವಾಯಿಗಳ ತಂಗೀ.

ಸುರೇಂದ್ರ– ಗವಾಯಿಗಳು ಹೇಗೆ.....?

ಉಮೇಶ– ಗವಾಯಿಗಳು ಹಣವಂತರಲ್ಲ, ಗುಣವಂತರು.

ಸುರೇಂದ್ರ– ಗುಣವಂತರಿದ್ದರೆ ಸಾಕು, ಗವಾಯಿಗಳನ್ನು ಕಂಡು ಲಗ್ನ ನಿರ್ಧರಿಸುವಾ ನಡೆ.

ಉಮೇಶ– ನಡೆಯಿರಿ. (ಹೋಗುವರು)

– ಪರದೆ ಬೀಳುವದು –

===***=====***===

೮ನೇ ಪ್ರವೇಶ

– ರಸ್ತಾ –

(ಸಂಗಣ್ಣಾ–ಬಳೆಪೆಟ್ಟಿಗೆ ಹಿಡಿದುಕೊಂಡು ಬರುವನು)

ಸಂಗಣ್ಣಾ– (ಸ್ವಗತ) ಈ ಬಳೆಪೆಟ್ಟಿಗೆ ಹಿಡಿದುಕೊಂಡು ಎಷ್ಟು ಓಣಿ ಅಡ್ಡಾಡಿದರೂ ಮತ್ತೆ ಮತ್ತೆ ಮನ ತಾರವ್ವನ ಓಣ್ಯಾಕ ಎಳಸ್ತದ, ನಾನೂ ಮಸ್ತ ದೇಶ ನೋಡಿನಿ. ಇಂಥಾ ಶಿಸ್ತಾದ ಹೆಣ್ಣು ಕಣ್ಣಿಗೆ ಬಿದ್ದಿಲ್ಲ, ಈ ಹೆಣ್ಣಿನ ಸಲುವಾಗಿ ಕಣ್ಣಿಗೆ ನಿದ್ದಿಲ್ಲಾ. ಮುಂಜಾಲೆದ್ದು ಮೇಟಿ ಮಲ್ಲಪ್ಪನ ಹೋಟಲ್‌ದಾಗ, ಕೇಟಿ ಚ್ಯಾ ಕುಡದ ಹೊಂಟ್ನೆಂದ್ರೆ ಆತು. ಕಾಶೇವಾಡದ ಕುದ್ರಿಪೇರಿ ತಿದ್ದಿದಾಂಗ ತಾರಾನ ಮನೆಸುತ್ತ ಫೇರಿ ತೀರಿಸ್ತೀನಿ. ಏನರs ಮಾಡಿ ಗಟ್ಟಿ ಧೈರ್ಯಮಾಡಿ ಅವಳ ಮನೆಗೆಹೋಗಿ ಮಾತಾಡ್ಸಬೇಕೆಂದ್ರ ಅವಳ ಏಟ್ವಗಂಡ ಯಾವಾಗ ನೋಡಿದ್ರೂ ಕಟ್ಟಿಮ್ಯಾಗ ಚುಟ್ಟಾ ಸೇದಕೊಂತ ಕುಂತಿರತಾನ, ಇರ್ಲಿರ್ಲಿ ಇದರಬಗ್ಗೆ ಮುಂದೆ ಮಾಡಾನ ವಿಚಾರ. ಸಧ್ಯ ಮಾಡಾನ ವ್ಯಾಪಾರ ಬಳೀ, ಬಳೀ....ಬಳಿಬೇಕೇನ್ರಿ ಬಳೀ. (ಉಸಿರು ಹಾಕಿ) ನರ ಹರಿವಾಂಗ ಕೂಗಿದ್ರೂ ನಮ್ಮ ತಾರಾದಂತು ಹತ್ತವಲ್ಲು ಸುಳಿ ಏನ ಮಾಡುನ, ಇನ್ನಷ್ಟು ಜೋರಾಗಿ ಕೂಗೋನು ಬಳೀ....ಬಳೀ.... ಭಾರ್ತೀಬಳೀ, ಆರ್ತಿಬಳೀ, ಬೇಕೇನ್ರಿ ಬಳೀ.....

ತಾರಾ– (ಪ್ರವೇಶಿಸಿ) ಬಳೀ ಐ....ಐ....ನಪಾಂಗಿಳಿ ಯಾಕಡೆ ಹೊಂಟದ್ಯಾಯಣ್ಣಾ?

ಸಂಗಣ್ಣಾ– ಬಳಿ ಹಾಕಾಕs ಹೊಂಟಿದ್ನೆವಾ ಹಾಕಿಸಿಕೋವ್ವ ನಾಲ್ಕು ಬಳೀ, ಕಾಣ್ತೆ ಎಷ್ಟು ಕಳಿ.

ತಾರಾ– ಅಷ್ಟು ಚೆಂದದಾವೇನಣ್ಣಾ ಬಳಿ,....?

ಸಂಗಣ್ಣಾ– ಹೌದವ್ವಾ ತಂಗೀ ಮೊನ್ನೆ ಬೆಂಗ್ಳೂರನಿಂದ ತಂದೀನಿ, ರಂಗು ರಂಗಿನಬಳಿ.

ತಾರಾ–	ರಂಗು ರಂಗಿನಬಳಿ, ಹಂಗಾರ ತೋರ್ಸ ಯಣ್ಣಾ?
ಸಂಗಣ್ಣಾ–	ಹಾದ್ಯಾಗ ಹ್ಯಾಂಗ ತೋರ್ಸಲವ್ವಾ ಮನೀಗೆ ಹೋಗಿದ್ರ ಬೇಸಿತ್ತು?
ತಾರಾ–	ಮನಿಗೋದ್ರ ಈಗ ನಮ್ಮ ಹಿರಿಯ ಅದಾನಣ್ಣಾ, ಹಿಂದುಗಡೆ ನನ್ನ ನಿನ್ನ ಕೂಡೇ ಮಾಡ್ಯಾನ ಸಣ್ಣ.
ಸಂಗಣ್ಣಾ–	ಹಂಗಾರ ಇಲ್ಲೇ ಹಾಳು ಹನುಮಪ್ಪನ ಗುಡಿಯಾಗಾರ ಹೋಗಾನ ಬಾರವ್ವ ಚೊಲೋತ್ನ್ಯಾಗ ತೋರಸ್ತೀನಿ?
ಗಂಗಣ್ಣಾ–	(ಪ್ರವೇಶಿಸಿ) ಅಲಲ....ಲ....ಏನ ಹಾವಳಿ ಆತಲ್ರೀ, ಈ ಬೆಳಗುಂದಿ ಬಳಿಗಾರ ಸಂಗ್ಯಾಂದು ಯಾವಾಗ ನೋಡಿದ್ರೂ ನಮ್ಮವಳ ಕೂಡಾ ಗುಜು ಗುಜು ಮಾತ ಹಚ್ಚಿರ್ತಾನ ಮಗಾ, ಸ್ವಲ್ಪ ಮರೆಯಾಗಿ ನಿಂತು ಕೇಳಾನ ಅಂದ್ರ ಹೊರಬೀಳ್ತದೆ ಅಣ್ಣನ ಬಣ್ಣ. (ಸ್ವಲ್ಪ ಮರೆಯಾಗುವನು.)
ಸಂಗಣ್ಣಾ–	ತಾರಾ ನಿನಮುಂದ ಒಂದು ಸುದ್ದಿ ಹೇಳಬೇಕಂದ್ರ ಮರ್ತ....ಬಿಟ್ಟಿದ್ಯ ನೋಡವ್ವ
ತಾರಾ–	ಏನಣ್ಣಾ ಸುದ್ದಿ....?
ಸಂಗಣ್ಣಾ–	ಅಣ್ಣ ತಂಗೀದಽ ಒಂದ ಸುದ್ದಿ, ಏನ ಹೇಳಲಪ್ಪ ಈ ಬಾಯಿಲೇ.
ತಾರಾ–	ಏನಣ್ಣಾ ಸುದ್ದಿ ಕಡ್ಯಾಕ ಹೇಳ ಓಟ ತಿದ್ದಿ?
ಸಂಗಣ್ಣಾ–	ತಿದ್ದಿ ಏನ ಹೇಳಲವ್ವಾ ತಾರಾ ನನಗ ನಿನಗ....
ತಾರಾ–	ನನಗ.... ನಿನಗ....?
ಸಂಗಣ್ಣಾ–	ಹೌದವ್ವ ನನಗ...ನಿನಗ...
ಗಂಗಣ್ಣಾ–	(ಸ್ವಗತ) ಹೌದಲೇ ವನ್ಯಾಗ್ಯ.....?
ತಾರಾ–	ನನಗ ನಿನಗ...ಏನ ಹೇಳಣ್ಣ ಬಿಚ್ಚಿ....?
ಸಂಗಣ್ಣಾ–	ಬಿಚ್ಚಿ ಏನ ಹೇಳಂದೆವ್ವ, ನನ್ಗ ನಿನ್ಗ ಕಟ್ಟಿ ಕುಂಽಕಾರ ಸಂಶಯದ ಸದಿ.
ಗಂಗಣ್ಣಾ–	(ಸ್ವಗತ) ಇನ್ನ ಸುಮ್ನ ನಿಂತ್ರ ಈ ಕಳ್ಳ ಸಂಗ್ಯಾ ಊದತಾನ್ರಿ ತಿದಿ ಈಗ್ಲೇ ಬೀಳ್ಬೇಕು ಇವನ ಮೈಮೇಲೆ ಒದಿ.

ತಾರಾ–	ಸದಿ ಏನ ಕಟ್ಟಿಕುಂತಾರ ಹೇಳಾ ಸಂಗಣ್ಣಾ....?
ಸಂಗಣ್ಣಾ–	ಕಾರಹುಣ್ಣಿವಿ ಕೆಟ್ಟಕರಿ ಅಂತಾ ಹೊಟ್ಯಾಗ ಇಟ್ಕೊಂಡು ಕುಂತೀನಿ, ನಾಳೆ ಮಗ್ಗಲಮನಿ ಮಲ್ಲವ್ವನ ಮನಿಗೆ ಬಾಗವ್ವ ವಗ್ಗರಣಿ ತಿನಿಸಿ ಹೇಳ್ತೀನಿ.
ಗಂಗಣ್ಣಾ–	ವಗ್ಗರಣಿ ಯಾಕ, ಉಪ್ಪಿಟ್ಟು ತಿನಿಸಿ ಹೇಳಲೇ (ಬಡಿಯುವನು)
ಸಂಗಣ್ಣಾ–	ಏ....ಏ. ಏನಪ್ಪಾ ಮಾವ. (ತೊದಲುತ್ತಾ)
ಗಂಗಣ್ಣಾ–	ಹಿಂಗ್ಯಾಕ ಮಾಡ್ತೀಯಲೇ ಇಂಗತಿಂದ ಮಂಗ್ಯಾನಗತಿ, ಕರೇ ಹೇಳು ನಮ್ಮವಳ ಮುಂದೆ ಏನ ಹೇಳತ್ತಿದ್ದೆಲ್ಲ ಕಥೆ?
ಸಂಗಣ್ಣಾ–	ನೋಡವ್ವ ತಂಗೀ....ಮಾವ ಹ್ಯಾಂಗ ಮಾತಾಡತಾನ, ನಾ ಏನ ನಿನಮುಂದ ಹೇಳ್ದೆ ಕಥೀ?
ತಾರಾ–	ನೀ ಸುಮ್ನೀರ ಯಣ್ಣಾ, ಅವಾ ಹಾಂಗ ಊದೂದು ಸಂಶಯದ ಸನಾಯಿ.
ಗಂಗಣ್ಣಾ–	ಛಪ್ಪರೇ ನನ ಚಪ್ಪರ ಬದನೇಕಾಯಿ, ಏ ಗಾಜಿನಂತಾ ತಾರಾ ಈ ಸಂಗ್ಯಾನ ಮಜಾ ಮಜಾ ಮಾತಿಗೆ ಮರುಳಾದಿಯಂದ್ರ ನಿನ್ನ ಕಳ್ಳು ಕಿತ್ತು ಡೊಳ್ಳು ಬಿಗಿಸೇನು?
ತಾರಾ–	ಏ ಡೊಳ್ಳು ಬಿಗಿಸುವ ಸರದಾರ, ಮೊದ್ಲು ನಿನ್ನ ಕಣ್ಣಾನ ಸಿಳ್ಳು ತಕ್ಕೋ ಪೂರಾ.
ಗಂಗಣ್ಣಾ–	ಏ ದಾರಿ ತಪ್ಪಿದ ಪೋರಿ ನನ್ನ ಕೈಯಾಗ ಕಾಣ್ತೀಯಿ ನೋಡ ಗೋರಿ.
ಸಂಗಣ್ಣಾ–	ತಂಗೀ ಮಾವ ಯಾಕ ಆಗ್ಯಾನ ಇಂದು ಬಲು ಕಾವು ಮನ್ಯಾಗ ಕುಡದಾನಿಲ್ಲ ಚಾವು?
ತಾರಾ–	ಕಾವು ಯಾಕಣ್ಣಾ, ಎದಿಮಟ್ಟ ತಿಂದಾನ ಸೇಪು. ನೀಏನ ಮನಸಿಗೆ ಹಚ್ಕೊಬ್ಯಾಡ ಇದರ ನೋವು.
ಗಂಗಣ್ಣಾ–	ಏ....ಮಳ್ಳ ಪಿಳ್ಳಿ, ಅವಾ ಯಾಕ ಹಚ್ಕೋತಾನ ನೋವು ಸುಮ್ನ ಹಿಂಗ ಸಲಿಗೀ ಕೊಟ್ಟಿಂದ್ರ ಮಾಡ್ತಾನ ನೋಡು ನಿನ್ನ ಕಾವು.

ತಾರಾ— ಕಾವ್ರು...ನಿನ್ನ ಬರವಲ್ದಲ್ಲ ಸಾವು, ತಪ್ಪ ಕಂಡಾಗ ಗಪ್ನ ಕೊಲ್ಲು, ಸುಮ್ಮ ಸುಮ್ನೆ ಸುರಸಬ್ಯಾಡ ನಿನ್ನ ಸಂಶಯದ ಜೊಲ್ಲು.

ಗಂಗಣ್ಣಾ— ಜೊಲ್ಯಾಕ ಸುರಸಂದ್ಯಾ ನನ ಮೈಸೂರಿ ಸಿಲ್ಲು ಗಳಿಗ್ಗೊಮ್ಮೆ ಹಿಂಗ ಕಿರಿಬ್ಯಾಡ ಹಲ್ಲು. (ತಿವಿಯುವನು)

ತಾರಾ— (ಸೆರಗು ಮುಚ್ಚಿಕೊಂಡು ಅಳುವಳು) ಹೂ...ಹೂ....ಹೂ... ಇಂಥ ಕವ್ಡಕಂಟಕ ಗಂಟನ್ನು ನನಗ ಯಾಕ ಮೂಲಾ ಮಾಡ್ದ್ಯಾಯವ್ವಾ ಅಯ್ಯ...ಯ್ಯೋ...ಯವ್ವಾ..ಇಂತಾತನ ಕೂಡಾ ನಾ ಹ್ಯಾಂಗ ಬಾಳೇವು ಮಾಡ್ಲ್ಯಾ ಯವ್ವಾ. (ಅಳುವಳು)

ಗಂಗಣ್ಣಾ— (ರಮಿಸುತ್ತ) ಏ....ಏ...ತಾರಾ ನಿನಗೇನಂದರೆ ಸುಮ್ನಿರಾ ನನ ಬಂಗಾರಾ.

ಸಂಗಣ್ಣಾ— (ಸ್ವಗತ) ರಂಗಿಗೇರಿದ ಮಾವನ ಪುಂಗಿ ತಂಗೀ ಮುಂದ ಬಂದಾದಂಗಾತು ಇನ್ನು ಹೊತ್ತು ಸಾಧಿಸಿ ಹೊಡ್ತ ಹೊಡಕೊಳ್ಳೋಣ. (ಪ) ಬರ್ತೀನವ್ವಾ ತಾರಾ, ನ್ಯಾಳೇವು ಬೇಸಿಲ್ಲ ನಾಳೆ ಏಳಕ್ಕೆ ಬಂದು ತೋರಸ್ತೀನಿ ಬಳಿ.

ಗಂಗಣ್ಣಾ— ಮಳ್ಳ ಹುಡಿಗ್ಯಾರಿಗೆ ಚೊಲೋತ್ಯಾಗ ತೋರಸ್ತೀಯಲೇ ಬಳೀ, ತೋರ್ಸು ತೋರ್ಸು....ಮಗನಾ ಕೈಯಾಗ ಸಿಗಬಾರ್ದ ಸಿಕ್ಕೆಂದ್ರ ಕಾಣಸ್ತೀನಿ ಹೊಳಿ. (ಸಂಗಣ್ಣಾ ಹೋಗುವನು)

– ಪರದೆ ಬೀಳುವದು –

===***====***===

೯ನೇ ಪ್ರವೇಶ

– ಮನೆ –

(ಅಮರೇಶ ಹಾಡುತ್ತ ಕುಳಿತಿರುವನು ಧೀರೇಂದ್ರ, ವೀರೇಶ ಪೋಲೀಸರು ಬರುವರು.)

ಧೀರೇಂದ್ರ– ಹಾಡು ಹಾಡುತ್ತ ಚಕ್ಕಂದದಲಿ ಕುಳಿತ ಕೋಡಗವೇ ಇನ್ನು ಬೇಗನೇ ಮನೆಬಿಟ್ಟು ಹೊರಡು.

ಅಮರೇಶ– ಏಕೆ ಸಾಹುಕಾರರೇ....? (ಗಾಬರಿಯಿಂದ)

ವೀರೇಶ– ಏಕೆಂಬುದು ಈ ಖಾಕಿ ಡ್ರೆಸ್ಸಿನ ಪೋಲೀಸರನ್ನು ಕೇಳು ಚೆನ್ನಾಗಿ ತಿಳಿಸುತ್ತಾರೆ.

ಅಮರೇಶ– ಏನಿದು ವಿಷಯ ಪೋಲೀಸರೇ....?

ಪೋಲೀಸ್– ಮೂರು ಸಾವಿರಕ್ಕೆ ತಮ್ಮ ಮೇಲೆ ಜಪ್ತಿ ವಾರಂಟ್ ತಂದಿದ್ದಾರೆ.

ಅಮರೇಶ– ವಾರಂಟ್ ತಂದಿರುವರೇ....?

ಪೋಲೀಸ್– ತಂದಿರುವರು ನೋಡಿ, ಬೇಗ ಸಹಿಮಾಡಿ. ಇವರಿಗೆ ಮನೆ ಬಿಟ್ಟುಕೊಡಿ.

ಅಮರೇಶ– (ದುಃಖದಿಂದ) ಸಾಹುಕಾರರೇ ನಿಮಗೆ ಕರಜೋಡಿಸಿ ಬೇಡಿಕೊಳ್ಳುವೆ, ಬಡವನ ಮನೆಯನ್ನು ಕಸಿದುಕೊಳ್ಳಬೇಡಿ. ಇನ್ನು ಮೂರು ತಿಂಗಳಲ್ಲಿ ನಿಮ್ಮ ಹಣವನ್ನು ತಪ್ಪದೇ ಮುಟ್ಟಿಸುವೆ.

ವೀರೇಶ– ಮುಟ್ಟಿಸುವೆನೆಂಬ ಈ ಭವಿಷತ್ಕಾಲದ ಚಿನ್ನೆಯ ಚಿಣಿಯನ್ನು ಚಿಮ್ಮಿಕೊಡುವೆ. ಧಣಿ, ಇದೇ ವೇಳೆಯಲ್ಲಿ ಕೊಡುವೆನೆಂದು ನುಡಿಯಲಿ ನಿನ್ನ ವಾಣಿ.

ಧೀರೇಂದ್ರ– ಇಲ್ಲವೇ ಇದಾಗದಿದ್ದಲ್ಲಿ ಮನ್ಮಥನ ಸತಿ ರತಿಯಂತಿರುವ ಆ ನಿನ್ನ ಸುಂದರ ತಂಗೀ ಆಗಬೇಕೆನ್ನ ರಾಣಿ.

ಅಮರೇಶ– ಸಾಹುಕಾರರೇ....ಮರ್ಯಾದೆಯ ಮೈಲುಗಲ್ಲನ್ನು ದಾಟಿ ಮಾತನಾಡುತ್ತಿರುವಿರಿ ಎಚ್ಚರಿಕೆ.

ವೀರೇಶ– ಎಚ್ಚರಿಕೆ! ಹುಚ್ಚು ಅಮರೇಶ ಸುಮ್ಮನೆ ನಿಮ್ಮ ತಂಗಿ ಸುಂದರ ಶೀಲಳನ್ನು ಸಾಹುಕಾರರ ಕೈಹಿಡಿಸಿ ಸಂಪತ್ತಿನ ಸರೋವರದಲ್ಲಿ ಮುಳುಗು.

ಧೀರೇಂದ್ರ– ಸಂಪತ್ತಿನ ಸಿಹಿ ಬೇಕೋ? ಏನು ವಿಪತ್ತಿನ ಕಹಿಬೇಕೋ? ಯಾವುದನ್ನು ಆಮಂತ್ರಿಸಕೊಳ್ಳುವಿ. ಬೇಗ ಹೇಳು ಅಮರೇಶ ನಿನಗೆ ಆಲೋಚಿಸಲು ಅವಕಾಶವಿತ್ತಿರುವೆ ಒಂದು ನಿಮಿಷ.

ಅಮರೇಶ– ಒಂದು ನಿಮಿಷವೇಕೆ ಆ ನಂದೀಶ್ವರನ ಆಯುಷ್ಯವೇ ನನಗೆ ನೀ ವಿಚಾರಿಸಲಿತ್ತರೂ ನಿನ್ನಂಥ ಹಂದಿಗೆಂದೂ ನನ್ನ ತಂಗಿಯನ್ನು ಮಾರಲಾರೆ.

ವೀರೇಶ– ಮಾರದಿದ್ದರೆ ಈ ಮನೆಯಲ್ಲಿ ನಿಲ್ಲಲು ನಿನಗೆ ಅರೆನಿಮಿಷ ಅವಕಾಶವಿಲ್ಲ.

ಧೀರೇಂದ್ರ– ಹೂಂ. ಬೇಗ ನಿನ್ನ ತಬಲ ತಂಬೂರಿಗಳನ್ನು ತೆಗೆದುಕೊಂಡು ಹೊರಬೀಳು

ಅಮರೇಶ– ಹೊರಬೀಳಲಾರೆ.

ವೀರೇಶ– ಬೀಳಲಾರೆ, ಬಲವಂತನ ಕೂಡ ಛಲವು ತರವಲ್ಲ ಅಮರೇಶ

ಧೀರೇಂದ್ರ– ಪೋಲೀಸರೇ, ನೋಡುತ್ತ ನಿಲ್ಲಬೇಡಿ ಬೇಗ ಇವನ ತಬಲ ತಂಬೂರಿಗಳನ್ನು ತೆಗೆದು ಡಾಂಬರರೋಡಿನ ಮೇಲೆಸೆಯಿರಿ.

ಪೋಲೀಸ್– ಗವಾಯಿಗಳೇ. ಇದು ಕೋರ್ಟ ಆರ್ಡರ. ಸುಮ್ಮನೆ ಮರ್ಯಾದೆಯಿಂದ ಹೊರಬೀಳಿರಿ. (ಮನೆಯಲ್ಲಿಯ ಸಾಮಾನುಗಳನ್ನು ಹೊರಹಾಕುವನು.)

ಅಮರೇಶ– ಸಾಹುಕಾರರೇ ನಿಮಗೆ ಕರಜೋಡಿಸಿ ಕೇಳಿಕೊಳ್ಳುವೆ, ಈ ಬಡ ಕಲಾವಿದನಮೇಲೆ ಸ್ವಲ್ಪ ಕರುಣೆ ತೋರಿರಿ?

ಧೀರೇಂದ್ರ– ಬಡ ಕಲಾವಿದನೆಂದು ನಿನ್ನ ಕರುಣೆ ಕಥೆ ಹೇಳಲು ಬರಬೇಡ, ನಡೆ ಆಚೆ. (ಅಮರೇಶ ದಬ್ಬುವಾಗ ಸುಶೀಲ ನೋಡಿ ಚೀರುವಳು)

ಸುಶೀಲ– ಅಣ್ಣಾ....ಅಯ್ಯೋ ನನ್ನ ಕಣ್ಣಿಗೆ ಕತ್ತಲುತರಿಸುವ ಇದಾವ ದೃಶ್ಯ ನಾನು ನೋಡುತ್ತಿರುವೆ.

ಅಮರೇಶ– ತಂಗೀ ಒಮ್ಮನಸ್ಸಿನಿಂದ ಕುಳಿತು ಆ ಬೊಮ್ಮನು ನಮ್ಮ ಭಾಗ್ಯದಲ್ಲಿ ಚಿತ್ರಿಸಿದ ಒಂದು ದುರಂತ ದೃಶ್ಯ ನೋಡುತ್ತಿರುವಿಯಮ್ಮಾ, ಇನ್ನೊಂದು ನಿಮಿಷ ಈ ಮನೆಯಲ್ಲಿ ನಿಲ್ಲಲು ನಮಗೆ ಅವಕಾಶವಿಲ್ಲ.

ಸುಶೀಲ– ಏಕೆ, ಅಣ್ಣಾ....!

ಅಮರೇಶ– ಸಾಹುಕಾರರು ತಮ್ಮ ಮೂರು ಸಾವಿರ ಸಾಲಕ್ಕಾಗಿ ಜಪ್ತಿ ವಾರಂಟ್ ತಂದಿರುವರಮ್ಮಾ ಈಗ ನಾವು ಮನೆಬಿಟ್ಟು ಹೋಗಲೇಬೇಕು ಬಾ.

ಸುಶೀಲ– (ದುಃಖದಿಂದ) ಅಯ್ಯೋ ವಿಧಿಯೇ! ಈಗ ನಾವು ಮನೆ ಇಲ್ಲದೇ ನಿರಾಧಾರಿಗಳಾಗಿ ಬೀದಿ ಬೀದಿ ಅಲೆಯಬೇಕಾಯಿತೇ ಅಣ್ಣಾ. (ತೆಕ್ಕೆ ಬಿದ್ದು ಅಳುವಳು)

ಅಮರೇಶ– (ದುಃಖದಿಂದ) ಅಳಬೇಡಮ್ಮಾ ಬಾಳಲೋಚನನ ದಯವೊಂದಿದ್ದರೆ ಮತ್ತೊಂದು ಮನೆ ನಾವು ಕೊಳ್ಳಬಹುದು ಬಾ.

ಸುಶೀಲ– (ದುಃಖದಿಂದ) ಅಣ್ಣಾ....ಹುಟ್ಟಿದ ಮನೆಯನ್ನು ಈ ಕೆಟ್ಟ ಸಾಹುಕಾರರಿಗೆ ಬಿಟ್ಟುಕೊಟ್ಟು ಹೋಗಲು ನನ್ನ ಕಾಲುಗಳು ಏಳದಾಗಿವೆ ಯಣ್ಣಾ ಏಳದಾಗಿವೆ.

ಧೀರೇಂದ್ರ– ಅಣ್ಣಾ ಎಂದು ಬಣ್ಣಮಾಡಿ ಅಳುವ ಹೆಣ್ಣೇ, ನಿಮ್ಮ ಪುಣ್ಯದ ಪುಟಗಳು ಮುಗಿದುಹೋಗಿವೆ ನಡೆ ಆಚೆ. (ದಬ್ಬುವನು)

ಅಮರೇಶ– ಕಟುಕನ ಮುಂದೆ ಖುರಾನು ಓದಿದರೆ ಕೇಳುವನೇ, ನಮ್ಮ ಮಾನಕ್ಕಿಂತಲೂ ಮನೆಯು ದೊಡ್ಡದಲ್ಲ ಬಾರಮ್ಮ ತಂಗೀ ಹೋಗೋಣ.

ವೀರೇಶ– ಹೋಗುವ ಮುನ್ನ ಅಮರೇಶ ಸಹಿಹಾಕಿ ಹೊರಬೀಳು

ಧೀರೇಂದ್ರ– ಪೋಲೀಸ ಸಹಿ ಮಾಡಿಸಿಕೊಳ್ಳಿ.

ಪೋಲೀಸ್– ಗವಾಯಿಗಳೇ ಇಲ್ಲಿ ಸಹಿಮಾಡಿ. (ಅಮರೇಶ ಸಹಿ ಮಾಡುವಾಗ ಉಮೇಶ, ಮೋಹನ ಬರುವರು)

ಮೋಹನ– ಸಹಿ ಮಾಡಬೇಡಿ ನಿಲ್ಲಿ ಗವಾಯಿಗಳೇ.

ಧೀರೇಂದ್ರ– ಏಕೆ ಮೋಹನ, ನೀನು ಕೊಡುವೆಯಾ ನನ್ನ ಮೂರು ಸಾವಿರ ರೂ. ಹಣ.

ಮೋಹನ– ಹೌದು ನಾನೇ ಕೊಡುವೆ.

ಧೀರೇಂದ್ರ– ಹಾಗಾದರೆ ಕೊಟ್ಟುಬಿಡು ನನ್ನ ಹಣ, ವಾರಂಟ್ ವಾಪಸ ಮಾಡುವೆ ಈ ಕ್ಷಣ.

ಮೋಹನ– ಉಮೇಶ ಅಪ್ಪಾಜಿ ಬ್ಯಾಂಕಿಗೆ ಕಟ್ಟಲು ಕೊಟ್ಟಿರುವ ಹತ್ತು ಸಾವಿರ ರೂ. ಹಣದಲ್ಲಿ ಇವರಿಗೆ ಮೂರು ಸಾವಿರ ರೂ. ಕೊಟ್ಟು ಬಿಡು.

ಉಮೇಶ– (ಹಣ ತೆಗೆದು) ಇದೋ ಸಾಹುಕಾರರೇ ಹಣ ತೆಗೆದುಕೊಂಡು ಗವಾಯಿಗಳ ಋಣ ಪತ್ರ ವಾಪಸ ಕೊಡಿ.

ಧೀರೇಂದ್ರ– ತೆಗೆದುಕೋ. (ಕಾಗದ ಕೊಡುವನು)

ಪೋಲೀಸ್– ಸಾಹುಕಾರರೇ ನಿಮ್ಮ ಸಾಲವಂತೂ ವಸೂಲಿಯಾಯಿತು. ನಮ್ಮ ಮಾಮೂಲು....

ಧೀರೇಂದ್ರ– ನಿಮ್ಮ ಮಾಮೂಲು ತೆಗೆದುಕೊಳ್ಳಿ. (ಹಣ ಕೊಡುವನು)

ಪೋಲೀಸ್– ನಮಸ್ತೆ ಸಾಹುಕಾರರೇ. (ಹೋಗುವನು)

ಧೀರೇಂದ್ರ– ಮೋಹನ ಯಾರದೋ ಗಂಟು ಯಲ್ಲಮ್ಮನ ಜಾತ್ರೆ ನಡೆಸಿರುವಿ ನಡೆಸು....ನಡೆಸು, ಇದರ ಸೇಡನ್ನು ತೀರಿಸಿಕೊಳ್ಳದಿದ್ದರೆ ನಾನು ಧೀಮಂತ ಧೀರೇಂದ್ರನೇ ಅಲ್ಲ.

ಮೋಹನ– ಕಾಕರಾಜನ ಕೂಗಿಗೆ ನಾಕ ಲೋಕದ ಸುರೇಂದ್ರ ನಡುಗುವನೇ ಹೋಗು ಹುಚ್ಚು ಧೀರೇಂದ್ರ ಹೋಗು.

ಧೀರೇಂದ್ರ– ಹೋಗುವೆ ಮೋಹನ ಇನ್ನಾರು ತಿಂಗಳಲ್ಲಿ ನಿನ್ನನ್ನು ಕಾರಾಗೃಹಕ್ಕೆ ಕಳಿಸದಿದ್ದರೆ ನಾನು ಕಾರಸ್ಥಾನಿ ಧೀರೇಂದ್ರನೇ ಅಲ್ಲ.

ವೀರೇಶ– ಕಲಹ ಮಾಡಿ ಕೌರವರು ಕೆಟ್ಟರಂತೆ ಸಾಹುಕಾರರೇ ಸಧ್ಯ ಶಾಂತಿ ಮಾಡಿಕೊಳ್ಳಿ ಬನ್ನಿ ಹೋಗೋಣ. (ಹೋಗುವರು)

ಅಮರೇಶ– ನೋಡಿದೆಯಾ ಸುಶೀಲ ಆ ಈಶನ ಮಹಿಮೆ. ಈ ಮೋಹನನ ರೂಪದಿ ಬಂದು, ಹೋದ ಮನೆಯನ್ನು ಮತ್ತೆ ನಮ್ಮ ಸ್ವಾಧೀನ ಮಾಡಿದ.

ಸುಶೀಲ– ಅಣ್ಣಾ, ಸ್ವಾಧೀನ ಮಾಡಿದ ಈ ಸವಿ ನೆನಪಿಗಾಗಿ ಆ ಕಂದು ಗೊರಳನ ಮುಂದೆ ಇಂದಿನಿಂದ ನಂದಾ ದೀವಿಗೆಯನ್ನು ಹಚ್ಚುವೆ. (ಹೋಗುವಳು)

ಅಮರೇಶ– ಹೋಗಮ್ಮ, ಮೋಹನ ಕುಮಾರರೇ ತಾವಿಂದು ಗೈದ ಉಪಕಾರವನ್ನು ನಾನು ಯಾವ ವಿಧದಿ ತೀರಿಸಲಿ ಹೇಳಿರಿ?

ಮೋಹನ– ಉಪಕಾರವೇತರದು ಗವಾಯಿಗಳೇ ತರುಮರಗಳು ಸಹ ಪರೋಪಕಾರಕ್ಕಾಗಿ ಫಲಿಸುತ್ತವೆಯೆಂದಮೇಲೆ ಮಾನವನಾಗಿ ಹುಟ್ಟಿದ ಮೇಲೆ ನಾವು ಮಾನವನ ಕರ್ತವ್ಯವನ್ನು ಮಾಡದಿದ್ದರೆ ಮುಂದೆ ದಾನವನ ಜನ್ಮದಲ್ಲಿ ಬರಲೇ ಬೇಕು ಯಾಕ ಉಮೇಶ?

ಉಮೇಶ– ಅಹುದು ಮಿತ್ರ ಆದರೆ ನಿನ್ನಂತೆ ಸರ್ವರೂ ಬಡವರ ಮೇಲೆ ಕರುಣೆಯನ್ನು ತೋರಿಸಿ ನಡೆದರೆ ಈ ಧರಣಿಯಲ್ಲಿದ್ದ ದಾರಿದ್ರ್ಯದ ಉರಿ ಆರಿ, ಎಲ್ಲಿ ನೋಡಿದರಲ್ಲಿ ಸಿರಿವಂತಿಕೆಯ ತರು ಮರಗಳು ಕಾಣಬಹುದು.

ಅಮರೇಶ– ಕಾಣಿಸುವವು ಉಮೇಶ ಇಂಥ ಧೀರೇಂದ್ರನಂಥ ಸೊಕ್ಕಿನ ಸಿರಿವಂತ ಜನಗಳು ಕಣ್ಮುಚ್ಚಿದಾಗ ಮತ್ತೆ ಮೋಹನನಂಥಾ ತ್ಯಾಗಿಗಳು ಜಗದಲ್ಲಿ ಜನಿಸಿದಾಗ ಸಂದೇಹವಿಲ್ಲದೇ ಕಂಡು ಬರುವವು.

ಉಮೇಶ– ನಿಜ ಗವಾಯಿಗಳೇ ಇಂಥಾ ಮೋಹನನಂಥಾ ಕರುಣಾ ಮೂರ್ತಿಯನ್ನು ಜಗಕ್ಕೆ ಕಳುಹಿಸಿ ಕೊಟ್ಟದ್ದರಿಂದ ಅಜನನ್ನು ಸ್ಮರಿಸಬೇಕು

ಮೋಹನ– ಸಾಕುಮಾಡು ಮಿತ್ರ ಇನ್ನು ಯನ್ನ ಹೃದಯದಲ್ಲಿ ಸಾಕಷ್ಟು ಹೊತ್ತಿಲ್ಲ ಕಾರುಣ್ಯದ ಹಣತಿ.

ಉಮೇಶ– ಹಣತಿ ಇರಲಿ ನಡೆಯಪ್ಪಾ, ಅಪ್ಪಾ ಹಾದಿ ಕಾಯುತ್ತಿರಬಹುದು.

ಮೋಹನ್– ಬರುವೆವು ಗವಾಯಿಗಳೇ ನಮಸ್ಕಾರ

ಅಮರೇಶ– ನಮಸ್ಕಾರ ಬನ್ನಿ (ಮೋಹನ, ಉಮೇಶ ಹೋಗುವರು) ಹೇ ದೇವಾ, ಸರ್ವೇಶಾ ಸಾಲದಶೂಲದಿಂದ ಪಾರುಮಾಡಿದಂತೆ ಮದುವೆಯ ವಯಸ್ಸು ಮೀರಿನಿಂತ ನನ್ನ ತಂಗಿಯ ತಲೆಯಮೇಲಷ್ಟು ಬೇಗ ಮಂಗಳಾಕ್ಷತೆ ಹಾಕುವ ಕೃಪೆಮಾಡು ತಂದೆ.

ಸುಶೀಲ— (ಪ್ರವೇಶಿಸಿ) ಅಣ್ಣಾ ಆ ದೇವನಲ್ಲಿ ಏನೋ ಪ್ರಾರ್ಥಿಸಿದೆಯಲ್ಲ.

ಅಮರೇಶ— ಏನೂ ಇಲ್ಲವಮ್ಮಾ ಸಾಲದ ಶೂಲದಿಂದ ಆ ಪಾಲಾಕ್ಷ ಪಾರುಮಾಡಿದಂತೆ ನಿನ್ನ ತಲೆಯಮೇಲಷ್ಟು ಬೇಗ ಮಂಗಳಾಕ್ಷತೆ ಬೀಳಲಿ ಎಂದು ಪ್ರಾರ್ಥಿಸಿದೆ.

ಸುಶೀಲ— ನಿನ್ನ ಪ್ರಾರ್ಥನೆಗೆ ಆ ಪರಮೇಶ್ವರ ವರನೀಡಿ ಕಳಿಸಿದ್ದಾನಣ್ಣಾ.

ಅಮರೇಶ— ವರನೀಡಿ ಕಳಿಸಿದ್ದರೆ ಆ ವರನು ಯಾರಮ್ಮ ಬೇಗಹೇಳು?

ಸುಶೀಲ— ಕೊಂಚ ವೇಳೆಯಲ್ಲಿ ಮಿಂಚಿನಂತೆ ಬಂದು ನಮ್ಮನ್ನು ಸಾಲದ ಶೂಲದಿಂದ ಪಾರುಮಾಡಿದ ಆ ಮೋಹನ ಕುಮಾರನೇ ನನ್ನ ಕೈ ಹಿಡಿಯುವೆನೆಂದು ವಚನವಿತ್ತಿದ್ದಾನಣ್ಣ.

ಅಮರೇಶ— ವಚನ, ಕಾಮಾತುರದಲ್ಲಿ ಆಡಿದ ಶ್ರೀಮಂತರ ಮಾತನ್ನು ನಂಬಬೇಡಮ್ಮಾ.

ಸುಶೀಲ— ಕಾಮಾತುರದಲ್ಲಿ ಆಡಿದ ಮಾತಲ್ಲಣ್ಣ, ಪ್ರೇಮಾತುರದಲ್ಲಿ ಆಡಿದ ಮಾತಣ್ಣ, ಈ ನಿನ್ನ ತಂಗಿಯಮಾತನ್ನು ನಂಬಣ್ಣ.

ಅಮರೇಶ— ಶ್ರೀಮಂತರ ಮಾತನ್ನು ನಂಬಲು ನಿನ್ನಂತೆ ನಾನು ಹುಂಬನಲ್ಲಮ್ಮಾ ನಾನೆಂದೂ ಈ ಲಗ್ನಕ್ಕೆ ಸಮ್ಮತಿ ನೀಡಲಾರೆ.

ಸುಶೀಲ— ನೀನೀ ಲಗ್ನಕ್ಕೆ ಸಮ್ಮತಿ ನೀಡದಿದ್ದರೆ ಈ ನಿನ್ನ ತಂಗಿ ನಾಳೇನೆ ಹೊಳೆ, ಭಾವಿ ನೋಡಿಕೊಳ್ಳುತ್ತಾಳಣ್ಣ ಹೊಳೆ ಭಾವಿ ನೋಡಿಕೊಳ್ಳುತ್ತಾಳೆ. (ದುಃಖಿಸುವಳು)

ಅಮರೇಶ— ಅಳಬೇಡಮ್ಮಾ ನಿನ್ನ ಒಳಿತಿಗಾಗಿ ಹೇಳಿದೆ, ಅಂಥಾ ಆಗರ್ಭ ಶ್ರೀಮಂತ ನಿನ್ನ ಕೈ ಹಿಡಿಯಲು ಒಪ್ಪಿದಾಗ ನಾನೇಕೆ ಬೇಡವೆನ್ನಲಿ ಬೇಗ ಆ ಶಾಂಭವಿಯು ನಿನಗೆ ಶುಭ ಮಂಗಲವನ್ನೀಯಲಿ ನಡೆಯಮ್ಮಾ.

— ಪರದೆ ಬೀಳುವದು —

===***====***===

೧೦ನೇ ಪ್ರವೇಶ

(ಗಾರ್ಡನ್)

(ಧೀರೇಂದ್ರ–ನೀಲಾ ಸೈಕಲ್ ಮೋಟಾರ ಮೇಲೆ ಬರುವರು.)

ಧೀರೇಂದ್ರ– ನೋಡು ನೀಲಾ ಅಲರಂಬಿನ ಆಟವಾಡಲು ನಮಗೆಷ್ಟು ಉಲ್ಲಾಸ ಕೊಡುತ್ತಿದೆ, ಈ ಹೂಬನ....

ನೀಲಾ– ಆಹ....ಹ...ಹ...ಎಷ್ಟು ಅಂದವಾಗಿದೆ ಈ ಹೂಬನ ಸಗ್ಗಲೋಕದ ಸಾಕ್ಷಾತ್ ಅಂಗಜನ ಅಗರವೋ ಎನ್ನುವಂತೆ ಶೃಂಗಾರವಾಗಿದೆಯಲ್ಲವೇ?

ಧೀರೇಂದ್ರ– ಹೌದು ನೀಲಾ, ಅಗೋ ಸಾಲಾಗಿ ಬೆಳೆದಿರುವ ಬಾಳೆ, ತಾಳೆ ಗಿಡಗಳತ್ತ ಕೊಂಚ ಈಕ್ಷಿಸು ನಮ್ಮಂಥ ಪ್ರೇಮಿಗಳನ್ನು ಸ್ವಾಗತ ಮಾಡಲು ಸಿದ್ಧವಾಗಿ ನಿಂತಿರುವವೋ ಎನ್ನುವಂತೆ ಭಾಸವಾಗುತ್ತಿದೆಯಲ್ಲ?

ನೀಲಾ– ಹೌದು ದೊರೆ, ಉಲ್ಲಾಸದ ಉಯ್ಯಾಲೆಯನ್ನು ಹತ್ತಿಸುವ ಈ ಬನವನ್ನು ಎಷ್ಟುಹೊತ್ತು ಸುತ್ತಾಡಿ ನೋಡಿದರೂ, ಮತ್ತೆ ಮತ್ತೆ ನೋಡಬೇಕೆನ್ನುವ ಬಯಕೆ ಬಲವಾಗುತ್ತಿದೆ.

ಧೀರೇಂದ್ರ– ನೀಲಾ...ಅದೋ ಶೀತಲ ಚಂದ್ರನು ನಿನ್ನ ಪ್ರೀತಿಗಾಗಿ ಹೇಗೆ ಹಾತೊರೆಯುತ್ತಿರುವನು ನೋಡು.

ನೀಲಾ– ಎಲ್ಲಿ ರಾಜಾ....?

ಧೀರೇಂದ್ರ– ಅಗೋ ಅಲ್ಲಿ ನೋಡು, ಮುಗಿಲಿನಲ್ಲಿ ಹೇಗೆ ಇಣುಕಿ ಇಣುಕಿ ನೋಡುತ್ತಿರುವನು ನಿನ್ನ ಮಿಸುನಿಯ ಮೈಬಣ್ಣಕ್ಕೆ ಮೆಚ್ಚಿ.

ನೀಲಾ– ಮೆಚ್ಚಿದವರನ್ನು ಮಿಲನ ಹೊಂದುವ ಹೆಣ್ಣು ಗಂಡಿಗೆ ಒಂದು ಕಣ್ಣಾಗಿದ್ದಾನೆ ಈ ಚೆಲುವ ಚೆಂದಿರನು.

ಧೀರೇಂದ್ರ– ಸುಂದರಿ ಈ ಚಂದಿರನ ಬೆಳಕಿನಲ್ಲಿ ಮನಸಾರೆ ಸವಿಯುವ ಬಾ ಮನ್ಮಥನ ಬುತ್ತಿ.

ನೀಲಾ– ಬುತ್ತಿ ನಿಮ್ಮಹತ್ತಿರವೇ ಇದೆ, ಮತ್ತೇಕೆ ವ್ಯರ್ಥ ಹೊತ್ತು ಗಳೆಯುವಿರಿ, ಬಾ....ರಾಜಾ....

–: ಹಾಡು :–

ಧೀರೇಂದ್ರ– ನಡೆ ನೀಲಾ, ವೇಳೆ ವಿಶೇಷವಾಯಿತು.

ನೀಲಾ– ಪ್ರೀತಿಯ ಮತ್ತಿನಲ್ಲಿ ಹೊತ್ತು ಹೋದದ್ದೇ ಗೊತ್ತಾಗಲಿಲ್ಲ ನಡೆ ರಾಜಾ....

ಧೀರೇಂದ್ರ– ಕಮಾನ್ ಲೀಲಾ.... (ಸೈಕಲ್ ಮೋಟಾರಮೇಲೆ ಹೋಗುವರು.)

– ಪರದೆ ಬೀಳುವದು –

===***=====***===

೧೧ನೇ ಪ್ರವೇಶ

– ಬಂಗ್ಲೆ – (ಮದುವೆಯ ಸೀನು) –

(ಸುಶೀಲ–ಮೋಹನ ಮದುಮಕ್ಕಳಾಗಿ ಕುಳಿತಿರುವರು)

ಆಚಾರಿ– ಸಾಹುಕಾರರೇ ಸರ್ವರೂ ಬಂದಿರುವರೇ....?

ಸುರೇಂದ್ರ– ಬಂದಿರುವರು, ಗಂಗಣ್ಣ ಸರ್ವರಿಗೂ ಅಕ್ಷತೆ ಮುಟ್ಟಿಸು

ಗಂಗಣ್ಣ– ಮುಟ್ಟಸ್ತೀನ್ರೀಯಪ್ಪಾ. (ಅಕ್ಷತೆ ಕೊಡುವನು)

ಆಚಾರಿ– ಸಾಹುಕಾರರೇ ಮಂತ್ರ ಶುರು ಮಾಡುತ್ತೇವೆ.

ಸುರೇಂದ್ರ– ಹೂಂ ಶುರುಮಾಡಿ, ಅಮರೇಶ ನಿಮ್ಮಕಡೆ ಎಲ್ಲರೂ ಬಂದಿರುವರು ತಾನೆ?

ಅಮರೇಶ– ಎಲ್ಲರೂ ಬಂದಿದ್ದಾರೆ ಪ್ರಾರಂಭಿಸಿ ಆಚಾರ್ಯರೇ.

ಆಚಾರಿ– (ಮಂತ್ರ) ತದೇವ ಲಗ್ನಂ ಸುದಿನಂತ ದೇವಾ ।

ತಾರಾಬಲಂ ಚಂದ್ರಬಲಂ ತುದೇವಾ! ವಿದ್ಯಾಬಲಂ ।

ದೈವಬಲಂತು ದೇವಾ ಗೌರೀ ಪತಿತೇಂದ್ರಿ ಯುಗಂಸ್ಮರಾಮಿ

ಸುಲಗ್ನ ಸಾವಧಾನ! ಸುಮೂರ್ತೆ ಸಾವಧಾನ! ಓಂ....

ಶಾಂತಿ:....ಶಾಂತಿ:......

ಸುರೇಂದ್ರ– ಆಚಾರಿಗಳೇ ವಧು....ವರರ ಹೆಸರು ಕೇಳಿ.

ಆಚಾರಿ– ಕೇಳುತ್ತೇನೆ...ಕೇಳುತ್ತೇನೆ, ಮೊದಲು ದಕ್ಷಿಣೆ ಕೊಡಿ.

ಸುರೇಂದ್ರ– ತಗೊಳ್ಳಿ. (ರೂಪಾಯಿ ಕೊಡುವನು)

ಆಚಾರಿ– ತಂಗೀ ನಿನ್ನ ಪತಿಯ ಹೆಸರು ಹೇಳಮ್ಮಾ ಹೂಂ....ನಾಚಿಗೋಬಾರ್ದು ಹೇಳಮ್ಮಾ?

ಸುಶೀಲ— ಮೋಹನರಾಯರು.

ಆಚಾರಿ— ನೀನು ಹೇಳೋ ತಮ್ಮಾ.

ಮೋಹನ— ಸುಶೀಲ.

ಆಚಾರಿ— ನೀನು ಹೇಳೋ ಗಂಗಣ್ಣ.

ಗಂಗಣ್ಣ— ಊರಮುಂದ ಇರೋದು ಉಪ್ಪು ನೀರು ಬಾವಿ, ನನ್ನ ಹೇಣ್ತಿ ಹೆಸರು ತಾರಾಬಾಯಿ, ನೀವು ಹೇಳ್ರಿ ಆಚಾರಿಗಳೇ.

ಆಚಾರಿ— ನಶಿಬೇಕಂತ ಕಿಸಿ ಕಿಸಿ ನಗತಾಳ ಯಶೋದೆ.

ಸುರೇಂದ್ರ— ಆಚಾರಿಗಳೇ ವಧು ವರರನ್ನು ಕರೆದುಕೊಂಡು ಹೋಗಿ ದೇವರ ಮುಂದೆ.

ಆಚಾರಿ— ನಡಿಯಿರಪಾ....ನಡಿಯಿರಿ.... (ಹೋಗುವರು)

—: ಪರದೆ ಬೀಳುವದು :—

===***=====***===

೧೨ನೇ ಪ್ರವೇಶ

–ರಸ್ತಾ–

(ಸಂಗಣ್ಣ ಬಳೆಪೆಟ್ಟಿಗೆ ಹಿಡಿದುಕೊಂಡು ತಾರಾಳಿಗೆ ಎದುರಾಗಿ ಬರುವನು.)

ಸಂಗಣ್ಣ— ನಿನ್ನೆ ಮನಿಕಡೆ ಯಾಕ ಬರಲಿಲ್ಲವ್ವ ತಾರಾ. ನೀ ಬರ್ತೀನಂತ ಹೇಳಿದ್ದಕ್ಕ ನಾ ದಾರಿ ನೋಡಿ...ನೋಡಿ...ಕಡೆಗೆ ಕಣ್ಣಗುಡ್ಡಿ ಕಡ್ಯಾಕ ಬರಾಕ ಬಂದ್ವು ನೀಯೇನ ಬರ್ಲಿಲ್ಲ.

ತಾರಾ— ಬರಬೇಕಂದ್ರ ಪೀರ್ಲ ಹಬ್ಬದ ಬಟ್ಟಿ ಎದಿಮಟ್ಟ ಬದ್ದಿದ್ದವು ಹ್ಯಾಂಗ ಬಿಟ್ಟ ಬರಾಕ ಆಕೈತೆ ನೀನೇ ಹೇಳು.

ಸಂಗಣ್ಣ— ಬರಾಬರಿ, ಇರ್ಲಿ. ಮೊನ್ನೆ ಬಳಿ ಕೇಳಿದೆಲ್ಲವ್ವ, ನಿನ್ನೆ ಪೂನಾದಿಂದ ತಂದಿದೀನಿ ನೋಡು ಎಷ್ಟ ಚೆಂದ ಅದಾವ.

ತಾರಾ— ಬಾಳ ಹೇಳ್ತೀಯಿ ಹಂಗಾರ ತೋರ್ಸು ನೋಡಾನ ಬಳಿ.

ಸಂಗಣ್ಣ— ಬಳಿಯೇನ ಕೇಳ್ತಿ ತಾರಾ, ಸಂಗಣ್ಣನ ಬಳಿ ಅಂದ್ರ ಸುರಪುರದಿಂದ ಸುರುವಾಗಿ ಹುಬ್ಬಳ್ಳಿತನ ಹೆಸರಾಗ್ಯಾವ. ನಾಲ್ಕು ಬಳಿ ಹಾಕ್ಕೊಂಡ್ರ ಸಾಕು, ಕೈ ಕಾಣಿಸಬೇಕು ಅಷ್ಟು ಕಳಾ.

ತಾರಾ— ದೌಡ ತೋರಿಸಣ್ಣ ನೋಡೋಣ ಬಳಿ.

ಸಂಗಣ್ಣ— ಹಂಗಾರ ಇಲ್ಲೇ ಬೋಳ ಬಸವಣ್ಣನ ಕಟ್ಟೀಮ್ಯಾಲ ಕೂಡ್ರವ್ವ ಹೈಕ್ಲಾಸ ತೋರಸ್ತೀನಿ ಬಳಿ. (ಕೂಡ್ರುವಳು ಬಳಿತೋರಿಸುವನು)

ತಾರಾ— ಈ ಬಳಿ ಹೆಸರೇನsss ಯಣ್ಣಾ.

ಸಂಗಣ್ಣ— ಇವು ನೋಡವ್ವಾ ಸುವರ್ಣ ಸುಂದರೀ.....

ತಾರಾ— (ಇನ್ನೊಂದು ಮಟಾ ತೋರಿಸಿ) ಇವು ಯಾವ ಯಣ್ಣಾ?

ಸಂಗಣ್ಣ— ಅವು ನೋಡವ್ವಾ ಅನುರಾಗದ ಅಂಬುಜಾ.

ತಾರಾ— ಏಟು ಮಿಂಚತಾವ, ಇವು ಯಾವ ಯಣ್ಣಾ.....?

ಸಂಗಣ್ಣಾ— ಮಿಂಚೋವು ಮದನಮೋಹಿನಿ ನಿನ್ನ ಕೈಗೆ ಬೇಸಾಗಿ ಒಪ್ಪತಾವ ಹಾಕಲೇನವ್ವಾ?

ತಾರಾ— ಹಾಕಿಸಿಕೊಳ್ಳಾಕ ಏನಣ್ಣಾ, ಎಲ್ಲಾ ಚೆಂದ ಅದಾವ ಅದ್ರ ಕೈಯಾಗ ರೊಕ್ಕ ಇಲ್ಲ.

ಸಂಗಣ್ಣಾ— ರೊಕ್ಕಾ ಯಾರು ಕೇಳಿದ್ರೂ ತಾರಾ, ಮೊದ್ಲು ಹಾಕಿಸಿಕೋ ನಕ್ಕೋಂತ, ನಾವು ನಾಕಬಳಿ ಹಿಕ್ಕಟ ಕೊಡೂವಂತಿ ಎಲ್ಲಿ! ಹೊಕ್ಕೈತಿ ರೊಕ್ಕ.

ತಾರಾ— (ನಾಚುತ್ತ) ಬ್ಯಾಡಬುಡಪ್ಪಾ ಉದ್ರಿ ಹಾಕಿಸ್ಕೋಬಾರ್ದು.

ಸಂಗಣ್ಣಾ— (ಜುಲ್ಮಿಯಿಂದ) ಯಾಕ ನಾಚ್ಕೋಂತಿ ತಾರಾ ಕೊಡುಕ್ಕೈ.

ತಾರಾ— ಕಳಸಪ್ಪ ಹಾಕಿದಂಗ ಅಳಸ ಬಳಸ ಹಾಕೀಕಿ ಗುತ್ತನಾಗಿ ಹಾಕಬೇಡ ನೋಡ ನನಗ.

ಸಂಗಣ್ಣಾ— ಗುತ್ತನಾಗಿ ಹಾಕ್ತೀನಿ ಎಡಗಾಲೆತ್ತಿ ಬಲಗಾಲ ಬಾರ್ಲ ಹಾಕವ್ವ (ಕೈ ತೆಗೆದುಕೊಂಡು) ಜೈ ಬೋಳು ಬಸವೇಶ, ಈ ಹಸ್ತಕ್ಕೆ ಬಳಿಸಿಸ್ತಾಗಿ ಏರ್ಲಿ ಆ ಹ....ಹ....ಹ....ಏಟ ಮೆತ್ತಗದಾನವ್ವ ನಿನ್ನ ಕೈ. (ಕೈ ಹಿಸುಕುವನು)

ತಾರಾ— ಏಟೊತ್ತು ಹಿಸಕ್ತೀಯಾ ಯಣ್ಣಾ ಗಸಾನ ಹಾಕು.

ಸಂಗಣ್ಣಾ— ಹಿಸಗಿದೋಟ ಬೇಸವ್ವ ಅಂದ್ರ ಗಸಾನ ಹೊಕ್ಕಾವ ನಮ್ಮ ಬಳಿ.

ತಾರಾ— ದೌಡ ಹಾಕಣ್ಣ ಹಿಕಟ್ ನನಗಂಡ ಬಂದು ಬಿಗದಾನು ಹಳಿ.

ಸಂಗಣ್ಣಾ— ಸ್ವಲ್ಪ ತಡೀ ತಾರಾ ಮೂರು ನಿಮಿಷದಾಗ ಏರಸ್ತೀನಿ. (ಬಳಿ ಏರಿಸುವನು)

ತಾರಾ— ಹಾ...ಯಮ್ಮಾ...ಹಾ (ರೋದನ ಸ್ವರ ಮಾಡುವಳು)

ಸಂಗಣ್ಣಾ— ಹಾ...ಹಾ...ಅಷ್ಟು ಬ್ಯಾನಿ ಆಕೈತೇನವ್ವಾ?

ತಾರಾ— ಅಯ್ಯ...ಯ್ಯೋಽಽಸಾಕಬಿಡ ಯಣ್ಣಾ.

ಸಂಗಣ್ಣಾ— ನಾಕ ಬಳಿ ಹಾಕ್ಕೊಳೊದ್ರಾಗ ಏಟ ಒದ್ಯಾಡಕ ಹತ್ತೀಯವ್ವ ನಿಂದ್ರು...ಇಕಡೆ ಕೈಗೆ ಒಂದ ನಾಲ್ಕ ಬಳಿಹಾಕಿ ಬಿಡ್ತೀನಿ ಒಂದೇ ಕೈಗೆ ಹಾಕಬಾರದು.

ತಾರಾ— ಬಾಳ ಬ್ಯಾನಿ ಮಾಡ್ತೀಯ ಯಣ್ಣಾ.

ಸಂಗಣ್ಣ— ಬ್ಯಾನಿ ಮಾಡುದುಲ್ಲ ಏಳವ್ವಾ ತಾರಾ ಎಣ್ಣಿಹಚ್ಚಿ ಸುಣ್ಣಗ ಏರಸ್ತೀನಿ. (ಎಣ್ಣೆಹಚ್ಚಿ ಏರಿಸುವನು)

ತಾರಾ— ಸತ್ನೋಯಣ್ಣಾ. (ಬಾಯಿ ಬಡಿದುಕೊಳ್ಳುವಳು)

ಸಂಗಣ್ಣ— ಹಿಂಗ್ಯಾಕ ಮಾಡ್ತೀಯ ಹೆಣ್ಣಾ ಜರಾ ಅಡ್ಡೆಲುಬು ಹಿಡಿದಾದ ದಾಟಿದಮ್ಯಾಲ ಎಲ್ಲಾ ತಣ್ಣಗಾಗತದ.

ತಾರಾ— ಜಲ್ದೀ ಹಾಕಣ್ಣಾ ಏನು ದಿಲ್ಲಗಿ ಹಚ್ಚೀ.

ಸಂಗಣ್ಣ— ಆತ ಆತವ್ವ (ಬಳೆಹಾಕುವದು ಮುಗಿಸಿ ಎದ್ದು ನಿಲ್ಲುವನು)

ತಾರಾ— ಆತ ಹೋತಂತ, ನೂತಗೊಂತ ಕುಂದ್ರಬ್ಯಾಡ, ಹಿಂದಗಡೆ ನನಗಂಡಾ ಬಂದ್ರ ನಂದು ನಿಂದು ದವಡೆ ಹರದು ದಮಡಿ ಮಾಡ್ಯಾನು.

ಸಂಗಣ್ಣ— ದವಡೀ ಹರ್‍ಯಾಕ ಬಂದ್ರ ಚಾವಡೀ ಏರಿಸೀದ್ರಾತು ಒಮ್ಮೆ ಗಂಡಗ ಗಟ್ಟಿಸ ನಿಂದ್ರವ್ವ.

ತಾರಾ— ಗಟ್ಟಿಸಿ ನಿಂದ್ರಾಕ ಏನಣ್ಣಾ, ಒಂದಾರ ಗಂಡಾಗಲಿ, ಹೆಣ್ಣಾಗಲೀ ಹುಟ್ಟಿಲ್ಲ.

ಸಂಗಣ್ಣ— ಕೈ ಬಿಡ್ತಾನಂತ ಹೆದರಿಕೊಂಡಿದ್ದೇನವ್ವಾ ತಾರಾ....?

ತಾರಾ— ಹೌದಣ್ಣಾ ಅವ ಕೈಬಿಟ್ರ ನನಗ್ಯಾರ ಅದಾರೆ.

ಸಂಗಣ್ಣ— ತಾರಾ...ಧಾರವಾಡಕ್ಕ ದಾರಿ ಎಷ್ಟಿಲ್ಲ? ನೀಯೇನ ಚಿಂತಿ ಮಾಡಬ್ಯಾಡ ಅವಾ ಕೈಬಿಟ್ರs ಇನ್ನೊಬ್ಬಾಂವ ನಿಂತಾನ.

ತಾರಾ— ಎಲ್ಲಿ ನಿಂತಾನ?

ಸಂಗಣ್ಣ— ನಿನ್ನೆದುರಿಗೆ ನಿಂತಾನ.

ತಾರಾ— (ಸುತ್ತಾ ನೋಡಿ) ನನ್ನೆದುರಿಗೆ? ಎಲ್ಲಿ ನಿಂತಾನ ಸಂಗಣ್ಣಾ?

ಸಂಗಣ್ಣ— ಜಲ್ದೀ ತಿಳಕೋಬೇಕ ಹೆಣ್ಣ, ಅಗಾ ಇಲ್ಲಿ ನೋಡ.

ತಾರಾ— ಎಲ್ಲಿ ನೋಡ್ಲಿ....?

ಸಂಗಣ್ಣ— ಇಲ್ಲಿ ಸೀದಾ ನನಕಡೆಗೇ ನೆಟ್ಟಗೆ ನೋಡು, ಙ್ರಾಪಿನ ಹುಡುಗ

ಕಾಣಸ್ತಾನ. (ತಾರಾ ಸಂಗಣ್ಣನ ಕಡೆಗೆ ನೋಡುವಳು. ಸಂಗಣ್ಣ ಕಣ್ಣು ಹೊಡೆಯುವನು)

ತಾರಾ— ತಿಳ್ದುಬಿಡು ಸಂಗಣ್ಣಾ, ನೀ ತಂಗೀ ತಂಗೀ ಅಂತಿದ್ದಿ ನಾ ಹ್ಯಾಂಗ ತಿಳ್ಕೋಬೇಕ ನಿನ ಬಣ್ಣ.

ಸಂಗಣ್ಣ— ಈಗ ತಿಳಿತಿಲ್ಲ, ನನ ಮಾವಿನ ಹಣ್ಣ.

— ಪದ —

ಸಂಗಣ್ಣ— ತಾರಾ ನಾಳೆ ಬೊಂಬೈಗೆ ಬಳಿ ತರಾಕ ಹೊಕ್ತೀನಿ ನಿನಗೇನರ ಬೇಕಾರ ಹೇಳು, ತಗೊಂಡ ಬರ್ತೀನಿ.

ತಾರಾ— ತರೋದಾವು ನಾಲ್ಕು ಬೊಂಬೈ ರಂಭಾ ವೈಲು, ಒಂದು ನಿಮ್ಮೀ ಹೇರೈಲು, ಒಂದು ಕಿಮ್ಮೀ ಸ್ನೋ ತಗೊಂಡ ಬರ್ತೀಯಾ?

ಸಂಗಣ್ಣ— ಪದ್ಮಶ್ರೀ ಪೌಡರ್ ಒಂದು ಬಿಟ್ಟೆಲ್ಲ, ಒಮ್ಮೇಕ ಗಪ್ಪನ ನೆಪ್ಪ ಮಾಡ್ಕೊಂಡ ಹೇಳು?

ತಾರಾ— ಹಾ...ಅಗಾರ ಇಲ್ನೋಡು ಮತ್ತೆ ನೀನಾಗಿ ತರ್ತೀನಿ ಅಂದ್ರೆ ಈ ಬಳ್ಳಿಗೊಂದು ಹಳ್ಳಿನುಂಗ್ರ.

ಸಂಗಣ್ಣ— ಹಳ್ಳಿನುಂಗ್ರSS ತರತೀನಿ ತಾರಾ, ಮುಂದಿನದೆಲ್ಲಾ ನಿನ್ನಮ್ಯಾಲ ಐತಿ ಭಾರ.

ಗಂಗಣ್ಣ— ಏನ ಗ್ಯಾರಾ ಬಾರಾ ಅಂತ ಮಸ್ತನಾಗಿ ಮಾತ ನಡೆಸಿಯಲ್ಲಪ್ಪ ಜೋಕಮಾರ ತಿಳಿವಲ್ದಲ್ಲಮ್ಮ ನಿನ್ನ ಅಣ್ಣ ತಂಗಿ ವಿಚಾರ.

ಸಂಗಣ್ಣ— ಏ....ಏ....ಮಾವ ಸುಮಸುಮ್ನ ಅಣ್ಣಾ-ತಂಗಿ ಮ್ಯಾಲ ಹಿಂಗ ಹಾದರ ಕಟ್ಟಿದವರು ಮುಂದನಾದರಾಗಿ ಹುಟ್ತಾರಂತ ಶಾಸ್ತ್ರ ಕೇಳಲ್ಲೇನಪ್ಪಾ ಮಾವ?

ಗಂಗಣ್ಣ— ಶಾಸ್ತ್ರ ಅದೇನೋ ಅಂತಾರಲ್ಲ, ಮಂಗ್ಯಾನ ವನದಾಗ ಬಿಡಬಾರ್ದು, ನಿಮ್ಮಂಥ ಸಂಗಯ್ಯಗಳನ್ನು ಮನ್ಯಾಗ ಬಿಡಬಾರ್ದಂತ. ಸಾಕು ಸುಮ್ನೆ ಹೋಗಲೇ ಕಾಮಾ.

ಸಂಗಣ್ಣ— ಸಿಟ್ಟಾಗಬ್ಯಾಡಪಾ ಭೀಮ. ನಾಳೆ ಬಾರಾ ಬಾರಸ್ಲಿಕ್ಕೆ ಬರ್ತೀನಪ್ಪಾ ತಂಗೀ ಜಲ್ದಿ ಹೊಲ್ದಿರಬೇಕ ನೋಡ ಅಂಗಿ.

ತಾರಾ– ಅಟೇ ಮಾಡಾ ಯಣ್ಣಾ, ನಮ್ಮಾತನ ಎಟ್ಟಿಮಾತು ಮನಸ್ಸಿಗೆ ಹಚ್ಕೊಂಡು ಮತ್ತೆ ಬೇರೆ ಕಡಿಗೆ ಹಾಕೀನೀ ನಿನಬಟ್ಟಿ.

ಸಂಗಣ್ಣ– ಬಟ್ಟಿ ನಿನ್ನಗ ಬಿಟ್ಟು ಯಾರಿಗೆ ಹಾಕಲವ್ವ ನಿನಗ ಹಾಕ್ತೀನಿ ಗಟ್ಟಿ.

ಗಂಗಣ್ಣ– ಗಟ್ಟೀ ಸುಮ್ಕ ಹೋಗಲೇ ಅಡಿಬಿಟ್ಟಿ, ಒಂದು ಕೊಟ್ಟಂದ್ರ ಹಟ್ಟೀತನ ಹಾರೀದಿ. (ಮೇಲೆ ಹೋಗುವನು ಸಂಗಣ್ಣ ಓಡಿ ಹೋಗುವನು)

– ಪರದೆ ಬೀಳುವದು –

===***====***===

೧೩ನೇ ಪ್ರವೇಶ

– ಬಂಗ್ಲೆ –

(ಮೋಹನ ಪೇಪರ ನೋಡುವಾಗ ಸುಶೀಲ ಬಂದು ಕಣ್ಣು ಮುಚ್ಚುವಳು.)

ಮೋಹನ– ಸುಶೀಲ ಆ ಚಿತ್ರದಲ್ಲಿರುವವರು ಯಾರು ನೋಡು? (ಚಿತ್ರದ ಕಡೆ ನೋಡುವಳು)

ಸುಶೀಲ– ಚಿತ್ರದಲ್ಲಿ ಮುರಳಿ, ಮಾಧವ ಕಂಡುಬರುತ್ತಿದ್ದಾನೆ ಸ್ವಾಮಿ

ಮೋಹನ– ಮುರಳಿ ಮಾಧವನ ತೊಡೆಯಮೇಲೆ ಯಾರೋ ಮಲಗಿರುವರಲ್ಲ.

ಸುಶೀಲ– ತೊಡೆಯಮೇಲಲ್ಲವೇ?

ಮೋಹನ– ಹೌದು.

ಸುಶೀಲ– ಮುರಳಿಯ ಸುಸ್ವರಕ್ಕೆ ಮೈಮರೆತು ಮಲಗಿರುವಳು ಅವನ ರಾಣಿ ರಾಧಾ.

ಮೋಹನ– ರಾಧಾ ಮಾಧವರ ಈ ಚಿತ್ರಪಟ ಕಂಡು ಯನ್ನಂತರಂಗದಲ್ಲಿ ವಿಚಿತ್ರವಾಗಿ ಎದ್ದು ನಿಂತು ಸದ್ದು ಮಾಡುತಿಹನು ಮದನ ಮಾರುತನು ಬಾ ಹೃದಯೇಶ್ವರಿ.

ಸುಶೀಲ– ಬಾ ರಾಜಾ.....

– ಹಾಡು –

(ಇಬ್ಬರೂ ಪ್ರೇಮಾತುರದಲ್ಲಿ ನಿಂತಿರುವಾಗ ಉಮೇಶ ಪ್ರವೇಶಿಸುವನು ಸುಶೀಲ ನಾಚಿ ಒಳಗೆ ಹೋಗುವಳು.)

ಉಮೇಶ– ಓಫ್...ಸ್ವಾಮಿ ಮೋಹನ ನಿಮ್ಮ ಸಂತೋಷದ ಸನ್ನಿವೇಶವನ್ನು ರಸಭಂಗ ಮಾಡಿದ ಈ ಉಮೇಶನನ್ನು ಕ್ಷಮಿಸಬೇಕು.

ಮೋಹನ– ಪರವಾಯಿಲ್ಲಯ್ಯ ಕುಳಿತುಕೋ ಉಮೇಶ್ ಎಂ.ಎಸ್.ಸಿ ಯಂತೂ

ಹಾಯಾಗಿ ಮುಗಿಸಿದೆ, ಇನ್ನು ಎಂ.ಬಿ.ಬಿ.ಎಸ್ ಅಷ್ಟು ಮುಗಿಸಿ ಸರ್ಜನ ಸೀಟ್ ಹಿಡಿ.

ಉಮೇಶ– ಹಿಡಿಯಬೇಕೆಂದರೆ ಬಡತನವೆಂಬ ಗಡುತರವಾದ ಗೋಡೆ ಅಡ್ಡಗಟ್ಟಿದೆ ಮಿತ್ರ,

ಮೋಹನ– ಮಿತ್ರ ಅದನ್ನು ಸೀಳಿಹೋದರೆ ಸಿಗಬಹುದಲ್ಲ ಸೀಟು.

ಉಮೇಶ– ಸೀಟು ಸಿಗಬಹುದು ಮಿತ್ರ ಬಡವನಾದ ನಾನು ಎಲ್ಲಿಂದ ತರಲಿ ಅಸದಳ ನೋಟು.

ಮೋಹನ– ನೋಟು ಕೊಟ್ಟರೆ ಮಾತ್ರ ಸೀಟು ಸಿಗುವದೇನು ಮಿತ್ರಾ?

ಉಮೇಶ– ನಿನಗ ತಿಳಿದಿಲ್ಲವೇ ಮಿತ್ರಾ ಮಾಮೂಲಿ ಬಸ್‌ಕಂಡಕ್ಟರ್ ನಾಗಬೇಕಾದರೆ ಮೂರುಸಾವಿರ ಲಂಚಕೊಟ್ಟು ಮೇಲೆ ಬೀರು, ಬ್ರ್ಯಾಂಡಿ ತರಿಸಿ ಕುಡಿಸಿ ಖುಸಿ ಮಾಡಿದರೆ ಮಾತ್ರ ಕಂಡಕ್ಟರ್‌ನೆಂಬ ಕಂಚಿನಪದಕ ಸಿಗುವುದು.

ಮೋಹನ– ಹೀಗುರುವುದೇ....?

ಉಮೇಶ– ಹೂಂ....ಹೀಗಿರುವಾಗ ಸರ್ಜನ ಸೀಟು ಸಿಗಬೇಕಾದರೆ ಎಷ್ಟು ಸಹಸ್ರ ಹಣ ಕೊಡಬೇಕು ನೀನೇ ಹೇಳು?

ಮೋಹನ– ನಿಜ ಮಿತ್ರ ಸುಮ್ಮನೆ ಮಜಾ ಮಾಡಿ ನೋಡಿದೆ.

ಉಮೇಶ– ಮಜಾ ಮಾಡು ಮೋಹನ್, ನೀನು ಕೂಡಾ ಎಂ.ಎಸ್.ಸಿ. ಮುಗಿಸಿರುವೆ ಮುಂದೆ ಎಂ.ಬಿ.ಬಿ.ಎಸ್ ಮುಗಿಸಬೇಕೋ ಅಥವಾ ಮಡದಿಯ ಮುಂದೆ ಹೀಗೆ ಮಜಾ ಮಾಡುತ್ತ ಕೂಡ್ರಬೇಕೋ.

ಮೋಹನ– ಎಂ.ಬಿ.ಬಿ.ಎಸ್ ಏಕೆ ಮಿತ್ರ ಎಂ.ಡಿ ವರೆಗೆ ಓದಬೇಕೆಂದಿರುವೆನು ಆದರೆ.....?

ಉಮೇಶ– ಆದರೆ ಎಂಬ ಮುದುರು ಏಕೆ?

ಮೋಹನ– ಮುದುರು ಏನು ಮಿತ್ರ ನಮ್ಮ ಫಾದರ ಓದು ಸಾಕು ಮಾಡೆಂದು ಹಠ ಹಿಡಿದಿದ್ದಾರೆ.

ಉಮೇಶ– ಏಕೆ ಮಿತ್ರ?

ಮೋಹನ– ಏಕೂ ಇಲ್ಲ ಸುಮ್ಮನೆ ಕಂಪನಿ ಕಾರುಭಾರು ನೋಡುತ್ತ ಹೋಗೆಂದು ಹಠ ಹಿಡಿದಿದ್ದಾರೆ.

ಉಮೇಶ– ಮಿತ್ರ ಓದಿ ಮಾಡುವುದಾದರೂ ಏನು? ಒಬ್ಬನೇ ಒಬ್ಬ ಪುತ್ರ, ನೀ ಹತ್ತು ವರ್ಷ ಕೂತು ಉಂಡರೂ ಸವೆಯದಷ್ಟು ಸಂಪತ್ತು ನಿಮ್ಮಪ್ಪ ಗಳಿಸಿದ್ದಾನೆ.

(ಅಂಚೆಯವನು ಪತ್ರ ಕೊಡುವನು.)

ಅಂಚೆಯವ– ಉಮೇಶಬಾಬು ನಿಮ್ಮ ಲೆಟರ್ ಬಂದಿದೆ ತೆಗೆದುಕೊಳ್ಳಿ (ಲೆಟರ್ ಕೊಡುವನು)

ಮೋಹನ– ಯಾವ ಲೆಟರ್ ಮಿತ್ರಾ?

ಉಮೇಶ– (ನೋಡಿ) ಇನಸ್ಪೆಕ್ಟರ್ ನೌಕರಿಗಾಗಿ ಟ್ರೇನಿಂಗ್ ಕರೆದಿದ್ದಾರೆ.

ಮೋಹನ– ಟ್ರೇನಿಂಗ್ ಎಲ್ಲಿ ಮಿತ್ರ....?

ಉಮೇಶ– ಬೆಂಗಳೂರಿನಲ್ಲಿ ಮಿತ್ರ ನಾಳೆ ನಾಲ್ಕನೆಯ ತಾರೀಖಿಗೆ ಹೋಗಬೇಕು. ಏನು ಮಾಡುವದು. (ಚಿಂತಿಸುವನು)

ಮೋಹನ– ಉಮೇಶ ಮತ್ತೇನು ಹಚ್ಚಿಕೊಂಡಿ ತಲೆಯಲ್ಲಿ ಜಡ್ಡು?

ಉಮೇಶ– ಟ್ರೇನಿಂಗ್ ಹೋಗಲು ಬೇಕಲ್ಲವೇ ದುಡ್ಡು?

ಮೋಹನ– ದುಡ್ಡು ಎಷ್ಟು ಬೇಕು ಉಮೇಶ?

ಉಮೇಶ– ಸಧ್ಯ ಒಂದು ಸಾವಿರ ಕೊಡು ಮಿತ್ರ.

ಮೋಹನ– ತೆಗೆದುಕೋ ಮಿತ್ರಾ, ಮತ್ತೇನಾದರೂ ಅಂಥ ದುಡ್ಡಿನ ಪ್ರಸಂಗಬಿದ್ದರೆ, ತಾರುಮಾಡು ತೀವ್ರ ಕಳಿಸುತ್ತೇನೆ. (ಹಣ ಕೊಡುವನು)

ಉಮೇಶ– ಮೋಹನ ಹಣ ಮತ್ತು ನಿನ್ನ ಋಣವನ್ನು ಯಾವ ಜನ್ಮದಲ್ಲಿ ತೀರಿಸುವೆನೋ ತಿಳಿಯದು, ನಿನ್ನಂಥ ಉದಾರಿ ಮಿತ್ರ ದೊರಕಿದ್ದೊಂದು ನನ್ನ ಮದರ ಮಾಡಿದ ಪುಣ್ಯ. ಬರುವೆ ನಮಸ್ತೆ.

ಮೋಹನ– ಬರುವಿಯಂತೆ ಮಿತ್ರಾ ಸ್ವಲ್ಪ ಕಾಫಿ ತೆಗೆದುಕೊಂಡು ಹೋಗ ಹಾಂ...ಗಂಗಪ್ಪಾ....ಗಂಗಪ್ಪಾ....

ಗಂಗಣ್ಣಾ– (ಪ್ರವೇಶಿಸಿ) ಕರೆದೇನ್ರಿಯಪ್ಪಾ....ಏನು ಬೇಕಾಗಿತ್ತು?

ಮೋಹನ– ಗಂಗಪ್ಪ ಎರಡು ಕಪ್ ಕಾಫಿ ತೆಗೆದುಕೊಂಡು ಬಾ.

ಗಂಗಣ್ಣ– ಆಗಲ್ರೀಯಪ್ಪಾ. (ಹೋಗುವನು)

ಉಮೇಶ– ಮೋಹನ ಇಂದು ಮೂರು ನಾಲ್ಕು ಸಾರೆ ಕಾಫಿಕುಡಿದು ಬಹಳ ಹೀಟಾಗಿದೆ.

ಮೋಹನ– ಉಮೇಶ ನೀನು ಮೂರು ನಾಲ್ಕು ಸಾರೆ ಕಾಫಿ ಕುಡಿದುದಕ್ಕೆ ಹೀಟಾಯಿತೆನ್ನುವಿ, ನಮ್ಮ ಮಿತ್ರ ಪಾಟೀಲ ಪ್ರಭು ನೂರುಸಲ ಕುಡಿಯುತ್ತಾನೆ, ಅವನಿಗೆ ಹೀಟೇ ಇಲ್ಲ ಹಾಗೇ ಥಾಟಾಗಿ ತಿರುಗುತ್ತಾನೆ.

ಉಮೇಶ– ಕಾಫಿ, ಚಹಾ, ಚುಟ್ಟಾಕ್ಕೆ ಮಿತಿ ಬೇಕು ಮಿತ್ರಾ,

ಮೋಹನ– ಮಿತಿ ಇಲ್ಲದಿದ್ದರೆ?

ಉಮೇಶ– ಇಲ್ಲದಿದ್ದರೆ ಅನಂತಾಗಿರಿ, ಹಾಸ್ಪಿಟಲ್‌ಗೆ ಅಡ್ಮಿಟ್ ಆಗಬೇಕಾಗುತ್ತಿದೆ.

ಗಂಗಣ್ಣ– (ಕಾಫಿ ತಂದು) ತಗೊಳ್ಳಿಯಪ್ಪಾ.

ಮೋಹನ– ಗಂಗಪ್ಪಾ ಸ್ಟ್ರಾಂಗ್ ಇದೆಯೋ ಇಲ್ಲವೋ?

ಗಂಗಣ್ಣ– ಟಾಂಗಾ ಇಲ್ಲ ಬಿಡ್ರಿಯಪ್ಪ ದೊಡ್ಡ ಅಪ್ಪನೋರ್ನ ಕರಕೊಂಡು ಬರೋದಕ್ಕೆ ಟೇಶನಕ್ಕೆ ಹೋತ್ರಿ.

ಮೋಹನ– ಎಂಥಾ ಹುಂಬನಯ್ಯ ನೀನು, ಟಾಂಗಾ ಯಾರು ಕೇಳಿದ್ರು ನಿನ್ನ?

ಗಂಗಣ್ಣ– ನೀವ ಕೇಳಿದ್ರೆಲ್ರಿಯಪ್ಪಾ, ಟಾಂಗಾ ಇಲ್ಲೇನಂತಾ.

ಉಮೇಶ– ಟಾಂಗಾ ಅಲ್ಲೋ ಗಂಗಣ್ಣಾ, ಸ್ಟ್ರಾಂಗ್ ಅಂದ್ರ ಪುಡಿ ಹೆಚ್ಚು ಹಾಕಿರುವಿಯೋ ಇಲ್ಲೋ ಎಂದು ಕೇಳಿದರು.

ಗಂಗಣ್ಣ– ಪುಡಿ ಕೇಳಿದ್ರಿಯಪ್ಪಾ, ಕುಡಿದು ನೋಡ್ರಿ, ಈ ಗಂಗಣ್ಣನ ಕಾಫಿ ಸಂಗಪ್ಪನ ಸಾರು ಸುರದವರು ಮರಿವ್ಹಾಂಗಿಲ್ರೀ ಸಾವುತನ.

(ಉಮೇಶ ಮೋಹನ ಕಾಫಿ ಕುಡಿಯುವರು.)

ಉಮೇಶ– (ಎದ್ದು) ಬರುವೆ ಮಿತ್ರ ಥ್ಯಾಂಕ್ಸ್ (ಕೈ ಕುಲಕಿಸುವನು ಅಮರೇಶ ಸಂತೋಷದಿಂದ ಬರುವನು.)

ಅಮರೇಶ– ಹಲೋ....ಮೋಹನ....ತಂಗಿಯವರು ಎಲ್ಲಿ?

ಮೋಹನ– ಏಕೆ ಮಾವನವರೇ?

ಅಮರೇಶ– ಹ್ಯಾಪಿ ನ್ಯೂಜ್ ಇದೆ.

ಮೋಹನ– ಮತ್ತೇನು ಕರ್ನಾಟಕ ಲಾಟರಿ ಹತ್ತೀತೆ?

ಅಮರೇಶ– ಕರ್ನಾಟಕ ಲಾಟರಿ ಹತ್ತಿಲ್ಲ, ಮೋಹನ ನೀನಂದಂತೆ ನನಗೆ ಒಂದು ದೊಡ್ಡ ನೌಕರಿ ಲಾಟರಿ ಹತ್ತಿದೆ.

ಮೋಹನ– ವೇರಿಹ್ಯಾಪಿ ನ್ಯೂಜ್....ನೌಕರಿ ಎಲ್ಲಿ ದೊರಕಿತು? ಗವಾಯಿಗಳೇ?

ಅಮರೇಶ– ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ.

ಮೋಹನ– ತಿಂಗಳಿಗೆ ಎಷ್ಟು ವೇತನ?

ಅಮರೇಶ– ತಿಂಗಳಿಗೆ ಹನ್ನೆರಡು ನೂರು ರೂಪಾಯಿ ವೇತನ. ನಾಳೆ ಆರನೇ ತಾರೀಖಿಗೆ ಜ್ವಾಯಿನ್ ಆಗಬೇಕೆಂದು ತಾರು ಬಂದಿದೆ. ಕಾರಣ ನಿನಗೂ ತಂಗಿಗೂ ಈ ಸಂತೋಷ ವಾರ್ತೆ ತಿಳಿಸಿ ಹೋಗೋಣವೆಂದು ಬಂದೆ.

ಸುರೇಂದ್ರ– (ಪ್ರವೇಶಿಸಿ) ಓಹೋ....ಅಮರೇಶ್ ಗವಾಯಿಗಳು ಯಾವಾಗ ಬಂದ್ರಿ?

ಅಮರೇಶ– ನಮಸ್ಕಾರ ಸಾಹುಕಾರರೇ....ಈಗ ತಾನೆ ಬಂದೆ.

ಸುರೇಂದ್ರ– ನಮಸ್ಕಾರ ಎಲ್ಲವೂ ಕ್ಷೇಮವೇ?

ಅಮರೇಶ– ಎಲ್ಲವೂ ಕ್ಷೇಮ.

ಮೋಹನ– ಅಪ್ಪಾಜಿ ಆಕಾಶವಾಣಿ ಕೇಂದ್ರದಲ್ಲಿ ಅಮರೇಶ ಗವಾಯಿಗಳಿಗೆ ನೌಕರಿ ಹತ್ತಿದೆಯಂತೆ.

ಸುರೇಂದ್ರ– ಗವಾಯಿಗಳೇ? (ಸುಶೀಲ ಬರುವಳು)

ಅಮರೇಶ– ಹೌದು ಸಾಹುಕಾರರೇ.

ಸುರೇಂದ್ರ– ಸುಶೀಲ ಬಾರಮ್ಮಾ.

ಮೋಹನ– ಸುಶೀಲ ನಿಮ್ಮಣ್ಣ ಒಂದು ಸಂತೋಷದ ಸುದ್ದಿ ತಂದಿರುವನು ಕೇಳು?

ಸುಶೀಲ– ಏನಣ್ಣಾ ಸಂತೋಷ?

ಅಮರೇಶ– ಸಂತೋಷ, ಅಂದು ನೀನು ನುಡಿದಂತೆ ಹಡದಮ್ಮ ವೀಣಾಧಾರಿಯ ದಯದಿಂದ ನೌಕರಿ ದೊರಕಿದೆಯಮ್ಮಾ.

ಸುಶೀಲ– ನೌಕರಿ ಎಲ್ಲಿ ದೊರಕಿದೆಯಣ್ಣಾ?

ಅಮರೇಶ– ಬೆಂಗಳೂರ ಆಕಾಶವಾಣಿ ಕೇಂದ್ರದಲ್ಲಿ.

ಸುಶೀಲ– ಸಂತೋಷವಾಯಿತಣ್ಣ.

ಅಮರೇಶ– ಸಂತೋಷವೆಂದು ಸುಮ್ಮನೆ ನಿಂತರೆ ನಿಮ್ಮಣ್ಣನ ಹೊಟ್ಟೆ ತುಂಬುವುದೇನಮ್ಮಾ?

ಸುರೇಂದ್ರ– ಹೋಗಮ್ಮ ಬೇಗ, ಹಸಿದು ಬಂದಿದ್ದಾನೆ. ಬೇಗ ಚಹಾ ಫಲಹಾರ ರೆಡಿ ಮಾಡು.

ಸುಶೀಲ– ರೆಡಿ ಮಾಡುತ್ತೇನೆ. ಒಳಗೆ ಕರೆದುಕೊಂಡು ಬನ್ನಿ. (ಒಳಗೆ ಹೋಗುವರು)

ಸುರೇಂದ್ರ– ನಡೆ ಅಮರೇಶ?

ಅಮರೇಶ– ನಡಿಯಿರಿ. (ಎಲ್ಲರೂ ಒಳಗೆ ಹೋಗುವರು)

–: ಪರದೆ ಬೀಳುವದು :–

===**=====**===

೧೪ನೇ ಪ್ರವೇಶ

– ರಸ್ತಾ –

(ಧೀರೇಂದ್ರ– ನೀಲಾ ಸೂಟ್ ಮೇಲೆ ಬ್ಯಾಟ್ ಹಿಡಿದುಕೊಂಡು ಬರುವರು)

ನೀಲಾ– ಹಲ್ಲೋ ನಿಲ್ಲಿ ಡಾರ್ಲಿಂಗ್?

ಧೀರೇಂದ್ರ– ಹಲೋ....ಕಮಾನ್ ನೀಲಾ.

ನೀಲಾ– ಈ ಡ್ರೆಸ್ ನನಗೆ ಚೆನ್ನಾಗಿ ಸೂಟಾಗುತ್ತಿಲ್ಲವೇ ರಾಜಾ?

ಧೀರೇಂದ್ರ– ಚೆನ್ನಾಗಿ ಸೂಟಾಗುತ್ತಿದೆ. ನೀಲಾ ಈಗ ನೀನು ಹೇಗೆ ಕಾಣುವಿ ಹೇಳಲೇ?

ನೀಲಾ– ಓ....ಹೇಳಿ ನೋಡುವಾ?

ಧೀರೇಂದ್ರ– ನೋಡು ನೀಲಾ ಆ ಸಾಕ್ಷಾತ್ ಸಿನಿಮಾ ತಾರೆಯಾದ ಮುದ್ದು ಮುಖದ ಪದ್ಮಪ್ರಿಯಳಂತೆ ಕಾಣುವಿ.

ನೀಲಾ– (ವೈಯಾರದಿಂದ) ನಿಜವೇ ರಾಜಾ....?

ಧೀರೇಂದ್ರ– ಆ ಹ ಹ ಹ ....ಏನು ಹೇಳಲಿ ನೀಲಾ ನಳನಳಿಸುವ ಈ ನಿನ್ನ ಡ್ರೆಸ್ಸುಗಳನ್ನು ಕಂಡರೆ ಗಿಳಿಧರನು ಸಹ ತನ್ನ ಸತಿ ರತಿಗೆ ರಾಜಿನಾಮೆಯಿತ್ತು ಮತಿ ಭ್ರಾಂತನಾಗಿ ನಿನ್ನ ಬೆನ್ನುಹತ್ತಿ ಓಡಿ ಬರುವನು.

ನೀಲಾ– ಸಾಕು....ನಿಮ್ಮ ಎಣೆಯಿಲ್ಲದ ಬಣ್ಣನೆಯ ಮಾತು.

ಧೀರೇಂದ್ರ– ಬಣ್ಣನೆಯ ಮಾತಲ್ಲ ನೀಲಾ ಮದನನ್ನ ಜಯಸಿದ ಆ ಸಾಕ್ಷಾತ್ ಮುಕ್ಕಣ್ಣನೇ ನಿನ್ನ ತೆಕ್ಕೆಯಲ್ಲಿ ಸಿಕ್ಕರೆ ಸದ್ದಿಲ್ಲದೇ ಸೋಲುವನು ಕಾಮಕದನದಲ್ಲಿ ನಿನ್ನ ಕಣ್ಣ ಬಾಣಕ್ಕೆ.

ನೀಲಾ– ಕಂದಗಲ್ ಕವಿಗಳಂತೆ ಅಂದವಾಗಿ ಬಣ್ಣಿಸಿದ ಧೀರಾ, ಇರಲಿ ಮಾಡುವಿರಾ ನನ್ನ ನಿನ್ನ ಲವ್ ಮ್ಯಾರೇಜ್‌ನ ವಿಚಾರ.

ಧೀರೇಂದ್ರ– ವಿಚಾರವೇತರದು ನೀಲಾ...."

ನೀಲಾ– ಅದೇ ಅನ್ಯ ಜ್ಯಾತಿಯ ಹೆಣ್ಣು ಹಾಗೆ ಹೀಗೆ ಎಂದು ಜನ ಹಿಂದೆ ಮುಂದೆ ನಮ್ಮನ್ನು ನಿಂದಿಸುತಿದೆ ಅದಕ್ಕಾಗಿ.

ಧೀರೇಂದ್ರ– ಅದಕ್ಕಾಗಿ ಹೆದರಬೇಡ ನನ್ನ ಮಧುರ ಗುಲಾಬಿ ಜಗ ಏನೇ ಒದರಲಿ ನನ್ನ ನಿನ್ನ ಮನ ಮಾತ್ರ ಒಂದಾಗಿದೆ.

ನೀಲಾ– ನನ್ನ ನಿನ್ನ ಮನ ಒಂದಾದರೂ ಹಿಂದೆ ಒಂದೇ ದೊಡ್ಡ ರಾವು ಗಂಟುಬಿದ್ದು ಭಯಗೊಳಿಸುತ್ತಿದೆ.

ಧೀರೇಂದ್ರ– ಆ ರಾವು ಯಾವುದು? ಬೇಗ ಹೊರಗೆಡಹು?

ನೀಲಾ– ಆ ರಾವು ನಮ್ಮ ಸರ್ಜನ ಅರ್ಜುನ್ ಸಾಹೇಬರು.

ಧೀರೇಂದ್ರ– ಅರ್ಜುನ್...ಓ....ಐ....ಸಿ....?

ನೀಲಾ– ತಮ್ಮನ್ನು ಲವ್ ಮಾಡಿದ್ದಕ್ಕಾಗಿ ಒಂದೇಸವನೆ ನನ್ನ ಮೇಲೆ ಕಿಡಿ ಕಾರುತ್ತಿದ್ದಾರೆ.

ಧೀರೇಂದ್ರ– ಕಾರಲಿ ನೀಲಾ ಅ ಕುನ್ನಿಯನ್ನು ತಳ್ಳುವದಕ್ಕಾಗಿ ಚೆನ್ನಾಗಿ ಹೆಣೆದಿರುವೆ ಒಂದು ಯುಕ್ತಿಯ ಜಾಲ.

ನೀಲಾ– ನಿಮ್ಮ ಜಾಲದಲ್ಲಿ ಜಾರಿಕೊಂಡು ಹೋಗಬಹುದು ಆ ವಂಚಕ ನರಿ ಕಾರಣ ನಿಮ್ಮ ಸಂಚು ಗೊತ್ತಾಗದಂತೆ ಹಂಚಿಕೆಯಿಂದ ಭದ್ರವಾಗಿ ಬಲೆ ಬೀಸಿರಿ.

ಧೀರೇಂದ್ರ– ಭದ್ರವಾದ ಬಲೆ ಬೀಸಿದ್ದೇನೆ ಕೇಳು ನೀಲಾ ಆ ನಿನ್ನ ಸರ್ಜನನೆಂಬ ಸರ್ಪಕ್ಕೆ ನನ್ನ ಲಂಚವೆಂಬ ಹಾಲನ್ನು ಮುಂದಿಡುವೆ.

ನೀಲಾ– ಆಮೇಲೆ?

ಧೀರೇಂದ್ರ– ಆಮೇಲೆ ಮತ್ತೇನು ನನ್ನ ಸಂಚನ್ನರಿಯದ ಆ ನಿನ್ನ ಆಫೀಸರನೆಂಬ ಸರ್ಪವು ನನ್ ಲಂಚವೆಂಬ ಹಾಲನ್ನು ಗಟಗಟನೆ ಕುಡಿಯಲು ಮುಂದೆ ಬರುವದು.

ನೀಲಾ– ಬರುವದು....ಆಗ....?

ಧೀರೇಂದ್ರ– ಆಗ ನಾನು ಥಟ್ಟನೇ ಮರೆಯಲ್ಲಿ ನಿಂತಿದ್ದ ಲಂಚ ನಿರ್ಮೂಲನಾ

ಅಧಿಕಾರಿಗಳಿಗೆ ತೋರಿಸಿ ಅವನನ್ನು ಕಂಬು ಮಾರಲು ಕಳಿಸುವೆ ಹೇಗಿದೆ ನೀಲಾ ನನ್ನಯ ಜಾಲ.

ನೀಲಾ— ನಿಮ್ಮ ಜಾಲಕ್ಕೆ ಈ ನೀಲಾ ಬೆರಗಾದಳು. ಇರಲಿ ಇನ್ನೆಂದು ಕಾಣಿಸುವಿರಿ, ನನ್ನ ಕೊರಳಿಗೆ ಮಂಗಲಮಣಿ?

ಧೀರೇಂದ್ರ— ಮಣಿ, ವ್ಯಸನ ಮಾಡದಿರು ನನ್ನ ನಸುನಗೆಯ ರಾಣಿ ಇನ್ನೊಂದು ತಿಂಗಳಲ್ಲಿ ತಪ್ಪದೇ ಕಟ್ಟುವೆ ನಿನ್ನ ಕಂಠದಲ್ಲಿ ಕರೀಮಣಿ.

ನೀಲಾ— ಕಪ್ಪುಗೊರಳನ ಸಾಕ್ಷಿಯಾಗಿ ತಪ್ಪದೇ ಕಟ್ಟುವಿರಾ?

ಧೀರೇಂದ್ರ— ಛೇ....ಎಂಥಾ ಹುಂಬ ಬಾಲೆ ನಿನ್ನಂಥ ರಂಬೆಯ ಕೊರಳಿಗೆ ಕಟ್ಟದೇ ಡೊಂಬರವಳ ಕೊರಳಿಗೆ ಕಟ್ಟಲೇ. ಸುಮ್ಮನೇ ಸಂಶಯ ಪಡಬೇಡ, ಮ್ಯಾಚ ಮುಗಿಸಿಕೊಂಡು ಬಂದು ಮನೆಯಲ್ಲಿ ಯೋಚಿಸುವಾ.

ನೀಲಾ— ನಡೆ ರಾಜಾ.....

ಧೀರೇಂದ್ರ— ಎಸ್. ಕಮಾನ್. (ಹೋಗುವರು)

— ಪರದೆ ಏರುವದು —

===***=====***===

೧೫ನೇ ಪ್ರವೇಶ

(ಮನೆ)

(ತಾರಾ ಅಂಗಿ ಹೊಲಿಯುತ್ತ ಕುಳಿತಿರುವಳು ಸಂಗಣ್ಣ ಬಳೆಪೆಟ್ಟಿಗೆ ಹಿಡಿದುಕೊಂಡು ಬರುವನು.)

ಸಂಗಣ್ಣ– ಏನ ಮಾಡಾಕ ಹತ್ತೀಯವ್ವ ತಂಗೀ.

ತಾರಾ– ಹೊಲ್ಯಾಕ ಹತ್ತೀನಿ ಅಂಗೀ.

ಸಂಗಣ್ಣ– ತಾರಾ ಮೀಸೆ ಮಾವನ ವಾಸನೆ ಇಲ್ಲ ಎಲ್ಲಿಗೆ ಹೋಗ್ಯಾನ. (ಸನ್ನೆ ಮಾಡುವನು)

ತಾರಾ– ಹಂಗ್ಯಾಕ ಅಂಜತೀಯ ನನ್ನ ಸರದಾರ, ಪ್ಯಾಚಸ್ ಕಂಪನಿಗೆ ಹೋಗ್ಯಾನ, ಈಗರ ಜರ ಜೋರಾಗಿ ಮಾತಾಡು.

ಸಂಗಣ್ಣ– ಹಂಗಾರ ಮತ್ತ್ಯಾರ ಅಂಜಿಕಿ ಇಲ್ಲ ನೋಡ ತಾರಾ, ಮೊನ್ನೆ ಹೇಳಿದ್ದೆಲ್ಲಾ ಹಳ್ಳಿನುಂಗ್ರ....

ತಾರಾ– ಈಗ ತಂದೀಯೇನsss ನನ್ನ ಬಾದ್ದೂರ.

ಸಂಗಣ್ಣ– ತರದಿದ್ರ ನೀ ಸುಮ್ಮನಿದ್ದೀಯಾ ನನ್ನ ಗುಲಾಬಿ ಹಾರಾ.

ತಾರಾ– ಹಂಗಾರ ಏಟ ಚೆಂದಾದ ತೋರಸಾ ನನ್ನ ಸೂರಾ.

ಸಂಗಣ್ಣ– ತೋರ್ಸೋದ್ಯಾಕ ಸ್ವಲ್ಪ ಕೈ ಕೊಡಿಲ್ಲಿ ನಾನೇ 'ಇಡತೀನಿ.

ತಾರಾ– ಏ...ಏ...ಎಲ್ಲಿ ಇಡತೀಯಾ?

ಸಂಗಣ್ಣ– ನಿನ್ನ ಬೊಳ್ಳಾಗ....(ಉಂಗುರು ಇಡುವನು)

ತಾರಾ– ಅಳತೆ ಕೊಟ್ಟಾಂಗ ಮಾಡ್ಸಿಯಲ್ಲ ನನ್ನ ಚೆಲುವಾ.

ಸಂಗಣ್ಣ– ಹೌದಾ ನನ್ನ ಮೈಸೂರ ಹಲ್ವಾ

ತಾರಾ– ಏ....ಏ...ಕದಾ ಕುಲ್ಲಾ ಅದ.

ಸಂಗಣ್ಣಾ— ತಾರಾ ಇದೋ ಬಿತ್ತು ಕದಾ, ಎತ್ತು ನಿನ್ನ ಪ್ರೇಮದ ಪದಾ

—: ಹಾಡು :—

(ಇಬ್ಬರೂ ಪ್ರೇಮದಾಟದಲ್ಲಿರುವಾಗ ಗಂಗಣ್ಣ ಬಂದು ಬಾಗಿಲು ಬಡಿಯುವನು.)

ಗಂಗಣ್ಣಾ— (ಮರೆಯಲ್ಲಿ) ತಾರೀsss....ಏತಾರೀ....ದೌಡ ಬಾಗಿಲ ತೆರಿ.

ಸಂಗಣ್ಣಾ— (ಹೌಹಾರಿ) ಹಬ್ಬದೊತ್ತ್ಯಾಗ ಗಬ್ಬದ ಹುಲಿ ಬಂದಂಗ ಮಾವ ಬಂದ್ನಲ್ಲ, ಹ್ಯಾಂಗ ತಾರೀ?

ತಾರಾ— ಮತ್ತೇನು ಮಾಡೋದು ಬಿಡು ದಾರಿ.

ಸಂಗಣ್ಣಾ— (ನಡುಗುತ್ತಾ) ಹ್ಯಾಂಗ ಹೋಗಲಿ ತಾರೀ ಕಾಣವಲ್ದು ನನಗ ದಾರಿ.

ತಾರಾ— ದಾರೀ ತೋರಸ್ತೀನಿ ತಡಿ ಹಂಗ್ಯಾಕ ಚಳಿಜ್ವರ ಬಂದೋರ ಗತಿ ಓ....ಓ....ಓ.... ಅಂತ ನಡಗುತೀ.

ಗಂಗಣ್ಣಾ— (ಮರೆಯಲ್ಲಿ) ತಾರಾ....ತಾರಾ....ಏನಮಾಡ್ತಿ ದೌಡ ತಗಿಬಾರಾ.

ತಾರಾ— ಸ್ವಲ್ಪ ತಡಿ ಮೈ ತೊಳ್ಕೊಳ್ಳಾಕ ಬಚ್ಚಲದಾಗ ಕುಂತೀನಿ ಹ್ಯಾಂಗಬರ್ಲಿ.

ಸಂಗಣ್ಣಾ— ತಾರಾ ನಿನಗಂಡನ ಕೈಯಾಗ ಈಗ ಸಿಕ್ಕಿನಂದ್ರ ನಾನು ಆಗತೀನಿ ಚೂರು ಚೂರು.

ತಾರಾ— (ಉಷ್) ತತ್ತರ ಬೀಳಬ್ಯಾಡ ಹಿತ್ತಲ ಬಾಗಲಿಂದ ಪಾರು ಮಾಡತೀನಿ ಬಾ.

ಗಂಗಣ್ಣಾ— (ಮರೆಯಲ್ಲಿ) ತಾರಾ ದೌಡ ಬಾಗಿಲ ತೆಗಿ ಏಟ್ಹೋತ್ತು ಮಾಡ್ತಿ ಸ್ನಾನ ಸ್ವಲ್ಪ ಐತೇನ ಗ್ಯಾನ.

ತಾರಾ— ಏನ ಕಿರಿ, ಕಿರಿ, ಹಚ್ಚಿದ್ಯಾ ಮಾರಾಯ, ಸೀರೆ ಉಟ್ಕೋಳ್ಳಾಕಹತ್ತೀನಿ ನಿಂದ್ರ

ಗಂಗಣ್ಣಾ— (ಮರೆಯಲ್ಲಿ) ಉಟಗೊಂಡ ದೌಡ ತೆಗಿ.

ತಾರಾ— ಹೂಂ......ನೀ ಜಿಗಿ. (ಸಂಗಣ್ಣ ಹಿತ್ತಲಬಾಗಿಲಿನಿಂದ ಓಡುವನು)

ಗಂಗಣ್ಣಾ— (ಮರೆಯಲ್ಲಿ) ತಗದ್ಯಾ ತಾರಾ?

ತಾರಾ— ತಗದೀನಿ ಬಾರಾ....(ಗಂಗಣ್ಣ ಬರುವನು)

ಗಂಗಣ್ಣ— (ಸುತ್ತಲೂ ನೋಡುತ್ತ) ಹೊಸ ನಾತ, ಹೊಸ ನಾತ.

ತಾರಾ— ಹೊಸ ನಾತ ಎಲ್ಲಿಬಂತು ನಿನಗ ಗ್ವಾತ.

ಗಂಗಣ್ಣ— ಇದೇನು, ಮಂಗ್ಯಾ ಸಂಗ್ಯಾನ ಬಳೀ ಪೆಟ್ಗಿಗೆ, ಛಪ್ರೆ ಹೆಣ್ಣ ಹಾಕಿದಲ್ಲ ನನ್ನ ಕಣ್ಣಿಗೆ ಮಣ್ಣ.

ತಾರಾ— ಮತ್ತೇನು ಹುಟ್ಟಿತು ನಿನ್ನ ಹೊಟ್ಯಾಗ ಸಂಶಯದ ಹುಣ್ಣಾ

ಗಂಗಣ್ಣ— ಹುಣ್ಣು ಹುಟ್ಟಿತಂತ ಕೇಳ್ತಿಯಲ್ಲಾ ನನ್ನ ಜಾಲಹಳ್ಳಿ ಜಂಪಲದ ಹಣ್ಣಾ, ಆ ಮಗಾ ಸಂಗ್ಯಾನ ಬಳೀ ಪೆಟ್ಗಿ ನಮ್ಮ ಮನ್ಯಾಗ ಹ್ಯಾಂಗ ಬಂತು ಹೇಳು.

ತಾರಾ— ಹ್ಯಾಂಗ ಬಂತಂದ್ರ ಏನ ಹೇಳ್ಲಿ, ಮೊನ್ನೆ ಉಗಾದಿ ಹಬ್ಬಕ್ಕೆ ಉದ್ರಿ ಐದು ರೂಪಾಯಿ ಬಳಿ ಹಾಕಿಸಿಕೊಂಡಿದ್ನ್ಯ ಈಗ ಕೊಟ್ಟುಬಿಡವ್ವ ತಂಗೀ, ಮಟ್ಕಾ ಕಟ್ಟಾಕ ಬೇಕಾಗ್ಯೆತೆಂತ ಗಟ್ಟ್ಯಾಗಿ ಕುಂತಬಿಟ್ಟಿದ್ದ.

ಗಂಗಣ್ಣ— (ಅಣಕಿಸಿ) ಆವಾಗ ತೆಗೆದುಕೊಟ್ಟೇನು?

ತಾರಾ— ಇಲ್ಲ, ಇಲ್ಲಿ ಯಾಕ ಕುಂದ್ರತೀಯಪಾ ಯಣ್ಣ ಈಗ ನಮ್ಮ ಹಿರಿಯಾ ಬಂದ ಕೊಡ್ತಾನ ಜರ ತಿರಗಾಡಿ ಬಾ ಅಂದೆ.

ಗಂಗಣ್ಣ— (ವ್ಯಂಗವಾಗಿ) ಆವಾಗ ಇಟ್ಹೋದ್ನೇನು?

ತಾರಾ— ಹುಂ....ಇಟ್ಟು ಕೇಟಿ ಕುಡ್ದ ಬರ್ತೀನವ್ವ ಅಂತ ಹೇಳಿಹೋದ

ಗಂಗಣ್ಣ— ಬೇಸ ಇಟ್ಟಾನ, ಬೇಸ ಇಟ್ಟಾನ. ಯಾಸ್ಲಾಡಿಗೊಂದು ಕೂಸಿನ ನೆವ, ಸೋಗಲಾಡಿಗೊಂದು ಸೋಮವಾರದ ನೆವ, ಖರೇ ಹೇಳು.

ತಾರಾ— ಕಟ್ಟಾ ಖರೆ ನಿನ್ನಾಣೆ ಓಳತನ್ನು ಈಗ ಬರ್ತಾನ ತಡಿ ಕೇಳೂವಂತಿ.

ಗಂಗಣ್ಣ— (ಸಂಗಣ್ಣ ಬಂದದ್ದು ನೋಡಿ) ನೆನಿಸಿದಾಗ ಬಂದ್ನಲ್ಲ, ನಿನ್ನ ತೊನ್ನಿಸಿಮಾರಿ ಅಣ್ಣ.

ತಾರಾ— (ವಯ್ಯಾರದಿಂದ) ಬಾರಾ ಯಣ್ಣ, ಸರಿಯಾಗಿ ಬಂದಿ ನಿನ ಪೆಟ್ಗಿ ನಮ್ಮ ಮನ್ಯಾಗ ಹ್ಯಾಂಗ ಬಂತಂತ, ಅನುಮಾನ ಹೊಕ್ಕಾದ ನಮ್ಮ ಹಿರಿಯಾಗ.

ಸಂಗಣ್ಣಾ— ಅನುಮಾನ ಮಾಡಬ್ಯಾಡಪ್ಪಾ ಮಾವ, ನಮ್ಮ ತಂಗೀ ತಾರಾ ಅಂದ್ರ ಈ ಊರು ಬೆಳಗ್ಯಾಳ.

ಗಂಗಣ್ಣಾ— ಊರು ಯಾಕ ಈ ತಾಲೂಕು ಬೆಳಗ್ಯಾಳ ಅಂತಾ ಹೇಳು.

ತಾರಾ— ನೀನ ಹೇಳಪ್ಪ ಯಣ್ಣಾ ಕೇಟಿ ಕುಡಿಯಾಕ ಹೋಗ್ತೇನಂತ ಹೇಳಿ ಪೆಟ್ಗಿ ಇಟ್ಟೋದಿಲ್ಲ? (ಕಣ್ಣು ಸನ್ನೆ ಮಾಡುವಳು)

ಸಂಗಣ್ಣಾ— ಹೌದ. ಹೌದಪ್ಪ ಮಾವ, ಕೇಟಿ ತಲುಬು ಆತು ಹಾಂಗ ಇಟ್ಟ ಹೊಂಟಬಿಟ್ಟೆ

ಗಂಗಣ್ಣಾ— ಬೇಸ ಇಟ್ಟೇಯ ಇರ್ಲಿ, ಯಾಕ ಬಂದಿದ್ದೆಪ್ಪಾ ಬುರ್ಲಿ

ಸಂಗಣ್ಣಾ— (ತಡವರಿಸುತ್ತ) ಸೋ...ಸೋ...ಸ್ವಲ್ಪ ತಂಗೀ...ರೂ...ರೂ...ರೂಪಾಯಿ ಕೊಡಬೇಕಾಗಿತ್ತಪ್ಪಾ ಮಾವ ಮಾವ.

ಗಂಗಣ್ಣಾ— (ಅಣಕಿಸಿ) ಮ...ಮ... ಮಾವಾ ಅಂತಾ ಲಟ್ಟಾ ಹೊಡ್ಯೋರಗತಿ ಹಿಂಗ್ಯಾಕ ಮಾಡ್ತೀಯಲೇ ಬಾಯಿ, ಏಸ ಕೊಡಬೇಕು ಚೆಂದನಾಗಿ ಹೇಳಲೇ ನಾಯಿ.

ಸಂಗಣ್ಣಾ— (ತಲೆ ತುರಿಸುತ್ತ) ಎಷ್ಟು ಅನ್ನೋದು ಬೇಷನಾಗಿ ನೆಪ ಇಲ್ಲಪ್ಪ ಮಾವ, ತಂಗೀಗೆ ನೆಪ್ಪ ಇರಬೇಕು. ಹತ್ತು ರೂಪಾಯಿ ಹೌದಲ್ಲವ್ವ ತಂಗೀ?

ತಾರಾ— ಹತ್ತು ಆಲ್ಲೋ ಯಣ್ಣಾ ಐದು ಅಲ್ಲೇನು?

ಸಂಗಣ್ಣಾ— ಹೌದ ಹೌದವ್ವ ತಾರಾ, ನೆಪ್ಪ ಹಾರಿತ್ತು.

ಗಂಗಣ್ಣಾ— ನೆಪ್ಪ ಹಾರಿತ್ತಂತ ನೆಪ್ಪು ಸಾರಯ್ಯನವರ ಆಟಾ ಬಿಟ್ಟ ಬಿಡಲೇ ಹುಚ್ಚಮಂಗಿ ಇನ್ನೊಂದಸಾರಿ ನಮ್ಮ ಮನೆಕಡೆ ಇಣಕಿ ಹಾಕಿದರ ನೋಡ ಮಗನೇ ಒಂದೇ ಹೊಡೆತಕ್ಕ ಕಾಣ್ತಿ ಕಲ್ಮಂಗಿ.

ಸಂಗಣ್ಣಾ— ಕಲ್ಮಾಂಗಾರ ಕಾಣಿಸು ಕಲಬುರ್ಗೀರ ಕಾಣಿಸು, ಮೊದಲು ನನ್ನ ರೂಪಾಯಿ ಕೊಟ್ಟಬಿಡ ಹೊಕ್ಕೀನಿ.

ಗಂಗಣ್ಣಾ— ತಗೋ ನಿನ್ನ ರೂಪಾಯಿ. (ಕೊಡುವನು)

ಸಂಗಣ್ಣಾ— ಬರ್ತಿನವ್ವಾ ತಾರಾ ಮಾವ ಆಗ್ಯಾನ ಈಗ ಬಿಸಿ, ಜಲ್ದಿ ಮನ್ಯಾಗ ಹೋಗಿ ಶಾವಿಗಿ ಬಸಿ, ಅಂದ್ರ ಮಾವ ಆಗ್ತಾನ ಖುಷಿ.

ಗಂಗಣ್ಣ– ಸಾಕ ಸುಮ್ಕ ಹೋಗಲೇ ಪಿಕನಾಶಿ.

ತಾರಾ– ಏಟ ಸಿಟ್ಟಿಗೆದ್ದೀಯಲ್ಲ ನನ್ನ ಅಂಬಾಳ ನಶಿ.

ಸಂಗಣ್ಣ– ಸಿಟ್ಟಿಗೇಳಬಾರದಪ್ಪಾ ಮಾವ, ಸಿಟ್ಟು ಶನೇಶ್ವರ.

ಗಂಗಣ್ಣ– ಏನ ನಾಚಿಗಿ ತಗದಾವದಾನಪಾ ಇವಾ, ಬೀಜಾಪುರ ಹಜಾಮ ಸುಮ್ಕ ಬಾಗ್ಲಾ ದಾಟು ಇಲ್ಲದಿದ್ದರೆ ಬೀಳತಾವ ನೋಡು ಬಡ್ಗಿ ಏಟು.

ಸಂಗಣ್ಣ– ಗಂಗಣ್ಣ ಮಾವ, ಮತ್ಯಾಕ ಮಾಡಸ್ತೀಯಪಾ ಬಡ್ಗಿ ಜಳ್ಕ ನಾನೇ ಹೋಗ್ತೀನಿ ಸುಮ್ನ.

ಗಂಗಣ್ಣ– ಸುಮ್ಕ ಹೆಂಗ ಹೋಗತೀಯಿ ಮಗ್ನಾ ಯಮ್ಮೀ ಮುರೆಂಗ ನಾಕ ವದ್ದರs ಹೋಗತ್ತೀ. (ಅಂಗಿ ಹಿಡಿದು ಒದೆಯ ಹೋಗುವನು)

ಸಂಗಣ್ಣ– ಒದೀಬ್ಯಾಡ ಮಾವಾ, ಹೊಂಟೇ....ಹೊಂಟೇ...ತಿರಿಗಿ ಹೊಳ್ಳಿ ನೋಡೋದಿಲ್ಲ.

ಗಂಗಣ್ಣ– ಹೊಳ್ಳಿ ನೋಡಿದ್ರ...ಸೊಳ್ಳೀ ಕೊಯ್ತೀನಿ ಸುಮ್ಮನ ನಡೀ ಮಗನಾ. (ಬಡಿಯಹೋಗುವನು, ಸಂಗಣ್ಣ ಓಡುವನು)

– ಪರದೆ ಬೀಳುವದು –

===***====***===

೧೬ನೇ ಪ್ರವೇಶ

–: ರಸ್ತಾ :–

(ಧೀರೇಂದ್ರ ಸಿಗಾರ್ ಸೇದುತ್ತ ಬರುವನು)

ಧೀರೇಂದ್ರ– (ಸ್ವಗತ) ನರ್ಸ ನೀಲಳೊಡನೆ ಸಾಕಾಗುವವರೆಗೆ ಸರಸವಾಡಿದರೂ ಮನಸ್ಸಿನಲ್ಲಿ ಆ ಸುಶೀಲೆಯ ಸುಂದರ ರೂಪವು ಕಣ್ಮುಂದೆ ಕಟ್ಟಿ ಕಾಡುತ್ತಿದೆ. ಸಗ್ಗಲೋಕದ ಸಕಲ ಸೌಂದರ್ಯ ಸೌದಾಮಿಗಳನ್ನು ಒಟ್ಟುಗೂಡಿಸಿ ನಿಷ್ಠೆಯಿಂದ ಆ ಬ್ರಹ್ಮ ತನ್ನ ಚಮನ್ನಿಗಾಗಿ ಈ ಚಿನ್ನದ ಗೊಂಬೆಯನ್ನು ಚಿತ್ರಿಸಿದನೋ ಎಂದು ಘನ ದಂಗುಬಿಡಿದು ಅವಳ ಗುಂಗಿನಲ್ಲಿ ಗರಗರನೇ ತಿರುಗುತ್ತಿದೆ.

ವೀರೇಶ– (ಪ್ರವೇಶಿಸಿ) ತಮ್ಮನ್ನು ದಂಗುಬಡಿಸಿದ ಆ ಗಂಗಿ ಯಾರು ಸಾಹುಕಾರರೇ?

ಧೀರೇಂದ್ರ– ಅದೇ ಆ ಗವಾಯಿ ಗಂಧರ್ವನ ತಂಗಿ.

ವೀರೇಶ– ಆಗಬೇಕೀಗ ನಿಮ್ಮ ಅರ್ಧಾಂಗಿ ಅಲ್ಲವೇ?

ಧೀರೇಂದ್ರ– ಹೌದು ವೀರೇಶ.

ವೀರೇಶ– ಅರೆ ನಿಮಿಷದಲ್ಲಿ ನಿಮ್ಮ ಅರ್ಧಾಂಗಿಯಾಗುವಳು. ಆದರೆ ಇಂಥಾ ವಿಚಾರಕ್ಕೆ ದುಡ್ಡು ಬಹಳಬೇಕು.

ಧೀರೇಂದ್ರ– ದುಡ್ಡಿನಬಗ್ಗೆ ವಿಚಾರಿಸಬೇಡ ವೀರೇಶ್, ನನ್ನ ಲಕ್ಷಾಂತರ ಹಣ ವ್ಯಯವಾದರೂ ಚಿಂತೆಯಿಲ್ಲಾ. ಇಕ್ಷು ಕೋದಂಡನ ಸತಿಯಂತೆ ಇರುವ ಆ ಸುಂದರಿ ಸುಶೀಲೆ ವಶವಾದರೆ ಸಾಕು.

ವೀರೇಶ– ಹಾಗಾದರೆ ಸಾಹುಕಾರರೇ ಅಡ್ವಾನ್ಸಾಗಿ ಇಂದು ಒಂದು ಸಾವಿರ ಕೊಡಿ. ಆಮೇಲೆ ಮೂರು ಸಾವಿರ ಕೊಡುವಿರಂತೆ.

ಧೀರೇಂದ್ರ– ಹಣ ತೆಗೆದುಕೋ ವೀರೇಶ್, ಬೇಗ ಆ ಪಾರಿಜಾತ ಪುಷ್ಪವನ್ನು ವಶಪಡಿಸಿಕೊಳ್ಳುವದೆಂತು ಹೇಳು?

ವೀರೇಶ– ಹೇಳುವದೇನು ಸಾಹುಕಾರರೇ, ನಾಳೆ ನಾಗಪಂಚಮಿ, ನಾಗಪ್ಪನಿಗೆ ಹಾಲು ಎರೆಯಲು ಊರ ಹೊರಗಿನ ಆಲದ ಗಿಡದ ನಾಗಕಟ್ಟೆಗೆ ಸುಶೀಲ ಬಂದೇ ಬರುವಳು.

ಧೀರೇಂದ್ರ– ಬಂದೇ ಬರುವಳು, ಮುಂದೇನು ಮಾಡಬೇಕು?

ವೀರೇಶ– ಮಾಡುವದೇನು ನೀನು ಆ ಆಲದಗಿಡದ ಅಡಿಯಲ್ಲಿ ಅವಿತುಕೊಂಡು ಹಂಚಿಕೆಯಿಂದ ಆ ಕಂಚಿನ ಗೊಂಬೆಯನ್ನು ವಶಪಡಿಸಿಕೊಳ್ಳಬೇಕು.

ಧೀರೇಂದ್ರ– ಶಭಾಷ್ ವೀರೇಶ್ ನಿನ್ನ ಹಂಚಿಕೆ ಮಾತಿನಂತೆ ಹೊಂಚು ಹಾಕಿ ಆ ಕಂಚಿನ ಗೊಂಬೆಯನ್ನು ವಶಪಡಿಸಿಕೊಳ್ಳುವೆ.

ವೀರೇಶ– ನಡೆಯಿರಿ, ನಮ್ಮ ಕಾರ್ಯಕ್ಕೆ ಜಯ ನೀಡೆಂದು ಆ ದಯಾಮಯಿ ಬ್ರ್ಯಾಂಡಿ ಮಾತೆಯನ್ನು ಪ್ರಾರ್ಥಿಸುವಾ.

ಧೀರೇಂದ್ರ– ವೀರೇಶ ಆ ಮಾತೆಯನ್ನು ಪ್ರಾರ್ಥಿಸಲು ಯಾವ ಕ್ಲಬ್ಬಿಗೆ ಹೋಗೋಣ?

ವೀರೇಶ– ನೋಡಿ ಶುಚಿ ಮತ್ತು ರುಚಿಗಾಗಿ ಈ ನಗರದಲ್ಲಿ ಅತ್ಯಂತ ಪ್ರಸಿದ್ಧವಾಗಿದೆ. ಶಚಿದೇವಿ ಕ್ಲಬ್.

ಧೀರೇಂದ್ರ– ಹಾಗಾದರೆ ಅದೇ ಶಚಿದೇವಿ ಕ್ಲಬ್‌ಗೆ ಹೋಗೋಣ ನಡೆ.

ವೀರೇಶ– ಬನ್ನಿ (ಹೋಗುವರು) (ಕ್ಲಬ್ ಡ್ಯಾನ್ಸ್)

(– ಪರದೆ ಏರುವುದು –)

===***=====***===

೧೭ನೇ ಪ್ರವೇಶ

– ಜಂಗಲ್ –

(ಕಲ್ಲುನಾಗರ–ಸುಶೀಲ ಹಾಲು ಹಾಕಲು ಬರುವಳು)

– ಪದ –

ಸುಶೀಲ– ನಮೋ...ನಮೋ...ನಾಗೇಂದ್ರ ನಮೋ ।
ನಮೋ...ನಮೋ...ಉರಗೇಂದ್ರ ನಮೋ ।
ನಮೋ...ನಮೋ...ವಸುಧೇ ಹೊತ್ತ ।
ವಿಷಧರನೇ ನಿನಗೆ ನಮೋ ನಮೋ ನಮೋ....॥

ಧೀರೇಂದ್ರ– (ಪ್ರವೇಶಿಸಿ) ಕಲ್ಲುನಾಗರ ಮುಂದೆ ಕೈ ಮುಗಿಯುತ್ತ ಕುಂತ ಬಾಲೆ ನಿನ್ನ ಮಲ್ಲಿಗೆಯ ಮಕರಂದವನ್ನು ಮೂಸಿನೋಡಲು ಈ ಕುಸುಮ ಶರನು ಭುಸುಗುಟ್ಟಿ ಭರದಿಂದ ಕುಣಿಯುತ್ತಿರುವನು ಬಾ ನಲ್ಲೆ. (ಹಿಡಿಯಲು ಹೋಗುವನು)

ಸುಶೀಲ– (ಸರಿದು) ಥೂ ಪಾಪಿ ನಾಗರಾಜನ ಪೂಜೆಯಲ್ಲಿ ಮಗ್ನಳಾದ ನನ್ನನ್ನು ಭೋಗವಿಲಾಸಕ್ಕೆ ಕರೆಯುವ ನಿನಗೆ ಮಹಾರೋಗವು ಪ್ರಾಪ್ತವಾಗದೆ ಇರದು.

ಧೀರೇಂದ್ರ– (ನಕ್ಕು) ರೋಗ ಬರುವದೆಂದು ರಾಗವೆಳೆದ ರಂಭೆ ಹಂಬಲಿಸಿ ಬಂದಿರುವೆ ನಿನ್ನ ಚುಂಬನಕ್ಕಾಗಿ. (ಕೈ ಹಿಡಿಯುವನು)

ಸುಶೀಲ– (ಕೈ ಕೊಸರಿ) ರಂಭೆ ಅಲ್ಲ, ನಾ ನಿನಗೆ ಶುಂಭ ನಿಶುಂಭರನ್ನು ಸಂಹರಿಸಿದ ಅಂಬೆ.

ಧೀರೇಂದ್ರ– (ನಕ್ಕು) ಅಂಬೆ ಎಂದು ಜಂಬಕೊಚ್ಚಿಕೊಳ್ಳುವ ಹುಂಬ ಬಾಲೆ. ಸುಮ್ಮನೆ ನನ್ನ ಮನ ತುಂಬದಿದ್ದರೆ ಇದೋ ನೋಡು ಜಂಬೆ. (ಜಂಬೆ ತೋರಿಸುವನು)

ಸುಶೀಲ– ಛೀ....ದುರಾತ್ಮ ಧೀರೇಂದ್ರ ನನ್ನನ್ನು ಮುಟ್ಟಲು ಮುಂದೆ ಬಂದೆಯಾದರೆ ಸುಟ್ಟು ಸೂರೆಗೊಳ್ಳುವೆ ಎಚ್ಚರ.

ಧೀರೇಂದ್ರ– ಎಚ್ಚರೆಂದು ಎಚ್ಚರಿಸುವ ಹುಚ್ಚು ಬಾಲೆ ಅಚ್ಚುತನ ಅರ್ಧಾಂಗಿನಿಯಂತಿರುವ ನಿನ್ನ ಕೆಂಪು ಕಪೋಲಗಳನ್ನು ಕಚ್ಚದೇ ಬಿಡಲಾರೆ ಬಾ. (ಮೇಲೇರಿ ಹೋಗುವನು)

ಸುಶೀಲ– ದೀಪವನ್ನು ಮೋಹಿಸಿದ ಪಾಪಿ ಪತಂಗ ಹುಳು ಪ್ರಾಣ ನೀಗುವಂತೆ ನನ್ನ ರೂಪಕ್ಕೆ ಮರುಳಾದ ದುರುಳನೇ, ಕೊನೆಗೆ ನಿನ್ನ ಕರುಳುಗಳು ಕಡೆಗೆ ಬೀಳುವವು ಜೋಕೆ.

ಧೀರೇಂದ್ರ– ಬಿದ್ದರೂ ಚಿಂತೆಯಿಲ್ಲ ಸುಶೀಲಾ, ನಿನ್ನ ಮುದ್ದಾದ ಮುಖಕ್ಕೆ ಧೀರೇಂದ್ರನೆಂಬ ಮೂರಕ್ಷರದ ಮುದ್ರೆಯನ್ನೊತ್ತಿ ಮುಂದೆ ಸಾಗುವೆ ಬಾ. (ಎಳೆಯುವನು)

ಸುಶೀಲ– ಚಾಂಡಾಲ ಬಿಡು ನನ್ನ ಕೈ, ಪರಮ ಪತಿವ್ರತೆಯಾದ ಪಾಂಚಾಲಿಯ ಮೇಲೆಯೇ ಕೈಚಾಚಿದ ನೀಚ ಕೀಚಕನ ಗತಿ ಏನಾಯಿತೆಂಬುದನ್ನು ನಿನ್ನ ಮೆದುಳಿನಲ್ಲಿ ಗೀಚಿಕೋ.

ಧೀರೇಂದ್ರ– ಗೀಚಿಕೊ ಬಡಿವಾರ ಬಡಿವ ಬಡ ನಡುವಿನ ಬಾಲೆ. ಇಂಥಾ ಗೊಡ್ಡು ಬೆದರಿಕೆಯ ಒಡ್ಡನ್ನು ಅಡ್ಡಹಾಕಲು ಬರಬೇಡ, ಕಂಪನಿಯಲ್ಲಿ ಕಂಡವರ ಕರಪಿಡಿದು ತಿರುಗಿದ ಪರಮ ಪತಿವ್ರತೆ ಈಗ ನೀನಾಗಬೇಕೆನ್ನ ರತಿ.

ಸುಶೀಲ– ನಿನ್ನ ರತಿಯಾಗಲು ನಾನಿಲ್ಲ ಅಲ್ಪಮತಿ, ಮಾಂಗಲ್ಯ ಧರಿಸಿದ ಮೋಹನನೇ ನನ್ನ ಪತಿ.

ಧೀರೇಂದ್ರ– (ನಕ್ಕು) ಪತಿ, ಎಲ್ಲಿರುವನು ನಿನ್ನ ಪತಿ. ಈಗ ನಾನೇ ನಿನಗೆ ಗತಿ.

ಸುಶೀಲ– ಹೇ ದೇವಾ ಪರಮೇಶ, ನೀನು ಸರ್ವಾಂತರ್ಯಾಮಿಯಾದದ್ದು ನಿಜವಿದ್ದರೆ ಇಲ್ಲಿ ಕಾಣುವ ಕಲ್ಲು ನಾಗರದಲ್ಲಿ ಮೂಡಿಬಂದು ದುಷ್ಟ ಧೀರೇಂದ್ರನಿಂದ ನನ್ನ ಮಾನವನ್ನು ಕಾಪಾಡು.

ಧೀರೇಂದ್ರ– ಎಲೆ ನಲ್ಲೆ ನಿನ್ನ ಸೊಲ್ಲುಕೇಳಿ ಕಲ್ಲು ನಾಗರದಲ್ಲಿ ಉದ್ಭವಿಸಿ ಬರುವುದೇ ಆ ಅಲ್ಲಮನು, ಸುಶೀಲಾ ಸುಮ್ಮನೆ ಬಲತ್ಕಾರಕ್ಕೆ ಬಲಿಯಾಗಬೇಡ ಬಾ ನನ್ನ ಬಳಿಗೆ.

ಸುಶೀಲ– ಬಳಿಗೆ ಥೂ ಈ ಗಳಿಗೆಯಲ್ಲಿ ಹುಳ ಬೀಳಲಿ ನಿನ್ನ ನಾಲಿಗೆಯಲ್ಲಿ.

ಧೀರೇಂದ್ರ– ಹುಳ, ಸುಶೀಲ ನೀನೀಗ ನನ್ನ ಗಾಳಕ್ಕೆ ಸಿಕ್ಕಿಬಿದ್ದ ಹೊಸ ಮೀನು, ಇಲ್ಲಿ ಯಾರೂ ಬಂದು ರಕ್ಷಿಸಲಾರರು ನಿನ್ನ ಮಾನ. ಈ ಹುತ್ತಿನ ಸುತ್ತಮುತ್ತ ಬೆಳೆದು ನಿಂತಿರುವದು ಕಾನನ, ಸುಮ್ಮನೆ ವೇಳೆ ಗಳೆಯಬೇಡ ಬಾ ಇನ್ನು. (ಎಳೆದುಕೊಂಡು ಹೋಗಹತ್ತುವನು)

ಸುಶೀಲ– ಥೂ ಪಾಪಿ, ಬಿಡು ಬಿಡು ಚಾಂಡಾಲ (ಉಮೇಶ ಪ್ರವೇಶಿಸುವನು)

ಉಮೇಶ– ಕಾಮದಿಂದ ಕಾವೇರಿದ ಕತ್ತೆ, ಸುಮ್ಮನೆ ನನ್ನ ತಂಗಿಯ ಕೈಬಿಟ್ಟು ತೊಲಗದಿದ್ದರೆ ಬೀಳುವವು ನಿನ್ನ ಗಂಟು ಕಿನ್ನೆಯಮೇಲೆ ಲತ್ತೆ.

ಧೀರೇಂದ್ರ– ತಂಗೀ...(ನಕ್ಕು) ಓ..ಪ್, ವಂಡರಫುಲ್, ಅಣ್ಣಾ-ತಂಗಿ ನನ್ನ ಕಣ್ಣಿಗೆ ಮಣ್ಣೆರಚಲು ಬರಬೇಡ ಉಮೇಶ. ಕದ್ದು ಇವಳೊಡನೆ ಕಾಮನಾಟವಾಡಲು ಬಹುದೂರ ಬಂದಿರುವ ನಿಮ್ಮ ಮುದ್ದು ಅಣ್ಣಾ–ತಂಗಿಯರ ನಾಟಕದ ಗುಟ್ಟನ್ನು ರಟ್ಟು ಮಾಡದಿದ್ದರೆ ನಾನು ದಿಟ್ಟ ಧೀರೇಂದ್ರನೇ ಅಲ್ಲ.

ಉಮೇಶ– ದಿಟ್ಟ ಧೀರೇಂದ್ರ ನಿನ್ನ ಕೆಟ್ಟ ಕೂಗನ್ನು ಹಿಂತೆಗೆದುಕೊಳ್ಳದಿದ್ದರೆ ನಿನ್ನನ್ನು ಇಲ್ಲೇ ಜೀವಂತ ಸುಟ್ಟುಬಿಡುವೆ. (ಅಂಗಿ ಹಿಡಿಯುವನು)

ಧೀರೇಂದ್ರ– (ತಿರಸ್ಕಾರದಿಂದ) ಹೇ...ಸುಟ್ಟು ಬಿಡಲು ಹೋಳಿಹುಣ್ಣಿಮೆಯ ಕಾಮನ ಪಟವಲ್ಲ ನಾನು.

ಉಮೇಶ– ಕಾಮನ ಪಟವಲ್ಲದಿದ್ದರೆ ನೀನೇನು ತ್ರೈತ್ರಾಯುಗದ ಶ್ರೀರಾಮಚಂದ್ರನೋ ಅಥವಾ ಈ ಯುಗದ ಸೂರ ಸುಭಾಸಚಂದ್ರಭೋಸನೋ ಹೇಳು ಧೀರೇಂದ್ರ

ಧೀರೇಂದ್ರ– ಹೇಳುವೆ ತಾಳು, ಮಲಗಿದ್ದ ಕಾಳಿಂಗ ಸರ್ಪಕ್ಕೆ ಕೈಬೀಸಿ ಕೆಣಕಿರುವೆ, ಹುಷಾರ್ ಉಮೇಶ ಬರುತ್ತೇನೆ. (ಹೋಗುವನು)

ಉಮೇಶ– ಕಾಳಿಂಗ ಸರ್ಪವೇ ನಿನ್ನ ದರ್ಪ ಮುರಿಯದಿದ್ದರೆ ನಾನು ನಮ್ಮಪ್ಪನ ಮಗನೇ ಅಲ್ಲ. ಹೋಗು ಪಾಗಲ್ ಧೀರೇಂದ್ರ ಹೋಗು.

ಸುಶೀಲ– ಅಣ್ಣಾ ಈ ದುಷ್ಟ ಧೀರೇಂದ್ರನಿಂದ ನನ್ನ ಮಾನವನ್ನು ಕಾಪಾಡಿದ ನಿನಗೆ ನನ್ನ ಅನಂತ ವಂದನೆಗಳು.

ಉಮೇಶ– ವಂದನೆಗಳೇಕಮ್ಮ ಅಬಲೆಯರ ಮಾನರಕ್ಷಣೆ ಮಾಡುವುದು ಪುರುಷರ ಸಹಜ ಲಕ್ಷಣವಮ್ಮ. ನಡೆಯಮ್ಮ ಮನೆಯವರೆಗೆ ನಿನ್ನನ್ನು ಮುಟ್ಟಿಸಿ ಬರುತ್ತೇನೆ.

ಸುಶೀಲ– ನಡೆಯಣ್ಣಾ....

–: ತೆರೆ ಬೀಳುವದು :–

===***===***===

೧೮ನೇ ಪ್ರವೇಶ

— ರಸ್ತಾ —

(ಸಂಗಣ್ಣ ಗಡ್ಡ ಹಚ್ಚಿಕೊಂಡು ತುರ್ಕರ ವೇಷದಲ್ಲಿ ಬರುವನು.)

ಸಂಗಣ್ಣ— ತಾರಾನ ಮಾರಿ ನೋಡಬೇಕಂತ ಮೂರು ದಿನಾತು ಇದೇ ತೇರಿನ ಬಜಾರದಾಗ ಅಲಿದಲಿದು ಇಲಿಯಾದೆ, ಆದರೂ ತಾರಾನ ಮಾರೀನಽ ಕಾಣವಲ್ಲು. ವಾರಕ್ಕೊಮ್ಮೆರಽ ಅವಳ ಮಾರಿ ನೋಡದಿದ್ರೆ ನನ್ನ ಗಂಟಲದಾಗ ನೀರು ಹೋಗೋದಿಲ್ಲ, ಏನ್ಮಾಡ್ಲಿ ಸಂದು ಸುಳಿವು ನೋಡಿ ನಾ ಮನ್ಯಾಗ ಹೊಕ್ಕೆಂತ್ಲ್ಯೇ ಅವಳ ಗಂಡ ಬೆಕ್ಕು ಬಂದಂಗ ಬಂದು ಬಿಡತಾನ. ಬಂದಾವ ನಾಕು ಕೊಕ್ಕಿಮಾತು ಕುಕ್ಕಿರ ಕಳಿವಿ ಬಿಡುತಾನ....ಅರೆರೆ ಇದೇನು ಮನಸನ್ಯಾಗ ನೆನಸುತ್ಲೇ ತಾರೀ ಸವಾರಿ ಈ ಕಡೆ ಹೊಂಟು ಬರಾಕ ಹತ್ತೈತೆ, ಸ್ವಲ್ಪ ಡಿಕ್ಕೀಹೊಡ್ದು ಮಜಾ ಮಾಡೋನ ಕೂನ ಹಿಡಿತಾಳಿಲ್ಲ ನೋಡೋಣ. (ತಾರಾ ಬರುವಳು, ಡಿಕ್ಕಿ ಹೊಡೆಯುವನು.)

ತಾರಾ— (ತಳಗೆ ಮೇಲೆ ನೋಡಿ) ಯಾವನಲಾ ನೀನು ಹಾದಿಗೆ ನಿಂತು ಹೋಗಿಬರೋ ಹೆಣ್ಮಕ್ಕಳಿಗೆ ಹಲ್ಲುಕಿಸ್ತು ಹಾಯ್ತಿ, ಒಂದು ಕೊಡಬಾರ್ದ ಕೊಟ್ನೆಂದ್ರ ಅಲ್ಲಾ ಅಂದು ಇಲ್ಲೇ ಮಲಗಿಬಿಟ್ಟೀದಿ.

ಸಂಗಣ್ಣ— ಅರೆ...ಅರೆ....ಗುಸ್ಸಾ ನಾಹೋ ತಾರೀ ನನ್ನ ಮೋಹದ ಪ್ಯಾರೀ.

ತಾರಾ— ಪ್ಯಾರಿ....ಯಾಕಲಾ ಕೆಂಜಗಿಮೋತಿ ಪಿಂಜಾರ ಹುಂಜ ಕೂಗಿದಂಗ ಹಿಂಗ್ಯಾಕ ಕೂಗ್ತಿ, ನಿನ್ನ ಗಡ್ಡ ಕಿತ್ತು ತಲ್ಯಾನ ಹೆಡ್ಡು ಬಿಡಸ್ತೀನಿ ನಿಂದ್ರು, (ಗಡ್ಡಕ್ಕೆ ಕೈ ಹಾಕುವಳು) ಐ....ಐ....ನೀನೇನು ಸಂಗಣ್ಣ.

ಸಂಗಣ್ಣ— ಹೌದಾ ನನ್ನ ಬಂಗಾರಬಣ್ಣದ ಹೆಣ್ಣ.

ತಾರಾ— ಈ ತುರಕರ ಅಂಡಾಬಂಡದ ಲುಂಗಿ ಯಾಕ ಉಟ್ಟೀಯಾ ಸಂಗಣ್ಣ....?

ಸಂಗಣ್ಣ— ತಾರೀ ಕಲಬುರ್ಗಿ ಉರಿಸಿಗೆ ಹೋಗಬೇಕೆಂತ ಹಾಕೀನಿ.... ಈ ಡೆರೆಸ.

ತಾರಾ— ಉರ್ಸಿಗೆ ಹೋದ್ರ ಈ ಡೆರೆಸ ಯಾಕ ಹಾಕಬೇಕು?

ಸಂಗಣ್ಣಾ— ಯಾಕ ಹಾಕಬೇಕಂದ್ರ ಏನಹೇಳ್ಲಿ ತಾರೀ, ಈ ಡಿರೆಸ್ ಇದ್ರ ತುರಕರ ಪೋರಿಗಳೆಲ್ಲಾ ಭೈಯಾ ಭೈಯಾ ಅಂತ ನನಗ ಕೈಕೊಟ್ಟು ಬಳಿ ಹಾಕಿಸಿಕೊಂತಾವ, ಕೈತುಂಬಾ ನಾಕು ದುಡ್ಡು ಕಾಣ್ತಾವ ತಿಳೀತ.

ತಾರಾ— ತಿಳಿತು...ತಿಳಿತು...ಹೊತ್ತುಬಂದಂಗ ಛತ್ರಿ ಹಿಡಿಯೋವ ಅನ್ನೋದು.

ಸಂಗಣ್ಣಾ— ಹ್ಯಾಂಗ ಛತ್ರಿ ಹಿಡಿದಿದ್ರ ಈ ಕಲಿಕಾಲದಾಗ ಬಿಳ್ತಾದ ಹೊಟ್ಟಿಗೆ ಕತ್ರೀ, ಇರ್ಲಿ ಎಲ್ಲಿಗೆ ಹೊಂಟಿತಲ್ಲ ಅವಸರ್ಲೀ ನಿನ್ನ ಸವಾರಿ.

ತಾರಾ— ಕಾಡಿ, ಬೀಡಿ, ಚಾಮಡಿ. (ಅವಸರ್ಲೇ ಹೋಗಹತ್ತುವಳು)

ಸಂಗಣ್ಣಾ— ಏ ಅಡಾವುಡಿ ಕಾರದಮಡಿ ಎಷ್ಟ ಮಾಡ್ತೀಯಲ್ಲ ಗಡಿಬಿಡಿ. (ಅಡ್ಡಕಟ್ಟಿ)

ತಾರಾ— ಬಿಡು ಬಿಡು, ಈಗ ನನಗ ಸೌಡಿಲ್ಲ, ದೌಡ ಹೋಗಬೇಕು.

ಸಂಗಣ್ಣಾ— ತಾರೀ, ಈಗ ಮಾತ್ರ ನಿನಗೆ ಬಿಡೋದಿಲ್ಲ ದಾರಿ.

ತಾರಾ— ಐ, ಐ, ಇದೇನ ಭೀಮಾರಿ.

ಗಂಗಣ್ಣಾ— (ಮರೆಯಲ್ಲಿ ನಿಂತು) ತಾರಾ....ತಾರಾ...

ಸಂಗಣ್ಣಾ— ತಾರಾ ಮಾವ ಬಂದ್ಹಾಗಾತು, ಈಗ ಆಗ ನಿನ್ನ ನಾವು ದೂರ.

ತಾರಾ— ದೂರ ಯಾಕ ಅಗ್ತೀಯಾ ನನ್ನ ಶೂರ ಅಂವಾ ನಿನ್ನ ಕೂನ ಹಿಡಿತಾನ ಮೂರಾ.

ಗಂಗಣ್ಣಾ— (ಬಂದು) ತಾರಾ, ಕಾಡಿ, ಬೀಡಿ, ತಗೊಂಡ ಬಾ ಅಂದ್ರ ಈ ತುರಕನ ಕೂಡ ಮುರಕ ಮಾಡಕೊಂಡ ನಿಂತೀಯಲ್ಲೇ

ತಾರಾ— ಏನ್ಮಾಡ್ಲೀ....ಅಡ್ಡಬಿದ್ದು ಬಂದ ಗಡ್ಡದ ಬಾವಾ.

ಗಂಗಣ್ಣಾ— ಏನ್ಮಾಡ್ಲೀ ಅಂತೀಯಲ್ಲಾ? ಖಂಡಗ ಕೊಟ್ರೂ ಲಂಡನ ಸವಾಸ ತರಲ್ಲಂತ, ಯಾಕ ನಿಂತೀ ಈ ಭಂಡನಕೂಡ.

ಸಂಗಣ್ಣಾ— ಅರೇ ಭಂಡಾ ಪಂಡಂತ, ಐಸಾ ಕಂಡ ಕಂಡಂಗ ಬಾತ್ ಕರೆತೋ ನಿಮ್ಹೂ ಮುಂಡಾಸ ಬೀಳ್ದಂಗ ಮಾಡ್ತೆ.

ಗಂಗಣ್ಣಾ— ಮುಂಡಾಸ ಬೀಳುವಂಗ ಬಡಿವ ಗಂಡುಗಲೀ ನೀನ್ಯಾವನಲೇ ಪುಂಡ ಪಿಂಜಾರ ನನ ಮೊಮ್ಮಗನೇ, ಒಂದು ಗುಮ್ಮಿದಿನೆಂದ್ರ ಅರೇ ಅಲ್ಲಾಂತ ಇಲ್ಲೇ, ಕಲ್ಲಾನೆ ಇಲ್ಲಿ ನಮಾಜ ಮಾಡೀ.

ಸಂಗಣ್ಣಾ– ಅರೇ ನಮ್ಮೂದ್ದು ಕೂಡ ಏನ ಲಡಾಯಿ ಮಾಡ್ತೀದಿ ಗಾಂಡೂದು ಗಂಗಪ್ಪ.

ಗಂಗಣ್ಣಾ– ಗಾಂಡೂ ಅಂತೀಯಾ ಮಗನಾ ನಿನ್ನ ಗಡ್ಡಕಿತ್ತಿ ಗಾಂಜಿ ಚಿಲ್ಮಿಗಿಕ್ಕಿ ಸೇದ್ಲಿಲ್ಲಾ ಅಂದ್ರ ನಾ ಗಂಡುಗಲಿ ಗುಂಡಪ್ಪನಮಗ ಗಂಗಣ್ಣನೇ ಅಲ್ಲ. (ಗಡ್ಡಕ್ಕೆ ಕೈ ಹಾಕುವನು)

ಸಂಗಣ್ಣಾ– ನಾನು....ನಾನಪೋ....ಮಾವಾ....ಸಂಗಣ್ಣಾ.

ಗಂಗಣ್ಣಾ– ಸಂಗಣ್ಣಾ, ಯಾಕ ಗಡ್ಡ ಹಚ್ಚಿಕೊಂಡೀಯಲೇ ಮಂಗಣ್ಣಾ

ತಾರಾ– ಅಣ್ಣಾ ಕಲಬುರ್ಗಿ ಉರ್ಸಿಗೆ ಹೋಗಬೇಕಂತ ಹಾಕ್ಯಾನ ಈ ಬಣ್ಣದ ವೇಷ.

ಸಂಗಣ್ಣಾ– ಕಣ್ಣು ಇದ್ದಾಗ ಕಲಬುರ್ಗಿ ನೋಡಬೇಕಂತ, ಹುಂ ಸಿಕ್ಕಾಗ ಮಜಾ ಮಾಡಬೇಕಂತ ಬಂದೆ ಬಿಡಪಾ ಮಾವಾ.

ಗಂಗಣ್ಣಾ– ಮಜಾ ಮಾಡು ಮಗನಾ ಕಣ್ಣಿಗೆ ಬೀಳಬಾರದು ಬಿದ್ದೆಂದ್ರ ನಿನ್ನ ಹೆಣಾ ಮಣ್ಣಾ ಕಾಣಸ್ತೀನಿ.

ತಾರಾ– ಮಣ್ಣಾ ಕಾಣಸ್ತೀನಿ, ಮಣ್ಣಾ ಕಾಣಸ್ತೀನಿ ಅಂತ ಅನ್ನಾಕ ಹತ್ತಿದಾಗ ಅಣ್ಣಾ ಇನ್ನೂ ಸಣ್ಣಾವ ಇದ್ದ.

ಸಂಗಣ್ಣಾ– ಸಣ್ಣಾವ ಚೊಣ್ಣಾ ಹಾಕತಿದ್ನವಾ.

ಗಂಗಣ್ಣಾ– ಚೊಣ್ಣಾ ಹಾಕತಿದ್ನೆವ್ವಾಂತ ಹಂಗ ಬಯಲಾಟದ ಹೆಣ್ಣಾ ಸೋಗ ಮುರಕ ಮಾಡಿದಂಗ ಮಾಡಬ್ಯಾಡಲೇ ಸಂಗ್ಯಾ, ಇವತ್ತ ನಿನ.... ನಿನ.... ಕಣ್ಣಾಗುಡ್ಡಿ ಕಡ್ಯಾಕಮಾಡಿ ಬುಡ್ಡೀಕಲ್ಲಿಗೆ ಇಟಲಿಲ್ಲಂದ್ರ..ನೋಡ ಮಗನಾ ನಾ ದಿಡ್ಡಿಮನೀ ಗಂಗಣ್ಣನೇ ಅಲ್ಲಾ (ಷಡ್ಡು ಹೊಡೆಯುವನು)

ಸಂಗಣ್ಣಾ– ದಿಡ್ಡಿಮನೀ ಗಂಗಣ್ಣಾ ಮಾವ ಷೆಡ್ಡುಹೊಡದು ನನಕೂಡ ಲಡ್ಡು ತಿನಬ್ಯಾಡ ಇನ್ನ ಮುಂದ ಭೆಟ್ಟಿಯಾಗಬ್ಯಾಡಂದ್ರ ನಿನಗೂ ನಿನ್ನ ಹೆಣ್ತೀಗೂ ಧೀರ್ಘದಂಡ.

ಗಂಗಣ್ಣಾ– ದಂಡಾಂ...ತ ಸುಮ್ಕ ಹೋಗಲೇ ಜಗಭಂಡಾ.

ಸಂಗಣ್ಣಾ– ಜಗಭಂಡಾಂತ ನಿನ್ನ ಗಂಡನಕೂಡ ಹಂಗ ನಿಂತ ಬೇಯಿಸ್ತಿಯಲ್ಲವಾ ತಾರಾ.

ತಾರಾ– ಯೆಣ್ಣಾ ನನ್ನ ಗಂಡನ ಯಟ್ಟಿಮಾತ ಹೊಟ್ಟ್ಯಾಗ ಇಟ್ಕೋ ಬ್ಯಾಡಪಾ.

ಸಂಗಣ್ಣಾ– ಹೊಟ್ಯಾಗ್ಯಾಕ ಇಟ್ಟಗೊಳ್ಳವಾ ನಿನ ಮಾರಿನೋಡಿ ಬರಬೇಕಾಗೇತಿ, ಬರ್ತೀನವಾ ತಾರಾ.

ತಾರಾ– ಮರೀಬ್ಯಾಡ ಯಣ್ಣಾ.

ಗಂಗಣ್ಣಾ– ತಾರಾ, ಅಣ್ಣಾ...ಅಣ್ಣಾ ಅಂತ ಹಂಗ ಸಲಿಗೀ ಕೊಡಬ್ಯಾಡ.

ತಾರಾ– ಯಾಕ...?

ಗಂಗಣ್ಣಾ– ಯಾಕ, ಈ ಉಡಾಳ ಹುಸೇನಸಾಬ ನಿನ್ನ ಮಸುತ್ಯಾಗ ದೇವರ ಕೂಡಸಬೇಕಂತ ಮ್ಯಾಡ್ಯಾನ.

ತಾರಾ– ಮಾಡ್ಯಾನ...ನಿನಬಾಯಿಗೆ ಬಾರೀ ಮುಳ್ಳುಚುಚ್ಲೀ.

ಗಂಗಣ್ಣಾ– ಬಾರೀ ಮುಳ್ಳರ ಚುಚ್ಲ್ಯಾ...ಕಾರೀ ಮುಳ್ಳಾರ ಚುಚ್ಚು ತಾರಾ ಇಂಥ ಸಂಗ್ಯಾನಂಥ ಹುಚ್ಚ ಮಂಗ್ಯಾಗಳು ನಿನ್ನ ಹಂತ್ಯಾಕ ಅಂಗೀ ಹೊಲ್ಸಿಕೊಳ್ಳೋ ನೆವಾಮಾಡಿ ಬರ್ತಾವ, ಸ್ವಲ್ಪ ಹುಷಾರಿಟ್ಟ ಮಿಷನ್ ಹೊಲಿ.

ತಾರಾ– ಹೊಲಿ ನಿನತಲಿ, ತಿರಗಾ ಮುರಗಾ ತಗೀಬ್ಯಾಡ ಅದ....ss ವಾಲಿ ಎಲ್ಲಿ ಕಲ್ತಿದ್ದಿ ಸಂಶಯದ ಸಾಲಿ?

ಗಂಗಣ್ಣಾ– ಸಾಲಿಯಾಕ ಕಲೆಂದ್ಯಾ ಪ್ಯಾಲಿ, ನಿನಮುರಕಾ ನೋಡೀದ್ರ ನಮ್ಮ ನಗನೂರ ಶಾಸ್ತ್ರೀ ಸಹ ತನ್ನ ಕೈಯಾನ ಬಡ್ಗೀ ಹಿಂಗ ಮೀಟ್ತಾನ, ಅದ್ಕ ಜರಾ ನಿನ್ನ ಮುರಕನ್ಯಾಗ ಫರಕ್ ಮಾಡು.

ತಾರಾ– ಫರಕ್...ಮಾಡದಿದ್ರ...?

ಗಂಗಣ್ಣಾ– ಫರಕ್, ಮಾಡದಿದ್ರ ಹರದ ಹೊಕ್ಕೈತಿ ನೋಡು ನನ್ನ ನಿನ್ನ ಬಾಳೇದ ಕೊಳಕಣ್ಣಿ.

ತಾರಾ– ಇರಲಿ ಬಾರಾ ನನ ಕೌಳೂರ ಕುಳಕಣ್ಣಿ, ಮನ್ಯಾಗ ಮಾಡೀನಿ ಸೀಕಣ್ಣಿ.

ಗಂಗಣ್ಣಾ– ಸೀಕಣ್ಣಿ, ಹಗರ ನಡಿಯಾ ನನ ಗದಗಿನ ಗೋದಿ ರೊಟ್ಟಿ.

(ಹಾಡು ಹಾಡುತ್ತ ಹೋಗುವರು)

– ರಸ್ತಾ ಏರುವುದು –

===***=====***===

೧೯ನೇ ಪ್ರವೇಶ

(–: ಗಾರ್ಡನ್ :–)

(ನೀಲಾ–ವೀರೇಶ ಎದುರು ಬದುರಾಗಿ ಬರುವರು.)

ವೀರೇಶ– ಹಲ್ಲೋ ಗುಡ್ ಇವನಿಂಗ್ ನರ್ಸ ನೀಲಾ. (ಕೈ ಕುಲುಸುವನು)

ನೀಲಾ– ಹಲ್ಲೋ ಗುಡ್ ಇವನಿಂಗ್ ಬಂದಿದ್ದಿರೋ ಪಾರ್ಕಿನ ಕಡೆ.

ವೀರೇಶ– ಹೌದು, ಆಫೀಸನಲ್ಲಿ ವರ್ಕ ಮಾಡಿ ಮಾಡಿ ಬೇಜಾರ ಬಂದಿತ್ತು. ಸ್ವಲ್ಪ ಪಾರ್ಕಿನಕಡೆಗೆ ತಿರುಗಾಡಿಕೊಂಡು ಹೋಗೋಣವೆಂದು ಬಂದೆ.

ನೀಲಾ– ವೀರೇಶ ಮತ್ತೇನು ಹೊಸ ವಿಷಯ....?

ವೀರೇಶ– ಹೊಸ ವಿಷಯ ಸಾಕಷ್ಟಿದೆ, ನೀವು ಕೇಳಿಲ್ಲವೇ?

ನೀಲಾ– ಕೇಳಿಲ್ಲ ಏನಿದೆ ವೀರೇಶ.

ವೀರೇಶ– ಏನು ಹೇಳಲಿ ನೀಲಾ, ಹೇಳಿದ ಕೂಡಲೇ ನಿನ್ನ ಕೋಮಲ ಹಾರ್ಟ ಆಗುವುದು ಫೇಲ್.

ನೀಲಾ– ಫೇಲ್ ಆಗಲು ಅಂಥಾ ಭಯಾನಕ ವಿಷಯವೇ ಬೇಗ ಬಿಚ್ಚಿ ಹೇಳು ವೀರೇಶ?

ವೀರೇಶ– ಬಿಚ್ಚಿ ಹೇಳುವುದೇನಿದೆ, ನೀವು ಯಾರನ್ನು ಮ್ಯಾರೇಜ್ ಆಗಬೇಕೆಂದು ಈ ಧರೆಯಲ್ಲಿ ನೆಚ್ಚಿ ನಿಂತಿದ್ದಿರೋ ಅವರಿಂದು ನಿಮ್ಮನ್ನು ಕಾರೀಜು ಎಂಬ ಕೆಟ್ಟಕೆರೆಯಲ್ಲಿ ತುಳಿಯುವ ದುಷ್ಟಾಲೋಚನೆಯಲ್ಲಿದ್ದಾರೆ.

ನೀಲಾ– ಈ ನ್ಯೂಜ್ ನಿಜವೆಂದು ನಂಬಲೇ ವೀರೇಶ?

ವೀರೇಶ– ನಂಬು ಬಿಡು ಹುಂಬ ನೀಲಾ ನಿನ್ನಷ್ಟು ಮುಂದೆ ತಪ್ಪಿಲ್ಲಲ್ಲ ಆ ಧೀರೇಂದ್ರನಿಂದ ನಿನಗೆ ಕಷ್ಟ. ನಿನ್ನಂತೆ ಇಲ್ಲಿಗೆ ನೂರಾರು ನರ್ಸಗಳಿಗೆ ವಿವಾಹದ ಆಶೆಯನ್ನು ಹಚ್ಚಿ ರಸ ಕ್ರೀಡೆಯನ್ನು ಆಡಿ ಬಿಸಾಡಿ ಬೀದಿಗೆ ಎಸೆದಿರುವನು.

ನೀಲಾ— ಆ ವಂಚಕನ ಸಂಚನ್ನು ಮುಂಚಿತವಾಗಿ ತಿಳಿಸಿದೆ ವೀರೇಶ, ಇಂದಿನಿಂದ ನೀನೇ ನನ್ನ ಜೀವತೇಶ.

ವೀರೇಶ— ಜೀವತೇಶ ಎಂಬ ಈ ನಿನ್ನ ಮಂಜಲು ಧ್ವನಿ ಕೇಳುತ್ತಲೇ ಆ ಕಂಜ ಶರನು ನಿನ್ನ ಪ್ರೇಮದ ನೊರೆಹಾಲನ್ನು ಪಾನ ಮಾಡುವದಕ್ಕಾಗಿ ಭರದಿಂದ ಹೊರಬೀಳುತ್ತಿರುವನು ಬಾ ನೀಲಾ.

ನೀಲಾ— ವೀರೇಶ ಆ ಕ್ರೂರ ಧೀರೇಂದ್ರನಂತೆ ತಾವು ನನ್ನನ್ನು ನಡು ನೀರಿನಲ್ಲಿ ಕೈ ಬಿಡಬಾರದೆಂದು ಬೇಡಿಕೊಳ್ಳುವೆ.

ವೀರೇಶ— ಕೈಬಿಡುವ ಕೆಟ್ಟ ಸ್ವಭಾವದ ಕಟುಕ ನಾನಲ್ಲ, ನೀ ನೀ ರೀತಿ ಭಯಗೊಳ್ಳುವದು ತರವಲ್ಲ.

ನೀಲಾ— ಹಾಗಾದರೆ ಎಂದು ಕಾಣಿಸುವಿರಿ ಬರಿದಾದ ನನ್ನ ಕೊರಳಿಗೆ ಹಿರಿದಾದ ಮಂಗಳಸೂತ್ರ.

ವೀರೇಶ— ಮಂಗಲಸೂತ್ರ ಆ ಕ್ರೂರ ಧೀರೇಂದ್ರನ ಚರಿತ್ರೆ ಮುಗಿದ ಕೂಡಲೇ ನಿನ್ನ ಕೊರಳಿಗೆ ಮಂಗಲಸೂತ್ರ.

ನೀಲಾ— ಆ ಕ್ರೂರ ಧೀರೇಂದ್ರನ ಚರಿತ್ರೆ ಎಂದು ಮುಗಿಸುವಿರಿ?

ವೀರೇಶ— ಎಂದು ಬೇಕೆಂದು ಮುಗಿಸಬಹುದು, ಆದರೆ ಸಾಹುಕಾರರು ಸರ್ವ ಸ್ಥಿರ ಆಸ್ತಿಯನ್ನು ನಿನ್ನ ಹೆಸರಲೆ ವರ್ಗಾಯಿಸಿರುವರೇ?

ನೀಲಾ— ವರ್ಗಾಯಿಸಿ ಒಂದು ತಿಂಗಳಾಯಿತು.

ವೀರೇಶ— ವರ್ಗಾಯಿಸಿದರೆ ಒಳ್ಳೆಯದಾಯ್ತು, ಇಂದು ನನ್ನ ಹೆಸರಿಲೆ ನೀನು ವರ್ಗಾಯಿಸು. ನಾಳೆಯೇ ಅವನನ್ನು ಸ್ವರ್ಗಕ್ಕೆ ಕಳಿಸಿಬಿಡುವೆ.

ನೀಲಾ— ಕಳಿಸುವುದು ಹೇಗೆ?

ವೀರೇಶ— ಹೇಗೆಂದು ಕೇಳುವ ನಾಗಕನ್ಯೆ ಇದೋ ನೋಡು, ಈ ವಿಷದಪುಡಿಯನ್ನು ಅವನು ಕುಡಿಯುವ ವಿಸ್ಕಿಯಲ್ಲಿ ಬೆರೆಸಿ ಕುಡಿಸಿಬಿಡು. ನಿಮಿಷಾರ್ಧದಲ್ಲಿ ಸೇರುವನು ಯಮನ ಬೀಡು. ಹಾರ್ಟಫೇಲಾಗಿ ಸತ್ತನೆಂದು ಪ್ರಜಾವಾಣಿ ಪೇಪರಿಗೆ ಕೊಡುವೆ ನೋಡು.

ನೀಲಾ— ನೋಡಿದೆ ವೀರೇಶ, ನಿಮ್ಮ ಕಾರಸ್ಥಾನಕ್ಕೆ ಆ ಕಷ್ಟ ನಾಗಲಾರ ಸಾಟಿ.

ವೀರೇಶ– ಹೌದು ನೀಲಾ ನನಗಿನ್ನು ವೇಳೆಯಿಲ್ಲ. ನಾಳೇ ಇದೇ ವೇಳೆಗೆ ಭೇಟ್ಟಿ

ನೀಲಾ– ಬರಬೇಕು ನೀವು ಗಟ್ಟಿ

ವೀರೇಶ– ಘಟ್ಟಿ ಬರುವೆನೆಂದು ಹೇಳುವೆ ಇದೋ ನಿನ್ನ ಕೆನ್ನೆ ತಟ್ಟಿ, ಬಾ ನೀಲಾ. ತೀವ್ರ ನಿನ್ನ ತುಂಬುಗಲ್ಲದ ಒಂದು ಚುಂಬನವಿತ್ತು ಆನಂದದಾಂಬುದಿಯಲ್ಲಿ ಮುಳುಗಿಸು.

ನೀಲಾ– ಬಾ ರಾಜಾ.

–: ಹಾಡು :–

(ಹಾಡುತ್ತ ಹೋಗುವರು)

–: ತೆರೆಬೀಳುವದು :–

===***====***===

೨೦ನೇ ಪ್ರವೇಶ

(ಬಂಗ್ಲೆ)

(ಸುಶೀಲ ಪೇಪರ ನೋಡುತ್ತಿರುವಾ ಮೋಹನ ಬರುವನು)

ಮೋಹನ– ಸುಶೀ....ಸುಶೀ....?

ಸುಶೀಲ– ಏಕಿಷ್ಟು ಖುಷಿ....

ಮೋಹನ– ಖುಷಿ, ನನ್ನ ಮಿತ್ರ ಶಶಿರಾಜನ ಮ್ಯಾರೇಜ್.

ಸುಶೀಲ– ಎಲ್ಲಿ?

ಮೋಹನ– ಬೆಂಗಳೂರಲ್ಲಿ ಬೇಗ ನನ್ನ ಬ್ಯಾಗ್ ರೆಡಿ ಮಾಡು.

ಸುಶೀಲ– ಬೆಂಗಳೂರಿಂದ ಬರುವಕಾಲಕ್ಕೆ ನನಗೇನು ಕಾಣಿಕೆ ತರುವಿರಿ ರಾಜಾ.

ಮೋಹನ– ನಿನಗೇನು ತರಲಿ ಸುಂದರವಾದ ಒಂದು ಸಿಲ್ಕಸೀರೆ ತರುವೆ.

ಸುಶೀಲ– ಸೀರೆಯ ಜೊತೆಗೆ ಈ ಕೊರಳಿಗೊಂದು ಚಿನ್ನದ ಚಂದ್ರಹಾರ ಮಾಡಿಸಿ ತನ್ನಿ.

ಮೋಹನ– ಹಾಗೇ ಆಗಲಿ, ಎಲ್ಲಿ ಅರಳಿ ಬರಲಿ ನಿನ್ನ ಮೊಗದಲ್ಲಿ ನಗೆಯ ಗುಲಾಬಿ.

– ಹಾಡು –

ಮೋಹನ– ಹೋಗು ಬೇಗ ಗಂಗಣ್ಣನ ಸಂಗಡ ನನ್ನ ಬ್ಯಾಗ ಕಳಿಸು.

ಸುಶೀಲ– ಕಳಿಸುವೆ. (ಒಳಗೆ ಹೋಗುವಳು)

ವೀರೇಶ– (ಪ್ರವೇಶಿಸಿ) ನಮಸ್ತೇ ಮೋಹನಕುಮಾರರೇ.

ಮೋಹನ– ನಮಸ್ತೆ ವೀರೇಶ ಮತ್ತೇನು ವಿಶೇಷ.

ವೀರೇಶ– ವಿಶೇಷವೇನು ಮಳೆಬಾರದ್ದರಿಂದ ಕರೆಂಟ್ ಕೊರತೆ ಶಾಬಾದ

ಸಿಮೆಂಟ ಫ್ಯಾಕ್ಟರಿ ಬಂದಾಗುವದೆಂದು ನಂದಾ ಮ್ಯಾನೇಜರ್ ಪೇಪರನಲ್ಲಿ ತಿಳಿಸಿರುವರು.

ಮೋಹನ– ಸರಿ ನಮ್ಮ ಫ್ಯಾಕ್ಟರಿ ಇನ್ನು ಎಷ್ಟು ದಿನಗಳವರೆಗೆ ನಡೆಯಬಹುದು?

ವೀರೇಶ– ನೋಡಿ ನಮ್ಮ ಫ್ಯಾಕ್ಟರಿ ಇನ್ನೂ ಮೂರು ದಿನ ನಡೆಯಬೇಕಾದರೆ ಮುಕ್ಕಣ್ಣನ ಮಣ್ಣ್ಯಾ ಏಕೋ ಅರ್ಜಂಟ ಬರಲು ಹೇಳಿಕಳಿಸಿದ್ದಿರಲ್ಲಾ?

ಮೋಹನ– ಬೆಂಗಳೂರಿಗೆ ಹೋಗುವುದಿದೆ, ಫ್ಯಾಕ್ಟರಿಯ ಯಾವತ್ತೂ ಲೆಕ್ಕಪತ್ರಗಳನ್ನು ಚೊಕ್ಕಾಗಿರಲಿ.

ವೀರೇಶ– ಏಕೆ ಸಾಹುಕಾರರೇ?

ಮೋಹನ– ಏಕೆ ಇಲ್ಲ, ನಾಳೆ ಸೇಲ್ಸ್‌ಟ್ಯಾಕ್ಸ ಆಫೀಸರ್ ಮೇಲ್ ಗಾಡಿಗೆ ಬರುವವರಿದ್ದಾರೆ.

ವೀರೇಶ– ಬರಲಿ ಸಾರ್, ಎಲ್ಲಾ ರಿಕಾರ್ಡ ರೆಡಿ ಮಾಡಿರುವೆ.

ಗಂಗಣ್ಣ– (ಸೂಟಕೇಸ್ ಹಿಡಿದುಕೊಂಡು ಬರುವನು) ಯಪ್ಪಾ ಈ ಸುಟ್ಟಕೇಸು ಎಲ್ಲಿ ಇಡಂದ್ರಿ....?

ಮೋಹನ– ಸುಟ್ಟಕೇಸು ಅಲ್ಲಯ್ಯಾ ಸೂಟಕೇಸ್, ಕಾರಿನಲ್ಲಿಡು.

ಗಂಗಣ್ಣ– ಆಗಲ್ರಿಯಪ್ಪಾ. (ಕಾಳ್ಯಾ ಫೋಟೋ ಹಿಡಿದುಕೊಂಡು ಬರುವನು)

ಕಾಳ್ಯಾ– ಸುಶೀಲಮ್ಮ ನೋರು ಇಲ್ಲೇನ್ರೀ?

ಗಂಗಣ್ಣ– ಯಾರಪ್ಪ ನೀನು....?

ಕಾಳ್ಯಾ– ನಾನು ಕಾಳ್ಯಾನ್ರೀ....

ಗಂಗಣ್ಣ– ಕಾಳಪ್ಪ ಏನ ಕೆಲಸ ಇತ್ತಪ್ಪಾ? ನಾಳೆ ಬಾ ಅಮ್ಮನವರು ಮನೆ ಕೆಲಸದಲ್ಲಿದ್ದಾರೆ.

ಕಾಳ್ಯಾ– ಉಮೇಶಬಾಬು ಈ ಫೋಟೋ ಕೊಟ್ಟು ಕಳಿಸಿದ್ದಾರೀ.

ಮೋಹನ– ಉಮೇಶ ನಿನಗೆ ಎಲ್ಲಿ ಭೆಟ್ಟಿಯಾಗಿದ್ದ?

ಕಾಳ್ಯಾ– ಬೆಂಗಳೂರು ಗೂಟ್ಯಾಳಿ ಪ್ಯಾಲೇಸ್‌ನಲ್ಲಿ ಸರ್.

ಮೋಹನ– ನೀನು ಲಾರಿ ಡ್ರೈವರ ಇರುವೆಯಾ?

ಕಾಳ್ಯಾ– ಇಲ್ರೀ ಲಾರೀ ಹಮಾಲ ಅದೀನ್ರಿ.

ಮೋಹನ– ಸರಿ ತಾ ಇಲ್ಲಿ ಫೋಟೋ.

ಕಾಳ್ಯಾ– ಅಮ್ಮಾರ ಕೈಯಲ್ಲಿ ಕೊಡಂತ ಹೇಳ್ಯಾರೀ?

ವೀರೇಶ– ಅಮ್ಮಾವರು ಇವರು ಯಲ್ಲಾ ಒಂದೇ ಸುಮ್ಮನೇ ಕೊಟ್ಟು ಹೋಗಯ್ಯ ಮುಂದೆ.

ಕಾಳ್ಯಾ– ಹತ್ತುರೂಪಾಯಿ ಒಗಿರಿ ಸಾರ್, ಒಂದು ದರಂ ಹಾಕ್ಕೊಂಡ ಹೋಕ್ಕೀನಿ?

ವೀರೇಶ– ತಗೊಳ್ಳಯ್ಯಾ. (ರೂಪಾಯಿ ಕೊಡುವನು ಫೋಟೋ ಮೋಹನ ಕೈಯಲ್ಲಿ ಕೊಟ್ಟು ಹೋಗುವನು)

ಕಾಳ್ಯಾ– ಬರ್ತೀನಿ ಸಾರ್. (ಮೋಹನ ಫೋಟೋ ಕವರ ತೆಗೆದು ನೋಡಿ ಗಾಬರಿಯಾಗಿ ಸಿಟ್ಟಿನಿಂದ)

ಮೋಹನ– ನಾನು ಇದನ್ನೇನು ಕಾಣುತ್ತಿರುವೆ, ನಾನು ಕಾಣುತ್ತಿರುವದು ಕನಸೋ ಅಥವಾ ನನಸೋ ಇಲ್ಲಾ....ಇಲ್ಲಾ...ಇದು ಕನಸಲ್ಲ ನನಸು (ಸಿಟ್ಟಿನಿಂದ) ಎಲಾ ಮಿತ್ರ ದ್ರೋಹಿ, ಉಮೇಶ....ಎಂದಿನಿಂದ ಇಟ್ಟಿರುವೆ ನನ್ನ ಸಂಸಾರದಮೇಲೆ ನಿನ್ನ ಕನಸು.

ವೀರೇಶ– ಏನು ಸಾಹುಕಾರರೇ ಏಕಿಂತು ಗಾಬರಿಯಾಗಿರುವಿರಿ?

ಮೋಹನ– (ಸಿಟ್ಟಿನಿಂದ) ವೀರೇಶ್, ಎನ್ನ ಸಿರಕ್ಕೆ ಸಿಡಿಲುಬಂದು ಬಡಿದಿದ್ದರೂ ಮತ್ತೆ ನನಗೆ ಮಿಡಿನಾಗರಬಂದು ಕಚ್ಚಿದರೂ ನಾನಿಷ್ಟು ಗಾಬರಿಗೊಳ್ಳುತ್ತಿರಲಿಲ್ಲ. ಆದರೆ ಸಾಧ್ವಿ ಎಂದು ತಿಳಿದಿದ್ದ ಮಡದಿಯ ಮನದೊಳಗಿನ ಮಲೀನ ಕೃತಿಯನ್ನು ಕಂಡು ಗಾಬರಿಗೊಂಡೆ ಸುಶೀಲಾ....ಸುಶೀಲಾ....ಎಲೇ ಹೊಲಸು ಸುಶೀಲಾ....ಹೊರಗ ಬಾ.

ಸುಶೀಲ– ಬಂದೇ ಸ್ವಾಮಿ ಬಂದೆ. (ಅವಸರದಿಂದ ಬರುವಳು)

ಮೋಹನ– ಸ್ವಾಮಿ ನಾನಲ್ಲ, ಇಲ್ಲಿಹನು ನೋಡು ನಿನ್ನ ಪ್ರೇಮಿ.

ಸುಶೀಲ– ಆಡಬೇಡಿ ಸ್ವಾಮಿ, ಆಡಬೇಡಿ. ನನ್ನಾಣೆ ನಿಮ್ಮಾಣೆ ದೇವ ಸಿದ್ಧರಾಮನ ಆಣೆ.

ಮೋಹನ– ಸಿದ್ಧರಾಮನ ಆಣೆ? ಮುಚ್ಚುಬಾಯಿ ಜಾರಹೆಣ್ಣೇ ಎಂದಿನಿಂದ ಸಾಗಿಸಿರುವೆ ಆ ಉಮೇಶನೊಡನೆ ನಿನ್ನ ಸರಸ?

ಸುಶೀಲ— ಸರಸ, ನಾನಿದಾವುದನ್ನು ಅರಿಯೇ ನನ್ನರಸ.

ಮೋಹನ— ಅರಿಯದಿದ್ದರೆ ಈ ಜಾರತನದ ಜತಿ ಏಕೆ ಮುಟಿಯಿತು. ಏಕೆ ವೀರೇಶ?

ವೀರೇಶ— ಕಂಡದ್ದನ್ನು ಆಡಿದರೆ ಕೆಂಡದಂಥಾ ಕೋಪ, ಗಂಡ ಹೆಂಡರ ಜಗಳ ನಾವು ತಿನ್ನುವುದು ನಿಮ್ಮ ಅಗುಳು.

ಗಂಗಣ್ಣ— ವೀರೇಶಪ್ಪನೋರಾ ಎಬ್ಬಿಸಬ್ಯಾಡ್ರಿ ನಿಮ್ಮ ಗುಗ್ಗಳಾ.....

ವೀರೇಶ— ನಿಮಗೆ ಒಂದು ಒಳ್ಳೆಯ ಮಾತು ಹೇಳಿದರೆ ಈ ಮುಳ್ಳು ಹೇಗೆ ಮಾತನಾಡುತ್ತಿರುವನು ನೋಡಿ?

ಮೋಹನ— ನೋಡುವದೇನು ವೀರೇಶ, ತೆಗೆದುಕೊಂಡು ಬಾ ಆ ಛಾಟಿ ಅಂದರೆ ಸರಿಯಾಗಿ ತಿಳಿಯುವದು ಇವಳ ಧಾಟೀ.

ವೀರೇಶ— ತೆಗೆದುಕೊಳ್ಳಿ ಸಾಹುಕಾರರೇ, ಮೃದುವಾದ ಹೃದಯದ ಮೇಲೆ ಮೂಡಿಬರಲಿ ಚಾಟಿಯ ಚಿತ್ತಾರಾ (ಚಾಟೀ ಕೊಡಹೋಗುವನು)

ಮೋಹನ— ವೀರೇಶ ಈ ಜಾರಿಣಿಯ ಹರಣ ಹಾರುವಂತೆ ನೀನೇ ಬಲವಾಗಿ ಬಾರಿಸು.

ಗಂಗಣ್ಣ— ಕಾರಭಾರ ಮಾಡೋ ಕಾರಬ್ಯಾಳಿ ವೀರೇಶಪ್ಪ, ನಮ್ಮವ್ವನ ಮ್ಯಾಲೆ ಜರಾ ಕೈಯೆತ್ತಿ ನೋಡು, ನಿನ್ನ ಕೈಕಾಲು ಕಡಿದು ಇಲ್ಲೇ ನಮ್ಮ ಧಣೇರಿಗೆ ಕುಂದರಲಿಕ್ಕೆ ಕುರ್ಚಿಮಾಡಿ ಕೊಡಲಿಲ್ಲಂದ್ರ ನೋಡು. (ತೋಳೇರಿಸಿ ಹೋಗುವನು)

ವೀರೇಶ— ಸಾಹುಕಾರರೇ, ಈ ಗಂಗನೆಂಬ ಮಂಗವು ರಂಗೇರಿರುವದು, ಕಾರಣ ನಿಮ್ಮ ಅಂಗನೆಯ ಮೈಮೇಲೆ ನೀವೇ ಹಾರಿಸಿ ಹಂಟರ್.

ಗಂಗಣ್ಣ— (ಸ್ವಗತ) ಹಂಟರ ಹಾರಸಂತ ಏನ ಬುದ್ಧಿ ಹೇಳ್ತಾನ ನೋಡ್ರಿ ಇವನ ಸೊಂಟ ಮುರಿದ್ರು ನನಗ ಸಿಟ್ಟು ಹೋಗಾಕಿಲ್ಲ ಜಲ್ದಿ ಹೋಗಿ ದೊಡ್ಡ ಧಣೇರ ಕಳಿಸೋಣ.

ಮೋಹನ— (ಸಿಟ್ಟಿನಿಂದ) ದಿಟವ ನುಡಿ ಸೆಟವಿ, ಎಷ್ಟು ದಿನದಿಂದ ಆ ತುಂಟನನ್ನು ಗಂಟು ಹಾಕಿಕೊಂಡಿರುವಿ?

ಸುಶೀಲ— ದಿಟವ ನುಡಿವೆ ಪತಿದೇವಾ....ಪತಿಯೇ ಪರಮೇಶ್ವರನೆಂದು ಅರಿತಿದ್ದೇನೆ ಸ್ವಾಮಿ.

ಮೋಹನ– ಅರಿತಿಲ್ಲ ಆ ಉಮೇಶನೊಡನೆ ಬೆರತಿದ್ದೆ, ಥೂ ಲಜ್ಜೆ ಗೆಟ್ಟವಳೆ.

ವೀರೇಶ– ಮೋಹನ, ಇದು ಲಜ್ಜೆತಪ್ಪಿ ಗೆಜ್ಜೆಕಟ್ಟಿದ ಹೆಣ್ಣು, ಇವಳು ಹೆಜ್ಜೆ ತಪ್ಪಿದರಲ್ಲಿ ಏನೂ ಆಶ್ಚರ್ಯವಿಲ್ಲ.

ಮೋಹನ– ಎಲೆ ಬಣ್ಣಹಚ್ಚಿದ ಜಾರಹೆಣ್ಣೆ ನಿನ್ನ ನುಣ್ಣನೆಯ ನುಡಿಗೆ ನಾನು ಮಾರು ಹೋದೆನಲ್ಲಾ ಹೂಂ....ನಿಜವನ್ನು ಸಾರು.

ಸುಶೀಲ– ಮುನಿಯ ಬೇಡ ದೂರೆ ಕುಣಿಯಬೇಡಿ, ಈ ಕ್ರೂರ ವೀರೇಶನ ಸುಳ್ಳಿನ ಸೆರೆ.

ಮೋಹನ– ಸುಳ್ಳಿನ ಸೆರೆ ಕುಡಿಯಲು ನಾನಿಲ್ಲ ಮಳ್ಳು, ಆ ಕಳ್ಳನನ್ನು ಎಂದಿನಿಂದ ಗಂಟು ಹಾಕಿಕೊಂಡಿರುವಿ ಹೇಳು?

(ಚಾಟಿಯಿಂದ ಹೊಡೆಯುವನು)

ಸುಶೀಲ– ಕರುಳು ಹೊರಬರುವಂತೆ ಹೊಡೆದರೂ ನಾನು ಸುಳ್ಳು ಹೇಳಲಾರೆ ಸ್ವಾಮಿ, ನಾನು ಸುಳ್ಳು ಹೇಳಲಾರೆ. ಅಯ್ಯೋ....ಅಮ್ಮಾ.....

ಮೋಹನ– ಎಲೆ ಕಲಿಯುಗದ ಸತ್ಯಸಾವಿತ್ರಿ, ನೀನು ಪತಿವೃತೆ ಎಂಬುದರಬಗ್ಗೆ ಮಾಡಿಕೊಂಡ ನನಗೆ ಖಾತ್ರಿ, ಇಲ್ಲದಿದ್ದರೆ ಅ ನಿನ್ನ ನಲ್ಲನಿದ್ದಲ್ಲಿಗೆ ಹೊರಟುಹೋಗು....ನನ್ನ ಮನೆಬಿಟ್ಟು ಇದೇ ರಾತ್ರಿ. (ದಬ್ಬುವನು)

ಸುರೇಂದ್ರ– (ಪ್ರವೇಶಿಸಿ) ಮಗು ಮೋಹನ ಏಕಿಷ್ಟು ರೋಷ, ಬೇಗ ಹೇಳು, ಏನು ಕಂಡಿರುವಿರಿ ಇವಳಲ್ಲಿ ಅಗಾಧವಾದ ದೋಷ.

ಮೋಹನ– ದ್ರೋಹ ನೋಡಪ್ಪ ಇವಳ ವೇಷ ನೋಡಿದ ಕೂಡಲೇ ಬರುವುದು ರೋಷ, ಮಾಡಿಬಿಡನಪ್ಪಾ ಮಮತೆಯ ಮಿತ್ರ ಬಾಳ ನಾಶ. (ಫೋಟೋ ಕೊಡುವನು)

ಸುರೇಂದ್ರ– (ಆಶ್ಚರ್ಯದಿಂದ) ಹಾಂ....? ಇದೇನು ಸುಗುಣವತಿ ಸೊಸೆ....ಉಮೇಶ....

ವೀರೇಶ– ಪ್ರೇಮಾಟದಲ್ಲಿ ಪರವಶ....

ಸುರೇಂದ್ರ– ನಂಬಲಾರೆ ಈ ದೃಶ್ಯ.

ವೀರೇಶ– ಖಂಡಿತವಾಗಿ ಲೋಕ ವಿರೋಧಿ, ನಿಮ್ಮ ಇಚ್ಛೆ ಯಜಮಾನ್ರೆ ನಂಬಿ, ಬಿಡಿ. ಮುಂದೆ ಕಂಬಿ ಎಣಿಸಬೇಕಾಗುತ್ತದೆ ಮೋಹನ.

ಸುರೇಂದ್ರ– ಮೋಹನ ಯಾರೋ ದುರುಳರು, ಈ ಹುರುಳಿಲ್ಲದ ಚಿತ್ರತೆಗೆದು ನಿಮ್ಮ ಸರಳ ಸಂಸಾರವನ್ನು ಹಾಳುಮಾಡಲು ಹರಳುಹಾಕಿಸಿ ಕಳಿಸುವರು. ಇಂಥಾ ಖೋಟಾ ಫೋಟೋಕ್ಕೆ ನೀನು ದಿಟವೆಂದು ಹಟ ಹಿಡಿಯಬೇಡಾ, ಇದನ್ನು ತಡಮಾಡದೇ ಸುಟ್ಟುಹಾಕು. (ಸುಟ್ಟು ಹಾಕುವನು)

ಮೋಹನ– ಸುಟ್ಟು ಹಾಕಿದರೆ ಇವಳ ಹೊಟ್ಟೆಯಲ್ಲಿನ ಹುಟ್ಟುಗುಣ ಹೋಗುವುದೇ ಅಪ್ಪಾ....?

ವೀರೇಶ– ಉಂಡಮನೆಗೆ ಕಿಂಡಿಕೊರೆದ ಆ ಭಂಡ ಉಮೇಶ.

ಸುರೇಂದ್ರ– ವೀರೇಶ, ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು ಮೋಹನ ದುಡಿಕಿ ಕೆಡುಕನ್ನು ಆಮಂತ್ರಿಸಿಕೊಳ್ಳಬೇಡಾ.

ಮೋಹನ– ಕೆಡುಕಾದರೂ ಚಿಂತೆಯಿಲ್ಲಪ್ಪಾ, ಶ್ವಾನ ಮುಟ್ಟಿದ ಈ ಹೀನ ಮಡಿಕೆಯನ್ನು ಮನೆಯಲ್ಲಿಡಗೊಡಲಾರೆ, ನಿಂತೆ ಯಾಕೆ ನಡೆ ಜಾರಿಣಿ. (ನೂಕುವನು)

ಸುಶೀಲ– (ದುಃಖದಿಂದ) ನೂಕದಿರಿ ಸ್ವಾಮಿ, ನನ್ನದೊಂದು ಮಾತು ಕೇಳಿ?

ಮೋಹನ– ಕೇಳಲಾರೆ, ಕೇಳಲಾರೆ ಸುಮ್ಮನೆ ಹರಿದುಕೊಡು ನಿನ್ನ ತಾಳಿ.

ಸುಶೀಲ– ತಾಳಿ ಹರಿದು ಕೊಡೆಂದು ಕೇಳುವ ಧೀರಾ, ಸ್ವಲ್ಪ ಕೇಳು ನನ್ನ ಮಾತು ತಾಳ್ಮೆಯಿಂದ ಪೂರಾ.

ಮೋಹನ– ತಾಳ್ಮೆಯ ತಂತಿ ಈಗ ಹರಿದುಹೋಗಿದೆ.

ಸುಶೀಲ– ಹರಿದು ಹೋಗಿದೆಯಂದು ಹರಿಹಾಯಬೇಡಿ, ಸ್ವಲ್ಪ ಕೇಳಿ ಗೌರಿಯು ಶಾರಿಯನ್ನು ಮೋಹಿಸಬಹುದೇ?

ಸುರೇಂದ್ರ– ಮೋಹನ ಸತ್ಯಭಾಮೆಯು ಸೋಮಧರನನ್ನು ಪ್ರೇಮಿಸಬಹುದೇ ಸುಮ್ಮನೆ ನಿನ್ನ ಸುಗಮ ಸಂಸಾರದಲ್ಲಿ ಬೆರಿಸಿಕೊಳ್ಳಬೇಡಾ ಮಣ್ಣು, ತೆರೆದುನೋಡು ನಿನ್ನ ಕಣ್ಣು.

ಮೋಹನ– ಕಣ್ಣು ತೆರೆದು ನೋಡಿದೆನಪ್ಪಾ ಇವಳ ಬಣ್ಣ, ಇವಳೊಬ್ಬ ಸಂಭಾವಿತ ಸೂಳೆ.

ಸುರೇಂದ್ರ– (ಸಿಟ್ಟಿನಿಂದ) ಸೂಳೆ ಮುಚ್ಚುಬಾಯಿ ಮೋಹನ ಉಂಡು ತಿರುಗುವ

ನೀನೊಬ್ಬ ಪುಂಡಗೂಳಿ, ನಿನಗೇನು ಗೊತ್ತು ಈ ಗರತಿಯ ಗಾಳಿ.

ವೀರೇಶ– ಗಾಳಿ....ಚದುರೆಯ ನೆಲೆ, ಕುದುರೆಯ ನೆಲೆ ಆ ವಿಧುರನಿಗೂ ಸಹ ಸಿಕ್ಕಿರುವುದಿಲ್ಲ, ಸಾಹುಕಾರರೇ.

ಅಮರೇಶ– (ಪ್ರವೇಶಿಸಿ) ಇದೇನು ಸಾಹುಕಾರರೇ, ನಿಮ್ಮ ಬಂಗ್ಲೆಯಲ್ಲಿ ಕಪ್ಪುಹೊಗೆ ಎಬ್ಬಿಸಿ ನಿಮ್ಮೆಲ್ಲರನ್ನು ಸಪ್ಪೆಯಾಗಿ ನಿಲ್ಲಿಸಿರುವ ಕಪ್ಪೆ ಯಾವುದು ಹೇಳಿ....?

ಮೋಹನ– ಕಪ್ಪುಹೊಗೆ ಎಬ್ಬಿಸಿ ನಮ್ಮೆಲ್ಲರನ್ನು ಸಪ್ಪೆಯಾಗಿ ನಿಲ್ಲಿಸಿದ ಕಪ್ಪೆ ಇಲ್ಲಿ ಹೇಳು ನೋಡು ನಿನ್ನ ತಂಗೀ ಬೆಪ್ಪೇ.....

ಅಮರೇಶ– ಅದಾವ ತಪ್ಪು ಮಾಡಿ ಕಪ್ಪು ಹೊಗೆ ಬಡಿದಳು ನನ್ನ ತಂಗಿ ತಡಮಾಡದೇ ಹೇಳಿ?

ಮೋಹನ– ಹೇಳುವುದೇಕೆ, ನೀನೇ ನೋಡಿಕೊ, ಕೂಳಿಗೆ ಗತಿ ಇಲ್ಲದೇ ತಿರುಗುವ ಅ ಖೂಳ ಉಮೇಶನೊಡನೆ ಹೇಗೆ ಕಾಮಕೇಳಿಯಲ್ಲಿ ತೊಡಗಿದ್ದಾಳೆ, ನಿನ್ನ ತಂಗಿ ಗಯ್ಯಾಳಿ (ಫೋಡೋ ಕೊಡುವನು)

ಅಮರೇಶ– ಮೋಹನ ಆಡದಿರು ಅನುಚಿತವ ಹಿಂದಿನ ಯುಗದಲ್ಲಿ ಆ ಕೌರವೇಶ್ವರನ ಮಡದಿಗೆ ಕಾರಸ್ಥಾನಿ ಕೃಷ್ಣನೆಸಗಿದ ಗಂಧರ್ವನ ಕಟ್ಟು ಈ ಫೋಟೋವಿನ ಗುಟ್ಟು ನನ್ನ ತಂಗಿಯ ನೀತಿಯ ನೆಲೆಗಟ್ಟು, ನಿನ್ನ ಪ್ರೀತಿಯ ಸಂಸಾರವನ್ನು ಕಂಡು ಸಹಿಸದ ಕೇಡಾಳಿಗಳು ನಿಮ್ಮ ಸಿಹಿ ಸಂಸಾರದಲ್ಲಿ ಕಹಿ ಬೆರೆಸಲು ಕೆತ್ತಿದ ಕಲ್ಪನೆಯ ಚಿತ್ರವಿದು ಇದರಲ್ಲಿ ಏನೂ ಅರ್ಥವಿಲ್ಲ. (ಫೋಟೋ ಬೀಸಾಡುವನು)

ಮೋಹನ– ಅರ್ಥವಿಲ್ಲೆಂದು ವ್ಯರ್ಥ ವೇಳೆಗಳೆಯಬೇಡ, ತುರ್ತು ಈ ಸೂಳೆಯನ್ನು ಕರೆದುಕೊಂಡು ನಡೆ.

ಸುರೇಂದ್ರ– ಸೂಳೆ...ಸೂಳೆ...ಎಂದು ಸುಮ್ಮನೆ ಮಳ್ಳರಂತೆ ಸಂಶಯದ ಸಿಳ್ಳು ಹೊಡೆಯಬೇಡಾ ಇಂಥಾ ಒಳ್ಳೆಯ ಸತಿ ದೊರಕಿದ್ದೊಂದು ನಿನ್ನ ಪೂರ್ವಜನ್ಮದ ಪುಣ್ಯದ ಗಾಳಿ.

ಮೋಹನ– ಪುಣ್ಯದ ಗಾಳಿಯಲ್ಲಪ್ಪ ಇದು ಹೆಣ್ಣು ಬೀಸಿದ ವಿಷಗಾಳಿ.

ಅಮರೇಶ– ಮೋಹನ ಸಂಶಯದ ಸೀತ ಜ್ವರಹಿಡಿದ ನಿನಗೆ ನಮ್ಮ ನೀತಿಯ ನೊರೆಹಾಲು ಈಗ ನಂಜಾಗಿದೆ.

ಮೋಹನ– ಅಮರೇಶ ನಿಮ್ಮ ನುಡಿ ಪುರಾತನದು, ನಡೆ ಕಿರಾತನದು ಯಾಕೆ ವೀರೇಶ ನಿಜತಾನೆ....?

ವೀರೇಶ– ನಿಜ ಮೋಹನ, ಮೇಲೆ ಬಸಪ್ಪ ಒಳಗೆ ವಿಷಪ್ಪ.

ಅಮರೇಶ– (ಸಿಟ್ಟಿನಿಂದ) ಸೆಟಪ್. ಮೋಹನ ಈ ಮಾರ್ಜಾಲದ ಮಾತಿಗೆ ಮರುಳಾಗಿ ಸರಳ ಸತಿಯ ಕೊರಳ ಕೊಯ್ಯದಿರು.

ಸುಶೀಲ– ಕೊಯ್ಯದಿರು ಪತಿದೇವಾ ನಿಮ್ಮ ಪಾದಪದ್ಮದಲ್ಲಿ ಬಿದ್ದು ಬೇಡುವೆ ಹೊರದೂಡಬೇಡಿ. (ಪಾದಕ್ಕೆ ಬೀಳುವಳು)

ಮೋಹನ– ನನ್ನ ಪಾದ ಮುಟ್ಟದಿರು ಪಾಪೂರಿ, ಸುಮ್ಮನೆ ಹೊರಟು ಹೋಗು ವ್ಯಭಿಚಾರಿ. (ಸಿಟ್ಟಿನಿಂದ ಹೊಡೆಯುವನು)

ಸುರೇಂದ್ರ– ನಿರಪರಾಧಿಯಾದ ನಲ್ಲೆಯಮೇಲೆ ಈ ರೀತಿ ಭಲ್ಲೆ ಬೀಸಿ ಹಲ್ಲು ಕಳೆದುಕೊಳ್ಳಬೇಡ, ಎಚ್ಚರಿಕೆ ಮೋಹನ?

ಅಮರೇಶ– ಮೋಹನ ಸುಮ್ಮನೆ ಸಂಶಯದ ಸರಪಳಿಯನ್ನು ಕೊರಳಿಗೆ ಸುತ್ತಿಕೊಳ್ಳಬೇಡಾ.....

ಮೋಹನ– ಸುತ್ತಿಕೊಳ್ಳಬೇಡವೆಂದು ಹೇಳುವ ಕತ್ತೆ ಸುಮ್ಮನೆ ತೊಲಗದಿದ್ದರೆ ಬೀಳುವದು ನಿನಗೆ ಲತ್ತೇ. (ಹೊಡೆಯ ಹೋಗುವನು)

ಸುರೇಂದ್ರ– (ಸಿಟ್ಟಿನಿಂದ) ಮೋಹನ ಬಿಡು ಇದೇನು ನಿನ್ನ ನೀಚತನ (ಬಿಡಿಸುವನು)

ಮೋಹನ– ನೀಚತನ ಅಲ್ಲಪ್ಪಾ ಇದು ನನ್ನ ಮನೆತನದ ಅಭಿಮಾನ.

ಅಮರೇಶ– ಮೋಹನ ನಿನ್ನ ಕೋಪದ ಕೊಡೆ ಇಳಿಸಿ, ಇವಳ ನಡೆ ನುಡಿಯಬಗ್ಗೆ ಸಾರಾ ಸಾರಾ ವಿಚಾರಮಾಡಿ ಹೊರದೂಡು.

ವೀರೇಶ– ಸಾರಾ ಸಾರ ವಿಚಾರಮಾಡಿ ಈಗ ಹೊರದೂಡಲು ಸಿದರಾಗಿದ್ದಾರೆ ನೀನಿನ್ನು ಬುದ್ಧಿ ಹೇಳಲು ಬರಬೇಡ ಅಮರೇಶ.

ಅಮರೇಶ– ಬುದ್ಧಿಹೇಳಲು ಬಂದರೆ ಹದ್ದಿನಂತೆ ಹಾರಾಡುವೆ ವೀರೇಶ ನೀನಿನ್ನು ಸುಮ್ಮನೆ ನಿಲ್ಲದಿದ್ದರೆ ನಿನ್ನನ್ನು ಗುದ್ದಿ ಕೊಲ್ಲಬೇಕಾಗುತ್ತದೆ ಹುಷಾರ್.

ವೀರೇಶ– ಉಷಾರ ಎಂದು ಸುರುವ ಅಮರೇಶ, ನಿನ್ನ ತಂಗಿ ಉಮೇಶನೊಡನೆ ನಡೆಸಿದ ಈ ಹೇಸಿ ಕಾರ್ಯಕ್ಕೆ ನೀನಿನ್ನು ಇಲ್ಲಿ ತಲೆಎತ್ತಿ ನಿಲ್ಲದೇ ಫಾಸಿ ಹಾಕಿಕೊಳ್ಳಲೇಬೇಕು.

ಅಮರೇಶ– ಫಾಸಿ (ಥೂ) ಹೇಸಿ, ಮೋಹನ ಇಂಥಾ ಮೋಸದ ಮಿತ್ರರ ಮಾತಿಗೆ ಮರುಳಾಗಿ ಚಿನ್ನದಂಥ ನನ್ನ ತಂಗಿಯನ್ನು ಹೊರನೂಕಬೇಡ.

ವೀರೇಶ– ಚಿನ್ನದ ಚೂರಿಯೆಂದು ಕಣ್ಣಲ್ಲಿ ಚುಚಿಕೊಳ್ಳಬೇಡ ಮೋಹನ ಜಾಗ್ರತೆ.

ಮೋಹನ– ಕಣ್ಣಲ್ಲಿ ಚುಚಿಕೊಳ್ಳಲು ನಾನು ಮಣ್ಣುಮುಕ್ಕುವ ಬಾಲಕನಲ್ಲ, ನಡೆ ಜಾರಿಣಿ. (ದಬ್ಬುವನು)

ಸುರೇಂದ್ರ– ಮೋಹನ ಮಟ್ಟು ತಿಳಿದು ಮಾತಾಡು, ಗುಟ್ಟು ತಿಳಿದು ಗುದ್ದಾಡು.

ಮೋಹನ– ಗುಟ್ಟು ತಿಳಿದೇ ಗುದ್ದಾಡುತ್ತಿರುವೆನಪ್ಪಾ ನಿನಗೆ ಈ ಹದ್ದಿನಂಥಾ ಮುದ್ದು ಸೊಸೆ ಬೇಕೋ ಏನು ನಾನು ಬೇಕೋ ಬೇಗ ಹೇಳಪ್ಪಾ ಹೇಳು. .

ಸುರೇಂದ್ರ– ಏನು ಹೇಳಲಪ್ಪ ಅತ್ತದರಿ ಇತ್ತ ಉರಿ, ನನಗೆ ನೀವಿಬ್ಬರೂ ಬೇಕಪ್ಪಾ. (ದುಃಖದಿಂದ)

ಮೋಹನ– ಹಾಗಲಪ್ಪಾ ಇಬ್ಬರಲ್ಲಿ ಒಬ್ಬರು ಇಂದು ಮನೆಬಿಟ್ಟು ಹೋಗಲೇಬೇಕಪ್ಪಾ.

ಸುರೇಂದ್ರ– ಇದೇ ನಿನ್ನ ನಿರ್ಧಾರವೇ?

ಮೋಹನ– ಇದೇ ನನ್ನ ನಿರ್ಧಾರ ಇಬ್ಬರಲ್ಲಿ ಒಬ್ಬರು ಇಂದು ಮನೆ ಬಿಟ್ಟು ಹೋಗಲೇಬೇಕು.

ಸುಶೀಲ– ನೀವೇಕೆ ಮನೆ ಬಿಡುವಿರಿ, ನಾನೇ ಹೋಗುವೆ ಪತಿದೇವಾ ಆಶೀರ್ವದಿಸಿ. (ಪಾದಕ್ಕೆ ಬೀಳುವಳು)

ಮೋಹನ– (ಸಿಟ್ಟಿನಿಂದ ಆಶೀರ್ವಾದ, ಇದೋ ತೆಗೆದುಕೋ ಶುಭಾಶೀರ್ವಾದ. (ಒದೆಯುವನು ಅಮರೇಶ್ ಎತ್ತಿ ಹಿಡಿಯುವನು)

ಅಮರೇಶ– ಧನದ ಮದದಿಂದ ಕೊಬ್ಬೇರಿದ ಮೋಹನನ ಮನಸ್ಸು ಮದವೇರಿದ ಮದ್ದಾನೆಯಂತಾಗಿರುವದಮ್ಮಾ ಈಗ ಅವನ ಕೂಡಾ ಗುದ್ದಾಡುವದು ಸಾಧ್ಯವಿಲ್ಲ, ನಡೆಯಮ್ಮಾ ಹೋಗೋಣ.

ಸುಶೀಲ– (ದುಃಖದಿಂದ) ನಡೆಯಣ್ಣಾ....ಬರುವೆ, ಮಾವನವರೆ ಆಶೀರ್ವದಿಸಿ.

ಸುರೇಂದ್ರ– (ದುಃಖದಿಂದ) ಹೋಗುವೆಯೇನಮ್ಮಾ.....

ಅಮರೇಶ– (ದುಃಖದಿಂದ) ಹೋಗುವೆವು ಸಾಹುಕಾರರೇ....ಇಂದಿಗೆ ಈ ಬಂಗ್ಲೆಯ ರಿಣ ತೀರಿತು, ನನ್ನ ತಂಗಿಗೆ....

ಸುರೇಂದ್ರ– ಸುಶೀಲ ಬರುವೆಯೇನಮ್ಮಾ....

ಸುಶೀಲ– ಬರುವೆ ಮಾವನವರೇ....

ವೀರೇಶ– ಮೋಹನ ಅವಳ ಮೈಮೇಲಿನ ಆಭರಣಗಳು.

ಮೋಹನ– ಆಭರಣಗಳೆಲ್ಲಾ ಉಚ್ಚಿಟ್ಟು ಉಟ್ಟ ಬಟ್ಟೆಯೊಂದಿಗೆ ಹೊರ ಹೋಗು.

–: ಹಿನ್ನೆಲೆ ಗೀತೆ :–

ಸಂಸಾರ...ಸಾಂಸಾರ....
ಸುಖ ದುಃಖಗಳ ಘೋರ ಸಾಗರ
ನೀ ಸುರಿಸದಿರು ಕಣ್ಣೀರು
ನಂಬಿದ ಪತಿಯು ಹೊರನೂಕಲು
ಇಂಬಿಲ್ಲ ಈ ಜಗದಿ ನಿನಗಮ್ಮ
ಶಂಬುವಿನ ಮರೆಹೋಗು ತಂಗೆಮ್ಮಾ

(ಹಾಡು ಮುಗಿಯುತ್ತ ಇದ್ದಾಗ ಸುಶೀಲ–ಅಮರೇಶ ದುಃಖಿಸುತ್ತಾ ಹೋಗುವರು.)

–: ಪರದೆ ಬೀಳುವದು :–

===***====***===

೨೧ನೇ ಪ್ರವೇಶ

–ರಸ್ತಾ –

(ಸಂಗಣ್ಣ ಬಳಿ ವೇಷದಲ್ಲಿ ಬರುವನು)

ಸಂಗಣ್ಣ– ಬಳೀ....ಬಳೀ....ಕಾಮನ ಬಳೀ.....ಮೋಹಿನಿ ಬಳೀ.....ಅಂಜಲಾ ಬಳೀ....ಮಂಜುಳಾ ಬಳೀ....ಬಳಿ ಹಾಕಿಸಿಕೊಂತಿರೇನವ್ವಾ ಬಳೀ.....

ತಾರಾ– (ಪ್ರವೇಶಿಸಿ) ಬಳೀ ಮಾರಾ ಬಹದ್ದೂರ ಮೂರು ದಿನಾತು ಪತ್ತೇನೆ ಇದ್ದಿಲ್ಲ, ಎಲ್ಲಿಗೆ ಜಿಗಿದಿದ್ದಿ?

ಸಂಗಣ್ಣ– ಎಲ್ಲಿಗೆ ಜಿಗಿಲಿ ತಾರಾ, ಕೊಳ್ಳದ ಅಮರೇಶ ಜಾತ್ರಿ ಬಂದಿತ್ತು ಹಾಂಗ ನಿನಗ ಹೇಳದ ಹೋಗಿಬಿಟ್ಟೆ

ತಾರಾ– ಜಾತ್ರೆಯಿಂದ ಯಾವಾಗ ಬಂದೀ?

ಸಂಗಣ್ಣ– ಜಾತ್ರಿಯಿಂದ ನಿನ್ನೆ ರಾತ್ರಿ ಬಸ್ಸಿಗೆ ಬಂದೆ.

ತಾರಾ– ಜಾತ್ರ್ಯಾಗ ಹೆಂಗಾತು ನಿನ್ನ ಗಿರಾಕಿ?

ಸಂಗಣ್ಣ– ಜಾತ್ರ್ಯಾಗೇನು ಕೇಳ್ತಿ ಯಾಪಾರ ತಾರಾ, ಗಿರಾಕಿಗಿ ಬಳೀ ಏರಸೋದಕ ನನಗ ಗಳಿಗಿ ಪುರಸೊತ್ತಿದ್ದಿಲ್ಲ.

ತಾರಾ– ಹಾಂಗಾರ ಜಗ್ಗಿ ದುಡ್ಡು ಮಾಡ್ಕೊಂಡ ಹಿಗ್ಗಿನಿಂದ ಬಂದೀದಿ ಅನಬಾರ್ದ?

ಸಂಗಣ್ಣ– ಹೌದು ತಾರೀ ಈ ಕಿಸೆತುಂಬ ಬಿಸಿ ಬಿಸಿ ಹಸರನೋಟ.

ತಾರಾ– ಹಸರು ನೋಟು, ಕಿಸೆದಾಗ ಇಟಗೊಂಡ ಕುಸಿ ಮಾಡಾಕ ಬಂದಿಯೇನು ನನಗೇನಾರ ತಂದಿಯಿಲ್ಲ.

ಸಂಗಣ್ಣ– ತಂದೀನಿ ನೋಡ ನನ್ನ ಬೊಂಬಾಯಿ ರೈಲು.

ತಾರಾ– ಅವ್ವ....ಅವ್ವಾ ಏಟ ಚೆಂದಾದಲ್ಲ ನನ್ನ ಚಂದ್ರಾಮ.

ಸಂಗಣ್ಣಾ— ತಾರೀ....ನೀ ಈ ಸೀರೆ ಉಟಗೊಂಡ ಸಿನಿಮಾಕ್ಕೆ ಹೊಂಟೆಂದ್ರ ಸಿಟಿಯಾಗ ನಿಂತ ಜನ ನಿನ್ನ ನೋಡಿ ಹಾಂಗಾ, ಮಿಟ್ಟಿ ಮಿಟಿ ಬೀಳಬೇಕಲ್ಲ. ಇರಲಿ ಮಾವ ಎಲ್ಲಿಗೆ ಹೋಗ್ಯಾನ?

ತಾರಾ— ಮಾವ ಸಿದ್ದಪ್ಪನ ಮಗಾ ಶಿವಪ್ಪನ ಲಗ್ನಕ್ಕೆ ಹೋಗ್ಯಾನ.

ಸಂಗಣ್ಣಾ— ಹೋಗ್ಯಾನ ಹಗಾರಾ ಇದ ಒಂದು ಸಂಧಿ.

ತಾರಾ— ಸಂದಿಯೇನ ಮಾಡಬೇಡ ಹೇಳಾ ನನ್ನ ಬೆಳಗಾಂವ ಬಾಸುಂದಿ.

ಸಂಗಣ್ಣಾ— ನೋಡು ತಾರಾ ಮೊದಲು ಅವನ ಹೆಸರಿಲೆ ಜಡದು ಸೋಡಾಚೀಟಿ ಕೊಡಬೇಕ ನೋಡ ನೀನು.

ತಾರಾ— ಕೊಟ್ಟು....?

ಸಂಗಣ್ಣಾ— ಕೊಟ್ಟು ನನ್ನ ಹಿಂದೆ ಬಂದು ಬಿಡು.

ತಾರಾ— ಬಂದಬಿಟ್ರೆ ನೀ ಸಾಯಾಮಾಟ, ನನ್ನ ಸರಿಯಾಗಿ ನೋಡಿ ಕೋಬೇಕಲ್ಲಾ ಹಿಕಟ್ ಕೈಕೊಟ್ರ?

ಸಂಗಣ್ಣಾ— ಕೈ ಕೊಡೋದಿಲ್ಲಂತ ಕೋರಿಸಿದ್ದೇಶನ ಆಣಿಮಾಡಿ ಹೇಳಂದ್ರ ಹೇಳ್ತೀನಿ, ಈಗರ ಭರವಸೆ ಆತಿಲ್ಲ. ನನ್ನ ಬೊಳ್ಳುಡಿಗ್ಗಿ ತೆಳ್ಳನ ಹುಡ್ಗಿ. (ಕೈ ಹಿಡಿಯುವನು)

ತಾರಾ— ಐ...ಐ...ಕೈ ಮುರದೀಯಾ ನನ್ನ ಕಂಚೂರ ಭೀಮರಾಯ ಭರವಸೆ ಆತು, ಎಲ್ಲಿಗೆ ಹೋಗೂನಾ?

ಸಂಗಣ್ಣಾ— ಎಲ್ಲಿಗೆ... ವಾಡಿ ಇಲ್ಲಂದ್ರ ಶಾಬಾದಕ್ಕ ಬಿಟ್ರಾತು ಗಾಡಿ ಅಲ್ಲಿಯೂರು ನಮ್ಮನ್ನ ಕೂನಾ ಹಿಡಿಯೋದ ದಂಡು. ಗುಂಬಳ ಬಸವಣ್ಣನ ಮುಂದ ಉಡಿಕಿ ಲಗ್ನ ಮಾಡ್ಕೊಂಡು ಕಡಿಕಿಲೆ ವಾಡ್ಯಾಗ ಇದ್ದಬಿಡೋಣ.

ಗಂಗಣ್ಣಾ— (ಮರೆಯಲ್ಲಿ) ತಾರೀ...ತಾರೀ....

ಸಂಗಣ್ಣಾ— ತಾರೀ....ಮಾಂವ ಬಂದಂಗಾತು, ನಾವು ಬಿಡನಿನ್ನ ದಾರಿ ನಾಳೆ ಎಂಟ ಗಂಟೆಗೆ ನಿನ್ನ ವಸ್ತು, ವಡವಿ, ರೂಪಾಯಿ, ರೊಕ್ಕ, ಎಲ್ಲಾ ಕಟ್ಟಿಕೊಂಡು ಆಗಬೇಕ ನೀ ತಯ್ಯಾರಿ.

ಗಂಗಣ್ಣಾ— (ಪ್ರವೇಶಿಸಿ) ತಯ್ಯಾರಿ, ಸುಡಗಾಡಿಗೆ ಹೋಗಬೇಕಂತ ಮಾಡಿಯೇನಪ್ಪಾ ಸಂಗ್ಯಾ?

ಸಂಗಣ್ಣಾ— ಸುಡಗಾಡಿಗೆ ಯಾಕ ಹೋಗಲೋ ಮಾಂವ, ಇನ್ನೂ ಲಗ್ನ ಆಗಿಲ್ಲ, ಮೂರ್ತ ಆಗಿಲ್ಲ, ನಾಳೆ ಉಗಾದಿಹಬ್ಬಕ್ಕೆ ಅಂಗಿ ತಯ್ಯಾರಿ ಮಾಡಾವ ತಂಗೀ ಅಂತ ಹೇಳಿದೆ.

ಗಂಗಣ್ಣಾ— ಅಂಗೀ ತಯ್ಯಾರೋ, ತಂಗೀನ ತಯ್ಯಾರಿ ಮಾಡಿದ್ಯೋ, ನಿನ್ನ ನೆಲೆ ತಿಳಿವಲ್ದಪಾ ಸಂಗ್ಯಾ?

ಸಂಗಣ್ಣಾ— ಏನು ಮಂಕು ಅದಿಯೋ ಮಾಂವ ಹಿಂಗ ಸುಮ್ಮ ಸುಮ್ಮಕ ಸಂಶಯದ ಶಂಕು ಊದಬ್ಯಾಡ ಬರಬ್ಯಾಡಂದ್ರ ಇನ್ನ ನಿನಗೂ ತಂಗೀ ತಾರವ್ವಗೂ ನಮಸ್ಕಾರ.

ಗಂಗಣ್ಣಾ— ನಮಸ್ಕಾರ ಮುಂದ್ಯೆತಿ ಹೋಗಲೇ ನಿನ್ನ ಚಮತ್ಕಾರ, ಏ ತಾರಾ ಬಾವಗ ಬೆಣ್ಣಿಗೆ (ಹೊಡೆಯ ಹೋಗುವನು) ಡಾವ ಹಾಕಿದಂಗ ಹಾಕ್ಯಾನ ಈ ಮಂಗ ಸಂಗ್ಯಾ ಸ್ವಲ್ಪ ಹುಷಾರ್. (ಓಡಿ ಹೋಗುವನು)

ತಾರಾ— ಹುಷಾರಂತ ಗಳಿಗೊಮ್ಮೆ ಯಾಕ ಬೇಸೂರು ಬಾಜಾ ಬಾರಸ್ತೀಯಾ ನನ್ನ ಮೈಸೂರ ರಾಜಾ.

ಗಂಗಣ್ಣಾ— ಬಾಜಾ ಬಾರಸ್ತಿದ್ರ ಈ ಹೊತ್ತಿಗೆ ಈ ರಾಜಾಗ ಕೈಕೊಟ್ಟು ಆ ಕಾಜಾನ ಹಿಂದೆ ಓಡಿ ಹೋಗ್ತಿದ್ದಿ.

ತಾರಾ— ಓಡಿ ಹೋಗಬೇಕಂತ ನಿನ್ನ ಕೈ ಹಿಡಿದೆನನಾsss ಚೆಂದ ಗೇಡಿ....ಚಂದಗೇಡಿಗೆ ಚಾಕಳಿ ಇಟ್ರ ಚೌಕಳಿಮಾಡಿ ಓಕಳೀ ಅಡಿತ್ತಂತ, ನಿನ್ನಂಥದ ಇರಬೇಕ ನೋಡ.

ಗಂಗಣ್ಣಾ— ತಾರಾ ಯಾಕ ನನ್ನ ನಿನ್ನ ಬಾಳೇವು ಮೇಳನೇ ಬೀಳವಲ್ಲದು?

ತಾರಾ— ಮೇಳ ಬೀಳದಿದ್ದರೆ ಮ್ಯಾಲೆಬಿದ್ದು ಕಟ್ಟಿಕೊಂಡಿ ತಾಳಿ?

ಗಂಗಣ್ಣಾ— ತಾಳಿ....ಆ ನಿಮ್ಮವ್ವ, ಕುಂಟ ಮಾಳವ್ವ ಎರಿಹೊಲ ಕೊಡಸ್ತೀನಿ, ತಮ್ಮಾ ಕೆರಿಹೊಲ ಕೊಡಸ್ತಿನಿ, ತಮ್ಮಾ ಅಂತಾ ಎಂಟುದಿನ ನನಗ ಗಂಟು ಬಿದ್ದ ಗುಳಿಗಿ ಕೊಟ್ಟಲ್ಲೇ ನಿನ್ನ ಕೊರಳಿಗೆ ತಾಳಿ ಕಟ್ಟಿದೆ.

ತಾರಾ— ಆಹಾ....ಹಾ....ಹ ಭಪ್ಪರೇ ಬೆರಕಿ ಮಾವ, ತಪ್ಪು ನಿಂದಲ್ಲ ನಾನೇ ಹರಿಕೆ ಹೊತ್ತಿದ್ನೇನು, ಹರಕಮೀಸೆ ಮಾವ ಬೇಕಂತ.

ಗಂಗಣ್ಣಾ— ಹರಕಮೀಸೆ ಮಾವಂತ ಮುರ್ಕ್ಯಾ ಮಾಡಬ್ಯಾಡ ಉರಕುಂದಿ ಈರಣ್ಣಾ ದೇವರಿಗೆ ಯಾರ ಹರಕೆ ಹೊತ್ತಿದ್ರಾ ಪೋರೀ....?

ತಾರಾ— ಯಾರಂತ ಜೋರಮಾಡಿ ಕೇಳ್ತೀಯಲ್ಲಾ ಮಾವಾ, ಚಂದಮ್ಮನ ಜಾತ್ರ್ಯಾಗ ಮುಂದಕುಂತ ಬಳಿಹಾಕ್ಸೀ...ಬಾಳೇಹಣ್ಣು ತಂದು ಹೊಳಿ ದಂಡಿಮ್ಯಾಲೆ ಕುಂತು ಗುಳು, ಗುಳು ನುಂಗಿಕೊಂತ, ತಾರಾ ನನ್ನಪಾಲಿಗೆ ಸಿಕ್ಕ ಮಲ್ಲಿಗೆಹಾರಾ ಅಂತ ಮಾತಾಡಿದ್ದು ಮರ್ತಬಿಟ್ಟೇನು ಮಾವ? (ಗಲ್ಲಕ್ಕೆ ತಿವಿಯುವಳು)

ಗಂಗಣ್ಣಾ— ಹರೇದ ಮಬ್ಬಿನಾಗ ಮಾತಾಡಿದ್ದು ನೆರೆಬಂದ್ರೂ ನೆಪ್ಪ ಇಟ್ಟೀಯಲ್ಲ ಅಡ್ಡಿಯಿಲ್ಲಾ, ಹುಡಿಗಿ ಅಂದು ಹೊಳಿ ದಂಡಿಮೇಲೆ ತೊಡೆ ತೋರಿಸಿಕೊಂತ ಕುಣಿದು ಪದ ಹಾಡಿದಿಯಲ್ಲ ಆ ಪದ ಈಗ ಒಗಿ.

ತಾರಾ— ಹೊಗ್ಗಾ, ಮಾವ ಹ್ಯಾಂಗ ಆಡಬೇಕು, ನನಗೆ ನಾಚಿಗಿ ಬರುತ್ತೆ.

ಗಂಗಣ್ಣಾ— ನಾಚಿಗಿ ಬಂದ್ರ ನಾಚ್ಗಿ ನಾ ನಾರಾಯಣಪ್ನ ಕಿಸೆದಾಗ ಹಾಕಿ ಹಾಡಿಬಿಡು.

—: ಹಾಡು :—

(ಹಾಡು ಮುಗಿದನಂತರ ಇಬ್ಬರೂ ಹೋಗುವರು)

—ಪರದೆ ಬೀಳುವುದು—

===***=====***===

೨೨ನೇ ಪ್ರವೇಶ

–ಜಂಗಲ್–

(ಸುಶೀಲ ಆತ್ಮಹತ್ಯ ಮಾಡಿಕೊಳ್ಳಲು ಜಂಬೆಹಿಡಿದು ಬರುವಳು)

ಅಂತರಾತ್ಮ– (ಹಿನ್ನೆಲೆಯ ನಗು) ಸುಶೀಲಾ ನೀನು ಜಾರಿಣಿ....ಸುಶೀಲ ನೀ....ಜಾರಿಣಿ....ಜಾರಿಣಿ.....ಜಾರಿಣಿ....

ಸುಶೀಲ– ಅಹುದು, ನಾನು ಜಾರಿಣಿ, ನಾನು ಜಾರಿಣಿ, ಜಾರಿಣಿ ಎಂದು ಜನಗಳಿಂದ ಅನಿಸಿಕೊಳ್ಳುವದಕ್ಕಿಂತ ನಾನು ಆತ್ಮಹತ್ಯೆ ಮಾಡಿಕೊಳ್ಳುವದೇ ಉತ್ತಮ.

ಅಂತರಾತ್ಮ– ಸುಶೀಲ, ಆತ್ಮಹತ್ಯ ಮಹಾಪಾಪ. ನೀನು ಆತ್ಮಹತ್ಯೆ ಮಾಡಿಕೊಂಡರೆ ನಿನ್ನ ಕಣ್ಣಾಗಿರುವ, ಜೀವನದ, ಜೀವಾಳಾಗಿರುವ ನಿನ್ನಣ್ಣ ಬದುಕಲಾರ, ಅವನಿಗಾಗಿ ನೀನು ಬದುಕು. ನಿನ್ನ ಪತಿಗಾಗಿ ಬದುಕು. ದುಡುಕಬೇಡ ನೋಡು, ದುಡುಕು ಬಲು ಕೆಡಕು.

ಸುಶೀಲ– (ವಿಚಾರಿಸಿ) ಅಹುದು, ದುಡುಕು ಬಲು ಕೆಡುಕು ದುಡುಕಲಾರೆ ನನ್ನಣ್ಣನಿಗಾಗಿ, ಬದುಕುವೆ. ನನ್ನ ಪತಿಗಾಗಿ ಬದುಕುವೆ.

ಅಂತರಾತ್ಮ– (ನಗು) ಪತಿ...ಸುಶೀಲ ಎಲ್ಲಿಯ ಅಣ್ಣಾ, ಎಲ್ಲಿಯ ತಮ್ಮಾ ಎಲ್ಲಿ ಪತಿ? ಎಲ್ಲಿ ಸತಿ ಇದು ನಿನ್ನ ಭ್ರಾಂತಿ.

ಸುಶೀಲ– ಅಹುದು....ಅಹುದು.... ಇದು ನನ್ನ ಭ್ರಾಂತಿ, ಇದು ನನ್ನ ಭ್ರಾಂತಿ.

ಅಂತರಾತ್ಮ– ಈ ಭ್ರಾಂತಿ ಬಯಲಾದಾಗಲೇ ನಿನ್ನ ಮನಕ್ಕೆ ಚಿರಶಾಂತಿ, ಯಾರಿಗೆ ಯಾರಿಲ್ಲ ಸುಶೀಲಾ.

ಸುಶೀಲ– ನಿಜ ಯಾರಿಗೆ ಯಾರಿಲ್ಲಾ, ಗಂಡನ ಆಸರೆ ತಪ್ಪಿದಮೇಲೆ ನಾನು ಒಂದು ಗುಂಡಕಲ್ಲಿಗೂ ಬೇಸರ.

ಅಂತರಾತ್ಮ– ಗುಂಡಕಲ್ಲಿಗೆ ಬೇಸರವಾಗಿ ಬಾಳುವದಕ್ಕಿಂತ ನೀನು ಆತ್ಮಹತ್ಯೆ ಮಾಡಿಕೊಳ್ಳುವದೇ ಲೇಸು...ಲೇಸು....ಲೇಸು....

ಸುಶೀಲ– (ವಿಚಾರಿಸಿ) ಅಹುದು...ಅಹುದು...ನಾನು ಆತ್ಮಹತ್ಯೆ ಮಾಡಿಕೊಳ್ಳುವದೇ ಲೇಸು. (ಜಂಬೆ ಎತ್ತಿ ಇರಿದುಕೊಳ್ಳುತ್ತಿರುವಾಗ ಅಮರೇಶ ಬಂದು ತಡೆಯುವನು)

ಅಮರೇಶ– ತಂಗೀ ಸುಶೀಲಾ ಇದೇನಮ್ಮಾ ಆತ್ಮಹತ್ಯೆಗೆ ಕೈ ಹಾಕಿದ್ದಿಯಲ್ಲಾ?

ಸುಶೀಲ– (ದುಃಖದಿಂದ) ಬಿಡು ಅಣ್ಣಾ ಬಿಡು, ನನ್ನ ತಡೆಯಬೇಡಾ ನಾನು ಜಾರಿಣಿ....ನಾನು ಜಾರಿಣಿ,

ಅಮರೇಶ– ಜನ ನುಡಿಗೆ ಬೆಚ್ಚಿ ಆತ್ಮಹತ್ಯೆ ಮಾಡಿಕೊಳ್ಳುವದೇನಮ್ಮಾ ಹುಚ್ಚಿ.

ಸುಶೀಲ– ಇಂಥಾ ಘೋರ ಅಪವಾದ ಹೊತ್ತು ನಾನು ಬಾಳುವದಕ್ಕಿಂತ ಆತ್ಮಹತ್ಯೆ ಮಾಡಿಕೊಳ್ಳುವದೇ ಲೇಸಣ್ಣಾ ಲೇಸು.

ಅಮರೇಶ– ಹಿಂದೆ ತ್ರೈತಾಯುಗದಲ್ಲಿ ಪವಿತ್ರಳಾದ ಸೀತಾ ಮಾತೆಗೆ ಕೂಡಾ ಇಂಥಾ ಕೆಟ್ಟ ಅಪವಾದ ಕೊಟ್ಟು ಹೊರಗಟ್ಟಿತಮ್ಮಾ ದೈವ. ಅಂದ ಮೇಲೆ ನಿನ್ನಂಥವಳ ಪಾಡೇನು, ದೈವ ತಂದೊಡ್ಡಿದ ನಿಂದೆಗೆ ನಾವು ಹೆದರಬಾರದಮ್ಮಾ ಹೆದರಬಾರದು.

ಸುಶೀಲ– ಅಣ್ಣಾ ಜನಗಳಾಡುವ ವ್ಯಂಗೋಕ್ತಿಗಳನ್ನು ಕೇಳಿದರೆ ಈ ನಿನ್ನ ತಂಗಿ ತಡೆವಿಲ್ಲದೇ ಆತ್ಮಹತ್ಯೆ ಮಾಡಿಕೊಳ್ಳಬೇಕು.

ಅಮರೇಶ– ಆತ್ಮಹತ್ಯೆ ಅಂಥ ಕೆಟ್ಟ ವಿಚಾರಕ್ಕೆ ಮನಸ್ಸು ಕೊಡಬೇಡಮ್ಮಾ ನಿನ್ನ ಆತ್ಮ ಪರಿಶುದ್ಧವಿದೆ ಎಂದು ಅರಿತಾಗ ಮೋಹನನು ತಾನಾಗಿ ಬಂದು ನಿನ್ನನ್ನು ಪರಿಗ್ರಹಿಸುವನು.

ಸುಶೀಲ– ಕ್ರೂರ ವೀರೇಶನ ಮಾತಿಗೆ ಕಿವಿಗೊಟ್ಟ ಅವರು ಪುನಃ ನನ್ನನ್ನು ಪರಿಗ್ರಹಿಸುವರೇ ಇಲ್ಲಣ್ಣ ಇಲ್ಲಾ, ಇದು ನಿನ್ನ ಭ್ರಮೆ ಅವರು ಎಂದೂ ಬರಲಾರರು. (ದುಃಖಿಸುವಳು)

ಅಮರೇಶ– ಅಳಬೇಡಮ್ಮ ತಂಗಿ ಗಳಗಳನೇ ಅಳುವ ಈ ನಿನ್ನ ಕಣ್ಣೀರುಧಾರೆ ಒಂದು ದೊಡ್ಡ ತುಂಗಾನದಿಯಾಗಿ ತೋರುವದಮ್ಮಾ ನಿನ್ನ ನಲ್ಲನಿಗೆ ಸದ್‌ಬುದ್ಧಿ ಬಂದಾಗ ನಿನ್ನ ಸಂಸಾರ ತಾನಾಗಿ ಶುದ್ಧವಾಗುತ್ತದೆ. ಸಧ್ಯ ಮನಸ್ಸು ಕಲ್ಲು ಮಾಡಿಕೊಳ್ಳಮ್ಮಾ ಕಲ್ಲು ಮಾಡಿಕೋ (ದುಃಖಿಸುವನು) (ಇನಸ್ಪೆಕ್ಟರ್ ಉಮೇಶ ಬರುವನು)

ಉಮೇಶ– (ಆಶ್ಚರ್ಯದಿಂದ) ಇದೇನು ಗವಾಯಿಗಳೇ ತಂಗಿಯವರ

ಕಣ್ಣಂಚಿನಲ್ಲೂ ನಿಮ್ಮ ಕಣ್ಣಂಚಿನಲ್ಲಿ ಏಕಕಾಲದಲ್ಲಿ ಕೂಡಲ ಸಂಗಮದಂತೆ ಕೂಡಿ ಹರಿಯುವ ನಿಮ್ಮ ಕಣ್ಣೀರಿನ ಕೋಡಿಕಂಡು ಎನ್ನೆದೆ ನಡುಗುತಿದೆ. ಮನ ಮುದುಡುತಿದೆ, ಏನದು ವಿಷಯ ಹೇಳಿರಿ.

ಅಮರೇಶ– (ದುಃಖದಿಂದ) ವಿಷಮಯವಾದ ವಿಷಯವನ್ನು ಹೇಗೆ ಉಸರಲಿ ಉಮೇಶ್, ನಿನ್ನ ಮಿತ್ರ ಮೋಹನ...ನನ್ನ ತಂಗಿಯನ್ನು....

ಉಮೇಶ– ನನ್ನ ಮಿತ್ರ ಮೋಹನ ಸಿರಿಯ ಮದದಲ್ಲಿ ನಿಮ್ಮ ತಂಗಿಯವರಿಗೆ ಏನಾದರೂ ಬಿರುಸು ನುಡಿಯಾಗಿ ಹೊರದೂಡಿದನೇ ಹೇಳಿ?

ಅಮರೇಶ– ಹೌದಪ್ಪ....ಈ ಸಾಧ್ವಿ ತಂಗಿ ಸುಶೀಲಗಳಿಗೂ ನಿನಗೂ ಹಾದರದ ಅಪವಾದ ಹೊರಿಸಿ ಮನಬಂದಂತೆ ಬಿರುಸು ನುಡಿಯಾಗಿ ಹೊರದೂಡಿದನಪ್ಪಾ....

ಉಮೇಶ– ಅಯ್ಯೋ....ಕೇಳಲಾರೆ...ಕೇಳಲಾರೆ...ನಾನೀ ಕೆಟ್ಟ ನುಡಿಯನ್ನು ಗವಾಯಿಗಳೇ ಚೊಕ್ಕ ಚಿನ್ನದಂತೆ ಕಂಗೊಳಿಸುವ ಈ ನನ್ನ ಅಕ್ಕರೆಯ ತಂಗಿಯಮೇಲೆ ಹಾದರದ ಅಪವಾದಕಟ್ಟಿ ಹೊರಗಟ್ಟಿದನೇ ಆ ರಕ್ಕಸನು?

ಸುಶೀಲ– ಉಮೇಶಣ್ಣ ಅವರನ್ನು ಮನಬಂದಂತೆ ಜರೆಯಬೇಡಿ, ಆ ಕ್ರೂರ ವೀರೇಶನ ಕೈವಾಡದಿಂದ ನನ್ನ ಪತಿ ಮತಿಯು ಭ್ರಾಂತಿಯಾಗಿರುವದು ನಿಜ.

ಉಮೇಶ– ನಿಜವಮ್ಮ ಆ ವಂಚಕನ ಸಂಚನ್ನು ಇನ್ನು ಕೊಂಚ ದಿನದಲ್ಲಿ ಬಯಲಿಗೆಳೆಯುವೆ ನನ್ನ ಹಂಚಿಕೆಯಿಂದ ಗವಾಯಿಗಳೇ ಆಮೇಲೆ ವಿಚಾರ ಮಾಡೋಣ ಬರುತ್ತೇನೆ ನಮಸ್ಕಾರ. (ಹೋಗುವನು)

ಅಮರೇಶ– ನಮಸ್ಕಾರ.....ನಡೆಯಮ್ಮಾ ಇನ್ನು ಮುಂದೆ ಕೆಟ್ಟ ವಿಚಾರಕ್ಕೆ ಮನಸ್ಸು ಕೊಡಬೇಡ.

ಸುಶೀಲ– ಇಲ್ಲಣ್ಣ

ಅಮರೇಶ– ಇಲ್ಲೆಂದು ಈ ನಿನ್ನ ಅಣ್ಣನ ಆಣೆಮಾಡಿ ಹೇಳಮ್ಮ, ಇನ್ನೆಂದು ನಾನು ಆತ್ಮಹತ್ಯೆ ಮಾಡಿಕೊಳ್ಳಲಾರೆನೆಂದು.

ಸುಶೀಲ— ಇದೋ ಅಣ್ಣಾ ನಿನ್ನ ಆಣೆಮಾಡಿ ಹೇಳುವೆ ಇನ್ನೆಂದು ನಾನು ಆತ್ಮಹತ್ಯೆ ಮಾಡಿಕೊಳ್ಳಲಾರೆ.

ಅಮರೇಶ— ತಂಗಿ ನಿನ್ನ ನುಡಿ ಕೇಳಿ ಈ ಬಡ ಅಣ್ಣನ ಮನ ಸಂತೋಷಗೊಂಡಿತು, ನಡೆಯಮ್ಮಾ ಮನೆಗೆ ಹೋಗೋಣ.

ಸುಶೀಲ— ನಡೆಯಣ್ಣಾ. (ಹೋಗುವರು)

—: ಪರದೆ ಬೀಳುವದು :—

===***=====***===

೨೩ನೇ ಪ್ರವೇಶ

(ಬಂಗ್ಲೆ)

(ಸುರೇಂದ್ರ ಸಾಹುಕಾರ ಮಲಗಿರುವನು. ಧೀರೇಂದ್ರ ಕೊಲೆ ಮಾಡಲು ಮೆಲ್ಲ ಮೆಲ್ಲನೆ ಬರುವನು)

ಧೀರೇಂದ್ರ– (ನಕ್ಕು ಸ್ವಾಗತ) ಮಲಗು, ಮಲಗು, ಸುರೇಂದ್ರ ಕಕ್ಕಪ್ಪ ಹೀಗೆ ಸಕ್ಕರೆಯ ಕನಸು ಕಾಣುತ್ತ ವಿಶ್ವ ವಿನಾಶವಾಗುವವರೆಗೆ ಮಲಗು. ಅಣ್ಣನ ಮಗನಾದ ನಾನು ನಿನ್ನ ಕಣ್ಣೆದುರಿನಲ್ಲಿದ್ದರೂ ನಿನ್ನ ಹೆಂಡತಿ ಹೇಮಾವತಿಯ ಮಾತಿಗೆ ಮರುಳಾಗಿ, ಅವಳ ತಂಗಿ ಗಂಗಾದೇವಿಯ ಮಗನಾದ ಮೋಹನನನ್ನು ದತ್ತು ತೆಗೆದುಕೊಂಡೆಯಲ್ಲವೇ. ಅದಕ್ಕಾಗಿ ಅಂದಿನಿಂದಲೇ ಎನ್ನ ಹೃದಯ ಗಗನದೋಳ್ ಮೂಡಿತು, ಸೇಡಿನ ಚುಕ್ಕಿ. ಆ ಚುಕ್ಕಿಯೇ ಈಗ ಕಕ್ಕನೆಂಬ ಕಕ್ಕುಲತೆಯನ್ನು ಕಿತ್ತೊಗೆದು ನಿನ್ನನ್ನು ಯಮಲೋಕಕ್ಕೆ ಕಳುಹಿಸಲು ಸರಿಯಾಗಿ ಮೂಡಿಬಂದಿಹುದು. ಮತ್ತೆ ಮಧ್ಯರಾತ್ರಿಯಲ್ಲಿ ಎಲ್ಲೈ ಸೇಡಿನ ಚುಕ್ಕಿಯೇ ಅಂಜದೇ ಅಳುಕದೇ ಕಕ್ಕನನ್ನು ಮಾಡಿಬಿಡು ನೀನು ನಿಕ್ಕಿ. (ಕೊಲ್ಲಲು ಹೋಗುವನು, ಅಂತರಾತ್ಮನ ಕೂಗು ಕೇಳಿ ಹಿಂದೆ ಸರಿಯುವನು.)

ಅಂತರಾತ್ಮ– ನಿಲ್ಲು ದುರಾತ್ಮ ಧೀರೇಂದ್ರ, ಆಸ್ತಿಯ ಹವ್ಯಾಸಕ್ಕೆ ಬಿದ್ದು ನಿದ್ರಾ ಲೋಕದಲ್ಲಿರುವ ನಿನ್ನ ಅಕ್ಕರೆಯ ಕಕ್ಕನನ್ನು ಕೊಲೆಗೈಯ್ಯ ಬೇಡ. ಕೊಲೆಗೈದರೆ ನಿನಗೆ ಎಲ್ಲಿಲ್ಲದ ಮಹಾ ಭಯಂಕರ ಪಾಪತಟ್ಟುವದು

ಧೀರೇಂದ್ರ– (ಅಂಜಿ ಹಿಂದೆ ಸರಿದು) ಪಾಪ ತಟ್ಟುವದೆಂದು ಈ ರೀತಿ ಕೋಪದಿಂದ ನುಡಿದ ನೀನಾರು?

ಅಂತರಾತ್ಮ– (ನಕ್ಕು) ಯಾರು....ನಾನು ನಿನ್ನ ಅಂತರಾತ್ಮ ಧೀರೇಂದ್ರ, ನೀನು ಮಾನವನಲ್ಲ ದಾನವ....ಥೂ....ಪಾಪಿ.

ಧೀರೇಂದ್ರ– (ಅಂಜಿ ವಿಚಾರಿಸುತ್ತ) ನಾನು ಪಾಪಿಯೇ....ನಾನು ಪಾಪಿಯೇ?

ಅಂತರಾತ್ಮ– ಅಹುದು ನೀನು ಪಾಪಿ....ಪಾಪಿ.....ಪಾಪಿ....ಪಾಪಿ.

ಧೀರೇಂದ್ರ– (ಅಂಜಿ) ಅಹುದು ನಾನು ಪಾಪಿ, ಪರಮ ಪಾಪಿ. ಕಕ್ಕಪ್ಪ ಸಾಕ್ಷಾತ್ ಹೆತ್ತಪ್ಪನ ಸಮಾನ ಛೇ....ನಾನು ಕೊಲೆಗೈಯಲಾರೆ. ನಾನು ಕೊಲೆಗೈಯಲಾರೆ. (ಕೈ ನಡುಗಿ ಜಂಬೆ ಬೀಳುವುದು.)

ಅಂತರಾತ್ಮ– (ನಕ್ಕು) ಅಳ್ಳೆದೆಯವನಾಗದಿರು, ಧೀರೇಂದ್ರ ಕೊಳ್ಳೆ ಹೊಡೆಯುವಾಗ, ಕೊಲೆ ಮಾಡುವಾಗ, ಮನುಷ್ಯನಾಗಬೇಕು. ರಕ್ಕಸ ಕಕ್ಕನೆಂದು ಲೆಕ್ಕಹಾಕುತ್ತ ಕುಳಿತರೆ ದಕ್ಕಲಾರದು ನಿನಗೆ ಈ ಅಪಾರ ಬೊಕ್ಕಸ.

ಧೀರೇಂದ್ರ– (ಆಲೋಚಿಸಿ) ನಿಜ, ನಿಜ. ಬೊಕ್ಕಸಕ್ಕಾಗಿ ರಕ್ಕಸನಾಗುವೆ. ರಕ್ಕಸನಾಗಿ ಕಕ್ಕನ ಕೊಲೆಗೈಯುವೆ, ವಸುದೇವಕಿಯ ಹೊಟ್ಟೆಯಿಂದ ಹುಟ್ಟಿದ ಶಿಶುವನ್ನು ಕುಟ್ಟಿಕೊಂದ ಕೆಟ್ಟ ಕಂಸಾಸುರನ ಕ್ರೂರತೆ ಎನ್ನ ಮಸ್ತಕದಲ್ಲಿ ಸಿಸ್ತಾಗಿ ಮೂಡಿಬರಲಿ, ಪಿತನ ಕೊಂದ ಪಾಪಿ ಔರಂಗಜೇಬನ ಶೌರ್ಯ, ಧೈರ್ಯಗಳು ನನ್ನ ಬಾಹುಬಲದಲ್ಲಿ ಬಲಗೊಳ್ಳಲಿ, ಹೆತ್ತ ಮಾತೆಯ ಕತ್ತು ಕತ್ತರಿಸಿದ ಮತ್ತೆ ಜಮದಗ್ನಿ ಪುತ್ರ ಪರಶುರಾಮನ ನಿಸ್ಸೀಮ ನಿರ್ದಯತ್ವವು ನನ್ನ ಹೃದಯದಲ್ಲಿ ಉಕ್ಕೇರಲಿ ಇನ್ನು ಕೊಲೆಗೆ ವಿಲಂಬಗೈಯಲಾರೆ, ಅಕ್ಕರತೆಯನ್ನು ಕಿತ್ತೊಗೆದು ಉಕ್ಕಿನೆದೆಯವನಾಗಿ ಕಕ್ಕನನ್ನು ಕೊಲೆಗೈಯುವೆ. (ಅತ್ತಿತ್ತ ನೋಡುತ್ತ ಹೋಗಿ ಒಮ್ಮೆಲೇ ಕೊಲೆಗೈಯುವನು)

ಸುರೇಂದ್ರ– (ಚೀರುವನು) ಆ...ಅಮ್ಮಾ....ಅಯ್ಯೋ ಯಾರು ಪಾಪಿ ಧೀರೇಂದ್ರ...

ಧೀರೇಂದ್ರ– ಹೌದು ಧೀರೇಂದ್ರ ಇನ್ನು ನಿನ್ನ ಬೊಕ್ಕಸಕ್ಕೆ ನಾನೇ ಚಂದ್ರ (ಹೋಗುವನು)

ಸುರೇಂದ್ರ– ಅಯ್ಯೋ ಮಗೂ...ಮೋಹನ್...ಮೋಹನ್....ಬಾ ಅಪ್ಪಾ....

ಮೋಹನ– (ಓಡಿ ಬರುವನು) ಬಂದೆ ಅಪ್ಪಾ ಬಂದೆ.

ಸುರೇಂದ್ರ– ಬಂದೆಯೇಪ್ಪಾ...ಬಾ (ಸಂಕಟದಿಂದ)

ಮೋಹನ– ಇದೇನಪ್ಪಾ! ಮೈಮರೆತು ಮಲಗಿ ನಿದ್ರಿಸುವ ನಿನ್ನ ಮೇಲೆ ಈ ರೀತಿ ಕೈಮಾಡಿದ ಕಲ್ಲು ಹೃದಯದ ಕಟುಕನಾರು? ಬೇಗ ಹೇಳಪ್ಪಾ?

ಸುರೇಂದ್ರ– ಏನು ಹೇಳಲಿ ಮಗೂ...ಅವನೇ ನನ್ನ ಅಣ್ಣನ ಮಗನಾದ ಧೀರು, ಮೋಹನ ಯಮನ ಸೇವಕರು ನನ್ನನ್ನು ಕರೆಯುತ್ತಿದ್ದಾರೆ. ಬೇಗ

ಹಾಕು ನನ್ನ ಬಾಯಲ್ಲಿ ನೀರು. (ನೀರು ಹಾಕುವನು) ಮೋಹನ್ (ಸಾಯುವನು)

ಮೋಹನ– (ದುಃಖದಿಂದ) ಅಪ್ಪಾ (ಸುರೇಂದ್ರನ ಹೊಟ್ಟೆಯಿಂದ ಜಂಬೆ ಕಿತ್ತುಕೊಂಡು ರೋಷದಿಂದ) ಎಲವೋ ಪಿತೃದ್ರೋಹಿ ಧೀರೇಂದ್ರ ಬೊಕ್ಕಸಕ್ಕಾಗಿ ಕಕ್ಕನೆಂಬುದು ಲೆಕ್ಕಿಸದೇ ಕೊಲೆಗೈದೆಯಲ್ಲಾ ಪಾಪಿ. ನನ್ನ ದತ್ತು ತಂದೆ ಸುರೇಂದ್ರರು ಸ್ವರ್ಗ ಹತ್ತುವದರೊಳಗಾಗಿ ನಿನ್ನನ್ನು ಮುಗಿಸಿ ಮನೆಗೆ ಬರುವೆ. (ಆವೇಶದಿಂದ ಓಡುವಾಗ ಉಮೇಶ ಇನಸ್ಪೆಕ್ಟರನಾಗಿ ಧೀರೇಂದ್ರ, ವೀರೇಶನ ಜೊತೆಯಲ್ಲಿ ಬರುವನು.)

ಉಮೇಶ– (ಪಿಸ್ತೂಲ ಹಿಡಿದು) ಓಡಬೇಡ ನಿಲ್ಲು ಮೋಹನ್ ಹ್ಯಾಂಡ್ಸಪ್

ಮೋಹನ– ಉಮೇಶ....?

ಉಮೇಶ– ಖಾಮುಷ್...? (ಸಿಟ್ಟಿನಿಂದ)

ಮೋಹನ– ಖಾಮುಷ್....ಪದವಿ ಬಂದಮೇಲೆ ಮದವು ಬರುವುದು ಸಹಜ ಉಮೇಶ ಇದು ನ್ಯಾಯವೇ?

ಉಮೇಶ– (ನಕ್ಕು) ನ್ಯಾಯ ದತ್ತು ತೆಗೆದುಕೊಂಡವನ ಕತ್ತು ಕತ್ತರಿಸುವಾಗ ಎಲ್ಲಿ ಅಡಗಿತ್ತು ನಿನ್ನ ನ್ಯಾಯ.....?

ವೀರೇಶ– ಇನಸ್ಪೆಕ್ಟರರೇ, ಹೆತ್ತಮ್ಮನಿಗೆ ಹೇಸಿಗೆಯಿಲ್ಲ. ದತ್ತು ಮಗನಿಗೆ ದಯೆ ಇಲ್ಲವೆಂದು ಸುಮ್ಮನೇ ಹೇಳುವರೇ?

ಮೋಹನ– ಉಮೇಶ ನಾನು ನಿರ್ದೋಷಿ, ಧೀರೇಂದ್ರನೇ ಕೊಲೆಗೈದು ಈ ರೀತಿ ಕೆಟ್ಟಿರುವವನು ನನ್ನಮೇಲೆ ಕಾರಸ್ಥಾನ.

ಧೀರೇಂದ್ರ– (ನಕ್ಕು) ಕಾರಸ್ಥಾನ....ಉಂಡಮನೆಗೆ ಎರಡು ಬಗೆಯುವ ಭಂಡ ಮೋಹನ ಸಾಕುಮಾಡು ಇನ್ನೂ ನಿನ್ನ ಕಾಕ ಕವನ.

ವೀರೇಶ– ನಂಬಿದವರ ಮನೆಯ ಕಂಬ ಕಿತ್ತಿದ ಸಂಭಾವಿತ ಶಿರೋಮಣಿ ನೀನೆಷ್ಟು ಹೇಳಿದರೂ ಉಮೇಶನಿಗೂ ಬಾರದು ಕರುಣೆ.

ಉಮೇಶ– ಕಣ್ಣಿಗೆಕಾಣುವ ಹುಣ್ಣಿಗೆ ಕನ್ನಡಿಬೇಕಿಲ್ಲ ವೀರೇಶ.

ಮೋಹನ– ವಿಧಿಯು ವಿಕ್ರಮನ ಕಾಡಿದಂತೆ, ಈಗ ನನ್ನಮೇಲೆ ಶುಕ್ರನು ವಕ್ರವಾಗಿ

ಕಾಡಲು ಬಂದಿದ್ದಾನೆ. ಈಗ ನಾನು ಏನೂ ಹೇಳಿದರೂ ಉಮೇಶ ನಿನಗೆ ಕಾಡಕಲ್ಲಿಗೆ ಕಾವ್ಯ ಹೇಳಿದಹಾಗೇ.

ಉಮೇಶ– ಕಾವ್ಯ ಸೀತೆಯಂತಿರುವ ನಿನ್ನ ಪ್ರೀತಿಯ ಮಡದಿಯ ಮೇಲೆ ಹಾದರದ ಅಪವಾದ ಕಟ್ಟಿ ಆ ಗರತಿಯನ್ನು ಮನೆಬಿಡಿಸಿದೆಯಲ್ಲ, ಆ ಪಾಪದ ಫಲ ಈಗ ನೀನು ಅನುಭೋಗಿಸದೇ ಗತಿ ಇಲ್ಲಾ.

ಮೋಹನ– ನಿಜ ಮಿತ್ರ, ಅ ಘೋಟೋ ಈ ಕಾರಸ್ಥಾನಿಗಳ ಕೈವಾಡದಿಂದ ಹುಟ್ಟಿಬಂದಿದೆ, ಎಂಬುದು ನನಗೀಗ ಮನದಟ್ಟವಾಗುತ್ತಿದೆ.

ಉಮೇಶ– ಮಿಂಚಿಹೋದ ಮಾತಿಗೆ ಚಿಂತಿಸಿ ಫಲವಿಲ್ಲ ಮಿತ್ರ, ನೀನು ಚೂರಿಹಿಡಿದು ಓಡುತ್ತಿದ್ದರಿಂದಲೂ ಮತ್ತು ಆ ಪರೇಶ ಧೀರೇಂದ್ರರ ಸಾಕ್ಷಾ ಪ್ರಕಾರ ಸಧ್ಯ ನೀನು ಅಪರಾಧಿ, ಕಾರಣ ನಿನ್ನನ್ನು ಅರೆಷ್ಟು ಮಾಡುವೆ.

ಮೋಹನ– ಮಾಡು ಮಿತ್ರ, "ಅಹಂಕಾರದ ಅಟ್ಟವೇರಿದವನಿಗೆ ಅರೆಷ್ಟೇ ಮದ್ದು.

ಉಮೇಶ– (ದುಃಖದಿಂದ) ಅರೆಸ್ಟ್...ಹೇಗೆ ಮಾಡಲಿ ಮಿತ್ರ?

ಮೋಹನ– ಆನಂದದಿಂದ ಅರೆಸ್ಟ್‌ಮಾಡು, ಮಿತ್ರನೆಂಬ ಮಮತೆಯ ಮರವತ್ತಿಗೆ ಬಿದ್ದು ನಿನ್ನಕರ್ತವ್ಯಕ್ಕೆ ಕೊಡಲಿಪೆಟ್ಟು ಹಾಕಿಕೊಳ್ಳಬೇಡಾ..... ಬಂದುಬಳಗವೆಂದು ಹಿಂದೆ ಮುಂದೆ ನೋಡಬೇಡಾ ಆನಂದದಿಂದ ಬಂಧಿಸು.

ಉಮೇಶ– (ದುಃಖದಿಂದ) ಬಂಧಿಸು....ಮಿತ್ರ ಮೋಹನನ್ನು, ಬಾಳಿಗೆ ಬೆಳಕು ನೀಡಿದ ನಿನ್ನ ಕೈಗೆ ಕೋಳ ಕಾಣಿಕೆನೀಡುವ ಈ ಖೂಳ ಮಿತ್ರನನ್ನು ಕ್ಷಮಿಸು, ಪೋಲೀಸ ಅರೆಸ್ಟ್ ಮಾಡಿ ಜೋಕೆಯಿಂದ ನಮ್ಮನಾಶಕ್ಕೆ ಕರೆದುಕೊಂಡು ಬನ್ನಿ. (ಮೋಹನನನ್ನು ಬಂಧಿಸಿಕೊಂಡು ಹೋಗುವರು.)

–: ಪರದೆ ಬೀಳುವದು :–

===***====***===

೨೪ನೇ ಪ್ರವೇಶ

(–: ರಸ್ತಾ :–)

(ಸಂಗಣ್ಣ, ತಾರಾ ಉಡ್ಕಿ ಲಗ್ನ ಮಾಡಿಕೊಂಡು ಬರುವರು)

ಸಂಗಣ್ಣ– ತಾರಾ ದುಂಡುಗುಂಬಳ ಬಸವಣ್ಣನ ಮುಂದೆ ಉಡ್ಕಿ ಲಗ್ನ ಮಾಡಿಕೊಂಡು ಕಡಕಿಲೇ ವಾಡಿಗೆ ಬಂದ್ವಿ.

ತಾರಾ– ಬಂದ್ವೀ....ಮತ್ತೇನು?

ಸಂಗಣ್ಣ– ಮತ್ತೆನಿಲ್ಲ ಒಂದು ಹೊಸದಂಥ ತೆಗಿಬೇಕಂತ ಮಾಡೀನಿ.

ತಾರಾ– ಬಳಿ ಏರಸೋದುಬಿಟ್ಟು ಗಿಳಿಪ್ರಶ್ನೆ ಹೇಳಾದ ಹೋಗಬೇಕಂತ ಮಾಡೀಯೇನು?

ಸಂಗಣ್ಣ– ಗಿಳಿಪ್ರಶ್ನೆ ಯಾಕ ಹೇಳಾದ ಹೋಗಲಿ ಹಣ ಕೊಡಕೊಂದೇ ತಯಾರಿರು ನೀಗಟ್ಟಿ ನಪದಾಗ ತರ್ತೀನಿ ನಿನಗೆ ಹೊಸ ಹೊಸ ನಮೂನಿ ಬಟ್ಟಿ.

ತಾರಾ– ಬಟ್ಟಿ....ಅವ್....ಅವ್....ನನ್ನ ಸಕ್ಕರೇಗಟ್ಟೀ ಯಾವ ವ್ಯಾಪಾರ ಮಾಡ್ತೀ ಹೇಳ?

ಸಂಗಣ್ಣ– ಕೇಳಾ ನನ್ನ ವರಲಕ್ಷ್ಮೀ ಹತ್ತೀ ಹೇಳತೀನಿ ಪತ್ತಿ.

ತಾರಾ– ಹೇಳಾ ನನ್ನ ಮಾಲದಂಡೀ ಜೋಳ.

ಸಂಗಣ್ಣ– ನೋಡು ತಾರಾ! ದುಡಿಲಾರ್ದ ದುಡ್ಡು ಗಳಿಸಬೇಕು.

ತಾರಾ– ದುಡಿಲಾರ್ದ ಹ್ಯಾಂಗ ಬರತದ ದುಡ್ಡು.

ಸಂಗಣ್ಣ– ನಿನಗೇನು ಗುರ್ತಾದ ಗೊಡ್ಡು, ಕಿಲ್ಲಿ ಕೇಳು ಸಾವಿರ.

ತಾರಾ– ಎಲ್ಲಿ ಕೊಡ್ತಾರ?

ಸಂಗಣ್ಣ– ಕೊಯಿಮತ್ತುರಾಗ ನೀನು ನಾಲ್ಕು ಸಾವಿರ ಕೊಟ್ರ ಇಪ್ಪತ್ತು ಸಾವಿರ

ಹಣ ಬರ್ತಾದ ನಾವು ಸಾಯುಮಟ್ಟ ಕುಂತು ಉಂಡ್ರು ಸವೆದಿಲ್ಲ.

ತಾರಾ— ಇಲ್ಲದ ದಂಥಮಾಡಿ ಗಲ್ಲೊಡೆ ಬಡಿಸಿಗೊಂಡೀಯಿ ಇಲ್ಲಿ ನಮ್ಮ ಆಜುಬಾಜು ಯ್ಯಾರ್‍ಯಾರ ನಡಿಸ್ಯಾರೇನು ಈ ದಂಧೆ.

ಸಂಗಣ್ಣ— ನಡಿಸ್ಯಾರಂತ ಕೇಳಬ್ಯಾಡ, ಇದೇ ವಾಡ್ಯಾಗ ವಡಿ ಪುಗಿಮಾರಿ ಬದಕತಿದ್ದ ಭಂಡಾರಿ ಬಸಪ್ಪ ಶೆಟ್ಟಿ ಹಾಕಸ್ಯಾನ ಒಂದು ರೈಸ್‌ಮಿಲ್ ಮೂರು ದಾಲ್‌ಮಿಲ್ ಒಂದು ಸಿನೆಮಾ ಥೇಟರ್ ಐದು ಬಟ್ಟೆದುಕಾನ್ ಆರು ಬ್ರ್ಯಾಂಡಿದುಕಾನ ಇನ್ನು ಏನೇನೋ ಮಾಡ್ಯಾನ ತಾರಾ, ಖೋಟಾ ನೋಟ್ಯಾಗ.

ತಾರಾ— ಇಟ್ ಮಾಡಿದ ಶೆಟ್ರಮೇಲೆ ಸರಕಾರ ಇಟ್ಟಿಲೇನು ಕಣ್ಣು?

ಸಂಗಣ್ಣ— ಕಣ್ಣು ಇಟ್ಟು ಬಂದ ಸರಕಾರದ ಬಾಯಿಗೆ ಬೆಣ್ಣೆಉಂಡಿ ತುರಿಕಿ ಕಳಿಸ್ತಾರ ಶೆಟ್ರು.

ತಾರಾ— ಹಗರ ಇನ್ನೇನು ಹಿಡಿತಾರಾ ರಟ್ಟೀ?

ಸಂಗಣ್ಣ— ತಾರಾ—ನಮ್ಮ ಸರಕಾರದ ಕಾನೂನು ಇರುವಿ ಹೋಗಾಕ ಇಂಬಿಲ್ಲ. ಆನೆ ಹೋಗಾಕ ಅಡ್ಡಿಯಿಲ್ಲ.

ತಾರಾ— ಐ...ಐ...ಇದೆಂಥ ಸರಕಾರ, ನನ್ನ ಜಂಪರ್ಕ ಹಚ್ಚ ಸಬಕಾರ.

ಸಂಗಣ್ಣ— ತಾರಾ ಇದು ಮಜಾ ಸರಕಾರ, ತಲೆತಗದವನಿಗೆ ವಜಾ ಮಾಡ್ತಾದ, ಎಲೆ ಕದ್ದವನಿಗೆ ಸಜಾ ಮಾಡ್ತದ ಇರ್ಲಿ ಇರ್ಲಿ ಕಿತ್ತಕೊಂಡು ನಿನ್ನ ಚೀಲದಾನ ನೋಟು.

ತಾರಾ— ತರಬೇಕು ನೋಡು ನೀ ತೆಕ್ಕೆ ತುಂಬ ನೋಟು.

ಸಂಗಣ್ಣ— ತರ್ತೀನೇಳ ನನ್ನ ಪ್ರೇಮದ ಪೆಪ್ಪರಮೆಂಟು.

—: ಪರದೆ ಏರುವದು :—

===***===***===

೨೫ನೇ ಪ್ರವೇಶ

–: ಬಂಗ್ಲೆ :–

(ಉಮೇಶ ಸೀಖ್ ಡ್ರೆಸ್ಸಿನ ಮೇಲೆ ಬರುವನು.)

ಅಂಚೆಯವ ಪೇಪರ ಸಾರ್.... (ಹೋಗುವನು)

ಧೀರೇಂದ್ರ– ತಾರಯ್ಯ....(ಪೇಪರ್ ನೋಡಿ) ಓಪ್ ವಂಡರ್‌ಫುಲ್ ಉಮೇಶ ಹೂಗಾರ ನಿಧನ, ಮೈಸೂರ ಸಮೀಪ ನೇರವಾಗಿ ಬರುತ್ತಿದ್ದ ಕಾರಿಗೆ ಲಾರಿ ಡಿಕ್ಕಿ ಹೊಡೆದದ್ದರಿಂದ ಸಬ್ ಇನಸ್ಪೆಕ್ಟರ್ ಉಮೇಶ್ ಸ್ಥಳದಲ್ಲೇ ಮರಣ...ಸಂತೋಷ ಬಲು ಸಂತೋಷ.

ವೀರೇಶ– (ಪ್ರವೇಶ ಮಾಡುವನು) ಓ...ಇದೇನು ಸಾಮುಕಾರರೇ ಸಂತೋಷದ ಸಂಭ್ರಮದಲ್ಲಿ ಮುಳುಗಿರುವಿರಲ್ಲಾ ಮತ್ತೇನು ಅಂಥಾ ಸಂತೋಷದ ಪ್ರಸಾದ ನ್ಯೂಜ್.

ಧೀರೇಂದ್ರ– ನ್ಯೂಜ್ ನೋಡು...ವೀರೇಶ, ಮೈಸೂರು ಸಮೀಪ ಲಾರಿ ಎಕ್ಸಿಡೆಂಟ್ ಆಗಿ ಉಮೇಶ ಹೂಗಾರ ಸ್ವರ್ಗವಾಸಿಯಾದನಂತೆ ಫೋಟೋ ಕೂಡಾ ಕೊಟ್ಟಿದ್ದಾರೆ ನೋಡು.

ವೀರೇಶ– (ಪೇಪರ ನೋಡಿ) ಪೀಡೆ ಹೋಯಿತು ಸಾಹುಕಾರರೇ, ಮೊದಲು ನನ್ನ ಬಾಯಿಗೆ ಪೇಡೆಬರಲೀ....

ಧೀರೇಂದ್ರ– ಪೇಡೆ ತಿನಿಸುವೆ, ವಿಸ್ಕಿ ಕುಡಿಸುವೆ, ಮತ್ತೇನು ಬೇಕು ಹೇಳು?

ವೀರೇಶ– ಮತ್ತೇನು ಹೇಳಲಿ ಸಾಹುಕಾರರೇ, ಮಾತಿನಂತೆ ಮೊದಲು ನನಗೆ ಮೂರು ಸಾವಿರ ರೂಪಾಯಿಗಳನ್ನು ಕೊಟ್ಟುಬಿಡಿ.

ಧೀರೇಂದ್ರ– ಮೂರು ಸಾವಿರ ಏಕೆ ವೀರೇಶ, ನಿನ್ನ ಬುದ್ಧಿಗೆ ಆರು ಸಾವಿರ ಕೊಟ್ಟರೂ ಕಡಿಮೆ, ನಾಳೆ ಚೆಕ್ ಬರೆದುಕೊಡುವೆ.

ವೀರೇಶ– ಆಗಲಿ ಸಾಹುಕಾರರೇ (ಉಮೇಶ ಸೀಖ್ ಡ್ರೆಸ್ಸಿನಮೇಲೆ ಬರುವನು.)

ಉಮೇಶ– ನಮಸ್ಕಾರ ಸಾಹುಕಾರರೆ.....?

ಧೀರೇಂದ್ರ– ಯಾರು ನೀನು?

ಉಮೇಶ– ನಾನು ಡ್ರೈವರ ಸಾರ್, ನಿಮ್ಮಹತ್ತಿರ ನೌಕರಿಗಾಗಿ ಬಂದಿರುವೆ.

ವೀರೇಶ– ಡ್ರೈವರ ನಿನ್ನ ಊರು?

ಉಮೇಶ– ನನ್ನ ಊರು ಸೊಲ್ಲಾಪೂರ ಸಾರ್.

ಧೀರೇಂದ್ರ– ಹೆಸರು.....?

ಉಮೇಶ– ಕೈಲಾಸ್‌ಸಿಂಗ ಸಾರ್.

ವೀರೇಶ– ಸಾಹುಕಾರರೇ ಡ್ರೈವರ್ ಇಲ್ಲವೆಂದು ಮೂರು ದಿನಗಳಿಂದ ಮರುಗುತ್ತಿದ್ದೀರಿ, ಕೈಲಾಸ್‌ಸಿಂಗ ಕರೆಸಿದಂತೆ ಬಂದಿದ್ದಾನೆ. ನೌಕರಿ ನೇಮಕ ಮಾಡಿಕೊಳ್ಳಿ.

ಧೀರೇಂದ್ರ– ಆಗಲಿ ವೀರೇಶ, ಈ ಕೈಲಾಸನನ್ನು ನೀನೇ ನೇಮಕ ಮಾಡಿಬಿಡು.

ವೀರೇಶ– ಏನಯ್ಯಾ ಕೈಲಾಸ ಎಷ್ಟು ವೇತನ ಕೊಡಬೇಕು ಹೇಳು?

ಉಮೇಶ– ಹೇಳುವುದೇನು ಸಾಹುಕಾರರೇ ಹಿಂದಿನ ಡ್ರೈವರಿಗೆ ಏನು ವೇತನ ಕೊಟ್ಟಿದ್ದೀರೋ ಅಷ್ಟೇ ನನಗೆ ಕೊಟ್ಟು ಬಿಡಿಸಾರ್.

ಧೀರೇಂದ್ರ– ಅವರಿಗೆ ಎಂಟುನೂರು ಕೊಟ್ಟಿತ್ತು.

ಉಮೇಶ– ನನಗೂ ಅಷ್ಟೇ ಕೊಟ್ಟು ಬಿಡಿರಿ.....ಸಾರ್.

ವೀರೇಶ– ನೋಡು ಕೈಲಾಸ, ದುಡ್ಡು ದೊಡ್ಡದಲ್ಲ ಸಾಹುಕಾರರಲ್ಲಿ ವಿಶ್ವಾಸ ಉಳಿಸಿಕೊಳ್ಳಬೇಕು.

ಉಮೇಶ– ವಿಶ್ವಾಸಕ್ಕೆ ನಮ್ಮ ಸೀಖ್ ಜನ ವಿಶ್ವದಲ್ಲೇ ಮುಂದಿದೆ ಸ್ವಾಮಿ ಸಮಯಬಂದರೆ ಸಾಹುಕಾರರಿಗೂ ನಿಮಗೂ ಸಹ ಪ್ರಾಣ ಕೊಡುತ್ತೇನೆ.

ವೀರೇಶ– ಶಹಭಾಷ್, ಡ್ರೈವರ ಅಂದರೆ ಹೀಗಿರಬೇಕು. (ನೀಲಾ ಬರುವಳು.)

ಧೀರೇಂದ್ರ– ಹಲೋ ನೀಲಾ....

ನೀಲಾ– ಹಲೋ ಡಾರ್ಲಿಂಗ ಯಾರಿವನು. (ಕೈಲಾಸನನ್ನು ತೋರಿಸುವಳು.)

ಧೀರೇಂದ್ರ– ಇವನೋ ನಮ್ಮ ಕಾರಿನ ಡ್ರೈವರ.

ನೀಲಾ– ಸರಿ.

ಧೀರೇಂದ್ರ– ಕೈಲಾಸ ನಾಳೆಯಿಂದ ಡ್ಯೂಟಿಗೆ ಬಂದುಬಿಡು.

ಉಮೇಶ– ಬರುತ್ತೇನೆ ಸಾರ (ಉಮೇಶ ಹೋಗುವನು.)

ನೀಲಾ– ಹಲ್ಲೋ....ಡಾರ್ಲಿಂಗ್ ಮುಂದಿನ ಪ್ರೋಗ್ರಾಮ್ ಏನು ಹೇಳಿ?

ಧೀರೇಂದ್ರ– ಹಲ್ಲೋ, ಸುಂದರವಾದ ಗಂಧರ್ವಲೋಕದಿಂದ ಭೂಲೋಕಕ್ಕೆ ಬಂದಿಳಿದ ಬಂಗಾರಬಣ್ಣದ ನೀಲಾ ನಿನ್ನ ಅಮೃತಹಸ್ತದಿಂದ ಈ ವಿಸ್ಕಿಯನ್ನು ಹಣಿಸು. (ಶೀಸೆ ಮುಂದಿಡುವನು.)

ನೀಲಾ– ಹಣಿಸಿರುವೆ ತೆಗೆದುಕೋ ರಾಜಾ....ಹೇಗಿದೆ....ಮಜಾ...?

ವೀರೇಶ– ನೀಲಾ ಪಿಯುಷ ಪಾನದ ಜೊತೆಗೆ ಹೊರಚಿಮ್ಮಿ ಬರಲಿ ನಿನ್ನ ಮಂಜುಲವಾದ ಮಧುರಗಾನ.

ಧೀರೇಂದ್ರ– ಹಾಡು, ಹಾಡು, ಚಕೋರಿ. ಎಲ್.ಆರ್. ಈಶ್ವರಿಯನ್ನು ಮೀರಿಸುವಂತೆ ಕುಣಿದು ಹಾಡು ನನ್ನ ಮಯೂರಿ. (ನೀಲಾ ಪದ ಹಾಡುವಾಗ ವೀರೇಶನ ಸನ್ನೆಯಂತೆ ವಿಷ ಸೇರಿಸುವಳು.)

ಧೀರೇಂದ್ರ– ನೀಲಾ ಏಕೋ....ನನ್ನ ನಾಲಿಗೆ ಸೆಳೆಯಹತ್ತಿದೆಯಲ್ಲ ವಿಸ್ಕಿಯಲ್ಲಿ ವಿಷ ಮಿಶ್ರವೇನಾದರೂ ಮಾಡಿದೆಯಾ?

ನೀಲಾ– ವಿಷಮಿಶ್ರ, ನಾನೇಕೆ ಮಾಡಲಿ? ನಿಶೆಯಿಂದ ಹಾಗೆ ಅಗಿರಬಹುದು.

ಧೀರೇಂದ್ರ– (ಸಿಟ್ಟಿನಿಂದ) ನಿಶೆಯಲ್ಲಿ ನೀಲೇ, ನಿಜ ಹೇಳು? (ಕೈಹಿಡಿಯುವನು.)

ನೀಲಾ– ನಿಜ ಹೇಳಲೇ? (ನಕ್ಕು) ನಿನ್ನ ಕೆಟ್ಟ ಮನಸ್ಸಿನ ಗುಟ್ಟನ್ನರಿತು ಹಾಕಿದೆ ವಿಷ.

ಧೀರೇಂದ್ರ– ವಿಷ ಅಯ್ಯೋ....ವಿಷ....ನರ್ಸ ನೀಲೆ ಕೊನೆಗೆ ಮಾಡಿದೆಯಾ ನನಗೆ ಮೋಸ.

ವೀರೇಶ– (ನಕ್ಕು) ಮೋಸ....ಮೋಸಕ್ಕೆ ತಕ್ಕ ಮೋಸ.

ನೀಲಾ– ಮುಯ್ಯಿಗೆ ತಕ್ಕ ಮುಯ್ಯಿ.

ವೀರೇಶ– ಕಡಕ್ಕೆ ಕಡ.

ಧೀರೇಂದ್ರ– ಷಟಪ್, ಕಡಕೊಟ್ಟ ಮುಂಡ ವೀರೇಶ ನಿನ್ನನ್ನೇ ನಂಬಿನಿಂತ ನನ್ನ

ಚೆಂಡನ್ನು ಈ ರಂಡೆಯ ಕೈಯಿಂದ ಕತ್ತಿರಿಸಿದೆಯಾ ಚಾಂಡಾಲ.

ವೀರೇಶ– (ನಕ್ಕು) ಚಾಂಡಾಲ ಯಾರು? ಬೊಕ್ಕಸದ ಆಸೆಗೆ ಅಕ್ಕರೆಯ ಕಕ್ಕಪ್ಪನ ಕತ್ತನ್ನೇ ಕನಿಕರವಿಲ್ಲದೇ ಕಟುಕನಂತೆ ಕತ್ತರಿಸಿದೆಯಲ್ಲ ನೀನು ಚಾಂಡಾಲ, ತಮ್ಮನಾಗಬೇಕಾದ ಮೋಹನನ ಮಡದಿಯಮೇಲೆ ಕಾಮದೃಷ್ಟಿ ಬೀರಿ ಫೋಟಾ ಫೋಟೋವನ್ನು ಸೃಷ್ಟಿಮಾಡಿ ಸತಿ ಸಾಧ್ವಿಗೆ ಹಾದರದ ಅಪವಾದಹೊರಿಸಿ ಮುಗ್ಧ ಮೋಹನನ ಬಾಳನ್ನು ಹಾಳುಗೈದ ನೀನು ಚಾಂಡಾಲ. ನಿನ್ನನ್ನೇ ನಂಬಿನಿಂತ ನೂರಾರು ನರ್ಸ್ ನೀಲೆಯರಿಗೆ ವಿವಾಹದ ಆಸೆಯನ್ನುಹಚ್ಚಿ ರಾಸಕ್ರೀಡೆಯನ್ನಾಡಿ, ಬೀಸಾಡಿಬಿಟ್ಟಿರುವ ನೀನು ಚಾಂಡಾಲ.

ಧೀರೇಂದ್ರ– ನಾನು ಚಾಂಡಾಲನೇ....ನಿಜ....ನಿನ್ನಂಥ ಉಡಾಳನನ್ನು ಪರಮಸ್ನೇಹಿತನೆಂದು ತಿಳಿದು ನಾನು ಕೆಟ್ಟೆ ಅಯ್ಯೋ ಹೊಟ್ಟೆಯಲ್ಲಿ ಸಂಕಟ...ಸಂಕಟ...ತಾಳಲಾರೆ...ತಾಳಲಾರೆ ಅಯ್ಯೋ ಕಕ್ಕಪ್ಪ ಬೊಕ್ಕಸದ ಆಸೆಗಾಗಿ ರಕ್ಕಸನಂತೆ ನಿನ್ನನ್ನು ಕೊಲೆ ಮಾಡಿದೆ. ಮೋಹನನಮೇಲೆ ಅಪವಾದಕಟ್ಟಿ ಜೇಲಿನತ್ತ ನೂಕಿದೆ, ಈ ಪಾಪಿಯನ್ನು ಕ್ಷಮಿಸಪ್ಪಾ ಕ್ಷಮಿಸು ಬರುವೆ, ಕಕ್ಕಪ್ಪಾ ಬರುವೆ. (ಸಾಯುವನು) (ವೀರೇಶ– ನೀಲಾ ಹೆಣವನ್ನು ಎತ್ತಿ ಒಯ್ಯುವಷ್ಟರಲ್ಲಿ)

–: ಪರದೆ ಬೀಳುವದು :–

===***=====***===

೨೬ನೇ ಪ್ರವೇಶ

(–:ರಸ್ತಾ ಸೀನು:–)

ನೀಲಾ– (ಪ್ರವೇಸಿಸಿ) ಧೀರೇಮದ್ರನ ಅಪಾರ ಬೊಕ್ಕಸ ಈಗ ನನ್ನ ಕೈವಶ. (ನಕ್ಕು) ನಮ್ಮ ಕಾರು ನಡೆಸುವ ಡ್ರೈವರ ಕೈಲಾಸ ಸರ್ವಾಂಗ ಸುಂದರ. ಸಾಕ್ಷಾತ್ ರಾಜಕುಮಾರ, ಈ ರಾಜಕುಮಾರನನ್ನು ನೋಡಿದಾಗಿನಿಂದ ನನ್ನ ಮನ ಇವನನ್ನು ಲವ್ ಮ್ಯಾರೇಜ್ ಮಾಡಿಕೋ ಎಂದು ಒಂದೇಸವನೆ ನುಡಿಯುತಿದೆ. ಹೇಗಾದರೂಮಾಡಿ ಇವನನ್ನು ನಾನು ಲವ್ ಮ್ಯಾರೇಜ್ ಮಾಡಿಕೊಳ್ಳಲೇಬೇಕು.

ಕೈಲಾಸ– (ಪ್ರವೇಶಿಸಿ) ಲವ್...ಮ್ಯಾರೇಜ್...ಯಾರನ್ನು ಮಾಡಿಕೊಳ್ಳುವಿರಿ ನೀಲಾದೇವಿ.

ನೀಲಾ– ಯಾರನ್ನು ಇಲ್ಲಾ ನಿಮ್ಮನ್ನೇ ಲವ್ ಮ್ಯಾರೇಜ್ ಮಾಡಿಕೊಳ್ಳಬೇಕೆಂದು ನಿರ್ಧರಿಸಿರುವೆ.

ಕೈಲಾಸ– ತಮ್ಮಂಥ ಶ್ರೀಮಂತರು ಸುಶಿಕ್ಷಿತರೂ ನನ್ನಂಥ ಬಡಕಾರಿನ ಡ್ರೈವರನನ್ನು ಮ್ಯಾರೇಜ್ ಮಾಡಿಕೊಳ್ಳುವದೇ ಸ್ವಲ್ಪ ಆಲೋಚಿಸಿ?

ನೀಲಾ– ಆಲೋಚಿಸಿದ್ದೇನೆ ಕೈಲಾಸ ಹಣಕ್ಕೆ ನಾನು ಮೆಚ್ಚಿಕೊಂಡಿಲ್ಲ ನಿನ್ನ ಗುಣಕ್ಕೆ ಮೆಚ್ಚಿಕೊಂಡಿದ್ದೇನೆ, ಪ್ಲೀಸ್ ಒಪ್ಪಿಕೋ ನನ್ನ ರಾಜ. (ಭುಜದಮೇಲೆ ಕೈ ಹಾಕುವಳು.)

ಕೈಲಾಸ– ಒಪ್ಪಿಕೊಳ್ಳುವೆ ನೀಲಾ, ಆದರೆ ನೀ ನನ್ನ ಕೆಲವೊಂದು ಕಂಡೀಶನಗಳಿಗೆ ಒಪ್ಪಿಕೊಂಡರೆ ಮಾತ್ರ....

ನೀಲಾ– ನಿಮ್ಮ ಕಂಡೀಶನಗಳಿಗೆ ನಾನು ಒಪ್ಪುತ್ತೇನೆ ಕೈಲಾಸ....

ಕೈಲಾಸ– ಒಪ್ಪಿದೆಯಾ, ನೋಡು ನೀಲಾ ನನ್ನ ಕಂಡೀಶನ ಬಹಳ ಕಠೋರ ಇದೆ.

ನೀಲಾ— ಮಿಸ್ಟರ ಕೈಲಾಸ ನಿಮ್ಮ ಕಂಡೀಶನ ಎಷ್ಟೇ ಕಠೋರವಿರಲಿ ತಪ್ಪದೇ ಒಪ್ಪುವಳು ಈ ನೀಲಾ.

ಕೈಲಾಸ— ಸರಿ, ನೀಲಾ ಆ ಕ್ರೂರ ಧೀರೇಂದ್ರನ ಟ್ರೆಜೋರಿಯಿಂದ ನೀನು ಹಾರಿಸಿದ ಕ್ಯಾಷ್ ಎಷ್ಟು?

ನೀಲಾ— ಕೋಟ್ಯಾಂತರ.

ಕೈಲಾಸ— ಆ ಕೋಟ್ಯಾಂತರ ಕ್ಯಾಷನ್ನು ಮೊಟ್ಟಮೊದಲು ನೀನು ನನ್ನ ಸ್ವಾಧೀನ ಮಾಡಬೇಕು.

ನೀಲಾ— ಸ್ವಾಧೀನ ಮಾಡುವೆ ಆಮೇಲೆ?

ಕೈಲಾಸ— ಆಮೇಲೆ ಆ ಕೆಟ್ಟ ಕಾರಬಾರಿ ವೀರೇಶನನ್ನು ನೀನು ಪೆಟ್ರೋಲ್‌ಹಾಕಿ ಸುಡಬೇಕು. ಈ ಮಾತಿಗೆ ನೀನು ಒಪ್ಪಿದರೆ ನಾಳೆ ಸಾಯಂಕಾಲ ಪಾರ್ಕಿನಲ್ಲಿ ಬಂದು ಭೆಟ್ಟಿಯಾಗಿ ನನಗೆ ರಸದೂಟ ನೀಡು, ನಾ ಇನ್ನ ಬರುತ್ತೇನೆ ಟಾ....ಟಾ....

ನೀಲಾ— ಟಾ...ಟಾ...(ಹೋಗುವರು)

—: ರಸ್ತಾ :—

(ತಾರಾ— ಸಂಗಣ್ಣಾ, ಕುರುಡಿ ತಾರಾ, ಕುಂಟ ಸಂಗಣ್ಣಾ ಭಿಕ್ಷೆ ಪಾತ್ರೆ ಹಿಡಿದು ಬರುವರು.)

ತಾರಾ— (ಸ್ವಾಗತ) ಖೋಟಾ ನೋಟು ತರತೀನಂತ ನನಗೆ ಚೆಂಡಚ್ಚಿ ಹೋದ ಉಡ್ಕಿಗಂಡ ಇನ್ನೂ ಬರಲಿಲ್ಲ. ಅವ ಭಂಡ ಗಂಡನನ್ನು ಬಿಟ್ಟು ಓಡಿ ಬಂದ ಪಾಪಕ್ಕೆ ವಾಡಿಮೇಲೆ ರೌಡಿ ರಂಗಪ್ಪನ ಗಾಡಿ ಠಕ್ಕರ ಆಗಿ ಕಣ್ಣು ಹೋಗಿ ಕುರುಡಿ ಆದೆ. (ಬಲಗೈ, ಎಡಗಾಲು ಹೋದ ಸಂಗಣ್ಣಾ ಬಡಗಿ ಹಿಡಿದುಕೊಂಡು ಬರುವನು.)

ಸಂಗಣ್ಣಾ— ಅಲೆ...ಲೆ...ಲೆ...ಇದೇನು ನಮ್ಮ ಸೆಕೆಂಡ್ ಹ್ಯಾಂಡ್ ಕಾರಿನ ಲೈಟ್ ಕಂಡಂ ಆದಂಗ ಕಾಣ್ತಾದ...ತಾರಾ...ಏ...ತಾರಾ.....

ತಾರಾ— ಯಾರು...ನೀನು?

ಸಂಗಣ್ಣಾ— ತಾರಾ...ನಾನು ಸಂಗಣ್ಣಾ.

ತಾರಾ— ಸಂಗಣ್ಣಾ, ಸಾವಿರ ಕೊಟ್ರ, ಸಂಗಣ್ಣಾ ನೂರು ಕೊಟ್ರ ಸುಂಗಣ್ಣಾ. ಯಾವಾಗ ಬಂದ್ಯಾ ಮಂಗಣ್ಣಾ?

ಸಂಗಣ್ಣ— ತಾರಾ ಬೈಬ್ಯಾಡ, ಸಿಕ್ಕಾಪಟ್ಟಿ ಖೋಟಾ ನೋಟಿಗೆ ಹೋಗಿ ನಾ ಕೆಟ್ಟೆ.

ತಾರಾ— ನೀಯಾಕ ಕೆಟ್ಟೀ ಭೇಷನಾಗಿ ಹೇಳು ನನ್ನ ಆಡಿಬಿಟ್ಟೆ.

ಸಂಗಣ್ಣ— ಹೇಳುವದೇನ ತಾರಾ, ಖೋಟಾ ನೋಟ ತಗೊಂಡ ಬರ್ತಿದ್ದ್ಯಾ ವಾಸನಹತ್ತಿದ ಯಮಧರ್ಮನಂಥ ಇಬ್ಬರು ಪೋಲೀಸರು ಯಾದಗಿರಿ ಸ್ಟೇಷನ್‌ಮೇಲೆ ಹಿಡಿಬೇಕಂತ ಬಂದಬಿಟ್ರಲ್ಲ.

ತಾರಾ— ಬಂದ್ರ, ಆವಾಗ ನೀ ಏನ ಮಾಡಿದಿ?

ಸಂಗಣ್ಣ— ಮಾಡೋದೇನು ನೋಟು ಕಟ್ಟುಗಳು ಹಾಗೇ ಗಾಡ್ಯಾಗ ಬಿಟ್ಟು ವೀರ ಸಿಂಧೂರ ಲಕ್ಷ್ಮಣ ಜಿಗದಂಗ ಹಗಾ ಗಾಡಿಯಿಂದ ಕೆಳಕ್ಕೆ ಜಿಗ್ದ ಬಿಟ್ಟೆ.

ತಾರಾ— ಜಿಗಿದರ ಒಂದು ಕೈಕಾಲು ಹೋಗಿರಬೇಕಲ್ಲ ನಿಂದು?

ಸಂಗಣ್ಣ— (ದುಃಖದಿಂದ) ಹೋತು ತಾರಾ, ಒಂದು ಎಡಗಾಲು ಹೋತು. ಬಳೀ ಏರಿಸುವ ಬಲಗೈನೂ ಹೋತು.

ತಾರಾ— ಖೋಟಾ ನೋಟಿಗೆ ಹೋಗಬೇಕಂದ್ರ ಹಟಮಾಡಿ ಹೋದಿ ಕೈಕಾಲು ಕಳಕೊಂಡ ಬಂದಿ. ಅಯ್ಯೋ ಹೆಂಗಾತಲ್ಲ ಶಿವ...ಶಿವ...

ಸಂಗಣ್ಣ— ತಾರ....ಯಾಕ ಮಿಡುಕಿತಿದ್ದೀ....ನಿನ್ನ ಉಡ್ಕಿ ಗಂಡ ಇನ್ನೂ ಬದುಕಿಬಂದಾನ ಸಾಕು. ತಾರಾ ಹ್ಯಾಂಗೂ ನಿನಗೆ ಕಣ್ಣಿಲ್ಲ, ನನಗೆ ಕಾಲಿಲ್ಲ ಭಿಕ್ಷೆ ಬೇಡಾಕ ದೇವರು ಈಟು ಇನ್ನು ಆಧಾರ ಮಾಡ್ಯಾನ. (ಗಂಗಣ್ಣ ಕೊರ ವೇಷದಲ್ಲಿ ಡಮರು ಬಾರಿಸುತ್ತಾ ಬರುವನು.)

ಗಂಗಣ್ಣ— (ಕೊರವರ ಧ್ವನಿಯಲ್ಲಿ) ಮಂಗಣ್ಣಾ...ಬಾರಣ್ಣಾ....ಮರ ಏಕಣ್ಣಾ ಮಕ್ಕಳ ತಾಳಕ್ಕೆ ಕುಣಿಯಣ್ಣಾ...ಲಾಗಾ ಹೊಡಿಯಣ್ಣಾ.

ಸಂಗಣ್ಣ— ಕೋತಿ ಇಲ್ಲದ ಹೊಂಟೆಲ್ಲ ಕೊರವಯ್ಯ?

ಗಂಗಣ್ಣ— ಕೋತಿಗಳು ವರಾನೆ ಯಾದಗಿರಿಯಾಗ ಕೈ ತಪ್ಪಿಸಿಕೊಂಡು ಓಡಿ ಹೋದವಪಾ.

ಸಂಗಣ್ಣಾ– ಓಡಿಹೋದ್ರ ಕೊರವಂವ್ಯ ದಂಡುಗುಂಬಳ ಬಸವಣ್ಣಾಗ ಕೊಯಿಕೊಟ್ಟು ದೇವರ ಕೇಳಬೇಕಾಗಿತ್ತು?

ಗಂಗಣ್ಣಾ– ದೇವರು ಕೇಳದೆ, ಮೊನ್ನೆ ಮೈಲಾಪೂರ ಮಲ್ಲಯ್ಯ ದೇವರು ಹೇಳ್ಯಾನ.

ಸಂಗಣ್ಣಾ– ಏನ ಹೇಳ್ಯಾನ ದೇವರು.....?

ಗಂಗಣ್ಣಾ– ತಮ್ಮ ಈ ಗಾಡಿಗೆಹತ್ತಿ ವಾಡಿಗಿ ಇಳಿ, ಅಲ್ಲಿ ರೋಡಿನ ಮೇಲೆ ನಿನ್ನ ಕೋತಿಗಳು ಕಣ್ಣಿಗೆ ಬೀಳ್ತಾವಂತ ಹೇಳ್ಯಾನ....ಆ ಹ....ಹ....ಹ....ಮಲ್ಲಯ್ಯ ದೇವರು ಮಾತು, ಸುಳ್ಳಾಗಲಿಲ್ಲ. ಇಲ್ಲೇ ನನ್ನ ಕೋತಿಗಳು ಕಣ್ಣಿಗೆ ಬಿದ್ದವಲ್ಲ.

ಸಂಗಣ್ಣಾ– ಎಲ್ಲಿ ಬಿದ್ದವೋ ಕೊಲ್ಲೂರ ಕೊರವ.

ಗಂಗಣ್ಣಾ– ಇಲ್ಲೇ ಬಿದ್ದವು....ಸಂಗಣ್ಣಾ....ಮಂಗಣ್ಣಾ, ಮರ ಏರಣ್ಣಾ.... ಲಾಗ ಹೊಡೆಯಣ್ಣಾ.....(ಹೊಡೆಯುವನು)

ಸಂಗಣ್ಣಾ– ಹೊಡಿಬ್ಯಾಡಪ್ಪಾ ಗಂಗಣ್ಣ ಮಾವ, ತಪ್ಪಾಗ್ಯೆತೆ ನಿನ್ನ ಕಾಲು ಬೀಳ್ತೀನಿ ಹೊಡಿಬ್ಯಾಡ.

ಗಂಗಣ್ಣಾ– ತಾರವ್ವಾ...ಬಾರವ್ವಾ.....ಮರ ಏರವ್ವ...ಲಾಗ ಹೊಡೆಯವ್ವ. (ಹೊಡೆಯುವನು)

ತಾರಾ– ಹೊಡಿಬ್ಯಾಡ ಮಾವ, ನಿನ್ನ ಕಾಲಬೀಳ್ತೀನಿ. ತಪ್ಪಾಗ್ಯೆತಿ ಹೊಡಿಬ್ಯಾಡ.

ಗಂಗಣ್ಣಾ– ಸಂಗಣ್ಣಾ....ಮಂಗಣ್ಣಾ...ನೀನು ಸಾಹುಕಾರರಿಗೆ ಸಲಾಮ ಮಾಡಣ್ಣಾ.

ಸಂಗಣ್ಣಾ– ತಪ್ಪಾಗ್ಯೆತಿ ಹೊಡಿಬ್ಯಾಡಪ್ಪ ಮಾವ ಪಾಡಾಗಿ ಬುದ್ಧಿ ಬಂದ್ಯೆತೆ.

ಗಂಗಣ್ಣಾ– ಬುದ್ಧಿ ಏನಬಂತು, ಸುದ್ದಾಗಿ ಕುಂತು ಮಂದಿಗೆ ಬುದ್ಧಿ ಹೇಳು.

ಸಂಗಣ್ಣಾ– ಕುಂತ ನನ್ನ ಅಣ್ಣತಮ್ಮನವರೆ ನನ್ನಂಗ ತಂಗೀ ತಂಗೀ ಅಂತ ಕಣ್ಣಿಟ್ಟು ಮಣ್ಣುಮುಕ್ಕೋ ಇಂತ ಹೊಲಸು ದಂಧಾ ಮಾಡಬ್ಯಾಡ್ರಪ್ಪಾ ನಿಮಗ ಕೈಮುಗದ ಹೇಳ್ತಿನಿ.

ಗಂಗಣ್ಣಾ– ತಾರವ್ವ...ಬಾರವ್ವ ನೀ ಗೌಡರಮುಂದ ಡ್ಯಾನ್ಸ ಮಾಡವ್ವ

ತಾರಾ– ತಪ್ಪಾಗ್ಯೆತಿ ಹೊಡಿಬ್ಯಾಡ ಮಾವ, ಚೆಂದನಾಗಿ ಬುದ್ಧಿಬಂತು

ಗಂಗಣ್ಣ— ಬುದ್ಧಿ ಏನಬಂತು ನಿದ್ದಿಗಣ್ಣಾಗ ಹುಟ್ಟಿದ ಹುಡಿಗಿ ಸುದ್ದಾಗಿ ಕುಂತಮಂದಿಗೆ ಹೇಳು.

ತಾರಾ— ಕುಂತ ಕೇಳೋ ನನ್ನ ಅಕ್ಕತಂಗೇರ ಸಕ್ಕರೆಯಂತೆ ಮಾತು ಹೇಳ್ತೀನಿ, ಗಂಡನೇ ದೇವರಂತ ಸೆರಗಿನ್ಯಾಗ ಗಂಟುಹಾಕಿಕೊಂಡು ಬಾಳೇವ ಮಾಡ್ರವ್ವ.

ಗಂಗಣ್ಣ— ನೀವಿನ್ನು ನಡೀರವ್ವ, ಕಣ್ಣಿಲ್ಲದವರಿಗೆ ನೀವೇ ಶಿವಾ ಕಾಲಿಲ್ಲದವರಿಗೆ ನೀನೇ ಶಿವಾ ಅಂತಾ ಕಲಬುರ್ಗಿ ಕಡೆ ನಡೀರಿ.

(ತಾರಾ, ಸಂಗಣ್ಣ ಭಿಕ್ಷಾ ಪದ ಹಾಡುತ್ತ ಹೋಗುವರು.)

—: ಪರದೆ ಏರುವದು :—

==***====***===

೨೭ನೇ ಪ್ರವೇಶ

–: ಗಾರ್ಡನ್ :–

(ಕೈಲಾಸ ನಿಂತಿರುವಾಗ ನೀಲಾ ಸೂಟಕೇಸು, ಕ್ಯಾಬರೆ ಉಡುಪಿನಲ್ಲಿ ಬರುವಳು.)

ನೀಲಾ– ಹಲ್ಲೋ ಕೈಲಾಸ?

ಕೈಲಾಸ– ಹಲ್ಲೋ ನೀಲಾ ಎಷ್ಟು ಲೇಟ?

ನೀಲಾ– ಲೇಟು...ಕೊಂಚ ಡ್ರೆಸ್ ಮೇಕಪ್‌ನಲ್ಲಿ ತಡವಾಯಿತು. ಈ ಡ್ರೆಸ್ಸಿನಲ್ಲಿ ನನ್ನ ಫೇಸಕಟ್ ಯಾರನ್ನು ಹೋಲುತ್ತದೆ ಸ್ವಲ್ಪ ಊಹಿಸಿ ಹೇಳಿ ನೋಡುವಾ.

ಕೈಲಾಸ– ಈ ಡ್ರೆಸ್ಸಿನಲ್ಲಿ ನಿನ್ನ ಫೇಸಕಟ್ ನೋಡು ನೀಲಾ.... ಆ ಸಿನೇಮಾ ಕ್ಯಾಬರೆ ನಟಿ ಸಿಲ್ಕ ಸ್ಮಿತಾ ಕಂಡಹಾಗೆ ಬಹಳ ಸ್ಮೂತಾಗಿ ಕಾಣುವಿ.

ನೀಲಾ– ನಿಜವೇ ನನ್ನ ರಾಜಾ:–

ಕೈಲಾಸ– ನಿಜ ನೀಲಾ ತುಂಡು ಬಟ್ಟೆಯಲ್ಲಿ ಚೆಂಡುಹೂವಿನಂತ ಈ ನಿನ್ನ ದುಂಡುದೇಹ ಕಂಡು ಮರೆಯಲ್ಲಿ ಮಲಗಿದ್ದ ಮನ್ಮಥನು ಎದ್ದು ನಿಂತು ನಿನ್ನ ತಬ್ಬಿಕೋ ಎಂದು ಒಂದೇಸವನೆ ಬೊಬ್ಬೆ ಹಾಕುತ್ತಿರುವನು, ಬಾ ನೀಲಾ ಬೇಗಾ ನುಡಿಸು ನಿನ್ನ ಪ್ರಣಯ ಗಾನ.

–: ಹಾಡು :–

ನೀಲಾ– ಕೈಲಾಸ ಇದೋ ಧೀರೇಂದ್ರನ ಕೋಟ್ಯಾಂತರ ಕ್ಯಾಷ್ ಈ ಸೂಟಕೇಸ್‌ನಲ್ಲಿದೆ ತಗೊಳ್ಳಿ ಹಾ....ಕೈಲಾಸ ಈ ಕ್ಯಾಷ್‌ನಿಂದ ಮೊದಲು ಏನು ಖರೀದಿಸುವಿರಿ ನನಗೆ ಹೇಳಿ?

ಕೈಲಾಸ– ಮೊದಲು ನೋಡು ನೀಲಾ ಬೆಂಗಳೂರಿನಲ್ಲಿ ಒಂದು ಸುಂದರವಾದ ಬಂಗ್ಲೆ ಖರೀದಿಸುವೆ.

ನೀಲಾ– ಆ ಬೆಂಗಳೂರು ಬಂಗ್ಲೆಗೆ ನೀವೇ ರಾಜಾ ನಾನೇ ರಾಣಿ ಅಲ್ವಾ ಕೈಲಾಸ?

ಕೈಲಾಸ– ಅಲ್ಲ ನನ್ನ ರಾಣಿಯಾಗುವಳು ಬೇರೆ ಇದ್ದಾಳೆ ಜಾಣೆ.

ನೀಲಾ– (ಆಶ್ಚರ್ಯದಿಂದ) ಕೈಲಾಸ, ಏನದು ನಿಮ್ಮ ವಾಣಿ ನಾನಲ್ಲವೇ ನಿಮ್ಮ ರಾಣಿ?

ಕೈಲಾಸ– (ನಕ್ಕು) ರಾಣಿ...ಅಂದು ವೀರೇಶನನ್ನು ಮೆಚ್ಚಿ ಕ್ರೂರ ಧೀರೇಂದ್ರನಿಗೆ ವಿಷಹಾಕಿ ಕೊಂದಿ, ಇಂದು ನನ್ನನ್ನು ಮೆಚ್ಚಿ ವಿರೇಶನನ್ನು ಸುಟ್ಟು ಸಾಯಿಸಲು ಸಿದ್ಧಳಾದಿ. ನಾಳೆ ಮತ್ತೊಬ್ಬನನ್ನು ಮೆಚ್ಚಿ ನನಗೆ ಕಚ್ಚದಿರಲಾರೆಯಾ ಕ್ರೂರ ನಾಗಿಣಿ.

ನೀಲಾ– ನಾಗಿಣಿಯಲ್ಲಾ ನಿಮ್ಮ ಮಾತಿನಂತೆ ನಡೆದ ಅರಗಿಣಿ ಕೈಲಾಸ ನಾನೀಗ ಗರ್ಭಿಣಿ.

ಕೈಲಾಸ– ಗರ್ಭಿಣಿ (ನಕ್ಕು) ಈ ಮುನ್ನ ಎಷ್ಟು ಜನರ ತೋಳತೆಕ್ಕೆಯಲ್ಲಿ ಸಿಕ್ಕು ಸೊಕ್ಕಿನಲ್ಲಿ ಸರಸವಾಡಿರುವೆಯೊ, ಎಲೆ ಹೊಲಸು ನೀಲೆ ನಿನ್ನ ಮೊಟ್ಟ ಮೊದಲಿನ ವಿಠನಲ್ಲಿಗೆ ಜಟ್ಟನೆ ಜಾರು ಜಾರಿಣಿ.

ನೀಲಾ– ಕೈಲಾಸ ನೀನೇ ನನ್ನ ಪತಿ, ಈಗ ನೀವು ಕೈಕೊಟ್ಟರೆ ನನ್ನ ಮಾನಕ್ಕೆ ಚ್ಯುತಿ.

ಕೈಲಾಸ– (ನಕ್ಕು) ಚ್ಯುತಿ ನಿನ್ನ ಹೇಯ ಕೃತಿ ಕಂಡು ಕೆಟ್ಟು ಹೋಗಿದೆ, ನನ್ನ ಮತಿ ಮಾನವೆಂದು ಬಡಿದಾಡುವ ವನಪಿನ ಸ್ಥಾನ ಹೆಲ್ತ್ ಖಾತೆಗೆ ಅರ್ಜಿಯಿತ್ತು ನಿನ್ನ ನೌಕರಿಯ ನಾವೆಯನ್ನು ಸಹ ಪುಡಿಮಾಡ್ತಿರುವೆ ನೀಲಾ ನಿನಗಿನ್ನು ಎಲ್ಲೆಲ್ಲೂ ನಿಲ್ಲಲು ಸಿಗಲಾರದು ಸ್ಥಾನ.

ನೀಲಾ– ಸ್ಥಾನ, ಅಯ್ಯೋ ಏನಾಯ್ತು ನನ್ನಮಾವ, ಥೂ ನರರಾಕ್ಷಸ ನನ್ನ ನೌಕರಿಯ ನಾವೆಗೆ ಸಹ ಬೆಂಕಿ ಹಚ್ಚಿದೆಯಾ?

ಕೈಲಾಸ– ಬೆಂಕಿ ಹಚ್ಚದಿದ್ದರೆ ನಿನ್ನಂಥ ಮಂಕು ನರ್ಸಗಳು ಕಲಿತುಕೊಳ್ಳಲಾರವು ನೀತಿಯ ಪಾಠ.

ನೀಲಾ– ಪಾಠ, ಥೂ ಕಟಕ ಎಬ್ಬಿಸಬೇಡಾ, ನಿನ್ನ ವಂಚನೆಯ ಘಾಟ

ಕೈಲಾಸ– ಘಾಟ ಎಬ್ಬಿಸಿ ನಿನ್ನನ್ನು ಗಟಾರಕ್ಕೆ ತುಳಿಯದಿದ್ದರೆ ನನ್ನ ಹೃದಯ ವಿಚಾರವು ಸಂತೋಷಗೊಳ್ಳಲಾರದು. ಎಲೆ ವಂಚನೆಯ ಪಂಚರಂಗಿ ನೀಲೆ, ನನ್ನಿಂದ ನೀ ಬಯಸಿದ ಮಾಲೆ ತದೆಹಾಕುವೆ ಬೇಡಿ. (ಚಪ್ಪಾಳೆ ತಟ್ಟಿ) ಪೋಲೀಸ.

ಪೋಲೀಸ– (ಪ್ರವೇಸಿಸಿ, ಸೆಲ್ಯೂಟ್ ಹೊಡೆದು) ಎಸ್. ಸರ್.

ಕೈಲಾಸ– ಈ ನೀಲಳನ್ನು ಅರೆಷ್ಟುಮಾಡಿ ನಮ್ಮ ಲಾಕಪ್ಪಿಗೆ ತೆಗೆದುಕೊಂಡು ಬನ್ನಿ

ಪೋಲೀಸ– ಬನ್ನಿ. (ಪೋಲೀಸ್ ಕರೆದುಕೊಂಡು ಹೋಗುವನು)

–: ಪರದೆ ಬೀಳುವುದು :–

===***===***===

೨೮ನೇ ಪ್ರವೇಶ

– ಗುಡಿ ಸೀನು –

ವೀರೇಶ– (ಸ್ವಾಗತ) ಇಂದು ಸೋಮವಾರ ಈ ಸಂಧ್ಯಾ ಸಮಯದಲ್ಲಿ ಸಿದ್ಧರಾಮನ ಗುಡಿಗೆ ತಪ್ಪದೇ ಬರುವಳು, ಆ ಸುಂದರ ಸುಶೀಲೆ ದರ್ಶನಕ್ಕೆ ಈ ಕಂಟಿಯ ಮರೆಯಲ್ಲಿ ಅವಿತುಕೊಂಡು ಆ ಕವಿತೆಯ ಕೆಂದುಟಿಯ ಸವಿಯನ್ನಿಂದು ಸವಿಯಲೇಬೇಕು.... ಅದೋ ಬರುತ್ತಿರುವಳು. ಅಮರಲೋಕದ ಅಪ್ಸರೆಯೋ, ಪಾತಾಳಲೋಕದ ಪದ್ಮಿನಿಯೋ ಎನ್ನುವಂತೆ ಮಂದಹಾಸ ಬೀರುತ್ತ ಬರುತ್ತಿರುವಳು, ಬರಲಿ. (ಸುಶೀಲ ಆರತಿ ತಟ್ಟೆ ಹಿಡಿದುಕೊಂಡು ಬರುವಳು) ಓ ಚೆಲುವ ಚೆಂದಿರನನ್ನು ತಿರಸ್ಕರಿಸುವ ಸುಂದರಿ ಹೋಗುವೆ. ಎಲ್ಲಿ ನಿಲ್ಲು?

ಸುಶೀಲ– ಕಾಮುಕ ಕಪಿಯೇ ಸಾಕು ನಿನ್ನ ಸೊಲ್ಲು.

ವೀರೇಶ– ಸುಶೀಲಾ ಸುಮ್ಮನೆ ಸಿಟ್ಟಿಗೆದ್ದು ಬಗೆಯಬೇಡಾ ಕಾಮನ ಕನ್ನಡಿಯಮೇಲೆ ಕಲ್ಲು, ನೀ ಒಪ್ಪೀ ಅಪ್ಪಿದೆಯಾದರೆ ಈರ್ವರಿಗೂ ಸಿಗುವುದು ಸವಿಸುಖ ಸಿಹಿಬೆಲ್ಲ.

ಸುಶೀಲ– ಥೂ...ಪಾಪಿ ಸುರಿಸಬೇಡ ಸುಮ್ಮನೆ ಸಾಧ್ವಿಯಮೇಲೆ ನಿನ್ನ ಪ್ರೇಮದ ಜೊಲ್ಲು.

ವೀರೇಶ– (ನಕ್ಕು) ಜೊಲ್ಲು....ನಾನೇಕೆ ಸುರಿಸಲಿ ಸುಶೀಲಾ ತಿದ್ದಿ ತೀಡಿದ ನಿನ್ನ ಕುಡಿ ಹುಬ್ಬು ಕಂಡರೆ ಆ ಮೃಡನು ಸಹ ತನ್ನ ಗಂಗೆ ಗೌರಿಯರನ್ನು ತೊರೆದು ನಿನ್ನ ಅಂಗಕಾಂತಿಗೆ ಮಾರುಹೋಗಿ ಸ್ವರ್ಗಲೋಕದಿಂದಲೇ ಸುರಿಸುವನು ಪ್ರೇಮಜೊಲ್ಲು, ಸುಮ್ಮನೆ ಈ ವೀರೇಶನಿಗೆ ನಿನ್ನ ಅಧರಾ ಮೃತವನ್ನು ಉಣಿಸು ಹರಿಣಾಕ್ಷಿ ಇಲ್ಲದಿದ್ದರೆ ಹಾರಿಹೋಗುವದು ನೋಡು ನಿನ್ನ ಪ್ರಾಣಪಕ್ಷಿ.

ಸುಶೀಲ– ವೀರೇಶ ನಿನ್ನ ಭೀಕರವಾದ ಬಿಂಕದ ನುಡಿಗೆ ಬೆದರಿ ಅಂಕಿತಳಾಗಲು ನಾನಿಲ್ಲ ಮಂಕು ಮಹಿಳೆ ಕಾಲೇಜ್ ಕಟ್ಟಿಹತ್ತಿದ ದಿಟ್ಟ ಕನ್ಯೆ.

ವೀರೇಶ– ಓ....ಕಾಲೇಜ್ ಕನ್ಯೆ ನನ್ನ ಗುಲಾಬಿಗಲ್ಲದ ಚೆನ್ನೆ ಸುಮ್ಮನೆ ವೇಳೆಗಳೆಯದೇ ಬಾಯನ್ನರನ್ನೇ. (ಹಿಡಿದೆಳೆಯುವನು)

ಸುಶೀಲ– (ಕೈ ಕೊಸರಿ) ಕೈ ಬಿಡು ಚಾಂಡಾಲ, ನಿರಪರಾಧಿಯಾದ ನನ್ನ ಪತಿಯನ್ನು ನಿನ್ನ ಕಾರಸ್ಥಾನದಿಂದ ಕಾರಾಗೃಹಕ್ಕೆ ಕಳಿಸಿ ಈಗ ನನ್ನೊಡನೆ ಕಾಮನಾಟವಾಡಲು ಬಂದೆಯಾ ಕತ್ತೇ ಈಪರಿ ಕಾಡಿ ಯಾವ ಜನ್ಮದ ಸೇಡು ತೀರಿಸಿಕೊಳ್ಳುವಿ ಹೇಳು ಮತ್ತೇ.

ವೀರೇಶ– ಮತ್ತೆ ಹೇಳುವೆ ಕೇಳು ಸುಶೀಲಾ, ನನ್ನಕ್ಕ ಅರ್ಥಾತ್ ನಿನ್ನ ಮಾತೆ ಮಹಾದೇವಿ. ನನಗೆ ನಿನ್ನನ್ನು ಕೊಡುತ್ತೇನೆಂದು ವಚನವಿತ್ತಿದ್ದಿಲ್ಲವೇ? ಆದರೆ ನನ್ನಕ್ಕ ಮಡಿದ ಕೂಡಲೇ ಆ ವಚನವನ್ನು ನಿನ್ನಡಿ ಮಣ್ಣುಗೂಡಿಸಿದನಲ್ಲಾ ಅದಕ್ಕಾಗಿ.

ಸುಶೀಲ– ಅಣ್ಣ ಮಣ್ಣುಗೂಡಿಸಲಿಲ್ಲ, ನಿನ್ನ ನನ್ನ ಹಣೆ ಅಕ್ಕಿ ಕೂಡಿ ಬರಲಿಲ್ಲ. ದೈವದಲ್ಲಿ ಸುಮ್ಮನೆ ಈ ರೀತಿ ಕಾಡಿದರೆ ಸೇಡುತೀರುವದೇ?

ವೀರೇಶ– ತೀರುವುದು, ಮುದ್ದು ಸುಶೀಲ. ಈಗ ನಿನ್ನನ್ನು ಸದ್ದಿಲ್ಲದೇ ಎಳೆದೊಯ್ಯುವೆ. ನನ್ನ ಕೈಯಿಂದ ಬಿಡಿಸಿಕೊಂಡು ಹೋಗಲು ಆವ ಗಂಡು ಗಲಿಗಳು ಬರುವವು, ಇಲ್ಲಿ ಸುತ್ತಮುತ್ತ ಸುಮ್ಮನೇ ಅತ್ತು ಚೀರಾಡಿದರೆ ಹಿಚುಕಿಬಿಡುವೆ, ನಿಮಿಷಾರ್ಧದಲ್ಲಿ ನಿನ್ನ ಕತ್ತು! ಹೇಳು ನನ್ನ ಮಾತಿನಂತೆ ನೀ ನಡೆದೆಯಾದರೆ ನಿನ್ನಡಿಗಿಡುವೆ ನನ್ನ ಸಕಲಸಂಪತ್ತು.

ಸುಶೀಲ– ಸಂಪತ್ತು....ಥೂ....ಸ್ಥಿರವಲ್ಲದ ಸಂಪತ್ತಿಗೆ ಆಸೆಬಿದ್ದು ನಿನ್ನ ಹಿಂದೆ ಎದ್ದುಬರಲು ಆ ಹೇಸಿ ನರ್ಸ ನೀಲೆಯೆಂದು ಭಾವಿಸಿದೆಯಾ ತಿಳಿಗೇಡಿ ವೀರೇಶ ಸುಮ್ಮನೆ ದೂರ ಸರಿ.

ವೀರೇಶ– ಸರಿಯಲಾರೆ ಬಾ....ಸುಶೀಲಾ, ಈ ಸಂಧ್ಯಾ ಸಮಯದಲ್ಲಿ ಯಾರು ಇಲ್ಲಿ ಬರುವರು. (ಕೈಹಿಡಿದು ಬರುವಾಗ ಮೋಹನ್ ಬರುವನು.)

ಮೋಹನ– ಅನ್ನವಿಕ್ಕಿದ ಮನೆಗೆ ಕನ್ನವಿಕ್ಕುವ ವೀರೇಶ....ನಿನ್ನ ಶಿರಹರಿಯದೇ ಬಿಡಲಾರೆ (ಎದೆ ಅಂಗಿ ಹಿಡಿಯುವನು)

ವೀರೇಶ– (ಸಿಟ್ಟಿನಿಂದ) ಹೇ...ಈ ವೀರೇಶನ ಶಿರಹರಿಯಲು ಹರಿಹರ

ಉಮೇಶ– ಕ್ಷಮಿಸುವದೇನು ಮೋಹನ ಸಂಶಯದ ಸರ್ಪಕಚ್ಚಿದ್ದರಿಂದ ನಿನ್ನನ್ನು ಈ ರೀತಿ ಮನಬಂದಂತೆ ಜರಿಯಲು ಹಚ್ಚಿತು.

ಮೋಹನ– ಸುಶೀಲಾ, ನಿನ್ನನ್ನು ಕಷ್ಟದ ಕಾನನದೊಳಗೆ ಚೆಲ್ಲಿಕೊಟ್ಟ ಈ ಭ್ರಷ್ಟ ಮೋಹನನನ್ನು ಕ್ಷಮಿಸು.

ಸುಶೀಲಾ– ನನ್ನ ಕ್ಷಮೆ ಏಕೆ ಪತಿದೇವಾ ತಮಗೆ ಮತಿ ಬರಿಸಿದ ಸಿದ್ಧರಾಮೇಶನಲ್ಲಿ ಕ್ಷಮೆ ಕೇಳಿ. (ಅಮರೇಶ ಬರುವನು)

ಅಮರೇಶ– ಆ ಹಹಹ...ಉಮೇಶ ನಾನು ನೋಡುತ್ತಿರುವದು ಇದಾವ ಸುಂದರ ಸನ್ನಿವೇಶ?

ಉಮೇಶ– ಅಗಲಿದ ಸತಿ ಪತಿಯರು ಸಿದ್ಧರಾಮನ ಸನ್ನಿಧಿಯಲ್ಲಿ ಮತ್ತೆ ಒಂದುಗೂಡಿದ ಸುಂದರ ಸಂತೋಷದ ಸನ್ನಿವೇಶ.

ಅಮರೇಶ– ಈ ಸಂತೋಷದ ಸಮಯವನ್ನು ಒದಗಿಸಿದ ಈ ಸಿದ್ಧರಾಮೇಶನನ್ನು ಸರ್ವರೂ ಮುದದಿಂದ ಪ್ರಾರ್ಥಿಸುವಾ.

–: ಜಯ ಜಯ ಗುರುವರ ಕರುಣಾಸಾಗರ :–

===***=====***===

ಶ್ರೀ

ಹೆಣ್ಣು ಜನ್ಮ

ಸಾಮಾಜಿಕ ನಾಟಕ

—ಡಾ. ವೀರಣ್ಣ ರಾಜೂರ

ಡಾ. ವೀರಣ್ಣ ರಾಜೂರ

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಬೆನಕನಾಳದಲ್ಲಿ ೦೪.೦೬.೧೯೪೭ ರಂದು ಜನಿಸಿದರು. ಬಸಪ್ಪ-ಫಕೀರಮ್ಮ ಇವರ ತಂದೆ-ತಾಯಿಗಳು. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ., ಪಿಎಚ್.ಡಿ ಪಡೆದ ಇವರು, ೧೯೭೩ರಿಂದ ೨೦೦೭ ರವರೆಗೆ ಅಲ್ಲಿಯ ಕನ್ನಡ ಅಧ್ಯಯನ ಪೀಠದಲ್ಲಿ ಸಹಾಯಕ ಸಂಶೋಧಕರಾಗಿ, ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದಾರೆ. ಸದ್ಯ ಕರ್ನಾಟಕ ವಿಶ್ವವಿದ್ಯಾಲಯದ ಶ್ರೀ ಬಸವೇಶ್ವರ ಪೀಠದಲ್ಲಿ ಸಂಯೋಜಕರಾಗಿದ್ದಾರೆ.

ಸಂಶೋಧನೆ, ಗ್ರಂಥಸಂಪಾದನೆ, ಹಸ್ತಪ್ರತಿಶಾಸ್ತ್ರ, ವಚನಸಾಹಿತ್ಯ, ಜನಪದ ಸಾಹಿತ್ಯ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಇತರ ಅನೇಕ ಪ್ರಶಸ್ತಿಗಳು ದೊರೆತಿವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಕೂಡಾ ಲಭಿಸಿದೆ.

ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದವರು, ಗ್ರಾಮೀಣ ರಂಗಭೂಮಿಯತ್ತ ಹೊರಳಿ ನೋಡುವುದು ತುಂಬ ವಿರಳ. ಆದರೆ ಇವರು ತಮ್ಮ ಗ್ರಾಮದಲ್ಲಿ "ಬಸವೇಶ್ವರ ನಾಟ್ಯ ಸಂಘ" ಸ್ಥಾಪನೆ ಮಾಡಿ, ಪ್ರತಿ ವರ್ಷ ನಾಟಕಗಳನ್ನು ಪ್ರದರ್ಶಿಸುತ್ತ ಬಂದಿದ್ದಾರೆ. ಬಾಲ್ಯದಿಂದಲೂ ಅಭಿನಯದಲ್ಲಿ ಆಸಕ್ತಿ ಹೊಂದಿರುವ ಇವರು ಪ್ರಮುಖ ನಾಟಕಕಾರರಾಗಿದ್ದಾರೆ. ಇವರ ಹನ್ನೆರಡು ನಾಟಕಗಳು ಪ್ರಕಟವಾಗಿವೆ. ಇವುಗಳಲ್ಲಿ ಹೆಚ್ಚಿನವು ಗ್ರಾಮೀಣ ರಂಗಭೂಮಿಗೆ ಸಂಬಂಧಿಸಿದವುಗಳಾಗಿವೆ. ಕೆಲವು ಏಕಾಂಕ ನಾಟಕಗಳನ್ನೂ ರಚಿಸಿದ್ದಾರೆ. ನಿರ್ದೇಶನದಲ್ಲಿಯೂ ಆಸಕ್ತಿ ಇರುವ ಇವರು ಗ್ರಾಮೀಣ ರಂಗಭೂಮಿಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ.

ಹೆಣ್ಣು ಜನ್ಮ

ಸಾಮಾಜಿಕ ನಾಟಕ

ಡಾ. ವೀರಣ್ಣ ರಾಜೂರ

೨೧.೧೨.೧೯೭೦

ಪ್ರಥಮ ಪ್ರಯೋಗದ ಕಲಾವಿದರು

ಶ್ರೀ ಜಗಜ್ಯೋತಿ ಬಸವೇಶ್ವರ ನಾಟ್ಯ ಸಂಘ, ಬೆನಕನಾಳ.

೧.	ಅಶ್ವತ್ಥ	–	ನೌಸಪ್ಪ ಈಳಗೇರ
೨.	ರಾಜೂ	–	ಇರಸಂಗಪ್ಪ ಇಟಗಿ
೩.	ಅರುಣ	–	ಚೆನಬಸಪ್ಪ ಹುನಗುಂದ
೪.	ಉದಯ	–	ಶಿವಪ್ಪ ಹೊಂಬಳ
೫.	ಬಾಳೂ	–	ಸಂಗಪ್ಪ ಕಲಾಲಬಂಡಿ
೬.	ನರಸಿಂಹ	–	ಸಂಗಪ್ಪ ಹಡಪದ
೭.	ಕೇಶವ	–	ಚೆನ್ನಬಸಪ್ಪ ಡೊಣ್ಣೆಗುಡ್ಡ
೮.	ದುರಗ	–	ಹನಮಪ್ಪ ಈಳಗೇರ
೯.	ಲೀಲಾ	–	ಹನಮಂತಪ್ಪ ಉಪ್ಪಾರ
೧೦.	ಜಯಾ	–	ಶಿವಾನಂದಪ್ಪ ಗುಡಿ
೧೧.	ಭಾರತಿ	–	ಬಸಪ್ಪ ನಂದಾಪೂರ
೧೨.	ರಮಾ	–	ಬಸಪ್ಪ ಗುರಿಕಾರ
೧೩.	ರೇವತಿ	–	ಮಲ್ಲಪ್ಪ ಪೂಜಾರ
೧೪.	ಹನಮಿ	–	ಮುದಕನಗೌಡ ಮಾಲಿ

ಸಂಗೀತ : ರುದ್ರಪ್ಪ ಮಾಸ್ತರ ಹುನಗುಂದ, ಬೆನಕನಾಳ

ತಬಲಾ : ಶಿರಸಪ್ಪ ಮಾಸ್ತರ ಬಡಿಗೇರ, ಬೆನಕನಾಳ

ನಿರ್ದೇಶನ : ಬೆನವಪ್ಪ ಮಾಸ್ತರ ಮೇಟಿ.

ಪಾತ್ರ – ಪರಿಚಯ

ಪುರುಷ ಪಾತ್ರಗಳು

೧. ಅಶ್ವತ್ಥ : ಮನೆ ಒಡೆಯ

೨. ರಾಜು : ಅಶ್ವತ್ಥನ ಹಿರಿಯ ಮಗ

೩. ಅರುಣ : ಅಶ್ವತ್ಥನ ಕಿರಿಯ ಮಗ ; ಡಾಕ್ಟರ್

೪. ಉದಯ : ಡಾಕ್ಟರ್ ; ರಾಜುನ ಗೆಳೆಯ, ಭಾರತಿಯ ಅಣ್ಣ

೫. ಬಾಳು : ವಕೀಲ; ಜಯಾಳ ಅಣ್ಣ

೬. ನರಸಿಂಹ : ಗಾಂಡ್ಣೆಣ್ಣೆ ಮಾರುವ ಸಾಬು; ಕೊನೆಗೆ ರಮಾನ ಗಂಡ. ಹಾಸ್ಯ ಪಾತ್ರ

೭. ಕೇಶವ : ರಮಾನ ಅಳಿಯ ; ಕೊನೆಗೆ ರೇವತಿಯ ಗಂಡ. ಹಾಸ್ಯ ಪಾತ್ರ

೮. ದುರಗ : ಹರಿಜನ ಗೃಹಸ್ಥ.

ಸ್ತ್ರೀ ಪಾತ್ರಗಳು

೯. ಲೀಲಾ : ಅಶ್ವತ್ಥನ ಮಗಳು; ವಿಧವೆ.

೧೦. ಜಯಾ : ಬಾಳೂನ ತಂಗಿ ; ರಾಜೂನ ಹೆಂಡತಿ.

೧೧. ರಮಾ : ಕಾಯಿಪಲ್ಲೆ ಮಾರುವವಳು ; ನರಸಿಂಹನ ಹೆಂಡತಿ. ಹಾಸ್ಯ ಪಾತ್ರ

೧೨. ರೇವತಿ : ರಮಾನ ಮಗಳು ; ಕೇಶವನ ಹೆಂಡತಿ. ಹಾಸ್ಯ ಪಾತ್ರ .

೧೩. ಭಾರತಿ : ಅರುಣನ ಹೆಂಡತಿ

೧೪. ಹನಮಿ : ದುರಗನ ಹೆಂಡತಿ

೧೫. ಇತರೆ : ಪೋಸ್ಟ್‌ಮನ್, ಒಬ್ಬ, ಇಬ್ಬ ಇತರರು.

– ನಾಂದಿ –

ರಾಗ – ಮಿಶ್ರ ಭೂಪ. ತಾಳ – ದಾದರಾ

ನಮೋ ಭಾರತಮಾತೆ । ಭಾರತಮಾತೆ.
ವೀಣಾಪಾಣಿ ಸರಸ್ವತೆ । ಸರಸ್ವತೆ.
ನಮೋ ಸಕಲಸುಖದಾತೆ । ಸುಖದಾತೆ.
ವಿಷ್ಣುಸತೀ ಲಕ್ಷ್ಮೀಮಾತೆSSSSSS ॥
ಸೀತಾ ತಾರಾ ದ್ರೌಪತಿ । ಮಂಡೋದರಿ ಸಾವಿತ್ರಿ
ಪಂಚ ಪತಿವ್ರತೆ । ಪಂಚಪತಿವ್ರತೆ
ಜಗನಾಳ್ವಶಕ್ತಿ । ಜಗದೀಶನ ಸತಿ
ಓ ಮಾತೆ ಪಾರ್ವತೆ । ಓ ಮಾತೆ ಗಿರಿಜಾತೆ ॥೧॥

ರಾಗ – ಬಿಬಾಸ.

ಅರ್ಧನಾರೀಶ್ವರ । ಮದನ ದಹೀಶ್ವರ
ತ್ರಿನೇತ್ರಧಾರಿ ಬಸವೇಶ್ವರ ।
ಕರುಣೆಯ ಬೀರೊ । ಕರಜೋಡಿಸುವೆವು
ಪರಿಹರಿಸಿ ಕಾಯೊ । ಗರತಿಯ ತಾಪವ ॥೨॥

ಜೈ ವೀರನಾರಿಯರೆ । ಜೈ ಕನ್ನಡ ಸ್ತ್ರೀಯರೆ ॥
ಸ್ವಾತಂತ್ರ್ಯ ಕಹಳೆಯ ಊದಿದ ಕಲಿಗಳೆ
ಸ್ವಾತಂತ್ರ್ಯಕಾಗಿ ಮಡಿದ ಹೆಂಗಳೆ
ಸ್ವಾತಂತ್ರ್ಯ ಬೆಳ್ಳಿ ಚುಕ್ಕಿಗಳೆ ॥ ಜೈ....

ಕನ್ನಡಖ್ಯಾತಿ । ಚನ್ನಮ ಕೀರ್ತಿ
ಮಲ್ಲಮ್ಮ ಅಬ್ಬಕ್ಕ ಓಬವ್ವರ ರೀತಿ
ಝಾನ್ಸಿ ಲಕ್ಷ್ಮಿಬಾಯಿಯ ನೀತಿ
ಮೆರೆದಿದೆ ಕನ್ನಡ ಬಾವುಟ ಎತ್ತಿ ॥ ಜೈ.....

ಅಕ್ಕನ ಭಕ್ತಿ ಜ್ಞಾನದ ಜ್ಯೋತಿ
ನಾಗ ನೀಲಾಂಬಿಕೆಯರ ನಡತಿ
ಕೋಳೂರ ಕೊಡಗೂಸಿನ ಶಕ್ತಿ
ಬೆಳಗಿದೆ ಕನ್ನಡ ದೀವಿಗೆ ಎತ್ತಿ ॥ ಜೈ....

ಪ್ರವೇಶ–೧

–ಅಶ್ವತ್ಥರ ಮನೆ–

(ಅಂದು ದೀಪಾವಳಿ. ಲಕ್ಷ್ಮಿಮಾತೆಯ ಭಾವಚಿತ್ರವನ್ನು ಸಿಂಗರಿಸಲಾಗಿದೆ. ಮನೆಯೊಡೆಯ ಅಶ್ವತ್ಥರು ಪ್ರವೇಶಿಸಿ ನೋಡಿ ಕುಳಿತುಕೊಳ್ಳುವರು. ಅವರ ಹಿಂದೆ ರಾಜೂ ಅರುಣರೂ ಪ್ರವೇಶಿಸುವರು. ಅಷ್ಟರಲ್ಲಿಯೇ ಉದಯ ತನ್ನ ತಂಗಿ ಭಾರತಿಯೊಡನೆ ಪ್ರವೇಶಿಸುವನು. ಅಶ್ವತ್ಥರು ಅವರನ್ನು ಸ್ವಾಗತಿಸುತ್ತ).

ಅಶ್ವತ್ಥ– ಬನ್ನಿ ಉದಯ, ತಮ್ಮ ಮಾರ್ಗ ನಿರೀಕ್ಷಣೆಯಲ್ಲಿಯೇ ಇದ್ದೆವು. ಬಾ ಅಮ್ಮಾ ಭಾರತಿ.

ರಾಜು– ಓಹೋ.....ಮಿತ್ರಾ ಬಂದೆಯಾ? ನೋಡು, ಲಕ್ಷ್ಮಿಯ ಕಟಾಕ್ಷ ನಿನ್ನ ಮೇಲೆಯೇ ಬೀಳುತ್ತಿದೆ. ಭಾಗ್ಯಲಕ್ಷ್ಮಿಯನ್ನು ಜೊತೆಯಲ್ಲಿಯೇ ಕರೆದುಕೊಂಡು ಬಂದಿರುವೆ ಇನ್ನೇನು.

ಲೀಲಾ– (ಒಳಗಿನಿಂದ ಕೈಯಲ್ಲಿ ಕಳಸವಿಡಿದು ಪ್ರವೇಶಿಸಿ ಭಾರತಿಯನ್ನು ಸ್ವಾಗತಿಸುತ್ತ) ಭಾರತಿ, ಬಾ ತಂಗಿ.

ಭಾರತಿ– ಬಂದೆ ಅಕ್ಕಾ. (ಹೋಗಿ ಅವಳ ಬಳಿ ನಿಲ್ಲುವಳು. ಈರ್ವರೂ ಬೆರೆತು ಲಕ್ಷ್ಮಿಯನ್ನು ಹೂ ಪತ್ರಿ ಇತ್ಯಾದಿಗಳಿಂದ ಸಿಂಗರಿಸತೊಡಗುವರು. ಒಳಗೆ ಹೋಗಿ ಎಲ್ಲ ಸಾಮಗ್ರಿ ತಂದಿಡುವ ಕಾರ್ಯದಲ್ಲಿ ತೊಡಗುವರು.)

ಅಶ್ವತ್ಥ– ಕುಳಿತುಕೊಳ್ಳಿ. ತಾಂಬೂಲ ಹಾಕಿಕೊಳ್ಳಿ.

ಉದಯ– (ಕುರ್ಚಿಯ ಮೇಲೆ ಕೂಡುತ್ತ) ಮೊದಲು ತಾಯಿಯ ಪೂಜೆ ನೆರವೇರಲಿ. ನಂತರ ಬರಿ ತಾಂಬೂಲವೇಕೆ ಊಟವನ್ನು ಇಲ್ಲಿಯೇ.....

ರಾಜು– ಮುಗಿಸಿ ಬಿಡೋಣವೆಂದು ನಿನ್ನೆಯಿಂದಲೂ ಉಪವಾಸವಿದ್ದಂತೆ ಕಾಣುತ್ತಿದೆ?

ಉದಯ– ಹೌದು ಮತ್ತೆ, ಇಂದು ನಿಮ್ಮ ಮನೆಯಲ್ಲಿ ಸಿಹಿಂಯೂಟವಲ್ಲವೆ?

ಅರುಣ– ಯಥೇಶ್ಚವಾಗಿ ಕಂಠದವರೆಗೆ ತೆಗೆದುಕೊಳ್ಳುವಿರಂತೆ (ಎಲ್ಲರೂ ನಗುವರು).

ಉದಯ– ನಗುವದೇಕೆ? ಊಟಕ್ಕಾಗಿಂಯೇ ಅಲ್ಲವೆ ನಾವೆಲ್ಲ ಹುಟ್ಟಿರುವದು.ಇದ್ದಷ್ಟು ಕಾಲ ಮೃಷ್ಟಾನ್ನ ಭೋಜನ ಹೊಡೆದು, ಎಷ್ಟು ಸಾಧ್ಯವೊ ಅದಕ್ಕೂ ಮೀರಿ ಸುಖೋಪಭೋಗಗಳಲ್ಲಿ ಕಾಲಕಳೆದರೇನೆ ಜೀವನ ಸಾರ್ಥಕಚಾರ್ವಾಕತತ್ವ ನೀವು ಕೇಳಿಲ್ಲವೆ? ಸಾಲಮಾಡಿಯಾದರೂ ತುಪ್ಪ ಕುಡಿಯಬೇಕಂತೆ.

ರಾಜು– ಒಳ್ಳೆಯ ತತ್ವ ಹಿಡಿದು ಸಾಗಿರುವಿಯಲ್ಲ ಮಿತ್ರ, ಪರವಾಯಿಲ್ಲ. ಅಲ್ಲಯ್ಯ, ಬರಿ ನಮ್ಮ ಸುಖವನ್ನೇ ನೋಡಿಕೊಂಡರೆ ಅದರಲ್ಲಿ ಹುರಳಿಲ್ಲ; ಜೀವನದಲ್ಲಿ ನಾವು ಏನನ್ನೂ ಸಾಧಿಸಿದಂತಾಗಲಿಲ್ಲ. ಆದಕಾರಣ ನಮ್ಮಂತೆ ಭಾರತಾಂಬೆಯ ಉದರದಲ್ಲಿ ಜನಿಸಿ ಹೊಟ್ಟೆಗೆ ಹಿಡಿ ಅನ್ನ ಕಾಣದೆ ದೇಹದರಕ್ತ ಹರಿಸುತ್ತ ಪರಿತಪಿಸುತ್ತಿರುವ ದೀನದಲಿತರತ್ತ ಸ್ವಲ್ಪು ದೃಷ್ಟಿ ಹೊರಳಿಸಬೇಕು.

ಉದಯ– ಅದು ಅವರವರು ಪಡೆದು ಬಂದ ಭಾಗ್ಯ. ಅವರವರ ಕರ್ಮಕ್ಕೆ ತಕ್ಕಂತೆ ಪರಮಾತ್ಮ ಫಲವನ್ನೀಯುತ್ತಾನೆ. ನಮಗೊದಗಿದ ಸಿರಿತನದಲ್ಲಿ ನಾವು ಸುಖಪಡುವದು ತಪ್ಪೆ?

ಅಶ್ವತ್ಥ– (ಮಧ್ಯ ಬಾಯಿ ಹಾಕಿ ಚರ್ಚೆ ಮುರಿದು) ಇರಲಿ, ಪೂಜೆ ಮುಗಿದ ನಂತರ ಚರ್ಚಿಸುವಿರಂತೆ. ಅಮ್ಮಾ ಲೀಲಾ, ಭಾರತಿ,, ತಾಯಿ ಲಕ್ಷ್ಮಿಯ ಪೂಜೆ ಮಾಡಿ ಕಳಸ ಬೆಳಗಿರಿ, ಕಾಯಿಕರ್ಪುರವಿಡಿದು ನೈವೇದ್ಯ ಮಾಡಿರಿ. (ಲೀಲಾ–ಭಾರತಿ ಈರ್ವರೂ ಕೂಡಿ ಹಾಡಿ ಕಳಸ ಬೆಳಗುವರು)

ಲೀಲಾ– (ಬೆಳಗಿ) ತಾಯೆ ಸೌಭಾಗ್ಯಲಕ್ಷ್ಮಿ, ಐಶ್ವರ್ಯ ಮಾತೆ, ಅನ್ನದಾತೆ, ಸದಾ ಸರ್ವರ ಮನೆಯಲ್ಲಿ ನೆಲಸಿ ಸುಖ ಶಾಂತಿ ಬೀರಮ್ಮ. ಬಡವ ಬಲ್ಲಿದರೆಂಬ ಭೇದಭಾವ ನಿನ್ನಲೇಕೆ ತಾಯಿ? ಒಬ್ಬರನ್ನು ಕಣ್ಣೀರಿನಲ್ಲಿ ಕೈತೊಳೆಯುವಂತೆ ಮಾಡಿ, ಮತ್ತೊಬ್ಬರನ್ನು ಸದಾ ತುಪ್ಪ ಸಕ್ಕರೆಯಲ್ಲಿ ಮಿಂದು ಸುಖದ ಸುಪ್ಪತ್ತಿಗೆಯ ಮೇಲೆ ಮೆರೆಯುವಂತೆ ಮಾಡಿರುವೆಯೇಕೆ? ಸ್ತ್ರೀ ಸಮಾಜದ ತಾಯಿ ನೀನು. ನಿನ್ನ ಚಂಚಲತ್ವ ತೊರೆದು ಸ್ತ್ರೀಗೆ ಚಂಚಲೆ ಎಂದು ಹತ್ತಿದ ಕಲಂಕವನ್ನು ಅಳಿಸಮ್ಮ.

ಭಾರತಿ– (ಕಳಸ ಬೆಳಗಿ) ತಾಯೆ ಜಗನ್ಮಾತೆ, ಅಕ್ಕನ ಮನೆಯಲ್ಲಿ ಸದಾ ನೆಲಸಿ ಸುಖದಿಂದ ನಲಿದಾಡುವಂತೆ ಮಾಡು.

ಅಶ್ವತ್ಥ– (ಕೈಮುಗಿದು) ತಾಯೆ ಜಗಜ್ಜನನಿ, ಶೋಕ ಪರಿಹಾರಿಣಿ, ಸುಖಸಂಪತ್ತದಾತೆ, ಸದಾ ನಿನ್ನ ಸೇವೆಯಲ್ಲಿಯೇ ಕಾಲಕಳೆಯುತ್ತಿರುವ ಭಕ್ತರ ಬವಣೆಯನ್ನು ಪರಿಹರಿಸಮ್ಮ. (ಉಳಿದವರೆಲ್ಲರೂ ನಮಸ್ಕರಿಸುವರು. ಉದಯ ಮತ್ತೆ ಮಾತಿಗಾರಂಭಿಸುತ್ತಾನೆ).

ಉದಯ– ಮತ್ತೇನು ಯಜಮಾನರೆ ಇಂದು ಲಕ್ಷ್ಮಿ ನಿಮ್ಮ ಮನೆಯಲ್ಲಿ ನರ್ತನಗೈಯ್ಯುತ್ತಿದ್ದಾಳೆ. ರಾಜೂನ ಮದುವೆಯೊಂದನ್ನು ಮಾಡಿ ಭಾಗ್ಯಲಕ್ಷ್ಮಿಯನ್ನು ಮನೆ ತುಂಬಿಸಿಕೊಳ್ಳಬಾರದೇಕೆ?

ಅಶ್ವಥ– ನೀವನ್ನುವ ಮಾತು ನಿಜ. ಆದರೆ ರಾಜೂನ ಒಪ್ಪಿಗೆ ಬೇಕಲ್ಲ. ತನ್ನ ತಂಗಿ ಪತಿಯ ಮನೆಯನ್ನಲಂಕರಿಸಿ, ಅರುಣನ ವಿದ್ಯಾಭ್ಯಾಸ ಪೂರ್ತಿ ಮುಗಿಯುವವರೆಗೆ ಮದುವೆಯ ವಿಷಯವನ್ನೆತ್ತಲು ಅವಕಾಶ ಕೊಡುವದಿಲ್ಲವೆಂದು ಅವನ ಪ್ರತಿಜ್ಞೆ.

ಉದಯ– ಲೀಲಾಳ ಮದುವೆಯನ್ನು ಈಗಾಗಲೇ ಮುಗಿಸಿಯೇ ಬಿಟ್ಟಿರುವಿರಲ್ಲ. ಇನ್ನೇನು ಪತಿಯ ಮನೆಯನ್ನಲಂಕರಿಸುವದಷ್ಟೆ ಬಾಕಿ ಉಳಿದಿರುವ ಕೆಲಸ. ಅರುಣನ ವಿದ್ಯಾಭ್ಯಾಸವಂತೂ ಹೇಗೋ ಸಾಗುತ್ತದೆ. ಅದಕ್ಕೂ ಮದುವೆಗೂ ಏನೂ ಸಂಬಂಧವಿಲ್ಲ.

ರಾಜು– ನನ್ನ ತಂಗಿ ಪತಿಯ ಮನೆ ಸೇರಿ ಅತ್ತೆ ಮಾವ ಪತಿ ಮೈದುನರ ಸೇವೆಯಲ್ಲಿ ಆನಂದದಿಂದ ಸುಖಜೀವನ ಸಾಗಿಸುವದನ್ನು ಕಂಡರೆ ಸಾಕು.

ಉದಯ– ಅದಕ್ಕೇಕೆ ಚಿಂತಿಸುವಿರಿ. ಇಂದಲ್ಲ ನಾಳೆ ಪತಿ ತಾನಾಗಿಯೇ ಬಂದು ಕರೆದೊಯ್ಯುತ್ತಾನೆ. ಇಂಥ ಭಾಗ್ಯಲಕ್ಷ್ಮಿಯನ್ನು ಮನೆ ತುಂಬಿಸಿಕೊಳ್ಳಲು ಯಾರಾದರೂ ಹಿಂಜರಿಯುತ್ತಾರೆಯೆ?

ಅಶ್ವತ್ಥ– ಆ ಮಾತು ನಿಜ. ರಾಜೂ ಒಪ್ಪಿದರೆ ನನ್ನದೇನೂ ಅಭ್ಯಂತರವಿಲ್ಲ.

ಉದಯ– ನಾನು ಒಪ್ಪಿಸುತ್ತೇನೆ. ನನ್ನ ಗೆಳೆಯ ಆಗರ್ಭ ಶ್ರೀಮಂತ ವಕೀಲ. ಮೇಲಾಗಿ ಒಬ್ಬಳೇ ತಂಗಿ, ರಾಣಿಯಂತೆ ಬೆಳೆಸಿದ್ದಾನೆ. ರೂಪ ಗುಣ ಯೌವ್ವನ ಯಾವುದರಲ್ಲಿಯೂ ತೆಗೆಯುವಂತಿಲ್ಲ. ಒಮ್ಮೆ

ನೋಡಿದರೆ ಸಾಕು, ಯಾರಾದರೂ ತಮ್ಮ ಸೊಸೆಯನ್ನಾಗಿ ಮಾಡಿಕೊಳ್ಳಲು ಮನಸ್ಸು ಮಾಡುತ್ತಾರೆ. ರಾಜು ನೋಡಿದರಂತೂ ತೀರಿತು, ಒಮ್ಮೆಲೆ ಅವಳ ರೂಪಕ್ಕೆ ಮಾರು ಹೋಗುವದರಲ್ಲಿ ಸಂದೇಹವೇ ಇಲ್ಲ.

ರಾಜು– ಇರಲಿ, ಲೀಲಾ ಪ್ರಸಾದ ಕೊಡಮ್ಮ, ಸುಮ್ಮನೆ ಇವರದೇನು ಕೇಳುತ್ತಿ ತಲೆಹರಟೆ.

ಲೀಲಾ– ಅವರು ಹೇಳುತ್ತಿರುವ ಮಾತು ನಿಜವಣ್ಣ. ನೀನು ಬೇಗ ಮದುವೆಯಾಗಿ ನನಗೊಬ್ಬ ಅತ್ತಿಗೆಯನ್ನು ತಂದುಕೊಡುವದು ನ್ಯಾಯವಲ್ಲವೆ? ನಾನು ಇನ್ನೆಷ್ಟು ದಿವಸ ಇಲ್ಲಿರಲಾಗುತ್ತಿದೆ ಹೇಳು. ಇಂದೊ ನಾಳೆಯೋ ನನ್ನ ದೇವರ ಮನೆ ಸೇರುವವಳು. ಆಗ ಮುಂಜಾನೆಯಿಂದ ಸಂಜೆಯವರೆಗೆ ಆಫೀಸಿನಲ್ಲಿ ದುಡಿದು ಬೇಸತ್ತು ಬಂದ ನಿನ್ನ ಮನಕ್ಕೆ ತಂಪನ್ನೀಯುವವರಾರು? ನಿನ್ನ ಊಟೋಪಚಾರ ತಂದೆ ತಮ್ಮರ ಸುಖ ದುಃಖ ವಿಚಾರಿಸುವರಾರು? ಮನೆಗೊಂದು ಹೆಣ್ಣು ಇದ್ದರೆ ಮಾತ್ರ ಅಂದ, ಬರಿಗಂಡಸರಿದ್ದ ಮನೆ ಶೋಭಿಸದಣ್ಣ.

ಅಶ್ವತ್ಥ– ಈಗಂತೂ ಪ್ರಸಾದ ಹಂಚಿ ಊಟಕ್ಕೆ ಸಿದ್ಧಗೊಳಿಸಮ್ಮ, ನಂತರ ವಿಚಾರಿಸೋಣ.

ರಾಜು– ಹೌದಮ್ಮ, ನಿನ್ನೆಯಿಂದಲೇ ಉಪವಾಸವಂತೆ ಈ ಮಹಾಶಯ, ಬೇಗ ಎಲೆ ಹಾಕು ನಡೆ.

ಲೀಲಾ– (ಕಳಸತೆಗೆದುಕೊಂಡು) ಬನ್ನಿ, ಈಗಲೇ ಬಡಿಸುವೆ (ಹೋಗುವಷ್ಟರಲ್ಲಿಯೇ ಪೋಷ್ಟಮನ್).

ಪೋಷ್ಟಮನ್– (ಪ್ರವೇಶಿಸಿ) ಸರ್, ತಮ್ಮದೊಂದು ತಾರು ಬಂದಿದೆ. (ಅಷ್ಟಕ್ಕೆ ಎಲ್ಲರೂ ನಿಂತುಕೊಳ್ಳುವರು. ಪೋಷ್ಟಮನ್ ಹೋಗುವನು)

ರಾಜು– (ಕವರ ಒಡೆದು ನೋಡುವನು. ಮುಖ ಒಮ್ಮೆಲೆ ವಿಕಾರಗೊಳ್ಳುವದು. ಚೀರುವನು) ಅಯ್ಯೋ.....ತಂಗೀ.....ತಂಗೀ.....

ಅಶ್ವತ್ಥ– ಏಕೆ ಏನಾಯಿತು ರಾಜು? ಎಲ್ಲಿಂದ ಬಂದಿದೆ, ಏನೆಂದು ಬರೆದಿದೆ?

ರಾಜು– ಏನೆಂದು ಹೇಳಲಪ್ಪಾ.....

ಲೀಲಾ– ಏನಾಯಿತು ಬೇಗ ಹೇಳಣ್ಣ.....

ಅರುಣ– ಒಡೆದು ಹೇಳದಿದ್ದರೆ ನಮಗ್ಹೇಗೆ ಅರ್ಥವಾಗಬೇಕು, ಹೇಳಣ್ಣ ಏನಾಯಿತು.

ಉದಯ– ಹೇಳು ಮಿತ್ರ.

ರಾಜು– ತಂಗಿಯ ಮಾಂಗಲ್ಯ ಇಂದು ಒಡೆಯಿತಪ್ಪ (ಲೀಲಾಳ ಕೈಯಲ್ಲಿಯ ಕಳಸ ಕೆಳಗೆ ಬೀಳುವದು). ತಂಗೀ ನಿನ್ನ ಕರೆಯಲೆಂದು ಬರುತ್ತಿದ್ದ ನಿನ್ನ ಪತಿ ಗಾಡಿ ಎಕ್ಸಿಡೆಂಟಾಗಿ ಮಡಿದನಂತಮ್ಮಾ.

ಲೀಲಾ– ಅಯ್ಯೋ ಸ್ವಾಮಿ....ಸ್ವಾಮಿ....(ಮೂರ್ಛೆಹೋಗಿ ನೆಲಕ್ಕುರುಳುವಳು).

ಅಶ್ವತ್ಥ– ಅಯ್ಯೋ ವಿಧಿಯೇ! ಲೀಲಾ ಮಗಳೇ..... (ನೆಲಕ್ಕೆ ಕುಸಿಯುವನು)

ರಾಜು– ವಿಧಿಯೇ, ಮದುವೆಯಾಗಿ ಅತ್ತೆಯಮನೆ ಸೇರಿಸಿ ಒಂದುದಿನವಾದರೂ ಪತಿಯೊಡನೆ ನಾಲ್ಕು ನಲ್ನುಡಿಗಳನ್ನಾಡಿಸದೆ ತಂಗಿಯ ಬಾಳ ಬಳ್ಳಿಯನ್ನು ನಿನ್ನ ಕರಾಳ ಕೈಯಿಂದ ಚಿವುಟಿ ನನ್ನ ಆಶಾಗೋಪುರಕ್ಕೆ ಸಿಡಿಲೆರಗಿಸಿ ಹುಡಿಗೊಳಿಸಿದೆಯಾ.

ಅಶ್ವತ್ಥ– (ಮೆಲ್ಲನೆ ಎದ್ದು) ಈಗತಾನೆ ಮೊಳಕೆಯೊಡೆದು ನಿಂತು ಬೆಳೆದು ಚಿಗಿತು ಪುಷ್ಪ ಫಲಗಳನ್ನು ಹೊತ್ತು ಕಂಗೊಳಿಸುವ ಮುನ್ನವೆ ಮಗಳ ಬಾಳ ಬಳ್ಳಿಯ ತಾಯ್ಬೇರನ್ನೇ ಕತ್ತರಿಸಿ ಬಾಳನೌಕೆಯನ್ನು ನಡುನೀರಿನಲ್ಲಿ ಮುಳುಗಿಸಿ ಕಣ್ಣೀರೆ ಜೀವನಾಂತ್ಯದವರೆಗೆ ನಿನ್ನ ಸೊತ್ತಾಗಿರಲೆಂದು ಮಗಳ ಮಾಂಗಲ್ಯ ಕಸಿದುಕೊಂಡು ಅಮಂಗಲ ಮುಖದಿಂದ ಜೀವವಿದ್ದೂ ಹೆಣದಂತೆ ಬಾಳುವ ಗತಿ ತಂದೆಯಾ ದುರ್ದೈವವೆ. ನಾನಿನ್ನೆಂತು ಮಗಳ ಕಳಾಹೀನ ಮುಖವನ್ನು ನೋಡಲಿ.

ಅರುಣ– ನನ್ನಕ್ಕ ಯಾವುದನ್ನೂ ಕಾಣಲಿಲ್ಲ. ಪತಿಯ ಬೆರೆತು, ತವರೂರ ಮರೆತು, ಅಳಿಯನನ್ನು ಹೆತ್ತು ತಾಯಾಗಿ, ಸೊಸೆಯಾಗಿ ಅತ್ತೆಯಾಗಿ ಸುಗುಣ ಶೀಲವತಿ ಪತಿವ್ರತಾ ಶಿರೋಮಣಿಯಾಗಿ, ಇತ್ತಮನೆ ಹೆತ್ತ ಮನೆಗಳೆರಡನ್ನು ಬೆಳಗಬೇಕಾಗಿದ್ದ ಅಕ್ಕನ ಬಾಳು ಇಂದು ಬರುಡು ಕೊರಡು, ಫಲಕೊಡದ ಮರ, ಸಜೀವ ಹೆಣವಾಯಿತೆ?

ಲೀಲಾ– (ಎಚ್ಚತ್ತು) ಅಪ್ಪಾ....ಅಣ್ಣಾ.... ನನ್ನದೇವರಲ್ಲಿ ಕಳಿಸಿರಪ್ಪ ನನ್ನ. ನನ್ನ ಪತಿ ಪಾದಸೇವಗೆ ಕಳಿಸಿಕೊಡದೆ ಇಲ್ಲಿಯೇ ಇಟ್ಟುಕೊಳ್ಳುವಿರೇನಪ್ಪ; ಏಕಪ್ಪ ಸುಮ್ಮನೆ ನಿಂತಿರುವಿರಿ.

ಅಶ್ವತ್ಥ– (ಕಣ್ಣೀರು ಸುರಿಸುತ್ತ) ಮಗಳೆ, ಇನ್ನೆಲ್ಲಿ ಪತಿಯಮನೆ. ಇನ್ನೆಲ್ಲಿ ನಿನ್ನ ದೇವರ ಸೇವೆ. ನಿನ್ನ ಸುಂದರ ಸಂಸಾರ ಕಂಡು ಆನಂದ ಪಡುವ ಭಾಗ್ಯವನ್ನು ಈ ಪಾಪಿ ಕಣ್ಣುಗಳು ಪಡೆದುಬರಲಿಲ್ಲವಮ್ಮ, ಪಡೆದುಬರಲಿಲ್ಲ.

ಲೀಲಾ– ಅಯ್ಯೋ ಸ್ವಾಮಿ, ಕುಂಕುಮದೊಡೆಯ ಮಾಂಗಲ್ಯದಾತಾ, ಮೂಗುತಿ ನಾಥಾ ನಿಮ್ಮ ಪಾದಸೇವೆಗೆ ಈ ಪಾಪಿ ಯೋಗ್ಯಳಲ್ಲವೆಂದು ದೂರಾದಿರಾ ? (ಅಳುತ್ತ ಕುಂಕುಮ ಒರೆಸಿಕೊಂಡು) ಇನ್ನೇಕೆ ಈ ಕುಂಕುಮ ತಿಲಕ, ಇನ್ನೇಕೆ ಮುತ್ತಿನ ಮೂಗುತಿ, ಕೈಗೆ ಬಳೆ, ಮುಡಿಗೆ ಮಲ್ಲಿಗೆ, ಇನ್ನೇಕೆ ಕೊರಳಿಗೆ ರತ್ನಮಾಂಗಲ್ಯ. (ಹರಿದು ಎಲ್ಲವನ್ನೂ ಕೈಯಲ್ಲಿ ಹಿಡಿದುಕೊಂಡು) ಸ್ವಾಮಿ ಇಂದಿಗೆ ಇವೆಲ್ಲ ನನ್ನ ಸೊತ್ತಲ್ಲ. ಇವುಗಳನ್ನು ಧರಿಸಲು ನೀನು ಅರ್ಹಳಲ್ಲ, ಮುತ್ತೈದೆತನ ನಿನಗೆ ಸಲ್ಲದೆಂದು ಕಸಿದುಕೊಂಡೆಯಾ ಪರಮಾತ್ಮಾ.

ಅಶ್ವತ್ಥ– ಮಗಳೆ, ಹೇಗೆ ನೋಡಲಿ ನಿನ್ನೀ ಕಳಾಹೀನ ಮುಖವನ್ನು. ಇಂಥ ದೃಶ್ಯವನ್ನು ನೋಡುವದಕ್ಕಿಂತ ನನ್ನ ಕಣ್ಣುಗಳು ಹುಗಿದುಹೋಗಬಾರದಿತ್ತೆ. ವಿಧಿಯೆ, ಮಂಗಲಮಯ ಸಮಯವನ್ನು ಅಮಂಗಲಗೊಳಿಸಿ ಮಗಳು ಆಜನ್ಮ ವಿಧವೆಯಾಗಿ ಕಣ್ಣೀರನ್ನೇ ಕುಡಿದು ದುಃಖದಾವಾನಲವನ್ನೇ ಉಂಡು ಕಷ್ಟದಲ್ಲಿ ಕಾಲಕಳೆಯುವಂತೆ ಮಾಡಿದೆಯಾ. ಅಮ್ಮ ಲಕ್ಷ್ಮೀ, ನಿನ್ನ ಭಕ್ತಳ ಈ ಸ್ಥಿತಿ ಕಂಡು ನಿನಗೆ ತೃಪ್ತಿಯೇ ತಾಯಿ ?.

ಉದಯ– ಸ್ಥೈರಿಸಿ ಯಜಮಾನರೆ, ವಿಧಿಯ ಕೈವಾಡದ ಮುಂದೆ ನಾವೆಲ್ಲ ದಾಸರು.

ಲೀಲಾ– ಅಪ್ಪಾ....ಅಣ್ಣಾ.... ನಾನಿನ್ನು ಬದುಕಲಾರೆ. ನನ್ನ ದೇವರೇ ನನ್ನನ್ನು ಕೈಬಿಟ್ಟು ಹೋದಾಗ ಈ ಭೂಮಿಯ ಮೇಲೆ ನನಗಿನ್ನಾವ ಸ್ಥಾನವುಂಟಪ್ಪ ? ನನಗಿನ್ನಾರ ಆಶ್ರಯ ಉಂಟಣ್ಣ, ನಾನು ಪರದೇಶಿ, ಎಷ್ಟು ಐಶ್ವರ್ಯವಿದ್ದರೇನು, ತಂದೆ ತಾಯಿ ಬಂಧು ಬಳಗವಿದ್ದರೇನು ಸತಿಗೆ ಪತಿಯ ಸಮಾನ ಈ ಲೋಕದಲ್ಲಿ ಮತ್ತಾರೂ ಆಗಲಾರರಪ್ಪ ಮತ್ತಾರೂ ಆಗಲಾರರು. ಸ್ವಾಮಿ.....ಸ್ವಾಮಿ..... ಬಂದೆ ನಿಮ್ಮೆಡೆಗೆ, ಈಗಲೇ ಬಂದೆ.

ರಾಜು— (ಓಡಹತ್ತುವಳು, ತಡೆದು) ತಂಗೀ, ನಿನ್ನಣ್ಣನ ಬಾಳು ಬರಿದು ಮಾಡಿ ಹೋಗುವಿಯೇನಮ್ಮ ? ಮನೆಯ ಮಂಗಳ ಗೌರಿ ಮನೆಯದೀಪ ಆರಿಸಿ, ಅಂಧಕಾರದಿ ಮುಳುಗಿಸಿ ಹೋಗುವೆಯಾ ತಾಯಿ? ಬೇಡಮ್ಮಾ ಲೀಲಾ, ನೀನು ನನ್ನ ತಂಗಿಯಲ್ಲ, ಇಂದಿನಿಂದ ನನ್ನ ತಾಯಿ. ಈ ಮನೆಯೊಡತಿ. ಜೀವನಾಂತ್ಯದವರೆಗೆ ನಿನ್ನ ಕಾಪಾಡುವ ಭಾರವಿನ್ನು ನನ್ನದಮ್ಮ, ನನ್ನದು.

ಲೀಲಾ— ಅಣ್ಣಾ ಅಣ್ಣಾ.....

ರಾಜು— ತಂಗೀ....ತಂಗೀ....(ಅಪ್ಪಿಕೊಳ್ಳುವರು)

ಉದಯ— ಸಮಾಧಾನ ತಾಳು ಮಿತ್ರ, ಎಲ್ಲವೂ ದೈವಲೀಲೆ. ವಿಧಿಯ ಕರಾಳ ಲೇಖನಿಯಿಂದ ಬರೆದ ಬರಹ. ನಾನಿನ್ನು ಬರುತ್ತೇನೆ. ಬಾ ಅಮ್ಮಾ ಭಾರತಿ. (ಹೋಗುತ್ತಲೆ ದುಃಖ ಉಕ್ಕಿ ಬಂದು ಭಾರತಿ.)

ಭಾರತಿ— ಅಕ್ಕಾ.....ಅಕ್ಕಾ.....

ಲೀಲಾ— ತಂಗಿ.... ತಂಗಿ....(ಅಪ್ಪಿಕೊಳ್ಳುವರು)

—ತೆರೆ—

===**=====**===

ಪ್ರವೇಶ – ೨

–ರಸ್ತಾ–

(ನರಸಿಂಹ ಗಾಂದೇಣ್ಣಿ ಬಾಟ್ಲಿ ತುಂಬಿದ ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದುಕೊಂಡು, ಹೆಗಲಿಗೆ ಉದಿನಕಡ್ಡಿ ಸಿವುಡು ತುಂಬಿದ ಚೀಲವನ್ನು ಹಾಕಿಕೊಂಡು ಹಾಡುತ್ತ ಪ್ರವೇಶಿಸುತ್ತಾನೆ.)

॥ಪದ॥ ಗಮಗಮ ಗಮಗಮ ಗಾಂದೇಣ್ಣಿ.....

ನರಸಿಂಹ– ಗಮಗಮ ಗಮಗಮ ಗಾಂದೇಣ್ಣಿ, ಅತ್ತರ, ಕೇದಿಗಿ, ದರ್ಬಾರ, ಮಲ್ಲಿಗಿ, ಕೇದಿಗಿ, ದರ್ಬಾರ, ಮಲ್ಲಿಗಿ, ಕೇಸರಿ ಹಚಿಗೊಂಡ್ರ ಹತ್ತಮ್ಯೆಲಿತನ ಗಮಗಮ. ಮನ್ಯಾಗಿಟ್ರ ಮನಿಯೆಲ್ಲ ಗಮಗಮ. ಅಗದೀ ಅಗದೀ ಕಡ್ಮಿರೇಟ, ಚೀಪರೇಟ. ಎಂಟಣೇದಿಂದ ಹತ್ತ ರೂಪಾಯ್ದತನಕ. ಸೈಜಿನ ಮ್ಯಾಗ, ಎಣ್ಣೆ ನಾತದ ಮ್ಯಾಗ, ಮನಿಷ್ಯಾರ ಮ್ಯಾಗ ನೋಡಿ ನೋಡಿ ಕೊಡತೀನಿ. ಕೈಗೆ ಹಚಿಗೊಂಡು, ಕಿವ್ಯಾಗ ಇಟಗೊಂಡ, ಮೂಸಿನೋಡಿ ಖಾತ್ರಿಮಾಡಿಕೊಂಡು ತೊಗೋಬಹುದು. ಹಲ್ಕಾ ಮಾಲಲ್ಲಾ. ನೂರುವರ್ಷ ಇಟ್ರೂ ನಾರೂದು ಬಿಡುದಿಲ್ಲ. ಒಮ್ಮೆ ಹಚ್ಚಿದ್ರ ಅಂಗಿ ಹರಿಯೂತನಾ ನಾತ ಹೋಗೂದಿಲ್ಲ. ಯಾವಾಗ್ಲೂ ಮೂಗ ಗಮಗಮ. ನೆಗಡಿಹಾದ್ರೂ ಗಮಗಮ, ಮೂಗ ಬಂದಾದ್ರೂ ಗಮಗಮ, ತೆರದ್ರೂ ಗಮಗಮ. ಒಮ್ಮಿ ತೊಗೊಂಡ ಖಾತ್ರಿ ಮಾಡಿಕೊಳ್ರಿ, ಮೋತಿನೋಡಿ ಎಣ್ಣಿ ಕೊಡತೀನಿ. ಈಗ ಕೈಯಾಗ ರೊಕ್ಕ ಇರದಿದ್ರ ಹುದ್ರಿ ನೋಡಿ ಉದ್ರೀನೂ ಕೊಡತೀನಿ. ಸಂಕೋಚ ಬ್ಯಾಡ, ನಾಚೂದ್ಯಾಕ ? ಹೆಂಗ್ಸರೂ ಗಂಡ್ಸರೂ ಎರಡೂ ಜಾತ್ಯಾರು ಹಚ್ಚಬಹುದು. ಹೆಣಮಕ್ಕಳಿಗೆ ಬೇಕಾದ್ರ ಇಸ್ಪೆಷಲ್ ಎಣ್ಣಿ, ಎಲ್ಲಿ ಬೇಕಾದಲ್ಲಿ ಕೊಡತೀನಿ. ಕಳವಿಲ್ಲೆ ಗಂಡನ್ನ ಮರಿಮಾಡಿ ತೊಗೊಳ್ಳಾರಿದ್ರ ಅಂಥವ್ರಿಗೂ ಟೈಮನೋಡಿ ಸ್ವಲ್ಪ ಕಣ್ಣ ಹೊಡದ್ರ ಸಾಕು ಗಪ್ಪನ ಎಣ್ಣಿ ಹಚ್ಚಿ ಬೆಣ್ಣಿಬಾವುಗನಾಂಗ ಸದ್ದಿಲ್ದ ಇಲಿ

ಹಿಡಕೊಂಡ ಹೋಗತೀನಿ. ನೋಡ್ರಿ, ವಿಚಾರಮಾಡ್ರಿ, ನಿಮ್ಮ ನಿಮ್ಮ ಯೋಗ್ಯತಾ ನೋಡಿ ಎಣ್ಣಿರೇಟ ಹೆಚ್ಚುಕಡ್ಮಿ ಮಾಡತೀನಿ. ನಮ್ಮಲ್ಲಿ ಫಿಕ್ಸರೇಟೇನಿಲ್ಲ. ಎಣ್ಣಿ ಮಾತ್ರ ಹಲ್ಕಾ ಅಲ್ಲ. ಬರ್ರಿ ಬರ್ರಿ ಗಾಂದೆಣ್ಣಿ, ವಾಸನೀ ಊದಿನಕಡ್ಡಿ, ಸವರನ್, ದರಬಾರ, ಹತ್ತಿಕಟಿಗಿ, ಬತ್ತಿಕಟಿಗಿ, ಎಂಥಾ ಮಾಲಬೇಕ ಅಂಥಾದ್ದ. ಬರ್ರಿ ಬರ್ರಿ ಶ್ಯಾಂಪಲ್ ನೋಡ ಬರ್ರಿ.....

(ಒಂದಿಬ್ಬರು ಹುಂಬರು ಬಂದು)

ಒಬ್ಬ– ಒಂದಗುಳ್ಳಿ ತರ್ರೀ ಸಾಬ್ರ, ಹ್ಯಾಂಗೈತಿ ನೋಡಾನ ನಾತ.

ನರಸಿಂಹ– ತಗೋಳ್ರಿ.... ತಗೋಳ್ರಿ, ಚೊಲೋತ್ನಾಗ ಮೂಸಿನೋಡ್ರಿ (ಕೊಟ್ಟು ಎದಿಗೆ ತಿಕ್ಕುತ್ತ) ಗಮಗಮ ಇದು ದರಬಾರ್ ರಾಜಮಹಾರಾಜ್ರು ಹಚ್ಚಾದು. ಇದು ಮಲ್ಲಿಗಿ. ಮಲ್ಲಿಗಿ ಹೂವಿನಿಂದ ತೈಯಾರ ಮಾಡಿದ್ದು. ಇದು ಕ್ಯಾದಿಗಿಯಿಂದ ತಯಾರಿಸಿದ್ದು.

ಮತ್ತೊಬ್ಬ– ಈ ಊದಿನಕಡ್ಡಿ ತಗೀರಿ ಸಾಬ್ರ, ದಪ್ಪನವು ಹ್ಯಾಂಗಿವು?

ನರಸಿಂಹ– ಇದು ತೊಗೊಳ್ರಿ, ಭಾರೀವಾಸನಿ ಐತಿ. ಹಚ್ಚಿಬಿಟ್ರ ಕನಿಷ್ಟ ಕಡ್ಮಿ ಕಡ್ಮಿ ಅಂದ್ರ ಕಂಡಾಪಟಿತಾಸ ಉರಿಯಿತ್ತ.

ಒಬ್ಬ– ನೀರಾಗೆದ್ದಿ ಹಚ್ಚಬೇಕನ್ರಿ ಇದನ್ನ?

ಮತ್ತೊಬ್ಬ– ಎಷ್ಟರಿ ರೊಕ್ಕ ಇದಕ?

ನರಸಿಂಹ– ಸಾಡೇ ಏಕರೂಪಿಯಾ.

ಒಬ್ಬ– ಕನ್ನಡದಾಗ ಹೇಳೋ ಮಾರಾಯ ನಮ್ಗ ತಿಳಿಯಾದಿಲ್ಲ.

ನರಸಿಂಹ– ಒಂದು ರೂಪಾಯಿ ಐವತ್ತ ಪೈಸೆ, ತಿಳಿತಾ,? ದೀಡರೂಪಾಯಿ. ನಿಮ್ಗ ಬೇಕನ್ರಿ ಗಾಂದೆಣ್ಣಿ.

ಮತ್ತೊಬ್ಬ– ಹಿಡಕೊಳ್ರಿ ಇಲ್ಲಿ, ನನ್ನ ಹೇಣ್ತಿಕೇಳಿ ರೊಕ್ಕಾ ಇಸಗೊಂಡ ಬರ್ತೀನಿ. (ಓಡುವನು)

ನರಸಿಂಹ– ಹಿ....ಹಿ....ಹಿ..... ಹೇಣ್ತೀ ಕೇಳಿ ಬರ್ತಿಯಾ, ಅವ್ರ ಏನ ಮನಿ ಮಾಲಕ್ರು, ಹೋಗ ಹೋಗ, ಈಗಿನ ಗಂಡ್ಸರೆಲ್ಲ ಹೀಂಗ, ಹೇಣ್ತಿ ದಾಸರು. ನಿಮಗನ್ನಾದರ ಏನು, ಈಗ ರಾಜಕೀನ ಹೆಣ್ಣಿಂದು, ಆ

ಹೆಣ್ಣು ಇಂದ್ರವ್ವನ ವರ್ಚಸ್ಸಿನಾಗ ಮನಿಗಂಡ್ರನ್ನೆಲ್ಲಾ ಹೆಂಡ್ರ ಆಳಾಕ ಹತ್ಯಾರ. ನೀನರ ಏನ ಮಾಡಿ ಪಾಪ ಹೋಗ ಹೋಗು ಕೇಳಿ ಬಾ. ಹೂಂ ನಿಮ್ಮದೇನ್ರಿ, ನೀವ್ಯಾರ್ನ ಕೇಳಿ ಬರ್ತೀರಿ ?

ಒಬ್ಬ– ನಮ್ಮತ್ತಿ ಕೇಳಿ ಬರ್ತೀನಿ ತಡ್ರಿ, ದೇವ್ರಗೆ ಹಚ್ಚಾಕ ಬೇಕಂದಿದ್ಲು. (ಹೋಗುವನು).

ನರಸಿಂಹ– ಹೋಗ ಹೋಗು. ನೋಡ್ರಿ ಒಟ್ಟಿನ ಮ್ಯಾಲೆ ಈಗ ಗಂಡ್ಸರಿಗೆ ಸ್ವಾತಂತ್ರನ ಇಲ್ಲಾ. ಎಲ್ಲಾರೂ ಹೆಣ್ಣಿನ ಕೈಯಾಗ ಸಿಕ್ಕು ಒದ್ದ್ಯಾಡಾಕ ಹತ್ತ್ಯಾರ. ಈಗ ಹೆಣ್ಣು ಮಾಯಿ ಗಂಡ ನಾಯಿ. ಅದು ಮುಂದ ಮುಂದ, ಇದು ಹಿಂದ ಹಿಂದ. (ಅತ್ತಿತ್ತ ನೋಡಿ) ಎರಡೂ ಕಾಲೀ ಸೀಟ್ಸ, ಬರೆ ಸ್ಯಾಂಪಲ್ ನೋಡಿ ಓಡಿಹೋದರು ಗಾಂಪರು. ಥೂ ಏ ಕ್ಯಾ ಸೈತಾನ, ದಿನ್ ಹೈ. ಒಂದಾದ್ರೂ ರೋಕಡಿ ಗಿರಾಕಿ ಹತ್ತಲಿಲ್ಲ. ಬೋಣಗಿ ಸಹಿತಾ ನಹೀಹೋಗಾ. ಮುಂಜಾನೆದ್ದು ಯಾರ ಮುಖಾನೋಡಿದ್ನ್ಯೋ ಏನೋ? ಕ್ಯಾಕರೆ? (ವಿಚಾರಿಸಿ) ಮುಂದ ಹೋದರಾಯ್ತು, ಯಾವದಾದ್ರೂ ಗಿರಾಕಿ ಹೆಣ್ಣಾಗ್ಲಿ ಗಂಡಾಗ್ಲಿ ಸಿಗಬಹುದು. ಗಂಡಸರಂತೂ ತೊಗೊಳ್ಳಾಂಗ ಕಾಣೂದಿಲ್ಲ. ಈ ಊರಾಗ ಎಲ್ಲಿದ್ರ ತೊಗೋವೇಕು ಹೇಣ್ತಿಗಂಜು ಪುಕ್ಕರು. ನೋಡಾನ, ಹೆಣ್ಣಬ್ಯಾಟೀನ ಹಿಡಿಯಾನ, ಅಂದ್ರ ಅದ್ರಕಣ್ಣಾಗ ಮಣ್ಣುಗ್ಗಿ ಎಣ್ಣಿ ಮೂಸಿನೋಡ್ಯಾಕ ಬರತ್ತ (ಮುಂದೆ ಸಾಗುತ್ತಲೆ ರೇವತಿ ಧ್ವನಿ – 'ಬದ್ನಿಕಾಯಿ, ಬೆಂಡಿಕಾಯಿ, ಸವತಿಕಾಯಿ, ಗೆಣಸು, ಉಳ್ಳಾಗಡ್ಡಿ, ಗಜ್ಜರಿ, ಕಾಯಿಪಲ್ಲೆ, ಹಣ್ಣು ಹಂಪಲ, ಬರ್ರಿ ಬರ್ರಿ ಬಸವಣ್ಣನ ಗುಡಿ ಕಟ್ಟಿಗೆ ಹಚ್ಚೇನಿ, ದೌಡ ದೌಡ ಬರ್ರಿ ಎಲ್ಲಾ ಕಲಾಸ ಆಗತಾವ.' ಇದನ್ನು ಕೇಳಿ ಕಿವಿ ನಿಗರಿಸಿ) ಹೆಣ್ಣಿನ ಧ್ವನಿ. ನನ್ನಂಗ ಅದೂ ವ್ಯಾಪಾರಿ ಅಸಾಮಿ. ಬರ್ಲಿ ಬರ್ಲಿ, ಮಾತಾಡ್ಸಿ ಕೇಳತೀನಿ ಎಣ್ಣಿ ತೊಗೊಂತಿಯೇನ ಅಂತ. ಯಾಕಂದ್ರ ರೊಕ್ಕ ಆಕಿ ಹತ್ರ ರಗಡ ಇರತಾವ. (ಕಣ್ಣಿಗೆ ಕೈಹಚ್ಚಿ ನೋಡಿ) ಓಹೋ ಇನ್ನೂ ಚೋಟಾ ಲಡಕಿ. ಔರತ್ ಆಗಲಿಕ್ಕೆ ಇನ್ನೂ ಸ್ವಲ್ಪೇ ದಿವಸ. ಅಂತೂ ಒಳ್ಳೆ ಗಿರಾಕಿ ಸಿಕ್ಕಿತು. ರೊಕ್ಕಾ ಕೊಡಲಿಕ್ಕ ಕೊಡಲಿಲ್ಲ, ಕಾಯಿಪಲ್ಲೆ ಕೊಡ್ಲಿ, ಹಣ್ಣ ಕೊಡ್ಲಿ, ಕಡಿಗೆ ತನ್ನ ಹತ್ರ ಇದ್ದದ್ದ ಕೊಡ್ಲಿ ನನಗೇನ ಲುಕ್ಸಾನಿ. ಬರ್ರಿ ಬರ್ರಿ ಗಾಂದೆಣ್ಣಿ, ಅತ್ತರ, ಊದಿನಕಡ್ಡಿ.

ರೇವತಿ– ಬರ್ರಿ ಬರ್ರಿ ಕಾಯಿಪಲ್ಲೆ, ತಾಜಾ ತಾಜಾ ಹಣ್ಣು ಬಾಳ ಸಿಹಿ ಬರ್ರಿ,

(ಈರ್ವರೂ ಡಿಕ್ಕಿ ಹೊಡೆಯುವರು. ಬುಟ್ಟಿ ಕೆಳಗೆ ಬಿದ್ದು ಕಾಯಿಪಲ್ಲೆ, ಸಾಬನ ಊದಿನಕಡ್ಡಿ ಗಾಂದೆಣ್ಣೆ ಎಲ್ಲವೂ ಚೆಲ್ಲುವವು. ರೇವತಿ ಸಿಟ್ಟಿನಿಂದ ಎದ್ದು) ಯಾವನಲಾ ನೀನು ಭಾಡ್ಯಾ, ನನ್ನ ಹಣ್ಣು ಕಾಯಿಪಲ್ಲೆ ಎಲ್ಲಾ ಮಣ್ಣುಪಾಲ ಮಾಡಿಟ್ಟಿ. ಬಾ ಅಲ್ಲೆ ಗೌಡ್ರ ಮನಿಗೆ ಹೋಗಾನ, ಹಾದ್ಯಾಗ ಮಂದಿ ಮಕ್ಕ ನೋಡ್ಕ ಹಾಯಾಕ ಕಣ್ಣ ನೆತ್ತಿ ಮ್ಯಾಗ ಬಂದಾವ ಕಾಣತ್ತ.

ನರಸಿಂಹ— (ಸಿಟ್ಟಿನಿಂದ) ಏ ಬಾಯಿ ಬಿಗಿಹಿಡ್ಡ ಮಾತಾಡಕೀತು. ನನ್ನ್ಯಾರಂತ ತಿಳಿದೀ. ನೀನಽ ಬಂದು ನನ್ಗ ಡಿಕ್ಕಿ ಕರಕರ್ ನನ್ಗ ಟೆಬರ್ ಮಾಡತೀದ್ಯಾ? ನೋಡಿಲ್ಲೆ, ನನ್ನ ಎಣ್ಣೆ ಊದಿನಕಡ್ಡಿ ಎಲ್ಲಾ ಚೆಲ್ಲಿ ಹಜಾರ ರುಪಯಾ ಲಾಸ್ ಹೋಗಯಾ. ನಡಿ ಗೌಡ್ರ ಮನಿಗೆ, ಪಂಚನಾಮೆ ಮಾಡ್ಸಿ ಕೇಸ ಹಾಕಸ್ತೀನಿ. ಹೊತಗೋ ಪುಟ್ಟೀ.....

ರೇವತಿ— (ಹೆದರಿ) ಇಲ್ರಿ.... ಸಾಬ್ರ, ನೋಡದ ಅವ್ಸರದಾಗ ಬಂದ ಹಾದ್ಯಾ ಮಾಫಿಮಾಡ್ರಿ

ನರಸಿಂಹ— ಇಲ್ಲ..... ನಾ ದಾವಾ ಹಾಕಾವನೇ.

ರೇವತಿ— (ದೈನ್ಯದಿಂದ) ಬ್ಯಾಡ್ರಿ ಹಾಂಗ ಮಾಡಬ್ಯಾಡ್ರಿ ನಿಮ್ಗ ಪುಣ್ಣೇ ಬರತ್ತ. ನೀವು ಗೌಡ್ರಗೆ ಹೇಳಿದ್ರ ನನ್ನ ಯಾಪಾರೆಲ್ಲಾ ಕೆಟ್ಟ ಈ ಊರಾಗ ಕಾಲಿಡದಾಂಗ ಆಗತ್ತ. ನಮ್ಮವ್ವ ಬಯ್ಯಿತಾಳ. ಹೇಳ ಬ್ಯಾಡ್ರಿ ನಿಮ್ಗ ಕಾಯಿಪಲ್ಲೆ ಪುಗಿಸೆಟ್ಟೆ ಕೊಡತೀನಿ, ನೀವು ಹೇಳಿದಾಂಗ ಕೇಳತೀನಿ.

ನರಸಿಂಹ— ಇಲ್ಲಾ, ಲಂಚಾ ತೊಗೊಳಾಕ ನಾಯೇನ ಸರಕಾರಿ ಅಧಿಕಾರಿ ಅಲ್ಲ. ನಡಿ ಹೋಗಾನ.

ರೇವತಿ— ಬ್ಯಾಡ್ರಿ, ನಿಮ್ಮ ಕಾಲ ಹಿಡಕೊಂತೀನಿ (ಕಾಲಿಗೆ ಬೀಳುವಳು)

ನರಸಿಂಹ— ನೋಡ ಮತ್ತೆ, ಇದು ಒಮ್ಮೆ ನನ್ನಂಗ ವ್ಯಾಪಾರಸ್ಥಳು ಅಂತ ತಿಳದ ಬಿಡ್ತೀನಿ. ಇನ್ನೊಮ್ಮೆ ಹೀಂಗೇನರ ಮಾಡ್ದಿ ಅಂದ್ರ....

ರೇವತಿ— ಇಲ್ರಿ, ಮಾಡೂದಿಲ್ಲ. ಏಟಾಗ್ಲಿ ನಾವು ನೀವು ಒಂದಽ ಅಲ್ಲಽನ್ರಿ,

ನರಸಿಂಹ— ಹೌದ ಹೌದು, ನಾನು ಗಾಂದೆಣ್ಣೆ, ನೀನು ಕಾಯಿಪಲ್ಲೆ. ಇಬ್ಬರೂ ತಾಜಾ ತಾಜಾ.

ರೇವತಿ– ಹಾಂಗಂದ್ರೇನ್ರಿ ?

ನರಸಿಂಹ– ನಿನ್ನ ಕಾಯಿಪಲ್ಲೇನು ತಾಜಾತಾಜಾ, ನನ್ನ ಗಾಂದೆಣ್ಣೆನೂ ತಾಜಾ ತಾಜಾ.

ರೇವತಿ– ಹೌದ್ರ್ಯಾ? ನೀವು ಗಾಂದೆಣ್ಣಿ ಸಾಬ್ರsನ್ರೀ. ಹಂಗಾರ ನಿಮ್ಮ ಹತ್ರ ಬಾಳ ಚೆಲೋ ಗಮಗಮ ಅನ್ನೂ ಎಣ್ಣಿ ಐತೇನ್ರಿ.

ನರಸಿಂಹ– (ಸ್ವ) ಅಂತೂ ಎಣ್ಣಿಗೆ ಹಣ್ಣಾಗುವಂಗ ಕಾಣತ್ತ ಈ ಹೆಣ್ಣು. (ಪ್ರ) ಗಮಗಮ, ನೀ ಬೇಡಿದಂತಾ ಎಣ್ಣಿ, ಬೇಡಿದsಟ ರೇಟಿಗೆ, ನಿನ್ನೊಬ್ಬಳಿಗೆ ಮಾತ್ರ.

ರೇವತಿ– ಹಂಗಾರ ಒಂದ ಗುಳ್ಳಿ ಕೊಡ್ರಿ ನೋಡತೀನಿ.

ನರಸಿಂಹ– (ಕೊಟ್ಟು) ಹೇಗಿದೆ ? ತುಂಬಾ ವಾಸನಿ ಇಲ್ಲವೆ? (ಅವಳ ಭುಜಕ್ಕೆ ತಿಕ್ಕುವನು)

ರೇವತಿ– ಯಾಕ್ರೀ ಮೈಮುಟ್ಟತೀರಿ ?

ನರಸಿಂಹ– ಸ್ವಾರಿ.... ಸ್ವಾರಿ.... ಗಂಡ್ಸರಿಗೆ ತಿಕ್ಕಿ ತಿಕ್ಕಿ ರೂಢಿ. ಅದಕ್ಕೆ ಕೈ ಅಲ್ಲಿಗೇ ಹೋಯ್ತು. ಇಲ್ಲಿ ಹೇಗಿದೆ ವಾಸನಿ ?

ರೇವತಿ– ಯಾಕs ಚೆಲೋತ್ಯಾಗ ನಾರೊಲ್ದ ಬಿಡ್ರಿ.

ನರಸಿಂಹ– ನಿನ್ನ ಮೂಗ್ಗೆ ಏನರ ಆಗಿರಬೇಕ ನೋಡ ಹಂಗಾರ.

ರೇವತಿ– ಅದಕೇನಾಗಬೇಕ್ರಿ ಧಾಡಿ.

ನರಸಿಂಹ– ನೆಗಡಿ ಪಗಡಿ ಹಾದಿರತಾವ ಎತ್ಲಾಗಿಂದರ ಬಂದು.

ರೇವತಿ– ಹಾಂಗೇನೂ ನಂಗ ಹಾದಿಲ್ಲಬಿಡ್ರಿ. ಇಲ್ಲೆ ಏನ ನಾರತ್ತ ತಿಪ್ಪ್ಯಾಗ. ಅದರಾಗ ಈ ಊರ ಬಾಳ ಹೊಲಸು ನಚೂರಾಗs ಎಲ್ಲಾ ಹೊಲಗೇರಿ ಮಾಡತಾರ. ಅದಕ ಅದ್ರ ನಾತದಾಗ ಇದ್ರ ನಾತ ಒಡ್ಡಕಾಣೊಲ್ದು.

ನರಸಿಂಹ– ಹೌದ ಇಲ್ನೋಡು, ಇಲ್ಲೇ ಅಗ್ಸಿ ಮುಂದ ಹೆಂಗ್ಸರ ತಂಬ್ಗಿ ತೊಗೊಂಡ ಕುಂತಾರ.

ರೇವತಿ– ಬರೇ ಹೆಂಗ್ಸರ ಯಾಕ, ಇಚಾಕಡೆ ನೋಡ್ರಿ ಕೊಂತವಾಡ. ಗಂಡ್ಸರು

ಉಬ್ಚೇ ಹೋದ ಹೋದ ಹೊಲಸ ನಾರಾಕ ಹಚ್ಚ್ಯಾರ.

ನರಸಿಂಹ– ಹೋಗ್ಲಿ ಬಿಡು, ಈ ಊರ ಮಂದೀನ ಹೊಲಸ ಐತಿ ಅಂದಮ್ಯಾಲ ಊರ ಹೊಲಸ ಇರಾದೇನ ದೊಡ್ಡಮಾತಲ್ಲ. ಇಲ್ಲಿ ಎಷ್ಟಬೇಕು, ಯಾವಾದಬೇಕು ಎಣ್ಣಿ ಹೇಳು?

ರೇವತಿ– ನನಗೇನ ತಿಳಿಯಿತ್ರಿ ಇದರಾಗ. ನೀವ ನೋಡಿ ಬಾಳಕಟು ನಾರಾದ ಕೊಡ್ರಿ, ಹೊಲಸ ನಾತ ಸನೇಕ ಬಂದಿರಬಾರ್ದು ನೋಡ್ರಿ,

ನರಸಿಂಹ– ತೊಗೋ ಬಾಯಿ (ಕೊಡುವನು)

ರೇವತಿ– (ಪುಟ್ಟಿಯಿಂದ ಒಂದು ಹಣ್ಣು ತೆಗೆದು) ಹಿಡಿರಿ, ನನ್ನ ಹಣ್ಣನೋಡ್ರಿ ಎಷ್ಟ ರುಚಿ ಅದಾವ.

ನರಸಿಂಹ– (ಕೈಯಲ್ಲಿ ಹಿಡಿದು ಹಣ್ಣನ್ನೊಮ್ಮೆ ಅವಳನ್ನೊಮ್ಮೆ ನೋಡುತ್ತ) ಇನ್ನೂ ಹೆಣ್ಣು....ಅಲ್ಲಲ್ಲ ಹಣ್ಣು ಪೂರಾ ಪಕ್ಕಾ ಆಗಿಲ್ಲ, ದ್ವಾರಿ ಐತಿ.

ರೇವತಿ– (ವ್ಯಂಗ್ಯವಾಗಿ) ಚೆಲೋತ್ಯಾಗ ಹಿಚಗಿ ಮೂಸಿ ತಿಂದ ನೋಡ್ರಿ, ಬರೆ ಮ್ಯಾಲೆ ಕಣ್ಣಿಲ್ಲೆ ನೋಡಿದ್ರೇನ ತಿಳಿಯತ್ತ.

ನರಸಿಂಹ– ಹಿಚಗಿ ಮೂಸಿ ತಿಂದ ನೋಡ್ಲ್ಯಾ ? ಹೂಂ ನೋಡತೀನಿ, ನನಗೀಗ ಹಣ್ಣ ಬ್ಯಾಡ ಎಣ್ಣಿರೊಕ್ಕಾ ತಗಿ.

ರೇವತಿ– ಈಗಿಲ್ಲರಿ, ಅಲ್ಲೆ ಗುಡಿಹತ್ರ ನಮ್ಮವ್ವ ಕಾಯಿಪಲ್ಲೆ ಮಾರಾಕ ಕುಂತಾಳ ಅಲ್ಲಿಗೆ ಬರ್ರಿ ಕೊಡಸ್ತೀನಿ. ಈ ಹಣ್ಣ ತಿನ್ರಿ, ರೊಕ್ಕ ಕೊಡಬ್ಯಾಡ್ರಿ ಹಂಗ ಪ್ರೇಮಕ್ಕಂತ ಕೊಟ್ಟೇನಿ. ನಾ ಬರ್ತೀನ್ರಿ ಇನ್ನ, ಚಲೇಂಗೇ.

ನರಸಿಂಹ– ಓ ಹೋ ನಿನಗೂ ಮುಸಲ್ಮಾನಿ ಆತೆ ಕ್ಯಾ ?

ರೇವತಿ– ಯಾಪಾರಸ್ತರಿಗೆ ಎಲ್ಲಾ ಮಾತು ಬರ್ತಿರತಾವ. ಇನ್ನ ನಾವು ಹೈದ್ರಾಬಾದ ಕರ್ನಾಟಕದವ್ರು ಅಂದಮ್ಯಾಲೆ ಮುಸಲ್ಮಾನಿ ಬರದ ಇರತ್ತೇನ್ರಿ?

ನರಸಿಂಹ– ಹಂಗಾರ ಇನ್ನೊಮ್ಮೆ ಅನ್ನು ನೋಡಾನ.

ರೇವತಿ– ಚಲೇಂಗೆ..... (ಹೋಗುವಳು)

ನರಸಿಂಹ– ಫಿರ್ ಮಿಲೇಂಗೆ. (ಗಿರಕಿ ಹೊಡೆದು ಅವಳು ಹೋದತ್ತ ನೋಡುತ್ತ) ಕಿತನಾ ಸೈತಾನದಿನ್ ಹೈ ಆಜ. ಒಂದ ಪೈಸೇ

ಆದ್ರೂ ಕಿಸೇಕ ಬೀಳಲಿಲ್ಲ. ಆದ್ರ ಎಣ್ಣೀಗುಳ್ಳಿ ಉಳ್ಳಿಉಳ್ಳಿ ಹೋಗಾದ ಮಾತ್ರ ಬಿಡಲಿಲ್ಲ. ಆದ್ರ ಒಂದ ಹೆಣ್ಣಸಿಕ್ತು, ಆ ಹೆಣ್ಣಿನಿಂದ ಈ ಹಣ್ಣ ಸಿಕ್ಕಿತು. ಅದು ಪ್ರೇಮಕ್ಕಂತ ಕೊಟ್ಟೈತಿ ಅಂದವ್ಯಾಲೆ ಹೀರಿ ಸಿಹಿನೋಡಬಾರದ್ಯಾಕ (ಕಡಿಯುವನು). ಕೈಗೆ ಸಿಕ್ಕಿದ್ದೆಲ್ಲ ಬಿಡತಾರೇನ್ರಿ, ತಾನಾಗಿ ಬಂದದ್ದ ಎಂದೂ ಬಿಡಬಾರ್ದು. ಬಿಟ್ರ ಪಾಪಬರತ್ತ. ನಿಜವಾಗ್ಲೂ ನಾನಿವತ್ತ ಒಳ್ಳೆ ನರಿ ಮಾರಿ ನೋಡಿನಿ ಕಾಣತ್ತ ಇಂಥಾ ಪೋರಿ ಮಾರಿ ನೋಡಬೇಕಾದ್ರ, ಹುಡ್ಗಿ ನೋಡಿದ್ರ ಇನ್ನೂ ೧೬–೧೮ ಕಾಣತ್ತ. ಹೆದ್ರಸಿದ್ರ ಅಂಜತ್ತ. ಇನ್ನ ದಿನಾ ನನ್ನ ಗಾಂದೆಣ್ಣಿ ಮೂಸಿನೋಡಿಸಿದ್ರ ಹಿಂದ ಹಿಂದಕ ಬರುತ್ತ. ಬಿಡಬಾರ್ದು ಇಂಥಾ ಪಕ್ಕಾ ಹಣ್ಣs, ಗಿಣಿಯಾಗಿ ಕಚ್ಚಿ ಸಿಹಿನೋಡಾಕಬೇಕು. (ಮತ್ತೆ ಹಣ್ಣು ಕಡಿಯುವನು) ಇನ್ನಾ ಮದ್ವೀನೂ ಆದಂಗ ಕಾಣೂದಿಲ್ಲ. ಕೊಳ್ಳಾಗ ತಾಳೆಂತೂ ಇಲ್ಲ. ಅವರವ್ವನ್ನ ಒಬ್ಬಾಕಿನ್ನ ಬಲಿಯಾಗ ಹಾಕ್ಕೊಂಡು ಹೊತ್ತನೋಡಿ ಹಕ್ಕಿ ಹಾರಿಸಿಗೊಂಡ ಹೊಂಟ್ರಾತು. ಬರ್ರಿ ಬರ್ರಿ ಗಾಂದೆಣ್ಣಿ.... (ಹೋಗುವನು).

—ತೆರೆ—

===***====***===

ಪ್ರವೇಶ – ೩

–ಅಶ್ವತ್ಥರ ಮನೆ–

(ಅಶ್ವತ್ಥ ತಲೆಗೆ ಕೈ ಹಚ್ಚಿಕೊಂಡು ಚಿಂತಾಕ್ರಾಂತನಾಗಿ ಕುರ್ಚಿಯ ಮೇಲೆ ಕುಳಿತಿದ್ದಾನೆ. ಮುಂದೆ ಟೇಬಲ್ ಇದೆ)

ಉದಯ– (ಪ್ರವೇಶಿಸಿ ನೋಡಿ) ನಮಸ್ತೆ ಸರ್.

ಅಶ್ವತ್ಥ– ನಮಸ್ಕಾರ, ಬನ್ನಿ ಕುಳಿತುಕೊಳ್ಳಿ (ನಿರಾಶಾಭಾವದಿಂದ)

ಉದಯ– ಇದೇನು ಸರ್, ಈ ರೀತಿ ಒಮ್ಮೆಲೆ ಜೀವನದಲ್ಲಿ ಜಿಗುಪ್ಸೆಯನ್ನು ತಾಳಿ ನಿರಾಶರಾಗಿ ನೀವೆ ಕುಳಿತರೆ ಹೇಗೆ?

ಅಶ್ವತ್ಥ– ಏನು ಮಾಡುವದು ಉದಯ. ಆನಂದವೆಂಬುದರ ಅಂತ್ಯವೇ ಆಗಿ ಹೋದಾಗ ಜೀವನದಲ್ಲಿ ಉಳಿದಿರುವದು ನಿರಾಶೆ ಒಂದೇ ಅಲ್ಲವೆ? ಇದ್ದೊಬ್ಬ ಮಗಳ ಸುಖ ಸಂಸಾರ ಕಂಡು ಸಂತೋಷಿಸುವಂತಾಗದೆ ದಿನವೂ ಅವಳ ಕಳಾಹೀನ ಮುಖವನ್ನು ನೋಡುವಂತಾಯಿತು. ಮಗಳು ಆಜನ್ಮ ಪರ್ಯಂತ ವಿರಕ್ತ ಜೀವನ ಸಾಗಿಸಿ ಕಣ್ಣೀರಿನಲ್ಲಿಯೇ ಕೈತೊಳೆದು ದೇಹ ಕೊರಗಿಸುವಂತಾಯಿತು.

ಉದಯ– ಮಿಂಚಿ ಹೋದ ಮಾತಿಗೆ ಚಿಂತಿಸಿ ಫಲವಿಲ್ಲ ಸರ್. ಅದನ್ನು ಅಲ್ಲಿಗೆ ಮರೆತು ಬಿಡಿ. ಬ್ರಹ್ಮ ಬರೆದ ಬರಹ ತಪ್ಪಿಸಲು ಮತ್ತೆ ಆ ಬ್ರಹ್ಮನಿಗೇ ಸಾಧ್ಯವಿಲ್ಲವೆಂದಾಗ ನಮ್ಮಂಥ ಹುಲುಮಾನವರ ಪಾಡೇನು? ಆ ವಿಚಾರ ಅಲ್ಲಿಗೆ ಬಿಟ್ಟು ಮುಂದೆ ಅವಳ ಬಾಳ ಬಳ್ಳಿಯನ್ನು ಚಿಗುರಿಸುವ ವಿಚಾರ ಮಾಡಿ.

ಅಶ್ವತ್ಥ– ಅಂದರೆ! ಒಣಗಿಹೋದ ಮಗಳ ಬಾಳ ಬಳ್ಳಿ ಮತ್ತೆ ಚಿಗುರುವುದೆ? ಹಣ್ಣೆಲೆ ಹಸುರಾಗುವುದೆ? ಕೊರಡು ಕೊನರುವುದೆ? ಬರಡು ಹಯನಾಗುವುದೆ? ಅಂಥತೆ ಅಳಿದು ಜ್ಯೋತಿ ಬೆಳಗುವದೆ ಮಗಳ ಬಾಳಿನಲ್ಲಿ?

ಉದಯ– ಏಕೆ ಬೆಳಗಬಾರದು ? ಮನುಷ್ಯ ಮನಸ್ಸು ಮಾಡಿದಗೆ ಯಾವುದು ಅಸಾಧ್ಯ ಸರ್.

ಅಶ್ವತ್ಥ– ನಿಮ್ಮ ಮಾತಿನ ಅರ್ಥವೇ ನನಗಾಗದು. ಒಮ್ಮೆ ಅಳಿದ ಮುತ್ತೈದೆತನ ಮತ್ತೆ ತಳೆಯುವದು ನಮ್ಮ ಸಂಸ್ಕೃತಿಗದು ಬಹುದೂರ; ಗಗನ ಕುಸುಮವಿದ್ದಂತೆ. ಒಮ್ಮೆ ಪತಿಹೀನಳಾದ ಸತಿ ಆಜನ್ಮಪರ್ಯಂತ ವಿಧವೆಯಾಗಿ, ಅಳಿದ ಪತಿಯ ನಾಮಸ್ಮರಣೆಯಲ್ಲಿಯೇ ಜೀವನ ಸವೆಸಬೇಕು. ಇದು ಅವಳ ಧರ್ಮ.

ಉದಯ– ಇದಾವ ಧರ್ಮ ಸರ್? ಹೆಣ್ಣು ಪತಿಯ ಮನೆ ಸೇರದ ಮುನ್ನವೆ ವಿಧವೆಯಾಗಿ ಅವನಿಂದ ಯಾವ ಸುಖವನ್ನು ಕಾಣದೆ ಆಜನ್ಮಪರ್ಯಂತ ಕಳಾಹೀನ ಮುಖಹೊತ್ತು ಜನರ ಕಣ್ಣಿಗೆ ಬಂಜೆ, ಅಮಂಗಳದ ಪ್ರತೀಕ ಎಂದು ಹಳಿಯ ಹಚ್ಚಲು, ಅವಳು ಮಾಡಿದ ಅಪರಾಧವೇನು? ಇದು ನಮ್ಮ ಮೂಢನಂಬಿಕೆ. ಪತಿ ತೀರಿದೊಡನೆ ಸತಿಯು ಪತಿಯೊಡನೆ ಸಹಗಮನಮಾಡುವ ಪದ್ಧತಿಯೊಂದು ಕಾಲಕ್ಕಿತ್ತು. ಅದು ಇಂದು ಅಳಿದುಹೋಗಿದೆ. ಸ್ತ್ರೀಗೂ ಪುರುಷನಷ್ಟು ಸ್ವಾತಂತ್ರ್ಯ ಇಂದುಂಟು. ಸತಿ ತೀರಿದ ಮರುದಿನವೆ ಗಂಡಸು ಮತ್ತೊಬ್ಬಳನ್ನು ಕೈಹಿಡಿದು ಸುಖ ಪಡುವನು. ಆದರೆ ಸ್ತ್ರೀಗೇಕೆ ಆ ಸ್ವಾತಂತ್ರ್ಯವಿಲ್ಲ. ಅವಳಿಗೂ ಪುರುಷನಂತೆ ಆಶೆ ಆಮಿಶ, ರಾಗ ಭಾವಗಳು ಇರುವದಿಲ್ಲವೆ? ಜೀವನದಲ್ಲಿ ಸುಖ ಪಡಬೇಕೆಂಬ ಇಚ್ಛೆ ಇರುವದಿಲ್ಲವೆ? ಇದನ್ನೆಲ್ಲ ಅರಿತಿದ್ದೂ ಅವಳನ್ನು ಹಾಗೇ ಕೊರಗಿಸಿ ಕಣ್ಣೀರು ಹಾಕಿಸಿದರೆ ಮನೆಗೆ ಶೋಭೆಯಲ್ಲ. ಕೊನೆಗೆ ಅನಾಹುತಕ್ಕೂ ಎಡೆಯುಂಟು. ಹಿರಿಯರಾದ ತಾವು ವಿಚಾರಿಸಬೇಕು.

ಅಶ್ವತ್ಥ– ನೀವು ಹೇಳುವದೆಲ್ಲ ನಿಜ ಉದಯ. ಆದರೆ ಸಮಾಜದ ಎದುರು ಇದು ಅಧರ್ಮ. ಆರ್ಯ ಗರತಿಗೆ ಜೀವನದಲ್ಲಿ ಗಂಡನೊಬ್ಬ. ಅವನು ತೀರಿದೊಡನೆ ಅಂದೇ ಅವಳು ಸತ್ತಂತೆ. ಇದು ಭಾರತಿಯ ಸಂಸ್ಕೃತಿಯ ಹೆಗ್ಗುರುತು.

ಉದಯ– ಸಮಾಜಾ, ಸಂಸ್ಕೃತಿ, ಜನತೆ ಎಂದು ಅವುಗಳಿಗೆ ಕಟ್ಟುಬಿದ್ದು ಒಂದು ಹೆಣ್ಣಿನ ಬಾಳು ಮಣ್ಣುಗೂಡಿಸುವದು ಎಂದಿಗೂ ನ್ಯಾಯವಲ್ಲ ಸರ್. ಅವಳಿಗೆ ಪುನರ್ವಿವಾಹ ಮಾಡಿ ಜೀವನ ಮುನ್ನಡೆಸಲು

ಮಾರ್ಗ ತೋರಿದರೆ ಮಾತ್ರ ಅವಳ ಉದ್ಧಾರ. ಇಲ್ಲದಿದ್ದರೆ ನಾವೇ ಕುಳಿತು ಮಾಡಿದಂತೆ ಅವಳ ಸಂಹಾರ. ನಾವೆಲ್ಲ ಮೂಢನಂಬಿಕೆಗಳ ಬೆನ್ನು ಹತ್ತಿ ಸಾಗಿರುವದರಿಂದಲೇ ನಮ್ಮೀ ದೇಶದಲ್ಲಿ ಎಷ್ಟೊಂದು ಎಳೆ ಹರೆಯದ ವಿಧವೆ ಮಹಿಳೆಯರು ತಮ್ಮ ಜೀವನವನ್ನು ಹಾಳುಮಾಡಿಕೊಂಡಿಲ್ಲ. ಎಷ್ಟೊಂದು ಸ್ತ್ರೀಯರು ಕಾಮಕ್ಕೆ ತುತ್ತಾಗಿ ಅದರ ತೃಪ್ತಿಗಾಗಿ ಪರಪುರುಷನ ಬಯಸಿ ಅನರ್ಥಕ್ಕೀಡಾಗಿಲ್ಲ. ಎಷ್ಟೊಂದು ಹೆಂಗಳೆಯರು ಸಾಕಿ ಸಲಹುವರಿಲ್ಲದೆ, ಅನ್ನಕ್ಕೆ ಗತಿಯಿಲ್ಲದೆ ಬೀದಿಯ ಭಿಕಾರಿಗಳಾಗಿ ಕಾಮುಕರ ಕೈಯಲ್ಲಿ ಸಿಕ್ಕು ಮಾನಹಾನಿ ಹೊಂದಿ ಪ್ರಾಣಾರ್ಪಣೆ ಮಾಡಿಕೊಂಡಿಲ್ಲ. ವಿಚಾರಿಸಿ ಸರ್, ಇದನ್ನೆಲ್ಲ ನೀವು ಅರಿಯದಿರಲಾರರಿ. ಮುಂದೆ ಮುಪ್ಪಿನ ಕಾಲದಲ್ಲಿ ಅವಳ ರಕ್ಷಿಸುವರಾರು? ಅವಳ ಸುಖ ದುಃಖ ವಿಚಾರಿಸಿ ಕಾಪಾಡುವರಾರು?

ಅಶ್ವತ್ಥ– ಉದಯ, ನಿಮ್ಮ ಮಾತಿಗೆ ನನ್ನ ಸಮ್ಮತಿ ಉಂಟಾದರೂ ಹಿಂದಿನಿಂದ ನಡೆದು ಬಂದ ಸಂಸ್ಕೃತಿಯ ಶಾಸನಕ್ಕೆ ಮಸಿಬಳಿಯಲಾರೆ. ಸಮಾಜ ಹಾಕಿರುವ ನೀತಿ ನಿಯಮಗಳನ್ನು ಉಲ್ಲಂಘಿಸಿ ನಾನು ಈ ಸಮಾಜದಿಂದ ಬಹಿಷ್ಕೃತನಾಗಲು ಸಿದ್ಧನಿಲ್ಲ. ಮಗಳ ದೈವದಲ್ಲಿ ಅಷ್ಟೇ ಇತ್ತು ಆಯಿತು. ನಮ್ಮಿಂದ ಮುಂದೆ ಏನೂ ಮಾಡಲು ಬರುವಂತಿಲ್ಲ. ನಮ್ಮ ಜೀವವಿರುವವರೆಗೆ ಅವಳನ್ನು ಕಾಪಾಡುವದೊಂದೇ ನಮ್ಮ ಕರ್ತವ್ಯ.

ಉದಯ– ದೈವ....ದೈವ....ದೈವ....ದೈವವೆಂಬುದು ನಾವು ಹುಟ್ಟಿಸಿಕೊಂಡಿರುವ ದೆವ್ವ ಸರ್. ಆ ದೆವ್ವದ ಬೆನ್ನುಹತ್ತಿ ಸಾಗಿರುವದರಿಂದಲೇ ನಾವೀ ಸ್ಥಿತಿಗೆ ಬಂದಿರುವದು. ಪ್ರಯತ್ನದಿಂದ ನ್ಯಾಯಮಾರ್ಗದಲ್ಲಿ ನಡೆದರೆ ದೈವ ದಾಸನಾಗಿ ತಾನೇ ಹಿಂದೆ ಬರುತ್ತದೆ.

ಅಶ್ವತ್ಥ– ನೀವೇನೆ ಹೇಳಿ, ನಾನು ಮಾತ್ರ ಈ ಸಮಾಜದಿಂದ ಬೇರಾಗಲು ಸಿದ್ಧನಿಲ್ಲ.

ರಾಜು– (ಪ್ರವೇಶಿಸುತ್ತ) ಏನು ಅಪ್ಪಾಜಿ ಅದು ಸಮಾಜದ ವಿಷಯ.

ಉದಯ– ಹ.... ಏನಿಲ್ಲಿ, ನಿಮ್ಮ ತಂಗಿಯ ಪುನರ್ವಿವಾಹದ ವಿಷಯ. ಸಮಾಜ ಅದಕ್ಕೆ ವಿರೋಧಿಯಂತೆ (ಒಪ್ಪದಂತೆ).

ರಾಜು– ಹೌದು. ಸತಿಗೆ ಜೀವನದಲ್ಲಿ ಪತಿ ಒಬ್ಬ ಮಾತ್ರ.

ಉದಯ– ರಾಜೂ, ಕಲಿತವನಾದ ನೀನೂ ಸಹಿತ ಹಳೆಯ ತತ್ವಗಳನ್ನೇ ಅನುಸರಿಸುವದೆ ? ಹೆಣ್ಣಿನ ಮನೋಧರ್ಮ ಅರಿತು ಅದರಂತೆ ನಡೆಯುವದು ಒಳಿತಲ್ಲವೆ?

ರಾಜು– ಮಿತ್ರ, ನನ್ನ ತಂಗಿ ಇನ್ನು ಹೆಣ್ಣಲ್ಲ. ಗಂಡು. ಅವಳನ್ನು ನನ್ನ ಸಹೋದರನಂತೆ ಕಾಪಾಡುತ್ತೇನೆ. ನನ್ನ ಪ್ರಾಣವಿರುವವರೆಗೂ ಅವಳನ್ನು ಯಾವ ದುಃಖಕ್ಕೂ ಈಡುಮಾಡುವದಿಲ್ಲ.

ಉದಯ– ನೋಡು ರಾಜು. ನಾಳೆ ನಿನ್ನ ಮಡದಿ ಬಂದು ಮನೆ ಸೇರಿದಾಗ ತಂಗಿಯನ್ನು ಮರೆಯಬಹುದು. ತಂಗಿ ಹೆಂಡತಿಯ ಕಾಲುಕಸವಾದಾಗ ಅವಳ ದುಃಖ ನೋಡುವವನು ನೀನೇ ಅಲ್ಲವೆ?

ರಾಜು– ಅದೆಂದಿಗೂ ಸಾಧ್ಯವಿಲ್ಲ. ನಾನದಕ್ಕೆ ಅವಕಾಶ ಕಲ್ಪಿಸಿಕೊಟ್ಟರೆ ತಾನೆ?

ಅಶ್ವತ್ಥ– (ಮಧ್ಯ ಚರ್ಚೆ ಮುರಿದು) ಇರಲಿ ರಾಜು, ಆಫೀಸಿಗೆ ಹೋಗುವದಿಲ್ಲವೆ?

ರಾಜು– ಈಗಲೆ ಹೊರಟೆ ಅಪ್ಪಾಜಿ.

ಉದಯ– (ಮಾತು ಬದಲಿಸಿ) ಹ..... ಲೀಲಾಳ ಮಾತು ನಿಮಗೆ ಸಮ್ಮತಿ ಇಲ್ಲವೆಂದಮೇಲೆ ಇರಲಿ. ಆದರೆ ರಾಜು, ಎಷ್ಟು ದಿವಸ ನೀನು ಹೀಗೇ ಬ್ರಹ್ಮಚಾರಿಯಾಗಿರುವದು. ಓರ್ವ ಹೆಣ್ಣನ್ನು ಕೈಹಿಡಿದು ಮನೆ ತುಂಬಿಸಿಕೊಂಡು ಹಾಯವಾಗಿ ಕಾಲಕಳೆಯಬಾರದೆ?

ಅಶ್ವತ್ಥ– ಈ ಮಾತು ಸತ್ಯ. ಮಗಳ ದುಃಖ ದೂರಾಗಬೇಕಾದರೆ ಒಬ್ಬ ಜೊತೆಗಾತಿ ಬೇಕು. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ಯಾವ ಸುಖವನ್ನೂ ಕಾಣದ ಅವಳ ಬಾಳಿಗೆ ಪತಿಯ ವಿಯೋಗದ ಸಿಡಿಲೊಂದೆರಗಿ ಗಾಯದ ಮೇಲೆ ಬರೆ ಎಳೆದಂತಾಗಿದೆ. ಅವಳ ಮನಸ್ಸು ಸಮಾಧಾನಗೊಳಿಸುವದಕ್ಕಾದರೂ ರಾಜು ಮದುವೆಯಾಗಲೇಬೇಕು.

ರಾಜು– ಬೇಡಪ್ಪ ಬೇಡ. ತಂಗಿಗೊಬ್ಬ ಅತ್ತಿಗೆಯನ್ನು ತಂದು ಅವಳ ದುಃಖ ಪರಿಹರಿಸಬೇಕೆಂಬ ಬಯಕೆ ನನ್ನಲ್ಲುಂಟಾದರೂ, ಬರುವ ಸತಿ ಅಕ್ಕರೆಯ ಅತ್ತಿಗೆಯಾಗದೆ ಮಾರಿಯಾಗಿ ತಂಗಿಯ ದುಃಖದಾವಾನಲಕ್ಕೆ ಎಣ್ಣೆ ಹೊಯ್ಯುವ ರಾಕ್ಷಸಿಯಾದರೆ ಆ ದುಃಖ

ಇದಕ್ಕಿಂತ ನೂರ್ಮಡಿ ಹೆಚ್ಚಿನದಲ್ಲವೇನಪ್ಪ. ಅದಕ್ಕಾಗಿ ಹೀಗೇ ಹಾಯವಾಗಿರುವದು ಲೇಸಪ್ಪ.

ಉದಯ– ಎಲ್ಲರೂ ಹಾಗೆಯೇ ಇರುತ್ತಾರೇನು ಮಿತ್ರ. ನೋಡು ನನ್ನ ಗೆಳೆಯನ ತಂಗಿ ಇರುವಳೆಂದು ಅಂದು ಹೇಳಿರಲಿಲ್ಲವೆ? ಅವಳನ್ನು ನಿಮ್ಮ ಮನೆ ತುಂಬಿಸಿಕೊಂಡರೆ ಸಾಕು, ಮನೆ ನಂದನವನ. ನಿಮ್ಮ ತಂಗಿಯ ದುಃಖ ದೂರೀಕರಿಸಿ ಸದಾ ಹಸನ್ಮುಖಿಯಾಗಿ ನಲಿಯುವಂತೆ ಮಾಡುವದರಲ್ಲಿ ಸಂದೇಹವಿಲ್ಲ.

ಅಶ್ವತ್ಥ– ಹೌದು ರಾಜು, ಒಪ್ಪಿಗೆ ಕೊಡು.

ರಾಜು– ತಂಗಿಯ ಒಪ್ಪಿಗೆಯಿಲ್ಲದೆ ನಾನಾವ ಕಾರ್ಯಕ್ಕೂ ಕೈಹಾಕಲಾರೆ.

ಉದಯ– ಅತ್ತಿಗೆ ಬರುತ್ತಾಳೆಂದರೆ ಬೇಡವೆನ್ನುತ್ತಾಳೆಯೇ ನಿನ್ನ ತಂಗಿ. ಈಗಲೆ ಕರೆ, ನಾನು ಒಪ್ಪಿಸುತ್ತೇನೆ.

ಅಶ್ವತ್ಥ– ಅಮ್ಮಾ ಲೀಲಾ, ಬಾ ಮಗಳೆ ಇಲ್ಲಿ.

ಲೀಲಾ– (ಮೆಲ್ಲಗೆ ಪ್ರವೇಶಿಸಿ) ಏಕಪ್ಪ?

ಉದಯ– ರಾಜೂನ ಮದುವೆ ಮಾಡಬೇಕೆಂದಿದ್ದೇವೆ, ಇದಕ್ಕೆ ನಿನ್ನ ಒಪ್ಪಿಗೆ ಇದೆ ತಾನೆ?

ಲೀಲಾ– ಹಿರಿಯರಾದ ತಮಗೆ ನಾನೇನು ಹೇಳಲಿ. ಅಣ್ಣ ಮದುವೆಯಾಗಿ ನನಗೊಬ್ಬ ಅತ್ತಿಗೆಯನ್ನು ಜೊತೆ ಮಾಡಿದರೆ ನಾನೇ ಭಾಗ್ಯವಂತೆ. ಕುರುಡ ಬೇಡುವದು ಎರಡು ಕಣ್ಣನ್ನು, ಕಡುಬಡವ ಕಡವರವನ್ನು, ರೋಗಿ ಬಯಸುವದು ಔಷಧಿಯನ್ನಲ್ಲವೆ?

ಉದಯ– ಆಯಿತೆ. ಈಗಲಾದರೂ ಒಪ್ಪಿದೆ ತಾನೆ?

ರಾಜು– ಆಗಲಿ ನಿಮ್ಮಿಷ್ಟ.

ಉದಯ– ಬೇಗ ನಿಮ್ಮ ತಮ್ಮನಿಗೂ ಪತ್ರಬರೆದು ಕರೆಯಿಸಿಕೊಳ್ಳಿ. ಸುಮುಹೂರ್ತ ನೋಡಿ ಕಾರ್ಯ ಮುಗಿಸಿಬಿಡೋಣ. ನಾನಿನ್ನು ಬರುತ್ತೇನೆ. (ಲೀಲಾನತ್ತ ನೋಡುತ್ತ ಹೋಗುವನು).

–ತೆರೆ–

===**====**===

ಪ್ರವೇಶ–೪

– ರಸ್ತಾ –

(ನರಸಿಂಹ ಮುತಗಾರನ ವೇಷ ಹಾಕಿಕೊಂಡು ಮುತ್ತುರತ್ನವನ್ನೊಳಗೊಂಡ ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಸಾಗಿದ್ದಾನೆ)

ನರಸಿಂಹ– ಬರ್ರಿ ಬರ್ರಿ, ಮುತ್ತು, ರತ್ನ, ವಜ್ರ, ಹವಳ, ಬಂಗಾರಗುಂಡು, ಉಂಗುರದ ಹಳ್ಳು, ಮೂಗುತಿ ಮುತ್ತು, ಬಾಳ ಚೆಲೋ ಅದಾವ ಬರ್ರಿ. ನಾ ಬರೆ ಮುತ್ತ ಮಾರಾವಂತ ತಿಳಿಬ್ಯಾಡ್ರಿ, ಟೀಕಿ, ಡಾಬ, ಬಂಗಾರ ಸಾಮಾನ ಏನಬೇಕಾದ್ದ ನಿಮ್ಮ ಮನ್ಯಾಗsಕುಂತ ಒಂದ ಅರ್ಧತಾಸಿನ್ಯಾಗ ಮಾಡಿಕೊಡತೀನಿ. ಹಳೆ ಸಾಮಾನಿದ್ರ ತೊಗೊಂಡ ಹೊಸಾವ ಕೊಡತೀನಿ. ಬರ್ರಿ ಬರ್ರಿ, ನಿಮ್ಮ ಕೊಳ್ಳಿಗೆ ಒಪ್ಪುವಂತಾವು, ಮೂಗಿನ್ಯಾಗ ಇಟ್ರ ಮಿಂಚುವಂತಾವು, ಕಿನ್ಯಾಗಿಟ್ರ ಲಕಲಕ ಹೊಳಿಯುವಂತಾವು ಬೆಂಡವಾಲಿ, ಬುಗುಡಿ, ಮೂಗುತಿ, ಮುರುವು, ಪಿಲ್ಲಿ, ಪೈಜಣ ಎಲ್ಲಾ ಸೋವಿ ದರದಾಗ, ಬರ್ರಿ.....ಬರ್ರಿ.....

ರೇವತಿ– (ಒಳಗೆ ಧ್ವನಿ) ಮೊನ್ನೆ ಇಲ್ಲೆ ಭೆಟ್ಟಿ ಆಗಿದ್ದ ನೋಡೆವ್ವ ಆ ಗಾಂದೇಣ್ಣಿ ಸಾಬ.

ನರಸಿಂಹ– (ಕೇಳಿ) ಓಹೋ ಮೊನ್ನೆ ಭೆಟ್ಟಿಯಾದ ನಮ್ಮ ಮಿಡಚಿ ಇತ್ತಾಗ ಹಾರಿಬಂತಲ್ಲ. ಅದರ ಹಿಂದ ಒಂದ ಯಾವಾದ ಬೆನ್ನ ಹತ್ತೈತೆಲ್ಲಪ ಓತಿಕಾಟ. ಅವರವ್ವ ಇರಬೇಕು, ಬರ್ಲಿ ಬರ್ಲಿ.....

ರೇವತಿ– (ಹೊರಗೆ ಬಂದು) ಇಲ್ಲೆ ನಿಂತು, ತಾಜಾ ತಾಜಾ ಬಾಳ ವಾಸನಿ ಐತಿ ಅಂತ ಎಣ್ಣಿಕೊಟ್ಟು, ರೊಕ್ಕ ಕೊಡತೀನ ಬಾ ಅಂದ್ರ, ನನ್ನ ಮಾರಿ ನೋಡಿ ಹಂಗಾ ಹೋಗಿಬಿಟ್ಟ ನಕ್ಕೊಂತ.

ರಮಾ– ಹಂಗಾರ ಬಾಳ ಒಳ್ಳೇವ ಕಾಣತ್ತ ಸಾಬ. ಎಲ್ಲೇನಾನ ತೋರಸು ನಾನಟ ನೋಡೆರ ನೋಡತೀನಿ. ಹ್ಯಾಂಗದಾನ, ಮುದ್ದೇವ ಏನ ಹರೆದಾವ್ನs.

ರೇವತಿ– ಮಾದೇವ ಅಲ್ಲವ್ವ ಹರೇದಾವ. ಈಟುದ್ದ ಗಡ್ಡಾಬಿಟ್ಟಿದ್ದ, ಮೀಸಿ

ಹುರಿತಿರವಿದ್ದ. ಒಂದ ಲುಂಗಿ ಮ್ಯಾಲೊಂದ ಅಂಗಿ, ತಲಿಮ್ಯಾಗ ಉದ್ದನ ಟೊಪಿಗಿ ಹಾಕ್ಕೊಂಡ, ಸುದ್ದಾ ಕಾಮಣ್ಣ ಕಂಡಾಂಗ ಕಾಣತಿದ್ದ.

ರಮಾ– ಅದ್ಕ ನಿನ್ನಂಥ ರತೀನ ಕಂಡು ಹಂಗ ಎಣ್ಣಿಕೊಟ್ಟಹೋಗ್ಯಾನ. ಹಂಗಽ ಬಿಡಬಾರ್ದು, ಕಣ್ಣ ಹೊಡ್ದು ಹುಬ್ಬಹಾರ್ಸಿ ಮಳ್ಳಮಾಡಿ ಬಂದ ಸರತಿಗೊಮ್ಮೆ ಒಂದ ಬಾಟ್ಲಿ ಎಣ್ಣಿ ಎಳಕೋಬೇಕು. ಆ ಮ್ಯಾಲೆ ಹಾಂಗ ಪ್ರೇಮದ ಮಾತಾಡಿದಾಂಗ ಮಾಡಿ ರೊಕ್ಕಾನೂ ಹೊಡಿಬೇಕು.

ರೇವತಿ– ಹೋಗವ್ವ, ಮೋಸಾ ಮಾಡಬಾರ್ದು. ಅವ್ರು ಬಾಳ ಒಳ್ಳೇರದಾರ. ನಾನವರ್ನ ನೋಡಿದ್ಯಾಗಿಂದ ನನ್ನ ಕಣ್ಣಾಗ ಅವ್ರ ಚಿತ್ರ ಕುಣಿಯಾಕ ಹತ್ತೈತೆ.

ರಮಾ– (ಹುಸಿಮುನಿಸಿನಿಂದ) ಸಾಕ ಮುಚ್ಚ ಬಾಯಿ. ನಾ ಏನಽ ಹಂಗ ಇರ್ಲೆಂತ ಸುಮ್ನ ಸಡ್ಲ ಕೊಟ್ರ ಆಗಲೆ ಹೊಗಳಾಕ ಸುರುಮಾಡ್ದೆಲ್ಲ. ಸುಮ್ನಽ ನಾ ಹೇಳಿದಾಂಗ ಕೇಳ, ನಿನ್ನ ರಾಣಿಯಾಂಗ ಮೆರಸ್ತೀನಿ.

ರೇವತಿ– ಆಗ್ಲಿ ಬಾರವ್ವ

ನರಸಿಂಹ– (ಸ್ವ) ಅಂತೂ ಕಾಯಿಪಲ್ಲೆ ಪಚಡಿ ನನ್ನ ರೊಟ್ಟ್ಯಾಗ ಬಿದ್ದೈತಿ? ಹಣ್ಣ ಕಳಿಯಾಕ ಹತ್ತೈತಿ. ಇನ್ಯಾಕ ತಡಾ ತಿಂದಬಿಡಾನಲ್ಲ. ಹುಡಿಗ್ಗೆ ನನ್ನ ಮ್ಯಾಲೆ ಪೂರಾ ಮನಸ ಕುಂತೈತಿ. ಆದ್ರ ಇದೊಂದ ಬೆನ್ನ ಹತ್ತೈತೆಲ್ಲ ರಾಕ್ಷಸ ಅವರವ್ವ. ಹತ್ತಲಿ ಹತ್ತಲಿ ಆಕಿನೇಟತ್ತ ಮಳ್ಳಮಾಡಾದು. ಮುತ್ತು ರತ್ನ, ಬರ್ರಿ.....ಬರ್ರಿ.....

ರಮಾ– ಅಯ್ಯ ತಂಗಿ ಮುತಗಾರವ ಬಂದನಲ್ಲ. ನಿನ್ನ ಮೂಗತಿಗೆ ಮುತ್ತ ಹಾಕಸಾನ, ಕರಿ ಇಲ್ಲಿ ಹ್ಯಾಂಗದಾವ ನೋಡಾನ.

ರೇವತಿ– ಮುತಗಾರಪ್ಪ..... ಏ ಮುತಗಾರಪ್ಪ ಇಲ್ಲಿ ಬಾ.......

ನರಸಿಂಹ– (ಹತ್ತಿರ ಬಂದು) ಮುತಗಾರಪ್ಪ ಅನಬ್ಯಾಡ ಭಾಯಿ. ಮುತಗಾರ ಬಾಬು ಅಂತ ಕರಿ. ನಾನಿನ್ನೂ ಮದುವೀನೇ ಆಗಿಲ್ಲ, ಅಪ್ಪ ಹೇಗೆ ಆಗತೀನಿ ಹೇಳು ?

ರಮಾ– ಇರ್ಲಿ ಬಾರಪ್ಪ ಇಲ್ಲಿ.

ನರಸಿಂಹ— ಅರೆ ಅಮ್ಮ ಮತೆ ನೀವು ಅಪ್ಪ ಅಂತೀರಲ್ಲ.

ರಮಾ— (ಸಿಟ್ಟಿನಿಂದ) ಏ ಮುತಗಾರ, ಯಾಕ ನನ್ಗ ಅಮ್ಮಾ ಅಂತೀದ್ಯಾ? ನಾ ಮುದಿಕ್ಯಾಗೀನೇನು, ನಿನ ನಿನ ಹೊಡದ್ರ ಪಟಗ ಗುಟಗ ನೀರ ಬೇಡೀತು.

ನರಸಿಂಹ— ಇಲ್ಲ ಬಾಯಿ ಮ್ಮಲ್ಲಿ ಹೆಂಗಸರ್ಗೆ ಅಮ್ಮಾ ಅಂತಾನೆ ಕರಿಯಾದು

ರೇವತಿ— ಹೇಣ್ತಿಗೂ ಅಮ್ಮಾನ ಅಂತೀರೇನು? (ನಗುವಳು)

ನರಸಿಂಹ— ಹೋಗ್ಲಿ ಬಿಡ್ರಿ ಆ ವಿಚಾರ, ನಿಮಗೇನ ಬೇಕಹೇಳ್ರಿ, ಮುತ್ತು ರತ್ನ ಬೆಳ್ಳಿ ಬಂಗಾರ, ಯಾರ್ಗೆ ಹೇಳ್ರಿ ಸಿಂಗಾರ.

ರಮಾ— ಚೆಲೋ ಸುಲಿಲಾರ್ದ ಬಿಳಿ ಹಾಲಿನಂತ ಮುತ್ತ ತಗಿಯಪ್ಪ ನೋಡಾನ.

ನರಸಿಂಹ— (ತೆಗೆದು ತೋರಿಸುತ್ತ) ತೊಗೊಳ್ರಿ, ನೋಡಿ ಭಗ್ ಅಂತಾವ ಹಗ ಹಗ. ಉಂಗ್ರಕ್ಕೆ ಹಳ್ಳ ಬೇಕಾದ್ರ ತೊಗೊಳ್ರಿ, ಗುಲಾಬಿ ಬಾಳ ಚೆಲೊ ಐತಿ.

ರಮಾ— ಇರ್ಲಿ ಈಗ ಅದು ಬ್ಯಾಡ. ಈ ಮುತ್ತ ಹ್ಯಾಂಗ ಹೇಳು.

ನರಸಿಂಹ— ಎಂಟಾಣೆಕೊಂದು, ಬಾಳಸೋವಿ. ಸಾವಿರ ವರ್ಷ ಇಟ್ರೂ ಸುಲಿಯೂದಿಲ್ಲಾ.

ರಮಾ— ಎಂಟಾಣೆ, ಬಾಳದುಬಾರ್ಯಾತು ಬಿಡು. ಇವಕ್ಯಾಕ ಎಂಟಣೆ, ಆಣೆಕೊಂದ ರಗಡ ಸಿಗತಾವ.

ರೇವತಿ— ಯವ್ವ, ಉಂಗ್ರಕ್ಕ ಒಂದ ಹಳ್ಳನೂ ತೊಗೊಳವ್ವ

ರಮಾ— ನೀ ಸುಮ್ನ ಇರು, ನಾಯಲ್ಲಾ ತೊಗೊಂತೀನಿ. ಹೇಳ ಹೇಳು ಕೊಡಾ ಮಾತ.

ನರಸಿಂಹ— ನೀ ಕೇಳ ಬಾಯಿ,

ರಮಾ— ಹತ್ತ ಪೈಸೆ ಕೊಡತೀನ ನೋಡ.

ನರಸಿಂಹ— ಆಗುದಿಲ್ಲ ಬಾಯಿ ಪುರಾಟಾಗುದಿಲ್ಲ. ನಾಲ್ಕಾಣೆ ಕೊಡ್ರಿ ಕಡೇ ಮಾತು.

ರೇವತಿ— ಆಗೊಲ್ದಾಕ ತೊಗೋಳವ್ವ

ರಮಾ– ನೀ ಸುಮ್ನ ಇರು. ಮ್ಯಾಲೊಂದ್ಯಾಡ ಕೊಡು ಹಂಗಾರ ಇಪ್ಪತ್ತೈದು ತೊಗೋತೀನಿ.

ನರಸಿಂಹ– ಮ್ಯಾಲೆ ಕೊಡಾಕ ಇವೇನ ಉಳಾಗಡ್ಡಿ ಬದ್ನಿಕಾಯಿ ಅಲ್ಲಬಾಯಿ.

ರಮಾ– ಇರ್ಲಿ ಕೊಡು ನನ್ನ ಮಗಳಿಗೆ. ನಿನಗೂ ನಾವು ಏನಾರ ಬಿಟ್ಟು ಕೊಡತೀವಿ.

ನರಸಿಂಹ– ಹಂ..... ನೀವೂ ನನ್ನಂಗ ವ್ಯಾಪಾರಸ್ತರೇನು?

ರಮಾ– ಹೌದು, ಕಾಯಿಪಲ್ಲೆ ಮಾರತೀವಿ.

ರೇವತಿ– ಹೌದ್ರಿ ಬಾಬು, ನಮ್ಮದು ನಿಮ್ಮದು ಒಂದ ಜಾತಿ.

ನರಸಿಂಹ– ಹಾಂಗಾದ್ರೇನ ತೊಗೊಳ್ರಿ, ಒಮ್ಮೆ ನಾವು ಕೊಟ್ರ ಇನ್ನೊಮ್ಮೆ ನೀವು ಕೊಡತೀರಲ್ಲ.

ರಮಾ– ಹಂಗಾರ ಒಂದ್ಯಾಡ ಗುಲಾಬಿ ಹಳ್ಳೂ ಕೊಟ್ಟಬಿಡು (ಕೊಡುವನು ಏಟಾತ ರೊಕ್ಕ ?)

ನರಸಿಂಹ– ನೀವಽ ನೋಡಿ ಕೊಡ್ರಿ ಎಷ್ಟರ. ನಿಮ್ಮ ಮಗಳಿಗೆ ಅಂತೀರಿ.....

ರಮಾ– ಹಂಗಾರ ಈಟಮಾಡು ನಡೂರಾಗ ಗುಡಿಹತ್ರ ಎಡಕ್ಹೋಗಿ ಬಲಕ್ಹೊಳ್ಳಿ ಸಂದ್ಯಾಗಬಂದು ಕಾಯಿಪಲ್ಲೆ ಮಾರಾ ರಮಾನ ಮನಿಎಲ್ಲೈತಿ ಅಂತಕೇಳಿದ್ರ ಯಾರರ ಹೇಳತಾರ. ಅಲ್ಲಿಗೆ ಬಂದಬಿಡು. ನಿನ್ನ ರೊಕ್ಕ ಕೊಡತೀನಿ. ಬೇಕಾದಾಗ ಬಂದು ವಸ್ತಿಹಾಕಲ್ಲ ನಮ್ಮ ಮನ್ಯಾಗ, ಇನ್ನೇನು ಗುರುತಾತಲ್ಲ.

ನರಸಿಂಹ– ಆಗ್ಲಿ......ಹಾಕತೀನಿ..... (ಹೋಗಹತ್ತುವರು) ಅಯ್ಯೋ ಬರೀ ಉದ್ರಿ ಯಾಪಾರಽನ ನಿಮ್ಮದು. ಹೋದವಾರ ನಿಮ್ಮ ಮಗಳು ಎಣ್ಣಿ ಓದರೊಕ್ಕಾ ಕೊಡಲಿಲ್ಲ. ಇವತ್ತ ನೀವು ಹಂಗ......

ರೇವತಿ– (ನಿಂತುನೋಡಿ) ಏನು... ? ನೀವು.... ಗಾಂದೇಣ್ಣಿ ಸಾಬ್ರುಽಽ?

ನರಸಿಂಹ– ಹೂಂ..... (ಗೋಣಹಾಕುವನು)

ರಮಾ– (ಮುತ್ತು ನೋಡುವದರಲ್ಲಿ ಮಗ್ನಳಾದಃವಳು ಒಮ್ಮೆಲೆ) ಹಾಂ. ನೀವಽ ಏನ್ರಿ ಗಾಂದೇಣ್ಣಿ ಸಾಬ್ರು ?

ನರಸಿಂಹ– ಅಲ್ಲಬಾಯಿ ಹೋದವಾರ ಗಾಂದೇಣ್ಣಿಯಾವ ನನ್ನಹತ್ರ ಮುತ್ತ ಹಂಗ ಓದಾನ ಹಿಂದಾಗಡೆ ಕೊಡತೀನಂತ.

ರಮಾ– ಹಿಂಗs, ನಾನು ನೀನs ಅಂತ ತಿಳದಿದ್ದೆ. ನನ್ನ ಮಗಳಿಗೆ ಯಣ್ಣಿ ಹಂಗ ಕೊಟ್ಟ ಹೋಗ್ಯಾನಂತ. ಬಾಳ ಒಳ್ಳೇವ–ಇದ್ದಾಂಗ ಕಾಣತ್ತ. ನಿನಗ ಬೆಟ್ಟಿಯಾದ್ರ ನಮ್ಮನಿಗೆ ಕರಕೊಂಡಬಾ.

ರೇವತಿ– (ನಗುತ್ತ) ಇಲ್ಲ್ಯಾಕ ಎಣ್ಣಿ ನಾರತ್ತವ್ವ, ಬಂದ್ನs ಏನ ಸಾಬ.

ನರಸಿಂಹ– ಇಲ್ಲ ಬಾಯಿ, ನನ್ಗ ಒಂದ ಬಾಟ್ಲಿಕೊಟ್ಟ ಹೋಗ್ಯಾನ, ಅದನಾರತ್ತ. ಬಲುವಾಸ್ನಿ ಅವ್ನ ಎಣ್ಣಿ.

ರಮಾ– ಕರಕೊಂಡ ಬಾ ಮರೀದ ಬೆಟ್ಟಿ ಆದ್ರ (ಮುತ್ತು ನೋಡುತ್ತ) ಎಷ್ಟ ಛಂದದಾವ.....

ರೇವತಿ– ಏ ಸಾಬ, ಈಕಿ ನಮ್ಮವ್ವ, ಸುಳ್ಳಹೇಳಿದ್ರ ನಡಿಯದಿಲ್ಲ. ಸುಮ್ನ ತೋರ್ಸಿ ಬಿಡು ನಿನ್ನ ರೂಪಾನ.

ನರಸಿಂಹ– ನಿಮ್ಮವ್ವ ಗುಮ್ಮವ್ವ, ಈಕಿ ಕೈಯಾಗ ಸಿಕ್ರ ಗುಳಮ್ಮವ್ವ

ರಮಾ– ಏನದು ಗುಳಮ್ಮು, ಮುತಗಾರ.

ನರಸಿಂಹ– ಏನಿಲ್ಲ ಬಾಯಿ ಗುಮ್ಮಳಸರ. ಅಂದ್ರ ಗೋರಮಣಿ ಸರ ಕೇಳಿದ್ಲು ನಿಮ್ಮ ಮಗಳು.

ರಮಾ– ಇರ್ಲಿ ಬಾರ, ಹ್ಯಾಂಗರ ಸಂಜಿಕೆ ಮನಿಗೆ ಬರತಾನಲ್ಲ ಅವಾಗ ಎಲ್ಲಾ ಏನೇನ ಬೇಕ ಅವ್ನ ತೊಗೋಳಂತಿ (ಹೋಗಹತ್ತಲು)

ರೇವತಿ– ಚಲೇಂಗೆ.

ನರಸಿಂಹ– ಫಿರ್ ಮಿಲೇಂಗೆ.

ರಮಾ– (ಹೊಳ್ಳಿ ನಿಂತು) ಏ ಏನದು ಅಂಗೆಪಿಂಗೆ ಅವ್ನಕೂಡ ಮಂಗ್ಯಾ. ಅವ ಮುತಗಾರ, ಹಿಂದಾಗಡೆ ಮುತಗಿ ಹಾಕ್ಯಾನ (ಮತ್ತೆನೊಡುತ್ತ ನಿಲ್ಲಲು) ಏ ಅಲ್ಲದು ಚಾಳಿ.....ನಡಿ ಸುಮ್ನ (ಹೋಗುವರು)

ನರಸಿಂಹ– ಅಂತೂ ಬ್ಯಾಟಿ ಬಲಿಯಾಗ ಬಿದ್ದೈತಿ. ಹೀಂಗ ಮಳ್ಳ ಮಾಡಿ ಕೊಳ್ಳಿಗೆ ತಾಳಿ ಬಿಗದ ಬಿಡತೀನಿ, ಅವರವ್ವನs ಮನಿಗೆ ಬಾ ಅಂದಿಂದ ಇನ್ನ್ಯಾಕ ಅಂಜಿಕಿ. ಮನಿಯಾರ ಕದ ತಗದ ಕಳ್ಳನ್ನ ಒಳಗ ಹೋಗಿಸಿ ಕೊಂಡಾಂಗಾತು. ಹೊಕ್ಕೀನಿ ಇವತ್ತ ರಾತ್ರಿ ಧ್ವಜಾ ಅಲ್ಲೇ ಊರತೀನಿ (ಹೋಗುವನು).

===***====***===

ಪ್ರವೇಶ – ಐದು

ಅಶ್ವತ್ಥರ ಮನೆ

–ಮದುವೆಯ ಮಂಟಪ–

(ರಾಜು–ಜಯಾ ವಧುವರರಾಗಿ ಹಸೆಯ ಮೇಲೆ ಕುಳಿತಿದ್ದಾರೆ. ಉದಯ, ಅರುಣ, ಬಾಲೂ, ಇತರರೆಲ್ಲ ಬಂದು ನೆರೆದಿದ್ದಾರೆ. ಭಾರತಿ ಕಳಸವಿಡಿದು ನಿಂತಿದ್ದಾಳೆ. ಲೀಲಾ ಒಂದು ಮೂಲೆಯಲ್ಲಿ ಸಪ್ಪಗೆ ನಿಂತಿದ್ದಾಳೆ).

ಆಚಾರ್ಯ– (ವರನ ಕೈಗೆ ಮಂಗಲಸೂತ್ರ ಕೊಟ್ಟು ಮಂತ್ರ ಪ್ರಾರಂಭಿಸುವನು. ಅರುಣ ಎಲ್ಲರಿಗೂ ಅಕ್ಷತೆ ಕೊಡುವನು)

ತದೇವ ಲಗ್ನಂ ಸುದಿನಂತುದೇವಾ। ತಾರಾಬಲಂ ಚಂದ್ರ ಬಲಂತು ದೇವಾ॥

ವಿದ್ಯಾಬಲಂ ದೈವಬಲಂತು ದೇವಾ। ಶುಭಮುಹೂರ್ತೇ ಸಾವಧಾನಾ ಸುಲಘ್ನೇ

ಜಯಮಂಗಳಂ ಜಯನಮಃ ಪಾರ್ವತಿ ಹರಹರ ಮಹಾದೇವ ॥

(ಎಲ್ಲರೂ ಅಕ್ಷತೆ ಹಾಕುವರು). ಭಾರತಿ ಕಳಸವಿಡಿದು ಮುಂದೆ ಬಂದು ವಧುವರರಿಗೆ ಬೆಳಗಿ, ಲೀಲಾಳನ್ನುದ್ದೇಶಿಸಿ)

ಭಾರತಿ– ಅಕ್ಕಾ, ತೆಗೆದುಕೊ ವಧುವರರಿಗೆ ಕಳಸ ಬೆಳಗು.

ಲೀಲಾ– (ದುಃಖದಿಂದ) ಆ ಭಾಗ್ಯ ನಾನು ಪಡೆದುಬಂದಿಲ್ಲ ತಂಗಿ.

ಭಾರತಿ– ಸುಮ್ಮನೆ ಬೆಳಗಕ್ಕ ಏನೂ ಯೋಚನೆ ಮಾಡಬೇಡ. (ಲೀಲಾ ಕಳಸ ತೆಗೆದುಕೊಂಡು ವಧು–ವರರ ಮುಂದೆ ಬಂದು ನಿಲ್ಲುತ್ತಲೇ)

ಒಬ್ಬಳು– ಅಯ್ಯ ಅಲ್ನೋಡೆ. ಗಂಡಸತ್ತ ರಂಡೀ ಕೂಡ ಕಳಸಾ ಬೆಳಗಸ್ತಾರ.

ಮತ್ತೊಬ್ಬಳು– ನಾನೆಲ್ಲಿ ನೋಡಿಲ್ಲವ್ವಯವ್ವ ಇಂಥಾದ್ದ. ಇದೊಂದು ಹೊಸಾದು. ರಂಡಿ ಮುಖಾಸತೆ ನೋಡಬಾರ್ದು ಗಂಡಾಂಬೇಣ್ತೆ. ಅಂಥಾದ್ದಲ್ದ ಆಕಿ ಕೂಡ ಕಳಸಾಬೆಳಗಸೂದು ಬ್ಯಾಡವ್ವಯವ್ವ, ಇಂಥಾ ಹೊಲಸು.

ಮಗುದೊಬ್ಬಳು–ಈಗs ರಂಡೀ ದರ್ಶನಾತು, ಇನ್ನ ಮುಂದ ಹ್ಯಾಂಗ ಏನ. ಇಂಥಾ ಒಳ್ಳೆ ವ್ಯಾಳೆದಾಗ ಅರಿಷ್ಟ ಮುಖಾ ನೋಡಾದ ಬ್ಯಾಡವ್ವ ಯವ್ವ ನೋಡಬಾರದು. (ಲೀಲಾ ಅದೆಲ್ಲ ನುಡಿಗಳನ್ನು ಕೇಳಿ ಬೆಳಗದೆ ಭಾರತಿಯ ಕೈಯಲ್ಲಿ ಕಳಸಕೊಟ್ಟು ದುಃಖಿಸುತ್ತ ಒಳಗೆ ಓಡುವಳು)

ಅಶ್ವಥ– (ಎದ್ದುನಿಂತು) ಏಕಮ್ಮ ಏನಾಯ್ತು ? ಲೀಲಾ ಏಕೆ ಓಡಿ ಹೋದಳು.

ಭಾರತಿ– ಏನಿಲ್ಲಪ್ಪಾ.

ಉದಯ– ಏನಿಲ್ಲ ಕುಳಿತುಕೊಳ್ಳಿ ಸರ್. ಇಂಥ ಸಮಯದಲ್ಲಿ ಅವಳಿಗೆ ಪತಿಯ ಸ್ಮರಣೆಯಾಗುವದು ಸಹಜವಲ್ಲವೆ?

ರಾಜು– ಲೀಲಾ.... ತಂಗೀ..... ತಂಗೀ..... (ಎದ್ದು ನಿಲ್ಲುವನು)

ಉದಯ– (ಕೂಡಿಸಿ) ಸಮಾಧಾನ ತಾಳು ರಾಜು, ಈ ಶುಭ ಘಳಿಗೆಗೆ ಆತಂಕ ತರಬೇಡ. ಎಲ್ಲರೂ ಕುಳಿತುಕೊಳ್ಳಿ, ಭಾರತಿ ಈ ಆನಂದದ ಸಮಯದಲ್ಲಿ ಎಲ್ಲರ ಮನ ತಣಿಯುವಂತೆ ಒಂದು ಹಾಡು ಹೇಳಮ್ಮ.

ಭಾರತಿ– (ನಾಚಿ) ನಾನೊಲ್ಲೆನಣ್ಣಾ.

ಬಾಳು– ಹೇಳಮ್ಮ ನಾಚಬ್ಯಾಡ ಹೇಳು. (ಭಾರತಿ ಹಾಡತೊಡಗುವಳು)

–ತೆರೆ–

===***=====***===

ಪ್ರವೇಶ–೬

–ರಸ್ತಾ–

(ಜೋಕರನಂತೆ ವೇಷಧರಿಸಿ ಹೆಗಲಿಗೊಂಡು ಏರ್‌ಬ್ಯಾಗ ಹಾಕಿಕೊಂಡು ಕೇಶವ ಕರವಸ್ತ್ರದಿಂದ ಗಾಳಿ ಹಾಕಿಕೊಳ್ಳುತ್ತ ಬರುವನು)

ಕೇಶವ– ಉಸ್..... ಏನ್ ಬಿಸಲು ಏನ ಸೆಕಿ, ಉಸ್. ಊರಂತೂ ಸೇರಿದ್ಯಾ. ಇನ್ನ ನಮ್ಮತ್ತಿ ಮನಿ ಎಲ್ಲೈತಿ ಹುಡುಕೂದಽ ತ್ರಾಸ. ಊರಾಗಂತೂ ಹೊಕ್ರಾತು. ಯಾರ್ನರ ಕೇಳಿದ್ರ ಹೇಳೇ ಹೇಳತಾರ. ಅದ್ರಾಗ ನಮ್ಮತ್ತಿ ಕಾಯಿಪಲ್ಲೆ ವ್ಯಾಪಾರ ಮಾಡತಾಳಂತ. ಅಂದಮ್ಯಾಲೆ ಊರ ಮಂದಿಗೆಲ್ಲಾ ಗೊತ್ತಿರಬೇಕು. ಅತ್ತೀಮಗಳು ಬೆಳದ ದೊಡ್ಡದಾಗ್ಯೆತೆಂತ, ನನ್ಗ ಕೊಡತೀನಿ ಅಂತ ಹೇಳಿಕಳಿಸ್ಯಾಳ. ರೇವತಿ ನನ್ನ ಲಗ್ನ ಆಗಾಕ ಒಪ್ಪತಾಳೋ ಇಲ್ಲೊ? ಒಪ್ಪದೇನಮಾಡತಾಳ ನನ್ನಂಥ ರೂಪವಂತ, ಗುಣವಂತ, ಸುಧಾರಿಸಿದ ನವಯುವಕನ್ನ ಬಿಟ್ಟು ಮತ್ಯಾವ ರಾಜನ್ನ ಕೈಹಿಡಿತಾಳ. ಅತ್ತಿ ಹೇಳಿಂದ ಮಗಳ್ದೇನು? ಹೋಗಾನ ಮದ್ಲ. ರೇವತಿ.... ಎಂಥಾ ಬಿಟ್ಟಿಫುಲ್ ಹೆಸರು. ರೇವತಿ ರೇವಡಿ ಅಂತಾ ಸಿಹಿಹೆಸ್ರು,

ನರಸಿಂಹ– (ಅವನ ಬಡಬಡಕಿ ಕೇಳಿ) ಯಾರಪ ಇವಾ ರೇವತಿ ಅಂತಾ ನನ್ನ ಮಾಲಿನ ಹೆಸರ್ಗೊಂಡು ಬಡಬಡಸಿಕೊಂತಾ ಹೊಂಟಾನಲ್ಲಾ? ನನ್ನ ರೇವತಿಗೆ ಅಂತಾನ ಏನ ಅವ್ನ ಮಾಲಿನ ಹೆಸ್ರು ಅದಽ ಐತೆ? ನೋಡಾನ, ತೊಡವಿ ನೋಡಿ ಕೊಡ್ಲಿ ಕೇಳಾನ. (ಕೆಮ್ಮುತ್ತ ಕ್ಯಾಕರಿಸುತ್ತ ಅವನ ಮುಂದೆ ಉಗುಳುತ್ತ ಬರುವನು)

ಕೇಶವ– (ಹೆದ್ರಿ) ಯಾಕ್ರೀ, ಕೆಮ್ಮತೀರಿ, ಕ್ಯಾಕರಸ್ತೀರಿ, ನನ್ನ ನೋಡಿ ಕರಡಿ ಗುಡಿಗಿದಾಂಗ ಗುಡ್ಗತೀರಿ.

ನರಸಿಂಹ– ಏ ಕೆಮ್ಮಬಂದ್ರ ಕೆಮ್ಮಬಾರದೇನೊ. ಈ ಊರಿಗೆ ಹೊಸದಾಗ ಬಂದಾಂಗ ಕಾಣತ್ತ ನೀನು ?

ಕೇಶವ– ಹೌದ್ರಿ ಹೊಸಬ.

ನರಸಿಂಹ– ಇಲ್ಲ್ಯಾರ ಮನಿಗೆ ಬಂದೀದಿ ?

ಕೇಶವ– ನೀವು ಇದ ಊರಾರೇನ್ರಿ? ಇಲ್ಲೆ ಎಲ್ಲಾರೂ ಗೊತ್ತದಾರೇನ್ರಿ?

ನರಸಿಂಹ– ಇದೊಂದs ಊರ್ಯಾಕ ಸುತ್ತ ಹಳ್ಳ್ಯಾಗಸತೆ ಕೇಳು. ಯಾರ್ಯಾರ ಮನ್ಯಾಗ ಎಷ್ಟೆಷ್ಟ ಮಂದಿ ಅದಾರ, ಆದ್ರಾಗ ಗಂಡ್ಸರೆಷ್ಟು ಹೆಂಗ್ಸರೆಷ್ಟು ಅನ್ನಾದ ಲಿಷ್ಟs ಕೊಡತೀನಿ.

ಕೇಶವ– ಹೀಂಗನ್ರಿ. ಹಂಗಾರ ನಮ್ಮತ್ತಿ ಗೊತ್ತದಾಳೇನ್ರಿ ?

ನರಸಿಂಹ– ನಿಮ್ಮತ್ತೆಂದ್ರ? ಈ ಊರಾಗ ಬಾಳ ಮಂದಿ ಅಟಾರ ಅತ್ತ್ಯಾರು. ಅದ್ರಾಗ ಈ ವರ್ಷಂತೂ ಬಾಳ ಹೆಣ್ಣಿನ ಮದ್ವಿ ಆಗ್ಯಾವ. ನಿಮ್ಮಂಥ ಅಳಿಯಾರು ದಿನಾ ಬಂದ ಬಂದ ಹೋಗತಾರ. ನಿಮ್ಮತ್ತಿ ಹೆಸರೇನು?

ಕೇಶವ– ಅತ್ತಿ.... (ವಿಚಾರಿಸಿ) ಅತ್ತಿ....ಅತ್ತೀ ಹೆಸ್ರ ಮರತೈತಿ ನೋಡ್ರಿ.

ನರಸಿಂಹ– ಅತ್ತೀದ ಮರತಿದ್ರ ಅತ್ತೀ ಮಗಳ್ದಾದ್ರು ನೆನಪಿರಬೇಕಲ್ಲಾ ?

ಕೇಶವ– ಆಕೀದು ಗೊತ್ತಿತ್ರಿ ಇದ ಈಗ ನೆನಪಹಾರಿತ ನೋಡ್ರಿ. ಈಗ ಅಂದ್ಯಾ, ನಿಮ್ಮ ಬೆದರಿಕೆಗೆ ಹೆದ್ರಿ ಓಡಿಹೋಗಿ ಬಿಟ್ಟಿತು.

ನರಸಿಂಹ– ನೆನಪಿದ್ರು ಹೇಳಾಕ ನಾಚ್ಗಿ ಕಾಣತ್ತ. ಇನ್ನಾ ಹೊಸದಾಗsನ. ಇಲ್ಲಿ ನಿಮ್ಮತ್ತಿ ಏನ ಕೆಲ್ಸ ಮಾಡತಾಳ ?

ಕೇಶವ– ಅತ್ತ್ಯಾ..... ಕಾಯಿಪಲ್ಲೆ ಮಾರತಾಳಂತ. ನನ್ಗೂ ಪೂರಾ ಗೊತ್ತಿಲ್ಲ. ಒಬ್ಬ ಮಗ್ಳು. ನಮ್ಮ ಮನ್ಯಾಗೂ ಗಂಡಸ್ರಿಲ್ಲ. ಮಗಳ ಕೊಡತೀನಿ ಬಾ ಇಲ್ಲೆ ಇರಂತಿ ಅಂತ ಹೇಳಿಕಳಿಸ್ಯಾಳ್ರಿ.

ನರಸಿಂಹ– (ಸ್ವ) ಅಲೆಲೆ ಅಲ್ಗೆ ಬಂದಾನಿವ (ಪ್ರ) ಓಹೋ ತಿಳೀತಬಿಡು. ಆ ಕಾಯಿಪಲ್ಲೆ ಮಾರೂ ರಮಾನ ಮಗ್ಳು ರೇವತಿ ಗಂಡಾ ಆಗಾಕ ಬಂದೀದೆಂದಾಂಗಾತು.

ಕೇಶವ– (ಉತ್ಸಾಹದಿಂದ) ಹೂನ್ರಿ....ಹೂನ್ರಿ. ರೇವತಿ.....ರೇವತಿ.... ಆಕೀನರಿ ನನ್ನ ಹೇಣ್ತಿ ಆಗಾಕಿ. ಬಾಳ ಚಂದ ಅದಾಳಂತ ಹೌದ್ರ್ಯಾ?

ನರಸಿಂಹ– ರತಿ..... ರತಿ..... ಇದ್ದಾಂಗ ಆದಾಳಬಿಡು.

ಕೇಶವ– ನಾ ಆಕೀಗೆ ವರಾ ಆಕ್ಕೀನಿಲ್ರಿ?

ನರಸಿಂಹ— ಆಕ್ಕೀದಿ. ನೀನೇನ ಚಿಂತಿ ಮಾಡಬ್ಯಾಡ. ನೀ ಕಾಮಣ್ಣಿ ಆಕಿ ರತಿ. ಇಬ್ರಿಗೂ ಮೇಳಾಗುತ್ತ.

ಕೇಶವ— (ಅವಸರದಿಂದ) ಹಾಂಗರ ತೋರಸ್ರಿ ಮಧ್ಲ ಮನಿ ಎಲ್ಲೈತಿ. ದೌಡ ನನ್ನ ಹುಡ್ಗಿ ಮಾರಿ ನೋಡಬೇಕಾಗ್ಯೆತಿ.

ನರಸಿಂಹ— ತಡಿ ತಡಿ, ತತ್ತರಸಬ್ಯಾಡ.

ಕೇಶವ— ನಿಂದ್ರಾಂಗ ಆಗೊಲ್ಲು ತೋರ್ಸರಿ ದೌಡ ಹೊಕ್ಕೀನಿ. ತೋರ್ಸರೀ...... ತೋರ್ಸರಿ.

ನರಸಿಂಹ— (ಸ್ವ) ಏ ಪೂರಾ ತಲಿ ಕೆಟ್ಟೈತ್ರೆಪ ಇವಂದ.

ಕೇಶವ— ದೌಡ ತೋರಿಸ್ರಿ. (ಅವನನ್ನು ಹಿಡಿದು ಪೀಡಿಸುವನು)

ನರಸಿಂಹ— ತೋರಸ್ತೀನಿ ಬಿಡು. ಅಲ್ಲಿ ಕಾಣತ್ತಲ್ಲ ಆ ಗುಡಿಹತ್ರಾ ಹೀಂಗ ಹೊಳ್ಳಿ ಸಂದ್ಯಾಗ ಹೋಗಿ ಮಂದಿಕೇಳ ಹೇಳತಾರ.

ಕೇಶವ— ಥ್ಯಾಂಕ್ಸರ್‍ಯಾ..... ಬರ್ತೀನಿ..... ಬರತೀನ್ರ್ಯಾ (ಮತ್ತೆ ಮತ್ತೆ ಹೇಳುವನು)

ನರಸಿಂಹ— ಏ ಹೋಗಲೇ..... (ಓಡುವನು) ಈ ಕಡ್ಡೀ ಪೈಲ್ವಾನ ನನ್ನ ರೇವತಿಗೆ ವರಾ ಅಂತ ನೋಡ್ತ್ರಿ ಸೊಣಗ್ಯಾ. ಇವ್ನ ನೋಡಿದ್ರ ಸಾಕ ಕಣ್ಣ ಮುಚಿಗೊಳತ್ತ ನನ್ನ ಅರಗಿಣಿ. ಅಪ್ಪವ್ವಗ ಬುದ್ದಿಲ್ಲ. ನೋಡಾನ ನನ್ನೂ ಹ್ಯಾಂಗರ ಅವ್ರಪುನಿ ಹಿಡ್ತ ಸಿಕ್ಕೈತಿ, ಹೊಂಚಹಾಕಿ ಇವ್ನ ಓಡ್ಸಿ ನನ್ನ ರೇವತಿ ನನ್ನ ಹತ್ರ ಇಟಗೊಳ್ಳಾಕಬೇಕು. ಇವ ಎಷ್ಟರಾವ. ಲೇ ಅಳಿಯಾ, ನಿನ್ನ ಅಳಿದಿದ್ರ ನಾನ್ಯಾಕ ಹುಟ್ಟಬೇಕು. ನನ್ನ ನೀ ಅಳೀತೀದ್ಯೋ ನಿನ್ನ ನಾ ಅಳೀತೀನೋ ನೋಡೇ ಬಿಡಾನ. ಬರ್ತೀನಿ ಈಗs ತಯ್ಯಾರಾಗಿ ವಿಶ್ವಾಮಿತ್ರನಂಗ (ಹೋಗುವನು).

—ತೆರೆ—

====****====****====

ಪ್ರವೇಶ – ೭

–ರಸ್ತಾ–

(ಕೇಶವ ಸೀರೆಯನ್ನುಟ್ಟುಕೊಂಡು ನರಸಿಂಹ ಸಮೇತ ಪ್ರವೇಶಿಸುತ್ತಾನೆ)

ನರಸಿಂಹ– ಅಂತೂ ರೇವತಿ ಪಾರಮಾಡಿದ್ವಿ, ವಕೀಲ ನನ್ನ ಮದುವಿ ಹರೇದ ಹುಡಿಗೀ ಕೂಡಾತಂತ ಹಾರಾಡಿದ. ಅವಂಗೇನಗೊತ್ತು ಮುಸುಗು ಹಾಕ್ಕೊಂಡು ಕುಂತಾವ್ವ ರೇವತಿ ಅಲ್ಲ ಇದು ಪರತಪಾವತಿ ಅನ್ನೂದು. ಅಂತೂ ರಮಾ ವಕೀಲನಕೂಡ ಎಲ್ಲಾ ಎಳಕೊಂಡ್ಲ.

ಕೇಶವ– ಅದೆಲ್ಲ ಮುಗೀತು. ಇವತ್ತ ರಾತ್ರಿ ಐತೆನೋಡ ಏನಿರಾದು. ನಾನss ರೇವತಿ ಅಂತ ತಿಳಿದು ಏನೇನ ಮಾಡತಾನ ಏನ ಅವ.

ನರಸಿಂಹ– ನೀ ಹೆದರಬ್ಯಾಡ. ಮೊದಲ ನಾಚಿದಾಂಗ ಮಾಡು. ಆಮ್ಯಾಲೆ ನಗು. ಆಮ್ಯಾಲೆ ಬಂಗಾರ ಸ್ವಾಮಾನ ಕೊಡು ಅನ್ನು. ಎಲ್ಲಾ ಮೊದ್ಲ ಇಸಗೋ, ನಂತರ ಗಲ್ಲಕ ಬೆಲ್ಲಾ ಕೊಡು. ಆಮ್ಯಾಲ ಸುರುಮಾಡು ಮಲ್ಲಕಾಳಗ. ನಾನೂ ಅಲ್ಲೇ ಇರತೀನಿ ಗುಲ್ಲ ಎಬ್ಬಿಸಿ ಹಲ್ಲ ಕಿಸಿಯೂಹಾಂಗ ಹೊಡದ ಬರೂನ.

ಕೇಶವ– ಬಿಡು ಅದರ ಕಾಳಜಿ, ಸುದ್ದಾ ಹೆಣ್ಣು ಮಾಡಿದಾಂಗ ಮಾಡತೀನಿ ಕಡಿಗೆ ಮಣ್ಣು ಮುಕ್ಕಸ್ತೀನಿ.

ನರಸಿಂಹ– ನಡಿ.... ನಡಿ, ಆಗಲೇ ಹೊತ್ತೂನು ಆಯ್ತು ಹಾದಿ ಕಾಯ್ತಾ ಇರಬಹುದು. [ಹೋಗುವರು].

–ತೆರೆ–

===***====***====

ಪ್ರವೇಶ–೮

–ಬಾಳೂ ವಕೀಲನ ಮನೆ–

(ಮನೆಯನ್ನು ಸಿಂಗರಿಸಲಾಗಿದೆ. ಒಂದೆಡೆ ಮಂಚ ಶೋಭಿಸುತ್ತಿದೆ. ಬಾಳೂ ಅಡ್ಡಾಡತ್ತಿದ್ದಾನೆ).

ಬಾಳು– (ನಗುತ್ತ) ಹಿ.... ಹಿ.... ಹೆಂಡತಿ, ಸುರಸುಂದರಿ, ಅಪ್ಸರೆ, ರತಿ, ರಜನಿ, ಶರ್ವಾಣಿ ಎಲ್ಲರಿಗಿಂತ ಒಂದು ಗುಂಜಿ ಮೇಲು ರೂಪವತಿ. ಮದುವೆ ಮಂಟಪದಲ್ಲಿ ಎಷ್ಟು ನೋಡಬೇಕೆಂದರೂ ಮುಸುಕು ತೆಗೆಯಲಿಲ್ಲ. ಬಹಳ ನಾಚುವ ಸ್ವಭಾವ. ಇಲ್ಲಿ ಬಂದನಂತರ ತಾನೇ ಸರಿ ಹೋಗುತ್ತೆ. ಹಣ ಹೋದರೂ ಚಿಂತೆಯಿಲ್ಲ. ಮುತ್ತಿನಂತಾ ಹೆಂಡತಿ ಸಿಕ್ಕಳು. ಕೈತೊಳೆದುಕೊಂಡು ಮುಟ್ಟಬೇಕು. ಮುಟ್ಟಿದರೆ ಮಾಸುವಾಂಗ ಅದಾಳ. ನಾನೇ ಧನ್ಯ.... ನಾನೇ ಧನ್ಯ.

ಉದಯ– (ಪ್ರವೇಶಿಸಿ) ಆ ಧನ್ಯತೆಗೆ ನಾನೇ ಮಾನ್ಯ

ಬಾಳು– ಹೌದು ಹೌದು, ನೀಮಾಡಿದ ಸಾಹಸ ಅಸಮಾನ್ಯ.

ಉದಯ– ಮಡದಿಯ ಆಗಮನ ಕಾಯ್ದು ನಿಂತಂತಿದೆ ಮನ್ಮಥರು.

ಬಾಳು– ರತಿಗಾಗಿ ಮನ್ಮಥ ಕಾಯಲೇಬೇಕಲ್ಲ. ಅವಳಿಂದ ಅಗಲಿರಲು ಸಾಧ್ಯವೆ?

ಉದಯ– ನಿಜ ನಿಜ. ಅಗಲಿರಲು ಎಂದೂ ಸಾಧ್ಯವಿಲ್ಲ. ಮುಪ್ಪಾವರಿಸಿದರೂ ಸದಾ ಅಪ್ಪುಗೆಯಲ್ಲಿಯೇ ಇರುವವರು ಅವರು. (ನರಸಿಂಹ ಕೇಶವರು ಬರುವುದು ಕಂಡು)

ಬಾಳು– ರತಿ ಮನ್ಮಥರಿಗೆಲ್ಲಿ ಬರಬೇಕಯ್ಯ ಮುಪ್ಪು. ಅವರು ಸದಾ ನವ ತಾರುಣ್ಯಭರಿತರು.

ಉದಯ– ಓ ಬಂದೇಬಿಟ್ಟರಲ್ಲ ರಾಣಿಸಾಹೇಬರು. ನಾನಿನ್ನು ಬರುತ್ತೇನೆ. ನನ್ನದೇನು ಇದೆ ಇನ್ನು ಇಲ್ಲಿ ಕೆಲಸ.

ಬಾಳು– ಹೋಗಿಬನ್ನಿ, ಆಗಾಗ ಬರುತ್ತಿರಿ (ಹೋಗುವನು).

ನರಸಿಂಹ– ನಮಸಗಾರ ವಕೀಲ ಸಾಹೇಬರಿಗೆ.

ಬಾಳು– ನಮಸ್ಕಾರ, ಬರಬೇಕು. ರಮಾ ಬರಲಿಲ್ಲವೆ ?

ನರಸಿಂಹ– ಅವಳಿಗೆ ತುಂಬಾ ಕೆಲಸ, ಅದಕ್ಕೆ ಬರಲಿಲ್ಲ. ನಿಮ್ಮ ಮಡದಿ ಬಂದಿದ್ದಾಳಲ್ಲ ಮತ್ತೇಕೆ ರಮಾ.

ಬಾಳು– ಹೂಂ ಹೀಗೋ, ಒಳಗೆ ಕರೆದುಕೊಂಡು ನಡೆಯಿರಿ. ಆಗಲೇ ಕತ್ತಲಾಗಿದೆ ಊಟಮಾಡಿ ಪ್ರಯಾಣ ಬೆಳೆಸುವಿರಂತೆ.

ನರಸಿಂಹ– ಊಟ ಮಾಡಿಯೇ ಬಂದಿರುವೆ. ಈಗ ಸನ್ಯ ಗಾಡಿ ಐತ್ರಿ ನಾ ಹೋಗತೀನಿ. ನಿಮ್ಮ ಹೇಣ್ತಿ ಕರಕೊಳ್ರಿ, ಒಳಗಹೋಗ ಮಗಳ.

ಬಾಳು– ಅಯ್ಯೋ ಇಷ್ಟು ಬೇಗ ಹೊರಟು ಬಿಡುವುದೇ, ಆಗಲಿ ನಡೆಯಿರಿ. (ಸ್ವ) ನೀವಿದ್ದರೆ ಸರಸವಾಡಲು ನಮಗೂ ತೊಂದರೆ.

ನರಸಿಂಹ– ಬರತೀನ್ರಿ, ಹೇಣ್ತಿ ಚೆಲೊತ್ತ್ಯಾಗ ನೋಡಿಕೊಳ್ರಿ, ಗಂಡಾ ಹೇಳಿದ್ಯಾಂಗ ಕೇಳಿಕೊಂಡು ಹೋಗವ್ವ. (ಹೋಗಿ ಮರೆಗೆ ನಿಲ್ಲುವನು. ಕೇಶವ ಒಳಗೆ ಹೋಗುವನು).

ಬಾಳು– (ಕೋಟು ಕಳಚಿ ಕುರ್ಚಿಗೆ ಹಾಕಿ ಬಾಗಿಲ ಹತ್ತಿರ ಹೋಗಿ) ಪ್ರಿಯೇ.... ನನ್ನ ಅರಗಿಣಿಯೇ... (ಸ್ವ) ಕೇಳಿಸಿತೋ ಇಲ್ಲವೋ ಮೊದಲೇ ನಾಚುವ ಸ್ವಭಾವ. (ಪ್ರ) ರೇವು ರೇವತಿ. (ಮುಸುಕು ಹಾಕಿಕೊಂಡು ಬರುವಳು ಹತ್ತಿರ ಹೋಗಿ) ನನ್ನ ಹತ್ತಿರ ಬಂದ ನಂತರವೂ ಮುಸುಕು ಹಾಕುವದೇ? ಇಲ್ಲಿ ಯಾರೂ ಇಲ್ಲ ನಾಚಬೇಡ ತೋರಿಸು ನಿನ್ನ ಮಂದಸ್ಮಿತ ಕಮಲಮುಖ. (ಮತ್ತೆ ಹೊರಳಿ ನಿಲ್ಲುವಳು) ತುಂಬಾ ನಾಚತಿಯಾ ನೀನು. ನಾ ನೋಡಿದರೆ ತುಂಬಾ ರಸಿಕ. (ಕೈಹಿಡಿದು) ಬಾ ಕೂಡೋಣ. (ಮುಸುಕು ಹಿಂದೆ ಸರಿಸಿ ಗಲ್ಲ ಹಿಡಿದು) ಆಹಾ. ಎಷ್ಟು ಮೃದುವಾದ ಗಲ್ಲ, ಶಶಿವದನೆ, ನೀಲಲೋಚನೆ ಮಾತನಾಡುವದಿಲ್ಲವೇ ನನ್ನಕೂಡ (ನಗುವಳು) ಎಷ್ಟು ಚೆನ್ನಾಗಿ ನಗುವಿಯಲ್ಲೆ ನನ್ನರಗಿಣಿ. ಏನಾದರೂ

ಬೇಕೇನು ಹೇಳು, ಸಂಕೋಚ ಬೇಡ. ನಿನಗಾಗಿ ಬೇಕಾದಷ್ಟು ವಸ್ತ್ರಪಡವೆ ಮಾಡಿಸಿಟ್ಟಿರುವೆ. ಈಗಲೇ ತಂದೆ ತಡೆ. (ತಂದು) ಕೊರಳಿಗೆ ಕಟ್ಟುವೆ ಸೆರಗುತೆಗೆ. (ಕೈ ಹಿಡಿಯುವಳು) ಬೇಡವೆ ಹಾಗಾದರೆ ನೀನೇ ಕಟ್ಟಿಕೊ ಪ್ರಿಯೇ. ರೇವು ನಿನ್ನ ಕೋಗಿಲೆಯ ಕಂಠದಿಂದ ಒಂದು ಹಾಡು ಹಾಡಿ ನನ್ನ ಮನತಣಿಸು. (ತಲೆದೂಗುವಳು) ಹಾಡುವದಿಲ್ಲವೆ? ಹೋಗಲಿಬಿಡು. ಮಾತನ್ನೂ ಆಡುವದಿಲ್ಲವೆ ? ಬಿಡು, ನಾಳೆ ನೀನೇ ಮಾತನಾಡುವೆ (ಮಂಚದ ಮೇಲೆ ಮಲಗಿ ಬಳಿಗೆಳೆದುಕೊಂಡು) ರೇವತಿ ಮನದಲ್ಲಿ ದುಗುಡವಲ್ಲವೆ ನಿನಗಿಂದು (ಅಪ್ಪುವನು, ರಂಗಭೂಮಿ ಕತ್ತಲಾಗುವದು) ಅಯ್ಯೋ ಸತ್ತೆನಪ್ಪೊ, ಬಿಡೋ ನನ್ನ ಬಿಡೋ ಮೋಸ....ಮೋಸ.... ಇದು ಹೆಣ್ಣಲ್ಲ... ರಾಕ್ಷಸಿ, ಗಂಡು.... ಹೆಣ್ಣಲ್ಲ.... (ಲೈಟ ಹತ್ತುವದು)

ನರಸಿಂಹ– (ಓಡಿಬಂದು) ಏನಾತ್ರಿ ಹಿಂಗ್ಯಾಕ ಚೀರತೀರಿ ?

ಬಾಳು– ಬಿಡೋ ನನ್ನ.... ಇದು ಹೆಣ್ಣಲ್ಲ... ಗಂಡು... ಗಂಡು....

ಕೇಶವ– ತಾಳೋ ಮಗನ. ಮುದಕಾಗಿ ಹರೇದ ಹುಡುಗಿ ಮಾಡಿಕೋಬೇಕಂತ ಮಾಡಿದ್ಯಾ ? ಉಳಿಲೇ ಮಗನ ನನ್ನ ಕೈಯಾಗ.

ನರಸಿಂಹ– ಹಾಕಲೇ ಕೇಶ..... ಬಿಡಬ್ಯಾಡ.... ಹಾ ಪ್ರಿಯೇ, ಹಾ.... ರೇವತಿ ಹ್ಯಾಂಗೈತೋ ಮಗನ ಪರತಪಾವತಿ. ಹ್ಯಾಂಗೈತೋ ಮಗನ ಪ್ರೇಯಸಿ ಹೊಡೆತ.

ಬಾಳು– ಬಿಡ್ರೋ.... ನಿಮ್ಗ ಕೈಮುಗೀತೀನಿ.

ಕೇಶವ– ಇಲ್ಲಿ ಬಾರೋ ಮಗನ ನನ್ನ ಅಪ್ಪಿಕೋ, ಹಿಚಗಬಾರೋ ಕೈನ, ಕಡಿಬಾರೋ ಗಲ್ಲನ, ಉಣ್ಣಬಾರೋ ಸುಖಾನ, ಸ್ವರ್ಗ ಸುಖಾನ.

ಬಾಳು– ಬಿಡ್ರೋ ನನ್ನ, ನಾ ಇನ್ನ ಜಲ್ಮದಾಗ ಮದುವಿ ಬಯಸೂದಿಲ್ಲ. ಬುದ್ಧಿ ಬೆಟ್ಟಿ ಆಯ್ತು ನಿಮಗೆ ಬೇಕಾದ್ದ ಕೊಡತೀನಿ ಬಿಡ್ರೋ.

ನರಸಿಂಹ– ತಾ ತ್ರಿಜೋರಿ ಕೈ (ಕೊಡುವನು. ಎಲ್ಲ ಹಣ ತೆಗೆದುಕೊಳ್ಳುವನು)

ಕೇಶವ– ಇನ್ನೊಮ್ಮೆ ಮದುವಿ ಬಯಸ್ತಿದೇನ ? ಬಯಸು ಮತ್ತೇ ಬರತೀವಿ ಅಕ್ಕಿಕಾಳ ಹಾಕಾಕ (ಹೋಗುವರು)

ಬಾಳು— ಅಯ್ಯೋ ನೋವು, ಕಾಲುಮುರಿದೇ ಹೋಯ್ತು. ಗಲ್ಲಕಡದ ಹಲ್ಲನಟ್ಟಾವ. ಡಾಕ್ಟರ್ ಮೋಸಮಾಡಿದ. ಅಯ್ಯೋ ವೇದನೆ. ಬಯಸಬಾರದಪ್ಪ ಏಳೇಳು ಜನ್ಮದಲ್ಲಿ ಹೆಣ್ಣನ್ನು. ಕಡೀತನಕ ಬ್ರಹ್ಮಚಾರಿಯಾಗಿ ಇದ್ರೂ ಚಿಂತೆಯಿಲ್ಲ. ಬ್ಯಾಡಿನ್ನ ಹೆಣ್ಣಿನ ಗೊಡವೆ. ಅಯ್ಯೋ ನೋವು (ಒಳಗೆ ಹೋಗುವನು).

—ತೆರೆ—

===***====***====

ಪ್ರವೇಶ – ೯

–ಅಶ್ವತ್ಥರ ಮನೆ–

ರಾಜು ತಲೆಗೆ ಕೈ ಹಚ್ಚಿಕೊಂಡು ಕುರ್ಚಿಯ ಮೇಲೆ ಕುಳಿತಿದ್ದಾನೆ.

ರಾಜು– (ದುಃಖಿಸುತ್ತ) ಅಯ್ಯೋ ದುರ್ದೈವವೇ, ಕೊನೆಗೂ ನನ್ನ ಪುರುಷತ್ವವನ್ನು ಕಳೆದು ಜೀವಂತ ಹೆಣವನ್ನಾಗಿ ಮಾಡಿದೆಯಾ. ನೋಡುವ ಜನರ ಕಣ್ಣಿಗೆ ನಾನಿಂದು ಗುಣಮುಖಿ; ಆದರೆ ಅಂತರಂಗದಿ ಜನ್ಮಾಂತ್ಯದವರೆಗೂ ಗುಪ್ತ ಬೇನೆಯಿಂದ ಬಳಲುವ ರೋಗಿ. ನನ್ನ ಸ್ಥಿತಿಯನ್ನು ಯಾರಿಗೆ ಹೇಳಲಿ. ಅವಳಿಗೆ ಇನ್ನು ನನ್ನಿಂದ ಯಾವ ಸುಖವೂ ದೊರಕದೆ ಕಾಮವೇದನೆಯಿಂದ ಬಳಲುವಂತಾಯಿತೇ. ನಾನಿನ್ನು ಬರಡು, ಕೊರಡು, ಫಲಕೊಡದ ಮರ. ಜಯಾನ ಸುಖ ಜೀವನಕ್ಕೆ ಕೊಡಲಿ ಪೆಟ್ಟುಕೊಟ್ಟು ಅವಳ ಭವಿಷ್ಯ ಬಾಳಿಗೆ ಮಸಿಬಳಿದ ಕಟುಕ. ನಿರ್ವೀರ್ಯನಾಗಿ ನಾನಿನ್ನು ಬದುಕಿಯಾದರೂ ಫಲವೇನು. ನಾನೇತಕ್ಕೂ ಬಾರದ ನಿರುಪಯೋಗಿ, ನಿರುಪಯೋಗಿ.

ಉದಯ– (ಪ್ರವೇಶಿಸಿ) ಗುಡ್‌ಮಾರ್ನಿಂಗ ರಾಜೂ. ಇಂದಿಗೆ ನೀವು ರೋಗ ಮುಕ್ತರಾದಿರೆಲ್ಲ. ತುಂಬಾ ಧನ್ಯವಾದಗಳು.

ರಾಜು– ಗುಣಮುಖಿ, ಇನ್ನೆಲ್ಲಿಯ ಗುಣಮುಖಿ ಡಾಕ್ಟರ್.

ಉದಯ– ಏಕೆ ಏನಾಯಿತು ರೋಗ ಮತ್ತೆ ಮರುಕಳಿಸಿತೆ ? (ಕೈ ಹಿಡಿದು ನೋಡಿ) ಸ್ವಾರಿ ರಾಜೂ ಅದನ್ನು ಹೊಡೆದು ಹಾಕಲು ನಾನೆಷ್ಟೋ ಪ್ರಯತ್ನಿಸಿದೆ. ಕೊನೆಗೂ ಸಾಧ್ಯವಾಗಲಿಲ್ಲ, ನನ್ನನ್ನು ಕ್ಷಮಿಸು.

ರಾಜು– ನನ್ನ ದುರ್ದೈವಕ್ಕೆ ಯಾರೇನು ಮಾಡುವದಿದೆ ಡಾಕ್ಟರ್. ನೀವು ಪ್ರಯತ್ನಪಟ್ಟಿರುವಿರಿ, ಆ ಉಪಕಾರ ಎಂದೂ ಮರೆಯು ವಂತಹದ್ದಲ್ಲ.

ಉದಯ– ಮತ್ತೆ ಚಿಕಿತ್ಸೆ ನಡೆಸಿ ಪ್ರಯತ್ನಿಸಿ ನೋಡೋಣವೇನು?

ರಾಜು– ಬೇಡಿ ಡಾಕ್ಟರ್. ಇಷ್ಟೇಸಾಕು. ನಾನಿನ್ನು ಈ ರೋಗದಿಂದ ಮುಕ್ತನಾಗುವದಿಲ್ಲ.

ಉದಯ– ಸುಮ್ಮನೆ ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ಮನೋರೋಗ ಇದಕ್ಕಿಂತಲೂ ಹಿರಿದು.

ರಾಜು– ಇನ್ನು ಚಿಂತಿಸಿಯಾದರೂ ಫಲವೇನು. ಯಾವುದಕ್ಕಾಗಿ ಚಿಂತಿಸಲಿ.

ಉದಯ– ನಿಮ್ಮಿಚ್ಛೆ ನಾನಿನ್ನು ಬರುತ್ತೇನೆ. (ಹೋಗುವನು).

(ರಾಜು ಎದ್ದು ಒಳಗೆ ಹೋಗುವನು).

–ತೆರೆ–

===***====***===

ಪ್ರವೇಶ – ೧೦

–ರಸ್ತಾ–

ಉದಯ– (ಪ್ರವೇಶಿಸಿ) ಹ.....ಹ....ಹ... ನನ್ನ ಪ್ರಯತ್ನಕ್ಕೆ ಫಲವಿಂದು ಪೂರ್ತಿಯಾಗಿ ದೊರೆಯಿತು. ಇನ್ನು ಜಯಾ ದೇಹಸುಖಕ್ಕಾಗಿ ಪರಪುರುಷನ ಸಂಗಕ್ಕಾಗಿ ಹಾತೊರೆಯುತ್ತಾಳೆ. ನಾನು ಹಾಲತೊರೆಂತಾಗಿ ಹರಿದು ಹೋಗಿ ನಿನ್ನ ಮನಕ್ಕೆ ತಂಪನ್ನೀಯುವೆನೆಂದರೆ ತಿರಸ್ಕರಿಸಲಾರಳು. ರಾಜು ಇನ್ನು ಕೇವಲ ದುಡಿಯುವ ಎತ್ತು. ಮನೋರೋಗಕ್ಕೆ ತುತ್ತಾಗಿ ಹೆಂಡತಿಯ ದಾಸನಾಗುತ್ತಾನೆ. ಹೊಂಚು ಹಾಕಿ ನನ್ನ ಮಾರ್ಗಕ್ಕೆ ಮುಳ್ಳಿನಂತಿರುವ ಆ ಎರಡು ಪ್ರಾಣಿಗಳನ್ನು ಹೊರನೂಕಿಸಿ, ರಾಜುನನ್ನು ಆಫೀಸಿಗೆ ಅಟ್ಟಿ ಇತ್ತ ನಡೆಸಬಹುದು ನಾನು ಜಯಾನೊಡನೆ ಸರಸ ಸಲ್ಲಾಪ. ನನ್ನಿಚ್ಛೆ ಈಡೇರಿಸಿಕೊಳ್ಳಲು ಇದೇ ಅಮೃತಘಳಿಗೆ (ಹೋಗುವನು).

–ತೆರೆ–

===***====***===

ಪ್ರವೇಶ – ೧೧

–ಅಶ್ವತ್ಥರ ಮನೆ–

ಲೀಲಾ– ಹಾಲ ಬಟ್ಟಲು ಬಾಯಿಗೆ ಹಿಡಿದು, ಕುಡಿ ಕಂದಾ. (ಕೂಸು ಅಳುವದು) ಅಯ್ಯೋ ಎಷ್ಟು ಹಟ ಮಾಡುತ್ತಿರುವೆಯೋ ತುಂಟ (ಗ್ಲಾಸ ಟೇಬಲ್ ಮೇಲಿಟ್ಟು ಮಗುವನ್ನು ಕೂಡ್ರಿಸಿ) ತಡೆ ಗೊಂಬೆ ತರುವೆ. ಮೋಟರ್ ತರುವೆ. ಇಲ್ಲಿಯೇ ಮಲಗು ಮರಿ (ಮಲಗಿಸಿ ಹೋಗುವಳು)

ಉದಯ– (ಪ್ರವೇಶಿಸಿ) ಲೀಲೆಯ ಮೇಲೆ ಅಪವಾದ ಹೊರಿಸಿ ಮನೆಯಿಂದ ಹೊರದೂಡಿಸಲು ಸುಸ್ಸಮಯ ತಾನಾಗಿಯೇ ಒದಗಿ ಬಂದಿತು. (ಕಿಸೆಯಿಂದ ವಿಷ ತೆಗೆದು ಬಟ್ಟಲಲ್ಲಿ ಹಾಕಿ) ಹ....ಹ...ಇನ್ನು ಕ್ಷಣದಲ್ಲಿ ಮಗು ಮಣ್ಣು ಪಾಲು, ಲೀಲೆ ಬೀದಿಯಪಾಲು, ಆಗ ಜಯಾ ನನ್ನ ಪಾಲು.... (ಮರೆಯಾಗುವನು)

ಲೀಲಾ– (ಕೈಯಲ್ಲಿ ಗೊಂಬೆ ಹಿಡಿದುಕೊಂಡು ಬಂದು) ತೆಗೆದುಕೋ ಮರಿ ಗೊಂಬಿ (ಬಟ್ಟಲ ತೆಗೆದುಕೊಂಡು) ಕುಡಿ ಕಂದಾ ಹಾಲು ಜಾಣಮರಿ (ಕುಡಿಸಿ ತೊಟ್ಟಿಲಲ್ಲಿ ಹಾಕಿ) ಸುಖವಾಗಿ ನಿದ್ರೆಮಾಡು ಮರಿ ನನಗೆ ಕೆಲಸಗಳಿವೆ (ಒಳಗೆ ಹೋಗುವಳು).

ಉದಯ– ಚಿರನಿದ್ರೆಗೈಯುತ್ತಿದೆ ಮಗು, ನೀನೇನು ಚಿಂತಿಸಬೇಡ ಹೋಗು (ಮರೆಯಾಗಿ ನಿಲ್ಲುವನು)

ಜಯಾ– (ಒಳಗಿನಿಂದ ಬಂದು) ಲೀಲಾ....ಲೀಲಾ.... ಆಗಲೇ ಮಗುವನ್ನು ಮಲಗಿಸಿಬಿಟ್ಟೆಯಲ್ಲೆ. ಅದರ ಹಸಿವು ನೀರಡಿಕೆ ನಿನಗೇನುಗೊತ್ತು ಬಂಜೆಗೆ. ಮೊದಲು ನಿನ್ನ ಹೊಟ್ಟೆಗೆ ಹಾಕಿದರೆ ಸಾಕು. ಏಳು ಕಂದಾ ಪ್ರಸಾದ....ಪ್ರಸಾದ.

ಲೀಲಾ– (ಓಡಿಬಂದು) ಎಬ್ಬಿಸಬೇಡತ್ತಿಗೆ, ಈಗ ಹಾಲು ಕುಡಿಸಿ ಮಲಗಿಸಿದ್ದೇನೆ.

ಜಯಾ— ಎಲ್ಲ ಸೇನ ಹುಗ್ಗ ಮಲಗಿಸಿರಬೇಕು. ಪ್ರಸಾದ, ಪ್ರಸಾದ ಏಳು ಕಂದಾ ಹಾಲು ಕುಡಿ ಏಳಪ್ಪ. (ಎತ್ತಿಕೊಂಡು) ಅಯ್ಯೋ, ನನ್ನ ಕಂದ ಏಕೋ ಏಳಲೊಲ್ಲದಲ್ಲ. ಏನು ಮಾಡಿದೆಯೋ ? ಪ್ರಸಾದ... ಪ್ರಸಾದ...

ಲೀಲಾ— ನಿದ್ರೆ ಬಲವಾಗಿದೆ ಅತ್ತಿಗೆ, ಎಬ್ಬಿಸಬೇಡ, ಈಗ ತಾನೆ ಏಳುತ್ತಾನೆ.

ಜಯಾ— ನಿನಗೇನು ಗೊತ್ತೆ. ಹೆತ್ತಕರಳು ಉರಿಯುತ್ತಿದೆ. ಪ್ರಸಾದ ಪ್ರಸಾದ ಅಂಯ್ಯೋ ಮೈಯೆಲ್ಲ ಹಸಿರಾಗಿದೆ. ಮಗು ಏಕೋ ಉಸಿರಾಡಲೊಲ್ಲದು. ಅಯ್ಯೋ, ನನ್ನ ಮಗುವಿಗೆ ಏನೋ ಮಾಡಿದ್ದಾಳೆ. ಯಾರಾದರೂ ಬನ್ನಿ ಮಗುವನ್ನು ಕಾಪಾಡಿ.

ಉದಯ— (ಪ್ರವೇಶಿಸಿ) ಏಕೆ ಏನಾಯಿತು ? ಹೀಗೇಕೆ ರೋಧಿಸುತ್ತಿರುವೆ ಜಯಾ.

ಜಯಾ— ನೋಡಿ ಡಾಕ್ಟರ್. ಮಗು ಏಳಲೊಲ್ಲದು. ನನಗೇಕೋ ಭಯವಾಗುತ್ತಿದೆ.

ಉದಯ— (ಕೈಹಿಡಿದು ನೋಡಿ ಆಶ್ಚರ್ಯಗೊಂಡವನಾಗಿ) ಹಾಂ.... ಇದೇನು?

ಜಯಾ— ಏನಾಗಿದೆ ಡಾಕ್ಟರ್ ?

ಉದಯ— ಮಗುವಿನ ಹೊಟ್ಟೆಯಲ್ಲಿ ವಿಷಸೇರಿದೆ.

ಲೀಲಾ— ಹಾ....ವಿಷ....ವಿಷ... (ನೆಲಕ್ಕುರುಳುವಳು).

ಜಯಾ— ಅಯ್ಯೋ, ಡಾಕ್ಟರ್ ನನ್ನ ಮಗುವನ್ನು ಉಳಿಸಿಕೊಡಿ ಡಾಕ್ಟರ್.

ಉದಯ— ತಂಗೀ ಕೆಲಸ ಕೈಮಿಾರಿ ಹೋಗಿದೆ. ನಾನೇನನ್ನೂ ಮಾಡಲು ಅಸಮರ್ಥ.

ಜಯಾ— ಅಯ್ಯೋ, ಕಂದಾ.... ಕಂದಾ.... ಪ್ರಸಾದ... ಪ್ರಸಾದ. ಅಯ್ಯೋ ರಾಕ್ಷಸಿ ನನ್ನನ್ನು ನಿನ್ನಂತೆ ಬಂಜೆಯಾಗೆಂದು ಮಗುವಿನ ಪ್ರಾಣ ತಿಂದೆಯಾ ಮಾರಿ.

ರಾಜು— (ಪ್ರವೇಶಿಸಿ) ಏನಿದು ಗಲಾಟೆ.... ಏಕೆ ಏನಾಯಿತು?

ಉದಯ— ವಿಷಸೇವನೆಯಿಂದ ಮಗುವಿನ ಪ್ರಾಣಾಹುತಿಯಾಗಿದೆ.

ರಾಜು— ಹಾಂ...ಇದಕ್ಕೆ ಕಾರಣರಾರು ?

ಜಯಾ–	ಇವಳೇ ಸ್ವಾಮಿ.... ಅಯ್ಯೋ ಪ್ರಸಾದ ಪ್ರಸಾದ.....
ರಾಜು–	ಏನೂ ? ತಂಗಿ ಇಂಥ ಹೀನ ಕಾರ್ಯಕ್ಕೆ ಕೈ ಹಾಕಿದಳೇ.
ಉದಯ–	ತನ್ನಂತೆ ಇವಳನ್ನೂ ಬಂಜೆಯನ್ನಾಗಿ ಮಾಡಲೆಂದು ಈ ಕೃತ್ಯ ಗೈದಂತಿದೆ.
ರಾಜು–	ತಂಗೀ.... ಇವರಾಡುತ್ತಿರುವ ಮಾತು ನಿಜವೇನಮ್ಮ ?
ಲೀಲಾ–	ಅಣ್ಣಾ, ನಿನ್ನ ಮಾತಿಗೆ ಉತ್ತರ ಕೊಡಲು ನಾನು ಅಸಮರ್ಥಳಣ್ಣ.
ಜಯಾ–	ತಿಳಿಯಿತೇ ? ಹಾಲಿನಲ್ಲಿ ವಿಷಬೆರಸಿ ಮಗುವಿನ ಪ್ರಾಣತಿಂದಿದ್ದಾಳೆ. ನೋಡಿ ಹಾಲಿನ ಬಟ್ಟಲನ್ನು.
ಉದಯ–	ಹೌದು ನೋಡಿ ವಿಷಮಿಶ್ರಿತ ಹಾಲು ಇನ್ನೂ ಬಟ್ಟಲಲ್ಲಿ ಹಸುರಾಗಿದೆ.
ರಾಜು–	ಲೀಲಾ....ನೀನು ನನ್ನ ತಂಗಿಯಾಗಿ ಹುಟ್ಟಿಬರದೇ ವಂಶವೃಕ್ಷವನ್ನು ಕಡಿಯುವ ಕೊಡಲಿಯಾಗಿ ಪರಿಣಮಿಸಿದೆ. ಪತಿಹೀನೆ ನೀನೆಂದು ನಾವೆಷ್ಟು ಆದರದಿಂದ ನಿನಗಾವ ಕಷ್ಟಕೊಡದೆ ಸಾಕಿದೆವು. ಅದಕ್ಕೆ ಹೀಗೆ ಪ್ರತಿಫಲ ತೀರಿಸಿದೆಯಾ ಮಾರಿ.
ಲೀಲಾ–	ಅಣ್ಣಾ, ನಿನ್ನ ಪಾದ ಮುಟ್ಟಿ ಹೇಳುವೆ. ನಾನು ಇಂಥ ಪಾಪ ಮಾಡಿಲ್ಲವಣ್ಣ. ಹಸುಗೂಸಿನ ಪ್ರಾಣತಿಂದ್ದ ನಾನಾವ ನರಕಕ್ಕೆ ಹೋಗಲಿ. ನನ್ನ ಮಾತು ನಂಬಣ್ಣ.
ಜಯಾ–	ಮತ್ತೇನು ನಾನು ಮಗುವಿಗೆ ವಿಷಕೊಟ್ಟಿರುವೆನೆ ? ನನಗೆ ಮಗು ಬೇಸರವಾಗಿತ್ತೆ ?
ಉದಯ–	ಬೇರೆಯವರು ವಿಷ ಕೊಟ್ಟಿದ್ದಾರೆನ್ನಲು ಇವಳ ಹೊರತು ಇಲ್ಲಿ ಮತ್ತಾರೂ ಇರಲಿಲ್ಲ.
ರಾಜು–	ಪ್ರತ್ಯಕ್ಷ ಪ್ರಮಾಣಗಳೇ ಇರುವಾಗ ನೀನು ನಿರ್ದೋಷಿಯೆಂದು ಹೇಳಿಕೊಂಡರೆ ನಡೆಯುತ್ತದೆಯೇ, ನಾಯಿಯಂಥವಳೆ.
ಲೀಲಾ–	ಅಣ್ಣಾ.... ನಿನ್ನ ತಂಗಿಯಣ್ಣ ನಾನು. ನನ್ನಲ್ಲಿಯೂ ನಿನ್ನ ರಕ್ತವೇ ಹರಿಯುತ್ತಿದೆಯಣ್ಣ. ನನ್ನ ಕರುಳನ್ನು ನಾನೇ ಕತ್ತರಿಸಬಹುದೆ. ನಾನೀ ಕಾರ್ಯ ಮಾಡಿಲ್ಲ. ನಂಬಣ್ಣ, ನನ್ನ ಮಾತು ನಂಬಣ್ಣ.
ರಾಜು–	ಸಾಕು ನಿನ್ನ ಸೋಗಲಾಡಿತನ, ನಡೆಯಾಚೆ, ಮತಿಗೆಟ್ಟವಳೆ.

(ನೂಕುವನು ಅಶ್ವತ್ಥ ಪ್ರವೇಶಿಸುವನು. ತಂದೆಯ ಕಾಲಿನ ಮೇಲೆ ಬೀಳುವಳು).

ಅಶ್ವತ್ಥ— ರಾಜೂ.... ಲೀಲಾಳ ಮೇಲೆ ಕೈ ಮಾಡುವೆಯಾ ಮೂರ್ಖ. (ಹೊಡೆಯುವನು) ನಿಸ್ವಾರ್ಥದಿಂದ ನಿಮ್ಮ ಏಳಿಗೆಗಾಗಿ ಹಗಲಿರುಳು ದೇಹ ಸವೆಸುತ್ತಿರುವ ಅವಳ ಮೇಲೆ ಕೈಮಾಡಲು ನಾಚಿಕೆಯಾಗುವದಿಲ್ಲವೆ ?

ರಾಜು— ಅಪ್ಪಾ ಅವಳಿಂದು ನನ್ನ ತಂಗಿಯಲ್ಲ, ಮನೆಯ ನುಂಗಲು ಬಂದ ರಾಕ್ಷಸಿ.

ಅಶ್ವತ್ಥ— ರಾಜ, ಬಾಯಿಗೆ ಹಿಡಿತವಿರಲಿ. ಅವಳು ಮಾಡಿದ ಅಪರಾಧವಾದರು ಏನು ಶಿಕ್ಷಿಸಲು. ಹೆಂಡತಿಯ ಮಾತು ಕೇಳಿ ಮತಿಗೇಡಿಯಾಗಿ ಮಗಳ ಮೇಲೆ ಕೈಮಾಡುವೆಯಾ ಮುಠ್ಠಾಳ.

ರಾಜು— ನಾನು ಸುಮ್ಮನೆ ಕೈಮಾಡಿಲ್ಲವಪ್ಪ. ಅಲ್ಲಿನೋಡು ನಿನ್ನ ಮೊಮ್ಮಗನ ಮುಖ ನೋಡು. ವಿಷ ಕುಡಿಸಿ ತನ್ನ ಇಚ್ಛೆ ತೀರಿಸಿಕೊಂಡಿದ್ದಾಳೆ.

ಅಶ್ವತ್ಥ— (ಮಗುವಿನ ಹತ್ತಿರ ಹೋಗಿ) ಪ್ರಸಾದ.... ಪ್ರಸಾದ.... ಅಯ್ಯೋ ಕಂದಾ. ಲೀಲಾ ಇವರು ಹೇಳುತ್ತಿರುವುದು ನಿಜವೇನಮ್ಮ ?

ಲೀಲಾ— ನಿನ್ನ ಮಗಳು ಇಂಥ ಹೀನ ಕಾರ್ಯ ಮಾಡಬಹುದೇನಪ್ಪ.

ಅಶ್ವತ್ಥ— ಅದೆಲ್ಲ ನನಗೆ ಬೇಕಿಲ್ಲ, ನೀನು ಮಗುವಿಗೆ ವಿಷಕೊಟ್ಟಿಯಾ (ಮೌನವಾಗಿ ನಿಲ್ಲುವಳು) ಹೇಳು.... ?

ಉದಯ— ಮಾಡಿದುದನ್ನು ಇಲ್ಲವೆನ್ನಲೂ ಬರುವಂತಿಲ್ಲ, ಹೇಳಲೂ ಬರುವಂತಿಲ್ಲ. ಮೌನಂ ಸಮ್ಮತಿ ಲಕ್ಷಣಂ.

ಅಶ್ವತ್ಥ— ಥೂ.... ಮಾರಿ. ಮಗಳೆಂದು ಮಮತೆಯಿಂದ ಮನೆಯಲ್ಲಿಟ್ಟುಕೊಂಡು ಸಾಕಿ ಸಲುಹಿದೆ. ಪತಿಹೀನಳೆಂದು ಗತಿಕಾಣದ ನಿನಗೆ ಗತಿತೋರಿದ ಅಣ್ಣನ ಬಾಳಿಗೆ ಮಣ್ಣು ಹಾಕಿದೆಯಾ ರಾಕ್ಷಸಿ. ನಡೆ, ನಿನಗಿಲ್ಲಿ ಇನ್ನಾವ ಸ್ಥಾನವೂ ಇಲ್ಲ. ಬೀದಿಯ ಭಿಕಾರಿಯಾಗಿ ಸತ್ತು ಹದ್ದು ಕಾಗೆಯ ಪಾಲಾಗಿಹೋಗು.

ಲೀಲಾ— ಅಪ್ಪಾ.... ಅಪ್ಪಾ, ನಾನು ನಿರಪರಾಧಿಯಪ್ಪ. ನಾನು ನಿರ್ದೋಷಿಯೆಂಬುದನ್ನು ಹೇಗೆ ನಿಮ್ಮೆದುರು ಬಿಚ್ಚಿತೋರಿಸಬೇಕೋ ತಿಳಿಯದಪ್ಪ.

ರಾಜು— ನಮಗೆ ನಿನ್ನ ಹಾಳು ಕಥೆಯಿನ್ನು ಬೇಕಿಲ್ಲ. ನಡೆಮೊದಲು, ಮನೆಯಲ್ಲಿದ್ದರೆ ನಮಗೂ ವಿಷಕೊಟ್ಟು ಕೊಲ್ಲತಕ್ಕವಳು.

ಜಯಾ— ನೀನು ಹೆಣ್ಣೆ. ಅಲ್ಲ ರಾಕ್ಷಸಿ, ಮೊದಲು ನನ್ನಸಂಗ ಬಯಸಿದೆ; ನಾನು ಸಿಕ್ಕಲಿಲ್ಲ. ಈಗ ಮಗುವನ್ನು ತಿಂದು ತೃಪ್ತಿಪಟ್ಟೆಯಲ್ಲವೆ. ಅಯ್ಯೋ ಪ್ರಸಾದ.... ಪ್ರಸಾದ.

ಅಶ್ವತ್ಥ— ಲೀಲಾ... ನೀನು ಹೆಣ್ಣಾಗಿ ಹುಟ್ಟಿ ನಮ್ಮ ಮನೆಗೆ ಕಣ್ಣಾಗಲಿಲ್ಲ ಹುಣ್ಣಾಗಿ ಪರಿಣಮಿಸಿದೆ. ಅಣ್ಣನ ಮನೆಯನ್ನು ಮಣ್ಣುಗೂಡಿಸಿದೆ. ನಡೆಇಂದಿಗೆ ಮುಗಿಯಿತು ಮಗಳೆಂಬ ಬಂಧನ, ಕಲ್ಲಾಯಿತು ನನ್ನ ಕೋಮಲ ಮನ.

ಲೀಲಾ— ಅಪ್ಪಾ ನೀವು ನನ್ನನ್ನು ದೋಷಿಯೆಂದು ನಿರ್ಧರಿಸಿದ ಮೇಲೆ ನನಗಿನ್ನಾರು ಗತಿಯಪ್ಪ.

ರಾಜು— ಮತಿಹೀನಳಾದ ಮೇಲೆ ಹತ್ತಿಯೇ ಗತಿ. ಹೂಂ ಹೊರಡು.

ಲೀಲಾ— ಅಣ್ಣಾ.... ಅಪ್ಪಾ.....

ಅಶ್ವತ್ಥ— ನೀನೆಷ್ಟು ಅತ್ತರೂ ಕರಗದು ನನ್ನ ಕಲ್ಲು ಹೃದಯ. ಕರುಳನ್ನಾಗಲೇ ಕತ್ತರಿಸಿಕೊಂಡಿರುವೆ. ನಡೆಯಾಚೆ.

ಲೀಲಾ— ಅಪ್ಪಾ.... ಅಣ್ಣಾ.... ಇನ್ನು ನಿಮಗೆ ನೋಡಸಿಗಲ್ಲಪ್ಪಾ ನಿನ್ನ ಮಗಳ ಮುಖ. ಕೊನೆಯಬಾರಿ ನೋಡಿ ಅಪ್ಪಾ....ಅಣ್ಣಾ....ಅತ್ತಿಗೆ... (ಹೋಗುವಳು; ಎಲ್ಲರೂ ಒಳಗೆ ಹೋಗುವರು)

—ತೆರೆ—

===***====***===

ಪ್ರವೇಶ – ೧೨

—ರಸ್ತಾ—

ರೇವತಿ— (ಪುಟ್ಟಿ ಹೊತ್ತು) ಬದ್ನಿಕಾಯಿ, ಬೆಂಡಿಕಾಯಿ, ಸೌತಿಕಾಯಿ, ಬರ್ರಿ ಬರ್ರಿ,

ನರಸಿಂಹ— (ಪ್ರವೇಶಿಸಿ) ಯಾಕ್ರಿ, ವಕೀಲ್ರ ಹೆಂಡ್ರು ಮತ್ತೆ ಪುಟ್ಟಿ ಹೊತ್ತೆಲ್ಲ.

ರೇವತಿ— ಅವಯಾವ ವಕೀಲ, ಕೀಲs ಮುರಕೊಂಡುಬಿದ್ದಾನ ನೋಡು.

ನರಸಿಂಹ— ಕೀಲ ಮುರದಾರು ಯಾರು, ನಾವ ಅಲ್ಲನು ?

ರೇವತಿ— ಹೌದು, ಅಲ್ಲಂದ್ರ್ಯಾರೀಗ.

ನರಸಿಂಹ— ಮತ್ತದರ ಕುಶಿ ಏನೂ ಕೊಡುದಿಲ್ಲೇನು ?

ಕೇಶವ— (ಓಡಿಬಂದು) ನಂದ ಅದ್ರಾಗ ಮುಖ್ಯ ಕೆಲಸ. ನನಗ ಮದ್ಲ ಕುಶಿ.

ರೇವತಿ— ತೊಗೊಳ್ರಿ, ಈ ಹಣ್ಣ ಹೆಚಿಗೊಂಡ ತಿನ್ರಿ.

ನರಸಿಂಹ— ಒಂದಾದ್ರ ಸಾಲೂದಿಲ್ಲ. ಇಬ್ಬರಿಗೂ ಒಂದೊಂದ ಬೇಕು.

ರೇವತಿ— ನನ್ನ ಹತ್ರ ಇರೂದು ಇದೊಂದ ಮಾತ್ರ.

ಕೇಶವ— ಹಂಗಾರ ನಂಗಕೊಡು.

ನರಸಿಂಹ— ಇಲ್ಲ ನಂಗ.

ರೇವತಿ— ಹೀಂಗ ಬಡಿದಾಡಿದ್ರ ಇಬ್ರ ಬಾಯಿಗೂ ಬರೂದಿಲ್ಲನೋಡ ಈ ಹೆಣ್ಣು. ಅಲ್ಲ ಹಣ್ಣು.

ನರಸಿಂಹ— ನಾ ಮದ್ಲ ಕೇಳಿನಿ, ನಂಗ ಕೊಡತೀ ಇಲ್ಲ.

ಕೇಶವ— ನಾ ನಿನ್ನ ಪಾರಮಾಡಿನಿ ನಂಗಕೊಡತೀ ಇಲ್ಲ.

ರೇವತಿ–	ಸುಮ್ನಾ ಯಾಕ ಗುದ್ದ್ಯಾಡಿ ಸಾಯಿತೀರಿ. ನಾನೊಂದ ಉಪಾಯ ಹೇಳತೀನಿ. ಅದನ ಮಾಡ್ರಿ, ಅದರಾಗ ಯಾರ ಗೆದಿತಾರ ಅವರಿಗೆ ಈ ಹಣ್ಣು.
ನರಸಿಂಹ–	ಹೇಳು, ಈಗs ತಯಾರು.
ರೇವತಿ–	ನೀವಿಬ್ರೂ ಕುಸ್ತಿ ಹಿಡೀರಿ. ಅದರಾಗ ಯಾರ ಗೆದಿತಾರ ಅವರಿಗೆ ಈ ಹಣ್ಣು.
ಕೇಶವ–	ಈಗ ಒಂದs ಹೊಡತಕ ಕೆಡವುತೀನಿ ನೋಡು ಗಾಂದೆಣ್ಣೀನ.
ನರಸಿಂಹ–	ಬರೆ ಎಡಗೈ ಕಿರಬಳ್ಳಿಲ್ಲೇ ಒಗೀತೀನಿನೋಡ ಈ ಕೇಶನ್ನ.
ರೇವತಿ–	ಹೂಂ ತಯ್ಯಾರಾಗ್ರಿ, ಒಂದು....ಎರಡು....ಮೂರು....ಸುರು.
ಕೇಶವ–	(ಇಬ್ಬರು ಕುಸ್ತಿ ಹಿಡಿಯುವರು. ನರಸಿಂಹ ಬೀಳುವನು) ಗೆದ್ದೆ ಗೆದ್ದೆ ಹಣ್ಣ ಗೆದ್ದೆ ಈ ಹೆಣ್ಣಗೆದ್ದೆ.
ನರಸಿಂಹ–	(ತೇಕುತ್ತಾ ಎದ್ದು) ಇಲ್ಲ ಇಲ್ಲ ನಾ ಬಿದ್ದಿಲ್ಲ. ಇವ ಕಟಗೂಳಿ ಇಟ್ಟ ನಗಿಸಿದ. ಕೊಡಬ್ಯಾಡ, ಹಣ್ಣ ಕೊಡಬ್ಯಾಡ.
ರೇವತಿ–	ಹಾಗಾದ್ರೆ ಮತ್ತೊಂದು ಪರೀಕ್ಷೆ ಆಗಲಿ. ತೊಗೊ ಈ ರೊಕ್ಕಾ ತೂರು. ಅಂಗ ಬಿದ್ದರೆ ಇವಗ, ಬಕ್ಕ ಬಿದ್ರ ನಿಂಗ (ನರಸಿಂಹ ರೊಕ್ಕ ತೂರುವನು ಅಂಗ)
ಕೇಶವ–	ಅಂಗ ಅಂಗ.... ನಾ ಗೆದ್ದೆ....
ನರಸಿಂಹ–	ಅಯ್ಯೋ, ನಾನೆಷ್ಟು ಕಷ್ಟಪಟ್ಟೆನಲ್ಲೋ, ಈ ಪಕ್ಕಾ ಹಣ್ಣು ಕಡಿಗೂ ದಕ್ಕಲಿಲ್ಲ.
ರೇವತಿ–	ಅಳಬ್ಯಾಡ ನಡ್ರಿ, ನಮ್ಮವ್ವನ ಹತ್ರ ಒಂದೈತಿ, ಕೊಡಸ್ತೀನಿ ತಿನ್ನಂತ್ರಿ
ನರಸಿಂಹ–	ಆ ಕೊಳತ ಹಣ್ಣ ?
ಕೇಶವ–	ಕೊಳತಿಲ್ಲೋ ಸ್ವಲ್ಪು ಇಳದೈತಿ ಆಟ.
ರೇವತಿ–	ಅದು ನಿಮಗಂತ ಮಾಸಲಾಗಿ ಉಳದೈತ್ರಿ.
ನರಸಿಂಹ–	ಆಗಲಿನಡಿ ಮತ್ತೇನ ಮಾಡೂದು. ಪಕ್ಕಾಹಣ್ಣಿಗೆ ಬಾಳ ಪ್ರಯತ್ನ ಮಾಡಿದೆ, ಸಿಗಲಿಲ್ಲ. ನನ್ನ ನಸೀಬನ ಕಟ್ಟೈತಿ. ಇಲ್ಲಿ ಎಲ್ಲಾರಿಗೂ

ಇರತಾವ, ಆಟ ಕೊರದೊಗದು ತೀಂದ್ರಾತ್ರೆಪ. ಪಾಲಿಗೆ ಬಂದದ್ದು ಪಂಚಾಮೃತ ಅಂತ ತಿಳಿದು. ನಾನೆಲ್ಲ ಇದನ ಬಯಸಿ ಇಷ್ಟದಿವಸ ಬೆನ್ನಹತ್ತಿ ಅಡ್ಡ್ಯಾಡಿದೆ. ನನ್ನ ಹಣೆಬಾರದಾಗ ಅದು ಐತಿ. ಇಲ್ಲಿ ಇಲ್ಲಿ ಮೇಳಾತಲ್ಲ ಹ್ಯಾಂಗರ ಮಾಡಿ ಒಟ್ಟಿನಮ್ಯಾಗ.

ಕೇಶವ-- ರೇವು.....ಇನ್ನಮ್ಯಾಲೆ ಈ ಪುಟ್ಟಿಬಿಡು, ಬಾಜಾರದಾಗೊಂದು ದೊಡ್ಡ ಅಂಗಡೀನ ತೆರಿಯಾನ.

ನರಸಿಂಹ-- ವಕೀಲರ ರೊಕ್ಕನs ಹೊಡದೀರಿ ಕೇಳತೀರ್ರ್ಯಾಕ. ನೀವು ಕಾಯಿಪಲ್ಲೆ ಇಟ್ರೆ, ನಾವು ನಿಮ್ಮೆದುರಿಗೆ ದೊಡ್ಡ ಗಾಂದೆಣ್ಣೆ ಅಂಗಡಿ ಇಡತೀವಿ ತಿಳಿತೇನ.

ರೇವತಿ-- ಇಡಶಂತ್ರಿ ನಡ್ರಿ, ಸೇಕಮಮ್ಮದನ ಲೆಕ್ಕಾ ಈಗಲೇ ಹಾಕಬ್ಯಾಡ್ರಿ ಮೊದಲಾಗ್ಲಿ ಶಾದಿ.

ಕೇಶವ-- ಆಮ್ಯಾಲೆ ಗಾದಿ.

ನರಸಿಂಹ-- ಬಿಡ್ರೀಗ ಮೊದ್ಲ ಮನೀಗೆ ಹಾದಿ. (ಹೋಗುವರು).

--ತೆರೆ--

===***===***===

ಪ್ರವೇಶ – ೧೩

–ಮನೆ ಪ್ಲಾಟು–

(ರಂಗಭೂಮಿ ನಿಶ್ಯಬ್ಧವಾಗಿದೆ. ಜಯಾ ಒಳಗಿರುವಳು. ರಾಜು ಅಶ್ವತ್ಥ ಹೊರಗೆ ಹೋಗಿರುವರು)

ಉದಯ– (ಪ್ರವೇಶಿಸಿ) ಮಿತ್ರ.....ರಾಜೂ.... ಇಲ್ಲವೇ ಜಯಾ ?

ಜಯಾ– (ಹೊರಗೆ ಬಂದು) ಇದೀಗ ಆಫೀಸಿಗೆ ಹೋದರು. ಬನ್ನಿ ಕುಳಿತುಕೊಳ್ಳಿ, ಕಾಫಿ ತರುವೆ.

ಉದಯ– ಮತ್ತೇಕೆ ಬಿಡು, ಈಗತಾನೆ ತೆಗೆದುಕೊಂಡು ಬಂದಿರುವೆ. (ಒಳಗೆ ಹೋಗುವಳು) ಇದೇ ಸುಸ್ವಮಯ ಜಯಾಳ ಮನಸ್ಸನ್ನು ನನ್ನೆಡೆಗೆ ಆಕರ್ಷಿಸಲು (ತಂದು ಕೊಡುವಳು ಕುಡಿದು) ಮತ್ತೇನು ಜಯಾ ಈಗ ಕ್ಷೇಮವಾಗಿರಬಹುದಲ್ಲವೆ, ಪೀಡಾ ಕಡಿಮೆಹೋಯಿತು.

ಜಯಾ– ಎಲ್ಲಿಯ ಕ್ಷೇಮ ಡಾಕ್ಟರ್, ಮಗುವಿನ ಮುಖ ಮತ್ತೆ ಮತ್ತೆ ಕಣ್ಣ ಮುಂದೆ ಬಂದು ನಿಂತು ವ್ಯಥೆಗೊಳಿಸುತ್ತದೆ. ಜೀವನವಂತೂ ಬರಡು. ಅದರಿಂದ ಮನಸ್ಸಿಗೆ ನೆಮ್ಮದಿಯೇ ಇಲ್ಲದಾಗಿದೆ.

ಉದಯ– ಹಾಗೆ ಒಮ್ಮೆಲೆ ಜೀವನದಲ್ಲಿ ಜಿಗುಪ್ಸೆಯನ್ನು ತಾಳಬಾರದು ಜಯಾ. ಇರುವಷ್ಟು ದಿವಸ ಸುಖದ ಕಡೆಗೆ ಗಮನಕೊಟ್ಟು ಸಂತೋಷದಿಂದ ಜೀವನ ಸಾಗಿಸಬೇಕು.

ಜಯಾ– ಸುಖದ ಸಾಕಾರವಾಗಿದ್ದ ಪತಿಯನ್ನೇ ಪರಮಾತ್ಮ ಹೀಗೆ ಮಾಡಿದ ಮೇಲೆ ಇನ್ನೇನುಳಿದಿದೆ ಹೇಳಿ.

ಉದಯ– ಮನುಷ್ಯ ಪ್ರಯತ್ನ ಮಾಡಿದರೆ ಪರಮಾತ್ಮನನ್ನು ಸಹಿತ ಸುಳ್ಳು ಮಾಡಿ ಸುಖಪಡಬಹುದು ಜಯಾ. ನೀನೂ ಮನುಷ್ಯಳಲ್ಲವೆ. ನಿನಗೂ ಆಶೆ, ಆಮಿಶ, ರಾಗ ಭಾವಗಳಿರುವದು ಸಹಜ. ಮಗುವನ್ನು ಕಳೆದುಕೊಂಡು ಮನಸ್ಸು ಆ ಸ್ಥಾನ ತುಂಬಲು ಮತ್ತೆ

ತಾನೆ ಬಂಜೆ ಎನಿಸಿಕೊಂಡು ಬಾಳಲು ಒಪ್ಪುತ್ತಾಳೆ ಹೇಳು.

ಜಯಾ— ಆಸೆಗಳೆಲ್ಲ ಇನ್ನು ಮೇಲೆ ನನ್ನಿಂದ ದೂರ ಡಾಕ್ಟರ್.

ಉದಯ— ಮನುಷ್ಯ ಆಶಾವಾದಿಯಾಗಿರಬೇಕು ಜಯಾ. ಒಮ್ಮೆಲೆ ನಿರ್ವೇಗ ತಾಳಿ ತಾಪದಲ್ಲಿ ತಳಮಳಿಸುವದು ಒಳಿತಲ್ಲ. ಮನದ ಬಯಕೆಗೆ ಬೇಡಿಯನ್ನು ಹಾಕಿದರೆ ಅಪಾಯಕಾರಿ. ಅದಕ್ಕಾಗಿ ಯಾವ ರೀತಿಯಿಂದಲಾದರೂ ಅವುಗಳನ್ನು ತೀರಿಸಿಕೊಳ್ಳಲು ಉಪಾಯ ಹುಡುಕಬೇಕು.

ಜಯಾ— ಅಪಾಯಗಳೆ ನನ್ನ ಮೇಲೆ ಮುತ್ತಿಗೆ ಹಾಕಿರುವಾಗ ಉಪಾಯ ಹೊಳೆಯುವದೆಂತು ಡಾಕ್ಟರ್.

ಉದಯ— ನಿನಗೆ ಮತ್ತೆ ತಾಯಿಯಾಗಬೇಕೆಂಬ ಇಚ್ಛೆ ಇಲ್ಲವೆ ?

ಜಯಾ— ಇದೆ, ಆದರೆ ಇಚ್ಛೆ ಈಡೇರಿಸುವ ವಸ್ತುವೆ ಒಡೆದು ಹೋಗಿದೆ.

ಉದಯ— ಒಡೆದುದಕ್ಕಾಗಿ ಚಿಂತಿಸಿ ಹಾಳಾಗದೇ ಬೇರೆ ವಸ್ತುವನ್ನು ಆಶ್ರಯಿಸಬಾರದೇಕೆ.

ಜಯಾ— ಅದರಿಂದ ಮೊದಲಿನದಕ್ಕೆ ದ್ರೋಹ ಬಗೆದಂತಾಗುವದಿಲ್ಲವೆ ?

ಉದಯ— ಇಲ್ಲ. ನಿನಗೆ ಅದು ದ್ರೋಹಬಗೆದು ತಾಪದಲ್ಲಿ ನರಳಿಸ ಹಚ್ಚಿದಾಗ ನೀನು ತಾಪದಿಂದ ತಂಪಿನೆಡೆಗೆ ಸಾಗಬಯಸಿದರೆ ಅದಕ್ಕೆ ದ್ರೋಹವೆನ್ನಲಾಗದು. ಅದರಿಂದ ಯಾವ ಪಾಪವೂ ಇಲ್ಲ.

ಜಯಾ— ಜನರ ಕಣ್ಣಿಗೆ ಅದು ವ್ಯಭಿಚಾರವೆಂದೆನಿಸುವದಿಲ್ಲವೆ.

ಉದಯ— ಹಾಗೆ ವಿಚಾರಿಸಿದರೆ ಯಾವುದೂ ವ್ಯಭಿಚಾರವಲ್ಲ. ತಾಳಿಕಟ್ಟಿದ ಪತಿಯೊಡನೆ ಸತಿ ನಡೆಸುವ ಸರಸಸಲ್ಲಾಪವೂ ಒಂದು ವಿಧದ ವ್ಯಭಿಚಾರವೇ. ಹಿರಿಯರೇ ಅದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಅವರ ದೃಷ್ಟಿಯಲ್ಲಿ ಅದು ಪವಿತ್ರ, ಆದರೆ ಸತಿ ತನ್ನ ಪತಿಯಿಂದ ಸುಖ ಸಿಗದಾಗಲು ಪರಪುರುಷನಲ್ಲಿ ಅನುರಕ್ತಳಾಗಿ ಸುಖಪಟ್ಟರೆ ಅದಕ್ಕೆ ವ್ಯಭಿಚಾರವೆಂದು ಸಮಾಜವೇ ಅವಳನ್ನು ಧಿಕ್ಕರಿಸುತ್ತದೆ. ಸತಿಪತಿ ನಡೆಸುವ ಸರಸ ಸಲ್ಲಾಪಕ್ಕೂ ಯಾವಭೇದವೂ ಇಲ್ಲ. ಒಂದು ದೃಷ್ಟಿಯಿಂದ ಅವೆರಡೂ ವ್ಯಭಿಚಾರವೆ. ಮತ್ತೊಂದು

ದೃಷ್ಟಿಯಿಂದ ತಿಳಿದುಕೊಳ್ಳುವದಾದರೆ ಅವೆರಡೂ ಪವಿತ್ರವೇ. ನೋಡು ನಿನ್ನ ಮನದಳಲನ್ನರಿತು ಎದೆಯ ಬೇಗೆಯನ್ನು ದೂರಿಕರಿಸಲು ನಿನ್ನ ಸಮ್ಮತಿ ಇದ್ದರೆ ನಾನು ಸದಾ ಸಿದ್ಧ.

ಜಯಾ– (ಸ್ವ) ಪತಿಯಿಂದ ಸುಖಿಸಿಗದಿರಲು ಸತಿ ಪರಪುರುಷನನ್ನು ಆಶ್ರಯಿಸುವದು ಅಪರಾಧವಲ್ಲವೆ? ಅದರಿಂದ ಯಾವ ಪಾಪವೂ ಇಲ್ಲವೆ? ಅವಳು ಪತಿಗೆ ದ್ರೋಹ ಬಗೆದಂತಾಗುವದಿಲ್ಲವೆ? ನಾನು.... ನಾನು. ಹಾಗೆ ಮಾಡಿ ಬಯಕೆಯನ್ನು ತೀರಿಸಿಕೊಳ್ಳಲೇ..... ಇದರಲ್ಲಿ ತಪ್ಪು ಇಲ್ಲವೆ? ನಾನು ವ್ಯಭಿಚಾರ ಮಾಡಿದಂತಾಗುವದಿಲ್ಲವೆ? ಇಲ್ಲ. ನಾನು ಹಾಗೆ ಮಾಡಲೇಬೇಕು. ಹಾಗೆ ಮಾಡಿದರೆ ಬಾಡುತ್ತಿರುವ ನನ್ನ ಬಾಳ ಬಳ್ಳಿ ಮತ್ತೆ ಚಿಗುರೊಡೆದು ಫಲಪುಷ್ಪಗಳಿಂದ ಕಂಗೊಳಿಸುವಂತಾಗುತ್ತದೆ.

ಉದಯ– ಏನೋ ದೀರ್ಘ ವಿಚಾರದಲ್ಲಿ ಮಗ್ನಳಾದೆಯಲ್ಲ ಜಯಾ, ನಾನಾಡಿದ ಮಾತಿನಲ್ಲಿ ತಪ್ಪಿಲ್ಲತಾನೆ ? ನಿನ್ನ ಸುಖಕ್ಕಾಗಿಯೇ ನಾನಿಷ್ಟು ಪ್ರಯತ್ನಿಸುತ್ತಿರುವದು. ಒಪ್ಪಿಗೆಯೇ ? (ನಾಚಿ ತಲೆಕೆಳಗೆ ಹಾಕಿ ತಲೆದೂಗಿ ಸಮ್ಮತಿಯನ್ನು ಸೂಚಿಸುವಳು) ಮೌನಂ ಸಮ್ಮತಿ ಲಕ್ಷಣಂ. ನಾನರಿತೆ ನಿನ್ನ ಮನದಿಂಗಿತವನ್ನು. ನಮ್ಮ ಸರಸಸಲ್ಲಾಪ ಸರಾಗವಾಗಿ ನಡೆಯಲು ಅಡೆತಡೆಯಾಗಿ ಮುದುಕನೊಬ್ಬ ನಿದ್ದಾನೆಂದು ಶಂಕೆಯೇ. ಹೆದರದಿರು ಬಾ ಹೀಗೆ (ಕಿವಿಯಲ್ಲಿ) ಇಷ್ಟುಮಾಡಿದರೆ ಅವನೂ ಹೊರಗೆ. ಆಗ ರಾಜೂ ಆಫೀಸಿನಲ್ಲಿ ನಾವೀರ್ವರೂ ಕಾಮಕೇಳಿಯ ಮಂಚದಲ್ಲಿ; ಸ್ವರ್ಗ ಸುಖದ ತುತ್ತತುದಿಯಲ್ಲಿ. ಇಂದು ನಾ ಹೇಳಿದ ಕಾರ್ಯ ಪೂರ್ತಿಗೊಳಿಸು. ನಾಳಿನಿಂದಲೇ ಪ್ರಾರಂಭಿಸೋಣ ಪಾಠ....ಹ....ಹ....ಹ.... ಬರುವೆ (ಹೋಗುವನು. ಜಯಾ ಹಾಡುವಳು)

ಅಶ್ವತ್ಥ– (ಪ್ರವೇಶಿಸಿ) ಜಯಾ ಅಡಿಗೆ ಸಿದ್ಧವಾಗಿದೆಯೇನಮ್ಮ, ಊಟಮಾಡಿ ಕೆಲಸಕ್ಕೆ ಹೋಗಬೇಕಾಗಿದೆ.

ಜಯಾ– ಏನು ನಟ್ಟು ಕಡಿಯುವ ಕೆಲಸಕ್ಕೆ ಹೋಗುತ್ತೀರಾ. ಆಗಲೇ ಹಸಿದು ಬಂದುಬಿಟ್ಟಿದ್ದಾರೆ. ಸ್ವಲ್ಪು ತಾಳಿ ಅವರೂ ಆಫೀಸಿನಿಂದ ಬರಲಿ ಊಟ ಮಾಡುವಿರಂತೆ. ಮನೆಯಲ್ಲಿ ಕುಡಿಯಲು ನೀರಿಲ್ಲ ಒಂದು ಕೊಡ ನೀರು ತರುತ್ತೀರಾ.

ಅಶ್ವತ್ಥ– ತರುತ್ತೇನೆ ತಾರಮ್ಮ. ಬಿಡುಗಡೆ ಎಲ್ಲಿದೆ. ಅನ್ನಕ್ಕಾಗಿ ಸೇರಿದ ಆಳು ಒಡತಿಯ ವಚನ ಪಾಲಿಸಲೇಬೇಕಲ್ಲ.

ಜಯಾ– (ಕೊಡ ತಂದುಕೊಟ್ಟು) ಹೂಂ...... ಬೇಗಬನ್ನಿರಿ (ಒಳಗೆ ಹೋಗುವಳು).

ಅಶ್ವಥ– ಬರುತ್ತೇನಮ್ಮ, ಬೇಗ ಬರುತ್ತೇನೆ ತಾಯಿ. ದೇವಾ, ಮಗಳು ಇವಳು ಕೊಡುತ್ತಿರುವ ಕಷ್ಟ ತಾಳಲಾರದೆ ಸುಮ್ಮನೆ ಅಪರಾಧಿಯಾಗಿ ಮನೆಯಿಂದ ಹೊರಟಳೇ ಇರಬಹುದು. ಮಗಳನ್ನು ಹೊರದೂಡಲು ತನ್ನ ಹೆತ್ತ ಮಗುವಿಗೆ ತಾನೆ ವಿಷವಿತ್ತಿರಬಹುದು ಈ ಕಟುಕಿ. ಲೀಲಾ ಅಂಥ ಕಟು ಹೃದಯಿಯಲ್ಲ. ವಿಚಾರ ಶೂನ್ಯನಾಗಿ ಸಿಟ್ಟಿನ ಭರದಲ್ಲಿ ಏನೇನೊ ನುಡಿದು ಮನ ನೋಯಿಸಿದೆ. ಯಾರ ಆಶ್ರಯವಿಲ್ಲದೆ ಅವಳ ಮಗಳು ಎಷ್ಟು ಕಷ್ಟಪಡುತ್ತಿರುವಳೊ, ಯಾವ ಕಾಮುಕರ ಕೈಯಲ್ಲಿ ಸಿಕ್ಕು ನರಳುತ್ತಿರುವಳೊ, ಮನನೊಂದು ಪ್ರಾಣಕ್ಕೆಲ್ಲಿ ಅಪಾಯ ಮಾಡಿಕೊಂಡಿರುವಳೊ ಬಲ್ಲವರಾರು. ನನ್ನ ಕರುಳೇ ಕತ್ತರಿಸಿದಂತಾಗುತ್ತದೆ. ಮಗಳೇ ಲೀಲಾ, ನಿನ್ನ ದರ್ಶನವಿಲ್ಲದೆ ನಾನು ಬದುಕಲಾರೆನಮ್ಮ ಬದುಕಲಾರೆ.

ಜಯಾ– (ಹೊರಗೆ ಬಂದು) ಇನ್ನೂ ಇಲ್ಲಿಯೇ ನಿಂತಿರುವಿರಲ್ಲ. ಏಕೆ ಕೊಡ ಹೊತ್ತು ತರಲು ನಾಚಿಕೆಯಾಗುತ್ತಿದೆಯೇ ?

ಅಶ್ವಥ– ನಮ್ಮ ಮನೆಯ ಕೆಲಸ ಮಾಡಲು ಎಲ್ಲಿಯ ನಾಚಿಕೆಯಮ್ಮ.

ಜಯಾ– ಹಾಗಾದರೆ ಬೇಗ ಹೊರಡಿ, ಅವರು ಬರುವ ವೇಳೆಯಾಯಿತು. (ಹೋಗುವನು; ಜಯಾ ಒಳಗೆ ಹೋಗುವಳು).

ರಾಜು– (ಪ್ರವೇಶಿಸಿ) ಜಯಾ.... ಜಯಾ.....

ಜಯಾ– ಬಂದೆ ಸ್ವಾಮಿ. (ಬರುವಳು, ಕೋಟು ಕಳೆದುಕೊಡುವನು. ಒಳಗೆ ಹಾಕಿ ಬಂದು) ಬನ್ನಿ ಊಟಮಾಡಿ.

ರಾಜು– ತಂದೆಯವರು ಇನ್ನೂ ಬರಲಿಲ್ಲವೆ ?

ಜಯಾ– ಅವರು ಬರುತ್ತಾರೆ ಬನ್ನಿ ನೀವು ಮೊದಲು ಊಟಮಾಡಿ (ಒಳಗೆ ಹೋಗಿ ಸ್ವಲ್ಪ ಸಮಯದ ನಂತರ ಹೊರಗೆ ಬರುವರು. ಅಶ್ವತ್ಥ ಕೊಡ ಹೊತ್ತು ಬರುವನು. ಅದನ್ನು ನೋಡಿ ರಾಜು)

ರಾಜು– ಅಪ್ಪಾ.... ಇದೇನಿದು ನೀವು ನೀರು ತರುವುದೆ ?

ಜಯಾ– ನಾನು ಎಷ್ಟು ಬೇಡವೆಂದರೂ ಕೇಳಲಿಲ್ಲ. ನೀನೊಬ್ಬಳೆ ಎಷ್ಟು ಕೆಲಸಗಳನ್ನು ಮಾಡುವಿಯಮ್ಮ ನಾನೇ, ತರುವೆನೆಂದು ಕೊಡ ಕಸಿದುಕೊಂಡು ಹೋದರು.

ಅಶ್ವತ್ಥ– ಹೌದಪ್ಪ, ಜಯಾ ಹೇಳುವದು ನಿಜ. ಏಕೆ ನಾನು ತರಬಾರದೆ?

ರಾಜು– ಅಪ್ಪಾ ಇದೆ ಮೊದಲು ಇದೆ ಕೊನೆ, ನೀವು ನೀರಿಗೆ ಹೋಗಕೂಡದು. ಬೇಕಾದರೆ ಆಳು ಇಡುವೆ.

ಜಯಾ– (ತಾಂಬೂಲ ತಂದಿಟ್ಟು) ತೆಗೆದುಕೊಳ್ಳಿ ತಾಂಬೂಲ ಸೇವಿಸಿ. ಬನ್ನಿ ಮಾಮಾ ಊಟಕ್ಕೆ (ಒಳಗೆ ಹೋಗುವರು. ಸ್ವಲ್ಪ ಸಮಯದ ನಂತರ ಜಯಾ ಚೀರುವಳು) ಅಯ್ಯೋ ಬಿಡಿ.... ಬಿಡಿ.... ನನ್ನ ಕಾಪಾಡಿ.... ಕಾಪಾಡಿ....

ರಾಜು– (ಬಾಗಿಲ ಬಳಿ ಹೋಗಿ) ಏನಾಯಿತು ಜಯಾ, ಹೀಗೇಕೆ ಚೀರುತ್ತಿರುವೆ.

ಜಯಾ– (ಹೊರಗೆ ಬಂದು) ಹೇಳಬಾರದು. ನಿಮ್ಮ ತಂದೆಯವರು...

ರಾಜು– ನನ್ನ ತಂದೆಯವರು ಏನು ಮಾಡಿದರು ಹೇಳು ?

ಜಯಾ– ಊಟಕ್ಕೆ ನೀಡುತ್ತಿರುವಾಗ ನನ್ನ ಸೆರಗು ಹಿಡಿದು ಜಗ್ಗಿ ಮಾನ ಹಾನಿ ಮಾಡಲು ಹವಣಿಸಿದರು.

ರಾಜು– ಆಂ.... ಅಪ್ಪಾ.... ಅಪ್ಪಾ. (ಒಳಗೆ ಹೋಗಿ ಹೊರಗೆಳೆದು ತಂದು) ಏನಪ್ಪ ಇದು ಅಪಚಾರ ನೀನೇ ನಿನ್ನ ಮಗನ ಸಂಸಾರ ಹಾಳು ಮಾಡಲೆತ್ನಿಸಿದೆಯಾ ?

ಅಶ್ವತ್ಥ– ಮಗು ರಾಜೂ.... ನಾನು ಈ ವಯಸ್ಸಿನಲ್ಲಿ ಇಂಥ ಹೀನ ಕಾರ್ಯಕ್ಕೆ ಕೈಹಾಕಬಹುದೇನಪ್ಪ.

ಜಯಾ– ನೋಡಿ ಸೀರೆ ಹರಿದುದನ್ನಾದರೂ; ನೀವು ಇದ್ದಿರೆಂದು ಬದುಕಿದೆ. ಇಲ್ಲದಿದ್ದರೆ ಇವರ ಕಾಮಕ್ಕೆ ತುತ್ತಾಗಿ ಮಾನಹಾನಿ ಹೊಂದುತ್ತಿದ್ದೆ ಸ್ವಾಮಿ.

ರಾಜು– ಅವಳು ಹೇಳುತ್ತಿರುವ ಮಾತು, ಕಣ್ಣಿಗೆ ಕಾಣುವ ಪ್ರಮಾಣ ಸುಳ್ಳೇನಪ್ಪ ?

ಅಶ್ವತ್ಥ– ಅವಳಿಗೆ ಸಾಕ್ಷಿಗಳು ಸಾಕಷ್ಟು ಉಂಟಪ್ಪ. ನನಗಾವ ಸಾಕ್ಷಿಯೂ ಇಲ್ಲ. ನನ್ನಾತ್ಮ ಒಂದೇ ಸಾಕ್ಷಿ. ಒಪ್ಪಿದರೆ ಒಪ್ಪು ಇಲ್ಲದಿರಲು ಬಿಡು. ನಾನಂತೂ ಅವಳ ಮೇಲೆ ಕೈಮಾಡಿಲ್ಲ. ಅವಳು ನನ್ನ ಮಗಳ ಸಮಾನ.

ಜಯಾ– ಆಹ.... ಹ.... ಮಾಡುವದನ್ನೆಲ್ಲ ಮಾಡಿ ಮಗಳೆಂದು ನುಡಿಯಲು ನಾಚಿಕೆಯಾಗುವದಿಲ್ಲವೇ ಮುದಿಪಿಶಾಚಿ.

ರಾಜು– ಅಪ್ಪಾ ನಿನ್ನ ಮಗನ ಮಡದಿ ನಿನಗೇನಾಗಬೇಕೆಂಬುದಾದರೂ ತಿಳಿಯಲಿಲ್ಲವೇನಪ್ಪ ? ಕೇವಲ ಒಂದೇ ಮಾತಿನಲ್ಲಿ ಸಾರಾ ಸಾರಾ ವಿಚಾರ ಮಾಡದೆ ಮಗಳು ಅಪರಾಧಿಯೆಂದು ಹೊರನೂಕಿ ಸ್ವತಂತ್ರವಾಗಿ ಇವಳೊಡನೆ ಆಟವಾಡ ಬಯಸಿದೆಯಾ? ಎಷ್ಟು ದಿವಸದಿಂದ ಹೊಂಚು ಹಾಕಿ ಕುಳಿತಿದ್ದೀರಿ.

ಅಶ್ವಥ– ಮಗೂ ರಾಜೂ.... ನಿನ್ನ ಮಾತಿಗೆ ಸಮಂಜಸ ಉತ್ತರ ನನ್ನಲ್ಲಿಲ್ಲವಪ್ಪ. ಆದರೆ ಇಷ್ಟು ಮಾತ್ರ ಹೇಳಬಲ್ಲೆ. ಹೆಣ್ಣು ತನ್ನ ಕಾರ್ಯ ಸಾಧನೆಗಾಗಿ ಏನನ್ನಾದರೂ ಮಾಡಲು ಹೇಸುವದಿಲ್ಲ. ತಾಳಿ ಕಟ್ಟಿದ ಪತಿಯನ್ನು ನಾಯಿಯನ್ನಾಗಿ ಮಾಡಿ ತನ್ನ ಸ್ವೇಚ್ಛಾಚಾರ ನಡೆಸಬಲ್ಲಳು. ಹೆತ್ತ ಮಗುವನ್ನೇ ಕುತ್ತಿಗೆ ಹಿಸುಕಿಕೊಂದು ತನ್ನ ಮುಂದಿನ ಮಾರ್ಗ ಸರಳ ಮಾಡಿಕೊಳ್ಳಬಲ್ಲಳು. ಅತ್ತೆ ಮಾವಂದಿರನ್ನು ಕತ್ತೆಯಂತೆ ಕಾಣಬಲ್ಲಳು. ಬಂಧು ಬಾಂಧವರನ್ನು ಕಾಲುಕಸಗೊಳಿಸಿ ತನ್ನಿಚ್ಛೆ ಈಡೇರಿಸಿಕೊಳ್ಳಬಲ್ಲಳು. ಅದರಂತೆ ಯಾವ ಮನದಿಚ್ಛೆಯನ್ನು ಪೂರ್ತಿಗೊಳಿಸಿಕೊಳ್ಳಲು ಈ ಆಟ ಹೂಡಿರುವಳೊ ನಾನರಿಯೆ. ಮಗಳನ್ನಂತೂ ಹೊರದೂಡಿದಳು. ಇನ್ನು ನಾನೊಬ್ಬ ಅಡತಡೆಯಾಗಿ ಕುಳಿತಂತಿದೆ ಇವಳ ಸ್ವೇಚ್ಛಾಚಾರಕ್ಕೆ. ಹಾಗಿದ್ದರೆ ಒಳ್ಳೇ ಮಾತಿನಿಂದ ಹೇಳಬಾರದಾಗಿತ್ತೇನಮ್ಮ ಹೊತ್ತು ಸಂತೋಷದಿಂದ ನಾನೇ ಹೋಗುತ್ತಿದ್ದೆ. ಇಂಥ ಘೋರವಾದ ಅಪರಾಧವನ್ನು ನಾನು ತಲೆ ಎತ್ತಿ ತಿರುಗದಂತೆ ಮಾಡಿ ಮನೆಯ ಕೀರ್ತಿಗೆ ಮಸಿ ಬಳಿದೆಯಾ. ಜಯಾ ನೀನು ಈ ಮನೆಗೆ ಸೊಸೆಯಾಗಿ ಬರಲಿಲ್ಲ. ಮಾರಿಯಾಗಿ ಬಂದೆ. ರಾಕ್ಷಸಿಯಾಗಿ ಬಂದೆ.

ಜಯಾ– (ಕಪಾಳಕ್ಕೆ ಹೊಡೆದು) ಬಾಯಿಗೆ ಬಂದಂತೆ ಬೊಗಳುವಿಯಾ

ಮುದಿ ಹದ್ದೆ. ಮಾಡಬಾರದ ಪಾಪವನ್ನು ಮಾಡಿ ಮುಚ್ಚಿಕೊಳ್ಳಲು ಉದ್ದುದ್ದ ಮಾತನಾಡಿದರೆ ಕೇಳುವರಾರು.

ರಾಜು— ಅಪ್ಪಾ, ಮಗ ನಪುಂಸಕ. ಸೊಸೆ ಕಾಮದಾಹದಿಂದ ಬಳಲುತ್ತಿದ್ದಾಳೆ ನಾನು ಅದನ್ನು ತೀರಿಸಿದರಾಯಿತೆಂದು ಬಯಸಿದಿರಾ ?

ಅಶ್ವತ್ಥ— ಮಗೂ ರಾಜೂ ನುಡಿಯದಿರಪ್ಪಾ, ಇಂಥಾ ಮಾತುಗಳನ್ನು ನುಡಿದು ನನ್ನೆದೆಯ ಘಾಸಿಗೊಳಿಸದಿರು. ನಾನೆಷ್ಟು ತಿಳಿಸಿ ಹೇಳಿದರೂ ನನ್ನ ಮಾತಿನ ಅರ್ಥ ನಿನಗಾಗದು. ನಿನ್ನ ತಲೆಕೆಡಿಸಿ ತನ್ನ ದಾಸನನ್ನಾಗಿ ಮಾಡಿಕೊಂಡಾಗ ನೀನಾದರೂ ಏನು ಮಾಡುವೆ. ಅವಳ ಹೇಳಿಕೆಯಂತೆ ಕೇಳಲೇಬೇಕಲ್ಲ.

ಜಯಾ— ಸಾಕು ನಿಲ್ಲಿಸಿ, ನಿಮ್ಮ ವೇದಾಂತವನ್ನು ಇಲ್ಲಿ ಕೇಳುವರಾರೂ ಇಲ್ಲ. ಒಳ್ಳೆ ಮಾತಿನಿಂದ ಹೊರ ಬೀಳುವಿರೊ ಕತ್ತಿಗೆ ಕೈಕೊಟ್ಟು ನೂಕಬೇಕೊ.

ಅಶ್ವತ್ಥ— ಹೋಗುತ್ತೇನಮ್ಮ, ಸುಮ್ಮನೆ ನಿನಗೇಕೆ ತೊಂದರೆ. ನೀನೂ ಸುಖವಾಗಿರು. ಎಷ್ಟು ದಿವಸ ನಡೆಸುವೆ ಈ ಸುಖ ಜೀವನ ಆ ಭಗವಂತನೆ ನೋಡಲಿ (ಹೋಗುವನು)

ಜಯಾ— ಬನ್ನಿ ವಿಶ್ರಾಂತಿ ಪಡೆಯುವಾ. (ಕೈ ಹಿಡಿದು ಕರೆದುಕೊಂಡು ಒಳಗೆ ಹೋಗುವಳು.)

—ತೆರೆ—

===***=====***===

ಪ್ರವೇಶ – ೧೪

–ಜಂಗಲ್ ರಸ್ತೆ–

(ಲೀಲಾ ಕಣ್ಣೀರು ಸುರಿಸುತ್ತಾ ಹಾಡುತ್ತಾ ಸಾಗಿದ್ದಾಳೆ)

ಲೀಲಾ– ಅಪ್ಪಾ....ಅಪ್ಪಾ.... ನಿನ್ನ ಮಗಳ ಮನದಿಂಗಿತವನ್ನು ಹೆತ್ತು ಸಾಕಿ ಸಲುಹಿದ ತಂದೆ ನೀನು ಸಹಿತ ಅರಿಯದಾದೆಯಾ. ಅಣ್ಣಾ, ನಿನ್ನ ಬೆನ್ನ ಹಿಂದೆ ಹುಟ್ಟಿದ ತಂಗಿ ಇಂದಿನವರೆಗೆ ಯಾವ ಹೀನ ಕಾರ್ಯಗಳನ್ನು ಮಾಡಿದ್ದಾಳೆಂದು ಬಗೆದು ಹೊರನೂಕಿದೆಯಪ್ಪ. ಅತ್ತಿಗೆ, ನಾ ನಿನಗೆ ಬಗೆದ ದ್ರೋಹ ಯಾವುದಮ್ಮ. ಅಯ್ಯೋ ದುರ್ದೈವವೇ, ನನ್ನಳಲು ಕೇಳುವರಾರು. ತಾಯಿ ತವರಿನಲ್ಲಿಲ್ಲ, ಅತ್ತೆ ಮಾವ ಪತಿ ಕೊಟ್ಟಮನೆಯಲ್ಲಿಲ್ಲ. ನಾನಿಂದು ಹೆತ್ತ ಮನೆಗೂ ಇತ್ತ ಮನೆಗೂ ಎರವಾದ ಹುಚ್ಚುನಾಯಿ. ಅಯ್ಯೋ ಹೆಣ್ಣಿನ ಹಣೆಬರಹವೇ. ಹೆಣ್ಣಾಗಿ ಹುಟ್ಟಬಾರದು ಈ ಹಾಳು ಭೂಮಿಯಲ್ಲಿ. ತಂದೆ ತಾಯಿ, ಅಣ್ಣ, ಅತ್ತಿಗೆ, ಅತ್ತೆಮಾವ, ಪತಿಯರ ಪ್ರೀತಿ ಇದ್ದರೆ ಹೆಣ್ಣಿನ ಬಾಳು ಬಂಗಾರ. ಇಲ್ಲದಿರಲು ಅವಳ ಬಾಳು ನಾಯಿಯ ಬಾಳು, ಕತ್ತೆಯ ಬಾಳು. ಹೆಣ್ಣು ಸುಮಂಗಲೆಯಾಗಿ ಪತಿಯ ಮುಂದೆಯೇ ಮಡಿಯಬೇಕು. ಮಾಂಗಲ್ಯದೊಡೆಯನ ಕಳೆದುಕೊಂಡು ಅವಳು ಬದುಕಿದ್ದರೂ ಸತ್ತಂತೆ. ವಿಧವೆ....ವಿಧವೆ ಅವಳಿಗಿಲ್ಲ ಈ ಸಮಾಜದಲ್ಲಿ ಯಾವ ಸ್ಥಾನ. ಮಂಗಲಕಾರ್ಯಗಳಿಗೆ ಇವಳ ಮುಖ ಅಮಂಗಳ. ಕುಂಕುಮ, ಬಳೆ, ಮೂಗುತಿ, ಮಂಗಲಸೂತ್ರ, ಮುಡಿಗೆ ಮಲ್ಲಿಗೆ ಅವಳಿಗೆ ಬದ್ಧವೈರಿಗಳು. ಅವುಗಳ ದರ್ಶನ ಅವಳಿಗೆ ನಿರ್ಬಂಧ. ವಿಧವೆ, ಬಂಜೆಯೆಂದು ಅತ್ತೆ ಮಾವರ ಕಟುನುಡಿಯ ಎಣ್ಣೆಯ ಕಡಾವಿಗಿಯಲ್ಲಿ ಕುದಿಯಬೇಕು. ಅವಳಿಗೆ ಮಗುಪಡೆದ ತಾಯಿಯರು ತಮ್ಮ ಮಗುವನ್ನು ಮುಟ್ಟಿಸರು. ಅವಳ ನೆರಳು ಮಗುವಿಗೆ ಅಪಾಯಕಾರಿ. ಪತಿಹೀನ ಸತಿ ಅಬಲೆ ಇವಳೆಂದು ಕಾಮುಕರು ಕ್ರೂರದೃಷ್ಟಿ ಬೀರುವರು. ಒಂದು ವೇಳೆ ಅವಳು ಮತಿಹೀನಳಾಗಿ ಕಾಮವೇದನೆ ತಾಳದೆ ಕಾಲುಜಾರಿದರೆ

ಸಮಾಜ ವ್ಯಭಿಚಾರಿ ಇವಳೆಂದು ಗುಲ್ಲೆಬ್ಬಿಸಿ ಕಲ್ಲೆಸೆಯುವದು. ಅವಳು ಇವೆಲ್ಲವನ್ನು ನುಂಗಿ ತಾಳಿ ಬಾಳಬೇಕು. ಥೂ ಹೆಣ್ಣಿನ ಜನ್ಮಕ್ಕೆ ಬೆಂಕಿ ಹಚ್ಚಾ.

ಒಳಧ್ವನಿ– ವಿಧವೆಯ ಬಾಳಿಗೆ ಮಣ್ಣುಮುಚ್ಚಾ. ಹೆಣ್ಣಾಗಿ ಹುಟ್ಟಿಬಂದು ಈ ಹಾಳು ಭುವಿಯಲ್ಲಿ ಸಾಧಿಸಿದೆಯೇನು ಮಣ್ಣು? ಕೇವಲ ನಾಯಿಯಂತೆ ಬಾಳು ಸಾಗಿಸಿ ಸತ್ತು ಹೋಗಲೆಂದು ಹುಟ್ಟಿ ಬಂದೆಯಾ? ಇನ್ನು ಜೀವಿಸಿ ಮಾಡುವಿಯೇನು? ತೊಲಗು.... ತೊಲಗು....ನಿನಗಾರು ಗತಿ ಇಲ್ಲವಿನ್ನು.

ಲೀಲಾ– ಹೌದು, ನನಗಾರೂ ಗತಿ ಇಲ್ಲ. ಪತಿ ಪಿತ ಅಣ್ಣ ಅತ್ತಿಗೆ ಎಲ್ಲರೂ ಹೊರದೂಡಿದರು ಹುಡಿಗೂಡಿ ಹೋಗೆಂದು. ಹೋಗುವೆ, ಇಂದೇ ಪ್ರಾಣ ನೀಗಿ ತೃಪ್ತಿಪಡುವೆ. (ಹೋಗುತ್ತಿರಲು ಎದುರಿಗೆ ಬಾಳು ಬಂದು ನಿಂತು ನೋಡಿ)

ಬಾಳು– ಮೊದಲನೋಟಕ್ಕೆ ಮನಸೆಳೆದ ಮಲ್ಲಿಗೆ ಹೂವಿನ ವಾಸನೆ ಮತ್ತೆ ಮೂಗಿಗೆ ತಾಗಿತಲ್ಲ. ಇಂದು ಬಿಡಲಾರೆ. ಮಧುಕರನಾಗಿ ಮಕರಂದ ಹೀರುವೆ. ಯಾರ ಸಹಾಯವಿಲ್ಲದೆ ನೆಲಕ್ಕುರುಳಿ ಸಾಯಬಯಸಿದಂತಿದೆ; ಎತ್ತಿ ವಾಸನೆ ಹೀರಿ ಮಕರಂದ ಸೇವಿಸುವೆ. ಬಯಸಿದ ಬೇಟೆ ತಾನಾಗಿಯೇ ಬಲೆಗೆ ಬಿದ್ದಿದೆ. ಅದಕ್ಕೆ ತಕ್ಕ ಏಕಾಂತ ಸ್ಥಳವೂ ಮೇಳೈಸಿ ನಿಂತಿದೆ. (ಹಾದಿಗೆ ಅಡ್ಡವಾಗಿ ನಿಲ್ಲುವನು).

ಲೀಲಾ– ಅಣ್ಣಾ ಸ್ವಲ್ಪ ಹಾದಿ ಬಿಡಿ, ನನ್ನ ನೆರಳು ನಿಮ್ಮ ಮೇಲೆ ಬೀಳಬಾರದು.

ಬಾಳು– ಏಕೆ? ನೀ ಮಾಡಿದ ಅಪರಾಧವೇನು ?

ಲೀಲಾ– ಹೆಣ್ಣಾಗಿ ಹುಟ್ಟಿದ್ದೆ ಅಪರಾಧವಣ್ಣ.

ಬಾಳು– ಜೀವನದಲ್ಲಿ ಬಹು ಬೇಗೆಯಿಂದ ಬಳಲಿದಂತಿದೆ ನನ್ನ ಜೊತೆಗೆ ಬಂದು ಸುಖವಾಗಿರುವೇನು?

ಲೀಲಾ– ನಾನು ಯಾವ ದೇವನಿಗೂ ಸಲ್ಲದ ಮೈಲಿಗೆಯಣ್ಣ.

ಬಾಳು– ವಿಧವೆ ತಾನೆ ? ಅದಕ್ಕೇನೂ ಚಿಂತೆಯಿಲ್ಲ. ನಮಗೂ ನಿಮ್ಮಂತವರೇ ಬೇಕಿತ್ತು. ನಾನು ಸಾಕಷ್ಟು ಸಿರಿವಂತ. ಬಾ ತೃಪ್ತಿ ಪಡಿಸುತ್ತ ಸುಖದ ಸುಪ್ಪತ್ತಿಗೆಯ ಮೇಲೆ ಹಾಯಾಗಿರುವೆಯಂತೆ.

ಲೀಲಾ– ಸುಖ.... ಎಷ್ಟುದಿವಸದ್ದಣ್ಣ.

ಬಾಳು– ಮೂರು ದಿನದ್ದಾದರೂ ಆನಂದ ಪಡೆಯಲೇಬೇಕು.

ಲೀಲಾ– ಅದರಿಂದ ಜೀವನದಲ್ಲಿ ಏನನ್ನು ಸಾಧಿಸಿದಂತಾಯಿತು.

ಬಾಳು– ಅದೆಲ್ಲ ವಿಚಾರ ನಮಗೇಕೆ. ಬಾ ಸುಮ್ಮನೆ ಎಷ್ಟು ದಿವಸ ಹೀಗೆ ಬಾಳುತ್ತಿರುವಿ ಬೀದಿಯ ಭಿಕಾರಿಯಾಗಿ ಕಂಡ ಕಂಡವರಿಗೆ ದೇಹ ನೀಡುತ್ತ. ನಾನು ಕೊನೆಯವರೆಗೂ ಸಲಹುತ್ತೇನೆ.

ಲೀಲಾ– (ಕಪಾಳಕ್ಕೆ ಹೊಡೆದು) ಅಬಲೆಯನ್ನು ಕಂಡರೆ ಹೀಗೆಯೇನು ವರ್ತಿಸುವದು? ಥೂ ನಿಮ್ಮ ಗಂಡಸು ಕುಲಕ್ಕೆ ಬೆಂಕಿ ಹಚ್ಚಾ. ನಿಮಗೂ ಅಕ್ಕ ತಂಗಿ ಮಕ್ಕಳಿಲ್ಲವೇ ಹೀಗೆ ನುಡಿಯಲು?

ಬಾಳು– ನನ್ನ ಕಪಾಳಕ್ಕೆ ಹೊಡೆಯುವಷ್ಟು ಧೈರ್ಯವೆ ನಿನಗೆ? ತಾಳು ಹಾಗಾದರೆ ಇಲ್ಲಿಂಯೇ ಈಗಲೇ ನನ್ನ ಇಚ್ಛೆಯನ್ನು ಈಡೇರಿಸಿಕೊಳ್ಳುವೆ.

ಲೀಲಾ– ಮುಂದೆ ಆಡಿ ಇಟ್ಟರೆ ಸುಟ್ಟು ಬೂದಿಯಾಗುವೆ ಜೋಕೆ.

ಬಾಳು– ದೊಡ್ಡ ಪತಿವ್ರತೆ. ಶಾಪಕ್ಕೆ ಸುಟ್ಟು ಬೂದಿಯಾದೇನು. ಹೂಂ. ಸುಮ್ಮನೆ ವಶವಾಗು, ನನ್ನ ಕೈಯಲ್ಲಿ ಸಿಕ್ಕು ನಾಶವಾಗಬೇಡ.

ಲೀಲಾ– ಬೇಡ, ನನ್ನನ್ನು ಮುಟ್ಟಬೇಡ. ನಿನ್ನ ಕಾಲು ಹಿಡಿದು ಬೇಡಿಕೊಳ್ಳುವೆ; ನನ್ನ ಮಾನಭಂಗ ಮಾಡಬೇಡ.

ಬಾಳು– ಕೈಗೆ ಸಿಕ್ಕ ಹಣ್ಣಿನ ರಸ ಹೀರದೇ ಬಿಡಲು ನಾನೇನು ಹೇಡಿಯಲ್ಲ ಹೂಂ. (ಹಿಡಿಯ ಹೋಗುವನು.)

ಲೀಲಾ– ಕಾಪಾಡಿ....ಅಯ್ಯೋ ಕಾಪಾಡಿ.... ಕಾಪಾಡಿ.

ದುರುಗ– (ದುರುಗ ಓಡಿ ಬಂದು ಹಿಡಿದು ಬಾಳುನನ್ನು ಹೊಡೆದು ಓಡಿಸುವನು.)

ಲೀಲಾ– (ಅಳುತ್ತ) ದೇವರಂತೆ ಬಂದು ನನ್ನ ಮಾನ ಕಾಯ್ದಿರಿ, ನಿಮಗೆ ದೇವರು ಒಳ್ಳೆಯದನ್ನು ಮಾಡಲಿ.

ದುರುಗ– ನೀವ್ಯಾರ್ರಿ ಯವ್ವ ? ಒಬ್ರಯಾಕ ಇಲ್ಲಿ ಬಂದ್ರಿ ? ಈಗಿನ ಕಾಲದಾಗ ಇಂಥಾ ಬದ್ಮಾಷ್ ಮಂದಿ ಕಾಟ ಬಾಳ್ರಿ.

ಲೀಲಾ– ನಾನಾರೆಂದು ಹೇಳಲಪ್ಪ. ನಾನೊಬ್ಬ ಅನಾಥೆ. ಯಾರೂ ಇಲ್ಲದ ಪರದೇಸಿ.

ದುರುಗ– ಹಾಂಗನಬ್ಯಾಡವ್ವ ಯವ್ವ. ನಮ್ಮಂಥಾರಿಲ್ಲೇನ? ನಿನಗ ನಾ ಕಾಪಾಡತೀನಿ ಬಾಯವ್ವಾ ಮನಿಗೆ ಹೋಗಾನ.

ಲೀಲಾ– ಬೇಡಪ್ಪ, ಸುಮ್ಮನೆ ನಿನಗೇಕೆ ತೊಂದರೆ, ನನ್ನ ಹಾದಿಯನ್ನು ನಾನು ನೋಡಿಕೊಳ್ಳುತ್ತೇನೆ.

ದುರುಗ– ನಿನ್ನ ಹಾಂಗ ಬಿಡುದಿಲ್ಲಯವ್ವ, ನೀ ನನ್ನ ಮಗಳ ಸಮಾನ. ನಡ್ರಿ ಮನಿಗೆ, ಮಗಳಂಗ ಕಾಪಾಡತೀನಿ.

ಲೀಲಾ– ನಿಮ್ಮಂಥವರಿಂದಲೇ ನಿರ್ಗತಿಕರಾದ ನಮ್ಮಂಥ ಅಬಲಾಸ್ತ್ರೀಯರ ಮಾನರಕ್ಷಣೆಯಪ್ಪ.

ದುರುಗ– ಇರ್ಲಿ ನಡ್ರಿಯವ್ವ ಮೊದ್ಲ ಮನಿಗೆ ಹೋಗಾನ. ನಮ್ಮ ಹನಿಮಿ ನಿಮ್ಮನ್ನ ಮಗಳಾಂಗ ನೋಡಿಕೊಂತಾಳ್ರಿ (ಹೋಗುವರು).

–ತೆರೆ–

===***===***===

ಪ್ರವೇಶ – ೧೫

–ರಸ್ತಾ–

ರಮಾ– (ಪ್ರವೇಶಿಸಿ) ಅಂತೂ ಮಗಳು ವಕೀಲಗ ಕೈ ಕೊಟ್ಟಳಲ್ಲ. ನನ್ನಳಿಯಾ ಬಾಳ ಬೆರಕಿ ನೋಡು. ಆ ಗಾಂದೇಣ್ಣಿ ಸಾಬ್ರ ಮೊದ್ಲ ಎಲ್ಲಾ ರೊಕ್ಕ ಹೊಡದ ಹಿಂದಾಗಡೆ ಮಗ್ಗಲೆಲಬು ಮುರದ ಬಂದ್ರಂತ. ಹ್ಯಾಂಗರ ನನ್ನ ಮಗಳು ಅಳಿಯಾಗ ಜತಿಯಾಗಿ ಉಳದ್ಲು. ಆದ್ರ ಅವತ್ತು ಬಾವಾನಾರು ತಾಯಿ ಮಗಳು ಇಬ್ಬರದೂ ಕೂಡೆ ಮದುವೆ ಆಗತ್ತ ಅಂತ ಹೇಳಿದ್ರಲ್ಲ. ಆವಾಗಿಂದ ನನ್ನ ಮನಸ್ಸೂ ಗಂಡನ್ನ ಬೇಡಾಕ ಹತ್ತೇತಿ. ಅವನ ಕೂಡ ಬಾಳೆ ಮಾಡಬೇಕ ಅನಿಸುತ್ತ. ಯಾರ್ನ ಮಾಡಿಕೊಳ್ಳಿ. ನಾ ನೋಡಿಯಾ ರಂಡಿ, ನನ್ಯಾರ ಕೈ ಹಿಡಿತಾರ. ಯಾಕ ಏನ ನನ್ನ ಮನಸ್ಸು ಗಾಂದೇಣ್ಣಿ ಸಾಬನ ಮ್ಯಾಗ ಹರದೈತಿ. ಅವನ್ನ ನೋಡಾನ ಒಂದ ನಮೋನಿ ಆಗುತ್ತ. ಅವನೂ ಇತ್ತಿತ್ತಲಾಗ ನನ್ನ ಬಾಳ ನೋಡಾಕ ಹತ್ತ್ಯಾನ. ಮೊದ್ಲ ಮಗಳ ನೋಡತಿದ್ದ, ನಮ್ಮ ಕೇಶಪ್ಪ ಬಂದಿಂದ ನನ್ನ ಮ್ಯಾಗ ಕಣ್ಣು ಹಾಕ್ಯಾನ. ಹಾಕ್ಲಿ, ನನಗೂ ಆಟ ಬೇಕಾಗೈತಿ. ಆತ ಏನs ಮಾಡ್ಲಿ ಸುಮ್ನ ಇರತೀನಿ. ಬರ್ಲಿ ಇವತ್ತ ಹ್ಯಾಂಗರ ಮಾಡಿ ಕೇಳೇ ಬಿಡತೀನಿ. ಅವನ್ನ ಯಾವಾಗ ನೋಡೇನ ಅಂತ ಮನಸು ತತ್ತರಸತೈತಿ. ದೇವ್ರ, ಹ್ಯಾಂಗಾರ ಮಾಡಿ ನನ್ನ ಆಶೆ ತೀರಸಪ್ಪ.

ನರಸಿಂಹ– (ಪ್ರವೇಶಿಸಿ) ತಥಾಸ್ತು ನಿನ್ನ ಬಯಕೆ ಈಡೇರುತ್ತದೆ ಏಳು ಮಗಳೆ

ರಮಾ– ಅಯ್ಯ.... ನೀವ.... (ನಾಚಿ ಹಿಂದೆ ಸರಿಯುವಳು)

ನರಸಿಂಹ– ಹೂಂ....ನಾನೇ ಯಾಕ ನನ್ನೋಡನs ಮುಖ ಕೆಂಪಗ ಗಜ್ಜರಿಯಂಗಾತಲ್ಲ.

ರಮಾ– ತಮ್ಮನ್ನ ನೋಡಾನ ಒಂದ ತರಾನ ಆಗುತ್ತ.

ನರಸಿಂಹ– ಅರೇ, ಏನಿದು ಒಮ್ಮೆಲೆ ನೀವು ತಾವು ಸುರುವಾದವಲ್ಲ, ಏನಿದರ ರಹಸ್ಯ. ನೀನು ಇಷ್ಟು ದಿವಸ ನನ್ನ ನೋಡೇ ಇಲ್ಲsನ. ನಾನ ನರಸಿಂಹ.

ರಮಾ–	ನೋಡಿನಿ, ನನಗೆಲ್ಲ ಗೊತ್ತೈತಿ, ಆದ್ರ ಇವತ್ತ.
ನರಸಿಂಹ–	ಇವತ್ತೇನಾತು ?
ರಮಾ–	ಹೇಳಾಕ ನಾಚಿಗಿ ಬರುತ್ತ.
ನರಸಿಂಹ–	ನಾಚಬ್ಯಾಡ ಹೇಳು, ಮತ್ತೇನು? ಏನದು?
ರಮಾ–	ಇಕಾ ಮನ್ನೆ ಬಾವಾರು ನಂದೂ ಮಗಳದೂ ಕೂಡೇ ಮದುವಿ ಅಗುತ್ತಂತ ಹೇಳ್ಯಾರ.
ನರಸಿಂಹ–	ಅದಕ್ಕ ಹುಚ್ಚ ಹಿಡದೈತೇನ ?
ರಮಾ–	ಹೂಂನ್ರಿ.
ನರಸಿಂಹ–	ನಿನ್ನ್ಯಾರ ಮಾಡಿಕೊಂತಾರ ಈ ವಯಸ್ಸಿನಾಗ. ಇಲ್ಲಿ, ವರಾ ತಯಾರ ಐತೇನು ?
ರಮಾ–	ಇಲ್ರಿ.... ನೀವ....
ನರಸಿಂಹ–	ಏನು ? ನಾನು ಹುಡುಕಿ ಕೊಡಬೇಕ ?
ರಮಾ–	ಉಹೂಂ....ನೀವ....
ನರಸಿಂಹ–	ನಾನೂ....
ರಮಾ–	ನನ್ನ ಮಾಡಿಕೋ ಬೇಕು.
ನರಸಿಂಹ–	ಅಯ್ಯಯ್ಯೋ ಯಪ್ಪಾ.
ರಮಾ–	ಯಾಕ್ರಿ ಏಟೆತ್ರ ಹಾರಿ ಬೀಳತಿರಲ್ರಿ, ನನ್ನ ಆಗಾಕ ನಿಮಗ ಮನಸ್ಸಿಲ್ಲನ ?
ನರಸಿಂಹ–	ಒಲ್ಲೆವೋ ಯವ್ವ, ನಿನ್ನ ಕೈಯಾಗ ಸಿಕ್ಕು ಸಾಯಬೇಕಾದೀತು.
ರಮಾ–	ಇಲ್ರಿ ಹಾಂಗ ಮಾಡಬ್ಯಾಡ್ರಿ ನಾ ನಿಮ್ಮನ್ನs ನಂಬಿಕುಂತೀನಿ. ನಿಮ್ಮ ಸಲುವಾಗಿ ನನಗ ರಾತ್ರಿ ನಿದ್ದಿಲ್ಲ, ಹಗಲಿ ಸಮಾಧಾನ ಇಲ್ಲ. ನಿಮ್ಮ ಕಾಲು ಹಿಡಕೊಂತಿನಿ ನನ್ನ ಮಾಡಿಕೊಳ್ರಿ (ಕೈ ಹಿಡಿಯುವಳು).
ನರಸಿಂಹ–	ಹೆಣ್ಣು ತಾನಾಗಿ ಒಲ್ದ ಬಂದ್ರ ಬಿಡಬಾರದಂತ, ಬಿಟ್ರ ಪಾಪ ಬರುತ್ತಂತ. ಯಾಕಾಗೊಲ್ಲದಾಕೇಳು ಮ್ಯಾಕ.
ರಮಾ–	ನನ್ನ ರಾಜಾ....ನನ್ನ ದೊರಿ...ನನ್ನ ಅರಸ (ಕೈ ಹಿಡಿಯುವಳು)
ನರಸಿಂಹ–	ಅಲೆ ಈಗಲೇ ಸುರು ಮಾಡಿಬಿಟ್ಟಿದೆಲ್ಲ ಸರಸಾಟನ. ನೋಡಲ್ಲಿ ಒಂದಿಟು ಮಂದಿ ಕುಂತಾರ.

ರಮಾ– ಮನಸು ಮನಸು ಕಲ್ತಮ್ಯಾಗ ಮನಿಶ್ಯಾರ ಅಂಜಿಕ್ಯಾಕ? ಇನ್ನ ನಾ ಹೇಣ್ತಿ.... ನೀ ಗಂಡ.

ನರಸಿಂಹ– ಗುಂಡ ಉಳಿಸ್ಯಾಡಿದಾಂಗ ಉಳಿಸ್ಯಾಡಬೇಕಂದೆನು ?

ರಮಾ– ಹೋಗ್ರೀ ನೀವು....

ನರಸಿಂಹ– ಬಿಡ್ರಿ ಹಾಂಗರ ಹೊಕ್ಕೀನಿ.

ರಮಾ– ಕರೆಂದ್ರ ಹೊಂಟ ಬಿಟ್ರೆಲ್ ನೀವು.

ನರಸಿಂಹ– ನೀನs ಇದೇ ಈಗ ಹೋಗಂದೆಲ್ಲ ಮತ್ತ.

ರಮಾ– ಸಾಕ ಬಿಡ್ರಿ ಹುಡುಗಾಟಾನ.

ನರಸಿಂಹ– ಹಂಗಾರ ಮತ್ತ್ಯಾವ ಆಟ ಆಡ್ಲೇಳು. ಏನ ದೊಡ್ಡಾಟನ, ದುರಗಮುರಗವ್ವನ ಆಟ, ರಂಭೆರಾಟಾನ, ಕಿಳ್ಳಿ ಕ್ಯಾತರಾಟಾನ, ಏನ ಈಗಿನಾರ ಅಡತಾರಲ್ಲ ಕೈ ಹಿಡಕೊಂಡು ಸರಸಾಟ ಚೆಲ್ಲಾಟ ಅದನ ಆಡ್ಲಿ.

ರಮಾ– ಕಡಿಗಂದ್ರೆಲ್ಲ ಅದನ್ನ ಆಡಬೇಕಂತ ಅನಸತ್ತ ಮನಸಿಗೆ.

ನರಸಿಂಹ– (ಸ್ವ) ಅನಸದೇನ ಮಾಡೀತು. ಹೊಸಾ ಹರೆ ತಿರಿಗ್ಯೈತಿ (ಪ್ರ) ಹಾಡ ಹಂಗಾರ.

ರಮಾ– ನೀವ ಸುರು ಮಾಡ್ರಿ, (ಕೈ ಹಿಡಿದು ಇಬ್ಬರು ಹಾಡುವರು. ರೇವತಿ ಕೇಶವ ಮರೆಯಲ್ಲಿ ನಿಂತು ನಗುವರು)

ರೇವತಿ– ನೋಡ್ರಿ ಅಲ್ಲಿ ನಮ್ಮವ್ವನ ಆಟ.

ಕೇಶವ– ನಿಮ್ಮವ್ವಗ ನವಯೌವ್ವನ ಬಂದ್ಯೈತೀಗ, ನವಯೌವನ. ನೋಡ ಹ್ಯಾಂಗ ಜಿಗದಾಡತಾಳ.

ರೇವತಿ– ಏನಂತ ಹಾಡತಿದ್ರಲ್ರಿ ಅವ್ರು ?

ಕೇಶವ– ಯಾಕ ನಿನಗೂ ಎದ್ದಿತೇನು.

ರೇವತಿ– ಹೂಂ....ಹಾಡ್ರಿ ನಾವೂ ಹಾಂಗ ಮಾಡೋನ.

ಕೇಶವ– ಬಾ ಹಂಗಾರ (ಈರ್ವರೂ ಹಿಂದೆ ಹಾಡುತ್ತ ಹೋಗುವರು).

–ತೆರೆ–

===***===***===

ಪ್ರವೇಶ – ೧೬

–ರಾಜೂನ ಮನೆ–

ಉದಯ– (ಪ್ರವೇಶಿಸಿ) ನಿಶ್ಯಬ್ಧವಾತಾವರಣ, ಮುಳ್ಳಿನಂತಿದ್ದ ಮಳ್ಳು ಪ್ರಾಣಿಗಳೆರಡೂ ಹಾದಿ ಹೆಣವಾಗಿ ಹೋದಾಗ ಇನ್ನೆಲ್ಲಿಯ ಗಲಾಟೆ ಈ ಅರಮನೆಯಲ್ಲಿ. ಮುಂಜಾನೆ ಹೋಗಿ ಸಂಜೆಗೆ ಮನೆ ಸೇರುವ ಯಾಂತ್ರಿಕ ಜೀವನದ ರಾಜೂನೇ ಪುರುಷತ್ವ ಹೀನನಾಗಿ ಹೋದಾಗ ಇನ್ನೆಲ್ಲಿಯ ಸರಸ ಸಲ್ಲಾಪ ಈ ಹೊನ್ನ ಮಂಚದ ಮೇಲೆ. ಇಂದು ನನಗಾಗಿ ಆಹ್ವಾನ ಗೈಯ್ಯುತ್ತಿದೆ ಈ ಸರಸಸೌಧ. ಕೈ ಮಾಡಿ ಕರೆಯುತ್ತಿದೆ ಜಯಾಳ ನಯವಾದ ಕಾಯ. ಮೃಷ್ಟಾನ್ನ ಭೋಜನದೂಟ, ಜೊತೆಗೆ ಜಯಾಳ ತುಂಬುದೇಹದೊಡನೆ ಪ್ರೇಮದಾಟ. ಯಾರಿಗುಂಟು ನನ್ನೀ ಸ್ವರ್ಗಸುಖ ಸಮಾನ ಚೆಲ್ಲಾಟ. ರಾಜೂ ನಿರ್ಭಾಗ್ಯ. ಅವನಿಗೆಲ್ಲಿ ನನ್ನ ಸೌಭಾಗ್ಯ. ಜಯಾ....ನನಗಾಗಿ ಕಾದು ಕಾದು ಒಳಗೆ ವಿಶ್ರಮಿಸಿರಬಹುದೆ? ಅಥವಾ ಬೇಗ ಬರಲಿಲ್ಲವೆಂದು ಮುನಿಸುಗೊಂಡು ಮುಖ ಮುಚ್ಚಿಕೊಂಡು ಮಂಚದ ಮೇಲೊರಗಿರಬಹುದೆ? ಇಲ್ಲವೆ ನನ್ನ ಬರವಿಗಾಗಿ ಪಾಯಸದಡಿಗೆ ಸಿದ್ಧಗೊಳಿಸುತ್ತಿರಬಹುದೆ? ಇರಬಹುದು ನನ್ನ ಸಂಗ ಬಯಸಿ ಕಾತರಿಸುತ್ತಿರಬಹುದವಳ ಅಂಗ. ಕಾಲ ಹರಣವೇಕೆ ಕೂಗಿ ಕರೆದು ಬೇಗೆ ನೀಗಿ ತೃಪ್ತಿ ಪಡಿಸುವೆ. ಜಯಾ.... ಜಯಾ....

ಜಯಾ– (ಒಳಗಿನಿಂದ) ಬಂದೆ (ಹೊರಗೆ ಬಂದು) ಓ ನೀವೆ, ಬಂದು ಬಹಳ ವೇಳೆಯಾಯಿತೆ, ಕುಳಿತುಕೊಳ್ಳಿ ಹಾಗೆ ನಿಂತಿರುವಿರಲ್ಲ.

ಉದಯ– ಈಗತಾನೆ ಬಂದೆ, ಸವಿಯೂಟ ತಯಾರಿಸುತ್ತಿರಬೇಕೆಂದು ಭಾವಿಸಿ ಹಾಗೇ ನಿಂತು ಬಾಯಿ ಚಪ್ಪರಿಸುತ್ತಿದ್ದೆ. ನನ್ನ ಊಹೆ ತಪ್ಪಿಲ್ಲತಾನೆ?

ಜಯಾ– ಇದರಲ್ಲೇನು ತಪ್ಪು. ನಿಜವನ್ನರಿತೇ ಆಡಿರುವಿರಿ. ಸವಿಯಲು ಈಗಲೇ ಸಿದ್ಧವಾಗಿದೆ ಅಡಿಗೆ.

ಉದಯ– ಹೂಂ..... ಮನದ ಹಸಿವೆಯೂ ಬಲವಾಗಿದೆ.

ಜಯಾ– ಎರಡನ್ನೂ ತೀರಿಸಿಕೊಂಡು ತೃಪ್ತಿಪಡಬಹುದು. ಬನ್ನಿ ಸಿದ್ಧವಾಗಿದೆ ಮೃಷ್ಟಾನ್ನದೂಟ ಹೊನ್ನ ಮಂಚದ ಕೂಟ.

ಉದಯ– ನಡೆ ಕಳೆಯೋಣ ಕಾಮನಕಾಟ (ಕೋಟು ಕಳೆದು ಕುರ್ಚಿಗೆ ಹಾಕಿ ಒಳಗೆ ಹೋಗುವನು. ಜಯಾ ಮುಂದೆ ಹೋಗುವಳು. ರಾಜೂ ಪ್ರವೇಶಿಸುವನು)

ರಾಜು– (ಆದೃಶ್ಯ ಕಂಡು) ಅಯ್ಯೋ ನಾನೋಡಲಾರೆ ಈ ಹೇಸಿ ಕೃತ್ಯವನ್ನು. ಜಯಾ ನೀನು ಇಂಥಾ ಕಾರ್ಯಕ್ಕಿಳಿದೆಯಾ. ಉದಯ, ಮಿತ್ರದ್ರೋಹಿ, ನಂಬಿದವರ ಕುತ್ತಿಗೆ ಹಿಸುಕಲೆತ್ನಿಸಿದೆಯಾ ಪಾಪಿ. ತಾಳಿ ಕಾಮುಕ ಪಶುಗಳೇ ನಿಮ್ಮನಿಂದು ಉಳಿಯಗೊಡಲಾರೆ (ಬಾಗಿಲ ಹತ್ತಿರ ಹೋಗಿ, ವಿಚಾರಿಸಿ) ಬೇಡ....ಬೇಡ....ಇದರಲ್ಲಿ ಅವರದೇನು ತಪ್ಪಿಲ್ಲ. ಎಲ್ಲ ತಪ್ಪು ನನ್ನದೆ. ನಾನು ಜಯಾನ ತುಂಬುಯೌವನಕ್ಕೆ ಮಧುಪಾನ ಮಾಡಿಸಿ ತೃಪ್ತಿಗೊಳಿಸಲಿಲ್ಲ. ಅದಕ್ಕಾಗಿ ಪರಪುರುಷನನ್ನಾಶ್ರಯಸಿ ಸುಖಪಡುತ್ತಿದ್ದಾಲೆ. ಅಯ್ಯೋ ನಾನು ಮೂರ್ಖ.... ನಾನು ದ್ರೋಹಿ, ಹೆಂಡತಿಯನ್ನು ಸುಖಪಡಿಸದ ಪಾಪಿ, ಅಯೋಗ್ಯ. ಆದರೆ ತಂಗಿ ಲೀಲಾಳ ಬಾಳಿಗೂ ಇವಳಿಗೂ ಎಷ್ಟು ಅಂತರ. ಬಾಲ್ಯದಲ್ಲಿಯೇ ಪತಿಯನ್ನು ಕಳೆದುಕೊಂಡು ಯಾವ ಸುಖ ಕಾಣದೆ ವಿರಕ್ತ ಜೀವನ ಸಾಗಿಸುತ್ತ ಕಾಮವಾಸನೆಗೆ ತುತ್ತಾಗದೆ ಪತಿಯೇ ಪರದೈವವೆಂದು ಸ್ಥಿರ ಮನಸ್ಕಳಾಗಿ ಸಾಗಿದ ಅವಳ ಪವಿತ್ರ ಆದರ್ಶ ಬಾಳೆಲ್ಲಿ. ಪತಿಯಿಂದ ಸುಖ ಪಡೆದು ಮಗುವಿನ ತಾಯಿಯಾಗಿದ್ದರೂ ಪತಿ ತನಗೆ ಸುಖಕೊಡದಾಗಲು ಮನದ ಮುಂದಿನ ಮಾಯಕ್ಕೆ ಸಿಲುಕಿ ಪರಪುರಷನ ತೋಳ ತೆಕ್ಕೆಯಲ್ಲಿ ಸಿಲುಕಿ ದೇಹತೃಪ್ತಿ ಪಡುತ್ತಿರುವ ಈ ಹೆಣ್ಣು ನಾಯಿಯ ಬಾಳೆಲ್ಲಿ, ಅಯ್ಯೋ ಮತಿಹೀನ ಹೆಣ್ಣೆ. ನಿನ್ನ ಈ ಚೆಲ್ಲಾಟಕ್ಕೆ ಆತಂಕವಾಗುವರೆಂದೇ ತಂದೆ ತಂಗಿಯರ ಮೇಲೆ ಅಪವಾದ ಹೊರಸಿ ಹೊರನೂಕಿಸಿದೆಯಾ. ಈಗೇನು ಮಾಡಲಿ? ಪುರುಷನಾಗಿ ಹುಟ್ಟಿ ಹೆಂಡತಿ ಪರಪುರುಷನೊಡನೆ ಸರಸವಾಡಿದರೂ ನೋಡಿ ಪಶುವಿನಂತೆ ಸುಮ್ಮನಿರಲೇ. ಅಯ್ಯೋ ನಾನು ಹುಚ್ಚ, ಹೆಂಡತಿಯನ್ನು ಬೇರೆಯವರಿಗೆ ಕೊಟ್ಟು ಒಳಗೆ ಕಳಿಸಿ ಬಾಗಿಲ ಹಾಕಿ ಕಾಯುತ್ತ ಕೂಡುವ ನಪುಂಸಕ....ಷಂಡ.... (ಮತ್ತೆ ಮರೆಯಾಗಿ ನಿಲ್ಲುವನು)

ಉದಯ– (ಜಯಾ ಉದಯ ಹಾಡುತ್ತ ಹೊರಗೆ ಬರುವರು. ಹಾಡು ಮುಗಿಯುತ್ತಲೆ) ನಾನಿನ್ನು ಬರಲೇ ನಿನ್ನ ಷಂಡ ಗಂಡ ಬರುವ ವೇಳೆಯಾಯಿತು.

ಜಯಾ– ಹೋಗಿ ಬನ್ನಿ.... ದಿನದ ವೇಳೆಗೆ ಬರುವದನ್ನು ಮರೆಯಬೇಡಿ.

ಉದಯ– ಅರಗಿಣಿ ನಿನ್ನನ್ನು ಮರೆಯುತ್ತೇನೆಯೇ (ಗಲ್ಲಕ್ಕೆ ಹೊಡೆದು ಹೋಗುವನು)

ಜಯಾ– (ಇತ್ತ ರಾಜು ಪ್ರವೇಶಿಸುವನು) (ಸ್ವ) ಉಳಿದುಕೊಂಡೆ (ಪ್ರ) ಇಂದೇಕೋ ಬೇಗ ಬಂದಿರಿ, ಮುಖವೇಕೋ ಸಪ್ಪೆಯಾಗಿದೆಯಲ್ಲ. ಮೈಯಲ್ಲಿ ಚೆನ್ನಾಗಿಲ್ಲವೆ ?

ರಾಜು– ನನಗೇನಾಗಿದೆ, ಚೆನ್ನಾಗಿಯೇ ಇದ್ದೇನಲ್ಲ.

ಜಯಾ– (ಹಣೆ ಹಿಡಿದುನೋಡಿ) ಅಯ್ಯೋ ತಲೆ ತುಂಬ ಕಾಯ್ದಿದೆ. ಡಾಕ್ಟರ್‌ನ್ನು ಕರೆತರಲೆ ?

ರಾಜು– ಬೇಡ.

ಜಯಾ– ಹಾಗಾದರೆ ಕಾಫಿ ಮಾಡಿಕೊಡುವೆ. ಒಂದು ಮಾತ್ರೆ ತೆಗೆದುಕೊಂಡು ವಿಶ್ರಾಂತಿ ಪಡೆಯಿರಿ (ಒಳಗೆ ಹೋಗುವಳು)

ರಾಜು– (ಸ್ವ) ಎಷ್ಟೊಂದು ನಟನೆ ಈ ಹೆಣ್ಣಿನಲ್ಲಿ. ಪುರುಷನ ಮನಸೆಳೆದು ನಾಯಿಯನ್ನಾಗಿ ಮಾಡಿ ಇಚ್ಛೆ ಈಡೇರಿಸಿಕೊಳ್ಳುವ ಕುಶಲ ಕಲೆಯನ್ನು ಚೆನ್ನಾಗಿ ಕಲಿತಿದ್ದಾರೆ ಈ ಸ್ತ್ರೀಯರು. ಅಯ್ಯೋ ಪತಿ ದ್ರೋಹಿ ಹೆಣ್ಣೆ.

ಜಯಾ– (ತಂದುಕೊಟ್ಟು) ತೆಗೆದುಕೊಳ್ಳಿ (ಕುಡಿಯುವನು) ಬನ್ನಿ ವಿಶ್ರಾಂತಿ ಪಡೆಯುವಿರಂತೆ (ಹೋಗುವರು).

–ತೆರೆ–

===**=====**===

ಪ್ರವೇಶ – ೧೭

–ಜಂಗಲ್ ರಸ್ತಾ–

ಲೀಲಾ– (ಲೀಲಾ ಕುಟ್ಟುತ್ತಿರುವಳು) ಸುಖ ಶಾಂತಿ ಹೀನ ಅರಮನೆಗಿಂತ ಈ ಮುರುಕು ಗುಡಿಸಲು ನೂರು ಪಾಲು ಮೇಲು. ಸಾಕಷ್ಟು ಭೋಗ ಭಾಗ್ಯವಿದ್ದರೂ ಅದು ಸ್ಮಶಾನ ಸಮಾನ. ಕಡು ಬಡತನ ತಾಂಡವವಾಡುತ್ತಿದ್ದರೂ ಈ ಗುಡಿಸಲು ಶಾಂತಿಸದನ. ಕಾಮುಕರ ಬಲೆಗೆ ತುತ್ತಾಗಿ ಹಾದಿಯ ಹೆಣವಾಗಿ ಹೋಗುತ್ತಿದ್ದ ನನ್ನನ್ನು ತಂದು ಸಲುಹಿದ ಈ ಪವಿತ್ರ ಹೃದಯದ ದಂಪತಿಗಳು ಕಮ್ಮಿ ಕುಲದವರಾದರೂ ಮೆಟ್ಟುಮಾರಿ ಹೊಟ್ಟೆ ಹೊರೆಯುವ ಶ್ರೇಷ್ಠ ಕಾಯಕನಿಷ್ಠರು. ಹಗಲಿರುಳು ದುಡಿದು ಅರಹೊಟ್ಟೆ ಉಂಡು ಜೀವಿಸುತ್ತಿದ್ದರೂ ಕೆಟ್ಟ ವಿಚಾರ ಇವರಲ್ಲಿ ಎಳ್ಳನಿತೂ ಸುಳಿಯದು. ಇಂಥವರ ಸೇವೆಯನ್ನು ನಾನು ಮಾಡುವದರಲ್ಲಿ ತಪ್ಪೇನಿದೆ. ತಾಯಿಯ ಮಮತೆಯನ್ನರಿಯದ ನಾನು ಅವಳ ಪ್ರತಿರೂಪವನ್ನಿಲ್ಲಿ ಕಾಣುವಂತಾಯಿತು. ಬೇಗ ಭತ್ತವನ್ನು ಕುಟ್ಟಿ ಮುಂದಿನ ಕಾರ್ಯಕ್ಕೆ ನೆರವಾಗುವೆ. (ಮತ್ತೆ ಕುಟ್ಟ ಹತ್ತುವಳು) (ಹನಮಿ ಕೊಡಹೊತ್ತುಕೊಂಡು ಬರುತ್ತಾಳೆ.)

ಹನುಮಿ– ಅಯ್ಯಯ್ಯ, ಯವ್ವ ನಮ್ಮವ್ವ ಇದೇನ ಮಾಡಾಕ ಹತ್ತೀ. ಬ್ಯಾಡವ್ವ ಯವ್ವ, ನಮಗ ಪಾಪ ಬರುತ್ತ. ನೀ ಸುಮ್ನ ಕುಂತ ಉಣ್ಣವ್ವಯವ್ವ

ಲೀಲಾ– ಸುಮ್ಮನೆ ಕುಳಿತು ಉಣ್ಣುವದು ನನ್ನಿಂದ ಸಾಧ್ಯವಿಲ್ಲ ತಾಯಿ, ನಾನು ಏನಾದರೂ ಕೆಲಸ ಮಾಡಲೇಬೇಕು.

ಹನುಮಿ– ಬ್ಯಾಡ್ರಿಯವ್ವ, ಈಗ ಮುದೇವ ಬಂದ ನೋಡಿದ್ನಂದ್ರ ನನ್ನ ಉಳಸಕ್ಕಿಲ್ಲ. ನಮಗೇನೂ ತ್ರಾಸ ಇಲ್ಲ. ಏನ ಬಾಳ ದಗದ, ನಾ ಮಾಡತೀನಿ ನೀವು ಸುಮ್ನ ಕುಂದ್ರಿ,

ಲೀಲಾ– ಇಲ್ಲಮ್ಮ, ಕೆಲಸವಿಲ್ಲದೆ ಅನ್ನ ಉಣ್ಣಲು ನನ್ನ ಮನಸೊಪ್ಪದು.

ಹನುಮಿ– ಈಗಂತೂ ಬ್ಯಾಡ್ರಿ ಅವ ಬಂದಿಂದ ಕೇಳಿ ಮಾಡಂತ್ರಿ,

ಲೀಲಾ– ಇಲ್ಲಮ್ಮ, ಇವಷ್ಟು ಧಾನ್ಯಗಳನ್ನು ನಾನು ಸ್ವಚ್ಛಗೊಳಿಸುವೆ, ನೀನು ನೀರುತಾ.

ಹನುಮಿ– ನಿನಗ ತಿಳದಾಂಗ ಮಾಡವ್ವಯವ್ವ, ನಾನೇನ ಹೇಳ್ಳಿ. (ಒಳಗೆ ಹೋಗುವಳು)

ದುರುಗ– (ಪ್ರವೇಶಿಸಿ) ಯವ್ವ...ಯವ್ವ ಎಂಥಾ ಕೆಲಸ ಮಾಡಾಕ ಹತ್ತೀರಿ ನೀವು. ಏಳ್ರಿ ಮೊದ್ಲ ಕೈ ಬಿಡ್ರಿ, ಹನಮಿ ಏ ಹನಮಿ ಅವ್ವಾರಿಗ್ಯಾಕ ಕೆಲಸಹಚ್ಚಿದೆ ?

ಲೀಲಾ– ಇಲ್ಲವಪ್ಪ, ತಾಯಿ ಹಚ್ಚಲಿಲ್ಲ. ನಾನೇ ಬೇಸರ ಕಳೆಯಲೆಂದು ಈ ಕೆಲಸ ಮಾಡಹತ್ತಿದ್ದೇನೆ.

ಹನುಮಿ– ನಾನೆಷ್ಟು ಕೈ ಮುಗಿದು ಬ್ಯಾಡ್ರಿ ಅಂದ್ರೂ ಕೇಳೋಲ್ರಿ ಅವ್ವಾರು. ಹೆಚ್ಚಿಗೆ ಹೇಳಿದ್ರ ಕಣ್ಣೀರ ತಗೀತಾರ.

ದುರಗ– ಯವ್ವಾ, ನಾವು ಹೊಲೇರು, ನಿಮ್ಮ ಮಕ್ಕಳು. ನಿಮ್ಮಗೂಡ ಕೆಲಸ ಮಾಡಿಸಿಕೊಂಡ್ರ ನಮಗ ಪಾಪಬರುತ್ರಿ.

ಲೀಲಾ– ಎಲ್ಲಿದೆಯಪ್ಪ ಮೇಲು ಕೀಳು ಆ ದಯಾಳುವಿನ ದೃಷ್ಟಿಯಲ್ಲಿ. ನೀವು ಹೊಲೆಯರೇ, ಅಲ್ಲಪ್ಪ ಮತಿವಂತರು. ನಿತ್ಯ ಸತ್ಯ ಕಾಯಕಮಾಡಿ ಸದ್ಗತಿ ಪಡೆಯುತ್ತಿರುವ ಪವಿತ್ರ ಹೃದಯದ ಪರಮಾತ್ಮನ ಪರಮ ಭಕ್ತರು. ಪೂಜ್ಯ ತಂದೆ ಬಾಪುಜಿಯವರ ಆದರಕ್ಕೆ ಮಾನ್ಯರಾದ ಹರಿಜನರಪ್ಪ ನೀವು.

ದುರಗ– ಯವ್ವಾ ನಿಮ್ಮಂಥಾ ತಿಳಿದಾರ ಮುಂದ ನಾನೇನು ಆಡಬೇಕ್ರಿ, ನಿಮ್ಮ ಮನಸಿಗೆ ತಿಳಿದಾಂಗ ಇರ್ರಿ. ಹನಮಿ ಆ ಮೆಟ್ಟ ತಾ ಮಾರಿ ಬರುತೀನಿ. (ತಂದು ಕೊಡುವಳು. ಹೋಗುವನು)

ಹನಮಿ– ಯವ್ವ ನಾನಟ ಅರ್ಬಿ ಒಕ್ಕೊಂಡ ಬರತೀನ್ರಿ ನೀವು ಇಲ್ಲೇ ಇರ್ರಿ.

ಲೀಲಾ– ನಾನೂ ಬರುತ್ತೇನಮ್ಮ, ಈರ್ವರೂ ಬೇಗ ತೊಳೆದುಕೊಂಡು ಬರೋಣ. ತಾರಮ್ಮ (ಸೀರೆ ತೆಗೆದುಕೊಂಡು) ನಾನು ನಿಮ್ಮಮಗಳಂತೆ ತಿಳಿದುಕೊಳ್ಳಿ.

ಹನಮಿ– ಇನ್ನ ನಾನೇನ ಹೇಳ್ಳವ್ವ ನಿನಗ, ನಡ್ರಿ ಹೋಗಾನ. (ಹೋಗುವರು).

===**====**===

ಪ್ರವೇಶ – ೧೮

– ರಸ್ತಾ –

ಅಶ್ವತ್ಥ– (ಪ್ರವೇಶಿಸಿ) ಅಯ್ಯೋ ಹಸಿವೆ.... ನೀರಡಿಕೆ. ತಾಳಲಾರೆ ಈ ಬಿಸಿಲತಾಪವನ್ನು, ಲೀಲಾ.... ಮಗಳೇ ಎಲ್ಲಿರುವೆಯಮ್ಮ, ನನ್ನಂತೆ ಅನ್ನ ನೀರಿಲ್ಲದೆ ಹಾದಿಯ ಹೆಣವಾಗಿ ಹೋದೆಯಾ ತಾಯಿ. ಅಯ್ಯೋ ನನ್ನ ದೈವವೆ, ಮಗ ಸೊಸೆ ಎಲ್ಲರೂ ಇದ್ದೂ ಹೀಗಾಯಿತೆ. ಅಯ್ಯೋ ಹೆಣ್ಣಿನ ಕಾರಸ್ಥಾನವೆ. ಹೆಣ್ಣು....ಮಾರಿ ರಾಕ್ಷಸಿ. ತಾಯಿಯಾಗಿ ಮಗುವ ಹೆತ್ತು ಮಮತೆಯಿಂದ ಮೊಲೆ ಹಾಲು ಉಣಿಸುವದು ಹೆಣ್ಣು. ಸತಿಯಾಗಿ ರತಿಸುಖವ ನೀಡಿ ಪತಿಯ ಮನೆ ತವರುಮನೆ ಬೆಳಗುವದು ಹೆಣ್ಣು. ವಿಧವೆಯಾಗಿ ವಿರಕ್ತ ಜೀವನ ಸಾಗಿಸಿ ಮಡಿದ ಪತಿಗೆ ಮುಡುಪಾದ ಹೂ ನಾನೆಂದು ಅವನ ಧ್ಯಾನದಲ್ಲಿಯೇ ಅಸುನೀಗುವದು ಹೆಣ್ಣು. ಸೊಸೆಯಾಗಿ ಅತ್ತೆ ಮಾವ, ಪತಿ ಮೈದುನರನ್ನು ದೇವರೆಂದು ತಿಳಿದು ಸೇವೆ ಗೈಯುವದು ಹೆಣ್ಣು. ಹೆಣ್ಣು ಮಾತೃ ಹೃದಯಿ, ಪ್ರೇಮಮಯಿ, ವಾತ್ಸಲ್ಯಮಯಿ, ಕರುಣಾಮಯಿ. ಆದರೆ ಅದೇ ಹೆಣ್ಣು ಮತ್ತೊಂದೆಡೆ ತಂದೆ ಮಕ್ಕಳಲ್ಲಿ ವಿರಸ ಹುಟ್ಟಿಸಿ ಸುಂದರ ಸಂಸಾರವನ್ನು ಕೆಡಿಸಿ ಬಾಳನೌಕೆಯನ್ನು ನಡುನೀರಿನಲ್ಲಿ ಮುಳುಗಿಸುವದು. ತಂದೆ ತಾಯಿಯ ಕೀರ್ತಿಗೆ ಮಸಿಬಳೆದು ತಾಳಿಕಟ್ಟಿದ ಪತಿಗೆ ದ್ರೋಹಬಗೆದು ಪರಪುರುಷನೊಡನೆ ಕಾಮನಾಟವಾಡುವದು. ಪತಿ ತೀರಿದ ಮೂರನೇ ದಿನವೇ ಪರಪುರುಷರ ಸಂಗ ಬಯಸಿ ತೀರಿದ ಪತಿಗೆ ದ್ರೋಹ ಬಗೆಯುವದು. ಮೇಲೆ ಪತಿವ್ರತೆಯಂತೆ ನಟಿಸಿ ವಿಟಪುರುಷನೊಡನೆ ಆಟವಾಡುವದು. ಅವಳು ಕಟುಕಿ, ರಾಕ್ಷಸಿ, ದುರ್ಮಾರ್ಗಿ, ವ್ಯಭಿಚಾರಿ, ನಾಯಿ. ಇಂಥ ಹೆಣ್ಣಿಗೆ ಸಿಕ್ಕ ನಮ್ಮ ಬಾಳು ಮಣ್ಣಾಯಿತು. ಕೀರ್ತಿ ಕಾಸಿಗೆ ಪಂಚೇರಾಯಿತು. ಅಯ್ಯೋ, ಅವಮಾನ ಹೊತ್ತು ನಾನಿನ್ನು ಬಾಳಲಾರೆ. ಇಂದೇ ಈ ಜಗದಿಂದ ಮುಕ್ತನಾಗುವೆ. ಬಂದೇ ಮಗಳೇ ನಾನೂ ನೀನಿದ್ದೆಡೆಗೆ.

ಅರುಣ– (ಕಣ್ಣಿಗೆ ಚಾಳಿಸ ಹಾಕಿ ಕೈಯಲ್ಲಿ. ಬ್ಯಾಗು ಹಿಡಿದು ಪ್ರವೇಶಿಸಿ) ಏ.... ಮುದುಕ, ಹಾದಿಗಡ್ಡವಾಗಿ ನಿಂತಿರುವಿಯಲ್ಲ ಕಣ್ಣು ಕಾಣಿಸುವದಿಲ್ಲವೆ ?

ಅಶ್ವತ್ಥ– ಅವಮಾನದ ಕರಿಯಪರದೆ ನನ್ನ ಕಂಗಳನ್ನು ಕುರುಡು ಮಾಡಿದೆಯಪ್ಪ.

ಅರುಣ– ಸರಿ ಹಿಂದಕ್ಕೆ, ನಿನ್ನಳಲು ತೆಗೆದುಕೊಂಡು ನಾನೇನು ಮಾಡಲಿ. ಈ ಬ್ಯಾಗ ಹೊತ್ತು ತರುವೆಯೇನು ಸ್ಟೇಶನವರೆಗೆ ನಾಲ್ಕಾಣೆ ಕೊಡುವೆ.

ಅಶ್ವತ್ಥ – ಅಷ್ಟುಮಾಡಿ ಸ್ವಾಮಿ ಪುಣ್ಣೆ ಬರುತ್ತದೆ. ನಾಲ್ಕು ದಿವಸದಿಂದ ಹೊಟ್ಟೆಗೆ ಅನ್ನವಿಲ್ಲ.

ಅರುಣ– ಹೂಂ.....ಹೊತ್ತುಕೋ. (ಹೊರಿಸುವನು. ಮುದುಕ ನಡುಗುತ್ತ ಮುನ್ನಡೆಯುತ್ತಲೇ ದುರಗ ಪ್ರವೇಶಿಸಿ)

ದುರಗ– ಅಯ್ಯೋ ಸ್ವಾಮಿ, ಮುದುಕ ನಡುಗಾಕ ಹತ್ಯಾನ ಅವನ ಮ್ಯಾಗ್ಯಾಕ ಹೊರಿಸಿರಿ.

ಅರುಣ– ಹೊರದಿದ್ದರೆ ಅನ್ನ ತಾನಾಗಿಯೇ ದೊರೆಯುತ್ತದೆಯೇನು?

ದುರುಗ– ಹಸಿವೆ ನೀರಡಿಕೆಯಿಂದ ಬಳಲುತ್ತಿದ್ದಾನೆ. ದೇವರ, ನಾನು ಹೊತ್ತು ಇಟ್ಟಬರತೀನಿ. ಮುಗಿಸದಷ್ಟ ರೊಕ್ಕ ಅವರಿಗೆ ಕೊಟ್ಟು ಬಿಡ್ರಿ.

ಅಶ್ವತ್ಥ– ಬೇಡಪ್ಪ, ಹಾಗೆಯೇ ಹಣಪಡೆಯುವದು ಹೇಡಿತನ.

ದುರುಗ– ಹಾಂಗ ಬ್ಯಾಡಂದ್ರ ನನ್ನ ಈ ಜೋಡನ ನೋಡಿಕೊಂಡ ಇಲ್ಲೆ ಇರ್ರಿ, ಬೇಗ ಮುಟ್ಟಿಸಿಬಂದು ನಿಮ್ಮನ್ನ ಮನಿಗೆ ಕರಕೊಂಡು ಹೊಕ್ಕೀನಿ.

ಅಶ್ವತ್ಥ– ಎಂಥ ಪವಿತ್ರ ಹೃದಯುವಪ್ಪ ನಿನ್ನದು. ಇಂಥ ಕಲಿತ ಹಣವಂತರಲ್ಲಿಲ್ಲದ ಕರುಣೆ ನಿನ್ನಲ್ಲುಂಟು. ನಿನಗೆ ದೇವರು ಒಳ್ಳೆಯದನ್ನು ಮಾಡಲಿ.

ದುರುಗ– ಬರ್ರಿ ದೇವರ ಕಳಿಸಿ ಬರತೀನಿ (ಹೋಗುವರು).

ಅಶ್ವತ್ಥ– (ಪಾದರಕ್ಷೆಯನ್ನು ಕೈಯಲ್ಲಿ ತೆಗೆದುಕೊಂಡು) ಪಾದರಕ್ಷೆ, ಪರಮಾತ್ಮನ

ಪರಮ ಭಕ್ತರ ಪವಿತ್ರ ಕಾಯಕದಿಂದ ಸೃಷ್ಟಿಕೊಂಡ ಪಾದರಕ್ಷೆ. ತನ್ನ ಒಂದು ಶರಣಿಗೆ ಪ್ರತಿಯಾಗಿ ಎರಡು ಶರಣು ಮಾಡಿದುದಕ್ಕಾಗಿ ಶರಣಹರಳಯ್ಯ ತನ್ನ ಹಾಗೂ ಸತಿಯ ತೊಡೆಯ ಚರ್ಮದಿಂದ ತಯಾರಿಸಿ ಅಣ್ಣ ಬಸವಣ್ಣಗೆ ನಿರ್ಮಿಸಿದ ಪಾದರಕ್ಷೆ. ಅಣ್ಣನವರು ಇವು ಸಂಗಮೇಶ ಸಲ್ಲತಕ್ಕವೆಂದು ತಲೆಯ ಮೇಲಿಟ್ಟುಕೊಂಡು ಹರುಷದಿಂದ ಹಾಡಿ ನಲಿದ ಪಾದರಕ್ಷೆ. ಇವುಗಳ ಸ್ಪರ್ಶದಿಂದ ಪವಿತ್ರವಾಯಿತಿಂದು ನನ್ನ ಕಾಯ. ಸಾರ್ಥಕವಾಯಿತಿಂದು ನನ್ನ ಜೀವನ (ತಲೆಯ ಮೇಲಿಟ್ಟುಕೊಂಡು ನಲಿಯುವನು).

ದುರುಗ– (ಪ್ರವೇಶಿಸಿ) ಬಂದಬಿಟ್ಟೆ ನೋಡ್ರಿಯಪ್ಪ. ಅಯ್ಯಯ್ಯ ಇದೇನ ಮಾಡತೀರಿಯಪ್ಪ, ಮೆಟ್ಟ ತಲಿಮ್ಯಾಲ ಇಟಗೊಂಡಿರಲ್ಲ. ತರ್ರಿ, ನಾವು ಹೊಲೆರು ನಮ್ಮನ್ನ ಮುಟ್ಟಬಾರದು ನೀವು.

ಅಶ್ವಥ– ಹೊಲೆಯರು ನೀವಲ್ಲಪ್ಪ. ಪವಿತ್ರ ಹೃದಯದ ನಿಮ್ಮನ್ನು ಕಾಲು ಕಸವಾಗಿ ಕಾಣುತ್ತಿರುವೆವಲ್ಲ ನಾವೇ ಹೊಲೆಯರು. ಕೊಲ್ಲುವವನೆ ಮಾದಿಗ. ಹೊಲಸು ತಿಂಬುವನೆ ಹೊಲೆಯ ಎಂದು ಅಣ್ಣನವರು ಹೇಳಿಲ್ಲವೆ. ನೀನು ಹೊಲೆಯನಲ್ಲ, ಪವಿತ್ರ ಹೃದಯದ ಪರಮಾತ್ಮ.

ದುರುಗ– ನಂಗೇನೂ ತಿಳಿದುಲ್ರಿಯಪ್ಪ. ದುಡಿಯೋದು ದೇವ್ರು ಕೊಟ್ಟಾಟ ಉಂಡು ಕಾಲಕಳಿಯೋದು. ಬರ್ರಿ ಮನೆಗೆ ಹೋಗಾನ, ಬಾಳ ಹಸದೀರಂತ ಕಾಣತ್ತ.

ಅಶ್ವಥ– ನನ್ನಿಂದ ಸುಮ್ಮನೆ ನಿನಗೇಕೆ ತೊಂದರೆಯಪ್ಪ. ಹಾದಿಯ ಹೆಣವಾಗಿ ಹೋಗುವ ಈ ಮುದಿ ದೇಹ ಬದುಕಿಯಾದರೂ ಮಾಡುವದೇನಿದೆ.

ದುರುಗ– ಇರ್ಲಿ ಬರ್ರಿ ಸುಮ್ಮ ಸುಮ್ಮನ ತ್ರಾಸ ಮಾಡಿಕೋಬ್ಯಾಡ್ರಿ, ಜೀವನದಾಗ ಬಾಳ ನೊಂದಕೊಂಡಾಂಗ ಕಾಣತ್ತ (ಹೋಗುವರು) (ಅದೇ ರಸ್ತೆಯ ಮೇಲೆ ಉದಯ ಪ್ರವೇಶಿಸಿ)

ಉದಯ– (ಪ್ರವೇಶಿಸಿ) ನನ್ನ ಕಾರಸ್ಥಾನದ ಕೋಟೆಯ ಕೊನೆಯ ಘಟ್ಟ ಇಂದು ಮುಗಿಯಬೇಕು. ಹಿಮಾಲಯ ಬೆಟ್ಟದಂತೆ ಬೃಹದಾಕಾರವಾಗಿ ನಿಂತ ಸಮಸ್ಯೆಯನ್ನೇ ನೆಲಸಮಮಾಡಿ ಜಯಾಳನ್ನು ಜಯಿಸಿ ಅವಳ ದೇಹ ಸುಖ ಸವಿದು ತೃಪ್ತಿ ಪಟ್ಟಿದ್ದಾಯಿತು. ಇನ್ನು ಕೊನೆಯದಾಗಿ ಉಳಿದಿರುವ ನನ್ನ ಬಯಕೆ

ಲೀಲೆಯನ್ನು ನನ್ನ ಬಾಹು ಬಂಧನದಲ್ಲಿ ಬಿಗಿದಪ್ಪಿ ಗಿಣಿ ಕಚ್ಚದ ಹಣ್ಣಿನ ಅಮೃತ ರಸವನ್ನೀಯುವದೊಂದೆ. ಕಣ್ಣಿಟ್ಟ ಮೂರು ಹಕ್ಕಿಗಳಲ್ಲಿ ಒಂದು ಸಿಕ್ಕದೆ ಹಾರಿಹೋಯಿತು. ಹೋಗಲಿಬಿಡು, ಅದೇನು ಮಹತ್ವದ್ದಲ್ಲ. ನಾ ಮನಸಾರೆ ಬಯಸಿದ್ದು, ನನ್ನ ಕಾಯ ಹಾತೊರೆದದ್ದು ಹಾರಿಹೋದ ಹಕ್ಕಿಗಲ್ಲ.... ಇನ್ನೂ ಬಲೆಯಲ್ಲಿ ಬೀಳದೆ ಒಂಟಿಂಯಾಗಿ ವಿಹರಿಸುತ್ತಿರುವ ಲೀಲೆಗಾಗಿ. ಅವಳಿಗಾಗಿಯೇ ಮುಗ್ಧ ಮನಸ್ಸಿನ ಜಯಾಳನ್ನು ಬಲೆಯಲ್ಲಿ ಹಾಕಿಕೊಂಡು ಅಡ್ಡದಾರಿಗೆಳೆದದ್ದು. ಇರಲಿ, ಗತಕಾಲದ ಇತಿಹಾಸ ಅಲ್ಲಿಯೇ. ಇನ್ನು ಭವಿಷ್ಯ ಸುಖದ ಬರವನ್ನು ಸ್ವಾಗತಗೈದು ತೃಪ್ತಿಪಡಬೇಕು. ಲೀಲೆಯ ಸಂಗಕ್ಕಾಗಿ ಹಾತೊರೆಯುತ್ತಿದೆ ಮಂಗ ಮನಸ್ಸು. ತಾಳು ತಾಳು ಮನವೆ, ಗತಿ ಇಲ್ಲದೆ ಮತಿಹೀನಳಾಗಿ ತಿರುಗುವ ಅಬಲೆ ಹೆಣ್ಣನ್ನು ಹಿಡಿತಂದು ನಿನಗೊಪ್ಪಿಸುವದೆಷ್ಟರ ಮಾತು. ಇಂದೇ ನಿನ್ನಿಚ್ಛೆಯನ್ನೀಡೇರಿಸಿ ನನ್ನ ಕೋಟೆಯ ಕಳಸವನ್ನಿಟ್ಟು ಆಗುವೆ ಮುಕ್ತ. ಸದಾ ಉದಯೋನ್ಮುಖನಾಗಿ ಸಾಗಿದ ಈ ಉದಯನಿಗೆಲ್ಲಿ ಕತ್ತಲೆಯ ಭಯ. (ಹೋಗುವನು).

—ತೆರೆ—

===**=====**===

ಪ್ರವೇಶ–೩೮

–ಜಂಗಲ್ ರಸ್ತಾ (ಗುಡಿಸಲು)–

ದುರಗ– (ಅಶ್ವತ್ಥನೊಡನೆ ಪ್ರವೇಶಿಸಿ) ಹನಮಿ....ಏ ಹನಮಿ. ಹೊರಗೆ ಬಾರ, ನಮ್ಮ ಪುಣ್ಣೇಕ ಮತ್ತೊಬ್ಬ ಅಜ್ಜಾರು ಸಿಕ್ಕಾರ.

ಹನಮಿ– (ಓಡಿ ಬಂದು) ಅಯ್ಯಯ್ಯ ಅಜ್ಜಾರು ತುಂಬ ಹಸದಂಗ ಕಾಣುತ್ತಲ್ಲ. ಬರ್ರಿಯಪ್ಪ ಮೊದ್ಲ ಊಟ ಮಾಡ್ರಿ, ನಮಗೊಬ್ಬ ಮಗಳಾಂಗ ಲೀಲವ್ವ ಸಿಕ್ಕಾಳ, ನೀವು ತಂದಿಯಾಂಗ ಸಿಕ್ಕೀರಿ.

ಅಶ್ವತ್ಥ– ಲೀಲ.... ಲೀಲ....

ದುರುಗ– ಹೂನ್ರಿ, ಲೀಲವ್ವನಾರು. ಯಾಕ್ರಿ ಹಿಂಗ ಮಾಡತೀರಿ? ಅವ್ರು ನಿಮಗ ಗೊತ್ತೇನ್ರಿ.

ಅಶ್ವತ್ಥ– ಗೊತ್ತಪ್ಪ, ಎಲ್ಲಿ ಆ ತಾಯಿ.

ಹನಮಿ– ಇಲ್ಲೆ ಒಳಗದಾಳ, ನಿಮಗೇನಾಗಬೇಕ್ರಿ ಆಕಿ?

ಅಶ್ವತ್ಥ– ನಾನು ಅವಳ ನಿರ್ಭಾಗ್ಯ ತಂದೆಯಮ್ಮ.

ಲೀಲಾ– (ಓಡಿ ಬಂದು) ಅಪ್ಪಾ..... ಅಪ್ಪಾ....

ಅಶ್ವತ್ಥ– ಮಗಳೇ ಲೀಲಾ.... ಲೀಲಾ.... (ಅಪ್ಪಿಕೊಳ್ಳುವರು)

ಹನಮಿ– (ಕಣ್ಣೀರು ಒರೆಸಿಕೊಳ್ಳುತ್ತಾ) ತಂದಿ ಮಗಳ್ನಾ ದೇವರು ಕೂಡಿಸಿದಾ. ನಮ್ಮವ್ವ ದಿನಾ ಅಪ್ಪಾ.... ಅಣ್ಣಾ.... ಅಂತಾ ಹಲಬುತಿದ್ಲು.

ಅಶ್ವತ್ಥ– ಮಗಳೇ, ನಾನು ಪಾಪಿಯಮ್ಮ. ನಿನ್ನ ಪವಿತ್ರ ಆತ್ಮವನ್ನರಿಯದೆ ಕುಹಕ ಮತಿಗಳ ಮಾತಿಗೆ ಮರುಳಾಗಿ ಮತಿಹೀನನಾಗಿ ನಿನ್ನನ್ನು ನಿರ್ದಯದಿಂದ ಕಟುನುಡಿಗಳನ್ನಾಡಿ ಹೊರದೂಡಿದೆ. ನನ್ನನ್ನು ಕ್ಷಮಿಸಮ್ಮ.

ಲೀಲಾ– ನಿಮ್ಮದೇನು ತಪ್ಪಾಗಿದೆಯೆಂದು ನನ್ನಲ್ಲಿ ಕ್ಷಮೆ ಕೇಳುವಿರಪ್ಪ. ಹೆಣ್ಣಾಗಿ

ಹುಟ್ಟಿದ್ದು ನನ್ನದೇ ತಪ್ಪು. ಪೂರ್ವಜನ್ಮದಲ್ಲಿ ಯಾವ ಪಾಪ ಮಾಡಿದ್ದೆನೊ ಅದರ ಫಲವನ್ನಿಂದು ಉಣ್ಣುತ್ತಿದ್ದೇನೆ.

ದುರಗ– ಅಪ್ಪಾರು ದೊಡ್ಡ ಮನೆತನದಾರ ಕಾಣತ್ತ. ಏನ ವಿಧಿ ಕಾಡಾಕಾಲನ ಏನ ದಿಕ್ಕಿಗೊಬ್ಬರಾಗಿ ಹೊಟ್ಟಿಗೆ ಕೂಳಿಲ್ದ ತಿರಗಾಕ ಹತ್ತ್ಯಾರ.

ಹನಮಿ– ಯಪ್ಪಾ, ನಿಮಗ ಇಂಥಾಸ್ಥಿತಿ ಯಾಕ ಬಂತರಿಯಪ್ಪಾ ?

ಅಶ್ವತ್ಥ– ಏನೆಂದು ಹೇಳಲಮ್ಮ, ಎಲ್ಲ ನಮ್ಮ ಕರ್ಮಫಲ. ಬಾಲ್ಯದಲ್ಲಿ ಮಗಳು ಪತಿಹೀನಳಾದಳು. ಮಗ ಪುರುಷತ್ವ ಹೀನನಾದ. ಸೊಸೆ.... ಹೇಳಲಾರೆನಮ್ಮ.... ನನ್ನ ಮನೆಯ ಮರ್ಯಾದೆಗೆ ಕುಂದು.

ದುರಗ– ಬಿಡ, ಸುಮ್ಮನೆ ಕೇಳಿ ಅಪ್ಪಾರ ಮನಸಿಗೆ ಮತ್ತೀಟು ನೋವು ಮಾಡಬೇಡ. ಒಳಗ ಕರಕೊಂಡು ನಡಿ ಊಟಾ ಮಾಡ್ಸು.

ಅಶ್ವತ್ಥ– ದುರಗಪ್ಪ ನೀವು ಪುಣ್ಯವಂತರು, ನಿರ್ಗತಿಕಳಾದ ಮಗಳನ್ನು ಕಾಪಾಡಿ ಮತ್ತೆ ನಾ ಅವಳ ಮುಖ ನೋಡುವಂತೆ ಮಾಡಿದಿರಿ. ನಿಮ್ಮ ಉಪಕಾರ ದೊಡ್ಡದಪ್ಪ.

ದುರಗ– ಇರ್ಲಿ ನಡ್ರಿಯಪ್ಪ ಇದರಾಗೇನ ದೊಡ್ಡ ಕೆಲಸ ಮಾಡಿವಿ ನಾವು. (ಎಲ್ಲರು ಒಳಗೆ ಹೋಗುವರು).

–ತೆರೆ–

===**=====**===

ಪ್ರವೇಶ – ೨೦

–ರಸ್ತಾ–

ರೇವತಿ– ದೌಡ ದೌಡ ಬರ್‍ರಿ, ಹಾಂಗ್ಯಾಕ ಕಾಲ ಎಳಕೊಂತ ಬರತೀರಿ.

ಕೇಶವ– ತಡಾಮಾಡು, ತಡಾಮಾಡಟು. ಅಂಗಡೀನೂ ಓಡಿ ಹೋಗುದಿಲ್ಲ ಸಾಮಾನೂ ಅಡಗಿ ಹೋಗೂದಿಲ್ಲ.

ರೇವತಿ– ನೋಡ್ರಿ ಮತ್ತೆ, ನಾ ಹೇಳಿದ್ದೆಲ್ಲ ನೆನಪೈತಿಲ್ಲ. ನೈಲಾನಸೀರಿ, ಟೆರಿಲಿನ್ ಬ್ಲೋಜು, ರವಿಕೆ, ಲಂಗ.

ಕೇಶವ– ಕಾಳಜೀ ಬಿಡುನೀ ಎಲ್ಲಾ ನ್ಯೂ ಫ್ಯಾಶನ್ ಕೊಡಿಸಿ, ತೊಡಿಸಿ ಸುದ್ದಾ ಸಿನೆಮಾ ನಟಿಯಾಂಗ ಮಾಡತೀನಿ.

ರೇವತಿ– ಹೌದ ಮತ್ತೆ, ನಮ್ಮವ್ವನಕಿನ ಭಗ್ ಅನಬೇಕು. ಮದುವಿ ನೋಡಾಕ ಬಂದಾರ ಕಣ್ಣು ಕುಕ್ಕಬೇಕು, ನನ್ನ ಸೀರಿ ಕುಬುಸ ವಸ್ತ್ರವಡವಿ ನೋಡಿ.

ಕೇಶವ– ಹ್ಯಾಂಗರ ವಕೀಲನ ರೊಕ್ಕಾ ಸಿಕ್ಕಾವ ನಡಿ, ಕೊಡಸಾಕ ನಂದೇನ ಗಂಟು ಹೋಗತೈತಿ. ತೊಡಾಕ ನಿಂದೇನ ನಿಮ್ಮವ್ವನ ಗಂಟು ಹೋಗತೈತಿ.

ರೇವತಿ– ಬರೇ ಸೀರಿ ಅಲ್ಲ, ಬಂಗಾರ ಸಾಮಾನ ಕೊಳ್ಳತುಂಬ, ಕೈತುಂಬ, ಕಿವಿತುಂಬ, ಕಾಲತುಂಬ ಬೇಕು.

ಕೇಶವ– ಬರೆ ಕೈಯಾಗ ಕಾಲಾಗ ಕೊಳ್ಳಾಗಾಟಾಯಾಕ, ಮೈತುಂಬ ಬಂಗಾರ ತಗಡು ಬಡಿಸಿ ಬಿಡತೀನಿ ನಡಿ.

ರೇವತಿ– ಮತ್ತ ನೀವೂ ಕೋಟು ಪ್ಯಾಂಟು, ಕೊಳ್ಳಾಗ ಕಟ್ಟಿರತಾರಲ್ಲ ಅದು, ತೆಲಿಗೆ ಹ್ಯಾಟು ಬೂಟು ತೊಗೊಳ್ರಿ.

ಕೇಶವ– ಹೆಣತೀನ ಸಿನಿಮಾ ನಟಿಯಾಂಗ ಮಾಡಿತೀನಂದಮ್ಯಾಲೆ ನಾನ ಎಂಥಾವರ ಬಟ್ಟಿತೊಟ್ರ ನೋಡಿದ ಮಂದಿ ಗಂಡಲಾಲೂ ಇದ್ದಾಂಗ

ಅದನವ್ವ ಅಂದಾರು. ನಾನೂ ಪಕ್ಕಾ ಉಲನ್ ಡ್ರೆಸ್ ಹೊಲಿಸಿ ಸಿನಿಮಾ ನಟ ಆಗತೀನಿ, ತಿಳಿತಾ ?

ರೇವತಿ– ಹೌದು, ನಾವಿಬ್ರೂ ಸುದ್ದಾ ಸಿನೆಮಾ ಜೋಡಿಯಂಗ ಕಾಣಬೇಕು ಹಂದರದಾಗ ಬಂದ ಕೂಡ್ಲೆ.

ಕೇಶವ– ಹಗ ಹಗ ಬಕ್ ಬಕ್, ಅಲ್ಲ ಅಲ್ಲ, ಭಗ್ಗ ಭಗ್ಗ ಲೈಟಿನ ಬೆಳಕಿನಾಗ ಚಕ್ ಚಕ್, ನೀ ಚಂದ್ರಿ ನಾ ಸೂರ್ಯ ಹೊಳದಾಂಗ ಆಗಿರಬೇಕಿಲ್ಲ?

ರೇವತಿ– ಇನ್ನೊಂದು ಮರೆತಿದ್ದೆ.

ಕೇಶವ– ಮತ್ತೇನು ? ಮಗ್ಗ ಟೆರಲಿನ್ ಅಂಗೇನ ?

ರೇವತಿ– ಹೋಗ್ರಿ ನೀವು, ಇನ್ನ ಮದುವೀನ ಆಗದ ಮಗ ಎಲ್ಲಿ ಬರತಾನ.

ಕೇಶವ– ಬೆಳಿಯಾಕ ಹತ್ಯಾನಲ್ಲ ಒಳಗ.

ರೇವತಿ– ಸಾಕ ಬಿಡ್ರಿ, ಕುಂತ ಮಂದಿ ಕೇಳಿದರ ಏನಂದಾರು, ಇನ್ನೂ ಮದುವಿ ಆಗದ...

ಕೇಶವ– ಅವರೇನಂತಾರ. ಈಗ ದುನಿಯಾನ ಹಂಗ ನಡದೈತಿ. ಹೊಟ್ಟಿ ಹೊತಗೊಂಡ ಸೆಸಿಕಟ್ಟಿಯೇರೂರು ಬಾಳೀಗ. ಲಗ್ನ ಆದ ಎರಡು ತಿಂಗಳದಾಗ ಒಂದ ಹೊರಗ ಹಾಕಿದ್ರs ಆಟಯಾಕ ಮದಿವ್ಯಾಗಾತ್ಲೆ ಒಂದ್ಯಾಡ ತಗದ, ಅರ್ಲ್ಯಾಗ ತುಳದ ಉದಾಹರಣೆನೂ ರಗಡ ಅದಾವ. ಈಗ್ಯಾರೇನ ಸುದ್ದದಾರ. ಪತಿವ್ರತೆ ಅನ್ನೂ ಶಬ್ದ ಕಲಿಯುಗದಾಗ ಕಾಲಕಿತ್ತಿ ಓಡಿ ಹೋಗ್ಯೆತಿ. ಇರ್ಲಿ ನಡಿ ನಮ್ಮದೇನ ಹಾಂಗಲ್ಲ, ಮೊದಲ ಲವ್ ಹಿಂದಾಗಡೆ ಮ್ಯಾವ್.

ರೇವತಿ– ಇರ್ಲಿ ನಡ್ರಿ ಸಾಕ, ಅವ್ವಾರು ಯಾವ ಅಂಗಡಿಗೆ ಹೋದ್ರ ಏನ.

ಕೇಶವ– ಅವರ ಕಾಳಜಿ ನಿನಗ್ಯಾಕ ನಡಿ. ಅವ್ರು ಆಗಲೇ ಸರ್ವೀಸ್ ಗಾಡಿ. ಎಲ್ಲೆರ ತರತಾರ ಬಣ್ಣದ ಮಾತಾಡಿ. ನಮ್ಮದs ನೋಡು ಇನ್ನಾ ಹೊಸಾ ಜೋಡಿ.

ರೇವತಿ– ಹೀಂಗಂತಿಯೇನು ನೀನು. ನಮ್ಮವ್ವ ಅಂದ್ರ ಏನಂತಾ ತಿಳದಿ.

ಕೇಶವ– ಹರೇದ ಹುಡಿಗ್ಯಾರಕಿನ್ನ ನೂರು ಪಟ್ಟು ಹಾರ್ಯಾಡತಾಳಲ್ಲ.

ರೇವತಿ– ಅಷ್ಟೆಯಾಕ, ಎಷ್ಟೊ ಮಂದಿನಾ.....

ಕೇಶವ–	ಮಣ್ಣು ಮುಕ್ಕಿಸ್ಯಾಳಲ್ಲ ತನ್ನ ಕೆಲಸ ತೀರಿಸಿಕೊಂಡು.
ರೇವತಿ–	ಸಾಕ ನಡ್ರಿ, ನೀವು ಬಡ್ಡಿಗೆ ಕೈ ಹಾಕಿದ್ರೆಲ್ಲ.
ಕೇಶವ–	ನೀ ತುದಿಗೆ ಜೀಕಾ ಬಿದ್ದಿ, ಅದಕ ನಾ ಬಡ್ಡಿ ಹಿಡಿಬೇಕಾತು.
ರೇವತಿ–	ಇರ್ಲಿ ನಡ್ರಿ, ಮದುವಿ ಮೋಸಮ್, ಅಂಗಡಿ ಬಾಳ ಗದ್ದಲ ಇದ್ದಾವು.
ಕೇಶವ–	ಎಲ್ಲಾ ದೈವ ಇತ್ಲಾಗ ಕೇಳ್ರಿ, ನಾಳೆ ಇವ್ನಕೂಡ ನಂದು, ಗಾಂದೇಣ್ಣಿ ಕೂಡ ಇವರ ಅವ್ವಂದು ಮದುವಿ ಐತಿ, ನೀವೆಲ್ಲ ಬರಬೇಕು. ಲಗ್ನ ಪತ್ರಾನೂ ಕಳಸತೀವಿ. ಒಂದವ್ಯಾಳೆ ಲಗ್ನಪತ್ರ ಕಡಿಮಿ ಬಿದ್ರ ನಿಮಗೆ ಕಳಸದಾಗಲಿಲ್ಲ ಅಂದ್ರ ಸಿಟ್ಟಾಗಬ್ಯಾಡ್ರಿ. ಈಗs ಹೇಳತೀನಿನೋಡ್ರಿ ನಾನ ಲಗ್ನ ಪತ್ರ ಅಂತಾ ತಿಳಿದು ಕಿಸೆದಾಗ ಇಟಗೊಂಡ ಬರ್ರಿ, ಊಟಾ ಪುಕ್ಕಟೆ, ಗೊತ್ತಿರಬೇಕಲ್ಲ. ನೀವೂ ಸಾಕಷ್ಟು ಮದುವಿ ಮಾಡಿ ಅನುಭವ ಪಡದಿರಬೇಕಾಗಲೇ. ಮರಿಬ್ಯಾಡ್ರಿ, ಬರತೀವಿ ಬಟ್ಟೀ ಖರೀದಿ ಮಾಡಬೇಕಾಗೈತಿ. (ಹೋಗುವರು).

–ತೆರೆ–

===****===****===

ಪ್ರವೇಶ – ೨೧

–ಜಂಗಲ್ ರಸ್ತಾ (ಗುಡಿಸಲು)–

(ಅಶ್ವತ್ಥ, ಲೀಲಾ, ದುರಗ, ಹನಮಿ ಹೊರಗೆ ಬರುವರು. ದುರಗ ಹೆಗಲಿಗೆ ಕಂಬಳಿ ಹಾಕಿದ್ದಾನೆ)

ದುರಗ– ಯಪ್ಪಾ, ನಮ್ಮಾಕಿ ತಮ್ಮನ ಮದುವಿ ಅದರಿ, ಇವತ್ತು ಲಗ್ನಪತ್ರ ಇಟ್ಟಾರ. ಇಬ್ರೂ ಹೋಗಿ ಬರತೀವಿ. ಬರುತನಾ ಎಲ್ಲೀ ಹೋಗಬ್ಯಾಡ್ರಿ, ಮನ್ಯಾಗ ಅಡಿಗ್ಗೆಲ್ಲ ಕಾಳು ಅದಾವ ಮಾಡಿಕೊಂಡ ಉಣ್ರಿ. ಅವ್ವಾ ರನ್ನ ಬಿಟ್ಟು ಎಲ್ಲೀಹೋಗಬ್ಯಾಡ್ರಿ.

ಹನಮಿ– ಹೌದ್ರಿಯವ್ವ ಅಡವಿ, ನೀವು ಒಬ್ರ ಹೊರಗ ಹೋಗಬ್ಯಾಡ್ರಿ. ಅಕ್ಕಿ ಕಾಳ ಹಾಕಿ ಒಂದು ತಾಸಿನ್ಯಾಗ ಬಂದಬಿಡತೀವಿ.

ಲೀಲಾ– ಆಗಲಮ್ಮ, ನಿಮ್ಮ ಹೇಳಿಕೆಯಂತೆ ನಡೆದುಕೊಳ್ಳುತ್ತೇವೆ.

ದುರಗ– ಬಾ....ಬಾ ದೌಡ. ಬರತೀವ್ರಿಯಪ್ಪ (ಹೋಗುವರು)

ಅಶ್ವತ್ಥ– ಆಗಲಿ ಹೋಗಿ ಬನ್ನಿ.

ಲೀಲಾ– ಅಪ್ಪಾ, ಎಂಥಾ ವಿಶಾಲ ಹೃದಯಿಗಳಪ್ಪ ಈ ಬಡ ದಂಪತಿಗಳು. ಓರ್ವ ಕಾಮುಕನ ಕೈಯಲ್ಲಿ ಸಿಕ್ಕು ಬಳಲುತಿದ್ದ ನನ್ನನ್ನು ಕಾಪಾಡಿ ಕರೆತಂದು ಮಗಳಂತೆ ನೋಡುತ್ತಿದ್ದಾರೆ.

ಅಶ್ವತ್ಥ– ಹೌದಮ್ಮ, ಹಣದ ಮದದಿಂದ ಸೊಕ್ಕಿ ಸಕ್ಕರಿ ತುಪ್ಪ ಸವಿಯುತ್ತ ಸುಖದ ಸುಪ್ಪತ್ತಿಗೆಯ ಮೇಲೆ ಮೆರೆಯುವ ಸಿರಿವಂತರಿಗೆಲ್ಲಿ ಬರಬೇಕಮ್ಮ ಇಂಥಾ ವಿಶಾಲ ಹೃದಯ, ಬಡವರ ಕಷ್ಟ ಸುಖ ಅದನ್ನನುಭವಿಸಿದ ಬಡವರಿಗೆ ಗೊತ್ತಲ್ಲದೆ ಸಿರಿವಂತರಿಗೆ ಗೊತ್ತಾಗದಮ್ಮ ನಿಜವಾಗಿಯೂ ಇವರು ನಮ್ಮ ಪಾಲಿನ ದೇವರು.

ಲೀಲಾ– ನಮಗಾಗಿ ದುಡಿಯುತ್ತಿರುವ ಈ ದಂಪತಿಗಳಿಗೆ ಹೇಗಪ್ಪ ಉಪಕಾರ ತೀರಿಸುವದು. ಎಂದಪ್ಪ ಇವರ ಋಣ ಮುಟ್ಟಿಸುವದು. ಇಂದು ಅವರು ದುಡಿದಿಟ್ಟ ಅನ್ನವನ್ನುಣ್ಣದೇ ಬರುವದರೊಳಗೆ ಏನಾದರೊಂದು ಕಾಯಕ ಮಾಡಿ ಅನ್ನ ದೊರಕಿಸಿಕೊಳ್ಳಬೇಕಪ್ಪ.

ಅಶ್ವತ್ಥ– ನಿಜ ಮಗಳೆ, ಆದರೆ ಯಾವ ಕೆಲಸ ಮಾಡಬೇಕೆಂಬುದೆ ಹೊಳೆಯದಾಗಿದೆ.

ಲೀಲಾ– ನಾನೊಂದು ಕೆಲಸ ಹೇಳುವೆ ಅದನ್ನು ಮಾಡುವಿ ಏನಪ್ಪ ?

ಅಶ್ವತ್ಥ– ಹೇಳಮ್ಮ ಈಗಲೇ ನಾನು ಸಿದ್ಧನಾಗಿರುವೆ.

ಲೀಲಾ– ಅಪ್ಪಾ, ನಾಳಿನ ಅನ್ನಕ್ಕೆಂದು ಅವರು ಎರಡು ಮೆಟ್ಟುಗಳನ್ನು ತಯಾರಿಸಿ ಇಟ್ಟಿದ್ದಾರೆ. ಅವುಗಳನ್ನು ಪೇಟೆಯಲ್ಲಿ ಮಾರಿ ಬನ್ನಿ. ನಾನು ನೀವು ಬರುವದರೊಳಗೆ ಮತ್ತೆರಡು ಮೆಟ್ಟುಗಳನ್ನು ತಯಾರಿಸುವೆ. ಅಂದರೆ ನಮ್ಮ ಇಂದಿನ ಅನ್ನ ದೊರಕುವದಲ್ಲದೆ, ನಾಳಿನ ಅವರ ಅನ್ನಕ್ಕೂ ತೊಂದರೆಯಾಗುವದಿಲ್ಲ.

ಅಶ್ವತ್ಥ– ಯೋಗ್ಯವಾದ ವಿಚಾರ ಮಗಳೇ, ಬೇಗ ತಾ ಈಗಲೇ ಹೋಗಿ ಮಾರಿ ಹಣ ತರುವೆ (ತಂದುಕೊಡುವಳು) ನಾ ಬರುವವರೆಗೂ ನೀನೆಲ್ಲಿಯೂ ಹೊರಗೆ ಹೋಗಬೇಡಮ್ಮ.

ಲೀಲಾ– ಆಗಲಪ್ಪ (ಅಶ್ವತ್ಥ ಹೋಗುವನು. ಲೀಲಾ ತೊಗಲು ತಂದು ಚಪ್ಪಲಿ ತಯಾರಿಸುತ್ತ ಕೂಡ್ರುವಳು)

ಉದಯ– (ಪ್ರವೇಶಿಸಿ) (ಸ್ವ) ಮನೆಯೊಡಯ ಒಡತಿಯರು ಮದುವೆಗೆಂದು ಅತ್ತ ಸಾಗಿದರು. ಇತ್ತ ಮುದಿಹದ್ದು ಮೆಟ್ಟುಮಾರಲೆಂದು ಪೇಟೆಯತ್ತ ಸಾಗಿದೆ. ಇನ್ನಾರು ನನ್ನ ಇಚ್ಛೆಗೆ ಆತಂಕ ತಂದೊಡ್ಡುವವರು ಈ ಅಡವಿಯಲ್ಲಿ. ಹ....ಹ.... ಅಣ್ಣನ ಮನೆಯಲ್ಲಿ ಅಮೃತ ಸವಿದು ಆನಂದದಿಂದ ಕಾಲಕಳೆಯುತ್ತಿದ್ದ ಲೀಲೆ ಇಂದು ಹೊಲೆಯನಾಳಾಗಿ ಮೆಟ್ಟು ತಯಾರಿಸಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾಳೆ. ಇಂಥ ಸ್ಥಿತಿಗೆ ಬಂದಿಳಿದ ಮೇಲೆ ನನ್ನ ಮಾತನ್ನು ತಿರಸ್ಕರಿಸಲಿಕ್ಕಿಲ್ಲ. ಮೊದಲು ಕೆಣಕಿ ಇಣಿಕಿ ನೋಡುವೆ. ನನ್ನೆಣಿಕೆಗೆ ಸಿಕ್ಕಿದಿದ್ದರೆ ಬಲತ್ಕಾರದಿಂದ ಬರಸೆಳೆದು ಮನದ ಬರ ಪರಿಹರಿಸಿಕೊಳ್ಳುವೆ (ಪ್ರ) ಚು....ಚು... ಇಂಥಾ ಸ್ಥಿತಿ ಬರಬಾರದಾಗಿತ್ತು ಸುಕುಮಾರಿಗೆ, ದೇವರಿಗೆ ಕಣ್ಣಿಲ್ಲ.

ಲೀಲಾ– (ನೋಡಿ) ಯಾರು ನೀವು ಇಲ್ಲೇಕೆ ಬಂದಿರಿ ?

ಉದಯ– ಬೆಚ್ಚಿ ಬೀಳದಿರು ಹುಚ್ಚು ಹೆಣ್ಣೆ. ನಿನ್ನ ಕಷ್ಟ ಪರಿಹರಿಸಿ ಒಳ್ಳೆಯ ಹಾದಿಗೆ ಹಚ್ಚ ಬಂದ ಉಚ್ಚ ಮನುಷ್ಯ ನಾನು.

ಲೀಲಾ– ನನಗಾವ ಕಷ್ಟವೂ ಇಲ್ಲ. ನನ್ನ ಹಾದಿಗೆ ಹಚ್ಚಲು ನೀವಾರು, ಮೊದಲು ಇಲ್ಲಿಂದ ತೊಲಗಿ.

ಉದಯ– ನಾನಾರೆಂಬುವ ಪರಿಚಯವಾಗಲೇ ಪರಾರಿಯಾಯಿತೇ. ನಾನೂ ನಿನ್ನವನೆ. ಇಲ್ಲಿಂದ ತೊಲಗಲು ಬಂದಿಲ್ಲ. ನಿನ್ನೊಡನೆ ತರುಲತೆಗಳ ಹಾಸಿಗೆಯ ಮೇಲೆ ಮಲಗಲು ಬಂದಿರುವೆ.

ಲೀಲಾ– ಮುಚ್ಚು ಬಾಯಿ ನಾಯಿ. ಮತ್ತೊಂದು ಮಾತು ಉಚ್ಚರಿಸಿದರೆ ಬಿಚ್ಚಿ ಬೀಳುವವು ಒಂದೊಂದು ಹಲ್ಲು.

ಉದಯ– ಹ....ಹ....ಎಷ್ಟು ಧೈರ್ಯ. ಹೂಂ.....ನಾನಾರೆಂಬುದು ತಿಳಿದರೆ ಹೀಗೆ ಮಾತನಾಡಲಾರೆ (ಚಾಳಿಸು ತೆಗೆದು) ನೋಡು ಈಗಲಾದರೂ ಗುರುತು ಹತ್ತಿತೆ ?

ಲೀಲಾ– (ಚಕಿತಳಾಗಿ) ಹಾಂ....ಡಾಕ್ಟರ್ ?

ಉದಯ– ಹೂಂ.... ನಾನೇ ಡಾಕ್ಟರ್. ಏಕೆ ಇಂಥ ಕಾರ್ಯಕ್ಕಿಳಿದೆನೆಂದು ಆಶ್ಚರ್ಯವೇ ? ಆಶ್ಚರ್ಯಪಡಬೇಕಾದ್ದೇನೂ ಇಲ್ಲ. ಲೀಲಾ ನಿನಗಾಗಿ ನಾನೆಷ್ಟು ತೊಂದರೆ ಪಟ್ಟೆನೆಂಬುದು ನಿನಗೇನು ಗೊತ್ತು. ಮಮತೆಯ ಮೂರ್ತಿಯಾದ ಜಯಾ ಮಾರಿಯಾಗಿ ನಿನ್ನ ಮೇಲೆ ಸೇಡಿನ ಕಿಡಿಯುಗುಳಿ ಕೊರಗಿಸಿ ಮನೆಯಿಂದ ಹೊರದೂಡುವದಕ್ಕೆ ಕಾರಣನಾದವನು ನಾನು, ಮಗುವಿನ ಹಾಲ ಬಟ್ಟಲಲ್ಲಿ ವಿಷ ಬೆರಸಿ ನಿನ್ನ ಮೇಲೆ ಅಪವಾದ ಹೊರಸಿದವ ನಾನು. ರೋಗಿಯಾಗಿ ನನ್ನ ಕೈಯಲ್ಲಿ ಸಿಕ್ಕ ನಿನ್ನಣ್ಣನನ್ನು ಪುರುಷತ್ವಹೀನನನ್ನಾಗಿ ಮಾಡಿ ಜಯಾ ನನ್ನನ್ನಾಕರ್ಷಿಸುವಂತೆ ಮಾಡಿದವ ನಾನು. ನಿನ್ನ ತಂದೆ ಜಯಾಳನ್ನು ಹಿಡಿದುಕೊಳ್ಳ ಹೋಗಿದ್ದನೆಂದು ಅಪವಾದ ಹೊರಿಸಿ ಮನೆಯಿಂದ ಹೊರದೂಡಿಸಿದವನು ನಾನು. ನಿನ್ನ ಮನೆಯ ಸರ್ವನಾಶಕ್ಕೆ ನಾನೇ ಕಾರಣ. ಆದರೆ ಹಾಗೆ ಮಾಡಿದುದೇಕೆ ಗೊತ್ತೆ ? ನಿನಗಾಗಿ. ನಿನ್ನನ್ನು ನನ್ನವಳನ್ನಾಗಿ ಮಾಡಿಕೊಳ್ಳಬೇಕೆಂಬ ಇಚ್ಛೆಯಿಂದ. ನಿನ್ನಣ್ಣ ನಿನ್ನನ್ನು ನನಗೆ ಮೊದಲು ಕೊಡುತ್ತೇನೆಂದು ಹೇಳಿ ದ್ರೋಹ ಬಗೆದುದರ ಪ್ರತೀಕಾರಕ್ಕಾಗಿ. ಇಂದು ನಿನ್ನೊಬ್ಬಳನ್ನು ನನ್ನ ವಶಪಡಿಸಿಕೊಂಡು ಸೇಡು ತೀರಿಸಿಕೊಳ್ಳಲೆಂದು ಬಂದಿರುವೆ.

ಲೀಲಾ– ಅಯ್ಯೋ ಸ್ವಾರ್ಥಿ ಗಂಡಸು ಕುಲವೇ. ನಿನ್ನಿಚ್ಛೆ ಈಡೇರಿಸಿ ಕೊಳ್ಳಲೆಂದೇ ನಮ್ಮ ಮನೆಯ ಕೀರ್ತಿಗೆ ಮಸಿ ಬಳೆದು ಅವಮಾನದ ಪತಾಕೆಯನ್ನೇರಿಸಿದೆಯಾ. ಅಯ್ಯೋ, ನನಗಾಗಿ ಮನೆಯ ಮರ್ಯಾದೆ ಮಣ್ಣು ಪಾಲಾಯಿತೇ. ಹೆಣ್ಣಾಗಿ ಹುಟ್ಟಿ ನಾನು ಮನೆ ಬೆಳಗದೆ ಜ್ಯೋತಿ ನಂದಿಸಿದೆನೆ.

ಉದಯ– ಹೂಂ, ಇನ್ನು ಅತ್ತರೆ ಕಳೆದು ಹೋದುದು ಬರಲಾರದು. ಹಿಂದಿನ ವಿಷಘಳಿಗೆ ಮರೆತು ಇನ್ನಾದರೂ ಮುಂದೆ ನನ್ನೊಡನೆ ರಾಣಿಯಾಗಿ ಮೆರೆ ಬಾ.

ಲೀಲಾ– ಥೂ ನಿನ್ನ ಮುಖಕ್ಕೆ ಬೆಂಕಿ ಹಚ್ಚಾ. ಇಷ್ಟೆಲ್ಲ ಮಾಡಿದುದು ಸಾಲದೆ ಮತ್ತೆ ನನ್ನ ಮಾನಹಾನಿ ಮಾಡಲು ಬಂದಿರುವೆಯಾ.

ಉದಯ– ನಾಯಿಯಂತೆ ಅರಚುವೆಯೇಕೆ, ಬಾ ಸುಮ್ಮನೆ ನನ್ನ ವಶವಾಗು.

ಲೀಲಾ– ನಾನು ನಿನ್ನ ವಶವಾಗಬೇಕೆ ಎಂದಿಗೂ ಸಾಧ್ಯವಿಲ್ಲ. ಪ್ರಾಣ ಹೋದರೂ ಚಿಂತೆಯಿಲ್ಲ. ನಿನ್ನಂಥ ಕಾಮುಕ ಪಶುವಿನ ಕೈಯಲ್ಲಿ ಸಿಕ್ಕು ಮಾನ ಕಳೆದುಕೊಳ್ಳಲಾರೆ.

ಉದಯ– ಸಾಕುಮಾಡು ನಿನ್ನ ಗೊಳ್ಳು ಬೆದರಿಕೆಯನ್ನು. ವೃಥಾಲಾಪ ಮಾಡದೇ ಕಾಲಹರಣ ಬಿಟ್ಟು ಅಪ್ಪಿ ತೃಪ್ತಿಗೊಳಿಸು ಬಾ–

ಲೀಲಾ– ತೃಪ್ತಿಗೊಳಿಸಲೇ, ಎಂಥ ಭಂಡ ಗಂಡಸರೋ ನೀವು. ಅಬಲೆ ಅಸಹಾಯಕಳ ಮೇಲೆಯೇನು ನಿಮ್ಮ ಕಾಮುಕದೃಷ್ಟಿ. ನೀವು ನಿಮ್ಮ ತಂದೆಗೆ ಹುಟ್ಟಿದವರಲ್ಲ, ನಿಮ್ಮ ತಾಯಿಯ ವ್ಯಭಿಚಾರಕ್ಕೆ ಹುಟ್ಟಿದವರು. ನಿಮಗೂ ಅಕ್ಕ ತಂಗಿ ಮಕ್ಕಳಿಲ್ಲವೆ. ಇಲ್ಲ, ನೀವು ಗಂಡಸರಲ್ಲ ಪಶುಗಳು. ಹೆತ್ತ ತಾಯಿಯನ್ನೇ ಕಾಮಿಸುವ ಮೂರ್ಖರು. ಅಕ್ಕ ತಂಗಿ ಹೆತ್ತ ಮಕ್ಕಳನ್ನೇ ಮೂಸಿ ನೋಡಿ ತೃಪ್ತಿಪಡುವ ಹೇಸಿ ನಾಯಿಗಳು. ನೀವು ಮಾನವರಲ್ಲ ದಾನವರು, ರಾಕ್ಷಸರು, ಹೆಣ್ಣಿನ ಬೆನ್ನಟ್ಟಿ ಬರುವ ಹೇಡಿ ನಾಯಿಗಳು.

ಉದಯ– ಹೂ.... ಹೆಚ್ಚಾಯಿತು ನಿನ್ನ ಉದ್ಧಟತನ. ಬಾಯಿಬಡಕ ಹೆಣ್ಣೆ, ಸುಮ್ಮನೆ ಬಾ ಕೆರಳಿಸಬೇಡ.

ಲೀಲಾ– ಮುಟ್ಟಲೆಂದು ಮುಂದಡಿಯಿಟ್ಟರೆ ಸುಟ್ಟು ಬೂದಿಯಾಗುವೆ ಪತಿವ್ರತೆಯ ಶಾಪದಿಂದ.

ಉದಯ– ಹ....ಹ....ನೀನು ಪತಿವ್ರತೆ, ಹೌದು ಕಲಿಯುಗದ ಪರಿವ್ರತೆ. ಹೀಗೆ ಪತಿವ್ರತೆಯೆಂದು ಹೇಳುತ್ತ ತೆರೆಯ ಮರೆಯಲ್ಲಿ ಎಷ್ಟು ವಿಟ ಪುರುಷರೊಡನೆ ಲಲ್ಲೆ ಹೊಡೆದಿರುವೆ.

ಲೀಲಾ– ಅಯ್ಯೋ.... ತಂದೆ ಬಸವೇಶ ಇದನ್ನೇನು ನುಡಿಸುತ್ತಿರುವೆಯಪ್ಪ.

ಉದಯ– ಹೂಂ ಸಾಕಿನ್ನು ಈ ನಟನೆ, ಬಾ. ಬರುವದಿಲ್ಲವೆ ? ತಾಳು ಹಾಗಾದರೆ (ಮುಟ್ಟ ಹೋಗುವನು)

ಲೀಲಾ– ಮುಟ್ಟದಿರು ಮೂರ್ಖಪಶುವೆ. (ಕೈಯಲ್ಲಿಯ ಮೆಟ್ಟಿನಿಂದ ಕಪಾಳಕ್ಕೆ ಹೊಡೆಯುವಳು).

ಉದಯ– ಹಾಂ, ಮೆಟ್ಟಿನಿಂದ ಹೊಡೆಯುವೆಯಾ ಮತಿಗೆಟ್ಟವಳೆ. ಇನ್ನುಳಿಯಲಾರೆ ನನ್ನ ಕೈಯಲ್ಲಿ (ಹಿಡಿಯ ಹೋಗುವನು)

ಲೀಲಾ– (ಹಿಂದೆ ಸರಿದು) ಅಯ್ಯೋ, ನನ್ನನ್ನು ಮುಟ್ಟದಿರಿ. ನನ್ನ ಪತಿಗೆ ದ್ರೋಹ ಬಗೆಯುವಂತೆ ಮಾಡದಿರಿ. ನಿಮ್ಮ ಕಾಲ್ಹಿಡಿದು ಬೇಡಿಕೊಳ್ಳುವೆ. ನಿಮ್ಮ ತಂಗಿಯೆಂದು ನನ್ನನ್ನು ಬಿಟ್ಟುಬಿಡಿ. ನನ್ನ ಮಾನಹಾನಿ ಮಾಡಿದರೆ ನಿಮ್ಮ ತಂಗಿಯ ಮಾನ ಹಾನಿ ಮಾಡಿದಂತೆ, ನನ್ನನ್ನು ಮುಟ್ಟಬೇಡಿ.

ಉದಯ– ಬೇಡೆನಗೆ ನಿನ್ನ ವೇದಾಂತ. ತಂಗಿಯಂತೆ....ಹ....ಹ....

ಲೀಲಾ– ಅಯ್ಯೋ ಬಿಡಿ...ಬಿಡಿ....ನನ್ನ. ಅಯ್ಯೋ ಅಣ್ಣಾ.... ಅಪ್ಪಾ... ಕಾಪಾಡಿ.

ಉದಯ– ಹ...ಹ....ಎಲ್ಲಿಯ ಅಣ್ಣ...ಎಲ್ಲಿಯ ಅಪ್ಪಾ....

ಲೀಲಾ– ಅಯ್ಯೋ ಕಾಪಾಡಿ....ಕಾಪಾಡಿ....ಅಪ್ಪಾ..... ಅಪ್ಪಾ....

ಅಶ್ವತ್ಥ– (ಪ್ರವೇಶಿಸಿ) ಅಯ್ಯೋ ಮಗಳೇ....ಲೀಲಾ....ಯಾರವರು? ಮೂರ್ಖ, ಮಗಳ ಮಾನ ಹಾನಿಗೊಳಿಸ ಬಂದಿರುವೆಯಾ. ನಿಲ್ಲು ನಿಲ್ಲು ಕಾಮುಕ ಪಶುವೆ ನನ್ನ ಕೈಯಲ್ಲುಳಿಯುವೆಯಾ (ಅಂಗಿ ಹಿಡಿದು ಜಗ್ಗಿ ನಿಲ್ಲಿಸುವನು).

ಉದಯ– ಹ...ಇಷ್ಟೊಂದು ಪೌರುಷವೇ ಮುದಿಹದ್ದೆ.

ಅಶ್ವತ್ಥ– ಯಾರು ? ಉದಯ ? ಥೂ ನಿನ್ನ ಮುಖಕ್ಕೆ ಮಣ್ಣು ಹಾಕಾ. ಮನೆಯ ಮರ್ಯಾದೆ ಹಾಳು ಮಾಡಿದ್ದಲ್ಲದೆ ಮಗಳ ಮಾನ ಹಾನಿಗೆ ಕೈ ಹಾಕಿದೆಯಾ ದ್ರೋಹಿ.... ನೀಚ.

ಉದಯ– ಏ ಮುದುವ, ಬಾಯಿಗೆ ಬಂದಂತೆ ಬೊಗಳದೆ ಸುಮ್ಮನೆ ನಿನ್ನ ಮಗಳನ್ನು ನನಗೊಪ್ಪಿಸಿ ಸಂಕಟದಿಂದ ಪಾರಾಗು.

ಅಶ್ವತ್ಥ– ನನ್ನ ಪ್ರಾಣ ಹೋದರೂ ಚಿಂತೆಯಿಲ್ಲ, ಮಗಳ ಮಾನ ಹಾನಿಯಾಗ ಗೊಡಲಾರೆ.

ಉದಯ– ಉಳಿ ಹಾಗಾದರೆ ನನ್ನ ಕೈಯಲ್ಲಿ (ಹೊಡೆಯುವನು)

ಅಶ್ವತ್ಥ– (ನೆಲಕ್ಕುರುಳಿ) ಅಯ್ಯೋ.....ಮಗಳೆ.

ಲೀಲಾ– ಅಯ್ಯೋ ಅಪ್ಪಾ....ಅಪ್ಪಾ....

ಉದಯ– (ಅಶ್ವತ್ಥನ ಎದೆಯ ಮೇಲೆ ಕುಳಿತು) ಹೂಂ ಏನೆನ್ನುವಿ, ನನ್ನವಳಾಗುವೆಯೋ ಅಥವಾ ನಿನ್ನ ತಂದೆಯ ಪ್ರಾಣ ತೆಗೆಯಲೆ.

ಅಶ್ವತ್ಥ– ನನ್ನ ಪ್ರಾಣ ಹೋದರೂ ಚಿಂತೆಯಿಲ್ಲ ನೀನು ಇವನ ವಶವಾಗಬೇಡ ಮಗಳೆ.

ಉದಯ– ಉಳಿ ಹಾಗಾದರೆ ನನ್ನ ಕೈಯಲ್ಲಿ (ಹೊಡೆಯುವನು).

ಲೀಲಾ– ಅಯ್ಯೋ ಅಪ್ಪಾ....ಅಪ್ಪಾ.....

ದುರುಗ– (ಒಳಗಿನಿಂದ) ಅಯ್ಯೋ ಏನಿದು ? ಯಾರವ ನನ್ನ ಮನಿ ಮ್ಯಾಗ ಮುತ್ತಿಗೆ ಹಾಕಿದವರ. ತಾಳು ಮಗನ ನನ್ನ ಕೈಯಲ್ಲಿ ಉಳಿಯುವೆಯಾ. (ಬರುವದರೊಳಗೆ ಉದಯ ಓಡಿ ಹೋಗುವನು) ಉಳಿದಿ ಹೋಗು ಮಗನ.

ಹನಮಿ– ಯವ್ವಾ ಅಪ್ಪಾರಿಗೇನಾತ್ರಿ....(ನೋಡಿ) ಅಪ್ಪಾರ ಎದಿಯಾಗ ರಕ್ತ ಬಂದೈತಲ್ರಿ ?

ಅಶ್ವತ್ಥ– ದುರಗಪ್ಪ....ಮುಗಿಯಿತಪ್ಪ ನನ್ನ ಈ ಭೂಮಿಯ ಋಣ. ನನ್ನ ಮಗಳನ್ನು ಕಾಪಾಡಿ. ಮಗಳೇ ಲೀಲಾ....ಲೀಲಾ..... (ಸಾಯುವನು)

ಲೀಲಾ– ಅಯ್ಯೋ, ಅಪ್ಪಾ.... ಅಪ್ಪಾ....

ಹನಮಿ– ದುರಗ -- ಅಯ್ಯೋ ಯಪ್ಪಾ.... ನಮ್ಮನ್ನ ಬಿಟ್ಟಹ್ವಾದ್ರ್ಯಾ ?

–ತೆರೆ–

===***===***===

ಪ್ರವೇಶ – ೨೨

–ಅರುಣನ ಮನೆ–

(ಅರುಣ ತಲೆ ಬಾಚುತ್ತ ನಿಂತಿರುವನು. ಭಾರತಿ ಕಾಫಿ ತಂದಿಟ್ಟು)

ಭಾರತಿ– ಅಲ್ರಿ....ಏನೂ ಅಂದ್ರೆ,

ಅರುಣ– ಏನಂದ್ರಿ,

ಭಾರತಿ– ಈಗೆಲ್ಲಿಗೆ ಪ್ರಯಾಣ ?

ಅರುಣ– ಮತ್ತೆಲ್ಲಿಗೆ, ಇದೆಯಲ್ಲ ನಮ್ಮ ಕಾಯಕ ರೋಗಿಗಳೊಡನೆ ರಗಳೆ ಮಾಡಲು.

ಭಾರತಿ– ಅದು ದಿನಾಲು ಇದ್ದದ್ದೇ. ಇಂದು ದವಾಖಾನೆಗೆ ಹೋಗಬೇಡಿ.

ಅರುಣ– ಮನೆಯಲ್ಲಿ ಕುಳಿತರೆ ಹೊಟ್ಟೆಗೆ.

ಭಾರತಿ– ನೋಡಿ, ನನಗೇಕೋ ಲೀಲಕ್ಕನನ್ನು ನೋಡಬೇಕೆನ್ನುವ ಆಸೆಯಾಗಿದೆ. ಒಂದು ಸಲ ಹೋಗಿ ಎಲ್ಲರನ್ನು ಕರಕೊಂಡು ಬರಬಾರದೆ. ಎಂಥ ಕಲ್ಲು ಹೃದಯದವರು ನೀವು. ತಂದೆ ಅಣ್ಣ ಅಕ್ಕ ಅತ್ತಿಗೆಯರ ಸ್ಮರಣೆ ನಿಮಗಾಗುವದಿಲ್ಲವೆ ?

ಅರುಣ– ಆಗದಿರುತ್ತದೆಯೇ ಭಾರತಿ. ನಿನಗಿಂತಲೂ ನಾಲ್ಕುಪಟ್ಟು ಆಸೆಯಾಗಿದೆ.

ಭಾರತಿ– ಹಾಗಾದರೆ ಇಂದೇ ಹೋಗಿ ಏಕೆ ಕರೆತರಬಾರದು.

ಅರುಣ– ಹಾಗೆ ಮಾಡಬೇಕೆಂದು ನನಗೂ ಅನಿಸಿದೆ.

ಭಾರತಿ– ಮತ್ತೇಕೆ ಮೀನ ಮೇಷ ಹೋಗಿ ಬನ್ನಿ. ಲೀಲಕ್ಕ ನಮ್ಮ ಕುಮಾರನನ್ನು ನೋಡಬಾರದೆ? ಮಾವನವನರು ಮಗುವನ್ನೆತ್ತಿ ಮುದ್ದಾಡಬಾರದೆ? ಜಯಕ್ಕನನ್ನು ನಾ ನೋಡಬಾರದೆ? ಅವಳ ಮಗನನ್ನು ಎತ್ತಿ ಮುದ್ದಾಡಬಾರದೆ?

ಅರುಣ– ಈಗಲೇ ಹೊರಡುವೆ. ಕೋಟು ಬ್ಯಾಗು ತಾ. (ತಂದು ಕೊಡುವಳು)

ಭಾರತಿ– ತೆಗೆದುಕೊಳ್ಳಿ, ತಡಮಾಡದೇ ಕರೆದುಕೊಂಡು ಬನ್ನಿ. ಹಾಗೇ ಬಂದರೆ ಮನೆಯಲ್ಲಿ ಪ್ರವೇಶವಿಲ್ಲ.

ಅರುಣ– ಓಹೋ.... ಹೀಗೋ.... ಆಗಲಿ ಅಪ್ಪಣೆ ಮೇಡಮ್.

ಭಾರತಿ– ಸಾಕು ನಡೆಯಿರಿ ಹುಡುಗಾಟಿಕೆ.

ಅರುಣ– ಮನೆಯಕಡೆ ಎಚ್ಚರ. ಯಾವುದಾದರೂ ಸೀರಿಯಸ್ ಕೇಸ್ ಬಂದರೆ ನೀನೆ ನೋಡು. ಎಲ್ಲಿ ಕುಮಾರ?

ಭಾರತಿ– (ಎತ್ತಿಕೊಂಡು ಬಂದು) ನಿಮ್ಮ ತಂದೆ ನಿನಗೆ ಅತ್ತಿ ಕರಕೊಂಡು ಬರಾಕ ಹೋಗತಾರ. ಟಾ....ಟಾ.... ಮಾಡು ಮರಿ.

ಅರುಣ– (ಮಗುವಿನ ಗಲ್ಲ ಹಿಡಿದು) ಜಾಣಮರಿ. ಬಾಯ್....ಬಾಯ್.... (ಭಾರತಿಯೂ ಕೈಮಾಡುವಳು. ಅರುಣ ಮರೆಯಾಗುತ್ತಲೆ ಅವಳು ಒಳಗೆ ಹೋಗುವಳು).

–ರಸ್ತಾ–

ಉದಯ– (ಪ್ರವೇಶಿಸಿ) ಕೊನೆಗೂ ಲೀಲೆ ನನಗೆ ದಕ್ಕಲಿಲ್ಲವಲ್ಲ. ಇಂದು ಸೋಲಪ್ಪಿದರೇನು ಇಂದಿನ ಸೋಲು ನಾಳಿನ ಗೆಲುವಿಗೆ ನಾಂದಿ. ಇನ್ನು ಎದೆಯ ಬಯಕೆ ಬಾಯ್ತೆರೆದು ಕುಳಿತಿರುವಾಗ ಅದಕ್ಕೆ ತೃಪ್ತಿ ನೀಡದಿದ್ದರೆ ದ್ರೋಹ ಬಗೆದಂತಲ್ಲವೆ. ಅವಳೆಲ್ಲಿಯೇ ಇರಲಿ ಸಮಯ ಸಾಧಿಸಿ ಹೊತ್ತು ತಂದು ಇಚ್ಛೆ ಈಡೇರಿಸಿಕೊಳ್ಳುವೆ. ಪ್ರಯತ್ನಕ್ಕೆ ಫಲ ಕೊನೆಗೊಂದು ದಿನ ದೊರೆಯಲೇಬೇಕಲ್ಲವೆ. ಇಂದಾದ ಹಾನಿಯನ್ನು ಹೇಗೆ ತುಂಬುವದು. ಇದೆ ಅದಕ್ಕೆ ಸಾಧನ. ಜಯಾನ ಕಾಣದೆ ನಾಲ್ಕು ದಿವಸವಾಯಿತು. ಅಲ್ಲಿಗೆ ಹೋಗಿ ಅವಳ ನಾದಲಹರಿಯಲ್ಲಿ ತೇಲಿ ಸರಸ ಸಲ್ಲಾಪದಲ್ಲಿ ಇದನ್ನೆಲ್ಲ ಮರೆಯುವೆ. ಉದಯನಿಗೆಲ್ಲಿ ಕತ್ತಲೆಯ ಭಯ (ಹೋಗುವನು).

–ತೆರೆ–

===***=====***====

ಪ್ರವೇಶ – ೨೩

–ರಾಜೂನ ಮನೆ–

ಜಯಾ– (ಅತ್ತಿತ್ತ ಅಡ್ಡಾಡುತ್ತ) ನಾಲ್ಕು ದಿವಸವಾಯಿತು ಉದಯ ಡಾಕ್ಟರರೇಕೆ ಬರಲಿಲ್ಲ. ಅವರಿಗೆ ನನ್ನ ಸಂಗ ಬೇಸರವಾಯಿತೆ. ಇಲ್ಲವೆ ಕೆಲಸದ ಮೇಲೆ ಎಲ್ಲಿಗಾದರೂ ಹೋಗಿರಬಹುದೆ. ಎಂದು ಅವರು ನನ್ನ ಮನ ಕದ್ದರೋ ಅಂದಿನಿಂದ ಅವರಿಲ್ಲದೆ ಒಂದು ನಿಮಿಷವೂ ಸಮಾಧಾನವಿಲ್ಲ. ಮನ ಮತ್ತೆ ಮತ್ತೆ ಅವರ ಬಂಧನಕ್ಕಾಗಿ ಹಾತೊರೆಯುತ್ತದೆ. ಅವರೊಡನೆ ಸರಸ ಸಲ್ಲಾಪ ಬಯಸುತ್ತದೆ. ಇಂದೂ ಬರಲಿಲ್ಲವಲ್ಲ. ಹೇಗೆ ದೂಡುವದು ಈ ಬೇಸರ ಜೀವನವನ್ನು; ಹೇಗೆ ಆರಿಸುವದು ಮನದ ಬೇಗೆಯನ್ನು ಅವರ ಮಿಲನವಿಲ್ಲದೆ.

ಉದಯ– (ಪ್ರವೇಶಿಸಿ) ಮಿಲನ ಈಗಲೇ ಸನ್ನಿಹಿತವಾಯಿತು ಲಲನೆ ಬೇಯದಿರು ವಿರಹ ಬೇಗೆಯಲಿ.

ಜಯಾ– ಓ.... ಬಂದಿರಾ? ನಿಮ್ಮ ದರ್ಶನವಿಲ್ಲದೆ ನನ್ನ ಕಣ್ಣುಗಳೇ ಕುರುಡಾಗಿದ್ದವು. ನಾಲ್ಕು ದಿವಸದಿಂದ ಏಕೆ ಬರಲಿಲ್ಲ.

ಉದಯ– ಕೇಸುಗಳ ಹೆಚ್ಚಳದಿಂದ ಇತ್ತ ಬರಲು ಅವಕಾಶ ದೊರೆಯಲಿಲ್ಲ. ಕ್ಷಮಿಸಬೇಕು ಬಾಯಿಸಾಹೇಬರು.

ಜಯಾ– ಹೋಗಿ ನೀವು. ದಾಸಿಯಲ್ಲಿ ಕ್ಷಮೆ ಕೇಳುವದೆ ?

ಉದಯ– ಹ....ಹ.... ಎಂಥ ನಾರಿಯೇ ನೀನು. ನಿನ್ನ ಗೆಳೆತನಭಾಗ್ಯ ದೊರಕಿದ ನಾನೇ ಧನ್ಯ.

ಜಯಾ– ಸಾಕುಬಿಡಿ ಹೊಗಳಿಕೆ ಫಲಹಾರ ತರಲೇ ? (ಒಳಗೆ ಹೋಗ ಹತ್ತುವಳು)

ಉದಯ– (ಜಡೆ ಹಿಡಿದೆಳೆದು) ತರುವೆಯಾ (ಒಳಗೆ ಹೋಗುವಳು) (ತಂದು ಕೊಟ್ಟು)

ಜಯಾ– ತೆಗೆದುಕೊಳ್ಳಿ. (ಒಬ್ಬರಿಗೊಬ್ಬರು ತಿನಿಸುತ್ತ ಹಾಡುತ್ತಿರುವಾಗಲೇ ಅರುಣ ಪ್ರವೇಶಿಸಿ, ಆ ದೃಶ್ಯವನ್ನು ಕಂಡು ಹಿಂದೆ ಸರಿದು).

ಅರುಣ– ಇದನ್ನೇನು ನೋಡುತ್ತಿರುವೆ ನಾನು. ಇದು ನಮ್ಮ ಮನೆಯೊ ಅಥವಾ ಯಾವುದಾದರೂ ವೇಶ್ಯೆಯ ಮನೆಗೆ ಬಂದೆನೊ. ಇಲ್ಲ, ಇದೇ ನಮ್ಮ ಮನೆ. ಅತ್ತಿಗೆ, ಉದಯನೊಡನೆ ಸರಸ ಸಲ್ಲಾಪ! ಅಪಮಾನ, ದ್ರೋಹ, ಅಯ್ಯೋ ಪತಿದ್ರೋಹಿ, ಮಿತ್ರದ್ರೋಹಿ, ಕಾಮಪಶುಗಳೇ ತಾಳಿ ಉಳಿಯುತ್ತೀರಾ ನನ್ನ ಕೈಯಲ್ಲಿ. (ಓಡಿಬಂದು ಡಾಕ್ಟರನನ್ನು ಹಿಡಿದು ಕಪಾಳಕ್ಕೆ ಹೊಡೆದು) ಆತ್ಮೀಯ ಮಿತ್ರನಂತೆ ನಟಿಸಿ ಅಣ್ಣನಿಗೆ ಇಂಥ ವ್ಯಭಿಚಾರಿಯನ್ನು ತಂದು ಮದುವೆ ಮಾಡಿ ಇವಳೊಡನೆ ಸರಸವಾಡುತ್ತಿರುವೆಯಾ ಅವಿವೇಕಿ. (ಮತ್ತೆ ಹೊಡೆಯುವನು) ಅತ್ತಿಗೆ ನೀನು ಹೆಣ್ಣೆ ? ಅಲ್ಲ ಮಾರಿ, ರಾಕ್ಷಸಿ, ಗಂಡನ ಕಣ್ಣಲ್ಲಿ ಮಣ್ಣುಗ್ಗಿ ವಿಟನೊಡನೆ ಆಟವಾಡುವ ವ್ಯಭಿಚಾರಿ. ನೋಡಲಾರೆ ನಿನ್ನ ಹೇಸಿ ಮುಖವನ್ನು ನಡೆಯತ್ತ ಹುಚ್ಚುನಾಯಿ. (ಹೊಡೆಯುವನು ಕೆಳಗೆ ಬೀಳುವಳು) ಹೂಂ ಅಣ್ಣನೆಲ್ಲಿ ? ತಂದೆ ಅಕ್ಕರೆಲ್ಲಿ ? ಬಾಯಿಬಿಚ್ಚು. ಅವರನ್ನೆಲ್ಲ ಅಟ್ಟಿ ಈ ಅತ್ಯಾಚಾರ ನಡೆಸಿರುವಿಯಾ ಕುಲಘಾತಕಿ (ಹೊಡೆಯುವನು) ಹೂಂ ಬೊಗಳು ಪಶುವೆ, ತಂದೆ, ಅಣ್ಣ ಅಕ್ಕರನ್ನು ಯಾವ ಕಷ್ಟಕ್ಕೀಡು ಮಾಡಿ ಈ ಕಾಮನಾಟ ನಡೆಸಿರುವೆ ಚಾಂಡಾಲಿ (ಹೊಡೆಯುವನು). ಹೇಳಿರಿ ಇಲ್ಲವಾದರೆ ಇಗೋ ಈರ್ವರ ಮರಣ ನನ್ನ ಕೈಯಲ್ಲಿ. ಇನ್ನುಳಿಯಗೊಡಲಾರೆ ಈ ಭೂಮಿಯ ಮೇಲೆ ನಿಮ್ಮಂಥ ವಿಷಜಂತುಗಳನ್ನು. (ಪಿಸ್ತೂಲ ಹಿಡಿಯುವನು).

ರಾಜು– (ಬಂದು ಅಡ್ಡನಿಂತು) ಅರುಣ..ತಮ್ಮ...ತಾಳು, ತಾಳು.

ಅರುಣ– ಇಂಥ ಹೇಸಿ ಕಾರ್ಯವನ್ನು ಕಣ್ಣಿನಿಂದ ನೋಡಿ ಈ ಕಾಮುಕ ಪಶುಗಳನ್ನು ಇನ್ನೂ ಉಳಿಸಬೇಕೆ?

ರಾಜು– ತಮ್ಮಾ..... ಅರುಣ...ನಾನು ನಿರ್ಭಾಗ್ಯ.

ಅರುಣ– ಅಣ್ಣಾ, ನೀನೇ ಇವರ ಈ ಆಟಕ್ಕೆ ಅವಕಾಶ ಕಲ್ಪಿಸಿಕೊಟ್ಟಿರುವೆಯಾ? ಅಣ್ಣಾ, ನೀನು ಮನುಷ್ಯನಲ್ಲ ಮನೆಯ ಹೆಂಡತಿಯನ್ನು

ಪರಪುರುಷನಿಗೆ ಕೊಟ್ಟು ಅವರ ಸರಸಾಟ ನೋಡುತ್ತ ಬಾಗಿಲ ಕಾಯುವ ನಪುಂಸಕ. (ಎದೆ ಹಿಡಿದು) ತಂದೆ ಅಕ್ಕರೆಲ್ಲಿ ಮೊದಲು ಹೇಳು ?

ರಾಜು– ನಾನೇನು ಹೇಳಲು ಅಸಮರ್ಥ ತಮ್ಮಾ; ನನ್ನ ಸ್ಥಿತಿ ನಿನಗೆ ತಿಳಿದರೆ ನೀನು ಹೀಗೆ ಮಾತನಾಡಲಾರಿ.

ಅರುಣ– ನಿನಗೇನಾಗಿದೆ ಧಾಡಿ, ಹೂಂ ಬೊಗಳು ಅಕ್ಕ ತಂದೆಯವರೆಲ್ಲಿ? ನಮ್ಮ ಮನೆತನ ಈ ಸ್ಥಿತಿಗೆ ಬರಲು ಕಾರಣವೇನು?

ರಾಜು– ಎಲ್ಲಾ ನನ್ನ ದುರ್ದೈವ ತಮ್ಮ ನನ್ನ ದುರ್ದೈವ. ನಾನಿಂದು ನಪುಂಸಕ ಅದಕ್ಕಾಗಿ ನಿನ್ನತ್ತಿಗೆ....

ಅರುಣ– ಇವನ ಸಂಗ ಬಯಸಿ ಮನೆಯ ಮರ್ಯಾದೆಗೆ ಮಸಿ ಬಳೆದಳೆ? ಹೂಂ ಮಿತ್ರ ದ್ರೋಹಿ ನಿನ್ನ ಉಪಕಾರ ಎಂದಿಗೂ ಮರೆಯಲಾರೆ. ಹೂಂ ಹೊರಬೀಳು ಅವಳನ್ನು ಕಟ್ಟಿಕೊಂಡು. ಮುಚ್ಚುಮರೆಯೇಕೆ ಇನ್ನು ಸ್ವೇಚ್ಛೆಯಿಂದ ಕಾಲಕಳೆಯಿರಿ. ನಡೆಯಿರಿ ಕಣ್ಣೆದುರಿಗೆ ನಿಲ್ಲಬೇಡಿ (ನೂಕುವನು)

ರಾಜು– ತಮ್ಮಾ...ಅರುಣ....ಅರುಣ....

ಅರುಣ– ಅಣ್ಣಾ.... ಅಣ್ಣಾ (ಅಪ್ಪಿಕೊಂಡು) ನೀನು ಈ ಸ್ಥಿತಿಗೆ ಬರಲು ಕಾರಣವೇನಣ್ಣ ?

ರಾಜು– ತಮ್ಮಾ ಏನೆಂದು ಹೇಳಲಿ. ಗಾಡಿ ಎಕ್ಸಿಡೆಂಟಿನಲ್ಲಿ ಗಾಯಗೊಂಡು ನಾನು ಉದಯನಿಂದ ಗುಣಮುಖನಾದೆ. ಆದರೆ ರೋಗ ಮುಕ್ತನಾಗುವದರೊಳಗೆ ನಾನು ಪುರುಷತ್ವಹೀನನಾದೆ.

ಅರುಣ– ಅರ್ಥವಾಯಿತಣ್ಣ ನನಗರ್ಥವಾಯಿತು. ಇದೆಲ್ಲ ಆ ಉದಯನ ಕಾರಸ್ಥಾನ. ಅತ್ತಿಗೆಯನ್ನು ತನ್ನವಳನ್ನಾಗಿ ಮಾಡಿಕೊಳ್ಳಲು ನಿನ್ನನ್ನು ಔಷಧಿಯಲ್ಲಿ ವ್ಯತ್ಯಯಗೊಳಿಸಿ ಈ ಸ್ಥಿತಿಗೆ ತಂದಿರುವನು. ಬನ್ನಿ ನಾನು ನಿಮ್ಮನ್ನು ಗುಣಮುಖರನ್ನಾಗಿ ಮಾಡುವೆ. ತಂದೆ ಅಕ್ಕರೆಲ್ಲಿ?

ರಾಜು– ಜಯಾ ಅಪರಾಧ ಹೊರಿಸಿ ಅವರೀರ್ವರನ್ನು ಹೊರದೂಡಿದಳಪ್ಪ; ನನಗೆ ಆಗ ಒಂದೂ ತಿಳಿಯಲಿಲ್ಲ. ನಾನು ಹುಚ್ಚ....ನಾನು ಪಾಪಿ.

ಅರುಣ– ಸಮಾಧಾನ ತಾಳಣ್ಣ. ಹೆಣ್ಣಿನ ಕೈಯಲ್ಲಿ ಸಿಕ್ಕು ನಮ್ಮ ಬಾಳು ಮಣ್ಣಾಯಿತು. ನಡೆಯಣ್ಣ ನಾನೆಲ್ಲ ಸರಿಗೊಳಿಸುವೆ. ಮೊದಲು ತಂದೆ ಅಕ್ಕರನ್ನು ಹುಡುಕೋಣ (ಹೋಗುವರು)

–ತೆರೆ–

===***=====***===

ಪ್ರವೇಶ – ೨೪

– ರಸ್ತಾ –

(ನರಸಿಂಹ, ರಮಾ, ಕೇಶವ, ರೇವತಿ ಸತಿ ಪತಿಗಳಾಗಿ ಕೈಹಿಡಿದುಕೊಂಡು ಪ್ರವೇಶಿಸುವರು. ವಧುಗಳು ಮುಖಕಾಣದಂತೆ ಮುಸುಕು ಹಾಕಿಕೊಂಡಿದ್ದಾರೆ. ಅದಲಿ ಬದಲಿ ಗಂಡರನ್ನು ಹಿಡಿದುಕೊಂಡಿದ್ದಾರೆ.)

ನರಸಿಂಹ– ಹಾಕ್ರೆಪ ಹಾಕ್ರಿ, ಎಲ್ಲಾರೂ ಅಕ್ಕಿ ಕಾಳ ಹಾಕ್ರಿ. ಕೆಲವ್ರು ಮದುವಿಗೆ ಬಂದಿರಲಿಕ್ಕಿಲ್ಲ ಅಂತ ಹೇಳಿ ನಾವ ಹಾದಿಗೆ ಬಂದ ಬಿಟ್ಟಿವಿ. ಹಾಕ್ರಿ ಹಾಕ್ರಿ, ಅದರ ಕೂಡ ಆಯಿರಾನೂ ಹಾಕ್ರಿ, ಇಲ್ಲೆ ತೊಗೊಂತೀವಿ. ನಿಮ್ಮ ಹತ್ರ ಇದ್ದಷ್ಟು ಹಾಕ್ರಿ, ನಾವ ಅದನ ದೊಡ್ಡದ ಮಾಡಿಕೊಂತಿವಿ.

ಕೇಶವ– ಬರೆ ರೂಪಾಯಿ ಆಟ ಅಲ್ಲ. ಹಾರಾ, ತುರಾಯಿ, ಸೀರಿ–ಕುಬಸ ಮಾಡಾರಿದ್ರೂ ಮಾಡ್ರಿ, ನೋಡ್ರಿ ಜೋಡಿ ಲಗ್ನ ಅಪಸರದಾಗಾತು. ಆದಕ ಗದ್ದಲದಾಗ ಊಟ ಒಬ್ರಿಗೆ ಸಿಕ್ರ ಒಬ್ಬರಿಗೆ ಸಿಕ್ಕಿರಲಿಕ್ಕಿಲ್ಲ, ಸಿಟ್ಟಾಗ ಬ್ಯಾಡ್ರಿ. ಯಾರ್ಯಾರ ಉಂಡಿಲ್ಲ ಒಂದು ಲಿಷ್ಟಮಾಡಿ ಕೊಟ್ಟ ಬಿಡ್ರಿ, ನಾಳೆ ಮನಿಗೆ ಊಟಾ ಕಳಸ್ತೀವಿ. ಈಗಂತೂ ಹಾಕ್ರಿ.

ನರಸಿಂಹ– ಅಲ್ರಿ ಕುಂತಾರ ನೀವs ಹ.್ರಿ, ಎಲ್ಲೆರ ನೋಡಿರೇನ ನೀವು ಇಂಥಾ ಮಜಾ ಮದುವೀನ.

ಕೇಶವ– ಮಜಾ, ಯಾಕಂದ್ರಿ, ತಾಯಿ ಮಗಳ ಮದುವಿ ಒಮ್ಮೆಲೆ ಆಯಿತಲ್ಲ. ಆದರ ಲೋಕದಾಗ ಅಣ್ಣ ತಮ್ಮ, ಅಕ್ಕ ತಂಗಿ ಮದುವಿ ಕೂಡಿ ಆಗೂದು ನೋಡಿರಿ. ಇಂಥಾದ್ದ ನೋಡಿಲ್ಲ ಯಾಕ್ರಿ ?

ನರಸಿಂಹ– ಎಲ್ಲಿ ನೋಡಬೇಕು. ನಮ್ಮದ ಮೊದಲನೇ ಹೆಜ್ಜಿ. ಇನ್ನೋಡ ಅಮ್ಮ ಮೊಮ್ಮಗಳು, ಅಜ್ಜ ಮೊಮ್ಮಗ, ಮಗಳು ಮರಿಮೊಮ್ಮಗಳ ಮದುವಿನೂ ಒಮ್ಮೆಲೆ ಆಕ್ಕಾವ.

ಕೇಶವ– ಹಿಂಗಾದ್ರ ಬಾಳ ಸುಧಾರಿಸುತ್ತ ನಮ್ಮ ದೇಶ

ನರಸಿಂಹ– ಹೋಗಲಿ ಬಿಡು ದೇಶದ ಸುದ್ದಿ. ಎಲ್ಲಾರು ಮುಗಸಿದರಿಲ್ಲಪ ಅಕ್ಕಿ ಕಾಳು ಆಯಿರ ಹಾಕಾದು.

ಕೇಶವ– ಮುಗದ್ರ ಮತ್ತೇನ ಇನ್ನ ಉಳಿದಿರೋದು ಶ್ಯಾವಿಗಿ ಉಣ್ಣಾದೊಂದ.

ನರಸಿಂಹ– ಅಲ್ಲೊ ಇಟಾತನ ಬಾಯಿತಕ್ಕೊಂಡು ಕುಂತಾರವ್ವ ಗಂಡನ ಹೆಸರು ಹೇಣ್ತಿ ಹೆಸರು ಕೇಳಬೇಕಂತ. ಹಂಗ ಹೋದ್ರ ಹ್ಯಾಂಗ ಹೇಳು. ಮೊದಲ ನೀನ ಹೇಳ ಕೇಶ್ಯಾ.

ಕೇಶವ– ಒಲ್ಲೋಗು ನಾಚಿಗೆ ಬರುತ್ತ.

ನರಸಿಂಹ– ಇರ್ಲಿ ಹೇಳ್ಳೇ ಕಾಯಿಪಲ್ಲೆ. ಏನ ಒಮ್ಮೆಲೆ ಹೇಣ್ತಿ ಹೆಸರ ಹೇಳಿದಾಂಗ ಮಾಡತಿದೆಲ್ಲ.

ಕೇಶವ– ಮತ್ತ್ಯಾರ ಹೆಸರ ಹೇಳಲೋ ಗಾಂದೇಣ್ಣಿ.

ನರಸಿಂಹ– ಈಕಿದ ಹೇಳು ನಿನ್ನ ರಾಣಿದು. ದೌಡ ಹೇಳು ಬಾಸಿಂಗ ಒಲವ ಆಗ್ಯೈತಿ. ಇನ್ನ ಅವ್ವ ಮಳವುದ್ದ ಒಗಟ ಇಟ್ಟ ಹೇಳೂದ್ರಾಗ ಆರು ತಾಸು ಆಗುತ್ತ.

ಕೇಶವ– ಹೇಳ್ಯಾ ಹಂಗಾರ, ದಾಗಡಿ ಬಳ್ಳಿಲೆ ಬಡಿದರ ದಡ ದಡ ಓಡಿ ಬಂದು ಲಟ ಲಟ ಮುದ್ದು ಕೊಡತಾಳ ರೇವು. ಹೂಂ ನೀ ಹೇಳು.

ನರಸಿಂಹ– ಬೆಂಡಿಕಾಯಿಲೆ ಒಗೆದರ ಬೆಂಡಿನಾಂಗ ಹಾರಿ ಬರತಾಳ ಹಂಡೆ ದಂತ ಕುಂಡಿ ರಮಾ.

ಕೇಶವ– ನೀವು ಹೇಳಿಬಿಡ್ರಿ ಲಟ್ನ, ಶ್ಯಾವಿಗಿ ಕರಿತಾವ (ನಾಚಿ ನಿಲ್ಲುವಳು)

ನರಸಿಂಹ– ದಿವಸ ಸೆರಗು ಹೆಗಲಿಗೆ ಹಾಕ್ಕೊಂಡು ಊರಾಗ ತಿರಗತಿದ್ರು, ಇವತ್ನೋಡ್ರಪ ಎಷ್ಟು ನಾಚಿಗಿ ಬಂದ್ಯೆತಿ ಈ ನಾರೇರಿಗೆ. ಮಳ ಉದ್ದ ಮುಸುಗು ಹಾಕ್ಕೊಂಡ ನಿಂತಾರ. ತಗಿ ತಗಿರಿ ನೆದರಾಗುದಿಲ್ಲ. ಕುಂತ ಮಂದೀಟ ನೋಡ್ಲಿ ನಿಮ್ಮ ಅರಿಷಣ ಮುಖಾನ. ಮುಸುಗು ಬಾಳ ಡೇಂಜರ್. ನಿಮಗ ಗೊತ್ತಿಲ್ಲ, ಹೀಂಗ ಮೂರು ನಾಕು ಮದುವಿ ಆಗಿದ್ವು. ಎಲ್ಲಾರು ಒಂದ ನಮೊನಿ ಸೀರಿ ಉಟಗೊಂಡು ಮುಸುಕು ಹಾಕ್ಕೊಂಡು ಕುಂತಿದ್ರಂತ. ಗಂಡರಿಗೆ ತಮ್ಮ ಹೆಂಡ್ರು ಯಾರಂತ ಗೊತ್ತಾಗಲಾರದ ಬ್ಯಾರೆದಾರನ ಕರಕೊಂಡು ಹೋಗಿ

ಫಜೀತಿ ಆಗಿದ್ರಂತ. ಮತ್ತ ನಮ್ಮದೂ ಹಾಂಗs ಆದೀತು, ತಗೀರಿ ತಗೀರಿ. (ಸೆರಗು ಹಿಡಿದೆಳೆಯವರು) ಅಲೆ ನಾ ಅಂದಂಗ ಆಗಿ ಬಿಟ್ಟೈತಲ್ಲ. ಇಕಿ ನಿನ್ನ ಹೆಣ್ತೆಲೆ ಕೇಶಾ.

ಕೇಶವ– ಅಯ್ಯೋ, ಈ ಮುದೇದ ನಾ ಹಿಡಕೊಂಡೀನ ?

ನರಸಿಂಹ– ಲೇ ಇದs ಅಂದಿ, ಇನ್ನೊಮ್ಮೆ ಅಂದೀ ಅಂದ್ರ ನಿನ ನಿನಗ, ನೋಡು ನನ್ನ ನನ್ನ ಹೇಣ್ತಿ ಆಕಿ.

ಕೇಶವ– ಅನ್ನುದಿಲ್ಲ ತಪ್ಪಾಯ್ತು ಹೆಸರ ಹೇಳಸಪ ಸಾಕು ಹೋಗೂನ. ಹೇಳತ್ತಿ.

ರಮಾ– ಗಮಗಮ ಗಾಂದೆಣ್ಣಿ ನಾರಿಸಿಗೊಂತ ಬಂದು ನನ್ನ ಹಾರಿಸಿಗೊಂಡು ಹೊಂಟಾನ ನರಸಿಂಹ.

ನರಸಿಂಹ– ಅಲೇ ಇವಳ, ರೀಕಾರ ಹಾಕs ಇವತ್ತರ ಈಟ. ನರಸಿಂಹ ಅಲ್ಲ, ನರಸಿಂಹರಾಜನೇ ನನರಾಣಿ.

ಕೇಶವ– ಹೂಂ ನೀನೊಂದು ನುಡಿ ಹಾರಿಸಿ ಬಿಡು (ರೇವತಿಗೆ).

ರೇವತಿ– ಕಾಸಿಗೆ ಕಾಸು ಕೂಡಿಸಿ, ರಾಶಿ ಹಣದಮ್ಯಾಗ ನನ್ನ ಮಲಗಿಸಿ, ತಾಸಿಗೊಂದ ಸೀರಿ ಉಡಿಸಿ ರಾಣಿಯಾಂಗ ಇಡತಾರ ನನ್ನ ಕೇಶವರು.

ಕೇಶವ– ಹೂಂ. ಎಲ್ಲಾರು ಕೇಳಿದ್ರಿಲ್ರೆಪ. ನೀವು ಮದುವ್ಯಾದಾರು ಹೇಳಾರಿದ್ರ ಹೇಳ ಬರ್ರಿ ಇಲ್ಲೆ ಸ್ಟೇಜಿನಮ್ಯಾಲೆ ನಾಚಬ್ಯಾಡ್ರಿ.

ನರಸಿಂಹ– ಮದುವ್ಯಾಗಲಾರದಾರಿದ್ರ ದೌಡ ಆಗ್ರಿ. ಎಷ್ಟು ದಿವಸಂತ ಕುಂದರ ತೀರಿ ಹೇಣ್ತಿಲ್ದ ಬರೆ ಮಂದಿ ಹೇಣ್ತಿ ನೋಡ್ಕೊಂತ.

ಕೇಶವ– ಕನ್ಯಾ ಬೇಕಾದ್ರ ಹೇಳ್ರಿ, ತುಸು ಹೆಚ್ಚು ಕಡಿಮಿ ವಯಸ್ಸು ನೋಡಿ ನಾವೆಲ್ಲ ಕೂಡಸ್ತೀವಿ.

ನರಸಿಂಹ– ಸಾಕ ನಡ್ರಿ ನಡ್ರಿ.... ಗಟ್ಟ್ಯಾಗ ಹಿಡಕೊಳ್ಳೊ ನಿನ್ನ ಹೇಣ್ತಿ, ಮತ್ತ ಬದ್ಲಿ ಆದಾಳು.

ಕೇಶವ– ಅಲೇ ಮತ್ತ ನನ್ನ ಹೇಣ್ತಿನ ಹಿಡಕೊಂಡೆಲ್ಲೊ (ಕೈಬಿಡಿಸಿ ಕಸಿದುಕೊಂಡು) ತಗದೊಗಿಯ ಮುಸುಗು ಸಾಕಿನ್ನ. ಹಿಂದಾಗಡೆ

ಕೆಲಸ ಕೆಟ್ಟ ಹೋದೀತು. ಬರತೀವ್ರಿ ಎಪ್ಪಾ ಎಲ್ಲಾರಿಗೂ ನಮಸ್ಕಾರ. (ಹೋಗುವರು).

ನರಸಿಂಹ– ಹನಿಮೂನಿಗೆ ಹೊಕ್ಕೀವ್ರಿ ದೌಡ ಬರಾದು ಆಗುದಿಲ್ಲ. ಮತ್ತೆ ಮುಂದಿನ ನಾಟಕಕ್ಕ ಕೂಸು ಎತಿಗೊಂಡ ಬರತೀವಿ. ಆಶೀರ್ವಾದ ಮಾಡ್ರಿ ದೌಡ ಮಕ್ಕಳಾಗ್ಲಿ ಅಂತ. ನಮಸ್ಕಾರ್ರಿ, (ಹೋಗುವರು).

–ತೆರೆ–

===***====***====

ಪ್ರವೇಶ – ೨೫

-ಬಾಳೂನ ಮನೆ-

(ಬಾಳು ಪೇಪರ ಓದುತ್ತ ಕುಳಿತಿದ್ದಾನೆ)

ಜಯಾ– (ಪ್ರವೇಶಿಸಿ) ಅಣ್ಣಾ.... ಅಣ್ಣಾ......

ಬಾಳು– ಯಾರು ಜಯಾ? ಯಾರು ಕರೆಸಿದ್ದರೆಂದು ಇಲ್ಲಿಗೆ ಬಂದೆ.

ಜಯಾ– ನನ್ನ ಮನೆಗೆ ನಾನು ಬರಬಾರದೇನಣ್ಣ.

ಬಾಳು– ಕರೆಯದೆ ಬರುವದು ಮೂರ್ಖತನ.

ಜಯಾ– ನನ್ನನ್ನು ಕಾಪಾಡಣ್ಣ.

ಬಾಳು– ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ. ಹೆಣ್ಣು ಒಳ್ಳೆಯವಳಾಗಿ ಕೊಟ್ಟ ಮನೆಗೂ ಹುಟ್ಟಿದ ಮನೆಗೂ ಕೀರ್ತಿ ತರುವವಳಾದರೆ ಅವಳಿಗೆ ಎಲ್ಲೆಡೆಯೂ ಸ್ಥಾನವುಂಟು, ಸ್ವಾಗತವುಂಟು. ಕೀರ್ತಿಗೆ ಮಸಿ ಬಳೆಯುವ ಮಾರಿಯಾದರೆ ಅವಳಿಗೆ ಸ್ಮಶಾನದಲ್ಲಿಯೂ ಸಹಿತ ಸ್ಥಾನ ದೊರಕದು.

ಜಯಾ– ನಾನೇನು ಅಪರಾಧ ಮಾಡಿಲ್ಲವಣ್ಣ.

ಬಾಳು– ಮುಚ್ಚು ಬಾಯಿ ಮಾನಗೆಟ್ಟವಳೆ ನಾನರಿತಿರುವೆ ನಿನ್ನೆಲ್ಲ ವ್ಯಭಿಚಾರವನ್ನು. ಪತಿಗೆ ದ್ರೋಹ ಬಗೆದು ಪರಪುರುಷನೊಡನೆ ಸರಸವಾಡಿ ಮನೆಯ ಮರ್ಯಾದೆ ಮಣ್ಣುಪಾಲು ಮಾಡಿದ್ದು ಅಪರಾಧವಲ್ಲವೆ ? ಪತಿಯಿಂದ ಹೊರಗಾದರೆ ಹೆತ್ತ ಮನೆಯಲ್ಲಿ ಸ್ವಾಗತವಿದೆಯೆಂದು ತಿಳಿದಿರುವೆಯಾ ರಾಕ್ಷಸಿ. ನಡೆ ಮೊದಲು ನನ್ನ ಕಣ್ಣೆದುರಿಗೆ ನಿಲ್ಲಬೇಡ.

ಜಯಾ– ಅಣ್ಣಾ....ಅಣ್ಣಾ.....ನೀವೂ ನನ್ನನ್ನು ಕಾಪಾಡಲಾರಿರಾ.

ಬಾಳು– ಒಳ್ಳೆಯವಳಾಗಿ ಬಂದಿದ್ದರೆ ಕಾಪಾಡುತ್ತಿದ್ದೆ. ಮತಿಹೀನಳಾದ ನಿನ್ನಂಥ ಪತಿದ್ರೋಹಿಗೆ ಯಾವಸ್ಥಾನ ಗೊತ್ತೆ.

ಜಯಾ– ಅಣ್ಣಾ....ಅಣ್ಣಾ....ನಾನು ಅಪರಾಧಿ ನಿಜ. ಆದರೆ ನಾನಾಗಿಯೇ ಮಾಡಲಿಲ್ಲಣ್ಣ.

ಬಾಳು– ಎಲ್ಲವನ್ನೂ ಅರಿತಿರುವೆ. ಪ್ರತ್ಯಕ್ಷಪಡಿಸಿ ಮತ್ತೆ ಉರಿಯುವ ಕೆಂಡದಲ್ಲಿ ಎಣ್ಣೆ ಹೊಯ್ದು ಸುಟ್ಟು ನಾಶವಾಗಬೇಡ. ಹೂಂ.... ಹೊರಬೀಳು.

ಜಯಾ– ಅಣ್ಣಾ ಪತಿಯ ಮನೆಯಲ್ಲಿ ನನಗೆ ಸ್ಥಾನವಿಲ್ಲ. ನೀನೂ ಹೀಗೆ ಮಾಡಿದರೆ ನಾನೆಲ್ಲಿ ಬಾಳಲೆಣ್ಣ.

ಬಾಳು– ಇನ್ನೂ ಈ ಹೇಸಿ ಮುಖಹೊತ್ತು ಬಾಳಿ ಬದುಕಬೇಕೆಂದಿರುವೆಯಾ ಜಾರಿಣಿ. ಪತಿಗೆ ಬೇಡಾದ ಹೆಣ್ಣು ಪರಮಾತ್ಮನಿಗೂ ಬೇಡವಾಗುತ್ತಾಳೆ.

ಜಯಾ– ಅಣ್ಣಾ.....ನಾನು.... ನಾನೀಗ ಗರ್ಭಿಣಿಯಣ್ಣ. ನನ್ನನ್ನು ಕಾಪಾಡಣ್ಣ.

ಬಾಳು– ನೀನು ಗರ್ಭಿಣಿ. ಪಾಪಪಿಂಡ ಹೊತ್ತ ಪಾಪಿ ಬಾಯಿಂದ ಹೇಳಲು ನಾಚಿಕೆಯಾಗುವದಿಲ್ಲವೆ. ನಡೆಯಾಚೆ ಪಿಶಾಚಿ. ಬೀದಿಯ ಭಿಕಾರಿಯಾಗಿ ಹೋಗು. ನಿನ್ನ ಬಾಳು ಹಾಳು ಮಾಡಿದ ಆ ನೀಚನ ಹಿಂದೆ ಹೋಗಿ ಸೂಳೆಯಾಗಿ ಸಂಸಾರ ನಡೆಸು. ಇಲ್ಲದಿರಲು ಹೋಗಿ ಸೇರು ವೇಶ್ಯಾಗೃಹವನ್ನು. ಅದೊಂದೆ ನಿನಗುಳಿದಿರುವ ಮಾರ್ಗ. ಮತ್ತೆಲ್ಲಿಯೂ ಸ್ಥಾನ ದೊರಕದು.

ಜಯಾ– ಅಯ್ಯೋ ನಾನು ವೇಶ್ಯೆಯಾಗಬೇಕೆ, ನಾನು ವೇಶ್ಯೆ.

ಬಾಳು– ಇನ್ನೂ ಉಳಿದಿದೆಯೇ ನಿನ್ನ ಪಾತಿವೃತ್ಯ. ಇಷ್ಟು ದಿವಸ ತೆರೆಯ ಮರೆಯಲ್ಲಿ ವೇಶ್ಯೆಯಾಗಿ ನಡೆಸಿದೆ ವ್ಯಭಿಚಾರ. ಇನ್ನು ಸ್ವತಂತ್ರವಾಗಿ ಎಲ್ಲರ ಕಣ್ಣಿಗೆ ಕಾಣುವಂತೆ ಬಾಹ್ಯದಲ್ಲಿಯೇ ನಡೆಸು ನಿನ್ನ ಕಾಮನಾಟ. ಥೂ.... ಹೇಸಿ ಹೆಣ್ಣೇ ನೀಹುಟ್ಟಿ ನನ್ನ ವಂಶಕ್ಕೆ ಕೆಟ್ಟ ಹೆಸರು ಕೊಟ್ಟೆ.

ಜಯಾ– ಅಣ್ಣಾ.... ನಿನ್ನ ಕಾಲ್ಹಿಡಿದು ಬೇಡಿಕೊಳ್ಳುವೆ; ನನ್ನನ್ನು ಕಾಪಾಡಣ್ಣ. (ಕಾಲಿಗೆ ಬೀಳುವಳು)

ಬಾಳು– (ಒದೆದು) ಮುಟ್ಟದಿರು ಮಲಿನ ಮನದವಳೆ ನನ್ನ ಪಾದಗಳನ್ನು. ಇನ್ನೊಮ್ಮೆ ಅಣ್ಣನೆಂದು ನುಡಿದರೆ ನಾನೇ ನಿನ್ನ ಕೊಲೆಗೈದು ಪೀಡೆ ಕಡಿದುಕೊಳ್ಳುವೆ. ನಿನ್ನಂಥ ವಿಷ ಜಂತುವನ್ನು ಉಳಿಯಗೊಟ್ಟರೇನು ಫಲ. (ಪಿಸ್ತೂಲ ಹಿಡಿದು ನಿಲ್ಲುವನು)

ಜಯಾ– ಹೋಗುತ್ತೇನಣ್ಣ ಹೋಗುತ್ತೇನೆ. ಈ ಜಗದಿಂದಲೇ ಕಣ್ಮರೆಯಾಗಿ ಹೋಗುತ್ತೇನೆ. ನಾನು ಪಾಪಿ. ಲೀಲಕ್ಕನ ಕಾಡಿದೆ. ಮಾವನವರಿಗೆ ಅಪರಾಧ ಹೊರಿಸಿದೆ. ಪತಿಗೆ ದ್ರೋಹ ಬಗೆದೆ. ದೇಹವನ್ನು ಪರಪುರುಷನಿಗೆ ನೀಡಿ ವ್ಯಭಿಚಾರ ಮಾಡಿದೆ. ಅಯ್ಯೋ..... ಡಾಕ್ಟರ, ಉಪದೇಶದ ಮಾತನಾಡಿ ಮರುಳುಗೊಳಿಸಿ ನನ್ನ ಬಾಳು ಮಣ್ಣುಗೂಡಿಸಿದೆಯಾ ಪಾಪಿ. ಅಯ್ಯೋ ನಾನಾಗ ಏನೂ ಅರಿಯದಾದೆನಲ್ಲ. ಮಾಯ ಮನಸ್ಸೆ ನಿನ್ನಾಶೆ ತೀರಿಸಿ ನನ್ನನ್ನು ನರಕಯಾತನೆಗೆ ನೂಕಿದೆಯಾ. ಬರುವೆನಣ್ಣ (ಟೇಬಲ್ ಮೇಲಿನ ಪಿಸ್ತೂಲ ತೆಗೆದುಕೊಂಡು) ನನ್ನ ಬಾಳು ಹಾಳುಮಾಡಿದ ಆ ನೀಚನನ್ನು ಕೊಂದು ಇಂದೇ ನಾನೂ ಸಾಯುವೆ. ಸಾಯುವೆ. (ಹೋಗುವಳು)

ಬಾಳು– ಹೋಗು.... ಹೊಡೆದುಕೊಂಡು ಸಾಯಿ. ನೀ ಸತ್ತರೇನೆ ಒಳಿತು; ಇದ್ದರೆ ನಮ್ಮ ವಂಶಕ್ಕೆ ಕೆಟ್ಟ ಹೆಸರು. ಹೋಗು....ಹೋಗು... (ಹೋಗುವನು).

–ತೆರೆ–

===***====***===

ಪ್ರವೇಶ – ೨೬

–ಜಂಗಲ್ ರಸ್ತಾ–

(ಜಯಾ ಕೂದಲು ಕೆದರಿಕೊಂಡು ರಾಕ್ಷಸಿಯಂತಾಗಿ ಹುಚ್ಚು ನಗು ನಗುತ್ತಾ ಕೈಯಲ್ಲಿ ಪಿಸ್ತೂಲ ಹಿಡಿದುಕೊಂಡು ಪ್ರವೇಶಿಸಿ)

ಜಯಾ– ಹ....ಹ....ನಾನಿಂದು ವ್ಯಭಿಚಾರಿ, ಸೂಳೆ....ಸೂಳೆ.... ನನ್ನದೇಹ ಎಲ್ಲರಿಗೂ ಮಾರುವೆ ಬನ್ನಿ...ಬನ್ನಿ. ಡಾಕ್ಟರ್ ಎಲ್ಲಿರುವೆ. ಬಾ ತೃಪ್ತಿ ಪಡು. ಈಗ ಬೇಡವಾಯಿತೇನು ನನ್ನ ಸಂಗ. ಇಲ್ಲ, ನಿನ್ನ ಬಿಡಲಾರೆ. ಬಾ ನನ್ನಪ್ಪಿಕೋ, ನಾ ನಿನ್ನ ಸೂಳೆ....ಸೂಳೆ.... ಮುಚ್ಚು ಮರೆಯೇಕೆ ಎಲ್ಲರನ್ನು ಬಿಟ್ಟು ಬಂದಿರುವೆ ಬಾ. ಅಯ್ಯೋ, ನಾನು ಪತಿ ದ್ರೋಹಿ, ಸ್ತ್ರೀ ಸಮಾಜಕ್ಕೆ ಕಲಂಕ ಹಚ್ಚಿದ ನಾಯಿ. ಹೆಣ್ಣೆಂಬ ಹೆಸರಿಗೆ ಹತ್ತಿದ ಹುಣ್ಣು. ಅಕ್ಕಾ ಲೀಲಕ್ಕ ನನ್ನನ್ನು ಕ್ಷಮಿಸು ತಾಯಿ. ಹ....ಹ.... ನಾನೇನು ನುಡಿಯುತ್ತಿರುವೆ. ಅಂಥ ಪತಿವೃತೆಯ ಹೆಸರು ನನ್ನಂಥ ವ್ಯಭಿಚಾರಿ ಸೂಳೆಯ ಬಾಯಲ್ಲಿ ಬೇಡ. ನಾನು ಆ ತಾಯಿಯ ಹೆಸರನ್ನು ಉಚ್ಚರಿಸಲೂ ಅಯೋಗ್ಯಳು. ಸ್ವಾಮಿ.... ಮಾಮಾ.... ನಿಮಗೆ ದ್ರೋಹ ಬಗೆದೆ ನನ್ನನ್ನು ಕ್ಷಮಿಸಿ. ಬೇಡ, ಕ್ಷಮಿಸಬೇಡಿರಿ. ನನ್ನಂಥ ಮಾರಿಗೆ ಎಲ್ಲಿಯೂ ಕ್ಷಮೆ ಇಲ್ಲ. ನಾನು ಸೂಳೆ.... ಸೂಳೆ.... ಡಾಕ್ಟರ್ ನನ್ನ ಬಾಳು ಹಾಳು ಮಾಡಿ ಎಲ್ಲಿ ಕುಳಿತಿರುವೆ. ಬಾ ದುರಾತ್ಮ, ನೀಚ, ಕಟುಕ, ಬಾ ಎದುರಿಗೆ. ಈಗಲೇ ನಿನ್ನ ನುಂಗಿ ನೀರುಕುಡಿಯುವೆ. ನಿನ್ನ ಕೊಂದು ಸೇಡು ತೀರಿಸಿಕೊಂಡು ನಾನೂ ಸಾಯುವೆ. ಬಾ ಎಲ್ಲಿರುವೆ. ನಾನು ನಿನ್ನ ಸೂಳೆ...ಸೂಳೆ.... (ವಿಕಾರವಾಗಿ ನಗುವಳು)

ಉದಯ– (ಪ್ರವೇಶಿಸಿ) ಹೀಗೇಕೆ ಮಾಡುತ್ತಿರುವೆ ಜಯಾ ?

ಜಯಾ– ಬಾ, ಬಂದೆಯಾ.... ಜಯಾ ನಾನಲ್ಲ, ಇಂದು ನಿನಗೆ ಅಪಜಯ, ಅಪಜಯ.

ಉದಯ– ಹೀಗೇಕೆ ಹುಚ್ಚಳಂತೆ ಮಾತಾಡುತ್ತಿರುವೆ ಜಯಾ ?

ಜಯಾ– ಹ....ಹ.... ನಾನು ಹುಚ್ಚಿ.... ಹೌದು ಬಿಡಿಸುತ್ತೀಯೆನು ?

ಉದಯ– ಏಕೆ ಹಾದಿಯಲ್ಲಿ ಈ ರೀತಿ ಅಡ್ಡಾಡುವೆ ? ಸುಮ್ಮನೆ ಮನಗೆ ನಡೆ ಜಯಾ.

ಜಯಾ– ಹ....ಹ....ಹ... ಮನೆ. ಹೌದು, ಮನೆ ಕೈಮಾಡಿ ಕರೆಯುತ್ತಿದೆ. ಬನ್ನಿ ಹೋಗೋಣ, ಈರ್ವರೂ ಅಲ್ಲಿಯೇ ಸುಖವಾಗಿ ಕೊನೆಯವರೆಗೂ ಇರೋಣ, ಕೂಡಿಯೇ ಇರೋಣ. ನಡೆಯಿರಿ, ಎಂದೂ ಮುಪ್ಪಾಗದ ಮನೆಗೆ ಹೋಗೋಣ, ನಾನೇ ಕರೆದುಕೊಂಡು ಹೋಗುತ್ತೇನೆ. ನಡೆ...ನಡೆ, ನೀಚಾತ್ಮ. (ಪಿಸ್ತೂಲ ಹಾರಿಸುವಳು. ಉದಯ ಎದೆ ಹಿಡಿದುಕೊಂಡು)

ಉದಯ– (ನರಳುತ್ತ) ಅಯ್ಯೋ ಜಯಾ... ಜಯಾ.... ನನ್ನನ್ನು ಕ್ಷಮಿಸು ಜಯಾ. ನಿನ್ನ ಸುಂದರ ಸಂಸಾರಕ್ಕೆ ಮಸಿ ಬಳಿದೆ. ನಿನ್ನ ಮಗುವನ್ನು ವಿಷವಿಟ್ಟು ಕೊಂದೆ, ಪತಿಯ ಪುರುಷತ್ವ ಕಳೆದೆ. ಲೀಲಾನ ಕಾಮಿಸಹೋದೆ. ನನ್ನ ಸೇಡು ನನ್ನನ್ನೇ ಸುಟ್ಟಿತು ಜಯಾ ನನ್ನನ್ನೇ ಸುಟ್ಟಿತು. ನಾನು ಮಿತ್ರದ್ರೋಹಿ; ನಂಬಿದವರ ಕುತ್ತಿಗೆ ಕೊಯ್ಯುವ ಕುಲಘಾತಕ. ಕಟುಕ, ನೀಚ, ಪಾಪಿ. ನನ್ನ ಕ್ಷಮಿಸು ಜಯಾ. ಒಳ್ಳೆಯದನ್ನೆ ಮಾಡಿದೆ. ನಾನೂ ದೂರಾಗಬೇಕೆಂದಿದ್ದೆ ಈ ಜಗದಿಂದ. ನೀನೇ ಆ ಕಾರ್ಯ ಮಾಡಿ ತುಂಬಾ ಉಪಕಾರ ಮಾಡಿದೆ ಜಯಾ ಉಪಕಾರ ಮಾಡಿದೆ (ಕೆಳಗೆ ಬೀಳುವನು).

ಜಯಾ– ಅವಮಾನ ಹೊತ್ತು ನಾನೂ ಬಾಳುವೆನೆಂದು ತಿಳಿದಿರುವೆಯಾ. ಇಲ್ಲ, ನೀ ಕೊಟ್ಟ ಪಾಪಪಿಂಡ ಸಮೇತಳಾಗಿ ನಾನೂ ಕಣ್ಮರೆಯಾಗುವೆ. ಪತಿಗೆ ದ್ರೋಹ ಬಗೆದ ಮಾರಿ ನಾನು ಬದುಕಲೇ....? ಇಲ್ಲ ಬದುಕಲಾರೆ ಬದುಕಲಾರೆ, (ಪಿಸ್ತೂಲ ಹೊಡೆದುಕೊಳ್ಳುವಳು) ಹಾ...ಅಯ್ಯೋ... ಸ್ವಾಮಿ.... (ನೆಲಕ್ಕೆ ಬೀಳುವಳು).

–ತೆರೆ–

====***=====***====

ಪ್ರವೇಶ–೪೬

–ಅರುಣನ ಮನೆ–

(ರಾಜು ಕುರ್ಚಿಯ ಮೇಲೆ ಕುಳಿತಿರುವನು. ಅರುಣ ಪ್ರವೇಶಿಸುವನು)

ರಾಜು– ತಮ್ಮಾ ನಿನ್ನ ಸತತ ಪರಿಶ್ರಮದಿಂದ ನಾನು ರೋಗಮುಕ್ತನಾಗಿ ಮನುಷ್ಯನಾದೆ.

ಅರುಣ– ಅಣ್ಣಾ ಇಂದಿನ ವೈಜ್ಞಾನಿಕ ಯುಗದಲ್ಲಿ ಕಂಡುಹಿಡಿಯದ ವಸ್ತುವೇ ಇಲ್ಲ. ಎಂಥ ರೋಗವನ್ನಾದರೂ ಗುಣಪಡಿಸುವಂಥ ಶಕ್ತಿಯುತ ಔಷಧಿಗಳು ಇಂದು ಸಾಕಷ್ಟು ಸಿದ್ಧವಾಗಿ.

ಭಾರತಿ– (ಪ್ರವೇಶಿಸಿ) ಮಾವನವರು ರೋಗದಿಂದ ಮುಕ್ತರಾದರು. ಇನ್ನಾದರೂ ಅಕ್ಕ ಲೀಲ ಮತ್ತು ಮಾವನವರನ್ನು ಹುಡುಕಿ ತರಬಾರದೆ. ಎಷ್ಟು ಕಷ್ಟದಲ್ಲಿ ಸಿಲುಕಿರುವರೊ ಏನೋ.

ರಾಜು– ಹೌದು ಅರುಣ, ನಡೆ ಅಲ್ಲಲ್ಲಿ ಪೋಲಿಸ್ ಸ್ಟೇಶನ್ನಿಗೆ ದೂರು ಕೊಡೋಣ; ಪೇಪರಿನಲ್ಲಿ ಹಾಕಿಸಿ ಶೋಧ ನಡೆಸೋಣ.

ದುರಗ– (ಓಡಿ ಬಂದು) ಅಯ್ಯೋ ಯಪ್ಪ ಹ್ಯಾಗಾದ್ರೂ ಮಾಡಿ ನಮ್ಮವ್ವನ ಪ್ರಾಣ ಉಳಸ್ರಿ....ನಮ್ಮವ್ವನ ಪ್ರಾಣಾ ಉಳಸ್ರಿ.

ಅರುಣ– ಏನಪ್ಪ....ಏನಾಯಿತು ? ಏಕೆ ಗಾಬರಿಗೊಂಡಿರುವೆ?

ದುರಗ– ಜೀವ ಕಾಟರಸಿ ನಾವು ಮನ್ಯಾಗ ಇರಲಾರದಾಗ ವಿಷಕುಡದ ಬಿಟ್ಟಾರ್ರಿ. ಮೈಯೆಲ್ಲಾ ಹಸರಾಗೈತಿ. ಇನ್ನೂ ಜೀವ ಐತಿ, ಹ್ಯಾಂಗರ ಮಾಡಿ ಉಳಸ್ರಿ.

ರಾಜು– ಬೇಗ ಕರೆದುತನ್ನಿ ನೋಡೋಣ. (ಈರ್ವರೂ ಲೀಲಾಳನ್ನು ಹೊತ್ತುಕೊಂಡು ಬಂದು ಮಂಚದ ಮೇಲೆ ಹಾಕುವರು. ಹನಮಿ ಅಳುತ್ತಾ)

ಹನಮಿ– ಯಪ್ಪಾ, ನಿಮ್ಮ ಕಾಲ ಹಿಡಕೊಂತಿನ್ರಿ, ನನ್ನ ಮಗಳ ಉಳಸ್ರಿ.

ಅರುಣ– ನೀವು ಸುಮ್ಮನಿರಿ ನಾನೆಲ್ಲ ನೋಡುತ್ತೇನೆ. (ಮುಸುಕು ತೆಗೆದು ನೋಡಿ) ಹಾಂ....ಅಕ್ಕಾ.... ಲೀಲಕ್ಕ.

ರಾಜು– ಲೀಲಾ... ತಂಗೀ...ತಂಗೀ. ನೀನು ಈ ಸ್ಥಿತಿಗೆ ಬಂದೆಯೇನಮ್ಮ.

ಭಾರತಿ– ಅಕ್ಕಾ...ಅಕ್ಕಾ....ನಿನ್ನ ತಂಗೀ ನೋಡಕ್ಕ.

ದುರಗ– ಅಯ್ಯೋ ನೀವನ್ರಿ, ಅವ್ವನ ಅಣ್ಣಾ ತಮ್ಮಾರು. ನಿಮಗೇನು ಬುದ್ಧಿ ಕೆಟ್ಟಿತ್ರಿ ಅವ್ವನ ಹೊರಗ ಹಾಕಾಕ.

ರಾಜು– ತಂಗೀ...ತಂಗೀ....ನನ್ನ ಕೂಡಾ ಮಾತಾಡೊದಿಲ್ಲೇನಮ್ಮ? ನನ್ನ ಕ್ಷಮಿಸುದಿಲ್ಲೇನಮ್ಮ?

ಅರುಣ– (ಇಂಜಕ್ಷನ್ ಕೊಟ್ಟು) ಅಕ್ಕಾ....ಕಣ್ಣು ತೆರೆ ಅಕ್ಕ.

ಭಾರತಿ– ಅಕ್ಕಾ ನಿನ್ನಳಿಯನ್ನ ನೋಡಕ್ಕ. ಕಣ್ಣು ತೆರೆದು ಒಮ್ಮೆ ನೋಡಕ್ಕ.

ಲೀಲಾ– (ಕಣ್ಣು ತೆರೆದು) ಹಾಂ... ನೀವಾರು ಅಣ್ಣಾ....ಅಣ್ಣಾ ?

ರಾಜು– ತಂಗೀ...ತಂಗೀ ನನ್ನ ಕ್ಷಮಿಸಮ್ಮ ; ನಿನ್ನ ನಿರ್ಗತಿಕಳನ್ನಾಗಿ ಮಾಡಿ ಕಷ್ಟಕೊಟ್ಟೆ. ತಂದೆಯವರೆಲ್ಲಿರುವರಮ್ಮ ?

ದುರಗ– ಎಲ್ಲಿ ತಂದಿರೀಯಪ್ಪ ಅವ್ವನ ಮಾನಾ ಕಾಪಾಡುದ್ರೊಳಗ ಕಾಮುಕನ ಕೈಯಾಗ ಸಿಕ್ಕು ಸತ್ತ ಹೋದರು.

ರಾಜು– ಅಯ್ಯೋ ಅಪ್ಪಾ.... ಅಪ್ಪಾ.....

ದುರಗ– ಅತಗೊಂತ ಕುಂತ್ರ ಬರೋದಿಲ್ರಿ ಅಪ್ಪಾರು. ಮೊದ್ಲ ಅವ್ವಾರನ್ನ ಗುಣಾಮಾಡ್ರಿ.

ಲೀಲಾ– ಅಣ್ಣಾ.....ಅಣ್ಣಾ...ಅತ್ತಿಗೆಯೆಲ್ಲಿ ?

ರಾಜು– ನುಡಿಯದಿರಮ್ಮ ಆ ಅಪವಿತ್ರ ಪಶುವಿನ ಹೆಸರೆತ್ತಿ.

ಬಾಳು– (ಪ್ರವೇಶಿಸಿ) ಇನ್ನೆಲ್ಲಿ ಅತ್ತಿಗೆಯಮ್ಮ ಆ ಕಾಮುಕ ಪಶುಗಳೆರಡೂ ಇಂದು ಈ ಜಗದಿಂದಲೇ ದೂರವಾದವು. ನನ್ನ ಕ್ಷಮಿಸು ತಾಯಿ, ನಿನಗೆ ಅಪಮಾನ ಮಾಡಿದೆ.

ಲೀಲಾ– ಅಯ್ಯೋ ನಾನು ಹೆಣ್ಣಾಗಿ ಹುಟ್ಟಿ ಎಲ್ಲರ ಮೃತ್ಯುವಿಗೆ ಕಾರಣಳಾದೆ. ಮನೆಯನ್ನು ಮಣ್ಣುಗೂಡಿಸಿದೆ. ನಾನು ಹೆಣ್ಣಲ್ಲ ಮನೆಯನ್ನೇ

ಸರ್ವನಾಶ ಮಾಡಿದ ರಾಕ್ಷಸಿ. ಅಣ್ಣಾ ನಾನು....ನಾನು.... ನಿಮಗೆ ತಂಗಿಯಾಗಿ ಬರಲಿಲ್ಲ. ಮನೆನುಂಗುವ ಪಿಶಾಚಿಯಾಗಿ ಬಂದೆ ನನ್ನ ಕ್ಷಮಿಸಣ್ಣ. ಇವರು ನನ್ನ ತಂದೆ ತಾಯಿಗಳು ಇವರನ್ನು ಕಾಪಾಡಿರಣ್ಣ. ಇದೊಂದೆ ನನ್ನ ಕೊನೆ ಆಶೆ. ನಾನಿನ್ನು ಬರುವೆನಣ್ಣ... ಬರತೀನಿ ತಂಗಿ ನೀ ಭಾಗ್ಯವಂತೆಯಮ್ಮ. ಅಣ್ಣಾ....ಅಣ್ಣಾ... ಅಪ್ಪಾ.... ಸ್ವಾಮಿ.... ಬಂದೇ ಸ್ವಾಮಿ... (ಸಾಯುವಳು)

ರಾಜು– ತಂಗೀ....ತಂಗೀ...ಕೊನೆಗೂ ನಮ್ಮನ್ನಗಲಿದೆಯಾ ತಾಯಿ.

ಅರುಣ– ಅಕ್ಕಾ....ಅಕ್ಕಾ....

ಭಾರತಿ– ಅಕ್ಕಾ....ಅಕ್ಕಾ....

ದುರಗ– ನಮ್ಮನ್ನ ಬಿಟ್ಟ ಹ್ವಾದ್ಯಾಯವ್ವ (ಎಲ್ಲರೂ ಅಳುವರು).

–ತೆರೆ–

===***===***===

ಉಪಸಂಹಾರ

(ಲೀಲಾ, ಅಶ್ವತ್ಥರ ಫೋಟೋ ಇಟ್ಟು ಮೂವರು ಕೈಮುಗಿದು ನಿಂತು)

ರಾಜು– ತಂಗೀ ಜೀವನದಲ್ಲಿ ಯಾವ ಸುಖಸಂಪತ್ತನ್ನು ಪಡೆಯದೆ ನಮ್ಮ ಏಳ್ಗೆಗಾಗಿ ಹಗಲಿರುಳೆನ್ನದೆ ಜೀವಸವೆಸಿ ನಮ್ಮ ಮನೆತನಕ್ಕೆ ಆದರ್ಶಪ್ರಾಯವಾಗಿದ್ದೆ. ಪತಿ ಹೀನಳಾದರೂ ಮತಿಹೀನಳಾಗದೆ ಜೀವನಾಂತ್ಯದವರೆಗೂ ವಿರಕ್ತ ಜೀವನ ಸಾಗಿಸಿ ಪತಿವೃತಾ ಶಿರೋಮಣಿಗಳ ಸಾಲಿನಲ್ಲಿ ನೀನೊಂದು ಶಿರೋರತ್ನವಾಗಿ ವಿರಾಜಿಸತೊಡಗಿದೆ. ನಿನ್ನ ವರದ ಹಸ್ತ ಭಾರತೀಯ ಸ್ತ್ರೀಯರ ಉತ್ತಮಾಂಗದ ಮೇಲೆ ಸದಾ ಕಂಗೊಳಿಸುತ್ತಿರಲಿ.

ಅರುಣ– ಹುಟ್ಟುವಾಗಲೇ ಕಷ್ಟದ ಬುತ್ತಿಯನ್ನು ಕಟ್ಟಿಕೊಂಡು ಬಂದು ಕೊನೆಯವರೆಗೂ ಅದನುಂಡು ಭಾರತೀಯ ನಾರಿಮಣಿಯರಿಗೆ ದಾರಿದೀಪವಾದೆ. ನಿನ್ನ ಮಾರ್ಗವಿಡಿದು ಸ್ತ್ರೀ ಸಮಾಜವೆಲ್ಲ ಮುನ್ನಡೆದು ಪರಿವೃತಾ ಶಕ್ತಿಯಿಂದ ಜಗವ ಬೆಳಗಲಿ.

ಭಾರತಿ– ಅಕ್ಕಾ ಸ್ತ್ರೀ ಸಮಾಜಕ್ಕೆ ಸಕ್ಕರೆ ತುಪ್ಪವ ಉಣಬಡಿಸಿ ಹೋದೆ. ಹೆಣ್ಣು ಬಾಳಿನ ಕಣ್ಣು, ನಾರಿ ಸ್ವರ್ಗಕ್ಕೆ ದಾರಿಯೆಂಬ ಆದರ್ಶವನ್ನು ಎತ್ತಿ ತೋರಿಸಿದೆ. ಸೂರ್ಯ ಚಂದ್ರರಿರುವವರೆಗೂ ನಿನ್ನ ಪತಿವೃತಾ ಶಕ್ತಿಯಿಂದ ಸ್ತ್ರೀ ಸಮಾಜ ಮುನ್ನಡೆಯಲಿ.

ರಾಜು– ಸಂಸಾರ ಸಾಗರದಲ್ಲಿ ಒಡೆದ ನೌಕೆಯನ್ನೇ ಏರಿದರೂ ಸಹಿತ ನೆರೆ ತೊರೆಗಳ ಹೊಡೆತಕ್ಕೆ ಹೆದರದೆ ಪತಿವೃತೆಯರ ಹೆಸರಿಗೆ ಮತ್ತಷ್ಟು ಕಳೆತಂದು ಸದಾ ಜ್ಯೋತಿಯಾಗಿ ಬೆಳಗುತ್ತ ಜಗಜ್ಯೋತಿ ಬಸವೇಶನಲ್ಲಿ ಒಂದಾದ ತಂಗಿಯ ಆತ್ಮಕ್ಕೆ ತಂದೆ ಬಸವೇಶ ಶಾಂತಿಯನ್ನು, ಸ್ತ್ರೀ ಸಮಾಜಕ್ಕೆ ಕಾಂತಿಯನ್ನು ಬೀರಲೆಂದು ಮೊರೆಯಿಟ್ಟು ನಾವೆಲ್ಲ ಮಂಗಲ ಪಾಡುವಾ. (ಮಂಗಲಗೀತೆ ಹಾಡುವರು).

ಸಮಾಪ್ತಿ

===***====***===

೬

ನನ್ನವಳು ನನ್ನ ಪ್ರೀತಿಸಿದವಳು

(ಸುಂದರ ಸಾಮಾಜಿಕ ನಾಟಕ)

– ಎಸ್.ವಿ.ಪಾಟೀಲ ಗುಂಡೂರು

ಎಸ್.ವಿ. ಪಾಟೀಲ, ಗುಂಡೂರು

ಶ್ರೀ ವಿರೂಪಾಕ್ಷಗೌಡ ಹಾಗೂ ಕರಿವೀರಮ್ಮ ದಂಪತಿಗಳ ಮಗನಾಗಿಲ್ಲಿ ಶರಣೇಗೌಡ ಕ್ರಿ.ಶ. ೦೧-೦೬-೧೯೬೦ ರಲ್ಲಿ ಗಂಗಾವತಿ ತಾಲೂಕಿನ ಗುಂಡೂರ ಗ್ರಾಮದಲ್ಲಿ ಜನಿಸಿದರು. ಎಂ.ಎ ಪದವಿ ಪಡೆದರೂ ವ್ಯವಸಾಯದನ್ನೇ ಮಾಡತೊಡಗಿದರು. ಕೊಪ್ಪಳದ ಪ್ರಮುಖ ನಾಟಕಕಾರ ನಿಟ್ಟಾಲಿ ಶಿವರುದ್ರಪ್ಪನವರ "ಜೀವನ ಯಾತ್ರೆ" ನಾಟಕ ಪ್ರೇರಣೆ ನೀಡಿತು.

ಬಾಲ ನಟನಾಗಿ ಬೆಳೆದ ಶರಣೇಗೌಡ ಮುಂದೆ ನಾಟಕಕಾರನಾಗಿ, ನಿರ್ದೇಶಕನಾಗಿ ಗ್ರಾಮೀಣ ರಂಗಭೂಮಿಗೆ ಮಹತ್ವದ ಕೊಡುಗೆ ನೀಡಿದರು. ೨೦೦ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿರುವ ಪಾಟೀಲರದು ದೈತ್ಯ ಪ್ರತಿಭೆ. ಗುಂಡೂರಿನಲ್ಲಿ ನಟರಾಜ ತರುಣ ಸಂಘ ಕಟ್ಟಿ ನಾಟಕಗಳನ್ನು ಆಡಿದರು. ಗುಂಡದೂರದಲ್ಲಿ ಸಜ್ಜಲ ಶ್ರೀ ಕಲಾಬಳಗ ಸ್ಥಾಪಿಸಿ ಗ್ರಾಮೀಣ ರಂಗಭೂಮಿಯ ಬೆಳವಣಿಗೆಗೆ ಕಾರಣರಾದರು. ನಟರಾಗಿ ನಿರ್ದೇಶಕರಾಗಿ, ನಾಟಕಕಾರರಾಗಿ, ನಾಟಕ ಸಂಘಗಳ ಸ್ಥಾಪಕರಾಗಿ ಇವರು ಸಲ್ಲಿಸಿದ ರಂಗಭೂಮಿಯ ಸೇವೆ ಗಮನಾರ್ಹವಾದುದಾಗಿದೆ. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಅನೇಕ ಸಂಘ-ಸಂಸ್ಥೆಗಳು ಇವರ ರಂಗಸೇವೆಯನ್ನು ಗಮನಿಸಿ ಪ್ರಶಸ್ತಿ-ಪುರಸ್ಕಾರ ನೀಡಿ ಗೌರವಿಸಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿಯೂ ಇವರು ಕಾರ್ಯನಿರ್ವಹಿಸಿದ್ದಾರೆ. ಇವರು ರಚಿಸಿರುವ ನೂರಾರು ನಾಟಕಗಳಲ್ಲಿ ಇಪ್ಪತ್ತೆರಡು ನಾಟಕಗಳು ಪೂರ್ಣಾವಧಿ ನಾಟಕಗಳಾಗಿವೆ. "ತೂಗುತಾದನೋಡು ಜೋಕಾಲಿ, ಅಧಿಕಾರಕ್ಕೆಸವಾಲು ಗುಡದೂರ ದೊಡ್ಡಬಸವೇಶ್ವರ, ಸತ್ಯಸತ್ತಿಲ್ಲ ಇವು ಪಾಟೀಲರ ಪ್ರಮುಖ ನಾಟಕ ಕೃತಿಗಳಾಗಿವೆ. ಅನೇಕ ನಾಟಕಗಳು ಬಾನುಲಿ ಹಾಗೂ ದೂರದರ್ಶನದಲ್ಲೂ ಪ್ರಸಾರಗೊಂಡಿವೆ. ಇವರ ನಟನೆ, ಕಥೆ ಬರೆದು ಸಾಹಿತ್ಯ ನೀಡಿದ "ಇಂದಿನ ಸತ್ಯ"ಯಶಸ್ವಿ ಚಲನಚಿತ್ರವಾಗಿ ಪ್ರದರ್ಶನಗೊಳ್ಳುತ್ತದೆ.

: ಪಾತ್ರ ಪರಿಚಯ :

೧. ಶಂಕರ–ಕಥಾನಾಯಕ
೨. ಸುಂದರ–ನಾಯಕ – ಶಂಕರನ ತಮ್ಮ
೩. ರವಿ – ಶಂಕರನ ಮಗ ೨೦ ವರ್ಷ
೪. ವಜ್ರಮುನಿ–ಜಮೀನ್ದಾರ ಖಳನಾಯಕ
೫. ಚರಣರಾಜ–ಜಮೀನ್ದಾರ ಖಳನಾಯಕನ ಸಹಾಯಕ
೬. ಚಂದ್ರಗೌಡ– ನಾಟಕ ದಶವಿ
೭ ಕುಬೇರ– ನಾಟಕದ ನಟ
೮. ಮನ್ಮಥ–ಕುಟುಂಬ ಯೋಜನೆಯ ಕಾರ್ಯಕರ್ತ
೯. ರಾಣಿಸಾಬ–ಹಾಸ್ಯ ಜ್ಯೋತಿಯ ಸಹಾಯಕ
೧೦. ಲಕ್ಷ್ಮೀ–ಕಥಾನಾಯಕಿ ಶಂಕರನ ಪತ್ನಿ
೧೧. ಅರುಣ–ಹಾಸ್ಯ ಟೈಪಿಸ್ಟ್
೧೨. ಜ್ಯೋತಿ–ಶಂಕರನ ಉಪಪತ್ನಿ
೧೩. ಏಕದಾರಿ ನುಡಿಸುವವ ಹಾಗೂ ಲಾಟ್ರಿ ಹುಡುಗ

ನನ್ನವಳು, ನನ್ನ ಪ್ರೀತಿಸಿದವಳು
ಸುಂದರ ಕೌಟುಂಬಿಕ ನಾಟಕ

ಒಂದನೆಯ ಪ್ರವೇಶ

ದೃಶ್ಯ–ಸಾಮಾನ್ಯ ಮನೆ

(ತೆರೆ ಸರಿದಾಗ ಲಕ್ಷ್ಮಿ ಸಜ್ಜಲ ಗುಡ್ಡದ ಶಣಮ್ಮ ತಾಯಿಯವರ ಭಾವ ಚಿತ್ರಕ್ಕೆ ನಮಿಸಿ)

ಲಕ್ಷ್ಮಿ– ಅಮ್ಮಾ ಲೋಕಮಾತೇ ಸಜ್ಜಲ ಗುಡ್ಡದ ಶರಣಾಂಬೆ, ಭಕ್ತಿಯಿಂದ ಭಜಿಸುವ ಭಕ್ತರ ಭವ ತಾಪಗಳ ನೀಗಿಸುವ ಭವಾನಿಯ ಪುನರವತಾರ ನೀನು, ಹೀಗಿದ್ದೂ ನನ್ನ ಕೂಗು ನಿನಗೆ ಕೇಳಿಸದಾಯಿತೇ ತಾಯಿ, ಇರಲಿ, ಎಲ್ಲಿಯವರೆಗೆ ಪರೀಕ್ಷಿಸುವೆಯೋ ಪರೀಕ್ಷಿಸು. ನನ್ನವರು ಆದರ್ಶದರ ಮನೆಯ ಮೆಟ್ಟಿಲಿನಿಂದ ಹಾದರದ ಪ್ರಪಾತಕ್ಕೆ ಬಿದ್ದು ಒದ್ದಾಡುತ್ತಿದ್ದಾರೆ. ನೃತ್ಯಗಾತಿಯ ಮೋಹ ಜಾಲದಲ್ಲಿ ಸಿಲುಕಿ ಇದ್ದಂತಹ ನೌಕರಿಯನ್ನು ಕಳೆದುಕೊಂಡು ಕದ್ದು ಕಾಮದಾಟವಾಡುತಲಿ ಮನೆ, ಮಡದಿ, ಮಕ್ಕಳನ್ನೇ ಕಡೆಗಣಿಸಿದ್ದಾರೆ. ನನ್ನ ಮೈದುನ ಸುಂದರ ಬಹಳ ಮೃದು ಸ್ವಭಾವದವನು. ಇಲ್ಲಿಯ ತನಕ ಶ್ರೀರಾಮಲಕ್ಷ್ಮಣನಂತಿದ್ದವರು ಈ ವಿಷಯದಿಂದ ಎಲ್ಲಿ ದಾಯಾದಿಗಳಾಗುವರೋ ಎಂಬ ಭಯ ಕಾಡುತ್ತಿದೆ ನನ್ನ ಮನವನ್ನು (ಆಲೋಚಿಸುತ್ತ ನಿಂತಿರಲು ಹೊರಗಿನಿಂದ ರವಿಯು ಬರುವನು)

ರವಿ– ‘ಅಮ್ಮಾ ಇದೇನಮ್ಮಾ ಹೀಗೆ ಚಿಂತಿಸುತ್ತ ನಿಂತಿರುವೆ (ಕೈ ಎಳೆಯಲು),

ಲಕ್ಷ್ಮಿ– (ಎಚ್ಚೆತ್ತು) ಹಾಂ ಯಾರು ?

ರವಿ– ನಾನಮ್ಮಾ ನಿನ್ನ ಮಗ ರವೀ, ಅದೇನಮ್ಮಾ ಒಬ್ಬಳೇ ಯೋಚಿಸುತ್ತಿರುವೆ.

ಲಕ್ಷ್ಮಿ– (ದುಃಖ ಹತ್ತಿಕ್ಕಿಕೊಂಡು ರವಿಯ ತಲೆ ನೇವರಿಸುತ್ತ) ಹಾಂ, ಏನೂ ಇಲ್ಲ ಕಂದಾ.

ರವಿ– ಅಲ್ಲಮ್ಮಾ ಇಲ್ಲಿಗೆ ಮೂರು ದಿನವಾಯ್ತು. ಊಟ ಮಾಡದೆ ಒಬ್ಬಳೇ ಅಳುತ್ತ ಕುಳಿತುಕೊಳ್ಳುವೆಯಲ್ಲಾ, ಮೂರ್‍ನಾಲ್ಕು ದಿವಸದಿಂದ ಅಪ್ಪಾಜೀನೂ ಮನೆಗೆ ಬಂದಿಲ್ಲ. ಅಪ್ಪಾಜಿ ಎಲ್ಲಿಗೆ ಹೋಗಿದ್ದಾರಮ್ಮಾ

ಲಕ್ಷ್ಮಿ– ರವೀ ಎಲ್ಲಿಗೆ ಯಾವ ಪುರಷಾರ್ಥದ ಸಲುವಾಗಿ ಹೋಗಿದ್ದಾರೆಂದು ಹೇಳಲಿ ಮಗು ?

ರವಿ– ಅಪ್ಪಾಜಿಯವರನ್ನು ಬಿಟ್ಟಿರಲಿಕ್ಕೆ ನನಗೆ ಆಗುವುದಿಲ್ಲವಮ್ಮಾ ಆದರೇ ಅವರೇ ನನಗೆ ಸಿಗುತ್ತಿಲ್ಲ, ಅಮ್ಮಾ ನನ್ನ ಮೇಲೆ ಅಪ್ಪಾಜಿಗೆ ಪ್ರೀತಿನೇ ಇಲ್ವೇನಮ್ಮಾ.

ಲಕ್ಷ್ಮಿ– ಹೌದಪ್ಪಾ ಇತ್ತಿತ್ತಲಾಗಿ ನಿಮ್ಮ ತಂದೆಯವರ ಪ್ರೀತಿಯ ದೃಷ್ಟಿ ನಮ್ಮಿಂದ ದೂರವಾಗಿದೆ.

ರವಿ– ಅಮ್ಮಾ ಬಾರಮ್ಮಾ ನನಗೆ ಬಹಳ ಹಸಿವಾಗಿದೆ. ಇಬ್ಬರೂ ಕೂಡಿ ಊಟ ಮಾಡೋಣ.

ಲಕ್ಷ್ಮಿ– ರವೀ ನಿಮ್ಮ ಚಿಕ್ಕಪ್ಪ ಬರ್ತಾನೆ. ಬಂದ ನಂತರ ಅವನ ಜೊತೆ ಊಟ ಮಾಡುವೆಯಂತೆ.

ರವಿ– (ನಿರುತ್ಸಾಹದಿಂದ) ಅಮ್ಮಾ ಚಿಕ್ಕಪ್ಪ ಯಾವಾಗ ಬರ್ತಾರಮ್ಮಾ? ಅವರು ಗ್ಯಾರೇಜ್ ಕೆಲಸದಿಂದ ಮನೆಗೆ ಬರಬೇಕಾದ್ರೆ ರಾತ್ರಿ ಹತ್ತು ಗಂಟೆಯಾಗುತ್ತದೆ (ಸುಂದರ ಪ್ರವೇಶಿಸುವನು)

ಸುಂದರ– ಹಾಗೇನೂ ಇಲ್ಲ ರವೀ. ಇಲ್ನೋಡಪ್ಪಾ ಬಂದು ಬಿಟ್ಟೆ.

ರವಿ– (ಸಂತೋಷದಿಂದ) ಅಮ್ಮಾ ಚಿಕ್ಕಪ್ಪಾ ಬಂದು ಬಿಟ್ರು, ಚಿಕ್ಕಪ್ಪ ಬಂದು

ಬಿಟ್ರು (ಕುಣಿದು)

ಸುಂದರ– (ರವಿಯ ತಲೆಯ ಮೇಲೆ ಕೈಯಾಡಿಸಿ) ಬಂದು ಬಿಟ್ಟೆ ರವೀ. ತಗೋ ಈ ಬಿಸ್ಕೇಟು ನಿನಗೆ, ಅತ್ತಿಗೆ ಇದೇನಮ್ಮಾ ತಮ್ಮ ಮುಖವೇಕೋ ಬಾಡಿದೆಯಲ್ಲಾ ಅಣ್ಣನೇನಾದರೂ ಬಿರು ನುಡಿಗಳನ್ನಾಡಿದನೇನಮ್ಮಾ ? ಹೇಳಮ್ಮಾ.

ಲಕ್ಷ್ಮಿ– **ಹಾಂ, ಹಾಗೇನೂ ಇಲ್ಲ ಸುಂದ್ರೂ......ಹಾಗೇನೂ ಇಲ್ಲಪ್ಪಾ.**

ರವಿ– ಹೌದು ಚಿಕ್ಕಪ್ಪಾ. ಅಮ್ಮಾ ಅಳ್ತಾ ಇರ್ತಾಳೆ.

ಲಕ್ಷ್ಮಿ– ಹೇ ಸುಮ್ಮನಿರೋ ಸುಮ್ಮ ಸುಮ್ಮನೆ ಏನೇನೋ ಹೇಳಬೇಡ. ಹಾಗೇನೂ ಇಲ್ಲ ಸುಂದ್ರೂ, ಏನೋ ಕಣ್ಣಲ್ಲಿ ಕಸರು ಬಿದ್ದಿತ್ತು.

ಸುಂದರ– ಉಂ. ಹುಂ. ನಾನೂಪ್ಪಲಾರೆ ಅತ್ತಿಗೆ. ಷೋಡಶ ಕಲೆಗಳಿಂದ

ಕೂಡಿದ್ದರೂ ಕೂಡ, ಕಂಗಳಿಗೆ ನೊರೆ ಹಾಲು ಚಲ್ಲಿದಂತೆ ಕಂಗೊಳಿಸುವ ಹುಣ್ಣಿಮೆಯ ಚಂದಿರನಂತಿರುವ ತಮ್ಮ ಮುಖದಲ್ಲಿ ರಾಹುಗ್ರಸ್ಥ ಛಾಯೇ ಎದ್ದು ಕಾಣುತ್ತಿದೆ. ದಯವಿಟ್ಟು ಕಾರಣವೇನೆಂದು ಹೇಳಿ ಅತ್ತಿಗೆ.

ಲಕ್ಷ್ಮಿ– ಕಾರಣ......ಹುಂ. ಏನೆಂದು ಹೇಳಲಿ ? ಏನೂ ಇಲ್ಲ ಸುಂದ್ರು, ಏಕೋ ಏನೋ ಮೂರು ದಿವಸದಿಂದ ತಲೆ ತಿರುಗಿದಂತಾಗುತ್ತಿದೆ.

ರವಿ– ಹಾಗೇನೂ ಇಲ್ಲ ಚಿಕ್ಕಪ್ಪಾ. ಅಮ್ಮಾ ಸುಳ್ಳು ಹೇಳ್ತಾ ಇದ್ದಾಳೆ. ಮೂರು ದಿವಸದಿಂದ ಆಕೆ ಊಟವನ್ನೇ ಮಾಡಿಲ್ಲ.

ಸುಂದರ– (ಆಶ್ಚರ್ಯದಿಂದ) ಹಾಂ. ಇದು ನಿಜವೇನಮ್ಮಾ ಹೇಳಿ ಅತ್ತಿಗೆ. ಸಾಲ ಕೊಟ್ಟ ಸಾಹುಕಾರರ ಬಾಧೆ ತಾಳಲಾಗದೆ ಪದವೀಧರ ನಾನಾಗಿದ್ದರೂ, ಬಿಡಿಕಾಸಿನ ನವಕರಿ ದೊರೆಯದ ಕಾರಣ ಗ್ಯಾರೇಜ್ ಕೆಲಸಕ್ಕೆ ಸೇರಿಕೊಂಡು ಹಗಲು ರಾತ್ರಿಯ ಪರಿವೆಯಲ್ಲದೆ, ನಿದ್ರೆ ನೀರಡಿಕೆಯ ಲಕ್ಷಿಸದೆ ಟಾಂಗಾ ಕುದುರೆಯಂತೆ, ಗುಲಾಮನಾಗಿ ದುಡಿಯುವ ನನಗೆ ನಿನ್ನ ಯೋಗ ಕ್ಷೇಮ ವಿಚಾರಿಸಲು ಸಮಯ ಸಿಗದಂತಾಗಿ, ನೀನುಣ್ಣದಿರುವಾಗ, ನಾನುಂಡು ತಪ್ಪು ಮಾಡಿದೆ. ಅತ್ತಿಗೆ ದಯಮಾಡಿ ಹೇಳಮ್ಮಾ. ಅಣ್ಣನೇನಾದರೂ ಆಡಿದರೇನು ?

ಲಕ್ಷ್ಮಿ– ಅವರಿಗೆ ನನ್ನ ಜೊತೆ ಮಾತನಾಡಲಿಕ್ಕಾದರೂ, ಸಮಯವೆಲ್ಲಿದೆಯಪ್ಪಾ ? ಹೀಗಿರುವಾಗ ಬೈಯುವದೆಲ್ಲಿಂದ ಬಂತು ?

ಸುಂದರ– ಹಾಗಾದರೆ ಯಾವ ಕಾರಣವೂ ಇಲ್ಲದೆ ಮೂರು ದಿವಸದಿಂದ ಅದೇಕಮ್ಮಾ ಉಪವಾಸ ಆಚರಿಸಿದೆ ? ಹೇಳಮ್ಮಾ ನಾನು ನಿನಗೆ ಬರೀ ಮೈದುನನಷ್ಟೇ ಅಲ್ಲ. ನಿನ್ನ ಹಿರಿಯ ಮಗನೆಂದು ತಿಳಿದು ಕಿರಿಯ ಗುಣದವನಾದ ನನಗೆ ಅರುಹಮ್ಮಾ ಒಡಲಲ್ಲಿರುವ ಒಡವಾಗ್ನಿಯ ಸತ್ಯ ಸಂಗತಿಯ.

ಲಕ್ಷ್ಮಿ– ಸುಂದ್ರು.......ನಿಮ್ಮಣ್ಣ......ಅದಾವಳೋ ನಾಟಕದ ನಟಿಯೋರ್ವಳನ್ನು ಬೆನ್ನತ್ತಿ ಅಲೆಯುತ್ತಿದ್ದಾರಂತೆ.

ಸುಂದರ– ಅಂದರೇ ನಿನಗೂ ಈ ವಿಷಯ ತಿಳಿಯಿತೇನಮ್ಮಾ ?

ಲಕ್ಷ್ಮೀ– (ಆಶ್ಚರ್ಯದಿಂದ) ಹಾಗಾದರೆ......ಮೊದಲೇ ನಿನಗೆ ಈ ವಿಷಯ ತಿಳಿದಿತ್ತೆನ್ನು ?

ಸುಂದರ– ತಿಳಿದರೂ ಕೂಡ ಏನು ಮಾಡಲು ಸಾಧ್ಯವಮ್ಮಾ ಇಡೀ ಊರಿಗೆ ಊರೇ ಸಾರುತ್ತಿದೆ. ಅವರೀರ್ವರ ಪ್ರೇಮ ಪ್ರಲಾಪವನ್ನು, ವಿಷಯಾಸಕ್ತನಾದ ವಿಷಯವನ್ನು, ಹುಂ ಮೆಚ್ಚಿದವನಿಗೆ ಮಸಣದ ಸುಖವಂತೆ, ಮೋಹಿನಿಯ ಮೋಹ ಪಾಶದಲ್ಲಿ ಸಿಲುಕಿದ ಅವನಿಗೆ ಮತಿಯೇ ಮಸಣಿಸಿದಂತಿದೆ. ತಿಳಿಯ ಹೇಳಲು ಹೋದರೆ ಹಳಿದು ಬಿಡುವನೆಂಬ ಅಂಜಿಕೆಯಿಂದ ಈ ವಿಷಯವನ್ನು ಪ್ರಸ್ತಾಪಿಸಿಲ್ಲ.

ಲಕ್ಷ್ಮೀ– ಇದೇ ರೀತಿ ಮುಂದುವರೆಂದರೆ ಸಮಾಜದಲ್ಲಿ ಮುಖವೆತ್ತಿ ತಿರುಗುವದಾದರೂ ಹೇಗೆ ?

ಶಂಕರ– (ಪ್ರವೇಶಿಸಿ) ಮುಖವೆತ್ತಿ ತಿರುಗದಂತಹ ಮೂರ್ಖ ಕೆಲಸವನ್ನೇನೂ ನಾನೂ ಮಾಡಿಲ್ಲ.

ರವಿ– ಅಪ್ಪಾಜೀ......(ತಂದೆಯ ಹತ್ತಿರ ಹೋಗಿ ನಿಲ್ಲುವನು)

ಸುಂದರ– ಅಣ್ಣಾ ನೀನೀಗ ಮಾಡುತ್ತಿರುವ ಕೆಲಸ ನ್ಯಾಯ ಸಮ್ಮತವಾದುದೇನು ?

ಶಂಕರ– ಸುಂದರ ಸುಮ್ಮನೇ ಬುದ್ಧಿ ಹೇಳುವ ಕೆಲಸಕ್ಕೆ ಕೈ ಹಾಕದಿರು. ನ್ಯಾಯ ಅನ್ಯಾಯ ಪರಾಮರ್ಶಿಸಲು ನನಗೀಗ ಸಮಯವಿಲ್ಲ. ಲಕ್ಷ್ಮೀ ವಿಳಂಬ ಮಾಡದೇ ತೆಗೆದುಕೊಂಡು ನಿನ್ನ ಕೊರಳಲ್ಲಿರುವ ಚಿನ್ನದ ಸರವನ್ನು

ಲಕ್ಷ್ಮೀ– (ದಿಗ್‌ಭ್ರಾಂತಳಾಗಿ) ಈ ಚಿನ್ನದ ಸರ.

ಶಂಕರ– ಹೂಂ. ನಿಮ್ಮಪ್ಪನ ಮನೆಯಿಂದ ತಂದುದಲ್ಲ.

ಲಕ್ಷ್ಮೀ– ಏನು ಮಾತನಾಡುತ್ತಿರುವಿರಿ ನೀವು. ನಾನೇನು ನಮ್ಮಪ್ಪನ ಮನೆಯಿಂದ ತಂದಿರುವೆನೆಂದು ಹೇಳಿದೆನೇನು? ಈ ಸರ ಈ ಮನೆಯ ಯಜಮಾನರಿಂದ ತಲಾತಲಾಂತರದಿಂದಲೂ ಬಂದಿದ್ದು, ನನಗೆ ಮಾಮನವರು ಮಡಿಯುವ ಮುನ್ನ ಪ್ರೀತಿಯಿಂದ ಕೊಟ್ಟದ್ದು.

ಶಂಕರ– ಹೂಂ. ನಾನೂ ಕೂಡ ಪ್ರೀತಿಯಿಂದಲೇ ಮತ್ತೋರ್ವಳ ಕೊರಳಿಗೆ ಹಾಕಬೇಕೆಂದಿರುವೆ.

ಸುಂದರ– (ಸಿಟ್ಟಿನಿಂದ) ಅತ್ತಿಗೇ ತೆಗೆಯದಿರಮ್ಮಾ ಕೊರಳಲ್ಲಿರುವ ಆ ಚಿನ್ನದ ಸರವನ್ನು ಸೂಳೆಯ ಮೋಹ ಪಾಶದ ಸುಳಿಯಲ್ಲಿ ಸಿಕ್ಕವನಿಗೆ ಬಾಳ ಬಟ್ಟೆಯ ಪರಿವು ಬರುವುದಾದರೂ ಎಂತು?

ಶಂಕರ– (ಪ್ರತಿಭಟಿಸಿ) ಲೇ ಸುಂದರ ಮಾತು ಅತಿಯಾಯ್ತು. ಗಂಡ ಹೆಂಡಿರ ಜಗಳದಲ್ಲಿ ಭಂಡತನದಿಂದ ಪ್ರವೇಶಿಸದಿರು ನಿನಗದು ಸಂಬಂಧವಿಲ್ಲ.

ಲಕ್ಷ್ಮೀ– (ಅಳುತ್ತ) ರೀ. ಏನ್ರೀ. ಏನು ಮಾತಾಡ್ತಾಯಿದ್ದೀರಿ ?

ಸುಂದರ– (ಆವೇಶದಿಂದ) ಹಾಂ. ಸಂಬಂಧ ವಿಲ್ಲಾ. ಅಂದರೆ ನಾ....................ನು............

ಶಂಕರ– ನೀನೇನೂ ನನಗೆ ಒಡ ಹುಟ್ಟಿದ ತಮ್ಮನಲ್ಲ. ಎಷ್ಟಿದ್ದರೂ ಚಿಕ್ಕಪ್ಪನ ಮಗ.

ಲಕ್ಷ್ಮೀ– (ಅಳುತ್ತ) ಏನ್ರಿ, ನೀವು........ಏನು ಮಾತನಾಡುತ್ತಿರುವಿರಿ ? ದಯವಿಟ್ಟು ಹಾಗನ್ನದಿರಿ.

ಸುಂದರ– ಅಣ್ಣಾ(ಉದ್ವೇಗದಿಂದ) ಅಣ್ಣಾ ಮತ್ತೊಮ್ಮೆ ಉಚ್ಚರಿಸದಿರಣ್ಣಾ ಚಿಕ್ಕಪ್ಪನ ಮಗನೆಂಬ ಚಿಕ್ಕ ಮಾತನ್ನು, ನನ್ನ ತಂದೆ ತಾಯಿ ಮಡಿದಾಗಿನಿಂದ ನೀನೇ ಅಕ್ಕರೆಯಿಂದ ಪಕ್ಕದಲ್ಲಿರಿಸಿಕೊಂಡು ಜೋಪಾನ ಮಾಡಿದೆ.

ಶಂಕರ– ಹೂಂ. ಅದಕ್ಕಾಗಿಯೇ ನೀನೀಗ ಅದರ ಪ್ರತಿಫಲವನ್ನು ತೀರಿಸುವುದಕ್ಕಾಗಿ ನನ್ನ ಆಶೆಗೆ ಕಲ್ಲು ಹಾಕುತ್ತಿರುವೆ.

ಸುಂದರ– ಇದು ದುರುಳರ ದುರಾಸೆಯೆಂದು ನೀನರಿಯಲಾರೆ. ಹಾಲಿನಂತಹ ಈ ಸಂಸಾರದಲ್ಲಿ ಹಾಲಾಹಲವೇಳದಿರಲೆಂದು ಆ ಮಾತನ್ನೇಳಿದೆನೇ ವಿನಹ. ನಿನಗೆ ಅಪಮಾನ ಮಾಡಬೇಕೆಂಬ ಉದ್ದೇಶದಿಂದಲ್ಲ. ಅಣ್ಣಾ ನಿನಗೆ ಕಾಲು ಹಿಡಿದು ಬೇಡಿಕೊಳ್ಳುತ್ತೇನೆ. ದಯಮಾಡಿ ಆ ಬಣ್ಣದ ಹೆಣ್ಣಿನ ಸಹವಾಸವನ್ನು ಬಿಡು. ನಿನ್ನ ವಿಷಯದಲ್ಲೇ ಅನ್ನ ಆಹಾರವನ್ನು ತೊರೆದು ನೊಂದು ಬೆಂದು, ಕಂದಿ ಹೋದ ಅತ್ತಿಗೆಯ ಮುಖವನ್ನೊಮ್ಮೆ ನೋಡು. ಅಪ್ಪಾಜಿ, ಅಪ್ಪಾಜೀ, ಎಂದು ಕ್ಷಣ ಕ್ಷಣಕ್ಕೂ ಅಳುವ ಮಗನನ್ನು ಸಾಂತ್ವನ ಮಾಡು.

ಶಂಕರ– ಸಲ್ಲದ ಹಿತ ವಚನವನ್ನು ಮೊದಲು ನೀನು ಸಾಕು ಮಾಡು. ಇದು ನನ್ನ ವೈಯಕ್ತಿಕ ಪ್ರಶ್ನೆ. ಲಕ್ಷ್ಮೀ ನನಗೆ ಸಮಯವಾಗುತ್ತಿದೆ. ಹೂಂ ಬಿಚ್ಚಿ ಕೊಡುವೆಯೋ ಅಥವಾ ಕತ್ತಿನಿಂದ ನಾನೇ ಕಿತ್ತುಕೊಂಡು ಹೋಗಲೋ.

ಲಕ್ಷ್ಮೀ– ನ್ಯಾಯ ಸಮ್ಮತವಾಗಿ ಒಳ್ಳೆಯ ಕಾರ್ಯಕ್ಕಾಗಿ ವಿನಿಯೋಗವಾಗುವಂತಿದ್ದರೆ, ಪತಿಯೇ ಪರಮೇಶ್ವರನೆಂದರಿತು ನಾನಾಗಿಯೇ ತೆಗದುಕೊಡುತ್ತಿದ್ದೆ.

ಶಂಕರ– ಅಂದರೇ ನೀನೀಗ ಕೊಡುವದಿಲ್ಲವೆಂದಾಯ್ತು.

ಸುಂದರ– ಅದನ್ನೇ ಹೇಳುತ್ತಿದ್ದಾಳಲ್ಲ.

ಶಂಕರ– (ಸಿಟ್ಟಿನಿಂದ) ಲೇ ಚಾಂಡಾಲಾ ಎಷ್ಟು ಸಾರೆ ಹೇಳಬೇಕು ನಿನಗೆ? ನಮ್ಮ ಮಾತಿನ ಮಧ್ಯೆ ಪ್ರವೇಶಿಸಬೇಡವೆಂದು, ನಿನ್ನಿಂದಲೇ ನಮ್ಮ ಸಂಸಾರ ಹಾಳಾದದ್ದು. ಇನ್ನೂ ನಿನ್ನ ಬೋಧನೆಯಿಂದ ಮುಂದೆ ಏನೇನಾಗುವುದೋ ? ಸಾಯುವ ತನಕ ನಿನಗೆ ಕೂಳು ಹಾಕುತ್ತೇನೆಂದು ಯಾವ ಕರಪತ್ರದಲ್ಲೂ ನಾನು ಬರೆದು ಕೊಟ್ಟಿಲ್ಲ.

ಸುಂದರ– ಅತ್ತಿಗೇ.........ಅತ್ತಿಗೇ

ರವಿ– ಚಿಕ್ಕಪ್ಪಾ ಹೋಗಬೇಡಿ ಚಿಕ್ಕಪ್ಪಾ, ಅಪ್ಪಾಜೀನೂ ನನ್ನ ಮೇಲೆ ಕೋಪ ಮಾಡಿಕೊಂಡು ಹೊರಟು ಹೋದರು. ಈಗ ನೀನೂ ಹೊರಟು ಹೋದರೆ ನಮಗೆ ಅನ್ನ ಹಾಕುವವರಾರು ?

ಸುಂದರ– ರವೀ ಇಲ್ಲಪ್ಪಾ ಇಲ್ಲ ಮಗು, ನಿಮ್ಮನ್ನು ಬಿಟ್ಟು ನಾನೆಲ್ಲಿಗೂ ಹೋಗುವದಿಲ್ಲ. ಬಾರಪ್ಪ ಊಟ ಮಾಡುವೆಯಂತೆ. (ರವಿಯ ತಲೆಯ ಮೇಲೆ ಕೈಯಾಡಿಸುತ್ತ ಒಳಗೆ ಕರೆದುಕೊಂಡು ಹೋಗುವನು. ಲಕ್ಷ್ಮೀಯು ಪತಿಯು ಹೋದದಿಕ್ಕನ್ನೇ ನೋಡುತ್ತ ಏನನ್ನೋ ಆಲೋಚಿಸಿ ನಿಟ್ಟುಸಿರು ಬಿಟ್ಟು ಅವರನ್ನು ಹಿಂಬಾಲಿಸಿ ಹೋಗುವಳು ಪರದೆ ಬೀಳುವುದು).

===***====***===

ಎರಡನೆಯ ಪ್ರವೇಶ

ಜಂಗಲ್ ದೃಶ್ಯ

(ವಜ್ರಮುನಿ ಕೈಯಲ್ಲಿ ಬಂದೂಕು ಹಿಡಿದು ಪ್ರವೇಶಿಸುವನು)

ವಜ್ರಮುನಿ–ಗುಡ್ ವೇರಿಗುಡ್ ಒಂದೇ ಹೊಡೆತಕ್ಕೆ ಎರಡು ಜಿಂಕೆಗಳು ಪ್ರಾಣತೆತ್ತವು. (ನಕ್ಕು) ಹ......ಹ.....ಹ ಈ ವಜ್ರಮುನಿ ಇಟ್ಟ ಗುರಿ ಶ್ರೀ ರಾಮಚಂದ್ರನ ಬಾಣದಂತೆ; ಹೀಗಿದ್ದೂ ಸಾವಿರಾರು ಎಕರೆ ತೋಟದ ಮಾಲೀಕನಾದ ನನಗೆ ಅಪ್ಪರ್ ಅಲ್ ಆ ಶಂಕರ ಮಾಡಿದ ಅಪಮಾನ ನೆನಸಿಕೊಂಡರೆ ಮೈಯೆಲ್ಲಾ ಉರಿಯುತ್ತಿದೆ. ಚುನಾವಣೆಯಲ್ಲಿ ನನ್ನ ಎದುರಾಳಿಗೆ ಸಪೋರ್ಟಮಾಡಿ, ನನ್ನನ್ನು ಮುಖಭಂಗ ಗೊಳಿಸಿದ, ನನ್ನ ಕಾಲಡಿಯ ಆಳಾದ ಶಂಕ್ರಯ್ಯನ ಮಗಳು ಲಕ್ಷ್ಮೀಯನ್ನು ಮದುವೆಯಾಗಿ ನನಗೆ ದಕ್ಕಂತೆ ಮಾಡಿದ. ಆ ಸೇಡಿಗಾಗಿ ಶಂಕ್ರಯ್ಯನನ್ನು ಬಲಿ ತೆಗೆದುಕೊಂಡೆ. ಆದರೂ ಛಲದಂಕ ಮಲ್ಲನಾದ ನನ್ನ ಮನಸ್ಸಿಗೆ ನೆಮ್ಮದಿಯೇ ದೊರೆಯಲಿಲ್ಲ. ನನ್ನ ಕಣ್ಣೆದುರೇ ಅವನ ಸಂಸಾರವೆಲ್ಲಾ, ಛಿದ್ರ ವಿಛಿದ್ರವಾಗಬೇಕು ಅಂದಾಗ ಮಾತ್ರ ನೆಮ್ಮದಿ.

ಚರಣ್– (ಆಗಮಿಸಿ, ಕೈಯಲ್ಲಿ ಫಾರೆನ್ ವಿಸ್ಕಿ ಹಿಡಿದು) ಗುಡ್ ಮಾರ್ನಿಂಗ್ ಭಾಸ್

ವಜ್ರ– ಸೇಮ್ ಟು ಯು ಚರಣ್ ಪ್ಲೀಜ್ ಕಮ್ ಹಾಂ ಬಾಂಬೆ ವಿಷಯ ಏನಾಯ್ತು ?

ಚರಣ್– ಭಾಸ್ ಮನೆಯಲ್ಲಿ ಎಲ್ಲರೂ ಕ್ಷೇಮವಾಗಿದ್ದಾರೆ. ಆದರೆ–

ವಜ್ರ– ಅದೇನು ಚರಣ್ ಆದರೆ ಉದ್ಗಾರವೇಕೆ ?

ಚರಣ್– ಅಮ್ಮಾ ಅವರಿಗೆ ನಿಮ್ಮದೆ ಚಿಂತೆ.

ವಜ್ರ– (ನಕ್ಕು) ಹೌದು ನನ್ನ ಕೈ ಹಿಡಿದವಳಿಗೆ ನನ್ನದೇ ಚಿಂತೆ. ಆದರೇ ನನಗೆ ನಿತ್ಯವೂ ಹೊಸ ಹಕ್ಕಿಯನ್ನು ಬೇಟೆಯಾಡುವ ಚಿಂತೆ,

ಕೋಟ್ಯಾಧೀಶನಾದ ನಾನು, ಹೆಂಡತಿ ಮಕ್ಕಳನ್ನು ಬಾಂಬೆಯಲ್ಲಿ ಬಿಟ್ಟು, ಏಕಾಂಗಿಯಾಗಿ ಈ ಎಸ್ಟೇಟಿನಲ್ಲಿರುವುದು ಸ್ವೇಚ್ಛೆಯಾಗಿ ಸುಖ ಅನುಭವಿಸುವುದಕ್ಕಾಗಿ ಸೇಡು ತೀರಿಸಿಕೊಳ್ಳುವುದಕ್ಕಾಗಿ.

ಚರಣ್– ಭಾಸ್ ನಾಳೆ ಇಲ್ಲಿಗೆ ಎಜ್ಯುಕೇಶನ್ ಮಿನೀಸ್ಟರ್ ವಿಜಿಟ್ ಮಾಡ್ತಾರಂತೆ.

ವಜ್ರ– ಹೌದೇನು ಒಳ್ಳೆಯ, ಸುಸಂಧಿ ಹಾಗಾದರೆ ನಾಳೆ ನೀನು ಆ ಸಭೆಗೆ ಹೋಗಿ ಐದು ಲಕ್ಷ ರೂಪಾಯಿಗಳನ್ನು ಕಾಲೇಜಿಗೆ ದಾನ ಮಾಡಿ ಬಂದು ಬಿಡು.

ಚರಣ್– ಆ ಸಭೆಗೆ ತಾವೇ ಅಧ್ಯಕ್ಷತೆಯನ್ನು ವಹಿಸಬೇಕೆಂದು ಪ್ರಿನ್ಸಿಪಾಲರು ಫೋನ್ ಮಾಡಿದ್ದರು.

ವಜ್ರ– ನಾನು ನಂತರ ಬರುವೆ. ನೀನೇ ಮೊದಲು ಹೋಗಿ ಈ ವಿಷಯ ಪ್ರಕಟ ಪಡಿಸು. ನಾನು ತಡವಾಗಿ ವೇದಿಕೆಗೆ ಬಂದಾಗ ಹರ್ಷೋದ್ಗಾರ, ಚಪ್ಪಾಳೆಗಳ ಸುರಿಮಳೆ ಯಾಗುತ್ತಿರಬೇಕು ಇವೆಲ್ಲಾ ನಾಟಕ ಜನಾನುರಾಗ ಗಳಿಸಲಿಕ್ಕೆ ಬೇಕು. ಅರ್ಥವಾಯಿತೇ

ಚರಣ್– ಐದು ಲಕ್ಷ ರೂಪಾಯಿ ಚೆಕ್ ಕೊಡಬೇಕೆ ? ತಮ್ಮಿಚ್ಛೆ

ವಜ್ರ– ಹೂಂ. ಐದು ಲಕ್ಷಕೊಟ್ಟು, ಐವತ್ತು ಲಕ್ಷ ಪಡೆಯಬಹುದು. ದೇಶದಲ್ಲಿ ಜನ ಮರಳು ಮಾಡುವುದೇನೂ ದೊಡ್ಡ ಮಾತಲ್ಲ, ಮೊದಲು ಈ ವಜ್ರಮುನಿ ಕಲಿಯುಗದ ಪ್ರತ್ಯಕ್ಷ ದೈವವೆಂದು ಪ್ರಚಾರ ಪಡೆಯಬೇಕು ಅಂಡರ್ ಸ್ಟಾಂಡ್

ಚರಣ್– ಎಸ್ ಸಾರ್.

ವಜ್ರ– (ಸಿಗರೇಟ್ ಹಚ್ಚಿ) ಲೇ ಚರಣ್ ನಮ್ಮ ಭಾಗಕ್ಕೆ ಯಾವಳೋ ದೊಡ್ಡ ಡ್ಯಾನ್ಸರ ಬಂದಿದ್ದಾಳಂತಲ್ಲಾ.

ಚರಣ್– ಹೌದು ಭಾಸ್, ಜ್ಯೋತಿ ಎಂದು ಅವಳ ಹೆಸರು. ಮೊನ್ನೆ ಅವಳ ಪ್ರೋಗ್ರಾಂಗೆ ಹೋಗಲು ಬಹಳ ಪ್ರಯತ್ನ ಪಟ್ಟೆ, ಕೆಲಸದ ಗಡಿ ಬಿಡಿಯಲ್ಲಿ ಟಿಕೆಟ್ ಸಿಗಲಿಲ್ಲ.

ವಜ್ರ– ಆಂ ಹಾಂ. ಅಷ್ಟೊಂದು ಡಿಮ್ಯಾಂಡ್ ಇದೆಯೇನು ಅವಳಿಗೆ ?

ಚರಣ್– ಅವಳ ಮೋಹಕ ರೂಪಕ್ಕೆ, ಗೆಜ್ಜೆಯ ಕುಣಿತಕ್ಕೆ ಮರುಳಾಗದವರೇ ವಿರಳವಂತೆ.

ವಜ್ರ– (ಆಶ್ಚರ್ಯದಿಂದ) ಹೌದೇನು ಹಾಗಾದರೆ ಅವಳ ಘನತೆಗೆ ತಕ್ಕ ಸ್ಥಳ ಅದಲ್ಲ ಬೇಗ ನಮ್ಮ ಎಸ್ಟೇಟಿಗೆ ಬರ ಮಾಡು.

ಚರಣ್– ಭಾಸ್ ಅವಳ ಮೋಹ ಪಾಶದಲ್ಲಿ ಆ ಶಂಕರ ಹುಚ್ಚನಂತೆ ಬಿದ್ದಿದ್ದಾನೆಂದು ಜನ ಮಾತಾಡುತ್ತಿದ್ದಾರೆ.

ವಜ್ರ– ಏನೆಂದೆ ? ಆ ಬ್ಲಡೀ ರ್‍ಯಾಸ್ಕಲ್ ಶಂಕರ ಅವಳ ಹಿಂದೆ ಬಿದ್ದಿರುವನೇನು.

ಚರಣ್– ಮನೆ ಮಕ್ಕಳನ್ನು ತೊರೆದು ಅಲೆಯುತ್ತಿದ್ದಾನಂತೆ ನಾಯಿಯ ಹಾಗೆ ಅವಳ ಹಿಂದೆ.

ವಜ್ರ– ಹಾಗಾದರೆ ಒಳ್ಳೇಯದೇ ಆಯ್ತಲ್ಲ. ಅವಳ ಹಿಂದೆ ಅಲೆದಲೆದು ಅವನ್ನು ಭಿಕಾರಿಯಾಗಲಿ, ಅವನ ಕಣ್ಣೆದುರೇ ಅವಳನ್ನು ಅಪ್ಪಿಮುದ್ದಾಡಿ ಬಿಡುವೆ, ಆಗ ಹುಚ್ಚನಾಗಿ ಅವನು ಓಣಿ ಕೇರಿಗಳಲ್ಲಿ ತಿರುಗಬೇಕು ಅವನ ಹೆಂಡತಿ ಅವನಿಂದ ದೂರಾಗಬೇಕು. ಆಗ, ಆ ಲಕ್ಷ್ಮೀ ನನಗೆ ದಕ್ಕಬೇಕು. (ನಕ್ಕು, ಸಿಗರೇಟು ಒಗೆಯಲು ಚರಣ್ ಹಿಡಿದುಕೊಳ್ಳುವನು) ಒಂದೇ ಹೊಡೆತಕ್ಕೆ ಎರಡು ಹಕ್ಕಿಗಳು ಬಲಿಯಾಗಬೇಕು. ಒನ್ ಶಾಟ್ ಟೂ ಬರ್ಡ್ಸ್ ಇದು ವಜ್ರಮುನಿಯ ಸ್ಪೇಶಾಲಿಟಿ.

ಚರಣ್– ಭಾಸ್ ಫಾರೆನ್ ವಿಸ್ಕಿ ತಂದಿರುವೆ.

ವಜ್ರ– ಗುಡ್ ಬಾ. ತೃಪ್ತಿಯಾಗುವವರೆಗೂ ಕುಡಿದು ಬಿಡೋಣ. (ಹೋಗುವರು)

===***====***===

ಮೂರನೆಯ ಪ್ರವೇಶ

ರಸ್ತಾ ದೃಶ್ಯ

(ಬಗಲಿಗೆ ಬ್ಯಾಗ್ ಹಾಕಿಕೊಂಡು ಜುಬ್ಬಾ ಪಾಯಿಜಾಮ್ ಧರಿಸಿದ ಕವಿ ಚಂದ್ರೇಗೌಡರು ಆಗಮಿಸುವರು)

ಚಂದ್ರ– ಕರ್ನಾಟಕದ ಸುಪ್ರಸಿದ್ಧಕವಿಗಳಾದ ಶ್ರೀ ಚಂದ್ರೇಗೌಡರು, ಅಂದ್ರ ನಾವುಗಳು ಈ ಊರಿಗೆ ಪಾದಾರ್ಪಣೆ ಮಾಡಾಯ್ತು. ಈ ಪುರದ ಪುಣ್ಯವೋ ? ಇಲ್ಲಾ ಈ ನೆಲದ ಭಾಗ್ಯವೊ ನಾವಿಲ್ಲಿಗೆ ಬಂದೀವಿ ಅಂದಾಗ ಇಲ್ಲಿ ಯಾರನ್ನು ರೊಕ್ಕಾ ಕೆಳಬೇಕು ಅನ್ನೋದಾ ತಿಳಿದಂಗಾಗ್ಯೆತಿ. ಮುಂಜಾನೆ ಅವರಿವರ ಪರಿಚಯ ಹೇಳಿ ಮಂಡಾಳ ವೀರ ಭದ್ರಪ್ಪನ ಹೋಟೆಲದಾಗ ಎರಡು ರೂಪಾಯಿ ಉದ್ರಿಹೇಳಿ ಬಂದ್ಯಾ. ಈಗ ಹೊಟ್ಟಿ ಕೆರಿಲಿಕ್ಕ ಹತ್ತ್ಯೆತಿ. (ಬದಿಗೆ ನೋಡಿ) ಹಾಂ. ಅಲ್ಲಿ ಯಾವದೋ ಒಂದು ಗಂಡು ನರ ಪ್ರಾಣಿ ಬಂತು. ಧೈರ್ಯ ಮಾಡಿ ಕೇಳೇ ಬಿಡ್ತೀನಿ. ಇದಕ್ಕೆಯಾಕೆ ನಾಚಿಕೆ ? ನಾಚಿಕಿ ಪಟ್ರ ಹೊಟ್ಟೆ ತುಂಬಬೇಕಲ್ಲ, ಇಡೀ ಕರ್ನಾಟಕಕ್ಕೂ ಪರಿಚಯ ಇರೋ ನಾನು. ಅವನಿಗೆ ಪರಿಚಯ ಇರೊಂಗಿಲ್ಲೇನು? (ವಿಚಿತ್ರವಾಗಿ ಹೇರಸ್ಟೈಲ ಮಾಡಿಕೊಂಡು ಕುಬೇರ ಪ್ರವೇಶಿಸುವನು) ಹಿ....ಹಿ...ಹಿ...ನಮಸ್ಕಾರ ನಮಸ್ಕಾರ.

ಕುಬೇರ– (ಸ್ವಗತ) ಹಾಂ. ಇವನು ಏಕಾ ಏಕಿ ನನಗ ನಮಸ್ಕಾರ ಅಂತ, ಅನ್ನ ಬೇಕಾದ್ರ ನನ್ನ ನಟನಾ ಸಾಮರ್ಥ್ಯ ಇವನಿಗೆ ಸರಿಯಾಗಿ ತಿಳಿದಿರಬೇಕು. ಅಂತೂ ನಟರತ್ನ, ನಟಶೇಖರ ಕುಬೇರ ಅಂದ್ರ ನಾನು ಇವತ್ತು ಏಳೋ ಕಾಲಕ್ಕೆ ಜೋಲ ಮುಸುಡಿ ನೋಡಿ ಎದ್ದೀನಿ, ಇವನಾ ಯಾವಾಗ ಮಾತಾಡಿಸ್ಯಾನ ಅಂದಾಗ, ಇವನ್ನಾ ಖರ್ಚಿಗೆ ರೊಕ್ಕಾ ಕೇಳಿದ್ರಾತು.

ಚಂದ್ರ– ಹಾಂ. ಅಲೇ ಇವನಾ ಒಬ್ಬಾ ಮಾತಾಡಲಿಕ್ಕ ಹತ್ತಾನಲ್ಲ ಇವನು, (ಜೋರಾಗಿ) ರೀ ನಮಸ್ಕಾರದರ್ರಿ, ನಾನು ಪರಿಚಯ ಹತ್ತಲಿಲ್ಲಾ......?.....ನಾನ್ರಿ......ಕರ್ನಾಟಕದ ಕವಿ ಚಂದ್ರ

ಕುಬೇರ– ಕರ್ನಾಟಕದ ಕವಿಚಂದ್ರ ಅಂದ್ರೆ ನಲವಡಿ ಶ್ರೀ ಕಂಠ ಶಾಸ್ತ್ರಿಗಳು ಏನ್ರಿ

ಚಂದ್ರ– ಉಂ. ಹುಂ. ನಾಟ್ಯ ಕವಿರಾಜ ಕವಿತಿಲಕ.

ಕುಬೇರ– ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು

ಚಂದ್ರ– ಅಲ್ರಿ ಕರ್ನಾಟಕ ಶೆಕ್ಸಪೀಯರ್.

ಕುಬೇರ– ಕಂದ್ಗಲ್ ಹನುಮಂತರಾಯರೇನು ?ಅಲ್ರಿ ಇವರೆಲ್ಲಾ ಸ್ವರ್ಗಸ್ಥರಾಗಿ ಎಷ್ಟು ವರ್ಷಾತು ? ಏನು ಕತಿ ?

ಚಂದ್ರ– ಅವರೆಲ್ಲಾ ಸ್ವರ್ಗಸ್ಥರಾಗ್ಯಾರ್ರಿ, ಅದ್ರ ನಾನಾಗಿಲ್ಲಲ್ಲ. ಪೂರ್ತಿ ಕೇಳ್ಯಾರಕೇಳ್ರಿ, 'ಕನ್ನಡ ಕುವರ' ಕನ್ನಡಮ್ಮನ ಕಂದ'ಶ್ರೀ ಚಂದ್ರೇಗೌಡ್ರು, ಕವಿಗಳುನಾವು ಈ ಹೆಸರು ಕೇಳಿಲ್ಲಾನೀವು.

ಕುಬೇರ– ಹೇ ಇಲ್ಲ ಬಿಡ್ರಿ.

ಚಂದ್ರ– ಏನು ಮಾತಾಡ್ತೀರಿ ನೀವು ? ನನ್ನ ಹೆಸರು ಇಡೀ ಕರ್ನಾಟಕಕ್ಕಾ ಗೊತ್ತೈತಿ. ನಿಮಗ ಗೊತ್ತಿಲ್ಲಾ ? ಹಾಂ ಗೊತ್ತಿರದಿದ್ರ ಏನಾತು ಈಗಾರ ಚೋಲತ್ತಿನಾಗ ಕೇಳ್ಯಾರ ಕೇಳ್ರಿ.

ಕುಬೇರ– ಅಂದ ಹಾಗೆ ನನ್ನ ಪರಿಚಯ ಕುಬೇರ ಅಂತ.

ಚಂದ್ರ– ಅಲಕಾಪುರಿ ಪಟ್ಟಣದ ಅರಸ ಏನಪಾ.

ಕುಬೇರ– ಅಲ್ರಿ ನಟಭಯಂಕರ. ನಟಸಾರ್ವಭೌಮ.

ಚಂದ್ರ– ರಾಜಕುಮಾರರೇನು ?

ಕುಬೇರ– ಉಂ. ಹುಂ. ನಟಶೇಖರ, ಕಲಾರತ್ನ

ಚಂದ್ರ– ಕಲ್ಯಾಣಕುಮಾರೇನ್ರಿ

ಕುಬೇರ– ಯಾವ ಕುಮಾರನೂ ಅಲ್ರಿ. ಕುಬೇರ, ಕುಬೇರ, ನಾಟ್ಯ ರಂಗದಲ್ಲಿ ಅವಿಶ್ರಾಂತವಾಗಿ. ಸೇವೆ ಸಲ್ಲಿಸಿದ ಧೀಮಂತ ನಟ.

ಚಂದ್ರ– ಅಂದ್ರ ಈಗ ನಿವೃತ್ತರಾಗಿರೇನು ?

ಕುಬೇರ– ಕಲೆಗೆ ಎಲ್ಲಿ ನಿವೃತ್ತಿ ? ಈಗ್ಲೂ ಚಾಲ್ತಿಯಾಗ ಅದಿವ್ರಿ, ಆದ್ರ ಈಗ ಪರಿಸ್ಥಿತಿ ಗಂಭೀರ ಆಗೇದ. ಅಂದ ಹಾಗೆ ಖರ್ಚಿಗೆ ಒಂದ್ಹತ್ತು ರೂಪಾಯಿ ಕೈಗಡ ಕೊಡ್ತಿರೇನು

ಚಂದ್ರ– ಹಾಂ. ನನಗಾ ಉಲ್ಟಾ ಕೇಸು ಮಾಡಿದೇನು ? ನಿನ್ನ ಹೆಸರು ಏನೋ ಅಂದೆಲ್ಲ ಕುಬೇರ ಏನಪ್ಪಾ ಧನ್ಯಭಾರತಾಂಬೆ ನೀನೇ ಧನ್ಯ. ಹೌದ್ಹೋಗು, ಸರಿಮೊದ್ಲು ದಾರಿ ಬಿಡು.

ಕುಬೇರ– ರೀ ರೀ ಕವಿಗಳಾ ಹೊಂಟಾ ಬಿಟ್ರೆಲ್ಲಾ

ಚಂದ್ರ– ಆತಲ್ಲ ಕೆಲಸ ಇನ್ನೇನು ಐತೀ ? ಒಳ್ಳೇ ಠೀವಿಯಿಂದ ಬಂದ್ರೆಲ್ಲಾ ನಿಮ್ಮನ್ನಾ ರೊಕ್ಕಾ ಕೇಳಬೇಕಂತ ನಾನು ಆನಕೊಂಡ್ರ. ನನಗಾ ಹತ್ತು ರೂಪಾಯಿ ಕೇಳಿದ್ರೆಲ್ಲಾ ಕುಬೇರ ಮಹಾರಾಜರೇ

ಕುಬೇರ– ರೊಕ್ಕಾ ಕೊಡದಿದ್ರೂ ಚಿಂತೆಯಿಲ್ಲ. ಒಂತಟಗು ನಿಂತುಗೊಳ್ರಿ

ಮನ್ಮಥ– (ಅವಸರದಿಂದ ಬಂದು) ಏನದು ? ಏನ್ರಿ ಅದು ಗಂಡ ಗಂಡಸರ ಜಗಳ

ಚಂದ್ರ– ಯಾಕ ? ನಿಮಗೆ ಗಂಡು ಹೆಣ್ಣಿನ ಜಗಳ ಬೇಕಾಗಿತ್ತೇನು?

ಮನ್ಮಥ– ಹೂಂ. ಮತ್ತೆ ಗಂಡು ಹೆಣ್ಣು ಗುದ್ದಾಡಿದ್ರಾ ಏನಾರ ಒಂದು ಯಡವಟ್ಟಾಗಿ ಬಸುರಾದ್ರ ಅಪ್ರೇಶನ್ ಮಾಡಸ್ತಿದ್ದೆ. ನಾನ್ಯಾರು ? ಅನ್ನೋದು ಗೊತ್ತಾತಿಲ್ಲಾ.

ಕುಬೇರ– ಕತ್ತರಿಸುವರು ಅಂತ ಹೇಳಿದ್ರೆಲ್ಲಾ

ಮನ್ಮಥ– ದೇಶದ ಸರ್ವ ಕುಟುಂಬಗಳನ್ನೂ ನಿಯಂತ್ರಣದಲ್ಲಿಡೋ ಕುಟುಂಬ ಕಲ್ಯಾಣದ ಕಾರ್ಯಕರ್ತ ಮನ್ಮಥ.

ಚಂದ್ರ– ಮಕಾ ನೋಡಿದ್ರಾ ಗೊತ್ತಾಗತೈತಿ ಏಕದಂ ಮನ್ಮಥ ಅಂತ.

ಕುಬೇರ– ಇಷ್ಟಾ ಹೌದಿಲ್ಲಾ ನಿನ್ನ ಹಣೇ ಬರಹ ನಾನೆಲ್ಲೋ ಈವ ಕುಟುಂಬ ಕಲ್ಯಾಣದ ಫಾದರ ಇರಬೇಕು ಅಂತ ಮಾಡಿದ್ದೆ. ಕಾರ್ಯಕರ್ತರೇನು? ನೀವು ಇದಿಷ್ಟಕ್ಕಾ ಯಾಕ ಬೋರ್ಡು ಹಾಕ್ಕೊಂತೀರಿ ? ಈಗ ಎಲ್ಲಾ ಸರಕಾರಿ ನವಕರಿದಾರರು ಕಂಪಲ್ ಸರಿ ಹತ್ತತ್ತು ಕೇಸು ಕೊಡಾರ ಬೇಕು

ಮನ್ಮಥ– ಅದಿರಲಿ ನೀವು ಯಾರ‍್ಯಾರು ?

ಕುಬೇರ– ನಾನು ನಟ ಭಯಂಕರ, ನಟ ಶಿರೋಮಣಿ ಕುಬೇರ ಅಂತ. ಇವರು ಅದಾರಲ್ಲ ಇವರು ಕರ್ನಾಟಕದ ಸೆಕ್ಸ್......

ಮನ್ಮಥ– ಹಾಂ. ಸೆಕ್ಸ್ ಬಾಂಬಾ ಅಲ್ರಿ ಈ ಹೆಸರು ಕಾರವಾರ ಸುಮತಿಯವರು ಅಷ್ಟಾ ಇಟಗೊಂಡಿದ್ರು.

ಚಂದ್ರ– ದೇವೇಗೌಡ್ರು ಪ್ರಧಾನಿ ಆದಾಗಿಂದ ನಮಗ ಬಂತು ಆ ಹೆಸರು, ಏನ್ರೀ ನೀವೂ ಸೆಕ್ಸ್ ಅಂತ ಅರ್ಥಕ್ಕೆ ನಿಲ್ಲಿಸ್ತೀರಿ ಸೆಕ್ಸ ಪಿಯರ್ ಕವಿಗಳು. ಅಂತ ಹೇಳ್ರೀ. ಅಲ್ರಿ ಇಷ್ಟೊಂದು ಯಾವಾಗ ವಿಚಾರ ಮಾಡ್ರೀ ರಂದಮ್ಯಾಗ ನೀವೇನಲಾರ ಕೊಡೋಹಾಂಗ ಅದಿರೇನು ?

ಮನ್ಮಥ– ಏನು ? ಕೊಡೋದು ತಲಿ.

ಕುಬೇರ– ತಲಿ ಅಲ್ರಿ ತಲಿಗಿ ಹತ್ತತ್ತು ರೂಪಾಯಿ.

ಮನ್ಮಥ– ಹತ್ತು ರೂಪಾಯೀ ಯಾಕ ? ತೆಲಿಗಿ ಐವತ್ತು ರೂಪಾಯಿ ಕೊಡಸ್ತೀನಿ. ನಾನು ಹೇಳಿದಂಗ ಕೇಳ್ತೀರಾ ?

ಚಂದ್ರು– (ಅವಸರದಿಂದ) ನೀವು ಹೇಳಿದಾಂಗ ಕೇಳ್ತೀವಿ ಹೇಳ್ರಿ ಹಾಂಗಾದ್ರ ಹಿಮಾಲಯ ಪರ್ವತಾನ ತಂದು ಇಡ್ರಿ ಅಂದ್ರೂ ಇಡತೀವಿ.

ಮನ್ಮಥ– ಹಿಮಾಲಯ ಪರ್ವತಕ್ಕ ಯಾಕ ಹೋಗ್ತೀರಿ ಸಮ್ಮಕ ದೂರ. ಇಲ್ಲೇಸಿದಾ ಸಿದ್ದಾಪೂರ ಸರಕಾರಿ ಆಸ್ಪತ್ರೆಗೆ ನಡಿರಿ ? ಅಲ್ಲೇ ಕತ್ತರಿಸಿ

ಕುಬೇರ– ನಮ್ಮನ್ನು.......ಕತ್ತರಿಸಿ.....

ಚಂದ್ರ– ಕೈಯಾಕ ಕೊಡ್ತೀಯಾ.....? ರೂಪಾಯೀನ ? ಏನಂತ ತಿಳಿದಿರಿ ನಮ್ಮನ್ನ ಇದಾ ಮಾತು ಬೇರೆ ಯಾರಾದ್ರೂ ಅಂದಿದ್ರ......

ಮನ್ಮಥ– ಏನಾಗುತ್ತಿತ್ತಪ್ಪಾ ?

ಕುಬೇರ– ಇನ್ನೇನಾಗಬೇಕು. ಯುದ್ಧಾ.......ಮೂರನೆಯ ಮಹಾಯುದ್ಧ ಆಗುತ್ತಿತ್ತು ಅಂದ್ಯಾ

ಚಂದ್ರ– (ಬದಿಗೆ ಹೋರಿಸಿ) ಆಗೇ ಬಿಡ್ತಲ್ಲಾ ಯುದ್ಧಾ, ಅದೋ ಅಲ್ಲಿ ನೋಡ್ರಿ ಬಿತ್ತಲ್ಲ ಅಣು ಬಾಂಬು.

ಕುಬೇರ– ಬಾಂಬು......(ಹೊರಳಿ)

ಚಂದ್ರ– ಸೆಕ್ಸ್ ಬಾಂಬ್

ಮನ್ಮಥ– ಹಾಂ. ಎಲ್ಲಿ (ಸುತ್ತಲೂ ತಿರುಗಿ)

ಚಂದ್ರ– ಹಾಂ. ಎಲ್ಲಿ (ಸುತ್ತಲೂ ತಿರುಗಿ)

ಚಂದ್ರ– ಇಲ್ಲೇ ಬಂತಲ್ಲಾ (ಪ್ಯಾಶನ್ನಿನಲ್ಲಿ ಅರುಣಾ ಬರುವಳು) ಜ್ಯೋತಿ ಲಕ್ಷ್ಮೀ, ಜ್ಯಯಮಾಲಿನಿ, ಅನುರಾಧ, ಡಿಸ್ಕೋಶಾಂತಿ, ಕಾರವಾರ ಸುಮತಿ ಬಳ್ಳಾರಿ ಜ್ಯೋತಿ. ಇವರೆಲ್ಲರ ಸಾಕಾರ ಮೂರ್ತಿ

ಅರುಣ– ಏನ್ರಿ ನನ್ನನ್ನೇನು ಡ್ಯಾನ್ಸ ಮಾಡವಳಂತ ಮಾಡೀರೇನು ?

ಚಂದ್ರ– ನನಗಂತೂ ಏನೂ ಕಂಡಿಲ್ಲಾ, ನಿಮಗೇನಾರ ಕಂಡಿ ತೇನ್ರಿ ? ಅಲ್ಲಾ ನೀವು ಎಷ್ಟೊಂದು ಹಗುರಾಗಿ ಮಾತಾಡ್ತೀರಲ್ಲಾ ನಮ್ಮನ್ನು ಯಾರಂತ ತಿಳಿದಿರಿ ? ಕರ್ನಾಟಕದ ಕೀರ್ತಿಯನ್ನು ಕೊಪ್ಪಳ ಜಿಲ್ಲೆಯಲ್ಲಿ ಬೆಳಗಿಸಿದ ಕವಿ ಪುಂಗವ ನಾನು.

ಅರುಣ– ಕೊಪ್ಪಳದಾಗ ಬೆಳಗಿಸಿರಾ ?

ಮನ್ಮಥ– ೪೫ ಡಿಗ್ರಿ ಉರಿಬಿಸಿಲು ಇರುತ್ತಲ್ಲಾ ಅದಕ್ಕಾ ಹೇಳ್ತಾನ.

ಕುಬೇರ– ಅಖಿಲ ಭಾರತದ ಕಲಾ ವಂತಿಕೆಯನ್ನು ಗಂಗಾವತಿಯಲ್ಲಿ ಬೆಳಗಿದ ಏಕೈಕ ಕಲಾ ಪುಂಗವ ಕುಬೇರ ನಾನು.

ಅರುಣ– ಗಂಗಾವತಿಯಾಗ ? ಎತ್ಲಾಗ ಬೆಳಗೀರಿ.

ಮನ್ಮಥ– ರೀಜರ್ ಜಾಲಿ ಗಿಡದಾಗ ಪಂಪಾನಗರದಿಂದ ಸಿದ್ಧೀಕೇರಿಗೆ ಹೊಂಟ್ರ ಸಿಗುತ್ತಲ್ಲಾ ಅಲ್ಲೇ ಗಂಗಾವತಿ ಬೀಚಿ ಪ್ರಾಣೇಶನ ಹತ್ರ.

ಅರುಣ– ಮನ್ಮಥರಾವನ ಕಡೆ ತಿರುಗಿ ಇನ್ನ ನೀವು......

ಮನ್ಮಥ– ನಾವಾ ಹಿ.....ಹಿ...ಹಿ... ನಾವು ಕಂಡ ಕಂಡಾಂಗ ಹಡಿಯೋದನ್ನ ತಪ್ಪಿಸಿ, ದೇಶೋದ್ಧಾರ ಮಾಡುವ ಕನ್ನಡಿಗರ ಏಕೈಕ ಕಣ್ಮಣಿ.

ಅರುಣ– ಹಂಗಂದ್ರ ಏನ್ರಿ, ಸಂಪೂರ್ಣ ವಿಷಯ ಅರ್ಥ ಆಗಲಿಲ್ಲ ನನಗ.

ಚಂದ್ರ– ಕಂಡಂಗ ಕತ್ತರಿಸುವರು, ಏಕಾಕ್ಷಿರಾಯರು. (ಒಂದೇ ಕಣ್ಣಿನಿಂದ ನೋಡಿ ವ್ಯಂಗ್ಯವಾಗಿ)

ಕುಬೇರ– ಫ್ಯಾಮಿಲಿ ಪ್ಲಾನಂಗ ಏಜಂಟ್ ಆಫ್ ಇಂಡಿಯಾ.

ಚಂದ್ರ– ಅದೆಲ್ಲಾ ಈಗ್ಯಾಕ ಪುರಾಣ ? ನೀವೇನಾರ ಕೊಡ್ತಿರೇನು.

ಅರುಣ– (ಆಶ್ಚರ್ಯದಿಂದ) ಹಾಂ. ನಾನು ಏನಂದ್ರಿ ?

ಮನ್ಮಥ– ಮೊದ್ಲು ವಿಚಾರ ತಿಳಕೊಳ್ರಿ, ಸುಮ್ನ ಅಪಾರ್ಥಮಾಡಿಕೊಳ್ಳ ಬ್ಯಾಡ್ರಿ.

ಕುಬೇರ– ಕವಿ ಕಲಾವಿದರಾದ ನಮಗೆ, ತೆಲಿಗಿ ಹತ್ತತ್ತು ರೂಪಾಯಿ ಕೊಡ್ರಿ, ನಿಮ್ಮದೇನು ನಮ್ಮಪ್ಪನ ಮನ ಗಂಟು ಹೋಗೋದಿಲ್ಲ.

ಅರುಣ– ಏನಂದ್ರಿ ? ನಡಾ ಹಾದ್ಯಾಗ ನಿಂತುಗೊಂಡು, ಯದ್ವಾ ತದ್ವಾ ಮಾತಾಡಿದ್ದಲ್ದ ಮತ್ತೆ ಹತ್ತು ರೂಪಾಯಿ ಕೊಡಬೇಕಾ ?

ಕುಬೇರ– ತಪ್ಪದಂಡ ತಪ್ಪದಂಡಾ.

ಚಂದ್ರ– ಉಂ. ಹುಂ. ತಲಿಪಟ್ಟ ಜಕಾತಿ ಕೊಡ್ರಿ.

ಅರುಣ– ಸ್ವಲ್ಪಾದ್ರೂ ನಾಚಿಕಿ ಅನ್ನೋದು ಐತೇನು ? ನಮ್ಮ ಮೂವರ ಮುಸುಡಿ ಮ್ಯಾಗ, ನಿಮಗಿರದಿದ್ರೂ ಬ್ಯಾಡ ಕೊನೆ ಪಕ್ಷ ಮೂಗಿನ ಕೆಳಗಿ ಬಂದೀರೋ ಆ ಮೀಸೆಗಾದ್ರೂ ಬ್ಯಾಡೇನು ?

ಮನ್ಮಥ– ಹಾಂ.....ಏನು ಮಾತಿದು ?

ಕುಬೇರ– ಕನ್ನಡ ಪ್ಯೂರ ಕನ್ನಡ, ಅರ್ಥ ಆಗಲಿಲ್ಲೇನು ನನಗ.

ಚಂದ್ರ– ಅರ್ಥ ಆತು. ಆದ್ರೂ ವಿಚಿತ್ರ.

ಅರುಣ– ಏನ್ರಿ ಅದು ವಿಚಿತ್ರ.

ಚಂದ್ರ– ಆಲ್ರಿ ಮೀಸೆ ಬರೋದು ಮೂಗಿನ ಕೆಳಗಾ ಮತ್ತ ಬ್ಯಾರೆ ಕಡೆಗೆ ಬರ್ತಾವೇನು ? ನಿಮ್ಮ ಹೆಸರು ಏನಂದ್ರಿ ?

ಅರುಣ– ನನ್ನ ಹೆಸರು, ನಿಮಗ......ನಿಮಗ ಹೇಳಬೇಕಾ ....ಅಂಥಾ ಲೂಜ್ ಅಲ್ರಿ ಈ ಅರುಣ.

ಮನ್ಮಥ– ಸಾಕ್ರಿ ಸಾಕ್ರಿ ಟೈಟಾ ಇರವಲ್ದಾಕ ಹೇಳಬ್ಯಾಡ್ರಿ.

ಚಂದ್ರ– ಕರ್ನಾಟಕದ ಕಲಾ ಶ್ರೀಮಂತಿಕೆಯನ್ನು ಹೆಚ್ಚಿಸಿದ ತಾಯಿ ಶಾರದಾಂಬೆಯ, ವರಪುತ್ರರಾದ ನಮಗೆ, ಹತ್ತು ರೂಪಾಯಿಗೆ ಇಲ್ಲಾ. ಹಾಂಗಾದ್ರ ಯಾಕ ಬದುಕಬೇಕು ನಾವು ? ಈಗ್ಲೇ ಸೀಮೆಎಣ್ಣೆ ಸುರಕೊಂಡು ಸಾಯ್ತೀವಿ.

ಕುಬೇರ– ತಡಮಾಡಬ್ಯಾಡ್ರಿ ಕೊಡ್ರಿ ಚಿಮಣಿ ಎಣ್ಣೆಗೆ ರೊಕ್ಕಾ.

ಮನ್ಮಥ– ಅಷ್ಟು ಮಾಡ್ರಿ ತರಿಸೋ ಕೈಲಿ ಒಂದು ಹತ್ತು ಲೀಟರ್ ಜಾಸ್ತಿ ತರಸ್ರಿ.

ಅರುಣ– ಥೇಟಾ ಬಂಡಗಟ್ಟರಿ ನೀವು.

ಚಂದ್ರ– ಬಾಳ ಹೊತ್ತಿನ ಮಾಗ್ಯ ತಿಳಕೊಂಡ್ರಿ ನೀವು.

ಮನ್ಮಥ– ಬಾಳಯಕ್ಕಗಲಾಡತಾರ ಕೊಟ್ಟು ಬಿಡ್ರಿ ಒಂದು ಇಪ್ಪತ್ತು ರೂಪಾಯಿ.

ಅರುಣ– ನೀವು ಒಳ್ಳೇ ಗಂಟು ಬಿದ್ರಿ ನನಗ. ಅಲ್ರಿ ಅವರೇನು ನನಗ ಹತ್ತಿದವರಲ್ಲ ಹೊಂದಿದವರಲ್ಲ.

ಕುಬೇರ– ಹತ್ತಿಸಿಗೊಂಡ್ರ ಹತ್ತಿಗೊಂತೀವಿ.

ಚಂದ್ರ– ಹೊಂದಿಕಿ ಮಾಡಿಕೊಂಡು ನೋಡ್ರಿ ಅವಾಗ ಕೇಳ್ರಿ ಹೊಂದಿಕೊಂತಿವಾಯಿಲ್ಲಾ.

ಅರುಣ– ನೀವು ಫ್ಯಾಮಿಲಿ ಪ್ಲಾನಂಗ್ ಕಾರ್ಯಕರ್ತರೇನು ?

ಮನ್ಮಥ– ನಾನು ಇದಾ ಊರಾಗ ಇರ್ತೀನ್ರಿ, ಕಬ್ಬೇರ ಓಣ್ಯಾಗ ನನ್ನ ಮನಿ.

ಚಂದ್ರ– ಒಂದು ಹೆಣ್ಣು ಬಂದು ಏಕದಂ, ಹೆಸರು ಹೇಳಿದ ಕೂಡ್ಲೇ ಎಲ್ಲಾ ತಣ್ಣಗಾಗಿ ಬಿಡ್ತಾವು ಮಂದೀಗಿ ಕಬ್ಬೇರ ಓಣಿ ಸುದ್ಧಿ ಯಾಕ ತೆಗಿತಿ ಮಾರಾಯ ಎಂಥಾ ಮಬ್ಬು ಅದಿ ನೀನು.

ಅರುಣ– ನಿಮ್ಮ ಹೆಸರು ಏನಂದ್ರಿ,

ಚಂದ್ರ– ನನಗಾ ಕೇಳದ್ರ್ಯಾ ಹಿ....ಹಿ....ಹಿ.....ನಾನು ಚಂದ್ರಗೌಡ ಕವಿ ಈಗಾಗಲೇ ಕರ್ನಾಟಕದ ಮೂಲೆ ಮೂಲೆಯಲ್ಲೂ ನನ್ನ ಹೆಸರು ಮೊಳಗುತ್ತಿದೆ.

ಅರುಣ– ನಾನೇ ಕೇಳಿಲ್ಲಲ್ರಿ,

ಚಂದ್ರ– ನಿಮ್ಮ ಕಿವಿಯಾಗ ಕೂಕಣಿ ಇರಬೇಕು. ಅದಕ್ಕಾ ಕೇಳಿಲ್ಲ. ಹೋಗಿ ತೆಗಿಸಿಕೊಂಡು ಬರ್ರಿ,

ಮನ್ಮಥ– ಅವರು ಹೆಸರು ಬರೀ ಮೂಲ್ಯಾಗಷ್ಟಾ ಮೊಳಗೈತಿ. ಇನ್ನೂ ರೋಡಿಗೆ ಬಂದಿಲ್ಲಾ.

ಅರುಣ– ನಿಮ್ಮ ಹೆಸರು.

ಕುಬೇರ– ನಾವು ಅಸಮಾನ್ಯ ಕಲಾವಿದರು, ರಂಗ ಭೂಮಿಯ ಧೀಮಂತ ನಟರು, ಕುಬೇರ

ಚಂದ್ರ– (ಸ್ವಗತ) ಹಗಲೆಲ್ಲಾ ಕಟ್ಟಿ ಹಾಕಿ ಒದ್ರೂ ಐದು ಪೈಸಾ ಇಲ್ಲಾ

ಅರುಣ– ಅಲ್ಲಾ ಅದೇನಾ ಅಂತಾರಲ್ಲಾ. ಕೊಂಕುಳದಾಗ ಕೂಸು ಇಟುಗೊಂಡು ಊರೆಲ್ಲಾ ಹುಡುಕಿದ್ರಂತ.

ಮನ್ಮಥ– ಏನ್ರಿ ಹಂಗಂದ್ರ,

ಅರುಣ– ಅಲ್ರಿ ದೆವ್ವನಂಥಾ ಮನಿಷೇರು, ನೀವಾ ಮಗ್ಗಲು ಅದೀರಿ. ಹಿಡಕೊಂಡು ಹೋಗಿ ಕತ್ತರಿಸಿ, ತಲಿಗೆ ಐವತ್ತು ರೂಪಾಯಿ ಕೊಡನ್ರಿ.

ಚಂದ್ರ– (ಸಿಟ್ಟಿನಿಂದ) ಏನಂದ್ರಿ ನಮ್ಮ ಸಂತಾನ ಬೆಳಿಬಾರ್ದು ಅಂತೀರೇನು?

ಕುಬೇರ– ಅದರಿಂದ ಕರ್ನಾಟಕಕ್ಕೆ ತುಂಬಲಾರದ ನಷ್ಟ.

ಮನ್ಮಥ– ಈಗ ತಲಿಗೆ ಹತ್ತು ರೂಪಾಯಿ ಕೊಡೋದು ಅವರಿಗೆ ಕಷ್ಟ.

ಅರುಣ– ಬರ್ರಿ ಬರ್ರಿ ಅಲ್ಲೇ ಹೋಟಲದಾಗ ಹೇಳಿ ಹೋಗ್ತೀನಿ.

ಕುಬೇರ– ಪರವಾಗಿಲ್ರಿ ನೀವೂ ಒಳೆಯವರಾ ಅದೀರಿ–ಅರುಣ ಬಾಯಿಯವರಿಗೆ ಜಯವಾಗಲೀ ಅಂತ ಅನ್ರೊ,

ಉಳಿದವರು–ಜಯವಾಗಲಿ.

ಚಂದ್ರ– ಟಿಫಿನ್ ಮಾಡಿಸುವವರಿಗೆ.

ಉಳಿದವರು–ಜಯವಾಗಲಿ. (ಅರುಣಾ ಮುಂದೆ ಹೋಗಲು ಎಲ್ಲಾರೂ ಆಕೆಯನ್ನು ಹಿಂಬಾಲಿಸಿ ಹೋಗುವರು)

===**====**===

ನಾಲ್ಕನೆಯ ಪ್ರವೇಶ

ಜ್ಯೋತಿಯ ಶೃಂಗಾರಮಯ ಮನೆ

ರಾಣಿಸಾಬ–(ತನ್ನ ಸೆರಗಿನಿಂದ ಟೇಬಲ್ ಮೇಲಿನ ಸಾಮಾನುಗಳನ್ನು ಒರೆಸುತ್ತ ವೈಯ್ಯಾರದಿಂದ ಪದಾ ಹಾಡುತ್ತಿರುವನು)

ನಮ್ಮಕ್ಕನ ಸಾಮಾನುಗಳೆಲ್ಲಾ ಒರಸಿದಂಗೆಲ್ಲ ಏನು ಮಿಂಚುಬರ್ತಾವು ? ಹಂಗಾಕೊಲ್ಮಿಂಚು ಬಡದಂಗ ಕಣ್ಣಾಗ ಬಡಿತಾವು. ಈ ಮನ್ಯಾಗ ಇರೋ ಸಾಮಾನುಗಳೆಲ್ಲಾ ಏನು ಪುಣ್ಯ ಮಾಡ್ಯಾವೋ ಏನು ಕತಿ ? ಬಾಗಿಲಿಂದ ಹಿಡಿದು ಬಂಕದ ತನಕ ಸೇಂಟಿನ ಘಮ ಘಮ ಘಮಾಂತ ಮೂಗಿನಾಗ ಬಡಿತೈತಿ ಯಕ್ಕಾ.....ಬೇಯಕ್ಕಾ.

ಜ್ಯೋತಿ– (ಒಳಗಿನಿಂದ ತಲೆ ಬಾಚಿಕೊಳ್ಳುತ್ತ ಬಂದು) ಏನು ರಾಣೀ

ರಾಣಿ– ಬಂದ್ಯಾ ಬಾ, ಅಲ್ಲಬೇ ಅವೊತ್ತು ಅಂಗ್ಯೆಯಾಗ ಅರಮನಿ ತೋರಿಸಿ ಹೋದ. ಶಂಕರ ಮಾಮಾ ಇನ್ನೂ ಬರಲ್ಲಿಲ್ಲ. ಅದೇನಾ ಹೆಣ್ತೆವ್ವನ ಕೊಳ್ಳಾಗಿನ ಬಂಗಾರದ ಸರಾ ತರ್ತೀನಂತ ಹೇಳಿ ಹೋದ.

ಜ್ಯೋತಿ– ತರ್ತಾರೋ ರಾಣೀ ತರ್ತಾರೆ. ಒಮ್ಮೆ ನನ್ನ ಮುಖಾ ನೋಡಿ ಹೋದವರು ಎಂಥಾ ಚಕ್ರವ್ಯೂಹದಾಗ ಸಿಕ್ಕೊಂಡ್ರೂ ಸಹಿತ ಪಾರಾಗಿ ಬಂದಾ ಬರ್ತಾರ.

ರಾಣಿ– ಹೌದಬೆ ಯಕ್ಕಾ ನಿನ್ನ ಮಕಾ ಒಂಥರಾ ಆಯಸ್ಕಾಂತ ಇದ್ದಾಂಗ ಅಲ್ಲಬೇ ಆ ಶಂಕರ ಮಾಮಾನ ಹೆಣ್ತಿ ಬಾಳ ಬಾಯ್ ಬಡಕಿ ಅದಾಳಂತ ಆಕೇನು ಕೊಟ್ಟಾಳೋ ಇಲ್ಲೋ.

ಜ್ಯೋತಿ– ಇರಲಿ ಬಿಡೋ ಅದರ ಬಗ್ಗೆ ನೀನ್ಯಾಕ ತಲಿ ಕೆಡಿಸಿಕೊಂತಿ ಈ ರೂಪಸಿ, ಜ್ಯೋತಿಯ ಯೌವನ ಇಳಿಮುಖವಾಗುವ ತನಕ. ಶಂಕರನಂತಹ ಸಾವಿರಾರು ಗಂಡಗಳು ಸರದಿಯ ಪ್ರಕಾರ ಬಂದು, ನನ್ನ ಮನೆ ಬಾಗಿಲು ಕಾಯ್ತಾರೆ. ಹೆಣ್ಣಿನ ಕಡೆಗಣ್ಣಿನ ಕುಡಿನೋಟಕ್ಕೆ ಸೋಲದಂಥ ಗಂಡುಗಳಾರಿದ್ದಾರೆ. ಈ ಪ್ರಪಂಚದಲ್ಲಿ ? ಅಂತಹ

ವಿಶ್ವಾಮಿತ್ರ ಮಹರ್ಷಿಯೇ ಮೇನಕೆಗಾಗಿ ಸರ್ವಸ್ವವನ್ನು ಕಳೆದುಕೊಂಡಿರುವಾಗ ಸಾಮಾನ್ಯ ಈಗಿನ ಜನರು ಮನೆ ಮಡದಿಯನ್ನು ತೊರೆದು ಬರುವದೇನು ಮಹಾ.

ಶಂಕರ– (ಪ್ರವೇಶಿಸಿ) ಜ್ಯೋತಿ.

ಜ್ಯೋತಿ– ಓಹೋ ಬಂದಿರಾ ನನ್ನ ರಾಜಾ ಬನ್ನಿ, ಬನ್ನಿ (ವಯ್ಯಾರದಿಂದ)

ರಾಣಿ– ಮಾಮಾ ಮಾಮಾ ಶಂಕರ್ ಮಾಮಾ, ಅಯ್ಯಯ್ಯೋ ಬಿಸಿಲಾಗ ಬಂದು ಬಿಟ್ಟಿಯಲ್ಲಾ ಕುಂತಗಾ ಒಂದು ಚಂಬಿಗಿ ತಣ್ಣೀರು ತರ್ತೀನಿ. ಮಾಮಾ ಕುಂತಗಾ ಗಾಳಿ ಹಾಕಲಾ (ಸೆರಗಿನಿಂದ ಗಾಳಿ ಹಾಕುವಳು)

ಶಂಕರ– ಲೇ ರಾಣಿ ಸುಮ್ಮನಿರೋ

ರಾಣಿ– ನಿನ್ನ ನೋಡಿ ಹ್ಯಾಂಗ ಸಮ್ಮನಿರಲಿ ಮಾಮಾ ಯವ್ವಾ ಅಲ್ಲಿಂದ ನಡಕೊಂಡು ಬಿಸಿಲಾಗ ಬಂದೀಯಲ್ಲ. ನಿನಗೆ ಎಲ್ಲೆಲ್ಲಿ ಸುಟ್ಟಿತೋ ಏನೋ ? ಬಿಸಿಲು.

ಜ್ಯೋತಿ– ಏನ್ರಿ ನೀವು ಅರ್ಧ ಗಂಟೆಯಲಿ ಮರಳಿ ಬರುವುದಾಗಿ ಹೇಳಿ ಹೋದವರು ಮೂರು ದಿವಸದಿಂದ ಪತ್ತೇನಾ ಇಲ್ಲ.

ರಾಣಿ– ಮನ್ಯಾಗ ಯಡವಟ್ಟಾಗಿರಬೇಕು.

ಶಂಕರ– ನಾನು ಅಂದೇ ಹೇಳಿದ ಪ್ರಕಾರ. ಚಿನ್ನದ ಸರ ತೆಗೆದುಕೊಂಡು ಬಂದೆ. ಆದರೆ ನಮ್ಮ ಮನೆಗೆ ಕೀಲಿ ಹಾಕಿತ್ತು.

ಜ್ಯೋತಿ– ಹೌದು ಬೆಂಗಳೂರಿನಿಂದ ಟೆಲಿಗ್ರಾಂ ಬಂದಿತ್ತು. ಡ್ಯಾನ್ಸ ಪೋಗ್ರಾಂಗೋಸ್ಕರ ಹೋಗಿದ್ದೆವು.

ಶಂಕರ– ನಾನು ಕಂಡ ಕಂಡಲ್ಲಿ ಹುಡುಕಾಡಿದೆ ಎಲ್ಲೂ ಕಾಣಲಿಲ್ಲ.

ರಾಣಿ– ಅಯ್ಯೋ ಮಾಮಾ. ನನ್ನ ಶಂಕರ ಮಾಮಾ ಬಾಳ ದಣಕೊಂಡೀದಿ ಅಲ್ಲಾ ಮಾಮಾ ಬಂಗಾರದ ಸರ ತಂದಿಯಲ್ಲ. ಕೊನಿಗೂ ತಂದು ಬಿಟ್ಟಿಪಾ.

ಶಂಕರ– ಬಾ ಜ್ಯೋತಿ ಬಾ ನನ್ನ ಚಿನ್ನಾ. ನಾನೇ ನನ್ನ ಕೈಯಾರೆ ನಿನ್ನ ಕೊರಳಿಗೆ ಈ ಸರವನ್ನು ಹಾಕುವೆ.

ಜ್ಯೋತಿ– ನಾನು ಬಹಳ ಪುಣ್ಯವಂತೆ. ನನ್ನ ಮೇಲೆ ನಿಮಗೆ ತುಂಬಾ ಪ್ರೀತಿ ಇದೆ.

ರಾಣಿ– ಖಂಡಾಪಟಿ ಪ್ರೀತಿ ಐತಿ. ಹೌದಲ್ಲಾ ಶಂಕರ ಮಾಮಾ

ಜ್ಯೋತಿ– ಹೂಂ. ತೊಡಿಸಿ (ಕೊರಳಿಗೆ ತೊಡಿಸುವನು)

ಶಂಕರ– ಇನ್ನು ಮೇಲಾದರೂ ನನ್ನ ಮೇಲೆ ಸ್ವಲ್ಪ ಕನಿಕರ ತೋರು.

ರಾಣಿ– ಅಲ್ಲಾ ಮಾಮಾ ಬರೀ ನನ್ನ ಅಕ್ಕನಿಗಷ್ಟಾ ತಂದೀಯಾ ನನಗ ಏನಾರ ತಂದೀಯಿಲ್ಲಾ

ಶಂಕರ– ನಿನಗೆ ಏನು ಬೇಕಾಗಿತ್ತು ?

ರಾಣಿ– ಅಯ್ಯಾ ಏನ್ ಶಂಕರ ಮಾಮಾ ಹಿಂಗ ಕೇಳ್ತಿ, ನನಗೊಂದು ಸರ ತಂದಿದ್ರ ನಿನಗ ಏನು ಕಡಿಮಿ ಆಗತ್ತಿತ್ತು ? ಕೊನಿಪಕ್ಷ ಒಂದು ನೈಲಾನ್ ಸೀರಿನಾರ ತರಬೇಕಾಗಿತ್ತು.

ಶಂಕರ– ಇರಲಿ ಬಿಡೋ ಇನ್ನೂ ಏನೂ ಆಗಿಲ್ಲ. ಮುಂದೆ ತಂದು ಕೊಡ್ತೀನಿ.

ರಾಣಿ– ಎಲ್ಲಾರೂ ಹಿಂಗಾ. ಕೆಲಸ ಆಗೋ ಪೂರ್ತಿ. ಹಾಂಗ ರಾಣಿ, ಹಿಂಗ ರಾಣಿ, ನೀನಾ ತಾಜಮಹಲ್ ನೀನಾ ಗೋಳಗುಮ್ಮಟಾ ಅಂತ. ಕೆಲಸ ಮುಗಿಸಿಕೊಂಡು ಮೆಲ್ಲಕ ಜಿಗದಾ ಬಿಡ್ತಾರ. ಅಡಿಗಿ ಮಾಡಲಿಕ್ಕ ಮುಖ್ಯ ಪದಾರ್ಥ ಕರಿಬೇವು ಹ್ಯಾಂಗೋ ಹಾಂಗ ಆರಿಸಿಗೊಂತಾರ. ತಿನ್ನೋ ಮುಂದ ಕರಿಬೇವು ತಗದು ಹ್ಯಾಂಗ ಬಿಸಾಕ್ತಾರೋ ಹಾಂಗ ಮಾಡ್ತಾರ ನನ್ನ. ಏನು ಬಾಳೇವು ನಂದು, ಬದುಕಬಾರ್ದು ಮಾಮಾ ನನ್ನಂತವರು ಬದುಕಬಾರ್ದು. (ಅಳಲು ಪ್ರಾರಂಭಿಸಿ ಸೆರಗಿನಿಂದ ಒರೆಸಿಗೊಂಡು)

ಶಂಕರ– ಇದೇನೋ ರಾಣಿ, ಏಕದಂ, ರಾಗ ಸುರುವು ಮಾಡಿ ಬಿಟ್ಟೆಲ್ಲ.

ಜ್ಯೋತಿ– ಇನ್ ಯಾಕ ಆಳ್ತಿಯೋ ಕೊಡ್ತಾರೇಳು, ಇಷ್ಟೆಲ್ಲಾ ತಂದವರು ನಿನ್ನನ್ನು ಹ್ಯಾಂಗ ಮರಿತಾರ? ಏನ್ರಿ ಮೊದ್ಲು ಅವನಿಗೆ ಒಂದು ನೂರು ರೂಪಾಯಿ ಕೊಟ್ಟು ಬಿಡ್ರಿ.

ಶಂಕರ– ನೂರು ರೂಪಾಯಿ (ಆಶ್ಚರ್ಯದಿಂದ)

ಜ್ಯೋತಿ– ಅಷ್ಟೊಂದು ಯಾಕ ಗಾಬರಿ ಆಗ್ತಿರಿ ? ಅವನು ಯಿಸಗೊಂಡ್ರ ನಿಮ್ಮ

ಮಣ್ಯ ಅವನ ಎಂದೆಂದೂ ಒಂಟಿ ರೂಪಾಯಿ ಇಸಗೊಂಡಿಲ್ಲ. ಏನಿದ್ರೂ ಕಟ್ಟಗಟ್ಲೆ ವ್ಯವಹಾರ ಅವಂದು.

ಶಂಕರ– ತಗೋ ಮಾರಾಯ. ನೂರು ರೂಪಾಯಿ (ಉಸಿರು ಹಾಕಿ)

ರಾಣಿ– ನೀನು ಮನಸ್ಸಿಗೆ ಇಷ್ಟೊಂದು ತಾಪ ಮಾಡಿಕೊಂಡು, ಕೊಡವಂಗಿದ್ರ ಬ್ಯಾಡ ಮಾಮಾ.

ಶಂಕರ– ಇರಲಿ ತಗಳ್ಳೋ ಮಾರಾಯ. ನಕ್ಕೊಂತಾ ಕೋಡ್ತೀನಿ.

ರಾಣಿ– (ಯಿಸಿದುಕೊಂಡು) ನನಗೆ ಎಲ್ಲಾರೂ ಮಾತಿನಾಗ, ಸೋಲ್ತಾರ ನೋಡು ಮಾಮಾ, ಅಂಥಾದ್ದು ಏನೈತೋ ಏನೋ ನಂತಾಕ

ಶಂಕರ– ಮಹಾ ಭಾರತದ ಹುಲಿ. ಭೀಷ್ಮಾಚಾರ್ಯರೇ ಸೋತಿರುವಾಗ ನಮ್ಮಂಥವರ ಪಾಡೇನೂ ಹೂ ತಗೋ ತಗೋ.

ರಾಣಿ– ನನ್ನ ಮಾಮಾ ಬಂಗಾರದಂತಾ ಮಾಮಾ (ಲಟಗಿ ಮುರಿಯುವನು)

ಶಂಕರ– ಜ್ಯೋತಿ ನಿನಗಾಗಿ ಬಿಸಿಲಲ್ಲಿ ಅಲೆದಲೆದು. ಮೈಗೂ ಮನಸ್ಸಿಗೂ ಬಹಳ ಬೇಸರವಾಗಿದೆ. ನಿನ್ನ ಸುಮಧುರವಾದ ಕಂಠದಿಂದ ಒಂದು ಸುಂದರವಾದ ಹಾಡನ್ನು ಹಾಡಿ ನನ್ನನ್ನು ತಣಿಸು.

ಜ್ಯೋತಿ– ನನ್ನ ಹಾಡನ್ನು ಕೇಳಲು ತಮಗೆ ಅಷ್ಟೊಂದು ಆಸೆಯೇ ?

ಶಂಕರ– ನಿನ್ನ ಗೆಜ್ಜೆಯ ಕಾಲಿನ ಹೆಜ್ಜೆಯನ್ನು ನೋಡುತ್ತ ಕುಳಿತರೆ ಪ್ರಪಂಚದ ಪರಿವೇ ಮರೆವೆಯಾಗುತ್ತದೆ. ಹಾಡು ಜ್ಯೋತಿ.

ಜ್ಯೋತಿ– ನಿಮ್ಮ ಸಂತೋಷಕ್ಕಿಂತ ಮಿಗಿಲಾದ್ದು ನನಗಿನ್ನೇನಿದೆ ? ನನ್ನನ್ನಾಲಂಗಿಸಿಕೊಂಡ ಮೊದಲಗಂಡು ನೀವೇ, ಕೊನೆಯವರೂ ನೀವೇ.

ಶಂಕರ– ಈ ಮಾತು ನಿಜವೇ ?

ಜ್ಯೋತಿ– ನಿಮ್ಮಾಣೆಗೂ ನಿಜ.

ರಾಣಿ– ಮಾಮಾ ಶಂಕರ ಮಾಮಾ ತಣ್ಣಂದು ಏನಾರ ಕುಡ್ಯಾಕ ತರಲೇನು ?

ಶಂಕರ– ಈಗ ಸಧ್ಯ ಏನು ಬೇಡ ಮಾರಾಯ

ಜ್ಯೋತಿ– ಅವರೀಗೀಗ ಬೇಕಾಗಿರುವುದು ನನ್ನ ಹಾಡು, ಕುಣಿತ

ಶಂಕರ– ಹೂಂ (ಜ್ಯೋತಿಯು ಹಾಡುತ್ತ ನರ್ತಿಸುವಳು) ವ್ಹಾಹ ವ್ಹಾಹ ಸುರ ಲೋಕದೊಡೆಯನೊಡ್ಡೋಲಗದ ರಂಭಾ ಊರ್ವಸಿ, ಮೇನಕೆಯರೂ ನಾಚಿನೀರಾಗಬೇಕು. ನಿನ್ನ ನಾಟ್ಯಕ್ಕೆ, ಜ್ಯೋತೀ ನಿನ್ನ ರೂಪಕ್ಕೆ ಸಾಟಿಯಿಲ್ಲ. ನಿನ್ನ ಕಂಠಕ್ಕೆ ಮಿಗಿಲಲ್ಲಿ. ನಿನ್ನ ನೃತ್ಯಕ್ಕೆ ಹೋಲಿಕೆಯೇ ಇಲ್ಲ, ಬಾ ನಾಟ್ಯದ ಮಯೂರೀ (ಎಂದು ಆಲಂಗಿಸಿಕೊಳ್ಳುವನು)

ರಾಣಿ– ಅಕ್ಕಾ ನನಗ ನಾಚಿಕಿ ಬರ್ತೈತಿ, ನಾನು ಬಾಗಿಲು ಕಾಯ್ತೀನಿ (ರಾಣಿ ಹೊರಗು ಹೋಗುವಳು. ಜ್ಯೋತಿ ಶಂಕರ ಒಳಗೆ ಹೋಗಲು ಪರದೆ ಬೀಳುವುದು.

===***====***===

ಐದನೆಯ ಪ್ರವೇಶ

ರಸ್ತಾ ದೃಶ್ಯ

ಗುರುನಾಥ–(ಪ್ರವೇಶಿಸಿ) ಅವ್ರೋತ್ತು. ಆ ಹುಡುಗಿ ಅ ಅರುಣಾನ. ನಮ್ಮ ಜೀಪಿನಾಗ ಹತ್ತಿಸಿಕೊಂಡು ಬಂದಾಗಿನಿಂದ ನನಗೆ ಒಂಥರಾ ತ್ರಾಸಾಗಲಿಕ್ಕ ಹತ್ತೈತಿ ರಾ.......ರಾತ್ರಿ ಮಕ್ಕೊಂಡ್ರ ನಿ ನಿದ್ರೆನಾ ಬರೊಂಗಿಲ್ಲ ಯಾ ಯಾವಾಗರ ಕೇಳು ಬರೀ ಕ ಕನಸಿನಾಗ ಬ ಬರ್‍ತೈತಿ, ಜಮೀನ್ದಾರ ಜೀ ಜೀಪ ನಡಿಸಿ. ನಾನು ಸು ಸುಮ್ಮಕ ಸ ಸವೆದು ಹೋದೆ, ಮ ಮತ್ತ ಎಲ್ಲಿ ಸಿಗತ್ತೈತೋ. ಏ ಏನೋ ಆ ಹುಡುಗಿ ಅ ಅ ರುಣಾ ? (ಕಪಾಟಿಗೆ ಕನವರಿಸುತ್ತ ಒರೆಯಾಗಿ ನಿಲ್ಲಲು ಕನಸು ಬೀಳುವುದು ಅರುಣಾ ಮೆಲ್ಲಗೆ ಬರುವಳು)

ಅರುಣಾ– (ಸ್ಲೋ ಮೊಶನ್‌ನಲ್ಲಿ ಹಾರುತ್ತ ಬಂದು) ಓ. ನನ್ನ ಪ್ರಿಯತಮಾ ಗುಕ್ಕ ಗುರುನಾಥಾ.......

ಗುರು– ಗು. ಗುಕ್ಕ ಅಂತ ಅ ಅನ್ನಬ್ಯಾಡ. ಗು ಗು ಗುರುನಾಥ ಅಂತ ಅನ್ನು, (ಅರುಣ ಕೈ ಹಿಡಿಯಲು ಡ್ಯೆಲಾಗ ಹಾಡು) (ನಂತರ ಟಾಟಾ ಮಾಡುತ್ತ ಜಿಗಿಯುವಳು ಕನಸಿನಿಂದ ಎಚ್ಚೆತ್ತು) ಹಾಂ ಆ ಅರುಣ, ಥೂ. ಕ ಕಣ್ಣು ಮುಚ್ಚೆ ನಿಂತ್ರ ಸಾಕು ಏ ಏ ಏಕದಂ ಬರ್ತಾಳ.

ಶ್ಯಾಮು– (ಲಾಟ್ರಿ ಟಿಕೆಟ್ ಕೈಯಲ್ಲಿ ಹಿಡಿದು ಬಂದು) ಯಾರಿಗೆ ಬೇಕ್ರಿ ಕರ್ನಾಟಕ ಸ್ಟೇಟ್ ಲಾಟ್ರಿ ಬಂಪರ್ ಹತ್ತು ಲಕ್ಷ ರೂಪಾಯಿ ಇಂದೇ ಡ್ರಾ ಬಂಪರ ಭಾಗ್ಯಲಕ್ಷ್ಮಿ ನಿಮ್ಮ ಮನೆ ಬಾಗಿಲಿಗೆ ಬಂದಿದ್ದಾಳೆ. ಕರ್ನಾಟಕ ಸ್ಟೇಟ್ ಲಾಟ್ರಿ ಸಾರ್ ಲಾಟ್ರಿ ತಗೊಳ್ರಿ,

ಗುರು– ಬ್ಯಾ ಬ್ಯಾಡಪಾ ಅ ಅವು ನ ನಮಗ ಹಾ ಹಾರೋಂಗಿಲ್ಲ.

ಶ್ಯಾಮು– ನನ್ನ ಕೈಯಿಂದ ತಗೊಂಡು ನೋಡ್ರಿ, ಅವು ಹ್ಯಾಂಗ ಹಾರೊಂಗಿಲ್ಲ ?

ಗುರು– ಮೊ ಮೊನ್ನೆ ಸಾ ಸಾಲುಂಚಿ ಮರದಾಗ ಚ ಚನ್ನ ಬಸ್ಯಾ ಸಿ ಸಿ ಸ್ಕೀಮ ಮಾ ಮಾಡಿ ಮ ಮನಿ ಮು ಮುಚ್ಚಿದನಲ್ಲ, ನನನ ಗೂ ಲೂ

ಲೂ ಲೂಸಾ ಬ ಬಂದಿತ್ತು. ಕೊ ಕೊಡಲಿಲ್ಲ. ಹ ಹಗಲು ದರೋಡೆ ಮಾಡೊ ಕ ಕಳ್ಳರು. ಅದಕ್ಕ ಬ್ಯಾಡ ಜ ಜ ಜನತಾ ಸ ಸರಕಾರದಾಗ ಇಂಥವರಾ ಜಾ ಜಾಸ್ತಿ ಆಗ್ಯಾರ.

ಶ್ಯಾಮು– ಇಲ್ಲಿ ನೋಡ್ಯಾರ ನೋಡ್ರಿ ಸಾರ್, ಇದು ಚನ್ನಬಸಪ್ಪನ ಸ್ಕೀಮ ಅಲ್ಲ. ಕರ್ನಾಟಕ ಸರಕಾರದ ಲಾಟ್ರಿ, ದಯ ಮಾಡಿ ಒಂದಾದ್ರೂ ಟಿಕೆಟ್ ತಗೊಳ್ಳಿ ಸಾರ್. ನನಗೆ ತಂದೆ ಅಣ್ಣ ತಮ್ಮ ಯಾರೂ ಇಲ್ಲಾ. ಇರೋ ಒಬ್ಬ ತಾಯಿ ಖಾಯಿಲೆಯಾಗಿ ಬಿದ್ದಿದ್ದಾಳೆ. ಈ ಲಾಟ್ರಿ ಟಿಕೆಟ್ ಮಾರಿದ ಕಮೀಶನ್ನನಲ್ಲಿ ಆಕೆಗೆ ಔಷಧಿ ಒಯ್ಯಬೇಕು. ದಯವಿಟ್ಟು ತಗೊಳ್ಳಿ ಸಾರ್.

ಗುರು– ಥೂ ನಿನ್ನ. ಬ್ಯಾ ಬ್ಯಾ ಬ್ಯಾಡಂದ್ರ ಕೇ ಕೇಳವಲ್ಲೆಲ್ಲಾ ಹೂಂ ತ ತಗೋ ಐ ಐದು ರೂಪಾಯಿ.

ಶ್ಯಾಮು– ಐದು ಟಿಕೆಟ್ ಕೊಡಲ್ ಸಾರ್

ಗುರು– ಏ ಏ ಏನಾರ ಮಾಡು.

ಶೇಠಸಾಬ– (ಪ್ರವೇಶಿಸಿ) ಲೇ ಲಾಟ್ರಿ ಹುಡುಗ ಜರಾ ನಿಂದರ್

ಶ್ಯಾಮು– ಸಾರ್

ಶೇಠ– ಲೇ ಹುಡುಗಾ ಮೊನ್ನೆ ಪಂಜಾಬಕಾ ಲಾಟ್ರಿ ನಮ್ಮದೂಕೆ ಕೊಟ್ಟಿದ್ದ. ಅದು ಹಮ್‌ಕೋ ಹಾರ್‍ಯೆತಿ ಆದ್ರ ಅದರ ಪೇಪರ್ ಸಿಗವಲ್ತು.

ಗುರು– ಪೇಪರ್ ಸಿ ಸಿಗದ. ಹ್ಯಾ ಹ್ಯಾಂಗ ಹಾರ್‍ತು ನಿ ನಿ ನಿನಗ ?

ಶೇಠ– ನಮ್ಮದೂಕೆ ಹಾರ್‍ತಾವು

ಗುರು– ಏ ಏ ಏನು ಮ ಮನಷ್ಯಾ ಅ ಅದಿನೀನು? ನಾ ನಾನ್ಯಾಕ ಹಾಹಾರಲಿ ನಿನಗ? ನ ನ ನಮಗ ಅ ಅಂಥಾ ಛಾಳಿ ಇಲ್ಲಪಾ ನಡೀಲೆ ತಮ್ಮಾ (ಹೋಗುವರು)

ಶೇಠ– ಹೇ ಠೇರೋ ಭಾಯಿ. ಅರೇ ಜರಾ ನಿಂದರ್ ಏನು. ಹುಡುಗರು (ಅವರ ಹಿಂದೆ ಹೋಗುವನು)

===**===**===

ಆರನೆಯ ಪ್ರವೇಶ

ಮನೆಯ ದೃಶ್ಯ

(ಮಂಚದ ಮೇಲೆ ರವಿಯು ಜ್ವರ ಪೀಡಿತನಾಗಿ ಮಲಗಿರುವನು. ಹಣೆಗೆ ತಣ್ಣೀರಿನ ಪಟ್ಟಿ ಹಾಕುತ್ತ ದುಃಖಿಸುತ್ತ ಲಕ್ಷ್ಮಿ ಶ್ರೀ ಅಂಬಾ ದೇವಿಯ ಭಾವ ಚಿತ್ರಕ್ಕೆ ನಮಿಸುತ್ತ)

ಲಕ್ಷ್ಮೀ– ಅಮ್ಮಾ ತಾಯೀ ಅಂಭಾ ಭವಾನಿ. ಏನೂ ಅರಿಯದ ಈ ಹಸುಳೆ ಅದೇನು ಪಾಪ ಮಾಡಿರುವನೆಂದು ಅವನಿಗೀ ಶಿಕ್ಷೆಯನ್ನಿತ್ತಿರುವೆ ತಾಯೀ ಕರುಣಾಮಯಿ, ಕರುಣಾ ಕರಿ ನೀನೆಂದು ಕಂಬನಿಗೈದರೂ ಕೂಡ, ನಿನಗೆ ಕರುಣೇ ಬರಲಿಲ್ಲವೇ ತಾಯಿ, ಬೇಡ ತಾಯಿ ಬೇಡಮ್ಮಾ ನಿನ್ನ ವಕ್ರ ದೃಷ್ಟಿಯನ್ನು ಬೀರದೆ ಮೂರು ದಿನದಿಂದಲೂ ಜ್ವರ ಪೀಡಿತನಾದ ಅವನನ್ನು ಗುಣ ಪಡಿಸಮ್ಮಾ (ದೇವಿಯನ್ನು ಕುರಿತು ಹಾಡು ಹಾಡಲು)

ರವಿ– (ಹೊರಳಾಡುತ್ತ) ಅಮ್ಮಾ ಅಪ್ಪಾಜಿ ಬರಲಿಲ್ಲವೇನಮ್ಮಾ (ಎದ್ದು ಕೂಡುವನು)

ಲಕ್ಷ್ಮೀ– ಹಾಂ ರವಿ. ಏನಪ್ಪಾ. ನಿಮ್ಮ ತಂದೆ ಬರ್ತಾರಪ್ಪಾ ಚಿಕ್ಕಪ್ಪ, ಕರದು ಕೊಂಡು ಬರಲಿಕ್ಕೆ ಹೋಗಿದ್ದಾನೆ. ನೀನು ಸ್ವಲ್ಪು ಮಲಗು ತೊಂದರೆ ತಗೋ ಬೇಡ ಕಂದಾ

ರವಿ– (ಕಣ್ಣು ಒರೆಸಿಕೊಂಡು) ಅಮ್ಮಾ ನನ್ನಿಂದ ನಮಗೆ ಬಹಳ ತೊಂದರೆ ಅಲ್ಲವೇನಮ್ಮಾ ?

ಲಕ್ಷ್ಮೀ– ಶಿವಾ ಶಿವಾ ಎಂಥಹ ಮಾತನಾಡುವೆ ರವೀ. ನಿನ್ನಿಂದ ನನಗೆ ತೊಂದರೆಯೇನಪ್ಪಾ ಅಲ್ಲೋ ನನ್ನ ಬಾಳಿನ ಮುಂಬೆಳಕೇ ನೀನು. ನನ್ನ ಪಾಲಿನ ದೇವರು, ಸುಮ್ಮನೆ ಏನೇನೋ ಕಲ್ಪಿಸಿಕೊಂಡು, ಹಾಗೆಲ್ಲಾ ಮಾತನಾಡಬಾರದಪ್ಪಾ, ಇಲ್ನೋಡು. ನಿಮ್ಮ ಚಿಕ್ಕಪ್ಪಾ ಔಷಧಿ ತಗೊಂಡು ಹಾಗೆ ಅಪ್ಪಾಜೀನ್ನೂ ಕರಕೊಂಡು ಬರ್ತಾನೆ.

ಸುಂದರ– (ಕೈಯಲ್ಲಿ ಔಷಧಿ, ಹಣ್ಣು ಹಿಡಿದುಕೊಂಡು ಬರುವನು) ಅತ್ತಿಗೆಮ್ಮಾ

ಔಷಧಿ ತೆಗದುಕೊಂಡು ಬಂದೆ. ರವೀ ಇದೇನಪ್ಪಾ ಎದ್ದು ಕುಳಿತಿರುವೆ.

ಲಕ್ಷ್ಮೀ– ಸುಂದ್ರು ನಿಮ್ಮಣ್ಣ ಏನು ಹೇಳಿದ್ರಪ್ಪಾ ?

ಸುಂದರ– ಅತ್ತಿಗೆಮ್ಮಾ ....ಅಣ್ಣ (ಮಾತು ತುಂಡರಿಸುವನು)

ಲಕ್ಷ್ಮೀ– ಮಗುವಿಗೆ ಜ್ವರ ಬಂದಿರುವ ವಿಷಯವನ್ನು ತಿಳಿಸಿದೆಯೇನಪ್ಪ ? ಹಗಲು ರಾತ್ರಿ ಅಪ್ಪಾಜೀ ಅಪ್ಪಾಜೀ ಎಂದು ಕನವರಿಸುತ್ತಾನೆಂದು ಹೇಳಿದೆಯಾ ?

ಸುಂದರ– ಮಗು.....?........ಮನೆ.......ಮಡದಿ (ವಿಕಟವಾಗಿ ನಗುವನು)

ಲಕ್ಷ್ಮೀ– ಅರ್ಥವಾಗದಂತೆ ನಗುವಿಯಲ್ಲೋ ಬರುತ್ತೇನೆಂದು ಹೇಳಿದರೇನು ?

ರವಿ– ಅಪ್ಪಾಜೀಗೆ. ಪುರುಷೋತ್ತಿದ್ದರಲ್ಲವೇನಮ್ಮಾ ಚಿಕ್ಕಪ್ಪನ ಜೊತೆ ಮಾತಾಡುವುದು.

ಸುಂದರ– ನಿಜ ರವಿ. ಆ ಮೋಹಿನಿಯ ಮೋಹಕವಾದ ನೋಟದಲ್ಲಿ ಗೆಜ್ಜೆಯ ನಿನಾದದಲ್ಲಿ ಮಡದಿ ಮಕ್ಕಳ ಆರ್ತನಾದ ಕೇಳುವುದಾದರೂ ಹೇಗೆ ? ಅತ್ತಿಗೆಮ್ಮಾ, ಅವಳ ಹಾಡು ಕುಣಿತದ ಅಡಂಬರದ ಅದ್ರಿಯನ್ನೇರಿದ ಅಣ್ಣನು ಪಾತಾಳದಲ್ಲಿ ದೀನ ಮೊರೆಗೈವ ಈ ಪಾಪಿ ತಮ್ಮ ನೆಡೆಗೆ ತಪ್ಪಿಯೂ ನೋಡಲಿಲ್ಲ. ಅದಕ್ಕೆ ಬದಲಾಗಿ........

ಲಕ್ಷ್ಮೀ– (ಆತಂಕದಿಂದ) ಸುಂದ್ರು............

ಸುಂದರ– (ಖೇದದಿಂದ) ಕತ್ತಿಡಿದು ಹೊರ ನೂಕಿದನಮ್ಮಾ ಹೊರ ನೂಕಿದ.

ಲಕ್ಷ್ಮೀ– ಹಾಂ. ಕತ್ತಿಡಿದು ಹೊರ ನೂಕುವಂತಹ ಕಠೋರ ಕೆಲಸವನ್ನೇನು ನೀನು ಮಾಡಿದ್ದೆ ? ಅಯ್ಯೋ ಸುಂದ್ರು ನಿನ್ನತ್ತಿಗೆಯ ಸಲುವಾಗಿ ಇಷ್ಟೆಲ್ಲಾ ಅಪಮಾನವನ್ನು ಸಹಿಸಿದೆಯೇನೊ ? ನೀನು ನನಗೆ ಬರೀ ಮೈದುನನಷ್ಟೇ ಅಲ್ಲ. ನನ್ನ ಹಡೆದಾತ ಹಡೆದಾತ.

ಸುಂದರ– ಅತ್ತಿಗೇ ಎಂತಹ ಮಾತನಾಡುತ್ತಿರುವೆ ತಾಯಿ. ಇನ್ನೊಮ್ಮೆ ಉಚ್ಚರಿಸದಿರಮ್ಮಾ ಆ ನುಡಿಯನ್ನು. ಹುಂ ಅದಾವ ಜನ್ಮದಲ್ಲಿ ನೀ ನನಗೆ ಜನನಿಯಾಗಿದ್ದಿಯೋ ಕಾಣೆ, ನಾನು ನಿನ್ನ ಉದರಲ್ಲಿಂದು ಜನಿಸದಿರಬಹುದು, ಆದರೆ ಹೆತ್ತ ತಾಯಿಗಿಂತಲೂ ಹೆಚ್ಚಾಗಿ, ನೀನಿರುವೆ ಎಷ್ಟು ಜನ್ಮವೆತ್ತಿ ಬಂದರೂ, ನಿನ್ನ ಋಣ ತೀರಿಸಲಾದೀತಮ್ಮಾ, ಹೃದಯದೊಳಗೆ ಅಗ್ನಿ ಪರ್ವತವನ್ನೇ ನುಂಗಿ ಸರ್ವರನ್ನೂ ಸಂತೈಸುವ

ನೀನು ಸಾಕ್ಷಾತ್ ಅನ್ನ ಪೂರ್ಣೆಯಮ್ಮಾ, ನಿನ್ನ ದುಃಖದ ಮುಂದೆ ನನ್ನದೆಷ್ಟರ ಅಪಮಾನವಮ್ಮಾ ?

ರವಿ– ಅಪ್ಪಾಜಿ ಒಬ್ಬರಿಂದಲೇ ಇಷ್ಟೆಲ್ಲ ಕಷ್ಟ ನೋಡಮ್ಮ

ಸುಂದರ– ಹಾಗೇನೂ ಇಲ್ಲ ರವಿ. ಇಲ್ನೋಡು ಬೇಗ ಈ ಹಣ್ಣು ತಿಂದು, ಈ ಮಾತ್ರೆ ತಗೋ ಜ್ವರ ಕಡಿಮೆಯಾಗುತ್ತದೆ. ಆಗ ಖಂಡಿತವಾಗಿಯೂ ಅಪ್ಪಾಜಿಯ ಹತ್ತಿರ ಕರೆದುಕೊಂಡು ಹೋಗುತ್ತೇನೆ.

ರವಿ– ಬೇಡ ಚಿಕ್ಕಪ್ಪಾ ಮರ್ಯಾದೆಯಿಲ್ಲದ, ಆ ಮನೆಗೆ ಹೋಗುವುದೇ ಬೇಡ.

ಲಕ್ಷ್ಮೀ– ಕಂದಾ......(ಕಂಬನಿ ತುಂಬಿ)

ರವಿ– ಅಮ್ಮನಿಗೆ, ನಿನಗೆ, ಮರ್ಯಾದೆ ಕೊಡದ ಆ ಅಪ್ಪಾಜಿ ನನಗೂ ಬೇಡ

ಸುಂದರ– ರವೀ (ತಲೆನೇವರಿಸುತ್ತ) ಹಾಗೆಲ್ಲಾ ಮಾತನಾಡಬಾರದು. ಮೊದಲು ಈ ಹಣ್ಣು ತಿನ್ನು ಮೂರು ದಿನಗಳಿಂದ ಊಟವನ್ನೇ ಮಾಡಿಲ್ಲ ಹೂಂ. ತಗೋ (ಪಕ್ಕದಲ್ಲಿ ಕುಳಿತು ಹಣ್ಣು ತಿನ್ನಿಸುವನು. ಲಕ್ಷ್ಮೀ ಕಣ್ಣೊರೆಸಿ ಕೊಳ್ಳುತ್ತ ಮನೆಯೊಳಗೆ ಹೋಗುವಳು. ಪರದೆ ಬೀಳುವುದು)

===****=====****===

ಏಳನೆಯ ಪ್ರವೇಶ

ಕಟ್ ಜಂಗಲ್ ದೃಶ್ಯ

(ವಜ್ರಮುನಿ ಕೊರಳಲ್ಲಿ ಕ್ಯಾಮೆರಾ ಹಾಕಿಕೊಂಡು ಸಿಗರೇಟ್ ಸೇದುತ್ತ ಪ್ರವೇಶಿಸುವನು. ಆತನನ್ನು ಹಿಂಬಾಲಿಸಿ ಚರಣ್ ಬರುವನು)

ವಜ್ರಮುನಿ– ಸುಂದರವಾದ ವಸ್ತುಗಳು ಎಲ್ಲಿದ್ದರೂ ಅದು ನನ್ನಲ್ಲಿರಬೇಕು ನನ್ನದಾಗಬೇಕು ಎಂದು ಬಯಸುವುದೇ ನನ್ನ ಸ್ಪೇಶಾಲಿಟಿ, ಲೇ ಚರಣ್ ನಾವು ಜೀಪು ಇಳಿಯುವ ಮುನ್ನ ಯಾವಳೋ ಒಬ್ಬ ಸುಂದರಿ ಬಿರುಗಾಳಿಯಂತೆ ನಡೆದಳಲ್ಲಾ. ಯಾವುದೋ ಅದು ಹಕ್ಕಿ.

ಚರಣ್– ಅವಳು ಪಕ್ಕದ ಎಸ್ಟೇಟಿನ ಟೈಪಿಸ್ಟ್ ಅರುಣಾ ಎಂದು ಅವಳ ಹೆಸರು.

ವಜ್ರ– ಪರವಾಗಿಲ್ವೇ. ಕಣ್ಣು ಮುಗಿಲೆ ಬಹಳ ಚಂದಾ ಇದೆ. ಇಷ್ಟು ದಿವಸಾದ್ರೂ ನಮ್ಮ ಕಣ್ಣಿಗೆ ಬಿದ್ದಿಲ್ಲವಲ್ಲ ಇವಳು ? ಸರಿ ಬಿಡು ಆ ಎಸ್ಟೇಟು ನನ್ನ ಬಾಕಿಯಲ್ಲಿ ಒತ್ತೆ ಬಿದ್ದಿದೆ ಅಂದಾಗ ಅದೂ ನಮ್ಮ ಒಡೆತನಕ್ಕೆ ಸೇರಿದ್ದು. ನೋಡು, ಇನ್ನೆರಡು ದಿನಗಳಲ್ಲಿ ಅವಳು ನನ್ನ ಎಸ್ಟೇಟ ರೂಮಿನಲ್ಲಿರಬೇಕು.

ಚರಣ್– ತಮ್ಮಿಚ್ಛೆ ಭಾಸ್, ಅಂದ ಹಾಗೆ ನಮ್ಮ ಫ್ಯಾಕ್ಟರಿ ಮಗ್ಗುಲಲ್ಲಿರುವ ಕೂಲಿಕಾರರ ಎಲ್ಲಾ ಗುಡಿಸಲುಗಳನ್ನು ಕೀಳಿಸಲು ಅಜ್ಞಾಪಿಸಲಿಲ್ಲ.

ವಜ್ರ– ಹೌದು ಏನಾಯ್ತು ?

ಚರಣ್– ನಮ್ಮ ಬೆದರಿಕೆಗೆ ಅವರೇನೂ ಮಣಿದಂತೆ ಕಾಣಲಿಲ್ಲ. ನೀವು ಏನೇ ಮಾಡಿದರೂ ನಾವು ಜಾಗ ಬಿಡುವದಿಲ್ಲವೆಂದು ಹಠ ಹಿಡಿದು ಪ್ರಾಣ ಭೀತಿ ಇಲ್ಲದೆ ನಮ್ ಬುಲ್ಡೋಜರಗೆ ಎದುರಾಗಿ ಕುಳಿತು ಬಿಟ್ಟರು. ಸುಮ್ಮನೆ ಕೈ ಕಟ್ಟಿಕೊಂಡು ನಾವು ಹಿಂತುರಿಗಿ ಬಂದೆವು.

ವಜ್ರ– ಆಂ. ಹಾಂ. ಆ ಕಳ್ಳರಿಗೆ ಅಷ್ಟೊಂದು ಸೊಕ್ಕು ಬಂತೇನು ? ಲೇ ಚರಣ ಇಂದು ರಾತ್ರಿ ಆ ಗುಡಿಸಲುಗಳನ್ನೆಲ್ಲಾ ಸುಡಿಸಿ ಬಿಡು.

ಚರಣ್– (ಆಶ್ಚರ್ಯದಿಂದ) ಬಾಸ್ ಅದು.....

ವಜ್ರ– ನೀನು ಮೊದಲು ನಾನು ಹೇಳಿದಷ್ಟು ಕೆಲಸ ಮಾಡು.

ಚರಣ್– ಸಮಾಜದಲ್ಲಿ ನಿಮ್ಮ ಘನತೆ ಗೌರವಕ್ಕೆ ಇದರಿಂದ ಕುಂದುಂಟಾಗುವುದಿಲ್ಲವೇ ?

ವಜ್ರ– ಉಂ. ಹುಂ ಅದಕ್ಕೆ ಬದಲಾಗಿ ಕೀರ್ತಿ ಇಮ್ಮಡಿಯಾಗುತ್ತದೆ.

ಚರಣ್– (ಅನುಮಾನಿಸುತ್ತ) ಈ ರೀತಿ ಗುಡಿಸುಲುಗಳನ್ನು ಸುಡಿಸುವುದ ರಿಂದ..........

ವಜ್ರ– ಹೂಂ. ಯಾರಿಗೂ ತಿಳಿಯದಂತೆ ಮಧ್ಯರಾತ್ರಿ, ನಾವೇ ಗುಡಿಸಲುಗಳನ್ನು ಸುಡಿಸಿ, ಮರುದಿನ ಮುಂಜಾನೆ ಅವರೆಲ್ಲರ ಜೊತೆ ಮೊಸಳೆ ಕಣ್ಣೀರನ್ನು ಸುರಿಸಿ, ಪೇಪರಿನವರನ್ನೂ ಕರೆಯಿಸಿ, ಅವರಿಗೆ ಮರು ವಸತಿಗಾಗಿ ಉದಾರ ಧನ ಸಹಾಯ ಮಾಡಿ, ಫೋಟೋ ತಗೆಯಿಸಿಕೊಂಡರೆ ಕಲಿಯುಗದ ಪ್ರತ್ಯಕ್ಷ ದೈವವೆಂದು ನನ್ನ ಪ್ರಚಾರವಾಗುವುದಿಲ್ಲವೋ

ಚರಣ್– ನಿಮ್ಮ ಬುದ್ಧಿ ಪಾದರಸಕ್ಕಿಂತಲೂ ಚುರುಕು.

ವಜ್ರ– ನಡೆ ಹೋಗೋಣ.

===***====***====

ಎಂಟನೆಯ ಪ್ರವೇಶ

ರಸ್ತಾ ದೃಶ್ಯ

ಚಂದ್ರ– (ಪ್ರವೇಶಿಸಿ) ಅಂತೂ ಈ ಊರಾಗ ಖಾಯಂ ಠಿಕಾಣಿ ಹೊಡಲಿಕ್ಕ ತುಳಸಪ್ಪನ ಛತ್ರ ಚೊಲತ್ತಿನಾಗ ಅಸರ ಆತು. ನಿನ್ನೆ ದಿನ ಹಸಿದ ಅಗಸರ ನಾಯಿಗತಿ ಆಗಿದ್ವಿ, ಯಾಕಾ, ಆ ಹುಡುಗಿ ಟೈಪಿಷ್ಟು ಅರುಣಾ, ದೋಸೆ ಉಪ್ಪಿಟ್ಟು ತಿನ್ನಿಸಿ, ಪುಣ್ಯಾ ಕಟ್ಟಿಕೊಂಡ್ತು, ಇನ್ನ ಮ್ಯಾಕಂತೂ ಊಟಕ್ಕ ಮಲಗಲಿಕ್ಕ ಚಿಂತೇನ ಇಲ್ಲ. ಛತ್ರದಾಗ ಖಾಯಂ ಗಿರಾಕಿಗಳಾದ್ರಾತು. ಈಗ ಸಧ್ಯ ನಮ್ಮ ಕಾವ್ಯ ಉದಯವಾಗಲಿಕ್ಕೆ ಒಬ್ಬಾಕಿ ಸ್ಫೂರ್ತಿ ಕನ್ನಿಕಾ ಬೇಕು. ಇದಾ ಹುಡುಗೀನಾ ಖಾಯಂ ಮದುವಿ ಆಗಬೇಕೆಂದ್ರ ಮೂರು ಸಾಡೇ ಸಾತಿಗಳು ಗಂಟು ಬಿದ್ದಾವು.

ಅರುಣ– (ಬಂದು) ಏನ್ರಿ ಕವಿ ರಕ್ಷಸರು. ಏನಾ ಯೋಚ್ನೆ ಮಾಡಿಕೊಂತ ಹಾದ್ಯಾಗ ನಿಂತೀರಿ.

ಚಂದ್ರ– ಹಾದ್ಯಾಗ ನಿಂತಿದ್ದೂ ಖರೆ, ಯೋಚ್ನೆ ಮಾಡಿದ್ದು ಖರೇ, ಆದ್ರ ಕವಿ ರಾಕ್ಷಸ ಅಂತ ಅಂದ್ರೆಲ್ಲಾ ಏನು ಆದ್ರ ಕತಿ ? ಅದೇನೂ ನನಗ ಬರೋಬರಿ ಕಾಣಲಿಲ್ಲ.

ಅರುಣ– ಕವಿ ರಾಕ್ಷಸ ಅಂದ್ರ, ಏನೂ ಸುಮಾರು ಅಲ್ರಿ, ಅದು ದೊಡ್ಡ ಕವಿ ಹೆಸರು. 'ಕವಿರತ್ನ ಕಾಳಿದಾಸ' ಸಿನೆಮಾನಾರನೋಡಿರಿಲ್ಲಾ, ಭೋಜರಾಜನ ಆಸ್ಥಾನದಾಗ ಇರ್ತಾನಲ್ಲ. ಕವಿರಾಕ್ಷಸ ಅಂತಾ.

ಚಂದ್ರ– ಅವನು ಎಲ್ಲಿಯಾರ ಯಾಕ ಇರ್ಲಿ. ನಮಗ ? ಆ ಹೆಸರು ಬ್ಯಾಡ್ರಿ, ನಿಮಗ ಅಷ್ಟೊಂದು ಇಷ್ಟ ಇದ್ರ ಒಂದು ಬಿರುದು ಕೊಡ್ರಿ ಚೊಲೋದು.

ಅರುಣ– ಬಿರುದಿನ ಹುಚ್ಚು ಬಾಳ ಇದ್ದಾಂಗ ಐತಿ ನಿಮಗೆ, ಅಲ್ರಿ ಕವಿಗಳಾ ನೀವು ಈ ಹಿಂದೆ ಕೆಡ ಬರಾ ಬಿರುದು ಹೇಳಿದ್ರೆಲ್ಲಾ. ಅವನ್ನಾ ಯಾರು ಕೊಟ್ರು ನಿಮಗೆ ?

ಕುಬೇರ– (ಬರುತ್ತ) ಯಾರನ ಯಾಕ ಕೊಡಬೇಕು ? ನಮ್ಮಿಷ್ಟಕ್ಕಾ ನಾವು

ಇಟಗೊಂತೀವಿ ಈಗಿನ ದುರಭಿ ಮಾನದ ಕಾಲ್ದಾಗ ಯಾರು ಕೊಡ್ತಾರಿ ? ಅಕೆಡಮಿ ಮುಂದ ನಿಂತ್ಕೊಂಡು ಹೊಯ್ಕೊಂಡ್ರೂ ಯಾರೂ ಹೊಳ್ಳಿ ನೋಡಂಗಿಲ್ಲ, ಅದಕ್ಕಾ ಮಂದೀನ್ನ ಕೇಳಿ ಮಾನಗೇಡಿ ಆಗೋದಕ್ಕಿಂತ ನಮ್ಮಷ್ಟಕ ನಾವ ಇಟಗೊಂತಿವಿ.

ಅರುಣ– ಅಂದ್ರ ನಿಮಗ ಯಾರೂ ಅಭಿಮಾನಿಗಳು ಕೊಟ್ಟಿಲ್ಲಂದಗಾತು.

ಕುಬೇರ– ಮತ್ತ ನಾನೇನು ಹೇಳಿದೆ ಇಷ್ಟು ಹೊತ್ತು.

ಚಂದ್ರ– ಕಂಡವರ ಅಭಿಮಾನ ಕೇಳಷ್ಟು ಕೀಳು ದರ್ಜೆ ಮನುಷ್ಯಾರೇನು ನಾವು? ನಮ್ಮ ನಮ್ಮ ಅಭಿಮಾನ ನಮಗ ಇದ್ದದ್ದಕ್ಕಾ ನಾವು ಇಟಗೊಂಡಿವಿ.

ಅರುಣ– (ಕುಬೇರನಿಗ) ನಿಮ್ಮದೂ ಅಷ್ಟಾ ಹೌದಿಲ್ಲಾ ?

ಕುಬೇರ– ಹೂಂ. ನಟ ಭಯಂಕರ, ನಟ ಶಿರೋಮಣಿ ಕುಬೇರ ಅಂದ್ರ ಏನಂತ ತಿಳಿದಿರಿ ?

ಅರುಣ– (ಸ್ವಗತ) ಐದು ಪೈಸಾ ಇಲ್ಲದವನು ಅಂತ. ಅಲ್ರಿ ಗೌಡ್ರ ಕವಿಗಳಾ, ನಿಮ್ಮ ನಾಟಕಗಳಾವುವು ? ಒಂದೆರಡು ಹೆಸರು ಹೇಳ್ರಿ,

ಚಂದ್ರ– ನೀವು ಯಾವಾಗ ಬಾಯಿ ತಗದು ಕೇಳ್ತಿರಂದ ಮ್ಯಾಗ ಹೇಳ್ತಿನಿ ಕೇಳ್ರಿ. ಒಂದನೆಯದು ಅದರಾಗ ಇದು; ಇದರಾಗ ಅದು.

ಅರುಣ– ಹಾಂ. ಏನ್ರಿ ಹಾಂಗಂದ್ರ

ಚಂದ್ರ– ಲೋಕದಾಗ ಇದ್ದದ್ದಾ ಇದು. ಇರಲಾರದ್ದೇನೂ ಅಲ್ಲ. ಇನ್ನ ಎರಡನೆಯದು "ಮಕ್ಕೊಂಡವರಲ್ಲಿಸಿಕ್ಕಂಡವರು"ಮತ್ತಮೂರನೆಯದು.

ಅರುಣ– ಸಾಕು ಮುಕ್ತಾಯ ಮಾಡ್ರಿ,

ಚಂದ್ರ– ಇಷ್ಟಕ್ಕಾ ಸಾಕಾತಲ್ಲ. ನಿಮಗ....ಇನ್ನ ಮುಂದ ಮಜಾ ಇದ್ದುರಿ

ಅರುಣ– ಯಾವ್ಯಾವ ಕಂಪನ್ಯಾಗ ಆಡ್ಯಾರ್ರಿ ?

ಚಂದ್ರ– ಯಾವ ಕಂಪನ್ಯಾಗೂ ಆಡಿಲ್ಲ.

ಅರುಣ– ಯಾಕ ?

ಕುಬೇರ– (ಸ್ವಗತ) ಇವನ್ನ ಆಡಿದ್ರ ಕತ್ತಿಗಿ ಒದ್ದಾಂಗ ಒದಿತಾರ.

ಚಂದ್ರ– ಅಷ್ಟೊಂದು ಯಾಕ ಗಾಬರಿ ಆಗ್ತೀರಿ ? ಚಿಲ್ರೆ ಮಂದಿ ಕೂಡ ನಾವು ಆಡಿಸೊಂಗಿಲ್ಲ.

ಅರುಣ– ನಿಮ್ಮವು ಯಾವಾರ ನಾಟಕಗಳು ಪ್ರಿಂಟು ಆಗ್ಯಾವೇನು ?

ಚಂದ್ರ– ಸಣ್ಣ ಸಣ್ಣ ಪ್ರಕಾಶಕರ ಹತ್ರ ಪ್ರಿಂಟ್ ಮಾಡಿಸಲಿಕ್ಕೆ. ನಮ್ಮದೇನು ಅಂತಾ ಸಣ್ಣ ಸಾಹಿತ್ಯ ಅಲ್ಲ.

ಅರುಣ– ಅಂತೂ ನೀವೊಂದು ವಿಚಿತ್ರ ವ್ಯಕ್ತಿ ಅಂದಂಗಾಯ್ತು.

ಕುಬೇರ– ಹೌದು ನೋಡಲಿಕ್ಕೆ ಬಲು ವಿಚಿತ್ರ, ಅದ್ರೂ ಸತ್ಯ.

ಅರುಣ– ಅಂದಂಗ ನೀವು, ನಟ ಸಾರ್ವಭೌಮರು ಯಾವ್ಯಾವ ಕಂಪನ್ಯಾಗ ಇದ್ರಿ,

ಕುಬೇರ– ಕರ್ನಾಟಕದ ಗುಬ್ಬಿ ವೀರಣ್ಣ, ಸುಬ್ಬಯ್ಯ ನಾಯ್ಡು ಅಂತಾ ದಿವಾನರ ಕಂಪನಿಲಿಂದ ದಿವಾಳಿ ಕಂಪನಿ ತನಕ ಎಲ್ಲಾ ಕಂಪನಿಯಾಗೂ ಇದ್ವೆ.

ಅರುಣ– ನೀವು ಯಾವ್ಯಾವ ಪಾರ್ಟು ಮಾಡೀರಿ ?

ಕುಬೇರ– ಏನ್ರಿ ನೀವು ಏನು ಮಾತಾಡ್ತೀರಿ. ಪಾರ್ಟು ಮಾಡಷ್ಟು ಸಣ್ಣ ಮನಷ್ಯಾ ಅಂತ ತಿಳಿದಿರೇನು ನನ್ನ? ನಾವೇನಿದ್ರೂ ಡಿಗ್ ನೇಟಿ ಮಂದಿ, ಮಾಲಕರ ಸರಿ ಸಮಾನ ಕುತ್ಕೊಂಡು ರೋಕ್ಕಾ ಎಣಿಸಿದೆ ಮಂದಿ. ಅದು ಡಿಗ್ ನೇಟಿಯಿಂದ.

ಅರುಣ– ನಿಮ್ಮನ್ನ ನೋಡಿದ್ರ, ಥೇಟ ಡೂಪ್ಲಿ ಕೇಟು ಮಂದಿ ಕಂಡಾಂಗ ಕಾಣ್ತೀರಿ.

ಚಂದ್ರ– ರೀ. ಅರುಣಾಬಾಯಿಯವರಾ. ಮೊದ್ಲು ಆ ಮಾತು ವಾಪಸ್ ತಗೊಳ್ರಿ, ಅಂಗಾಲಿನಿಂದ ಹಳ್ಳೆತ್ತಿನತಕ ಹುಡುಕಿದ್ರೂ, ತಟಗಾರ ಡೂಪ್ಲಿಕೇಟು ಇಲ್ಲ ನಾನು. ಅಲ್ರಿ ಆವೊತ್ತು ಏಕದಂತ, ನನಗೆ ದೋಸಿ ಉಪ್ಪಿಟ್ಟು ತಿನ್ನಸಿರಿ. ಅಂದಾಗ, ನಿಮ್ಮ ಪ್ರೀತಿ ನನ್ನ ಮ್ಯಾಗ ಐತೀ ಅಂದಂಗಾಯ್ತು. ನಾಚಿಕೋಬ್ಯಾಡ್ರಿ ಇದ್ದದ್ದು ಇದ್ದಾಂಗ ಹೇಳಿಬಿಡ್ರಿ ಅದಕ್ಕೆನಂತೆ ?

ಕುಬೇರ– ಏನು ಮಾತಾಡ್ತಿ ನೀನು, ಅವರ ಮುಖನಾರ ನೋಡು, ಕೊನೆಗೆ ಕಣ್ಣಾರ ನೋಡೋ ಮಾರಾಯ

ಚಂದ್ರ– ಸಾಕು ಸಾಕು ಇಲ್ಲೇ ಎಲ್ಲಾ ನೋಡಬ್ಯಾಡ.

ಕುಬೇರ– ಅವರ ಪ್ರೀತಿ ಸಂಪೂರ್ಣ ನನ್ನ ಮ್ಯಾಗ ಐತಿ.

ಚಂದ್ರ– ನನ್ನ ಮ್ಯಾಗ ಐತಲೆ

ಕುಬೇರ– ಇಕಾ ನನ್ನ ಮ್ಯಾಗ ಐತಿ ಅಂತಿನಿ. ಯಾಕ್ರಿ ಹೂಂ. ಕೇಳ್ರಿ ಅವರನ್ನ

ಅರುಣ– ಹೇ ಹುಚ್ಚು ಕಪಿಗಳಾ, ಹಗಲೆಲ್ಲಾ ಕಟ್ಟಿ ಹಾಕಿ ಬಡದ್ರೂ ಐದು ಪೈಸಾಯಿಲ್ಲ ನಿಮ್ಮ ತಾಕ, ನನ್ನನ್ನು ಮದುವಿ ಆಗ್ತಿರಾ ?

ಚಂದ್ರ– ಮದುವಿ ಆಗಲಿಕ್ಕ ಐದು ಪೈಸಾ ಯಾಕ ಬೇಕು ? ರೊಕ್ಕದ ಜೊತೆ ಯಾರಾದ್ರೂ ಮದುವಿ ಆಗ್ತಾರೇನು ? ಮದುವಿ ಆಗೋದು ಗಂಡು. ಈಗ ಸಧ್ಯ ನಮ್ಮ ತಾಕ ರೊಕ್ಕಾ ಇರದೇ ಇರಬಹುದು. ಆದರೆ ಪ್ರೀತಿಗೆ ಕೊರತೆಯಿಲ್ಲ. ಹೃದಯ ಅಂಬೋದು ಪ್ರೀತಿಯ ಒರತೆ ಆಗೈತಿ. ನಾನೇನು ಅರ್ಡಿನರಿ ಮನಿಷ್ಯಾ ಅಲ್ರಿ, ಒಂದು ಹನಿಮಸಿ ಕೋಟ ಜನಕೆ ಬಿಸಿ, ಅನ್ನೋದನ್ನ ಮರೀಬ್ಯಾಡ್ರಿ.

ಅರುಣ– ಅದು ಲಾರ್ಡ ಭೈರನ್ ಕವಿ ಹೇಳಿದ್ದು.

ಚಂದ್ರ– ಯಾರಾದ್ರೂ ಹೇಳಲ್ರಿ, ಅದಾ ಮಸಿ, ಅದಾ ಪೆನ್ನು, ಮತ್ತ ಅದ ರಾಗ ಅವರದು ಬ್ಯಾರೆ ಮಸಿ, ನಮ್ಮದು ಬ್ಯಾರೆ ಮಸಿ ಇರುತ್ತೇನು ?

ಕುಬೇರ– ಮುಖ್ಯವಾಗಿ ಆ ಅರ್ಟ್ಯಾ ಇಲ್ಲಲ್ಲ ನಿಮ್ಮ ತಾಕ, ಏನೈತಿ ನಿಮ್ಮ ತಾಕ.

ಕುಬೇರ– ಹಾಂ

ಚಂದ್ರ– ಏನಂದ್ರಿ ? ನಮ್ಮ ತಾಕ ಏನೂ ಇಲ್ಲಾಂತ ಅಂದ್ರೆನು ? ನಡ್ರಿ ? ಸಧ್ಯ ನಡ್ರಿ ಹಂಗಾದ್ರ,

ಅರುಣ– ಎಲ್ಲಿಗೆ ?

ಚಂದ್ರ– ಇಲ್ಲೇ ಮರೀಗೆ ಹೋಗೂನು. ನಿಮಗ ಸಂಶಯ ಇದ್ರ, ಎಲ್ಲಾನೂ ಚೆಕ್ ಮಾಡಿ ಬಿಡುವಂತ್ರಿ ಬರ್ರಿ ಅಂದ್ಯಾ (ಅಂಗಿಯ ಗುಂಡಿಗಳನ್ನು ಬಿಚ್ಚಲು ತೊಡಗುವನು)

ಮನ್ಮಥ– (ಪ್ರವೇಶಿಸಿ) ಇಲ್ಲಿ ಬಾಳ ಮಂದಿ ಆದಾರೋ ಮಾರಾಯಾ ಮತ್ತೆ ಇಲ್ಲೇ ಬಿಚ್ಚಿ ಗೋಳು ಗೋಮ್ಮಟೇಶ ಅಧೀಯಪಾ.

ಚಂದ್ರ– ಅಲ್ಲಿ ಏನಂದ್ರೂ, ಅನಸಿಗೊಂತಾರಂತ. ಈ ನಮೂನೆ ಅನ್ನೋದಾ ?

ಮನ್ಮಥ– ಇರಲಿ ಬಿಡ್ರಿ ಬಾಯಾರ, ಅವರಿಬ್ಬರದಂತೂ ಯೋಗ್ಯತೆ ನಮಗೆ ಗೊತ್ತಾ ಐತಿ. ಇನ್ನ ನನ್ನ ವಿಷಯನೂ (ಕೆಮ್ಮಿ) ಪಸಂದ ತಿಳಿದೈತಿ ಅದಕ್ಕ ಸ್ವಲ್ಪ ದೊಡ್ಡದು ಮಾಡ್ರಿ ನಮ್ಮದು.

ಅರುಣ– ಏನು ?

ಮನ್ಮಥ– ಮನಸ್ಸು, ದೊಡ್ಡ ಮನಸ್ಸು ಮಾಡಿ, ಖಾಯಂ ನನ್ನಾ ಗಂಡನ ಮಾಡಿಕೊಳ್ರೆಲ್ಲಾ.

ಅರುಣ– ಇರಲಿ ಹೋಗ್ರೋ ಕೈಲಾಗದ ರಣ ಹೇಡಿಗಳು ನೀವು. ಛತ್ರದಾಗ ಬಿಟ್ಟ ಕೂಳು ತಿಂದು, ಜಟ್ಟಿಗಳು ಅಡ್ಡಾಡಿದಾಂಗ ಅಡ್ಡಾಡತೀರಲ್ಲಾ. ನಿಮ್ಮಿಂದ ನಾನ್ಯಾಕ ಬರಲಿ ?ನಾನು ಮನಸ್ಸು ಮಾಡಿದೆ ಅಂದ್ರೆಎಂಥಂತದವರೋ ಸಿಗತಿದ್ರು) ಕಓಡಿಗಳು ಹಳೇ ಖೋಡಿಗಳು ಎಲ್ಲಿ ಹೊಯ್ದು (ಹೋಗುವಳು)

===***====***====

ಒಂಭತ್ತನೇಯ ಪ್ರವೇಶ

ಜ್ಯೋತಿಯ ಮನೆಯ ದೃಶ್ಯ

ರಾಣಿ– (ಮಹಡಿಯ ಮೆಟ್ಟಿಲುಗಳನ್ನು ಇಳಿಯುತ್ತ ಕೈಯಲ್ಲಿ ಕನ್ನಡಿಯನ್ನು ಹಿಡಿದುಕೊಂಡು, ವೈಯಾರ ಮಾಡುತ್ತ ಬರುವಳು) ಆ ಹಾ ಹಾ ಏನು ಚಂದಾ ಐತೇಯವ್ವಾ ನನ್ನ ಮಕಾ. ನನ್ನ ಕಣ್ಣು ನನಗಾ ಆಸರ ಆಗ್ತಾವು. ನನ್ನ ಮಕಾ ನೋಡಿ ಶ್ರೀದೇವಿ ಸೀರೆ ಮುಚಿಗೋ ಬೇಕು. ಮಂದಾಕಿನ ಮಕಾ ಕೆರಕೋಬೇಕು. ಜಯಪ್ರದ ಜಾಗ ಬಿಡ ಬೇಕು ಶಿಲ್ಪಾ ಶಿಲೆಯಾಗಬೇಕು. ಮಾಧುರಿ ಮಾಯ ಆಗಬೇಕು. ಯಕ್ಕಾ ಬೇ ಯಕ್ಕಾ

ಜ್ಯೋತಿ– (ಒಳಗಿನಿಂದ ಬರುತ್ತ) ಏನು ರಾಣೀ

ರಾಣಿ – ಏನು ರಾಣೀ ಅಂತ ಬಂದ್ಯಾ ಬಾ, ಅಲ್ಲಾ ನಾನು ಹೇಳಿದ ಮಾತು ನೆನಪಿಗಾಗ ಐತ್ಯಾ ಇಲ್ಲಾ?

ಜ್ಯೋತಿ– ನೀನು ಹೇಳಿದ ಮಾತಾ? ಅದ್ಯಾವುದು?

ರಾಣಿ ನಿ– ಅದಕ್ಕಾ ನಿನಗ ತಲಿ ಇಲ್ಲಾಂತ ಅನ್ನೋದು. ಎಸ್ಟೇಟು ಖರೀಧಿ ಮಾಡಲಿಕ್ಕೆ ಮೂವತ್ತು ಸಾವಿರ ರೂಪಾಯಿ ಕಡಿಮಿ ಬೀಳ್ತಾವು, ಅನ್ನೋಬಾರ, ಗೊತ್ತೈತಿಲ್ಲಾ ನಿನಗರ?

ಜ್ಯೋತಿ– ಅದಕ್ಕಾ ಅಲ್ಲೇನೋ ಈಗ ಮೀನ ಮೇಷ ಎಣಿಸಲಿಕ್ಕ ಹತ್ತಿದ್ದು

ರಾಣಿ– ನಾನೂ ಅದನ್ನಾ ಹೇಳ್ತಾ ಇರೋದು. ನೀನು ಇಷ್ಟಿಷ್ಟಕ್ಕಾ ಮೀನಾ ಮೇಷಾ ಎಣಿಸ ಬ್ಯಾಡಂತ, ಸುಮ್ಮಕ ತಲಿಕಟ್ಟು ಕಟಗೊಂಡು ಮಲಗಿ ಬಿಡು. ಶಂಕರ ಮಾಮ ಬಂದ ಮ್ಯಾಗ ರಾಗ ಸುರುವು ಮಾಡಿ ಬಿಡು.

ಜ್ಯೋತಿ– ಅಲ್ಲೋ ಅಷ್ಟೋಂದು ಹಣ ಒಮ್ಮಿಗೇ ತಗೊಂಡು ಬಾ ಅಂದ್ರೆ, ಅವರು ಎಲ್ಲಿಂದ ತಂದು ಕೊಡಬೇಕು?

ರಾಣಿ– ಏನು ಮಾತಾಡ್ತೀಯಬೇಯಕ್ಕಾ ನೀನು? ಹಾಂ. ಜಗತ್ತಿನಾಗ ಎಲ್ಲಾ

ಹುಚ್ಚಿಗಿಂತಲೂ, ಹೆಚ್ಚಿನ ಹುಚ್ಚು ಅಂದ್ರ, ಹೆಣ್ಣಿನ ಹುಚ್ಚು, ಈಗ ನೋಡು ಬೆಳಿಗ್ಗೆ ಮಲ್ಲಿಗೆ ಹೂವು ಬೇಕೂ ಅಂತ ಅಂದಿ ತಂದು ಕೊಟ್ಟ ಅದರ ಹೇಳ್ಯಾರ, ಹಿರಿಯರು, ಸಮಾಜದಾಗ ಎಂತೆಂಥವರಾ, ದೊಡ್ಡವರು ಸೂಳೇರ ಸಲುವಾಗಿ ಸುಡುಗಾಡಿ ಕಂಡಾರ ಅಂತ.

ಜ್ಯೋತಿ– ನೀನು ಅನ್ನೋ ಮಾತು ನಿಜರಾಣೀ, ಸಮಾಜದಾಗ ಪ್ರತಿಷ್ಠಿತ ವ್ಯಕ್ತಿಗಳು ಅಂತ ಅನಿಸಿಕೊಂಡವರಾ ಈ ಹುಚ್ಚಿನಾಗ ಬಿದ್ದು ಹಿಂದಿಂದ ಕೈಚೀಲ ಹಿಡಕೊಂಡು ಅಡ್ಡಾಡ ತಾವು ಅಲ್ಲೋ ಏಕದಂ ಮೂವತ್ತು ಸಾವಿರ ಅಂದ್ರ ಎಲ್ಲಿಂದ ತರ್ತಾರ ಅವರು?

ರಾಣಿ– ಅದನ್ನ ಅವರು ಯೋಚ್ನೆ ಮಾಡಬೇಕು? ನೀನ್ಯಾಕ ಯೋಚನೆ ಮಾಡಕ ಹೋಗ್ತಿ? ನೀನಾ ಕುತಗೊಂಡು ಹೀಂಗ ಕೇಳಿದ್ರ ಹ್ಯಾಂಗ? ಶಂಕರ ಮಾಮಗ ಏನೂ ಇಲ್ಲಾಂತ ತಿಳಿದಿಯೇನು? ದೆವ್ವನಂತ ಮತಿ ಐತಿ.

ಜ್ಯೋತಿ– ಹೌದಲ್ಲೋ ರಾಣಿ ಏನು ತಲಿ ನಂದು.

ರಾಣಿ– ಹೂಂ. ಈಗ ಶಂಕರ ಮಾಮ ಬರೋ ಹೊತ್ತಾಯ್ತು, ಜಲ್ದಿ ಹೋಗಿ ತಲಿಕೆಟ್ಟು ಕಟಿಗೊಂಡು ಮಲಗು

ಜ್ಯೋತಿ– ನನ್ನ ರಾಣಿ (ಕೆನ್ನೆ ಚೂಟಿ ಒಳಗೆ ಹೋಗುವಳು)

ರಾಣಿ– ನೀನು ನಾನು ಹೇಳಿದಂಗ ಒಂದಾ ಕೇಳು, ಅವಾಗ ನೋಡು ಇನ್ನ ಎರಡು ವರ್ಷ ಅನ್ನೋದ್ರಾಗ ನೀನು ಎಲ್ಲಿ ಇರ್ತೀದಿ?

ಶಂಕರ– (ಕೈಯಲ್ಲಿ ಹೂವು ಹಿಡಿದುಕೊಂಡು ಪ್ರವೇಶಿಸಿ) ಜ್ಯೋತಿ ಹೇ ಜ್ಯೋತಿ ನಿಮ್ಮಕ್ಕ ಎಲ್ಲಿ ಹೋದಳೋ ರಾಣಿ

ರಾಣಿ– ನನಗ ಗೊತ್ತಿಲ್ಲ ಮಾಮಾ ನಾನು ಇನ್ನ ಇದಾ ಈ ಸ್ನಾನ ಮಾಡಿ ಸೀರಿ ಮಡಿಸಿ ಬಂದೆ, ನನಗೇನು ಗೊತ್ತಪ್ಪ ಅಕೀದು,

ಶಂಕರ– ಬೇಗ ಹೂವು ತಂದು ಬಿಡ್ತಿ, ಸಿನಿಮಾಕ್ಕ ಹೋಗೋಣ ಅಂತ ಹೇಳಿದ್ದಲ್ಲೋ

ರಾಣಿ– ಹೇಳಿದು ಬಿಡು. ಆದ್ರ ಆಕಿ ಹ್ಯಾಂಗದಾಳು, ಎಲ್ಲಿ ಅದಾಳು ಅನ್ನೋದು ಆಕಿಜಾಗ ನಿನಗ ಗೊತ್ತು. ಹುಡುಕ್ಯಾಡಪಾ.

ಶಂಕರ– ಜ್ಯೋತೀ ಹೇ ಜ್ಯೋತಿ ಇಲ್ಲಿ ನೋಡೇ ಏನು ತಂದಿದ್ದೀನಿ.

ಜ್ಯೋತಿ– (ತಲೆಗೆ ಬಟ್ಟೆ ಕಟ್ಟಿಕೊಂಡು ಬಂದು ಬೇಸರದಿಂದ) ಏನು ತಂದಿದ್ದೀರಿ ಅದೇ ನಾಲ್ಕು ರೂಪಾಯಿ ಹೂವು ತಾನೇ?

ಶಂಕರ– ಯಾಕೆ ನಿನಗೆ ಇನ್ನೇನು ಬೇಕು? ಇದೇನಿದು ತಲೆಗೆ ಬಟ್ಟೆಯನ್ನೇಕೆ ಕಟ್ಟಕೊಂಡಿರುವೆ?

ಜ್ಯೋತಿ– ಏಕೋ ಏನೋ ನೀವು ಹೋದಾಗಿನಂದ ವಿಪರೀತ ತಲೆನೋವು ಬಂದು ಬಿಟ್ಟಿದೇರಿ

ಶಂಕರ– ತಲೆನೋವು ಬಂತಾ? ಅದೇಕೆ ಬಂತು? ಮಾತ್ರೆ ತಗೋಬೇಕಿತ್ತು.

ಜ್ಯೋತಿ– ಎಲ್ಲಾನೂ ತಗೊಂಡಾಯ್ತು, ಆದ್ರೂ ಕಡಿಮೆಯಾಗಲಿಲ್ಲ.

ಶಂಕರ– ಸ್ವಲ್ಪ ತಲಿ ಹಿಚುಕಲೇನು?

ಜ್ಯೋತಿ – ಹೋಗಬೇ ಸೀದಾ ಹೋಗಿ ಸುಮ್ನುಮಕ್ಕೋ. ತಲಿಲಿಂದ ಕಾಲಿ ತನಕ ಶಂಕರ ಮಾಮ ಹಿಚುಕತಾನ, ನಿನಗಂತೂ ಶಂಕರ್ ಮಾಮ ಅದಾನ ಹಿಚುಕತಾನ, ನಮಗ ಯಾರು ಹಿಚುಕಬೇಕು?

ಶಂಕರ– ಬೇಗನೇ ಹೂವು ತಂದು ಬಿಟ್ರಿ. ಸಿನಿಮಾಕ್ಕೆ ಹೋಗೋಣಾಂತ ಹೇಳಿದ್ದೆಯಲ್ಲ. ನೋಡು ನಾನೇ ನನ್ನ ಕೈಯಾರ ಈ ಹೂವನ್ನು ಪ್ರೀತಿಯಿಂದ ನಿನ್ನ ಮುಡಿಗೆ ಮುಡಿಸುವೆ ಈ ಕಡೆ ಬಾ.

ಜ್ಯೋತಿ– (ಹುಸಿಮುನಸಿನಂದ) ನನಗೆ ಯಾವ ಹೂವು ಬೇಡಾರಿ. ವಾಸಿ ಯಾಗದ ಈ ತಲೆ ನೋವಿನಿಂದ ನನಗೆ ಜೀವನವೇ ಬೇಸರವಾಗಿ ಬಿಟ್ಟಿದೆ. ಒಂದೊಂದು ಸಲ ಇದರ ಕಾಟ ತಾಳಲಾರದೇ ಆತ್ಮಹತ್ಯೆಯನ್ನು ಮಾಡಿಕೊಂಡು ಬಿಡಬೇಕೆನಸುತ್ತದೆ.

ರಾಣಿ– ಯಕ್ಕಾ....ಅಯ್ಯಯ್ಯಾ, ಹಂಗ್ಯಾಕ ಅಂತೀಯಬೇ (ಅಳುತ್ತ)

ಶಂಕರ– (ಗಾಬರಿಯಾಗಿ) ಜ್ಯೋತೀ ಏನು ಮಾತಾಡುತ್ತಿರುವೆ ನೀನು ಆತ್ಮಹತ್ಯೆಯನ್ನು ಮಾಡಿಕೊಳ್ಳುವೆಯೇನು? ನಿನಗಾಗಿ ನಾನು ಸರ್ವಸ್ವವನ್ನೂ ಬಿಟ್ಟು ಬಂದಿರುವುದು ನಿನ್ನ ಸ್ಮರಣೆಗೆ ಬರಲಿಲ್ಲವೇನು?

ಜ್ಯೋತಿ– ಅದನ್ನು ಯೋಚಿಸಿ, ನಿಮಗೋಸ್ಕರಾನೇ ನಾನು ಜೀವದಿಂದ ಇರೋದ್ರಿ,

ಶಂಕರ – ಸ್ವಲ್ಪ ರೆಸ್ಟ ತಗೋ ತಾನಾಗಿಯೇ ವಾಸಿಯಾಗುತ್ತದೆ.

ರಾಣಿ– ಹೂಂ ಹೋಗವ್ವಾ ಮಕ್ಕಾ ಹೋಗು. (ಜೋತಿಗೆ ಕಣ್ಣು ಮಿಟುಕಿಸಿ)

ಜ್ಯೋತಿ– ಏನ್ರಿ ನಿಮ್ಮನ್ನೊಂದು ಮಾತು ಕೇಳಲೆ?

ಶಂಕರ– ಹೂಂ ಕೇಳಲಿಕ್ಕೆಂದೇ ನಾನಿಲ್ಲವೇನು? ಅದೇನು ಮಾತು ಹೇಳೇ.

ಜ್ಯೋತಿ– ನಾನು ಈಗ ಎಸ್ಟೇಟು ಕೊಂಡುಕೊಳ್ಳುವ ವಿಚಾರ ನಿಮಗೂ ಗೊತ್ತು. ಆದ್ರೆ ಅದಕ್ಕೀಗ ಮೂವತ್ತು ಸಾವಿರ ರೂಪಾಯಿ ಕಡಿಮೆ ಆಗಿವೆ, ಅದಕ್ಕಾಗಿ ಯಾವ ರೀತಿ ಮಾಡಬೇಕು? ಅನ್ನೋದೆ ಸಮಸ್ಯೆಯಾಗಿ ಹಗಲುರಾತ್ರಿ ಯೋಚಿಸಿ, ಯೋಚಿಸಿ, ತಲೆಭಾರವಾಗಿ ತಲೆ ನೋವು ಬಂದು ಬಿಟ್ಟಿದೆ ಈಗ ಆ ಎಸ್ಟೇಟ ನಮ್ಮ ಕೈಜಾರಿ ಹೋದಲ್ಲಿ ಜೀವಮಾನದಲ್ಲೇ ಅಂತಹ ಜಾಗ ನಮಗೆ ಸಿಗುವುದಿಲ್ಲ.

ಶಂಕರ– (ಗಾಬರಿಯಾಗಿ) ಹಾಂ ಮೂವತ್ತು, ಸಾವಿರ?

ರಾಣಿ– ಹೂಂ ಬರೀ ಮೂವತ್ತು ಸಾವಿರ ನೀನು ದೊಡ್ಡ ಮನಸ್ಸು ಮಾಡಿದ್ರೆ ಅದೇನು ದೊಡ್ಡದಲ್ಲ ಶಂಕರ ಮಾಮಾ

ಶಂಕರ– ನನ್ನ ಹತ್ತಿರ ಅಷ್ಟೊಂದು ಹಣ ಎಲ್ಲಿಂದ ಬರಬೇಕು? ಇದ್ದದ್ದನ್ನೆಲ್ಲಾ ನಿಮಗೆ ನಿರ್ವಂಚನೆಯಿಂದ ಒಪ್ಪಿಸಿ ಬಿಟ್ಟಿದ್ದೇನೆ.

ರಾಣಿ– ನಿನ್ನ ಕಡಿಗೆ ಏನೂ ತಪ್ಪಿಲ್ಲ ಬಿಡು ಮಾಮಾ ನೀನೂ ಎಲ್ಲಾ ಒಪ್ಪಿಸೀದಿ ಅದಕ್ಕ ಸರಿಯಾಗಿ ನಮ್ಮಕ್ಕಾನೂ ಮುಟ್ಟಿಸ್ಯಾಳ.

ಜ್ಯೋತಿ– ಅಲ್ರಿ ಅಷ್ಟೊಂದು ಆಲೋಚನೆಯನ್ನೇಕೆ ಮಾಡುವಿರಿ ನಿಮ್ಮ ಮನೆ ಮೂವತ್ತು ಸಾವಿರ ರೂಪಾಯಿ ಬಾಳುವುದಿಲ್ಲವೇನು ?

ಶಂಕರ– (ಆಶ್ಚರ್ಯದಿಂದ) ಆಂದರೆ_______.

ರಾಣಿ– ನಮ್ಮಕ್ಕನ ಪ್ರೀತಿ ಪ್ರೇಮದ ಮುಂದೆ ಅದೇನು ಮಹಾ ಮಾಮಾ ಮಾರಿ ಬಿಡು ಕಣ್ಣು ಮುಚ್ಚಿಗೊಂಡು ಈ ದೇಶದಾಗ ಪ್ರೇಮದ ಸಲುವಾಗಿ ವಿಜಾಪೂರದಾಗ ಗೋಳ ಗುಮ್ಮಟ, ಆಗ್ರಾದಾಗ ತಾಜಮಹಲ್ ಕಟ್ಟಿಸ್ಯಾರ, ಅಂದಮ್ಯಾಗ ನೀನೊಂದು ಮನಿ ಮಾರಿ ಬಿಡು, ನಮ್ಮ ಎಸ್ಟೇಟನಾಗ ಮಸೀದಿ ಕಟ್ಟಿಸಿ ಬಿಡೂನು.

ಶಂಕರ– ಪಿತ್ರಾರ್ಜಿತವಾದ ಆಸ್ತಿ ಉಳಿದಿರೋದು ಅಂದ್ರೆ ಅದೊಂದೇ ಮನೆ, ಅದನ್ನೂ ಮಾರಿಬಿಟ್ರೆ ನನ್ನ ಹೆಂಡ್ತಿ ಮಕ್ಕಳು ದಿಕ್ಕಾಪಾಲಾಗ್ತಾರೆ.

ರಾಣಿ– ಕೇಳಿದೆಯೆನಕ್ಕಾ ಶಂಕರ ಮಾಮನ ಮಾತು

ಜ್ಯೋತಿ– (ಅಳುತ್ತ) ಏನ್ರಿ ನಿಮಗೆ ನಮಗಿಂತಲೂ ಅವರೇ ಹೆಚ್ಚೂ ಅಂತ ಕಾಣಿಸುತ್ತೆ. ಸಾಕು ಬಿಡಿ ಇಂದು ನಿಮ್ಮ ಮನದಿಂಗಿತವೆಲ್ಲಾ ನನಗೆ ತಿಳಿಯಿತು. ನಾವು ಕೇಳಿದ್ದನ್ನು ಕೊಡಿಸಲಿಕ್ಕೆ ನಮ್ಮವರೆನ್ನುವವರು ಯಾರಿದ್ದಾರ್ರಿ? ನಮ್ಮ ಮೇಲಿರೋ ಪ್ರೀತಿಯೆಲ್ಲಾ ಬರೀ ಆಡಂಬರದ್ದು.

ರಾಣಿ– ಜಗತ್ತಿನಾಗ ಎಲ್ಲಾ ಮಂದಿ ಇದಾ ನಮೂನೆ ಅದಾರ ನೋಡಬೇಯಕ್ಕಾ, ಒಂತಟಗು ಕೆಲಸದ ಸಲುವಾಗಿ ಏನೇನೋ ಆಸೆ ತೋರಿಸ್ತಾರ ನೀನಾ ಗೋಳಗೊಮಮ್ಮಟ ನೀನಾ ತಾಜ್ ಮಹಲ್ ಅಂತಾರ, ಅಮ್ಯಾಕ ಮರ್ತಾದ್ರೂ ಹಾಳು ಹಂಪೆ ಅಂತ ಅನ್ನೊಂಗಿಲ್ಲ.

ಶಂಕರ– ಜ್ಯೋತಿ ನಿನ್ನ ಮನದೊಳಗೆ ಹುಚ್ಚೆದ್ದು ಕುಣಿಯುವ ಆಸೆಯ ಅದ್ರಿಯಲ್ಲಿ ನಿಂತು ಮುಚ್ಚುಮಾತುಗಳಿಂದ ಚುಚ್ಚಿ ನುಡಿಯದಿರು, ಬಿಚ್ಚಿ ಬಯಲಿಗೆ ಅರಹುವೆ ಕೇಳೊಮ್ಮೆ ನಿನ್ನಿಚ್ಛೆಯಂತೆ ಬೆಳಗಾಗುವುದರೊಳಗಾಗಿ ಮನೆ ಮಾರಿಕೊಂಡು ಬರುತ್ತೇನೆ.

ರಾಣಿ– ನೋಡಿದೇನಬೇ ಖರೇವಂದ್ರ ನಿನ್ನಮ್ಯಾಗ ಖಂಡಾ ಪಟಿ ಪ್ರೀತಿ ಐತಿ ಮಾವಂದು, ಅಲ್ಲಾ ಶಂಕರ ಮಾಮ ಇದಾ ಮಾತನ್ನು ನೀನು ಮೊದ್ಲಾ ಅಂದಿದ್ರ ಏಕದಂ ಕ್ಯಾಕಿಹೊಡಿತಿದ್ದೆ ನೋಡು ನಾನು, ಇರಲಿ ಬಿಡು. ಈಗಾರ ಏನಾಗೈತಿ? ಅಲ್ಲಾ ಮಾಮಾ ಬೆಳತನಕಾ ಯಾಕ ನಿಧಾನ ಮಾಡ್ತಿ? ಇವತ್ತು ಒಳ್ಳೆ ತಿಥಿ ಒಳ್ಳೇ ನಕ್ಷತ್ರ ಅದಾವು ಈಗಾ ನಡದು ಬಿಡು ಮಾಮಾ

ಜ್ಯೋತಿ– ಹೌದ್ರಿ ನನ್ನ ಮನದಿಂಗಿತವೆಲ್ಲ ಕೈಗೂಡಿದಂತೆಲ್ಲಾ ನನ್ನ ತಲೆ ನೋವು ತಾಗಾನೇ ವಾಸಿಯಾಗುತ್ತದೆ

ರಾಣಿ– ಆತು ಬಿಡು ನಿನ್ನ ತಲಿನೋವಿನ ಸಲುವಾಗೀನಾ ಬೇಕಾದ್ದು, ಮಾಡಲಿಕ್ಕ ಶಂಕರ ಮಾಮ ತಯಾರು ಆದಾನ. ಹಂಗಾ ನಿಂತೀಯಲ್ಲಬೇ ಶಂಕರ ಮಾಮಗ ಏನಾರ ತಟಗು ಉಪಚಾರ ಮಾಡು. ನಾನು ಹಾಂಗಾ ಹೋಗಿ, ಶೇಠಸಾಬನ ಚೊಣ್ಣಲದಾಕ ಕೈ ಆಡಿಸಿ ಬರ್ತೀನಿ. ನಾಕು ರೂಪಾಯಿ ಸಿಗ್ತಾವು (ಹೋಗುನು)

ಶಂಕರ– ಈಗಲಾದರೂ ನೆಮ್ಮದಿಯೇ?

ಜ್ಯೋತಿ– ನಿಮ್ಮ ಸಂತೋಷವೇ ನನ್ನ ಸಂತಾಷ ಅಲ್ಲವೇನ್ರೀ. ಹೋಗಿ ಬೇಗನೆ ಸ್ನಾನ ಮಾಡ್ರಿ

ಶಂಕರ– (ಉಸಿರು ಹಾಕಿ) ಹಾಂ.. ನೀನೇ ಮಾಡಿಸುಬಾ (ಒಳಗೆ ಹೋಗುವನು)

ಜ್ಯೋತಿ– (ನಗುತ್ತ) ಅಯ್ಯೋ ಹುಚ್ಚ, ಹೊಂಬಣ್ಣದ ದೀಪ ತಂಪರೆಯುವ ಚಂದ್ರಮನೆಂದು ಭ್ರಮಿಸಿ ಬಂದು, ಮೈಸುಟ್ಟುಕೊಂಡು ಸಾಯುವ ಪತಂಗದಂತೆ ರಂಗಭೂಮಿಯ ನನ್ನ ನಟನೆಗೆ ಮರುಳಾಗಿ ಮೋಹದ ಸುಳಿಯಲ್ಲಿ ಸಿಲುಕಿ, ಮನೆ ಮಠ ಮಾರುವ ನಿಮ್ಮ ಜೀವನ ಎಂದಿದ್ದರೂ ದುರಂತದಲ್ಲಿ ಪರ್ಯಾವಸಾನ ಹೊಂದುತ್ತದೆಂದು ನಿಮ್ಮ ಮಂದಬುದ್ಧಿಗೆ ಅರಿವಾಗುವುದಾದರೂ ಹೇಗೆ ? (ಒಳಗೆ ಹೋಗುವಳು)

(ಪರದೆ ಬೀಳುವುದು)

===***====***===

ಹತ್ತನೆಯ ದೃಶ್ಯ

–ರಸ್ತಾ ದೃಶ್ಯ–

ಗುರುನಾಥ – (ಪಂಕ್ಚರ್ ಆದ ಬೂಟನ್ನು ಹಾಕಿಕೊಂಡು ಪ್ರವೇಶಿಸುವನು) ಈ ತೂ....ತೂ...ತೂತಿನ ಸಲುವಾಗಿ ಸಾ..... ಸಾಕಾಗಿ ಹೋತು. ಒಂದು ತೂ ತೂತು ಮುಚ್ಚೋದ್ರಾಗ ಮ ಮ ಮತ್ತೊಂದು ತೂ ತೂ ತೂತು ಬಿದ್ದಿರತೈತಿ. ನ.... ನಮ್ಮ ಶಿಜನ್ನು ಇ...ಇದರಾಗ ಮು....ಮು ಮಗುದು ಹೋತು. ಆ ಹು ಹುಡುಗೀನ ಇ ಇವತ್ತಾರ ಧೈ ಧೈರ್ಯ ಮಾಡಿ ಕೇ ಕೇಳೇ ಬಿಡ್ತೀನಿ.

ಶೇಠಸಾಬ– (ಬರುತ್ತ) ಕ್ಯಾಬಾ ಗುರುನಾಥ ಹ್ಯಾಂಗಿದ್ದಾವು ?

ಗುರು – (ಸಿಟ್ಟಿನಿಂದ) ಹಿ ಹಿ ಹಿಂಗ ಅ ಅದೀನಿ ನೋಡಪಾ; ನಾ ನಾನು ಸು ಸುಂದರಾಂಗಿನ ನೆನಸಿದ್ರ ನೀ ನೀ ಸುಡುಗಾಡ ಮ ಮಂಗ ಬಂದಿ

ಶೇಠಸಾಬ– ಕ್ಯಾ ಮಂಗ್ಯಾ ಅಂತಾವು ತೂ. ಇರಲಿ ಇರಲಿ ಶಂಕರ ಕಾ ಗರ್ ಎತ್ಲಾಗ ಅದಾವು ?

ಗುರು – ಎ ಎ ಎತ್ಲಾಗ ಅ ಅದಾವೋ ಯಾವನಿಗೆ ಗೊ ಗೊತ್ತು ?

ಶೇಠ – ಹಂಗ್ಯಾಕ ಮಾಡ್ತಿದ್ದಾವು ? ನಮ್ಮದೂಕೆ ಅವರ ಗರ್ ಖರೀದಿ ಮಾಡಿದ್ದಾವು. ಜರಾ ತೋರಿಸು ನಿಂದು.

ಗುರು – ನ ನ ನಂದು ತೋ ತೋರಿಸಲಾ. ಉಂ ಹುಂ ಗ ಗ ಗಂಡಸರಿಗೆ ಹಾ ಹಾಂಗ ನಾವು ತೋರಿಸೂಂಗಿಲ್ಲ ಸ ಸರಿರಿ ನಾ ನಾ ನಾನು ಬರ್ತೀನಿ (ಅವಸರವಾಗಿ ಹೋಗಲು ಶೇಠ ತಡೆಯುವನು)

ಶೇಠ – ನೀವು ಬಾಳ ಅವಸರ ಮಾಡ್ತಿದ್ದಾವು.

ಗುರು – ನ ನ ನಮ್ಮ ಪ ಪರಿಸ್ಥಿತಿ ಹ್ಯಾ ಹ್ಯಾಂಗೈತಿ ನಿ ನಿನಗೇನು ಗೊತ್ತು ಅ ಅ ಅರಮರ್ಧ ಮಾ ಮಾ ಮಾತಾಡಿಕೋತ ನನಗ ಸಾ ಸಾಡೇಸಾತಿ ಆಗಿ ಗ ಗ ಗಂಟು ಬಿದ್ದೀಯಪಾ.

ಶೇಠ – ಗುಸ್ಸಾ ಮತ್ತ ಕರೋ. ಜರಾ ತೋರಸ್ತಾವು ನಿಂದು ?

ಗುರು – ಹೇ ನೀ ನಿನ್ನ ನಂದ್ಯಾಕ ತೋ ತೋರಿಸಂದ್ಯೋ ನಿ ನಿನಗ ಬ್ಯಾ ಬ್ಯಾರೆ ಬದುಕು ಇಲ್ಲೆನು ? ನ ನಮ್ಮ ತೂ ತೂತಾ ನಮಗ ಸಾ ಸಾ ಸಾಕಾಗೈತಿ (ಹೋಗುವನು)

ಶೇಠ – ತೂತು ಎಲ್ಲಿಗೆ ಹೋಗ್ತಾವು ? ಮೊದ್ಲು ನಮಗ ದಾರಿ ತೋರಿಸು ಅರೆಭಾಯಿ ಜರಾ ನಿಂದರ್ (ಹೋಗುವನು)

===***=====***===

ಹನ್ನೊಂದನೆಯ ಪ್ರವೇಶ

ಶಂಕರನ ಮನೆ

(ಸುಂದರ ಒಳಗಿನಿಂದ ಬಂದು, ನಿರಾಶಾಭಾವದಿಂದ ದೇವರ ಭಾವಚಿತ್ರ ವೀಕ್ಷಿಸಿ)

ಸುಂದರ– ಹೇ ದೇವಾ. ಕರುಣಾಕರ ಭಕ್ತವತ್ಸಲಾ ಅನ್ನುವ ಬಿರುದುಗಳನ್ನೆಲ್ಲಾ ನಿನ್ನ ಹೊಗಳು ಭಟ್ಟ ಭಕ್ತರ ಬರೀ ಆಡಂಬರದ ಮಾತುಗಳೆಂದು ನೀನೇ ರುಜುಮಾಡು ಮಾಡಿ ತೋರಿಸಿದೆ. ಇಷ್ಟದೈವ ನೀನೆಂದು ಅನವರತ ಪೂಜಿಸಿದ ನನ್ನತ್ತಿಗೆಗೆ ಕಷ್ಟಗಳ ಪರಂಪರೆಯನ್ನೇ ತಂದೊಡ್ಡಿ ಸ್ಪಷ್ಟವಾಗಿ ತೋರಿಸಿದೆ. ನಿಷ್ಠೆಯಿಂದ ನೀತಿ ಮಾರ್ಗಕ್ರಮಿಸುವವರಿಗೆ ಕಷ್ಟ ತಪ್ಪಿದ್ದಲ್ಲವೆಂದು, ವಿಷಯಾಸಕ್ತನಾಗಿ ಮನೆಯನ್ನೇ ತೊರೆದುಹೋದ ಅಣ್ಣ ಒಂದೆಡೆ; ವಿಷಮ ಜ್ವರ ಪೀಡಿತನಾಗಿ ಮಲಗಿದ, ಹಸುಳೆ ರವಿಯ ಸಂಕಟದ ಅರ್ತನಾದ ಇನ್ನೊಂದೆಡೆ. ಕಣ್ಣೀರ ಪ್ರವಾಹವನ್ನೇ ಕಂಗಳಲ್ಲಿ ಹರಿಸಲು ನೀ ಸೃಷ್ಟಿಸಿದ ಅತ್ತಿಗೆಯ ಅಳು ಮತ್ತೊಂದೆಡೆ; ಇಲ್ಲಿಯ ತನಕ ಹಾಗೂ ಹೀಗೂ ನಮ್ಮನ್ನು ಸಲುಹಿದ ಗ್ಯಾರೇಜ್ ಮಾಲಿಕನೂ ಓಸಿಯ ಕರಾಳ ರಾಕ್ಷಸನ ನಾಲಿಗೆಗೆ ಆಹುತಿಯಾಗಿ ಇದ್ದ ಗ್ಯಾರೇಜನ್ನೂ ಮುಚ್ಚಿ ದುಡಿದು ಬದುಕುವ ಬಡವರ ಹೊಟ್ಟೆಯ ಮೇಲೆ ಬಂಡೆಗಲ್ಲನ್ನಿಕ್ಕಿದ, ಹುಂ ಈಗ ನಿನ್ನ ಮನಸ್ಸಿಗೆ ನೆಮ್ಮದಿಯಾಗಿರಬೇಕಲ್ಲ ?

ಸುಂದರ– ಹೂಂ. ಊಟ ಹಸಿವೆಯೆಂಬುದೇ ಹಿಂಗಿದೆ.

ಲಕ್ಷ್ಮೀ– ಹಾಗೆ ಮಾತನಾಡಿದರೆ ಹೇಗೋ ಇರಲಿ ಬಾರಪ್ಪಾ, ರವಿಯು ಕೂಡ ಈಗ ಸ್ವಲ್ಪ ಗಂಜಿಯನ್ನು ಕುಡಿದು ಮಲಗಿದ್ದಾನೆ.

ಸುಂದರ– ಔಷಧಿ ತರಲು ಹಣವಿಲ್ಲದಾಗ ಗಂಜಿಯೊಂದೇ ಅವನ ಜೀವನಕ್ಕಾಧಾರ.

ಲಕ್ಷ್ಮೀ – ಕಷ್ಟ ಸಹಿಷ್ಣುಗಳಿಗೆ ದೇವರು ಪದೇ ಪದೇ ಕಷ್ಟ ಕೊಟ್ಟು, ಪರೀಕ್ಷಿಸುತ್ತಾನಂತೆ, ಪರೀಕ್ಷಿಸಲಿ ಅವನ ಮನ ತಣಿಯುವವರಿಗೂ ಪರೀಕ್ಷಿಸಲಿ. ಅವನ

ಮನ ತಣಿಯುವವರಿಗೂ ಪರೀಕ್ಷಿಸಲಿ. ರವಿಗೆ ಅಂಭಾಭವಾನಿಯ ಭಸ್ಮವನ್ನು ಹಚ್ಚಿ ಬಂದಿದ್ದೇನೆ. ಕಾಯ್ದು ಕಾಪಾಡುವುದು ಅವಳ ಭಾರ ನೀನು ಮೊದಲು ಊಟ ಮಾಡು ಬಾ. ಈ ರೀತಿ ಹಸಿವು ಕಟ್ಟಿ ನನ್ನ ಒಡಲುರಿಯನ್ನು ಹೆಚ್ಚಿಸಬೇಡ.

ಸುಂದರ –ಇರುವ ಜೀವನಾಧಾರದ ಕೆಲಸವೂ ಹೊರಟು ಹೋಯ್ತು. ಅತ್ತಿಗೆ ಹೊಟ್ಟೆಗೆ ಏನು ಮಾಡಬೇಕೆಂಬ ಚಿಂತೆ ಚಿತೆಯಾಗಿ ನನ್ನ ಮನಸ್ಸನ್ನು ದಹಿಸುತ್ತಿದೆ.

ಲಕ್ಷ್ಮೀ – ಹುಟ್ಟಿಸಿದ ದೇವರೆಂದೂ ಹುಲ್ಲನ್ನು ಮೇಯಿಸಲಾರ.........ನೀನು ಮನಸ್ಸಿಗೆ ನೆಮ್ಮದಿತಂದುಕೊ ಹಾಂ. ಸುಂದ್ರೂ.........ನೀ ನು ಅನ್ಯಥಾ ಭಾವಿಸದಿದ್ದರೆ ನಾನೊಂದು ಮಾತು ಕೇಳಲೆ

ಸುಂದರ – ಅದೇನೆಂದು ಬೇಗ ಹೇಳಿ ಅತ್ತಿಗೆ, ಹೇಳಲು ಕೇಳಲು ನೀವೇತಾನೆ ನನಗೆ ಗತಿ ಮತಿ.

ಲಕ್ಷ್ಮೀ – (ತಡವರಿಸುತ್ತ) ಸುಂದ್ರು.........ಅದು........ಅದು

ಸುಂದರ – ಹೇಳಮ್ಮಾ ?

ಲಕ್ಷ್ಮೀ – ನನಗೂ ಒಬ್ಬಳೇ ಮನೆಯಲ್ಲಿ ಕುಳಿತು ಬೇಸರವಾಗಿ ಬಿಟ್ಟಿದೆ ಯಾರ ಮನೆಯಲ್ಲಿಯಾದರು ಕೆಲಸ ಮಾಡುವ ಬಯಕೆ.

ಸುಂದರ – (ಆವೇಶದಿಂದ) ಸಾಕು ಮಾಡಮ್ಮಾ, ಸಹಿಸಲಸಾಧ್ಯವಾದ ಮಾತನ್ನು ಏನು ನುಡಿಯುವೆಯಮ್ಮಾ ? ನಿನ್ನ ಈ ಹಿರಿಯ ಮಗ ನಿನ್ನೂ ಬದುಕಿರುವಾಗು ನೀನು. ನೀನು ಹೆರವರ ಮನೆಯ ಎಂಜಲಿನ ಪಾತ್ರೆಯನ್ನು ತಿಕ್ಕಿ ಸಂಸಾರ ಸಾಗಿಸಲು ಸಹಕಾರಿಯಾಗುವೆಯೇನು ? ಮರೆತಾದರೂ ಮತ್ತೊಮ್ಮೆ ಆ ಮಾತನ್ನುಚ್ಚರಿಸದಿರಮ್ಮಾ

ಲಕ್ಷ್ಮೀ – ಅಲ್ಲೋ ನಾನು ಹೇಳುವುದೇನಂದರೆ............

ಸುಂದರ – ಅದನ್ನೇ ಹೇಳಬೇಡವೆಂದು ನಾನು ಹೇಳಿದ್ದು ಅತ್ತಿಗೆ, ಮಾತೆಯಾಗಿ ನೀನುಣ್ಣಿಸಿದ ಮಮತೆಯ ತುತ್ತಿನ ಶಕ್ತಿ, ಆನೆಯ ಬಲವನ್ನು ನನ್ನ ತೋಳ ಶಕ್ತಿಯಲ್ಲಿ ತಂದಿದೆ. ಕಾಡಿನಲ್ಲಾಗಲೀ ರೋಡಿನ ಕೆಲಸವಾಗಲಿ ಮಾಡಿ, ನಿಮ್ಮನ್ನು ಸಾಕುವ ಚೈತನ್ಯವನ್ನು ನಾನಿನ್ನೂ ಕಳೆದುಕೊಂಡಿಲ್ಲವಮ್ಮಾ. ಯಾವ ಕೆಲಸವಾದರೇನು ? ಪದವೀಧರನೆಂದು ಸರಕಾರಿ ನವಕರಿಗಾಗಿ ಬಾಯಿ ತೆರೆದು ಕುಳಿತರೆ ಮುಪ್ಪು

ಮುಟ್ಟಬಹುದು. ವಿದ್ಯಾವಂತರಿಗೆ ಪದವೀಧರರಿಗೆ ಪ್ರಾಮಾಣಿಕ ಕೆಲಸ ನೀಡುವ ಯೋಗ್ಯತೆ ಈ ಭಾರತ ಸರಕಾರಕ್ಕಿಲ್ಲ ಲಂಚದ ಮಂಚ ಏರುವ ನರ ರಾಕ್ಷಸ ರಾಜಕಾರಣಿಗಳ ಕಣ್ಣೀಗೆ ಹೇಗೆ ಕಾಣಬೇಕು ?

ಲಕ್ಷ್ಮೀ – ಬಾರೋ ನನ್ನ ಕೈಯಾರೇ ಕೈ ತುತ್ತು ಕೊಡುವೆ ಬಾರಪ್ಪಾ

ಸುಂದರ– ಸ್ವರ್ಗಲೋಕದ ಅಮೃತಕ್ಕಿಂತಲೂ ಮಿಗಿಲಾದ ನಿನ್ನ ಕೈತುತ್ತನ್ನು ನಿರಾಕರಿಸುವಷ್ಟು ಮಂದಮತಿ ನಾನಲ್ಲ ನಡೆಯಮ್ಮಾ

ಲಕ್ಷ್ಮೀ – ಇರು ಹಾಗಾದರೆ ತರುವೆ (ಒಳಗೆ ಹೋಗುವಳು ತಾಟಿನಲ್ಲಿ ಅನ್ನ ಹಾಕಿಕೊಂಡು ತರುವಳು)

ಸುಂದರ– ಅರೇಸುಂದ್ರು ಬಾಯಿ ಮನ್ಯಾಗ ಇದ್ದಾವು.

ಲಕ್ಷ್ಮೀ – ಯಾರು ?

ಶೇಠ – ನಾನು.........ಹಿ..........ಹಿ............ಹಿ........ಸಿರಿವಂತ ಶೇಠಸಾಬಜಿ

ಸುಂದರ – ಇದೇನು ಶೇಠಜಿಯವರು ಮಾರ್ಗ ತಪ್ಪಿ ನಮ್ಮ ಮನೆಗೆ ಬಂದಂತಿದೆ

ಶೇಠ – ತಪ್ಪಿ ಬಂದಿಲ್ಲ ಸುಂದ್ರು ಬಾಯಿ ಒಪ್ಪಿ ರೊಕ್ಕ ಎಣಿಸೇ ಬಂದಿದ್ದಾವು.

ಸುಂದರ– ತಮ್ಮ ಮಾತಿನ ಮತಿತಾರ್ಥವಾಗಲಿಲ್ಲ ನನಗೆ

ಶೇಠ – ಅರ್ಥ ಯಾಕಬೇಕು ಬಾಯಿ ಸುಮ್ನ ವ್ಯರ್ಥ, ನಿಮ್ಮಣ್ಣ ಶಂಕರ ಬಾಯಿ ಇಪ್ಪತ್ತೈದು ಸಾವಿರ ರೂಪಾಯಿಗೆ ಈಗರ್ ಹಮ್ಕೂ ಕೊಟ್ಟದ್ದಾವು. ಮಾಲುಮ್ (ಲಕ್ಷ್ಮೀ ಸುಂದರ ಹೌ ಹಾರುವರು).

ಲಕ್ಷ್ಮೀ – ಹಾಂ. ಈಮನೆಯನ್ನು....

ಸುಂದರ – ಏನಂದೆ ? ಹೇ ಶೇಠ ಮನೆ ಮಾರಿ ಬದುಕು ಸಾಗಿಸುವ ದುರ್ಧರ ಪ್ರಸಂಗ ನಮ್ಮಗಿನ್ನೂ ಬಂದೊದಗಿಲ್ಲ.

ಶೇಠ – ನನಗೆ ಅದೆಲ್ಲಾಬೇಕಿಲ್ಲಾ. ನಾನೇ ಇಪ್ಪತ್ತೈದು ಸಾವಿರ ರೂಪಾಯಿ ಎಣಿಸಿ ತಗೊಂಡಿದ್ದಾವು. ನೀವು ಈಗಲೇ ಗರ್ ಖಾಲಿ ಕರನಾ ನಹಿತೋ ಹೊರಗೆ ದೂಕ್ತಾವು.

ಸುಂದರ – ಏನು ಅರಚುವೆ ಲೇ ಕೊಬ್ಬಿದ ಕೋಣ. (ಅಂಗಿಯ ಕಾಲರ್ ಹಿಡಿದು)

ಶೇಠ – ಲೇ ಸುಂದ್ರು.............ಸುಂದ್ರು ಹಾತ್ ಚೋಡ.

ಸುಂದರ– ಇನ್ನೊಂದು ಸಲ ಈ ಮನೆಯ ವಿಷಯ ಎತ್ತಿದೆಯಾದರೆ ನಿಮ್ಮನ್ನು ಜೀವಂತ ಸುಟ್ಟುಬಿಡುತ್ತೇನೆ (ಎಂದು ಕತ್ತಿಗೆ ಕೈ ಹಾಕಲು.

ಶೇಠ – (ಚೀರಿ) ಹೇ ಜೋಡ್ ಶಂಕರ್ ಬಾಯಿ ಜಲ್ದಿ ಬಾ.

ಶಂಕರ – (ಅವಸರದಿಂದ ಬಂದು ಬಿಡಿಸಿ) ಲೇ ಕೈ ಬಿಡೋ ಏನಂದೆ ಕತ್ತಿಚುಕಿ ಕೊಲ್ಲುವೆಯೇನೋ ಹೂಂ. ಹಿಚುಕು ನೋಡೋಣ ಸಾಯುವತನಕ ಕಾರಾಗೃಹದ ಕತ್ತಲೆಯ ಕೋಣೆಯಲ್ಲಿ ಕೊಳೆಯ ಬೇಕಾದೀತು.

ಲಕ್ಷ್ಮೀ – ಏನ್ರಿ ಏನಾಯ್ತಿರಿ ನಿಮಗೆ ಇಲ್ಲಿಯ ತನಕ ನೀವು ಕೇಳಿದಂತೆ ಮೈ ಮೇಲಿನ ವಸ್ತ್ರ ಒಡವೆಗಳನ್ನೆಲ್ಲಾ ಕೊಟ್ಟು, ನಿಮ್ಮ ಹೇಳಿಕೆಯಂತೆಯೇ ನಡೆದುಕೊಂಡ ನಮ್ಮನ್ನು ಈ ಮನೆಯಿಂದ ಹೊರದೂಡಿದರೆ ಬದುಕಲಿಕ್ಕಾದರೂ ಸಾಧ್ಯವೇನ್ರಿ, ನಮ್ಮಷ್ಟಕ್ಕೆ ನಾವು ದುಡಿದು ತಿಂದರೂ ನಿಮಗೆ ಅಸೂಯ ಏಕೆ ?

ಶಂಕರ – ನಾನೇಕೆ ಅಸೂಯೆ ಪಡಲಿ. ಮನ ಬಂದಂತೆ ದುಡಿದು ತಿನ್ನಿರಿ. ದುಡಿಯಲು ಖಾಯಂ ಆಗಿ ನಿನಗೆ ಸುಂದರ ಸಿಕ್ಕಿದ್ದಾನಲ್ಲ.

ಸುಂದರ –ಥೂ ಪಾಪಿ. ಬಾಯಿಗೆ ಬಂದಂತೆ ಬೊಗಳುವೆಯೇನೋ ಹಂದಿ ಜಾತಿಯವನನಾದ ನಿನಗೇಗೆ ತಿಳಿದೀತು ನಂಟಿಯ ಬೆಲೆ.

ಶಂಕರ – ನನಗೆ..........ನನಗೆ ಹಂದಿಯೆಂದು ಹಳಿಯುಣವೆಯೆನಲೆ ?

ಸುಂದರ – ಈ ಮನೆ ಪೂರ್ವಾರ್ಜಿತವಾದ ಆಸ್ತಿ, ಇದರಲ್ಲಿ ಕೈ ಹಾಕಲು ನಿನಗೆ ಕಿಂಚಿತ್ತೂ ಅಧಿಕಾರ ಇಲ್ಲ.

ಶಂಕರ – ನಿಮ್ಮಬ್ಬರನ್ನೂ ಈ ಕ್ಷಣವೇ ಒದ್ದು ಹೊಣ ಹಾಕುವ ಅಧಿಕಾರ ನನಗಿದೆ. ಹೂಂ. ಶೇಠಸಾಬ ಗಾಬರಿಯಿಂದ ನೀವು ಮುಖನೋಡುವ ಪ್ರಮೇಯವೇ ಇಲ್ಲ, ನೀನೀಗ ಈ ಮನೆಯ ಧಣಿ ಬರೀ ಬಾಯಿ ಮಾತಿಗೆ ಬಗ್ಗುವವರಲ್ಲ ಈ ಭಂಡರು, ಒದ್ದು ಹೊರಹಾಕು.

ಲಕ್ಷ್ಮೀ – ಯಾವ ಪಾಪ ಮಾಡಿದ್ದೇವೆಂದು ನಮಗೀ ಶಿಕ್ಷೆಯನ್ನು ನೀಡುತ್ತಿರುವಿರಿ. ನಿಮ್ಮ ಕಾಲಿಗೆ ಬೀಳುವೆ. ನಿಮ್ಮದಮ್ಮಯ್ಯವೆಂದು, ದಯವಿಟ್ಟು ಈ ಮನೆಯಿಂದ ಹೊರಗೆ ಕಳಿಸದಿರಿ. (ಎಂದು ಶಂಕರನ ಕಾಲು ಹಿಡಿಯಲು ಶಂಕರ ಜಾಡಿಸಿ ಒದೆಯಲು)

ಶಂಕರ – ಥೂ ಜಾರಿಣಿ ದೂರ ಸರಿ ಯಾಚೆ.

ಸುಂದರ– ಏನಂದೆ ಜನ್ಮ ಭೂಮಿಯಷ್ಟೇ ಪವಿತ್ರವಾಗಿರುವ ನನ್ನ ಜನನಿಗೆ ಜಾರಣಿಯೆಂದು ಜರಿದ ನಿನ್ನನ್ನು ಜೀವದಿಂದ ಬಿಡಲಾರೆ (ಶಂಕರನ ಕುತ್ತಿಗೆಗೆ ಕೈ ಹಾಕಲು)

ಶಂಕರ – (ಕೊಸರಿಕೊಳ್ಳಲು ಹೋಗಿ ವಿಫಲನಾಗಿ) ಸುಂದ............ರೂ

ಲಕ್ಷ್ಮೀ – (ಆವೇಶದಿಂದ) ನನ್ನ ಕಣ್ಣೆದುರಿಗೇ ನನ್ನ ಪತಿಯ ಮೇಲೆ ಕೈ ಮಾಡುವೆಯೇನೋ ? ತುತ್ತುಣಿಸಿ ಬೆಳೆಸಿದ ಪಿತೃ ಸ್ವರೂಪಿ ಅಣ್ಣನ ಕತ್ತಿಚುಕಲು ಮುಂದಾದೆಯಾ ಮತಿಹೀನ, ಬಿಡು ಅವರ ಕತ್ತನ್ನು (ಸುಂದರನ ಕೆನ್ನೆಗೆ ಜೋರಾಗಿ ಹೊಡೆಯುವಳು)

ಸುಂದರ – (ಕಣ್ತುಂಬಿ) ಅತ್ತಿಗೆಮ್ಮಾ ಇನ್ನೇಕೆ ನಿಲ್ಲಿಸಿ ಬಿಟ್ಟೆ, ಇನೊಂದು ಕೆನ್ನೆ ನನ್ನ ಕೈ ಏಟಿಗಾಗಿ ಕಾಯ್ದಿದೆ ಮೋಹಿನಿಯೋರ್ವಳ ಮೋಹದ ಜಾಲದಲ್ಲಿ ಅಣ್ಣ, ಮಾತೃ ಸ್ವರೂಪಳಾದ ನಿಮಗೆ ಮನ ಬಂದಂತೆ ಮಾತನಾಡಿದನೆಂದು ನನಗರಿವಿಲ್ಲದಂತೆ ಕೈ ಮಾಡಿದೆನಮ್ಮಾ ನನ್ನನ್ನು ಕ್ಷಮಿಸು.

ಲಕ್ಷ್ಮೀ – (ಅಳುತ್ತ) ಸುಂದ್ರೂ, ನಾನೂ ಪಾಪಿಯಪ್ಪಾ ಪಾಪೀ.

ಶಂಕರ – ಹೇ ಶೇಠಜಿ ಇವರ ನಾಟಕ ಕೇಳಲು ನಮಗೀಗ ಸಮಯವಿಲ್ಲ ಹೂಂ ಮರ್ಯಾದೆಯಿಂದ ಮನೆ ಬಿಡುವಿರೋ ಅಥವಾ ಮನೆಯಿಂದ ಒದ್ದು ಹೊರ ಹಾಕಬೇಕೋ ವಿಚಾರಿಸು.

ಲಕ್ಷ್ಮೀ – ನಡೆಯಪ್ಪಾ. ಇಷ್ಟೊಂದು ಮುಖಭಂಗ ಮಾಡಿಕೊಂಡು ಈ ಮನೆಯಲ್ಲಿ ನಿಲ್ಲುವುದು ವಿಹಿತವಲ್ಲ. ಇಂದಿಗೆ ಈ ಮನೆಯ ಋಣ ತೀರಿತು. ಋಣ ತೀರಿತು. (ಉಕ್ಕಿಬಂದ ದುಃಖ ನುಂಗಿ ಒಳಗೆ ಹೋಗುವಳು)

ಸುಂದರ – ಹೂಂ. ಹೌದಮ್ಮಾ ಇಲ್ಲಿರುವುದು ತರವಲ್ಲ. (ಲಕ್ಷ್ಮೀಯು ಒಳಗಿನಿಂದ ಸೀರೆಯ ಗಂಟೊಂದನ್ನು ಬಗಲಿಲ್ಲ ಹಿಡಿದುಕೊಂಡು ಹೆಗಲ ಮೇಲೆ ಜ್ವರ ಪೀಡಿತನಾದ ಮಗು ರವಿಯನ್ನು ಎತ್ತಿಕೊಂಡು ಬರಲು ಸುಂದರ ಕಣ್ಣೊರಸಿ ಕೊಂಡು ರವಿಯನ್ನು ಎತ್ತಿ ಕೊಳ್ಳುವನು)

ಲಕ್ಷ್ಮೀ – (ಲಕ್ಷ್ಮೀ ಸುಂದರ ಭಾರನಾದ ಹೆಜ್ಜೆಯಿಟ್ಟು ಮುಂದೆ ಸಾಗಿ ನಂತರ ಹಿಂತಿರುಗಿ ನೋಡುವರು) ಅಯ್ಯೋ................ದೇ ವ ರೇ.

ಶೇಠ – ಜಲ್ದಿ ಜಾನಾ..........(ಅವರು ಹೋದ ನಂತರ)

ಶಂಕರ – ಆಯಿತಲ್ಲ ಶೇಠಜೀ. ಪೀಡೆಗಳಂತೂ ತೊಲಗಿದವು. ಇನ್ನುಳಿದ ಹಣವನ್ನು ಈಗ ಕೊಟ್ಟು ಬಿಡಿ. ನನ್ನ ಪ್ರಿಯತಮೆಯ ಮನ ನೋಯಬಾರದು.

ಶೇಠ – ನಮಗಂತೂ ಅಚ್ಚಾಗರ್ ಸಿಕ್ತು. ಬನ್ನಿ ಕೊಡ್ತಾವು. ಇದೆಲ್ಲಾ ನಮದೂಕೆ ಬಹುತ್ ಹಿಡಿತ್ತು (ಹೋಗುವರು)

"ಹಿನ್ನೆಲೆಯಪದಾ"

ವಿಧಿಯು ತೂಗುವ ಈ ತೊಟ್ಟಿಲು
ಇದು ಹಸಿದವರಿಗೆ ವಿಷದ ಬಟ್ಟಲು
ಕಷ್ಟದಾರಿಯಲು ಬರುವ ಕಣ್ಣೀರ ಕಡಲು
ಒಡವಾಗ್ನಿ ತುಂಬಿದ ಒಡವ ನೋಡಲು

===***====***===

ಹನ್ನೆರಡನೆಯ ಪ್ರವೇಶ

ರಸ್ತಾ ದೃಶ್ಯ

(ಸುಂದರ ರವಿಯನ್ನು ಹೆಗಲ ಮೇಲೆ ಹಾಕಿಕೊಂಡು ಬರುವನು ಹಿಂದೆ ಲಕ್ಷ್ಮಿ ಅವನನ್ನು ಅನುಸರಿಸಿ ಬರುವಳು)

ಲಕ್ಷ್ಮೀ – ಸುಂದ್ರು. ಎಲ್ಲಿಗಪ್ಪಾ ಈ ಎಲ್ಲೇ ಇಲ್ಲದ ಪ್ರವಾಸ. ಕಾಯ್ದು ಕಾಪಾಡಬೇಕಾದ ಗಂಡನೇ ಕಠಿಣ ಹೃದಯದವನಾಗಿ ಹೊರ ದೂಡಿರುನಾಗ ನಮ್ಮವರೆನ್ನು ಯಾರಿದ್ದಾರೆ. ಈ ಪ್ರಪಂಚದಲ್ಲಿ ?

ಸುಂದರ – ಪ್ರಪಂಚ ವಿಶಾಲವಾಗಿದೆ ಅತ್ತಿಗೆ, ಪಕ್ಕದ ಊರಿನಲ್ಲಿ ನನ್ನ ಸ್ನೇಹಿತನಿದ್ದಾನೆ. ಅಲ್ಲಿಯೇ ಕೂಲಿ ನಾಲಿ ಮಾಡಿ, ಜೀವಿಸೋಣ ನಡೆಯಮ್ಮ

ಲಕ್ಷ್ಮೀ – ನನ್ನಿಂದ ನಿನಗೆ ಎಂತಹ ಕಷ್ಟ ಬಂದಿತಪ್ಪಾ ನಾನು ಭಾರವಾದೆ.

ಸುಂದರ – ಅತ್ತಿಗೆ ಅಣ್ಣನಾಡಿದ ಬಿರುನುಡಿಗಳಿಂದಲೇ ಹೃದಯ ಛಿದ್ರ ವಿಛಿದ್ರವಾಗಿದೆ. ಸಲ್ಲದ ನುಡಿಗಳನ್ನು ಹೇಳಿ ನೋಯಿಸದಿರಮ್ಮಾ ನನ್ನನ್ನು ನಡೆಯಮ್ಮಾ ಹೋಗೋಣ (ಹೋಗುವರು)

"ಹಿನ್ನೆಲೆ" (ದು:ಖದಲ್ಲಿ)

ವಿಧಿಯು ತೂಗುವ ಈ ತೊಟ್ಟಿಲು
ಇದು ಹಸಿದವರ ವಿಷದ ಬಟ್ಟಲು
ಕಷ್ಟದಾರಿಯಲ ಬರುವ ಕಣ್ಣೀರ ಕಡಲು
ಒಡವಾಗ್ನಿ ತುಂಬಿದ ಬಡವನೊಡಲು

(ಹಾಡು ಮುಗಿದ ಮೇಲೆ ಜ್ಯೋತಿಯ ಮನೆ ತೋರಿಸಬೇಕೆ ಜ್ಯೋತಿ ನರ್ತಿಸಲು ಶಂಕರ ಕುಣಿಯುತ್ತ ಸಂತೋಷದಿಂದ ಕುಣಿಯುತ್ತಿರುಯವನು) ಹಾಡು – ರತಿರಾಜ ತೂಗುವ ಈ ತೊಟ್ಟಲು

ಸ್ವರ್ಗಸುಖದ ಅಮೃತದ ಬಟ್ಟಲು
ಸುಖಿಸಿ ಈಜುವ ಶೃಂಗಾರ ಕಡಲು
ಕುಡಿದು ಸೇರುವ ಮಧುವಿ ನೋಡಲು

(ಪದ ಮುಗಿದಾಕ್ಷಣ ರಸ್ತಾ ಪರದೆ ಬೀಳುವುದು)

===*****===***===

ಹದಿಮೂರನೆಯ ಪ್ರವೇಶ

ರಸ್ತಾ ದೃಶ್ಯ

ಅರುಣ – (ಟಿಪ್ ಟಪಾಗಿ ಪ್ರವೇಶಿಸಿ) ಹೊರಗ ಹೊಂಟ್ರ ಸಾಕು ? ಒಂದು ನಮೂನೆ ಹುಚ್ಚ ನಾಯಿಗತಿ ಹಿಂದ ಬೆನ್ನತ್ತಿ ಬರ್ತಾವು. ಈ ಗಂಡಸರು ಎಂದಾದ್ರೂ ಹೆಣ್ಣು ಕಂಡಾವೋ ಇಲ್ಲೋ.

ಚರಣ್ – (ಸಿಗರೇಟ್ ಹಚ್ಚುತ್ತ ಪ್ರವೇಶಿಸಿ) ಮಿಸ್ ಸ್ವಲ್ಪ ನಿಲ್ಲಿ

ಅರುಣ – (ಆಶ್ಚರ್ಯದಿಂದ) ಹಾಂ. ಯಾರು ನೀವು ?

ಚರಣ್ – (ಹೊಗೆ ಬಿಡುತ್ತ) ಹಾಂ. ಇದೇನು ? ಕೋಮಲೇ ನನ್ನ ಪರಿಚಯ ನಿನಗಿಲ್ಲವೇನು ?

ಅರುಣ – ಗೊತ್ತಿಲ್ಲಾಂತ ಹೇಳಾಕ ಹತ್ತೀನಿ ತಿಳಿಲಿಲ್ಲೇನು ? ನಿಮಗಾ, ಕನ್ನಡನಾರ ಸರಿಯಾಗಿ ಬರತೈತಾ ಇಲ್ಲಾ ನಿ ನಗ ಯಾರ್ರಿ ನೀವು ?

ಚರಣ್ – ಸುತ್ತ ಮುತ್ತಲೂ ನಾಲ್ಕಾರು ಜಿಲ್ಲೆಗಳಲ್ಲಿ ಖ್ಯಾತೀವೆತ್ತ ಶ್ರೀಮಂತ ಜಮಿನ್ದಾರ ವಜ್ರಮುನಿಯವರ ಆಪ್ತ ಕಾರ್ಯದರ್ಶಿ ನಾನು

ಅರುಣ – ಹೌದೇನು ? ನಾನೆಲ್ಲೋ ನೀವೇ ಜಮೀನ್ದಾರರು ಅಂತ ಮಾಡಿದ್ದೆ, ಹೌದು ನನ್ನ ಹತ್ರ ಏನ್ರಿ ನಿಮ್ಮ ಕೆಲಸ ?

ಚರಣ್ – ಅದನ್ನು ಅಷ್ಟು ಸುಲಭವಾಗಿ ಹೇಳಲಿಕ್ಕೆ ಬರುವುದಿಲ್ಲ. ಅಲ್ಲಿಗೆ ಹೋದನಂತರ ನನಗೇ ತಿಳಿಯುತ್ತದೆ. ನಮ್ಮ ಧಣಿ ನನ್ನನ್ನು ನೋಡ್ತಾರಂತೆ.

ಅರುಣ – ಅದ್ಯಾಕ ನೋಡ್ತಾರ್ರಿ ? ನನ್ನ ಮುಕಾದಾಗೇನು ಕೋತಿ ಕುಣಿತಾವೇನು ? ಅವರಿಗೇನು ಬ್ಯಾರೇ ಕೆಲಸಾನ ಇಲ್ಲೇನು ?

ಚರಣ್ – ಅಧಿಕ ಪ್ರಸಂಗದ ಈ ಮಾತುಗಳನ್ನು ಮೊದಲು ನಿಲ್ಲಿಸು ನಮ್ಮ ಧಣಿ ಹೇಳಿ ಕಳಿಸುವುದನ್ನೇ ನೋಡುತ್ತ ಬಾಯಿ ತೆಗೆದು ಕುಳಿತಿರುತ್ತಾರೆ.

ಅನೇಕ ಸುಂದರಿಯರು; ಸ್ವಾತಿ ಹನಿಗೆ ಬಾಯಿ ಬಿಡುವ ಜಾತಕ ಪಕ್ಷಿಯಂತೆ ನಮ್ಮ ಧಣಿ ಸೌಂದರ್ಯಾರಾಧಕರು.

ಅರುಣ – ಅಂದರೆ............

ಚರಣ್ – ನೀನಾಗಿಯೇ ಮನವೊಪ್ಪಿ ಬಂದರೆ ಖಂಡಿತ ನಿನಗಿಲ್ಲ ತೊಂದರೆ

ಅರುಣ – ಈ ನಮೂನಿ ಹೇಳಾಕ ನಾಚಿಗಿನಾರ ಬರತೈತಾ ಇಲ್ಲಾ ನಿವತ್ನಾನ ಬರೀ ಇದಾ ದಗದಕ್ಕ ನಿಂತೀರಾ ಏನು ಸುಡುಗಾಡ

ಚರಣ್ – ಹೇ ಹುಡುಗಿ ನಾಲಿಗೆಯನ್ನು ಹರಿ ಬಿಡದೆ ಸುಮ್ಮನೆ ಬರುವೆಯೋ ಅಥವಾ

ಅರುಣ – ಇಲ್ಲಂದ್ರ

ಚರಣ್ – ಹೊತ್ತುಕೊಂಡು ಹೋಗುವೆ (ಎಂದು ಭರದಿಂದ ಕೈ ಹಿಡಿಯುವನು)

ಅರುಣ – ಇರಲಿ ಕೈ ಬಿಡೋ

ಚರಣ್ – ಹಿಡಿದ ಕೈಯನ್ನೆಂದೂ ಬಿಟ್ಟಿಲ್ಲ ಈ ಧೀರ. ಹೂಂ ನಡೆ

ಅರುಣ – ಹಾಂ ಅಯ್ಯಯ್ಯೋ, ಯಾರಾದ್ರೂ ಬರ್ರಪೋ ಈ ಹಾಳಾದ ಗಂಡುಗಳು ಯಾವ ಸುಡುಗಾಡಿಗೆ ಹೋದವೋ. ದಿವಸಾ ಮೂರ್ನಾಲ್ಕು ಗಂಟು ಬೀಳುತಿದ್ವು.

ಚರಣ್ – ನೀವೆಷ್ಟು ಚೀರಿದರೂ ಅದಿಲ್ಲಿ ಅರಣ್ಯರೋಧನ.

ಅರುಣ – ತಡದಾರ ತಡಿ. ಇನ್ನೊಂದು ಸಲ ಕೂಗ್ತೀನಿ. ಬರ್ರೋ ಜಲ್ದಿ ಕಾಪಾಡ್ರಿ ಈ ಸನ್ಯಾಸಿ ಹೊತುಗೊಂಡು ಹೋಗ್ತಾನ.

ಚರಣ್ – ಸುಮ್ಮನೇ ಬಾಯಿ ಮುಚ್ಚಿಕೊಂಡು ನಡಿಯೇ. (ಎಳೆದೊಯ್ಯಲು ಎದುರಿಗೆ ಚಂದ್ರಗೌಡ, ಕುಬೇರ, ಮನ್ಮಥ ಓಡಿ ಬರುವರು)

ಕುಬೇರ – ಯಾವುದೋ ಒಂದು ಹೆಣ್ಣು ಧನಿ ಕೇಳಿಸಿದಂಗಾತಲ್ಲ

ಚಂದ್ರ – ಹಾಂ ಯಾರಲೇ ನೀನು ಜಂಗಲ್ ಸೀನು ಬಿಡದೆ, ರಸ್ತಾ ಸೀನಿನಾಗ ರೇಪ್ ಮಾಡಲಿಕ್ಕೆ ಹತ್ತೀದಿ. ಎಂದಾದ್ರೂ ಬಲತ್ಕಾರ ಮಾಡೀಯಾ ಇಲ್ಲಾ.

ಮನ್ಮಥ – ಅಯ್ಯಯ್ಯೋ ನಮ್ಮ ಮಾಲಿಗೇ ಕೈ ಹಾಕ್ಯಾಸಲ್ಲಪೋ

ಕುಬೇರ – ಯಾವನಲೇ ಪಿಕನಾಸಿ, ನನ್ಮಗನೆ, ನಮ್ಮನ್ನ ಏನಂತ ತಿಳಿದಿ ?

ಅರುಣ – ಬರೀ ಬಾಯಿಂದ ಮಾತಾಡ್ತಿರಲ್ಲೋ ನೀವೆಂಥಾ ಗಂಡಸರೋ ನನ್ನ ಬಿಡಿಸಿಗೊಳ್ರೊ.

ಚರಣ್ – ಒಬ್ಬನಾದ್ರೂ ಮುಂದೆ ಬರ್‍ರಿ ನಿಮ್ಮ ಕೈ ಕಡಿದು ಬಿಡ್ತೀನಿ.

ಚಂದ್ರ – ಕೈ ಕಡಿತೀಯಾ ಕೈಯಾಗ ಕುಡುಗೋಲು ಇಲ್ಲ, ಕೊಡಲಿ ಇಲ್ಲಾ ಹ್ಯಾಂಗ ಕಡಿತಿಯೋ ?

ಕುಬೇರ – ಕೊನಿಗೆ ಕೈಲಾಗದಿದ್ರೆ ಮೈಮ್ಯಾಗ ಬಿದ್ದಾದ್ರೂ ಬಿಡಿಸಿಗೊಳ್ಳೊನ್ರೋ

ಚಂದ್ರ – ನಾನೊಬ್ಬನೇ ಸಾಕು ಅವನಿಗೆ ಲೇ ಕೈ ಬಿಡ್ತೀಯಾ ಇಲ್ಲಲೇ ಕತ್ತಿ ಗರಕ ನನ್ನ ಮಗನಾ (ಸಾಮ ತಗೆದು) ಬಂದ್ಯಾ ತಡಿ (ಸಿಟ್ಟಿನಿಂದ ಬಿಡಿಸಲು ಹೋದಾಗ ಚರಣ್ ಒಂದು ಹೊಡೆಯಲು ನಾಲ್ಕಾರು ಸುತ್ತು ಗಿಮಿಗಿಮಿ ತಿರುಗಲು) ಅಯ್ಯಯ್ಯಪೋ (ಎಂದು ಕೆಳಗೆ ಬೀಳುವನು).

ಚರಣ್ – (ನಗುತ್ತ) ನೋಡಿದಿರಲ್ಲಾ ಹತ್ತಿರ ಬಂದರೆ ನಿಮಗೂ ಇದೇ ಗತಿ, (ಚಂದ್ರಗೌಡ ಕೆಳಗೆ ಬಿದ್ದು ಮಣ್ಣನ್ನು ಚರಣನ ಕಣ್ಣಲ್ಲಿ ಉಗ್ಗುವನು. ಚರಣ್ ಕಣ್ಣು ತಿಕ್ಕುವವರೊಳಗೆ ಅರುಣಳನ್ನು ಮನ್ಮಥ ಎಳೆದುಕೊಳ್ಳುವನು).

ಮನ್ಮಥ – ಇದಾ ಒಳ್ಳೇ ಟೈಮು, ನಾಲ್ಕು ನಾದಿ ಬಿಡೊನು ಬರ್‍ರೆಲೆ (ಚಂದ್ರಗೌಡ, ಕುಬೇರ, ಮನ್ಮಥ, ಚರಣಗೆ ಚೆನ್ನಾಗಿ ಹೊಡೆಯುವರು).

ಚರಣ್ – ಥೂ ಕೈಲಾಗದ ಹೇಡಿಗಳೇ, ಒಬ್ಬೊಬ್ಬರೆ ಬರ್‍ರಿ, ದಾರಿಯೊಳಗೆ (ಕಣ್ಣು ತಿಕ್ಕಿಕೊಳ್ಳುತ್ತ ಓಡಿ ಹೋಗುವನು).

ಚಂದ್ರ – ಒಬ್ರಾ ಯಾಕ ಬರೂನು ? ಎಲ್ಲಾರೂ ಕೂಡಿಕೊಂಡೇ ಬರ್‍ತೀನ. ಪಂಜಾಬಿನ ಭಯೋತ್ಪಾದಕ ಮಾಡಿದಾಂಗ ಮಾಡ್ತೀಯಲ್ಲರೇ ಬಳೆ ವಡಕ ಹಾವಿನಂತವನಾ, (ಕೆಮ್ಮಿ) ಹಾಂ, ಏನಂತೀರಿ ಅರುಣ ಬಾಯಿಯವರಾ

ಕುಬೇರ – ಇಂದಿನ ಈ ಸಮಯದಲ್ಲಿ ಗೆಲುವು ನಮ್ಮದಾಯ್ತು.

ಅರುಣ – ಹೂಂ. ದೊಡ್ಡ ಮಹಾಯುದ್ದದಾಗ ಗೆದ್ದಿರಿ.

ಮನ್ಮಥ – ಮಹಾಯುದ್ಧಕ್ಕಿಂತ ದೊಡ್ಡದು ಇದು, ನೋಡಿದಿಲ್ಲಾ ಇಷ್ಟು ಹೊತ್ತು,
ಹೂಂ ತಡಮಾಡಬ್ಯಾಡ್ರಿ, ಮದುವಿ ವಿಷಯ ಏನುಮಾಡಿದ್ರಿ,

===***====***===

ಹದಿನಾಲ್ಕನೆಯ ಪ್ರವೇಶ

ಕಟ್ ಜಂಗಲ್

(ಲಕ್ಷ್ಮಿ ಸುಂದರ ರವಿ ಪ್ರವೇಶಿಸುವರು. ಸುಂದರ ರವಿಯನ್ನು ಎತ್ತಿಕೊಂಡಿರುವನು ಬಾಡಿದ ಮುಖಗಳು ನಿರಾಶೆಯಿಂದ ಇರಬೇಕು)

ಲಕ್ಷ್ಮಿ – (ಬೇಸರದಿಂದ) ಇನ್ನೆಷ್ಟು ದೂರ ನಡೆಯಬೇಕಪ್ಪ ಸುಂದ್ರು ನಿನ್ನೆಯಿಂದ ಊಟವಿಲ್ಲದೆ ರವಿಯನ್ನು ಹೆಗಲ ಮೇಲೆ ಹೊತ್ತು ದಾರಿ ನಡೆದಿರುವೆ. ಕಣ್ಣಿಗೆ ಕತ್ತಲಾವರಿಸೀತು, ಸ್ವಲ್ಪ ಅವನನ್ನು ಕೆಳಗಿಳಿಸು, ವಿಶ್ರಾಂತಿ ತೆಗೆದುಕೊಂಡು ಮುಂದೆ ಹೋಗೋಣ.

ಸುಂದರ –ಸರಿ ಅತ್ತಿಗೆ (ರವಿಯನ್ನು ಕೆಳಗೆ ಇಳಿಸಿ) ನಮ್ಮ ಪ್ರಾರಬ್ಧ ಕರ್ಮಕ್ಕೆ ನನ್ನ ಸ್ನೇಹಿತನೂ ಕೂಡ ಊರು ಬಿಟ್ಟು ಹೋಗಿರಬೇಕೆ ? ಅತ್ತಿಗೆ ಇನ್ನೆರಡು ಮೈಲಿ ಹೇಗಾದರೂ ಮಾಡಿ ನಡೆಯೋಣ . ಜಯಪುರದ ಗಣಿಯಲ್ಲಿ ಕೆಲಸ ಸಿಕ್ಕೇ ಸಿಗುತ್ತದೆ.

ಲಕ್ಷ್ಮಿ – ನನ್ನಿಂದಾನೆ ನಿನಗೆ ಕಷ್ಟಗಳ ಪರಂಪರೆಯೇ ಬಂದೊದಗಿತಪ್ಪಾ

ಸುಂದರ – ಅತ್ತಿಗೆ ಈ ರೀತಿ ಪದೇ ಪದೇ ಉಚ್ಚರಿಸದಿರೆಂದು ಎಷ್ಟು ಸಲ ಎಚ್ಚರಿಸಲಮ್ಮಾ ? ಬಂದದ್ದೆಲ್ಲಾ ಬರಲಿ, ಕಷ್ಟಗಳು ಒದಗುವುದು ಮನಸ್ಸನ್ನು ಗಟ್ಟಿ ಮಾಡುವುದಕ್ಕೆಂದು ರವೀಂದ್ರನಾಥ ಟ್ಯಾಗೋರ ಹೇಳಿದ್ದಾರೆ.

ಲಕ್ಷ್ಮಿ – ಏನು ಮಾಡುವುದು ಸುಂದ್ರು, ಕಿರಿಯವನಾದ ನಿನಗೆ ಹಿರಭಾರದ ಹೊರೆ.

ರವಿ – (ಎದ್ದು ಕುಳಿತು) ಚಿಕ್ಕಪ್ಪಾ ಬಾಯಾರಿಕೆಯಾಗಿದೆ. ನೀರು ಕೊಡಿ

ಸುಂದರ – ಹಾಂ ನೀರು ಬೇಕೆನಪ್ಪಾ, ತರ್ತೀನಿ ಇರು ಅತ್ತಿಗೆ ಚಂಬುಕೊಡಿ ಬೇಗ ಹೋಗಿ ನೀರು ತರುವೆ.

ಲಕ್ಷ್ಮಿ – ನೀರುವ ಇಲ್ಲಿ ಎಲ್ಲೂ ಸಮೀಪ ಇದ್ದಂತಿಲ್ಲ. (ಗಂಟಿನೊಳಗಿಂದ ಚಂಬಿಗೆ ಕೊಡುವಳು).

ಸುಂದರ – ಅಲ್ಲಿ ಕಾಣ್ತಾಯಿರೋ ತೋಟದಲ್ಲಿ ಬೋರ್‌ವೆಲ್ ಇದ್ದಂತಿದೆ. ನೀವು ಇಲ್ಲೇ ಕುಳಿತಿರಿ ಬೇಗ ಬಂದು ಬಿಡುವೆ (ಓಡಿ ಹೋಗುವನು)

ಲಕ್ಷ್ಮಿ – (ಉಸಿರುಹಾಕಿ) ಅಮ್ಮಾ ತಾಯಿ, ಅಂಭಾ ಭವಾನಿ, ಲೋಕ ಪರಿಪಾಲನಿ, ಲೋಕ ಮಾತೆ ಎಂದು ಬಿರುದು ಪಡೆದ ನಿನ್ನ ಕಾರ್ಯವೈಖರಿ ಇದೇಯೆನಮ್ಮಾ ? ಕಷ್ಟಗಳನ್ನು ಎದುರಿಸುವ ಆತ್ಮಸ್ಥೈರ್ಯ ನನ್ನಲ್ಲೀಗ ಉಳಿದಿಲ್ಲ ತಾಯಿ ಉಳಿದಿಲ್ಲ; ಇದನ್ನೆಲ್ಲಾ ಸಹಿಸಲಾರದೆ, ಆತ್ಮ ಹತ್ಯೆ ಮಾಡಿಕೋ ಎಂದು ಮನವೊಮ್ಮೆ ಒತ್ತಿ ಹೇಳುತ್ತಿದೆ ಆದರೇ.......ನನ್ನಿಂದಲೇ ಜೀವ ಹಿಡಿದ ಎರಡು ಜೀವಗಳು ಅನಾಥವಾಗುವವಲ್ಲಾ ಎಂಬ ವಿವೇಕ ಇನ್ನೊಂದೆಡೆ ಬುದ್ಧಿ ಹೇಳುತ್ತಿದೆ ನಾನು ಏನು ಮಾಡಲಿ ತಾಯೀ ಏನು ಮಾಡಲಿ ?

ವಜ್ರ – (ಸಿಗರೇಟ್ ಹೊಗೆ ಬಿಡುತ್ತ ಪ್ರವೇಶಿಸಿ) ದೇಟ್ ಈಸ್ ವೇರಿ ಸಿಂಪಲ್

ಲಕ್ಷ್ಮಿ – (ಆಶ್ಚರ್ಯದಿಂದ) ಹಾಂ ನೀನಾ ?

ವಜ್ರ – ಹೌದು ನಾನೇ, ಗುಡ್ ವೇರಿ ಗುಡ್ ಅಂತೂ ನನ್ನ ನೆನಪು ನಿನ್ನ ಸ್ಮೃತಿಪಟಲದಿಂದ ಮಾಸಿಲ್ಲವೆಂದಾಗ ನಾನೇ ಧನ್ಯ

ಲಕ್ಷ್ಮಿ – ನಿರಪರಾಧಿಯಾದ ನನ್ನ ತಂದೆಯ ಪ್ರಾಣವನ್ನು ತೆಗೆದ ನಗಿ ಜಾತಿಯ ಮಂಚಕನಾದ ನಿನ್ನನ್ನು ಯಾರು ಮರೆತಾರು ?

ವಜ್ರ – ಆತ್ಮಹತ್ಯಗಾಗಿ ಹಂಬಲಿಸದಿರು ಅಬಲೆ, ಅನವರತ ನಿನ್ನ ಹಂಬಲದಲ್ಲಿರುವ ಈ ಹಣವಂತ ವಜ್ರಮುನಿಯ ಆಶೆಯಿಡೇರದೆ ಅನಾಥನಾಗ ಬೇಕಾಗುತ್ತದೆ.

ಲಕ್ಷ್ಮಿ – ಮುಖಕ್ಕೆ ಮುಪ್ಪಡರಿದರೂ ಕೂಡ, ನಿನ್ನ ಮಂಗ ಬುದ್ಧಿಯ ಮಧವಿನ್ನೂ ಹಿಂಗದಿರುವುದು ಕಂಡು ಮನಕ್ಕೆ ಆಶ್ಚರ್ಯವಾಗುತ್ತಿದೆ.

ವಜ್ರ – ಅದನ್ನೇ ಮತ್ತೆ ಹಿರಿಯರು ಗಾದೆಯ ಮಾತನ್ನಾಗಿ ಮಾಡಿರುವುದು "ಹುಣಸೇಮರಮುಪ್ಪಾದರೂ, ಹುಳಿಮುಪ್ಪಲ್ಲ" ಎಂದು ಬೇಡಿದಾಗೊಮ್ಮೆನಾನುನನ್ನ ತಂದೆಗೆ ಹಣ ನೀಡುತ್ತಿದ್ದುದು ನಿನ್ನ ಮೇಲಿನ ಆಶೆಯಿಂದಲೇ, ಸುರಸುಂದರಿಯಾದ ನಿನ್ನನ್ನೊಂದು ಭಾರಿ ಅಪ್ಪಿ ಆಲಂಗಿಸಿಕೊಳ್ಳದಿದ್ದರೆ ನನ್ನ ಜೀವನವೇ ವ್ಯರ್ಥವಾಗುತ್ತದೆ.

ಲಕ್ಷ್ಮಿ – ನೀನಾಸೆ ಪಟ್ಟಂತೆ ವೇಶ್ಯಾವೃತ್ತಿಯ ಕುಲಹೀನ ಸ್ತ್ರೀ ನಾನಾಗಿದ್ದರೆ ಅದಕ್ಕೊಪ್ಪ ಬಹುದಿತ್ತು. ನಾನೀಗ ಮತ್ತೊಬ್ಬರ ಮಡದಿ ಒಂದು ಮಗುವಿನ

ತಾಯಿ ಅಂದಾಗ ಮಂಗಲ ಸೂತ್ರವನ್ನು ನೋಡಿ ಮಾತೆಯ ಸಮಾನವೆಂದು ಮನನ ಮಾಡಿಕೊಳ್ಳುವುದು ಮತಿವಂತರ ಲಕ್ಷಣ.

ವಜ್ರ – ನೀನಂದುಕೊಂಡಂತೆ ಅಂತಹ ಮತಿವಂತ ನಾನಲ್ಲವಲ್ಲ, ನಾನೇನಿದ್ದರೂ ಬರೀ ಸ್ಥಿತಿವಂತ. ಬಯಸಿದ ಬಾಲೆಯನ್ನು ಬಾಹುಬಂಧನದಲ್ಲಿ ಬಂಧಿಸಿ ಅಪ್ಪಿ ಸುಖಿಸುವ ರಸಿಕ ಧೀಮಂತ ಹೂಂ ಸುಮ್ಮನೇ ಕಾಲ ವಿಳಂಬ ಗೈಯದಿರು.

ಲಕ್ಷ್ಮಿ – ಶೀಲ ಹರಣಗೈದು ಕುಲೀನನಾಗದಿರು. ನಿನಗೆ ದೀನಳಾಗಿ ಬೇಡುವೆ ನಾನೀಗ ಅಬಲೆ.

ವಜ್ರ – ಹೌದು ನೀನು ಅಬಲೆ ಕೋಮಲೇ ನಿನ್ನ ಮೈದುನ ಮರಳಿ ಬರುವದರೊಳಗೆ ನನ್ನಾಸೆಯನ್ನಿಡೇರಿಸು ಈಗಲೇ, ಇಲ್ಲವಾದರೆ ಖಂಡಿತವಾಗಿಯೂ ಜರುಗುವುದು ನಿನ್ನ ಸುಂದರನ ಕೊಲೆ ಇರಲಿ ಬಾರೆ (ಕೈ ಹಿಡಿಯುವನು)

ಲಕ್ಷ್ಮಿ – ನನ್ನ ಜೀವ ಹೋದರೂ ಚಿಂತೆಯಿಲ್ಲ. ನಿನ್ನ ಹೇಳಿಕೆಗೆ. ನಿನ್ನ ಹೇಳಿಕೆಗೆ ನಾನೆಂದೂ ಒಪ್ಪಲಾರೆ.

ವಜ್ರ – ಯಾವನಿಗೆ ಬೇಕಾಗಿದೆ. ನಿನ್ನ ಒಪ್ಪಿಗೆ, ನನಗೆ ಬೇಕಾಗಿರುವುದು ಅಪ್ಪುಗೆ ನನ್ನಾಸೆಯಿಡೇರುವತನಕ ನೀನು ಸತ್ತರೂ ನಾನೇನೂ ಬಿಡುವವನಲ್ಲ. ನನ್ನದು ಕಪಿ ಮುಷ್ಠಿ (ಕೈ ಹಿಡಿಯುವನು)

ಲಕ್ಷ್ಮಿ – (ಕೈ ಕೊಸರಿಕೊಳ್ಳಲು ಹೋಗಿ ಆಗದೆ) ಅಯ್ಯೋ ದೇವರೇ (ಚೀರಿ) ಸುಂದರಾ..

ರವಿ – ಅಮ್ಮಾ

ವಜ್ರ – ನಿನ್ನ ಅಳಲು ಬರೀ ಅರಣ್ಯರೋಧನ, ನೀನೆಷ್ಟು ಚೀರಿದರೂ ನಿನ್ನ ಮೈದುನನಗೆ ಕೇಳುವುದೇ ಇಲ್ಲ. (ಎಳೆದಾಡುವನು) ಹೂಂ

ಲಕ್ಷ್ಮಿ – ಅಯ್ಯೋ ಅಮ್ಮಾ

ರವಿ – ಅಮ್ಮಾ ಏನಾಯ್ತುಮ್ಮಾ, (ಎದ್ದು ಕುಳಿತು)

ವಜ್ರ – ಓಹೋ ನಿನ್ನ ಮಗನ ಶೃತಿಯೂ ಹೆಚ್ಚಾದಂತಾಯಿತು. ಹೇ ಲಕ್ಷ್ಮೀ ನೀನು ನನ್ನವಳಾದಿದ್ದರೆ ಈ ನಿನ್ನ ಮಗನನ್ನು ಮುಗಿಸಿ ಬಿಡುತ್ತೇನೆ

ಚರಣ್ ಲೇ ಚರಣ್ (ಚರಣ್ ಬಾಯಲ್ಲಿ ಕೋಳಿ ಜಿಗಿಯುತ್ತ ಕೈಯಲ್ಲಿ ಹರಿತವಾದ ಕೊಡಲಿ ಹಿಡಿದು ತರುವನು)

ಚರಣ್ – ಧಣಿ

ವಜ್ರ – ಸ್ವಲ್ಪ ಆ ಮಗುವನ್ನು ವಿಚಾರಿಸಿಕೋ (ಕುಳಿತಿದ್ದ ರವಿಯ ತಲೆ ಕೂದಲು ಹಿಡಿದೆತ್ತಿ ವಿಕಟವಾಗಿ ಚರಣ್ ನಗುವನು)

ರವಿ – ಅಯ್ಯೋ ಅಮ್ಮಾ. ನೋವಾಗ್ತಾಯಿದೆ.

ಲಕ್ಷ್ಮಿ – ಲೋ ಪಾಪಿ ನನ್ನ ಮಗನನ್ನು ಬಿಡೋ.

ವಜ್ರ – ಆಮೇಲೆ ಬಿಡುತ್ತಾನೆ. ಮೊದಲು ನನ್ನ ಹೇಳಿಕೆಗೆ ಒಪ್ಪು ಲೇ ಚರಣ್, ಇವಳು ಬರೀ ಬಾಯಿ ಮಾತಿಗೆ ಮಣಿಯುವವಳಲ್ಲ. ಆ ಗಿಡದ ಬುಡಕ್ಕೆ ಇವನನ್ನು ಹೊತ್ತುಕೊಂಡು ಹೋಗಿ ಅವನ ಕತ್ತಿಗೆ ಕೊಡಲಿ ಹಿಡಿದಿರು.

ಲಕ್ಷ್ಮಿ – ಅಯ್ಯೋ ನನ್ನ ಕಂದಾ ರವೀ.....

ರವಿ – ಅಮ್ಮಾ

ಚರಣ್ – ಲೇ ಬಾಯಿ ಮುಚ್ಚಿಕೊಂಡು ನಡಿಯೋ (ಹೊಡೆಯುತ್ತ ಎಳೆದುಕೊಂಡು ಹೋಗುವನು)

ಲಕ್ಷ್ಮಿ – ಹಸುಳೆಯನ್ನು ಮುಂದಿಟ್ಟಿಕೊಂಡು ಕಾಮಕೇಳಿಗಾಗಿ ಕರೆಯುವ ಮೂರ್ಖ ನಾಚಿಕೆಯಾಗುವದಿಲ್ಲವೇನೋ ನಿನಗೆ.

ವಜ್ರ – ಆಯ್ತಾ. ಅಥವಾ ಇನ್ನೂ ಇವೆಯೋ ನಿನ್ನ ಶಬ್ದ ಕೋಶದಲ್ಲಿಯ ಬೈಗುಳಗಳು ಇಂಥಾ ಘನ ಕಾರ್ಯದಲ್ಲಿ ತೊಡಗಿದ ನಮ್ಮಂತವರಿಗೆ ಇವೆಲ್ಲಾ ಮಾಮೂಲು ಪದಗಳೇ, ತ್ರೇತಾಯುಗದಲ್ಲಿ ಸೀತಾದೇವಿಯಿಂದ ದಶಕಂಠ ರಾವಣೇಶ್ವರನು ಇಂಥಹ ಶಬ್ದಗಳ ಸರಮಾಲೆಯನ್ನೇ ಹಾಕಿಕೊಂಡ, ದ್ವಾಪಾರದಲ್ಲಿ ದುರ್ಯೋಧನನು ದ್ರೌಪದಿಯಿಂದ ಅನ್ನಿಸಿಕೊಂಡ, ಅದಕ್ಕಾಗಿ ಇಂತಹ ಪದಗಳಿಗೆ ಕಲೀಯುಗದಲ್ಲಿ ಬೆಲೆಯೇ ಇಲ್ಲದಾಗಿದೆ. ಹೇ ಲಕ್ಷ್ಮೀ ಕಂದನನ್ನು ಕೊಂದು ಅಪ್ಪಿ ಸುಖಿಸಿದ ಸ್ಟೇಶನ್ ಮಾಸ್ತರ್ ಈ ಹಿಂದೆ ಕಡ್ಡಿ ಮಟ್ಟ ಕಾಶೀ ಬಾಯಿಯಿಂದ ಅಗ್ರಸ್ಥಾನದಲ್ಲಿದ್ದಾನೆ. ಅಂದಾಗ ನಿನ್ನ ಮಗನನ್ನು ಕೊಂದು ನಿನ್ನನ್ನು ಸೇರಿದರೆ ನನ್ನ ಹೆಸರೇನೂ ಇತಿಹಾಸದ ಪುಟದಲ್ಲಿ ಬರಲಾರದು.

ಹೇ ಚರಣ್ (ಮಗುವನ್ನು ಮುಗಿಸುವಂತೆ ಸನ್ನೆ ಮಾಡಲು)

ಲಕ್ಷ್ಮಿ – (ಗಾಬರಿಯಿಂದ) ಬೇಡ ನನ್ನ ಮಗನನ್ನು ಏನೂ ಮಾಡಬೇಡ ಅವನು ಬದುಕಬೇಕು ನಾನೇನಾದರೂ ಚಿಂತೆಯಿಲ್ಲ.

ವಜ್ರ – ಗುಡ್‌ವೇರಿಗುಡ್ ಲಕ್ಷ್ಮೀ ನೀನಂದು ಮೈನೆರೆತ ಮೂರನೆಯ ದಿನದಂದು ಮಲ್ಲಿಗೆಯ ಹೂ ಮುಡಿದು ಮನ್ಮಥನ ರಾಣಿಯಾಂತಾದ ಮೊಹಕ ರೂಪವಿನ್ನೂ ಮನದೊಳಗೆ ಮನೆ ಮಾಡಿದೆ, ಅದು ಮರವೆಯಾಗಲು ಸಾಧ್ಯವೇ ಇಲ್ಲದಂತಾಗಿದೆ ಬಾ. (ಅಪ್ಪಿ ಚುಂಬಿಸಲು) (ಕೈಯಲ್ಲಿ ತಂಬಿಗೆ ಹಿಡಿದು ಅವಸರದಿಂದ ಬಂದ ಸುಂದರ್. ಈ ದೃಶ್ಯ ನೋಡಿ, ಗಾಬರಿಯಾಗಿ ತಂಬಿಗೆ ಕೈಬಿಟ್ಟು).

ಸುಂದರ – ಅತ್ತಿಗೆಮ್ಮಾ.....(ವಜ್ರ ಮುನಿಯನ್ನು ದೂಕಿ) ಲೇ ನೀಚಾ, ದೇವತೆಯಂತಹ ನನ್ನ ಅತ್ತಿಗೆಯ ಮೇಲೆ ಕಾಮದೃಷ್ಟಿಯನ್ನು ಬೀರಿದೆಯೇನೋ (ಹಿಂದಿನಿಂದ ಕತ್ತಿಡಿದು ದೂಕಿ).

ವಜ್ರಮುನಿ–

(ಸಿಟ್ಟಿನಿಂದ) ಚರಣ್ (ಕರ್ಕಶ ಸ್ವರದಿಂದ ಚೀರುವನು).

ಚರಣ್– (ಕೈಯಲ್ಲಿ ಕೊಡಲಿ ಹಿಡಿದು ಬಂದು) ಸುಮ್ಮನೆ ಹಿಂದಕ್ಕೆ ಹೋಗುವೆಯೋ ಅಥವಾ.........

ಸುಂದರ – ಲೇ ಹೇಸಿ ಆಶೆಯ ಶ್ವಾನ, ನಾನೇನು ಪ್ರಾಣಕ್ಕಾಗಿ ಹೆದರುವ ಹೇಡಿಯಲ್ಲ. "ಹೇಡಿಗಳುಸಾಯುವುದು ಅನೇಕಸಾರಿ. ಆದರೇ ಧೈರ್ಯಶಾಲಿಸಾಯುವುದು ಒಂದೇಬಾರೀ"

ಚರಣ್ – ಅಂತೂ ನೀನು ಒಳ್ಳೆಯ ಮಾತಿನಲ್ಲಿ ಹೇಳಿದರೆ ಕೇಳುವವನಲ್ಲ.

ಸುಂದರ – ನಿಮ್ಮಿಬ್ಬರನ್ನು ಜೀವ ತೆಗೆಯುವ ತನಕ ಬಿಡುವುದಿಲ್ಲ. ಅತ್ತಿಗೆಮ್ಮಾ ಆಚೆ ಸರಿದು ನಿಲ್ಲಿರಿ. ಈ ನಾಯಿಗಳಿಗೆ ಒದೆಬೇಕು.

ಚರಣ್ – ಓಹೋ ನಿನ್ನ ಕಾಲುಗಳು ಅಷ್ಟೊಂದು ಉದ್ದವಾಗಿವೆಯೇನು ಸರಿ. ಹಾಗಾದರೆ ನೋಡು ಈ ಹರಿತವಾದ ಕೊಡಲಿಯ ರುಚಿ, (ಸಿಟ್ಟಿನಿಂದ ಕೊಡಲಿ ಎತ್ತಿ ಸುಂದರನ ಎಡಗಾಲನ್ನು ಕಡಿಯುವನು. ಸುತ್ತಲೂ ರಕ್ತ ಸಿಡಿಯುವುದು).

ಸುಂದರ – ಅಮ್ಮಾ (ಕೆಳಗೆ ಕುಸಿದು ಬೀಳುವನು).

ಲಕ್ಷ್ಮಿ – ಸುಂದ್ರು, (ಆವೇಶದಿಂದ ಕಾಳಿ ಅವತಾರ ತಾಳಿ ಚರಣ್‌ನ ಕೈಯಲ್ಲಿದ್ದ ಕೊಡಲಿಯನ್ನು ಕಸಿದುಕೊಂಡು) ನನ್ನ ದೇಹದ ಸುಖ ಉಣ್ಣಬೇಕೇನೋ ಬಾರೋ (ಎದೆಯ ಮೇಲಿನ ಸೆರಗನ್ನು ಕಿತ್ತೆಸೆದು).

ವಜ್ರ – ಚ.....ರ......ಣ್.....ನ......ಡೆ (ಕಂಪಿಸುವ ಧ್ವನಿಯಲ್ಲಿ ಹೇಳಿ ನಡುಗುತ್ತ ಓಡುವನು ಚರಣ್ ಓಡುವನು).

ಲಕ್ಷ್ಮಿ – (ಅಳುತ್ತ) ಸುಂದ್ರೂ......ನನ್ನಪ್ಪಾ. ಅಯ್ಯೋ ವಿಧಿಯೇ.

ರವಿ – (ಓಡಿ ಬಂದು) ಚಿಕ್ಕಪ್ಪಾ (ರೋಧಿಸುವನು).

(ಇಬ್ಬರೂ ರೋಧಿಸಲು ಪರದೆ ಬೀಳುವುದು).

ಹಿನ್ನೆಲೆ.........ವಿಧಿಯು ತೂಗುವ ಈ ತೊಟ್ಟಿಲು

ಸತ್ಯ ಸಂಧರಿಗೆ ವಿಷದ ಬಟ್ಟಲು

ಕಷ್ಟ ದಾರಿಯಲಿರುವ ಕಣ್ಣೀರ ಕಡಲು

ಸಹಿಸದಾಯಿತೇ ಮಾತೆಯ ಒಡಲು

===**====**===

ಹದಿನೈದನೆಯ ಪ್ರವೇಶ

ರಸ್ತಾ ದೃಶ್ಯ

(ಜ್ಯೋತಿ ರಾಣೀಸಾಬ ಕೈಯಲ್ಲಿ ಸೂಟ್ ಕೇಸ್ ಹಿಡಿದು ಬರುವರು)

ಜ್ಯೋತಿ – ರಾಣೀ, ನಾನು ಬರುವವರೆಗೆ ಮನೆಯ ಕಡೆ ಜೋಪಾನ.

ರಾಣಿ – ಅಯ್ಯೋ ಯಕ್ಕಾ ಅದ್ರ ಚಿಂತೀನಿ ಮಾಡಬ್ಯಾಡ, ನಿಂದೊಂದಾ ನೀನು ನೋಡಿಕಾ ನಂದಕ್ಕ ಯಾಕ ಬರ್‍ತಿ ?

ಜ್ಯೋತಿ – ಆ ಶಂಕರ್ ಬಂದು ಕೇಳಿದರೆ ಏನೆಂದು ಹೇಳುವೆ ?

ರಾಣಿ – ಅಯ್ಯ ಪಿಸ್ಸ್ಯಾ. ಆ ಮೂಳಂದೇನು ಬಿಡಾ. ಕೊಡಲಿಲ್ಲಾ ಕೊಸಿಲಿಲ್ಲಾ ಅದಕ್ಕ ಸಾಯೋತನಕ ಅನ್ನಾ ಹಾಕ್ತೀವಂತ ನಾವೇನಾರ ಬರಕೊಟ್ಟೇವೇನು? ಜಮಿನ್ದಾರ ವಜ್ರಮುನಿ ಮನಿಗ ಡ್ಯಾನ್ಸಿಗೆ ಹೋಗ್ಯಾಳಂತ ಹೇಳ್ತೀನಿ ಬಿಡು. ಹೆದರಿಕೇನು ಅವಂದು.

ಶಂಕರ – (ಎದುರಿಗೆ ಬರುವನು) ಜ್ಯೋತೀ. ಇದೇನು ಎಲ್ಲಿಗೆ ನಡೆದಿರುವೆ.

ಜ್ಯೋತಿ – ಡ್ಯಾನ್ಸ ಪ್ರೋಗ್ರಾಮಿಗೆ.

ಶಂಕರ – (ಸಿಟ್ಟಿನಿಂದ) ಅದನ್ನೆಲ್ಲಾ ಬಿಡಬೇಕೆಂದು ಎಷ್ಟು ಸಲ ಹೇಳಬೇಕು ನಿನಗೆ ?

ಜ್ಯೋತಿ – ಏನ್ರಿ ನನಗಿನ್ನೂ ವಯಸ್ಸಿದೆ, ರೂಪವಿದೆ, ಏನಾದರೂ ದುಡಿಯ ಬೇಕೆಂದರೆ, ಇನ್ನೂ ನಾಲ್ಕಾರು ವರ್ಷ ಮಾತ್ರ, ಮುಖಕ್ಕೆ ಮುಪ್ಪಡರಿದಾಗ ಮೂಲೆ ಸೇರುವುದು ಇದ್ದೇ ಇದೆ

ಶಂಕರ – ಅಂದರೆ ನಿನ್ನ ಮಾತಿನ ಅರ್ಥ ?

ರಾಣಿ – ಯಾಕ ನಿಂತೀಯಬೆ ಸುಮ್ಮಕ ವ್ಯರ್ಥ ?

ಶಂಕರ – (ಸಿಟ್ಟಿನಿಂದ) ರಾಣೀ.

ರಾಣಿ – ಆಕಿ ಇಲ್ಲದ್ರ ಏನಾತು ಬಿಡು ಮಾಮಾ ನಾನೀದ್ದೀನಲ್ಲಾ

ಜ್ಯೋತಿ – ನೋಡ್ರಿ ನಾನು ಊಟ ಬೇಕಾದ್ರೂ ಬಿಟ್ಟೇನು. ಡ್ಯಾನ್ಸ ಬಿಡುವುದಿಲ್ಲ. ಇದು ನನಗೆ ದೇವರಿತ್ತ ವರದಾನ, ಇದನ್ನು ಬಿಟ್ಟ ನಂತರ ಮಣ್ಣು ತಿನ್ನಬೇಕಾದೀತು. ಹೇ ರಾಣೀ ಮನೆಯ ಕಡೆ ಜೋಪಾನ. (ಹೋಗುವಳು)

ರಾಣಿ – ನೀನೊಂದಾ ಹುಷಾರಿಂದ ಹೋಗಿ, ಕೆಲಸ ಮುಗಿಸಿಕೊಂಡು ಬಾ. ಅಯ್ಯ ಪಿಸ್ಸ್ಯಾ (ಶಂಕರನನ್ನು ನೋಡಿ ಮುಖ ತಿರುವುತ್ತ ಹೋಗುವುಳು)

ಶಂಕರ – ಹಾಂ ನಿಮಗೆ ಇಷ್ಟೊಂದು ಸೊಕ್ಕು ಬಂತೇನು ? ನನ್ನ ಆಸ್ತಿಯನ್ನೆಲ್ಲಾ ಲಪಟಾಯಿಸುವ ತನಕ, ನಾನೇ ಸರ್ವಸ್ವವಾಗಿದೆ, ಈಗ ಕಾಲಡಿಯ ಕಸವಾಗಿದ್ದೇನೆಲ್ಲಾ.....? ಈ ರೀತಿ ಬಲ್ಲ ಹಾಗೆ ಬಾಯಿಗೆ ಬಂದಂತೆ ಬೊಗಳುವ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ (ಹೋಗುವನು)

ಅದೇ ರಸ್ತಾ ದೃಶ್ಯ

(ಮನ್ಮಥರಾವ ಅವಸರದಿಂದ ಅರುಣನ ಕೈ ಹಿಡಿದು ಬರುವನು)

ಅರುಣ – ಏನ್ರಿ ಮನ್ಮಥರಾಯರೇ ಅರ್ಜಂಟಾಗಿ ಗುಟ್ಟಾದ ವಿಷಯ ಐತಿ ಅಂತ ಕರಕೊಂಡು ಬಂದ್ರಿ ನಾನಿನ್ನೂ ಮನಿಗಿಸಹಿತ ಹೋಗಿಲ್ರಿ.

ಮನ್ಮಥ – ನೀನು ಮನಿಗೆ ಹೋಗಿ ಬರೋದ್ರಾಗ ಆ ಮಕ್ಕಳೆಲ್ಲಾ ಮುತ್ತಿಕೊಂಡು ಬಿಡ್ತಾರ, ನಾನಿಲ್ಲಿಗೆ ಕರಕೊಂಡು ಬಂದಿದ್ದು, ಮುಖ್ಯವಾಗಿ ಮದುವಿ ವಿಷಯ ಮಾತಾಡಾಕ

ಅರುಣ –ಅವೊತ್ತು ಹೇಳೀನಲ್ಲಾ ನಾನು ನಿಮ್ಮನ್ನೆಲ್ಲರನ್ನೂ ಮದುವಿ ಆಗ್ತೀನಂತ.

ಮನ್ಮಥ – ನಿನ್ನ; ಆ ನಮೂನಿ ಆದ್ರ ಥೇಟ ಅಸಹ್ಯ ಆದೀತು. ಹಾಂಗ ಆ ನಮೂನೆ ಮದುವಿ ಆಗೋದು ಪುರಾಣದ ಕಾಲಕ್ಕಾ ಮುಗಿತು.

ಅರುಣ – ಅಂದ್ರ ಅವರನ್ನ ಸುಧಾರಿಸೋದು ಹ್ಯಾಂಗ ?

ಮನ್ಮಥ – ಅವರನ್ಯಾಕ ಸುಧಾರಿಸಲಿಕ್ಕೆ ಹೋಗ್ತಿ ? ನೀನು ಈ ನಮೂನಿ ಸಲಗಿಕೊಟ್ಟೇ ಅಂದ್ರ ಅವಕ್ಕ ಕೋತಿಗೆ ಹೆಂಡಾ ಕುಡಿಸಿದಾಂಗ ಆಗತೈತಿ. ಈಗೇನು ಖುಷಿ ಆಗೈತಿ. ಬಿಟ್ಟಿಕೂಳು ತಿಂತಾವು ಛತ್ರದಾಗ ಹಿಕ್ಕಟ್ಟ ನಿನ್ನ ಸಾಕಲಿಕ್ಕ ಆಗಲಾರದ ಕಂಪನಿ ಸೇರ್ತಿವಿ ಅಂತ ಹೋಗಿ ಯಾವುದಾರ ಗುಡಿ ಗುಂಡಾರ ಸೇರ್ತಾವು. ತೀರ್ರು ಈಗ ಲಾಸ್ಟ ಸ್ಟೇಜಿಗೆ

ಬಂದಾವು ಈಗಿನ ಕಾಲ್ದಾಗ ಯಾರು ಕೇಳಬೇಕು ನಾಟಕದವರನ್ನು, ದಾರ್‍ಯಾಗ ಕಾಣಬಾರ್ದ ಕಂಡ್ರ, ಹೋಳಾಗಿ ಹೋಗ್ತಾರ.

ಅರುಣ – ಹೋಳಾಗಿ ಯಾಕ ಹೋಗ್ತಾರ ?

ಮನ್ಮಥ – ಮಾತಾಡಿಸಿದ್ರ ಹತ್ತು ರೂಪಾಯಿ ಖರ್ಚಿಗೆ ಕೇಳೋ ಹಾಂಗ ಅದಾರಂತ

ಅರುಣ – ಮತ್ತ ನೀನೂ ನಾಟಕದ ಮನಷ್ಯಾ ಆದೀಯಲ್ಲಾ

ಮನ್ಮಥ – ನಾನೇನು ನಟ ಅಲ್ಲ. ಕವಿ ಅಲ್ಲ.. ಇನ್ನೊಬ್ರ ಕೈ ಸನ್ನಿಗೆ ಹೋಗಬೇಕಾಗಿಲ್ಲ. ನಾನು ಸ್ವತಂತ್ರ ಸಂಗೀತ ನಿರ್ದೇಶಕ. ನನ್ನ ಸಂಗೀತ ಅಂದ್ರ ಏನಂತ ತಿಳಿದಿದಿ ?

ಅರುಣ – ನನ್ನ ಮುಂದ ಬಾರಿಸಿದ್ರ ತಿಳಿತೈತಿ

ಮನ್ಮಥ – ತಡಕಾ ತಡಕಾ ಭಾರಸ್ತೀನಿ. ಸಂಗೀತ ಅಂದ್ರೆ, "ಶಿಸುರ್ವೇತ್ತಿ ಪಶುರ್ವೇತ್ತಿ ವೇತ್ತಿಗಾನ ರಸಂ ಫಣೀ"

ಅರುಣ – ಹಾಂಗಂದ್ರ ನಿಮ್ಮ ಸಂಗೀತದಾಗ ಪದಾ ಏನು ?

ಮನ್ಮಥ – ಹಾಂಗಂದ್ರ ಅಳುವ ಮಗು ಕೂಡ ಸಂಗೀತ ಬಂದಾಗ ಅಳು ನಿಲ್ಲಿಸಿ ಕಿವಿಗೊಟ್ಟು ಕೇಳುತ್ತದೆ. ಹಸುವು ಮೇಯುವುದನ್ನು ನಿಲ್ಲಿಸಿ, ನನ್ನ ಸಂಗೀತ ಆಲಿಸುತ್ತದೆ ಸರ್ಪವೂ ಕೂಡ ತಲೆದೂಗುತ್ತದೆ.

ಅರುಣ – ಹಾಂಗಂದ್ರ ಹಿಡಿಕೊಂಡು ಬರಲೇನು ಒಂದು ಸರ್ಪ

ಮನ್ಮಥ – ಅವನ್ಯಾಕ ಹಿಡಕೊಂಡ ಬರಲಿಕ್ಕ ಹೋಗ್ತಿ, ನಮ್ಮ ಸಂಗೀತ ಅಂದ್ರ ಹಿಂಗ ಐತಿ ನೋಡು. ನಾನೇನು ಸಾಮಾನ್ಯ ಅಲ್ಲಮ್ಮಾ ಸೀಜನ್ನಿಗೆ ಅರವತ್ತು ನಾಟಕ ಕಲಿಸ್ತೀನಿ. ಇಂಥಾವು ಎಷ್ಟು ವಿಷ ಸರ್ಪ ಆಡಿಸ್ತೀನಿ. ಹಂಸಲೇಖಾ ಕರದಾನ ನನ್ನ.

ಅರುಣ – ಅಲ್ರಿ ಮೊನ್ನೆ ಬಸವಣ್ಣನ ಗುಡಿಯಾಗ ರಾತ್ರಿ ಭಜನಿ ಪದಾ ಹಾಡಿದ್ರೆಲ್ಲಾ ನೀವೇ ಏನು ?

ಮನ್ಮಥ – ಹೂಂ. ಹಾಂ. ನಾನ ಹ್ಯಾಂಗೀತ್ತು ಪದಾ. ಅದನ್ನ ಮೊನ್ನೆ ಗುಂಡೂರ ನಾಟಕದಾಗ ಹೊಸಾಚಾಲು ಮಾಡೀನಿ ನಮ್ಮ ಪದಾ ಫೇಲಾಗೋದಿಲ್ಲ ಹ್ಯಾಂಗಿತ್ತು ಪದಾ ಹಾಂಗಾದ್ರ ನಾನು ಹೋಗಿ ಬರ್ತೀವಿ.

ಅರುಣ – ಚೊಲ ಇತ್ತು ಬೆಡ್ರಿ. ಅದ್ರ ಅಲ್ಲಲ್ಲಿ ಕತ್ತಿಗಳು ನಿಂತಿದ್ವು ಒಂದು ನಮೂನೆ ಬೇಸೂರಿಗೆ ಇತ್ತು.

ಚಂದ್ರ – ಅರುಣಾ ಈಗಾರ ನನ್ನಮ್ಯಾಗ ದೊಡ್ಡ ಮನಸ್ಸು ಮಾಡು, ಮಂದಿ ಸಿಕ್ಕ ಸಿಕ್ಕಾಂಗ ಮಾತಾಡಲಿಕ್ಕೆ ಹತ್ತಿ ಬಿಟ್ರು, ಅದಕ್ಕ ಯಾಕ ಬೇಕಂತ ಬಿಟ್ಟು ಬಿಟ್ಟೆ.

ಅರುಣ – ಅವರು ಯಾರ್‍ರಿ ನಿಮ್ಮ ಬಗ್ಗೆ ಮಾತಾಡವರು.

ಚಂದ್ರ – ಗೌಡ್ರ ಗದ್ದಲದ ಬಿ. ವ್ಹಿ. ಈಶ್ ಗೌಡ್ರಮಂದಿ ಎಲ್ಲಾ ನಾಟಕ ಬರ್‍ಯಾಕ ಹತ್ತಿದ್ರು ನಾವೆಲ್ಲ ಹೋಗಿ ಸಾಯಾನು ಅಂತ ಕೊನೆಗೆ ಸತ್ತಾ ಹೋದ, ಇನ್ನ ಮದ್ರಿ ಮರಿಸ್ವಾಮಿಗಳು ಹೊಸ ನಾಟಕದ ಕವಿಗಳನ್ನೆಲ್ಲಾ ಒಂದು ಕಡಿಗೆ ಸೇರಿಸಿ ಊಟಕ್ಕ ಹಾಕ್ತಾರಂತ.

ಅರುಣ – ಪಾಡಾತಲ್ಲ. ಕುತಿಗಿಮಟ ಹೊಡದ್ರಾತು.

ಚಂದ್ರ – ಹೂಂ. ಸಾರಿನೊಳಗ, ಹಲ್ಲಿ ಹಾವುರಾಣಿ, ಹಾವು ಬಡದು ಹಾಕಿರತಾರಂತ.

ಅರುಣ – ಅಂದ್ರ ಅಲ್ಲಿಗೆ ಬಂದೈತಿ ಅಂದಗಾಯ್ತು ಸಾಹಿತ್ಯ.....ಪರಿಸ್ಥಿತಿ.

ಚಂದ್ರ – ಹೂಂ. ಎಂಟತ್ತು ನಾಟಕ ಕಲಬೆರಕಿ ಮಾಡೋದು ತಾವ ಒಂದು ಬರಿದೀವಿ ಅಂತ ಬೀಗಿಕೊಂಡು, ಕವಿಗಳು ಅಂತ ಬರಕೊಂತಾರ ಅದೆಲ್ಲಾ ಇರಲಿ, ಅಂದಂಗ ನಮ್ಮ ಪೇಪರ್ ಸುದ್ದಿ ಏನು ಹೇಳ್ರಿ ಜಲ್ದಿ ಏನಾರ ಒಂದಿಷ್ಟು ಸಹಾಯ ಮಾಡ್ರಿ, ನಮಗ ಟೈಮಿಲ್ಲ.

ಅರುಣ – ಪೇಪರ್ ವಿಷಯ ಬಿಡು ನನ್ನ ಮನಸ್ಸಿನೊಳಗಿನ ವಿಷಯ ಹೇಳ್ತೀನಿ ಸ್ವಲ್ಪ ಗಮನ ಕೊಡು.

ಚಂದ್ರ – ಏನು ವಿಷಯ ?

ಅರುಣ – ನಿಮ್ಮ ಮನೆ ದೇವರಾಣಿಗೂ ನನ್ನ ಮನಸ್ಸು ನಿನ್ನ ಮ್ಯಾಗ ಐತಿ. ಬಾ ಅಲ್ಲೇ ಪಾರ್ಕಿಗೆ ಹೋಗುವನು.

ಚಂದ್ರ – ಹಾ ಹಾ. ಹಾಂಗಾದ್ರ ನಡಿ. (ಕೈ ಹಿಡಿದುಕೊಂಡು ಓಡುವರು).

===***====***===

ಹದಿನಾರನೆಯ ಪ್ರವೇಶ

ದೃಶ್ಯ ವಜ್ರ ಮುನಿಯ ಮನೆ

(ಜ್ಯೋತಿಯು ಹಾಡುತ್ತ ನರ್ತಿಸುತ್ತಿರುವಳು, ಚರಣ್ ವಿಸ್ಕಿ ಹಾಕಿ ಕೊಡುವನು ವಜ್ರಮುನಿ ಕುಡಿಯುತ್ತ ಹೂವು ನೋಟುಗಳನ್ನು ತೂರುವನು. ಆವಸರದಿಂದ ರಾಣೀಸಾಬ ನೋಟುಗಳನ್ನು ಚೀಲದಲ್ಲಿ ತುರುಕಿಕೊಳ್ಳುವಳು)

ವಜ್ರಮುನಿ–ಗುಡ್ ವೇರಿ ಗುಡ್ ಸುರಲೋಕದ ಸುರ ಸುಂದರಿಯರೂ ನಾಚಿ ನೀರಾಗಬೇಕು ನಿನ್ನಯ ನೃತ್ಯಕ್ಕೆ ಭಾವ ಭಂಗಿಗೆ.

ಜ್ಯೋತಿ – (ನಮಸ್ಕರಿಸಿ) ತಮ್ಮಂತವರ ಆರ್ಶೀವಾದವಿರಬೇಕು ಜಮೀನ್ದಾರರೇ.

ವಜ್ರ – (ನಗುತ್ತ) ಬರೀ ಆಶೀರ್ವಾದ ಅಷ್ಟೇ ಅಲ್ಲ. ಅನುರಾಗ ಕೂಡ ಇರಬೇಕು. ಚರಣ್ ನನ್ನ ಪ್ರೀತಿಯ ಜ್ಯೋತಿಗೆ ನೋಟನ ಕಟ್ಟುಗಳಿಂದ ಅಭಿಷೇಕ ಮಾಡಿಬಿಡು.

ಚರಣ್ – ಎಸ್.ಬಾಸ್ (ಒಳಗೆ ಹೋಗಿ ಬ್ರೀಫಕೇಸು ತಂದು) ಜ್ಯೋತಿ ನಮ್ಮ ಧಣಿಯ ಅಪ್ಪಣೆಯ ಪ್ರಕಾರ ಇದೋ ನಿನಗ ಒಂದು ಲಕ್ಷ ರೂಪಾಯಿಯ ನೋಟಿನ ಅಭಿಷೇಕವನ್ನೇ ಮಾಡುವೆ ಬಾ ಹೀಗೆ.

ರಾಣಿ – (ಬಾಯಿ ಮುಚ್ಚಿಕೊಂಡು) ಯವ್ವಾ ಒಂದು ಲಕ್ಷ ರೂಪಾಯಿ ಅಂದ್ರ ಒಂದರ ಮುಂದ ಐದು ಪೂಜೆ; ಅಲ್ಲಾ ಮಾಮಾ ಜಮೀನ್ದಾರ ಮಾಮಾ, ನಮ್ಮಕ್ಕನ ತಲಿ ಮ್ಯಾಗ ಸುರುವಿದ ನೋಟು ಗಾಳಿಗೆ, ಪಾಳಿಗೆ ಹೊರಗ ಹೋದ್ರ ಮಂದಿ. ಕಾಣಾದಾಂಗ ಒಳಗ ಇಟಗೊಂಡು ಬಿಡ್ತಾರ. ಸಟ್ಟನ ತಾ ಇಲ್ಲಿ ಸಪ್ಪಳ ಅಗದಾಂಗ ಒಳಗ ಇಟಗೊಂಡು ಬಿಡ್ತಾರ.

ಚರಣ್ – ತಗೋ ಹಾಗಾದರೆ (ಬ್ರೀಫಕೇಸ್ ಕೊಡುವನು)

ಜ್ಯೋತಿ – ನನ್ನ ನೃತ್ಯ ನಿಮಗೆ ಮೆಚ್ಚಿಕೆಯಾಯಿತೇ ಜಮೀನ್ದಾರರೇ

ವಜ್ರ – ಜ್ಯೋತಿ ನಿನ್ನಯ ನೃತ್ಯ ಮೋಹಕ ರೂಪದ ಮಾದಕ ಕಂಗಳಲ್ಲಿಯ ಮಿಂಚುವ ಸಂಚಿನ ಸೆಳೆತವನ್ನು ಬಣ್ಣಿಸಲು ನಾನೇಕೆ ಸಹಸ್ರ ನಾಲಿಗೆಯನ್ನು ಪಡೆದ ಆದಿಶೇಷನಿಂದಲೂ ಸಾಧ್ಯವಿಲ್ಲ ಉಪಮಾತೀತಳು ನೀನು.

ಜ್ಯೋತಿ – ನಿಮ್ಮಂತಹ ಆಶ್ರಯದಾತರಿಂದಲ್ಲದೇ ನಮ್ಮಂತಹವರಿಗೆ ಬೆಲೆ........

ವಜ್ರ – ವಜ್ರದ ಹರಳು ತಿಪ್ಪೆಯ ಮೇಲಿದ್ದರೆ ಅದಕ್ಕೆ ಗೌರವ ಕಡಿಮೆ ಉಪ್ಪರಿಗೆಯ ಒಡೆಯನಲ್ಲಿದ್ದರೆ ಮಾತ್ರ ಅದಕ್ಕೆ ಶೋಭೆ

ಚರಣ್ –(ವಜ್ರಮುನಿಯ ಹತ್ತಿರ ಬಂದು) ಹಾಗಾದರೆ ನಾನೇ ಧನ್ಯಳು. (ವಜ್ರಮುನಿಯ ಗಲ್ಲ ಹಿಡಿದು) ಧಣೀ ನೀವೇ ನನ್ನ ಅಂತರಾತ್ಮದ ನಿಜಸಖ.

ವಜ್ರ – (ನಗುತ್ತ) ಹೌದೇನು ಜ್ಯೋತಿ. ಇದು ಸಮಾಜದ ಪ್ರತಿಯೊಂದು ಹೆಣ್ಣು ಅನುರಕ್ತನಾದ ಗಂಡಿನ ಮುಂದೆ ಹೇಳುವ ಪ್ರಥಮ ಡೈಲಾಗ್, ತಡೆ ರಹಿತ ವೇಗದೂತವೆಂದು ಬೋರ್ಡು ಹಾಕಿಕೊಂಡು ಹೊರಟ ಸರ ಕಾರಿ ಬಸ್ ಕಂಡಕ್ಟರ್ ಚಿಲ್ಲರೆ ಕಾಸಿನ ಆಸೆಗೆ ಕೈ ಒಡ್ಡಿ ಕಂಡ ಕಂಡ ಹಳ್ಳಿಗೂ ನಿಲ್ಲಿಸುವಂತೆ, ತನ್ನೆದುರು ಇರುವ ಪುರುಷನ ಗುಣಗಾನಕ್ಕೆ ಪುರಾತನ ಕಾಲದಿಂದಲೂ ಬಂದ ಸಂದರ್ಭೋಚಿತವಾದ ಪದವೆಂದರೆ ಇದೊಂದೆ.

ಜ್ಯೋತಿ – ಅದೇನೆ ಹೇಳಿದರೂ ನಿಮ್ಮನ್ನು ಬಿಟ್ಟು ಅರೆಕ್ಷಣವೂ ನನಗಿರುವುದು ಆಗುವದಿಲ್ಲ.

ವಜ್ರ – ನಡಿಯೋ ಅಣ್ಣಾ ಹೊರಗಡೆ ಹೋಗೋಣ.

ರಾಣಿ – ನಾನು ನಿನಗ ಅಣ್ಣ ಕಂಡಾಂಗ ಕಾಣ್ತೇನೇನು ? ಅಲ್ರಿ ನಾಟಕದಾಗ ಪಾರ್ಟು ಮಾಡ್ತಾರ ಆ ಹೆಣ್ಮಕ್ಕಳು ಕಲಿಸ್ಯಾರೇನು ನಿಮಗ ? ಮಾತು ಮಾತಿಗೂ ಅಣ್ಣಾ ಅಣ್ಣ ಅಂತ ಅಂಬೋದು. ನನಗ ಆ ನಮೂನೆ ಅನಬ್ಯಾಡೋ ನನ್ನಮಾವಾ ನಾನು ಯಾವುದಾರ ಕೆಲಸಕ್ಕ ಬರ್ತೀನಿ.

ಚರಣ್ – ತಪ್ಪಾಯ್ತಪಾ

ರಾಣಿ – ಮತ್ತ ಅಪ್ಪಾ ಅಂತ ಅಂತೀಯಲ್ಲೋ ಮಾಮಾ ಬಲು ಸುಡುಗಾಡ ಅದೀಯಪಾ ನೀನು

ಚರಣ್ – ನಿನಗ ಅಪ್ಪ ಅನ್ನಬೇಕೋ ಅವ್ವ ಅನ್ನಬೇಕೋ ಒಟ್ಟಿಗಪ್ಪಾ ಗೋದಾ

ಪಾಡ. (ವಜ್ರಮುನಿ ಜ್ಯೋತಿ ನಗುವರು, ಅಷ್ಟರಲ್ಲಿ ಶಂಕರ ಸಿಟ್ಟಿನಿಂದ ಪ್ರವೇಶಿಸುವನು).

ಶಂಕರ – ಹೇ ಜ್ಯೋತೀ ನಿನಗೇನು ಹೇಳುವವರು ಕೇಳುವವರು ಯಾರೂ ಇಲ್ಲವೇನು ?

ಚರಣ್ – (ಶಂಕರನಿಗೆ ಲೇ ನೀನ್ಹೇಗೆ ಬಂದೆಯೋ ಒಳಗೆ ?

ವಜ್ರ – ಇವನ್ಯಾವನಲೇ.......ಲೇ ಚರಣ್ ನಮ್ಮ ರಸಮಯ ಶೃಂಗಾರ ಸಮಯದಲ್ಲಿ ರಸಭಂಗ ಮಾಡಿದ ಅವನನ್ನು ಒದ್ದು ಹೊರಹಾಕು.

ಶಂಕರ – ನಾನಿಲ್ಲಿಗೆ ಬಂದದ್ದು ನನ್ನ ಜ್ಯೋತಿಗೋಸ್ಕರ ಹೇ ಬರುವೆಯೋ ಅಥವಾ ನಿನ್ನನ್ನು, ಇಂತಹ ದ್ರೋಹಿಗಳ ವಿಶ್ವಾಸ ಘಾತುಕರ ಮನೆಯಲ್ಲಿ ಕುಣಿಯಲು ನಿನಗೆ ನಾಚಿಕೆಯಾಗುವುದಿಲ್ಲವೇನು ?

ಚರಣ್ – (ಸಿಟ್ಟಿನಿಂದ) ಲೇ ಶಂಕರ ಬಾಯಿಯೊಳಗಿನ ನಾಲಿಗೆ ಸ್ವಲ್ಪ ಹಿಡಿತದಲ್ಲಿರಲಿ ಎಚ್ಚರ ತಪ್ಪಿದರೆ ಕತ್ತರಿಸಬೇಕಾದೀತು.

ಜ್ಯೋತಿ – ಮತ್ತೇಕೆ ಅರಚುವೆ ನನ್ನ ಮೇಲೆ ಅಧಿಕಾರ ಚಲಾಯಿಸಲು ನೀನೇನು ತಾಳಿಕಟ್ಟಿದ ಗಂಡನೇನು ?

ಶಂಕರ – ಹಾಂ ಏನೆಂದೆ ನೀನು ? ನನ್ನನ್ನು.........

ವಜ್ರ – (ಗಹಗಹಿಸಿ ನಗುತ್ತ) ಬ್ಯೂಟಿ ಫುಲ್ ಡೈಲಾಗ್

ಶಂಕರ – ಥತ್ ಶ್ವಾನ. ನನ್ನ ಮೇಲಿನ ಪ್ರೀತಿಯಿಂದ ನೀನೇ ಸರ್ವಸ್ವವೆಂದು ಬಗೆದು ಮನೆ. ಮಡದಿ ಮಕ್ಕಳನ್ನು ತೊರೆದು ಮನೆಯನ್ನೂ ಮಾರಿ, ನಿನ್ನ ಹಿಂದೆ ಬಂದೆನಲ್ಲ.

ಜ್ಯೋತಿ – ನೀನು ನನ್ನ ಬೆನ್ನತ್ತಿ ಬಂದದ್ದು ನಿನ್ನ ಚಟಕ್ಕೋಸ್ಕರ

ರಾಣಿ – ಹೇ ಶಂಕರ್ ಮಾಮಾ ಸುಮ್ಮಕ ಯಾಕ ಗುದ್ದಾಡ್ತಿಯಾ ಖೋಡಿ ಈ ನಮೂನೆ ನಿನ್ನಂತವರನ್ನು ನಾವು ಲೆಕ್ಕಾ ಇಟ್ಟಿದ್ರ ಇಷ್ಟೊತ್ತಿಗೆ ಎರಡು ನೂರು ಪೇಜಿನ ನೋಟು ಬುಕ್ ತುಂಬಿ ಹೋಗುತ್ತಿತ್ತಪ್ಪಾ, ಮಾತು ಮಾತಿಗೂ ಹಂಗಸ್ತೀಯಲ್ಲಾ ನೀನೇನು ಮುಗಸಟ್ಟೆ ಗುಕ್ಕಾ ಕೊಟ್ಟಿಯೇನು ? ನಮ್ಮಕ್ಕನ ಕೂಟ ಇಷ್ಟುದಿವಸ ಇದ್ದು ಎಲ್ಲಾ ಮುಟ್ಟಿಸಿಗೊಂಡೀಯಪಾ.

ಜ್ಯೋತಿ – ಮಿಸ್ಟರ್ ಶಂಕರ್ ಲುಕ್ ಹಿಯರ್, ದಿಸ್ ಈಜ್ ಲಾಸ್ಟವಾರ್ನಿಂಗ್

ಟು ಯೂ, ಇನ್ನೊಮ್ಮೆ ನನ್ನ ಮನೆಯ ಹೊಸ್ತಿಲನ್ನು ತುಳಿದೆಯಾದರೆ ಅವಹೇಳನ ಮಾಡಿ ಕಳಿಸಬೇಕಾಗುತ್ತದೆ. ಮೈಂಡ್ ಇಟ್.

ಶಂಕರ – ಥೂ ಕುಲಹೀನಳೆ ಮುತ್ತಿನಂತಹ ಮಡದಿ ಲಕ್ಷ್ಮಣನಂತಹ ಸಹೋದರನನ್ನು ಬಿಟ್ಟು ನಿನ್ನ ಕಾಮ ನೋಟಕ್ಕೆ ಮರುಳಾಗಿ ಮೂರ್ಖನಾಗಿ ಹಿಂಬಾಲಿಸಿದ ನನಗೆ ತಕ್ಕ ಪಾಠ ಕಲಿಸಿದೆ, ಎಷ್ಟು ಹಣ ಸುರುವಿದರೂ ಸೂಳೆ ಸೂಳೆಯೇ ಹೊರತು, ಸತಿಯಾಗಲು ಸಾಧ್ಯವೇ ಇಲ್ಲ ಎಂಬುದನ್ನು ತೋರಿಸಿದೆ, ಸೂಳೆಯನ್ನು ಹಿಂಬಾಲಿಸಿ ಹೋದವರ ಬದುಕು ಅದೆಂದಿದ್ದರೂ ದುರಂತವೇ, ಅದರಲ್ಲೂ ಮುಖಕ್ಕೆ ಬಣ್ಣ ಹಚ್ಚಿ, ಕಂಡ ಕಂಡವರೆದುರು ಕುಣಿಯುವ ಹೇಣ್ಣು, ನೀನೆಂದಾಗ.....

ಜ್ಯೋತಿ– ನಾನ್ಸೆನ್ಸ್ ಸ್ಟಾಪ್ ಇಟ್. ನಾವು ಶ್ರೀಮಂತರಲ್ಲದಿದ್ದರೂ ಶೀಲವಂತರಾಗಿದ್ದೇವು. ಆದರೇ ನಾನಿಂದು ಈ ವೃತ್ತಿಗೆ ಬರಲು ನೀನೇ ಕಾರಣ.

ಶಂಕರ – (ಆಶ್ಚರ್ಯ) ಏನಂದೇ : ನೀನು.....ನೀನು....ಈ ವೃತ್ತಿ ಗಿಳಿಯಲು

ಜ್ಯೋತಿ – ನೂರಕ್ಕೆ ನೂರು ನೀನೇ ಕಾರಣ ಕರ್ತೃ, ಇಂದಿಗೆ ಸುಮಾರು ೧೪ ವರ್ಷಗಳ ಹಿಂದೆ ನೀನು ಕಾಲೇಜಿನಲ್ಲಿ ಓದುತ್ತಿದ್ದಾಗ, ಸಮಾಜೋದ್ಧಾರದ ಬೊಗಳೆಗಳನ್ನು ಬಿಟ್ಟು, ನಂಬಿಸಿ, ನಡು ನೀರಿನಲ್ಲಿ ಕೈ ಬಿಟ್ಟೆಯಲ್ಲ ಆ ಸುಮತಿ ಎನ್ನುವವಳ ಹೆಸರು ಬಹುಷ್ಯ ನೀನಿನ್ನೂ ಮರೆತಿರಲಿಕ್ಕಿಲ್ಲ.

ಶಂಕರ – (ಆಶ್ಚರ್ಯದಿಂದ) ಹಾಂ. ಸುಮತಿ.....ಆ ಸುಮತಿಗೂ ನಿನಗೂ........ ಏನು ಸಂಬಂಧ ?

ಜ್ಯೋತಿ – (ಕಣ್ಣೊರೆಸಿಕೊಂಡು) ಹುಂ. ಸಂಬಂಧ.....? ಬಡತನದ ಭೀಕರ ಭವಣೆಯಲ್ಲಿ ಬೆಂದವರ ಬೆನ್ನೆಲುಬಾಗಿ ಬಾಪೂ ಕಂಡ ರಾಮರಾಜ್ಯದ ಕನಸನ್ನು ನನಸಾಗಿ ಮಾಡುವ ಸದುದ್ದೇಶದಿಂದ, ಕಂಕಣ ಕಟ್ಟಿನಿಂಥ ಅಂತಹ ಸುಶೀಲೆಯ ಶೀಲಹರಣ ಮಾಡಿ, ಅವಳ ಆತ್ಮಹತ್ಯೆಗೆ ಕಾರಣ ನಾದೆಯಲ್ಲಾ ಆ ಸುಮತಿಯ ತಂಗಿಯೇ ನಾನು.

ಶಂಕರ – ಹಾಂ ನೀನು......ಸುಮತಿಯ ತಂಗೀ.

ಜ್ಯೋತಿ – ಹಾಸಿಗೆ ಹಿಡಿದು ಬೇನೆಯಲ್ಲಿ ನರಳುವ ತಂದೆ–ತಾಯಿ, ಬಡತನದ

ರಾಕ್ಷಸನ ಹಾವಳಿ ತಾಳದೆ ನಾನೀ ವೃತ್ತಿಗೆ ಬರಬೇಕಾಯಿತು. ಹೇಳು ನಾನೀ ವೃತ್ತಿಗಿಳಿಯಲು ಕಾರಣರಾರೆಂದು ? ಕಮಾನ್ ಟೆಲ್ ಮೀ. ನಮ್ಮಕ್ಕ ಬದುಕಿದ್ದರೆ ಇಂದು ನಾ ನೀ ಸ್ಥಿತಿಗೆ ಬರುತ್ತಿದ್ದೇನೇನು ? ಹೂಂ ಬಾಯಿ ಮುಚ್ಚಿನಿಂತೆಯೇಕೆ ಬೊಗಳು ನಾನು ಸೂಳೆಯಾಗಲು ಯಾರು ಕಾರಣ.

ವಜ್ರ – ಸಮಾಜ ಸುಧಾರಕ ಶಂಕರ ಕಾರಣ. (ನಕ್ಕು) ಲೇ ಚರಣ್ ಇವನು ಮರ್ಯಾದೆಯಾಗಿ ಹೊರಗೆ ಹೋಗುವವನಲ್ಲ. ಬೇಗ ಅವನನ್ನು ಒದ್ದು ಹೊರಹಾಕು.

ಚರಣ್ – ನಿನ್ನ ಕಿವಿಗೆ ಕೇಳಿಸಿತೋ ಇಲ್ಲವೋ.....(ಶಂಕರ್ ದಿಗ್ ಭ್ರಾಂತನಾಗಿ ಹಾಗೆ ನಿಂತಿರಲು ಚರಣ್ ಒಂದೇ ಏಟಗೆ ಶಂಕರನನ್ನು ದೂಕುವನು)

ವಜ್ರ – ಇಂಥಾ ಮನೆ ಹಾಳು ಮಾಡೋ ಸೂಳೇ ಮಕ್ಕಳನ್ನು ಮನೆಯಲ್ಲಿ ಸೇರಿಸಿದರೆ ಆಗುವುದು ಇಷ್ಟೇ. ಇರಲಿ ಬಾ ನನ್ನ ಚಿನ್ನ ಆನಂದದ ಈ ಸಮಯದಲ್ಲಿ ಅತಿರೇಕಕ್ಕೆ ಅವಕಾಶ ಕೊಡಬೇಡ. ಇಂದಿನಿಂದ ಈ ಎಸ್ಟೇಟ್, ಈ ಬಂಗಲೇ ಎಲ್ಲಾ ನಿನ್ನದೆ (ಜ್ಯೋತಿಯ ಕೈ ಹಿಡಿಯುವನು).

ರಾಣಿ – ಕಿಲ ಕಿಲಾಂತ ನಗ್ತಿದ್ದ ನಮ್ಮಕ್ಕನ್ನ ಮೂಡ್ ಹಾಳು ಮಾಡಿದ ಕಿಡಗೇಡಿ, ಇರಲಿ ನಡಿಬೇ ಬಾರಾ ಮಾಮಾ ನಾವು ಆಕಡಿಗೆ ಹೋಗೂನು. ನಮ್ಮಣ್ಣ ಎರಂಗಳಿ ಶಿವಣ್ಣ ಬಂದಾನಂತ (ಚರಣ್ ರಾಣಿ ಹೊರಗೆ ಹೋಗುವರು ಜ್ಯೋತಿಯು ಭಾರವಾದ ಹೆಜ್ಜೆಯನ್ನಡುತ್ತ ಮಹಡಿಯೇರುವಳು ವಜ್ರಮುನಿಯನ್ನು ಹಿಂಬಾಲಿಸುವಳು).

(ಪರದೆ ಬೀಳುವುದು)

===***===***===

ಹದಿನೇಳನೆಯ ಪ್ರವೇಶ

ಕಟ್ ಜಂಗಲ್–(ಹುಚ್ಚನಂತಾಗಿ ಶಂಕರ ಪ್ರವೇಶಿಸುವನು)

ಶಂಕರ– ಲಕ್ಷ್ಮೀ ಎಲ್ಲಿರುವೆ? ಹೇಗಿರುವೆ? ನಾನು ನಿನಗೆ ಮಾಡಬಾರದ ಅನ್ಯಾಯ ಮಾಡಿದೆ ನಿನ್ನಲ್ಲಿ ಕ್ಷಮೆ ಯಾಚಿಸಲೂ ಅರ್ಹತೆಯಿಲ್ಲದವನು, ಒಂದು ಅರೆಗಳಿಗೆಯೂ ಬಿಟ್ಟಿರದ ನನ್ನ ರವಿಯು ಹೇಗಿದ್ದಾನೆಯೋ? ರವೀ ನಿನ್ನ ಈ ನಿರ್ಭಾಗ್ಯ ತಂದೆಯನ್ನು ಕ್ಷಮಿಸು ಮಗು. ಸುಂದರ್ ನೀನು ಬರೀ ಮಾನವನಲ್ಲವಪ್ಪಾ, ದೇವ ಮಾನವ, ನನ್ನಿಂದ ಯಾರಿಗೂ ಒಳಿತಿಲ್ಲ. ಜ್ಯೋತೀ ನೀನಂದು ನನ್ನ ಕಣ್ಣನ್ನು ತೆರೆಸಿದೆ, ನೀನು ವೇಶ್ಯೆಯಲ್ಲ. ನನ್ನ ಗುರು. ನಾನೀಗ ಬದುಕುವುದರಿಂದ ಯಾವ ಪ್ರಯೋಜನವೂ ಇಲ್ಲ. ನನಗೀಗ ಉಳಿದಿರುವುದೆಂದರೆ ಅತ್ಮಹತ್ಯೆಯೊಂದೇ ಮಾರ್ಗ

ಅಂತರಾತ್ಮ–(ವಿಕಟವಾಗಿ ನಕ್ಕು) ಏನು ನೀನು. ಆತ್ಮಹತ್ಯೆಯನ್ನು ಮಾಡಿಕೊಳ್ಳುವೆಯಾ?

ಶಂಕರ– ಹೌದು, ಯಾರಿಗೂ ಬೇಡವಾದ ನಾನು ಬದುಕಲೇ ಬಾರದು ನಾನು ಪಾಪಿ

ಅಂತರಾತ್ಮ–ನೀನು ಬದುಕಬೇಕು ಬದುಕಲೇ ಬೇಕು

ಶಂಕರ– ಅಂತರಾತ್ಮ, ಯಾವ ಕಾರಣಕ್ಕಾಗಿ ನಿನ್ನ ಅನುಚಿತ ವರ್ತನೆಯಿಂದ ಎಷ್ಟೊಂದು ಅಮಾಯಕ ಜೀವಗಳು ಯಾತನೆಯನ್ನು ಅನುಭವಿಸಿದವು. ಅದನ್ನೀಗ ನೀನು ಅನುಭವಿಸಬೇಕು. ಅಲ್ಲದೆ ನಿನ್ನಂತೆ ವರ್ತಿಸಿದವರಿಗೆಲ್ಲಾ ವರ್ತಮಾನದ ನಿಜಸ್ಥಿತಿಯ ನಾಯಕನಾಗಿ ನೀನು ಕಾಣಬೇಕು, ಕಂಡಕಂಡವರೊಡನೆ ಕಲ್ಲೇಟು ತಿಂದು, ನೀನು ಸಾಯುವಂತಾಗಬೇಕು ಅಂದಾಗ ಮಾತ್ರ ತರುಣ ಪೀಳಿಗೆಗೊಂದು ಪಾಠವಾಗಿ ನೀನು ಪರಿಣಮಿಸುವೆ

ಶಂಕರ– ಹೌದು ನರನಾಗಿ ಹುಟ್ಟಿ, ನಯ ವಂಚಕತನದಿಂದ ವರ್ತಿಸಿ ವೇಶ್ಯೆಯ ಹಿಂದಲಿದ ನಾನು ಬದುಕಿ ನನ್ನ ದುರಂತದ ಬದುಕನ್ನು

ದಾರಿತಪ್ಪುವವರೆದುರು ತೋರಿಸಲೇಬೇಕು, ಸುಮತಿ; ಸರ್ವರ ಕಲ್ಮಶವಾದ ಹೃದಯವನ್ನು ಪರಿಶುದ್ಧಗೊಳಿಸುತ್ತಿದ್ದ ನಿನ್ನನ್ನೆ ಆತ್ಮಹತ್ಯೆಗೈಯುವಂತೆ ಮಾಡಿದೆ. ಈ ಎಲ್ಲಾ ಪಾಪಗೈದ ನಾನು ನಾಯಿಯಂತೆ ಬಾಳಲೇಬೇಕು. ಅಂದಾಗ ಮಾತ್ರ ಪ್ರಾಯಶ್ಚಿತ್ತ (ಮುಂದೆ ಹೋಗಿ) ಹಾಂ. ಏಕೋ ಏನೋ ಕಣ್ಣಿಗೇ ಕತ್ತಲಾರಿಸಿದಂತಾಗುತ್ತಿದೆ. (ಕುಸಿದು ಬೀಳುವನು, ಅದೇ ಹಾದಿಯಲ್ಲಿ ಲಕ್ಷ್ಮಿ ಮತ್ತು ರವಿ ಪ್ರವೇಶಿಸುವರು. ರವಿಯ ಕೈಯಲ್ಲಿ ಬೂಟ್ಸ್ ಪಾಲಿಸ ಮತ್ತು ಬ್ರೆಶ್ ಇರುತ್ತದೆ)

ರವಿ– ಅಮ್ಮಾ ಇವತ್ತು ಬೂಟು ಪಾಲಿಸ್ ಮಾಡಿದ್ದು ಹನ್ನೆರಡು ರೂಪಾಯಿ ಆಗಿದೆ

ಲಕ್ಷ್ಮಿ– ಇದೇನಪ್ಪಾ ಇವತ್ತೇಕೆ ಇಷ್ಟೊಂದು ಹಣ

ರವಿ– ಇವತ್ತು ಸ್ಕೌಟ್ ಪಿರಿಯಡ್ ಇತ್ತಮ್ಮಾ ಎಲ್ಲಾ ಹುಡುಗರೂ ನನ್ನ ಹತ್ರಾನೇ ಪಾಲಿಶ್ ಮಾಡಿಸಿಕೊಂಡು ಹೋದ್ರು, ಅಮ್ಮಾ ನಾನೂ ಶಾಲೆಗೆ ಹೋಗಿದ್ರೆ ಅವರಂತೆ ಆಗುತ್ತಿದ್ದೆನಲ್ಲಮ್ಮಾ

ಲಕ್ಷ್ಮಿ– ಹೌದು ಕಂದಾ ನಾವೊಂದು ಬಗೆದರೆ ದುರ್ವಿಧಿಯೊಂದು ಬಗೆಯುತ್ತದೆ, ತನ್ನ ಸುಖ ಸಂತೋಷಗಳನ್ನೆಲ್ಲಾ ಬದಿಗಿಟ್ಟು ನಮ್ಮ ಒಳತಿಗಾಗಿ ಶ್ರಮಿಸುವ ದೇವಮಾನವ ನಿಮ್ಮ ಚಿಕ್ಕಪ್ಪ ಅಂತವನ ಕಾಲುಗಳನ್ನೇ ದುರ್ವಿಧಿ ಕಸಿದುಕೊಂಡು ಬಿಟ್ಟಿತು. ಬೇಗ ನಡೆ ಮಗು ಸುಂದ್ರೂ ಹಸಿದು ಕೊಂಡಿರುತ್ತಾನೆ ಹೋಗಿ ಅಡುಗೆ ಮಾಡಬೇಕು

ರವಿ– ಅದಕ್ಕಾಗಿಯೇ ನಾನು ಎರಡು ರೂಪಾಯಿ ಇಡ್ಲಿ ಕಟ್ಟಿಸಿಕೊಂಡು ಬಂದಿರುವೆನಮ್ಮಾ

ಲಕ್ಷ್ಮಿ– ಈ ರೀತಿ ಸುಮ್ಮ ಸುಮ್ಮನೇ ಹಣ ಖರ್ಚು ಮಾಡಬಾರದು ರವೀ, ನಮ್ಮಿಬ್ಬರ ದುಡಿಮೆಯ ಮೇಲೆಯೇ ಜೀವನ ಅವಲಂಬಿತವಾಗಿದೆ

ರವಿ– ಇಲ್ಲಮ್ಮಾ ನನಗಾಗಿ ನಾನೇನನ್ನೂ ಖರ್ಚು ಮಾಡುವುದಿಲ್ಲ. ಚಿಕ್ಕಪ್ಪನಗೋಸ್ಕರ ಕೊಂಡು ತಂದೆ

ಲಕ್ಷ್ಮಿ– ನೀನು ನನ್ನ ಮಗನಪ್ಪಾ. ಈ ವಯಸ್ಸಿನಲ್ಲಿ ಆನಂದವಾಗಿ ಆಟವಾಡುತ್ತ ಇರಬೇಕಾದ ನೀನು ನಮ್ಮ ಸಲುವಾಗಿ ಇಷ್ಟೊಂದು ಕಷ್ಟ ಪಡಬೇಕಾಗಿದೆ,

ನನ್ನ ಹೊಟ್ಟೆಯಲ್ಲಿ ನೀನು ಹುಟುಬಾರದಿತ್ತಪ್ಪಾ (ಕಣ್ಣೊರೆಸಿ ಕೊಳ್ಳಲು)

ರವಿ– ಅಮ್ಮಾ ಅಳಬೇಡಮ್ಮಾ, ಇಲ್ನೋಡಮ್ಮಾ ಯಾರೋ ದಾರಿಯಲ್ಲಿಯೇ ಮಲಗಿದ್ದಾರೆ.

ಲಕ್ಷ್ಮಿ– ಯಾರೋ ದಾರಿ ಹೋಕರು ಇರಬಹುದು

ರವಿ– ಎಬ್ಬಿಸಿ ಎರಡು ಇಡ್ಲಿ ಕೊಡೋಣವೇನಮ್ಮ

ಲಕ್ಷ್ಮಿ– ನಿದ್ರಾಭಂಗ ಮಾಡುವುದು ಸರಿಯಲ್ಲ. ಪಕ್ಕದಲ್ಲೇ ಇಟ್ಟುಬಿಡು. ಎಚ್ಚರವಾದಾಗ ತಾನೇ ತಿನ್ನುತ್ತಾನೆ

ರವಿ– ಇಲ್ಲೇ ಇಡುವೆ (ಇಡುವಾಗ ಕೈತಟ್ಟ ಶಂಕರನಗೆ ಎಚ್ಚರವಾಗುವುದು. ಅಷ್ಟರೊಳಗೆ ಲಕ್ಷ್ಮೀ ರವಿ ಹೊರಟು ಹೋರುವರು)

ಲಕ್ಷ್ಮಿ– ಹಾಂ. ಯಾರು? ಮಗುವಿನ ಧ್ವನಿ ಕೇಳಿಸಿತಲ್ಲಾ ನನ್ನ ರವಿ ಏನಾದರೂ. ಬಂದಿದ್ದನೇ, ರವೀ "ಹುಂ" ಎಲ್ಲಾ ನನ್ನ ಭ್ರಮೆ. ರವೀ ಎಲ್ಲಿರುವೆ ಕಂದಾ (ಪಕ್ಕದಲ್ಲಿ ನೋಡಿ) ಹಾಂ. ಇಡ್ಲಿ ಯಾರೋ ಪುಣ್ಯಾತ್ಮರು ಇಟ್ಟು ಹೋಗಿದ್ದಾರೆ. ಎರಡು ದಿನದಿಂದ ಹಸಿದ ನನಗೆ ಆ ದೇವರೇ ಇದನ್ನು ಕರುಣಿಸಿದ್ದಾನೆ ತಂದೆ ಬಸವೇಶ ನಿನ್ನ ಕರುಣಾ ಕೃಪಾ ದೃಷ್ಟಿ ನನ್ನ ಮೇಲಿರಲಪ್ಪಾ (ಇಡ್ಲಿ ತಿನ್ನುತ್ತಿರುವಾಗ ಪರದೆ ಬೀಳುವುದು)

===**====***===

ಹದಿನೆಂಟನೆಯ ಪ್ರವೇಶ

ಗುಡಿಸಲಿನ ದೃಶ್ಯ

ಸುಂದರ– (ಗುಡಿಸಲಿನೊಳಗಿಂದ ಕಟ್ಟಗೆಯ ಕಾಲುಗಳನ್ನು ಬಗಲಲ್ಲಿ ಹಾಕಿಕೊಂಡು ಕುಂಟುತ್ತ ಪ್ರವೇಶಿಸುವನು ಎಡಗಾಲು ಅರ್ಧ ಕ್ಕಿರುವುದು) ಹೇ ದುರ್ವಿಧಿಯೇ ಭಲೆ ತಲೆದೂಗಬೇಕು. ನಿನ್ನ ಕಾರ್ಯಚಮತ್ಕಾರಕ್ಕೆ, ಆನಂದ ನಿಲಯವಾಗಿದ್ದ ನಮ್ಮ ಮನೆಗೆ ಆಷಾಢದ ಬಿರುಗಳಿಯಂತೆ ಅಪ್ಪಳಿಸಿದೆ, ವೇಶ್ಯೆಯೊರ್ವಳ ಬೆನ್ನುಹತ್ತಿದಿಕ್ಕಾ ಪಾಲಾಗುವಂತೆ ನನ್ನಣ್ಣ ನನ್ನು ಪ್ರೇರೇಪಿಸಿದೆ. ಮನೆ ಮಠವಿಲ್ಲದಂತೆ ನಮ್ಮನ್ನು ಅಡವಿಪಾಲು ಮಾಡಿದೆ ಇಷ್ಟಾದರೂ ನಿನಗೆ ಸಂತೋಷವಾಗಲಿಲ್ಲವಲ್ಲ. ಏನೂ ಅರಿಯದ ಹಸುಳೆಗೆ ವಿಪರೀತ ವಿಷಮ ಜ್ವರ ಬರುವಂತೆ ಮಾಡಿ ಅಸಹಾಯಕಳಾದ ಅತ್ತಿಗೆಯ ಮೇಲೆ ಬಲತ್ಕಾರ ಮಾಡಲು ಬಂದ ಅಧಮನನ್ನು ಹಿಮ್ಮೆಟಿದ ನನ್ನ ಎಡಗಾಲನ್ನು ಕಿತ್ತುಕೊಂಡೆ, ಹುಂ ನನ್ನ ಪ್ರಾಣವನ್ನಾದರೂ ತೆಗೆದುಕೊಂಡಿದ್ದರೆ ಮೆಚ್ಚುಬಹುದಿತ್ತು. ನಿನ್ನ ಪರೀಕ್ಷೆಗೆ ಬದುಕಿಯೂ ಜೀವ ಶವ ನಾನಾದೆ ಪತಿಯುಗ್ರೈದ ಅಪರಾಧಕ್ಕಾಗಿ ತಲ್ಲಣಿಸಿ ಹೋದ ಆ ತಾಯಿ ನನಗಾಗಿ ಹೆರವರ ಮನೆಯ ಎಂಜಲು ಮುಸುರೆ ತಿಕ್ಕುವಂತೆ ಮಾಡಿ, ಕಂದನ ಕೈಯಿಂದ ಕಂಡವರ ಕಾಲಿಡಿದು ಬೂಟು ಒರಸುವಂತೆ ಮಾಡಿದಯಲ್ಲಾ ವಾಹ್ ನಿನ್ನ ಸಾಮರ್ಥದ ಮುಂದೆ ಎಂಥಾ ದೈವವಿದ್ದರೂ ಅದು ನಿನ್ನ ಅಡಿಯಾಳೇ

ಭಿಕ್ಷುಕ– (ಏಕಧಾರಿ ನುಡಿಸುತ್ತ ಪದ ಹಾಡುತ್ತ ಪ್ರವೇಶಿಸುವನು)

ತೂಗುತಾದ ನೋಡು ಜೋಕಾಲಿ
ಸದ್ಗುರುವಿನ ದಯದಿಂದ
ತೂಗುತಾದ ನೋಡ ಜೋಕಾಲಿ ನಾದ ಬ್ರಹ್ಮನಂದದಿಂದ
ರಂಗ ಮಂಟಪ ಮಧ್ಯದಲ್ಲಿ
ತಂಗರಾಮ ಲಿಂಗದಲ್ಲಿ

(ಈ ಪದವನ್ನು ಸಂಪೂರ್ಣ ಹಾಡಬೇಕು)

ಸುಂದರ– ಏನಪ್ಪ ತಾತ ಇದು ಬರೀ ಬಡತನದ ಮನೆಯಲ್ಲ, ಕಡು ಬಡತನದ ಮನೆ, ಸುಮ್ಮನೇ ಕಾಲ ವಿಳಂಬ ಮಾಡುವರಿಂದ ಮುಂದಿನ ಮನೆಯ ಅನ್ನವೂ ತಪ್ಪಿ ಹೋಗುತ್ತದೆ

ಭಿಕ್ಷುಕ– ಏನಾದ್ರೂ ಇದ್ರೆ ಒಂದು ಸ್ವಲ್ಪು ಹಾಕು ನನ್ನಪ್ಪಾ

ಸುಂದರ– ನಿನಗಿನ್ನೇನು ಹೇಳಲಿ? (ಜೇಬು ನೋಡಿಕೊಂಡು) ಹಾಂ ಜೇಬಿನಲ್ಲಿ ಹತ್ತು ಪೈಸೆ ಇದೆ, ತಗೊಂಡು ಹೋಗು ಅದಕ್ಕೂ ಮೊದಲು ನಿನ್ನ ತಪ್ಪನ್ನು ಸರಿಪಡಿಸಿಕೊಂಡು ಹೋಗು

ಭಿಕ್ಷುಕ– ನನ್ನ ತಪ್ಪು ಅಂತಹದ್ದೇನು ನನ್ನ ತಂದೆ

ಸುಂದರ– ಏಕಧಾರಿ ನುಡಿಸುತ್ತ ನೀನು ಹಾಡಿದೆಯಲ್ಲಾ ತೂಗುತಾದ ನೋಡ ಜೋಕಾಲಿ ಸದ್ಗುರುವಿನ ದಯದಿಂದ, ಅಂದೆಯಲ್ಲ ಅದನ್ನೇ "ತೂಗುತಾದ ನೋಡು ಜೋಕಾಲಿ ದುರ್ವಿಧಿಯ ದಯದಿಂದ ಅಂತ ಮಾಡಿಕೋ ಈ ಹಿಂದೆ ಯಾರೋ ಆ ಹಾಡನ್ನು ತಪ್ಪಾಗಿ ಬರೆದಿದ್ದಾರೆ

ಭಿಕ್ಷುಕ– ಏನು ಮಾತಾಡ್ತಾಯಿದ್ದಿ ತಂದೆ ನೀನು? ಈ ಜಗತ್ತಿನಲ್ಲಿ ಜನಿಸಿದ ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳಿಗೂ ಆ ಗುರುವಿನ ಆಶೀರ್ವಾದವಿದೆ ಆ ಗುರುರಾಯ ಅಣುರೇಣು ತೃಣ ಕಾಷ್ಟಗಳಲ್ಲಿ ಅಡಕವಾಗಿದ್ದಾನೆ.

ಸುಂದರ– ಅದನ್ನೇ ನಾನು ತಪ್ಪು ಎಂದು ಹೇಳಿದ್ದು, ಈ ರೀತಿಯಾಗಿ ಪದಾ ಬರೆದದ್ದು ಬರೀತಪ್ಪಲ್ಲ ಅಕ್ಷಮ್ಯ ಅಪರಾಧ, ಈಗಿನ ಕಾಲದಲ್ಲಿ ಗುರು ದೈವ ಯಾವುದೂ ಇಲ್ಲ ಹಾಗೊಂದು ವೇಳೆ ಇದುದ್ದು ನಿಜವೇ ಆದರೆ ಅವರೆಲ್ಲಾ ಶಿರಿವಂತರ ಅಡಿಯಾಳಾಗಿದ್ದಾರೆ

ಭಿಕ್ಷುಕ– ಹರ ಮುನಿದರೂ ಗುರು ಕಾಯುವನೆಂದು ಹೇಳಿದ್ದಾರೆ, ಬಡತನದ ಕಡುಬೇಗೆಯಲ್ಲೂ ಬೆಂದು ಬಸವಳಿದ ನಿನ್ನ ಬುದ್ಧಿಗೆ ಹಾಗನ್ನಿಸಿದೆ ಗುರು ತೂಗುವ ಧರ್ಮವೆಂಬ ತೊಟ್ಟಿಲು ತೂಗುತ್ತಾಯಿದೆ. ಬಡತನ ಶಿರಿತನ, ಕಷ್ಟ ಸುಖ ಹೀಗೆ ಮೇಲೇರಿದ ತೊಟ್ಟಿಲು ಕೆಳಗೆ ಇಳಿಯಲೇಬೇಕು. ಕಷ್ಟದ ಕೊನೆಯ ಕಡಲನ್ನು ಈಸಿ ಜಯಸಿದ ನಿಮಗೆ ಇನ್ನು ಸುಖ ಬರಲೇಬೇಕು ಅದು ಆತನ ನಿಯಮ

ಸುಂದರ– (ನಕ್ಕು) ಹೌದು ತುಂಡುರೊಟ್ಟಿಗೂ ಗತಿಯಿಲ್ಲದ ಈ ಗತಿಗೇಡಿ ಕುಂಟನಿಗೆ ಇನ್ನು ಮುಂದೆ ಶಿರಿತನ ಬರುತ್ತದೆ (ವಿಕಟನಾಗಿ ನಕ್ಕು) ಸುಖ ಬರುತ್ತದೆ.

ಸುಖಸಂಪತ್ತೆನ್ನುವುದು ಅಪ್ಪಿ ತಪ್ಪಿ ನನ್ನ ಕನಸಿನಲ್ಲಿಯೂ ಬಂದಿಲ್ಲ. ತಾತಾ ನಿವಂದುಕೊಂಡಂತೆ ಆ ಲಕ್ಷ್ಮೀ ಎಲ್ಲಿದ್ದಾಳೆ? ಅವಳು ಸಮಾಜ ಘಾತುಕರ, ಕೊಲೆ ಪಾತುಕರ, ದೇಶದ್ರೋಹಿಗಳ ಕಾಲಡಿಯ ಆಳಾಗಿ ಅವರ ಮನೆಯಲ್ಲಿ ಬಿದ್ದಿದ್ದಾಳೆ. ಅಪ್ಪಿ ತಪ್ಪಿ ಹೊರ ಬಂದರೆ ಅವಳನ್ನೂ ಕೊಂದಾರೆಂದು ಅಂಜಿದ್ದಾಳೆ. ಅದೆಲ್ಲಾ ಯಾಕೆ ಇರಲಿ. ಈ ಹತ್ತು ಪೈಸೆತೆಗೊಳ್ಳಪ್ಪಾ (ಹತ್ತು ಪೈಸೆಕೊಡಲು ಹೋಗುವನು)

ಭಿಕ್ಷುಕ– ಆವೇಶದ ಅತಿರೇಕದಲ್ಲಿ ಅತಿಯಾಗಿ ಮತನಾಡಿದರು ತಂದೆ ಆ ಗುರುವಿನ ಕರುಣೆ ಬಿದ್ದಿತೆಂದರೆ ಬೆಳಗಾಗುವುದರೊಳಗೆ ನೀನು ಲಕ್ಷಾಧೀಶನಾಗಬಹುದು, ಬೇಡಪ್ಪಾ ನೀನು ಶ್ರೀಗುರುವನ್ನು ದೈವವನ್ನೂ ನಿಂದಿಸಿ ನೀಡುವ ಆ ಕಾಣಿಕೆ ನನ್ನಲ್ಲೂ ಅಪಸ್ವರ ಮೂಡಿಸೀತು ನಾನಿನ್ನು ಬರ್ತೀನಿ (ಹೋಗುವನು)

ಸುಂದರ– ಭಲ ಮುದುಕಾ. ನಿನ್ನಲ್ಲೂ ನಿಷ್ಠೆ. ಕಣ್ಣಿಗೆ ಕಾಣದ ಆ ದೇವರ ಬಗ್ಗೆ ಅಷ್ಟೊಂದು ಭಕ್ತಿ ಹೂಂ. ಲೋಕೋ ಭಿನ್ನ ರುಚಿ (ಅಷ್ಟರಲ್ಲಿ ಲಾಟರಿ ಮಾರುವ ಹುಡುಗ ಬರುವನು)

ಶ್ಯಾಮು– ಲಾಟರಿ ಸಾರ್ ಕರ್ನಾಟಕ ಸ್ಟೇಟ್ ಲಾಟರಿ ಕಪಿಲಾ ವಿಕ್ಲಿಲಾಟ್ರಿ ಇಂದೇ ಡ್ರಾ ನಾಲ್ಕು ಲಕ್ಷ ರೂಪಾಯಿ ಬಂಪರ್ ಬಹುಮಾನ

ಸುಂದರ– ಈಗ ನಿನ್ನ ಸರದಿ ಬಂದಂತೆ ಕಾಣುತ್ತದೆ. ಅಯ್ಯೋ ಮಹಾನುಭಾವ ಇಲ್ಲಿ ನಿನ್ನ ಲಾಟರಿ ಟಿಕೆಟ್ ಕೊಳ್ಳುವ ಹಣವಂತರಾರೂ ಇಲ್ಲಪ್ಪಾ

ಶ್ಯಾಮು– ದಯವಿಟ್ಟು ಈ ಎರಡು ಟಿಕೆಟ್ ಗೆಗೆದುಕೊಂಡು ಬಿಡಿ ಸಾರ್ ಇಂದೇ ಡ್ರಾ ಇದೆ

ಸುಂದರ– ತಮ್ಮಾ ನಾನಾಗಲೇ ಹೇಳಾಯ್ತಲ್ಲ. ಈ ಬಡವನ ಗುಡಿಸಲಿನಲ್ಲಿ ಕುಡಿಯಲು ನೀರೊಂದು ಬಿಟ್ಟು ಮತ್ತೊಂದು ಸಿಗದು. ಅಂದಾಗ ನಿನಗೇನು ಕೊಡಬೇಕು?

ಶ್ಯಾಮು– ಸಾರ್ ಹೇಗಾದರೂ ಮಾಡಿ, ಐದು ರೂಪಾಯಿಯನ್ನು ಕೊಡಿ, ನನ್ನ ತಾಯಿ ಮರುಣಾವಸ್ಥೆಯಲ್ಲಿ ಮಲಗಿದ್ದಾಳೆ. ಔಷಧಿಗೆ ಮೂರು ರೂಪಾಯಿ ಕಡಿಮೆಯಾಗಿದೆ. ನಿಮ್ಮ ಕಾಲು ಮುಗಿಯುವೆ.

ಸುಂದರ– ನಿರೀಕ್ಷೆಗೂ ಮೀರಿದ ಪರೀಕ್ಷೆ, ತಮ್ಮಾ ನಾ ನಾವ ರೀತಿಯಲ್ಲಿ ಸಾಂತ್ವನ

ಮಾಡಲಪ್ಪಾ ಬೆಂಕಿಯಲ್ಲಿ ಬಿದ್ದವನೊಬ್ಬ ನೀರಲ್ಲಿ ಮುಳುಗಿರುವನೊಬ್ಬ, ಅವನು ಸುಖವಾಗಿರಲೆಂದು ಇವನು ಇವರು ಸುಖವಾಗಿರಲೆಂದು ಅವನು, ಹಾರೈಸಿದಂತಾಯ್ತು (ಅಷ್ಟರಲ್ಲಿ ಲಕ್ಷ್ಮಿ ರವಿ ಪ್ರವೇಶಿಸುವರು)

ಲಕ್ಷ್ಮಿ– (ಗಾಬರಿಯಾಗಿ) ಸುಂದ್ರೂ ಏನಯ್ತಪ್ಪಾ

ಸುಂದರ– ಅತ್ತಿಗೆ ಇವನ ತಾಯಿ ಹಾಸಿಗೆ ಹಿಡಿದು ಮಲಗಿದ್ದಾಳಂತೆ, ಔಷಧಿಗಾಗಿ ಮೂರು ರೂಪಾಯಿ ಕಡಿಮೆಯಾಗಿದೆಯಂತೆ

ಲಕ್ಷ್ಮಿ– (ಹುಸಿನಕ್ಕು) ಹೂಂ. ಮಗೂ ಬಾರಪ್ಪಾ ತಗೋ (ಐದು ರೂಪಾಯಿಕೊಡುವಳು)

ಶ್ಯಾಮು– (ಕಣ್ಣೊರೆಸಿಕೊಂಡು) ಅಮ್ಮಾ ನೀವಿಂದು ನನ್ನ ಪಾಲಿನ ದೇವರುಕಂಡ ಕಂಡವರಿಗೆಲ್ಲಾ ಮಂಡೆ ಕೆತ್ತುವಂತೆ ಬಿದ್ದು ಬೇಡಿದರೂ ದುಡಿಯಲಾರದ ಭಂಡ ನಾನೆಂದು ಜರಿದು ಅಟ್ಟಿದರೇ ವಿನಹ ಕರುಣೆ ತೋರಲಿಲ್ಲಮ್ಮಾ

ಲಕ್ಷ್ಮಿ – ನಿಷ್ಠಾವಂತರಿಗೆ ನಿಂದೆಯ ಹೊರೆ ಹೋರಿಸುವ ಹಂದಿ ಜಾತಿಯ ಮಂದಿಗೆ ಅಗ್ರಸ್ಥಾನ ನೀಡಿದೆ. ಈ ನಿಷ್ಠುರವಾದಿ ಜಗತ್ತು, ನಡೆಯಪ್ಪಾ ಬೇಗ ಹೋಗಿ ನಿನ್ನ ತಾಯಿಗೆ ಔಷಧಿಕೊಡಿಸಿ ಬಾ

ಶ್ಯಾಮು– ಆಗಲಿ ತಾಯಿ ಅಮ್ಮಾ ನೀನಾದರೂ ಈ ಟಿಕೆಟ್ ತಗೊಮ್ಮಲಕ್ಷ್ಮಿ– ಅದೆಲ್ಲಾ ಏನೂ ಬೇಡ ಕಂದಾ ಒಬ್ಬರಿಗೊಬ್ಬರು ಸಹಾಯ ಮಾಡುವುದು ಮಾನವರ ಧರ್ಮ

ಶ್ಯಾಮು– ದಯವಿಟ್ಟು ತಗೊಳ್ಳಿ ಅಮ್ಮಾ (ಟಿಕೆಟ್ ಕೊಟ್ಟು ಹೋಗುವಳು)

ಲಕ್ಷ್ಮಿ– ಬಾ ಸುಂದ್ರೂ

ಸುಂದರ– (ನಿಟ್ಟುಸಿರು ಬಿಟ್ಟು) ನಡೆಯಮ್ಮಾ (ಒಳಗೆ ಹೋಗುವರು)

(ಪರದೆ ಬೀಳುವುದು)

===***===***===

ಹತ್ತೊಂಭತ್ತನೆಯ ಪ್ರವೇಶ

ರಸ್ತಾ ದೃಶ್ಯ

ಚಂದ್ರ– (ಬರುತ್ತ ನಮ್ಮ ಹುಡುಗಿ ಅರುಣಾ ನಿನ್ನೆ ಪಾರ್ಕಿಗೆ ಕರಕೊಂಡು ಹೋಗಿ ತನ್ನ ಮನದೊಳಗಿನ ಆಶೆಯನ್ನೆಲ್ಲಾ ಹೇಳಿದ್ಲು, ಅಂತೂ ಆಕಿ ಮನಸ್ಸು ಹದಿನಾರಾಣೆ ನನ್ನ ಮ್ಯಾಗ ಐತಿ ಅಂದಂಗಾಯ್ತು ಹ್ಯಾಂಗಾರ ಮಾಡಿ ಆ ಖೋಡಿಗಳ ಕೈಯಿಂದ ಪಾರುಮಾಡಿಕೊಂಡು ಮದುವಿ ಮಾಡಿಕೊಂಡು ಬಿಡಬೇಕು, ಅರುಣಾನ ಸಮಸ್ಯೆ ನನಗೆ ಬೆಳಗಾವಿ ಸಮಸ್ಯೆ ಅದಂಗ ಆಗ್ಯೆತಿ ಅಲ್ಲಾ ಸ್ಕೈಲಾಬ್ ಬೀಳೋದು ಬಿತ್ತು ರಾತ್ರಿ ಮಕ್ಕೊಂಡಾಗ ಈ ಮಕ್ಕಳ ಮ್ಯಾಗಾದ್ರೂ ಬಿದ್ದಿದ್ದರ ಎಷ್ಟು ಚೊಲ ಆಗತ್ತಿತತ್ತು. ಅದು ಹೋಗಿ ಹೋಗಿ ಸಮುದ್ರದಾಗ ಬೀಳಬೇಕಾ?

ಅರುಣ– (ಸಿಟ್ಟಿನಿಂದ ಬೈಯುತ್ತ ಬರುವಳು) ಪಿಕನಾಸಿಗಳಾ ಬೇವರ್ಸಿಗಳಾ ಕಣ್ಣು ಕಣ್ತಾವೋ ಇಲ್ಲೋ ನಿಮ್ಮೌನ ಎಂಥಾ ಪರಿಹಾದುಹೋದಿ

ಚಂದ್ರ– ಅರುಣಾ ಏನದು ಗಲಾಟೆ?

ಅರುಣ– ಅವನ್ಯಾವನೋ ಯದ್ವಾ ತದ್ವಾ ಬಂದು ಹಾದುಕೋದ, ಅದರ ಹೆಣ ಚೆಂದ ಮಾಡಿ ಕುಣ್ಯಾಗ ಇಟ್ಟು ಮನಿಗೆ ಬರಲಿ ನೋಡಿ ನೋಡದವರರಾಂಗ ಹೋಗ್ತಾವು. ಅದರಾಗ ಆಯಕಟ್ಟಿನ ಜಾಗ ನೋಡಿ ಹಾಯ್ತಾವು ಆದ್ರ ಕಣ್ಣು ಸೇದಿ ಹೋಗ್ಲಿ ಈ ಹುಡುಗರಿಗೆ ಇದೊದು ನಮೂನೆ ರೋಗ ನೋಡ್ರಿ, ಬಸ್ಸಿನಾಗೂ ಇದಾ ನಮೂನೆ ರೋಗ ನೋಡ್ರಿ) ಬಸ್ಸಿನಾಗೂ ಇದಾ ನಮೂನೆ ಮಾಡ್ತಾವು. ತೂಕಡಿಸಿದಾಂಗ ಮಾಡಿ ಮ್ಯಾಗ ಬೀಳ್ತಾವು. ಹಾಂಗ ಸುಮ್ಮಕ ಇದ್ರ ಎಲ್ಲಾ ಸವರಾಡಿಕೊಂಡು ಬಿಡ್ತಾವು

ಚಂದ್ರ– ಹೂಂ ಹಾಂಗಾ ಸುಮ್ಮಕಿದ್ರ ಕೈಯಿಂದ ತಲಿತನಕೂ ಬರ್ತಾವು.

ಅರುಣ– ಅಷ್ಟರಾಗ ಅವಕ್ಕೇನು ಸುಖಾ ಸಿಗುತ್ತೋ ಏನು ಸುಡುಗಾಡು.

ಚಂದ್ರ– ಅದಾ ಕಾವಿನಾಗ ಮೂರು ತಿಂಗಳು ತಡಕೊಂತಾವು ಇರಲಿ ಬಿಡು ಅವರಿವರ ಗೊಡವೆ ನಮಗ ಯಾಕೆ? ನಾಳಿಗೇ ಗತ ತೇಲುತ್ತಂತ ನಾವು ಮದುವಿ ಮಾಡಿ ಸಂಸಾರದ ರಥಾ ಹೂಡಿಬಿಡೂನು

ಅರುಣ– ಚೊಲ ದಿನ ಇತ್ತಂದ್ರ ಶರಣ ಬಸಪ್ಪನ ಗುಡಿಗೆ ಹೋಗೋದೈತಿ ತಾಳಿಕಟ್ಟಿಗೊಂಡು ಬರೂದೈತಿ

ಚಂದ್ರ– ನಿನಗಿಂತ ಮೊದ್ಲು ನನಗಾ ಅವಸರ. ಈ ಒಂಟಿ ಬಾಳು ಸಾಕಾ ಗೈತಿ ಜಂಟಿ ಆಗಿ ಬಿಡೂನು

ಅರುಣ– ಮೊದಲು ಈ ತಂಟೆಕೋರರ ಸಹವಾಸ ಬಗೆ ಹರಿಬೇಕು

ಚಂದ್ರ– ಅದರ ವಿಷಯ ನನಗಬಿಡು, ನೀನೊಂದಾ ಮದುವಿ ಕಡೆಗೆ ಮನಸುಕೊಡು

ಅರುಣ– ನಿನ್ನ ಮ್ಯಾಗ ನನ್ನ ಮನಸ್ಸು(ಇಬ್ಬರೂ ಹಾಡುವರು)

ಮನ್ಮಥ– (ಹಾಡು ಮುಗಿದಾ ರಕ್ಷಣ ರಭಸದಿಂದ ಬಂದು) ಶಹಭಾಸ್, ಸುಮ್ಮಕ ಟೈಮು ವೇಷ್ಟ ಮಾಡಬ್ಯಾಡ್ರೆಪಾ. ಒಬ್ರು ತಪ್ಪಿದ್ರ ಇನ್ನೊಬ್ರು ಹಾಂಗ ಪದಾ ಹಾಡ್ತಾ ಇರಬೇಕು

ಚಂದ್ರ– ನಿನ್ನೆ ನಿಮ್ಮ ಸರ್ತಿ, ಇವತ್ತು ನಮ್ಮ ಸರ್ತಿ ಅದರಾಗೇನು ಮುಲಾಜಿ ಇಲ್ಲ ಬಿಡು

ಮನ್ಮಥ– ಅದಕ್ಕಾ ಕೋಳಿ ಕೂಗೋ ಮುಂದ ಎದ್ದು ರೆಡಿಯಾಗಿರಿ

ಚಂದ್ರ– ಏನು ಸುಳ್ಳು ಹೇಳ್ತೀಯೋ ಮಾರಾಯ ನೀನು

ಮನ್ಮಥ– ಏನಂದಿ? ನಾನು ಸುಳ್ಳು ಹೇಳ್ತೀನೇನು? ನೀನು ದೇವ ರಾಣಿ ಮಾಡಿ ಹೇಳು ಕೋಳಿ ಕೂಗೋ ಮುಂದ ಎದ್ದೀಯಿಲ್ಲ

ಚಂದ್ರ– ಮಾಜಿ ಗೃಹಮಂತ್ರಿ ಜಾಲಪ್ಪನ ಮ್ಯಾಗ ಆಣಿ ಮಾಡಿಹೇಳ್ತೀನಿ ನಾನು ನಸುಕಿನಾಗ ಎದ್ದಿದ್ದೇನೂ ಖರೆ, ಆದರ ಕೋಳಿ ಕೂಗಿದ್ದು ಮಾತ್ರ ಸುಳ್ಳು

ಮನ್ಮಥ– ಹೂಂ ಇದೆಂಥಾ ಮಾತಾಡ್ತೀಯೋ. ಕೊಳಿ ಕೂಗೊಂದು ಸುಳ್ಳಾ..?

ಚಂದ್ರ– ಅಲ್ಲದೆ ಖರೇ ಏನು ಮತ್ತ? ಜಗತ್ತಿನಾಗ ಎಲ್ಲಿಯಾದ್ರೂ ಕೋಳಿ ಕೂಗೋದು ನೋಡಿಯೇನು? ಅವಾ ಹುಂಜಾ ಕೂಗ್ತಾವಪಾ, ಈ

ನಮ್ಮ ಹಿರಿಯರು ಕೋಳಿ ಕೂಗಿತ್ತು ಬೆಳಗಾಯಿತ್ತು. ಅಂತ ಇದಾ ನಮೂನೆ ಸುಳ್ಳು ಹೇಳಿಕೊಂತಾನ ಬಂದಾರ ನೋಡು, ಇದಾ ರೀತಿ ಬ್ಯಾರೆ ಎಷ್ಟು ಹೇಳ್ಯಾರೋ ಯಾರಿಗೆ ಗೊತ್ತು?

ಮನ್ಮಥ– ನಿನ್ನ ಕೂಡ ಏನು ಮಾತಪಾ ಕವಿ ಕೂಡ, ಅಂಟಾಂಗ ಅರುಣಾ ಇಲ್ಲಿ ನೋಡಿಲ್ಲಿ ನಿನಗಾಗಿ ಈ ಸೀರಿ ತಂದೀನಿ ಅಲ್ಲದೆ ಸ್ಪೇಶಲ್ ಹೂವು ತಂದೀನಿ ನೋಡ್ಯಾರ ನೋಡು

ಅರುಣ– ನೋಡಾಕ ಹತ್ತಿನಲ್ಲ. ಅವಾ ಹೂವು ಬಾಡಿ ಹೋಗ್ಯಾವು

ಮನ್ಮಥ– (ಅವಸರದಿಂದ ನಡುವೆ ಬಾಯಿಹಾಕಿ) ಹಿಕ್ಕಟ್ಟು ಬಾಯಾಗ ಹುಳಾ ಬಿದ್ದಾವು. ಮೊದ್ಲು ತಪ್ಪಾಯ್ತು ಅಂತ ಅನ್ನು.

ಅರುನ– ಯಾಕ?

ಮನ್ಮಥ– ಇದೇನು ಸಾಮಾನ್ಯ ಹೂಗಳಲ್ಲ

ಅರುಣ– ದೇವ ಲೋಕದ ಪಾರಿಜಾತದ ಹೂಗಳೇನು ಮತ್ತ?

ಮನ್ಮಥ– ಅದಕ್ಕಿಂತಲೂ ಹೆಚ್ಚು. ಹೈದ್ರಾಬಾದಿನಾಗ ಹಾಕಿಸಿಕೊಂಡು ವಿಮಾನದಾಗ ಗೋರೆಬಾಳ ಶರಣಬಸಪ್ಪನ ಗುಡಿ ಮ್ಯಾಗ ಚೆಲ್ಲಿದ್ರಲ್ಲಾ ಅದರಾಗ ಈ ಗೊಂಚಲು ಹಳ್ಳದಾಟಿ ಬಿದ್ದಿತ್ತು. ನಿನ್ನ ಸಲುವಾಗೇ ತಗೊಂಡು ಬಂದ್ಯಾ ಹೂಂ ನಿಧಾನ ಮಾಡಬ್ಯಾಡ ಇವರಿಂದಂತೂ ತಂದು ಕೊಡೋದು ಆಗೋದಿಲ್ಲ

ಕುಬೇರ– (ಅವಸರದಿಂದ ಬರುವನು ಕೈಯಲ್ಲಿ ಬ್ಲೋಜ್ ಪಿಸ್ ಇರುವದು) ನನಗ ಯಾವುದೂ ಅಸಾಧ್ಯ ಅಂಬೋದಾ ಇಲ್ಲ. ತಗೋ ಅರುಣಾ ಕುಕುನೂರ ನಾಟಕ ಕಂಪನಿ ಸೇರಿ ಕುಬಸದ ಖಣ ತಂದೀನಿ.

ಅರುಣ– ಹೌದಾ ತಾತಾ (ಯಿಸಿದುಕೊಂಡು).

ಚಂದ್ರ– ಕುಕುನಾರಗ ಕುಬಸದ ಖಣ ತಂದೇನು? ನಿಮ್ಮದಾ ಹಕೀಕತ್ತು ತಿಳಿವಲ್ತಲ್ಲ ನನಗ, ಅಲ್ಲಾ ನೀವೆಲ್ಲಾ ಇಲ್ಲೇ ಮರೆಗೆ ನಿಂತಿರತೀರಾ ಏನು ಸುಡುಗಾಡ, ಎಷ್ಟೊಂದು ಕರೆಕ್ಟ್ ಟೈಮಿಗೇ ಬರುತೀರಲ್ಲಾ ಒಬ್ಬೊಬ್ರು. ಇಕಾ ಅಲ್ಲಿ ಒಬ್ಬನು ಬಂದಾ ನೋಡು

ಗುರು– (ಆಗಮಿಸಿ) ಆ.. ಅ ಅರುಣ ಬಾ ಬಾ ಬಾಂಬೆ ಡೈ ಡೈ ಯಿಂಗಿಗೆ ಹೋಗೂನು

ಕುಬಾರ– ಹೂಂ ಅದಾದ್ರೂ ಆಗಲಿ ನೋಡೇ ಬಿಡೂನು. ಇದಕ್ಕ ಏನಂತೀಯಪ್ಪಾ ಚಂದ್ರಗೌಡ ಮಾತಾಡೋ ಮಾರಾಯ. ತುಟಿ ಪಿಟಕ್ಕಂತ ಅನವಲ್ಲೆಲ್ಲಾ ಮಕಾಬಿಕ್ಕೊಂಡು ನಿಂತೀಯಲ್ಲ ಭೂತಲದಿನ್ನಿ ಬಸವ ನಿಂತಾಂಗ.

ಚಂದ್ರ– ನೀವ್ಯಾಂಗ ಹಾಂಗಪಾ ಇದೊಂದು ನಮೂನೆ ಸ್ವಯಂವರ.

ಅರುಣ– (ತನ್ನ ವ್ಯಾನಿಟಿ ಬ್ಯಾಗನಿಂದ ಹಾಳೆ ಪೆನ್ನು, ಅದನ್ನಾ ನಾಲ್ಕು ತುಂಡು ಮಾಡಿ ನಾಲ್ಕು ಮಂದಿ ಹೆಸರು ಬರಿರಿ.

ಚಂದ್ರ– (ಯಿಸಿದುಕೊಂಡು) ಹೂಂ ಶಿವಾ ಶಿವಾ ಇದೊಳ್ಳೆ ಸತ್ವ ಪರೀಕ್ಷೆ.

ಗುರು– ಗ್ಯಾ ಗ್ಯಾರಂಟಿ ನ.. ನ.. ನಂದಾ ಹೆಸರು ಬ.. ಬರುತ್ತ.

ಕುಬೇರ– ನಟ ಭಯಂಕರ. ನಂದಾ ಹೆಸರು ಬರತೈತಲೆ ಇವತ್ತು ಕುಕುನಾರಾಗಿಂದ ಜೆಸ್ಸು ಬಂದೈತಿ.

ಚಂದ್ರ– ಈಗೇನು ಬರೆಯಂದ್ಯೊ ಬ್ಯಾಡೋ?

ಮನ್ಮಥ– ಇರಲಿ ಬರೆಯಪಾ ಅವರದೇನು?

ಚಂದ್ರ– ಮೊದಲನೆಯ ಚೀಟಿ ಗುರುನಾಥ(ಬರೆಯುತ್ತ) ಇರಡನೆಯದು ಮನ್ಮಥರಾವ್, ಇನ್ನು ಮೂರನೆಯದು ಕುಬೇರ. ಕೊನೆಯದು ನಾನು ಅಂದ್ರ ಚಂದ್ರಗೌಡ (ಇಂದು ಒಂದೊಂದೇ ಹಾಳೆಯಲ್ಲಿ ಬರೆದು ಯಾರಿಗೂ ತೋರಿಸದೆ ಸುಳಿಸುತ್ತುವನು) ಇಲ್ಲೇ ಕೆಳಗ ಹಾಕಿ ಬಿಡ್ತೀನಿ ಯಾರಾದ್ರೂ ಒಬ್ರು ಎತ್ತಿ ಬಿಡ್ರೆಪಾ.

ಮನ್ಮಥ– ನಾನು ಎತ್ತತೀನಿ.

ಕುಬೇರ್ರ– ಯಾಕಾ ನಾನು ಸುಮಾರು ಅಲ್ಲ? ನಾನು ಎತ್ತತೀನಿ ಅಂದ್ಯಾ.

ಗುರು– ಈ ನಮೂನೆಗು ಗು ಗುದ್ದಾಡುವಾಂಗಿದ್ರೆ ನೀವ್ಯಾರೂ ಬ್ಯಾ ಬ್ಯಾಡ ನೊ ನೊ ನೊಣ ಕುಂದ್ರಲಿ.

ಚಂದ್ರ– ಹೊಗ್ಲೋ ನಿನ್ನ ನೊಣ ಕುಂದ್ರೋತನಕ ಇಲ್ಲಿನಿಂತ್ರ ನಮ್ಮ ಕಾಲೆಲ್ಲಾ ಸೆಟಗೊಂಡು ಹೋದಾವು ಅವು ಯಾವಾಗ ಕುಂದ್ರ ತಾವೋ.

ಗುರು– ಹಾಂಗಾದ್ರ ಉ ಉಗುಳು ಹಚ್ಚೋನು.

ಕುಬೇರ– ಉಗುಳುಬ್ಯಾಡ ಶಿವಾ, ಸಿಂಬಳಾ ಹೆಚ್ಚು ಸಿಂಬಳ, ಅಂದ್ರೆ ಪಾಡಾ ಗುತ್ತ.

ರಾಣಿ– (ಬಂದು) ಅಲ್ರಿ ಸುಮ್ಮಕ ಯಾಕ ಗುದ್ದಾಡತೀರಿ ನಾನು ಅದೀನಲ್ಲ ಯಾರದು ಇತ್ತಂದಿ ಎಷ್ಟು ಎತ್ತಂದಿ? ಕುಬೇರ ಮಾಮಾ ನಂದ ಎತ್ತಲಾ (ಕುಬೇರನ ಲುಂಗಿ ಎತ್ತಲು ಹೋಗುವಳು).

ಕುಬೇರ– ಹೇ ನಿನ್ನ ಕೈಬಿಡೋ ಏನು ಹಾಂಗ ಎತ್ತಿದ್ರ ನೀನೇನು ಹೇಳಿ ಕೇಳಿ ಹಿಂಬಂಡಿ, ಮಂದಿನ್ನ ನೋಡೊಂಗಿಲ್ಲ ಮಕ್ಕಳನ್ನು ನೋಡೊಂಗಿಲ್ಲ

ಮನ್ಮಥ– ಮೊದಲಾ ಹೇಳಿ ಕೇಳಿ ನಟಭಯಂಕರ ಆತ. ಒಳಗೇನು ಅಂಡರವಾರು ಐತೋ ಇಲ್ಲೋ ನಿನಗೇನು ಗೊತ್ತು.

ಚಂದ್ರ– ಹೇರಾಣಿ ಸುಮ್ಮಕ ಲುಂಗಿಯಾಕ ಎತ್ತಲಿಕ್ಕ ಹೋಗ್ತಿ. ಇಲ್ಲಿ ಕೆಳಗ ಲಾಟ್ರಿ ಟಿಕೆಟ್ ಅದಾವು ಅವನ್ನ ಎತ್ತು.

ಕುಬೇರ– ನಂದಾ ಎತ್ತೋ ನೀ ಕೇಳಿದ್ದು ಕೊಡ್ತೀನಿ.

ಮನ್ಮಥ– ನಂದು ಎತ್ತು ನಿನಗೆ ವಂಕಿ ಹಾಕಿಸಿಕೊಂಡು ಬರ್ತೀನಿ.

ರಾಣಿ– ಏನು ವಂಕೀನಾ.

ಗುರು– ನ ನಂದು ಎ ಎತ್ತಿದ ನೀ ನೀ ಹೇಳಿದಾಂಗ ಕೇಳ್ತೀನಿ.

ರಾಣಿ– ಮೊದ್ಲು ಎಲ್ಲಾರೂ ಹೀಂಗ ನನ್ನ ಕೂಡ ಖಾರ ವಗ್ಗರಣಿ ತಿಂದವರು ಹಾಂಗಾ ಒಂದಕ್ಕೆ ಕಿರುಬೆರಳು ತೋರಿಸಿ ಹೋದವರು. ಹೊಳ್ಳಿ ಮುಕಾ ತೋರಿಸಿದ್ರ ಕೇಳು.

ಚಂದ್ರ– ಇರಲಿ ಎತ್ತೋ ನಿನ್ನ ಪುರಾಣ ಪ್ರಾರಂಭ ಆದ್ರ ಬೆಳ್ತನಕೊ ಮುಗಿಯೊಂಗಿಲ್ಲ.

ರಾಣಿ– ಎಷ್ಟು ಅವಸರ ಮಾಡ್ತೀರಿ ಮದುವಿಗಿ.

ಕುಬೇರ– ಈಗ ನವೆಂಬರ್ ಡಿಸೆಂಬರ್ ಛಳಿ ಅದಕ್ಕಾ.

ರಾಣಿ– ಹೂಂ ನಿಮ್ಮ ನಿಮ್ಮ ಹಣೇಬರಹದಾಗ ಇದ್ದಾಂಗ ಆಗಲಿ (ಒಂದು ಚೀಟಿ ಎತ್ತಿ ತೆಗೆದು ನೋಡಲು ಅದರಲ್ಲಿ ಚಂದ್ರಗೌಡನ ಹೆಸರು ಬರುವುದು) ಹಾಂ ಇದೇನೊ ಚಂದ್ರಗೌಡ ಮಾಮ ನಿನ್ನ ಹೆಸರಾ ಬಂತಲ್ಲಾ.

ಗುರು– ಹಾಂ ಇಲ್ಲಿ ಕೊ ಕೊಡು (ಎಲ್ಲರೂ ನೋಡುವರು) ಥೂತ್ ಕೆಲಸ ಕೆಟ್ತು.

ಮನ್ಮಥ– (ಒಡಮು ಹೇಳಿದಂತೆ) ಅಂಗೈಗಿಣಿ ಹಾರಿ ಹೋತಲ್ಲೋ ವೀರಭದ್ರಾ.

ಕುಬೇರ– ಮತ್ತ ವೀರಭದ್ರ ದೇವರು ಒಡಮು ಪ್ರಾರಂಭ ಮಾಡಿದನಲ್ಲಪಾ.

ಮನ್ಮಥ– ಆಯ್ತಲ್ಲೋ ಸ್ವಾಮಿ ಹೋದ್ಯಲ್ಲೋ ಪ್ರೇಮಿ.

ಚಂದ್ರ– ಹೂಂ ಚಾಲುವು ಮಾಡ್ರಿ ಕಡೆ ಕಡೇ.

ರಾಣಿ– ಊಟೆಗಲ್ಲ ಮಾಮಾ ಚಾಟಿಗೆ ಹೋಗ್ತೀವಿ.

ಚಂದ್ರ– ಅಷ್ಟು ಮಾಡಪಾ. ನೀನಾ ಮೂವರನ್ನು ನೋಡಿಕೊಂಡುಬಿಡು ನಾವಿನ್ನು ಬರ್ತೀವಪಾ ನಡಿ ಅರುಣಾ (ಹೋಗುವರು).

ಮನ್ಮಥ– ನಡಿ ನಡಿ ನಿನ್ನ ಹಣೇ ಬರಹದಾಗ ಆಕೀದು ಬರದೈತಿ.

ಕುಬೇರ– ನನಗ್ಯಾಕೋ ಸಂಶಯ ಬರಾಕ ಹತ್ತೈತಪಾ. ಹ್ಯಾಂಗೂ ಇಲ್ಲೇ ಚೀಟಿ ಬಿದ್ದಾವು ತಡಿ ನೋಡೇ ಬಿಡೂನು (ಕೆಳಗೆ ಬಿದ್ದ ಚೀಟಿ ತೆಗೆದುನೋಡಿ) ಹಾಂ ಎಲ್ಲದ್ರಾಗೂ ಚಂದ್ರಗೌಡ ಅಂತ ಬರದಾನಲ್ಲೋ.

ಗುರು– ಹಾಂ ಇದು ಮಹಂ.... ಮೋಸ.

ಮನ್ಮಥ– ಇದು ಅನ್ಯಾಯದ ಮದುವಿ. ನ್ಯಾಯಬದ್ದವಾಗಿ ನಮ್ಮ ನಾಕು ಮಂದಿಗೆ ಸೇರಿದಾಕಿ ಆಕಿ.

ಕುಬೇರ– ನಡ್ರಿ ತೆಲಿಗೆ ಒಂದೊಂದು ಕೈಕಾಲು ಕಿತಿಗೊಂಡು ಬಿಡೂನು ಲೇ ಗೌಡ (ಹೋಗುವರು).

ರಾಣಿ– ಸುಮ್ಮಕ ಯಾಕ ಗುದ್ದಾಡತೀರಿ ನಾನೆಲ್ಲಾ ಸುಧಾರಸ್ತೀನಿ ಬರ್ರೋ. ಹೊಂಟ್ರ್ಯಾ ಹೊಂಟಾ ಬಿಟ್ರ್ಯಾ ಹೋಗ್ರೋ ಸನ್ಯಾಸಿಗಳಾ ಅಯ್ಯಾ ಪಿಸ್ಸಾ ನೀವಿಲ್ಲ ಇನ್ನೊಬ್ರು ನನಗೇನು (ಹೋಗುವನು).

===**====**===

ಇಪ್ಪತ್ತನೆಯ ಪ್ರವೇಶ

ದೃಶ್ಯ ಕಟ್‌ಜಂಗಲ್

(ಹಿನ್ನಲೆಯಲ್ಲಿ ಜನರು ಹುಚ್ಚಾ ಹುಚ್ಚಾ ಎಂದು ಕೂಗುತ್ತಿರುವರು. ಹರಿದ ಅಂಗಿ ಕೆದರಿದ ತಲೆ ಅಲ್ಲಿ ರಕ್ತದ ಕಲೆಗಳಿಂದ ಶಂಕರ ಪ್ರವೇಶಿಸುವನು)

ಶಂಕರ– ನಾನು ಹುಚ್ಚಾ ಅಲ್ಲ. ನೀನೇ ಹುಚ್ಚಾ ನಿಮ್ಮಪ್ಪ ಹುಚ್ಚ ನಿಮ್ಮ ತಾತ ಹುಚ್ಚ (ಹಾಳೆಯ ಪೊಟ್ಟಣದಲ್ಲಿ ಮಂಡಾಳು ತಿನ್ನುತ್ತ) ಹ ಹ ಹ ನಾನೇ ಗೆದ್ದೆ ನನ್ನನ್ನು ನೋಡಿ ಗುಬ್ಬಿ ಅಣಕಿಸುತ್ತಿತ್ತು. ಒಂದೇ ಒಂದು ಕಲ್ಲೇಟಿಗೆ ಕೊಂದು ಬಿಟ್ಟೆ ಅದಕ್ಕಾಗಿ ನಾನೇ ಗೆದ್ದೆ (ಅಳುತ್ತ) ಉಂ ಹುಂ ನಾನು ಗೆದ್ದಿಲ್ಲ ಸೋತೆ. ಆ ಜ್ಯೋತಿಯೇಗೆದ್ದಳು. ಅವಳೇ ನನ್ನನ್ನು ಸಾಯಿಸಿ ಬಿಟ್ಟಳು ಸಾಯಿಸಿ ಬಿಟ್ಟಳು. (ನಗುತ್ತ) ಇಲ್ಲ ಇಲ್ಲ ನನ್ನ ಲಕ್ಷ್ಮಿ ನನ್ನನ್ನು ಬದುಕಿಸಿ ಬಿಟ್ಟಳು. ಹೇ ಜ್ಯೋತಿ ನನ್ನ ಲಕ್ಷ್ಮಿ ನನ್ನನ್ನು ಬದುಕಿಸಿ ಬಿಟ್ಟಳು. ಹೇ ಜ್ಯೋತಿ ನೀನೇನಾದರೂ ನನ್ನ ಕೈಯಲ್ಲಿ ಸಿಕ್ಕರೆ ನಿನ್ನ ಕೈಕಾಲುಗಳನ್ನು ಕೋಳಿಯಂತೆ ಜಿಗಿದು ಬಿಡುತ್ತೇನೆ (ನಗುತ್ತ ಹೋಗುವನು).

ಅದೇ ಕಟ್ ಜಂಗಲ್ ದೃಶ್ಯ

(ಲಕ್ಷ್ಮಿ ಸುಂದರ ಶ್ರೀಮಂತಿಕೆಯ ಉಡುಪಿನಲ್ಲಿ ಬಿರುವರು)

ಸುಂದರ– ಅತ್ತಿಗಮ್ಮಾ ನೀವಿನ್ನು ಮನೆಗೆ ಹೋಗಿ. ನಾನು ಸ್ವಲ್ಪ ಹೊರಗೆ ಹೋಗಿ ಬರುತ್ತೇನೆ. ಬಜಾರದಲ್ಲಿ ಸ್ವಲ್ಪು ಕೆಲಸವಿದೆ (ಬಟ್ಟೆ ಕೊಡುತ್ತ) ಈ ಪ್ಯಾಂಟು ಶರ್ಟು ರವಿಗೆ ತೊಡಿಸಿ ಬಿಡಿ.

ಲಕ್ಷ್ಮಿ– ಆಗಲಿ, ಸುಂದರ ನೋಡಿದೆಯಾ ಕಾಲ ಚಕ್ರದಾಟವನ್ನು ನಿಸ್ವಾರ್ಥದಿಂದ ಮಾಡಿದ ಸಹಾಯ ಕಟ್ಟಿಟ್ಟ ಬುತ್ತಿಯಂತೆ ಎಂದು ಹಿರಿಯರು ಹೇಳಿದ ಮಾತು ಎಷ್ಟೊಂದು ಸತ್ಯವಾಯ್ತು ನೋಡು. ಬೇಡ ಬೇಡವೆಂದರೂ ಒತ್ತಾಯದಿಂದ ಟಿಕೆಟ್ ಕೊಟ್ಟು ಹೋದ ಆ ಹುಡುಗ

ಸುಂದರ– ಭಿಕ್ಷುಕದಾಸಯ್ಯ ನಾಡಿದ ಮಾತು ಸತ್ಯವಾಯ್ತುಮ್ಮಾ ಅಂದು ಆತ ನಾಡಿದು ಮಾತು ಇನ್ನೂ ನನ್ನ ಕಿವಿಯಲ್ಲಿ ಮಾರ್ದನಿಸುತ್ತಿದೆ. ಬಡತನದ ಸತ್ವ ಪರೀಕ್ಷೆಯಲ್ಲಿ ಗೆದ್ದು ಬರುವವನಗೆ ಗುರುವು ಮನಸ್ಸು ಮಾಡಿದರೆ ಬೆಳಗಾಗುವುದರೊಳಗೆ ಲಕ್ಷಾಧೀಶನನ್ನಾಗಿ ಮಾಡುತ್ತಾನೆಂದು ಹೇಳಿದುದಕ್ಕಾಗಿ ನಾನು ನಗೆ ಯಾಡಿದ್ದೆ ಆದರೆ ಅದೇ ಒಂದು ಲಾಟರಿ ಟಿಕೆಟ್‌ನಿಂದ ಇಂದು ಲಕ್ಷಾಧೀಶರಾದೆವು.

ಲಕ್ಷ್ಮಿ– ಎಲ್ಲರನ್ನೂ ಮಕ್ಕಳಂತೆ ಪೊರೆಯುವ ನಮ್ಮಮ್ಮ ಸಜ್ಜಲ ಗುಡ್ಡದ ಮಹಾತಾಯಿ ನಮ್ಮೊಂದಿಗಿದ್ದಾಳೆ ಹಾಂ. ಸುಂದ್ರು, ನನ್ನದೊಂದು ಮಾತಿದೆ ನಡೆಸಿ ಕೊಡುವೆಯೇನಪ್ಪಾ.

ಸುಂದರ– ನಿನ್ನ ಮಾತನ್ನು ನಾನು ಯಾವತ್ತು ಮೀರಿದ್ದೀನಮ್ಮಾ ನಿನ್ನ ಮನದೊಳಗಿನ ದುಗುಡ ಅದೇ ತಾನೆ? ಅಣ್ಣ ನನ್ನ ಕರೆ ತರುವುದು. ಆಗಲಮ್ಮಾ ಹೇಗಾದರೂ ಮಾಡಿ ಅಂಗಲಾಚಿ ಬೇಡಿ ಜ್ಯೋತಿಯ ಮನೆಯಿಂದ ಅಣ್ಣ ನನ್ನು ಕರೆತರುತ್ತೇನೆ.

ಲಕ್ಷ್ಮಿ– ನಾನು ಹೇಳಬೇಕೆಂದಿರುವ ವಿಷಯ ಅದಲ್ಲಪ್ಪಾ ಮತ್ತೇಕೆ ನಿಮ್ಮಣ್ಣನನ್ನು ಕರೆತರಲು ಹೋಗುವೆ. ಇದ್ದ ಆಸ್ತೆಯನ್ನೆಲ್ಲಾ ಕುಣಿತಚವಳಿಗೆ ಬಡಿದು, ನಮ್ಮನ್ನೆಲ್ಲಾ ಅನಾಥರನ್ನಾಗಿ ಮಾಡಿ. ಹೊರನೂಕಿದ್ದು ಸಾಲದೇನು? ಅಂಥವನನ್ನು ಮತ್ತೇಕೆ ಸ್ಮರಿಸುವೆ. ಹಾಗೇನಾದರೂ ವಿಷಯ ತಿಳಿದರೆ ಕೂಡಲೇ ಧಾವಿಸಿಬಂದು. ಈ ಆಸ್ತಿಯನ್ನು ಅವಳಿಗೆ ಬಡಿಯುವುದರಲ್ಲಿ ಸಂಶಯವಿಲ್ಲ. ಹಿರಿಯರು ಹೇಳಿದುದು ಕಾಮಾತುರಾಣಾಂ ನಭಯಂ ನಲಜ್ಜಂ ಅಂದಿರುವುದು ಇಂಥವರಿಗೇ.

ಸುಂದರ– ಆದದ್ದೆಲ್ಲವನ್ನೂ ಮರೆಯಬೇಕು ಅತ್ತಿಗೆ, ಮರೆತು, ಅರಿತು. ಬೆರೆತು ಬಾಳುವುದನ್ನು ಕಲಿಯಬೇಕು.

ಲಕ್ಷ್ಮಿ– ಪತಿಯ ವ್ಯಾಮೋಹ ನನ್ನಲ್ಲಿ ಎಳ್ಳಷ್ಟೂ ಇಲ್ಲ. ನನ್ನ ಹಿರಿಯಾಸೆಯೇನೆಂದರೆ ನನಗಾಗಿ ಜೀವದ ಹಂಗು ತೊರೆದು ನನ್ನ ಮಾನ ಪ್ರಾಣ ರಕ್ಷಿಸಿ. ನೀನು ಕಾಲು ಕಳೆದುಕೊಂಡೆಯಲ್ಲಾ ಅದಕ್ಕೆ ಜೈಪುರದ ಕೃತಕ ಕಾಲನ್ನು ಜೋಡಿಸಬೇಕು. ನಂತರ ನಿನ್ನ ಮದುವೆಯಾಗಬೇಕು.

ಲಕ್ಷ್ಮಿ– ಹುಚ್ಚಾ ಅಂಗ ಹೀನನಾದ ಮಾತ್ರಕ್ಕೆ ಬದುಕೇ ನೀರಸವೆಂದು ತಿಳಿಯಬಾರದು. ನಮ್ಮ ದೇಶದಲ್ಲಿ ಲಕ್ಷಗಟ್ಟಲೇ ಜನರು ಅಂಗ

ಹೀನರಿದ್ದಾರೆ. ಆದರೆ ಅವರಾರೂ ನಿನ್ನಂತೆ ನಿರಾಶಾವಾದಿಗಳಾಗಿ ಕೈಕಟ್ಟಿ ಕುಳಿತಿಲ್ಲ. ಬದಲಾಗಿ ತಮ್ಮ ಯೋಗ್ಯತೆಗೆ ತಕ್ಕಂತಹ ಉದ್ಯೋಗವನ್ನು ಮಾಡುತ್ತ ಆನಂದವಾಗಿದ್ದಾರೆ.

ಸುಂದರ– ಏನೇ ಬಂದರೂ ಎದುರಿಸಲು ನಾನು ಸಿದ್ಧನಿದ್ದೇನೆ ಅತ್ತಿಗೆ, ಆಗಲಿ. ನಿಮ್ಮ ಇಚ್ಛೆಯೇ ನನ್ನ ಇಚ್ಛೆ ನಿಮ್ಮ ಮಾತೇ ನನಗೆ ವೇದವಾಕ್ಯ.

ಲಕ್ಷ್ಮಿ– ಸರಿ ಹಾಗಾದರೆ ನಾನು ಮನೆಗೆ ಹೋಗುತ್ತೇನೆ ನೀನೆಲ್ಲಿಗೋ ಹೋಗಿ ಬರುವೆನೆಂದಿದ್ದೆಯಲ್ಲ.

ಸುಂದರ– ಮನೆಯ ವಿಷಯವಾಗಿ ಮಾತನಾಡುವುದಿದೆ ಒಂದು ಬಿಲ್ಡಿಂಗ್ ಯೋಗ್ಯ ಬೆಲೆಗೆ ಸಿಗುವುದಿದೆ. ಆದಷ್ಟೂ ಬೇಗ ಬಂದು ಬಿಡುವೆ (ಹೊರಡಲನುವಾದಾಗ ಹಿಂದಿನಿಂದ ಸಾವಕಾಶವಾಗಿ ನಾಲ್ಕಾರು ಮಂದಿ ಬಂದು ಲಕ್ಷ್ಮಿಯ ಎರಡೂ ಕೈ ಹಿಂದೆ ಕಟ್ಟಿ ಬಾಯಿ ಮುಚ್ಚಲು).

ಲಕ್ಷ್ಮಿ– (ಕೂಗಿ) ಸುಂ.. ದ್ರಾ.....

ಸುಂದರ– (ಹೊರಳಿನೋಡಿ)ಅತ್ತಿಗೆಮ್ಮಾ (ಎಂದು ಮೇಲೇರಿ ಹೋಗುವಷ್ಟರಲ್ಲಿ ಹಿಂದಿನಂದ ಸುಂದರನನ್ನು ಹಿಡಿಯುವರು) ಲೇ ಕೈ ಬಿಡ್ರೋ ಚಾಂಡಾಲರಾ (ಬಾಯಿ ಬಿಗಿ ಹಿಡಿದು ಇಬ್ಬರನ್ನೂ ಹೊತ್ತುಕೊಂಡು ಹೋಗುವರು).

===***===***===

ಇಪ್ಪತ್ತೊಂದನೆಯ ಪ್ರವೇಶ

ಜಮೀನ್ದಾರರ ಎಸ್ಟೇ ಬಂಗಲೆ

(ಒಂದು ಕಂಬಕ್ಕೆ ಸುಂದರನನ್ನು ಕಟ್ಟಿ ಹಾಕಿರುವರು ಜಮೀನ್ದಾರ ವಜ್ರಮುನಿ ಕುಡಿಯುತ್ತ ಕುಳಿತಿರುವನು)

ಸುಂದರ– ಲೇ ಅಧಮಾ ವಜ್ರಮುನಿ..

ವಜ್ರ– ಏನಂದೇ ನನ್ನನ್ನು ಏಕ ವಚನದಲ್ಲಿ ಮಾತನಾಡಿಸುವೆಯೇನೋ, ಇಷಾದರೂ ಇನ್ನೂ ಮುರಿದಿಲ್ಲವಲ್ಲಾ ನಿನ್ನ ಸೊಕ್ಕು.. ಕಾಲು ಕಡಿಸಿಕೊಂಡೆ, ಕೈಕಡಿಸಿಕೊಂಡೆ ಆದರೂ ಕೂಡ ಬುಸುಗುಡುತ್ತಿರುವೆಯಲ್ಲಾ.

ಸುಂದರ– ಈ ಸುಂದರನೀಗ ಹೆಡೆ ತುಳಿದ ನಾಗರ ಹಾವು, ಕಟ್ಟಿದ ಕೈಗಳನ್ನು ಬಿಚ್ಚು ಆಗ ತಿಳಿಯುತ್ತದೆ.

ವಜ್ರ– ಸ್ವಲ್ಪು ತಡೆ ನಿನಗೆ ತಾನಾಗೇ ತಿಳಿಯುತ್ತದೆ ನಿನ್ನ ಪೌರುಷದ ಪ್ರತಾಪ

ಜ್ಯೋತಿ– (ಆಗಮಿಸುತ್ತ) ಹೌದು ಮತ್ತೇ ಅವನೊಬ್ಬೇ ಗಂಡಸು ಈ ಪ್ರಪಂಚದಲ್ಲಿ

ಸುಂದರ– (ಜ್ಯೋತಿಯನ್ನು ನೋಡಿ ಆಶ್ಚರ್ಯದಿಂದ) ಯಾರು ಜ್ಯೋತಿ ನೀನು ಈ ಮನೆಯಲ್ಲಿ.

ವಜ್ರ– (ಮುಂದೆ ಬಂದು ಸಿಗರೇಟ್ ಹಚ್ಚಿ) ಯಾಕೆ ಗಾಬರಿ ಆಯ್ತೇನು, ಈಗ ಅವಳು ಈ ಎಲ್ಲಾ ಎಸ್ಟೇಟಿಗೆ ರಾಣಿ. ನನ್ನ ಮನದನ್ನೆ ಆಯ್ ಮೀಸ್ ನನ್ನ ಲವರ್.

ಸುಂದರ– ಹಾಗಾದರೆ ಹಾಗಾದರೆ ನನ್ನಣ್ಣ ಶಂಕರ್.

ಜ್ಯೋತಿ– (ನಗುತ್ತ) ಏನಂದೇ ಶಂಕರನನ್ನು ಕೇಳಿದೆಯೇನು? ಅವನ ಕತೆಯೀಗ ಇತಿಹಾಸವಾಗಿದೆ, ಅಂದರೆ ಭೂತಕಾಲದ ಗರ್ಭದಲ್ಲಿ ಸೇರಿ ಹೋಗಿದೆ.

ಸುಂದರ– (ಆಶ್ಚರ್ಯದಿಂದ) ಹಾಂ ಅವನು ಜೀವದಿಂದ.

ವಜ್ರ– ಉಳಿದಿನ್ನಾನೆ ಕತ್ತೆಯಂತೆ ಬದುಕಿದ್ದಾನೆ, ತಿಪ್ಪೆಯಲ್ಲಿ ನನ್ನ ರಗಿಣಿ ಜ್ಯೋತಿ

ಅವನನ್ನು ಒದ್ದು ಹೊರಹಾಕಿ ತಿಂಗಳು ಮೇಲಾಯಿತು. ದಿಕ್ಕೇಡಿಯಾಗಿ ಪರದೇಶಿಯಂತೆ ಅಲೆಯುತ್ತಿದೆ. ಹಾಂ ಡಾರ್ಲಿಂಗ್ ನೀನಿಲ್ಲೇ ಇರು ನಾನು ಅರ್ಜಂಟಾಗಿ ಬಾಂಬೆಗೆ ಫೋನ್ ಮಾಡಿಬರುವೆ (ಒಳಗೆ ಹೋಗುವನು).

ಸುಂದರ– ಅಂದರೆ ನೀನು ನನ್ನಣ್ಣ ಶಂಕರನ ಹಣವನ್ನೆಲ್ಲಾ ಕಿತ್ತುಕೊಂಡು ಹೊರಹಾಕಿದೆಯನ್ನು?

ಜ್ಯೋತಿ– ನಾನಿಷ್ಟೊತ್ತು ಮಾತನಾಡಿದ್ದು ಕನ್ನಡದಲ್ಲಿಯೇ ನಿನ್ನಣ್ಣನಿಗಿಂತ ಒಂದು ನಾಯಿಯನ್ನಾದರೂ ಸಾಕಿದ್ದರೆ ನಂಬುಗೆಯಿಂದ ನನ್ನ ಮನೆಯನ್ನಾದರೂ ಕಾಯುತ್ತಿತ್ತು. ಅಪನಂಬಿಗೆಗೆ ಕಾರಣನಾದ ಪ್ರಯುಕ್ತ ಒದ್ದು ಹೊರಹಾಕಿದ್ದೇನೆ ಈಗವನು ಹುಚ್ಚನಾಗಿದ್ದಾನೆ.

ಸುಂದರ– ನನ್ನಣ್ಣ ಹುಚ್ಚಾ ಅಯ್ಯೋ ದೇವರೇ, ಇದೇನು ನಿನ್ನ ಪರೀಕ್ಷೆ? ಹೆಯ್ ಜ್ಯೋತೀ ಎಷ್ಟಾದರೂ ಕೂಡಾ ನೀನು ಒಬ್ಬ ಸೂಳೆ. ಅವನ ಆಸ್ತಿಯೆಲ್ಲವನ್ನು ತಿಂದು ಹೊರನೂಕಿರುವೆಯಲ್ಲಾ ಹುಂ ಸೂಳೆ ಸುಂಕದ ನಾಯಿಯೆಂದು ಹೇಳಿದ ಸರ್ವಜ್ಞಮಹಾಕವಿಯ ಮಾತುನಿಜ ಮಾಡಿದೆ.

ಜ್ಯೋತಿ– ಬಾಯಿ ಮುಚ್ಚು ಬಕಪಕ್ಷಿಬಲ್ಲ ಹಾಗೆ ಬೊಗಳದಿರು.

ಸುಂದರ– ಹೆಯ್ ಸುಮ್ಮನಿರೆ ನನ್ನ ಕೈಗಳನ್ನು ಕಟ್ಟಿಹಾಕದಿದ್ದರೆ ನಿನ್ನನ್ನು ಕಿತ್ತಿಚುಕಿ ಕೊಂದುಬಿಡುತ್ತಿದ್ದೆ. ಜಗತ್ತಿನಲ್ಲಿ ಹಣಕ್ಕಾಗಿ ಮೈಮಾರಿಕೊಳ್ಳುವವರೂ ಇದ್ದಾರೆ ಗುಣಕ್ಕಾಗಿ ಮೈ ಒಪ್ಪಿಸುವವರೂ ಇದ್ದಾರೆ ಆದರೆ ಆದರೆ ನೀನು ಇವರೆಡಕ್ಕಿಂತಳೂ ಭಿನ್ನ.

ಜ್ಯೋತಿ– ಹೌದು ನಿಜವಾಗಿ ನುಡಿದೆ. ನಾನು ಇವೆರಡಕ್ಕಿಂತಲೂ ಭಿನ್ನ ನಿನ್ನಣ್ಣ ಶಂಕರನಿಗೆ ನನ್ನ ದೇಹವನ್ನು ಹಣಕ್ಕಾಗಿ ಒಪ್ಪಿಸಲಿಲ್ಲ. ಹಾಗೇ ಅವನ ಗುಣಕಂಡು ಮೆಚ್ಚಿ ಒಲಿಯಲಿಲ್ಲ. ನಾನವನ ಸಂಗ ಮಾಡಿದ್ದು, ತುಚ್ಛೀ ಕರಿಸಲೋಸುಗ.

ಸುಂದರ– ಏನಂದೇ ಅವನನ್ನು ತುಚ್ಛೀಕರಿಸಲೋಸುಗ ಅವನ ಸಂಗ ಮಾಡಿದೆಯಾ? ಕಾರಣ.

ಜ್ಯೋತಿ– ಕಾರಣ ಹುಂ ನನ್ನ ಮನದಲ್ಲಿಯೇ ಪ್ರಜ್ವಲಿಸುತ್ತಿದ್ದ ಪ್ರತೀಕಾರದ ದಳ್ಳುರಿಯಲ್ಲಿ ಅವನನ್ನು ದಹಿಸುವುದಕ್ಕೆ.

ಸುಂದರ– ಪ್ರತೀಕಾರ..? ನನ್ನಣ್ಣ ಏನು ಪಾಪ ಮಾಡಿದ್ದಾನೆಂದು ಅವನ ಮೇಲೆ ಈ ಪ್ರತೀಕಾರ ಬಯಸುತ್ತಿರುವೆ?

ಜ್ಯೋತಿ– ನಿನ್ನಣ್ಣ ನನಗೆ ಮಾಡಿದ ಅನ್ಯಾಯಕ್ಕೆ ಅವನ ಹೆಣ ಉರುಳಿಸಲು ನಿಶ್ಚಯಿಸಿದ್ದೆ. ಆದರೇ ಆದರೇ ಯಾವ ಪಾಪವನ್ನೂ ಮಾಡದ ಅಮಾಯಕ ನಿನ್ನ ಅತ್ತಿಗೆಯ ಮುಖ ಕಂಡು ಮಾನವೀಯತೆಯ ಅನುಕಂಪದಿಂದ ಜೀವದಿಂದ ಉಳಿಸಿದ್ದೇನೆ.

ಸುಂದರ– (ನಗುತ್ತ) ಸೂಳೆಯಾದ ನಿನಗೆ ಮಾನವೀಯತೆಯ ಅನುಕಂಪ.

ಜ್ಯೋತಿ– ಸತಿಯಾಗಬೇಕಿದ್ದ ನನ್ನನ್ನು ಸೂಳೆಯನ್ನಾಗಿಸಿದವನಾರು?

ಸುಂದರ– ಜ್ಯೋತಿ ಏನು ಹೇಳುತ್ತಿರುವೆ ನೀನು?

ಜ್ಯೋತಿ– ಸುಂದರ ನನ್ನ ಆತ್ಮಸಾಕ್ಷಿಯಾಗಿ ನಿಜವನ್ನೇ ಹೇಳುತ್ತಿರುವೆ. ಹುಟ್ಟು ವೇಶ್ಯ ನಾನಲ್ಲ, ನಾನಿಂದು ಈ ಪರಿಸ್ಥಿತಿಯಲ್ಲಿರಲು ನಿಮ್ಮಣ್ಣನೇ ಕಾರಣವೆಂದು ನೀನರಿಯಲಾರೆ, ಅಂದು ಶಂಕರ ನನ್ನಕ್ಕನನ್ನು ಅವಮಾನಗೊಳಿಸಿದ ಪ್ರಯುಕ್ತ ನನ್ನಕ್ಕ.. ನನ್ನಕ್ಕ ಆತ್ಮಹತ್ಯೆ ಮಾಡಿಕೊಂಡಳು.

ಸುಂದರ– ಹಾಂ ಇಷ್ಟಕ್ಕೆಲ್ಲಾ ನನ್ನಣ್ಣನೇ ಕಾರಣವೇ? ಅಯ್ಯೋ ವಿಧಿಯೆ.

ಜ್ಯೋತಿ– ದುರ್ವಿಧಿಯ ಅಪರವತಾರವೇ ಅವನಾಗಿ ಕಾಡಿದ, ನನ್ನಕ್ಕನನ್ನು ನಂಬಿಸಿ ನಡುನೀರಿನಲ್ಲಿ ಕೈಬಿಟ್ಟ, ಕಲಾರಾಧಕಳಾದ ನಾನು ಅಕ್ಕನನ್ನು ಕಳೆದುಕೊಂಡು ಪರದೇಶಿಯಂತಾದೆ, ಬಡತನದ ಭೀಕರ ಬೇನೆಗೆ ವಯಸ್ಸಾದ ತಂದೆ ತಾಯಿಯನ್ನು ರಕ್ಷಿಸುವ ಹಿರಿಭಾರದ ಹೊರೆ ಹೊತ್ತುಕೊಂಡೆ, ನನ್ನ ಅವಸ್ಥೆಯನ್ನು ಕಂಡೂ ಯಾರೂ ಕನಿಕರಪಡಲಿಲ್ಲ. ಬದಲಾಗಿ ಕಣ್ಸನ್ನೆ ಮಾಡಿ ಕರೆದರು. ಹರಿದ ಬಟ್ಟೆಗಳಲ್ಲಿ ನನ್ನ ಅಂಗಾಂಗಳನ್ನು ಕಂಡು ಆನಂದಿಸಿದ ಕಾಮುಕರ ಕ್ರೂರ ದೃಷ್ಟಿಗೆ ಬಲಿಪಶುನಾನಾದೆ.

ಸುಂದರ– ಜ್ಯೋತಿ.. ಜ್ಯೋತಿ ನಿನ್ನ ಮಾತು..

ಜ್ಯೋತಿ– ಅಸತ್ಯವಲ್ಲ, ಆ ರೀತಿ ಸುಳ್ಳು ಹೇಳಿ ನಿನ್ನನ್ನು ನಂಬಿಸಿ ನಾನು ಪಡೆಯಬೇಕಾದ ಸೌಭಾಗ್ಯವಾದರೂ ಏನಿದೆ. ಹುಂ ನೀತಿಯಮಾರ್ಗದಲ್ಲಿ ನಡೆಯುವ ನಿಜ ನರ್ತಕಿ ನಾನಾಗಬೇಕೆಂದಿದ್ದೆ ಆದರೆ.. ಆದರೆ ಹಾಗಲಿಲ್ಲ. ಕೀಳುದರ್ಜೆಯ ಸೂಳೆ ನಾನಾದೆ. ಗೋಮುಖ ವ್ಯಾಘ್ರ ಶ್ರೀಮಂತರ ವಕ್ರ ದೃಷ್ಟಿಗೆ ಸುಟ್ಟುಕೊಂಡೆ ನನ್ನ ಆಶಿ ಆಕಾಂಕ್ಷೆಗಳನ್ನು, ಶೀಲ ಸಂಪತ್ತನ್ನು

ನನ್ನ ಚಾರಿತ್ರವನು ಒಬ್ಬ ನರ್ತಕಿ, ಒಬ್ಬ ಕಲಾವಿದೆ. ಈ ನೆಲ-ಜಲದ ನಾಡು ನುಡಿಯ ಸಂಸ್ಕೃತಿಯ ಪ್ರತಿರೂಪವೆಂದು ಯಾರೂ ಬಗೆಯುವದಿಲ್ಲ ಅವಳು ಯಾರಿಗಾಗಿ ಬಾಳುತ್ತಾಳೆ? ಯಾತಕ್ಕಾಗಿ ಬಾಳುತ್ತಾಳೆ. ಅವಳ ಹಿನ್ನೆಲೆಯೇನು ನೆಲೆ ಕಲೆಗಳೇನು ಎಂದು ಯಾರೂ ಚಿಂತಿಸುವುದಿಲ್ಲ. ಮನೆಯಲ್ಲಿ ಬೇನೆ ಬಿದ್ದ ಹೆತ್ತವರೋ ಬೆಳೆದುನಿಂತ ತಂಗಿಯೋ ಓದುವ ಸೋದರರ ಭವಿತವ್ಯ ರೂಪಿಸುವ ರೂವಾರಿ ಅವಳೆಂದು ಅರಿಯುವ ವ್ಯವಧಾನ ಕಾಮಣಿಯಾದವರ ಕಣ್ಣಿಗೆ ಕಾಣಿಸಲು ಸಾಧ್ಯವೇ? ಬಣ್ಣ ಹಚ್ಚಿಕೊಂಡು ಕಲಾರಾಧನೆಗೈವ ಕಲಾವಿದೆಯರ ಮುಖಕ್ಕೆ ಪ್ರತಿ ಬಣ್ಣ ಹಚ್ಚಿ ಮಾತನಾಡುವ ಈ ಭಂಡ ಜನಕ್ಕೆ ತಮ್ಮ ಅಕ್ಕತಂಗಿಯರೂ ಹೆತ್ತಮಾತೆಯೂ ಹೆಣ್ಣೆ ಎಂಬುದು ನೆನಪಿರುವುದಿಲ್ಲ.

ಸುಂದರ– ಇಂಥ ಒಡವಾಗ್ನಿಯ ಧಗೆ ಸಹಿಸುತ್ತ ಮೇಲ್ನೋಟಕ್ಕೆ ನಗುತ್ತ ಇದ್ದ. ನಿನ್ನ ಆತ್ಮಸ್ಥೈರ್ಯ ಮೆಚ್ಚಲೇಬೇಕು ಜ್ಯೋತಿ. ನೀನು ನಿಜಮಾನವತಿ.

ಸುಂದರ– ಅಯ್ಯೋ ಇಷ್ಟಕ್ಕೆಲ್ಲಾ ನನ್ನಣ್ಣನೇ ಕಾರಣನಾದನೆ. ವಾಸ್ತವವನ್ನರಿಯದೇ ನಿನ್ನ ಜರಿದ ನನ್ನನ್ನು ಕ್ಷಮಿಸು ಜ್ಯೋತೀ.

ಜ್ಯೋತಿ– ಈಗ ಯಾರನ್ನು ಕ್ಷಮಿಸಿ ಏನಾಗಬೇಕಿದೆ ಸುಂದರ್. ನಾನಳಿಯುವ ಮುನ್ನ ನನ್ನ ಶಪಿಸುವ ನಿಮಗೆ ನಿಜಸ್ಥಿತಿ ತಿಳಿಯಲೆಂದು ನನ್ನ ಮನದೊಳಗಿದ್ದ ದುಗುಡವನ್ನು ತಳಮಳವನ್ನು ನಿನ್ನೆದುರು ತೋಡಿಕೊಂಡೆ ಸುಂದರ್. ಇಷ್ಟಾದರೂ ಕೂಡ ನನ್ನ ದು:ಖವನ್ನು ಕೇಳಲು ಯಾರಿದ್ದಾರೆ ಈ ಪ್ರಪಂಚದಲ್ಲಿ? ಯಾರೂ ಇಲ್ಲ. ದೇಹ ಕೇಳುವವರನ್ನು ಕಂಡೆನೇ ವಿನಹ, ದು:ಖ ಕೇಳಿ ಸಾಂತ್ವನ ಮಾಡುವ ಮನುಷ್ಯರನ್ನು ಕಾಣಲೇ ಇಲ್ಲ ಕಾಣಲೇ ಇಲ್ಲ.

ಸುಂದರ– ಜ್ಯೋತಿ ದು:ಖಿಸದಿರಮ್ಮಾ ನಿನ್ನಣ್ಣ ನಾನೀದ್ದೇನೆ ಒಡಹುಟ್ಟದಿದ್ದರೂ ಕೂಡ ಒಡಲುರಿಯನ್ನು ಶಾಂತಗೈಯುವೆ.

ಜ್ಯೋತಿ– ಸುಂದರ್.. ಸಾಕಣ್ಣಾ ಈ ಜನ್ಮಕ್ಕೆ ನನಗಿಷ್ಟೇ ಸಾಕು. ನಿನ್ನ ಅತ್ತಿಗೆಗೆ ನಾನು ಮಾಡಬಾರದ ಅನ್ಯಾಯಮಾಡಿದೆ. ಆಕೆಗೆ ಬಹಳ ಅನ್ಯಾಯವಾಯ್ತು (ವಜ್ರಮುನಿ ಚರಣ್ ಪ್ರವೇಶಿಸುತ್ತ).

ವಜ್ರ– (ಬಂದು)ಇನ್ನೂ ಲಕ್ಷ್ಮಿಗೆ ಅನ್ಯಾಯವಾಗಿಲ್ಲ ಜ್ಯೋತಿ. ಈಗ ನನ್ನ ಸಂತೋಷಕ್ಕಾಗಿ ಅವಳ ಶೀಲಕ್ಕೆ ಅನ್ಯಾಯವಾಗಬೇಕಿದೆ. ನನ್ನ ಜೀವನದ

ಮಹತ್ವಾಕಾಂಕ್ಷೆಯೇನೆಂದರೆ ಲಕ್ಷ್ಮಿಯ ದೇಹದ ಸುಖವುಂಡು ಸಂತೃಪ್ತಿ ಪಡುವುದು. ಇಂಥಹ ರಸವತ್ತಾದ ಸಮಯದಲ್ಲಿ ಏಕೆ ಬಿಚ್ಚಿದೆ ಭೂತ ಕಾಲದ ಚಾಪೆಯ ಸುಳಿಯನ್ನು. ವರ್ತಮಾನದ ಪಲ್ಲಂಗದ ಮೇಲೆ ಕಾಮದಾಟವಾಡಬೇಕಿದೆ ಅದನ್ನು ಈ ಸುಂದರ ಕಣ್ತುಂಬಾ ನೋಡಬೇಕಿದೆ.

ಸುಂದರ– (ಸಿಟ್ಟಿನಿಂದ) ಲೇ ವಜ್ರಮುನಿ.

ವಜ್ರ– ಸುಮ್ಮನೇ ಕೂಗಿಕೊಂಡು ಕಂಠ ಶೋಷಣೆಯನ್ನೇಕೆ ಮಾಡಿಕೊಳ್ಳುವೆ. ನಾನು ಸಂತೋಷದಿಂದಿದ್ದರೆ ವರ ಕೊಡಬಲ್ಲೆ. ಇಲ್ಲಾ ಶಾಪವನ್ನೂ ಕೊಡಬಲ್ಲೆ ಹೊಳೆದರೆ ವಜ್ರ, ಮುನದರೆ ಮುನಿ, ಹೇ ಚರಣ್ ಎಳೆದುಕೊಂಡು ಬಾ ಆ ಲಕ್ಷ್ಮಿಯನ್ನು.

ಚರಣ್– ಎಸ್.ಭಾಸ್ (ಒಳಗೆ ಹೋಗಿ ಲಕ್ಷ್ಮಿಯನ್ನು ಎಳೆ ತಂದು) ಭಾಸ್ ಇದೋ ನಿಮ್ಮ ಅರಗಿಣಿ.

ಲಕ್ಷ್ಮಿ– ಸುಂದರಾ.

ವಜ್ರ– ಹೂಂ, ಹೌದೇ ನಿನ್ನ ಮೈದುನ ಸುಂದರನೇ ಅವನು ಅಲ್ಲೇ ಲಕ್ಷ್ಮೀ ಇಷ್ಟೊಂದು ಕಷ್ಟ ಕೋಟಲೆಗಳನ್ನು ಎದುರಿಸಿದರೂ ಕೂಡ ಮುಖದಲ್ಲಿ ಕಿಂಚಿತ್ತೂ ಮುಪ್ಪಿನ ಛಾಯೆ ಆವರಿಸಿಲ್ಲ ನೋಡು, ಅದಕ್ಕಾಗೇ ಹೇಳಿರಬೇಕು ಹಿರಿಯರು ಹಣ್ಣು ಮಾಗಿದಷ್ಟು ರುಚಿ, ಹೆಣ್ಣು ಕಾಡಿದಷ್ಟೂ ರುಚಿ ಅಂತ, ನೋಡು ಇಲ್ಲಿಯ ತನಕ ಅದೆಷ್ಟೋ ಅಮೂಲ್ಯವಾದ ಸಮಯವನ್ನು ಅರಿವಿಲ್ಲದೇ ಕಳೆದು ಬಿಟ್ಟಿದ್ದೇವೆ, ಇಂದಾದರೂ ಆನಂದದಿಂದ ನನಗೆ ಸುಖ ನೀಡಿಬಿಡು. ನನ್ನ ವಿಷಯವಂತೂ ನಿನಗೆ ಗೊತ್ತು. ಹಿಡಿದ ಹಠ ಬಿಡದ ಛಲದಂತ ಮಲ್ಲ ನಾನು. ನನ್ನನು ಎದಿರು ಹಾಕಿಕೊಂಡು ಬಾಳುವುದಂತೂ ಕಠಿಣ ಸಾಧ್ಯವಾದ ಕೆಲಸ. ಚುನಾವಣೆಯಲ್ಲಿ ನನ್ನ ವಿರುದ್ಧ ಪ್ರಚಾರ ಮಾಡಿದ ನಿನ್ನ ಗಂಡ ಇಂದು ಹುಚ್ಚನಾಗಿ ಅಲೆಯುತ್ತಿದ್ದಾನೆ.

ಲಕ್ಷ್ಮಿ– ಹಾಂ ನನ್ನ ಪತಿ ಹುಚ್ಚಾ..

ವಜ್ರ– ಅದೇ ರೀತಿ ನನ್ನಾಸೆಗೆ ಅಡ್ಡ ಹಾಕಿದ ನಿನ್ನ ಮೈದುನ ಕಾಲನ್ನೇ ಕಡಿಸಿಕೊಂಡ ಈ ಹಿಂದೆ ನಿನ್ನ ತಂದೆಯೂ ನನ್ನಿಂದಲೇ ಇಹಲೋಕ

ಯಾತ್ರೆ ಮುಗಿಸಿದ. ಈಗ ನಿನ್ನ ಮೈದುನ ಜೀವದಿಂದ ಉಳಿಯಬೇಕಾದರೆ ನನಗೆ ಮೈಒಪ್ಪಿಸಿ ನನ್ನ ಮನ ತಣಿಸಲೇಬೇಕು.

ಲಕ್ಷ್ಮಿ– ಥೂತ್ ಪಾಪೀ..

ವಜ್ರ– (ನಗುತ್ತ) ಹೌದು ನಾನು ಪಾಪೀನೇ ಪುಣ್ಯವಂತನೆಂದು ನಾನೆಲ್ಲಿ ಹೇಳಿದೆ ಜ್ಯೋತಿ ಒಂದು ಪೆಗ್ ವಿಸ್ಕಿ ತಂದುಕೊಡು (ಜ್ಯೋತಿ ದೊಡ್ಡ ಬಾಟಲ್‌ನ್ನೇ ತಂದುಕೊಡುವಳು) ಹಾಂ ಇದೇನೇ ಇಷ್ಟೊಂದು ತಂದೆ.

ಜ್ಯೋತಿ– ಇಂದು ನಿಮಗೆ ಬಹಳ ಸಂತೋಷವಾದ ದಿನವಲ್ಲವೇನು? ಅದಕ್ಕಾಗಿ ಸಂಪೂರ್ಣ ಪುನಃತೃಪ್ತಿಯಾಗುವವರೆಗೂ ಕುಡಿಯಿರೆಂದು ತಂದೆ, ಮತ್ತೆ ಇನ್ನು ಮುಂದೆಂದೂ ಇಂಥಹ ಪವಿತ್ರ ದಿನ ಬರಲಾರದು.

ವಜ್ರ– ಹಾಂ ವೇರಿಗುಡ್ ಹಾಗೆಯೇ ಆಗಲಿ ನನ್ನ ಚಿನ್ನಾ (ಕೆನ್ನೆ ಚೂಟುವನು).

ಲಕ್ಷ್ಮಿ– ಹೆಣ್ಣು ಮನು ಕುಲದೊಂದು ಪುಣ್ಯದಾ ಬನದಲ್ಲಿ ಕಕ್ಕುಲತೆಯನ್ನು ಅರಳಿಸಿದ ಮಧುರ ಹೂವು! ಎಂದು ಹಾಡಿದಂಥಾ ಕವಿ ವರ್ಯರ ನಾಡಿನಲ್ಲೇ ಹುಟ್ಟಿ ಹೆಣ್ಣು ಕುಲಕ್ಕೇ ಹುಣ್ಣಾದೆಯಲ್ಲ ತಾಯೀ ಇಷ್ಟಾದರೂ ನಿನ್ನ ಮನಕ್ಕಿನ್ನೂ ನೆಮ್ಮದಿ ದೊರೆಯಲಿಲ್ಲವೇನಮ್ಮಾ. ಯಾಕೋ ನನ್ನ ಗಂಡನ ಮುಖವನ್ನು ನೋಡಬೇಕೆನಿಸಿದೆ. ಈಗಾದರೂ ನನಗೆ ಪತಿ ಭಿಕ್ಷೆಯನ್ನು ನೀಡು ತಾಯೀ.

ವಜ್ರ– ಹೇ ಲಕ್ಷ್ಮಿ ನೀನು ಜಾಡು ಬಿಟ್ಟು ನಡೆದಿರುವೆ ಅವಳೀಗ ನಿನ್ನ ಗಂಡನ ಪ್ರೇಯಸಿಯಲ್ಲ. ನನ್ನ ಆರಾಧಕಳು ನನಗೆ ಸೇರಿದವಳು ನನ್ನ ಸೂಳೆ ಅದೆಲ್ಲಾ ನೆನಪಿನ ಸುಖವನ್ನು ನಂತರ ಬಿಚ್ಚುವೆಯಂತೆ. ಈಗ ನನಗೆ ಸುಖ ನೀಡು, ಇಲ್ಲಾ ನಿನ್ನ ಸುಂದರನ ಪ್ರಾಣ ತೆಗೆವೆ ನೋಡು.

ಸುಂದರ– ಅತ್ತಿಗೆಯಮ್ಮಾ ನನ್ನ ಪ್ರಾಣ ಹೋದರೂ ಚಿಂತೆಯಿಲ್ಲ ದಯವಿಟ್ಟು ಅವನ ಆಶೆಗೆ ಒಪ್ಪದಿರಿ.

ವಜ್ರ– ಅಂ. ಹಾಂ ಹಾಗೇನು ಚರಣ್ ಅವನನ್ನು ಸ್ವಲ್ಪ ವಿಚಾರಿಸು.

ಚರಣ್– (ಕಪಾಳಕ್ಕೆ ಹೊಡೆದು) ಸುಂದರ್, ಬಾಯಿ ಬಿಗಿ ಹಿಡಿದಿರು ಇಲ್ಲಾ.

ವಜ್ರ– ಹಾಂ. ಹಾಗೇ (ವಿಕಟವಾಗಿ ನಗುತ್ತ).

ಲಕ್ಷ್ಮಿ– ಸುಂದ್ರು.. ಸುಂದ್ರೂ.. ಅಯ್ಯೋ ದೇವರೇ.

ವಜ್ರ– (ನಗುತ್ತ) ನಿನ್ನ ಪಾಲಿಗೀಗ ನಾನೇ ನಿಜ್ವಾದ ದೇವರು ಚರಣ್ ಇವಳು ಬರೀ ಬಾಯಿ ಮಾತಿಗೆ ಬಗ್ಗುವವಳಲ್ಲ. ಜೋಡಿಸಿ ಗುರಿಯಿಡು ಸುಂದರನ ಗುಂಡಿಗೆಗೆ.

ಚರಣ್– ಹೌದು ಭಾಸ್ ಅಂದರೇನೇ ಇವಳ ಸೊಕ್ಕು ಅಡಗುವುದು ಹೂಂ ನೋಡು.. (ಪಿಸ್ತೂಲ್ ಹಿಡಿಯುವನು).

ಜ್ಯೋತಿ– ಹಾಗಾದರೇ ನನಗಿನ್ನೇನು ಕೆಲಸಬಿಡಿ. ನಾನು ಒಳಗೆ ಹೋಗುವೆ.

ವಜ್ರ– ಅದೇಕೆ ಜ್ಯೋತಿ ನೀನು ಒಳಗೆ ಹೋಗಕೂಡದು. ನಿನಗೆ ಅನ್ಯಾಯವೆಸಗಿದ ಶಂಕರನ ವಂಶವೆಲ್ಲಾ ನಿರ್ನಾಮವಾಗುವುದನ್ನು ನೀನು ಕಣ್ಣಾರೆ ಕಂಡು ಸಂತೋಷಪಡಬೇಕು.

ಜ್ಯೋತಿ– ಕಣ್ಣಾರೆ ಕಂಡು ಸಂತೋಷ ಪಡುವುದಕ್ಕಿಂತ ಕೈಯಾರೆ ಕೊಂದು ಸಂತೋಷ ಪಡುವುದೇ ಮೇಲು. ಅಂದರೇನೇ ಹೃದಯದಲ್ಲಿ ದಹಿಸುತ್ತಿರುವ ಸೇಡಿನ ಜ್ವಾಲೆನಂದುವುದು.

ವಜ್ರ– ಹಾಂ ಹೌದು ಗುಡ್ ವೇರಿಗುಡ್.

ಜ್ಯೋತಿ– ನನ್ನ ಕೈಯಲ್ಲಿ ಪಿಸ್ತೂಲ್ ಕೊಡಿ, ನಾನೇ ಅವನನ್ನು ವಿಚಾರಿಸಿಕೊಳ್ಳುವೆ.

ವಜ್ರ– ಹಾಂ ಇದು ಜಾಣರ ಲಕ್ಷಣ. ಲೇ ಚರಣ್ ಕೇಳಿದೆಯಾ ನನ್ನರಗಿಣಿಯ ಮಾತನ್ನು, ಈ ಜಮೀನದಾರ ವಜ್ರಮುನಿಗೆ ತಕ್ಕ ಸೂಳೆಯೆಂದರೆ ಇವಳೇ, ಹೂಂ ಕೊಡು ಅವಳ ಕೈಗೆ ಪಿಸ್ತೂಲ್, ಲೇ ಕುಂಟನನ್ಮಗನೆ (ತೊದಲುತ್ತಾ) ಈಗ ನಿನ್ನತ್ತಿಗೆಯನ್ನು ನಿನ್ನದಗೇ ಬೆತ್ತಲೆಗೊಳಿಸಿ ನನ್ನಾಸೆಯನ್ನು ಈಡೇರಿಸಿಕೊಳ್ಳುವೆ. ಕಣ್ಣಾರೆ ಕಂಡು ಆನಂದಪಡು. ಅವಳ ಕೆಂಪಾದ ಮೈಯನ್ನು (ವಿಕಟವಾಗಿ ನಗುತ್ತ ಲಕ್ಷ್ಮಿಯನ್ನು ಎಳೆದಾಡುತ್ತ ಸೆರಗು ಜಗ್ಗಿ ಬಲಾತ್ಕರಿಸಲು) ಜ್ಯೋತಿ. ಎಷ್ಟು ಜಿಗಿಯುತ್ತಿದೆ ನೋಡು ಈ ಜಿಂಕೆ ಈ ಹುಲಿಯ ಕಣ್ಣು ತಪ್ಪಿಸಿ ಜಿಗಿಯಲು ಸಾಧ್ಯವೇ (ಗಟ್ಟಿಯಾಗಿ ಹಿಡಿಯಲು ಜ್ಯೋತಿ ಕೋಪದಿಂದ).

ಜ್ಯೋತಿ– ಲೋ ನರಾಧಮಾ ಹ್ಯಾಂಡ್ಸ್ ಅಪ್.

ವಜ್ರ– (ಆಶ್ಚರ್ಯಚಿಕಿತನಾಗಿ ಲಕ್ಷ್ಮಿಯನ್ನು ಬಿಟ್ಟು) ಇದೇನು ಜ್ಯೋತಿ ಇದೇನು ಜ್ಯೋತಿ ಇಂಥಹ ಸಮಯದಲ್ಲಿ ಹಾಸ್ಯ ಮಾಡುವೆಯಲ್ಲಾ (ಮುಂದೆ ಬರಲು ಪ್ರಯತ್ನಿಸಲು).

ಜ್ಯೋತಿ_ ವಜ್ರಮುನಿ ನಿಲ್ಲು.

ವಜ್ರ– ಅರೇ ಇದೇನು ಜ್ಯೋತಿ ನಾನು ನಿನ್ನ ಪ್ರಿಯಕರ.

ಜ್ಯೋತಿ_ ಹೌದು ಸೂಳೆಯಾದ ಈ ಜ್ಯೋತಿಯ ಪ್ರಿಯಕರ.

ವಜ್ರ– ಇದೇನು ನನ್ನ ಜ್ಯೋತಿಯ ಬಾಯಿಂದ ಈ ಮಾತು.

ಜ್ಯೋತಿ_ ಹೌದು ನಿನ್ನ ಜ್ಯೋತಿಯ ಬಾಯಿಂದಲೇ ಬಂದ ಮಾತುಗಳಿವು ಹೂಂ. ಅಲ್ಲಾಡಿದರೆ ಪ್ರಾಣ ಹೋಗುತ್ತದೆ (ವಜ್ರಮುನಿ ಚರಣ್‌ಗೆ ಕಣ್ ಮಿಟುಕಿಸಲು ಚರಣ್ ಉಪಾಯವಾಗಿ ಬರಬೇಕೆನ್ನುವಷ್ಟರಲ್ಲಿ) ಲೋ ಚರಣ್ ಅಲ್ಲೇ ನಿಲ್ಲು.. ಏನಾದರೂ ಬರಲು ಪ್ರಯತ್ನಿಸಿದರೆ ಗುಂಡು ನಿಮ್ಮೆದೆ ಬಗೆಯುವದು ಖಂಡಿತ ಲೋ ಭಂಡ ಜಮೀನದಾರ, ಕಂಡಕಂಡ ಸ್ತ್ರೀಯರನ್ನು ಒತ್ತಾಯದಿಂದ ಉಂಡುಭೋಗಿಸಬೇಕೆನ್ನುವ ನರವ್ಯಾಘ್ರ ನಿನ್ನಿಂದ ಅದೆಷ್ಟೂ ಬಡಕುಟುಂಬಗಳು ಅವಸಾನ ಹೊಂದಿ ಅದೆಷ್ಟೋ ಹೆಂಗಳೆಯರು ಶೀಲ ಕಳೆದುಕೊಂಡು ಪ್ರಾಣಕಳೆದು ಕೊಂಡಿದ್ದಾರೆ. ನಿನ್ನಂತವನು ಖಂಡಿತಾ ಬದುಕಬಾರದು ಲಕ್ಷ್ಮಿಯವರೇ ಇತ್ತ ಕಡೆ ಬನ್ನಿ. ಹಾಗೇ ಸುಂದರನ ಕೈಗಳನ್ನು ಬಿಚ್ಚಿಬಿಡಿ.

ಲಕ್ಷ್ಮಿ– (ಅನುಮಾನಿಸುತ್ತ) ಹಾಂ. ನಾನು

ಜ್ಯೋತಿ_ ಹೂಂ. ಬೇಗ ಬಿಚ್ಚಿರಿ (ಲಕ್ಷ್ಮಿ ಅವಸರದಿಂದ ಸುಂದರನ ಕೈ ಬಿಚ್ಚುವಳು)

ವಜ್ರ– ಜ್ಯೋತಿ ನಾನು ನಿನಗೇನನ್ಯಾಯ ಮಾಡಿರುವೆ.

ಜ್ಯೋತಿ_ (ವಿಕಟವಾಗಿ ನಕ್ಕು) ನ್ಯಾಯವೆನ್ನುವ ಪದದ ಅರ್ಥವಾದರೂ ನಿನಗೆ ತಿಳಿದಿದೆಯೇನು? ಅನ್ಯಾಯ, ಅನೀತಿ, ಅಧರ್ಮದ ಹಾದಿಯಲ್ಲಿ ಅನವರತ ಸಾಗಿ, ಅಮಾಯಕ ಹೆಣ್ಣು ಮಕ್ಕಳ ಶೀಲವನ್ನು ಹದ್ದಿನಂತೆ ಹರಿದು ತಿಂದ ಅಧಮಾ, ನಿನ್ನಂತಹ ರಕ್ತ ಬೀಜಾಸುರರ ವಂಶ ಅಳಿಸಲು ನನ್ನಂತೆ ಕಾಲು ಜಾರಿದ ಸ್ತ್ರೀಯರೆಲ್ಲಾ ಒಂದಾಗಿ ಕಂಡಕಂಡಲ್ಲಿ ನಿಮ್ಮಂತವರ ರುಂಡ ಚಂಡಾಡಬೇಕು. ಲೋ ಜಮೀನ್ದಾರ ಇದು ಇದು ಪವಿತ್ರನಾದ ಭಾರತ ಮತೆಯ ನೆಲ. ಇಲ್ಲಿನ ಅಣು ಅಣುವೂ ಕಣ ಕಣವೂ ಪವಿತ್ರವಾಗಿರುವುದೋ ಜ್ಯೋತಿಯಿಂದ ಜ್ಯೋತಿ ಬೆಳಗುವದು. ಪವಿತ್ರ ಭಾರತ ದೇಶದ ಸಂಪ್ರನಾಯ ಹಾಗೇ ಈ ಜ್ಯೋತಿಯಿಂದ ಸಮಾಜ ಕಂಟಕನಾದ ನಿನ್ನ ಭಸ್ಮವಾಗುವುದು ನಿಶ್ಚಿತ. ನನ್ನಂತೆ ಅಸಹಾಯಕರಾದ ಅಬಲೆಯರೆಲ್ಲಾ ಸಬಲರಾಗಿ ನಿಮ್ಮಂತವರ

ಮೇಲೆ ಸೇಡು ತೀರಿಸಿಕೊಳ್ಳಬೇಕು. ಅಂದರೇನೇ ದುಷ್ಟ ಕುಲದ ನಷ್ಟವಾಗುವದು. ಹೂಂ ನೀನು ಜೀವಿಸಿದಷ್ಟೂ ಅಪಾಯ ಹೆಚ್ಚು.

ವಜ್ರ– ಬೇ.. ಡ ಜ್ಯೋತೀ ಬೇ.. ಡ.. ನನ್ನನ್ನು ಬಿಡು.

ಜ್ಯೋತಿ– ಬಿಡಬೇಕೇ ಅಥವಾ ಬಿಡುಗಡೆ ಮಾಡಬೇಕೇ ಹೂಂ.. (ಗುಂಡು ಹಾರಿಸಲು ವಜ್ರಮುನಿ ಚೀರುತ್ತ ಕೆಳಗೆ ಬೀಳುವನು. ಸುಂದರ ಲಕ್ಷ್ಮೀ ಹೌಹಾರುವರು ಚರಣ್ ಪ್ರಾಣ ಭೀತಿಯಿಂದ ಓಡಲು ಯತ್ನಿಸಿದಾಗ) ಲೋ ಚರಣ್.

ಸುಂದರ– ಬೇಡ ಜ್ಯೋತಿ.

ಜ್ಯೋತಿ– ಗುರಿಯಿಟ್ಟ ಮೇಲೆ ಸುಟ್ಟರೇನೆ ನೆಮ್ಮದಿ(ಚರಣ್ ಗುಂಡು ಹಾರಿಸಲು ಚೀರಿ ಸಾಯಿಯುವನು).

ಲಕ್ಷ್ಮೀ– ಜ್ಯೋತಿ ಜ್ಯೋತಿಶಾಂತಳಾಗಮ್ಮಾ ಆವೇಶದಲ್ಲಿ ಅತಿರೇಕಕ್ಕೆ ಹೋದರೆ ಅಪಾಯವಾಗುವದು ಖಂಡಿತ, ಬೇಡ ತಂಗೀ.

ಜ್ಯೋತಿ– ಹಾ.. ಅಪಾಯ? ನಿನ್ನಂತವರು ಜೀವಿಸುವುದೇ ಅಪಾಯ ಅಕ್ಕಾ. ನನ್ನಿಂದ ನನ್ನ ಬಾಳು ಬರಡಾಯಿತು, ನನ್ನನ್ನು ಕ್ಷಮಿಸು, ಹೆಣ್ಣು ಮನುಕುಲದೊಂದು ಪುಣ್ಯದಾ ಬನದಲ್ಲಿ ಕಕ್ಕುಲತೆಯನ್ನು ಅರಳಿಸಿದ ಮಧುರ ಹೂ ಅನ್ನುವ ಕವಿ ವಾಣಿಯಂತೆ ಸತಿಯಾಗಿ, ಮಾತೆಯಾಗಿ ಮಾನವೀಯತೆಯ ಸಾಕಾರ ಮೂರ್ತಿಯ ಹೂವು ನೀನಾದೆ, ಯಾರೋ ಮಾಡಿದ ಅನ್ಯಾಯಕ್ಕಾಗಿ, ದ್ರೋಹಕ್ಕಾಗಿ ಸೇಡು ತೀರಿಸಿಕೊಳ್ಳಲು ಪ್ರತೀಕಾರದ ಜ್ವಾಲೆ ನಾನಾದೆ ಕೋಮಲ ಹೂ ನಾನಾಗದೆ ಹಾವಾದೆ.

ಸುಂದರ– ಹಾವಾದಲ್ಲಿ ನೀನಾದರೂ ಕೂಡ, ನೀನೂ ಪವಿತ್ರಳೇ ಆಗಿರುವೆ. ಹೂ ಶಿವನ ಮೂಡಿಯೇರಿದರೆ, ಹಾವು ಶಿವನ ಕೊರಳನ್ನಲಂಕರಿಸಿದೆ, ಆ ಪಿಸ್ತೂಲನ್ನು ಇತ್ತ ಕೊಡಮ್ಮಾ ಕೊಡು.

ಜ್ಯೋತಿ– ಈ ಪಿಸ್ತೂಲನ್ನು ತೆಗೆದುಕೊಂಡು ಅಪವಾದವನ್ನು ಹೊತ್ತುಕೊಳ್ಳ ಬೇಕೆಂದಿರುವೆಯೇನು?

ಸುಂದರ– ನೀನು ಬುದಬೇಕು ನಮ್ಮೊಂದಿಗೆ ಇರಬೇಕೆಂಬ ಇಚ್ಚೆಯಿಂದ ಈ ಮಾತು ಹೇಳುತ್ತಿರುವೆಯನಮ್ಮಾ.

ಲಕ್ಷ್ಮಿ– ಹೌದಮ್ಮಾ ಅದದ್ದೆಲ್ಲಾ ಆಯಿತು. ಇನ್ನು ಮುಂದೆ ಒಡ ಹುಟ್ಟಿದವರಾಗಿ ಬಾಳೋಣ.

ಜ್ಯೋತಿ– ಎಂಥಹ ಕರುಣಾಮಯಿಯಮ್ಮಾ ನೀನು, ಪವಿತ್ರ ಗಂಗೆಯಾದ ನೀನೆಲ್ಲಿ? ಪತಿತಳಾದ ನಾನೇಲ್ಲಿ? ನೀ ತುಳಿದ ಮಣ್ಣಿನ ಕಣದೆಯೋಗ್ಯತೆಯೂ ಕೂಡ ನನ್ನಲ್ಲಿಲ್ಲವಮ್ಮಾ, ಸಾಕಮ್ಮಾ ಈ ಜನ್ಮಕ್ಕೆ ನನಗಿಷ್ಟೇ ಮರ್ಯಾದೇ ಸಾಕು ಸುಂದರಣ್ಣಾ ನೀನು ಬರೀ ಮಾನವನಲ್ಲವಪ್ಪಾ ದೇವ ಮಾನವ, ಇಲ್ನೋಡಿ ಕೊನೆಯದಾಗಿ ನನ್ನದೊಂದು ಮಾತಿದೆ. ನೀವು ದಯವಿಟ್ಟು ನಡೆಸಿಕೊಡಲೇಬೇಕು.

ಲಕ್ಷ್ಮಿ– ಹೇಳಮ್ಮಾ ನನ್ನ ಪ್ರಾಣ ಒತ್ತೆಯಿಟ್ಟಾದರೂ ನಡೆಸಿಕೊಡುತ್ತೇನೆ.

ಜ್ಯೋತಿ– ನನ್ನ ಎಲ್ಲಾ ಆಸ್ತಿಯನ್ನೂ ರವಿಯ ಹೆಸರಿಗೆ ಬರೆಸಿದ್ದೇವೆ. ಪಾಪಿಯ ಧನವೆಂದು ದಯವಿಟ್ಟು ತಿರಸ್ಕರಿಸದಿರಿ.

ಲಕ್ಷ್ಮಿ– ಜ್ಯೋತಿ ಹೀಗೇಕೆ ಮಾಡಿದೇ ತಂಗೀ.

ಸುಂದರ– ಅಂಥಹ ಅವಸರವೇನಿತ್ತು ಜ್ಯೋತಿ. ಇದು ಉಚಿತವಲ್ಲ.

ಜ್ಯೋತಿ– ಉಚಿತ ಅನುಚಿತದ ಪ್ರಶ್ನೆ ಈಗಬೇಡ, ನನ್ನ ಪಾಪಕ್ಕೆ ತಕ್ಕ ಪ್ರಾಯಶ್ಚಿತ ಮಾಡಿಕೊಂಡಿದ್ದೇನೆ, ನನ್ನ ಆಸ್ತಿ ನಿಜವಾಗಿ ಸೇರಬೇಕಾದ ಜಾಗಕ್ಕೆ ಸೇರಿದೆ ನನ್ನ ಮಾತನ್ನು ಅಲ್ಲಗಳೆಯದಿರಕ್ಕಾ

ಲಕ್ಷ್ಮಿ– ಆಗಲಮ್ಮಾ ನಿನ್ನ ಇಚ್ಛೆ ಇದ್ದಂತಾಗಲಿ, ಮೊದಲು ಆ ಪಿಸ್ತೂಲನ್ನು ಇತ್ತ ಕೊಡು ಬಹಳ ಹೊತ್ತು ಈ ಸ್ಥಳದಲ್ಲಿ ನಿಲ್ಲುವದು ಸಮಂಜಸವಲ್ಲ ನಡೆಯಿರಿ ಮನೆಗೆ ಹೋಗೋಣ.

ಜ್ಯೋತಿ– ಮನೆ (ನಗುತ್ತ) ಮಸಣಕ್ಕೆ ಹೋಗಬೇಕಾದ ನನ್ನನ್ನು ಮನೆಗೆ ಆಹ್ವಾನಿಸುತ್ತಿದ್ದೀರಲ್ಲಾ ಅಕ್ಕಾ, ದಯವಿಟ್ಟು ಹಿಂದೆ ಸರಿಯಿರಿ. ಹಾಲಿನಂಥಹ ನಿಮ್ಮ ಸಂಸಾರದಲ್ಲಿ ಹಾಲಾಹಲವೆಬ್ಬಿಸಿದ ಈ ನೀಚಳನ್ನು ದಯವಿಟ್ಟು ಕ್ಷಮಿಸಿ (ತಲೆಗೆ ಪಿಸ್ತೂಲ್ ಹೊಡೆದು ಕೊಳ್ಳುವಳು ಲಕ್ಷ್ಮಿ ಗಾಬರಿಯಾಗಿ ಜ್ಯೋತಿಯನ್ನು ಹಿಡಿದು).

ಲಕ್ಷ್ಮಿ– ಜ್ಯೋತಿ.. (ರಕ್ತ ಒರೆಸುತ್ತ).

ಸುಂದರ– ಏನು ಮಾಡಿಕೊಂಡೆಯಮ್ಮಾ ನೀನು.

ಜ್ಯೋತಿ– ಅಕ್ಕಾ ನನ್ನದೊಂದು ಕೊನೆಯ ಮಾತು.

ಲಕ್ಷ್ಮಿ– ಹೇಳಮ್ಮಾ ಹೇಳು ಜ್ಯೋತಿ.

ಜ್ಯೋತಿ– ಅಕ್ಕಾ ಪವಿತ್ರಳಾದ ನಿನ್ನ ಕೈಯಾರ ನಾಲ್ಕು ಗುಟುಕು ನೀರು ಹಾಕುವೆಯಾ? ಸುಂದರ್ ಇರು ಜ್ಯೋತಿ (ನೀರು ತಂದು) ತಗೊಳ್ಳಿ ಅತ್ತಿಗೆಮ್ಮಾ.

ಲಕ್ಷ್ಮಿ– ಜ್ಯೋತಿ ತಗೊಮ್ಮಾ ನೀರು (ಜ್ಯೋತಿ ಕುಡಿಯುತ್ತ ಕೈ ಮುಗಿದು).

ಜ್ಯೋತಿ– ಸಾಕಕ್ಕಾ ನನಗಿಷ್ಟೇ ಸಾಕು.. ನಾನಿನ್ನು ಬರುವೆ (ಅಸುನೀಗುವಳು ರೋಧನ ಪರದೆ ಬೀಳುವುದು).

===***====***===

ಇಪ್ಪತ್ತೆರಡನೆಯ ಪ್ರವೇಶ

ರಸ್ತಾ

(ಕುಬೇರ, ಗುರುನಾಥ, ಮನ್ಮಥ)

ಮನ್ಮಥ– ನಿನ್ನೆಯಿಂದ ದಿಕ್ ತಪ್ಪಿ ಅಡಾ ಮಡಾ ಹುಡುಕಿದ್ರೂ ಸಿಗುವಲ್ರಪಾ ಈ ಮಕ್ಕಳು.

ಕುಬೇರ– ಇದಾ ಛಾನ್ಸ್ ಅಂತ ಎತ್ಲಾಗ ಜಿಗದಾರೋ ಏನು ಕತೆ.

ಗುರು– ನನ್ನ ಕೈಯಾಗೊಂದಾ ಸಿಗಲಿ ಅ ಅ ಅವರನ್ನು ಒಂದು ಕೈ ಕೈ ನೋಡ್ತೇನಿ.

ಮನ್ಮಥ– ಸಿಕ್ಕರಾರ ಏನು ಮಾಡ್ತೀಯವಾ ಶಿವಾ ಹಾಡಾ ಹಗಲು ಕಣ್ಣಾಕ ಮಣ್ಣು ಉಗ್ಗಿದವಲ್ಲೊ.

ಕುಬೇರ– ಅವನು ನೋಡಾಕ ಒಂದು ನಮೂನೆ ಕಂಡ್ರೂ, ಬಾಳ ಛದಾಮ ಅದಾನ ಅವನು, ಈ ನಮೂನೆ ಆದ ಅನ್ಯಾಯಕ್ಕೆ ನಾವು ಬೆಲೆ ಕೊಡಬಾರದು. ಈ ಹಿಂದ ಆಕಿ ಎಲ್ಲಾರನೂ ಮದುವಿ ಆಗ್ತೀನಂತ ಹೇಳಿದ್ಲು.

ಮನ್ಮಥ– ಆವಾಗ ಹೇಳಿದ್ಲು. ಈಗ ಮತ್ತ ಏನು ಪದಾ ಹಾಡುವಾಕ್ಯೊ ಏನೊ ಯಾರಿಗೆ ಗೊತ್ತು. ಸಹವಾಸ ದೋಷ, ಅವನ ಕಾಲಗ ಸಾಕಾತಪಾ. ಲಾಟರಿ ಹಾಕಿದಾಗಿಂದ ಅಡಾಮಡಾ ಹುಡುಕಿ ಕಾಲು ಸೋತು ಹೋದವು. ಮೊಣಕಾಲು ಮಡಚಾಕ ಬರವಲ್ಲವು.

ಚಂದ್ರ– (ಅರುಣಾಳೊಡನೆ ಮಧು ಮಕ್ಕಳಾಗಿ ಆಗಮಿಸಿ ಅವರೆಲ್ಲರನ್ನೂ ನೋಡಿ ಹಿಂದೆ ಸರಿದು) ಅವನೌನ ಇಲ್ಲೇ ನಿಂತಾರಲ್ಲಪ್ಪಾ ಅಂತೀನಿ.

ಗುರು– ಬ ಬ ಬರ್ರಿ ಕ.ಕ.ಕವಿಗಳಾ.

ಅರುಣ– ಇದ್ರೇನಣ್ಣಾ ಎಲ್ರೂ ಯಾಕ ಹಾದ್ಯಾಗ ನಿಂತೀರಿ?

ಕುಬೇರ– ಅಣ್ಣಾಂತ ಅಂದ್ಯಾ, ಬಿಡು ಪಾಡಾತಲ್ಲ ತಟಗು ಕೆಲಸ ಇತ್ತವಾ ತಂಗಿ.

ಗುರು– ಹಾಂ ಅ ಅ ಅಣ್ಣಾ ಅಂತ ಅಂತೀಯಾ? ಏ ಏನದು ಕ ಕತಿ.

ಚಂದ್ರ– ಕತಿ ವಿಷಯ ಬಿಡು. ಈಗ ಅವಳು ನನ್ನ ಸತಿ.

ಕುಬೇರ– ಅಂದ್ರ ನಮ್ಮ ಗತಿ.

ಚಂದ್ರ– ಸುಮ್ಮಕ ಯಾಕ ಟೈಮು ವೇಷ್ಟ ಮಾಡ್ತೀರೆಪಾ ಯಾನ್ರುದಾರ ಗುಡಿ ಗುಂಡಾರಕ್ಕೆ ಹೋಗ್ರಿ ಸುಮ್ಮಕ ಭಜನಿ ಮಾಡಿಕೊಂಡ ಕುಂದರ್ರಿ.

ಮನ್ಮಥ– (ಚಂದ್ರಗೌಡನ ಕಾಲರ ಹಿಡಿದು) ನನ್ನಗನೇ ಮೋಸ ಮಾಡಿ ಓಡಿಸಿಗೊಂಡು ಹೋಗ್ತೀಯಾ?

ಕುಬೇರ– ಹಾಂಗ ಮಾತಾಡಿಸಿದ್ರ ಅವನು ಬಗ್ಗೋದಿಲ್ಲ ನಾಲ್ಕು ನಾದ ಬೇಕು.

ಚಂದ್ರ– ಹೇ ಕೈ ಬಿಡ್ತೀರೋ ಇಲ್ಲೋ, ಹಾಂ ಏನಿದು ಹುಚ್ಚಾಬಟ್ಟೆ ಯಾರಾದ್ರೂ ನೋಡಿದ್ರ ನಮ್ಮ ಡಿಗ್‌ನೆಟಿ ಏನಾಗುತ್ತ.

ಗುರು– ಬಾ ಬಾ ಬಾರಿ ಡಿ ಡಿಗ್‌ನಿಟಿ ಮ ಮನಿಷ್ಯಾ ನೀನು ಲಾ ಲಾ ಲಾಟರಿ ಹಾಕಿದ್ದೆಲ್ಲಪ್ಪಾ.

ಚಂದ್ರ– ಮತ್ತ ನಾಲ್ಕೂ ಮಂದೀ ಹೆಸರು ಬರದಿದ್ದೆನಲ್ಲಪ್ಪಾ.

ಗುರು– ನಾಲ್ಕು ಹೆಸರೇನು ಬ ಬ ಬರೆದಿದ್ರಿ, ಅ ಅವು ನಾ ನಾಲ್ಕು ನಿ ನಿನ್ನ ಹೆ ಹೆಸರಾ ಇದ್ವು.

ಚಂದ್ರ– ಹಾಂ ಹಾಂಗಾಗ್ಯೆತೇನು? ಹಿಂಗಾಕಾತದು ಖೋಡಿ.

ಮನ್ಮಥ– ಈಗ ಈ ಅನ್ಯಾಯದ ವಿರುದ್ದ ನಾವು ಪ್ರತಿಭಟಸ್ತೀವಿ ರಸ್ತಾ ರೋಖೋ ಉಗ್ರ ಚಳುವಳಿ. ವಾಟಾಳ್ ನಾಗರಾಜರ ಹಂತ್ಯಾಕ ಹೋಗ್ತೀ ?

ಚಂದ್ರ– ಅಂದ್ರ ನಮ್ಮ ಮಾತಿನ ಅರ್ಥ ಮದುವಿ ಆದದ್ದನ್ನು ತಾಳಿ ಹರಸ್ತೀರಿ ಅಂದಾಂಗಾಯ್ತು ಎಂಥಾಮಂದಿ ಹುಟ್ಟಿದ್ರ್ಯೋಯಪ್ಪಾ ಈ ಇಂಡಿಯಾದಾಗ ಹತ್ತಾರು ಸುಳ್ಳು ಹೇಳಿ ಮದುವಿ ಮಾಡ್ತಾರ ತಾಳಿ ಕಟ್ಟಿಸ್ತಾರ ಅಂಥದ್ರಾಗ ತಾಳಿ ಹರಸ್ತೀನಿ ಅಂತ ಅಂತೀರಲ್ಲೋ.

ಕುಬೇರ– ನ್ಯಾಯಬದ್ದಾಗಿ ನಡದಿತ್ತಂದ್ರ ನಾವೂ ನಾಲ್ಕು ಅಕ್ಕಿ ಕಾಳು ಹಕತಿದ್ವಿ ಇದು ಯಾವಾಗ ಈ ನಮೂನೆ ಆಗ್ಯೆತಿ ಅಂದಾಗ. ಬೇಕಾದ್ದು ಆಗವಲ್ತಾಕ ನಾನೇನು ಬಿಡೊಂಗಿಲ್ಲಂದ್ಯಾ.

ಮನ್ಮಥ– ಹೌದು ಆರು ಮೂರಾರಾಗ್ಲಿ ಮೂರು ಆರರಾಗ್ಲಿ.

ಚಂದ್ರ– ಎರಡು ಕಲ್ತಿರ ಒಂಭತ್ತು ಆಗ್ತದ ಕೈಗೆ ಆಡಸಲಿಕ್ಕ ಒಂದು ಬರ್‍ತದ.

ಅರುಣ– ನೋಡ್ರಪಾ ನನಗಂತೂ ಈ ಮೋಸದ ಲಾಟ್ರಿ ವಿಷಯ ಏನೂ ಗೊತ್ತಿಲ್ಲ ಹಾಕುವಾಂಗ ನಾಲ್ಕು ಮಂದಿ ಹೆಸರು ಹಾಕಿ ಕ್ರಮಬದ್ಧವಾಗಿ ಲಾಟ್ರಿರ ಗದಾನಂತಾನ ಕ್ರಮಬದ್ಧವಾಗಿ ಮದುವಿ ಆಗಿ ಬಂದೀನಿ.

ಚಂದ್ರ– ಬರೀ ಮದುವಿ ಅಂತ ಅಷ್ಟಾ ತಿಳಿಬ್ಯಾಡ್ರಿ, ಕ್ರಮಬದ್ಧವಾಗಿ ಶೋಭಾನ ಕೂಡ ಆಗೈತಿ.

ಗುರು– ಏ ಏ ಏನಾರ ಆಗವಲ್ತಾಕ ನಾ ನಾನೇನು ಬಿಡೊಂಗಿಲ್ಲ ನೋ ನೋಡು (ಸಿಟ್ಟಿನಿಂದ ನುಡಿಯುವನು).

ಮನ್ಮಥ– ಹೌದಂದ್ಯ.

ಕುಬೇರ– ಹುಚ್ಚುಚ್ಚಾರ ಹಗಲು ಹೊತ್ತಿನ್ಯಾಗ ಕಣ್ಣಾಕ ಮಣ್ಣು ಉಗ್ಗುತೀರಾ.

ಮನ್ಮಥ– ನಮ್ಮನ್ನೇನು ಕೆಲಸಕ್ಕೆ ಬರಲಾರದವರು ಅಂತ ತಿಳಿದೀರೋ ಏನು.

ಗುರು– ಹಿ ಹಿ ಹಿಡಕೋರಿ ತಾ ತಾಳಿ ಹ ಹರದು ಬಿ ಬಿಡೂನ.

ಅರುಣ– ಹ್ಯಾಂಗ್ಯಾರ ಮಾಡ್ರೆಪಾ ನೀವು ಮೂವರು ಮಾನವೀಯತೆಯುಳ್ಳವರು ತಿಳಿದವರು ಅಂತ ಇಷ್ಟು ಬೇಡಿಕೊಂಡೆ, ಕೊರಳಿಗೆ ತಾಳಿ ಯಾವಾಗ ಬಿದ್ದೈತಿ ಅಂದಾಗ ನಾನು ಇನ್ನೊಬರ ಹೆಣ್ತಿ, ನೀವಾ ಅಣ್ಣಂದಿರು ಕುಂತ್ಕೊಂಡಾ ಯಾವಾಗ ತಾಳಿ ಹರಿಸ್ತೀರಿ ಅಂದಮ್ಯಾಗ ಇನ್ನೇನು ಹೆಚ್ಚಿಗೆ ಹೇಳಂದಿ?

ಗುರು– ನೀನು ಏನು ಹೇ ಹೇಳಬ್ಯಾಡ ನಾನೇನು ಕೇಳೂದಿಲ್ಲ.

ಮನ್ಮಥ– ನೀನು ಮನಿಷ್ಯಾ ಬಾಳ ಯಡವಟ್ಟು ಇದ್ದಾಂಗ ಆದೀಯಪಾ, ಅಂತಾಪರಿ ದೈನ್ಯದಿಂದ ಬೇಡಿಕೊಂಡಾಗ ನಾನು ಕೇ ಕೇಳೊಂಗಿಲ್ಲ ಅಂತ ಅಂತಿಯಲ್ಲಾ (ಅಣಕಿಸುವನು).

ಕುಬೇರ– ಅಲ್ಲಪಾ ಹಿರಿಯ ನೀನಾ ಕುಂತ್ಕೊಂಡು ಯಾವಾಗ ಈ ಮಾತು ಹೇಳ್ತಿ ಅಂದಮ್ಯಾಗ ನಮ್ಮದೇನೈತಿ ನಡಿರಿ.

ಮನ್ಮಥ– ಈಗಿನ ಕಾಲ್ದಾಗ ಯಾರು ಸಣ್ಣಾವರೋ ಇವರು ಮಾಣಕ್ಯೆಲಿ ಹಿರೇರು ನೋಡಪಾ.

ಚಂದ್ರ– ಎಂಥಾ ಮಾತು ಹೇಳಿದೆಪಾ ನಿಮ್ಮ ಆಶೀರ್ವಾದ ಸದಾ ನಮಗ ಇರಬೇಕೆಪಾ.

ಅರುಣ– ಅಂದ್ರ ನಮ್ಮ ಬಾಳೇವು ಬಂಗಾರ ಆಗತಾದ್ರಪಾ.

ಕುಬೇರ– ನಿಮ್ಮಿಬ್ರುದು ಬಂಗಾರ ಆತು. ಆದ್ರ ನಮ್ಮ ಬಾಳೇವು ಕಬ್ಬಿಣ ಆತಲ್ಲಪಾ, ನಡಿರೆಪಾ.

ಚಂದ್ರ– ರಾತ್ರಿ ಊಟಕ್ಕೆ ಬರ್ರೆಪೋ ಮರಿಬ್ಯಾಡ್ರಿ.

ಅರುಣ– ಹೌದಣ್ಣ ಮರಿಬ್ಯಾಡ್ರಿ.

ಮನ್ಮಥ– ನಿನ್ನ ಬಾಯಾಗ ಮ್ಯಾಗಿಂದ ಮ್ಯಾಗ ಅಣ್ಣಾ ಅನ್ನೊ ಪದಾ ಕೇಳಿ ಮೈಯೆಲ್ಲಾ ತಣ್ಣಗಾಗಿ ನಮಗ ಉಂಡಾಂಗ ಆತವ್ವ ತಂಗಿ (ವ್ಯಂಗ್ಯವಾಗಿ).

ಕುಬೇರ– ನಡಿಯೋ ಗುರುನಾಥ.

ಗುರು– ನಾ ನಾನು ಬ ಬರೋಂಗಿಲ್ಲಪಾ.

ಮನ್ಮಥ– ಹೇ ಹಾಳಾಗಿ ಹೋಗಲೇ ಖೋಡಿ. ನಿನ್ನ ಕೂಡ ಏನು ಗುಕ್ಕನ ಕೂಡ (ಕುಬೇರ ಮನ್ಮಥ ಹೋಗುವರು).

ಚಂದ್ರ– ಹೌದು ಈಗ ಏನು ಮಾಡಬೇಕಂತ ಮಾಡೀಯಪಾ.

ಅರುಣ– ಅವನ್ನೇನು ಕೇಳ್ತೀದಿ. ನಾಲ್ಕು ಕೊಡು ಕಪಾಳಕ್ಕೆ.

ಗುರು– ಹಾಂ.

ಚಂದ್ರ– ಹೂಂ ಕತ್ತೆಗೆ ಲತ್ತೆ ಪೆಟ್ಟು, ಇಲ್ಲಿ ಹಾಂಗಾ ಕಣ್ಣು ಬಡಕೊಂತ ನಿಂತ್ರಿ ಅಂದ್ರ, ಕೈ ಆಗ್ಲಿ ಕಾಲಾಗ್ಲಿ ಮುರಿಸಿಗೊಂತಿದಿ ನೀನು. ಅಲ್ಲ ನಾವು ಹೊಸಾಗಂಡ ಹೊಸಾ ಹೆಣ್ತಿ ಅದರಾಗ ಇದು ನವಂಬರ್ ಡಿಸೆಂಬರ್ ಥಳಿ ಏನಕೇನಾರ ಮಾಡಬೇಕಂದ್ರ ಅಡ್ಡ ನಿಂದ್ರ ತೆನಲೆ ಗುಕ್ಕ ನನ್ನ ಮಗನಾ.

ಗುರು– ಮಾ ಮಾಡದೆಲ್ಲಾ ಮಾ ಮಾಡಿ ಮತ್ತು ಮ್ಕೆ ಮೈಮ್ಯಾಗ ಬ ಬರ್ತೀಯಲ್ಲೋ ಪೋ ಪೋ ಪೋಲೀಸ ಕೇ ಕೇಸ ಹಾಕ್ತೀನಿ.

ಚಂದ್ರ– ಹೂಂ. ಅದನ್ನಾ ಮಾಡು ಹೋಗಲೆ, ನಮ್ಮನ್ನ ನೋಡಿಕೊಂತ ಕಣ್ಣು ಬಡಕೊಂಡು ನಿಂತಾನ ನೋಡ್ರಿ, ಅಂತ ನಾವೂ ನೋಡಿದ ಕೇಸ

ಹಾಕ್ತೀವಿ. ದನಕ್ಕ ಒದ್ದಾಂಗ ಒದಿತಾರ ಆವಾಗ ಮುಂಡಿ ಕೆತ್ತಿಸಿಸಿಕೊಂಡು ಬೀಳುವಂತಿ

ಗುರು– ಹಾಂ.

ಅರುಣ– ಏನಾ ಓಳ್ಳೇ ಮನಿಷ್ಯಾ ಅಂತ ಸಲಿಗಿ ಕೊಟ್ರ ಇದು ಬಾಳ ಸುಡುಗಾಡು.

ಚಂದ್ರ– (ಉಸಿರು ಹಾಕಿ) ಅಂತೂ ಕೈ ಬಿಟ್ಟಿನಲ್ಲ ಮಹಾಶಯ.

ಅರುಣ– ನಡಿರಿ ಗುಡಿಗೆ ಹೋಗಿ ಕಾಯಿ ಕರ್ಪೂರ ಮಾಡಿಸಿಕೊಂಡು ಬರೂನು(ಹೋಗುವರು).

ಅದೇ ರಸ್ತೆ

(ರಾಣಿ ಸಾಬ ಗಂಟು ಮೂಟೆ ಕಟ್ಟಿಕೊಂಡು ಬರುವನು).

ರಾಣಿ– ಆತಲ್ರಿ ನಮ್ಮದು, ನಮ್ಮ ಜ್ಯೋತಿ ಅಕ್ಕ ಆತ್ಮಹತ್ಯೆ ಮಾಡಿಕೊಂಡುಸತ್ತಳು, ಇದ್ದ ಬಿದ್ದ ಆಸ್ತಿಯೆಲ್ಲ ಆ ಶಂಕರ್ ಮಾಮನ ಮಗ ರವಿ ಹೆಸರಿಲ್ಲೇ ಬರ್ದಾಳ ಆತು. ನಮ್ಮಂತವರ ಬಾಳುವೆಲ್ಲಾ ಹಿಂಗಾ ನೋಡ್ರಿ. ಅಗಸರನಾಯಿಗತಿ ಆತ್ಲಾಗ ಹಳ್ಳಾ ಕಾಯಲಿಲ್ಲ. ಇತ್ಲಾಗ ಮನಿನೂ ಕಾಯಲಿಲ್ಲ ಹಾಂಗಾತು. ದೇವರೇಯಪ್ಪಾ ನಮ್ಮನ್ನು ಈ ನಮೂನೆ ಯಾಕ್ ಹುಟ್ಟಿಸ್ತಿಯಪಾ, ಹುಟ್ಟಿಸೋಂಗಿದ್ರ ಬರೋಬರಿ ಗಂಡಸಾಗಿ ಹುಟ್ಟಿಸು, ಇಲ್ಲಾ ಎಲ್ಲಾ ದೇಶದ ಜನರೂ ನನ್ನಂತವರನ್ನಾ ಹುಟ್ಟಿಸಿಬಿಡು. ಆವಾಗ ಒಂದು ನಮೂನೆ ನಮ್ಮನ್ನ ನೋಡಿ ಅಣಕಿಸೋ ಜನರಾದ್ರು ಕಡಿಮೆ ಆಗ್ತಾರ. ನಮ್ಮ ಚಿಂತೆ ನಿಮಗ ಹ್ಯಾಂಗ ಗೊತ್ತಾಗ ಬೇಕ್ರಿ? ಅಂತೂ ನಮ್ಮ ಜ್ಯೋತಿ ಅಕ್ಕ ಪುಣ್ಯಾತಗಿತ್ತಿ. ನನ್ನ ಹೆಸರಿಗೇ ಹತ್ತು ಸಾವಿರ ರೂಪಾಯಿ ಬ್ಯಾಂಕಿನಾಗ ಇಟ್ಟು ಸತ್ತಾಳ ಯಾವುದಾರ ಬಿಜನಿಸ್ ಮಾಡಿದ್ರಾತು. ನೀವೂ ಬರ್ರಿ ನಮ್ಮ ಬಿಜನೆಸ್‌ಗೆ, ಸದ್ಯ ಎರಂಗಳಿಗೆ ಹೋಗ್ತೀನಿ ಕೊನಗಾಲಕ್ಕ ನಂತಾಕ ಬಾ ಅಂತ ಹೇಳ್ಯಾನ ಶಿವಪ್ಪಣ್ಣ (ಹೋಗುವನು).

===****====***==

ಇಪ್ಪತ್ಮೂರನೆಯ ಪ್ರವೇಶ

ಶ್ರೀಮಂತಿಕೆಯ ಮನೆಯ ದೃಶ್ಯ

(ನಾಲ್ಕಾರು ಖುರ್ಚಿ ಟೇಬಲ್, ಟೆಲಿಫೋನ್, ಗೋಡೆಗೆ ಜ್ಯೋತಿಯ ದೊಡ್ಡ ಭಾವಚಿತ್ರ ಸುಂದರ ಅದಕ್ಕೆ ಹಾರಹಾಕಿ)

(ಕೃತಕ ಕಾಲು ಜೋಡಿಸಿ, ಕೊಂಡಿರುವನು)

ಸುಂದರ– ಜ್ಯೋತಿ: ನೀನು ನಮ್ಮಿಂದ ಬಾಹ್ಯ ನೋಟಕ್ಕೆ ಆಗಲಿದರೂ ಕೂಡ, ಅಂತರಂಗದಲ್ಲಿ ನಿತ್ಯ ಚೇತನ ಸ್ವರೂಪವಾಗಿದ್ದೀಯಮ್ಮಾ ಹೇರಿಗೆ ತಕ್ಕಂತೆ ಜ್ಯೋತಿಯೇ ನೀನಾದೆ. ತನ್ನನ್ನೇ ತಾನು ಸುಟ್ಟುಕೊಂಡು ಪರರಗೆ ಬೆಳಕು ನೀಡುವಂತೆ, ಬಾಲ್ಯದಲ್ಲಿ ತಂದೆ ತಾಯಿಯರಿಗಾಗಿ ಅಂತ್ಯದಲ್ಲಿ ಆತ್ಮ ಬಂಧುಗಳಿಗೆ ಆತ್ಮಾರ್ಪಣೆ ಮಾಡಿದ ನೀನು ಸಾಮಾನ್ಯಳಲ್ಲವಮ್ಮಾ ನನ್ನ ಅಂತರಾತ್ಮ ಸದಾ ನುಡಿಯುತ್ತಿದೆ. ಜ್ಯೋತಿ"ಬೆಳಗುತಿದೆ ನೋಡು ವಿಮಲ ಪರಂಜ್ಯೋತಿ ಬೆಳಗುತಿದೆ"ಎಂದು (ಕಟ್ಟಿಗೆಯ ಸಹಾಯವಿಲ್ಲದೆ ಕುಂಟುತ್ತ ಬರುವನು)

ರವಿ– (ಭರ್ಜರಿ ಡ್ರೆಸ್‌ನಲ್ಲಿ ಬಂದು) ಚಿಕ್ಕಪ್ಪಾ ನಿಮಗೀಗ ಕಾಲಿಲ್ಲವೆಂದು ಯಾರೂ ಗುರುತಿಸುವಂತಿಲ್ಲ

ಸುಂದರ– ಹೌದೇನೋ

ರವಿ– ನಿಜ ಚಿಕ್ಕಪ್ಪಾ, ಬೇಕಾದರೆ ಅಮ್ಮನನ್ನೇ ಕೇಳು ಅಮ್ಮಾ ಇಲ್ಲಿಬಾರಮ್ಮಾ

ಲಕ್ಷ್ಮಿ– (ಒಳಗಿನಿಂದ ಬಂದು) ಏನೋ ರವಿ (ಒಡವೆ ವಸ್ತ್ರಧರಿಸಿ)

ರವಿ– ಚಿಕ್ಕಪ್ಪನ ಕಾಲು ಚೆನ್ನಾಗಿಲ್ಲೇನಮ್ಮಾ

ಲಕ್ಷ್ಮಿ– ಹೌದಪ್ಪಾ ಜೈಪುರದ ಕೃತಕ ಕಾಲು ನಿಜವಾದ ಕಾಲಿನಂತೆಯೇ ಕಾಣುತ್ತಿದೆ

ಸುಂದರ– ಅತ್ತಿಗೆಮ್ಮಾ ಆ ದೇವರು ಕಳೆದು ಹೋದದ್ದನ್ನೆಲ್ಲಾ ಮರಳಿಕೊಟ್ಟ ಪ್ರತಿಯಾಗಿ ಇಮ್ಮಡಿಯಾಗಿ

ಲಕ್ಷ್ಮಿ– ಹೌದಪ್ಪಾ ಎಲ್ಲಾ ಭಾಗ್ಯವೂ ಬಂತು. ಆದರೆ ಆದರೆ ನಿನ್ನಣ್ಣ (ಉಕ್ಕಿಬಂದ ದು:ಖವನ್ನು ನುಂಗಿಕೊಂಡು)

ಸುಂದರ– ಅತ್ತಿಗೆ ಇಷ್ಟೆಲ್ಲವನ್ನೂ ಕರುಣಿಸಿದ ದೇವರು ಅಣ್ಣನನ್ನೂ ದೊರಕಿಸುತ್ತಾನಮ್ಮಾ

ಶ್ಯಾಮು– (ಲಾಟರಿ ಮಾರುತ್ತ) ಕರ್ನಾಟಕ ಸ್ಟೇಟ ಲಾಟರಿ ಸಾರ್ (ವೀಕ್ಷಿಸಿ) (ಸ್ವಗತ) ಈ ಹಿಂದೆ ಇವರನ್ನು ಇಲ್ಲಿಯೋ ನೋಡಿದಂತಿದೆಯಲ್ಲಾ ಸಾರ್ ಒಳಗೆ ಬರಬಹುದೆ

ಸುಂದರ– ಬಾರಪ್ಪಾ

ಶ್ಯಾಮು– ತಪ್ಪು ತಿಳಿದುಕೊಳ್ಳ ಬೇಡಿ ಸಾರ್. ತಮ್ಮನ್ನು ಈ ಹಿಂದೆ ಎಲ್ಲಿಯೋ ನೋಡಿದಂತಿದೆ

ಲಕ್ಷ್ಮಿ– ಹೌದಪ್ಪಾ ಗುಡಿಸಲ್ಲಿ ನೋಡಿದ್ದೆ

ಸುಂದರ– ಅಂದಿನ ಆ ದೌರ್ಭಾಗ್ಯವಂತರೇ ನಾವು, ನೀನು ಕೊಟ್ಟ ಆ ಲಾಟ್ರಿ ಟಿಕೆಟ್ ಬಂಪರ್ ಬಹುಮಾನವನ್ನು ತಂತು

ಶ್ಯಾಮು– ಬಹಳ ಸಂತೋಷ ಸಾರ್

ಲಕ್ಷ್ಮಿ– ನಿನ್ನ ಹೆಸರೇನಪ್ಪಾ

ಶ್ಯಾಮು– ನನ್ಹೆಸರು ಶ್ಯಾಮು ಅಂತ

ಸುಂದರ– ಶ್ಯಾಮು ಸುಧಾಮನ ಮನೆಗೆ ಶ್ರೀ ಕೃಷ್ಣ ಬಂದಂತೆ ನೀನು ಬಂದೆ, ಹೌದು ಅಂದ ಹಾಗೆ ನಿಮ್ಮ ತಾಯಿ ಹೇಗಿದ್ದಾಳೆ?

ಶ್ಯಾಮು– ನನ್ನ ತಾಯಿ ಹುಂ. ಎಷ್ಟು ಪ್ರಯತ್ನಪಟ್ಟರೂ ಕೂಡ ಆಕೆಯನ್ನು ಉಳಿಸಿಕೊಳ್ಳುವುದಾಗಲಿಲ್ಲ ಸಾರ್. ನನ್ನನ್ನು ಒಂಟಿಯಾಗಿ ಬಿಟ್ಟು ಹೋದಳು (ಕಣ್ಣಿರೊರೆಸಿ ಕೊಳ್ಳುವನು)

ಲಕ್ಷ್ಮಿ– ಶ್ಯಾಮು ಅಳಬೇಡಪಾ ಅಳಬೇಡವೋ

ಶ್ಯಾಮು– ನನ್ನಲ್ಲೀಗ ಉಳಿದಿರುವುದು ಇದೊಂದೆ

ಸುಂದರ– ಹಾಗಾದರೆ ನಿನ್ನ ಸಂಬಂಧಿಕರು ಯಾರೂ ಇಲ್ಲವೆ?

ಶ್ಯಾಮು– ಎಲ್ಲಾ ನಾನೇ ಸಾರ್

ಸುಂದರ– ಅದಕ್ಕೇಕೆ ದು:ಖಿಸುವೆಯೋ ನಿನಗೆ ನಾವಿಲ್ಲವೇನು?

ಶ್ಯಾಮು– ಸಾರ್. ಏನು ಹೇಳುತ್ತಿರುವಿರಿ

ಸುಂದರ– ಹೌದು ಇನ್ನು ಮೇಲೆ ಈ ಲಾಟರಿ ಟಿಕೆಟ್ ವ್ಯವಹಾರ ನಿಲ್ಲಿಸಿ, ಆನಂದವಾಗಿ ಈ ಮನೆಯಲ್ಲಿದ್ದು ಬಿಡು

ರವಿ– ನನಗೂ ಅಣ್ಣನಿರಲಿಲ್ಲ

ಲಕ್ಷ್ಮಿ– ಈಗ ದೇವರೇ ಕಳಿಸಿದ್ದಾನೋ

ಶ್ಯಾಮು– ಸಾರ್, ಸಾರ್ (ಕಾಲು ಹಿಡಿಯಲು)

ಸುಂದರ– ಲೇ ಲೇ ಮೇಲೇಳೋ ನಿನ್ನಿಂದಾನೆ ನಾವು ಇದನ್ನೆಲ್ಲಾ ಕಂಡಿದ್ದು, ಈ ಮನೆಯ ಹಿರಿ ಮಗನಾಗಿ ನೀನಿರು (ಅಷ್ಟರಲ್ಲಿ ಹಿಂಬದಿಯಲ್ಲಿ ಜನರು ಹುಚ್ಚಾ ಹುಚ್ಚಾ ಎಂದು ಕೂಗಲು ಶಂಕರ ಹರಿದ ಅಂಗಿಕೆದರಿದ ಧೂಳು ಮುಚ್ಚಿದ ತಲೆಯನ್ನು ಜಾಡಿಸುತ್ತ ಓಡೋಡಿ ಬರುವನು. ಮೈಮೇಲೆ ರಕ್ತದ ಕಲೆಗಳಾಗಿರುವವು)

ಶಂಕರ– ನನಗೆ ಹುಚ್ಚ ಅಂತ ಅಂತೀರಾ ನೀನು ಹುಚ್ಚು, ನಿಮ್ಮಪ್ಪ ಹುಚ್ಚ, ಕಲ್ಲು ಒಗಿತಿರೇನೆಲೆ ಬರ್ರೋ ಅಮ್ಮಾ ಕೈ

ಸುಂದರ– (ಆಶ್ಚರ್ಯದಿಂದ) ಅಣ್ಣಾ

ಶಂಕರ– ಯಾವನೋ ನಿಮ್ಮಣ್ಣ ನಾನು ಜ್ಯೋತಿ ಅಣ್ಣ ಹೂಂ

ರವಿ– ಅಪ್ಪಾಜಿ.

ಶಂಕರ– ಹಾಂ ಅಪ್ಪಾಜೀ ನೀನ್ಯಾವನಲೇ ನಾನು ರವಿಗಷ್ಟೇ ಅಪ್ಪ ಊಂ ಹುಂ ಅಲ್ಲ ಅಲ್ಲ ನಮ್ಮಪ್ಪ ರವಿ.

ಲಕ್ಷ್ಮಿ– ಏನ್ರಿ ಅಯ್ಯೋ ಶಿವನೇ ರೀ.

ರವಿ– ನಾನು ನಿಮ್ಮ ರವಿ ಅಪ್ಪಾಜಿ.

ಲಕ್ಷ್ಮಿ– ರೀ ಏನಾಯ್ತು ನಿಮಗೆ?

ಶಂಕರ– ಏನಾಗಿದೆ ನನಗೇನೂ ಆಗಿಲ್ಲ. ಆಗಿರೋದಲ್ಲಾ ನಿಮಗೆ (ಜ್ಯೋತಿಯ ಫೋಟೋ ನೋಡಿ) ಹಾಂ ಇಲ್ಲೂ ಜ್ಯೋತಿ ಇದ್ದಾಳಪ್ಪೊ ಎಲ್ಲೆಲ್ಲೂ ಜ್ಯೋತಿ.

ಸುಂದರ– ಅಣ್ಣಾ, ಈ ಮನೆಯೂ ಕೂಡ ಜ್ಯೋತಿಯದೆ, ಇಲ್ನೋಡಣ್ಣಾ ಅತ್ತಿಗೆ ರವಿಯ ಮುಖವನ್ನೊಮ್ಮೆ ನೋಡು, ನಾನು.. ನಿನ್ನ ತಮ್ಮ ಸುಂದರ.

ಶಂಕರ– ಹಾಂ ನನ್ನ ಸುಂದರಾ.

ಲಕ್ಷ್ಮಿ– ಇಲ್ನೋಡ್ರಿ ನಾನ್ರಿ ನಿಮ್ಮ ಹೆಣ್ತಿ ಲಕ್ಷ್ಮಿ ಹೀಗೇಗೆ ಮಾಡ್ತೀರ್ರಿ ಮಾತಾಡ್ರಿ (ಕೈ ಹಿಡಿದು ಅಲುಗಾಡಿಸಲು) ಇದು ನಿಮ್ಮ ಮನೆ.

ಶಂಕರ– ಹಾಂ ಅಂದರೆ ನಾನು.. ನನ್ನ ಮನೆಗೆ ಬಂದಿರುವನೇನು?

ಲಕ್ಷ್ಮಿ– ಹೌದ್ರಿ

ಶಂಕರ– ಹಾಗಾದರೆ ಜ್ಯೋತಿ.

ಸುಂದರ– ಜ್ಯೋತಿ ನಮ್ಮನ್ನೆಲ್ಲಾ ಬಿಟ್ಟು ಹೋದಳಣ್ಣ.

ಶಂಕರ– ಅಂದರೆ ಅವಳು ಸತ್ತು ಹೋದಳೇನು?

ಸುಂದರ– ಹೌದು ತಾನಾಗಿಯೇ ಮನನೊಂದು,ಪಶ್ಚಾತಾಪ ಪಟ್ಟು ಆತ್ಮಹತ್ಯೆಯನ್ನು ಮಾಡಿಕೊಂಡಳು.

ಶಂಕರ– ಅಯ್ಯೋ ಜ್ಯೋತಿ.

ಲಕ್ಷ್ಮಿ– ತನ್ನೆಲ್ಲಾ ಆಸ್ತಿಯನ್ನು ರವಿಗೆ ಮಾಡಿಸಿ. ಅಸು ನೀಗಿದಳು (ಅಷ್ಟರಲ್ಲಿ ಭಿಕ್ಷುಕ ದಾಸಯ್ಯ ಏಕದಾರಿ ನುಡಿಸುತ್ತ ಬರುವನು).

ಭಿಕ್ಷುಕ– ತೂಗಾತಾದ ನೋಡ ಜೋಕಾಲಿ ಸದ್ಗುರುವಿನ ದಯದಿಂದ (ಸುಂದರನನ್ನು ನೋಡಿ, ಹಾಡನ್ನು ಮೊಟಕುಗೊಳಿಸಿ ಹಿಂತಿರುಗುವಷ್ಟರಲ್ಲಿ).

ಸುಂದರ– ನಿಲ್ಲು ತಾತಾ ಹಾಡು ಅರ್ಧಕ್ಕೆ ನಿಲ್ಲಿಸಿದೆಯೇಕೆ? ಈ ಹಿಂದೆ ಬಡತನದ ಬೇಗೆ ತಾಳದೆ ಬಾಯಿಗೆ ಬಂದದ್ದು ಅಂದೆ. ನನ್ನದು ಮಹಾ ಪರಾಧವಾಯ್ತು. ನನ್ನ ತಪ್ಪನ್ನು ನಾನರಿತುಕೊಂಡೆ ಸದ್ಗುರುವಿನ ಕೃಪಾ ಕಟಾಕ್ಷದಿಂದ ಇಂದು ಈ ಮಟ್ಟವನ್ನು ತಲುಪಿದ್ದೇವೆ. ಹಾಡು ತಾತಾ

ಭಿಕ್ಷುಕ– ಆಗಲಿ ನನ್ನಪ್ಪಾ ಎಲ್ಲಾ ಅವನ ದಯೆತೂಗುತಾದ ನೋಡು ಜೋಕಾಲಿ ಸದ್ಗುರುವಿನ ದಯವಿಂದ.ತೂಗುತಾದ ನೋಡ ಜೋಕಾಲಿನಾದ ಬ್ರಹ್ಮ ನಂದದಿಂದ (ಈ ಹಾಡನ್ನು ಸಂಪೂರ್ಣವಾಗಿ ಹಾಡಬೇಕು).

ಸುಂದರ– ತಗೋ ತಾತಾ (ನೂರು ರೂಪಾಯಿ ನೋಟೊಂದನ್ನು ಕೊಡಲು ಹೋಗುವನು)

ಭಿಕ್ಷುಕ– ಇದೇನಪ್ಪಾ ಹಣ ಕೊಡುವೆ, ಬೇಡ ತಂದೇ ಬೇಡಪ್ಪಾ, ನನಗೆ ಒಂದು ಹಿಡಿ ಅನ್ನ ಹಾಕು. ಈ ಭವಬಂಧನವನ್ನು ಕಡಿದುಕೊಂಡ ನನಗೆ ಮತ್ತೇಕೆ ಕಾಂಚಣದ ಆಶೆ, ತಾಮ್ರದ ದುಡ್ಡು ತಾಯಿ ಮಕ್ಕಳನ್ನು ಅಗಲಸ್ತೈತಿ ಅಂತ ಹಿರೇರು ಹೇಳ್ಯಾರಪಾ, ಬ್ಯಾಡಪ್ಪಾ ಜಗತ್ತಿನಲ್ಲಿ ಎಲ್ಲಾ ಸಹವಾಸಕ್ಕಿಂತಲೂ ದುಡ್ಡಿನ ಸಹವಾಸ ಬಾಳ ಕೆಟ್ಟದು, ಅದಕ್ಕಾಗೇ ಈ ಹಣಕ್ಕೆ ಚೇಳು ಅಂತ ಕರದ್ರಪಾ. ನಮ್ಮ ಅಥಣಿ ಶಿವಯೋಗಿಗಳು, ಸಜ್ಜಲಗುಡ್ಡದ ಅಮ್ಮನವರು, ಸೊಲ್ಲಾಪುರದ ರುದ್ರ ತಾಯಿಯವರು ನನಗ ಒಂದು ಹಿಡಿ ಅನ್ನ ಹಾಕು, ಅಷ್ಟೇ ಸಾಕು

ಲಕ್ಷ್ಮಿ– ಆಗಲಿ ತರುವೆ ಸ್ವಲ್ಪ ನಿಲ್ಲಪ್ಪಾ (ಒಳಗೆ ಹೋಗಿ ಅನ್ನ ತಂದು ನೀಡುವಳು)

ಬಿಕ್ಷುಕ– ಅನ್ನಪೂರ್ಣೆಯ ಅವತಾರವೇ ನೀನು ತಾಯೀ ಪೂಜ್ಯ ಸದ್ಗುರು ಗುಡದೂರ ದೊಡ್ಡ ಬಸವಾರ್ಯ ಶರಣರು ಸದಾ ನಿಮಗೆ ಒಳ್ಳೆಯದನ್ನು ಮಾಡಲಿ (ಹೋಗುವನು).

ಶಂಕರ– ಹೆಣ್ಣು ಮನಕುಲದೊಂದು ಪುಣ್ಯದಾ ಬನದಲ್ಲಿ ಕಲ್ಪಲತೆ ಅರಳಿಸಿದ ಮಧುರ ಹೂ, ಅನ್ನೋ ಕವಿ ಮಾತನ್ನು ಮನಗಂಡೆ, ಪತಿಯೇ ಸರ್ವಸ್ವವೆಂದು ತಿಳಿದ ಲಕ್ಷ್ಮಿ ನನ್ನವಳು ನಿಜ, ಆದರೆ ನಾನವಳಿಗೆ ತಕ್ಕ ಪತಿಯಾಗಲಿಲ್ಲ ನನ್ನ ಪ್ರೀತಿಸಿದವಳು ಎಂದು ಕೊಂಡಿದ್ದ ಜ್ಯೋತಿ ನನ್ನ ಪ್ರೀತಿಸಲೇ ಇಲ್ಲ.

ಸುಂದರ– ನಿಜ ಅಣ್ಣಾ ಅತ್ತಿಗೆಮ್ಮನಿನಗಾಗಿ ಜೀವತೇದಳು, ದ್ವೇಷಾ ಭಾವನೆ ಹೊಂದಿದ ಜ್ಯೋತಿಯ ತ್ಯಾಗವನ್ನು ಕಡೆಗಣಿಸುವಂತಿಲ್ಲ.

ಶಂಕರ– ಕೊನೆಗೆ ಈ ನಮ್ಮ ಸಂಸಾರ ನಾಟಕವನ್ನು ಶುಭ–ಮಂಗಳಗೊಳಿಸಿದ ಗುಡದೂರ ಗುರುವರ್ಯರನ್ನು ಸ್ಮರಿಸೋಣ.

ಲಕ್ಷ್ಮಿ– ಹಾಗೆಯೇ ಮಹಾಮಾತೆ ಸಜ್ಜಲ ಶ್ರೀಯನ್ನೂ ಸ್ಮರಿಸೋಣ.

===***====***===

ಜಗನ್ಮಾತೆ ಸಜ್ಜಲಶ್ರೀ ಪೊರೆಯಲಿ

೭

ಚಿನ್ನದಂಥ ಅತ್ತಿಗೆ

– ಎಸ್.ಎನ್. ದಂಡಿನಕುಮಾರ

ಎಸ್.ಎನ್. ದಂಡಿನ ಕುಮಾರ

ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಹೂಡದಳ್ಳಿಯಲ್ಲಿ ೨೦.೧೨.೧೯೬೬ರಲ್ಲಿ ದಂಡಿನಕುಮಾರ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿ ಮುಗಿಸಿ, ಕಲಬುರ್ಗಿ ಶರಣ ಬಸವೇಶ್ವರ ಮಹಾವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪಡೆದರು. ಮುಂದೆ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದರು.

ಹೈಸ್ಕೂಲ ವಿದ್ಯಾರ್ಥಿಯಾಗಿದ್ದಾಗಲೇ ಸಾಹಿತ್ಯದ ಬಗೆಗೆ ಆಸಕ್ತಿ ಬೆಳೆಸಿಕೊಂಡಿದ್ದ ದಂಡಿನಕುಮಾರ ಅವರಿಗೆ, ಈ ಪ್ರದೇಶದ ಪ್ರಸಿದ್ಧ ನಾಟಕಕಾರರಾದ ಎಲ್.ಬಿ.ಕೆ. ಅಲ್ದಾಳ ಹಾಗೂ ಕೋಡ್ಲಿ ಕಂಟೆಪ್ಪ ಮಾಸ್ತರರ ಮಾರ್ಗದರ್ಶನ ಲಭಿಸಿತು. ಹೀಗಾಗಿ ತಾವೂ ನಾಟಕ ರಚನೆಗೆ ತೊಡಗಿದರು. ತಾಳಿ ತಂದ ತೊಂದರೆ, ಬಂಗಾರದ ಬಳ್ಳಿ, ಲಂಚ ನಿರ್ಮೂಲನೆ, ರಣಹದ್ದುಗಳ ರಾಸಲೀಲೆ, ಚಿನ್ನದಂಥ ಅತ್ತಿಗೆ, ಛಲತೀರಿಸಿದ ಗರತಿ ಹೀಗೆ ಹತ್ತಾರು ನಾಟಕಗಳು ಇವರಿಂದ ರಚನೆಗೊಂಡವು. ಇವರ ನಾಟಕಗಳು ಹುಬ್ಬಳ್ಳಿಯ ಗಜೇಂದ್ರ ಪ್ರಕಾಶನದಿಂದ ಪ್ರಕಟಗೊಂಡವು. ಗ್ರಾಮೀಣ ಪ್ರದೇಶಗಳ ನಾಟ್ಯ ಸಂಘಗಳಲ್ಲಿ ಈ ನಾಟಕಗಳು ಪ್ರಯೋಗವಾದವು. ವೃತ್ತಿಯಿಂದ ಪುಸ್ತಕ ವ್ಯಾಪಾರಿಗಳಾದ ದಂಡಿನಕುಮಾರ ಅವರು ಪ್ರವೃತ್ತಿಯಿಂದ ನಟ–ನಾಟಕಕಾರರಾಗಿದ್ದಾರೆ. ಚಿಂಚೋಳಿ ತಾಲೂಕ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಗ್ರಾಮೀಣ ರಂಗಭೂಮಿಗೆ ಮಹತ್ವದ ಕೊಡುಗೆ ನೀಡಿರುವ ದಂಡಿನ ಕುಮಾರ ಅವರಿಗೆ ಅನೇಕ ಪ್ರಶಸ್ತಿ–ಪುರಸ್ಕಾರಗಳು ಲಭಿಸಿವೆ.

ಶ್ರೀ. ಎಸ್.ಎನ್. ದಂಡಿನಕುಮಾರ ಚಿಂಚೋಳಿ ಕೃತ...

ಪಾತ್ರ – ಪರಿಚಯ

ಪುರುಷ ಪಾತ್ರಗಳು

ಬಸವಂತ : ಶ್ರೀಮಂತ, ಆದರ್ಶ ವ್ಯಕ್ತಿ

ಶೇಖರ : ಬಸವಂತನ ತಮ್ಮ

ಭರತ್ : ಬಸವಂತನ ತಮ್ಮ ಕಲಿತವ ಪಿ.ಎಸ್.ಐ

ರಾವಣಗೌಡ : ಪುಢಾರಿ ವ್ಯಕ್ತಿ

ನಾಗೇಂದ್ರ : ಗೌಡನ ಸೋದರಳಿಯ ಖಳನಾಯಕ

ಹನುಮಾ : ಗೌಡನ ಬಲಗೈ ಭಂಟ ನಂಬಿಗಸ್ಥ ಆಳು

ಕಿತಾಪತಿ : ಗೌಡನ ಕಾರಕೂನ (ಹಾಸ್ಯ)

ಸತ್ಯಣ್ಣ : ಪೋಲಿಸ್ (ಹಾಸ್ಯ)

ರಂಗಣ್ಣ : ಆರ್.ಎಂ.ಪಿ. ಡಾಕ್ಟರ್ (ಹಾಸ್ಯ)

ಸ್ತ್ರೀ ಪಾತ್ರಗಳು

ಸಾವಿತ್ರಿ : ಬಸವಂತನ

ರಾಗಿಣಿ : ಗೌಡನ ಮಗಳು ಕಲಿತವಳು

ಚಂಪಾಕಲಿ : ಕಿತಾಪತಿಯ ಮಗಳು (ಹಾಸ್ಯ)

ಇನ್ನುಳಿದ ಚಿಕ್ಕ ಪಾತ್ರಗಳು : ನ್ಯಾಯಾಧೀಶ, ವಕೀಲ, ಒಬ್ಬ, ಇನ್ನೊಬ್ಬ, ಪುಟ್ಟ ಪಾತ್ರಗಳು

ಪ್ರವೇಶ ೧

ಬಸವಂತನ ಮನೆ

(ಸಾವಿತ್ರಿ, ದೇವರ ಸ್ತೋತ್ರ ಹಾಡಿ ಪೂಜಿಸುತ್ತಿರುವಳು ಬಸವಂತ. ಶೇಖರ, ಭರತ, ಒಂದೆಡೆ ನಿಂತಿರುವರು. ಪೂಜೆ ಸ್ತೋತ್ರದ ನಂತರ).

ಸಾವಿತ್ರಿ– ದೇವಾ ! ನಮ್ಮ ಮನೆತನಕ್ಕೆ ಒಳ್ಳೆಯದನ್ನು ಮಾಡು ದೇವರಂಥ ಗಂಡ, ಅತ್ತಿಗೆ ಎಂದರೆ ತಾಯಿಗಿಂತ ಹೆಚ್ಚಾಗಿ ಪ್ರೀತಿಸುವ ಮೈದುನರನ್ನು ದಯಪಾಲಿಸಿದಿ ನಾ ನಿನ್ನಲ್ಲಿ ಏನು ಬೇಡಲಿ ದೇವಾ. ಹಾಲಿನಂತಿರುವ ನಮ್ಮ ಸಂಸಾರ ಹೀಗೆಯೇ ನಗು ನಗುತ್ತಲೇ ಇರುವಂತೆ ಆಶೀರ್ವದಿಸು ತಂದೆ, (ನಮಿಸಿ) ರ್ರೀ ದೇವರಿಗೆ ನಮಸ್ಕಾರ ಮಾಡಿರಿ (ಎಲ್ಲರೂ ಒಬ್ಬೊಬ್ಬರಾಗಿ ನಮಸ್ಕರಿಸಿ ನಿಲ್ಲುವರು) ರ್ರೀ ಪ್ರಸಾದ ಸ್ವೀಕರಿಸಿರಿ. (ಪ್ರಸಾದ ಕೊಟ್ಟು ನಮಸ್ಕರಿಸುವಳು) ಭರತ ಪ್ರಸಾದ (ಪ್ರಸಾದ ಕೊಡುವಳು, ಭರತ ಸ್ವೀಕರಿಸಿ ನಮಸ್ಕರಿಸುವಾಗ) ಥೇ ಥೇ ಇದೆಲ್ಲ ಏಕಪ್ಪ, ದೇವರಿಗೆ ನಮಸ್ಕರಿಸಿದ ಮೇಲೆ ಮುಗಿದ್ಹೋಯ್ತು.

ಭರತ್– ಅತ್ತಿಗೆ ! ನೀವೇ ನನ್ನ ಪಾಲಿನ ದೇವರಮ್ಮ ನೀನು ಈ ಮನೆಯ ನಂದಾದೀಪ ನನಗೆ ದೇವರಿಗಿಂತ ನೀನು ಮುಖ್ಯವಮ್ಮ. ಗುಡಿಯಲ್ಲಿ ಕಲ್ಲಾಗಿ ಕುಳಿತ ದೇವರು ನನಗೆ ಬೇಕಾಗಿಲ್ಲ.

ಸಾವಿತ್ರಿ– ಅತ್ತಿಗೆ ಎಂಬ ಅಭಿಮಾನದಲ್ಲಿ ದೇವರಿಗೆ ಹಾಗೆಲ್ಲ ಮಾತಾಡಬಾರದಪ್ಪ ಶೇಖರ, ಪ್ರಸಾದ... (ಕೊಡುವಳು, ಅಣ್ಣಾ, ಅತ್ತಿಗೆಗೆ ನಮಸ್ಕರಿಸುವನು)

ಶೇಖರ– ಹೆತ್ತ ತಾಯಿ ಸತ್ತು ಹೋದ ನೆನಪು ಉಳಿಯದಷ್ಟು ಪ್ರೀತಿ ಧಾರೆಯೆರೆದ ನೀನು ನಮಗೆ ಮಹಾ ತಾಯಿಯಮ್ಮ ರಾಮನಂಥ ಅಣ್ಣ, ಸೀತೆಯಂಥ ನೀನು, ಇಂಥ ಆದರ್ಶವಂತರಾದ ನಿಮ್ಮನ್ನು ಅಣ್ಣ–ಅತ್ತಿಗೆಯರನ್ನಾಗಿ ಪಡೆದ ನಾನೇ ಧನ್ಯ.

ಸಾವಿತ್ರಿ– ಶೇಖರ್ ನಮ್ಮನ್ನು ಹೊಗಳಿ ಅಟ್ಟಕ್ಕೇರಿಸಬೇಡಿ ನಾವೇನು ಜಗತ್ತಿನಲ್ಲಿ ಯಾರೂ ಮಾಡದ ಮಹಾತ್ಕಾರ್ಯ ಮಾಡುತ್ತಿಲ್ಲ. ನಮ್ಮ ಕರ್ತವ್ಯ ನಾವು ಮಾಡುತ್ತಿದ್ದೇವಷ್ಟೇ.

ಶೇಖರ– ಕಳೆದ ಮೂರು ವರ್ಷದಿಂದ ನಾನಿನ್ನ ಗುಣಬಲ್ಲೆ ಅತ್ತಿಗೆ, ನಮ್ಮನ್ನು ಎಷ್ಟು ಪ್ರೀತಿಯಿಂದ ನೋಡ್ತಿದ್ದಿಯಾ ಇನ್ನು ಅಣ್ಣನೂ ಸಾಕ್ಷಾತ್ ಶ್ರೀರಾಮಚಂದ್ರ, ಒಂದು ದಿವಸವೂ ನಮಗೆ ಬೈಯ್ದದ್ದೇ ಇಲ್ಲ. ನಾವು ಮಾಡುವ ಎಲ್ಲ ಕೆಲಸವೂ ನಿಮಗೆ ಸಂತೋಷವೇ ಕೊಡುತ್ತಿದೆ.

ಭರತ್– ಹೌದತ್ತಿಗೆ ಶೇಖರಣ್ಣ ಹೇಳುವುದರಲ್ಲಿ ಸತ್ಯ ಇದೆ. ಸೊಸೆಯಾಗಿ ಬಂದ ಮೂರು ದಿನದಲ್ಲಿಯೇ ಮನೆ ಒಡೆಯುವ ನಾರಿಯರು ಎಷ್ಟೋ ಜನರಿದ್ದಾರೆ, ಈ ಸಮಾಜದಲ್ಲಿ ಅತ್ತೆಯನ್ನು ಬೀದಿಗೆ ನೂಕಿ ಮಾವನನ್ನು ನಾಯಿಗಿಮತ ಕಡೆ ಮಾಡಿ ಕಾಣುವ ಹೆಣ್ಣುಗಳನೇಕರಿದ್ದಾರೆ ಈ ಸಮಾಜದಲ್ಲಿ ನಾವು ನಮ್ಮವರು ಎನ್ನುವ ಭಾವನೆ ಮರೆತು ಎಲ್ಲರನ್ನು ಕಡೆಗಣಿಸುತ್ತಾರೆ. ಆದರೆ ನೀವು ಮೈದುನರನ್ನು ಹೆತ್ತ ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸುತ್ತಿರುವಿರಲ್ಲ, ನಾವು ಯಾವುದೋ ಜನ್ಮದಲ್ಲಿ ಅದೆಂಥ ಪುಣ್ಯ ಮಾಡಿದೆವೋ ಏನೋ.

ಬಸವಂತ– ಕೇಳಿದೆಯಾ ಸಾವಿತ್ರಿ ನನ್ನ ತಮ್ಮಂದಿರು ಆಡಿದ ಮಾತುಗಳನ್ನು ನಿನ್ನನ್ನು ದೇವತೆಗಿಂತ ಹೆಚ್ಚಾಗಿ ಪ್ರೀತಿಸುತ್ತಾರೆ. ಮನೆಗೆ ಕಾಲಿಟ್ಟ ಹೊಸ ಹೆಣ್ಣಿಗೆ ಇವಳ್ಯಾವಳೋ ಎನ್ನುವ ಭಾವನೆಯಿಂದ ನೋಡುವ ಜನರೇ ಹೆಚ್ಚಾಗಿ ತುಂಬಿರುವ ಈ ಸಮಾಜದಲ್ಲಿ ಇಂಥವರು ಸಿಗುವುದು ಅಪರೂಪ. ಇವರನ್ನು ಹೆತ್ತ ಮಕ್ಕಳಂತೆ ಪ್ರೀತಿ ಮಾಡುವುದು ನಿನ್ನ ಧರ್ಮವಾಗಿದೆ ಸಾವಿತ್ರಿ.

ಸಾವಿತ್ರಿ– ಈ ಮೈದುನರನ್ನು ಹೆತ್ತ ಮಕ್ಕಳಂತೆ ಅಲ್ಲ ಅದಕ್ಕಿಂತ ಹೆಚ್ಚಾಗಿ ಪ್ರೀತಿಸ್ತೀನಿ. ಅವರು ಒಂದು ಹೊತ್ತು ಊಟ ಮಾಡದಿದ್ರೆ ನನ್ನ ಹೊಟ್ಟೆ ತಳಮಳಗುಟ್ಟುತ್ತದೆ. ಅವರ ಅಂಗಾಲಿಗೆ ಹರಳು ನೆಟ್ಟರ ನನ್ನ ಹೃದಯಕ್ಕೆ ನೋವಾಗುತ್ತದೆ.

ಬಸವಂತ– ಆಂ.... ಶೇಖರ ನಾನೊಂದಿಷ್ಟು ಹೊಲದ ಕಡೆಗೆ ಹೋಗಿ ಬರ್ತೇನೆ ಇವತ್ತು ಜೋಳಡ ರಾಶಿ ಇದೆ. ಕೂಲಿ ಆಳುಗಳು ದಾರಿ ನೋಡುತ್ತಿರಬೇಕು.

ಶೇಖರ– ಏನಣ್ಣ ! ಹೊಲಕೆ, ಹೋಗು ಎಂದು ನನಗೆ ಹೇಳಬಾರದೇ? ಇವತ್ತಿಗೆ ನಿಮ್ಮ ಮದುವೆಯಾಗಿ ಮೂರು ವರ್ಷವಾಯ್ತು. ಇವತ್ತು ಒಂದಿನವಾದರೂ ಮನೆಯಲ್ಲಿ ಹಾಯಾಗಿರಬಾರಿದೇ? ನೀ ಮನೆಯಲ್ಲೇ ಇರಣ್ಣ ನಾ ಹೋಗ್ತೀನಿ.

ಬಸವಂತ– ಕಾಯಕವೇ ಕೈಲಾಸ ಎಂದು ಬಸವಣ್ಣನವರು ಹೇಳಿಲ್ಲವೇ ಮದುವೆ ದಿನ ಹಬ್ಬ ಹರಿದಿನ ಎಂದು ನೆಪವೊಡ್ಡಿ ಮನೆಯಲ್ಲಿ ಕುಳಿತರೆ ಹೇಗೆ? ಶೇಖರ, ನೀನು ಕೂಡಾ ಚೆನ್ನಾಗಿ ಓದಿ ಮುಂದೆ ಬರಬೇಕೆಂಬ ಹಂಬಲ ನನ್ನದಾಗಿತ್ತು, ಆದರೆ ಓದು ಅರ್ಧಕ್ಕೆ ನಿಲ್ಲಿಸಿ ಒಕ್ಕಲುತನಕ್ಕೆ ನಿಂತಿರುವಿಯಲ್ಲ.

ಶೇಖರ– ಏನು ಮಾಡ್ಲಣ್ಣ, ಯಾಕೋ ಏನೋ ವಿದ್ಯೆ ನನ್ನ ತಲೆಗೆ ಹತ್ತಲಿಲ್ಲ ನೀನೇ ನೋಡ್ದೆಲ್ಲ ಎಸ್.ಎಸ್.ಎಲ್.ಸಿ. ಮೂರು ಬಾರಿ ಫೇಲಾದೆ, ಮತ್ತೆ ಪರೀಕ್ಷೆ ಕಟ್ಟಲಿಲ್ಲ ಪಾಸಾಗಲಿಲ್ಲ. ಏನಾದರಾಗಲ್ಲಣ್ಣ ನಮ್ಮೂರಲ್ಲಿನ ಬಹಳ ಜನರಂತೆ ನಾ ಉಡಾಳನಲ್ಲಣ್ಣ.

ಬಸವಂತ– ಛೇ ಛೇ ನಾ ಹಾಗಂದ್ನೇನಪ್ಪ ನನ್ನ ತಮ್ಮ ಚೆನ್ನಾಗಿ ಕಲಿತು ಯಾವುದಾದರೊಂದು ಒಳ್ಳೆಯ ನೌಕ್ರಿ ಮಾಡಬೇಕೆಂದು ಬಯಸಿದ್ದೆ ಅಷ್ಟೇ.

ಶೇಖರ– ಎಲ್ಲರೂ ಸರಕಾರಿ ನೌಕರಿಯೇ ಬಯಸಿದರೆ ಹೊಲದ ಕೆಲಸ ಯಾರಣ್ಣ ಮಾಡ್ಬೇಕು. ನೀನೇ ಆಗಾಗ ಹೇಳ್ತಿಯಲ್ಲಣ್ಣ. ರೈತ ದೇಶದ ಬೆನ್ನೆಲಬು ಎಂದು ಜಗತ್ತಿಗೆ ಅನ್ನ ಕೊಡುವ ರೈತನ ಕಾಯಕ ಸಣ್ಣದಲ್ಲಣ್ಣ.

ಬಸವಂತ– ಹೀಗೇ ಮಾತಾಡಿಯೇ ನನ್ನನ್ನು ಕಟ್ಟಿ ಹಾಕ್ತೀರಿ, ಆಂ... ಭರತ ನೀನಾದ್ರೂ ಚೆನ್ನಾಗಿ ಓದಬೇಕು.

ಭರತ– ಆಯಿತಣ್ಣ, ಒಳ್ಳೇ ರೀತಿಯಿಂದ ಓದಿ ಈ ಮನೆಗೆ ಈ ಊರಿಗೆ ಈ ನಾಡಿಗೆ ಕೀರ್ತಿ ತರತೇನಣ್ಣ, ಅಣ್ಣಾ ನಾನು ಇವತ್ತೆ ಹೊರಡಬೇಕಾಗಿದೆ.

ಶೇಖರ– ಏ ಭರತ ! ಊರಿಗೆ ಹೋಗಲು ಆಗಲೇ ಗಡಬಡಿಸ್ತಿಯಲ್ಲ ನಡೆ ನಿನಗೆ ಬಸ್‌ಸ್ಟ್ಯಾಂಡಿನ ತನಕ ಕಳಿಸಿ ನಾ ಹೊಲಕ್ಕೆ ಹೋಗ್ತೀನಿ.

ಭರತ– ಏನಣ್ಣ, ನೀನು ನನಗೆ ಕಳಿಸಲು ಬರ್ತೀಯಾ? ಬೇಡಣ್ಣಾ ನಾನೆಲ್ಲ

ಹೋಗ್ತೀನಿ, ಮುಂದಿನ ತಿಂಗಳೇ ಎಂ, ಎ ಕೊನೆಯ ವರ್ಷದ ಪರೀಕ್ಷೆ ಇದೆ ಸಾಕಷ್ಟು ಓದಿಕೊಳ್ಳಬೇಕು ನಾನು ಬರ್ತೀನಣ್ಣ.

ಬಸವಂತ– ಆಯಿತಪ್ಪ, ಮನೆ ಕಡೆ ಚಿಂತಿ ಮಾಡಬೇಡಾ ಹಣಕ್ಕಾಗಿ ಯೋಚಿಸಬೇಡ. ನೀನು ಚೆನ್ನಾಗಿ ಓದಿ ನಮ್ಮ ಮನೆಯ ಕೀರ್ತಿ ಬೆಳಗಿಸಬೇಕು.

ಭರತ– ಆಯಿತಣ್ಣ, ಬರ್ತಿನತ್ತಿಗೆ.

ಸಾವಿತ್ರ– ಹೋಗಿ ಬಾರಪ್ಪ. ಆಗಾಗ ಫೋನ ಮಾಡ್ತಾ ಇರು, (ಹೋಗುವನು)

ಶೇಖರ– ನಾನು ಹೊಲಕ್ಕೆ ಹೋಗ್ತೀನಣ್ಣ, ನೀನು ಮಾತ್ರ ಇವತ್ತು ಹೊಲ ನೆಲದ ವಿಚಾರ ಮಾಡಬೇಡ ಅತ್ತಿಗೆ, ಅಣ್ಣನನ್ನು ಹೊರಗೆ ಬಿಡಬೇಡ ಮತ್ತೆ.

ಸಾವಿತ್ರಿ– (ನಗುತ್ತ) ಬಲು ತುಂಟ ನೀನು ನಾನೇನು ಅವರನ್ನೆ ಹಿಡಿದುಕೊಂಡು ಕೂಡ್ಲೇ.

ಶೇಖರ– ಹಾಗಲ್ಲ ಅತ್ತಿಗೆ, ಈಗ ಬರ್ತೀನಿ ಎಂದು ಹೊಲಕ್ಕೆ ಹೋದರೆ ರಾತ್ರಿಯಾದರೂ ಬರುವುದಿಲ್ಲ ಅದಕ್ಕೆಂದೆ ಬರ್ತೀನಿ, (ಹೋಗುವನು)

ಬಸವಂತ– ನೋಡಿದೆಯಾ ಸಾವಿತ್ರಿ? ಎಂಥ ಅಪರೂಪದವರಿದ್ದಾರೆ ನನ್ನ ತಮ್ಮಂದಿರು. ಸಾಕಷ್ಟು ವಿದ್ಯೆ ಕಲಿತರೂ ಅಣ್ಣ–ಅತ್ತಿಗೆಯರನ್ನು ದೇವರಂತೆ ಕಾಣುವ ಸಣ್ಣ ತಮ್ಮ ಇನ್ನು ಈ ಶೇಖರನೋ ನಮ್ಮನ್ನು ಶ್ರೀರಾಮ ಸೀತೆಯರಂತೆ ನೋಡ್ತಾನೆ.

ಸಾವಿತ್ರಿ– ಇದೇ ರೀತಿ ನಮ್ಮ ಸಂಸಾರ ಕೊನೆಯವರೆಗೂ ಇರುವಂತೆ ಅನುಗ್ರಹಿಸು ಎಂದೇ ನಾನು ಆ ದೇವರಲ್ಲಿ ಬೇಡಿಕೊಳ್ತೀನಿ.

ಬಸವಂತ– ಆಯ್ತು ಮಾರಾಯ್ತಿ ನಿನ್ನ ಆ ಪ್ರಾರ್ಥನೆಯಲ್ಲಿ ಮದುವೆಯಾಗಿ ಮೂರು ವರ್ಷ ಕಳೆದರೂ ಈ ಮನೆಯ ಭಾವೀ ಜ್ಯೋತಿಯ ನೆನಪೇ ಮಾಡುತ್ತಿಲ್ಲವಲ್ಲ.

ಸಾವಿತ್ರಿ– ರ್‍ರೀ ನೀವು ಮೂರು ಜನರೇ ಈ ಮನೆಯ ಜ್ಯೋತಿಗಳು ಮುದ್ದು ಮೈದುನರೇ ನನ್ನ ಪ್ರೀತಿಯ ಮಕ್ಕಳು, ಹೀಗಿರುವಾಗ ನಾನು ಮಕ್ಕಳ ಬಗ್ಗೆ ಚಿಂತಿಸುವುದಿಲ್ಲ. ಹಾಗೊಂದು ವೇಳೆ ನಮಗೆ

ಮಕ್ಕಳಾದರೆ ಎಲ್ಲಿ ಮೈದುನರ ಮೇಲಿನ ನನ್ನ ಪ್ರೀತಿ ಕಡಿಮೆಯಾಗುತ್ತದೋ ಎನಿಸುತ್ತದೆ,

ಬಸವಂತ– ಬಲು ಜಾಣೆ ಕಣೆ ನೀನು ಈಗ ನನ್ನ ತಮ್ಮ ಏನು ಹೇಳಿ ಹೋದ ಗೊತ್ತಾ?

ಸಾವಿತ್ರಿ– ಏನು ಹೇಳ್ದ?

ಬಸವಂತ– ಇಂದು ನಮ್ಮ ಮದುವೆಯಾದ ಮೂರನೇ ವರ್ಷದ ದಿನ ಇವತ್ತು ನಾವು ಹಾಯಾಗಿ ಮನೆಯಲ್ಲೇ ಇರಬೇಕು ಎಂದು,

ಸಾವಿತ್ರಿ– ಹೌದು ಹೇಳಿದ ಅದಕ್ಕೇನೀಗ.

ಬಸವಂತ– ಅದಕ್ಕೇನೀಗ ಎಂದು ಕೇಳಿದರೆ ಏನು ಹೇಳಲಿ ಬಾ ಆನಂದದ ಈ ದಿನ ಹಾಡಿ ನಲಿಯೋಣ, (ಸಂತೋಷದಿಂದ ಹಾಡಿ ನಲಿದಾಡಿ ಒಳಗೆ ಹೋಗುವರು) ತೆರೆ......

===***====***===

ಪ್ರವೇಶ–೨

ರಸ್ತಾ ಸೀನು

ಕಿತಾಪತಿ– (ಬರುತ್ತಾ) ಛೇ.... ಛೇ..... ಛೇ.... ಕಾಲ ಕೆಟ್ಟೋಯ್ತರಿ ಅಲ್ಲ, ಊರಾಗಿರೋ ಗೇಣಾ ಗೇಣಾ ಪಾರಗೋಳೆಲ್ಲ ಗುಟಖಾ ತಿಲ್ಲಾಕ ಮಟಕಾ ಆಡ್ಲಾಕ ಚ್ಯಾಲು ಮಾಡ್ಯಾವ, ಅಂದಃಮ್ಯಾಲ ಊರ ಹ್ಯಾಂಗ್ ಉದ್ಧಾರ ಆಗ್ತಾದ ಹೇಳ್ರಿ, ಕಿಸೇದಾಗ ೧೦ ರೂ. ಇಲ್ಲ ದುಡದೇನಂದ್ರ ಮೈ ಬಗ್ಗಾಂಗಿಲ್ಲ ಆದ್ರೂ ಚಟಗಳಂತೂ ವಿಪರೀತ ಅಗ್ಯಾವ ಇಂಥ ಜನ ಹೆಚ್ಚಾಗ್ಯಾದಂತ್ಲೇಳಿ ಮಳಿ, ಚಳಿನೂ ಅಷ್ಟಕ್ಕಷ್ಟ ಆಗ್ಲಿಕತ್ಯಾದ್ರಿ ನಮ್ಮ ಕಾಲಕ್ಕ ಒಬ್ಬರ ಮಾತು ಒಬ್ಬರ ಕೇಳತಿದ್ರು, ಈಗ ಯಾರ ಮಾತು ಯಾರೂ ಕೇಳಾಂಗಿಲ್ಲ, ಏನೇ ಆಗಲಿ ಕಾಲಾಯ ತಸ್ಮೈ ನಮಃ ಅಂತ, ಕಾಲ ಹೆಂಗೈತಿ ಹಂಗ ಹೊಂದಿಕೊಂಡು ಹೋದ್ರಾಯ್ತು (ಗಡಿಯಾರ ನೋಡಿಕೊಂಡು) ಹೊತ್ತು ಹೊಂಡ್ರದ್ರೊಳಗೆ ಹಾಲು ಮಾರ್ಲಿಕ್ಕಂತ ಹೋದ ನನ್ನ ಮಗಳು ಚಂಪಾಕಲಿ ಇನ್ನೂ ಯಾಕ ಬರ್ಲಿಲ್ಲ, ಆಂ.... ಅಲ್ಲಿ ಹೊಂಟಾಳ ಬರ್ಲಿ.....ಬರ್ಲಿ.

ಚಂಪಾಕಲಿ– (ಬರುತ್ತಾ) ಹಾಲು ಬೇಕೇನ್ರಿ ಹಾಲು ಗಟ್ಟಿಯಾದ ಹಾಲು ನೀರು ಬೆರೆಸದ ಹಾಲು, ಭಾಳ ಸೋವಿ ಕೊಡ್ತೀವ್ರಿ ಹಾಲು ಬೇಕೇನ್ರಿ ಹಾಲು (ಅಪ್ಪನಿಗೆ ನೋಡಿ) ಯಪ್ಪಾ ನೀ ಯಾವಾಗ ಬಂದಿ.

ಕಿತಾಪತಿ– ಬಂದು ಭಾಳ ಹೊತ್ತಾಯ್ತವಾ ಹೊತ್ತು ಹೊಂಡ್ರದಾಗ ಹೋದಾಕಿ ಈಗ ಒಂಬತ್ತು ಬಡಿಲಾಕತ್ತಾದ ಇನ್ನೂ ಮಾರಿಲ್ಲೇನಿವಾ ನಿನ್ನ ಹಾಲು.

ಚಂಪಾಕಲಿ– ಯಪ್ಪಾ ! ಎಲ್ಲಾದರಾಗೂ ಕಾಂಪಿಟೇಶನ್ನಾಗಿ ಬಿಟ್ಟಾದ ಅದೇನೋ ಬ್ಯಾರೆ ಬ್ಯಾರೆ ರಾಜ್ಯದೋರೆಲ್ಲ ಬ್ಯಾರೆ ಬ್ಯಾರೆ ಹಾಲು ತಂದು ಮಾರ್ಲಿಕತ್ತ ಮ್ಯಾಲ ನಮ್ಮ ಸರಕಾರದ ಡೈರಿ ಹಾಲಿಗೆ ಬೆಲೆ ಇಲ್ಲಂತ, ಇನ್ನ ನನ್ನ ಹಾಲಿಗೆಲ್ಲಿ ಬೆಲೆ ಬರ್ತದ, ಹಂಡ-ಬಂಡ ಹಾಲ ಕುಡಿದ

ಮಂದಿಗೆ ನನ್ನ ಎಮ್ಮಿ ಹಾಲು ಎಲ್ಲಿ ರುಚಿ ಹತ್ತ್ತಾದ ಆದರೂ ನಾಕು ಮನಿ ಫಿಕ್ಸ್ ಮಾಡಿಕೊಂಡೀನಿ.

ಕಿತಾಪತಿ– ಹೌದವಾ ಹಾಲಂದ್ರ ಭಾಳ ಮಂದಿಗೆ ಅಲರ್ಜಿ ಅದ, ಅದೇ ಅಲ್ಕೋ ಹಾಲಂದ್ರ ನೋಡ್ರಿ ಮುಗಿಬಿದ್ದ ಕುಡಿತಾರ, ಈ ಹಾಲು ಮನಿ ಮನಿಗೆ ಒಯ್ದು ಕೊಟ್ರ ತಗೊಳ್ಳಂಗಿಲ್ಲ. ಅದೇ ಅಲ್ಕೋ ಹಾಲು ಊರ ಬಿಟ್ಟು ಮೈಲು ದೂರ ಇದ್ರನು ಕುಡದು ಬರ್ತಾರ.

ಚಂಪಾಕಲಿ– ಯಪ್ಪಾ ! ನನಗಂತೂ ಈ ವ್ಯಾಪಾರ ಸಾಕ್ ಸಾಕಾಗ್ಯಾದ, ನನ್ನ ಮದುವೆ ಮಾಡಿಬಿಡು ಹಾಯಾಗಿರ್ತೀನಿ.

ಕಿತಾಪತಿ– ಆಂ.... ಮದುವೇನಾ. ನಿನಗ್ಯಾವ ವಯಸ್ಸಾಗ್ಯಾದವಾ ಚೆಂದ ಎಮ್ಮಿ ಹಾಲು ಕುಡಿದೀದಿ ಮೈ ಕೈ ತುಂಬಿಕೊಂಡು ಬೆಳೆದಿದಿ ಅಷ್ಟೇ ಇನ್ನೂ ಭಾಳ ಸಣ್ಣಾಕೆವ್ವ ನೀನು.

ಚಂಪಾಕಲಿ– ಎಪ್ಪಾ, ನೀ ಹಿಂಗ ಹೇಳ್ಲಿಕತ್ತೆ ಹತ್ತು ವರ್ಷಾಯ್ತು. ನನ್ನ ವಾರಿಗೇರೆಲ್ಲ ಗಂಡನ ಮನಿಗೆ ಹೋಗಿ ಚೆಂದ ಬಾಳ್ವೆ ಮಾಡ್ಲಿಕತ್ಯಾರ ನನ್ನ ವಾರಿಗೇಕಿ ಆ ಸಂಗವ್ವ ಮೂರು ಮಕ್ಕಳ ತಾಯಿ ಆಗ್ಯಾಳ.

ಕಿತಾಪತಿ– ಅಂದ್ರ ಈಗ ನಿನ್ನ ವಯಸ್ಸು ಎಷ್ಟಾದಂತೆವಾ ಭಾಳಂದ್ರ ಎರಡು ಕಮ್ಮಿ ಇಪ್ಪತ್ತು ಇರಬಹುದು.

ಚಂಪಾಕಲಿ– ಈ ಮಾತು ನನಗೆ ಹತ್ತು ವರ್ಷದ ಹಿಂದೆ ಹೇಳಿದ್ದಿ ಆವಾಗಿನಿಂದ ಈವಾಗಿನತನಕ ಎರಡು ಕಮ್ಮಿ ಇಪ್ಪತ್ತಂತ ಹೇಳಿಕೊಂತನೆ ಹೊಂಟೀದಿ ಜರಾ ನನ್ನ ಮನಸ್ಸು ವಯಸ್ಸು ಅರ್ಥ ಮಾಡಿಕೋರೋ ಯಪ್ಪಾ.

ಕಿತಾಪತಿ– ಆಯ್ತವ್ವಾ ಈ ಸೀಜನದಾಗ ವಾಲಗ ಊದಿಸಿಬಿಡ್ತೀನಿ.

ಚಂಪಾಕಲಿ– ಬರೀ ವಾಲಗ ಊದಿಸ್ತಿಯೋ ಮದುವೆ ಮಾಡ್ತಿಯೋ.

ಕಿತಾಪತಿ– ಮದುವೆ ಅಂದ್ರ ಎಷ್ಟು ಅವಸರ ಅದ ಅಲ್ಲ ಈ ನನ್ನ ಮಗಳಿಗೆ.

ಚಂಪಾಕಲಿ– ಹೌದಪ್ಪ ನೀ ಸಂಜೀವಿಗೆ ದೌಡ ಬಂದು ಮಲಕೋ ಗೊತ್ತಾಗ್ತದ. ವಾರದಾಗ ಮೂರ ಬಾರಿ ಎಲ್ಲೆಲ್ಲೋ ಬಿದ್ದ ಬರ್ತೀ ನಿನಗ್ಯಾಂಗ ಗೊತ್ತಾಗ್ತದ ಮೊನ್ನೆ ಆ ಬಾಳಿಹಣ್ಣು ಮಾರಾಕಿ ಮನ್ಯಾಗ ಇದ್ದೆಂತಲ್ಲ ಯಾಕ?

ಕಿತಾಪತಿ– ನನ್ನಲ್ಲಿ ನೂರು ರೂ. ಕಡ ತಗೊಂಡಿದ್ಲವ್ವಾ ಕೇಳ್ಲಾಕಂತ ಹೋಗಿದ್ದೆ.

ಚಂಪಾಕಲಿ– ನೂರು ರೂ. ಕೇಳ್ಲಿಕ್ಕ ರಾತ್ರಿ ಒಂಬತ್ತಕ ಮನಿಗೆ ಹೋಗಿದ್ದಿ ಸುಳ್ಳು ಹೇಳ್ಲಿಕ್ಕನು ಒಂದು ಮಿತಿ ಇರ್ತದ ಇಂಥವು ಒಂದಲ್ಲ ಹತ್ತವ ನಿನ್ನ ಸುದ್ದಿ. (ರಂಗಣ್ಣ, ಕೈಯಲ್ಲೊಂದು ಬ್ಯಾಗು, ಕೊರಳಿಗೆ ಸ್ಟೇತಾಸ್ಕೋಪು ಹಾಕಿಕೊಂಡು ಬರುವನು)

ರಂಗಣ್ಣ– ನಮಸ್ಕಾರ ಅಜ್ಜಾ ಅವರಿಗೆ,

ಕಿತಾಪತಿ– (ಹಿಂದೆ ಮುಂದೆ ನೋಡಿ) ಅಜ್ಜಾ....ಯಾರಿಗಂದೆಪಾ ತಮ್ಮ?

ರಂಗಣ್ಣ– ತಮಗೆ ಮಹಾಸ್ವಾಮಿ.

ಕಿತಾಪತಿ– ಯಾಕಪ್ಪ ತಮ್ಮ ಯಾವೂರು ನಿನ್ದು ನಾ ನಿನಗ ಅಜ್ಜಾ ಕಂಡಂಗ ಕಾಣಾಕತ್ತೀನಿ? ಆಂ.... ಸಮಯ ಬಂದ್ರ ಒಂದು ಕೈ ನೋಡಂಗದೀನಿ ಅಜ್ಜಾ ಅಂತೀ ನನಗ.....?

ರಂಗಣ್ಣ– ತಪ್ಪಾಯ್ತು ಯಜಮಾನರೆ,

ಕಿತಾಪತಿ– ಹೋಗಲಿಬಿಡು ಏನು ಸಮಾಚಾರ?

ರಂಗಣ್ಣ– ನನ್ನ ಹೆಸರು ಡಾ॥ ರಂಗಣ್ಣ ಅಂತ ಈ ಊರಾಗ ಪ್ರಾಕ್ಟೀಸ್ ಮಾಡಾಣ ಅಂತ ಬಂದೀನಿ ತಾವು ನನಗೆ ಒಂದು ಬಾಡಿಗೆ ಮನೆ ಕೊಡಿಸಿದ್ರೆ ಪುಣ್ಯ ಬರುತ್ತದೆ.

ಚಂಪಾಕಲಿ– ನೀವು ಡಾಕ್ಟರಂದ್ರೆಲ್ಲ ಮನಷ್ಯಾರ ಡಾಕ್ಟರ ಇಲ್ಲಾ ದನಗಳ ಡಾಕ್ಟರಾ?

ರಂಗಣ್ಣ– ಏನ್ರೀ ಯಜಮಾನ್ರೇ ನಾ ಹ್ಯಾಂಗ ಕಾಣಾಕತ್ತೀನಿ ಹೇಳ್ರಿ ನೀವೇ ಅಡ್ವಾನ್ಸ ಅಂದ್ರ ನಿಮ್ಮ ಹೇಣ್ತಿ ನಿಮಗಿಂತಲೂ ಅಡ್ವಾನ್ಸ ಅದಾಳಲ್ರೀ.

ಕಿತಾಪತಿ– ಲೇ ಲೇ ತಮ್ಮ ಈಕಿ ನನ್ನ ಹೇಣ್ತಿ ಅಲ್ಲಲೆ ಖಾಸ ನನ್ನ ಮಗಳು

ರಂಗಣ್ಣ– ಹೌದಾ, ತಪ್ಪಾಯಿತ್ರೀ ಅಕ್ಕಾರ ಕ್ಷಮಾ ಮಾಡ್ರಿ ನೋಡ್ರಿ ಮಿಸ್, ಅಲ್ಲಲ್ಲ ಮೇಡಂ....ನೀವು ದೊಡ್ಡ ಮನಸ್ಸು ಮಾಡಿ ನನಗೆ ಒಂದು ಬಾಡಿಗಿ ಮನಿ ಕೊಡಿಸಿದ್ರ ಪುಣ್ಯ ಬರ್ತದರಿ.

ಕಿತಾಪತಿ– ಬಾಡಗಿ ಬೇಕಾ ಫರ್ಮನೆಂಟ್ ಅಲ್ಲಾ? ತಮ್ಮಾ ನಿನ್ನ ಮದುವಿ ಆಗ್ಯಾದೇನಪ್ಪ?

ರಂಗಣ್ಣ– ಇಲ್ಲರೀ ಪೀವರ್ ಬ್ಯಾಚುಲರರೀ ನಾನು.

ಕಿತಾಪತಿ– ನಮ್ಮಲ್ಲಿ ಒಂದು ಮನಿ ಖಾಲಿ ಅದ. ಅದರ ಅದು ಮದುವಿ ಅಗಲಾರದವರಿಗೆ ಕೊಡಾಂಗಿಲ್ಲೆನಪಾ.

ರಂಗಣ್ಣ– ನಿಮ್ಮ ಆಶೀರ್ವಾದ ಇದ್ರ ಕೆಲವೇ ದಿನದಾಗ ಮದುವಿ ಆಗ್ತೀನ್ರೀ ಕೊಡ್ರಿ ಇಲ್ಲನಬ್ಯಾಡ್ರಿ.

ಚಂಪಾಕಲಿ– ನಮ್ಮನ್ಯಾಗ ಯಾವ ಖೋಲಿ ಖಾಲಿ ಆದನೋಯಪ್ಪ.

ಕಿತಾಪತಿ– ಅದೇನವ್ವ ಎಮ್ಮಿ ಕಟ್ಟು ಕೊಟಗಿ ಪಕ್ಕದಲ್ಲಿ ಕಣಕಿ ಖೋಲಿ ಖಾಲಿ ಅದ. ಅದಕ್ಕ ಹಿಂದಿನ ಬಾಗಲಾ ಕೂಡಾ ಐತಿ. ಅದುನ್ನ ಕೊಡೋಣ.

ರಂಗಣ್ಣ– ಆದಷ್ಟು ಎದುರಿನ ಮನಿ ಇದ್ರ ನೋಡ್ರಿ....ಯಾಕಂದ್ರ ಪೇಶಂಟ ನೋಡಬೇಕಾಗ್ತದ.

ಕಿತಾಪತಿ– ನೋಡು ತಮ್ಮಾ ಎದುರಿಗೆ ಕೂಡಾ ಒಂದದ ಆದರ ಅದು ನಿನಗ ಕೊಡಾಂಗಿಲ್ಲ ನಿನ್ನ ಮನಸ್ಸು ಬಂದ್ರ ಇರು. ಇಲ್ದಿದ್ರ ಬಿಡು, ನಮ್ಮ ಕಂಡೀಶನ್ ಭಾಳ ಅದಾವು. ಆ ಎಲ್ಲಾ ಕಂಡೀಶನ್ನಿಗೆ ಒಪ್ಪಿದ್ರ ಕೊಡ್ತೀನಿ ಇಲ್ಲಂದ್ರ ಇಲ್ಲ.

ರಂಗಣ್ಣ– ಹೇಳ್ರೀ ಏನೇನು ಅದಾವ ನೋಡೋಣ.

ಕಿತಾಪತಿ– ಅಡ್ವಾನ್ಸು ಒಂದು ಸಾವಿರ ರೂಪಾಯಿ ಕೊಡಬೇಕು ತಿಂಗಳಿಗೆ ೩೦೦ ರೂಪಾಯಿ ಬಾಡಿಗೆ ಒಂದನೇ ತಾರೀಖಿಗೆ ಕೊಡಬೇಕು ಹಾಲು ಮೊಸರು, ತುಪ್ಪ ಅಂತ್ಹೇಳಿ ನೆವ ಮಾಡಿಕೊಂಡು ಎದುರಿನ ಮನೀಗೆ ಬರಬಾರದು. ಇರ್ಲಿಕ್ಕ ಒಬ್ಬ ಮಗಳದಾಳ ನಿನ್ನ ರೂಮಿಗೆ ಹಿಂದಿನ ಬಾಗಲಾ ಅದ ಅದೇ ದಾರಿಲಿಂದ ನಡೀಬೇಕು. ತಪ್ಪಿಯೂ ನಮ್ಮ ಮನೀ ಕಡೆ ನಿನ್ನ ಕಣ್ಣು ಬೀಳಬಾರದು.

ರಂಗಣ್ಣ– ಆಯ್ತುರೀ, ನಿಮ್ಮ ಕರಾರು ಕಂಡೀಶನ್ಸು ಏನೇ ಇದ್ರೂ ಎಲ್ಲವೂ ಒಪ್ಪಿಕೊಳ್ತೀನಿ. ಮನಿ ಕೊಡಾಕ ಒಪ್ಪಿ ಕೊಂಡ್ರೆಲ್ಲಾ ಅದ ಸಂತೋಷ ಯಜಮಾನರ ನಡ್ರಿ ಮನಿ ತೋರಸರಿ.

ಚಂಪಾಕಲಿ– ಯಪ್ಪಾ ನೀ ಇವರಿಗೆ ಮನಿ ತೋರಸು ನಾ ಇನ್ನೊಂದೆರಡು ಮನಿಗೆ ಹಾಲು ಕೊಟ್ಟು ಬರ್ತೀನಿ.

ಕಿತಾಪತಿ– ಆಯ್ತವ್ವ ಬೇಗ ಬಾ ನಡೀ ತಮ್ಮಾ. (ಹೋಗುವರು ಇವಳು ನಿಂತಿರುವಾಗ ಪೋಲಿಸ ಲಾಠಿ ಹಿಡಿದು ಬರುವನು).

ಪೋಲಿಸ– ಏ ಹುಡುಗಿ ಯಾರು ನೀನು? ಏನು ಕೆಲಸಾ ಮಾಡ್ತಿ.

ಚಂಪಾಕಲಿ– ನನ್ನ ಹೆಸರು ಚಂಪಾಕಲಿ ಅಂತ ಹಾಲು ಮಾರ್ತೀನ್ರಿ ಸಾಬ್ರೇ.

ಪೋಲಿಸ– ಎಂಥಾ ಹಾಲು ಮಾರ್ತಿ

ಚಂಪಾಕಲಿ– ಎಮ್ಮೀ ಹಾಲರೀ ಯಾಕ ಅನುಮಾನ ಇದೆಯೇನ್ರಿ ಅಲ್ಲೋ ಹಾಲು ಮಾರ್ತೀನಂಥ ತಿಳಿದಿರೇನ್ರೀ ನೀವು ಹೊಸದಾಗಿ ಬಂದಂಗ ಕಾಣ್ತೀರಿ. ಮೊದ್ಲಿನ ಪೋಲಿಸರೆಲ್ಲ ನನ್ನ ಹಾಲೇ ಕುಡಿತಿದ್ರು

ಪೋಲಿಸ– ಏನಂದಿ?

ಚಂಪಾಕಲಿ– ನನ್ನ ಎಮ್ಮಿ ಹಾಲೇ ಕುಡಿತಿದ್ರು ಅಂದೆ.

ಪೋಲಿಸ– ನಿನ್ನಲ್ಲಿ ಎಷ್ಟು ಎಮ್ಮೆಗಳಿವೆ.

ಚಂಪಾಕಲಿ– ಮೂರು ಎಮ್ಮಿ ಅದಾವ್ರೀ, ಅದರಾಗ ಒಂದು ಮಣಕಾ ಐತ್ರೀ ಸಾಹೇಬ್ರ

ಪೋಲಿಸ– ಅಂದ್ರೆ.... ನಿನ್ನೆ ನಮ್ಮ ಪೋಲಿಸ ಸ್ಟೇಶನ್ನದಾಗಿನ ಹುಲ್ಲು ತಿಂದು ಹೋಗಿದ್ದು ನಿನ್ನ ಎಮ್ಮಿನ ಏನು?

ಚಂಪಾಕಲಿ– ನಾ ಏನು ಬೇಕಂತ ಬಿಟ್ಟಿಲ್ರೀ ಹಂಗ ಮೇಯಕೊಂತ ಹೋಗಿ ಅಲ್ಲಿ ಬಂದಾವಂತ ಕಾಣ್ತಾವ.

ಪೋಲಿಸ– ಹ್ಯಾಂಗರ ಬರಲಿ ನಮ್ಮ ಗಾರ್ಡನ್ ಎಲ್ಲಾ ಹಾಳು ಮಾಡ್ಯಾವ. ಹಚ್ಚಹಸುರಾಗಿ ಬೆಳೆದ ಹುಲ್ಲೆಲ್ಲ ತಿಂದು, ನೀರು ಕುಡಿದು, ಹೆಂಡಿ ಒಗದು, ನೆಳ್ಳೀಗೆ ಕುಂತಾವು, ಹಿಡಿದು ಕೊಂಡವಾಡೆಕ್ಕ ಕೊಟ್ಟೇವಿ. ನಡಿ ನೀನೂ ಪೋಲಿಸ ಸ್ಟೇಶನ್ನಕ್ಕ.

ಚಂಪಾಕಲಿ– ಹಾಂಗ ಮಾಡಬ್ಯಾಡ್ರಿ ಬೇಕಾದರೆ ದಂಡ ತೊಗೋರಿ.

ಪೋಲಿಸ– ಎಷ್ಟು ಕೊಡ್ತಿ.

ಚಂಪಾಕಲಿ– ನೀವು ಕೇಳಿದಷ್ಟು, ಬೇಕಾದ್ರ ದಿನಾ ನಿಮ್ಮ ಮನೀಗೆ ಹಾಲು ಕೊಡ್ತೀನ್ರಿ, ಇದೊಂದು ಸಾರಿ ಮಾಫ ಮಾಡ್ರಿ

ಪೋಲಿಸ– ಅದೇ ಅಂದೆ ನನಗೆ ರಿಕ್ವೆಸ್ಟ ಮಾಡ್ದಿ ಉಳಕೊಂಡಿ ಧಿಮಾಕ ತೋರಿಸಿದರ ಎಮ್ಮಿ ಹಾಲಿನ ಬದ್ಲು ಅಲ್ಕೋಹಾಲು ಮಾರತಿದ್ಲು ಅಂತಾ ಕೇಸು ಹಾಕ್ತೀನಿ.

ಚಂಪಾಕಲಿ– ಬ್ಯಾಡ್ರಿ ಸಾಹೇಬ್ರ, ನಿಮ್ಮ ವಿರುದ್ಧ ಹೋಗಿ ನಾವು ಬದುಕ್ತಿವೇನ್ರಿ. ಕೈಯಾಗೊಂದು ಚೀಟಿ ಕೊಟ್ಟು ಮಟಕಾ ಆಡ್ತಿದ್ರು ಅಂತಾನೂ ಕೇಸು ಮಾಡ್ತೀರಿ.

ಪೋಲಿಸ– ಅಂತೂ ಪೋಲಿಸರ ಬಗ್ಗೆ ಭಾಳ ತಿಳಕೊಂಡಿಯಲ್ಲ.

ಚಂಪಾಕಲಿ– ನಾ ತಿಳಕೊಳ್ಳಾಕ ಎಷ್ಟರಾಕಿರಿ ವಯಸ್ಸು ತಿಳಿಸತೈತಿ, ಅನುಭವ ತಿಳಿಸತೈತಿ

ಪೋಲಿಸ– ನಿನ್ನ ಮದುವಿ....!

ಚಂಪಾಕಲಿ– ಇನ್ನೂ ಆಗಿಲ್ರೀ.

ಪೋಲಿಸ– ನಿನ್ನ ಹಾಲಿನ ಗಿರಾಕಿ ಆಗಂತಿಯೇನು?

ಚಂಪಾಕಲಿ– ಯಾರು ಬ್ಯಾಡಂತಾರಿ ಸಾಹೇಬ್ರ, ಇವತ್ತಿನಿಂದಲೇ ದಿನಾಲೂ ಹಾಲು ಕುಡಸ್ತೀನಿ.

ಪೋಲಿಸ– ಹೌದಾ, ಇಂದಿನಿಂದಲೇ ಪ್ರಾರಂಭವಾಗಲೀ ನಮ್ಮ ಹಾಲು ಸಕ್ಕರೆಯ ಸವಿಯಾದ ಪ್ರೀತಿ.

(ಹಾಡು ಹಾಡಿ ಹೋಗುವರು).

===**=====**===

ಪ್ರವೇಶ ೩

ಜಂಗಲ್ ಸೀನು

ನಾಗೇಂದ್ರ– (ಸಾವಕಾಶವಾಗಿ ಬಂದು ಸಿಗರೇಟು ಹಚ್ಚಿ) ಥಂಡರ ಈ ಜಗದಲ್ಲಿ ತಾಯ್ಗಂಡರದೇ ಕಾಲ. ಕಾಲಚಕ್ರದ ತಿರುವಿನಲ್ಲಿ ಸಿಕ್ಕು ವಿಲವಿಲನೇ ಒದ್ದಾಡುತ್ತಿದೆ ಒಂದು ಸಮಾಜ. ಇದೇ ತಿರುವಿನ ಮಗ್ಗುಲಲಿ ಹೆಂಡ–ತುಂಡುಗಳ ಮಧ್ಯದಲ್ಲಿ ವಿಕಟಾಟ್ಟ ಹಾಸದಿಂದ ಮೆರೆಯುತ್ತಿದೆ ಇನ್ನೊಂದು ಸಮಾಜ! ಇಲ್ಲಿ ದುಡಿದ್ದವನೇ ದೊಡ್ಡವ. ಬಾಯಿ ಸತ್ತವ ಬದುಕುವದಿಲ್ಲ ಮಾನಬಿಟ್ಟವ ಮಜಾ ಮಾಡುತ್ತಾನೆ. ದೊಡ್ಡ ಮೀನು ಸಣ್ಣ ಮೀನನ್ನು ನುಂಗುವಂತೆ ಬಡವರನ್ನು ದೀನದಲಿತರನ್ನು ಮಣ್ಣುಪಾಲು ಮಾಡುತ್ತಿದ್ದಾರೆ. ಈ ಕಪಟ ನಾಟಕ ಮಾಡುವ ಜನರನ್ನು ಕಂಡರೆ ಕೆಟ್ಟ ಕೋಪವಿದೆ ಆದರೆ ಏನು ಮಾಡಲಿ ಒಂದು ಕಾಲದಲ್ಲಿ ನನ್ನಕ್ಕನೊಂದಿಗೆ ಚಲ್ಲಾಟವಾಡಿ ಅವಳ ಸಾವಿಗೆ ಕಾರಣನಾದ ತಾಯ್ಗಂಡ ರಾವಣಗೌಡನ ಮೇಲೆ ಸೇಡು ತೀರಿಸಿಕೊಳ್ಳಬೇಕಾಗಿದೆ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎನ್ನುವಂತೆ ನಾನು ಅವನೊಂದಿಗೆ ಇದ್ದು ಅವನ ಮೇಲೆ ಸೇಡು ತೀರಿಸಿಕೊಳ್ಳುವೆ. (ಹೋಗುವಾಗ ಸಾವಿತ್ರಿ ಬರುವುದನ್ನು ಕಂಡು) ಓ ಬಸವಂತನ ಹೆಂಡ್ತಿ ಸಾವಿತ್ರಿ ಈ ಕಡೆಗೇ ಬರುತ್ತಿದ್ದಾಳೆ. ಸುತ್ತಲೂ ಯಾರೂ ಇಲ್ಲಾ, ಬಹು ದಿನಗಳಿಂದ ಅವಳ ರೂಪ ನನ್ನ ಕಣ್ಣಾವರಿಸಿದೆ. ಬರಲಿ, ಬರಲಿ... (ತಿರುಗಿ ನಿಲ್ಲುವನು)

ಸಾವಿತ್ರಿ– (ಒಂದು ಸಣ್ಣ ಗಂಟು ಕುಡಗೋಲು ಹಿಡಿದು ಬರುವಳು ಈತ ನಿಂತಿರುವದನ್ನು ಕ್ಷಣ ಗಮನಿಸಿ) ಯಾರು? ಸ್ವಲ್ಪ ದಾರಿಬಿಟ್ಟು ನಿಲ್ಲಬಾರದೇ?

ನಾಗೇಂದ್ರ– (ನಗು) ಸಾವಿತ್ರಿ...ನಿನಗೆ ದಾರಿ ಬಿಡಲು ನಿಂತಿಲ್ಲ ನಿನ್ನೊಂದಿಗೆ ಮಾತಾಡಲೆಂದೇ ನಿಂತಿರುವೆ.

ಸಾವಿತ್ರಿ– ಥೂ ನಿರ್ಲಜ್ಜಾ, ನಾಚಿಕೆಯಾಗುವುದಿಲ್ಲವೇ? ಮದುವೆಯಾದ

ಹೆಣ್ಣಿನೊಂದಿಗೆ ಇಂಥ ಕೀಳು ಮಾತಾಡಲು ನಿನ್ನ ಮನಸ್ಸಾದರೂ ಹೇಗೆ ಒಪ್ಪುತ್ತದೆ.

ನಾಗೇಂದ್ರ– ರಸಿಕತೆ ಇಲ್ಲದ ಗಂಡಿನೊಂದಿಗೆ ಬಾಳುತ್ತಿರುವದನ್ನು ನೋಡಿ ನನ್ನ ಮನಸ್ಸಿಗೆ ನೋವಾಗುತ್ತಿದೆ ಸಾವಿತ್ರಿ, ಬಸವಂತ ಅವನೊಬ್ಬ ಗಂಡಸೆ? ಥೂ ಷಂಡ ರಸತುಂಬಿದ ಮಾವಿನ ಹಣ್ಣಿನಂತಿರುವ ನಿನಗೆ ಅವನು ಯೋಗ್ಯನೇ ಅಲ್ಲಾ

ಸಾವಿತ್ರಿ– ನಾಗೇಂದ್ರ, ನನ್ನ ಬಾಳಿನಲ್ಲಿ ಏಕೆ ತಲೆ ಹಾಕುತ್ತಿರುವಿ ದೇವರಂಥ ನನ್ನ ಗಂಡನ ಬಗ್ಗೆ ಕೆಟ್ಟ ಮಾತಾಡಬೇಡ.

ನಾಗೇಂದ್ರ– ಹ್ಞಾ! ನಿನ್ನ ಗಂಡ ದೇವರೇ ಸರಿ ದೇವರು ಪೂಜೆಗೆ ಲಾಯಕ್ಕೇ ಹೊರತು ಗಂಡನಾಗಲಿಕ್ಕಲ್ಲ. ನೋಡು ಸಾವಿತ್ರಿ ಪೂಜಿಸಲಿಕ್ಕೆ ಗಂಡನಾಗಿ ಅವನಿರಲಿ ನಿನ್ನ ರಸಿಕತೆಗೆ ತಕ್ಕವನಾಗಿ ನಾನಿರ್ತೇನೆ. ನಿನ್ನ ಗಂಡನಿಗೆ ಗೊತ್ತಾಗದಂತೆ ಯಾವಾಗ ಕೂಡಬೇಕು ಎಂಬುದನ್ನು ನಾನು ಹೇಳಿ ಕೊಡ್ತೇನೆ ನೀನು ಒಪ್ಪಿದರೆ ರಸಿಕತೆಯ ಸುಖದ ಸಿರಿ ನಿನ್ನದಾಗುವುದು.

ಸಾವಿತ್ರಿ– ಈ ವಿಷಯ ನನ್ನ ಗಂಡನಿಗೆ ಗೊತ್ತಾದ್ರೆ ನಿನ್ನ ಜೀವ ತೆಗೀತಾನೆ ಹುಷಾರ್ !

ನಾಗೇಂದ್ರ– ನಿನ್ನ ಗಂಡನ ಪೌರುಷ ಕಂಡಿದ್ದೇನೆ. ಅವನಲ್ಲಿ ಗಂಡಸ್ಥನ ಇಲ್ಲ ಎಂಬುದು ನಿನಗೂ ಸಾಬೀತಾಗಿರಬೇಕು. ಮದುವೆಯಾಗಿ ಮೂರು ವರ್ಷ ಕಳೆದರೂ ಮಕ್ಕಳ ಭಾಗ್ಯ ಕಾಣಲೇ ಇಲ್ಲ. ನನ್ನಂಥವನೊಂದಿಗೆ ಒಂದೇ ಒಂದು ಬಾರಿ ಬೆರೆತು ನೋಡು ಅದರ ಪರಿಣಾಮ ಗೊತ್ತಾಗುತ್ತದೆ.

ಸಾವಿತ್ರಿ– ಮಕ್ಕಳಾಗುವುದು ನಮ್ಮ ಹಣೇಬರಹಕ್ಕೆ ಬಿಟ್ಟದ್ದು, ಆದರೆ.... ನನ್ನ ಗಂಡನ ಬಗ್ಗೆ ಹುಚ್ಚುಚ್ಚಾಗಿ ಮಾತಾಡಬೇಡ. ದೂರಾಗು ನಾನು ಹೊಲಕ್ಕೆ ಹೋಗಬೇಕು.

ನಾಗೇಂದ್ರ– ಹೋಗುವಿಯಂತೆ ತಡಿಯೇ ಅವಸರವೇಕೆ? ನೋಡು ಸಾವಿತ್ರಿ ಸಾಮೋಪಾಯದಿಂದ ಹೇಳಿದೆ ಕೇಳುತ್ತಿಲ್ಲ. ಇನ್ನು ದಂಡೋಪಾಯವೇ ಗತಿ ಒಳ್ಳೇ ಮಾತಿನಿಂದ ಒಪ್ಪಿದರೆ ಸರಿ, ಇಲ್ಲವಾದರೆ ಬಲಾತ್ಕಾರ ಮಾಡಬೇಕಾದೀತು.

ಸಾವಿತ್ರಿ– ಏನಂದ್ಯೋ ಬಲಾತ್ಕಾರ ಮಾಡ್ತಿಯಾ? ಹುಚ್ಚು ನಾಯಿ ಎಚ್ಚರದಪ್ಪಿ ಒಂದೆಜ್ಜೆ ಮುಂದಿಟ್ಟೆಯಾದರೆ ನಿನ್ನ ಹೊಟ್ಟೆಯಲ್ಲಿನ ಕರುಳು ಹೊರ ತೆಗೆಯುವೆ ಎಚ್ಚರ (ಕುಡುಗೋಲು ಹಿಡಿದು) ಜೋಳ ಕೊಯ್ಯಬೇಕಾದ ಈ ಕುಡುಗೋಲು ನಿನ್ನ ಕುತ್ತಿಗೆ ಕೊಯ್ದೀತು ಹುಷಾರ್ ! ಒಳ್ಳೇ ಮಾತಿನಿಂದ ಸುಮ್ಮನೇ ಹೋಗು.

ನಾಗೇಂದ್ರ– ಓ ! ಕಿತ್ತೂರ ಚನ್ನಮ್ಮನ ವಂಶದವಳು ಬೆದರಿಕೆ ಹಾಕ್ತೀಯಾ?

ಸಾವಿತ್ರಿ– ಬೆದರಿಕೆಯಲ್ಲೋ ಬದ್ಮಾಶ್ ಇವತ್ತು ಪ್ರತಿಯೊಂದು ಹೆಣ್ಣು ತನ್ನ ಶೀಲ ತಾನೇ ಕಾಪಾಡಿಕೊಳ್ಳಬೇಕಾಗಿದೆ. ನಿನ್ನಂಥ ಲುಚ್ಚಾಗಳು ಇವತ್ತು ಬೀದಿಗೊಬ್ಬರಿದ್ದಾರೆ. ನಡು ರಾತ್ರಿಯಲ್ಲೂ ಹೆಣ್ಣು ಸುರಕ್ಷಿತವಾಗಿ ಮನೆ ಸೇರುವಂತಾಗಬೇಕೆಂದು ಗಾಂಧೀಜಿ ಕನಸು ಕಂಡಿದ್ದರು. ಆದರೆ ಇವತ್ತು ನಿನ್ನಂಥ ಬೀದಿ ಕಾಮಣ್ಣಂದಿರು, ಅಕ್ಕ ತಂಗಿಯರನ್ನು ಕಾಣದ ಗಾವಿಲರು ಸಮಾಜವನ್ನು ಹಾಳು ಮಾಡಿರುವಿರಿ.

ನಾಗೇಂದ್ರ– ಸಾವಿತ್ರಿ! ಸಮಾಜ ನಾವು ಹಾಳು ಮಾಡಿದೆವಾ? ಲೇ ಹುಚ್ಚಿ ಎಲ್ಲಾ ಹೆಣ್ಣು ಒಳ್ಳೆಯವರೆಂದು ನೀನು ಬೊಗಳಬೇಡ ಪತಿವ್ರತೆಯ ಸೋಗುಹಾಕಿ ಬೀದಿ ಸೂಳೆಯರಾಗಿ ಮೆರೆಯುವವರೆಷ್ಟಿಲ್ಲ ಈ ಸಮಾಜದಲ್ಲಿ, ತಾಳಿ ಕಟ್ಟಿದ ಗಂಡನಿಗೆ ವಿಷಹಾಕಿ ಮಿಂಡನೊಂದಿಗೆ ಓಡಿ ಹೋದವರೆಷ್ಟಿಲ್ಲ ಈ ಸಮಾಜದಲ್ಲಿ! ಗಂಡ ಕಛೇರಿಗೆ ಹೋದಾಗ ಮಿಂಡನೊಂದಿಗೆ ಸರಸವಾಡುವ ಸುಶೀಕ್ಷಿತ ಸೂಳೆಯರೆಷ್ಟಿಲ್ಲ ಈ ಸಮಾಜದಲ್ಲಿ! ಕಾಮತೃಷೆಗಾಗಿ ಮನೆತನಗಳನ್ನೇ ಹಾಳುಮಾಡಿದ ಮಹಾ ಮಾರಿಯರೆಷ್ಟಿಲ್ಲ ಈ ಸಮಾಜದಲ್ಲಿ! ನೋಡು ಒಂದು ಕೈಯಿಂದ ಯಾವತ್ತೂ ಚಪ್ಪಾಳೆ ತಟ್ಟೋಕಾಗಲ್ಲ ಇಬ್ಬರೂ ಸೇರಿದರೇನೇ ಈ ಎಲ್ಲಾ ಗಲಾಟೆ ನೋಡು ಸಾವಿತ್ರಿ ಹೆಚ್ಚು ಮಾತಾಡಿದರೆ ರಾಮನ ಸತಿ ಸೀತೆಯನ್ನು ರಾವಣ ಹೊತ್ತೊಯ್ದಂತೆ ಹೊತ್ತೊಯ್ಯಬೇಕಾದೀತು ಹುಷ್ಯಾರ್!

ಸಾವಿತ್ರಿ– ರಾಮನ ಸತಿ ಸೀತೆಯನ್ನು ರಾವಣ ಹೊತ್ತೊಯ್ದನೇನೋ ನಿಜ. ಆಮೇಲೆ ಅವನ ಗತಿ ಏನಾಯ್ತು?

ನಾಗೇಂದ್ರ– ಮುಗಿದ್ಹೋಯ್ತು. ಲೇ ನಾನೇನು ನಿನಗೆ ಪುರಾಣ ಹೇಳಲು ಕುಳಿತ ಸ್ವಾಮಿ ಎಂದು ತಿಳಿದಿರುವೆಯಾ ? ಸಾವಿತ್ರಿ ಅಲ್ಲಿ ನೋಡು

ಏನು ಬರುತ್ತಿದೆ (ಅವಳು ನೋಡುವಾಗ ಕುಡುಗೋಲು ಕಸಿದುಕೊಂಡು ಅದನ್ನೇ ನೋಡುತ್ತಾ) ಈ ಕುಡಗೋಲಿನಿಂದ ನನ್ನ ಪ್ರಾಣ ತೆಗಿತಿಯಾ ಬಾ ತೆಗೆ ನೋಡೋಣ. (ಅವಳ ಹತ್ತಿರ ಹೋಗಿ ಒಂದು ಸುತ್ತು ತಿರುಗಿದ ನಂತರ) ಬಾರೇ.... ಬಾ ಸುತ್ತಲು ಯಾರೂ ಇಲ್ಲ ಬಾ ಬಾ (ಕುಡುಗೋಲು ಬೀಸಾಕುವನು, ಬಲಾತ್ಕಾರ ಮಾಡುವಾಗ ಅವಳು ದೂರ ಸರಿದು ಬಿಡಿಸಿಕೊಳ್ಳಲು ಪ್ರಯತ್ನಿಸುವಾಗ ಶೇಖರ್ ಎಂದು ಚೀರುವಳು)

ಶೇಖರ– (ಆವೇಶದಿ, ಬಂದು) ಬಂದೇ ಅತ್ತಿಗೆ ಬಂದೆ (ಬಿಡಿಸಿ) ಲೇ ನಾಗ್ಯಾ ನನ್ನ ದೇವತೆಯಂಥ ಅತ್ತಿಗೆಯ ಮೇಲೆ ಕಣ್ಣಾಕಿದ್ದೀಯಾ ಮಗನೇ. ಇವತ್ತು ಈ ಭೂಮಿ ಮ್ಯಾಲಿನ ನಿನ್ನ ಋಣ ತೀರಿತು ಅಂತಾ ತಿಳ್ಕೋಲೇ.... (ಅವನಿಗೆ ನೆಲಕ್ಕೆ ಹಾಕಿ ಹೊಡೆಯ ಬೇಕೆಂದಾಗ).

ಸಾವಿತ್ರಿ– ಶೇಖರ್, ಅವನ ಜೀವ ಹೊಡೆದರೆ ನನ್ನಾಣೆಯಾಗಿದೆ.

ಶೇಖರ– (ನಿಧಾನವಾಗಿ ಬಿಟ್ಟು) ಯಾಕತ್ತಿಗೆ ಆಣೆ ಹಾಕಿ ಇವನ ಜೀವ ಉಳಿಸಿದಿ ಹೇಳವ್ವ ಯಾಕ ಇವನ ಜೀವ ಉಳಿಸಿದಿ.

ಸಾವಿತ್ರಿ– ಶೇಖರ, ಅವನ ಜೀವ ತೆಗೆದರೆ ಪೋಲಿಸರು ನಿನ್ನನ್ನು ಸುಮ್ನೇ ಬಿಡ್ತಾರ. ತಪ್ಪು ನಿಂದಿರ್ಲಿಕ್ಕಿಲ್ಲ, ನ್ಯಾಯವಾಗಿ ಕೊಲೆ ಮಾಡಿರಬಹುದು. ಆದರೂ ನ್ಯಾಯಕ್ಕಾಗಿ ಕೊಲೆ ಮಾಡಿದವನಿಗೆ ನ್ಯಾಯಾಲಯದಲ್ಲಿ ಶಿಕ್ಷೆ ಇಲ್ಲ ಎಂದು ತಿಳಿದಿರುವೆಯಾ? ಹೆಣ್ಣು ಶೀಲ ಉಳಿಸಿಕೊಳ್ಳುವುದಕ್ಕಾಗಿ ಕೊಲೆ ಮಾಡಿದರೂ ಶಿಕ್ಷೆಯಾಗುತ್ತದೆ. ನಮ್ಮ ಅನಿವಾರ್ಯ ಸಂದರ್ಭ ಯಾರಿಗೂ ಅರ್ಥವಾಗುವುದಿಲ್ಲ. ಶೀಲಕ್ಕಾಗಿ ತನ್ನ ಮಗನನ್ನೇ ಬಲಿಕೊಟ್ಟ ಕಡ್ಲಿಮಟ್ಟಿ ಕಾಶೀಬಾಯಿಯನ್ನೂ ಟೀಕಿಸುವವರಿದ್ದಾರೆ. ಅಂದಾಗ.....ಶೇಖರ್ ನೀನು ಕೊಲೆ ಅಪವಾದ ಹೊತ್ತು ಜೇಲಿಗೆ ಹೋದರೆ.... ಛೇ ಆ ವಿಚಾರ ನೆನೆಸಿಕೊಳ್ಳುವುದಕ್ಕೂ ಆಗುವುದಿಲ್ಲ ಪಾಪಿ ! ಎಲ್ಲಿಯಾದರೂ ಬದುಕಲಿ ಬಿಟ್ಟುಬಿಡು ಅವನನ್ನು.

ಶೇಖರ– ಲೇ.... ನಾಗ್ಯಾ, ನನ್ನತ್ತಿಗೆ ಮಾತು ಕೇಳಿ ಬಿಟ್ಟಿದ್ದೇನೆ ಇನ್ನೊಮ್ಮೆ ನನ್ನತ್ತಿಗೆ ಮೇಲಷ್ಟೇ ಅಲ್ಲ, ನನ್ನ ಮನೆತನದ ಮೇಲೆ ನಿನ್ನ ನೆರಳು ಬಿದ್ದರೂ ಕೂಡಾ ಜೀವ ಉಳಿಸೋಲ್ಲ ಹೊಂಟುಹೋಗು

ತಾಯ್ಗಂಡ (ಅವಮಾನದಿಂದ ವ್ಯಂಗ್ಯವಾಗಿನೋಡುತ್ತ ನಾಗೇಂದ್ರ ಹೋಗುವನು) ಏನತ್ತಿಗೆ ಇಂಥ ಸಮಯದಲ್ಲಿ ನೀನೊಬ್ಬಳೆ ಏಕೆ ಬರುತ್ತಿರುವಿಯಮ್ಮ.

ಸಾವಿತ್ರಿ– ನಿನ್ನಣ್ಣ ಊಟಕ್ಕೆ ಬಂದಿರಲಿಲ್ಲ ಮನೆಯಲ್ಲಿ ಬೇಜಾರಾಗ್ತಿತ್ತು. ಹೊಲ ನೋಡಿಕೊಂಡು, ಹೊಲದಲ್ಲೊಂದಿಷ್ಟು ಕೆಲಸ ಮಾಡೋಣ ಎಂದು ಬರ್ತ್ತಿದ್ದೇನಪ್ಪ.

ಶೇಖರ– ಹೊಲದಲ್ಲಿ ಬೇಕಾದಷ್ಟು ಆಳುಗಳಿದ್ದಾರಮ್ಮ ನೀನು ಹೊಲಕ್ಕೆ ಬರಲೇಬೇಕಾಗಿದ್ದರೆ ನಾನೇ ಕರೆದುಕೊಂಡು ಹೋಗ್ತಿದ್ನೆಲ್ಲ. ಇನ್ನೊಂದು ಬಾರೀ ಈ ರೀತಿ ಎಂದೂ ಒಬ್ಬಳೇ ಬರಬೇಡಮ್ಮಾ ನಡೆ ಅತ್ತಿಗೆ ಹೋಗೋಣ. (ಹೋಗುವರು).

===***====***===

ಪ್ರವೇಶ ೪

ಗೌಡನ ಮನೆ

(ಗೌಡ, ಪೇಪರ್‌ನೋಡುತ್ತಾ ಕುಳಿತಿದ್ದಾನೆ ಕಿತಾಪತಿ, ಒಂದೆಡೆ ಖಾತೆ ಬರೆಯುತ್ತಾ ಕುಳಿತಿದ್ದಾನೆ. ಹನುಮ ಬಂದು).

ಹನುಮ– ಸಲಾಮ್ರೀ ಗೌಡ್ರ.

ಗೌಡ– ಓ....ಹನುಮಾ.... ಬಾ ಹನುಮಾ ಬಾ ಏನಾಯ್ತು ನೀನು ಹೋದ ಕೆಲಸ.

ಹನುಮ– ನಾ ಹೋದ ಮ್ಯಾಲ ಬಿಟ್ಟ ಬರ್ತಿನ್ಯಾ ತಗೊಳ್ರಿ ಈ ರೂಪಾಯಿಗಳನ್ನ. (ಉಡಿಯಲ್ಲಿದ್ದ ರೂ.ಗಳನ್ನು ಕೊಡುವನು)

ಗೌಡ– ಏನಾದ್ರೂ ತಕರಾರು ಮಾಡಿದ್ನೋ ಸರಳ ಕೊಟ್ನೋ.

ಹನುಮ– ಈ ಕಾಲಕ್ಕೆ ಸರಳ ಯಾರು ಕೊಡ್ತಾರಿ. ಆಂ.... ತಕರಾರು ಬಹಳ ಮಾಡಿದ, (ಜೋರಾಗಿ) ಲೇ ಹುಚ್ಚಗೌಡ.

ಗೌಡ– ಲೇ.... ಲೇ ಹನುಮಾ....!

ಹನುಮ– ಹಾಂಗಲ್ರಿ ಅಂವಾ ಹೇಳಿದ್ದ ಹೇಳಾಕತ್ತೀನಿ. ಲೇ... ಆ ಹುಚ್ಚ ಗೌಡನ ರೊಕ್ಕ ಯಾವನಿಗೆ ಬೇಕಾಗ್ಯಾವಲೇ ಅಂದು ಬಿಸಾಕಿಬಿಟ್ಟ.

ಗೌಡ– ಆಂ.... ಹಿಂಗಂದ್ನಾ ಆ ಬಡ್ಡೀ ಮಗಾ ಸಾಲ ತೆಗೆದುಕೊಳ್ಳುವಾಗ ಎಷ್ಟು ವಿನಯದಿಂದ ಮಾತಾಡ್ತಿದ್ದ, ಇನ್ನೊಮ್ಮೆ ಆ ಮಗ ಬರ್ಲಿ, ಆ ಕರಿನಿಂಗ ಏನಂದ.

ಹನುಮ– ಅಂವಾ ಊರಾಗ ಇದ್ದಿಲ್ರಿ, ಇದ್ರ ಬಿಟ್ಟ ಬರ್ತಿದ್ದಿಲ್ಲ ನಾಳೆ ನೋಡ್ರಿ ರೊಕ್ಕಾ ಕೊಡ್ಬೇಕು ಇಲ್ಲ ನಿಮ್ಮ ತೋಟದಾಗ ದುಡಿಬೇಕು ಹಾಂಗ ಮಾಡ್ತೀನಿ ಮಗನಿಗೆ ಒಂದು ವೇಳೆ ನಾಳೆ ವಸೂಲು ಮಾಡದಿದ್ರ (ಜೋರಾಗಿ) ಲೇ....ಬದ್ಮಾಸ್ ಅಂತಾ ಕರೀರಿ

ಗೌಡ– ಹನುಮ, ನಿನ್ನ ಕೆಲಸ ಬೇಕಾದಷ್ಟು ಸರಿ ಅದ ಆದ್ರ ನನ್ನ ಕಡೆ ಕೈ ತೋರಿಸಿ ಬೈಬ್ಯಾಡ್ಲೇ ಮಗನ.

ಕಿತಾಪತಿ– ಏನು ಮಾಡ್ಬೇಕ್ರಿ ಗೌಡರೆ, ಹೊಲಸ ತಿನ್ನಾ ಎಮ್ಮಿ ಖೋಡ ಕೊಯ್ದರ ಬಿಡ್ತಾದೇನ್ರಿ, ಇವನ ಗುಣಾನೇ ಹಾಂಗ ಬೆಳದಾವರಿ, ನೋಡಪ್ಪ ಹನುಮ, ನೀ ಹೇಳಾ ಮಾತು ಖರೇ ಇರ್ತದ. ಆದ್ರ ಗೌಡರ ಕಡಿಗಿ ಈ ರೀತಿ ಕೈತೋರಿಸಿ ಮಾತಾಡಬೇಡಾ.

ಹನುಮ– ಆಯ್ತಿರಿ ಇನ್ನೊಮ್ಮೆ ಈ ರೀತಿ ಮಾತಾಡಿದ್ರ ಲೇ.... ಹುಚ್ಚಾ....

ಕಿತಾಪತಿ– ಲೇ....ಲೇ.... ಮತ್ತ.

ಹನುಮ– ಹಂಗಲ್ರಿ ಮಾತು ಹೇಳ್ತೀನಿ ನಾ ಇನ್ನೊಮ್ಮೆ ಇಂಥ ಮಾತಾಡಿದ್ರ ಲೇ.... ಹುಚ್ಚ ಸೂಳ್ಯಾ ಮಗನಾ ಅಂತಾ ಕರಿರಿ.

ಕಿತಾಪತಿ– ಬರೋಬ್ಬರಿ ತಮ್ಮ ನಿನ್ನ ಮಾತು ನಿನಗ ಬುದ್ಧಿ ಹೇಳೋದು ಗೋರ್ಕಲ್ಲ ಮ್ಯಾಲ ನೀರು ಸುರಿಯೋದು ಎರಡೂ ಒಂದೇ.

ಗೌಡ– ಇರ್ಲಿ ಹನುಮಾ, ನೀನು ನನ್ನ ಮಾತು ಯಾವಷ್ಟೂ ಮೀರೋದಿಲ್ಲ ಅಲ್ಲ!

ಹನುಮ– ಯಾಕ ಗೌಡ್ರ, ನನ್ನ ಮ್ಯಾಲ ಅನುಮಾನ ಬಂದಾದೇನು, ಈ ಮನೆತನದ ಉಪ್ಪು ತಿಂದು ಬೆಳೆದ ದೇಹಾರಿ ಇದು ನಿಮಗಾಗಿ, ನಿಮ್ಮ ಮನೆತನಕ್ಕಾಗಿ ಪ್ರಾಣ ಬೇಕಾದ್ರೂ ಕೊಡಲು ಸಿದ್ಧನಿದ್ದೇನೆ.

ಗೌಡ– ಶಹಬ್ಬಾಶ್ ಹನುಮ, ನಾನು ಸಾಯಿ ಅಂದ್ರೂ ಸಾಯ್ತಿ.

ಹನುಮ– ಹೌದ ಸಾಯ್ತೀನಿ.

ಗೌಡ– ಇಂಥವನ ಜೀವ ಹೊಡಿ ಅಂದ್ರೂ ಹೊಡಿತಿ.

ಹನುಮ– ಹೇಳ್ರಿ, ಟೈಂ ಹಚ್ಚಿ ಹೊಡಿತೀನಿ.

ಗೌಡ– ಒಂದು ವೇಳೆ ನೀನೇ ಸಾಯಿ ಅಂದ್ರೂ ಸಾಯ್ತೀಯಾ.

ಹನುಮ– ಆಜ್ಞೆ ಕೊಡ್ರಿ ಗೌಡ್ರ, ಯಾವ ರೀತಿ ಸಾಯಲಿ, ಕರೆಂಟಿನ ತಂತಿ ಹಿಡಿಯಲೇ, ನಿಮ್ಮ ಉಪ್ಪರಿಗೆಯ ಮೇಲಿಂದ ಬೀಳಲೇ. ಇಲ್ಲ ಈ ಕೊಡ್ಲಿಯಿಂದ ನನ್ನ ತಲೆಯನ್ನು ಕತ್ತರಿಸಿ ನಿಮ್ಮ ಪಾದದಡಿಯಲ್ಲಿಡಲೇ

ಗೌಡ– ವ್ಹಾ ! ಎಷ್ಟು ಅಭಿಮಾನಲೇ ನನ್ನ ಮೇಲೆ ಹಾಗಿದ್ರೆ ಈ ಪಿಸ್ತೂಲು ತೆಗೆದುಕೊಂಡು ಗುಂಡು ಹಾರಿಸಿಕೋ. (ಪಿಸ್ತೂಲು ಕೊಡುವನು).

ಹನುಮ– ನಿಮ್ಮ ಸೇವೆಯೇ ನನ್ನ ಪರಮ ಧ್ಯೇಯ. ನನ್ನ ಸಾವಿನಿಂದ ನಿಮಗೆ ಸಂತೋಷವಾಗುವುದಾದರೆ ಇದೋ ಸಾಯ್ತೀನಿ (ತಲೆಗೆ ಪಿಸ್ತೂಲು ಹಿಡಿದು ಹಾರಿಸಿಕೊಳ್ಳುವನು, ಅದರಲ್ಲಿ ಗುಂಡು ಇರುವುದಿಲ್ಲ)

ಗೌಡ– (ಚಪ್ಪಾಳೆ ತಟ್ಟುತ್ತಾ) ಶಹಬ್ಬಾಶ್, ಮೆಚ್ಚಿದೆ ಹನುಮ ನಿನ್ನ ಅಭಿಮಾನಕ್ಕೆ. ಇವತ್ತಿನಿಂದ ನಿನ್ನ ಸ್ಥಾನ ಕೆಳಗಲ್ಲ ಈ ನನ್ನ ಹೃದಯದಲ್ಲಿ ನಿನ್ನಂಥ ನಂಬಿಗಸ್ಥ ಆಳಿನ ಅವಶ್ಯಕತೆ ನನಗೆ ಬೇಕಾಗಿತ್ತು.

ಕಿತಾಪತಿ– ಬಹಳ ಅದ್ಭುತ ಅಭಿಮಾನ ಗೌಡರೇ, ಒಂದು ಹೌಜಿನೊಳಗ ಕೋತೀ ಕೋತಿ ಮರಿ ಬಿಟ್ಟಾಗ ತಾಯಿ ಕೋತಿ ತನ್ನ ಕುತ್ತಿಗೆ ಮಟ್ಟ ನೀರು ಬರುತನಕ ಮರಿಯನ್ನು ಎತ್ತಿ ಹಿಡಿತಂತ ತಾನು ಮುಳುಗ್ತೀನಿ ಅಂತಾ ಅದಕ್ಕೆ ಖಾತ್ರಿಯಾದ ತಕ್ಷಣ ಮರಿ ತನ್ನ ಕಾಲಾಗಿಟ್ಟುಕೊಂಡು ಮ್ಯಾಲ ನಿಂತಂತ, ಇಂಥ ಸಮಯದಲ್ಲಿ ಹನುಮ ಪ್ರಾಣದ ಹಂಗಿಲ್ಲದೆ ನಿಮ್ಮ ಒಂಟೇ ಒಂದು ಮಾತಿಗೆ ಜೀವ ಕೊಡಲು ಸಿದ್ಧನಾದನಲ್ಲ ಏ.... ಬಲು ಅದ್ಭುತ ಗೌಡ್ರ.

ಗೌಡ– ಹನುಮ, ಇವತ್ತು ನಿನಗೊಂದು ಕೆಲಸ ಒಪ್ಪಿಸತೀನಿ.

ಹನುಮ– ಹೇಳ್ರಿ ಗೌಡರೇ.

ಗೌಡ– ಬಸವಂತನ ಹೆಂಡತಿ ಸಾವಿತ್ರಿ ನಾಳೆ ನಮ್ಮ ತೋಟದ ಮನೆಯಲ್ಲಿರಬೇಕು ಈ ಕೆಲಸ ಮಾಡ್ತೀಯಾ?

ಹನುಮ– ಇದು ಯಾವ ಮಹಾ ಕೆಲಸ ಗೌಡರೇ ಅವಳು ತೋಟದಲ್ಲಿರಲಿ, ಮನೆಯಲ್ಲಿರಲಿ, ಗಂಡನ ಮಗ್ಗುಲಲ್ಲಿ ಮಲಗಿರಲಿ, ನಾಳೆ ಆ ಹೆಣ್ಣು ನಿಮ್ಮ ತೋಟದ ಮನ್ಯಾಗ ಅದಾಳಂತ ತಿಳ್ಕೊಳ್ರಿ ಒಂದು ವೇಳೆ ಈ ಕೆಲಸಾ ಆಗದಿದ್ರ..... ಲೇ....

ಗೌಡ– ಹಾಂ.... ಹಾಂ.... !

ಹನುಮ– ಹುಚ್ಚು ಸೂಳ್ಯಾ ಮಗನ ಅಂತಾ ಕರೀರಿ.

ಗೌಡ– ಶಹಬ್ಬಾಶ್ ಹನುಮ, ತಗೋ ನಿನ್ನ ಕಾಣಿಕೆ ಹೊರಡಿನ್ನ. (ಎರಡು ಬಾಟ್ಲಿ ಕೊಡುವನು, ಹನುಮ ಹೋಗುವನು) ಕಿತಾಪತಿ, ಹ್ಯಾಗಿದೆ ನನ್ನ ಪ್ಲಾನು?

ಕಿತಾಪತಿ– ನೀವು ಅವನನ್ನು ನೀಲಗಿರಿ ಮರಕ್ಕೆ ಹತ್ತಿಸ್ತಿದ್ಯಾಗಲೇ ತಿಳ್ಕೊಂಡೆ ಏನೋ ಕರಾಮತ್ತು ಅದಾ ಇದರಾಗಂತ.

ಗೌಡ– ಕಿತಾಪತಿ, ಈ ಊರಲ್ಲಿ ಎಲ್ಲರೂ ನನ್ನಲ್ಲಿ ಸಾಲ ತೆಗೆದುಕೊಂಡಿದ್ದಾರೆ ಆದರೆ ಬಸವಂತ ಮಾತ್ರ ಕೈಚಾಚಿ ಬಂದಿಲ್ಲ ನೋಡು.

ಕಿತಾಪತಿ– ಅವನು ಮಹಾ ಸ್ವಾಭಿಮಾನಿ ಅದಾನ್ರಿ, ಅಲ್ಲದೆ ನಿಮ್ಮಪ್ಪನ ಕಾಲದಿಂದಲೂ ಅವರ ಮನೆತನಕ್ಕೂ ನಿಮ್ಮ ಮನೆತನಕ್ಕೂ ಹಾವು ಮುಂಗುಸಿಗಿದ್ದಂಗ ವೈರತ್ವ ಅದ, ಅವನ ದೈವಕ್ಕೂ ಬೆಳೀನೂ ಭಾಳ ಚೆಂದ ಬೆಳಿಲಾಕತ್ಯಾದ್ರಿ.

ಗೌಡ– ಹೌದಾ, ಆಂ... ಖಾತೆಗಳೆಲ್ಲ ಸರಿಯಾಗಿ ಬರೆದಿಡು ವಸೂಲಿಗೆ ನಮ್ಮ ಹನುಮ ಇದ್ದಾನೆ.

ರಾಗಿಣಿ– (ಒಳಗಿನಿಂದ ಮಾಡರ್ನ್ ಡ್ರೆಸ್‌ಲ್ಲಿ ಬರುತ್ತಾ) ಡ್ಯಾಡಿ.

ಗೌಡ– ಏನಮ್ಮ ಊರಿಗೆ ಹೋಗುವ ಎಲ್ಲ ಸಿದ್ಧತೆ ಆಯ್ತಾ? ನೋಡಮ್ಮ ನೀನು ಚೆನ್ನಾಗಿ ಅಭ್ಯಾಸ ಮಾಡಬೇಕು. ನನಗೆ ಗಂಡು ಅಂದ್ರೆ ನೀನೇ ಹೆಣ್ಣು ಅಂದ್ರು ನೀನೇ.

ರಾಗಿಣಿ– ಅದೆಲ್ಲ ನೀನು ಹೇಳಿ ಕೊಡ್ಬೇಕಾ ಡ್ಯಾಡಿ ಈ ಸಾರಿ ನಾನು ಫಸ್ಟ್ ಕ್ಲಾಸ್ನಲ್ಲೇ ಪಾಸಾಗ್ತೀನಿ ಡ್ಯಾಡಿ ನನಗೆ ಹತ್ತು ಸಾವಿರ ರೂ. ಬೇಕು.

ಗೌಡ– ಅಲ್ಲಮ್ಮ ಪರೀಕ್ಷೆ ಒಂದೇ ತಿಂಗಳ ಇದೆ ಅಷ್ಟೊಂದು ಹಣ ಏನು ಮಾಡ್ತಿ

ರಾಗಿಣಿ– ಎಲ್ಲವೂ ನಿನ್ನ ಮುಂದೆ ಹೇಳಬೇಕೇನು? ಡ್ಯಾಡಿ, ನನ್ನ ಶ್ರೀಮಂತ ಸ್ನೇಹಿತೆಯರು ಸಾಕಷ್ಟಿದ್ದಾರೆ. ದೊಡ್ಡ ಹೋಟೆಲ್‌ಗಳಿಗೆ ಹೋದರೆ ಟೀ, ಟಿಫಿನ್ನ, ಬಿಲ್ ಕೊಡಲು ನಾನು ಹಿಂದೆ ನಿಂದ್ರಬೇಕೇ? ಒಂದು ವೇಳೆ ಬೇರೆಯವರು ಬಿಲ್ ಕೊಟ್ಟರೆ ನನ್ನ ಪ್ರೆಸ್ಟೀಜಿಗೆ ಏನಾಗಬೇಕು ಹೇಳು ಡ್ಯಾಡಿ.

ಗೌಡ– ಹೌದಮ್ಮ, ಈ ಗೌಡನ ಮಗಳು ಯಾವುದರಲ್ಲೂ ಹಿಂದೆ ಬೀಳಬಾರದು ತಗೋ ಹತ್ತು ಸಾವಿರ, ಕಿತಾಪತಿ ನಾಗೇಂದ್ರ ಎಲ್ಲಿ.... (ನಾಗೇಂದ್ರ, ಬರುತ್ತಿರುವನು)

ಕಿತಾಪತಿ– ಇದೋ ಇಲ್ಲೇ ಬಂದಿದ್ದಾರೆ ನೋಡ್ರಿ

ಗೌಡ– ಆಂ.... ನಾಗೇಂದ್ರ.... ರಾಗಿಣಿಯನ್ನು ಮೋಟರ್ ಸೈಕಲ್ ಮೇಲೆ ಬಿಟ್ಟು ಬಾ.

ನಾಗೇಂದ್ರ– ಆಗ್ಲಿ ಗೌಡ್ರ.... ನಡೆ ರಾಗಿಣಿ ಹೋಗೋಣ (ಹೋಗುವರು)

ಗೌಡ– ಕಿತಾಪತಿ, ನಾಳೆ ತೋಟದ ಮನೆಯಲ್ಲಿ ಎಲ್ಲ ಸಿದ್ಧಪಡಿಸು. ಹನುಮ ಮಾತು ತಪ್ಪಿಸುವುದಿಲ್ಲ. ಆಂ.....ನಾನೊಂದಿಷ್ಟು ಪಂಚಾಯ್ತಿ ಕಡೆಗೆ ಹೋಗಿ ಬರ್ತೀನಿ (ಹೋಗುವನು)

ಕಿತಾಪತಿ– ಏನುರಿತಾನ್ರಿ ಯುವುನವುನ್ ಈ ಗೌಡ, ಹೊಟ್ಟೆ ಅನ್ನಕ್ಕಾಗಿ ಸ್ವಲ್ಪ ಸುಮಾರ ಚಟಕ್ಕಾಗಿ ಕೆಲಸ ಮಾಡಾಕತ್ತೀನಿ. ನಡಿಲಿ ಎಷ್ಟು ದಿನ ನಡಿತಾದೋ ನಡಿಲಿ. [ತನ್ನ ಸ್ಥಾನಕ್ಕೆ ಹೋಗುವನು]

===****====****====

ಪ್ರವೇಶ ೫

ಗಾರ್ಡನ್ ಸೀನು

ರಾಗಿಣಿ– (ಪ್ರವೇಶಿಸಿ) ಓ, ಭರತ್ ಪರೀಕ್ಷಾ ಸಿದ್ಧತೆ ಚೆನ್ನಾಗಿ ನಡೆದಿದೆಯೇ?

ಭರತ್– ಹೌದು ರಾಗಿಣಿ, ರೂಮಿನಲ್ಲಿ ಕುಳಿತು ಓದಲು ವಿಪರೀತ ಶೆಕೆ ಇದೆ. ಫ್ಯಾನಿನ ಗಾಳಿಯೂ ಬಿಸಿಯಾಗಿದೆ. ಈ ಗಿಡಗಳ ನೆರಳಿನಲ್ಲಿ ಪ್ರಶಾಂತ ವಾತಾವರಣದಲ್ಲಿ ಓದುತ್ತಿರುವೆ. ತಾವೇನು ಇಲ್ಲಿಗೆ ಬಂದಿರುವಿರಿ.

ರಾಗಿಣಿ– ಯಾಕೆ ಬರಬಾರದೆ? ತಮ್ಮ ದರ್ಶನಕ್ಕಾಗಿಯೇ ಬಂದೆ.

ಭರತ್– ಹೌದಾ, ಹೆಂಗಸರು ಸ್ವಾರ್ಥಕ್ಕಾಗಿ ಏನು ಬೇಕಾದರೂ ಹೇಳ್ತಾರೆ.

ರಾಗಿಣಿ– ನಾನು ಹೆಂಗಸಲ್ಲವಲ್ಲ, ನಾನೊಂದು ಹುಡುಗಿ

ಭರತ್– ಹುಡುಗಿಯರೆಲ್ಲ ತುಂಬಾ ಒಳ್ಳೆಯವರು ಆದರೆ ಈ ಹೆಂಗಸರಿರುತ್ತಾರಲ್ಲ ತುಂಬಾ ಸ್ವಾರ್ಥಿಗಳು.

ರಾಗಿಣಿ– ಅವರು ಸ್ವಾರ್ಥಿಗಳಾಗಲು ಗಂಡು ತಾನೇ ಕಾರಣ. ಈ ಸಮಾಜದಲ್ಲಿ ಹೆಂಡತಿಯಾಗಲು, ಸಂಗಾತಿಯಾಗಲು ಹೆಣ್ಣು ಬೇಕು. ಆದರೆ ಹೆಣ್ಣು ಮಗು ಮಾತ್ರ ಬೇಡಾ ಎನ್ನುವ ಗುಂಪಿನವರು ನೀವು.

ಭರತ್– ಇಲ್ಲ ರಾಗಿಣಿ, ನನ್ನ ಮಟ್ಟಿಗೆ ಹೇಳುವುದಾದರೆ ನಾನು ಹೆಣ್ಣು ದ್ವೇಷಿಯಲ್ಲ, ಇವತ್ತಿನ ಸಮಾಜದಲ್ಲಿ ಈ ವಿಷಯದಲ್ಲಿ ಸ್ತ್ರೀ–ಪುರುಷರಿಬ್ಬರೂ ಸ್ವಾರ್ಥಿಗಳಾಗಿಯೇ ವರ್ತಿಸುತ್ತಿದ್ದಾರೆ. ಅಂತೆಯೇ ಇಂದಿನ ಹೆರಿಗೆ ಕೇಂದ್ರಗಳು ಹೆಣ್ಣು ಶಿಶುಗಳ ಭ್ರೂಣಹತ್ಯೆಯ ಕೇಂದ್ರಗಳಾಗಿವೆ. ಈಗಾದರೆ ೫ ನೂರು, ನಂತರವಾದರೆ ೫ ಲಕ್ಷ ಇದು ಅವರ ಹೇಳಿಕೆಯಾಗಿದೆ.

ರಾಗಿಣಿ– ಇದಕ್ಕೆಲ್ಲಾ ವರದಕ್ಷಿಣೆಯೇ ಕಾರಣ, ಬೆಳೆದ ಮಕ್ಕಳಿಗೆ ಮದುವೆ ಮಾಡಿಕೊಡುವ ಕಷ್ಟದ ಕಲ್ಪನೆಯಿಂದ, ಹೊಟ್ಟೆಯ ಹಸಿವಿನಿಂದ

ಹೆತ್ತ ಕರುಳ ಕುಡಿಗಳನ್ನು ಮಾರಾಟ ಮಾಡಿದ ಹೃದಯವಿದ್ರಾವಕ ಘಟನೆ ಈ ನಮ್ಮ ನಾಡಿನಲ್ಲಿ ಎಷ್ಟೋ ನಡೆದಿವೆ.

ಭರತ್– ಹೆಣ್ಣು ಶಿಶುಗಳ ಮಾರಾಟ ಹೆಣ್ಣು ಶಿಶುಗಳ ಹತ್ಯೆ ನಡೆದಿದೆ ನಿಜ. ಆದರೆ ಇದಕ್ಕೆಲ್ಲಾ ವರದಕ್ಷಿಣೆ ಕಾರಣವೆನ್ನುವೆಯಾ?

ರಾಗಿಣಿ– ಹೌದು, ಸ್ತ್ರೀ ಕುಲವನ್ನೇ ನಾಶ ಮಾಡಲು ಟೊಂಕ ಕಟ್ಟಿನಿಂತಿದೆ ಈ ವರದಕ್ಷಿಣೆ. ಇದರಿಂದಾಗಿ ಸಾವಿರಾರು ಮಹಿಳೆಯರು ಸಾವು ನೋವು ಕಂಡಿದ್ದಾರೆ, ಕಾಣುತ್ತಿದ್ದಾರೆ.

ಭರತ್– ನನಗೇನೋ ಈ ಸಮಸ್ಯೆ ಸಮಸ್ಯೆಯಾಗಿ ಕಾಣ್ತಿಲ್ಲಾ ಏಕೆಂದರೆ ಎಷ್ಟೇ ದುಡ್ಡು ಕೊಟ್ಟರೂ ಪರ್ವಾಗಿಲ್ಲ ನೌಕರಸ್ಥನೇ ವರಬೇಕು, ಶ್ರೀಮಂತನೇ ವರಬೇಕು ಎಂದು ಹಠ ಹಿಡಿದಲ್ಲಿ ಹೀಗಾಗುವುದು ಸಹಜ. ಎಷ್ಟು ಮದುವೆಗಳಲ್ಲಿ ಗಂಡು ವರದಕ್ಷಿಣೆ ಬೇಕೆ ಬೇಕೆಂದು ಹಠ ಮಾಡಿದ್ದಾನೆ. ಗಂಡಿನಿಂದ ಹೆಣ್ಣಿನ ಶೋಷಣೆಯಾಗ್ತಿದೆ ಅನ್ನೋದು ಒಪ್ಪುತ್ತೇನೆ. ವರದಕ್ಷಿಣೆ ಬೇಡಾ ಎನ್ನುವ ಗಂಡಿನಲ್ಲಿ ಏನೋ ದೋಷ ಇದೆ ಎಂದು ಅನುಮಾನ ಪಡೋರೂ ನೀವೇ ತಾನೇ.

ರಾಗಿಣಿ– ಗಂಡಸರೆಲ್ಲಾ ಹೇಳುವದು ಹೀಗೇನೆ, ವರದಕ್ಷಿಣೆ ಕೊಡದ ಹೆಣ್ಣು ಎಷ್ಟೇ ಸುಂದರಿಯಾಗಿದ್ದರೂ ಮದ್ವೆಯಾಗಲು ಗಂಡು ಒಪ್ಪುವುದಿಲ್ಲ ಇಂದಿನ ವರಗಳಿಗೆ ರೂಪ ಮತ್ತು ಹಣ ಎರಡೂ ಬೇಕು, ಗುಣ ಬೇಕಾಗಿಲ್ಲ. ಅಂದಿನ ರಾಮ ಪತ್ನಿಯನ್ನು ಬರೀ ಕಾಡಿಗಟ್ಟಿದ ಇಂದಿನ ರಾಮರು ಸ್ವಾರ್ಥಕ್ಕಾಗಿ ಹೆಣ್ಣುಗಳನ್ನು ಈ ಲೋಕದಿಂದಲೇ ಪಾರು ಮಾಡುತ್ತಿದ್ದಾರೆ.

ಭರತ್– ಇದು ನಿನ್ನ ಕಲ್ಪನೆ ರಾಗಿಣಿ, ಒಂದು ಕೈಯಿಂದ ಚಪ್ಪಾಳೆ ತಟ್ಟೋದಕ್ಕೆ ಆಗಲ್ಲ. ಒಬ್ಬರು ಕೆಟ್ಟವರಾಗಿ ವರ್ತಿಸಬೇಕಾದರೆ ಇನ್ನೊಬ್ಬರದು ಏನಾದ್ರೂ ತಪ್ಪಿರಲೇಬೇಕು.

ರಾಗಿಣಿ– ತಪ್ಪು ಮಾಡದೇ ಶಿಕ್ಷೆ ಅನುಭವಿಸುವವಳು ಹೆಣ್ಣು ಮಾತ್ರ ಗಂಡು ತಪ್ಪು ಮಾಡಿದ್ರೂ ಶಿಕ್ಷೆ ಅನುಭವಿಸಬೇಕಾಗಿಲ್ಲ. ಇದು ಪುರುಷಪ್ರಧಾನ ಸಮಾಜ ನಿರ್ಮಿಸಿಕೊಂಡ ನೀತಿ.

ಭರತ್– ಅದು ಹೇಗೆ ಹೇಳುವೆ.

ರಾಗಿಣಿ– ಯಾವನೋ ಒಬ್ಬ ಕ್ಷುಲ್ಲಕನ ಮಾತು ಕೇಳಿ ರಾಮ ಬಸುರಿಯಾದ ಸೀತೆಯನ್ನು ಕಾಡಿಗಟ್ಟಿದನಲ್ಲ. ಸೀತೆ ಏನು ತಪ್ಪು ಮಾಡಿದ್ದಳು? ಸ್ವಯಂವರದಲ್ಲಿ ದ್ರೌಪತಿಯನ್ನು ಗೆದ್ದ ಅರ್ಜುನ ಅಣ್ಣ ತಮ್ಮಂದಿರೂ ಸಹ ಸ್ವೀಕರಿಸಲು ಅನುವು ಮಾಡಿದನಲ್ಲ. ಪಾಂಡವರು ದ್ರೌಪತಿಯನ್ನು ಜೂಜಾಟಕ್ಕೆ ಹಚ್ಚಿ ಸೋತರಲ್ಲ ದ್ರೌಪತಿ ಏನು ತಪ್ಪು ಮಾಡಿದ್ದಳು? ಹರಿಶ್ಚಂದ್ರ ತನ್ನ ಸತ್ಯ ಪ್ರದರ್ಶಿಸುವದಕ್ಕಾಗಿ ಆದರ್ಶ ಸತಿ ತಾರಾ ಮತಿಯನ್ನು ಮಾರಾಟ ಮಾಡಿದನಲ್ಲ. ತಾರಾಮತಿ ಯಾವ ತಪ್ಪು ಮಾಡಿದ್ದಳು? ತನ್ನ ತಪ್ಪಿಲ್ಲದೆ ಇಂದ್ರನ ಸ್ಪರ್ಶಕ್ಕೆ ಕಲ್ಲಾಗಿ ಬಿಟ್ಟಳಲ್ಲ ಅಹಲ್ಯೆ ಅವಳೇನು ತಪ್ಪು ಮಾಡಿದ್ದಳು? ಪರಪುರುಷನನ್ನು ಮನದಲ್ಲಿ ಧ್ಯಾನಿಸಿದ ಮಾತ್ರಕ್ಕೆ ಕಳಂಕ ಹೊತ್ತು ಹೆತ್ತ ಮಗ ಪರಶುರಾಮನ ಕೊಡಲಿಗೆ ತಲೆ ಕೊಟ್ಟಳಲ್ಲ ಆ ದುರ್ದೈವಿ ರೇಣುಕ ಅವಳ್ಯಾವ ಮಹಾ ತಪ್ಪು ಮಾಡಿದ್ದಳು?

ಭರತ್– ವ್ಹಾ ! ಪುರಾಣ ಕಥೆಗಳ ಬಗ್ಗೆ ಚೆನ್ನಾಗಿ ತಿಳಿದಿರುವಿ ರಾಗಿಣಿ. ಇಂಥ ವಿಷಯಗಳನ್ನು ಚರ್ಚಿಸಲು ಇದು ತಕ್ಕ ಸಮಯವಲ್ಲ ಪರೀಕ್ಷೆಗೆ ಮೂರುದಿನ ಮಾತ್ರ ಇದೆ. ಏನೇ ಚರ್ಚೆ ಇದ್ರೂ ಆಮೇಲೆ ಚರ್ಚಿಸೋಣ. ಸರಿಯಾದ ಸ್ಥಳದಲ್ಲಿ ಕುಳಿತು ಓದೋಣ ನಡೆ.

ರಾಗಿಣಿ– ಓದು ಸದಾ ಇದ್ದದ್ದೇ ಭರತ್ ನಾನೊಂದು ಮಾತು ಕೇಳಲೇ?

ಭರತ್– ಕೇಳು.

ರಾಗಿಣಿ– ನೀನು ತಪ್ಪು ತಿಳಿದುಕೊಳ್ಳಬಾರದು.

ಭರತ್– ಛೇ, ಛೇ, ವಿಷಯ ಹೇಳಿದರೆ ತಾನೇ ಗೊತ್ತಾಗೋದು.

ರಾಗಿಣಿ– ನಾನು ನಿನ್ನನ್ನು ಪ್ರೀತಿಸ್ತಾ ಇದ್ದೇನೆ.

ಭರತ್– ಏನು ಹೇಳ್ತಿದ್ದಿಯಾ ರಾಗಿಣಿ, ನಾವು ಇಲ್ಲಿಗೆ ಓದಲು ಬಂದವರು. ಮೊದಲು ನಮ್ಮ ಅಭ್ಯಾಸ ಮುಗಿಯಲಿ ಮದ್ವೆ ಸಂಸಾರ ಇದ್ದದ್ದೆ.

ರಾಗಿಣಿ– ಅದೆಲ್ಲ ನನಗೆ ಗೊತ್ತಿಲ್ಲ ನಿನ್ನ ಒಪ್ಪಿಗೆ ತಿಳಿಸು ಅಷ್ಟೇ.

ಭರತ್– ಇಲ್ಲ ಅಂತಿಟ್ಕೋ ಏನ್ಮಾಡ್ತಿ.

ರಾಗಿಣಿ– ನಿನ್ನಂಥವನ ಪ್ರೀತಿಯೇ ಸಿಗದಿದ್ದರೆ ಬದುಕೇನು ಪ್ರಯೋಜನ, ಸತ್ತು ಹೋಗ್ತೀನಿ.

ಭರತ್– ಈ ಮಾತು ಸತ್ಯವೇ?

ರಾಗಿಣಿ– ಸತ್ಯ, ನಾನು ಆಡಿ ತೋರಿಸುವವಳಲ್ಲ, ಮಾಡಿ ತೋರಿಸುವವಳು. ನಾಳೆ ಬೆಳಗಾಗುವುದರಲ್ಲಿ ನೀ ಎಂಥ ನ್ಯೂಜ್ ಕೇಳ್ತೀ ನೋಡು. (ಹೋಗುವಾಗ)

ಭರತ್– ರಾಗಿಣಿ, ಐ ಲವ್ ಯೂ (ಹೊರಟ ಅವಳು ಓಡಿ ಬಂದು ಅಪ್ಪುವಳು ಒಂದು ಹಾಡು ಹಾಡಿ ಹೋಗುವರು)

===***====***===

ಪ್ರವೇಶ ೬

ಬಸವಂತನ ಮನೆ

(ಬಸವಂತ, ಊರಿಗೆ ಹೊರಡಲು ಸಿದ್ಧನಾಗಿದ್ದಾನೆ ಸಾವಿತ್ರಿ, ಒಳಗಿನಿಂದ ಚಹಾ ಹಿಡಿದು ಬರುವಳು)

ಸಾವಿತ್ರಿ– ಚಹಾ ತಗೋಳ್ರಿ

ಬಸವಂತ– ಈಗೇ ಊಟ ಮಾಡಿದ್ದೇನೆ ಮತ್ತೇಕೆ ಚಹಾ ತಂದಿ ಇಲ್ಲಿ ಕೊಡು (ಕುಡಿದಾದ ನಂತರ) ಆಂ....ಸಾವಿತ್ರಿ ಊರಿಂದ ಬರಲು ಮೂರು ದಿನವಾಗುತ್ತೇ ಮನೆ ಕಡೆಗೆ ಹುಷಾರ್!

ಸಾವಿತ್ರಿ– ನೀವೇನು ಚಿಂತಿ ಮಾಡಬ್ಯಾಡ್ರಿ ನಿಮ್ಮ ಕೆಲ್ಸಾ ಮುಗಿಸಿಕೊಂಡೇ ಬರ್ರಿ (ಶೇಖರ ಗಡಿಬಿಡಿಯಿಂದ ಬರುವನು)

ಬಸವಂತ– ಶೇಖರ್, ಏಕೆ ಗಡಿಬಿಡಿಯಲ್ಲಿರುವೆ.

ಶೇಖರ– ಅಲ್ಲಣ್ಣ, ಆ ಗೌಡರ ಆಳು ನಮ್ಮ ಹೊಲದ ಬದುವಿಗೆ ಎತ್ತು ಮೇಯಿಸಬೇಕಾ? ಕಡೆಯ ಎರಡು ಸಾಲು ಬೆಳೆ ತಿಂದು ತುಳಿದು ಹಾಳು ಮಾಡಿವೆ

ಬಸವಂತ– ಅಷ್ಟೇ ತಾನೇ ಅವರೇನು ನಮ್ಮ ಹಣೆಬರಹ ತೆಗೆದುಕೊಳ್ಳಲಿಲ್ಲ. ಮುಗ್ಧ ಬಸವಣ್ಣ ಎರಡು ಸಾಲು ಬೆಳೆ ತಿಂದರೇನಾಯ್ತು, ಕೊಡುವ ದೇವರು ದೊಡ್ಡವನಿದ್ದಾನೆ.

ಶೇಖರ– ನೀನು ಹೀಗೆ ಹೇಳುತ್ತಾ ಕೂಡು, ನಾಳೆ ಅವರು ಇಡೀ ನಮ್ಮ ಹೊಲಾನೇ ಮೇಯಿಸಿಕೊಂಡು ಹೋಗ್ತಾರೆ. ಇದು ಬಸವಣ್ಣನವರ ಕಾಲ ಅಲ್ಲಣ್ಣ, ಈ ಜನ ಬಗ್ಗಿದರೆ ತಲೆಮೇಲೆ ಕಾಲಿಡ್ತಾರೆ ಒದ್ದರೆ ಸಲಾಮು ಹೊಡೆಯುತ್ತಾರೆ.

ಬಸವಂತ– ಅಂದರೆ, ಅವರ ಜೊತೆ ಜಗಳ ಆಡಿಯೇ ಬಂದ್ಯಾ

ಶೇಖರ– ಎಚ್ಚರಿಕೆ ಕೊಟ್ಟು ಬಂದಿದ್ದೇನೆ. ಇದು ಮೊದಲ ಸಲ ಇನ್ನೊಮ್ಮೆ

ಏನಾದ್ರು ನಮ್ಮ ಹೊಲದ ನೆರಳಿಗೆ ಬಂದ್ರೆ ಜೀವ ಇರಲಿಕ್ಕಿಲ್ಲ ಹುಷಾರ್ ಎಂದು ಹೇಳಿ ಬಂದಿದ್ದೇನೆ.

ಸಾವಿತ್ರಿ– ಹಾಗೆಲ್ಲ ಮಾಡಬಾರದು. ಬೇರೆಯವರೊಂದಿಗೆ ಜಗಳವಾಡುವದು ತಪ್ಪು.

ಬಸವಂತ– ತಿಳಿದವನಾದ ನಿನಗೆ ಹೆಚ್ಚಿಗೆ ಹೇಳುವುದರಲ್ಲೇನಿದೆ ನಮ್ಮ ಮನೆತನದಲ್ಲಿ ಎಂದೂ ಯಾರೂ ಜಗಳವಾಡಿಲ್ಲ. ಇರ್ಲಿ, ಶೇಖರ್ ನಾನು ಊರಿಗೆ ಹೊರಡುತ್ತಿದ್ದೇನೆ. ಬರಲು ಮೂರು ದಿನವಾಗುತ್ತೇ ಮನೆ ಮತ್ತು ಹೊಲದ ಕಡೆ ಸರಿಯಾದ ಗಮನ ಇರ್ಲಿ.

ಶೇಖರ– ಹೋಗಿ ಬಾರಣ್ಣ, ಈ ಕಡೆ ಚಿಂತಿ ಮಾಡ್ಬೇಡಾ.

ಬಸವಂತ– ಬರ್ತೀನಿ ಸಾವಿತ್ರಿ. (ಹೋಗುವನು).

ಸಾವಿತ್ರಿ– ಬಾ ಶೇಖರ್ ಊಟ ಮಾಡುವಿಯಂತೆ.

ಶೇಖರ– ಊಟ ಆಮೇಲೆ ಮಾಡ್ತಿನತ್ತಿಗೆ ಎತ್ತುಗಳನ್ನು ಹಾಗೆಯೇ ಬಿಟ್ಟು ಬಂದಿದ್ದೇನೆ. ಗೌಡರ ಆಳುಗಳು ಹೊಲ ಹಾಳು ಮಾಡಿದ್ದನ್ನು ಕಂಡು ಅಣ್ಣನಿಗೆ ತಿಳಿಸಲು ಬಂದೆ.

ಸಾವಿತ್ರಿ– ತಿಳಿಸಿಯೇ ಒಳ್ಳೇದು ಮಾಡಿರುವಿ ನೋಡು ದುಡುಕು ಬಲು ಕೆಡುಕಂತೆ ಯಾವುದೇ ಕಾರಣಕ್ಕೂ ದುಡುಕಿ ಜಗಳಕ್ಕೆ ನಿಲ್ಲಬೇಡ

ಶೇಖರ– ನಾನು ಜಗಳಕ್ಕೆ ನಿಲ್ಲುವದಿಲ್ಲಮ್ಮ ಆದರೆ ಅವರೇ ಕಾಲು ಕೆದರಿ ಬಂದರೆ ಏನು ಮಾಡಲಿ.

ಸಾವಿತ್ರಿ– ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆ ಕೊಡು ಎಂದು ಗಾಂಧೀಜಿ ಹೇಳಿಲ್ಲವೇ ನಾವು ಸಹಿಸಿಕೊಂಡಷ್ಟು ಸಮಗೊಳ್ಳೆಯದು,

ಶೇಖರ– ನೀನು ಯಾವ ಕಾಲದಲ್ಲಿದ್ದೀ ಅತ್ತಿಗೆ ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆ ಕೊಡಲು ಹೇಳಿದೆಯಲ್ಲ. ನಾವು ಕೊಡದಿದ್ದರೂ ಎರಡೂ ಸೇರಿಸಿಯೇ ಬಾರಿಸುತ್ತಾರೆ. ಅನ್ಯಾಯ ಮಾಡುವುದು ಅಧರ್ಮ ಅದರಂತೆ ಅನ್ಯಾಯ ಆದಾಗ ಸಹಿಸಿಕೊಳ್ಳುವುದು ಕೂಡಾ ಅಧರ್ಮವೇ ಎನ್ನುವುದು ಕೇಳಿಲ್ಲವೇನಮ್ಮ.

ಸಾವಿತ್ರಿ– ಎಷ್ಟು ತಿಳುವಳಿಕೆ ತುಂಬಿದೆಯಪ್ಪ ನಿನ್ನಲ್ಲಿ ನಿನ್ನಂಥ ಮೈದುನನನ್ನು ಪಡೆಯಲು ನಾನೆಷ್ಟು ಜನ್ಮದ ಪುಣ್ಯ ಮಾಡಿದ್ದೇನೋ ಏನೋ.

ಶೇಖರ– ಹಾಗನ್ನದಿರಮ್ಮ, ನಿನ್ನಂಥ ಆದರ್ಶ ಅತ್ತಿಗೆಯನ್ನು ಪಡೆದ ನಾನೇ ಧನ್ಯನಮ್ಮ. ನಾನು ತಾಯಿ ಪ್ರೀತಿ ಕಂಡವನಲ್ಲ. ಆದರೆ ಹೆತ್ತ ತಾಯಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿರುವಿ ನೀನು. "ಚಿನ್ನದಂಥ ಅತ್ತಿಗೆ"

ಸಾವಿತ್ರಿ– ನನ್ನ ಹೊಗಳಿ ಅಟ್ಟಕ್ಕೇರಿಸಬೇಡಾ, ನಾನೇನು ಪ್ರಪಂಚದಲ್ಲಿ ಯಾರೂ ಮಾಡದ ಕೆಲಸ ಮಾಡ್ತಿಲ್ಲ ನೋಡಪ್ಪ ಮಾತಿನಲ್ಲಿ ಸಮಯ ಕಳೆಯಬೇಡಾ, ಎತ್ತಿನೊಂದಿಗೆ ಆಳಿದ್ದಿರಬೇಕಲ್ಲ ಬೆಳಿಗ್ಗೆ ಹೋದವನು ಬಹಳ ದಣಿದು ಬಂದಿರುವಿ. ಬಾ ಊಟ ಮಾಡಿಕೊಂಡು ಹೋಗು.

ಶೇಖರ– ನಡೆಯಮ್ಮ, (ಒಳಗೆ ಹೋಗುವರು).

===***===***===

ಪ್ರವೇಶ ೭

ರಸ್ತಾ ಸೀನು

(ಚಂಪಾಕಲಿ, ಹಾಲು ಮಾರುತ್ತಾ ಬರುವಳು, ಎದುರಿಗೆ ರಂಗಣ್ಣ, ಬರುವನು. ಢಿಕ್ಕಿಯಾಗಿ, ಅವಳು ಅಲ್ಪ ನೋವಿನಿಂದ)

ಚಂಪಾಕಲಿ– ಎಲಾಯಿವನ, ಅಡ್ನಾಡಿ ಹಳೇ ಅಡ್ನಾಡಿ, ಯಾರು ನೀನು? ಕಣ್ಣು ಕಾಣಿಸ್ತಾವಾ ಇಲ್ಲ ಕಣ್ಣಾಗೇನು ಗೂಟಾ ಇಟಕೊಂಡಿಯಾ ಯಾ ಪರಿ ಹಾಯ್ದೆಲ್ಲ. ಎವ್ವಾ ಎಷ್ಟು ನೋಯಾಕತ್ಯಾದ (ಗುಣು ಗುಣಿಸುವಾಗ)

ರಂಗಣ್ಣ– ಅರೇ! ನೀವೇ ಬಂದು ಹಾಯ್ದು ಎಷ್ಟು ರಂಪ್ ಮಾಡ್ತಿರೆಲ್ಲರಿ ಪೇಶೆಂಟ್ ಅಗ್ದಿ ಸೀರಿಯಸ್ ಅದ ಅಂತ್ಹೇಳಿ ಸ್ಪೀಡಾಗಿ ಹೊಂಟಿದ್ದೆ. ನೀವೇ ಹಾಯ್ದರೆಲ್ಲ. (ನೋಡಿ) ಅರೇ, ನಮ್ಮ ಮನೆ ಓನರ್ ಚಂಪಾಕಲಿ....ಯಾಕ್ರಿ ಭಾಳ ಪೆಟ್ಟಾಯ್ತಾ.

ಚಂಪಾಕಲಿ– ಪೆಟ್ಟಾಯಾತಾ ಅಂತಾ ಕೇಳ್ತಿರೆಲ್ಲರಿ ಡಾಕ್ಟ್ರೇ ಇಷ್ಟ ಗಟ್ಟಿಯಾಗಿ ಹಾಯ್ದ್ರ ಹ್ಯಾಂಗ ತಾಳಿಕೋಬೇಕು ನೀವಂತ ಸುಮ್ನ ಬಿಟ್ಟೀನಿ ಮತ್ಯಾರಾದ್ರು ಆಗಿದ್ರ....

ರಂಗಣ್ಣ– ಏನ್ ಮಾಡ್ತಿದ್ರಿ.

ಚಂಪಾಕಲಿ– ಕಾಲಾಗಿನವು ತೆಗೆದು ಕೈಯಾಗ ಕೊಡತಿದ್ದೆ.

ರಂಗಣ್ಣ– ಅಷ್ಟೇನಾ, ಮತ್ತೇನು ಮಾಡ್ತಿದ್ರೊ ಅಂದಿದ್ದೆ ನಿಮ್ಮವು ಯಾವು ಕೊಟ್ರೂ ಸಂತೋಷರಿ ಕಾಲಾಗಿನವಾ ಕೊಡ್ರಿ ಮೈಯಾಗಿನವಾ ಕೊಡ್ರಿ....ಆಂ ಹೋಗ್ಲಿ ಬಿಡ್ರಿ ಈಗೇನಾಗ್ಯಾದ, ಒಂದು ಪೇನ್ ರಿಲೀಫ್ ಇಂಜೆಕ್ಷನ್ ಕೊಡ್ಲೇನು.

ಚಂಪಾಕಲಿ– ಬ್ಯಾಡ್ರಿ ಡಾಕ್ಟ್ರೇ ನನಗೆ ಚುಚಿಸಿಕೊಂಡ ಅನುಭವ ಇಲ್ಲ.

ರಂಗಣ್ಣ– ಚುಚ್ಚಿಸಿಕೋಬೇಕ್ರಿ ಇಲ್ಲಂದ್ರ ಬ್ಯಾನಿ ಹ್ಯಾಂಗ ಕಮ್ಮಿ ಆಗ್ತದ. ಹುಟ್ಟುತ್ಲೇ

ಯಾರಿಗೆ ಅನುಭವ ಇರ್ತದ ಹೇಳ್ರಿ ಧೈರ್ಯದಿಂದ ಹಂಗೆ ಮಾಡಿಸಿಕೊಂಡ್ರೇನೆ ಅನುಭವ ಬರ್ತದ, ಮೊದ ಮೊದಲು ಹಂಗೇ ಹೆದರಿಕೆಯಾಗ್ತದ, ನಂತರ ಸಲೀಸಾಗ್ತಾದ.

ಚಂಪಾಕಲಿ– ಬ್ಯಾಡ್ರಿ ನಿಮ್ಮ ಸೂಜಿ ನೋಡಿದ್ರೆ ಹೆದರಿಕೆಯಾಗ್ತದ, ಬೇಕಾದ್ರ ದೌಡ ಕಮ್ಮಿ ಆಗಾ ಗುಳಿಗಿ ಇದ್ರ ಕೊಡ್ರಿ

ರಂಗಣ್ಣ– ಸ್ವಲ್ಪ ಮುಂದ ಬನ್ರಿ ಚೆಕ್ ಮಾಡೇ ಕೊಡಬೇಕಾಗ್ತದ ಎಷ್ಟು ನಾಚ್ತಿರೆಲ್ಲರಿ ಡಾಕ್ಟರೆದುರು ನಾಚಿಕೊಳ್ಳದೆ ಮನಸ್ಸು ಬಿಚ್ಚಿ ಮಾತಾಡಬೇಕ್ರಿ ಆಂ.....ಸ್ವಲ್ಪ ಮುಂದೆ (ಸ್ಕೆತೋಸ್ಕೋಪಿನಿಂದ ಚೆಕ್ ಮಾಡಿ) ಆಂ... ಚುಚ್ಚಿಸಿಕೊಳ್ಳಾಕ ಹೆದರಾಕತ್ತೀರೆಲ್ಲ ಇರ್ಲೀ, ಸಧ್ಯ ಈ ಗುಳಿಗಿ ತಗೋರ್‍ರಿ, ಈಗ ಎರಡು ಹಾಕ್ಕೊಳ್ರಿ ರಾತ್ರಿ ಮಲಗುವಾಗ ಒಂದು ಹಾಕ್ಕೊಳ್ರಿ.

ಚಂಪಾಕಲಿ– ಈ ದುಂಡನವು ಎರಡು ಈಗ ಹಾಕ್ಕೋಬೇಕು ಉದ್ದಂದು ರಾತ್ರಿ ಹಾಕ್ಕೋಬೇಕು ಅಲ್ಲರಿ.....

ರಂಗಣ್ಣ– ಹೌದು, ಯಾವದು ಯಾವಾಗ ಹಾಕ್ಕೋಬೇಕನ್ನೋದು ಸರಿಯಾಗಿ ಗೊತ್ತಿದ್ದಂಗದ ನೋಡ್ರಿ ನಾವು ಪೇಶೆಂಟಿಗೆ ತಿಳಿಯುವಂಗ ಮಾತಾಡಿದ್ರ ಕೆಲವ್ರೊಬ್ರು ಡಬಲ್ ಮೀನಿಂಗ್ ಮಾತಾಡ್ತಾನ ಅಂತಾರ ಏನ್ ಮಾಡ್ಲಿಕ್ಕಾಗ್ತದ, ಒಂದು ವೇಳೆ ಇಷ್ಟಕ್ಕ ಕಡಿಮೆಯಾಗದಿದ್ರ ಹ್ಯಾಗಿದ್ರು ನಿಮ್ಮ ಹಿಂದಿನ ಮನ್ಯಾಗ ಇರ್ತೀನಲ್ಲ ಬಂದ್ ಎಬ್ಬಿಸರಿ, ಸಾವಕಾಶ ಸರಿಯಾಗಿ ಟ್ರೀಟ್‌ಮೆಂಟ್ ಕೊಡ್ತೀನಿ.

ಚಂಪಾಕಲಿ– ಪಾಪ! ಮಲಕೊಂಡಿರ್ತೀರಿ ಮೊನ್ನೆ ಭಾಳ ತಲೆ ನೋಯಾಕತ್ತಿತ್ರಿ ರಾತ್ರಿ ಎಬ್ಬಿಸಾಣಾ ಅಂತಾ ಬಂದೆ ಮತ್ಯಾಕೋ ನಿಮಗ್ಯಾಕ ತೊಂದರೆ ಕೊಡೋಣ ಅಂತಾ ಎಬ್ಬಿಸಲಿಲ್ಲ.

ರಂಗಣ್ಣ– ಎಂಥಾ ಅವಕಾಶ ಕಳದರಿ ಹಗಲಿರಲಿ, ರಾತ್ರಿಯಿರ್ಲಿ, ನಾವು ಎಂಥಾ ಕೆಲಸದಾಗ ಇದ್ರೂ ಪೇಶೆಂಟ್ ಬಂದಾಗ ಎಲ್ಲಾ ಬಿಟ್ಟು ಪೇಶೆಂಟ್ ನೋಡೋದು ನಮ್ಮ ಧರ್ಮರಿ ಇನ್ನೊಮ್ಮೆ ಹಾಂಗ ಮಾಡಬ್ಯಾಡ್ರಿ ರಾತ್ರಿ ಬಾರಾ ಒಂದಾದ್ರೂ ಪರವಾಗಿಲ್ಲ ಎಬ್ಬಸರಿ.

ಚಂಪಾಕಲಿ– (ಸ್ವ) ಆವಾಗಿಂದ ನೋಡ್ತೀನಿ ಈ ಡಾಕ್ಟರ ಹುಚ್ಚುಚ್ಚೇ ಮಾತಾಡ್ತಾನ, ಆಗ್ಲಿ ಇವನಿಗೆ ಸರಿಯಾದ ಬುದ್ಧಿ ಕಲಸ್ತೀನಿ.

ರಂಗಣ್ಣ– ಯಾಕ್ರೀ ಏನೋ ವಿಚಾರ ಮಾಡಾಕತ್ತೀರಲ್ಲ ಇವತ್ತ ಸಂಜೆಗೆ ಕಡಿಮೆಯಾಗಲಿಲ್ಲಂದ್ರ ಕರೀರಿ ಮತ್ತೆ....

ಚಂಪಾಕಲಿ– ಆಯ್ತುರೀ, ಡಾಕ್ಟರ್ ನೀವು ನನ್ನ ಮ್ಯಾಲ ಭಾಳಾ ಪ್ರೀತಿ ತೋರಿಸ್ತೀರಲ್ಲಾ ಯಾಕೆ?

ರಂಗಣ್ಣ– ಯಾಕಂದ್ರ ಏನು ಹೇಳಬೇಕ್ರಿ, ಅಪೋಜಿಟ್ ಸೆಕ್ಸಂದ್ರ ಅಟ್ರ್ಯಾಕ್ಷನ್ ಇರೋದು ಸಹಜ ಅದರಲ್ಲೂ ಇಬ್ಬರೂ ಅನ್ ಮ್ಯಾರೀಡ್, ಟೀನ್ ಏಜ್ ಇದರಾಗ ತಪ್ಪೇನೈತಿ.

ಚಂಪಾಕಲಿ– ಎಷ್ಟ ಚಂದ ಮಾತಾಡ್ತಿದ್ದೀರಲ್ರೀ ನೀವು ಯಾವುದರ ನಾಟಕದಾಗ ಪಾತ್ರಾ ಮಾಡಿದ್ದಿರೇನು?

ರಂಗಣ್ಣ– ಹೌದ್ರಿ, ನಮ್ಮ ಎಸ್ ಎನ್ ದಂಡಿನ ಕುಮಾರ್ ಅವರ "ರಣ ಹದ್ದುಗಳ ರಾಸಲೀಲೆ" ನಾಟಕದಾಗ ದನದ ಡಾಕ್ಟರ ಪಾತ್ರ ಮಾಡಿದ್ದಿನ್ರೀ ಜೊತೆಗೆ ಜೀವನ ಅನ್ನೋ ನಾಟಕ ಇರ್ತದಲ್ಲ ಅದರಿಂದಾನೂ ಅನುಭವ ಆಗೇದ.

ಚಂಪಾಕಲಿ– ಅಂದ್ರ ಡಾಕ್ಟರ ನನ್ನ ಮ್ಯಾಲ ನೀ ಭಾಳ ಪ್ರೀತಿ ಇಟ್ಕೊಂಡಿದ್ದಿ ಅಂದಾಂಗಾಯ್ತು.

ರಂಗಣ್ಣ– ಭಾಳಂತಾ ಕೇಳ್ತೀಯೇನು ಮೂರು ದಿನ ಆಯ್ತು ದಿನಾ ನೀನೇ ಕನಸಿನ್ಯಾಗ ಬರಾಕತ್ತೀದಿ ನಿನ್ನೀ ಕನಸಿನ್ಯಾಗ ನಾವಿಬ್ಬರೂ ಚಂದ್ರಲೋಕಕ್ಕೆ ಹೋಗಿದ್ದೆವು.

ಚಂಪಾಕಲಿ– ಅಲ್ಲೇನೈತಿ ಬರೀ ಬೋಳು ಬೋಳು. ಇಂದ್ರಲೋಕ ಆಗಿರಬೇಕು ನೋಡು.

ರಂಗಣ್ಣ– ಯಾವುದೋ ಒಂದು ಲೋಕ. ಭರ್ಜರಿ ಹನಿಮೂನ ಆಯ್ತು. ಅದನ್ನ ನೆನೆಸಿಕೊಂಡ್ರ ಹ್ಯಾಂಗ್ಯಾಂಗೋ ಆಗೈತಿ ಚಂಪಾಕಲಿ ಬಾ. ಆ ಸ್ವರ್ಗ ಸುಖ ತೋರಿಸ್ತೀನಿ. (ಇಬ್ಬರೂ ಹಾಡಿ ಕುಣಿದು ನಂತರ ಪೋಲಿಸ ಬರುವನು).

ಪೋಲಿಸ– ಸ್ಟಾಪ್ ಸ್ಟಾಪ್, ಏನಿದು ಗಂಡು ಹೆಣ್ಣು ಪಬ್ಲಿಕ್ ರೋಡಿನಲ್ಲಿ ರೋಮಿಯೋ ಜೂಲಿಯಟ್ ತರಹ ಹಾಡಿ ಕುಣಿದಾಡಲಿಕ್ಕೆ ಏನು ತಿಳಕೊಂಡೀರಿ.

ರಂಗಣ್ಣ– ನಾ ಹೇಳಿದ್ರ ಕೇಳ್ಲಿಲ್ರೀ ಗಾರ್ಡನ್ನದಾಗ ಹೋಗಿ ಹಾಡೋಣ ಅಂದ್ರ ಇಲ್ಲೇ ಸುರು ಹಚ್ಚಿಕೊಂಡಳ್ರೀ.

ಚಂಪಾಕಲಿ– ಯಾಕ ಸುಳ್ಳು ಹೇಳ್ತಿಯಾ ಡಾಕ್ಟರಾ. ಕನಸಿನ್ಯಾಗ ಚಂದ್ರಲೋಕಕ್ಕ ಹೋಗಿದ್ದೆ ಆ ಸ್ವರ್ಗ ಸುಖ ತೋರಸ್ತೀನಂತಾ ಹೇಳಿ ಹಾಡು ಹಾಡಿದಾಂವ ನೀನ, ನನ್ನ ಮ್ಯಾಲೆ ಯಾಕ ಚಾಡಿ ಹೇಳ್ತಿ.

ಪೋಲಿಸ– ಚಂಪಾಕಲಿ ಈ ಪೇಪರ ಮ್ಯಾಲೆ ಒಂದು ಸಹಿ ಹಾಕು. ನಿನ್ನ ಮ್ಯಾಲೆ ರೇಪ ಮಾಡ್ಲಿಕ್ಕ ಬಂದ್ನ ಅಂತ ಹೇಳಿ ಕಂಪ್ಲೆಂಟು ಬರದು ಮಗನಿಗೆ ಸರಿಯಾಗಿ ಏರೋಪ್ಲೇನ್ ಹತ್ತಿಸತೀನಿ.

ರಂಗಣ್ಣ– ಅಂದ್ರ ವಿಮಾನದಾಗ ಕೂಡಸ್ತೀರಾ?

ಪೋಲಿಸ– ಆಕಾಶದಾಗಿನ ವಿಮಾನ ಅಲ್ಲಲೇ ಪೋಲಿಸ ಸ್ಟೇಶನದಾಗಿನ ವಿಮಾನ ಮಂದಿ ಹೆಣ್ಣ ಮಕ್ಕಳಿಗೆ ಕಣ್ಣು ಹಾಕ್ತಿ ಯಾವೂರು ನಿಂದು.

ಚಂಪಾಕಲಿ– ಹೋಗ್ಲಿ ಬಿಡ್ರಿ, ಇವರು ಆರ್‌ಎಂಪಿ ಡಾಕ್ಟರದಾರ. ನಮ್ಮ ಮನೆಯಲ್ಲೇ ಬಾಡಿಗೆಗೆ ಅದಾರ ಏನೋ ಸಲಿಗೆಯಿಂದ ಕನಸಿನ್ಯಾಗ ನಡೆದ ಸುದ್ದಿ ಹೇಳಾಕತ್ತಿದ್ರು ನೀವು ಬಂದ್ರಿ ಇದೊಂದು ಸಲ ಕ್ಷಮಾ ಮಾಡಿಬಿಡ್ರಿ ಬದುಕಿಕೊಳ್ಳಿ.

ಪೋಲಿಸ– ನೀ ಹೇಳಾಕತ್ತೀದಿ ಅಂತ ಬಿಡಾಕತ್ತೀನಿ ಇಲ್ಲಂದ್ರ ಒಂದು ಪಿಟ್ಟಿ ಕೇಸ್ ಹಾಕಿ ಪೋಲಿಸ ಸ್ಟೇಶನ್‌ದಾಗ ಕೂಡಿಸ್ತಿದ್ದ ತಮ್ಮಾ ಡಾಕ್ಟರ್ ಮೊದಲ ಇಲ್ಲಿಂದ ಜಾಗಾ ಖಾಲಿ ಮಾಡು.

ರಂಗಣ್ಣ– ನಾ ಹೋಗ್ತೀನ್ರೀ, ನಾ ಹೋದ ಮ್ಯಾಲೆ ನೀವು ಸುರು ಹಚ್ಚಿಕೊಂಡೀರಿ ಮತ್ತೆ.

ಪೋಲಿಸ– ಏ, ಏನು ತಿಳದಿ ನನ್ನ ಸಿನ್ನಿಯರ್ ಪೋಲಿಸನೋ ನಾನು ನನ್ನ ಸರ್ವಿಸಿನಲ್ಲಿ ನಿನ್ನಂಥವರಿಗೆ ಎಷ್ಟು ಜನರಿಗೆ ನೋಡಿಲ್ಲಾ. ನಡೀ ನಡಿ. (ರಂಗಣ್ಣ ಹೋಗುವನು)

ಚಂಪಾಕಲಿ– ಸಮಯಕ್ಕೆ ಸರಿಯಾಗಿ ಬಂದು ನನ್ನ ಮಾನಾ ಕಾಪಾಡಿದಿರಿ, ಸಾಹೇಬ್ರ ಭಾಳ ಉಪಕಾರ ಆಯ್ತು.

ಪೋಲಿಸ– ಸಮಯಕ್ಕೆ ಸರಿಯಾಗಿ ಬರುವದೇ ಪೋಲಿಸರ ಕರ್ತವ್ಯ ಅಲ್ಲವೇ?

ಚಂಪಾಕಲಿ– ಹೌದು ಹೊಡೆದಾಡಿ ಹೆಣಾ ಬಿದ್ದ ಮ್ಯಾಲ ಬರ್ತೀರಿ. ಇಲ್ಲಾ ಎಲ್ಲಾ ಮುಗದ ಮ್ಯಾಲು ಗುಲ್ಲು ಮಾಡಾಕ ಬರ್ತೀರಿ.

ಪೋಲಿಸ– ಪೋಲಿಸರ ಬಗ್ಗೆ ಬಹಳ ತಿಳಿಕೊಂಡಿ ನೀನು ಚಂಪಾಕಲಿ ಅವನ ಜೊತೆ ಯಾಕ ಕುಣ್ಯಾಕತ್ತೀದಿ?

ಚಂಪಾಕಲಿ– ಕಾಮಣಿ ಆದವರ ಕಣ್ಣಿಗೆ ಜಗತ್ತೇ ಹಳದೀ ಕಾಣ್ತಾವಂತಾ ಏನೋ ನಿಂತ ನಾಕ ಮಾತಾಡತಿದ್ವಿ, ನೀವು ಬಂದ್ರಿ ಖರೇ ಹೇಳ್ತೀನ್ರೀ ಪೋಲಿಸರ ನನ್ನ ಪ್ರೀತಿ ನಿಮ್ಮ ಮ್ಯಾಲ ಭಾಳ ಐತ್ರಿ.

ಪೋಲಿಸ– ಹೌದಾ!

ಚಂಪಾಕಲಿ– ಹೌದು ನಮ್ಮಪ್ಪನಾಣೆನೂ ಖರೆ.

ಪೋಲಿಸ್– ಹಾಗಿದ್ರೆ ಆಯ್ತು ನನ್ನ ಜನ್ಮ ಸಾರ್ಥಕ. (ಇಬ್ಬರೂ ಹಾಡಿ ಕುಣಿದಾಡುವಾಗ ಕಿತಾಪತಿ ಬಂದು ನೋಡಿ ಹೊಯಿಕೊಳ್ಳುವನು ಇಬ್ರೂ ದೂರಾಗುವರು)

ಕಿತಾಪತಿ– ಚಂಪಾಕಲಿ ತೆಗೆದೆವ್ವೋ ನನ್ನ ಮಾನಾ ಪೂರಾ ತಗದಿ ಏನಿದು ನಡುರಸ್ತೇದಾಗ ನಂಗಾನಾಚ ಮಾಡಾಕತ್ತೀರೆ.

ಪೋಲಿಸ– ಲೇ ಯಾವುನವನು ಏನು ತಿಳಕೊಂಡಿ ನನ್ನ ಪಾಪ ಹುಡ್ಗಿ ಕಾಲು ಜಾರಿ ಬೀಳ್ತಿದ್ಲು ಹಿಡಕೊಂಡೆ ತಪ್ಪಾಯ್ತಾ?

ಕಿತಾಪತಿ– ಈ ಪಾಪಿ ಕಣ್ಣೀಲೆ ನೋಡಿನೋ ತಮ್ಮಾನೀ ಅವಳ ಕೈ ಹಿಡಿದು ಕುಣಿಯೋದು. ಎವ್ವ ಮಗಳಾ ಹಿಂಗಾದ್ರ ಹ್ಯಾಂಗವ್ವ

ಚಂಪಾಕಲಿ– ಹ್ಯಾಂಗವಾ ಅಂತಾ ಕೇಳಿದ್ರ ಏನು ಹೇಳ್ಲಿ. ನೀ ಏನ್ ನನ್ನ ಬಾಳೇನ ಸುದ್ದ ಮಾಡಾಂಗ ಕಾಣೂದಿಲ್ಲಾ, ಇನ್ನ ನನ್ನ ದಾರೀ ನಾನ ಹುಡಿಕ್ಕೊಳ್ಳಾಕತ್ತೀನಿ.

ಕಿತಾಪತಿ– ಹೀಂಗಂದು ನಿಮ್ಮಪ್ಪನ ಮರ್ಯಾದಿ ತೆಗೀಬ್ಯಾಡವಾ ಈ ವರ್ಷ ವೈಶಾಖದಾಗ ನಿನ್ನ ಮದುವಿ ಮಾಡ್ತೀನವ್ವ, ತಮ್ಮಾ ಪೋಲಿಸಾ ನೀನೂ ಆಗಾಗ ಬೀಟಿಗೆ ಹೋಗ್ತೀಯಲ್ಲ ನನ್ನ ಮಗಳಿಗೆ ಚೆಂದನ ವರಾ ಇದ್ರ ನೋಡಪ್ಪಾ

ಪೋಲಿಸ– ನನ್ನ ಕಣ್ಣಿಗೆ ಬರೇ ಕಳ್ರು, ಸುಳ್ರು, ಅಪರಾಧಿಗಳೇ ಸಿಗ್ತಾರ ಚಂಪಾಕಲಿ ಇವರು ನಿಮ್ಮಪ್ಪಂತ ಮೊದ್ಲ ಹೇಳದಾರ್ದೇ? ನಮಸ್ಕಾರಿ ಯಜಮಾನರೆ ನಿಮ್ಮ ಮಗಳು ಭಾಳ ಒಳ್ಳೇ ಹುಡುಗೀರಿ.

ಚಂಪಾಕಲಿ– ಯಪ್ಪಾ ಈ ಪೋಲಿಸರು ಭಾಳ ಒಳ್ಳೆಯವರದಾರೆ

ಕಿತಾಪತಿ– ಯಾರನ್ನು ನಂಬಿದ್ರೂ ಪೋಲಿಸರನ್ನ ಮಾತ್ರ ನಂಬಬಾರದು.

ಸಣ್ಣ ಆರೋಪದಾಗ ಸಿಕ್ಕೊಂಡ್ರು ಕೂಡಾ ತಿನ್ನೂದ ತಿಂದು ಬೆಂಡೆತ್ತೋದು ಬಿಡಾಂಗಿಲ್ಲ. ಯಾವನೇ ಇರಲಿ ಮೊದಲು ಪೂಜೆ ಆದ ನಂತರವೇ ತೀರ್ಥ, ದಾರ್ಯಾಗ ಹೋಟೇಲದಾಗ ಎಷ್ಟು ಚೆಂದ ದೋಸ್ತರಾಗ ತಾರಂದ್ರ ಅಷ್ಟೇ ಸ್ಟೇಶನ್‌ದಾಗ ಖೂನ ಇರಲಾರ್ದಂಗ ಮಾಡ್ತಾರ.

ಪೋಲಿಸ– ಪೋಲಿಸ್ ಸ್ಟೇಶನ್ ಅನುಭವ ಸಂಪೂರ್ಣ ಆದ ಏನ್ರಿ.

ಕಿತಾಪತಿ– ಸ್ವಂತ ಅನುಭವ ಅಲ್ಲ ಕೇಳಿದ್ದು ಹೇಳಾಕತ್ತೀನಿ

ಪೋಲಿಸ– ಸ್ವಲ್ಪ ಅನುಭವ ಇದ್ರ ಇನ್ನೂ ಚೆನ್ನಾಗಿ ಹೇಳ್ತಿದ್ರೀ.

ಚಂಪಾಕಲಿ– ಎಪ್ಪಾ ಮೊನ್ನೆ ಪೋಲಿಸ ಸ್ಟೇಶನ ಹಿಂದಿನ ಗಾರ್ಡನ್ನದಾಗ ನಮ್ಮ ಎಮ್ಮಿ ಹೊಕ್ಕಿದ್ದವಲ್ಲ ಆ ಇನ್ಸಪೆಕ್ಟರ ಎಮ್ಮಿಗಳನ್ನ ಕೊಂಡವಾಡಾಕ್ಕ ಹಾಕಿದ್ದನಲ್ಲಾ ಆಗ ಇವರೇ ನಮ್ಮ ಎಮ್ಮಿಗಳನ್ನು ಬಿಡಿಸಿಕೊಟ್ಟವರು.

ಪೋಲಿಸ– ಒಬ್ಬರಿಗೊಬ್ಬರು ಸಹಾಯ ಮಾಡಿದಿದ್ರ ಆಗ್ತಾದೇನ್ರಿ ಅದರಾಗ ನಿಮ್ಮ ಮಗಳ ಹಾಲು ಕುಡದವರು ನಾವು.

ಕಿತಾಪತಿ– ಅಂದ್ರ ಏನವ್ವಾ ಇವರಿಗೂ ಹಾಲು ಕುಡಿಸಿದ್ಯಾ.

ಪೋಲಿಸ– ಹಾಲು ಚಂದಾಗಿ ಗಟ್ಟಿ ಅದಾವಂತ್ಹೇಳಿ ಹಾಕಿಸಿಕೊಳ್ಳಾಕ ಹತ್ತೀವ್ರೀ.

ಕಿತಾಪತಿ– ಈ ಊರಾಗ ಫೇಮಸ್ ನೋಡ್ರಿ ನನ್ನ ಮಗಳ ಹಾಲು, ನಡೀವಾ ಮನೀಗೆ ಬರ್ತೀಯೋ ಇನ್ನೂ ಹಾಲು ಉಳದಾವೋ.

ಚಂಪಾಕಲಿ– ನಡಿಯಪ್ಪಾ.... ನಡೀತೀನ್ರಿ ಪೋಲಿಸರೇ.

ಪೋಲಿಸ– ಓ ಕೆ ಟಾಟಾ.

ಚಂಪಾಕಲಿ– ಬಾಯ್ ಬಾಯ್

ಕಿತಾಪತಿ– ಇದೇನವಾ ಬಾಯಿ ಬಾಯಿ ಅನ್ನಾಕತ್ತೀರಿ.

ಚಂಪಾಕಲಿ– ಇವೆಲ್ಲ ನಿನಗೆ ತಿಳಿಯಾಂಗಿಲ್ಲ ನಡಿಯ ಯಪ್ಪ (ಹೋಗುವರು)

ಪೋಲಿಸ– ಹುಡುಗಿ ಮನಸ್ಸು ನನ್ನ ಮ್ಯಾಲ ಕುಂತೈತಿ ಹೆಂಗಾದ್ರೂ ಮಾಡಿ ಬುಟ್ಯಾಗ ಹಾಕೋಬೇಕ್ರೀ ಈ ಅಸಲಿ ಪಾರಿಜಾತ. (ಹೋಗುವನು).

===***===***===

ಪ್ರವೇಶ ೮

ತೋಟದ ಮನೆ

(ಗೌಡ, ಕುಡಿಯುತ್ತಾ ಕುಳಿತಿರುವನು, ಕಿತಾಪತಿ ಬಂದು)

ಗೌಡ– ಹನುಮ, ಯಾಕೋ ಬರಲಿಲ್ಲ ನೋಡಲೇ ಕಿತಾಪತಿ.

ಕಿತಾಪತಿ– ಬರ್ತಾನ್ರಿ ಗೌಡರೆ, ಸೂರ್ಯ ಹೊರಡುವ ದಿಕ್ಕು ತಪ್ಪಿಸಬಹುದು. ಆದ್ರ ನಮ್ಮಹನುಮ ಕೊಟ್ಟ ಮಾತು ತಪ್ಪಸಾಂವ ಅಲ್ಲ ನೋಡ್ರಿ, ಮಗಾ ಏನಾದರಾಗಲಿ ಬ್ಯಾಟಿ ಹೊಡಕೊಂಡೇ ಬರ್ತಾನ (ಹನುಮ, ಸಾವಿತ್ರಿಯ ಕೈಹಿಡಿದು ಎಳೆದು ತರುವನು, ಅವಳು ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿರುವಳು).

ಹನುಮ– ಗೌಡರೇ ನಿಮ್ಮಾಗ್ನೇಯ ಪ್ರಕಾರ ನೀವು ಹೇಳಿದ ಹಕ್ಕಿ ತಂದೀನಿ ನೋಡ್ರಿ.

ಗೌಡ– ಶಹಬ್ಬಾಸಲೇ ಹನುಮ ಮೆಚ್ಚಿದೆ ನಿನ್ನ ಕಾರ್ಯಕ್ಕೆ ತಗೋ ನಿನ್ನ ಕಾಣಿಕೆ. (ಎರಡು ಬಾಟ್ಲಿ ಕೊಡುವನು)

ಸಾವಿತ್ರಿ– ಹನುಮಾ, ಹೆಂಡದ ಆಶೆಗಾಗಿ ಇಂಥ ತಲೆ ಹಿಡಿಯುವ ಕೆಲಸ ಮಾಡಿದೆಯಾ? ನಿನ್ನನ್ನು ಹೆತ್ತವಳು ಕೂಡಾ ಹೆಣ್ಣು ಕಣೋ ನಾನು ನಿನ್ನಕ್ಕನೋ ತಂಗಿನೋ ಆಗಿದ್ರೆ ಹೀಗೆ ಗೌಡನಿಗೆ ಸೆರಗ್ಹಾಸು ಎಂದು ಹೇಳ್ತಿದ್ದಿಯಾ? ಹೇಳು ಹನುಮಾ, ಹೇಳು.

ಗೌಡ– (ನಗುತ್ತಾ) ಅವನ್ಗೇನು ಕೇಳ್ತಿಯೇ ಇಲ್ಲಿ ನನಗೆ ಕೇಳು ಯಾಕ ಅವನಕ್ಕನ್ನ ತಂಗಿನ್ನ ತಂದು ಹಾಕಿದ್ರೆ ತಪ್ಪೇನೈತಿ ಹೆಣ್ಣು ಇರೋದೆ ಸುಖ ಕೊಡೋದಕ್ಕ ಗಂಡು ಇರೋದೆ ಸುಖ ಅನುಭವಿಸೋದಕ್ಕೆ.

ಸಾವಿತ್ರಿ– ಅಂದ್ರೆ ನಿನ್ನ ಮಗಳ ಮೇಲೂ ಇಂಥದ್ದೇ ಕೆಟ್ಟ ಮನಸ್ಸು ಮಾಡ್ತೀಯಾ ಗೌಡ

ಗೌಡ– (ಸಿಟ್ಟಿನಿಂದ) ಲೇ.... ಸೂಳೆ.

ಸಾವಿತ್ರಿ– ಬಾಯಿ ಬಿಗಿ ಹಿಡಿದು ಮಾತಾಡು ಗೌಡ, ಒಂಟಿಯಾಗಿ

ಸಿಕ್ಕಿರುವೆನೆಂದು ಬಾಯಿಗೆ ಬಂದಂತೆ ಮಾತಾಡ್ಬೇಡಾ ಹೆಣ್ಣು ಒಲಿದರೆ ಹೂವು, ಮುನಿದರೆ ಮಿಡಿನಾಗರ ತಿಳಿಯಿತೇ?

ಗೌಡ– ಹನುಮ, ಇವಳನ್ನು ನಾ ನೋಡಿಕೊಳ್ತೀನಿ ನೀ ಹೋಗು (ಹನುಮ ಹೋಗುವನು) ಏನಂದೆ, ನೀನು ಮಿಡಿನಾಗರ (ನಗು) ಅಲ್ಲ, ಅಲ್ಲ.... ನೀನೊಂದು ಸುಂದರ ಹೂವು ನನ್ನಂಥ ಗೌಡನ ಅರಮನೆಯಲ್ಲಿರಬೇಕಾದ ಕೆಂದಾವರೆ ನೀನು ಬಾರೇ ಬಾ. (ಹತ್ತಿರ ಹೋಗುವನು)

ಸಾವಿತ್ರಿ– (ದೈನ್ಯತೆಯಿಂದ) ಹತ್ತಿರ ಬರಬೇಡಾ ಗೌಡ ಬರಬೇಡಾ ಬೇಡಾ...... (ಇನ್ನೂ ಹತ್ತಿರ ಬರುತ್ತಿದ್ದಂತೆ ಸಿಟ್ಟಿನಿಂದ) ಗೌಡ, ಒಂದೇ ಒಂದೆಜ್ಜೆ ಮುಂದಿಟ್ಟರೆ ನಾನು ಏನಾಗ್ತಿನೋ ನನಗೆ ಗೊತ್ತಿಲ್ಲ. ಹೌದೋ..... ಬಾ ನನ್ನ ಶೀಲಕ್ಕ ಕೈ ಹಚ್ಚೀಯಾ ನಿನ್ನ ಜೀವ ತಗೊತಿನೋ ಗೌಡ ನನ್ನ ಮುಟ್ಯಾದರೂ ನೋಡು

ಗೌಡ– ಏನೇ ಹೆದರಸ್ತೀಯಾ, ಇಲ್ಲಿ ಯಾರೂ ಇಲ್ಲ, ನೀನೆಷ್ಟೇ ಒದ್ದಾಡಿದರೂ ನಿನಗೆ ಬಿಡಿಸಿಕೊಳ್ಳುವ ಗಂಡಸು ಇಲ್ಲವೇ ಇಲ್ಲ.

ಸಾವಿತ್ರಿ– ಕೊಲ್ಲುವವರು ನೂರಾದರೂ ಕಾಯುವ ದೇವರೊಬ್ಬ ಮೇಲಿದ್ದಾನೆ.

ಗೌಡ– (ನಗು) ದೇವರು.... ಆಂ, ಇಂಥ ಪರಿಸ್ಥಿತಿಯಲ್ಲಿ ನಿನ್ನ ಕಾಯ್ತಾನಾ? ಹುಚ್ಚಿ, ಸುಮ್ಮನೆ ಒಪ್ಪಿ ನನ್ನ ಮನಸ್ಸಿಗೆ ಸಂತೋಷ ನೀಡು, ನಿನಗೊಂದು ಚಿನ್ನದ ನೆಕ್ಲೆಸ್ ಬಹುಮಾನ ಕೊಟ್ಟು ಕಳಿಸುತ್ತೇನೆ.

ಸಾವಿತ್ರಿ– ಚಿನ್ನದಾಸೆಗಾಗಿ ಸೆರಗ್ಹಾಸಲು ನಾನೇನು ಬೀದಿ ಸೂಳೆಯೆಂದು ತಿಳದೆಯಾ, ನಾನೊಂದು ಮನೆತನದ ಸೊಸೆ. ದೇವರಂಥ ನನ್ನ ಗಂಡ, ಹುಲಿಯಂಥ ನನ್ನ ಮೈದುನರಿಗೆ ಈ ವಿಷಯ ಗೊತ್ತಾದರೆ ನಿನ್ನನ್ನು ಸೀಳಿ ಊರ ಅಗಸಿ ಬಾಗಿಲಿಗೆ ತೋರಣ ಕಟ್ತಾರೆ ತಿಳಿಯಿತೆ?

ಗೌಡ– ನೋಡೇ ನಿನ್ನ ಮನೆಯ ಗಂಡಸರ ವಿಷಯ ನನಗೆ ಗೊತ್ತಿದೆ ಇಲ್ಲದ್ದೊಂದು ಮಾತು ಹೇಳಿ ಸಮಯ ಕಳೆಯಬೇಡಾ ಬಾ.

ಸಾವಿತ್ರಿ– (ದುಃಖ) ಗೌಡರೇ ನನಗ್ಯಾಕ ಈ ರೀತಿ ಗೋಳು ಹೊಯ್ಕೊಳ್ಳತಾ ಇದ್ದೀರಿ (ಕಿತಾಪತಿಯೆಡೆಗೆ) ನೋಡಿ, ನೀವು ಹಿರಿಯರು, ನಿಮ್ಮ ಕಣ್ಣೆದುರು ಇಂಥಾ ಅನ್ಯಾಯ ನಡೀತಿದ್ರು, ಕಂಬ ನಿಂತಂಗ ನಿಂತಿರುವಿರಲ್ಲ. ನೀವಾದರೂ ಹೇಳಬಾರದೇ? ಇವತ್ತು ನನ್ನನ್ನು

ಕಾಡುತ್ತಿರುವ ಈ ಗೌಡ ನಾಳೆ ನಿಮ್ಮ ಮಗಳಿಗೂ ಈ ಸ್ಥಿತಿ ತಂದರೆ ನೀವೇನು ಮಾಡ್ತೀರಿ ಹೇಳ್ರಿ, ಸ್ವಲ್ಪ ಬುದ್ಧಿ ಹೇಳು

ಕಿತಾಪತಿ– ನಾನು ಗೌಡನ ಆಳಮ್ಮ, ಈ ಸಂದರ್ಭದಲ್ಲಿ ಏನು ಹೇಳಬೇಕೋ ತಿಳಿಯುತ್ತಿಲ್ಲ ತಾಯಿ.

ಗೌಡ– ಲೇ.... ಕಿತಾಪತಿ ಮೊದಲು ಜಾಗಾ ಖಾಲಿ ಮಾಡು (ಕಿತಾಪತಿ ಹೋಗುವನು)

ಸಾವಿತ್ರಿ– ಗೌಡರೇ ನಿಮಗೆ ಕಾಲಿಗೆ ಬೀಳ್ತೀನಿ, ನಾನು ನಿಮ್ಮ ಮಗಳೆಂದು ತಿಳಿದು ಬಿಟ್ಬುಬಿಡ್ರಿ.

ಗೌಡ– ಎಲ್ಲಿಯ ಮಗಳು, ಎಲ್ಲಿಯ ಸಂಬಂಧ, ಬಾರೇ (ಬಲಾತ್ಕರಿಸಲು ಹೋಗುವಾಗ)

ಸಾವಿತ್ರಿ– (ದೂರ ಸರಿಯುತ್ತ ಧೈರ್ಯದಿಂದ) ಕಿತ್ತೂರ ಚನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಒನಕೆ ಓಬವ್ವನಂಥವರು ಹುಟ್ಟಿದ ಈ ಕನ್ನಡದ ಮಣ್ಣಿನಲ್ಲಿ ಹುಟ್ಟಿದವಳು ನಾನು ನಿನ್ನಂಥ ನಾಯಿಗಳಿಗೆ ಹೇಗೆ ಬುದ್ಧಿ ಕಲಿಸಬೇಕೆಂಬುದು ನನಗೆ ಗೊತ್ತಿದೆ.

ಗೌಡ– ಕಲಿಸುವಂತಿ ಬಾರೆ, (ಸೀರೆ ಹಿಡಿದೆಳೆಯುವನ, ಅವಳು ಹಿಂದೆ ಸರಿಯುತ್ತಾ ಬಾಗಿ ನೆಲದ ಮೇಲಿನ ಮಣ್ಣು ಕಣ್ಣಿಗೆ ಉಗ್ಗುವಳು. ಕಣ್ಣೊರೆಸಿಕೊಳ್ಳುತ್ತಾ) ಲೇ....ಸೂಳೆ ಕಣ್ಣಿಗೆ ಮಣ್ಣು ಎರೆಚಿದೆಯಾ, ನಿನ್ನನ್ನು ಬಿಡುವುದಿಲ್ಲ.... ಬಾ..... ಬಾ..... (ಕಣ್ಣೊರೆಸಿಕೊಳ್ಳುತ್ತ, ಹಿಡಿಯಲು ತಡುಕಾಡುವನು).

ಸಾವಿತ್ರಿ– ಥೂ ಪಾಪಿ ! ಬರೀ ನಿನ್ನ ಕಣ್ಣಲ್ಲಿ ಮಣ್ಣು ಉಗ್ಗಿದ್ದೇನೆ ಮನಸ್ಸು ಮಾಡಿದರೆ ನಿನ್ನ ಜೀವ ತೆಗೆದೇ ಹೋಗುತ್ತಿದ್ದ ಬದುಕಿಕೋ ಪಾಪಿ. (ಹೋಗುವಳು)

ಗೌಡ– ಲೇ.... ಲೇ.... ಸಾವಿತ್ರಿ, ಹೋಗೇ ಬಿಟ್ಟಳಲ್ಲೋ ಲೇ.... ಹನುಮ, ಎಲ್ಲಿ ಹೋಗಿ ಕುಂತೆಲೆ ಹುಚ್ಚನನ್ನ ಮಗನ, (ಸಿಟ್ಟಿನಿಂದ) ಸಾವಿತ್ರಿ, ಕೈಗೆ ಬಂದ ತುತ್ತು ಬಾಯಿಗೆ ಬರದಂತೆ ಮಾಡಿ ಹೋದೆಯಾ ಹೋಗು, ಹೋಗು ಒಂದಿಲ್ಲ ಒಂದಿನ ಈ ಗೌಡ ನಿನ್ನ ದೇಹ ಸುಖ ಪಡೆಯದೇ ಬಿಡಲಾರ. (ಒಳಗೆ ಹೋಗುವನು)

===**=====**===

ಪ್ರವೇಶ ೯

ರಸ್ತಾ ಸೀನು

(ಭರತ್, ಬರುವಾಗ ರಾಗಿಣಿ, ಹಿಂದಿನಿಂದ ಬರುವಳು)

ರಾಗಿಣಿ– ಭರತ್, ಭರತ್, ಓ ಎಷ್ಟು ಬೇಗ ಬೇಗ ನಡಿದಿರಲ್ಲ, ಊರಿಗೆ ಹೋಗಲು ಅಷ್ಟು ಅವಸರವೇ.

ಭರತ್– ಇಲ್ಲ ರಾಗಿಣಿ, ನಾನು ಊರಿಗೆ ಹೋಗುವುದಿಲ್ಲ ಡಿಗ್ರಿ ಮೇಲೆ ಪಿ.ಎಸ್.ಐ. ಪೋಸ್ಟ ಕರೆದಿದ್ದಾರೆ. ಸಧ್ಯದಲ್ಲೇ ರಿಟನ್ ಟೆಸ್ಟ್ ಇದೆ ಕೋಚಿಂಗ್ ಕ್ಲಾಸಿಗೆ ಹೋಗಬೇಕಾಗಿದೆ ಸರಿಯಾದ ಸ್ಟಡಿಯೂ ಮಾಡಬೇಕಲ್ಲ. ಎಂ.ಎ. ಮುಗಿಯಿತು ಮುಂದೇನು?

ರಾಗಿಣಿ– ಯಾವುದಕ್ಕೂ ಯೋಚನೆ ಮಾಡಿಲ್ಲ. ಪಿ ಎಸ್ ಐ ಆಗಿ ಸೆಲೆಕ್ಟ್ ಆದರೆ ನನ್ನ ನೆನಪು ಉಳಿಯುವುದೋ ಇಲ್ಲೋ ಸಾಹೇಬರಿಗೆ.

ಭರತ್– ಇಲ್ಲ ನಾನು ನಿನ್ನನ್ನು ಮರೆಯುವುದಿಲ್ಲ ಅಂದು ಮಾತು ಕೊಟ್ಟಂತೆ ನಿನ್ನನ್ನೇ ಮದುವೆಯಾಗುತ್ತೇನೆ.

ರಾಗಿಣಿ– ನಿಮ್ಮ ಮಾತು ನಂಬಬಹುದೇ?

ಭರತ್– ಅದು ನಿನಗೆ ಬಿಟ್ಟದ್ದು ನಾನು ನನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ನಿನ್ನನ್ನು ಪ್ರೀತಿಸಿದ್ದೇನೆ ಐ ಲವ್ ಯು ಐ ಲೈಕ್ ಯು. (ಇಬ್ಬರೂ ಹಾಡು ಹಾಡುವರು ನಂತರ ನಾಗೇಂದ್ರ ಬರುವನು).

ರಾಗಿಣಿ– (ನೋಡಿ) ಓ ನಾಗೇಂದ್ರ ಯಾವಾಗ ಬಂದ್ರಿ ಮತ್ತೆ ಊರಲ್ಲಿ ಎಲ್ಲರೂ ಕ್ಷೇಮವೇ?

ನಾಗೇಂದ್ರ– ತಾವು ಪ್ರೇಮಲೋಕದಲ್ಲಿ ವಿಹರಿಸುತ್ತಿರುವಾಗಲೇ ಬಂದೆನು, ಎಲ್ಲರೂ ಕ್ಷೇಮವಾಗಿದ್ದಾರೆ (ವ್ಯಂಗ್ಯ) ನಿನ್ನ ಕ್ಷೇಮ ಕೇಳುವ ಅವಶ್ಯಕತೆಯೇ ಇಲ್ಲ, ಎಲ್ಲವೂ ಸ್ಪಷ್ಟವಾಗಿ ಕಾಣುತ್ತಿದೆಯಲ್ಲ.

ರಾಗಿಣಿ– ಮಾತಿನ ಭರದಲ್ಲಿ ಪರಿಚಯಿಸುವದೇ ಮರೆತೆ ನಾಗೇಂದ್ರ ಇವರು

ನನ್ನ ಕ್ಲಾಸ್‌ಮೇಟ್ ಭರತ್ ಅಂತಾ ತುಂಬಾ ಒಳ್ಳೆಯವರು (ಪರಸ್ಪರ ನಮಸ್ಕರಿಸುವರು)

ಭರತ್– ರಾಗಿಣಿ ನನಗೊಂದಿಷ್ಟು ಕೆಲಸಾ ಇದೆ ಬರ್ತೀನಿ. (ಹೋಗುವನು)

ರಾಗಿಣಿ– ಮತ್ತೇನು ವಿಶೇಷ ನಾಗೇಂದ್ರ.....?

ನಾಗೇಂದ್ರ– ವಿಶೇಷವೆಲ್ಲವೂ ಮಣ್ಣುಪಾಲಾಯ್ತು ರಾಗಿಣಿ ನೀನು ಎಂಥಾ ಮುಳ್ಳಿನಲ್ಲಿ ಕಾಲಿಟ್ಟಿರುವಿ ಎಂಬುದು ನಿನಗರಿವಿಲ್ಲಾ. ಬಟ್ ಬಿ ಕೇರ್‌ಫುಲ್

ರಾಗಿಣಿ– ಯಾಕೆ ಏನಾಗಿದೆ?

ನಾಗೇಂದ್ರ– ಇವತ್ತು ನಾನು ಏನೇ ಹೇಳಿದರೂ ನಿನ್ನ ಕಣ್ಣಿಗೆ ಕೆಟ್ಟದಾಗಿ ಕಾಣುತ್ತದೆ, ನಾಳೆ ಎಲ್ಲ ವಿಷಯ ತಿಳಿಸುತ್ತೇನೆ! ಇಂದೇ ಊರಿಗೆ ಬರುವಿಯೋ ಇನ್ನೊಂದು ನಾಲ್ಕು ದಿನ ಇದ್ದು ಇರುವಿಯೋ?

ರಾಗಿಣಿ– ಇಂದೇ ಬರಬೇಕಾಗಿದೆ.

ನಾಗೇಂದ್ರ– ನಡೆ ಹೋಗೋಣ (ಹೋಗುವರು).

===***===***===

ಪ್ರವೇಶ ೧೦

ಬಸವಂತನ ಮನೆ

(ಸಾವಿತ್ರಿ ದೇವರ ಪೂಜೆ ಮಾಡಿ ನಮಸ್ಕರಿಸುವಳು).

ಸಾವಿತ್ರಿ– ದೇವರೇ, ಯಾಕಪ್ಪ ನನಗಿಷ್ಟು ಕಷ್ಟ ಕೊಡುತ್ತಿರುವಿ. ನೀನೇ ಕೊಟ್ಟ ಈ ರೂಪ ಮುಳುವಾಗುತ್ತಿದೆ. ಈ ಸಮಾಜವೇ ಹಾಗಿದ್ದಂತೆ ಇದೆ, ಇತಿಹಾಸದ ಯಾವ ಪುಟದಲ್ಲೂ ಗಂಡಿಗೆ ಕೊಟ್ಟಿಲ್ಲ. ಆದರೆ ಪ್ರತಿ ಪುಟದಲ್ಲೂ ಹೆಣ್ಣಿಗೆ ಕಷ್ಟ ಕೊಟ್ಟಿದ್ದಾರೆ. ಶೀಲ ಹಾಳು ಮಾಡಿದ್ದಾರೆ. ಸ್ವಲ್ಪವೇ ಅನುಮಾನ ಬಂದ್ರೂ ಶೀಲ ಶಂಕಿಸಿ ಅಗ್ನಿಗಾಹುತಿ ಮಾಡಿದ್ದಾರೆ. ನಿನ್ನೆ ನಡೆದ ಘಟನೆ ನನ್ನ ಮನೆಯವರೆದುರು ಹೇಳಿದರೆ ಎರಡೂ ಮನೆತನದವರ ನಡುವೆ ರಣರಂಗವೇ ಆಗುವುದು. ನನ್ನಿಂದಾಗಿ ಜಗಳ ಕಿರಿ ಕಿರಿ ಕೋರ್ಟು ಎಂದು ಅಲೆಯುವಂತಾಗಬಾರದು. ಹೇಳದಿದ್ದರೆ ಮನಸ್ಸಿಗೆ ಭಾರ. ಹೇಳಿದರೆ ದೊಡ್ಡ ಕ್ರಾಂತಿ ಇಲ್ಲಾ....ಹೇಳಬಾರದು ಏನೋ ಕೆಟ್ಟ ಘಳಿಗೆಯಲ್ಲಿ ನಡೆದ ಘಟನೆ. ಮರೆತು ಬಿಡಬೇಕು. ದೇವರೇ ನಾನು ನಿನ್ನನ್ನು ನಂಬಿದ್ದೇನೆ, ನನ್ನ ಮಾನ ಪ್ರಾಣ ನೀನೇ ಕಾಪಾಡು ತಂದೆ. (ನಮಸ್ಕರಿಸಿ ಒಳ ಹೋಗುವಾಗ ಶೇಖರ್ ಬರುವನು)

ಶೇಖರ– ಅತ್ತಿಗೆಮ್ಮ.... ಅತ್ತಿಗೆಮ್ಮಾ....

ಸಾವಿತ್ರಿ– (ಕಣ್ಣೊರೆಸಿಕೊಳ್ಳುತ್ತಾ) ಬಾ ಮೈದುನ.

ಶೇಖರ– ಯಾಕತ್ತಿಗೆ ಕಣ್ಣಲ್ಲಿ ನೀರು? ಯಾರೇನು ಅಂದರು ಹೇಳಮ್ಮಾ ದೇವತೆಯಂಥ ನಿನ್ನ ಕಣ್ಣಲ್ಲಿ ನೀರು ಬರಿಸಲು ಯಾರೇ ಕಾರಣರಾದರೂ ಅವರನ್ನು ಸಿಗಿದು ತೋರಣ ಕಟ್ತೇನೆ ಹೇಳಮ್ಮ ಏನಾಯ್ತು.

ಸಾವಿತ್ರಿ– ಹುಲಿಯಂಥ ಮೈದುನ ನೀನಿರುವಾಗ ಯಾರೇನು ಅಂತಾರಪ್ಪ ಅಕ್ಕಿ ಕೇರುವಾಗ ಕಸ ಬಿತ್ತು ಅಷ್ಟೇ.

ಶೇಖರ– ಅದೇ ಅಂದೆ ಮತ್ತೆ. ನಿನ್ನ ಒಂದೇ ಒಂದು ಕಣ್ಣೀರಿನ ಹನಿ ಈ ಮನೆಯಲ್ಲಿ ಬೀಳಬಾರದು ಅತ್ತಿಗೆ. ನೀನು ನಗಬೇಕಮ್ಮ ಸದಾ ನಗುನಗುತ್ತಿರಬೇಕು. ಅಂದಾಗಲೇ ಈ ಮನೆತನ ಶಾಂತಿ ಸಮೃದ್ಧಿಯಿಂದ ಇರುತ್ತದೆ. ಹೆಣ್ಣು ಕಣ್ಣೀರು ಸುರಿಸುವ ಯಾವ ಮನೆಯೂ ಉದ್ಧಾರವಾಗಲಾರದಮ್ಮ.

ಸಾವಿತ್ರಿ– ನನ್ನ ಮುತ್ತಿನಂಥ ಮೈದುನ ನೀನು, ಎಷ್ಟು ತಿಳುವಳಿಕೆ ತುಂಬಿದೆಯಪ್ಪ ನಿನ್ನಲ್ಲಿ ಶೇಖರ್ ಈ ವರ್ಷ ನಿನ್ನ ಮದುವೆ ಮಾಡುವ ವಿಚಾರ ಮಾಡಿದ್ದೇವೆ.

ಶೇಖರ– ನನಗೀಗಲೇ ಮದುವೆ ಬೇಡಾ ಅತ್ತಿಗೆಮ್ಮ ಯಾಕಮ್ಮ ನನಗೆ ದೂರ ಮಾಡಬೇಕೆಂದಿರುವೆಂರಾ? ಬರುವವಳು ಎಂಥವಳಿರುವಳೋ ಏನೋ ನಿನ್ನಂಥ ಗುಣದವಳಾಗಿದ್ದರೆ ಹೊಂದಿಕೊಂಡು ಹೋಗಬಹುದು ಬಂದ ನಾಲ್ಕು ದಿನಗಳಲ್ಲಿಯೇ ಮನೆ ಮುರಿಯುವ ಮಾರಿಯಾಗಿ ಬಂದರೆ ಏನು ಮಾಡ್ಲಿ?

ಸಾವಿತ್ರಿ– ಅಂಥ ಒಳ್ಳೇ ಕನ್ಯೆಯನ್ನೆ ಆರಿಸಿ ತರ್ತೀವಪ್ಪ.

ಶೇಖರ– ಇಲ್ಲಮ್ಮ ಹತ್ತು ಗಂಡಸರು ಕಲೆತು ಬಾಳಬಹುದು ಆದರೆ ಇಬ್ಬರು ಹೆಂಗಸರು ಕಲೆತು ಇರುವದು ಕಷ್ಟ. ಗಂಡಂದಿರ ಕಿವಿಯಲ್ಲಿ ಇಲ್ಲದ್ದೊಂದು ಊದಿ ಹಾಲಿನಂಥ ಸಂಸಾರದಲ್ಲಿ ಹುಳಿ ಹಿಂಡುವ ಕೆಲಸ ಸುರುವಾಗುತ್ತದೆ.

ಸಾವಿತ್ರಿ– ಆದ್ರೇನಪ್ಪ ನಿನ್ನ ಮಾತು, ಮದುವೆ ಆಗುವುದಿಲ್ಲವೇ?

ಶೇಖರ– ನನಗೆ ಮದುವೆಯ ಅವಶ್ಯಕತೆಯೇನಿದೆ ಅತ್ತಿಗೆ, ಆದರ್ಶ ಅಣ್ಣ–ತಮ್ಮಂದಿರು, ಹೆತ್ತ ಮಗನಿಗಿಂತಲೂ ಹೆಚ್ಚಾಗಿ ಪ್ರೀತಿಸುವ ತಾಯಿ ಸ್ವರೂಪಳಾದ ನೀನು, ನೀವೆಲ್ಲಾ ಇರುವಾಗ ನನಗೇಕೆ ಮದುವೆ.

ಬಸವಂತ– (ಬರುತ್ತಾ) ಏನು ಸಾವಿತ್ರಿ ಅತ್ತಿಗೆ ಮೈದುನ ಗಾಢವಾದ ಚರ್ಚೆಯಲ್ಲಿ ತೊಡಗಿರುವಿರಿ ಏನು ಸಮಾಚಾರ?

ಶೇಖರ– ಏನಿಲ್ಲಣ್ಣ, ಪ್ರಯಾಣ ಹೇಗಾಯ್ತು, ಎಲ್ಲಾ ಆರಾಮು ಹೋಗಿ ಬಂದ್ರಿ ತಾನೆ.

ಬಸವಂತ– ಸುಖವಾಗಿ ಹೋಗಿ ಬಂದೆ, ಹೊಲದ ಸಮಾಚಾರ ಏನು?

ಸಾವಿತ್ರಿ– ಬಂದ ಕೂಡಲೇ ಹೊಲದ ವಿಷಯ ಸುರುವು ಮಾಡಿದ್ರೆಲ್ಲಾ ಹೊಲ ಎಲ್ಲೂ ಹೋಗಿಲ್ಲ ಅಲ್ಲೇ ಇದೆ ಸದಾ ಹೊಲದ್ದೆ ಧ್ಯಾನ ನಿಮಗೆ.

ಬಸವಂತ– ಮತ್ತ್ಯಾವ ಧ್ಯಾನಾ ಮಾಡಂದಿ?

ಸಾವಿತ್ರಿ– ನಮ್ಮ ಸಮಾಚಾರ ಕೇಳ್ಲೇ ಇಲ್ಲ

ಬಸವಂತ– ನಿನ್ನ ನಗುಮುಖವೇ ಹೇಳ್ತಿದೆ ಕೇಳಲೇನಿದೆ.

ಸಾವಿತ್ರಿ– ಮೈದುನ ಹೊಲದಿಂದ ದಣಿದು ಬಂದಿದ್ದಾನೆ. ನೀವು ಊರಿಂದ ಬಂದು ಆಯಾಸಗೊಂಡಿರುವಿರಿ. ಬನ್ನಿರಿ ಕೈಕಾಲು ಮುಖ ತೊಳೆಯಿರಿ ಊಟಕ್ಕೆ ಬಡಿಸುತ್ತೇನೆ.

ಬಸವಂತ– ನಡೆ, (ಎಲ್ಲರೂ ಒಳಗೆ ಹೋಗುವರು).

===***=====***===

ಪ್ರವೇಶ ೧೧

ರಸ್ತಾ ಸೀನು

(ನಾಗೇಂದ್ರ, ರಾಗಿಣಿ, ಮಾತಾಡುತ್ತಾ ಬರುವರು)

ರಾಗಿಣಿ– ನಾಗೇಂದ್ರ, ನೀನು ಹೇಳುವ ಮಾತು ನಿಜವೇ?

ನಾಗೇಂದ್ರ– ಸುಳ್ಳು ಹೇಳಿ ನಾನೇನು ಸಾಧಿಸಬೇಕಾಗಿದೆ ಅವನೊಬ್ಬ ಲೋಫರ್ ಪಟ್ಟಣದಲ್ಲಿ ಅವನು ನನ್ನ ರೂಮಿನ ಪಕ್ಕದಲ್ಲೇ ಇದ್ದ, ದಿನಾ ಒಂದಲ್ಲ ಹತ್ತಾರು ಕಂಪ್ಲೇಂಟು.

ರಾಗಿಣಿ– ಸಾಧ್ಯವೇ ಇಲ್ಲ, ಆತನೊಂದಿಗೆ ಮಾತಾಡಿದರೆ, ನೋಡಿದರೆ ಹಾಗನಿಸುವುದಿಲ್ಲವಲ್ಲ.

ನಾಗೇಂದ್ರ– ಅವನೊಬ್ಬ ಕಪಟ ಸನ್ಯಾಸಿ, ಗೋಮುಖವ್ಯಾಘ್ರ ಬೂದಿ ಮುಚ್ಚಿದ ಕೆಂಡ ಮುಗ್ಧನಂತೆ ನಟಿಸಿ, ನಿಮ್ಮಂಥವರನ್ನು ಬೀದಿಪಾಲು ಮಾಡುವ ವಿಕೃತ ಮನಸ್ಸಿನವನು ಇವನಿಂದಾಗಿ ಕನಿಷ್ಟವೆಂದರೂ ನಾಲ್ಕು ಹುಡುಗಿಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರಾಗಿಣಿ– ಅವನನ್ನು ನನ್ನ ಜೀವಕ್ಕಿಂತ ಹೆಚ್ಚಿಗೆ ಪ್ರೀತಿಸಿದ್ದೇನೆ.

ನಾಗೇಂದ್ರ– ಅಂಥ ಹುಚ್ಚು ಹಿಡಿಸಿದ್ದಾನೆಯೇ ಆ ಭಿಕಾರಿ. ಅಂದು ಅವನೊಂದಿಗೆ ನೀನಿರುವುದನ್ನು ನೋಡಿ ನನ್ನ ಕರುಳು ಚುರ್ರೆಂದಿತು. ನಿನ್ನಂಥವಳು ಅಂಥ ಮೋಸಗಾರನಿಗೆ ಮೋಸ ಹೋಗಬಾರದೆಂಬುದೇ ನನ್ನಾಸೆ. ಅವನು ನಿನ್ನನ್ನು ಮದುವೆಯಾಗುವುದಿಲ್ಲ. ಮದುವೆಯಾಗುವವನಂತೆ ನಟಿಸಿ, ಒಂದು ತಿಂಗಳಲ್ಲಿ ಯಮನ ದರ್ಶನ ಮಾಡಿಸುತ್ತಾನೆ. ನೀನು ಅವನನ್ನು ಒಂದೆರಡು ವರ್ಷದಿಂದ ಬಲ್ಲೆ. ನಾನು ಹತ್ತು ವರ್ಷದಿಂದ ಬಲ್ಲೆ, ಕಂಡೂ ಕಂಡೂ ಬಾವಿಯಲ್ಲಿ ಬೀಳುವ ದುರ್ದೈವಿ ನೀನಾದರೆ ನಾನೇನು ಮಾಡಲಿ.

ರಾಗಿಣಿ– ನಾಗೇಂದ್ರ ನನಗೆ ತಲೆ ತಿರುಗಿದಂತಾಗುತ್ತಿದೆ.

ನಾಗೇಂದ್ರ– ಸತ್ಯ ಯಾವಾಗಲೂ ಹೀಗೇನೆ ಒಂದು ವೇಳೆ ನೀನು ಅವನನ್ನು ಮದುವೆಯಾದಿ ಅಂತಿಟ್ಕೋ ನಿನ್ನನ್ನು ಸುಖವಾಗಿ

ನೋಡಿಕೊಳ್ಳುವನೆ? ಎಲ್ಲೋ ನೌಕರಿಗಾಗಿ ಹೊರಡುವ ಅವನು ನಿನ್ನನ್ನು ಚೆನ್ನಾಗಿ ಪ್ರೀತಿಸ್ತಾನಾ ? ಮಾಡರ್ನ್ ಹುಡುಗಿಯಾದ ನಿನ್ನ ಆಶೆ–ಆಕಾಂಕ್ಷೆಗಳನ್ನು ಈಡೇರಿಸ್ತಾನಾ ತಲೆ–ತಲಾಂತರದಿಂದ ನಿನ್ನ ಮನೆಗೂ ಅವನ ಮನೆಗೂ ಬದ್ಧ ವೈರತ್ವ ಇದೆ. ಈ ಮದುವೆಗೆ ನಿನ್ನ ತಂದೆ ಒಪ್ಪುವನೆ? ಎಂದಿಗೂ ಇಲ್ಲ, ವೈರಿಯ ಮಗಳು ಸೊಸೆಯಾಗಿ ಬಂದರೆ ಅವನ ಮನೆಯವರು ಪ್ರೀತಿಯಿಂದ ನೋಡುವರೇ? ಹೇಳು ರಾಗಿಣಿ ನನ್ನ ಒಂದು ಮಾತಿಗಾದ್ರೂ ಉತ್ತರಾ ಕೊಡು.

ರಾಗಿಣಿ– ನಿನ್ನ ಮಾತುಗಳೆಲ್ಲ ಸತ್ಯ. ಈಗ ನಾ ಏನ್ ಮಾಡ್ಲಿ?

ನಾಗೇಂದ್ರ– ನಾ ಹೇಳುವುದರಲ್ಲೇನಿದೆ ವಿಚಾರ ಮಾಡು ಹೇಗಿದ್ದರೂ ಓದು ಮುಗಿಯಿತು ಯಾವನೋ ಗೊತ್ತು ಗುರಿಯಿಲ್ಲದವನೊಂದಿಗೆ ಮದುವೆಯಾಗಿ ತಲೆ ತಗ್ಗಿಸಿಕೊಂಡು ತಗ್ಗಿ–ಬಗ್ಗಿ ಬಾಳುವುದಕ್ಕಿಂತ ಸಾಕಷ್ಟು ಆಸ್ತಿಯಿದೆ, ಮಹಾರಾಣಿಯಂತೆ ಒಬ್ಬಳೇ ಇರುವಿ ಹೇಗೆ ಮಾಡಿದರೆ ಸುಖವಾಗಿರಬಹುದು ಎಂಬುದು ವಿಚಾರ ಮಾಡು.

ರಾಗಿಣಿ– ಅಂಥ ಉತ್ತಮ ವಿಚಾರ ನಿನಗೆ ಗೊತ್ತಿದ್ದರೆ ದಯವಿಟ್ಟು ತಿಳಿಸು.

ನಾಗೇಂದ್ರ– ಹೇಳಿದರೆ ತಪ್ಪು ತಿಳಿಯುವುದಿಲ್ಲ.

ರಾಗಿಣಿ– ಇಲ್ಲ ಹೇಳು.

ನಾಗೇಂದ್ರ– ಹಾಗೆಂದು ಮಾತು ಕೊಡು.

ರಾಗಿಣಿ– ಹೇಳು, ತಪ್ಪು ತಿಳಿಯುವುದಿಲ್ಲ. (ಕೈಮೇಲೆ ಕೈ ಹಾಕುವಳು)

ನಾಗೇಂದ್ರ– ನಾನೂ ನೀನು ಒಂದಾದರೆ ಎಲ್ಲವೂ ಸುಖಮಯವಾಗುವುದು ಭರತನೊಂದಿಗಿನ ನಿನ್ನ ಸ್ನೇಹ ಮರೆತು ಬಿಡು ಸದಾ ನಿನ್ನ ಜೀವನ ಕಾರಂಜಿಯಂತೆ ಚಿಮ್ಮುವ ಹಾಗೆ ಮಾಡ್ತೇನೆ.

ರಾಗಿಣಿ– ಈ ಮಾತು ಸತ್ಯವೇ.

ನಾಗೇಂದ್ರ– ನಿನ್ನ ಮನೆ ದೇವರಾಣೆಗೂ ಸತ್ಯ.

ರಾಗಿಣಿ– ವ್ಹಾ! ಎಷ್ಟು ಸಂತೋಷವಾಗ್ತಿದೆ ರೀಯಲಿ ನಾನು ಲಕ್ಕಿ ನೀ ನನ್ನನ್ನು ಕುತ್ತಿನಿಂದ ಪಾರು ಮಾಡಿ ಹೊಸಲೋಕಕ್ಕೆ ಕರೆದೊಯ್ಯುತ್ತಿರುವಿ ಐ ಲವ್ ಯು.... ಐ ಲವ್ ಯು. (ಯುಗಳಗೀತೆ ಹಾಡಿ, ಕುಣಿದಾಡಿ ಹೋಗುವರು)

===**====**===

ಪ್ರವೇಶ ೧೨

ಗೌಡನ ಮನೆ

(ಗೌಡ, ಕುಳಿತಿದ್ದಾನೆ ಕಿತಾಪತಿ, ಖಾತೆ ಬರೆಯುತ್ತಿದ್ದಾನೆ ಹನುಮ, ಒಂದೆಡೆ ನಿಂತಿದ್ದಾನೆ. ನಾಗೇಂದ್ರ ಕೈಯಲ್ಲಿ ಪೇಪರ್ ಹಿಡಿದು ಬರುವನು)

ನಾಗೇಂದ್ರ– ಗೌಡರೇ ಪೇಪರ್ನಲ್ಲಿ ಎಂಥ ಸಿಹಿ ಸುದ್ದಿ ಇದೆ ನೋಡ್ರಿ.

ಗೌಡ– ಏನದು ಅಂಥ ಸಿಹಿ ಸುದ್ದಿ.

ನಾಗೇಂದ್ರ– ಚುನಾವಣೆ ವೇಳಾಪಟ್ಟಿ ಪ್ರಕಟವಾಗಿದೆ.

ಕಿತಾಪತಿ– ಯಾ.... ಇದು ಹೋಳಿಗಿ ಉಂಡಷ್ಟು ಖುಷಿಯಾತ್ರೆಪ್ಪ, ಗೌಡ್ರ ಮತ್ಯಾಕ ತಡ ಹಾಕ್ರಿ ನಾಮಿನೇಷನ್ನು ಮಾಡೋಣ ಹೋಳಿ ಹುಣ್ವಿ.

ಗೌಡ– ನನಗಿಂಥ ನಿಮಗೆಷ್ಟು ಆತುರ ಅದ ಅಲ್ರೊ ನಾಗೇಂದ್ರ ನಾಮಿನೇಶನ್ನಿಗೆ ಕೊನೆ ದಿನಾಂಕ ಎಂದಿದೆ.

ನಾಗೇಂದ್ರ– ಇದೇ ೨೦ ರಂದು ನಾಮಿನೇಶನ್ ಹಾಕಲಿಕ್ಕೆ ೨೮ ರಂದು ನಾಮಿನೇಶನ್ ವಾಪಾಸು ಪಡೆಯಲು, ಬಡ್ಡಿ ಮಕ್ಕಳು ಚುನಾವಣೆ ಪ್ರಚಾರಕ್ಕೆ ೧೫ ದಿನ ಮಾತ್ರ ಇಟ್ಟಿದ್ದಾರೆ. ಮುಂದಿನ ತಿಂಗಳು ೧೨ನೇ ತಾರೀಖಿಗೆ ಚುನಾವಣೆ ಇದೆ.

ಹನುಮ– ಗೌಡ್ರ, ಬೇಕಾದ್ದು ಆಗ್ಲಿ ನೀವೇ ಗೆಲ್ಲಬೇಕು. ನಿಮ್ಮ ವಿರುದ್ಧ ತಿರುಗಿದವನ ಗತಿ ಕಾಣಿಸಲಿಕ್ಕೆ ನನಗ ಬಿಡ್ರಿ, ನೀವು ಹೇಳಿದ ಕೆಲಸ ಮಾಡೇ ತೀರ್ತೀನಿ ಒಂದುವೇಳೆ ಮಾಡದಿದ್ರ (ಸಿಟ್ಟಿನಿಂದ) ಲೇ....

ಕಿತಾಪತಿ– ಶಾಂತಿಯಲೆ ಗೌಡ್ರಗಿ ಕಿವಿ ಕೇಳಿಸ್ತಾವ.

ಹನುಮ– ಹುಚ್ಚು ಸೂಳ್ಯಾ ಮಗ ಅಂತಾ ಕರೀರಿ.

ಗೌಡ– ನಿನ್ನ ಮ್ಯಾಲ ನಂಬಿಗಿ ಅದನೋ ಹನುಮ, ಶ್ರೀರಾಮನ ಬಗ್ಗೆ

ಹನುಮಂತಗ ಭಕ್ತಿ ಇದ್ದಂಗ ನನ್ನ ಬಗ್ಗೆ ನಿನಗೆ ಭಕ್ತಿ ಅದ

ನಾಗೇಂದ್ರ– ಚುನಾವಣೆ ಅಂದ ಮೇಲೆ ಏನೇನು ಮಾಡಬೇಕು, ಏನೇನು ಮಾಡಬಾರದು ಎಂಬುದು ನನಗೆ ಚೆನ್ನಾಗಿ ಗೊತ್ತಿದೆ, ಇಲ್ಲಿ ಆಡುವ ಪ್ರತಿ ಗೇಮಿಗೂ ಮಹತ್ವ ಇದೆ.

ಗೌಡ– ನೀವೆಲ್ಲ ಇದ್ದ ಮೇಲೆ ನನ್ನದೇನಿದೆ, ಖರ್ಚು ಮಾಡವ್ರು ನೀವು, ಗೆಲ್ಲಿಸುವವರು ನೀವು.

ರಾಗಿಣಿ– (ಒಳಗಿನಿಂದ ಬರುತ್ತಾ) ಡ್ಯಾಡಿ ! ಚುನಾವಣೆಗೆ ನಿಲ್ತೀರಾ.

ಗೌಡ– ಹೌದಮ್ಮ, ನಿನ್ನ ಅಭಿಪ್ರಾಯ ಏನಿದೆ?

ರಾಗಿಣಿ– ನಿಲ್ಲಿರಿ ಡ್ಯಾಡಿ, ಈ ಕಾಲದಲ್ಲಿ ಬರೀ ದುಡ್ಡಿದ್ದರೆ ಬೆಲೆ ಇಲ್ಲ ಜೊತೆಗೆ ಅಧಿಕಾರ ಇರಬೇಕು. ಪಟ್ಟಣದಿಂದ ಕಾಲೇಜು ಹುಡುಗಿಯರನ್ನು ಪ್ರಚಾರಕ್ಕೆ ತರ್ತೇನೆ ಆಯಿತೇ.

ನಾಗೇಂದ್ರ– ಹೆಂಡದ ಹೊಳೆ ಹರಿಯಬೇಕು, ಹಣದ ಝಣತ್ಕಾರವಾಗಬೇಕು, ಹೆಂಗಸರ ಗೆಜ್ಜೆ ಸಪ್ಪಳ ಕ್ಷೇತ್ರದ ತುಂಬೆಲ್ಲ ಕೇಳಬೇಕು. ಎದುರು ನಿಂತವನ ಡಿಪಾಜಿಟ್ ಉಳಿಯಬಾರದು.

ಗೌಡ– ನೀವೆಲ್ಲ ಮನಸ್ಸು ಮಾಡಿದರೆ ಅಸಾಧ್ಯದ ಮಾತೇನಲ್ಲ ಚುನಾವಣೆ ಮುಗಿಯುವವರೆಗೂ ಹಗಲಿರುಳು ದುಡಿಯೋಣ ಜನ ಸಿನಿಮಾವೆಂದರೆ ಬಿದ್ದು ಸಾಯ್ತಾರೆ ಒಂದಿಬ್ಬರು ನಟಿಯರನ್ನು ತರಿಸು.

ನಾಗೇಂದ್ರ– ಬರೀ ನಟಿಯರನ್ನಲ್ಲ, ಕ್ಯಾಬರೇ ಡ್ಯಾನ್ಸರ್‌ಗಳನ್ನೇ ತರಿಸೋಣ ಗೌಡರೇ, ನಾಳೇನೆ ನಾಮಿನೇಶನ್ ಹಾಕೋಣ ಈ ಮೆರವಣಿಗೆ ಹಿಂಗಾಗಬೇಕು ಇಲ್ಲಿಯವರೆಗೂ ಯಾರೂ ಮಾಡಿರಬಾರದು, ಜೀಪು ಕಾರು, ಲಾರಿ ನೂರಾರಿರಬೇಕು, ಕಿಲೋಮೀಟರುಗಟ್ಟಲೇ ಜನ ಸೇರಿರಬೇಕು, ಎಲ್ಲೆಲ್ಲೂ ನಿಮ್ಮದೇ ಮಾತು ನಿಮ್ಮದೇ ಜಯಕಾರ ನಡೆಯಿರಿ ಸ್ಟುಡಿಯೋಗೆ ಹೋಗೋಣ ನಿಮ್ಮ ಹತ್ತಾರು ಭಂಗಿಯ ಫೋಟೋಗಳನ್ನು ತೆಗೆಸಿರಿ, ಅಫ್‌ಸೆಟ್ ಪ್ರಿಂಟ್‌ನಲ್ಲಿ ಪೋಸ್ಟರ್ ಹಾಕಿಸೋಣ ಸಾವಿರಗಟ್ಟೆಲೇ ಬ್ಯಾನರ್ ಬರೆಸೋಣ ಎಲ್ಲಿ ನೋಡಿದರೂ ನಮ್ಮವೇ ಪೋಸ್ಟರ್ ನಮ್ಮವೇ ಬ್ಯಾನರ್ ಎದ್ದು ಕಾಣಬೇಕು.

ಗೌಡ– ನಿಮ್ಮ ಈ ಅಭಿಮಾನ, ಆತುರ ನೋಡಿದರೆ ಗೆದ್ದೇ ಬಿಟ್ಟೆನೇನೋ ಅನ್ನಿಸ್ತಿದೆ ಬೇಕಾದ್ದು ಹೋಗಲಿ ನಾನು ಗೆಲ್ಲಲೇಬೇಕು....

ಕಿತಾಪತಿ– ಹಿಂದಕ್ಕ ಗೌಡ್ರ ಗದ್ದಲದಾಗಿನ ಗೌಡ ಬೇಕಾಗಿದ್ದ ಹೋಗ್ಲಿ ಬೇಕಾದ್ದ ಹೋಗ್ಲಿ ಅನಕೊತ್ತನೆ, ಕೈಯಾಗ ಪರ್ರ್ಯಾಣ ಹಿಡ್ಯಾ ಪಾಳಿ ಬಂದಿತ್ರಿ ಹಾಗಾಗಬಾರದು ನೋಡ್ರಿ.

ಗೌಡ– ಯಾಕಲೇ ಅಶುಭ ನನ್ನ ಮಗನ, ಬಾಯಿ ಭಾಳ ಹರಿಬಿಡಾಕತ್ತೀದಿ.

ಕಿತಾಪತಿ– ಸುಮ್ನ ಮಾತಿಗಂದ್ರಿ, ಎಲ್ಯಾದರೂ ನೀವು ಸೋಲೋದುಂಟ್ರ್ಯಾ

ಗೌಡ– ಲೇ.... ಹನುಮ, ಈ ಸಂತೋಷದ ಸಮಯದಾಗ ತೋಟದ ಮನಿಯಾಗ ಭರ್ಜರಿ ಪಾರ್ಟಿ ಏರ್ಪಾಟು ಮಾಡು ಈಗಲೇ ಹೋಗು.

ಹನುಮ– ಆಗ್ಲಿ ಗೌಡ್ರ, ಗುಂಡು ತುಂಡು ಎಲ್ಲ ರೆಡಿ ಮಾಡ್ತೇನೆ. (ಹೋಗುವನು)

ಕಿತಾಪತಿ– ನಾನು ಅಲ್ಲೇ ಇದ್ದು ಹೆಚ್ಚಿನ ವ್ಯವಸ್ಥೆ ಮಾಡ್ತೀನ್ರಿ, (ಹೋಗುವನು)

ಗೌಡ– ಗುಂಡು ತುಂಡು ಅಂದ್ರೆ ಬಿದ್ದು ಸಾಯ್ತಾನ ಮಗಾ, ನಾಗೇಂದ್ರ ಒಂದಿಷ್ಟು ಕೆಲಸ ಇದೆ ಹೋಗಿ ಬರ್ತೀನಿ ರಾಗಿಣಿ, ಮನೆಯಲ್ಲೇ ಇರು. (ಹೋಗುವರು).

ನಾಗೇಂದ್ರ– ನಿಮ್ಮಪ್ಪ ತೋಟದ ಮನೆಯಲ್ಲಿ ಮಜಾ ಮಾಡ್ತಾನೆ. ಮನೆಯಲ್ಲಿ ಯಾರೂ ಇಲ್ಲ. ನಾನೇ ರಾಜಾ, ನೀನೇ ರಾಣಿ ನಾವು ಇಲ್ಲಿ ಮಜಾ ಮಾಡೋಣ.

ರಾಗಿಣಿ– ನೀವು ತುಂಬಾ ರಸಿಕರು.

ನಾಗೇಂದ್ರ– ಒಂದು ಮಾತು ರಾಗಿಣಿ, ನೀನು ಒಂದು ಬಾರಿಯಾದರೂ ಸುರೆಯನ್ನು ಸೇವಿಸಿದೆಯಾ?

ರಾಗಿಣಿ– ಏನು ಸುರೆಯನ್ನು ಸೇವಿಸುವುದೇ.... ಇಲ್ಲ, ಇಲ್ಲ.

ನಾಗೇಂದ್ರ– ಹುಚ್ಚಿ ! ಸುರೆ ಎಂದರೆ ಸೆರೆ ಎಂತಲೇ ಅಲ್ಲ, ಥಮ್ಸಪ್, ಕೋಕಾಕೋಲಾ, ಪೆಪ್ಸಿ ಕುಡೀತಿವಲ್ಲಾ....ಅದರಂತೆ ಈ ಬೇಸಿಗೆ ದಿನದಲ್ಲಿ ಬೀರ್ ಕುಡಿದರೆ ದೇಹಕ್ಕೆ ತಂಪಾಗುತ್ತದೆ.

ರಾಗಿಣಿ– ನನಗೆ ಆ ಅನುಭವ ಇಲ್ಲ.

ನಾಗೇಂದ್ರ– ಆ ಅನುಭವ ಆಗಲೇಬೇಕು, ಜೀವನದಲ್ಲಿ ಮನುಷ್ಯ ಎಲ್ಲವನ್ನೂ ಅನುಭವಿಸಬೇಕು. ನನ್ನ ರಾಣಿಗೆಂದೇ ವಿಶೇಷವಾದ ಬೀರ್ ತಂದಿದ್ದೇನೆ. ಒಂದೇ ಒಂದು ಗ್ಲಾಸ್ ಕುಡಿದು ನೋಡು ಸ್ವರ್ಗದಲ್ಲಿ ತೇಲಾಡುವೆ, (ಬೇಡವೆಂದರೂ ಒತ್ತಾಯದಿಂದ ಕುಡಿಸುವನು)

ರಾಗಿಣಿ– ವ್ಹಾ.....! ಎಷ್ಟೊಂದು ಮಜಾ ಇದೆಯಲ್ಲ, ಇದರಲ್ಲಿ ಇನ್ನೊಂದು ಗ್ಲಾಸ್ ಹಾಕು.

ನಾಗೇಂದ್ರ– (ನಗುತ್ತಾ) ಇದರ ಮಹಿಮೆಯೇ ಹಾಗಿದೆ ಮೊದಲು ಇದನ್ನು ನಾವು ಕುಡಿತೇವೆ, ನಂತರ ಇದು ನಮ್ಮನ್ನು ಕುಡಿತದೆ. ಇದನ್ನು ಅಭ್ಯಾಸ ಮಾಡಿಕೊಂಡ ನೂರಕ್ಕೆ ತೊಂಬತ್ತು ಮಂದಿ ಹೊರಕ್ಕೆ ಬಂದೇ ಇಲ್ಲ.

ರಾಗಿಣಿ– ಇಂಥ ಅಪೂರ್ವ ಅನುಭವ ಮಾಡಿಸಿದ ನಿನಗೆ ಥ್ಯಾಂಕ್ಸ ನಾಗೇಂದ್ರ ಥ್ಯಾಂಕ್ಸ (ಜೋಲಿ ಹೊಡೆಯುವಳು)

ನಾಗೇಂದ್ರ– ಮೆತ್ತಗೆ.... ಹೀಗೆ ಬಾ, ಹಾಂ ಮೆತ್ತಗೆ. (ಅಪ್ಪಿಕೊಂಡೇ ಒಳಗೆ ಹೋಗುವರು).

===***====***===

ಪ್ರವೇಶ ೧೩

ರಸ್ತಾ ಸೀನು

(ಕಿತಾಪತಿ ಮತ್ತು ಚಂಪಾಕಲಿ ಬರುವರು)

ಕಿತಾಪತಿ— ಯವ್ವ ಮಗಳ ನಾನೊಂದಿಷ್ಟು ನನ್ನ ತಂಗಿ ಊರಿಗೆ ಹೋಗಿ ಬರ್ತೀನೆವ್ವಾ, ಮನಿಕಡೆ ಜೋಪಾನ, ಹಿಂದಿನ ಮನಿ ಡಾಕ್ಟರನ ಗುಣಾ ಯಾಕೋ ಶುದ್ಧ ಕಾಣವಲ್ಲದು ಅದಕ್ಕ ಅವನ ಕೂಡಾ ಸಲುಗಿ ಬೆಳೆಸಬೇಡಾ.

ಚಂಪಾಕಲಿ— ಆಯ್ತತಪ್ಪ ತಂಗಿ ಮನಿ ಅಂತ್ಹೇಳಿ ತಿಂಗಳಿಗೊಮ್ಮೆ ಹೋಗ್ತಿಯಲ್ಲ, ಖರೇನ ತಂಗಿ ಮನಿಯೋ....ಇಲ್ಲಾ....?

ಕಿತಾಪತಿ— ಯಾಕವಾ ಅನುಮಾನಾ, ಕುಡ್ಡ ಮಗಾ ಹುಟ್ಟಿ ತಾಯಿ ಜೊತೆ ನಖರಾ ಮಾಡ್ತಿದಂಗ ಮಾತಾಡ್ತಿಯಲ್ಲಾ, ನಿಮ್ಮವ್ವ ಸತ್ತ ಮ್ಯಾಲೆ ಬ್ಯಾರೆ ಹೆಣ್ಮಕ್ಕಳಿಗೆ ಕಣ್ಣೆತ್ತಿ ನೋಡಿಲ್ಲವ್ವ, ನಾನು ಶ್ರೀರಾಮಚಂದ್ರ ಇದ್ದಂಗಿದ್ದಿನಿ.

ಚಂಪಾಕಲಿ— ನನ್ನ ಮುಂದೆ ಸುಳ್ಳು ಹೇಳ್ತೀಯಲ್ಲ, ಊರಾಗಿನ ರಂಡ ಮುಂಡ್ಯಾರಿಗೆಲ್ಲ ದಿವಾಳಿ ಎಬ್ಬಿಸಿದವನೆ ನೀನು, ಅವುಕ್ ಏನೇನೆಲ್ಲಾ ಸುಳ್ಳು ಹೇಳಿ ಮಳ್ಳ ಮಾಡಿ ಮಂಗ್ಯಾನ್ನ ಮಾಡಿದ ಸುದ್ದಿ ಗೊತ್ತು ಇಲ್ಲೇನು ನನಗಾ.

ಕಿತಾಪತಿ— ಅವೆಲ್ಲ ಜನಾ ಆಡಿಕೊಳ್ಳೋ ಮಾತವಾ, ಗಡಿಗಿ ಬಾಯಿ ಮುಚ್ಚಬಹುದು ಆದ್ರ ಜನರ ಬಾಯಿ ಮುಚ್ಚಲಿಕ್ಕಾಗತ್ತೈತಾ, ಅಣ್ಣ ತಂಗಿ ಹೋಗತಿದ್ರೂನೂ ನೋಡಿದವರು ನೋಡ್ಲೇ ಜೋಡಿ ಹಂಗೈತಂತಾರ ಕಲಿಕಾಲ ಏನು ಕೇಳ್ತಿ.

ಚಂಪಾಕಲಿ— ಅಂದ್ರ ಆ ಮ್ಯಾಲಿನ ಕೇರಿ ಕಲ್ಲವ್ವ ಮನೀಗೆ ಬಂದು ಮರ್‍ಯಾದಿ ತಗದ್ಲಲ್ಲ ಯಾಕ?

ಕಿತಾಪತಿ— ಛೇ.... ಛೇ ತಗೀಬ್ಯಾಡಾ ಆಕಿ ಸುದ್ದೀನ, ಆಕೇನು ಸುದ್ದುಳ್ಳ

ಹೆಣ್ಮಗಳೇನು? ಏನೋ ಪಾಪ ರಂಡಿ ಮುಂಡಿ ಹೆಣ್ಮಗಳು ಸ್ವಲ್ಪ ಸಹಾಯ ಮಾಡೋಣ ಅಂತಾ ಹೋದರ ನನಗ ಬಲ್ಯಾಗ ಹಾಕ್ಕೋಳ್ಳಿಕ್ಕ ಹೋಗಿದ್ಲು.

ಚಂಪಾಕಲಿ– ಛೇ.... ಛೇ ಪಾಪ! ಶ್ರೀರಾಮಚಂದ್ರ ನೋಡು ಎಷ್ಟು ಸುಳ್ಳು ಹೇಳ್ತೀಯೋ ಎಪ್ಪಾ, ಹಿಂಗಾದ್ರ ಒಳ್ಳೇ ಸಾವು ಹ್ಯಾಂಗ ಬರ್ತದ ನಿನಗ, ಏನಾರಾ ಮಾಡು ಈ ವರ್ಷ ನಂದೊಂದೀಟು ಮದುವಿ ಮುಗಿಸಿಬಿಡು.

ಕಿತಾಪತಿ– ಆಯ್ತವ್ವಾ..... ಹಂಗ ಒಂದು ವರಾ ನೋಡಿಕೊಂಡೇ ಬರ್ತೀನಿ. ಚಿಂತಿ ಮಾಡ್ಬ್ಯಾಡ, ನಾ ಹೋಗ್ತಿನೆವ್ವ ಬಸ್ಸಿನ ಟೈಂಮಾತು ಮನಿ ಕಡೆ ಹುಶ್ಯಾರಿ, ಯಾಕಂದ್ರ ತುಡುಗ ನಾಯಿ ಬಹಳ ಅದಾವ ಎಲ್ಲಿ ಅನ್ನ ಇರ್ತಾದೋ ಅಲ್ಲೇ ವಾಸನಿ ಹಿಡಿದುಕೊಂಡು ಬರ್ತಾವ ಹಾಂ...... (ಹೋಗುವನು)

ಚಂಪಾಕಲಿ– ಹೋಗಿ ಬಾರಪ್ಪ. (ತಂದೆ ಹೋದ ಕಡೆಗೆ ಮುಖ ಮಾಡಿ ನಿಂತಾಗ ಪೋಲಿಸ ಬರುವನು)

ಪೋಲಿಸ– ಅಲೆಲೆಲೆ....ಚಂಪಾಕಲಿ ಯಾಕ ಹಿಂಗ ನಿಂತೀದಿ. ಯಾರನ್ನ ನೋಡಾಕತ್ತೀದಿ.

ಚಂಪಾಕಲಿ– ನಮ್ಮಪ್ಪ ಊರಿಗೆ ಹೋದ್ನರೀ ಕಳಸಾಕ ಬಂದಿದ್ದೆ, ಅರೆ ನೀವು ಯಾವಾಗ ಬಂದ್ರಿ,

ಪೋಲಿಸ– ಈಗ ತಾನೇ ಬಂದೆ, ಆನ್ ಡ್ಯೂಟಿ ಮ್ಯಾಲೆ ಹೊಂಟಿದ್ದೆ ನೀನು ಕಂಡಿ ನೋಡು.

ಚಂಪಾಕಲಿ– ಎಂಥಾ ಡ್ಯೂಟಿ ಮ್ಯಾಲೆ ಹೊಂಟಿದ್ರಿ,

ಪೋಲಿಸ– ಪೋಲಿಸ ಡ್ಯೂಟಿ ಅಂದ್ರ ಏನಂತ ತಿಳದಿ, ಟ್ವೆಂಟಿಫೋರ ಅವರ್ಸ ಡ್ಯೂಟಿ ಮಾಡ್ಬೇಕು ನಾವು, ನಮಗೆ ಬೇಕಾದಾಗ ರಜಾ ಕೂಡಾ ಸಿಗಾಂಗಿಲ್ಲ. ನಾವು ಜನರನ್ನು ರಕ್ಷಿಸುವುದರಲ್ಲಿ ನಮ್ಮನ್ನು ರಕ್ಷಿಸಿಕೊಳ್ಳೋಕು ಆಗಾಂಗಿಲ್ಲ.

ಚಂಪಾಕಲಿ– ಬಹಳ ಒಳ್ಳೇ ಡ್ಯೂಟಿ ಸಾಹೇಬ್ರ, ಎಲ್ಲಾದರೂ ಹೆಣಾ ಬಿದ್ರ ಹದ್ದು ಕಾಗಿ ಮುಟ್ಟಲಾರದಂಗ ಕಾಯಬೇಕು.

ಪೋಲಿಸ– ಹೌದಂತೀನಿ, ಬಹಳ ಹಾರ್ಡ್ ಅದ ಈ ಪೋಲಿಸ ನೌಕರಿ. ಈ ಲಾಠಿ ನೋಡು ಇದೇ ನಮ್ಮ ಬ್ರಹ್ಮಾಸ್ತ್ರ, ಕೆಲವೊಂದು ಬಾರಿ ಬಂದೂಕನೂ ನಮ್ಮ ಕೈಯಾಗ ಬರ್ತಾದ ಅದರಾಗೇನು ಗೋಲಿ ಇರ್ತಾದೋ ಇಲ್ಲೋ ನಾ ಇದುವರೆಗೂ ನೋಡಿಲ್ಲಾ.

ಚಂಪಾಕಲಿ– ನೀವೆಂಥವರರೀ... ಇದುವರೆಗೂ ಬಂದೂಕು ಹೊಡೆದೇ ಇಲ್ಲ.

ಪೋಲಿಸ– ಹೊಡೆಯುವಂಥ ಸಂದರ್ಭ ನನಗಿನ್ನೂವರೆಗೂ ಬಂದಿಲ್ಲ ಟರೇನಿಂಗನ್ಯಾಗ ಕಲಿತ ಅನುಭವ ಅದ, ಅಂಥ ಸಂದರ್ಭ ಬಂದ್ರ ಬರೋಬ್ಬರಿ ಹೊಡೀತೀನಿ.

ಚಂಪಾಕಲಿ– ನಿನ್ನೆ ಊರಾಗ ಇಸ್ಪೇಟಾಡಾವ್ರನ್ನ ಹಿಡಿದ್ರೆಂತ.

ಪೋಲಿಸ– ಹೌದು ಇಸ್ಪೇಟಾಡುವವರನ್ನ ಮಟಕಾ ಅಡುವವರನ್ನ ಕುಡಿದು ಗಲಾಟೆ ಮಾಡುವವರನ್ನ ಹಿಡಿದು ಬುದ್ಧಿ ಕಲಿಸುವದು ನಮ್ಮ ಕರ್ತವ್ಯವಾಗಿದೆ.

ಚಂಪಾಕಲಿ– ಆದರೆ.... ನೀವೆ ವ್ಯಾನಿನ್ಯಾಗ ಕುಂತ ಇಸ್ಪೇಟ ಆಡಿ ತಿರುಗಿ ಸಂಜಿ ಮುಂದ ಕುಡದು ತೂರಾಡ್ಕೊಂತ ಮನೀಗೆ ಬರ್ತೀರಿ ನಿಮಗ್ಯಾರ್ರೀ ಬುದ್ಧಿ ಕಲಿಸಬೇಕು.

ಪೋಲಿಸ– ವ್ಹಾ....ಎಷ್ಟು ಚೆಂದ ಕೇಳ್ದೆಲ್ಲ ನಾವೇನು ಜನರಂಗ ದುಡ್ಡು ಹಚ್ಚಿ ಅಡಾಂಗಿಲ್ಲ. ಗಲಭೆಗಳಾದಾಗ ನಮ್ಮ ವ್ಯಾನು ಕಂಡೇ ಜನಾ ಶಾಂತಿಯಿಂದ ಇರ್ತಾರೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ವ್ಯಾನಿನ್ಯಾಗ ಕುಂತು ಬ್ಯಾಸರಾ ಬರ್ತಾದ ನೋಡು ಅದಕ್ಕೆ ಟೈಂಪಾಸಿಗಂತ ಆಡ್ತೀವಿ ಸುಮ್ನ ಆಡಿದರ ಮಜಾ ಬರಾಂಗಿಲ್ಲ ಅಂತ್ಹೇಳಿ ಬೀಡಿ, ಸಿಗರೇಟು, ಚಹಾ ಬೆಟ್‌ಕಟ್ಟಿ ರಮ್ಮಿ ಆಡ್ತೇವಷ್ಟೇ ಆದ್ರ ಜನರು ಹಾಂಗಲ್ಲ ಇಸ್ಪೇಟಾಟದ ಬೆನ್ನು ಹತ್ತಿ ಸಂಸಾರ ಹಾಳು ಮಾಡಿಕೋಳ್ತಾರ, ಚಂಪಾಕಲಿ ಯಾಕ ಇವತ್ತ ಹಾಲು ಇನ್ನೂ ಕೊಟ್ಟಿಲ್ಲ.

ಚಂಪಾಕಲಿ– ನಮ್ಮಪ್ಪಗ ಕಳಿಸಾಕ ಬಂದ್ನೋಡ್ರಿ ತಡಾ ಆಯ್ತು. ಈಗ ಹೋಗಿ ತಂದ್ಕೊಡ್ತೀನಿ, ಹಾಲು ಹ್ಯಾಂಗದಾವ್ರಿ ಸಾಬ್ರೆ.

ಪೋಲಿಸ– ಹಾಲು ಕೊಡೋ ಮಣಕಾನೆ ಚೆಂದಿರಬೇಕಾದರೆ ಹಾಲು ಚೆಂದ ಇರೂದಿಲ್ಲಾ. ಬಹಳ ಗಟ್ಟಿ ಆವರಿ, ಬೆಳಿಗ್ಗೆ ಒಂದು ಲೋಟ

ಕುಡದ್ರ ಮಧ್ಯಾಹ್ನ ಮಟ ಹಸಿವೀನ ಆಗಾಂಗಿಲ್ಲ ಚಂಪಾಕಲಿ ನೀ ಭೆಟ್ಟಿಯಾದಾಗಿಂದ ಒಂದು ಮಾತು ಕೇಳಬೇಕಂತ ಮಾಡೀನಿ ನಿನ್ನ ಒಪ್ಪಿಗಿ ಇದ್ರ ಹೂಂ ಅನ್ನು ಇಲ್ಲದಿದ್ರ ಊಹೂಂ ಅನ್ನು ಆದ್ರ ಹಾಲು ಕೊಡುವುದನ್ನು ಮಾತ್ರ ನಿಲ್ಲಿಸಬೇಡಾ

ಚಂಪಾಕಲಿ– ನಿಮ್ಮ ಮನಸ್ಸಿನಾಗ ಇದ್ದಿದ್ದು ಕೇಳ್ರಿ, ಯಾರ ಬ್ಯಾಡಂತಾರ.

ಪೋಲಿಸ– ನಾನು ನಾಲ್ಕಾರು ಕಡೆ ನೌಕಿ ಮಾಡೀನಿ ಬೇಕಾದಷ್ಟು ಹುಡುಗ್ಯಾರಿಗೆ ನೋಡಿನಿ ಅದು ಯಾಕೋ ಏನೋ ನೀ ತುಂಬಾ ಹಿಡಿಸಿದಿ.

ಚಂಪಾಕಲಿ– ಹೌದ್ರ್ಯಾ ಅಷ್ಟು ಚೆಂದ ಇದ್ದೀನ್ರ್ಯಾ ನಾನು

ಪೋಲಿಸ– ನಿನ್ನ ಒಪ್ಪಿಗೆ ಇದ್ರೆ ಮದುವೆಯಾಗಬೇಕೆಂದಿದ್ದೇನೆ. ನಿನ್ನ ಮನಸ್ಸಿನಾಗ ಏನಿದೆ?

ಚಂಪಾಕಲಿ– (ಸ್ವ) ನೌಕ್ರಿ ಗಂಡ ಸಿಗೋದು ಅಂದ್ರ ಪುಣ್ಯ ಮಾಡಿರಬೇಕು ಇದ್ದರನೂ ಸುಖ, ಹೋದರನೂ ಸುಖ, (ಪ್ರ) ನೀವು ಹಿಂಗ ಕೇಳಿದ್ರ ಏನ್ ಹೇಳ್ಲಿ, ನಮ್ಮಪ್ಪಗ ಒಂದು ಮಾತು ಕೇಳ್ರಿ.

ಪೋಲಿಸ– ನಾನು ಮದುವೆಯಾಗುವುದು ನಿನ್ನನ್ನ ನಿಮ್ಮಪ್ಪನ್ನ ಅಲ್ಲ, ಮೊದಲು ಮನಸ್ಸಿನ್ಯಾಗ ಏನಾದ ಹೇಳು.

ಚಂಪಾಕಲಿ– ಹೇಳಾದರಾಗ ಏನದರಿ ನನ್ನ ಹಾಲು ನಿಮ್ಮವಂತೆ ತಿಳ್ಕೊಳ್ರಿ.

ಪೋಲಿಸ– ಹೌದಾ, ಬಾರೇ ಹಿಂಗೆ (ಇಬ್ಬರೂ ಸಂತೋಷದಿಂದ ಹಾಡಿ ಕುಣಿದಾಡಿದ ನಂತರ) ಚಂಪಾಕಲಿ, ಊರಾಗ ಒಂದು ಹೋಟೆಲದಾಗ ಇಸ್ಪೇಟ್ ಆಡ್ಲಿಕತ್ತಾರಂತ ಮೆಸೇಜ್ ಬಂದಾದ, ಆ ನನ್ಮಕ್ಕಳಿಗೆ ಹಿಡ್ಕೊಂಡು ಬರಬೇಕಾಗ್ಯಾದ ಬರ್ತೀನಿ (ಹೋಗುವರು).

ಚಂಪಾಕಲಿ– ನಮ್ಮಪ್ಪ ತನ್ನ ಜೀವನದಾಗ ನನ್ನ ಮದುವೆ ಮಾಡಾಂಗ ಕಾಣಂಗಿಲ್ಲ, ನನ್ನ ದಾರಿ ನಾ ನೋಡಕೋಬೇಕು ಇಂಥ ನೌಕರದಾರನ ಹೆಂಡ್ತಿಯಾಗೋದಂದ್ರ ಪೂರ್ವ ಜನ್ಮದ ಪುಣ್ಯಬೇಕು.

ರಂಗಣ್ಣ– (ಬರುತ್ತಾ) ಚಂಪಾಕಲಿಯವರು ಏನೋ ಚಿಂತಿ ಮಾಡಾಕತ್ತೀರಲ್ಲ

ಚಂಪಾಕಲಿ– ಯಾಕ್ರಿ ಡಾಕ್ಟರ್....ಬಹಳ ಶಾಂತಿಯಿಂದ ಹೊಂಟಿರಲ್ಲ. ಯಾವೂ ಪೇಶೆಂಟ್ ಇಲ್ಲೇನ್ರಿ, ಯಾಕಂದ್ರ ಈ ಮೊದಲೊಮ್ಮೆ ಎಕ್ಸಪ್ರೆಸ್ ಗಾಡಿ ಬಂದಾಂಗ್ ಬಂದು ಹಾಯ್ದಿದ್ರಿ.

ರಂಗಣ್ಣ– ಇನ್ನೂ ನೆನಪದರ್‍ಯಾ ನಿಮುಗಾ.

ಚಂಪಾಕಲಿ– ಅದ್ಯಾಂಗ್ ಮರಿತಾರ್ರಿ ಡಾಕ್ಟರಾ ಮೊದಲ ಸಲ ಹಾಡಿದ್ದು, ಮೊದಲ ಸಲ ನೋಡಿದ್ದು, ಮೊದಲ ಸಲ ಮಾಡಿದ್ದು, ಮೊದಲ ಸಲ ತಿಂದಿದ್ದು ಯಾವುದರಾ ಮರಿಯಾಕ ಸಾಧ್ಯ ಏನ್ರೀ. ನನ್ನ ಜೀವನದಾಗ ಢಿಕ್ಕಿ ಹೊಡೆಸಿಕೊಂಡಿದ್ದು ಅದೇ ಮೊದಲ ಸಲ ನೋಡ್ರಿ, ಅದಕ್ಕ ಮರೆತಿಲ್ಲ.

ರಂಗಣ್ಣ– ನನಗೂ ಹಂಗ ಆಗ್ಯಾದ್ರಿ, ರಾತ್ರಿ ಬೆಳತನಕ ನಿದ್ದಿ ಇಲ್ಲ ನಿಮ್ಮ ತಂದಿಯವರು ಊರಿಗೆ ಹೋದಂಗ ಕಾಣಸ್ತದ.

ಚಂಪಾಕಲಿ– ಹೌದ್ರಿ, ಅವರ ತಂಗಿ ಮನಿಗೆ ಹೋಗ್ಯಾರ.

ರಂಗಣ್ಣ– ಸುಸ್ತಾಗಿ ನಿಂತೀರಲ್ಲ, ನಡ್ರಿ ಮನಿಗೆ ಟ್ರೀಟ್‌ಮೆಂಟ್ ಕೊಡ್ತೀನಿ.

ಚಂಪಾಕಲಿ– ಟ್ರೀಟ್‌ಮೆಂಟ್ ತಗೊಳ್ಳಾಕ ನನಗೇನು ಆರಾಮಿಲ್ಲಂತಾ ತಿಳಕೊಂಡ್ರೇನು?

ರಂಗಣ್ಣ– ಅದ್ರೂ ಬಾಡಿ ಆಗಾಗ ಚೆಕ್ ಮಾಡಿಸಿಕೊಂಡ್ರೆನೇ ಹೆಲ್ದಿಯಾಗಿ ರಾಕ ಸಾಧ್ಯರಿ, ಯಾಕಂದ್ರ ಒಂದು ನಮೂನೆ ರೋಗ ಹೊಂಟಿಲ್ಲ ಈಗ.

ಚಂಪಾಕಲಿ– (ಸ್ವ) ಈ ಡಾಕ್ಟರನ ತಲಿ ಪೂರಾ ಕೆಟ್ಟಂಗ ಕಾಣ್ತಾದ ಇಂವಾ ಹೇಳಿದಂಗ ಕೇಳಿ ಇವನಿಗೆ ಸರಿ ದಾರಿಗೆ ತರ್ತೀನಿ.

ರಂಗಣ್ಣ– ಏನೋ ವಿಚಾರ ಮಾಡಾಕತ್ತಿಯಲ್ಲ.

ಚಂಪಾಕಲಿ– ಏನಿಲ್ಲ, ನಿಮ್ಮಂಥ ದೊಡ್ಡ ಡಾಕ್ಟರಿಗೆ ಹಳ್ಳಿಯವಳಾದ ನಾನು ಆಶೆ ಮಾಡೋದು ತಪ್ಪೇನೋ ಅಂತಾ ವಿಚಾರ ಮಾಡಾಕತ್ತಿನಿ,

ರಂಗಣ್ಣ– ಏನೇನೂ ತಪ್ಪಿಲ್ಲ, ನೀ ಹುಂ ಅನ್ನು ನಿಂತಲ್ಲೇ ತಾಳಿ ಕಟ್ಟತೀನಿ.

ಚಂಪಾಕಲಿ– ಅಷ್ಟ್ಯಾಕ ಅವಸರ ಮಾಡ್ತೀರಿ ಡಾಕ್ಟರ, ನಮ್ಮಪ್ಪ ಊರಿಂದ ಬರಲಿ, ಒಪ್ಪದ್ನಂದ್ರ ಈ ವೈಶಾಖದಾಗ ಮದುವೆಯಾಗೋಣ.

ರಂಗಣ್ಣ– ಈಗಾಯ್ತು ಸಂತೋಷ ಇಂದಿನಿಂದ ನಾನೇ ರಾಜಾ ನೀನೇ ರಾಣಿ. (ಹಾಡಿ ಕುಣಿದಾಡಿ ಹೋಗುವರು).

===***=====***===

ಪ್ರವೇಶ ೧೪

ಬಸವಂತನ ಮನೆ

(ಇಬ್ಬರು ವ್ಯಕ್ತಿಗಳು ಹೊರಗಿನಿಂದ ಬರುವರು)

ಒಬ್ಬ– ಬಸವಂತಪ್ಪ, ಬಸವಂತಪ್ಪ.

ಬಸವಂತಪ್ಪ– (ಒಳಗಿನಿಂದ ಬಂದು) ಓ ಹಿರಿಯರು, ಬನ್ನಿ ಬನ್ನಿ ಬಹಳ ಅಪರೂಪಕ್ಕೆ ಬಂದಿರುವಿರಿ.

ಇನ್ನೊಬ್ಬ– ಹೌದಪ್ಪ ವಿಷಯ ನಿನಗೆ ಗೊತ್ತೇ ಇದೆ ಚುನಾವಣೆ ಬಂದಿದೆ. ಊರಿಗೆ ಮಾರಿಯಾದ ಕಿಡಿಗೇಡಿ ಗೌಡ ನಿಲ್ಲುತ್ತಿದ್ದಾನೆ. ಅವನ ವಿರುದ್ಧ ನಿಲ್ಲುವವರು ಯಾರೂ ಇಲ್ಲ, ನೀನೇ ಅದಕ್ಕೆ ಸೂಕ್ತ ವ್ಯಕ್ತಿ ಎಂದು ಬಂದಿದ್ದೇವೆ.

ಬಸವಂತ– ಏನು ! ನಾನು ಚುನಾವಣೆಗೆ ನಿಲ್ಲುವುದೇ ಅದೆಲ್ಲ ಭಂಡರ ಕೆಲಸ

ಒಬ್ಬ– ರಾಜಕೀಯದಲ್ಲಿರುವವರೆಲ್ಲ ಭಂಡರು, ಕಿಡಿಗೇಡಿಗಳೆಂದು ತಪ್ಪು ತಿಳಿದುಕೊಂಡಿರುವಿ, ನಾವೆಲ್ಲ ನಿರ್ಧರಿಸಿದ್ದೇವೆ. ನೀನು ಖರ್ಚು ಮಾಡುವುದೇ ಬೇಡ. ಜನರಿಂದ ಹಣ ಸಂಗ್ರಹಿಸಿ ಚುನಾವಣೆ ಮಾಡ್ತೇವೆ, ಮೇಲಾಗಿ ಗೌಡನ ಬಗ್ಗೆ ಸಾಕಷ್ಟು ರೋಷ ಇದೆ ಜನ ಎದುರು ಹಾಕಿಕೊಳ್ಳುವುದಿಲ್ಲ. ಗೌಪ್ಯ ಮತದಾನ ಇರುವುದರಿಂದ ಗೌಡನಿಂದ ಕುಡಿದು ತಿಂದ ಜನರೂ ನಮಗೆ ಓಟು ಹಾಕ್ತಾರೆ.

ಬಸವಂತ– ನನ್ನ ತಮ್ಮಂದಿಗೆ ಒಂದು ಮಾತು ಕೇಳಬೇಕು.

ಇನ್ನೊಬ್ಬ– ಅದೋ ಅವನೇ ಬಂದ್ನೋಡು. (ಶೇಖರ ಬರುವನು) ನೋಡಪ್ಪ ಶೇಖರ ನಿಮ್ಮಣ್ಣನಿಗೆ ಎಲೆಕ್ಷನ್ನಿಗೆ ನಿಲ್ಲಿಸಿದ್ದೇವೆ ನಿನ್ನ ಅಭಿಪ್ರಾಯ ಏನಾದ.

ಶೇಖರ– ನೀವೆಲ್ಲ ಒಪ್ಪಿದ ಮೇಲೆ ನನ್ನದೇನಿದೆ, ಆದ್ರೂ ಇಂದಿನ ರಾಜಕೀಯ ಕೆಟ್ಟು ಹೊಲಸು ನಾರುತ್ತಿದೆ, ಭಂಡರದೇ ರಾಜಕೀಯ, ತಾಯ್ಗುಂಡರದೇ ಅಧಿಕಾರ ಎನ್ನುವಂತಿದೆ.

ಒಬ್ಬ– ಹೊಲಸಾಗಿದೆ ಎಂದು ಒಳ್ಳೆಯವರೆಲ್ಲ ದೂರ ಸರಿದರೆ ಸಮಾಜ

ಸುಧಾರಣೆಯಾಗುವುದಾದರೂ ಹೇಗೆ. (ಒಳಗಿನಿಂದ ಸಾವಿತ್ರಿ, ಎಲ್ಲರಿಗೂ ಚಹಾ ತಂದು ಕೊಡುವಳು).

ಸಾವಿತ್ರಿ– ನೋಡ್ರೆಣ್ಣ, ಆ ಗೌಡ ಮೂರು ಬಿಟ್ಟು ನಿಂತಾಂವ ಅಂಥವನೊಂದಿಗೆ ನಿಂತು ನಮ್ಮ ಮರ್ಯಾದಿ ಹಾಳು ಮಾಡಿಕೊಳ್ಳುವುದು ಬೇಡಾ.

ಇನ್ನೊಬ್ಬ– ಅಕ್ಕಾ, ಜನರ ಬೆಂಬಲ ನಮಗಿದೆ ಚುನಾವಣೇಲಿ ಜನ ಬೆಂಬಲ ಬೇಕೇ ಹೊರತು ಹಣ ಬೆಂಬಲ ಅಲ್ಲ ಇದೊಂದು ಬಾರಿ ನೋಡೋಣ, ನೀವು ನಯಾ ಪೈಸೆ ಖರ್ಚು ಮಾಡಬೇಡಿರಿ ನಾಮಿನೇಷನ್ ಖರ್ಚು ನಾನೇ ಕೊಡ್ತೇನೆ ಗೌಡನ ಉಪಟಳ ಹೆಚ್ಚಾಗಿದೆ. ನಮ್ಮಂಥ ನೂರಾರು ಸಾತ್ವಿಕ ಜನ ಮನೆ ಮನೆಗೂ ಹೋಗಿ ಪ್ರಚಾರ ಮಾಡೋಣ.

ಸಾವಿತ್ರಿ– ನೀವೆಲ್ಲ ತಿಳಿದವರು ನಿಮಗೆಲ್ಲ ಒಪ್ಪಿಗೆ ಇದ್ರೆ ನಿಲ್ಲಿಸಿರಿ.

ಬಸವಂತ– ಇತಿಹಾಸದ ಯಾವ ಪುಟದಲ್ಲೂ ನ್ಯಾಯಕ್ಕೆ ಸೋಲಾಗಿಲ್ಲ. ನಾನು ಗೆಲ್ತೀನಿ ಎಂಬ ಭರವಸೆಯಿಂದ ಒಪ್ತಿಲ್ಲ ಸತ್ಯಕ್ಕಾಗಿ, ನ್ಯಾಯಕ್ಕಾಗಿ, ಹೋರಾಡಲು ನಿಮ್ಮೆಲ್ಲರ ಅಭಿಲಾಷೆಯಂತೆ ಸ್ಪರ್ಧಿಸಲು ಒಪ್ಪಿದ್ದೇನೆ.

ಒಬ್ಬ– ಈಗಾಯ್ತು ನಮ್ಮ ಮನಸ್ಸಿಗೆ ಸಂತೋಷ ನಾಳೆ ನಾಮಿನೇಷನ್ ಹಾಕೋಣ ಬರ್ತೀವಿ (ಹೋಗುವರು)

ಶೇಖರ– ಅಣ್ಣಾ, ನೀನು ಚಿಂತೆ ಮಾಡಬೇಡಾ ದೇವರಿದ್ದಾನೆ. ಕಾಯಾ, ವಾಚಾ, ಮನಸಾ, ಕಾರ್ಯ ಮಾಡೋಣ ಪ್ರಯತ್ನ ನಮ್ಮದು, ಫಲಾ–ಫಲ ದೇವರದು.

ಬಸವಂತ– ಆಯ್ತು, ಭರತ್‌ನಿಂದ ಯಾಕೋ ಪತ್ರವೂ ಬಂದಿಲ್ಲವಲ್ಲ

ಶೇಖರ– ಅದೇನೋ ಇನ್ಸಪೆಕ್ಟರ್ ಪೋಸ್ಟ್ ಕರೆದಿದ್ದಾರಂತೆ ಇಂಟರ್‌ವ್ಯೂ ಮುಗಿಸಿಕೊಂಡೇ ಬರ್ತಾನಂತೆ ನಿನ್ನೆ. ಅವನ ಗೆಳೆಯ ರಾಜು ಭೆಟ್ಟಿಯಾಗಿ ಹೇಳಿದ.

ಸಾವಿತ್ರಿ– ಹೌದಾ, ಭರತನಿಗೆ ಈ ಇಂಟರ್‌ವ್ಯೂನಲ್ಲಿ ಯಶ ಸಿಗಲಿ, ನಿಮಗೆ ಚುನಾವಣೆಯಲ್ಲಿ ಗೆಲುವಾಗಲಿ ಎಂದು ಬೇಡಿಕೊಂಡು ದೇವರಿಗೆ ತುಪ್ಪದ ದೀಪ ಹಚ್ಚುತ್ತೇನೆ ಬನ್ನಿ, ದೇವರಿಗೆ ಭಕ್ತಿಯಿಂದ ನಮಿಸೋಣ. (ಒಳಗೆ ಹೋಗುವರು).

===**=====**====

ಪ್ರವೇಶ ೧೫

ರಸ್ತಾ ಸೀನು

(ಬಸವಂತ, ಶೇಖರ ಇಬ್ಬರು ವ್ಯಕ್ತಿಗಳೊಂದಿಗೆ ಬರುವರು)

ಬಸವಂತ– ನಾವು ನಾಮಿನೇಶನ್ ಹಾಕಲು ಕೇವಲ ನಾಲ್ಕು ಜನ ಬರುತ್ತಿದ್ದೇವೆ. ಆ ಗೌಡ ಬೆಳಿಗ್ಗೆ ೮ ಗಂಟೆಗೆ ಮೆರವಣಿಗೆ ಪ್ರಾರಂಭಿಸಿದ್ದಾನೆ. ಸಾವಿರಾರು ಜನರಿದ್ದಾರೆ, ಈ ಸನ್ನಿವೇಶ ನೋಡಿ ಏಕೋ ಹಿಂಜರಿಕೆಯಾಗುತ್ತಿದೆ.

ಶೇಖರ– ಎಷ್ಟೇ ಸಾವಿರ ಜನರಿರಲ್ಲಣ್ಣ ಅವರೆಲ್ಲ ಬಿಟ್ಟಿ ತಿಂದುಕುಡಿದು ಮಜಾ ಮಾಡಲು ಬಂದವರು, ಅವನ ಹಿಂದಿರುವವರೆಲ್ಲ ಅವನಿಗೇ ಓಟು ಹಾಕುವವರೆಂದು ತಿಳಿಯಬೇಡ, ನೋಡಣ್ಣ ಮುಂದಿಟ್ಟ ಹೆಜ್ಜೆ ಎಂದೂ ಹಿಂದಿಡಬಾರದು. ಸೋಲು ಗೆಲುವು ನಮ್ಮ ದೈವಕ್ಕೆ ಬಿಟ್ಟಿದ್ದು. ನೀನು ಹೆದರಬೇಡಣ್ಣ.

ಒಬ್ಬ– ಬಸವಂತಪ್ಪ ಅವನ ಹಿಂದಿರುವವರು ಸಾವಿರ ಜನ ಕುಡುಕರಾದರೆ ಅದರ ಹತ್ತು ಪಟ್ಟು ಆದರ್ಶ ಜನ ನಮ್ಮ ಹಿಂದೆ ಇದ್ದಾರೆ. ರೈತರು ಮಹಿಳೆಯರು ಸಾತ್ವಿಕರು, ನಮ್ಮ ಮೇಲೆ ಭರವಸೆ ಇಟ್ಟಿದ್ದಾರೆ.

ಇನ್ನೊಬ್ಬ– ದೇವರ ಆಶೀರ್ವಾದ ಅತ್ತಿಗೆಯ ಹಾರೈಕೆ ಪಡೆದು ನಾಮೀನೇಶನ್ ಹಾಕಲು ಹೊರಟ ನಾವು ಬೇರೆ ವಿಚಾರ ಮಾಡುವದು ಬೇಡಾ ನಡೆಯಿರಿ ಹೋಗೋಣ (ಹೋಗುವರು, ಗೌಡ ನಾಗೇಂದ್ರ, ರಾಗಿಣಿ, ಕಿತಾಪತಿ, ಹನುಮ ನಾಲ್ಕೈದು ಜನರೊಂದಿಗೆ ಮೆರವಣಿಗೆಯಲ್ಲಿ ಬರುವರು, ಗೌಡನಿಗೆ ದೊಡ್ಡ ಹಾರ ಹಾಕಲಾಗಿದೆ, ಗೌಡರಿಗೆ ಜಯವಾಗಲಿ ಎಂಬ ಘೋಷಣೆ ಹಾಕುತ್ತಿರಬೇಕು)

ಗೌಡ– ನನ್ನ ಮನಸ್ಸಿಗೆ ಬಹಳ ಸಂತೋಷವಾಗಿದೆ, ಈ ಮೆರವಣಿಗೆ ಈ ಜನ ಸಾಗರ ನೋಡಿದರೆ ನಾನು ಗೆದ್ದೆನೇನೋ ಅನಿಸಿದೆ.

ರಾಗಿಣಿ– ಡ್ಯಾಡಿ ನಿಮ್ಮ ಹಿಂದೆ ಇಂಥ ಜನಸಾಗರವೇ ಇದೆಯೆಂದ ಮೇಲೆ ಗೆಲ್ಲುವುದರಲ್ಲಿ ಅನುಮಾನವೇ ಇಲ್ಲ.

ಕಿತಾಪತಿ– ಏನು ಜನಾರಿ.... ಅಬಬಬಾ..... ಮೂರು ಕಿಲೋಮೀಟರು ಜನ ಸೇರ್‍ರ್‍ಯಾರ, ಈ ಹಿಂದೆ ಸಿ.ಎಂ. ಬಂದಾಗ್ಯೂ ಇಷ್ಟು ಜನ ಬಂದಿರ್‍ಲಿಲ್ಲ ನಿಮ್ಮ ವರ್ಚಸ್ಸೇ ಹಾಂಗದರಿ

ಹನುಮ– ನಮ್ಮ ಗೌಡರ ವರ್ಚಸ್ ಅಂದ್ರ ವರ್ಚಸ್ಸು ಇಂಥಾವೆಲ್ಲ ನೋಡಬೇಕಾದ್ರೂ ಪುಣ್ಯ ಮಾಡಿರಬೇಕು. (ಒಂದಿಬ್ಬರು ಬಂದು ಗೌಡರಿಗೆ ಹಾರ ಹಾಕಿ ಹೋಗುವರು)

ನಾಗೇಂದ್ರ– ಬೇಗ ಬೇಗನೇ ಹೋಗೋಣ ಬೆಳಿಗ್ಗೆ ೮ ಗಂಟೆಗೆ ಪ್ರಾರಂಭವಾದ ಮೆರವಣಿಗೆ ಮಧ್ಯಾಹ್ನ ೨ ಗಂಟೆಯಾಯ್ತು ಸಮಯ ಮುಗಿಯಲಿಕ್ಕೆ ಬಂದದ ಬೇಗ ಬೇಗ ನಡ್ರಿ, (ಗೌಡರಿಗೆ ಜಯಕಾರ ಹಾಕುತ್ತಾ ಹೋಗುವರು).

===****====****===

ಪ್ರವೇಶ–೧೬

ಗೌಡನ ಮನೆ

(ಗೌಡ ಎಲೆಕ್ಷನ್ನಿನ ತರಾತುರಿಯಲ್ಲಿದ್ದಾನೆ ಕಿತಾಪತಿ, ನಾಗೇಂದ್ರ ಹನುಮಾ ಇರುವರು)

ಕಿತಾಪತಿ– ಗೌಡರೇ ಮೆರವಣಿಗೆಯಂತೂ ಭರ್ಜರಿಯಾಯ್ತು, ಆದರ ನಮಗೆ ಚಿನ್ಹೆ ಬ್ಯಾರೇ ಸಿಗಬೇಕಾಗಿತ್ತು. ಇವನೌನ ಹೋಗಿ ಹೋಗಿ ಹದ್ದು ಸಿಕ್ಕೈತಲ್ರೀ.

ಗೌಡ– ಚಿನ್ಹೆ ಯಾವುದಾದರೇನಲೇ, ಕೆಲವೊಂದು ಪಾರ್ಟಿ ಹೆಸರಿನ ಮ್ಯಾಲೆ ಕತ್ತಿ ನಿಂತರೂ ಆರಿಸಿ ಬರ್ತಾವ, ನಮಗ ಸಿಕ್ಕಿದ್ದೇನು ಸಾಮಾನ್ಯ ಚಿಹ್ನೆ ಏನು? ಹದ್ದು ಪಾಪ ನಿರುಪದ್ರವಿ ಪಕ್ಷಿ.

ನಾಗೇಂದ್ರ– ಹೌದು. ನಮಗೆ ಓಟು ಕೊಟ್ಟವರಿಗೆ, ನಮ್ಮೊಂದಿಗೆ ಹೊಂದಿಕೊಂಡವರಿಗೆ ಈ ಹದ್ದು ಒಳ್ಳೆಯ ಪಕ್ಷಿ. ನಮ್ಮ ವಿರುದ್ಧ ತಿರುಗಿದವರ ಪಾಲಿಗೆ ಈ ಹದ್ದು ರಣಹದ್ದಾಗುತ್ತದೆ. ಹನುಮ ಸಾರಾಯಿ ಸ್ಟೆಕ್ಷನ್ನು ನಿಂದು, ಎಷ್ಟು ಬೇಕಾದ್ರೂ ಹಂಚು.

ಗೌಡ– ನಾಗೇಂದ್ರ, ಸೆರೆ ಎಷ್ಟ ಲೋಡ್ ಬಂತು.

ನಾಗೇಂದ್ರ– ೩ ಲೋಡ್ ಇಳಿಸಿದ್ದೇವೆ ಚುನಾವಣೆ ಮುನ್ನಾದಿನ ೫ ಲೋಡ್ ಇಳಿಸಲು ಹೇಳಿದ್ದೇನೆ.

ಗೌಡ– ಜನರಿಗೆ ಊಟದ ವ್ಯವಸ್ಥೆ ಹೇಗಾಗಿದೆ.

ನಾಗೇಂದ್ರ– ೫೦ ಜನ ಅಡುಗೆಯವರಿಗೆ ಹೇಳಿದ್ದೇನೆ ಬಂದ ಜನರಿಗೆ ಊಟ ಗುಂಡು, ಎಲ್ಲ ಫ್ರೀ....

ಗೌಡ– ಅದೇನೋ ಹೇಳ್ತಿದ್ದೆಲ್ಲ, ಬಾಂಬೆಯಿಂದ ೫೦ ಜನ ಹುಡುಗಿಯರನ್ನು ಕರೆಸ್ತೀನಂತ.

ನಾಗೇಂದ್ರ– ನಿನ್ನೆಯೇ ಬಂದು ಇಳಿದಿದ್ದಾರೆ. ಬಂದವರು ಬರೀ ೫೦ ಜನ,

ಆದರೆ ಅವರ ಹಿಂದೆ ಬಿದ್ದವರು ಸಾವಿರಾರು ಜನ ಒಟ್ಟಿನಲ್ಲಿ ಭರ್ಜರಿಯಾಗಿ ನಡೆದಿದೆ ನಮ್ಮ ವ್ಯವಸ್ಥೆ.

ಕಿತಾಪತಿ– ಆಂ.... ೫೦ ಜನ ಹುಡುಗಿಯರು ಒಬ್ಬರನ್ನಾದರೂ ಈಗ ಕರಸರಿ ಹ್ಯಾಂಗ ಕುಣಿತಾರ ನೋಡೋಣ.

ನಾಗೇಂದ್ರ– ಲೇ.... ಹನುಮಾ, ಈ ರೂಮಿನಲ್ಲಿ ಮಿಸ್ ಮಾಲಾ ಇದ್ದಾಳೆ ಕರೆದುಕೊಂಡು ಬಾ (ಹನುಮ, ಹೋಗಿ ಮತ್ತೆ ಬಂದು)

ಹನುಮ– ಬರ್‍ತಾ ಇದ್ದಾಳ್ರಿ (ನರ್ತಕಿಯೊಬ್ಬಳು ಬಂದು ನರ್ತನ ಮಾಡುವಳು, ಅವರವರಿಗೆ ತಕ್ಕಂತೆ ಕುಡಿಯುತ್ತಾ ಅವಳೊಂದಿಗೆ ವರ್ತಿಸುವರು ನರ್ತನ ಮುಗಿಸಿ ಅವಳು ಹೋದ ನಂತರ)

ಕಿತಾಪತಿ– ಇವನವುನ ಮಳಿ ಬಂದ ನಿಂತಂಗ ಆಯ್ತು ನೋಡ್ರಿ ಯಾ.... ಎಂಥಾ ಡ್ಯಾನ್ಸರಿ ಹುಟ್ಟಾ ಕಂಡಿದ್ದಿಲ್ಲ. ಇಂಥಾ ಡ್ಯಾನ್ಸ ನೋಡಿದ ಮ್ಯಾಲ ಜನ ನಮ್ಮ ಗೌಡರಿಗೆ ಓಟು ಕೊಡಲಾರದ ಮತ್ತೇನು ಕೊಡ್ತಾರ

ಗೌಡ– (ನಾಗೇಂದ್ರನಿಗೆ ಒಂದೆಡೆ ಕರೆದು) ನಾಗೇಂದ್ರ, ಹತ್ತಿರವಿದ್ದ ೨೦ ಲಕ್ಷ ಮುಗಿದಿದೆ ಮುಂದೆ ಹೇಗೆ ಮಾಡಬೇಕು.

ನಾಗೇಂದ್ರ– ಬರೀ ೨೦ ಲಕ್ಷಕ್ಕೆ ಹೀಗೆ ಹೇಳ್ತಿರಲ್ಲ ಇನ್ನು ಕನಿಷ್ಠವೆಂದರೂ ೮೦ ಲಕ್ಷ ಬೇಕು.

ಗೌಡ– ಹೇಗೆ ಮಾಡಬೇಕು ಮನೆಯಲ್ಲಿ ೨೦೦ ತೊಲಿ ಚಿನ್ನ ಇದೆ ಮಾರಾಟ ಮಾಡು.

ನಾಗೇಂದ್ರ– ೨೦೦ ತೊಲಿಗೆ ಬಹಳವೆಂದರೆ ೪೦ ಲಕ್ಷ ಬರಬಹುದು ಇನ್ನೂ ೪೦ ಲಕ್ಷ ಹೇಗೆ ಹೊಂದಿಸ್ತಿರಿ. ಒಂದು ವೇಳೆ ಹಣ ಹೊಂದಿಸದಿದ್ದರೆ ಸೋಲು ಗ್ಯಾರಂಟಿ.

ಗೌಡ– ನಾಗೇಂದ್ರ....ಸೋಲು ಎಂಬ ಹೆಸರು ನನ್ನೆದುರು ಎತ್ತಬೇಡ ನನ್ನ ಇಡೀ ಆಸ್ತಿ ಹೋಗಲಿ, ನಾನು ಗೆಲ್ಲಲೇಬೇಕು. ಈ ಬಾರಿ ನನಗೆ ಬೇಕಾದವರೆ ಮುಖ್ಯಮಂತ್ರಿಯಾಗುತ್ತಿದ್ದಾರೆ. ನಾನು ಮಂತ್ರಿಯಾಗುವುದಂತೂ ಶತಸಿದ್ಧ, ನಾನು ಮಂತ್ರಿಯಾದರೆ ಇದರಷ್ಟಲ್ಲ ಇದರ ನೂರು ಪಟ್ಟು ಆಸ್ತಿ ಮಾಡಬಹುದು.

ನಾಗೇಂದ್ರ– ಹಾಗಿದ್ರೆ ಇನ್ನೂ ೪೦ ಲಕ್ಷ ವ್ಯವಸ್ಥೆ ಮಾಡಲೇಬೇಕು.

ಗೌಡ– ಮಾಡ್ತೇನೆ.

ನಾಗೇಂದ್ರ– ಹೇಗೆ ಮಾಡ್ತೀರಿ.

ಗೌಡ– ಹೇಗೆ ಮಾಡ್ತೇನೆ ಅಂದರೆ ನಿನಗೆ ಆಮೇಲೆ ಹೇಳ್ತೆನೆ ಬಂಗಾರ ಬಿಟ್ಟು ೪೦ ಲಕ್ಷ ಮಾಡಿದ್ರಾಯ್ತಿಲ್ಲೋ ಆಗ್ಲಿ.....

ಹನುಮ– ಗೌಡರೇ, ಗೆದ್ದ ವ್ಯಾಲ ಇದರ ನೂರು ಪಟ್ಟು ಆಸ್ತಿ ಮಾಡ್ತೀನಂತೀರಲ್ಲ ಸರ್ಕಾರ ನಿಮಗೇನು ಇನಾಮಂತ ಕೊಡ್ತಾದೇನ್ರಿ,

ಕಿತಾಪತಿ– ಲೇ ಹುಚ್ಚುಪ್ಯಾಲಿ ನಿನಗೇನು ತಿಳಿತಾದಲೇ ರಾಜಕಾರಿಣಿಗಳಂದ್ರ ನೀ ಏನು ಸಾಮಾನ್ಯರಂತ ತಿಳಿದೇನು? ರಾಜಕಾರಣಿಗಳಂದ್ರ ನೀರು ಕೋಳಿ ಇದ್ದಂಗಂತ ಒಬ್ರು ಹೇಳಿದ್ರು ಯಾವ ಕೊಳದಲ್ಲಿ ನೀರು ಇರ್ತಾವ್ರೋ ಅಲ್ಲಿಗೆ ಹಾರ್ತಾವಂತ ಆದರ ಮತ್ತೊಬ್ಬ ಏನು ಹೇಳ್ಯಾನ ಗೊತ್ತೇನು ರಾಜರಾರಿಣಿಗಳಂದ್ರ ಸೂಳ್ಯಾರ ಇದ್ದಂಗ ಯಾವ ಪಕ್ಷದವರು ಹೆಚ್ಚು ಹಣ ಕೊಡ್ತಾರೋ ಅವರಿಗೆ ಸೆರಗು ಹಾಸ್ತಾರ, ಓಟು ಕೊಟ್ಟವರನ್ನ ಮರೆತು ಆಸ್ತಿ ಮಾಡುತ್ತ ಆರಾಮ ಬೆಂಗಳೂರಾಗ ಕೂಡ್ತಾರ.

ಹನುಮ– ಹಿಂಗ್ಯೆತೇನು ಇದರ ಹಕೀಗತ್ತು ಅದಕ್ಕ ಮಾತಿಗ ಮುಂಚೆ ನಮ್ಮ ಗೌಡರು ಇಡೀ ಆಸ್ತಿ ಹೋಗಲಿ ಇಡೀ ಆಸ್ತಿ ಹೋಗಲಿ ಅಂತಾರ.

ಕಿತಾಪತಿ– ಇಲ್ದಿದ್ರ ಸುಳ್ಳೆ ಯಾಂವಂತಾನಲೇ ಇದೊಂದು ಈಗಿನ ಕಾಲಕ್ಕ ದೊಡ್ಡ ಬಿಜಿನೆಸ್ ಆಗ್ಯಾದ.

ಗೌಡ– (ಸಿಟ್ಟಿನಿಂದ) ಕಿತಾಪತಿ ! ಏನು ಭಾಷಣ ಬಿಗಿಯಾಕತ್ತಿಯಲೇ ಕತ್ತಿಯಂಥವನ.

ಕಿತಾಪತಿ– ಸುಮ್ನೋ ಲೋಕಾರೂಢಿ ಮಾತಾಡಕತ್ತೀನ್ರಿ, ನಮ್ಮ ಓಣ್ಯಾಗ ನಮ್ಮ ಮಗಳು ನಾನು ಕೂಡೇ ಪ್ರಚಾರ ನಡೆಸಿವ್ರಿ ಗೌಡ್ರ (ರಾಗಿಣಿ ಹೊರಗೆ ಬಂದು ನಿಂತಿರುವಳು)

ಗೌಡ– ಶಹಬ್ಬಾಸಲೇ ಮಗನ, ಇನ್ನೂ ಜೋರಾಗಿ ಪ್ರಚಾರ ಮಾಡು.

ಕಿತಾಪತಿ– ಅವ್ವಾರೆ, ನೀವುನು ಮನೆ ಮನೆ ತಿರುಗಿ ಮುತ್ತೈದೆಯರಿಗೆ ಕುಂಕಮ ಹಚ್ಚಿ, ನಮ್ಮಪ್ಪನಿಗೆ ಓಟು ಕೊಡ್ರಿ ಅಂತಾ ಕೇಳ್ರೆವ್ವಾ

ರಾಗಿಣಿ– ನಾನ್ಸೆನ್ಸ್ ನಾನು ಮನೆ ಮನೆಗೆ ಹೋಗಿ ಯಾರ್‍ಯಾರದೋ ಮುಸುಡಿಗೆ

ಕುಂಕುಮ ಹಚ್ಚಬೇಕಾ? ಸಾಕಷ್ಟು ಹಣ ಚೆಲ್ಲತಾ ಇದ್ದೇವೆ. ನಮಗೇನು ಬಿಟ್ಟಿ ಓಟು ಬೇಕಾಗಿಲ್ಲ. ಹತ್ತಲ್ಲ ನೂರು ರೂ.ಗೊಂದು ಓಟು ಖರೀದಿಸ್ತೇನೆ ಜನಾ ಸಲಾಮು ಹೊಡೆದು, ನೋಟು ಪಡೆದು ಓಟು ಹಾಕಿ ಹೋಗಬೇಕು ತಿಳಿಯಿತೇ?

ಗೌಡ– ಕಿತಾಪತಿ ಬಾಯ್ಮುಚ್ಚಲೇ ಯಾರಿಗೆ ಹ್ಯಾಂಗ ಮಾತಾಡಬೇಕೆಂಬುದಗೊತ್ತಿಲ್ಲ ನಿನಗ, ಉದ್ರಿ ಮಾತಾಡಬೇಡ ಯಾರ್ಯಾರ ಕೆಲಸ ಅವರು ಜವಾಬ್ದಾರಿಲಿಂದ ಮಾಡಿ, ನಾಗೇಂದ್ರ ಜೀಪುಗಳು ಎಷ್ಟು ಹೇಳಿದಿ.

ನಾಗೇಂದ್ರ– ೨೫ ಗೌಡರೇ.

ಗೌಡ– ಹೌದು, ನಾನು ಹೊಂಟರೇ ಮುಖ್ಯಮಂತ್ರಿ ಹೊಂಟಂಗ ಕಂಡಿರಬೇಕು, ಮುಂದೆ ಹತ್ತು ಹಿಂದೆ ಹದಿನೈದು ನಡುವೆ ನನ್ನ ಎಂಪೋಲಾ ಕಾರು, ಹನುಮ, ನೀನು ಸೆರೆ ವ್ಯವಸ್ಥಾ ಸರಿಯಾಗಿ ಮಾಡಬೇಕು. ಕಿತಾಪತಿ, ಚುನಾವಣೆ ಲೆಕ್ಕ ಸರಿಯಾಗಿ ಬರೆದಿಡು.

ಕಿತಾಪತಿ– ಆಗ್ಲಿ ಗೌಡರೇ.

ನಾಗೇಂದ್ರ– ಗೌಡರೇ, ಹಳ್ಳಿಗಳಿಗೆ ಹೋದಾಗ ಧರ್ಮದ ಕಾರ್ಯಕ್ಕೆ, ದೇವಸ್ಥಾನಗಳಿಗೆ ಹಣ ಕೊಡುವುದು ಸ್ವಲ್ಪ ಕಡಿಮೆ ಮಾಡ್ರಿ.

ಗೌಡ– ಇವತ್ತು ಧರ್ಮ ಮತ್ತು ಜಾತಿಯ ಮೇಲೆಯೇ ಚುನಾವಣೆ ನಿಂತಿದೆ ಆಯಾ ಜಾತಿ ಧರ್ಮದವರಿಗೆ ತಕ್ಕಂತೆ ಸಹಾಯ ಮಾಡೋಣ. ಇರಲಿ, ಹೆಚ್ಚಿನ ವಿಷಯ ಪರ್ಸನಲ್ಲಾಗಿ ಮಾತಾಡೋಣ ಮೊದಲು ಪಾರ್ಟಿ ಆಫೀಸಿಗೆ ಭೆಟ್ಟಿ ಕೊಡೋಣ ನಡೆ (ಹೊರ ಹೋಗುವರು).

===**===**===

ಪ್ರವೇಶ ೧೭

ರಸ್ತಾ ಸೀನು

(ಚುನಾವಣೆ ಪ್ರಚಾರ, ಒಂದೆಡೆಯಿಂದ ಬಸವಂತ, ಶೇಖರ ಮತ್ತು ನಾಲ್ಕು ಜನ ಹಸುವಿನ (ಆಕಳ) ಚಿನ್ಹೆ ಹಿಡಿದು ಬರುವರು)

ಒಬ್ಬ– ಹಸುವಿನ ಚಿನ್ಹೆಗೆ.

ಎಲ್ಲರೂ– ನಿಮ್ಮ ಮತ ಕೊಡಿರಿ.

ಒಬ್ಬ– ನಿಮ್ಮ ಓಟು ಯಾರಿಗೆ?

ಎಲ್ಲರೂ– ಬಸವಂತಪ್ಪನವರಿಗೆ.

ಒಬ್ಬ– ಬಸವಂತಪ್ಪನವರಿಗೆ.

ಎಲ್ಲರೂ– ಜಯವಾಗಲಿ (ಜಯ ಘೋಷಣೆ ನಂತರ ಬಸವಂತಪ್ಪನ ಭಾಷಣ)

ಬಸವಂತ– ಮಹಾಜನಗಳೇ. ಈ ಚುನಾವಣೆಯಲ್ಲಿ ನಿಮ್ಮೆಲ್ಲರ ಅಭಿಪ್ರಾಯದಂತೆ ಸ್ಪರ್ಧಿಸಿದ್ದೇನೆ. ಎದುರಾಳಿ ಅಭ್ಯರ್ಥಿಯಂತೆ ಹಣ ಹೆಂಡದ ಹೊಳೆ ಹರಿಸಿ ಆರಿಸಿ ಬರುವ ಬಯಕೆ ನನಗಿಲ್ಲ. ಇಂದಿನ ರಾಜಕಾರಿಣಿಗಳು ಚುನಾವಣೆಯಲ್ಲಿ ಲಕ್ಷ ಲಕ್ಷ ಖರ್ಚು ಮಾಡುತ್ತಾರೆ. ಆರಿಸಿದ ನಂತರ ಮೊದಲು ಹಣ ಮಾಡಲು ತೊಡಗುತ್ತಾರೆ ತಮ್ಮನ್ನು ತಾವು ಮಾರಿಕೊಳ್ತಾರೆ. ಕ್ಷೇತ್ರದ ಮತದಾರರನ್ನು ಮರೆಯುತ್ತಾರೆ. ನೋಟು ಪಡೆದು ಓಟು ಕೊಟ್ಟ ಜನತೆಯೂ ಕೇಳುವ ಹಕ್ಕು ಕಳೆದುಕೊಳ್ಳುತ್ತಾರೆ. ಆದರೆ ಇಲ್ಲಿ ಹಾಗಿಲ್ಲ, ನನ್ನನ್ನು ನೀವು ನಿಲ್ಲಿಸಿದಿರಿ ಗೆಲ್ಲಿಸುವ ಜವಾಬ್ದಾರಿಯೂ ನಿಮ್ಮದೇ. ಗೌಡ ಬಹಳಷ್ಟು ಖರ್ಚು ಮಾಡುತ್ತಿದ್ದಾನೆ. ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲುವುದೇ? ಇರಲಿ, ತಮಗೆಲ್ಲ ಗೊತ್ತಿರುವಂತೆ ನನ್ನ ಚಿನ್ಹೆ ಹಸು ಗೋಮಾತೆಗೆ ಅಣ್ಣ–ತಮ್ಮಂದಿರು, ಅಕ್ಕ–ತಂಗಿಯರು ಓಟು ಕೊಟ್ಟು ಹಣ ಬಲಕ್ಕಿಂತ ಜನ ಬಲದ ಶಕ್ತಿ ಹೆಚ್ಚೆಂದು ತಾವು ತೋರಿಸಬೇಕಾಗಿದೆ, ತಮ್ಮ ಪವಿತ್ರವಾದ

ಮತ ನನಗೆ ಕೊಡಿರಿ ಕ್ಷೇತ್ರದ ಸುಧಾರಣೆಗೆ ಶಕ್ತಿ ಮೀರಿ ಶ್ರಮಿಸುತ್ತೇನೆ ಎಲ್ಲರಿಗೂ ನಮಸ್ಕಾರ. ಜೈ ಹಿಂದ್! ಜೈ ಕರ್ನಾಟಕ!

ಒಬ್ಬ– ಬಸವಂತಪ್ಪನವರಿಗೆ

ಎಲ್ಲರೂ– ಜಯವಾಗಲಿ.

ಒಬ್ಬ– ಹಸುವಿನ ಚಿನ್ಹೆಗೆ.

ಎಲ್ಲರೂ– ಜಯವಾಗಲಿ (ಜಯಘೋಷ ಹಾಕುತ್ತ ಹೋಗುವರು, ಗೌಡ, ನಾಗೇಂದ್ರ, ಕಿತಾಪತಿ, ಹನುಮ, ೫-೬ ಜನ ಬರುವರು, ವಾದ್ಯಗಳಿದ್ದರೂ ಆದೀತು, ಹದ್ದಿನ ಚಿತ್ರ ಹಿಡಿದಿರುವರು)

ಹನುಮ– ಗೌಡರಿಗೆ.

ಎಲ್ಲರೂ– ಜಯವಾಗಲಿ.

ಹನುಮ– ನಿಮ್ಮ ಓಟು ಯಾರಿಗೆ?

ಎಲ್ಲರೂ– ನಮ್ಮ ಗೌಡರಿಗೆ.

ಹನುಮ– ಹದ್ದಿನ ಚಿನ್ಹೆಗೆ.

ಎಲ್ಲರೂ– ನಿಮ್ಮ ಮತ ಕೊಡಿರಿ.

ಕಿತಾಪತಿ– ಗೌಡರೇ ನೀವು ಭಾಷಣ ಮಾಡ್ರಿ, ಯಾಕಂದ್ರ ನಮ್ಮ ಮಂದಿ ಜಯಕಾರ ಮಾಡದ್ರಾಗ ಹೈರಾಣಾಗಿ ಹೋಗ್ಯಾರ.

ಗೌಡ– (ಸಾವರಿಸಿಕೊಂಡು) ಆಂ.... ನನ್ನ ಮತ ಬಾಂಧವರೇ, ಇದು ದೊಡ್ಡ ಚುನಾವಣೆ, ನೀವೆಲ್ಲ ನನಗೆ ಓಟು ಹಾಕಬೇಕು ನಾನು ನಿಮಗೆ ಓಟು ಪುಕ್ಕಟ್ಟೆ ಕೇಳಾಂಗಿಲ್ಲ. ನೂರು ರೂ. ಗೊಂದು ಓಟು ಕೊಡ್ರಿ, ಸಾಲದ್ದಕ್ಕೆ ಮನಸ್ಸಿಗೆ ಬಂದಷ್ಟು ಕುಡಿರಿ ತಿನ್ನರಿ, ಮಜಾ ಮಾಡಿರಿ, ಆದರೆ ಓಟು ಮಾತ್ರ ನನಗೇ ಕೊಡ್ರಿ, ನಾನು ಆರಿಸಿ ಬಂದ್ರ ಅಲ್ಲಲ್ಲ ಆರಿಸಿ ಬಂದೇ ಬರ್ತೀನಿ ಈ ಕ್ಷೇತ್ರ ಸಿಂಗಾಪೂರ ಮಾಡ್ತೀನಿ ಇಡೀ ಕರ್ನಾಟಕದಾಗೆ ಎದ್ದು ಕಾಣಬೇಕು ಹಾಂಗ್ ಮಾಡ್ತೀನಿ. ನೀವೆಲ್ಲ ಓಟು ನನಗೆ ಕೊಡ್ರಿ ನಮಸ್ಕಾರ.

ಕಿತಾಪತಿ– ಗೌಡರೆ, ಗಂಡಸರಿಗೆ ನೂರು ರೂಪಾಯಿ ಕೊಟ್ಟು ಕುಡಿಯಲು ತಿನ್ನಲು ಕೊಡ್ತಿರಿ ಹೆಣ್ಣು ಮಕ್ಕಳಿಗೆ ಏನಾದ್ರೂ ವ್ಯವಸ್ಥೆ ಮಾಡಿರೇನು.

ಗೌಡ–	ಮುತ್ತೈದೆಯರಿಗೆ ಮೂಗುತಿ, ಸೀರಿ, ಕುಬಸಾ, ಹಿರಿಯರಿಗೆ ಪಂಜಿ, ಇನ್ನೂ ೧೮ ವಯಸ್ಸಿನ ಓಟಿಂಗ್ ಪವರ್ ಪಡೆದ ನವ ತರುಣಿಯರಿಗೆ ಪಂಜಾಬಿ ಡ್ರೆಸ್ ತರಿಸೀವಿ ಇನ್ನೇನು ಬೇಕು ಇಷ್ಟು ಸಮಾಜಸೇವೆ ಮಾಡಾಂವ್ ಯಾಂವದಾನ ಈ ಕಾಲಕ್ಕ, ಯುವಕರಿಗಂತೂ ಬಾಂಬೆಯಿಂದ ಬಂದ ಹುಡುಗ್ಯಾರು ಸುಖಾ ಕೊಡ್ಲಿಕತ್ಯಾರ.
ಒಬ್ಬ–	ಗೌಡರಿಗೆ.
ಎಲ್ಲರೂ–	ಜಯವಾಗಲಿ.
ಒಬ್ಬ–	ಹದ್ದಿನ ಚಿನ್ಹೆಗೆ ಮತ.
ಎಲ್ಲರೂ–	ಜನತೆಗೆ ಹಿತ (ಜಯಘೋಷ ಹಾಕುತ್ತ ಹೋಗುವರು).

===***====***===

ಪ್ರವೇಶ ೧೮

ಬಸವಂತನ ಮನೆ

(ಬಸವಂತ, ಕುಳಿತಿದ್ದಾನೆ ಸಾವಿತ್ರಿ ಒಳಗಿನಿಂದ ಬರುತ್ತ)

ಸಾವಿತ್ರಿ– ಯಾಕ್ರೀ ಏನು ಚಿಂತೆ ಮಾಡ್ತಿದ್ರಿ

ಬಸವಂತ– ಏನಿಲ್ಲ ಇಂಥ ದೊಡ್ಡ ಸಮರಕ್ಕೆ ಇಳಿದಿದ್ದೇನೆ ಫಲಿತಾಂಶದ ಬಗ್ಗೆ ಯೋಚಿಸುತ್ತಿದ್ದೇನೆ.

ಸಾವಿತ್ರಿ– ನೋಡ್ರಿ ಪ್ರಯತ್ನ ನಮ್ಮದು ನಾವೇನಿದ್ದರೂ ದುಡಿಯುವವರು ಪ್ರಯತ್ನಕ್ಕೆ ಫಲ ಸಿಕ್ಕೇ ಸಿಗುವದು.

ಬಸವಂತ– ಬೇರೆ ವಿಷಯದಲ್ಲಿ ಆ ಮಾತು ಹೇಳಬಹುದು ಇದು ಚುನಾವಣೆ ಮೇಲಾಗಿ ಎದುರಿನವರು ಮಿತಿ ಮೀರಿ ಖರ್ಚು ಮಾಡುತ್ತಿದ್ದಾರೆ. ಹಣ ಹೆಂಡ ಹೊಳೆಯಾಗಿ ಹರಿಯುತ್ತಿದೆ. ಸಾವಿತ್ರಿ ನೀನು ಊಟ ಮಾಡಿದೆಯಾ?

ಸಾವಿತ್ರಿ– ಇಲ್ಲಾ ನೀವು ಗೆಲ್ಲುವವರೆಗೆ ಒಂದೊತ್ತು ಮಾತ್ರ ಊಟ ಮಾಡುತ್ತೇನೆ ಬೆಳಿಗ್ಗೆಯಿಂದ ಸಂಜೆಯವರೆಗೂ ನನ್ನ ಗೆಳತಿಯರೊಂದಿಗೆ ಪ್ರಚಾರ ಮಾಡ್ತಾ ಇದ್ದೇನೆ. ಮನೆ ಮನೆಗೂ ಹೋಗಿ ಮುತ್ತೈದೆಯರಿಗೆ ಕುಂಕುಮ ಹಚ್ಚಿ ನನ್ನ ಗಂಡರಿಗೆ ಮತ ಹಾಕಿರಿ ಎಂದು ಬೇಡಿಕೊಳ್ತಿದ್ದೇನೆ. ಹೆಣ್ಣು ಮಕ್ಕಳು ಓಟು ನಮಗೆ ಖಂಡಿತವಾಗಿಯೂ ಕೊಡುತ್ತಾರೆ. ಆದರೆ ಆ ಬದ್ಮಾಸ ಗೌಡನಿಗೆ ಯಾವ ಹೆಣ್ಣು ಓಟು ಹಾಕುವುದಿಲ್ಲ.

ಶೇಖರ– (ಬರುತ್ತಾ) ಅತ್ತಿಗೆ ನಾನು ಹೋದಲ್ಲೆಲ್ಲಾ ನಿನ್ನ ಹೆಸರೇ ಹೇಳುತ್ತಿದ್ದಾರಮ್ಮ. ನಿನ್ನ ಶ್ರಮದಿಂದ ಅಣ್ಣ ಗೆಲ್ಲುವದು ದೊಡ್ಡ ಮಾತಲ್ಲ. ಅಣ್ಣಾ, ಎದುರಿನವರ ಅಬ್ಬರದ ಪ್ರಚಾರ ನೋಡಿ ನೀನು ಚಿಂತಿಸಬೇಡ ಅವನ ಹಿಂದಿರವವರೆಲ್ಲ ವೈರಿಗಳೇ ಇದ್ದಾರೆ ಈ ಹಿಂದೆ ಬಡ್ಡಿ ತೆತ್ತವರು, ಅನ್ಯಾಯಕ್ಕೊಳಗಾದವರಿದ್ದಾರೆ.

ಅವನನ್ನು ಹಾಳು ಮಾಡಲೆಂದೇ ಅವನ ಹಿಂದ ಬಿದ್ದಿದ್ದಾರೆ. ಅವನ ಹಿಂದಿರುವ ೫೦ ಜನರನ್ನು ಒಬ್ಬೊಬ್ಬರಂತೆ ಭಟ್ಟಿಯಾಗಿದ್ದೇನೆ. ಎಲ್ಲರೂ ಅವನಿಗೆ ಸೋಲಿಸುವ ಮಾತೇ ಆಡುತ್ತಿದ್ದಾರೆ.

ಬಸವಂತ– ಸತ್ಯಮೇವ ಜಯತೆ ಅಂತೆ, ಸತ್ಯಕ್ಕೆ ಯಾವತ್ತೂ ಜಯವಿದೆ.

ಪೋಸ್ಟಮನ್– ಸರ್ ಪೋಸ್ಟ. (ಕೊಟ್ಟು ಹೋಗುವನು)

ಬಸವಂತ– (ಓದಿ ನೋಡಿ) ಸಾವಿತ್ರಿ ದೇವರಿಗೆ ತುಪ್ಪದ ದೀಪ ಹಚ್ಚಿ ತಿನ್ನಲು, ಸಿಹಿ ಕೊಡೆ.

ಶೇಖರ– ಯಾಕಣ್ಣ ಅಂಥಾ ಸಿಹಿ ಸುದ್ದಿ ಏನಿದೆ

ಬಸವಂತ– ನಮ್ಮ ಭರತನಿಗೆ ಪಿ ಎಸ್ ಐ ನೌಕರಿ ದೊರೆತಿದೆಯಂತೆ ಸಧ್ಯದಲ್ಲೇ ಡ್ಯೂಟಿ ವಹಿಸಿಕೊಳ್ಳಬೇಕಾಗಿದೆಯಂತೆ ಸಧ್ಯ ಬರಲು ಆಗುತ್ತಿಲ್ಲ ಚುನಾವಣೆಯಲ್ಲಿ ನಮಗೇ ಜಯ ದೊರೆಯಲೆಂದು ದೇವರಲ್ಲಿ ಪ್ರಾರ್ಥಿಸಿ ಈ ಪತ್ರ ಬರೆದಿದ್ದಾನೆ.

ಶೇಖರ– ನೋಡಿದೆಯಾ ಅಣ್ಣಾ, ತಮ್ಮ ಎಷ್ಟು ಚೆನ್ನಾಗಿ ಓದಿ ನೌಕರಿ ಪಡೆದುಕೊಂಡ.

ಬಸವಂತ– ನೀನು ಕೂಡಾ ಸರಿಯಾಗಿ ಓದಿ ದೊಡ್ಡ ಅಧಿಕಾರಿ ಆಗಬೇಕಂತ ಕನಸು ಕಂಡಿದ್ನೆಪ್ಪ ಆದರೇನು ಮಾಡುವದು.

ಶೇಖರ– ಹೋಗ್ಲಿಬಿಡಣ್ಣ. ವಿದ್ಯೆ ನನ್ನ ತಲೆಗೆ ಹತ್ತಲಿಲ್ಲವಲ್ಲ. ಅಣ್ಣಾ ದೇಸಾಯರು, ಸರಪಂಚರು ನಿನ್ನ ಸಲುವಾಗಿ ಚೌಡಿ ಕಟ್ಟಿ ಮ್ಯಾಲೆ ಕಾಯಾಕತ್ತಾರ ಬೇಗ ನಡಿಯಣ್ಣ.

ಸಾವಿತ್ರಿ– ಹಾಂ, ಹಾಂ ನಿಲ್ರಿ, ನನ್ನ ಮೈದುನ ಭರತನಿಗೆ ನೌಕರಿ ದೊರೆತುದಕ್ಕೆ ಸಿಹಿ ತಿನ್ನಿರಿ. (ತಿನ್ನಿಸುವಳು)

ಬಸವಂತ– ಹೋಗಿ ಬರ್ತೀನಿ ಸಾವಿತ್ರಿ

ಸಾವಿತ್ರಿ– ಹೋಗಿ ಬರ್ರಿ, ನಾನು ನನ್ನ ಗೆಳತಿಯರೊಂದಿಗೆ ಮನೆ ಮನೆಗೆ ಹೋಗಿ ಮಹಿಳೆಯರಿಗೆ ಹೇಳಿ ಬರ್ತೀನಿ (ಬಸವಂತ ಶೇಖರ ಹೊರಗೆ ಸಾವಿತ್ರಿ ಒಳಗೆ ಹೋಗುವಳು).

===***===***===

ಪ್ರವೇಶ-೧೯

ರಸ್ತಾ ಸೀನು

ಪೋಲಿಸ– ಛೇ ಛೇ ಕಾಲ ಕೆಟ್ಹೋಯ್ತುರಿ ಪೋಲಿಸರಂದ್ರ ಜನರಿಗೆ ಕಿಮ್ಮತ್ತಿಲ್ಲದಂಗ ಆಗ್ಯಾದ ಒಂದು ಕಾಲ ಇತ್ರಿ ಊರಾಗ ಪೋಲಿಸ ಬಂದಾನಂದ್ರ ಬಿದ್ದೇನನ್ನು ಖಬರಿಲ್ದೆ ಓಡತಿದ್ರು, ಆದ್ರ ಈಗ, ಪೋಲಿಸರ ಒಂದು ಬೀಡಿ ಇದ್ರ ಕೊಡ್ರಿ ಅಂತ ನಮಗ ಕೇಳ್ತಾರ, ಇದರ ಬಗ್ಗೆ ನಮಗೇನು ಬ್ಯಾಸರಾ ಇಲ್ಲ ಬಿಡ್ರಿ, ಯಾರ ಮಾತು ಯಾರು ಕೇಳತಾರ, ತಂದಿ ತಾಯಿ ಮಾತ ಕೇಳಾಂಗಿಲ್ಲ, ಆದರೂ ಆರೋಪಿಗಳಾಗಿ ನಮ್ಮ ಕಸ್ಟಡಿಯೊಳಗ ಬಂದ್ರ ಎಂಥವರಾ ಇರ್ಲಿ ನಮ್ಮ ಮಾತನ್ನ ಕೇಳ್ತಾರ.

ಚಂಪಾಕಲಿ– (ಕೈಚೀಲ ಹಿಡಿದು ಬರುತ್ತ) ರೀ ಪೋಲಿಸರಾ ಏನೋ ವಿಚಾರ ಮಾಡಾಕತ್ತೀರಲ್ಲ.

ಪೋಲಿಸ– ನಿನ್ನ ವಿಚಾರಾನ ಮಾಡ್ತಿದ್ದೆ ಎಂದು ಮದುವ್ಯಾಗಬೇಕು ಹ್ಯಾಂಗ ಆಗಬೇಕು ಅಂತಾ.

ಚಂಪಾಕಲಿ– ನಾವೇನು ಪ್ರಯತ್ನ ಮಾಡಿದ್ರೂ ನಮ್ಮ ಹಣೆಬಾರದಾಗ ಯಾವ ರೀತಿ ಆಗಬೇಕಂತದನೋ ಅದೇ ರೀತಿ ಆಗತದ.

ಪೋಲಿಸ– ಯಾಕ ವೇದಾಂತ ಹೇಳಾಕತ್ತೀಯಲ್ಲ.

ಚಂಪಾಕಲಿ– ಏನು ಮಾಡ್ಲಿ ನಾ ನಿನ್ನೊಂದಿಗೆ ಮದುವ್ಯಾಗಬೇಕಂದ್ರ ನನಗ ಒಬ್ಬ ಹಗಲು ರಾತ್ರಿ ಬಿಡದ ಬೇತಾಳನಂಗ ಬೆನ್ನ ಹತ್ಯಾನ.

ಪೋಲಿಸ– ಯಾರಂವಾ?

ಚಂಪಾಕಲಿ– ಅದೇ ಆರ್‌ಎಂಪಿ ಡಾಕ್ಟರ, ಸುಮ್ಮಸುಮ್ಮನ ಮಾತಾಡಿಸತಾನ, ನನ್ನ ಮ್ಯಾಲೆ ಪ್ರಾಣಾನೇ ಇಟ್ಕೊಂಡಾನಂತ, ನಾನು ನಿನ್ನ ಮ್ಯಾಲೆ ಪ್ರಾಣ ಇಟ್ಕೊಂಡಿದ್ದೀನಿ ಅಂವಾ ನನ್ನ ಮ್ಯಾಲೆ ಪ್ರಾಣ ಇಟ್ಕೊಂಡಾನ ಏನು ಮಾಡ್ಲಿ.

ಪೋಲಿಸ– ಈ ಸುದ್ದಿ ಮೊದಲ ಹೇಳಬಾರದಿತ್ತಾ ಅವನ ವಿಚಾರ ನನಗ ಬಿಡು ಇನ್ನ ನಾವು ಭಾಳ ದಿನಾ ಬಿಡೂದು ಬ್ಯಾಡ, ಇದ ವಾರದಾಗ ಮದುವ್ಯಾಗೋಣ, ನಿಮ್ಮಪ್ಪ ಬಂದ್ನಾ.

ಚಂಪಾಕಲಿ– ಅಂವಾ ಬಂದ್ರೂ ಅಷ್ಟ, ಬಿಟ್ರೂ ಅಷ್ಟ ನಮ್ಮಪ್ಪಗ ಹೇಳಿದ್ರ ಮತ್ತ ಮೂರು ತಿಂಗಳ ಮುಂದ ಹಾಕ್ತಾನ.

ಪೋಲಿಸ– ಎಷ್ಟು ಅವಸರಾ ಮಾಡ್ತಿಯಲ್ಲ.

ಚಂಪಾಕಲಿ– ಅವಸರಾ ಮಾಡದಿದ್ರ ಈ ಹಕ್ಕಿ ಮತ್ತೊಬ್ಬರ ಪಾಲಾಗತದ, ಅವಕಾಶ ತಪ್ಪಿಸಿಕೋಬಾರದು.

ಪೋಲಿಸ– ಅದು ಹ್ಯಾಂಗ ತಪ್ಪಿಸಿಕೊಳ್ತೇನೆ ನನ್ನ ಮುದ್ದಿನರಾಣಿ ಬಾ ಹೀಗೆ (ಇಬ್ಬರೂ ಹಾಡಿ ಕುಣಿಯವರು ನಂತರ) ಚಂಪಾಕಲಿ ನಾನು ಪೋಲಿಸ ಸ್ಟೇಶನ್ನಕ್ಕ ಹೋಗಿ ಬರ್ತೀನಿ. ನಾಳೇ ಇದೇ ಸ್ಥಳದಾಗ ಭೆಟ್ಟಿಯಾಗ್ತೀನಿ, ಟಾ ಟಾ (ಹೋಗುವನು)

ಚಂಪಾಕಲಿ– ಬಾಯ್ ಬಾಯ್

ರಂಗಣ್ಣ– (ಬರುತ್ತಾ) ಟಾ ಟಾ.... ಬಾಯ್ ಬಾಯ್ ವ್ಹಾ...! ಚಂಪಾಕಲಿ ನಿನ್ನ ಬಾಯಾಗ ಇಂಗ್ಲೀಷ ಶಬ್ದ.

ಚಂಪಾಕಲಿ– ನಾನೂ ೧೦ನೇತ್ತನಕ ಓದೀನ್ರಿ ಡಾಕ್ಟರ ೩ ಬಾರಿ ಪರೀಕ್ಷೆ ಕಟ್ಟಿದರೂ ೧೦ನೇ ಪಾಸಾಗಲಿಲ್ಲ

ರಂಗಣ್ಣ– ಹೌದಾ! ನಾನು ಅಷ್ಟೇ, ೧೦ನೇದಾಗ ೩ ಬಾರಿ ಫೇಲಾದೆ ಇಬ್ಬರದೂ ಸೇಮ ಕ್ಯಾಟಗರಿ ಅದ

ಚಂಪಾಕಲಿ– ಅಂದ್ರ..... ೧೦ನೇ ಫೇಲಾಗಿನೂ ಡಾಕ್ಟರಿಕೆ ಮಾಡ್ತೀರಿ.

ರಂಗಣ್ಣ– ಆರ್‌ಎಂಪಿ ಡಾಕ್ಟರಿಗೆ ಡಿಗ್ರಿ ಬೇಕೇನು? ೧೦ನೇದ್ದು ಫೇಲಲ್ಲ ೩ನೇದ್ದು ಕೂಡಾ ಓದಲಾರದ ನಮ್ಮವರು ಸ್ಕೂಟರಿಟ್ಟು ಮೆರಿಯಾಕತ್ತಾರ ದೊಡ್ಡ ದೊಡ್ಡ ಬಿಲ್ಡಿಂಗ ಕಟ್ಟಿಸ್ಯಾರ ಪೇಶಂಟಗಳಿಗೆ ವಿಶ್ವಾಸ ಮುಖ್ಯ ನಮ್ಮೆದುರು ಎಂ ಬಿ ಬಿ ಎಸ್ ಡಾಕ್ಟರಗಳ ಸುಮ್ನ ನೊಣ ಹೊಡಿಬೇಕಾಗ್ತದ.

ಚಂಪಾಕಲಿ– ಹಂಗಂದ್ರ ರೋಗ ಹ್ಯಾಂಗ ಕಂಡು ಹಿಡೀತೀರಿ. ಚೀಟಿ ಹ್ಯಾಗ ಬರೀತೀರಿ.

ರಂಗಣ್ಣ– ಡಾಕ್ಟರಗಳ ಅಕ್ಷರ ಮೆಡಿಕಲ್‌ದವರಿಗಲ್ಲದೆ ಮತ್ಯಾರಿಗೂ ತಿಳಿಯೂ ಹಾಂಗಿಲ್ಲ ಬಾಟಲಿ, ಗುಳಿಗೆಗಳ ಮ್ಯಾಲಿನ ಮೊದಲ ಅಕ್ಷರ ಹಿಡಿದು ಗೀಚಿದ್ರ ಸಾಕು ಅವರು ಅದ ಬಾಟಲಿ ಗುಳಿಗಿ ಕೊಡ್ತಾರ, ಈಗೀಗ ಮೆಡಿಕಲ್‌ನವರು ನಮ್ಮ ಚೀಟಿ ನೋಡಿ ನಿಮಗೆ ಏನಾಗೇದ ಅಂತಾ ಕೇಳಿಯೇ ಔಷಧ ಕೊಡ್ತಾರ. ಯಾಕಂದ್ರ ನಮ್ಮ ಜಾಣತನ ಅವರಿಗೆ ಗೊತ್ತೆ ಇರತದ ನಾವೇನರ ತಪ್ಪು ಬರೆದಿದ್ರೂ ಸರಿಯಾದ ಔಷಧೀನ ಕೊಡ್ತಾರ.

ಚಂಪಾಕಲಿ– ಇಂಜೆಕ್ಷನ್ ಹ್ಯಾಂಗ ಕೊಡ್ತೀರಿ.

ರಂಗಣ್ಣ– ಅದೆಲ್ಲ ಪಬ್ಲಿಕ್‌ದಾಗ ಹೇಳಾದಲ್ಲ. ನಾರ್ಮಲ್ ಇರುವಂಥ ಎರಡು ಇಂಜೆಕ್ಷನ್ ಕೊಡ್ತೀವಿ, ಸೈಡ್ ಇಫೆಕ್ಟ್ ಆಗ್ಲಾರದಂಗ ಗುಳಗಿ ಕೊಡ್ತೀವಿ, ಪೇಶಂಟಗ ಅಷ್ಟೇ ಖುಷಿ, ನಮಗೆ ಇಷ್ಟೇ ಖುಷಿ ದೊಡ್ಡ ಡಾಕ್ಟರನ ಫೀಸಿನಾಗ ನಮ್ಮ ಎಲ್ಲಾ ಟ್ರೀಟ್‌ಮೆಂಟ್ ಮುಗಿತಾದ.

ಚಂಪಾಕಲಿ– ಹಿಂಗಾದ್ರ ರೋಗ ಹ್ಯಾಂಗ್ ಕಡಿಮೆಯಾಗ್ತದ.

ರಂಗಣ್ಣ– ನಮ್ಮ ಕೈಗುಣ, ಅವರ ಹಣೇಬರಹ ಶುದ್ಧ ಇದ್ರ ಕಡಿಮೆ ಆಗ್ತಾದ, ಆದರೂ ಬೇಗನೆ ಕಡಿಮೆಯಾದ್ರ ನಮ್ಮ ಗಿರಾಕಿ ಗತಿ? ಒಂದು ಬಾರಿ ನಮ್ಮಲ್ಲಿ ಬಂದ್ರ ಮುಂದ ಪರ್ಮನೆಂಟ್ ಕಸ್ಟಮರ್ ಮಾಡಿಕೊಂಡ ಬಿಡ್ತೀವಿ.

ಚಂಪಾಕಲಿ– ಅದೆಲ್ಲ ಖರೆ ಈ ಎಲ್ಲ ಟ್ರೇನಿಂಗ್ ಎಲ್ಲಿ ತೊಗೊಂಡ್ರಿ.

ರಂಗಣ್ಣ– ಯಾವುದೋ ಒಬ್ಬ ಡಾಕ್ಟರನ ಕೈದಾಗ ೩ ತಿಂಗಳ ಕಂಪೌಂಡರ ಆಗಿ ಕೆಲಸ ಮಾಡಿದ್ರ ಸಾಕು ಸಲೀಸಾಗಿ ಆರ್.ಎಂ.ಪಿ. ಆಗಬಹುದು, ಈಗೀಗ ನಮ್ಮದನು ಯುನಿಯನ್ ಆಗ್ಯಾದ ರೊಕ್ಕ ಕೊಟ್ರ ಸರ್ಟಿಫಿಕೇಟ್ ಸಿಗ್ಲಿಕತ್ಯಾವ.

ಚಂಪಾಕಲಿ– ನಿಮ್ಮಂಥ ಡಾಕ್ಟರನ ಕೈದಾಗ ತೋರಿಸಿಕೊಳ್ಳೋ ಪೇಶಂಟಿನ ಹಣೇಬರಹ ಖೊಟ್ಟಿ ಕಾಣ್ತಾದ. ಡಾಕ್ಟರೆ, ಕಾಯಿಪಲ್ಯ ತರಾಕ ಹೊಂಟೇನಿ ಬರ್ತೀನಿ

ರಂಗಣ್ಣ– ನಮ್ಮ ಮದುವೆ ವಿಚಾರ ಏನ್ ಮಾಡ್ದಿ.

ಚಂಪಾಕಲಿ– (ಸ್ವ) ಇನ್ನೂ ಮದುವೆ ಗುಂಗು ಬಿಟ್ಟಾಂಗ್ ಕಾಣಾವಲ್ದು. ಮಾಡ್ತೀನಿ

ತಡಿ, (ಪ್ರ) ನೋಡ್ರಿ ಡಾಕ್ಟ್ರೇ ನಮ್ಮಪ್ಪ ಊರಿಗೆ ಹೋದಾಗ ಒಂದು ವರ ನೋಡಿ ಬಂದಾನ ಅವನಿಗೆ ಮದುವೆಯಾಗಾಕಿ ಅದೀನಿ.

ರಂಗಣ್ಣ– ಅಂದ್ರ ನನ್ನ ಗತಿ ನಾನಿನ್ನ ಮ್ಯಾಲ ಪ್ರಾಣಾನೇ ಇಟ್ಕೊಂಡೀನಿ.

ಚಂಪಾಕಲಿ– ಒಂದುವೇಳೆ ನಾನಿನ್ನೊಂದಿಗೆ ಮದುವೆಯಾದರೆ ಏನೇನು ಕೊಡ್ತಿ.

ರಂಗಣ್ಣ– ನನ್ನಲ್ಲಿ ಇದ್ದೀವು ಮೂರೂ ನಿನಗೆ ಕೊಡ್ತೀನಿ.

ಚಂಪಾಕಲಿ– ಮೂರು ಕೊಡ್ತಿ, ಏನೇನು ಅದಾವಾ.

ರಂಗಣ್ಣ– ಮೊದಲನೆಯದು ೧೦ ಸಾವಿರ ರೂ ಅದಾವಾ ಎರಡನೇಯದು ಎರಡು ತೊಲಿ ಬಂಗಾರ ಅದ, ಮೂರನೇಯದು ನಾನೇ.

ಚಂಪಾಕಲಿ– ಹಾಗಾದರೆ ಮೊದಲಿನವೆರಡು ತಗೊಂಡು ಇದೇ ಜಾಗದಾಗ ಬಾ ಮುಂದಿನ ವಿಚಾರ ಹೇಳ್ತೀನಿ.

ರಂಗಣ್ಣ– ಹೇಳ್ತಿನಿ ಅಲ್ಲ, ಮದುವೆಯಾಗ್ತೀನಿ ಅನ್ನು.

ಚಂಪಾಕಲಿ– ಅಲ್ಲಿ ನಮ್ಮಪ್ಪ ಗೌಡರ ಜತಿ ಹೊಂಟಾನ, ಲಗೂನ ಜಾಗಾ ಖಾಲಿ ಮಾಡು.

ರಂಗಣ್ಣ– ಆಯ್ತು, ನಾಳೆ ಇದೇ ಜಾಗದಾಗ ಭೆಟ್ಟಿಯಾಗ್ತೀನಿ (ಹೋಗುವನು, ಗೌಡ, ಕಿತಾಪತಿ ಬರುವರು)

ಕಿತಾಪತಿ– ಯಾಕವ್ವ ಮಗಳಾ ಹಿಂಗ್ ಒಬ್ಬಾಕಿನ ನಿಂತೀದಿ.

ಚಂಪಾಕಲಿ– ಕಾಯಿಪಲ್ಯ ತರಾಕಂತ ಬಂದಿದ್ದೆ, ನೀ ಬರಾದು ಕಾಣಿಸ್ತು ನಿಂತಿದ್ದೆ.

ಗೌಡ– ಈ ಹುಡುಗಿ ನಿನ್ನ ಮಗಳೇನಲೇ ಅಂ.....

ಚಂಪಾಕಲಿ– ಹುಟ್ಟಾ ಹೆಣ್ಣಿನ ಮುಖ ಕಂಡಿಯಿಲ್ಲೋ ಮಾರಾಯಾ, ಏನ್ ಪರಿ ನೋಡ್ತಿಯಲ್ಲ ನಿನ್ನ ಕಣ್ಣಾಗ ಕ್ಯಾರಾಳ ಹಾಕ್ಲಿ.

ಗೌಡ– ಎಂಥ ಹುಡುಗಿಯಲೇ, ಒಂದು ಭಾರಿಯಾದರೂ ನಮ್ಮ ದರ್ಶನ ಮಾಡಿಸಬಾರದೇನಲೇ ಕಿತಾಪತಿ.

ಕಿತಾಪತಿ– (ಸ್ವ) ಯುವುನವುನ, ಈ ಕಾಗಿ ಮಾರವನ ಕಣ್ಣು ನನ್ನ ಮಗಳ ಮ್ಯಾಲನು ಬಿತ್ತಲ್ರೆಪ್ಪ, (ಪ್ರ) ಮಗಳಾ, ಚಂಪಾಕಲಿ ಇವರು ನಮ್ಮ

ಗೌಡ್ರವ್ವ, ಭಾಳ ದೊಡ್ಡ ಮನುಷ್ಯಾರು, ಎಲೆಕ್ಷನ್ನಕ್ಕ ನಿಂತಾರ, ನೀನೂ ಇವರಿಗೇ ಗುದ್ದಬೇಕು ನೋಡವ್ವ.

ಚಂಪಾಕಲಿ– ಎದುರಲಿ ಗುದ್ದಬೇಕೋ ಎಪ್ಪಾ, ಈ ಅಸಾಮಿ ಕೈಲಿ ಗುದ್ದಿಸಿ ಕೊಳ್ಳೋಡಾಂಗ್ ಕಾಣಾದಿಲ್ಲ, ಜರಾ ಸ್ಪೇಶಲ್ಲೇ ಬೇಕು.

ಗೌಡ– ಲೇ ಏನಂತಾಳಲೇ ನಿನ್ನ ಮಗಳು.

ಕಿತಾಪತಿ– ಅದೇರಿ ಸ್ಪೇಶಲ್ ಗುದಾದಂದ್ರ ಅದೇನೋ ಮಸಿನ್ ಬಟಾನ್ ಒತ್ತಿ ಓಟು ಹಾಕಾದು ಬಂದಾದಂತಲ್ರಿ, ಅದಕ್ಕಂತಾಳವಳು ಇಲ್ಲವಾ ಬರೀ ಕೈಲಿ ಗುದ್ದಿದರ ಸಾಕು, ಗೌಡ್ರ ನಾನು ಒಂದಿಷ್ಟು ಮನೆ ಕಡೆ ಹೋಗಿ ಬರ್ತೀನಿ ನೀವು ನಡ್ರಿ.

ಗೌಡ– ಬೇಗ ಬಾ ಬರುವಾಗ ನಿನ್ನ ಮಗಳನ್ನು ಕರೆದುಕೊಂಡು ಬಾ (ಹೋಗುವನು).

ಕಿತಾಪತಿ– ಈ ಮಗಾ, ನನ್ನ ಮಗಳಿಗೆ ಲೈನ್ ಹೊಡೆದ್ನಲ್ಲರಿ ಎಲಾ ಬದ್ಮಾಸ್ ಗೌಡ, ನಾ ಸಡಿಲ ಬಿಟ್ರ ನನ್ನ ಮಗಳಿಗೂ ಕೈಲಾಸ ತೋರಿಸ್ತೀ ಅದಕ್ಕಿಂತ ಮೊದಲು ನಿನಗ ಕೈಲಾಸ ತೋರಿಸುವ ವ್ಯವಸ್ಥಾ ಮಾಡ್ತೀನಿ ನಿನ್ನ ಹಲ್ಕಟ ಗುಣಾ ಎಲ್ಲಾ ಗೊತ್ತಾದ ಸಮಯ ಬರ್ಲಿ ಇವನಿಗೆ ಸರಿಯಾಗಿ ಬುದ್ಧಿ ಕಲಸ್ತೀನಿ.

ಚಂಪಾಕಲಿ– ಎಂಥಾ ಹಲ್ಕಟನ ಬಲ್ಲಿ ದುಡಿಯಾಕತ್ತಿಯೋ ಎಪ್ಪಾ, ಎಂದರಾ ಹೆಣ್ಣಿನ ಮುಖ ಕಂಡಾನಾ ಇಲ್ಲ ಬೇವರ್ಸಿ ಎಲೆಕ್ಷನ್ನಿಗೆ ನಿಂತಾನಂತಿ, ಇಂಥವರು ಆರಿಸಿ ಬಂದ್ರ ಜನರ ಗತಿ ಗಂಗಮ್ಮನ ಪಾಲು.

ಕಿತಾಪತಿ– ಇಂವಾ ಏನ್ ಆರಿಸಿ ಬರ್ತಾನವಾ, ವಿನಾಶ ಕಾಲ ವಿಪರೀತ ಬುದ್ಧಿ ಅಂದಂಗ ಕೊನೆ ಕಾಲಕ್ಕ ಕೆಟ್ಟ ವಿಚಾರ ಭಾಳ ಬರ್ತಾವಂತಾ ಏನೇನಾಗ್ತಾದೋ ನೋಡಿಕೊಂತ ಹೋದ್ರಾಯ್ತು ನಡೆ ಹೋಗೋಣ (ಹೋಗುವರು).

===***====***===

ಪ್ರವೇಶ–೨೦

ಕಾಲೇಜು ಆವರಣ

(ಚುನಾವಣೆ ಫಲಿತಾಂಶ ಸ್ಥಳ ವಿಧಾನಸೌಧ ಅಥವಾ ಕಟ್ಟಡದ ಚಿತ್ರವಿರುವ ಪರದೇ ಇರಬೇಕು. ಒಂದೆಡೆ ಬಸವಂತನ ಗುಂಪು, ಇನ್ನೊಂದೆಡೆ ಗೌಡನ ಗುಂಪು ಫಲಿತಾಂಶ ಕೇಳಲು ನಿಂತಿದ್ದಾರೆ. ಪೋಲಿಸ ವ್ಯವಸ್ಥೆಗಿದ್ದಾರೆ)

ಹನುಮ– ಯಾಕ್ರೀ ಇನ್ನೂ ಗೆದ್ದ ಸುದ್ದಿ ಹೇಳಲೇ ಇಲ್ಲ.

ಗೌಡ– ಹೇಳ್ತಾರೆಲೇ ತಡಕೋ ನಾಗೇಂದ್ರ ಮೆರವಣಿಗೆ ವ್ಯವಸ್ಥೆ ಹೇಗಾಗಿವೆ.

ನಾಗೇಂದ್ರ– ಭರ್ಜರಿಯಾಗಿದೆ ಬ್ಯಾಂಡುಬಾಜಿ, ಜೀಪು ಕಾರು ಎಲ್ಲ ವ್ಯವಸ್ಥೆಯಾಗಿದೆ. ರಿಜಲ್ಟ ಗೊತ್ತಾಗುವುದೇ ತಡಾ.

ಒಬ್ಬ– ಏನ್ರಿ ಬಸವಂತಪ್ಪ ನಮ್ಮ ಕಡಿಗ ಮೆರವಣಿಗೆ ವ್ಯವಸ್ಥೆ ಮಾಡಿಲ್ವಲ್ರಿ.

ಬಸವಂತ– ಇದು ಮೆರವಣಿಗೆ ಮಾಡುವ ವಿಷಯ ಅಲ್ಲ, ಒಬ್ಬ ವ್ಯಕ್ತಿಗೆ ಆರಿಸ್ತೀರಂದ್ರ ಅಂವಾ ನಿಮ್ಮೆಲ್ಲರ ಆಳಿದ್ದಂಗ ಎಲ್ಲರ ಕೆಲಸ ಮಾಡುವ ಆಳಿಗೆ ಮೆರವಣಿಗೆ ಯಾಕ ಬೇಕು.

ಒಬ್ಬ– ನಿಮ್ಮಂಥವರು ಸಿಗುವದು ಲಕ್ಷಕ್ಕೊಬ್ಬ ಅಲ್ಲ ಕೋಟಿಗೊಬ್ಬ ನೋಡ್ರಿ.

ಹಿನ್ನೆಲೆ– ಚುನಾವಣಾ ಮತಗಳ ಎಣಿಕೆ ಪ್ರಾರಂಭವಾಗಿದ್ದು, ಇದೀಗ ಮೊದಲ ಹಂತದ ಮತಗಳ ಎಣಿಕೆ ಮುಗಿದಿದ್ದು, ಇದರಲ್ಲಿ ಹಸುವಿನ ಚಿನ್ಹೆಗೆ ಐದು ಸಾವಿರ ಮತಗಳು ಬಿದ್ದಿವೆ ಹಾಗೂ ಹದ್ದಿನ ಚಿನ್ಹೆಗೆ ಆರು ಸಾವಿರ ಮತಗಳು ದೊರೆತಿವೆ.

ಕಿತಾಪತಿ– ಗೌಡರೇ ಇನ್ನೇನ್ರೀ ಹಾರ ಹಾಕೋಣ

ನಾಗೇಂದ್ರ– ಸ್ವಲ್ಪ ತಡಿಯೋ ಇನ್ನೊಂದು ಸುತ್ತಿನ ಎಣಿಕೆ ಮುಗಿಯಲಿ

ಹನುಮ– ಅದು ಮುಗ್ಯಾಂಗ್ ಮುಗಿತಾದಿ, ನಾವು ಮೆರವಣಿಗೆ ಚಾಲು ಮಾಡಿದ್ರಾಯ್ತು.

ಹಿನ್ನೆಲೆ– ಇದೀಗ ಎರಡನೇ ಹಂತದ ಮತ ಎಣಿಕೆ ಕಾರ್ಯ ಮುಗಿದಿದ್ದು ಇದರಲ್ಲಿ ಹಸುವಿಗೆ ಒಂಭತ್ತು ಸಾವಿರ ಮತಗಳು ಲಭಿಸಿದ್ದರೆ ಹದ್ದಿಗೆ ಹತ್ತು ಸಾವಿರ ಮತಗಳು ಲಭಿಸಿವೆ.

ಹನುಮ– ನಮ್ಮ ಗೌಡರಿಗೆ.

ಎಲ್ಲರೂ– ಜಯವಾಗಲಿ.

ಹನುಮ– ಗೌಡರಿಗೆ.

ಎಲ್ಲರೂ– ಜಯವಾಗಲಿ (ಒಬ್ಬ ದೊಡ್ಡ ಹಾರ ತಂದು ಹಾಕುವನು)

ಗೌಡ– ಇಂದು ನನಗೆ ಭೋ ಸಂತೋಷವಾಗ್ತಿದೆ ಬಾರಿಸಂತ್ಹೇಳಲೇ ಬಾಜಾ ಭಜಂತ್ರಿ.

ಶೇಖರ– ನಡೆಯಣ್ಣಾ ಹೋಗೋಣ ಫಲಿತಾಂಶ ತಿಳದಂತಾಯ್ತು

ಬಸವಂತ– ತಮ್ಮ ಕೊನೆಯ ಹಂತದ ಎಣಿಕೆ ಮುಗಿಯಲಿ ಮುಖ್ಯವಾಗಿ ಮಹಿಳೆಯರ, ರೈತರ, ಮುಗ್ಧ ಜನರ ಮತ ನಮಗೇ ಬಿದ್ದಿವೆ. ಸತ್ಯ ಯಾವತ್ತೂ ಸಾಯಲ್ಲ ಸತ್ಯದ ಪರವಾಗಿ ನಿಂತ ನಮಗೆ ವಿಜಯಲಕ್ಷ್ಮಿ ಮಾಲೆ ಹಾಕುವುದು ಖಚಿತ.

ಹನುಮ– ಇನ್ನೂ ಗೆಲುವಿನ ಆಶೆ ಇಟ್ಟುಕೊಂಡಿದ್ದಾನೆ ಹುಚ್ಚ.

ಶೇಖರ– ಒಂದೇ ಒಂದು ಮಾತು ಹುಚ್ಚಾಗಿ ಮಾತಾಡಿದರೆ ಬಾಯಲ್ಲಿನ ಹಲ್ಲು ಉದುರಿಸಿಬಿಡ್ತೀನಿ.

ಹನುಮ– ಲೇ....

ಪೋಲಿಸ– (ಸೀಟಿ ಊದುತ್ತಾ) ಶಾಂತಿ.... ಶಾಂತಿ.....

ಬಸವಂತ– ಶೇಖರ ಶಾಂತನಾಗು, ಕೆಸರಿನಲ್ಲಿ ಕಲ್ಲೆಸೆದು ಮುಖಕ್ಕೆ ಸಿಡಿಸಿಕೊಳ್ಳುವುದು ಬೇಡಾ ನೋಡು ನಿಂತ ಇಬ್ಬರಲ್ಲಿ ಒಬ್ಬರು ಗೆಲ್ಲಲೇಬೇಕು ಇನ್ನೊಬ್ಬರು ಸೋಲಲೇಬೇಕು ಜನತಾ ಜನಾರ್ದನರು ನನಗೆ ಸೋಲನುಭವಿಸುವಂತೆ ಮಾಡಿದರೆ ಅದನ್ನು ಸಂತೋಷವಾಗಿ ಸ್ವೀಕರಿಸೋಣ.

ಹನುಮ– ಗೌಡರೇ ವ್ಯರ್ಥ ಟೈಂ ಹಾಳು ಮ್ಯಾಡಬ್ಯಾಡ್ರಿ, ಮೆರವಣಿಗೆ ಚಾಲು ಮಾಡ್ರಿ ನಡ್ರಿ..... ಗೌಡರಿಗೆ?

ಎಲ್ಲರೂ– ಜಯವಾಗಲಿ (ಜಯಕಾರ ಹಾಕುತ್ತಾ ಹೋಗುವಾಗ)

ಹಿನ್ನೆಲೆ– ಇದೀಗ ಮತ ಎಣಿಕೆಯ ಕಾರ್ಯ ಪೂರ್ಣಗೊಂಡಿದ್ದು ಹದ್ದಿನ ಚಿನ್ಹೆಗೆ ಹದಿನೈದು ಸಾವಿರ ಮತಗಳ ಲಭಿಸಿವೆ. (ಗೌಡನ ಗುಂಪು ಕುಣಿದಾಡುವದು) ಸಮೀಪದ ಪ್ರತಿಸ್ಪರ್ಧಿ, ಪ್ರಮುಖ ಎದುರಾಳಿಯಾದ ಶ್ರೀ ಬಸವಂತಪ್ಪನವರ ಹಸುವಿನ ಗುರ್ತಿಗೆ ಇಪ್ಪತ್ತೈದು ಸಾವಿರ ಮತಗಳು ಲಭಿಸಿ, ಶ್ರೀ ಬಸವಂತಪ್ಪನವರು ವಿಜಯಿಯಾಗಿದ್ದಾರೆಂದು ಘೋಷಿಸಲಾಗಿದೆ.

ಒಬ್ಬ– ಬಸವಂತಪ್ಪನವರಿಗೆ.

ಎಲ್ಲರೂ– ಜಯವಾಗಲಿ.

ಒಬ್ಬ– ಬಸವಂತಪ್ಪನವರಿಗೆ......

ಎಲ್ಲರೂ– ಜಯವಾಗಲಿ.

ಬಸವಂತ– ಶಾಂತಿ, ಶಾಂತಿ.

ಶೇಖರ– ಅಣ್ಣಾ ! ಮೆರವಣಿಗೆ ವ್ಯವಸ್ಥೆ ಮಾಡ್ತೀನಿ, ಸಿದ್ದಣ್ಣಾ ಎಲ್ಲರೂ ಸಾವಧಾನವಾಗಿ ಬನ್ನಿ. (ಹೋಗುವನು, ಗೌಡನ ಹಿಂಬಾಲಕರು ಒಬ್ಬೊಬ್ಬರಾಗಿ ಹೋಗುವರು)

ಗೌಡ– ಲೇ.....ಮಕ್ಕಳರ್‍ಯಾ, ನನಗೇ ಕೈಕೊಟ್ಟಿರಲ್ಲಲೇ.... ಈ ಸೋಲು ನಾ ಹ್ಯಾಂಗ ಸಹಿಸಲಿ. ಲೇ....ನ್ಾಗೇಂದ್ರ (ಸುತ್ತಲೂ ನೋಡಿದಾಗ ಯಾರೂ ಇರುವದಿಲ್ಲ. ಹಾರ ಹರಿದು ಹಾಕುತ್ತಾ) ಛೇ, ಎಲ್ಲರೂ ಹೋಗಿದ್ದಾರೆ. ನಾನೀಗ ಸೋತವನು. ನನ್ನ ಹಿಂದೆ ಯಾರೂ ಇಲ್ಲ. ಅದೇ ಗೆದ್ದರೆ ಭವ್ಯ ಮೆರವಣಿಗೆಯಾಗುತ್ತಿತ್ತು. ಲೇ.... ನಾಯಿ ಸೂಳೆ ಮಕ್ಕಳಿರ್‍ಯಾ ಎಲ್ಲಿ ಹೋದ್ರ್ಯೋ.... ಆಂ.... ಬಸವಂತಪ್ಪ ಗೆದ್ದೆನೆಂದು ಹಮ್ಮಿನಿಂದ ಇರಬೇಡಾ. ಇದರ ಪರಿಣಾಮ ಕೆಲವೇ ದಿನಗಳಲ್ಲಿ ತೋರಿಸುತ್ತೇನೆ.

ಬಸವಂತ– ಶಾಂತನಾಗು ಗೌಡ ಶಾಂತನಾಗು. ನಿಂತ ಇಬ್ಬರಲ್ಲಿ ಒಬ್ಬ ಸೋಲಲೇಬೇಕಾಗಿತ್ತು ಆಯಿತು. ಈಗ ಚುನಾವಣೆ ಮಾತು ಮರೆತು ಬಿಡು ಎಲ್ಲರೂ ಕೂಡಿ ಊರಿನ ಅಭಿವೃದ್ಧಿಗೆ ದುಡಿಯೋಣ.

ಗೌಡ– ನಿನ್ನ ಬಣ್ಣದ ಮಾತು ಬೇಕಾಗಿಲ್ಲಲೇ, ನೋಡ್ತೀನಿ ಮಗನೆ ನಿನ್ನ.

(ಸಿಟ್ಟಿನಿಂದ ಹೋಗುವನು).

ಬಸವಂತ– ದೇವರೇ ಇಂಥವರಿಗೆ ಬುದ್ಧಿ ಕಲಿಸಬೇಕು.

ಒಬ್ಬ– (ಹಾರ ಹಾಕಿ) ಬಸವಂತಪ್ಪನವರಿಗೆ.....

ಎಲ್ಲರೂ– ಜಯವಾಗಲೀ. (ಮೆರವಣಿಗೆಯೊಂದಿಗೆ ಜಯಕಾರ ಹಾಕುತ್ತಾ ಹೋಗುವರು).

===*****====*****====

ಪ್ರವೇಶ ೨೧

ಬಸವಂತನ ಮನೆ

(ಹೊರಗಿನಿಂದ ಜಯಕಾರದೊಂದಿಗೆ ಬಸವಂತಪ್ಪನನ್ನು ನಾಲ್ಕಾರು ಜನ ಕರೆತರುವರು)

ಒಬ್ಬ– ಬಸವಂತಪ್ಪನವರಿಗೆ.......

ಎಲ್ಲರೂ– ಜಯವಾಗಲಿ (ಸಾವಿತ್ರಿ ಒಳಗಿನಿಂದ ಆರತಿಯೊಂದಿಗೆ ಬಂದು ಸಿಹಿ ಹಂಚುವಳು)

ಶೇಖರ– ನಿನ್ನ ಶ್ರಮ ಸಾರ್ಥಕವಾಯ್ತು ಅತ್ತಿಗೆ ಈ ಚುನಾವಣೆ ಪ್ರಾರಂಭವಾದಾಗಿನಿಂದ ಒಂದ್ಹೊತ್ತು ಊಟ ಮಾಡಿದಿರಿ, ದೇವರಿಗೆ ಉರುಳು ಸೇವೆ ಮಾಡಿದಿರಿ, ಕಂಡ ದೇವರಿಗೆ ಹರಕೆ ಹೊತ್ತಿರಿ, ಮನೆ ಮನೆಗೂ ಹೋಗಿ ಪ್ರಚಾರ ಮಾಡಿದಿರಿ.

ಸಾವಿತ್ರಿ– ನನ್ನ ಪ್ರಯತ್ನ ನೆಪ ಮಾತ್ರ, ಎಲ್ಲರ ಶ್ರಮವೂ ಇದರಲ್ಲಿದೆ.

ಬಸವಂತ– ಸಾವಿತ್ರಿ ನನ್ನ ಯಾವ ಜನ್ಮದ ಪುಣ್ಯವೋ ಏನೋ ಇಂಥಾ ಸೌಭಾಗ್ಯ ಕಂಡೆ.

ಶೇಖರ– ಅಣ್ಣಾ, ಅಂದೇ ನಾನು ಹೇಳಿರಲಿಲ್ಲವೇ ಜನರಿಗೆ ಆ ಹುಚ್ಚು ಗೌಡನ ಬಗ್ಗೆ ಬಹಳ ರೋಷ ಇದೆಯೆಂದು ಮರ್ಯಾದೆಗಂಜಿದ ಜನ ಅವನ ಹಿಂದೆ ತಿರುಗಿ ಓಟು ಮಾತ್ರ ನಮಗೆ ಕೊಟ್ಟಿದ್ದಾರೆ.

ಸಾವಿತ್ರಿ– ಸತ್ಯಕ್ಕೆ ಸಾವಿಲ್ಲವೆಂಬ ಮಾತು ಸತ್ಯವಾಗಿದೆ.

ಭರತ– (ಪಿಎಸ್ಐ ಡ್ರೆಸ್ಸಿನಲ್ಲಿ ಬರುವನು) ಅಣ್ಣಾ, ಅತ್ತಿಗೆ ಆಶೀರ್ವಾದ ಮಾಡಿರಿ.

ಸಾವಿತ್ರಿ– ಭರತ್ ಇಂದು ಎಂಥ ಸಂತೋಷದ ದಿನ ನಿಮ್ಮಣ್ಣ ಚುನಾವಣೆಯಲ್ಲಿ ಗೆದ್ದುಬಿಟ್ಟರು.

ಭರತ್– ಬರುವಾಗ ರೇಡಿಯೋದಲ್ಲಿ ನ್ಯೂಜ್ ಕೇಳಿ ಸ್ವೀಟ್ ತೆಗೆದುಕೊಂಡೇ

ಬಂದಿದ್ದೇನೆ ಅಣ್ಣಾ, ಅತ್ತಿಗೆ ಸಿಹಿ ತಿನ್ನಿ ಶೇಖರಣ್ಣ ತಗೋ. (ಎರಲ್ಲರಿಗೂ ಕೊಡುವನು).

ಬಸವಂತ– ಭರತ್, ನೀನು ಇನ್ಸಪೆಕ್ಟರಾದದ್ದಕ್ಕೆ ನನಗೆ ಸಂತೋಷವಾಗಿದೆ. ನನ್ನ ಒಂದು ಮಾತು ನಡಸಿಕೊಡ್ತೀಯಾ?

ಭರತ್– ಏನಣ್ಣಾ?

ಬಸವಂತ– ಬಡವರಿಗೆ ದೀನ ದಲಿತರಿಗೆ ಸಹಾಯ ಮಾಡು ಗೂಂಡಾಗಿರಿಗೆ ಹೆದರಬೇಡ. ಸದಾ ಸತ್ಯದ ಪರವಾಗಿರು, ಅನ್ಯಾಯ ಮಾಡಿದವರು ನಮ್ಮವರೇ ಆದರೂ ಶಿಕ್ಷಗೆ ಗುರಿಮಾಡು ಯಾವದೇ ಕಾರಣಕ್ಕೂ ಲಂಚ ಮುಟ್ಟಬಾರದು ಹಾಗೆಂದು ವಚನಕೊಡು

ಭರತ್– ಅಣ್ಣಾ, ನಿನ್ನಂಥ ಸತ್ಯವಂತನ ಒಡಹುಟ್ಟಿದವನು ನಾನು ಲಂಚಕ್ಕೆ ಕೈ ಒಡ್ಡೀನಾ, ನನ್ನತ್ತಿಗೆಯ ಸಾಕ್ಷಿಯಾಗಿ ಹೇಳ್ತೀನಿ, ಸತ್ಯವೇ ದೇವರೆಂದು ಬಾಳ್ತೇನೆ, ಅನ್ಯಾಯದ ದಾರಿ ತುಳಿಯುವದಿಲ್ಲ, ಲಂಚ ಮುಟ್ಟೋದಿಲ್ಲ, ಆಯಿತೇ (ಭಾಷೆ ಕೊಡುವನು).

ಸಾವಿತ್ರಿ– ಎಷ್ಟು ಚೆನ್ನಾಗಿ ಮಾತಾಡ್ತೀಯಾ, ಹಾಂ ಭರತ್ ಡ್ಯೂಟಿ ಯಾವ ಊರಲ್ಲಿದೆ.

ಭರತ್– ಸಧ್ಯ ಇದೇ ಊರಿಗೆ ಕೊಟ್ಟಿದ್ದಾರಮ್ಮ ಇಂದೇ ಅಧಿಕಾರ ವಹಿಸಿಕೊಳ್ಳಬೇಕಾಗಿದೆ. ನಾನು ಓದಲು ಹೋಗುವಾಗ ಇದೊಂದು ದಿನ ಇರು, ನಾಳೆ ಹೋಗುವಿಯಂತೆ ಎಂದು ಹೇಳುತ್ತಿದ್ದೆಯಲ್ಲಮ್ಮ ಇನ್ನು ಮುಂದೆ ದಿನಾ ಇಲ್ಲೇ ಇರ್ತೇನೆ ನಿನ್ನ ಕೈತುತ್ತಿನ ರುಚಿಯನ್ನು ದಿನವೂ ಸವಿಯಬಹುದು.

ಸಾವಿತ್ರಿ– ಆಯಿತಪ್ಪ ಮೈದುನಾ ಒಳಗೆ ನಡೆ ದೇವರಿಗೆ ನಮಸ್ಕಾರ ಮಾಡು ಊಟಾ ಮಾಡುವಿಯಂತೆ.

ಶೇಖರ– ಏನತ್ತಿಗೆ ಸಣ್ಣ ಮೈದುನ ಬಂದ ನಂತರ ಎಲ್ಲರನ್ನೂ ಮರೆತು ಅವನೊಬ್ಬನನ್ನೇ ಊಟಕ್ಕೆ ಕರೆಯುವಿರಲ್ಲ.

ಸಾವಿತ್ರಿ– ಹಾಗೇನಿಲ್ಲ ಶೇಖರ ಎಲ್ಲರೂ ಬನ್ನಿ.

ಬಸವಂತ– ನೋಡ್ರಿ ನಮ್ಮೊಂದಿಗೆ ಬಂದವರೆಲ್ಲರೂ ಊಟ ಮಾಡಿಯೇ ಹೋಗ್ರಿ, ಹಾಗೇ ಹೋಗಬೇಡಿ. (ಒಳಗೆ ಹೋಗುವರು).

===***=====***===

ಪ್ರವೇಶ ೨೨

ಗಾರ್ಡನ್ ಸೀನು

(ರಾಗಿಣಿ, ಶತ–ಪಥ ತಿರುಗುತ್ತಾ, ಗಡಿಯಾರ ನೋಡುತ್ತಾ)

ರಾಗಿಣಿ– ಈ ಗಂಡಸರೇ ಹೀಗೆ ಬರುವುದಾಗಿ ಹೇಳಿ ಸತಾಯಿಸ್ತಾರೆ. ಇಲ್ಲಿ ಎಷ್ಟು ಬೇಜಾರಾಗ್ತಿದೆ ಅನ್ನೋದು ಅವರಿಗೇನು ಗೊತ್ತು. ಛೇ ಇಷ್ಟು ಸಮಯವಾದ್ರೂ ಇನ್ನೂ ಬರ್ಲೇ ಇಲ್ಲವಲ್ಲ.

ಭರತ್– (ಬರುತ್ತಾ) ಹಾಯ್ ರಾಗಿಣಿ.

ರಾಗಿಣಿ– (ಆಶ್ಚರ್ಯ) ಓ ಭರತ್, ನೀನು?

ಭರತ್– ಹೌದು ನಾನೇ ಯಾಕೆ ದುಗುಡದಿಂದಿರುವೆಯಲ್ಲ ಭೆಟ್ಟಿಯಾಗದೆ ಎಷ್ಟು ದಿನವಾಯ್ತು ಚಿನ್ನ

ರಾಗಿಣಿ– ಸ್ಟುಪಿಡ್ ಏನಂದೆ ನೀನು, ನಿನ್ನ ಬಗ್ಗೆ ಚೆನ್ನಾಗಿ ಗೊತ್ತಿದೆ ಮತ್ತೆ ಮೋಸ ಮಾಡಬೇಕೆಂದಿರುವೆಯಾ.

ಭರತ್– ರಾಗಿಣಿ ! ಯಾಕೆ ಬಾಯಿ ಹರಿ ಬಿಡುತ್ತಿರುವಿ. ನನ್ನನ್ನು ಪ್ರೀತಿಸಿದ್ದು ಸುಳ್ಳಾ, ಮದುವೆಯಾಗುವುದಾಗಿ ಹೇಳಿದ್ದು ಸುಳ್ಳಾ.

ರಾಗಿಣಿ– ಅದೆಲ್ಲ ಬರೀ ನಾಟಕ, ನಿನ್ನ ಗುಣ ಮೊದಲೇ ಗೊತ್ತಾಗಿದ್ದರೆ ನೆರಳು ಸಹ ತುಳಿತಿದ್ದಿಲ್ಲ. ಆಮೇಲೆ ಗೊತ್ತಾಯ್ತು ಹೇಸಿಗೆಯಲ್ಲಿ ಕಾಲಿಟ್ಟಿದ್ದೇನೆ ಎಂದು. ನನ್ನ ಲಕ್ ಸರಿಯಿತ್ತು ಸುರಕ್ಷಿತವಾಗಿ ದೂರಾದೆ

ಭರತ್– ನಿನಗೆ ಯಾರೋ ಸರಿಯಾದ ಮಂಕು ಬೂದಿ ಎರಚಿದ್ದಾರೆ, ಹೋಗ್ಲಿ ಯಾರನ್ನಾದರೂ ಪ್ರೀತಿಸುತ್ತಿರುವೆಯಾ?

ರಾಗಿಣಿ– ಪ್ರೀತಿಸುವುದಷ್ಟೇ ಅಲ್ಲ, ಮದುವೆಯೂ ಆಗುತ್ತಿದ್ದೇನೆ.

ಭರತ್– ಯಾರವನು ನಿನ್ನನ್ನು ವರಿಸುತ್ತಿರುವ ಪುಣ್ಯಾತ್ಮ

ರಾಗಿಣಿ– ನಾಗೇಂದ್ರ

ಭರತ್– ನಾಗೇಂದ್ರ, ಹಾವಿಗೆ ಎಷ್ಟು ದಿನ ಹಾಲೆರೆದರೂ ಅದು ಕೊನೆಗೆ ಕಕ್ಕೋದು ವಿಷನೇ ಹೊರತು ಅಮೃತವಲ್ಲ ನನ್ನ ಬಗ್ಗೆ ಕೆಟ್ಟದಾಗಿ ತಲೆ ತುಂಬಿದವನು ಅವನೇ ಇರಬೇಕು ನಾಗೇಂದ್ರನಂಥನ ನೀಚನ ಗೆಳೆತನ ಮಾಡಿದೆಯಾ.

ರಾಗಿಣಿ– ಭರತ್, ನನ್ನ ನಾಗೇಂದ್ರನ ಬಗ್ಗೆ ಒಂದೇ ಒಂದು ಕೆಟ್ಟ ಮಾತಾಡಿದರೆ ನಾನು ಮನುಷ್ಯಳಾಗಿ ಉಳಿಯುವುದಿಲ್ಲ ಹುಶಾರ್!

ಭರತ್– ಓ ! ಇಷ್ಟೊಂದು ಗಾಢವಾಗಿದೆಯಾ ನಿಮ್ಮ ಪ್ರೀತಿ, ಒಳ್ಳೆಯದು ರಾಗಿಣಿ, ನನಗೆ ಕೈಕೊಟ್ಟಂತೆ ಅವನಿಗೆ ಕೈಕೊಡಬೇಡ, ಮದುವೆಯಾಗಿ ಒಳ್ಳೇ ಬಾಳು ಸಾಗಿಸು. (ಹೋಗುವನು)

ರಾಗಿಣಿ– ತಾನೇ ಮಹಾ ಲಂಪಟ, ನನಗೆ ಬುದ್ಧಿ ಹೇಳಲು ಬಂದಿದ್ದಾನೆ ದೊಡ್ಡ ಮನುಷ್ಯ. (ಬೆಂಚೊಂದರ ಮೇಲೆ ಉಳಿತಾಗ ನಾಗೇಂದ್ರ, ಬಂದು ಕಣ್ಣು ಮುಚ್ಚುವನು) ಯಾರು?

ನಾಗೇಂದ್ರ– ಬಿಡಿಸಿಕೊಂಡು ನೋಡು ತಾನೇ ಗೊತ್ತಾಗುತ್ತದೆ.

ರಾಗಿಣಿ– (ಬಿಡಿಸಿಕೊಂಡು) ಓ ! ನೀವು ಎಷ್ಟ ತಡ ಮಾಡಿದಿರೆಲ್ಲ.

ನಾಗೇಂದ್ರ– ಕ್ಷಮಿಸು, ಬರುವಾಗ ದಾರಿಯಲ್ಲಿ ಗೆಳೆಯನೊಬ್ಬ ಸಿಕ್ಕು ತಡವಾಯ್ತು ರಾಣಿ ಸಾಹೇಬರು ಬಹಳ ಕೋಪದಲ್ಲಿರುವಂತಿದೆ.

ರಾಗಿಣಿ– ಮತ್ತೆ, ನಮ್ಮ ಮುಂದಿನ ಭವಿಷ್ಯದ ಬಗ್ಗೆ ಮಾತಾಡೋಣ ಎಂದು ಹೇಳಿ ಹೀಗೆ ಮಾಡೋದೆ.

ನಾಗೇಂದ್ರ– ಈಗ ಬಂದಿದ್ದೇನಲ್ಲ ಚಿನ್ನ ಮಾತಾಡೋಣ. ನೋಡು ನಿಮ್ಮಪ್ಪ ಎಲ್ಲಾ ಆಸ್ತಿ ಕಳೆದುಕೊಂಡು ದಿವಾಳಿಯಾಗಿದ್ದಾನೆ. ನಾವು ಬಾಂಬೆಗೆ ಹೋಗಿ ರಾಜ–ರಾಣಿಯಂತೆ ಸುಖವಾಗಿರೋಣ.

ರಾಗಿಣಿ– ನಡೆ ಇಂದೇ ಹೋಗೋಣ.

ನಾಗೇಂದ್ರ– ಹಾಂ.... ಹಾಂ.... ಅವಸರ ಬೇಡಾ, ಬರಿಗೈಯಿಂದ ಹೋಗಿ ಪ್ರಯೋಜನವೇನು ನಿನ್ನ ಹೆಸರಿನಲ್ಲಿರುವ ೫ ಲಕ್ಷ ಎಫ್.ಡಿ. ಹಣ ತೆಗೆದುಕೋ ಇಂದೇ ಮನೆಯ ಕೊನೆಯ ಋಣ ಎಂದ ಮೇಲೆ

ಮನೆಯಲ್ಲಿರುವ ಒಡವೆಗಳೆಲ್ಲಾ ತೆಗೆದುಕೊಂಡು ಬಾ ನಾಳೆಯೇ ಪ್ರಯಾಣ ಬೆಳೆಸೋಣ.

ರಾಗಿಣಿ– ನನ್ನ ಹೆಸರಿನಲ್ಲಿರುವ ೫ ಲಕ್ಷ ಹಣ ಚುನಾವಣೆ ಕಾಲಕ್ಕೆ ಅಪ್ಪ ಎಷ್ಟು ಕೇಳಿದರೂ ಕೊಟ್ಟಿಲ್ಲ. ಬಂಗಾರದ ವಿಷಯ ನಿನಗೇ ಗೊತ್ತಿದೆ ೨೦೦ ತೊಲಿ ಮಾರಾಟ ಮಾಡಿರುವಿ. ನನ್ನ ವೈಯಕ್ತಿಕ ಆಭರಣ ಹೆಚ್ಚೆಂದರೆ ೨೦ ತೊಲಿ ಇರಬಹುದು.

ನಾಗೇಂದ್ರ– ಆಯ್ತು ಅದಿಷ್ಟನ್ನು ತೆಗೆದುಕೊಂಡು ಬಾ.

ರಾಗಿಣಿ– ಚುನಾವಣೆ ಸಮಯದಲ್ಲಿ ನೀನು ಉಳಿಸಿಕೊಂಡಿರಬೇಕಲ್ಲ

ನಾಗೇಂದ್ರ– ೨೫ ಲಕ್ಷ ರೂ ೧೦೦ ತೊಲಿ ಬಂಗಾರ ಉಳಿಸಿಕೊಂಡಿದ್ದೇನೆ, ಈ ಎಲ್ಲವನ್ನು ಬಾಂಬೆಯ ಬ್ಯಾಂಕೊಂದರಲ್ಲಿ ಭದ್ರವಾಗಿಟ್ಟಿದ್ದೇನೆ, ನೀನು ನಾಳೆ ಹಣ ಬಂಗಾರದೊಡನೆ ಬಂದರೆ ಆ ಆಸ್ತಿ ಕೂಡಾ ನಿನ್ನದೇ ಆಗುವುದು.

ರಾಗಿಣಿ– ಆಗಲಿ, ನಿಮಗೆ ಇನ್ನೊಂದು ಸಂತೋಷದ ವಿಷಯ

ನಾಗೇಂದ್ರ– ಏನದು?

ರಾಗಿಣಿ– ನನಗೀಗ ನಾಲ್ಕು ತಿಂಗಳು ನೀವು ತಂದೆಯಾಗ್ತೀದ್ದೀರಾ.

ನಾಗೇಂದ್ರ– ತುಂಬಾ ಸಂತೋಷ, ಎಂಥ ಸ್ವೀಟ್ ನ್ಯೂಜ್ ಹೇಳಿದೆಯೇ ಈ ಸಂದರ್ಭದಲ್ಲಿ ಸ್ವೀಟ್ ಕೊಡಲೇಬೇಕು. ತಂದಿಲ್ವಲ್ಲ, ಇಲ್ಲಿ ಮುಂದೆ ಬಾ ನಾನು ನಿನಗೆ ಕೊಡುವ ಸಿಹಿ ಬೆಲ್ಲ (ಮುತ್ತು ಕೊಡುವನು)

ರಾಗಿಣಿ– ಛೀ ಹೋಗ್ರಿ ನಾಚಿಕೆಯಾಗುತ್ತೇ

ನಾಗೇಂದ್ರ– ನಾಚಿಕೆಯಂದ್ರೆ ಈ ಪಾಪ ತಯಾರಾಗ್ತಿತ್ತೆ ಬಾರೇ (ಇಬ್ಬರೂ ಯುಗಳ ಗೀತೆ ಹಾಡಿದ ನಂತರ) ರಾಗಿಣಿ, ನನಗೆ ಸ್ವಲ್ಪ ಕೆಲಸವಿದೆ, ನಾಳೆ ಇದೇ ಸಮಯಕ್ಕೆ ಇಲ್ಲಿಗೆ ಬರಬೇಕು.

ರಾಗಿಣಿ– ಆಗಲಿ, ಟಾಟಾ (ಹೋಗುವಳು)

ನಾಗೇಂದ್ರ– ಹೋಗು ಹೋಗೇ ಹುಚ್ಚು ಹೆಣ್ಣೇ ನಾನು ಸ್ವಲ್ಪ ಪ್ರೀತಿ ಮಾಡಿದರೆ ಜೀವಕ್ಕಿಂತ ಹೆಚ್ಚಿಗೆ ಪ್ರೀತಿಸುವ ಭರತ್‌ನಿಗೆ ಮೋಸ ಮಾಡಿದೆಯಲ್ಲ, ನಾಳೆ ನನಗಿಂತ ಹೆಚ್ಚು ಪ್ರೀತಿಸುವವ ಸಿಕ್ಕರೆ ನನಗೂ

ಕೈಕೊಡಬಹುದು. ರಾಗಿಣಿ, ನಾಳೆ ಹಣ, ಬಂಗಾರ, ತೆಗೆದುಕೊಂಡು ಬಾ ಆಗ ಮುಗಿಸ್ತೇನೆ ನಿನ್ನ ಕಥೆ. ನನ್ನ ಉದ್ದೇಶ ಈಡೇರಿತು, ಅಂದು ನನ್ನಕ್ಕನ ಸಾವಿಗೆ ಕಾರಣನಾದ ಗೌಡ, ಅದೆ ಸೇಡು ಮನಸ್ಸಿನಲ್ಲಿಟ್ಟುಕೊಂಡು ಇಂದು ಬೀದಿ ಭಿಕಾರಿಯನ್ನಾಗಿ ಮಾಡಿದ್ದೇನೆ ನೆನೆಸಿಕೋ ತಾಯ್ಗಂಡ (ಹೋಗುವನು).

===***====***===

ಪ್ರವೇಶ ೨೩

ಗೌಡನ ಮನೆ

(ಗೌಡ ಕುಡಿಯುತ್ತಿರುವನು)

ಗೌಡ– ಎಲ್ಲಾ ಹೋಯ್ತು, ಎಂಬತ್ತು ಲಕ್ಷ ಖರ್ಚಾಯ್ತು, ಬ್ಯಾಂಕಿನಲ್ಲಿದ್ದ ದುಡ್ಡೆಲ್ಲ ಖಾಲಿಯಾಯ್ತು ೨೦೦ ತೊಲಿ ಬಂಗಾರ ಹೋಯ್ತು ಹೊಲ ಹೋಯ್ತು ಕೊನೆಗೆ ಈ ಮನೆ ಮೇಲೆ ೨ ಲಕ್ಷ ಸಾಲ ಆಯ್ತು, ನನ್ನವರು ಎಂದು ನಂಬಿದವರೇ ನನಗೆ ಕೈ ಕೊಟ್ಟರು. ಬಡ್ಡಿಮಕ್ಕಳು ನನ್ನ ಸೆರೆ ಕುಡಿದವ್ರು ನನ್ನಿಹಿಂದೆ ಬಾಲ ಮುದುರಿಕೊಂಡು ಬಿದ್ದವರು ಎಲ್ಲರೂ ಮೋಸ ಮಾಡಿದರು. ಕಿತಾಪತಿ ಲೇ..... ಕಿತಾಪತಿ.

ಕಿತಾಪತಿ– (ಬರುತ್ತಾ) ಬಂದೆ ಗೌಡ್ರ.

ಗೌಡ– ಆ ನನ್ಮಗ ನಾಗೇಂದ್ರ ಎಲ್ಲಿ?

ಕಿತಾಪತಿ– ಮೂರು ದಿನ ಆಯ್ತು ಗೌಡ್ರೆ ಕಾಣ್ತಾ ಇಲ್ಲಾ. ಬಾಂಬೆಗೆ ಹೋಗಿದ್ದಾನೆ ಎಂದು ಜನ ಆಡಿಕೊಳ್ತಿದ್ದಾರೆ (ಸ್ವ) ಹುಚ್ಚು ಗೌಡನ ಈ ಸನ್ನಿವೇಶ ಟೇಪ್ ಮಾಡಿಕೋಬೇಕು ಕೊನೆಗಾಲ ಸಮೀಪ ಬಂತು ಮಗಂದು (ಸಣ್ಣ ಟೇಪ್ ಆನ್ ಮಾಡಿ ಜೇಬಿನಲ್ಲಿಟ್ಟುಕೊಳ್ಳುವನು).

ಗೌಡ– ಲೇ..... ಕಿತಾಪತಿ ಏನು ಯೋಚನೆ ಮಾಡ್ತಿಯಲೇ.

ಕಿತಾಪತಿ– ನಾಗೇಂದ್ರ ಹೋಗುವಾಗ, ತಮಗೆ ಕೊಡುವಂತೆ ಹೇಳಿ ಒಬ್ಬ ಹುಡುಗನ ಕೈಯಲ್ಲಿ ಈ ಚೀಟಿ ಕೊಟ್ಟಾನ್ರಿ.

ಗೌಡ– ನೀನೇ ಓದಲೇ ಏನು ಬರೆದಿದ್ದಾನೆ.

ಕಿತಾಪತಿ– (ಓದುತ್ತಾ) ಲೇ....ಗೌಡ, ಅಂದು ನನ್ನಕ್ಕನ ಸಾವಿಗೆ ಕಾರಣನಾದ ನಿನ್ನ ಮೇಲೆ ಸೇಡು ತೀರಿಸಿಕೊಳ್ಳಲೆಂದೇ ಬಂದಿದ್ದೆ. ನಿನ್ನನ್ನು

ದಿವಾಳಿ ಮಾಡಿ ಬೀದಿ ಭಿಕಾರಿಯನ್ನಾಗಿ ಮಾಡಿದ್ದೇನೆ ನಿನ್ನ ಮಗಳ ಬಾಳು ಹಾಳು ಮಾಡಿದ್ದೇನೆ ನಿನ್ನ ಕೊಲೆಯೇ ಮಾಡಬಹುದಾಗಿತ್ತು. ಆದರೆ ಪ್ರಯೋಜನವಿಲ್ಲ, ಪಶ್ಚಾತ್ತಾಪದಿಂದ ನೀನು ಕೊರಗಿ ಕೊರಗಿ ಸಾಯುವಂತೆ ಮಾಡಿದ್ದೇನೆ. ಸಾಯಿ ಸೂಳೇ ಮಗನ, ಇತಿ ನಾಗೇಂದ್ರ.

ಗೌಡ– (ಸಿಟ್ಟಿನಿಂದ) ಲೇ..... ನಾಗ್ಯಾ ನನ್ನ ಮನೆಯ ಹಾಲು ಕುಡಿದೆ ನನಗೆ ವಿಷ ಕಾರಿದೆಯಾ, ಲೇ ಕಿತಾಪತಿ ನಮಗೆ ಬರಬೇಕಾದ ಬಾಕಿ ಎಷ್ಟಿದೆ.

ಕಿತಾಪತಿ– ಎಲ್ಲಿ ಬಾಕಿ ಬರಬೇಕರಿ ಹೆಂಗಸರ ದುಂಧಿನಾಗ ಕುಡಿದ ಮಬ್ಬಿನಾಗ ಓಟಿನ ಆಶೆ ತೋರಿಸಿ ನಿಮ್ಮಿಂದ ಸಾಲ ಪಡೆದವರೆಲ್ಲ ನಿಮ್ಮ ಕೈಯಿಂದನೆ ಸಾಲ ಪತ್ರ ಹರಿಯುವಂತೆ ಮಾಡಿದ್ನಲ್ರಿ ಆ ನಾಗೇಂದ್ರ.

ಗೌಡ– ಥೇ, ನಾಗೇಂದ್ರ..... ನಾಗೇಂದ್ರ..... ನಾಗೇಂದ್ರ..... ಉಪ್ಪರಿಗೆಯ ಮೇಲಿದ್ದ ನನ್ನನ್ನು ತಿಪ್ಪೆಗೆ ತಂದುಬಿಟ್ಟಿ.

ಒಬ್ಬ– ನಮಸ್ಕಾರ ಗೌಡರೆ, ನಮ್ಮ ಮೈಕ್‌ಸೆಟ್ ಹಾಗೂ ಟೆಂಟಿನ ಬಾಕಿ ೫೦ ಸಾವಿರ ಇದೆ ಕೊಡ್ರಿ.

ಇನ್ನೊಬ್ಬ– ನಮಸ್ಕಾರ ಗೌಡರೆ, ನಮ್ಮಲ್ಲಿ ನಿಮ್ಮ ಹ್ಯಾಂಡ್‌ಬಿಲ್ ಮತ್ತು ಪೋಸ್ಟರಿನ ಬಾಕಿ ೬೦ ಸಾವಿರ ಇದೆ ಕೊಡ್ರಿ.

ಮತ್ತೊಬ್ಬ– ನಮಸ್ಕಾರ ಗೌಡರೆ, ನಮ್ಮ ಹೋಟೆಲ್ ಬಾಕಿ ಎರಡು ಸಾವಿರ ಇದೆ ಕೊಡ್ರಿ.

ಮಗದೊಬ್ಬ– ನಮಸ್ಕಾರ ಗೌಡರೆ, ನಮ್ಮ ಸೆರೆ ಅಂಗಡಿಯ ೭೫ ಸಾವಿರ ಹಂಗ ಜೀಪಿನ ಕಿರಾಯಿ ೧೦ ಸಾವಿರ ಇದೆ ಕೊಡ್ರಿ.

ಗೌಡ– ಆಂ....ಸಿದ್ದಪ್ಪ ನಿಮಗ್ಯಾರಿಗೂ ನಮ್ಮ ನಾಗೇಂದ್ರ ಪೇಮೆಂಟ್ ಕೊಟ್ಟಿಲ್ಲವೇ?

ಒಬ್ಬ– ಕೊಟ್ರ ನಾವ್ಯಾಕ ಕೇಳ್ತಿದ್ದೇವ್ರಿ ಗೌಡರೆ ಏನೋ ದೊಡ್ಡವರಂತೇಳಿ ಉದ್ರಿ ಕೊಟ್ಟೇವಿ ಈಗ ಪೇಮೆಂಟ್ ಕೊಡ್ರಿ.

ಗೌಡ– ನಿಮ್ಮೆಲ್ಲರ ಹಣ ಕೊಡಲು ಹೇಳಿ ಅವನಿಗೆ ಕೊಟ್ಟಿದ್ದೇನೆ ಇರಲಿ, ಎರಡು ತಿಂಗಳ ಸಮಯ ಕೊಡ್ರಿ, ಏನಾದ್ರೂ ಮಾಡಿ ಕೊಡ್ತೀನಿ.

ಇನ್ನೊಬ್ಬ– ನಮಗೆ ಗೊತ್ತಿಲ್ಲ, ಹೊಲ ಮನೆ ಮಾರಿಯಾದ್ರೂ ಕೊಡ್ರಿ.

ಗೌಡ– ಎಲ್ಲಿಯ ಹೊಲ ಎಲ್ಲಿಯ ಮನೆ ಎಲ್ಲವೂ ಮಾರಾಟ ಮಾಡಿಸಿದ್ದಾನೆ ಆ ದ್ರೋಹಿ.

ಮತ್ತೊಬ್ಬ– ಅಂದ್ರ ಈಗ ನಮ್ಮ ರೊಕ್ಕದ ಗತಿ ಏನ್ರಿ ಗೌಡ್ರ, ಅವುರದೆಲ್ಲ ದೊಡ್ಡ ರಖಂ ಅದ, ನಂಗೇನ್ರಿ ಕಪ್ಪು ಬಸಿ ಕೊಳ್ಳಾ ದಂದ್ಯಾ ೨ ಸಾವಿರ ಅಷ್ಟೇ ಅದ ಕೊಟ್ಟು ಬಿಡ್ರಿ.

ಗೌಡ– (ನಗು) ಎರಡು ಸಾವಿರ.... ಎರಡು ಸಾವಿರ ಅಲ್ಲ ಸಧ್ಯ ನನ್ನ ಜೇಬಲ್ಲಿ ಎರಡು ನೂರು ರೂ. ಇಲ್ಲ.

ಮಗದೊಬ್ಬ– ಅಂದ್ರ ನಮ್ಮ ಹಣದ ಗತಿ.

ಗೌಡ– ಚಿಂತಿ ಮಾಡಬ್ಯಾಡ್ರಿ, ಅದಕ್ಕೊಂದು ವ್ಯವಸ್ಥೆ ಮಾಡೇ ಮಾಡ್ತೀನಿ. ದಯವಿಟ್ಟು ಈಗಹೋಗ್ರಿ (ಕಿತಾಪತಿ ಮರೆಯಾಗಿ ನಿಲ್ಲುವನು, ಎಲ್ಲರೂ ಹೋಗುವರು) ಛೇ ಹೇಗಿದ್ದ ನನ್ನ ಸ್ಥಿತಿ ಹೇಗಾಯ್ತಲ್ಲ ಆಸ್ತಿಯೆಲ್ಲ ಕಳೆದುಕೊಂಡ ನನ್ನನ್ನು ನೋಡಿದ ಜನ ನಗುವಂತಾಯ್ತು. ಇದಕ್ಕೆಲ್ಲ ಕಾರಣ ಈ ಹಾಳು ಚುನಾವಣೆ ನನಗೆ ಸೋಲಿಸಿದ ಆ ಬಸವಂತನೇ ಕಾರಣ. ಬಸವಂತಾ.....ನನ್ನನ್ನು ಸೋಲಿಸಿದೆನೆಂದು ಹಮ್ಮಿನಿಂದ ಇರುವೆಯಾ, ಇದಕ್ಕೊಂದು ಉಪಾಯ ಮಾಡಲೇಬೇಕು. (ಕುಡಿಯುವನು) ನಿನ್ನ ಕೊಲೆ! ಅಲ್ಲಲ್ಲ ನಿನ್ನ ಮೇಲೆ ಕೊಲೆ ಅಪಾದನೆ ಹೊರಿಸಿ ಸಾಯುವವರೆಗೂ ಜೈಲಿನಲ್ಲಿ ಕೊಳೆಯುವಂತೆ ಮಾಡುತ್ತೇನೆ, ಅದಕ್ಕಾಗಿ ಒಂದು ಕೊಲೆಯಾಗಲೇಬೇಕು, ಯಾರ ಕೊಲೆ ಈಗ ಯಾರ ಕೊಲೆ ಮಾಡಬೇಕು (ವಿಚಾರಿಸಿ) ಲೇ ಹನುಮಾ.....ಹನುಮಾ.....

ಹನುಮ– (ಬರುತ್ತಾ) ಬಂದೇ ಗೌಡರೇ.

ಗೌಡ– ನೀನು ನನ್ನ ಬಲಗೈ ಭಂಟ ಆಂ.... (ನಗು) ಜೀವನದಲ್ಲಿ ಬರೀ ಕೈ ಮುಗಿದು ತಲೆಬಾಗಿ ಜೀ ಹುಜೂರ್ ಎನ್ನುತ್ತ ತಲೆಹಿಡಿದು ಬದುಕುವುದಾದರೆ ನಿನ್ನಂಥವನು ಬದುಕ್ಯಾದರೂ ಏನು ಪ್ರಯೋಜನಲೇ ಸಾಯಿ ಸೂಳೇ ಮಗನ (ಗುಂಡು ಹಾರಿಸುವನು)

ಹನುಮ– (ಎದೆ ಹಿಡಿದುಕೊಂಡು) ಗೌಡರೇ ನನ್ನ ಮ್ಯಾಲ ಯಾಕ ಗುಂಡು

ಹಾರಿಸಿದ್ರಿ, ನೀವಂದ್ರ ನನ್ನ ಜೀವಕ್ಕಿಂತಲೂ ಹೆಚ್ಚಂತ ತಿಳದಿದ್ನಲ್ರಿ, ಆಟವಾಡೋ ಹಂಸಕ್ಕ ಹೊಡ್ದಂಗ್, ಕುಣ್ಯಾ ನವಿಲಿಗ ಹೊಡದಂಗ, ಮೇವು ತಿನ್ನೋ ಹಸುವಿಗೆ ಹೊಡದಂಗ, ಏನೂ ಅರಿಯದ ನನಗೆ ಹೊಡೆದ್ರಲ್ರೀ ಗೌಡರೇ, ನಿಮಗೆ ದೇವರು ಎಂದೂ ಒಳ್ಳೇದು ಮಾಡಲ್ಲ. ಸರಿಯಾದ ಶಿಕ್ಷೆ ಕೊಟ್ಟೇ ಕೊಡ್ತಾನ, ಸರಿಯಾದ ಶಿಕ್ಷೆ ಕೊಡ್ತಾನ. (ಎದೆ ಹಿಡಿದು ಬಿದ್ದು ಸಾಯುವನು)

ಗೌಡ– (ಶಾಂತಿಯಿಂದ) ಸತ್ತೇನಲೇ ಹನುಮ ಸತ್ಯಾ. ನನಗೆ ಕ್ಷಮಿಸೋ ನನಗೆ ಸೇಡು ತೀರಿಸಿಕೊಳ್ಳಬೇಕಾದ್ರ ಇದು ಅನಿವಾರ್ಯ ಆಗಿತ್ತು. ನಿನ್ನ ಆತ್ಮಕ್ಕೆ ಶಾಂತಿ ಸಿಗಲಿ ! ಸರಿಯಾದ ಎರಡು ಸಾಕ್ಷಿ ತಯಾರಿಸಿ ಏನ್ ಮಾಡಬೇಕೋ ಅದನ್ನ ವ್ಯವಸ್ಥೆ ಮಾಡ್ತೀನಿ (ಗೌಡ, ಹೋಗುವನು, ಕಿತಾಪತಿ ಹೊರಬಂದು).

ಕಿತಾಪತಿ– ಎಂಥಾ ತಾಯ್ಗಂಡ ಇದ್ದೆಲೆ ಗೌಡ ಪಾಪ ! ಇಂಥಾ ಜೀವಕ್ಕ ಜೀವ ಕೊಡಾ ಮನುಷ್ಯಾಗ ಹೊಡಿಲಾಕ ಮನಸ್ಸಾದರೂ ಹ್ಯಾಂಗ್ ಬಂತು, ನಿನ್ನ ಎಲ್ಲಾ ಮಾತು ಟೇಪ್ ಮಾಡಿಕೊಂಡೀನಿ ಮಗನ, ಸಮಯ ಬಂದಾಗ ಹೇಳ್ತೀನಿ (ಹೋಗುವನು).

===**====**===

ಪ್ರವೇಶ ೨೪

ರಸ್ತಾ ಸೀನು

(ಪೋಲಿಸ, ಚಂಪಾಕಲಿ ಕೈ ಕೈ ಹಿಡಿದು ಬರುವರು)

ಚಂಪಾಕಲಿ– ನೋಡ್ರಿ ಪೋಲಿಸ ಮಾಮಾ. ಈಗವನಿಗೆ ಇಲ್ಲಿಗೆ ಬರಾಕ ಹೇಳಿನಿ ಅವನ ಕಾಲಾಗ ಸಾಕಾಗಿತ್ತು, ಇವತ್ತ ಬಂಗಾರ ರೂಪಾಯಿ ತಗೊಂಡ ಬರ್ತಾನ, ಚೆಂದ್ ಫಜೀತಿ ಮಾಡಾನು.

ಪೋಲಿಸ– ಆಗ್ಲಿ, ಇನ್ನೊಮ್ಮೆ ಹುಚ್ಚುಚ್ಚಾಗಿ ಕಂಡ್ ಹೆಣ್ಣ ಮಕ್ಕಳಿಗೆ ಕಣ್ಣೆತ್ತಿ ನೋಡಬಾರದು ಹಾಂಗ್ ಮಾಡೋಣ.

ಚಂಪಾಕಲಿ– ಅಗೋ, ಅಲ್ಲಿ ಹೊಂಟಾನ ನೀ ಮರಿಗೆ ನಿಂದ್ರು, ಅವನಿಗೆ ಮಳ್ಳ ಮಾಡಿ ಎಲ್ಲ ವಸೂಲಿ ಮಾಡ್ತೇನಿ ಆಮ್ಯಾಲ ನೀ ಬಾ.

ಪೋಲಿಸ– ನಾ ಮರೀಗೆ ನಿಂತಿನಂತ್ಹೇಳಿ ಹಂಗ ಮಜಾ ಹಚ್ಚಿಕೊಂಡಿಗಿನಾ ಪ್ರೀತಿ ಮಾಡು ತಮಾಷೆ ನೋಡು ಅಂತಾ,

ಚಂಪಾಕಲಿ– ನನಗ ಗೊತ್ತಾದ ನೀವು ಹೋಗ್ರಿ ಪೋಲಿಸ ಮಾವಾ. (ಮರೆಯಾಗುವನು, ಚಂಪಾಕಲಿ ನಿಂತಿರುವಾಗ ರಂಗಣ್ಣ ಬರುವನು)

ರಂಗಣ್ಣ– ಹಾಯ್ ಚಂಪಾಕಲಿ, ನನಗಿಂತ ಮೊದಲೇ ಬಂದು ನಿಂತಿಯಲ್ಲ. ನಿನ್ನ ಪ್ರೀತಿ ಅಗಾಧವಾದುದು.

ಚಂಪಾಕಲಿ– ಹೌದ್ರಿ ಡಾಕ್ಟ್ರ, ನಾ ಬಂದು ಒಂದು ತಾಸಾಯ್ತು. ಭಾಳ ಟೈಂ ಮಾಡಿದ್ರೆಲ್ಲ, ನನಗೆಷ್ಟು ತ್ರಾಸಾಯ್ತು ಗೊತ್ತೇನು.

ರಂಗಣ್ಣ– ಹಂಗೇ ಆಗ್ತಾದ್ರಿ, ಪ್ರೇಮಿಗಳಾಗಿ ಕಾಯೋದಂದ್ರ ಬಲುಕಷ್ಟ ಒಂದು ತಾಸಂದ್ರ ಒಂದು ವರ್ಷ ಕಳದಕ್ಕಿಂತ ಹೆಚ್ಚಿಗಿ ಸಂಕಟ ಆಗ್ತಾದ, ಆದ್ರೂ ಕಾಯೋದರಾಗ ಒಂದು ರೀತಿ ಮಜಾ ಇರ್ತಾದ.

ಚಂಪಾಕಲಿ– ಅದ್ಕೆ ಒಬ್ರು ಅನುಭವಸ್ಥರ ಹೇಳ್ಯಾರ ಕಾಯೋದರಾಗ ಇರೋ ಪ್ರೀತಿ ಕೂಡೋದರಾಗ ಕಳೆದೋಯ್ತಂತ, ಕಾಯ್ದು ಕಾಯ್ತೆ ಹಿಂಗಾಗೀನಿ. ಹೋಗಲಿ ನಾ ಹೇಳಿದ್ದೆಲ್ಲ ತಂದ್ಯಾ.

ರಂಗಣ್ಣ– ಎಷ್ಟು ಅವಸರ ಮಾಡ್ತೆಲ್ಲ ಸ್ವಲ್ಪ ತಡಕೋ ಚಂಪಾಕಲಿ ನಿನ್ನೆ ನಿನ್ನ ಭೆಟ್ಟಿಯಾದಮ್ಯಾಲ ನನ್ನ ತಲಿ ತುಂಬಾ ಅದೇ ವಿಚಾರ ತುಂಬ್ಯಾವ ಬೆಳತನಕ ನಿದ್ರಿನೇ ಇಲ್ಲ. ಬೆಳಗಾ ಮುಂಜಾನೆ ಒಂದು ಕನಸ್ಸು ಬಿದ್ದಿತ್ತು ನೋಡು.

ಚಂಪಾಕಲಿ– ಏನಂತ?

ರಂಗಣ್ಣ– ನಾವಿಬ್ರೂ ದೊಡ್ಡದೊಂದು ಕಲ್ಯಾಣ ಮಂಟಪದಾಗ ಮದುವೆಯಾಗೀವಿ. ಏನ್ ಜನ ಏನು ಸುದ್ದಿ, ಊಟ ಭರ್ಜರಿಯಾಗಿತ್ತು. ನಿಮ್ಮಪ್ಪ ಬದ್ಮಾಸ್ ನನ್ಮಗ ಸ್ವೀಟ್ ತಿಂದಿದ್ದೇ ತಿಂದಿದ್ದು, ಆ ಮ್ಯಾಲ ಹನಿಮೂನಿಗೆ ಊಟಿಗೆ ಹೋಗಿದ್ವಿ, ಆಹಾಹಾ ಬೀಚಿನಾಗ ನೀನು ಹಿರೋಯಿನ್, ಹಿರೋಗ ಸ್ಲೋ ಮೋಷನ್ನಿನಲ್ಲಿ ಬಂದು ಮುತ್ತು ಕೊಟ್ಟಂಗ ಕೊಟ್ಟಿ, ಅದೆಲ್ಲಾ ಮುಗದ ಮ್ಯಾಲ ಹೋಟೆಲ್ ಹನಿ ಮೂನದಾಗ ಇಳಕೊಂಡ್ವಿ, ಸುಂದರವಾದ ಮಂಚ ಹೂಗಳಿಂದ ಅಲಂಕರಿಸಿದ್ರು, ಸ್ವರ್ಗದಲ್ಲಿ ವಿಹರಿಸುವಂತೆ ವಿಹರಿಸುತ್ತಿದ್ದೆವು. ಸ್ವರ್ಗ ಮೂರೇ ಗೇಣಿತ್ತು ನಿಮ್ಮ ಎಮ್ಮಿ ಬಂದು ನನ್ನ ಮುಖ ನೆಕ್ಕತಿತ್ತು ಎಚ್ಚರವಾಯ್ತು. ಕಣ್ಣು ತೆರೆದು ನೋಡ್ತೀನಿ ಎಲ್ಲಾ ಕನಸು ಅಂತಾ ಗೊತ್ತಾಯ್ತು.

ಚಂಪಾಕಲಿ– ಎಂಥಾ ಚಂದ ಕನಸು ಕಂಡೀರಲ್ರೀ ಡಾಕ್ಟರಾ, ಇನ್ನೇನು ಮದುವಿ ಇಲ್ದಿದ್ರೂನೂ ನಡೀತದ.

ರಂಗಣ್ಣ– ಅದು ಹ್ಯಾಂಗ್ ನಡೀತದ, ನಿನ್ನ ಮ್ಯಾಲೆ ನಾನು ಪ್ರಾಣಾನೇ ಇಟ್ಕೊಂಡಿದ್ದೀನಿ.

ಚಂಪಾಕಲಿ– ಅಂದ್ರ ನಾ ಹೇಳಿದ್ದನ್ನೆಲ್ಲ ತಂದಿರುವೆಯಾ?

ರಂಗಣ್ಣ– ಇದೋ ಹತ್ತು ಸಾವಿರ ರೂಪಾಯಿ ಎರಡು ತೊಲಿ ಬಂಗಾರ, ಒಂದು ಚೈನಿದೆ (ಹಾಕುವನು) ಇದೋ ಈ ಉಂಗುರ ಹಾಕ್ತೀನಿ ಬೆರಳು ತಾ.

ಚಂಪಾಕಲಿ– ಇಲ್ಲ ನಾನೇ ಹಾಕ್ಕೋಳ್ತೀನಿ ಕೊಡು. (ತೆಗೆದುಕೊಂಡು ಹಾಕಿಕೊಳ್ಳುತ್ತ) ಏನ್ರೀ ಇದು ಇಷ್ಟು ಬಿಗಿಯಾಗೇದಲ್ರಿ ಭಾಳ ಬ್ಯಾನಿ ಆಗ್ಲಿಕ್ಕತ್ತದ.

ರಂಗಣ್ಣ– ಅದು ಸುರು ಸುರುವಿಗೆ ಹಂಗೇ ಆಗ್ತದ್ರೀ, ಬರ್ತಾ ಬರ್ತಾ ಸರಿ

ಹೋಗ್ತಾದ. ನೀ ಏನು ಚಿಂತಿ ಮಾಡಬ್ಯಾಡಾ, ಹಂಗ ನಾಲ್ಕ ಸಲ ಹಾಕಿ ತಗದ್ರ ಏಣೆಲ್ಲಾ ಸಾಪಾಗ್ತದ.

ಚಂಪಾಕಲಿ– ಹೌದಾ! ಈಗ ಸರಿಯಾಯ್ತು ನೋಡು.

ರಂಗಣ್ಣ– ಚಂಪಾಕಲಿ ಇಂಥಾ ಸಂತೋಷದ ಸಮಯದಲ್ಲಿ ಒಂದು ಹಾಡು ಜುಮ್ಮಾ ಚುಕ್ಕಾ.

ಚಂಪಾಕಲಿ– ಅದು ಬೇಕೇ ಬೇಕಾ, ಬಾ ಹಂಗಾದರ. (ಹಾಡು ಹಾಡಿ ಕುಣಿಯುವಾಗ ಪೋಲಿಸ ಬರುವನು)

ಪೋಲಿಸ– ಲೇ.... ಲೇ ಇದು ಏನಂತ ತಿಳದೀರಿ, ಕ್ಲಬ್ ನಡಸ್ಯಾರ ಮಕ್ಕಳು ನಡ್ರಿ ಪೋಲಿಸ ಸ್ಟೇಶನ್ನಿಗೆ.

ರಂಗಣ್ಣ– ಯಾಕ್ರೀ ಪೋಲಿಸರ ನಾವು ಹ್ಯಾಂಗ ಹಾಣಾಕತ್ತೀವಿ ಈಕಿ ನನ್ನ ಖಾಸಾ ಖಾಸಾ ಹೇಣ್ತಿರಿ.

ಪೋಲಿಸ– ಹೌದೇನ್ರೀ ಬಾಯಾರ.

ಚಂಪಾಕಲಿ– ಎಲ್ಲಾ ಸುಳ್ಳ ಹೇಳಾಕತ್ತ್ಯಾನ್ರಿ.

ಪೋಲಿಸ– ಲೇ ಮಗನ, ಈಕಿ ಯಾರಂತ ತಿಳಿದೀದಿ, ನನ್ನ ಭಾವೀ ಹೆಂಡತಿ ಅದಾಳಲೇ ಇದೇ ವಾರದಾಗ ಮದುವಿ ಅದ.

ರಂಗಣ್ಣ– ಚಂಪಾಕಲಿ ಈ ವಿಷಯ ಮೊದಲು ಹೇಳಬಾರದಾ ನಿನ್ನ ಕಡೇ ಕಣ್ಣೆತ್ತಿ ನೋಡ್ತಿದ್ದಿಲ್ಲ.

ಚಂಪಾಕಲಿ– ಜರಾ ಬುದ್ಧಿ ಕಲಿಸೇ ಹೇಳಣಾಂತ ಸುಮ್ನಿದ್ದೆ.

ಪೋಲಿಸ– ಮಗನಾ ನಡೆ ಪೋಲಿಸ ಸ್ಟೇಶನ್ನಕ.

ರಂಗಣ್ಣ– ತಪ್ಪಾಯ್ತುರಿ ಸಾಹೇಬ, ಇದೊಂದು ಸಾರಿ ಕ್ಷಮಾ ಮಾಡ್ರಿ ನೀನಾದರೂ ಹೇಳು ಚಂಪಾಕಲಿ ಈಗ ನಾಯೇನು ಕೊಟ್ಟೀನಲ್ಲ ಅವು ನಿಮ್ಮ ಮದುವೆಗೆ ಪ್ರಜೆಂಟೇಶನ್ ಅಂತ ತಿಳಕೋಳ್ರಿ, ಸುಮ್ನ ಬಿಟ್ಬು ಬಿಡ್ರಿ ನಾ ಬೇರೆ ಊರಿಗೆ ಹೋಗ್ತೀನಿ.

ಚಂಪಾಕಲಿ– ಈಗರ ಬುದ್ಧಿ ಬಂತಲ್ಲಪ್ಪ, ಎಲ್ಲೆರ ಹೋಗಿ ಮನುಷ್ಯಾರಂಗ ಬಾಳು.

ರಂಗಣ್ಣ– ಆಯ್ತವ್ವ, ಹಾಂ ಪೋಲಿಸರ ನಿಮ್ಮ ಕೈಯಾಗ ಸಿಕ್ಕು ನಿಮ್ಮ

ಕೈಯಿಂದ ಮೈ ಹಣ್ಣು ಮಾಡಿಕೊಳ್ಳೋದಕ್ಕಿಂತ ನಮ್ಮ ದಾರಿ ನಾವು ನೋಡಿಕೊಳ್ಳುವದು ಬಹಳ ಒಳ್ಳೇದು ನೋಡ್ರಿ ನಾ ನಡೀತೀನ್ರಿ (ಹೋಗುವನು)

ಚಂಪಾಕಲಿ– ಅವನಿಗೆ ಈಗ ಚಂದ ಬುದ್ಧಿ ಬಂತು ನೋಡ್ರಿ ಪೋಲಿಸ ಮಾವ ನಮ್ಮಪ್ಪಂತೂ ಈ ಮದುವೆಗೆ ಒಪ್ಪಾಂಗಿಲ್ಲ, ಹ್ಯಾಂಗಿದ್ರೂ ಖರ್ಚಿಗೆ ಸಾಕಷ್ಟು ರೊಕ್ಕಾ ಬಂದಾವ, ಯಾವುದಾದರೂ ದೇವಸ್ಥಾನದೊಳಗ ನಾವಿಬ್ರೂ ಮದುವಿ ಮಾಡಿಕೊಂಡ ನಮ್ಮ ಮನಿಗೆ ಹೋಗೋಣ ನಡಿರಿ.

ಪೋಲಿಸ– ಹಂಗಾರ ನಡಿ ಹೋಗೋಣ. (ಹೋಗುವರು).

===***===***===

ಪ್ರವೇಶ–೨೫

ಪೋಲಿಸ ಸ್ಟೇಶನ್

(ಪೋಲಿಸನೊಬ್ಬ ಬೆಂಚ ಮೇಲೆ ಕುಳಿತು ನಿದ್ದೆ ಮಾಡುತ್ತಿರುವಾಗ ಪಿ.ಎಸ್.ಐ. ಭರತ್ ಡ್ರೆಸ್ಸಿನಲ್ಲಿ ಬರುವನು)

ಭರತ್– ಸತ್ಯಣ್ಣ....ಸತ್ಯಣ್ಣ.... ಏ ಸತ್ಯಣ್ಣ

ಪೋಲಿಸ– (ಗಡಬಡಿಸಿ ಎದ್ದು ಸೆಲ್ಯೂಟ್ ಹೊಡೆದು) ಎಸ್ ಸರ್.

ಭರತ್– ಕುಳಿತಲ್ಲೇ ನಿದ್ದೆ ಮಾಡುತ್ತಿರುವೆಯಲ್ಲ ಇದೇನು ಮನೆ ಎಂದು ತಿಳಿದಿರುವೆಯಾ?

ಪೋಲಿಸ– ಇಲ್ಲ ಸರ್ ಹಾಳಾದ ಸೊಳ್ಳೆಗಳ ಕಾಟ ನಿದ್ದೆ ಆಗಿಲ್ಲಿಲ್ಲ ಸ್ವಲ್ಪ ಜಂಪ್ ಹತ್ತಿತ್ತು ನೀವು ಬಂದ್ರಿ.

ಭರತ್– ಶಟಪ್, ಕಳ್ಳನಿಗೊಂದು ಪಿಳ್ಳೇ ನೆವ ಅಂತಾ, ಈ ಖಾಕಿ ಡ್ರೆಸ್ ಹಾಕಿದ ಮೇಲೆ ಮೈಯೆಲ್ಲಾ ಸದಾ ಎಚ್ಚರವಾಗಿರಬೇಕು. ಖಾಕಿ ದೇಶ ರಕ್ಷಣೆಯ ಸಂಕೇತ, ಖಾಕಿ ತೊಟ್ಟವರೇ ಮೈಗಳ್ಳರಾದರೆ ದೇಶದ ಗತಿಯೇನು?

ಪೋಲಿಸ– ಈ ಹೊತ್ತು ಎಲ್ಲರೂ ಖಾಕೀನ ಹಾಕಲಿಕ್ಕೆ ಹತ್ತ್ಯಾರಲ್ರೀ. ಡ್ರೈವರ್‌ನಿಂದ ಹಿಡಿದು ರಸ್ತೆಯಲ್ಲಿ ಕಸ ಗುಡಿಸುವ ಝಾಡ ಮಾಲಿಯವರೆಗೂ.

ಭರತ್– ಇಲ್ಲ, ಖಾಕಿ ತೊಟ್ಟವರೆಗೆಲ್ಲ ತನ್ನದೇ ಆದ ಜವಾಬ್ದಾರಿ ಇದೆ, ಖಾಕಿ ತೊಟ್ಟ ಡ್ರೈವರನ ಮೇಲೆ ಪ್ರಯಾಣಿಕರ ಜೀವ ರಕ್ಷಣೆಯ ಜವಾಬ್ದಾರಿ ಇದೆ. ಖಾಕಿ ತೊಟ್ಟ ಝಾಡಮಾಲಿಗೆ ಸ್ವಚ್ಛತೆಯ ಮತ್ತು ನಿಯತ್ತಿನ ಜವಾಬ್ದಾರಿ ಇದೆ. ಇನ್ನು ನಮ್ಮಂಥವರಿಗೆ ಸಮಾಜ ರಕ್ಷಣೆ. ದೇಶ ರಕ್ಷಣೆಯ ಜವಾಬ್ದಾರಿ ಇದೆ. ಇನ್ನು ಮುಂದೆ ಇಂಥ ಬೇಜವಾಬ್ದಾರಿ ತೋರಬೇಡಾ (ಹೋಗಿ ತನ್ನ ಸ್ಥಾನದಲ್ಲಿ ಕುಳಿತ ನಂತರ ಗೌಡ ಇಬ್ಬರು ವ್ಯಕ್ತಿಗಳು ಬರುವರು).

ಗೌಡ– ಓ, ಇನ್ಸಪೆಕ್ಟರ್ ಭರತ್ ಸಾಹೇಬರು ನಮಸ್ಕಾರ.

ಭರತ್– ನಮಸ್ಕಾರ, ಏನು ವಿಶೇಷ.

ಗೌಡ– ಈ ಖಾದಿ ಪೋಲಿಸ ಸ್ಟೇಶನ್‌ತನಕಾ ಬಂದಾನಂದ್ರ ಏನಾದ್ರೂ ವಿಶೇಷ ಇರಲೇಬೇಕಲ್ರಿ ಸಾಹೇಬ್ರ

ಭರತ್– ಇದೀಗ ಜನರಿಗೆ ಖಾದಿ ಮತ್ತು ಕಾವಿಯ ಬಗ್ಗೆ ವಿಶ್ವಾಸವೇ ಹೊರಟು ಹೋಗಿದೆ. ಊರಿನಲ್ಲಿ ಜಗಳ ಹಚ್ಚಿ ಎರಡೂ ಕಡೆ ಹಣ ಹೊಡೆದು ಜನರನ್ನು ದಾರಿ ತಪ್ಪಿಸುತ್ತಿದ್ದಾರೆ. ಈ ಖಾದಿ ಧರಿಸಿದ ರಾಜಕಾರಿಣಿಗಳು ಸಮಾಜ ಸುಧಾರಣೆಯ ಹೆಸರಿನಲ್ಲಿ ಸರಕಾರದಿಂದ ಬರುವ ಎಲ್ಲ ಸಣ್ಣ ದೊಡ್ಡ ಮೊತ್ತದ ಸಹಾಯ ಧನವನ್ನು ತಾವೇ ನುಂಗಿ, ಸಮಾಜ ಸುಧಾರಕರಂತೆ ಸೋಗು ಹಾಕಿ ಮೆರೆಯುತ್ತಿದ್ದಾರೆ ಇಂದಿನ ನಾಯಕರು. ಇನ್ನು ಕಾವಿಯ ಬಗ್ಗೆ ಹೇಳಲೇ ಬೇಕಿಲ್ಲ ಮಠಾಧೀಶರೆಲ್ಲ ಕಾಮದ ಬೀಜ ಬಿತ್ತಿ ಮಠಗಳಲ್ಲಿ ತೊಟ್ಟಿಲುಗಳನ್ನು ಕಟ್ಟುತ್ತಿದ್ದಾರೆ. ಒಂದಲ್ಲಾ ಹತ್ತಾರು ಜನ ಸೂಳೆಯರನ್ನು ಇಟ್ಟುಕೊಂಡು ಸಮಾಜದಲ್ಲಿ ನಿತ್ಯ ಪುನೀತರಾಗಿ ಮೆರೆಯುತ್ತಿದ್ದಾರೆ ಖದೀಮರು.

ಗೌಡ– ವ್ಹಾ ! ಮಾತು ಬಹಳ ಚೆನ್ನಾಗಿ ಆಡ್ತೀಯಲ್ಲಾ ಹಿಂದ ನಾಟಕಾದಾಗ ಸಿನೆಮಾದಾಗ ಇನ್ಸಪೆಕ್ಟರನ ಪಾತ್ರಾ ಮಾಡಿದ್ದೇನು ಯಾಕಂದ್ರ ಆದರ್ಶ ಮಾತು ಇರೋದೆಲ್ಲ ನಾಟಕಾ ಸಿನೆಮಾದಾಗಿನ ಹಿರೋಗಳಲ್ಲಿ ಮಾತ್ರ, ನಿಜ ಜೀವನದಾಗ ಅಲ್ಲ.

ಭರತ್– ಯಾಕೆ ಸಾಧ್ಯವಿಲ್ಲಾ ನಾನು ಸಾಧ್ಯಮಾಡಿ ತೋರಿಸುತ್ತಿದ್ದೇನಲ್ಲಾ ಕರ್ತವ್ಯವೇ ದೇವರೆಂದು ತಿಳಿದಿರುವ ನಾನು ನನ್ನ ಅಧಿಕಾರದಲ್ಲಿ ಯಾವುದೇ ಚ್ಯುತಿ ಬರದಂತೆ ನೋಡಿಕೊಳ್ಳುತ್ತಿದ್ದೇನೆ.

ಗೌಡ– ಅಂದ್ರ ನಮ್ಮ ಕೇಸಿನಲ್ಲಿ ನಮಗ ಜಯಾ ಸಿಗುವುದಿಲ್ಲ ಅಂದಾಗ ಆಯ್ತು.

ಭರತ್– ಏನು ಕೇಸಿದೆ?

ಗೌಡ– ತೊಗೊಳ್ರಿ ನಮ್ಮ ಕಂಪ್ಲೆಂಟು (ಕೊಡುವನು).

ಭರತ್– (ಓದಿ ನೋಡಿ, ಆಶ್ಚರ್ಯದಿಂದ) ಗೌಡರೇ ಇದು ಸತ್ಯವೇ?

ಗೌಡ– ಸುಳ್ಳು ನಾಯಾಕ ಹೇಳ್ಲಿ, ಗೆದ್ದ ಖುಷಿಯಲ್ಲಿ ನಿಮ್ಮಣ್ಣ ಸೇಡು ತೀರಿಸಿಕೊಳ್ಳಲು ನನ್ನ ಮನಗೆ ಬಂದ ಬ್ಯಾಡೋ ಬಸವಂತ ನಿನ್ನ ದೈವ ನೆಟ್ಟಗಾದ ನೀ ಗೆದ್ದಿ ಅಂತಾ ಎಷ್ಟು ಹೇಳಿದ್ರೂ ಕೇಳಲಿಲ್ಲ. ನನ್ನ ವೈರಿ ನೀ ಬದುಕಬಾರದು ಅಂತ ಗುಂಡು ಹಾರಿಸಿಬಿಟ್ಟ, ನನ್ನ ಬಲಗೈ ಭಂಟ ಹನುಮ ಅಡ್ಡ ಬಂದ ಗುಂಡು ಅವನಿಗೆ ಹತ್ತಿತು. ಸತ್ತ ಬಿದ್ದ, (ದುಃಖ) ಹನುಮ ಭಾಳ ಒಳ್ಳಾಂವ್ರಿ ಸಾಹೇಬರೇ, ನನ್ನ ಬಲಗೈ ಇದ್ದಂಗಿದ್ದ, ನಾನಂದ್ರ ತನ್ನ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸ್ತಿದ್ದ, ಅಂಥವ್ನ ನಿಮ್ಮಣ್ಣ ಹೊಡೆದು ಕೊಂದಾನ್ರಿ ಹೊಡೆದು ಕೊಂದಾನ (ಸಾವಧಾನ) ಯಾಕ್ರೀ ಇನ್ಸಪೆಕ್ಟರ್ ಮೈ ಬೆವರ್ಲಿಕತ್ಯಾದ ಕೈಕಾಲು ನಡಗ್ಲಿಕತ್ಯಾವ, ನಿಮ್ಮಿಂದ ಅಪರಾಧಿಗೆ ಬಂಧಿಸಲಿಕ್ಕೆ ಆಗ್ಲಿಕ್ಕಿಲ್ಲಂದ್ರ ಹೇಳ್ರಿ, ಡಿ ಎಸ್ ಪಿ ಹತ್ರ ಹೋಗ್ತೀನಿ. ಎಸ್.ಪಿ. ಹತ್ರ ಹೋಗ್ತೀನಿ. ಹೋಂ ಮಿನಿಸ್ಟರಿಗೂ ಮೆಸೇಜ್ ಕೊಡ್ತೀನಿ. ನನಗ ನ್ಯಾಯ ಕೊಡ್ರಿ.

ಭರತ್– ಇದು ನಿನ್ನ ಕಣ್ಣೆದುರೆ ನಡೆಯಿತಾ?

ಗೌಡ– ನನ್ನ ಮನಿ ದೇವರ ಮ್ಯಾಲ ಆಣೆ ಮಾಡಿ ಹೇಳ್ತೀನಿ ನನ್ನ ಕಣ್ಣೆದುರಲ್ಲಿ ನನಗೆ ಕೊಲೆ ಮಾಡ್ಲಿಕ್ಕ ನೋಡ್ದಂವಾ ನಮ್ಮ ಹನುಮ ದೈವ ಕೆಟ್ಟದಿತ್ತು. ಜೀವ ಕೊಟ್ಟು ಬೇಕಿದ್ರ ಈ ಸಾಕ್ಷಿದಾರರನ್ನೇ ಕೇಳ್ರಿ

ಭರತ್– ಈ ಕೊಲೆ ನೀವು ನೋಡಿದ್ರ್ಯಾ

ಇಬ್ಬರೂ– ಹೌದ್ರಿ ಬಸವಂತಪ್ಪನೇ ಕೊಲೆ ಮಾಡಿದ್ದಾನೆ

ಗೌಡ– ಇನ್ಸಪೆಕ್ಟರ್, ಅಪರಾಧಿಯನ್ನು ಬಂಧಿಸಲಿಕ್ಕೆ ಆಗದಿದ್ರ ಹೇಳ್ರಿ, ನಾವು ಮುಂದ ಏನ್ ಮಾಡಬೇಕೋ ಮಾಡ್ತೀವಿ

ಭರತ್– ಗೌಡ, ಇಲ್ಲ ಕರ್ತವ್ಯವೇ ದೇವರೆಂದು ತಿಳಿದ ನಾನು ಯಾವತ್ತೂ ಹಿಂದ ಹೆಜ್ಜೆ ಇಡೋಲ್ಲ, ನ್ಯಾಯದೇವತೆ ಮುಂದೆ ಎಲ್ಲರೂ ಸರಿ ಸಮಾನರು. ಇಲ್ಲಿ ಕರುಳು ಸಂಬಂಧಕ್ಕೆ ಬೆಲೆ ಇಲ್ಲ. ಇಂದೇ ಅಪರಾಧಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

ಗೌಡ– ಶಹಬ್ಬಾಶ್ ಇನ್ಸಪೆಕ್ಟರ್, ಕರ್ತವ್ಯವೇ ದೇವರೆಂದು ಕರ್ತವ್ಯ ನಿರ್ವಹಿಸ್ತೀಯೋ, ಅಣ್ಣನೆಂಬ ಅನುಕಂಪದಿಂದ ಬಿಟ್ಟು ಬಿಡ್ತಿಯೋ ನೋಡೋಣ.

ಭರತ್– (ಸಿಟ್ಟು) ಗೌಡ, ನೋಡಲು ನೀನ್ಯಾವನಲೇ ಕಂಪ್ಲೇಂಟು ಕೊಟ್ಟಿದ್ದಿ ನನ್ನ ಡ್ಯೂಟಿ ನಾನು ಮಾಡ್ತೇನೆ ಒಂದು ವೇಳೆ ಇದರಲ್ಲೇನಾದರೂ ಮೋಸ, ವಂಚನೆ, ಅಡಗಿದ್ರ ನಿನ್ನ ಒಂದೊಂದು ಎಲುವು ಪುಡಿ ಪುಡಿ ಮಾಡ್ತೇನೆ ಹುಷಾರ್, ಹೋಗು ನಿನ್ನ ಕೆಲಸ ಆಯ್ತಲ್ಲ ಹೊರಟು ಹೋಗು (ಗೌಡ, ಇಬ್ಬರೂ ವ್ಯಕ್ತಿಗಳು ಹೋಗುವರು)

ಪೋಲಿಸ– ಸಾಹೇಬರೇ ನಿಮ್ಮ ಅಣ್ಣನನ್ನೇ ಬಂಧಿಸ್ತೀರಾ?

ಭರತ್– ನ್ಯಾಯದೇವತೆ ಎದುರು ಸಂಬಂಧಗಳು ಕುರುಡಾಗ್ತವೆ ಸತ್ಯಣ್ಣ. ಇವತ್ತು ಕೆಟ್ಟ ವ್ಯಕ್ತಿಗಳು ಎಲ್ಲೆಲ್ಲಿ ತುಂಬಿದ್ದಾರೆ ಅವರನ್ನೆಲ್ಲ ಅವರ ಮನೆಯವರು, ಗೆಳೆಯರು ಧೈರ್ಯದಿಂದ ಅವರ ಕೆಟ್ಟ ಕೃತಿಗಳು ಬಯಲಿಗೆಳೆಯಬೇಕು. ಅಂದಾಗ ಸಮಾಜ ಸುಧಾರಣೆಯಾಗುತ್ತದೆ. ನನಗೆ ಕರ್ತವ್ಯ ಮುಖ್ಯ. ನಾನು ಡ್ಯೂಟಿಗೆ ಸೇರುವಾಗ ನನ್ನಣ್ಣ, ನನ್ನತ್ತಿಗೆ ಕರ್ತವ್ಯಕ್ಕೆ ಚ್ಯುತಿ ಬಾರದಂತೆ ನಡೆದುಕೋ ಎಂದು ಭಾಷೆ ತೆಗೆದುಕೊಂಡಿದ್ದಾರೆ ಈಗ ಹೇಡಿಯಂತೆ ಕರ್ತವ್ಯಕ್ಕೆ ದ್ರೋಹ ಬಗೆಯಲೇ ಇಲ್ಲ ಸತ್ಯಣ್ಣ ನಡೆ ತಗೋ ಬೇಡಿ. (ಹೋಗುವರು).

===***===***===

ಪ್ರವೇಶ–೨೬

ರಸ್ತಾ ಸೀನು

(ನಾಗೇಂದ್ರ ಬಂದು ರಾಗಿಣಿಯ ನಿರೀಕ್ಷೆಯಲ್ಲಿರುವನು)

ನಾಗೇಂದ್ರ– ೧೨ ಗಂಟೆಗೆ ಬರುವುದಾಗಿ ಹೇಳಿದ ರಾಗಿಣಿ, ಇನ್ನೂ ಬರಲಿಲ್ಲವಲ್ಲ ಏನಾದರೂ ಅಡೆ ತಡೆಯಾತೆ. ಏನಾದರೂ ತಪ್ಪಿಸುವ ಹೆಣ್ಣಲ್ಲ. ರಾಗಿಣಿ, ಇಂದಿಗೆ ಮುಗಿಯುವದು ನನ್ನ ನಿನ್ನ ಸಂಬಂಧ. ನಿನ್ನಲ್ಲಿರುವ ಹಣ ತೆಗೆದುಕೊಂಡು ನಿನ್ನನ್ನು ಬೀದಿ ಭಿಕಾರಿಯನ್ನಾಗಿ ಮಾಡಿ, ನಾನು ಬಾಂಬೆಗೆ ಹೋಗಿ ಸುಖವಾಗಿರಬೇಕೆಂಬುದೇ ನನ್ನ ಆಶೆ. ಓ ಅಲ್ಲಿ ಬರುತ್ತಿದ್ದಾಳೆ, ಬರಲಿ.

ರಾಗಿಣಿ– (ಬರುತ್ತಾ) ಸ್ವಾರಿ ನಾಗೇಂದ್ರ ಬರಲು ಸ್ವಲ್ಪ ತಡವಾಯ್ತು.

ನಾಗೇಂದ್ರ– ಪರವಾಗಿಲ್ಲ, ಎಲ್ಲ ಹಣವನ್ನು ತಂದೆಯಾ.

ರಾಗಿಣಿ– ಬ್ಯಾಂಕಿನಲ್ಲಿರುವ ೫ ಲಕ್ಷ ರೂ. ಹಾಗೂ ನನ್ನಲ್ಲಿರುವ ೨೦ ತೊಲಿ ಬಂಗಾರ ತಂದಿರುವೆ. ಎಲ್ಲವನ್ನು ಈ ಬ್ರೀಫ್ ಕೇಸ್‌ನಲ್ಲಿವೆ.

ನಾಗೇಂದ್ರ– ಕೊಡು ಇಲ್ಲಿ.

ರಾಗಿಣಿ– ಏಕೆ ನನ್ನ ಮೇಲೆ ಅನುಮಾನವೇ.

ನಾಗೇಂದ್ರ– ಹಾಗೇನಿಲ್ಲ, ಇಲ್ಲಿಯವರೆಗೂ ನೀನೇ ಹಿಡಿದುಕೊಂಡಿರುವೆ. ಈ ಕೋಮಲವಾದ ಕರಗಳಿಗೆ ಭಾರ ಎಂದು ಕೇಳಿದೆ ಅಷ್ಟೇ.

ರಾಗಿಣಿ– ತೆಗೆದುಕೋ (ಅವನು ಬ್ರೀಫ್‌ಕೇಸ್ ತೆಗೆದು ನೋಡಿ ನಗುತ್ತಿರುವನು) ಏಕೆ ನಗುತ್ತಿರುವೆ ಏನಾಗಿದೆ.

ನಾಗೇಂದ್ರ– ಎಲಾ ಹುಚ್ಚು ಹೆಣ್ಣೇ, ನನ್ನ ಬಣ್ಣದ ಮಾತಿಗೆ ಇಡೀ ನಿನ್ನ ಆಸ್ತಿ ಒಪ್ಪಿಸಿದೆಯಾ, ನೀನೆಂಥ ಹುಚ್ಚು ಹೆಣ್ಣು.

ರಾಗಿಣಿ– ನಾಗೇಂದ್ರ, ಏನೇನೋ ಮಾತಾಡುತ್ತಿರುವೆ, ಯಾಕೆ ಏನಾಯ್ತು.

ನಾಗೇಂದ್ರ–	ಏನಾಯ್ತು, ಆಂ.... ಎಲ್ಲವೂ ಮುಗಿದ್ಹೋಯ್ತು ಗುಡ್ ಬೈ ಬರ್‍ತೀನಿ. (ಹೋಗುವಾಗ).
ರಾಗಿಣಿ–	(ಕಾಲಿಡಿದು ಅಳುತ್ತಾ) ನಾಗೇಂದ್ರ, ನಾನು ಏನು ತಪ್ಪು ಮಾಡಿದೆನೆಂದು ನನಗೀ ಶಿಕ್ಷೆ ಕೊಡುತ್ತಿರುವಿ. ನಿನ್ನ ಪ್ರೇಮ ನನಗೆ ಬೇಕು. ನೀನಿಲ್ಲದೆ ನಾನು ಬದುಕುವುದಿಲ್ಲ.
ನಾಗೇಂದ್ರ–	ಬದುಕಲಿಕ್ಕೆ ಆಗದಿದ್ರೆ ಸಾಯಿ ನನಗೇನಾಗಬೇಕಾಗಿದೆ. ಮೊದಲು ಭರತ್‌ನಿಗೆ ಪ್ರೀತಿಸಿದೆ, ನಂತರ ನಾನು ಸ್ವಲ್ಪ ಹೆಚ್ಚಿಗೆ ಪ್ರೀತಿಸುವವ ಸಿಕ್ಕರೆ ನನಗೂ ಕೈ ಕೊಡಬಹುದು.
ರಾಗಿಣಿ–	(ಅಳುತ್ತಾ) ಇಲ್ಲ ಇಲ್ಲ. ಅಂದಿನ ಭರತನ ಪ್ರೇಮ ಪ್ರೇಮವೇ ಅಲ್ಲ, ಕಾಲೇಜಿನಲ್ಲಿರುವ ಪ್ರೇಮ ಬರೀ ಪ್ರೇಮವೇ ಹೊರತು ಕಾಮವಾಗಿರಲಿಲ್ಲ. ನಮ್ಮಿಬ್ಬರ ಪ್ರೇಮ ಜನ್ಮ ಜನ್ಮಾಂತರದ್ದು.
ನಾಗೇಂದ್ರ–	ವ್ಹಾ.....! ಡೈಲಾಗ್ ಚೆನ್ನಾಗಿ ಹೇಳ್ತಿ ಹಿಂದೆ ಯಾವುದಾದರೂ ನಾಟಕದಲ್ಲಿ ಪ್ರೇಮಿಯ ಪಾತ್ರವನ್ನು ಮಾಡಿದ್ದೆಯೇನು ಸೂಳೆಯಂಥವಳೇ.
ರಾಗಿಣಿ–	ನಾಗೇಂದ್ರ ನಾ ಹೇಗೆ ಹೇಳಲಿ, ನಾನು ಶ್ರೀಮಂತಳಿರಬಹುದು. ಓದಿಕೊಂಡು ಸೋಸಿಯಲ್ ಆಗಿಯೂ ಇದ್ದೇನೆ. ಆದರೆ, ನನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಮಗುವಿನ ಸಾಕ್ಷಿಯಾಗಿಯೂ ನಾನು ಪವಿತ್ರಳು. ನಿನ್ನೊಬ್ಬನ ಹೊರತು ಬೇರೆ ಯಾರಿಗೂ ಮೈ ಒಪ್ಪಿಸಿಲ್ಲ, ನಂಬು ನನ್ನನ್ನು
ನಾಗೇಂದ್ರ–	ನನ್ನನ್ನು ತಡೆಯಬೇಡಾ ರಾಗಿಣಿ ನನಗೆ ಬಹಳ ಕೆಲಸವಿದೆ.
ರಾಗಿಣಿ–	ನೀನು ಈ ರೀತಿ ಕೈಕೊಟ್ಟು ಹೋದರೆ ನಾಳೆ ಹುಟ್ಟುವ ಮಗುವಿಗೆ ತಂದೆ ಎಲ್ಲಿದ್ದಾರೆಂದು ತೋರಿಸಲಿ. ನನ್ನ ಮಗುವಿನ ಗತಿಯೇನು? ಬೇಡ ಕೈ ಬಿಡಬೇಡ.
ನಾಗೇಂದ್ರ–	(ನಗು) ನಿನ್ನ ಮಗುವಿನ ಗತಿ ಅಧೋಗತಿ. ಲೇ ಹುಚ್ಚಿ ನಿನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಮಗುವಿಗೆ ತಂದೆ ನಾನೇ ಎಂದು ಹೇಗೆ ಹೇಳ್ತಿ, ಸಾಕ್ಷಿ ಏನಿದೆ.
ರಾಗಿಣಿ–	(ಅಳುತ್ತಾ) ದೇವರೇ ! ಎಂಥ ಇಕ್ಕಟ್ಟಿನ ಸ್ಥಿತಿ ತಂದಿಯಪ್ಪ ನಾಗೇಂದ್ರ, ನನ್ನ ಹೊಟ್ಟೆಯ ಮಗುವಿಗೆ ತಂದೆಯ ಸಾಕ್ಷಿ ತೋರಿಸಲು

ಕೇಳಿದೆಯಾ? ಇದು ಯಾವ ತಾಯಿಯಿಂದಲೂ ಸಾಧ್ಯವಿಲ್ಲ. ನನ್ನಾತ್ಮ ಸಾಕ್ಷಿಯಾಗಿ ಹೇಳಬಲ್ಲೆ ನನ್ನ ಗರ್ಭದಲ್ಲಿರುವ ಮಗುವಿಗೆ ನೀನೇ ತಂದೆ ಎಂದು ನೀನು ನಿನ್ನಾತ್ಮಕ್ಕೆ ಕೇಳಿಕೋ ನನ್ನೊಂದಿಗೆ ಒಂದಾಗಿದ್ದು ಸುಳ್ಳಾ? ನನ್ನ ಗರ್ಭದಲ್ಲಿ ಮಗು ಮೂಡಲು ನೀನು ಕಾರಣ ಅಲ್ವಾ? ಹೇಳು ನಾಗೇಂದ್ರ ಹೇಳು.

ನಾಗೇಂದ್ರ– ಬಣ್ಣದ ಮಾತಾಡಿ ನನಗೆ ಮರಳು ಮಾಡಬೇಕೆಂದಿರುವೆಯಾ? ಲೇ ನಿನ್ನಂಥ ಎಷ್ಟು ಜನಕ್ಕೆ ನೋಡಿಲ್ಲ ನಾನು.

ರಾಗಿಣಿ– ಅಂದ್ರೆ ನಾನೀಗ ಏನು ಮಾಡಲಿ.

ನಾಗೇಂದ್ರ– ಬೀದಿ ಬೀದಿ ತಿರುಗಿ ಭಿಕ್ಷೆ ಬೇಡು. ಬೈ ಬೈ (ನಾಲ್ಕು ಹೆಜ್ಜೆ ಮುಂದೆ ಹೋಗಿರಬೇಕು. ಇವಳು ತಲೆ ನೇವರಿಸಿಕೊಂಡು ಧೈರ್ಯದಿಂದ ಅವಿತಿಟ್ಟುಕೊಂಡ ಪಿಸ್ತೂಲು ತೆಗೆದು)

ರಾಗಿಣಿ– ನಾಗೇಂದ್ರ.....ಒಂದೇ ಒಂದು ಹೆಜ್ಜೆ ಮುಂದಿಟ್ಟರೆ ನಿನ್ನ ಜೀವ ತೆಗೀತೇನೆ. ಕೈಕೊಟ್ಟು ಹೋಗ್ತಿಯೇನೋ ಚಾಂಡಾಲ.

ನಾಗೇಂದ್ರ– (ತಡವರಿಸುತ್ತ) ಇಲ್ಲ ಇಲ್ಲ ರಾಗಿಣಿ ನಿನ್ನ ಪ್ರೇಮ ಪರೀಕ್ಷೆ ಮಾಡಿದೆ ಅಷ್ಟೇ. ನೀನು ನನ್ನ ಪ್ರೀತಿಯ ರಾಣಿ ಅಲ್ವಾ. ರಾಗಿಣಿ ಅಂದರೆ ನೀನೊಂದು ಸಂಗೀತದ ಹೆಸರು ಸಂಗೀತಮಯವಾಗಿರಬೇಕಾದ ನೀನು ಈ ರೀತಿ ನಾಗಿಣಿಯಾಗುವುದು ಸರಿಯಲ್ಲ. ಬಾ ರಾಣಿ ನನ್ನ ಪರೀಕ್ಷೆಯಲ್ಲಿ ನೀನು ಗೆದ್ದೆ ಐ ಲವ್ ಯು.

ರಾಗಿಣಿ– ಮತ್ತೇ ಇದೂ ಒಂದು ನಾಟಕವೇ.

ನಾಗೇಂದ್ರ– ಅಲ್ಲ, ಎಂಥದೇ ಪ್ರಸಂಗ ಬಂದ್ರೂ ನೀ ನನ್ನ ಜೊತೆ ಬಿಡಬಾರದೆಂದು ಇಂಥ ಕಠಿಣ ಪರೀಕ್ಷೆ ಮಾಡಿದೆ ಅಷ್ಟೇ. ಬಾರೇ ನನ್ನ ಅರಗಿಣಿ. (ಅಪ್ಪಿ, ಮುತ್ತು ಕೊಡುವಂತೆ ನಟಿಸಿ, ಪಿಸ್ತೂಲು ಕಸಿದುಕೊಳ್ಳುವನು ನಗುತ್ತಾ) ಲೇ ಹುಚ್ಚಿ, ನನಗೆ ಕೊಲ್ತೀಯಾ ಕೊಲ್ಲು ಬಾರೇ ಹುಂ ಕೊಲ್ಲು.

ರಾಗಿಣಿ– ನೋಡು ನಿನ್ನ ಮೇಲೆ ವಿಶ್ವಾಸವಿಟ್ಟು ದಾರಿ ಬಿಟ್ಟಿದ್ದೇನೆ. ನಿನ್ನ ಕೈಯಲ್ಲಿ ನನ್ನ ಸಾವು ಬರೆದಿದ್ರೆ ಏನ್ ಮಾಡ್ಲಿಕ್ಕಾಗುತ್ತೇ ಹಾರಿಸು ಗುಂಡು ಸಂತೋಷವಾಗಿ ಸಾಯ್ತೇನೆ

ನಾಗೇಂದ್ರ– ನಿನ್ನ ಕೊನೆ ಆಶೆ ಏನು ಹೇಳು ಈಡೇರಿಸಿ ಕೊಲ್ತೇನೆ.

ರಾಗಿಣಿ– ನನ್ನ ಗರ್ಭದಲ್ಲಿ ಬೆಳೆಯುತ್ತಿರುವ ಮಗುವಿಗೆ ನೀನೇ ತಂದೆ ಎಂದು ಒಪ್ಪಿಕೊಳ್ಳಬೇಕು.

ನಾಗೇಂದ್ರ– (ನಗು) ಇಷ್ಟೇನಾ, ನಿನ್ನ ಗರ್ಭದಲ್ಲಿರುವ ಮಗುವಿನ ತಂದೆ ನಾನೇ ಸಾಯಲು ಸಿದ್ಧಳಾಗು ಒನ್ ಟು (ಗುರಿಯಿಟ್ಟಾಗ ಭರತ್, ಪ್ರವೇಶಿಸಿ ಪಿಸ್ತೂಲಿಗೆ ಒದೆಯುವನು, ಪಿಸ್ತೂಲು ದೂರ ಬೀಳುವದು)

ಭರತ್– ನಾಗೇಂದ್ರ ಎಂಥ ಕೆಲಸ ಮಾಡ್ತಿದ್ದೆ, ನಾನು ಮರೆ ನಿಂತು ನಿಮ್ಮೆಲ್ಲ ಮಾತು ಕೇಳಿಸಿಕೊಂಡಿದ್ದೇನೆ, ಇಂಥಾ ಒಳ್ಳೇ ಹೆಣ್ಣು ನಿನಗೆ ಸಿಗ್ತಾಳೇನೋ ಪಾಪಿ.

ನಾಗೇಂದ್ರ– ಭರತ್ !

ಭರತ್– ನಮ್ಮ ಪ್ರೇಮದಲ್ಲಿ ಕಾಮದ ವಾಸನೆ ಲವ ಲೇಶವೂ ಇರಲಿಲ್ಲ. ನೀನು ಅವಳನ್ನು ಕೊಲ್ಲಲು ಪಿಸ್ತೂಲು ಹಿಡಿದು ನಿನ್ನ ಕೊನೆಯಾಸೆ ಏನು ಎಂದು ಕೇಳಿದರೆ ಅವಳೊಂದು ಮಾತು ಹೇಳಿದಳು ಕೇಳಿದೆಯಾ ಅವಳ ಗರ್ಭದಲ್ಲಿರುವ ಮಗುವಿಗೆ ನೀನೇ ತಂದೆ ತಂದು ಹೇಳಿದರೆ ಸಾಕು ಸಂತೋಷದಿಂದ ಸಾಯ್ತೇನೆ ಎಂದು, ನಾಗೇಂದ್ರ ಇದು ಅವಳ ಅಂತರಾತ್ಮದಿಂದ ಬಂದ ಮಾತು, ನೋಡು ನೀನು ಒಪ್ಪಿ ಅವಳಿಗೆ ತಾಳಿ ಕಟ್ಟಿದರೆ ಸರಿ, ಇಲ್ಲದಿದ್ದರೆ ಸ್ಟೇಶನ್ನಿಗೆ ಎಳೆದೊಯ್ದು ಸರಿಯಾದ ಬುದ್ಧಿ ಕಲಿಸಿ ತಾಳಿ ಕಟ್ಟಿಸ್ತೇನೆ ಹುಶಾರ್ !

ನಾಗೇಂದ್ರ– (ಪಶ್ಚಾತ್ತಾಪದಿಂದ) ಭರತ್ ನಿಜವಾಗಿಯೂ ನೀನು ನನ್ನ ಕಣ್ಣು ತೆರೆಸಿದೆ. ಇಂದಿನಿಂದ ಇವಳೇ ನನ್ನ ಬಾಳ ಸಂಗಾತಿ ಎಂದು ಸ್ವೀಕರಿಸ್ತೇನೆ.

ಭರತ್– ಸಂತೋಷ, ಕಲಿತವರು ಸೋಸಿಯಲ್ ಆಗಿದ್ದವರೆಲ್ಲ ಕೆಟ್ಟವರೆಂಬ ಭಾವನೆ ಈ ನಿನ್ನ ಮಟ್ಟಕ್ಕೆ ತಂದಿತ್ತು. ನಡೆ ದೇವರೆದುರು ಹಾರ ಬದಲಾಯಿಸಿಕೊಳ್ಳಿ.

ನಾಗೇಂದ್ರ– ನನ್ನ ಕಣ್ಣು ತೆರೆಸಿದ ನನ್ನ ಪಾಲಿನ ದೇವರು ನೀನೇ ನಿನ್ನ ಮುಂದೇನೆ ಇವಳನ್ನು ಪತ್ನಿ ಎಂದು ಸ್ವೀಕರಿಸ್ತೇನೆ (ಅವಳ ಕೈ ಹಿಡಿಯುವನು)

ರಾಗಿಣಿ– ಬಿರುಗಾಳಿಗೆ ಸಿಲುಕಿದ ನನ್ನ ಬಾಳೆಂಬ ಜ್ಯೋತಿ ಪ್ರಜ್ವಲಿಸುವಂತೆ ಮಾಡಿದ ನಿನಗೆ ಎಷ್ಟು ಕೃತಘ್ನತೆ ಹೇಳಿದರೂ ಸಾಲದು.

ಭರತ್– ಎಲ್ಲರಿಗೂ ಒಳ್ಳೇದು ಮಾಡುವ ದೇವರು ಮೇಲಿದ್ದಾನೆ. ನನಗೆ ಅರ್ಜಂಟ್ ಕೆಲಸ ಇದೆ ಬರ್ತೀನಿ. (ಹೋಗುವನು).

ನಾಗೇಂದ್ರ– ಹಿಂದಿನ ಎಲ್ಲ ಘಟನೆ ಕನಸೆಂದು ತಿಳಿ ರಾಗಿಣಿ.

ರಾಗಿಣಿ– ಹೌದು ಹಿಂದಿನದೆಲ್ಲ ಮರೆತು ಚೆಂದಾಗಿ ಬಾಳೋಣ.

ನಾಗೇಂದ್ರ– ಈ ಸಂತೋಷದ ಸಮಯದಲ್ಲಿ ದೇವರ ದರ್ಶನವಾದ್ರೂ ಮಾಡಿಕೊಂಡು ಬರೋಣ ನಡೆ (ಹೋಗುವರು).

===***====***====

ಪ್ರವೇಶ–೨೭

ಬಸವಂತನ ಮನೆ

(ಬಸವಂತ ಪೇಪರ್ ನೋಡುತ್ತಾ ಕುಳಿತಿದ್ದಾನೆ; ಸಾವಿತ್ರಿ ಹೊರಗಿನಿಂದ ದೇವರ ದರ್ಶನ ಪಡೆದು ಬರುವಳು)

ಸಾವಿತ್ರಿ– ಸ್ವಾಮಿ! ದೇವರ ಪ್ರಸಾದ ತೆಗೆದುಕೊಳ್ಳಿ.

ಬಸವಂತ– (ಮುಂದೆ ಬರುತ್ತಾ) ಸಾವಿತ್ರಿ ! ನಿನ್ನ ಮುಖದಲ್ಲಿ ಬಹಳ ಕಳೆ ತುಂಬಿದೆಯಲ್ಲ ಏನು ವಿಶೇಷ

ಸಾವಿತ್ರಿ– ಬಹಳ ವಿಶೇಷ ಅಂದರೆ ನೀವು.

ಬಸವಂತ– ನಾನು ಹುಂ ಹೇಳು.

ಸಾವಿತ್ರಿ– ಇಲ್ಲ ನನಗೆ ನಾಚಿಕೆಯಾಗುತ್ತೆ.

ಬಸವಂತ– ಏನೇ ಇದು ಮದುವೆಯಾಗಿ ನಾಲ್ಕು ವರ್ಷದ ನಂತರ ನಾಚಿಕೆ ಎಂದು ಹೇಳುತ್ತಿರುವೆಯಲ್ಲ. ಮತ್ತೇನಾದ್ರೂ (ಮಗುವಂತೆ ಸಂಜ್ಞೆ)

ಸಾವಿತ್ರಿ– ಹೌದ್ರಿ, ನನಗೀಗ ಮೂರು ತಿಂಗಳು ನೀವು ತಂದೆಯಾಗ್ತಿದ್ದಿರಿ. ಆದರೆ ಒಂದೇ ಒಂದು ಚಿಂತೆ

ಬಸವಂತ– ಇಂಥ ಸಂತೋಷದ ವಿಷಯದ ನಂತರವೂ ಒಂದು ಚಿಂತೆ ಏನೇ ಅದು

ಸಾವಿತ್ರಿ– ನನಗೆ ಮಗುವಾದರೆ ಎಲ್ಲಿ ನನ್ನ ಮೈದುನರ ಮೇಲಿನ ಪ್ರೀತಿ ಕಡಿಮೆಯಾಗ್ತಾದೋ ಅಂತಾ.

ಶೇಖರ– (ಬರುತ್ತಾ) ಅತ್ತಿಗೆಮ್ಮ, ನಾವಂದ್ರ ನಿನಗೆಷ್ಟು ಪ್ರೀತಿಯಮ್ಮ, ನಿನಗೆ ಮಗುವಾದರೆ ಮಗುವಿಗೆ ಮುದ್ದಿಸುವ ಭರದಲ್ಲಿ ನಮ್ಮ ಮೇಲಿನ ಪ್ರೀತಿ ಕಡಿಮೆಯಾಗಬಹುದೆಂದು ಚಿಂತಿಸ್ತೀಯಲ್ಲಮ್ಮ. ಇಲ್ಲ ಅತ್ತಿಗೆ ಮರೆಯಲ್ಲಿ ನಿಂತು ನಿಮ್ಮ ಮಾತು ಕೇಳಿದ್ದೇನೆ, ಈ ಮನೆಯಲ್ಲಿ

ಹೊಸ ಸೂರ್ಯ ಮೂಡುತ್ತಿದ್ದಾನೆ. ಇದಕ್ಕೆ ನೀನು ಸಂತೋಷ ಪಡಬೇಕಮ್ಮ.

ಸಾವಿತ್ರಿ– ಶೇಖರ, ನಾನೆಂದರೆ ನಿನ್ನ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸ್ತಿ ಇನ್ನು ಭರತನೋ ನನ್ನ ಕೈ ತುತ್ತೆ ಬೇಕವನಿಗೆ ನಿಮ್ಮಂಥ ಆದರ್ಶ ಮೈದುನರನ್ನು ಪಡೆದ ನಾನೇ ಧನ್ಯ

ಶೇಖರ– ನೀನು "ಚಿನ್ನದಂಥ ಅತ್ತಿಗೆ"ಯಮ್ಮ ನಿಮ್ಮಂಥವರು ಸಿಗುವುದು ಲಕ್ಷಕ್ಕೊಬ್ಬರಲ್ಲ, ಕೋಟಿಗೊಬ್ಬರು. ಶ್ರೀರಾಮನಂಥ ಅಣ್ಣ ಸೀತೆಯಂಥ ನೀನು, ನಿಮ್ಮಿಬ್ಬರನ್ನು ಅಣ್ಣ–ಅತ್ತಿಗೆಯರನ್ನಾಗಿ ಪಡೆಯಲು ನಾವೆಷ್ಟು ಜನ್ಮದಲ್ಲಿ ಪುಣ್ಯ ಮಾಡಿದ್ದೇವೋ ಏನೋ. ಏನಣ್ಣ ಪತ್ರಿಕೆ ನೋಡಿದೆಯಾ

ಬಸವಂತ– ಯಾವ ಪತ್ರಿಕೆ.

ಶೇಖರ– ಅದೇ ವಾರಪತ್ರಿಕೆ ನಿನ್ನ ಆದರ್ಶ, ನಡೆ ನುಡಿ, ದಿಟ್ಟ ಕಾರ್ಯ ಜನತೆಯ ಸೇವೆ, ವಿವರವಾಗಿ ನಿನ್ನ ಫೋಟೋದೊಂದಿಗೆ ಹಾಕಿದ್ದಾರೆ. ಜೊತೆಗೆ ಜನಾಭಿಪ್ರಾಯ ಸಂಗ್ರಹವೂ ಇದೆ.

ಬಸವಂತ– ಬಹಳ ಸಂತೋಷ.

ಸಾವಿತ್ರಿ– ಶೇಖರ ನೀನು ದಣಿದು ಬಂದಿರುವೆ ಊಟಾ ಮಾಡುವಿಯಂತೆ ಒಳಗೆ ಬಾ.

ಬಸವಂತ– ನಾನೊಂದಿಷ್ಟು ಪಂಚಾಯ್ತಿ ಕಚೇರಿಗೆ ಹೋಗಿ ಬರ್ತೀನಿ. ಒಂದು ಸಣ್ಣ ಪಂಚಾಯ್ತಿ ಇದೆ.

ಸಾವಿತ್ರಿ– ನೀವು ಹೋಗಿ ಪಂಚಾಯ್ತಿಗೆ ಕೂತರೆ ಬರುವದು ಯಾವಗೋ ಏನೋ ಸ್ವಲ್ಪ ಊಟಾ ಮಾಡಿಕೊಂಡೇ ಹೋಗ್ರಿ.

ಶೇಖರ– ಹೌದಣ್ಣ ಊಟಾ ಮಾಡಿಕೊಂಡು ಹೋಗು, ಎರಡು ತಾಟು ಹಚ್ಚು ಅತ್ತಿಗೆಮ್ಮ. (ಊಟಕ್ಕೆ ಕೂಡುವರು ಸಾವಿತ್ರಿ ನೀಡುತ್ತಿರುವಳು, ಊಟ ಮಾಡುತ್ತಿರುವಾಗ ಭರತ್ ಪೋಲಿಸನೊಂದಿಗೆ ಬರುವನು)

ಭರತ್– ಬಸವಂತ ಯುವರ್ ಅಂಡರ್ ಅರೆಷ್ಟ.

ಬಸವಂತ– (ಆಶ್ಚರ್ಯ) ಭರತ್ ಏನಂದೆ.

ಸಾವಿತ್ರಿ– ಮೈದುನ ನನ್ನ ಕಿವಿಯಾರೆ ಕೇಳಿದ ಶಬ್ದ ಎಂಥ ಕರ್ಣಕಠೋರ ವಾಗಿದೆಯಪ್ಪ.

ಶೇಖರ– ಅಣ್ಣಾ! ದೊಡ್ಡಣ್ಣನಿಗೆ ಅರೆಷ್ಟ ಎಂದು ಹೇಳಿದೆಯಾ?

ಭರತ್– ಹೌದು.

ಶೇಖರ– ಯಾವ ಕಾರಣಕ್ಕಾಗಿ?

ಭರತ್– ಗೌಡರ ಆಳು ಹನುಮನನ್ನು ಕೊಲೆ ಮಾಡಿದ್ದಕ್ಕಾಗಿ

ಬಸವಂತ– ಆಂ...... ನಾನು ಕೊಲೆ ಮಾಡಿದೆನೇ, ಹಾಗಂತಾ ದೂರು ಕೊಟ್ಟವರಾರು?

ಭರತ್– ನೀನೇ ಕೊಲೆ ಮಾಡಿರುವೆಯೆಂದು ರಾವಣಗೌಡ ಸಾಕ್ಷಿ ಸಮೇತ ಕಂಪ್ಲೆಂಟ್ ಕೊಟ್ಟಿದ್ದಾನೆ

ಸಾವಿತ್ರಿ– (ದುಃಖ) ಮೈದುನ ನಿನ್ನ ಅಣ್ಣ ಕೊಲೆ ಮಾಡಿದರೂ ಅಂತಾ ಅವರು ಹೇಳಿದ್ರೆ ನೀನು ನಂಬ್ತಿಯೇನಪ್ಪ. ದಾರಿಯಲ್ಲಿ ಹೋಗೋ ಇರುವೆಯ ಮೇಲೆ ಕೂಡಾ ಕಾಲಿಟ್ಟು ನಡೆದವರಲ್ಲೋ ಇವರು ಇಂಥವರು ಕೊಲೆ ಮಾಡ್ತಾರಾ? ಭರತ್ ಎಂಥ ಹುಚ್ಚನಪ್ಪ ನೀನು.

ಶೇಖರ– ದೊಡ್ಡ ಕಳ್ಳನಿಗೆ ಸುಳ್ಳನೊಬ್ಬನ ಸಾಕ್ಷಿ, ಅವನ್ಯಾವ ಒಳ್ಳೇ ಮನುಷ್ಯ ಎಂದು ಅವನ ಕಂಪ್ಲೆಂಟ್ ಒಪ್ತಿಯೋ, ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕೆಂದು ಹೇಳುತ್ತಾರೆ. ಅಂಥದ್ದರಲ್ಲಿ ಯಾವನೋ ಹುಚ್ಚನೊಬ್ಬನ ಕಂಪ್ಲೇಂಟು ಕೊಟ್ಟ ಅಂತ್ಹೇಳಿ ಬಂಧಿಸಲು ಬಂದಿದ್ದೆಯಲ್ಲ ನಿನ್ನ ಬುದ್ಧಿಗೆ ಏನಾಗಿದೆ.

ಭರತ್– ನ್ಯಾಯ ನಿರ್ಣಯ ಮಾಡಿಲು ಕೋರ್ಟಿದೆ. ಅನ್ಯಾಯ ಮಾಡಿದವನನ್ನು, ಕೊಲೆಗಡುಕರನ್ನು ಬಂಧಿಸಿ ಕೋರ್ಟಿಗೆ ಒಪ್ಪಿಸುವದಷ್ಟೇ ನನ್ನ ಕರ್ತವ್ಯವಾಗಿದೆ.

ಬಸವಂತ– ಹೌದಪ್ಪ ನಿನ್ನ ಕರ್ತವ್ಯ ಮೆಚ್ಚಬೇಕಾದದ್ದೇ ಆದರೆ ಇಲ್ಲಿ ಅನ್ಯಾಯವೇ ನಡೆದಿಲ್ಲವಲ್ಲ.

ಭರತ್– ಒಂದು ಕೊಲೆಯಾದರೂ ಅನ್ಯಾಯವೇ ನಡೆದಿಲ್ಲವೆಂದು ಹೇಳುತ್ತಿರುವೆಯಲ್ಲ ನೀನೇ ಅಪರಾಧಿ ಎಂದು ಸಾಕ್ಷಿ ಸಮೇತ ಕಂಪ್ಲೆಂಟ್ ಬಂದಾಗ ಸುಮ್ಮನಿರಲು ಸಾಧ್ಯವೇ? ನೀನು ನಿರಪರಾಧಿಯಾಗಿದ್ದರೆ ಅದನ್ನು ಕೋರ್ಟಿನಲ್ಲಿ ಸಾಬೀತುಪಡಿಸು.

ಬಸವಂತ– ಅಂದರೆ ನಿನ್ನ ಕೊನೆಯ ನಿರ್ಧಾರವೇನು? ಈಗ ನನ್ನನ್ನು ಬಂಧಿಸುವೆಯಾ?

ಭರತ್– ಹೌದು, ಕಾನಸ್ಟೇಬಲ್ ಇವರನ್ನು ಬಂಧಿಸು. (ಪೋಲಿಸರು ಬರುವನು).

ಸಾವಿತ್ರಿ– (ದುಃಖ ಮತ್ತು ಸಿಟ್ಟಿನಿಂದ) ಅಯ್ಯೋ ಪಾಪಿ ! ದೇವರಂಥ ನಿನ್ನ ಅಣ್ಣನನ್ನೇ ಬಂಧಿಸುತ್ತಿರುವೆಯಲ್ಲೋ ಸಾರ್ಥಕವಾಯ್ತುಕಣೋ ಸಾರ್ಥಕವಾಯಿತು. ಭರತಾ ಹೆತ್ತ ತಂದೆ ತಾಯಿ ಇರದಿದ್ದರೂ ಅವರಿಗಿಂತಲೂ ಹೆಚ್ಚಾಗಿ ನಿನ್ನ ಜೋಪಾನ ಮಾಡಿ, ತಿನಿಸಿ ಉಣಿಸಿ ಓದಿಸಿದರಲ್ಲಾ ಅವರ ಜನ್ಮ ಸಾರ್ಥಕವಾಯಿತು ಕಣೋ ಸಾರ್ಥಕವಾಯಿತು. ನನಗೆ ಮಕ್ಕಳಾದರೆ ಎಲ್ಲಿ ನಿಮ್ಮ ಮೇಲಿನ ಮಮತೆ ಕಡಿಮೆಯಾಗುವದೋ ಎಂದು ಮಕ್ಕಳನ್ನು ಪಡೆಯದೇ ನಿನ್ನನ್ನು ಮಗನಂತೆ ಪ್ರೀತಿಸಿ ಅಪಾರವಾದ ಮಮತೆಯನ್ನೇ ಧಾರೆ ಯೆರೆದೆನಲ್ಲ, ನನ್ನ ಶ್ರಮವೂ ಸಾರ್ಥಕವಾಯಿತು ಕಣೋ ಸಾರ್ಥಕವಾಯ್ತು, ಭರತಾ ಒಮ್ಮೆ ಅವರ ಮುಖವನ್ನಾದರೂ ನೋಡೋ ಅವರು ಅಪರಾಧಿಯಂತೆ ಕಾಣುತ್ತಾರೆಯೇ, ಕೊಲೆಗಡುಕರಂತೆ ಕಾಣ್ತಾರೇನೋ ನೋಡೋ.

ಭರತ್– (ಸ್ವಗತ) ದೇವರೇ ಎಂಥ ಇಕ್ಕಟ್ಟಿನ ಸ್ಥಿತಿ ತಂದೆಯೋ ತಂದೆ. ಬಂಧಿಸಿದರೆ ಕರುಳು ಸಂಬಂಧ ಸತ್ತು ಹೋಗುತ್ತದೆ. ಬಂಧಿಸದೇ ಇದ್ದರೆ ಕರ್ತವ್ಯಕ್ಕೆ ದ್ರೋಹ ಬಗೆದಂತಾಗುತ್ತದೆ. ಅಂದು ನನ್ನಣ್ಣ ಹೇಳಿದ್ದ, ಎಂಥದೇ ಪ್ರಸಂಗ ಬಂದರೂ ಕರ್ತವ್ಯಕ್ಕೆ ದ್ರೋಹ ಬಗೆಯಬೇಡಾ ಎಂದು ನ್ಯಾಯ ನಿರ್ಣಯ ಏನೇ ಇರಲಿ, ಈ ಸಂದರ್ಭದಲ್ಲಿ ಬಂಧಿಸುವದು ನನ್ನ ಕರ್ತವ್ಯ ಅಲ್ಲವೇ? ಈ ಪರಿಸ್ಥಿತಿ ನೋಡಿದರೆ ನೌಕರಿಯನ್ನೇ ಬಿಡುವಷ್ಟು ಮನಸ್ಸಿಗೆ ನೋವಾಗುತ್ತಿದೆ ಹೌದು ನಾನು ನೌಕರಿ ಬಿಟ್ಟರೂ ಇನ್ನೊಬ್ಬ ಇನ್ಸಪೆಕ್ಟರ್ ಬಂದು ಇದೇ ಕೆಲಸ ಮಾಡುತ್ತಾನೆ. ಇಲ್ಲ! ಏನಾದರಾಗಲಿ ಕರ್ತವ್ಯ ಮರೆಯಲಾರೆ, ಕರ್ತವ್ಯಕ್ಕೆ ದ್ರೋಹ ಬಗೆಯಲಾರೆ.

ಸಾವಿತ್ರಿ– ಮಾತಾಡು ಭರತಾ ಮಾತಾಡು. ಅದೇನೋ ಒಬ್ಬನೇ ಗುನು ಗುನುಸುತ್ತಿರುವೆಯಲ್ಲ, ನನ್ನ ಗಂಡನನ್ನು ಬಂಧಿಸುವದಾದರೆ ನನಗೊಂದು ತೊಟ್ಟು ವಿಷವನ್ನು ಕೊಡು ಕುಡಿದು ಸಂತೋಷವಾಗಿ ಸಾಯ್ತೇನೆ, ನನ್ನ ಕಣ್ಣೆದುರು ಅವರನ್ನು ಬಂಧಿಸಿ ಒಯ್ಯಲು ಬಿಡಲಾರೆ ತಾರೋ ವಿಷ ತಾ.

ಬಸವಂತ– (ಸಿಟ್ಟಿನಿಂದ) ಸಾವಿತ್ರಿ, ಏನೇನೆಲ್ಲಾ ಹುಚ್ಚುಚ್ಚಾಗಿ ಮಾತನಾಡುತ್ತಿರುವಿ. ಇದನ್ನು ನನ್ನ ತಮ್ಮ ಮಾಡುತ್ತಿಲ್ಲ ಕಣೇ, ಇದರ ಹಿಂದೆ ಅವನು ಹಾಕಿರುವ ಯುನಿಫಾರ್ಮ ಮಾಡಿಸ್ತಾ ಇದೆ. ಅವನ ಜಾಗದಲ್ಲಿ ಯಾರೇ ಇದ್ದರೂ ಇದೇ ಕೆಲಸ ಮಾಡುತ್ತಿದ್ದರು, ನೋಡು ಧೈರ್ಯ ಕಳೆದುಕೊಳ್ಳಬೇಡಾ ! ಕೋರ್ಟಿದೆ, ನ್ಯಾಯ ಇದೆ, ಇವತ್ತು ಬಂಧಿಸಿದ ಮಾತ್ರಕ್ಕೆ ನನಗೇನು ಗಲ್ಲು ಶಿಕ್ಷೆಯಾಗುವುದಿಲ್ಲ ಸತ್ಯ ಸತ್ತಿಲ್ಲ ಸಾವಿತ್ರಿ ಸತ್ಯ ಸತ್ತಿಲ್ಲ. ಭರತ್ ಸಂತೋಷವಾಗಿ ಕರೆದುಕೊಂಡು ಹೋಗು, ನಿನ್ನ ಕರ್ತವ್ಯ ನಿರ್ವಹಿಸು.

ಶೇಖರ– ದೊಡ್ಡಣ್ಣನ ಮಾತು ಕೇಳಿದೆಯೇನೋ ಭರತಾ ಇಷ್ಟೆಲ್ಲಾ ಕೇಳಿದ ಮೇಲೂ ನಿನ್ನ ಮನಸ್ಸಿಗೆ ಏನು ಪರಿಣಾಮ ಆಗ್ಲಿಲ್ಲವೇನೋ ನೋಡು, ಒಳ್ಳೇ ಮಾತಿನಿಂದ ಬಿಟ್ಟು ಹೋಗು, ಬಂಧಿಸಿ ಒಯ್ಯುವದೇ ಆದರೆ ಪರಿಣಾಮ ನೆಟ್ಟಗಿರೋಲ್ಲ. ನನ್ನ ಕಣ್ಣೆದುರು ಅಣ್ಣನನ್ನು ಬಂಧಿಸಿ ಒಯ್ಯಲು ನಾನೆಂದೂ ಬಿಡುವದಿಲ್ಲ ನನ್ನ ಜೀವ ಹೋದ್ರೂ ಈ ಕೆಲಸ ಸಾಧ್ಯವೇ ಇಲ್ಲ.

ಬಸವಂತ– ಶೇಖರ ಯಾಕೋ ಹುಚ್ಚುಚ್ಚು ಮಾತಾಡ್ತಿ ನನಗೆ ಪೋಲಿಸ ಸ್ಟೇಶನ್ನಿಗೆ ಒಯ್ದು ಕೊಲೆ ಒಪ್ಪಿಕೋ ಅಂತಾ ಚಿತ್ರಹಿಂಸೆ ಕೊಡ್ತಾರಂತೇನು ಇಲ್ಲಾ ನಾಳೆ ಕೋರ್ಟಿಗೆ ಒಪ್ಪಿಸ್ತಾರೆ.

ಶೇಖರ– ಅಣ್ಣಾ! ಕಂಪ್ಲೇಂಟ ಕೊಟ್ಟವರು ಸುಳ್ಳು ಸಾಕ್ಷಿ ಕೊಟ್ಟಿದ್ದಾರೆ. ಕೋರ್ಟಿಗೆ ಬೇಕಾದದ್ದು ಸಾಕ್ಷೀನೇ ಹೊರತು ಸತ್ಯ ಅಲ್ಲ, ನೀನು ನಿರಪರಾಧಿ ಎಂದು ನಿರೂಪಿಸಲು ನಿನ್ನಲ್ಲಿ ಸಾಕ್ಷಿ ಏನಿದೆ.

ಬಸವಂತ– ದೇವರಿದ್ದಾನೆ ದೇವರನ್ನು ನಂಬಿದ ಸತ್ಯವಂತರನ್ನು ಅವನು ಎಂದಿಗೂ ಕೈ ಬಿಡೋದಿಲ್ಲ.

ಭರತ್– ಪೋಲಿಸ್ ಕರೆದುಕೊಂಡು ನಡೆ

ಸಾವಿತ್ರಿ– (ದುಃಖದಿಂದ) ರ್ರೀ.... ನೀವು ಒಂದೇ ಒಂದು ಮಾತನ್ನು ನಿಮ್ಮ ತಮ್ಮನಿಗೆ ಕೇಳಿಕೊಳ್ರಿ, ಬಿಟ್ಟು ಬಿಡುತ್ತಾರೆ ಭರತಾ ನಿನ್ನ ಕಾಲಿಗೆ ಬೀಳ್ತೀನೋ ಅವರನ್ನು ಬಿಟ್ಟು ಬಿಡೋ. ಅವರು ಇನ್ನೂ ಊಟಾ ಮಾಡಿಲ್ಲ ಕಣೋ, ಊಟಾ ಮಾಡುವಾಗಲೇ ಬಂಧಿಸಿದೆ ಯಲ್ಲೋ ಪಾಪಿ! ನಿನಗೆ ಆ ದೇವರು ಒಳ್ಳೆಯದು ಮಾಡ್ತಾನೇನೋ (ಅಳುವಳು).

ಬಸವಂತ– ಸಾವಿತ್ರಿ ಏನಾಯಿತೀಗ, ಅಳುತ್ತಿರುವೆಯೇಕೆ, ನಾನು ನಿರಪರಾಧಿ ನಿಜ. ಆದರೆ, ಅವನಿಗೆ ಕಂಪ್ಲೆಂಟ ಕೊಟ್ಟವರು ನಾನೇ ಅಪರಾಧೀ ಎಂದು ಸಾಕ್ಷಿ ಒದಗಿಸಿದ್ದಾರೆ, ಆದರೆ ನನ್ನ ತಮ್ಮ ತನ್ನ ಕರ್ತವ್ಯವನ್ನು ಸರಿಯಾಗಿಯೇ ಮಾಡುತ್ತಿದ್ದಾನೆ. ನಮ್ಮ ಬೆನ್ನ ಹಿಂದೆ ದೇವರಿದ್ದಾನೆ, ಸಾವಿತ್ರಿ ದೇವರಿದ್ದಾನೆ. ಅಳಬೇಡ ಹೋಗು ಒಳಗೆ ಹೋಗು (ಸಾವಿತ್ರಿ ಅಳುವಾಗ).

ಶೇಖರ– (ಸಿಟ್ಟಿನಿಂದ) ಅಣ್ಣಾ ! ಬೇಕಾದ್ದು ಆಗಲಿ, ನಿನ್ನನ್ನು ಕರೆದುಕೊಂಡು ಹೋಗಲು ನಾನು ಬಿಡುವುದಿಲ್ಲ. ಲೇ ಭರತ್, ದೊಡ್ಡ ಅಣ್ಣನನ್ನು ನೀನು ಮುಟ್ಟಿಯಾದರೂ ನೋಡೋ, ನಿನ್ನ ಜೀವವನ್ನೇ ತೆಗೆಯುವೆ.

ಬಸವಂತ– (ಸಿಟ್ಟಿನಿಂದ) ಶೇಖರ್, ನೀನು ಅವನ ಕೆಲಸದಲ್ಲಿ ತಡೆಯೊಡ್ಡಿದರೆ ನನ್ನಾಣೆಯಾಗಿದೆ.

ಶೇಖರ– (ದುಃಖದಿಂದ) ಅಣ್ಣಾ ! ಅಣ್ಣಾ ಏಕಣ್ಣಾ ಆಣೆ ಹಾಕಿದೆ? ನೋಡೋ, ಭರತ್ ನಮ್ಮನ್ನು ದೊಡ್ಡಣ್ಣ ಹೇಗೆ ಬೆಳಸಿದ್ದಾನೆ. ಒಂದು ಕಾಲದಲ್ಲಿ ತಾನು ಉಪವಾಸವಿದ್ದು ನಮ್ಮ ಹೊಟ್ಟೆ ತುಂಬಿಸಿದ್ದಾನೆ. ತಾನು ಹರಿದ ಬಟ್ಟೆಗಳನ್ನು ಹಾಕಿಕೊಂಡು ನಮಗೆ ಹೊಸ ಬಟ್ಟೆ ಕೊಡಿಸಿದ್ದಾನೆ. ಹಿಂದೆ ಬಡತನವಿದ್ದಾಗ ತಾನು ಓದುವುದನ್ನು ಬಿಟ್ಟು ನಮ್ಮನ್ನು ಇಷ್ಟರವರೆಗೆ ಓದಿಸಿ ನೌಕರಿಗೇರುವಂತೆ ಮಾಡಿದ್ದಾನೆ. ನಿನ್ನ ದೈವ ಚೆನ್ನಾಗಿದೆ. ಚೆನ್ನಾಗಿ ಓದಿದಿ. ಕೆಲಸವೂ ಸಿಕ್ಕಿತು. ಆದರೂ ನೀನು ಈ ಹೊಲಸು ತಿನ್ನುವ ಕೆಲಸ ಯಾಕೆ ಮಾಡ್ತಾ ಇದ್ದೀಯಾ?

ಭರತ್– (ಮನಸ್ಸಿಗೆ ಸಾಕಷ್ಟು ನೋವಾಗಿದ್ದರೂ ಸಹಿಸಿಕೊಂಡು) ಪೋಲಿಸ ನಡೆ.

ಸಾವಿತ್ರಿ– ರ್‍ರೀ..... ರ್‍ರೀ..... (ಬಸವಂತನನ್ನು ಕರೆದೊಯ್ಯುವಾಗ ಮೂರ್ಛೆ ಬಂದು ಬೀಳುವಳು)

ಬಸವಂತ– (ಧಾವಿಸಿ ಬಂದು ಎಬ್ಬಿಸುತ್ತ) ಸಾವಿತ್ರಿ..... ಸಾವಿತ್ರಿ ಇಷ್ಟ್ಯಾಕ ಮನಸ್ಸಿಗೆ ಹಚ್ಚಿಕೊಂಡಿರುವಿ ತಮ್ಮಾ ಶೇಖರ್ ಇವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗು

ಪೋಲಿಸ– ನಡೆಯಿರಿ ಸರ್, ಹೊತ್ತಾಗುತ್ತದೆ. (ಬಸವಂತನನ್ನು ಕರೆದುಕೊಂಡು ಹೋಗುವರು).

ಶೇಖರ– (ಸಿಟ್ಟಿನಿಂದ) ಲೇ.....ಗೌಡ, ನೀ ಹಚ್ಚಿದ ಈ ಬೆಂಕಿ ನನ್ನ ಮನೆತನವನ್ನು ಸುಟ್ಟೀತಲೇ, ನೀನು ಎಂಥಾ ಮೋಸಗಾರನೆಂಬುದು ನನ್ನ ತಮ್ಮ ಭರತನಿಗೆ ಗೊತ್ತಾಗ್ಲಿಲ್ಲ, ನಿನ್ನ ಸುಳ್ಳು ಕಂಪ್ಲೆಂಟನ್ನು ನಂಬಿದ ಭರತ್ ತನ್ನಣ್ಣನನ್ನೇ ಬಂಧಿಸುವಷ್ಟು ಮೂರ್ಖನಾದ. ನಾನು ಇಲ್ಲಿಯವರೆಗೆ ದೊಡ್ಡಣ್ಣನ ಮಾತು ಕೇಳಿ ಸುಮ್ಮನಿದ್ದೆ, ಇವತ್ತು ನಿನ್ನನ್ನು ಬಿಡುವುದಿಲ್ಲ. ಮಗನೇ ನೀನೆಲ್ಲಿಯೇ ಅಡಗಿ ಕುಳಿತಿದ್ದರೂ ನಿನ್ನ ರುಂಡವನ್ನು ಮುಂಡದಿಂದ ಕತ್ತರಿಸಿ ಅಗಸಿಯ ಬಾಗಿಲಿಗೆ ತೋರಣ ಕಟ್ಟುತ್ತೇನೆ. ಮಲಗಿದ್ದ ಸಿಂಹವನ್ನು ಕೆಣಕಿ ಎಬ್ಬಿಸಿದ್ದೀಯಾ ನಿನ್ನ ಪಾಲಿಗೆ ನಾನು ಬರೀ ಸಿಂಹವೇ ಅಲ್ಲ, **"ಸಿಡಿದೆದ್ದ ಸಿಂಹ"** (ಗೋಡೆಗೆ ನೇತು ಹಾಕಿರುವ ಕೊಡಲಿಯನ್ನು ತೆಗೆದುಕೊಂಡು) ಲೇ.... ಗೌಡ ನಿನ್ನ ಗಂಟಲನ್ನು ಸೀಳಿ ಬಿಸಿ ರಕ್ತವನ್ನು ಗಟಗಟನೆ ಕುಡಿಯದಿದ್ದರೆ ನನ್ನ ಹೆಸರು ಶೇಖರನೇ ಅಲ್ಲ. (ಹೋಗುವನು).

===***=======***===

ಪ್ರವೇಶ–೨೮

ರಸ್ತಾ ಸೀನು

(ಕಿತಾಪತಿ ಗಂಭೀರನಾಗಿ ಪ್ರವೇಶಿಸಿ)

ಕಿತಾಪತಿ– ಕಾಲ ಕೆಟ್ಟೋಯ್ತುರೀ, ಜೀವಮಾನದುದ್ದಕ್ಕೂ ಗೌಡರೇ ತನ್ನ ಜೀವ ಎಂದು ತಿಳಿದಿದ್ದ ಆ ಹನುಮನನ್ನು ಈ ರೀತಿ ಹೊಡೆಯೋದೇನ್ರೀ ಥೇ.....ಥೇ... ಈ ಮಗಾ ಗೌಡ ಹನುಮ ಸಿಗದಿದ್ದರೆ ಎಲ್ಲಿ ನನ್ನ ಹೊಡೀತಿದ್ನೋ ಏನೋ ಒಟ್ಟಿನ್ಯಾಗ ಅವನೊಂದು ಕೊಲೆ ಮಾಡಿ ದೇವರಂಥಾ ಮನಷ್ಯಾ ಬಸವಂತನ ಮ್ಯಾಲೆ ಈ ಅಪವಾದ ಹೊರಿಸಬೇಕಾಗಿತ್ತು, ಮನುಷ್ಯ ತನ್ನ ಸೇಡು ತೀರಿಸಿಕೊಳ್ಳಬೇಕಾದರೆ ತನ್ನವರೆನ್ನುವದನ್ನೂ ಮರೆತು ಎಂಥ ಹೇಯ ಕೆಲಸಕ್ಕೆ ಇಳಿತಾನ ನೋಡ್ರಿ ಹಾವಿಗೆ ಎಷ್ಟು ದಿನ ಹಾಲೆರದರೂ ಅದು ತನ್ನ ವಿಷಾ ಕಾರುವ ಗುಣ ಬಿಡ್ತಾದನ್ನೋದು ಸುಳ್ಳು. ಈ ಬದ್ಮಾಷ್ ನನ್ನ ಮಗ ಗೌಡ ಒಂದು ಕಾಲಕ್ಕ ನನ್ನ ಮಗಳ ಮ್ಯಾಲೆ ಕಣ್ಣು ಹಾಕಿದ್ನರೀ ಅಂವಾ ಕೊಲೆ ಮಾಡುವಾಗ ನಡೆದ ಎಲ್ಲಾ ಸಂಭಾಷಣೆಯನ್ನು ಟೇಪ್ ರಿಕಾರ್ಡ್ ಮಾಡಿಕೊಂಡೀನಿ ಸಮಯ ಬಂದ್ರ ಹೇಳ್ತೀನಿ ಮಗನಿಗೆ.

ಶೇಖರ– (ಕೈಯಲ್ಲಿ ಕೊಡ್ಲಿ ಹಿಡಿದುಕೊಂಡು ಬರುವನು) ಏ ಕಿತಾಪತಿ ನನ್ನಣ್ಣ ಕೊಲೆ ಮಾಡಿದ್ದಾನೆಂದು ನಿನ್ನ ಗೌಡ ಸಾಕ್ಷಿ ಸಮೇತ ಕಂಪ್ಲೆಂಟ ಕೊಟ್ಟಿದ್ದಾನೆ. ಯಾರು ಆ ಸಾಕ್ಷಿಗಳು?

ಕಿತಾಪತಿ– ಅದೇರಿ ಆ ಮ್ಯಾಲಿನ ಕೇರಿ ಸಿದ್ಯಾರಿ ಮತ್ತೆ ಆ ಬುಡ್ಡ ಧರ್ಮ್ಯಾರಿ, ಅವರಿಗೆ ಗೌಡ ಸೆರೆ ಕುಡಿಸಿ ಸುಳ್ಳು ಸಾಕ್ಷಿ ಹೇಳ್ಲಾಕ ಹಚ್ಚ್ಯಾನರೀ.

ಶೇಖರ– ಸುಳ್ಳು ಸಾಕ್ಷಿ ಅಂದ್ರ.....ಕೊಲೆ ನನ್ನಣ್ಣನು ಮಾಡಿಲ್ಲವೆನ್ನುವದು ನಿನಗೂ ಗೊತ್ತಿದೆ.

ಕಿತಾಪತಿ– ಹಾಂಗ ನಾ ಎಲ್ಲಿ ಹೇಳೀನ್ರೀ, ಈ ವಿಷಯದಾಗ ನನಗೇನೂ ಗೊತ್ತಿಲ್ಲಬಿಡ್ರಿ.

ಶೇಖರ– (ದೈನ್ಯ) ಕಿತಾಪತಿ ನನ್ನ ದೊಡ್ಡಣ್ಣ ಎಂಥವ ಅನ್ನೋದು ನಿನಗೂ ಗೊತ್ತ ಐತಿ. ದೇವರಂಥಾ ಮನುಷ್ಯಾ, ಅಂಥಾ ಮನುಷ್ಯನ ಮೇಲೆ ಕೊಲೆ ಅಪರಾದ ಹೊರಿಸಿ ಕೈಗೆ ಬೇಡಿ ಹಾಕ್ಕೊಂಡು ಜೈಲಿಗೆ ಎಳೆಕೊಂಡ್ಹೋಗುವಂಗ ಮಾಡಿದ್ದಾನೆ ಆ ನಿನ್ನ ಗೌಡ. ಗೌಡ ಕೆಟ್ಟ ವಿಷಜಂತು. ಇವತ್ತು ನಮಗ ಅನ್ಯಾಯ ಮಾಡಿದ್ದಾನೆ. ನಾಳೆ ನಿಮಗೂ ಮಾಡೋಲ್ಲಾಂತ ಏನು ಗ್ಯಾರಂಟಿ ಅದ, ನೋಡು ಕಿತಾಪತಿ ನೀನು ವಯಸ್ಸಿನ್ಯಾಗ ಹಿರಿಯಾ ಅದೀದಿ ಮತ್ತು ತಿಳಿದಾವಿದ್ದೀದಿ ನಿನಗ ಕೈ ಮುಗದ ಕೇಳ್ತೀನಿ ಖರೇ ಹೇಳು ಈ ಕೊಲೆ ಯಾರು ಮಾಡಿದ್ದು?

ಕಿತಾಪತಿ– ಇಲ್ರೀ ನನಗೇನೂ ಗೊತ್ತಿಲ್ಲ?

ಶೇಖರ– ಒಳ್ಳೇ ಮಾತಿನಿಂದ ನೀ ಹ್ಯಾಂಗಲೇ ಹೇಳ್ತೀ ಕಿತಾಪತಿ. (ಕುತ್ತಿಗೆಗೆ ಕೊಡಲಿ ಹಿಡಿದು) ಖರೇ ಹೇಳು ಹೇಳದಿದ್ರ ನಿನ್ನ ರುಂಡ ಮುಂಡದಿಂದ ಬೇರೆಯಾಗುತ್ತಿದೆ.

ಕಿತಾಪತಿ– ಇಲ್ರೀ ನಾ ಏನಂತ ಹೇಳ್ಲಿ.

ಶೇಖರ– ಇದ್ದದ್ದನ್ನು ಇದ್ದಂತೆಯೇ ನಿಜವನ್ನು ಬೊಗಳಲೇ ಬೋಳಿಮಗನೇ. ನಾ ಹೆದರಿಸಿ ಕೇಳ್ತೀನಂತಲ್ಲಾ, ನಿನ್ನ ಹೃದಯದಿಂದಾ ಹೇಳೋ ನಿನ್ನ ಮನೀ ದೇವರ ಮ್ಯಾಲೆ ಆಣೆ ಮಾಡಿ ಹೇಳೋ ಅಲ್ಲಿ ನಡೆದದ್ದು ಖರೇ ಏನದ ಅಂತ ನೋಡು ಸಾತ್ವಿಕರಿಗೆ ಸಿಟ್ಟು ಬರೋದಿಲ್ಲ. ಬರಬಾರದ ಬಂತು ಅಂದ್ರ ಆ ಪರಶಿವ ಬಂದ್ರೂ ಬಿಡೋದಿಲ್ಲ. ಸಿಂಹ ಕೆಣಕಿ ಜಗಳಕ್ಕೆ ನಿಲ್ಲುವುದಿಲ್ಲ ಇವತ್ತು ಆ ನಿನ್ನ ಗೌಡ ಸಿಂಹವನ್ನು ಕೆಣಕಿದ್ದಾನೆ ರಾಜಕೀಯ, ಹೊಲದ ವಿಷಯ ಬಂದಾಗ ಸುಮ್ಮನಿದ್ದೆವು. ನಮ್ಮ ಜೀವದಂತಿರುವ ನಮ್ಮಣ್ಣನ ಜೀವಕ್ಕೆ ಧಕ್ಕೆ ಬಂದಾಗ ನಾನು ಸುಮ್ಮನಿರಲು ಸಾಧ್ಯವಿಲ್ಲ. ನಿಮ್ಮ ಗೌಡನ ಪಾಲಿಗೆ ಈ ಸಿಂಹ "ಸಿಡಿದೆದ್ದ ಸಿಂಹ" ಹೇಳೋ ಕಿತಾಪತಿ ಖರೇ ಹೇಳೋ (ಕೊಡಲಿ ಹಿಡಿಯುವನು)

ಕಿತಾಪತಿ– ಹೇಳ್ತೀನ್ರಿ ಈ ಕೊಲೆ ಗೌಡನೇ ಮಾಡ್ಯಾನ ಕೊಲೆ ಮಾಡುವಾಗಿನ ಘಟನೆ ಈ ಟೇಪ್‌ನಲ್ಲಿ ರಿಕಾರ್ಡ್ ಮಾಡೀನಿ ತಗೊಳ್ರಿ, (ಟೇಪ್ ರಿಕಾರ್ಡರ್ ಕೊಡುವನ).

ಶೇಖರ– ಗೌಡ, ಇವತ್ ಮುಗಿತಲೇ ನಿನ್ನ ಕತಿ. ಎಲ್ಲೇ ಅಡಗಿ ಕುಳಿತರೂ ನಿನ್ನನ್ನು ಸಿಗಿದು ಹಾಕದೆ ಬಿಡಲಾರೆ. ಈಗ ಆ ಗೌಡ ಎಲ್ಲಿದ್ದಾನೆ.

ಕಿತಾಪತಿ– ಮನ್ಯಾಗಿದ್ರ ಸಾಲಗಾರರ ಉಪ್ಪದ್ರಂತ್ಹೇಳಿ ಗುಡ್ಡದಲ್ಲಿರುವ ಆಲದ ಮರದ ಹತ್ತಿರ ಗುಹೆ ಐತಿ ನೋಡ್ರಿ ಅಲ್ಲಿ ಕುಡಕೊಂತ ಕುಂತಾನ.

ಶೇಖರ– ಕಿತಾಪತಿ, ನೀ ಈ ಎಲ್ಲಾ ವಿಷಯ ಹೇಳಿ ಮಹದುಪಕಾರ ಮಾಡಿದೆ ನಾಳೆ ಕೋರ್ಟಿನಲ್ಲಿ ಈ ನಿರ್ಣಯ ಇದೆ ಸುಳ್ಳು ಸಾಕ್ಷಿದಾರರನ್ನು ಕರೆದುಕೊಂಡು ಬಾ. ನಾನು ಆ ಗೌಡ ಎಲ್ಲಿದ್ದರೂ ಎಳೆದು ತರುತ್ತೇನೆ (ಹೋಗುವನು).

ಕಿತಾಪತಿ– ಇಡೀ ನನ್ನ ಜೀವನದಾಗ ಬರೇ ಕಿತಾಪತಿ ಕೆಲಸಾ ಮಾಡಿ, ಸೀತಾಪತಿ ಎಂದಿದ್ದ ನನ್ನ ಹೆಸರನ್ನು ನನ್ನ ಕಾರ್ಯದಿಂದಲೇ ಕಿತಾಪತಿ ಎನ್ನುವಂತೆ ಮಾಡಿದ್ದೆ. ಕೊನೇ ಕಾಲಕ್ಕೆ ಈ ಒಂದು ಒಳ್ಳೇ ಕೆಲಸಾ ಮಾಡಿದ್ನಲ್ಲಂತ ಸಂತೋಷ ಆಯ್ತರಿ. ಆಂ..... ಅಲ್ಲಾ ಎರಡು ದಿವಸಾಯ್ತು ನನ್ನ ಮಗಳು ಮನಿ ಬಿಟ್ಟು ಹೋದಾಕಿ, ಇನ್ನೂ ಬಂದಿಲ್ಲ ಎಲ್ಲಿಗೆ ಹೋಗಿರಬೇಕು, ಗಂಡು ಅಂದ್ರ ಇವಳೇ ಹೆಣ್ಣಂದ್ರೇ ಇವಳೇ ಅಂತ ಎಷ್ಟ ಪ್ರೀತಿಲಿಂದ ಬೆಳೆಸೀನಿ ವಯಸ್ಸಿಗೆ ಬಂದ್ ಹುಡುಗಿ ಏನಾದರೂ ಹೆಚ್ಚೂ ಕಡಿಮೆಯಾದ್ರ ಏನು ಮಾಡೋದು. ಎಲ್ಲಿ ಹೋಗಿ ಕುಂತಳೋ ಏನೋ ಊರು–ಕೇರಿ ಹುಡುಕದರಾಗ ಸಾಕಾಯ್ತು ಎಮ್ಮಿ ಹಾಲು ಹಂಗೇ ಉಳದಾವ. ಇಲ್ಲಿ ನಂದೂ ತಪ್ಪೈತ್ರಿ ಟೈಮಿಗೆ ಸರಿಯಾಗಿ ಮದುವೆ ಮಾಡಿದ್ರ ಈ ಪರಿಸ್ಥಿತಿ ಬರ್ತಿದ್ದಿಲ್ಲ. ಏನಾದರಾಗಲಿ ಈ ವೈಶಾಖದಾಗ ಬಾಜಿ ಬಾರಿಸೇ ಬಿಡ್ತೀನಿ. (ಚಂಪಾಕಲಿ, ಪೋಲಿಸ್‌ನನ್ನು ಮದುವೆಯಾಗಿ ಬಂದು ಕಿತಾಪತಿ ಕಾಲಿಗೆ ನಮಸ್ಕರಿಸುವರು)

ಚಂಪಾಕಲಿ– ನಮಗೆ ಆಶೀರ್ವಾದ ಮಾಡಪ್ಪ.

ಕಿತಾಪತಿ– ಏ....ಏ....ಚಂಪವ್ವ ಏನ್ ಮಾಡಿದ್ರೆವ್ವ ಇದು ಹಿಂಗ್ ಹಾರಾ ಹಾಕ್ಕೊಂಡು ಬಂದು ಆಶೀರ್ವಾದ ಮಾಡ್ರಿ ಅಂತಾ ಕೇಳಿದ್ರ ಏನ್ ಹೇಳ್ಲಿ ನಿನ್ನ ಪಾಲಿಗೆ ನಿಮ್ಮಪ್ಪೇನು ಸತ್ತಿದ್ನೇನವ್ವ ವಿಷಯ ಮೊದಲೇ ಹೇಳಿದ್ರ ಮದುವೆ ಧಾಂ ಧೂಂ ಮಾಡ್ತಿದ್ದೆ ಹುಡುಗ ಯಾರು? (ನೋಡುತ್ತ).

ಚಂಪಾಕಲಿ– ಪೋಲಿಸ್ ಸತ್ಯಣ್ಣನವರು.

ಕಿತಾಪತಿ– ಇಂವಾ ಮೊದಲು ಭೆಟ್ಟಿಯಾದಾಗ ಅನುಮಾನ ಬಂದಿತ್ತು, ನಿನ್ನ ಹಾಲಿನ ಖಾಯಂ ಗಿರಾಕಿ ಆಗಿ ಒಬ್ನೇ ಇದ್ರೂ ನಾಕು ಲೀಟರ್ ಹಾಲು ತಗೋತಾನ ಅಂದಾಗ ಡೌಟ್ ಬಂದಿತ್ತೆವೋ ತಮ್ಮ ಪೋಲಿಸಾ ಪುಣ್ಯ ಮಾಡೀದಿ ನನಗೊಬ್ಬಳೇ ಮಗಳಿವಳು ಬಹಳ ಪ್ರೀತಿಲಿಂದ ಬೆಳೆಸೀನಿ ಚೆಂದ್ ನೋಡಿಕೋ.

ಪೊಲೀಸ– ಆಯ್ತರಿ ಯಜಮಾನರೇ, ಚಿಂತಿ ಮಾಡಬ್ಯಾಡ್ರಿ ಇವಳನ್ನು ನನ್ನ ಹೃದಯದಾಗಿಟ್ಟು ಪ್ರೀತಿಸ್ತೀನಿ.

ಕಿತಾಪತಿ– ಅಷ್ಟ ಪ್ರೀತಿ ಬ್ಯಾಡ ತಮ್ಮಾ, ಹೆಂಡ್ತೀ ಅಂತಾ ತಿಳಕೊಂಡು ನಡದ್ರ ಸಾಕು ನೀವು ಚೆಂದ್ ಸಂಸಾರ ಮಾಡಿದ್ರ ಅದೇ ಸಂತೋಷ.

ಪೊಲೀಸ– ಅದರ ಚಿಂತಿ ಮಾಡಬ್ಯಾಡರಿ ನನಗೂ ಯಾರಿಲ್ಲ ನೀವಂದ್ರ ನನ್ನ ತಂದಿ ನೋಡಿಕೊಂಡಂಗ ನೋಡಿಕೊಳ್ತೀನಿ ಚಿಂತಿ ಮಾಡಬ್ಯಾಡ್ರಿ.

ಕಿತಾಪತಿ– ಚಂಪವ್ವ, ಅಂತೂ ಒಳ್ಳೇ ವರಾನೇ ಹುಡುಕಿಯವಾ ನನ್ನ ಜವಾಬ್ದಾರಿ ನಾ ಮಾಡದಿದ್ರು ನೀ ನಿನ್ನ ದಾರಿ ಹುಡುಕಿಕೊಂಡಿ (ಡಾಕ್ಟರ ರಂಗಣ್ಣ, ಕೈಯಲ್ಲಿ ಬ್ಯಾಗು ಹಿಡಿದು ಬರುವನು) ಯಾಕ್ರೀ ಡಾಕ್ಟರಾ ಊರಿಗೆ ಹೊಂಟ್ರೇನು.

ರಂಗಣ್ಣ– ಬರೀ ಊರಿಗಲ್ಲ, ಈ ಊರಿಗೆ ನಮಸ್ಕಾರ ಹೇಳಿ ಮುಂದಿನ ಊರಿಗೆ ಹೊಂಟೇನಿ.

ಕಿತಾಪತಿ– ಯಾಕ್ರಿ ನಿಮಗೇನು ವರ್ಗಾವಣೆಯಾಯ್ತೇನು?

ರಂಗಣ್ಣ– ಎಲ್ಲಿ ವರ್ಗಾವಣೇರಿ ನಾವು ಎಲ್ಲಿ ನೆಲೆ ನಿಲ್ಲತೇವು ಅದೇ ನಮ್ಮ ಊರು ಊರು ಬ್ಯಾಸರಾದಾಗ, ಗಿರಾಕಿ ಗಿಟ್ಟಲಾರದಾಗ ಊರು ಬಿಡ್ತೇವಲ್ಲ ಅದೇ ನಮ್ಮ ವರ್ಗಾವಣೆ ಯಜಮಾನರೇ ಅಕ್ಕಾರೆ ನಾ ಈ ಊರಾಗ ಇರೋತನಕ ಬಹಳ ಉಪಕಾರ ಮಾಡಿದ್ರಿ ಬರ್ತೀನಿ.

ಚಂಪಾಕಲಿ– ಊರ ಬಿಡಬ್ಯಾಡ್ರಿ ಡಾಕ್ಟರ ಸಾಹೇಬ್ರೇ ನೀವು ಊರು ಬಿಟ್ರ ಪೇಶಂಟುಗಳ ಗತಿ ಹ್ಯಾಂಗಾ

ಕಿತಾಪತಿ– ಏಕ್‌ದುಮುಕಿ ಊರು ಬಿಡಾಕತ್ನಲ್ಲ ಈ ಡಾಕ್ಟರ್ ಯಾಕ?

ಪೊಲೀಸ– ಯಾಕಂತ ಕೇಳಿದ್ರ ಹೂಳಿಕಿ ಭಾಳದ ಡಾಕ್ಟ್ರೆ ಮುಂದಿನ ಊರಾಗರ ಸರಿಯಾಗಿ ಇರ್ರಿ.

ಕಿತಾಪತಿ– ನನಗೇನು ಒಂದು ಅರ್ಥವಾಗವಲ್ದ್ರೆಪ್ಪ.

ಚಂಪಾಕಲಿ– ಅರ್ಥ ಆಗಲಾರ್ದೆ ಘೋಲೊನೋಯಪ್ಪ ಅರ್ಥ ಆದ್ರ ಈ ಡಾಕ್ಟರ ಒಂದು ಘಳಿಗಿ ಇಲ್ಲಿ ನಿಂದ್ರಾಂಗಿಲ್ಲ.

ರಂಗಣ್ಣ– ಇರಲಿ, ನಡಿತಿನ್ರಪ್ಪೊ. (ಹೋಗುವನು).

ಕಿತಾಪತಿ– ಇದು ಭಾಳ ವಿಚಿತ್ರ ಅದ, ಇರಲಿ ಮಗಳಾ ನಾ ಮನಿಗೆ ಹೋಗಿ ಸಿಹಿ ಅಡ್ಗಿ ಮಾಡಿಸ್ತೀನಿ ಮದುವೆಯಂತೂ ಗಡಿ ಬಿಡಿಯಲ್ಲಿ ಆಯ್ತು. ಜನರಿಗೆ ಊಟ ಹಾಕಿಸ್ಲಿಲ್ಲ ಇವತ್ತು ಸೋಬಾನ ಊಟ ಹಾಕಸ್ತೀನಿ. ಸಾವಕಾಶ ಬರ್ರಿ. (ಹೋಗುವನು).

ಚಂಪಾಕಲಿ– ಕೇಳಿದ್ರೇನ್ರೀ ನಮ್ಮಪ್ಪನಿಗೆ ಈ ಮದುವೆ ಎಷ್ಟು ಸಂತಸ ತಂದಾದ. ನಾ ಮೊದಲೇ ಹೇಳಿಲ್ಲ ನಮ್ಮಪ್ಪಂದು ಭಾಳ ದೊಡ್ಡದು ಮನಸ್ಸು ಅಂತ.

ಪೊಲೀಸ– ಅಂವಾ ಹೋಗಿ ಅಡಿಗೆ ಮಾಡಿಸೋತನಕ ನಾವು ಆರಾಮ ಹಕ್ಕಿಯಂತೆ ಹಾಡಿ ಕುಣಿದಾಡಿ ಹೋಗೋಣ ಬಾ (ಇಬ್ರೂ ಹಾಡಿ ಕುಣಿದಾಡಿ ಹೋಗುವರು).

===***====***===

ಪ್ರವೇಶ–೨೯

ಗುಹೆ

(ದೊಡ್ಡ ಆಲದ ಮರ, ಪಕ್ಕದಲ್ಲಿ ಗಿಡಗಳು, ಗುಹೆಯಂಥಹ ಸನ್ನಿವೇಶ ಮಬ್ಬುಗತ್ತಲು)

ಗೌಡ– (ಕುಡಿಯುತ್ತ) ಛೇ, ಹೇಗಿದ್ದ ನನ್ನ ಸ್ಥಿತಿ ಹೇಗಾಯ್ತಲ್ಲ, ಊರಲ್ಲಿ ಹುಲಿಯಂತೆ ಮೆರೆದ ನಾನು ಇಂದು ಮುಖ ಮರೆಸಿ ತಿರುಗುವ ಸ್ಥಿತಿ ಬಂದಿದೆ. ಊರಲ್ಲಿದ್ದರೆ ಸಾಲಗಾರರ ಕಾಟ. ಅದಕ್ಕೆಂದೇ ನೆಮ್ಮದಿಯಾಗಿ ಕುಡಿಯುತ್ತ ಈ ಕಾಡಿನಲ್ಲಿದ್ದೇನೆ ನನ್ನ ವಿರೋಧಿ ಬಸವಂತ ಕೊಲೆಗಾರನಾಗಿ ಜೈಲು ಕಂಬಿ ಎಣಿಸುತ್ತಿದ್ದಾನೆ. ಆ ಮಗನಿಗೆ ನಾಳೆ ಗಲ್ಲು ಶಿಕ್ಷೆ ಆಗದಿದ್ದರೂ ಸಾಯುವವರೆಗೂ ಕೊಳೆಯುವಂಥ ಶಿಕ್ಷೆ ಆಗಬಹುದು.

ಶೇಖರ– (ಹಿನ್ನೆಲೆಯಲ್ಲಿ) ಲೇ..... ಗೌಡ, ಎಲ್ಲಿ ಅಡಗಿ ಕುಳಿತಿರುವೆಯಲೇ ತಾಯ್ಗಂಡಾ.

ಗೌಡ– (ಹೆದರಿ) ಆಂ.....ಇದೇನಪ್ಪ ತನ್ನ ಅಣ್ಣಾಗ ಜೈಲಿಗಿ ಕಳಿಸಿ ನಂತ್ಹೇಳಿ, ನನ್ನ ಮ್ಯಾಲ ಸೇಡು ತೀರಿಸಿಕೊಳ್ಳಿಕ್ಕ ಹೊಂಟಾಂಗ್ ಕಾಣಸ್ತಾದ. ಈ ಹುಂಬನ ಕೈಯಾಗ ಸಿಕ್ಕು ಫಜೀತಿಯಾಗುವ ಬದಲು ತಪ್ಪಿಸಿಕೊಂಡರಾಯ್ತು. ಇಲ್ಲೇ ಗಿಡದ ಬಡ್ಯಾಗ ಅವಿತು ಕುಳಿತರಾಯ್ತು. (ಹೋಗುವಾಗ ಶೇಖರ, ವೇಗದಿಂದ ಬಂದು ಹಿಂದಿನ ಅಂಗಿ ಹಿಡಿದು ಎಳೆಯುವನು ಮುಬ್ಬುಗತ್ತಲೆಯಲ್ಲಿ ಒಬ್ಬರಿಗೊಬ್ಬರು ಸ್ವಲ್ಪ ಹೊತ್ತಿನವರೆಗೆ ಎಳೆದಾಡಿ ಹೊಡೆದಾಡುವರು ನಂತರ)

ಶೇಖರ– ಲೇ, ತಾಯ್ಗಂಡ ಗೌಡ ನಿಜ ಬೊಗಳಲೇ ಹನುಮನನ್ನು ಯಾರು ಕೊಂದಿದ್ದಾರೆ.

ಗೌಡ– ಬಸವಂತನೇ ಕೊಲೆ ಮಾಡಿದ್ದಾನೆ ಎಂದು ಸಾಕ್ಷಿ ಸಮೇತವಾಗಿ ಅರ್ಜಿ ಕೊಟ್ಟಿದ್ದೇನೆ. ಆ ಮಗಾ ನನಗೇ ಕೊಲೆ ಮಾಡಲು ಬಂದಿದ್ದ ತಪ್ಪಿ ನನ್ನ ಆಳಿಗೆ ಹತ್ತಿತು.

ಶೇಖರ– (ಸಿಟ್ಟಿನಿಂದ) ನನ್ನ ಅಣ್ಣನಿಗೆ ಕೆಟ್ಟ ಮಾತುಗಳಿಂದ ಮಾತನಾಡಿದರೆ ನಿನ್ನನ್ನು ಸುಟ್ಟುಬಿಡುವೆ. ಜೀವನದಲ್ಲಿ ಒಂದು ಇರುವೆಯನ್ನು ಕೂಡಾ ನೋಯಿಸಿದವನಲ್ಲ. ಅಂಥವನಿಗೆ ಕೊಲೆಗಾರನ ಪಟ್ಟವನ್ನು ಕಟ್ಟಿದ್ದಿಯಾ? ಏ....ಗೌಡ ಸೇಡು ತೀರಿಸಿಕೊಳ್ಳಬೇಕಾದರೆ, ಎದುರಿಗೆ ನಿಂತು ಹೋರಾಡಿ ಸೇಡಿದ್ದರೆ ತೀರಿಸಿಕೊಳ್ಳಬೇಕು. ಕೈಲಾಗದ ಹೇಡಿಯಂತೆ ಇಲ್ಲದ್ದೊಂದು ಅಪವಾದವನ್ನು ಯಾಕೆ ಹೊರಿಸಿದಿ.

ಗೌಡ– ಇದ್ದದ್ದನ್ನು ಇದ್ದಂತೆ ಹೇಳಿದರೆ ನಿನಗ್ಯಾಕೆ ಸಿಟ್ಟು ಬರತೈತಲೇ ತಮ್ಮಾ. ನಾಳೆ ಕೋರ್ಟಿನ್ಯಾಗ ಏನಾಗಬೇಕಾಗಿದೆಯೋ ಅದು ಆಗೇ ಆಗ್ತಾದ ಸುಮ್ನ ಹೋಗು.

ಶೇಖರ– ಸುಮ್ಮನೇ ಹೋಗಲಿಕ್ಕಾಗಿ ನಾನಿಲ್ಲೀವರೆಗೂ ಬಂದಿಲ್ಲಬೇ ಗೌಡ. ನೀನೀ ಕೊಲೆ ಮಾಡಿ ನನ್ನ ಅಣ್ಣನ ಮ್ಯಾಲ ಅಪವಾದವನ್ನು ಹೊರಿಸಿದ್ದೀಯಾ? ಆಂ......!

ಗೌಡ– ಹಾಗಾದರೆ ನಾನೇ ಕೊಲೆಯನ್ನು ಮಾಡಿದ್ದೇನೆ ಎಂಬುದಕ್ಕೆ ಸಾಕ್ಷಿ ಏನಿದೆ ನಿನ್ನಲ್ಲಿ?

ಶೇಖರ– ನೀನು ಸೆರೆಯನ್ನು ಕುಡಿಸಿ ಸಾಕ್ಷಿ ಹೇಳಿಸಿದ್ದೆಯಲ್ಲ ಅವರಿಬ್ಬರನ್ನು ನಮ್ಮ ಮನೆಯಲ್ಲಿ ಹಿಡಿದು ಕಟ್ಟಿ ಹಾಕಿದ್ದೇನೆ. ನೀನೇ ಹನುಮನನ್ನು ಕೊಲೆ ಮಾಡಿದಾಗ ನೀನಾಡಿದ ಮಾತು ಮತ್ತು ಹನುಮನು ಆಡಿದ ಮಾತುಗಳನ್ನು ಎಲ್ಲವನ್ನು ಟೇಪರಿಕಾರ್ಡಿನಲ್ಲಿ ಟೇಪ ಮಾಡಿದ ಕ್ಯಾಸೆಟ್ಟು ನನ್ನಲ್ಲಿದೆ.

ಗೌಡ– (ಹೌಹಾರಿ ಗಾಬರಿಯಿಂದ) ಹಾಂ..... ನೀನು ಹೇಳುತ್ತಿರುವುದೆಲ್ಲವೂ ನಿಜವೇ?

ಶೇಖರ– ನಿಜ ಗೌಡ ನಿಜ, ನಿನ್ನನ್ನು ಹೆಡಮುರಿಗೆ ಕಟ್ಟಿ ಹೊತ್ತುಕೊಂಡು ಹೋಗುತ್ತೇನೆ. ಒಳ್ಳೇ ಮಾತಿನಿಂದ ನೀನೆ ಕೊಲೆಗಾರನೆಂದು ಒಪ್ಪಿಕೊಂಡೆಯಾದರೆ ಸರಿ, ಇಲ್ಲದಿದ್ದರೆ ಇಲ್ಲೇ ನಿನ್ನ ಕಥೆಯೂ ಸಮಾಪ್ತವಾಗುತ್ತದೆ.

ಗೌಡ– ಏನೋ ನನ್ನನ್ನು ಹೆದರಿಸುತ್ತಿಯಾ ನಿನ್ನಂಥವರನ್ನು ನಾನು ಎಷ್ಟು ಜನರನ್ನು ನೋಡಿರಲಿಕ್ಕಿಲ್ಲ.

ಶೇಖರ– ಹೀಗೋ..... ಹಾಗಾದರೆ ಈಗ ನೀನು ನನ್ನ ಜೊತೆಗೆ ಬರುವುದಿಲ್ಲವೇನೋ?

ಗೌಡ– ಸಾಧ್ಯವೇ ಇಲ್ಲಾ !

ಶೇಖರ– ಲೇ ಗೌಡ, ತಾಯ್ಗಂಡಾ, ನೆನಸಿಕೋ ನಿನ್ನ ಮನೆ ದೇವರನ್ನ..... (ಕೊಡಲಿಯನ್ನು ಗೌಡನ ಕುತ್ತಿಗೆಯ ಬಳಿ ಹಿಡಿದು ಕಣ್ಣು ಹಿಗ್ಗಿಸಿ ಒಂದು ಸುತ್ತು ತಿರುಗುವರು. ನಂತರ ಗೌಡ ಕೆಳಗೆ ಬೀಳುವನು. ಗೌಡನಿಗೆ ಹೊಡೆಯಲು ಕೊಡ್ಲಿ ಮೇಲೆತ್ತಿದಾಗ ಹಿನ್ನೆಲೆಯಲ್ಲಿ ವಿವೇಕವಾಣಿ.....).

ಹಿನ್ನೆಲೆ– ನಿಲ್ಲು ಶೇಖರ್, ಈ ಗೌಡನನ್ನು ಕೊಂದು ನೀನೂ ಜೈಲಿಗೆ ಹೋಗಬೇಕೆಂದಿರುವೆಯಾ? ಈಗಾಗಲೇ ನಿನ್ನಣ್ಣ ಕೊಲೆಗಾರನೆಂಬ ಸುಳ್ಳು ಅಪವಾದವನ್ನು ಹೊತ್ತು ನ್ಯಾಯಾಲಯದ ಕಟಕಟೆಯಲ್ಲಿ ನಿಂತಿರುತ್ತಾನೆ. ನಾಳೆ ನ್ಯಾಯ ನಿರ್ಣಯವಿದೆ. ನೀನೀಗ ಸಂಗ್ರಹಿಸಿರುವ ಸಾಕ್ಷಿ ಪುರಾವೆಗಳನ್ನು ಕೋರ್ಟಿನಲ್ಲಿ ಹಾಜರುಪಡಿಸಿ ನಿಮ್ಮ ಅಣ್ಣ ನಿರಪರಾಧಿ ಎಂಬುದನ್ನು ಸಾಬೀತುಪಡಿಸು. ಇದನ್ನು ಬಿಟ್ಟು ಗೌಡನನ್ನು ಕೊಂದು ಅಪರಾಧಿಯಾಗಬೇಡಾ, ಈ ಗೌಡನನ್ನು ಕೋರ್ಟಿಗೆ ಹಾಜರುಪಡಿಸು.

ಶೇಖರ– ಹೌದು.... ಇಂಥಾ ಸಂದರ್ಭದಲ್ಲಿ ನಾನು ವಿವೇಕ ಕಳೆದುಕೊಳ್ಳಬಾರದು. (ಗೌಡನಿಗೆ) ಗೌಡ, ನೀನೇ ಕೊಲೆಗಾರ ಎಂದು ನಾಳೆ ಕೋರ್ಟಿನಲ್ಲಿ ಒಪ್ಪಿಕೊಳ್ಳಲೇಬೇಕು. ಒಂದು ವೇಳೆ ಹೆಚ್ಚು ಕಡಿಮೆ ಮಾಡಿದೆಯಾದರೆ ನಿನ್ನ ಜೀವ ನನ್ನ ಕೈಯಲ್ಲಿದೆ. ಹೂಂ ನಡೆ. (ಗೌಡನನ್ನು ಕೈಹಿಡಿದು ಕರೆದೊಯ್ಯುವನು).

ದೃಶ್ಯಾಂತರ

ರಸ್ತಾ ಸೀನು

(ನಾಟಕ ಮಂಗಲಗೊಳ್ಳುವ ಕೊನೆಯ ಪ್ರವೇಶಕ್ಕಿಂತ
ಮೊದಲು ನಾಟಕದ ಬಗ್ಗೆ ಅತಿಥಿಗಳಿಂದ ಇಲ್ಲವೇ
ಸಂಸ್ಥೆಯ ಪ್ರಮುಖರಿಂದ ನಾಲ್ಕು ಮಾತುಗಳು)

===***====***===

ಪ್ರವೇಶ–೩೦

ಕೋರ್ಟಿನ ಆವರಣ

(ನ್ಯಾಯಾಧೀಶರು ಕುಳಿತಿದ್ದಾರೆ, ಒಂದೆಡೆ ವಕೀಲ ಹಾಗೂ ಜನರು ಇನ್ನೊಂದೆಡೆ ಸಾವಿತ್ರಿ, ವಕೀಲ, ಭರತ್, ಕಿತಾಪತಿ, ಪೋಲಿಸ ಹಾಗೂ ಇತರರು ಇರುವರು)

ನ್ಯಾಯಾಧೀಶ– ಈಗ ಕೊಲೆ ಆರೋಪಿ ಬಸವಂತಪ್ಪನ ವಿಚಾರಣೆ ನಡೆಯಲಿ.

ಜವಾನ– ಬಸವಂತಪ್ಪ.....ಬಸವಂತಪ್ಪ ಹಾಜರ್ ಹೈ.

(ಮೂರು ಬಾರಿ ಕೂಗುವನು ಪೋಲಿಸರು ಬಸವಂತಪ್ಪನನ್ನು ತಂದು ಕಟಕಟೆಯಲ್ಲಿ ನಿಲ್ಲಿಸುವರು)

ಪ್ರಾಸಿಕ್ಯೂಟರ್– ಸತ್ಯವನ್ನೇ ಹೇಳುತ್ತೇನೆಂದು ಈ ಧರ್ಮ ಗ್ರಂಥವನ್ನು ಮುಟ್ಟಿ ಹೇಳಿರಿ.

ಬಸವಂತ– ನಾನು ಸತ್ಯವನ್ನೇ ಹೇಳುತ್ತೇನೆ, ಸತ್ಯವನ್ನಲ್ಲದೆ ಬೇರೇನನ್ನು ಹೇಳುವುದಿಲ್ಲ.

ಪ್ರಾಸಿಕ್ಯೂಟರ್– ತಮ್ಮ ಹೆಸರು?

ಬಸವಂತ– ಬಸವಂತಪ್ಪ.

ಪ್ರಾಸಿಕ್ಯೂಟರ್– ತಂದೆ ಹೆಸರು, ವಯಸ್ಸು, ಉದ್ಯೋಗ?

ಬಸವಂತ– ಶಾಂತಲಿಂಗಪ್ಪ, ವಯಸ್ಸು ೪೦, ಉದ್ಯೋಗ ಒಕ್ಕಲುತನ ಇದೀಗ ಜನಸೇವೆ ಮಾಡುತ್ತಿದ್ದೇನೆ.

ಪ್ರಾಸಿಕ್ಯೂಟರ್– ತಾವು ಗೌಡ್ರ ಆಳು ಹನುಮನನ್ನು ಕೊಲೆ ಮಾಡಲು ಕಾರಣವೇನು?

ಬಸವಂತ– ಇಲ್ಲ, ನಾನು ಕೊಲೆ ಮಾಡಿಲ್ಲ ! ಇದೊಂದು ವ್ಯವಸ್ಥಿತವಾದ ಪಿತೂರಿ, ಈ ಕೊಲೆಗೂ ನನಗೂ ಯಾವುದೇ ಸಂಬಂಧವಿಲ್ಲ. ಈ ಕೊಲೆ ನಡೆದ ದಿನ ನಾನು ಜಿಲ್ಲೆಯಲ್ಲಿ ಸರ್ಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ ಇದಕ್ಕೆ ಸಾಕ್ಷಿ ನನ್ನಲ್ಲಿದೆ.

ವಕೀಲ ೧– ಮೈಲಾರ್ಡ್, ಆರೋಪಿ ಈ ಕೊಲೆ ಅಪವಾದದಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿಗಳನ್ನು ಸೃಷ್ಟಿ ಮಾಡಿದ್ದಾನೆ. ಪಿಎಸ್ಐ ಬಂಧಿಸಿದಾಗ ಪೋಲಿಸ ಸ್ಟೇಶನ್ನಿನಲ್ಲಿ ತಿಳಿಸದ ಈ ಹೊಸ ವಿಷಯ ಈಗ ತಿಳಿಸುತ್ತಿದ್ದಾನೆಂದರೆ ಇದರಲ್ಲೇನೋ ಮೋಸ ಇದೆ. ಪಟ್ಟಣಕ್ಕೆ ಹೋದಂತೆ ಹಾಗೂ ಅಲ್ಲಿಯೇ ವಾಸ್ತವ್ಯ ಮಾಡಿದಂತೆ ರಶೀದಿ ಮತ್ತು ಬಸ್ ಟಿಕೀಟುಗಳನ್ನು ಸಾಕ್ಷಿಯಾಗಿ ತೋರಿಸಿ ಇದರಿಂದ ಬಚಾವಾಗಲು ಪ್ರಯತ್ನಿಸುತ್ತಿದ್ದಾರೆ, ಪಾಪ ಗೌಡ್ರ ಆಳು ಹನುಮ ಮುಗ್ಧ ವ್ಯಕ್ತಿ, ಅಂಥವನನ್ನು ಕೊಲೆ ಮಾಡಿರುವ ಈ ಕೊಲೆಗಾರನಿಗೆ ಗಲ್ಲು ಶಿಕ್ಷೆಯಾಗಲೇಬೇಕು.

ವಕೀಲ ೨– ಅಬ್ಜೆಕ್ಷನ್ ಮೈಲಾರ್ಡ್, ಸದರಿ ನ್ಯಾಯವಾದಿಗಳು ನನ್ನ ಕಕ್ಷಿದಾರರು ಸಾಕ್ಷಿ ತೋರಿಸುವುದಕ್ಕೆ ಮೊದಲೇ ಎಲ್ಲವನ್ನೂ ಕಥೆ ಕಟ್ಟಿ ಹೇಳುತ್ತಿದ್ದಾರೆ. ಇವರಿಗೆ ಬೇಕಾದದ್ದು ಶಿಕ್ಷೆನೇ ಹೊರತು ನ್ಯಾಯ ಅಲ್ಲ.

ವಕೀಲ ೧– ನನ್ನ ಕಕ್ಷಿದಾರರು ಈ ಕೊಲೆ ಮಾಡಿದ್ದನ್ನು ನೋಡಿದ್ದಾರಲ್ಲದೇ ಎರಡು ಸಾಕ್ಷಿಗಳೊಂದಿಗೆ ಫಿರ್ಯಾದು ಕೊಟ್ಟಿರುತ್ತಾರೆ, ಬೇಕಾದರೆ ಸಾಕ್ಷಿದಾರರನ್ನು ವಿಚಾರಿಸಿರಿ.

ನ್ಯಾಯಾಧೀಶ– ಸಾಕ್ಷಿದಾರರನ್ನು ಕರೆಯಿಸಿರಿ, (ಜವಾನ ಸಿದ್ದಪ್ಪ ಮತ್ತು ಧರ್ಮಣ್ಣ ಇವರ ಹೆಸರು ಹಿಡಿದು ೩ ಬಾರಿ ಕೂಗಿದ್ರೂ ಅವರು ಬರುವುದಿಲ್ಲ.)

ವಕೀಲ ೨– ಎಲ್ಲಿ ನ್ಯಾಯವಾದಿಗಳೇ ನಿಮ್ಮ ಸಾಕ್ಷಿಗಳು.

ವಕೀಲ ೧– ಮೈಲಾರ್ಡ್ ಇದರಲ್ಲೇನೋ ಮೋಸ ನಡೆದಿದೆ, ನಮ್ಮ ಸಾಕ್ಷಿಗಳನ್ನು ಸದರಿ ವ್ಯಕ್ತಿಗಳು ತಮ್ಮ ಪ್ರಭಾವದಿಂದ ಕಿಡ್ನ್ಯಾಪ್ ಮಾಡಿದ್ದಾರೆ.

ಕಿತಾಪತಿ– ಕಿಡ್ನ್ಯಾಪ್ ಮಾಡಿಲ್ರಿ, ಪಾಪ ! ಅವು ಕುಡದ ನಿಶೇದಾಗ ಏನೋ ತಿಳ್ಕೊಂಡು ಸಹಿ ಮಾಡ್ಯಾವ ಮರುದಿನ ಗೌಡರಿಗೆ ಅಂಜಿ ಊರು ಬಿಟ್ಟು ಬಾಂಬೆಗೆ ಓಡಿ ಹೋಗ್ಯಾವರಿ, ಹೋಗುವ ಮುಂದ ನನಗೊಂದು ಚೀಟಿ ಕೊಟ್ಟು ಹೋಗ್ಯಾರ್ರಿ, (ಚೀಟಿ ೨ನೇ ವಕೀಲನ ಕೈಯಲ್ಲಿ ಕೊಡುವನು).

ವಕೀಲ ೨– (ಓದಿ ನೋಡಿ) ಮೈಲಾರ್ಡ್. ತಾವು ಇದನ್ನು ಪರಿಶೀಲಿಸಬೇಕು. ಗೌಡ, ನಮಗೆ ಹೆಂಡ ಕುಡಿಸಿ ಸುಳ್ಳು ಹೇಳಿ ಸಹಿ

ಮಾಡಿಸಿಕೊಂಡಿದ್ದಾನೆ, ನಿಜವಾದ ವಿಷಯ ನಮಗೇನೂ ಗೊತ್ತಿಲ್ಲ ಎಂದು ಅವರು ಬರೆದು ಸಹಿ ಮಾಡಿ, ಕಾಗದ ಕೊಟ್ಟು ಗೌಡನ ಹೆದರಿಕೆ ಊರು ಬಿಟ್ಟು ಹೋಗಿದ್ದರೆ. ಸಹಿ ಕುಡಾ ಪರಾಂಬರಿಸಬೇಕು. ನ್ಯಾಯಧೀಶರಿಗೆ ಕಾಗದ ಕೊಡುವನು)

ನ್ಯಾಯಾಧೀಶ– ಮುಖ್ಯ ಸಾಕ್ಷಿದಾರರಾದ ರಾವಣಗೌಡರ ವಿಚಾರಣೆ ಆಗಲಿ.

ಜವಾನ– ರಾವಣಗೌಡ ಹಾಜರ ಹೈ. (೩ ಬಾರಿ ಕೂಗಿದಾಗ ರಾವಣಗೌಡ ಬಂದು ಕಟಕಟೆಯಲ್ಲಿ ನಿಲ್ಲುವನು ಶೇಖರ, ದೂರದಲ್ಲಿ ನಿಲ್ಲುವನು.)

ಪ್ರಾಸಿಕ್ಯೂಟರ್– ತಾವು ಸತ್ಯವನ್ನೇ ಹೇಳುತ್ತೇನೆಂದು ಈ ಧರ್ಮ ಗ್ರಂಥ ಮುಟ್ಟಿ ಹೇಳಿರಿ.

ಗೌಡ– ಸತ್ಯಾನೇ ಹೇಳ್ತೀನ್ರೀ. ಸುಳ್ಳು ಹೇಳುವ ವಂಶಾನೇ ಅಲ್ಲ ನಮ್ದು.

ಪ್ರಾಸಿಕ್ಯೂಟರ್– ತಮ್ಮ ಹೆಸರು ತಂದೆ ಹೆಸರು ಅಡ್ಡ ಹೆಸರು ವಯಸ್ಸು ಹೇಳಿರಿ.

ಗೌಡ– ರಾವಣಗೌಡ ಭೀಮನಗೌಡ ದೊಡ್ಡಗೌಡ್ರು ವಯಸ್ಸು ೫೦.

ಪ್ರಾಸಿಕ್ಯೂಟರ್– ತಾವು ಈ ಕೊಲೆ ಮಾಡಿರುವುದನ್ನು ಪ್ರತಕ್ಷ್ಯ ನೋಡಿರುವಿರಾ?

ಗೌಡ– ಹೌದು, ಬಸವಂತ ನನಗೆ ಕೊಲೆ ಮಾಡಲೆಂದು ಗುಂಡು ಹಾರಿಸಿದ ನನ್ನ ರಕ್ಷಣೆಗೆಂದು ಹನುಮ ಅಡ್ಡ ಬಂದಾಗ ಗುಂಡು ಅವನಿಗೆ ಬಿದ್ದು ಸತ್ತುಬಿದ್ದ.

ವಕೀಲ ೨– ಇದು ಶುದ್ಧ ಸುಳ್ಳು, ಮೊದಲನೆಯದಾಗಿ ಅಪವಾದ ಹೊತ್ತ ಬಸವಂತಪ್ಪನವರು ಕೊಲೆ ನಡೆದಾಗ ಊರಲ್ಲಿರಲಿಲ್ಲ. ಜಿಲ್ಲೆಯಲ್ಲಿ ಸರ್ಕಾರಿ ಸಮಾರಂಭವೊಂದರಲ್ಲಿ ಭಾಗವಹಿಸಿದ್ದರು ಎನ್ನುವುದಕ್ಕೆ ದಾಖಲೆಯಿದೆ, ಎರಡನೇದಾಗಿ ಅವರಲ್ಲಿ ಪಿಸ್ತೂಲು ಇರುವುದಿಲ್ಲ, ಮೂರನೇಯದಾಗಿ ಪಿ.ಎಂ. ರಿಪೋರ್ಟ್ ಪ್ರಕಾರ ಡೆಡ್ ಬಾಡಿಯಲ್ಲಿನ ಗುಂಡು ಗೌಡರ ಪಿಸ್ತೂಲಿನದೇ ಎಂದು ಪೋಲಿಸ್ ಇಲಾಖೆಯಿಂದಲೂ ರುಜುವಾತಾಗಿದೆ ನಾಲ್ಕನೆಯದಾಗಿ ೨ ಸಾಕ್ಷಿಗಳು ಕೂಡಾ ಬಸವಂತಪ್ಪನವರು ನಿರಪರಾಧಿ ಎಂದು ಹೇಳಿಕೆ ಬರೆದುಕೊಟ್ಟು ಗೌಡನ ದಬ್ಬಾಳಿಕೆಗೆ ಹೆದರಿ ಊರು ಬಿಟ್ಟಿದ್ದಾರೆ. ಐದನೆಯದಾಗಿ ನ್ಯಾಯಾಧೀಶರು ಈ ಕ್ಯಾಸೆಟ್ಟು (ಟೇಪ್‌ನಲ್ಲಿ ಹಾಕಿದಾಗ, ಗೌಡ ಕೊಲೆ ಮಾಡುವಾಗ ನುಡಿದ ನುಡಿಗಳು,

ಹನುಮ ಸಾಯುವಾಗ ನುಡಿದ ನುಡಿ ಕೇಳುವವು) ಈಗೇನು ಹೇಳ್ತೀರಿ ಗೌಡರೇ ಯಾಕ ನಡಗಾಕತ್ತೀರಿ ನೀವೇ ಅಪರಾಧಿ ಎಂದು ಒಪ್ಪಿಕೊಳ್ಳುವಿರೋ ಇಲ್ಲ.

ಗೌಡ– ಹೌದು ಬಸವಂತಪ್ಪನ ಮೇಲೆ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ನಾನೇ ಕೊಲೆ ಮಾಡಿದ್ದೇನೆ.

ನ್ಯಾಯಾದೀಶ– ಆರ್ಡರ್ ಆರ್ಡರ್ ನ್ಯಾಯಾಲಯವು ಸೂಕ್ಷ್ಮವಾಗಿ ವಿಷಯ ಪರಿಶೀಲಿಸಿ ಕೊಲೆ ಅಪರಾಧ ಹೊತ್ತ ಬಸವಂತಪ್ಪ ನಿರಪರಾಧಿ ಎಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ, ಹಾಗೂ ಈ ಕೊಲೆ ತಾನೇ ಮಾಡಿದ್ದೇನೆ ಎಂದು ಒಪ್ಪಿಕೊಂಡದ್ದಕ್ಕಾಗಿ ಭಾರತೀಯ ದಂಡ ಸಂಹಿತೆ ಸೆಕ್ಷನ್.....ರ ಪ್ರಕಾರ ರಾವಣಗೌಡರಿಗೆ ೨೦ ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ (ನ್ಯಾಯಾಧೀಶರು ಎದ್ದು ಹೋಗುವವರು. ಪೋಲಿಸ್, ಗೌಡನಿಗೆ ಬೇಡಿ ಹಾಕಿ ಕರೆದೊಯ್ಯುವನು. ಬಸವಂತನಿಗೆ ಅಣ್ಣಾ ಎಂದು ಶೇಖರ್, ಸ್ವಾಮಿ ಎಂದು ಸಾವಿತ್ರಿ ಸಂತೋಷದಿಂದ ಅಪ್ಪಿಕೊಳ್ಳುವರು. ಎಲ್ಲರೂ ಕೋರ್ಟಿನ ಮುಂಭಾಗಕ್ಕೆ ಬರುವರು)

ಭರತ್– ಅಣ್ಣಾ! ದೇವರಂಥ ನಿನ್ನನ್ನು ಬಂಧಿಸಿದ್ದಕ್ಕಾಗಿ ನನ್ನನ್ನು ಕ್ಷಮಿಸಣ್ಣ.

ಬಸವಂತ– ಎಲ್ಲರನ್ನೂ ಕ್ಷಮಿಸುವವನು ಆ ದೇವರಿದ್ದಾನೆ, ನಿನ್ನ ಕರ್ತವ್ಯ ನ್ಯಾಯವಾಗಿ ಮಾಡಿದೆ ಅದೇ ಸಂತೋಷ.

ಭರತ್– "ಚಿನ್ನದಂಥ ಅತ್ತಿಗೆ"ಯಾದ ನಿನ್ನ ಮನಸ್ಸನ್ನು ನೋಯಿಸಿದೆ, ನನ್ನ ಕ್ಷಮಿಸು ಅತ್ತಿಗೆ ಶೇಖರಣ್ಣ ನನ್ನನ್ನು ಕ್ಷಮಿಸು.

ಸಾವಿತ್ರಿ– ಮೈದುನ ವಿಧಿ ನಮ್ಮ ಮೇಲೆ ಮುನಿಸಿಕೊಂಡಿತ್ತು, ಏನೋ ಕೆಟ್ಟ ಘಳಿಗೆಯಲ್ಲಿ ಈ ದುರ್ಘಟನೆ ನಡೆಯಿತು. ನಾವು ಕೂಡಾ ಸಿಟ್ಟಿನಲ್ಲಿ ಬೈಯ್ದಿದ್ದೇವೆ. ಮನಸ್ಸಿಗೆ ಕೆಟ್ಟದ್ದು ತಿಳಿದುಕೊಳ್ಳಬೇಡ. ನಮ್ಮ ಮನೆ ದೇವರು ಕಡೆಗೂ ನಮ್ಮ ಮಾನ ಕಾಯ್ದು. ನಮ್ಮೆಲ್ಲರನ್ನು ಸಂತೋಷದಲ್ಲಿ ಒಂದುಗೂಡುವಂತೆ ಮಾಡಿದ ದೇವರನ್ನು ಸ್ತುತಿಸೋಣ ಬನ್ನಿರಿ.

===**====**===

ಅನುಬಂಧ – ೧

೧. ಕಂಟೆಪ್ಪ ಮಾಸ್ತರ ಕೋಡ್ಲಿ (ದಿವಂಗತರು)
ರಾಜೇಶ ಕಂಟೆಪ್ಪ ಮಾಸ್ತರ ಯಲಮಡಗಿ ಮುಕ್ಕಾಂ: ಕೊಡ್ಲಿ
ತಾ ॥ ಚಿಂಚೊಳಿ ಜಿ॥ ಗುಲಬರ್ಗಾ

೨. ಎಲ್.ಬಿ.ಕೆ. ಆಲ್ದಾಳ
ಅಂಚೆ : ಮಳ್ಳಿ ತಾ ॥ ಜೇವರ್ಗಿ ಜಿ॥ ಗುಲಬರ್ಗಾ

೩. ಡಿ.ಎಸ್. ಕುಮಾರ
ಅಂಚೆ : ಚಟ್ಟಾನ ಏರಿಯಾ ಯಾದಗಿರಿ,
ತಾ ॥ ಯಾದಗಿರಿ ಜಿ॥ ಯಾದಗಿರಿ

೪. ಬಸರಾಜಪ್ಪಗೌಡ ಮಾಲಿ ಪಾಟೀಲ
ಅಂಚೆ & ಮುಕ್ಕಾಂ : ಬ್ಯಾಗವಾಟ ತಾ ॥ ಮಾನವಿ ಜಿ॥ ರಾಯಚೂರು

೫. ವೀರಣ್ಣ ರಾಜೂರ ಸಂಯೋಜಕರು, ಶ್ರೀ ಬಸವೇಶ್ವರ ಪೀಠ ಕರ್ನಾಟಕ
ವಿಶ್ವವಿದ್ಯಾಲಯ ಧಾರವಾಡ

೬. ಎಸ್.ವಿ. ಪಾಟೀಲ, ಗುಂಡೂರ
ಅಂಚೆ & ಮುಕ್ಕಾಂ : ಗುಂಡೂರುತಾ ॥ ಗಂಗಾವತಿ ಜಿ॥ ಕೊಪ್ಪಳ

೭. ಎಸ್.ಎನ್. ದಂಡಿನಕುಮಾರ ಕುಮಾರ ಪುಸ್ತಕಾಲಯ, ಮುಖ್ಯರಸ್ತೆ,
ಚಿಂಚೋಳಿ ತಾ ॥ ಚಿಂಚೋಳಿ ಜಿ॥ ಗುಲಬರ್ಗಾ

ಅನುಬಂಧ – ೨

ಈ ಯೋಜನೆಯ ಸಂಪುಟಗಳ ವಿವರ

ಕ್ರ.ಸಂ.	ಸಂಪುಟದ ಹೆಸರು	ಸಂಪಾದಕರ ಹೆಸರು ಲೇಖಕರ ಹೆಸರು
೧.	ವೃತ್ತಿ ರಂಗಭೂಮಿ ನಾಟಕಗಳು	ಡಾ. ವಿಜಯಶ್ರೀ ಸಬರದ
೨.	ಗ್ರಾಮೀಣ ರಂಗಭೂಮಿ ನಾಟಕಗಳು	ಡಾ. ವಿಜಯಶ್ರೀ ಸಬರದ
೩.	ಹವ್ಯಾಸ ರಂಗಭೂಮಿ ನಾಟಕಗಳು	ಡಾ. ವಿಜಯಶ್ರೀ ಸಬರದ
೪.	ಗೀತನಾಟಕ–ಬೀದಿನಾಟಕ–ಏಕಾಂಕಗಳು	ಡಾ. ವಿಜಯಶ್ರೀ ಸಬರದ
೫.	ಹೈದ್ರಾಬಾದ ಕರ್ನಾಟಕದ ವೃತ್ತಿ ರಂಗಭೂಮಿ ಚರಿತ್ರೆ	ಡಾ. ಬಸವರಾಜ ಸಬರದ
೬.	ಹೈದ್ರಾಬಾದ ಕರ್ನಾಟಕದ ಹವ್ಯಾಸ ರಂಗಭೂಮಿ ಚರಿತ್ರೆ	ಡಾ. ಬಸವರಾಜ ಸಬರದ

ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಕರ್ನಾಟಕ ಸರಕಾರವು ನೀಡಿದ ಕನ್ನಡ ಭಾಷಾಭಿವೃದ್ಧಿ ಯೋಜನೆಗಳಡಿಯಲ್ಲಿ ಈ ಸಂಪುಗಳು ಪ್ರಕಟವಾಗುತ್ತಲಿವೆ. ಮೂರು ವರ್ಷಗಳಿಂದ ಪ್ರಾರಂಭವಾದ ಈ ಯೋಜನೆ ಮುಗಿಯುವ ಹಂತದಲ್ಲಿದೆ. ಆ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾಗಿದ್ದ ಡಾ. ಬಸವರಾಜ ಸಬರದ ಅವರು ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರನ್ನೊಳಗೊಂಡು ಮಹತ್ವದ ಯೋಜನೆಗಳನ್ನು ರೂಪಿಸಿದರು. ಅವುಗಳಲ್ಲಿ "ಹೈದ್ರಾಬಾದ ಕರ್ನಾಟಕ ರಂಗಭೂಮಿ" ಯೋಜನೆಯೂ ಕೂಡ ಮಹತ್ವದಾಗಿದೆ. ಈ ಯೋಜನೆಯಲ್ಲಿ ಈಗ ಸಧ್ಯಕ್ಕೆ ನಾಲ್ಕೂ ಸಂಪುಟಗಳು ಪ್ರಕಟವಾಗಿವೆ. ಹೈದ್ರಾಬಾದ ಕರ್ನಾಟಕ ಪ್ರದೇಶದ ವೃತ್ತಿ ರಂಗಭೂಮಿ, ಗ್ರಾಮೀಣ ರಂಗಭೂಮಿ, ಹವ್ಯಾಸಿ ರಂಗಭೂಮಿಗೆ ಸಂಬಂಧಿಸಿದ ಮೌಲಿಕವಾದ ನಾಟಕಗಳನ್ನಾಯ್ದುಕೊಂಡು ಈ ಸಂಪುಟಗಳನ್ನು ಸಿದ್ಧಪಡಿಸಲಾಗಿದೆ. ಈ ಯೋಜನೆಯು ಪ್ರಧಾನ ಸಂಪಾದಕರಾಗಿರುವ ಡಾ. ಬಸವರಾಜ ಸಬರದ ಹಾಗೂ ಸಂಪಾದಕರಾಗಿರುವ ಡಾ. ವಿಜಯಶ್ರೀ ಸಬರದ ಅವರು ಅಭ್ಯಾಂದನಾರ್ಹರಾಗಿದ್ದಾರೆ.

ಈ ಪ್ರದೇಶದ ಅಮೂಲ್ಯರಂಗ ಕೃತಿಗಳನ್ನೊಳಗೊಂಡಿರುವ ಈ ಸಂಪುಟಗಳು ಇಲ್ಲಿಯ ರಂಗ ಶ್ರೀಮಂತಿಕೆಯನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿವೆ. ಮಹತ್ವದ ಒಳನೋಟಗಳು, ಸೂಕ್ತವಾದ ಪ್ರಸ್ತಾವನೆಗಳು, ಅಗತ್ಯವಾದ ಅನುಬಂಧಗಳು ಈ ಸಂಪುಟಗಳ ಮೌಲಿಕತೆಯನ್ನು ಹೆಚ್ಚಿಸಿವೆ. ಇಂತಹ ಕೃತಿಗಳನ್ನು ನೋಡಿ ಈ ಪ್ರದೇಶ ಹೆಮ್ಮೆ ಪಡುವಂತಾಗಿದೆ. ಓದುಗರು, ರಂಗಾಸಕ್ತರು, ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಾರೆಂದು ನಂಬಿದ್ದೇನೆ.

ಪ್ರೊ. ಈ. ಟಿ. ಪುಟ್ಟಯ್ಯ

ಕುಲಪತಿಗಳು

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ - ೫೮೫ ೧೦೬

ಹೈದ್ರಾಬಾದ ಕರ್ನಾಟಕ ರಂಗಭೂಮಿ

ಗ್ರಾಮೀಣ ರಂಗಭೂಮಿ ನಾಟಕಗಳು

(ಸಂಪುಟ-೧)